# KARNATAKA STATE ARCHIVES

KARNATAKA
STATE
ARCHIVES

# KARNATAKA STATE ARCHIVES

KARNATAKA
STATE
ARCHIVES

# KARNATAKA STATE ARCHIVES

# KARNATAKA STATE ARCHIVES

# KARNATAKA STATE ARCHIVES

KARNATAKA
STATE
ARCHIVES

Roll No

134

Roll No.

134

Roll No.

134

Roll No.

134

Roll No.

134

Roll No.

134

ARS 34 APP 82

NAVAYUGA

ANNADA WEEKLY

22-7-1937

CONT
FROM
ROLL
133

ARS 34 APP 82

NAVAYUGA

KANNADA WEEKLY

22-7-1937

CONT.
FROM
ROLL
133

ARS 34 APP 82

NAVAYUGA

KANNADA WEEKLY

22-7-1937

CONT
FROM
ROLL
133

ARS 34 APP 82

NAVAYUGA

KANNADA WEEKLY

22-7-1937

CONT
FROM
ROLL
133

## The Coondapoor Bank, Ltd.,

Head Office - **Coondapoor** Branch Office **Brahmavar**

**Beg to announce that a new Branch has been opened at SHANKARANARAYANA on 4 6 37**

## ದಿ ಕುಂದಾಪುರ ಬೇಂಕ್ ಲಿಮಿಟೆಡ್

| ಹೆಡ್ ಆಫೀಸು ಕುಂದಾಪುರ | ಶಾಖ: ಬ್ರಹ್ಮಾವರ |
| --- | --- |

ಶಂಕರನಾರಾಯಣ ಇಲ್ಲಿಜೂನ್ ತಾ 1ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದ
**ಚಾಲ್ತಿ ರೇವಣಾತಿಗಳು ಸಾ ಶೆ 2, ಸೇವಿಂಗ್ಸ್ ಬ್ಯಾಂಕ್ ರೇವಣಾತಿಗಳುಸಾ ಶೆ 4,**
**ಕಾಯಂ ರೇವಣಾತಿಗಳು 3 ತಿಂಗಳ ಬಾಬತು ಸಾ ಶೆ 4**
6 **ಮತ್ತು** 9 **ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5%
1 **ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5½%
2 **ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ** 6% **ದರದ**
ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು
ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ
ಭಂಗಾರದ ಈಡಿನಮೇಲೂ ಸಾಲದೊರೆಯುವುದು
**ವಿಶೇಷ ಸೂಚನೆ** —ಬಡವರಿಗೆ ಸಹಾಯವಾಗುವಂತ ಕಡಿಮೆ ಎಂದರೆ
ರೂಪ್ಯಾ 10 ಸಹಾ ಸಾಲಕೊಡಲಾಗುತ್ತದೆ ಸಾಲುಗಳು ದೊರೆಯುತ್ತವೆ
ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ

**Halsnad Soorappayya,** — ಚೆಯರ್‌ಮೇನ್
**N Sheshagiri Rao,** — ಸೆಕ್ರೆಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ

## ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ
### ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಜ್ಯನಾ, ಸಿಲೋನ್, ಆಫ್ರಿಕನ್, ಫ್ರಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮಾರ್ಗಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ **ಕ್ರಯ ರೂ. ೧.**

## ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅದವಾ ನೀರಿನಲ್ಲಿ ತೆಗೆದುಕೊಳ್ಳಬೇಕು ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವದು. ಔಷಧಿಯನ್ನು ತಿಂದು ಗಂಟೆ ೭ ೮ ತಡದು ಸ್ತ್ರೀಸಂಭೋಗಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು ತರಿಸಿ ಪರಿಕ್ಷಿಸಿದರೆ ಸಂತೋಷಪಡುವಿರಿ **ಕ್ರಯ ಡಬ್ಬಿ 1ಕ್ಕೆ 1-8-0**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,
೩ ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜಿ ಟಿ. ಮದರಾಸ್

ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦ —೩—೦

# ಪುರುಷವಧು

ನಕ್ಕುಷ್ಟು ನಗಿಸುವ ಏಕಾಂಕ ಪ್ರಹಸನ.
ಶಿರಿಯರ ಪ್ರಪಂಚ ಉಡುಪಿ



## ಸಾಮುದ್ರಿಕ ಲಕ್ಷಣ

ಹಸ್ತ ಸಾಮುದ್ರಿಕ, ಅಂಗ ಲಕ್ಷಣ ಮುಂತಾದ ವಿಷಯಗಳ ಮೇಲೆ ಬರೆಯಲ್ಪಟ್ಟ ಬಲು ಉಪಯೋಗಕರವಾದ ಪ್ರಾಚೀನ ಗ್ರಂಥ. ವಿದ್ವತ್ತಾ ಪೂರ್ಣವಾದ ಮುನ್ನುಡಿಯಿಂದೊಡಗೂಡಿದೆ.

ಬೆಲೆ: ೦ ೮ ೦

ಒಂದು ಪ್ರತಿ ಬೇಕಾದವರು ೯ ಆಣೆಯ ಸ್ಟಾಂಪ್ ಕಳುಹಿಸಿರಿ

USE
# SUVASINI AGARBATHIES

SRI BHAKATHA VASTU MANDIRA UDIPI.

Printed by [illegible] VENKATARAMANACHARYA for & on behalf of SUPPLY AGENCY LTD at THE [illegible] PRESS UDIPI and Published by K H SHETTY at NAVAYUGA OFFICE UDIPI

Registered No. M. 3618 ೨೦ ಪ್ರ ...ದಾಣೆ

NAVAYUGA
A Nationalist Kanarese Weekly, UDIPI, S. K.

It will pay you
to advertise in
'NAVAYUGA'
The Leading
Nationalist
Kanarese Weekly
of Karnatak
FOR RATES OF ADVT. Etc.
APPLY TO THE MANAGER

# ನವಯುಗ

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣು ಮುಂದಿಟ್ಟು
ಸಮಾಜದ್ರೋಹಿಗಳು
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL XVI-NO 46 22-7-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ ] ಉಡುಪಿ, ಗುರುವಾರ ೨೨ ಜುಲಾಯಿ, ೧೯೩೭ [ಸಂಚಿಕೆ ೪೬

THE

# Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I)

**BRANCHES:**

1 BOMBAY
2 BANGALORE CITY
3 BELGAUM
4 BYADGI
5 BELLARY
6 ADONI
7 HOSPET
8 TALIPARAMBA
9 UPPINANGADI
10 KASARGODE
11 PAYYANUR
12 KANHANGAD
13 KARKALA
14 NANDYAL
15 PRODATTUR
16 TADPATRI
17 HUBLI
18 GADAG
19 KARWAR
20 KUMTA
21 ANKOLA
22 HONAVAR
23 BHATKAL
24 BRAHMAVAR
25 HUNGARCUTTA
26 SIRSI
27 SAGAR
28 COONDAPOOR
29 UDIPI
30 MANGALORE
21 CANNANORE

*BEG TO ANNOUNCE*

*that the Syndicate has been included in the list of Scheduled Banks under the Reserve Bank of India Act.*

**Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.**

| | |
|---|---|
| Paid up Capital | Rs. 3,49,900 |
| Reserves | „ 1,92,390 |
| Deposits exceed | „ 25 lakhs |
| Total Working Funds exceed | „ 45 lakhs |

## ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಪೋಲ್ಸಿ ಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯು ದೊರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ

ಹೆಚ್ಚಿನ ವಿವರಗಳನ್ನು ಇವರಿಂದ ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

# ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

**ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'**

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

**ಅಮೃತಾಂಜನ ಡಿಪೋ,** — ಬೊಂಬಾಯಿ, ಮದ್ರಾಸು, ಕಲ್ಕತ್ತ

# ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. ೬೦ ಮಾತ್ರೆಗಳು ರೂ. ೫—೦—೦
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

**ಡಾ. ಎ. ಎಸ್. ಮೂರ್ತಿ,**
ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

# K. Ramachandra Krishna Shet

Near Mission High School, Mangalore

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮೆರ್ಸ್ಟ್ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

# ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ಪರ್ಣಗಟ್ಟಿಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

## ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
**"ಯೋಗೀಶ್ವರರ ಶಕ್ತಿಸಾಹಸ"**
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

## Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums,
Specially Constructed in our Work Shop. Well tuned and fitted.

*Repairs of all kinds of Musical instruments undertaken at a very moderate rate to the Complete satisfaction of our customers.*

***A Trial order is earnestly solicited.***

For Further Particulars
*Apply to*

**M. K. KORAGAPPA,** *Proprietor.*

## ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಇದೇ ಜುಲಾಯಿಯ ತಿಂಗಳಲ್ಲಿ ಪ್ರಾರಂಭವಾಗುವದು. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮೊದಲಾದ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲೀಷ್ ಮತ್ತು ಕನ್ನಡ ಕೋರ್ಸುಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "ಪ್ರೋಸ್‌ಪೆಕ್ಟಸ್"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್.
ತುಂಗಭದ್ರಾ }
೧೦—೭—೧೯೩೭ } ಪ್ರೇಮ ವಿದ್ಯಾಪೀಠ

ಉಡುಪಿಯ ಆದರ್ಶ ಉಪಹಾರಗೃಹ!

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು! ಮಿತ ದರದಲ್ಲಿ ಊಟ ಉಪಚಾರಗಳು**
**ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ!**
**ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳಿದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**
**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಜೂನ್ ತಿಂಗಳ ತಾ. 1೭ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

## ನವ್ಯ ಸಿನೆಮಾ ಪುಟ

### ಸಮ್ರಾಟ್ ಅಶೋಕನ ಶಾಸನಕಾಲ!

# ಪ್ರೇಮಪರೀಕ್ಷೆ ಅಥವಾ ರೂಪಲೇಖಾ

[ಕಲ್ಕತ್ತೆಯ ನ್ಯೂ ಥಿಯೇಟರ್ಸ್‌ನವರು ವಾಕ್ಚಲಚಿತ್ರ ನಿರ್ಮಾಣದಲ್ಲಿ ಹೆಸರಾಂತವರು. ಇದೂ ನ್ಯೂ ಥಿಯೇಟರ್ಸ್‌ನವರ ಶ್ರೇಷ್ಠ ಕಲಾಕೃತಿ! ಸೈಗಲ್, ಪಹಾಡೀ ಸನ್ಯಾಲ್, ರತ್ನಾಬಾಯಿ ಮುಂತಾದ ಪಟುನಟರಿಂದ ನಟಿಸಲ್ಪಟ್ಟ ಉತ್ಕೃಷ್ಟವಾದ ಈ ಚಿತ್ರವು ತಾ. ೨೩–೭–'೩೭ರಿಂದ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುತ್ತದೆ. ಅದರ ಕಥಾ ಸಾರಾಂಶವನ್ನಿಲ್ಲಿ ಕೊಡಲಾಗಿದೆ.]

ಮುದುಕಿಯೊಬ್ಬಳು ತನ್ನ ಮುದ್ದು ಕುವರಿ ಸುಲೇಖೆಯೊಂದಿಗೆ, ಪೇಟೆಗೆ ಬಲು ದೂರದ ಹಳ್ಳಿಯಲ್ಲಿ ವಾಸಿಸುತ್ತಿದ್ದಳು. ಅದೇ ಹಳ್ಳಿಯಲ್ಲಿ ಕುರುಬರ ಹುಡುಗ ಅರೂಪನೂ ವಾಸಿಸುತ್ತಿದ್ದನು. ಅವರಿಬ್ಬರಲ್ಲೂ ಪರಸ್ಪರ ಪ್ರೇಮವಿತ್ತು.

ಬಲು ಪ್ರಯಾಸಪಟ್ಟು ಸುಲೇಖೆಯ ತಾಯಿಯು ಸಮ್ರಾಟನರಮನೆಯಲ್ಲಿ ಒಂದು ಕೆಲಸವನ್ನು ದೊರಕಿಸಿ ಕೊಂಡಳು. ಪೇಟೆಗೆ ಹೋಗುವಾಗ ಸುಂದರಿಯಾದ ಸುಲೇಖೆಯನ್ನು ಹಳ್ಳಿಯಲ್ಲೇ ಬಿಟ್ಟು ಹೋಗಲು ಆಕೆಗೆ ಮನಸ್ಸಿರಲಿಲ್ಲ.

ಸುಲೇಖೆಯ ವಿಯೋಗದಿನವು ಸಮಾಪಿಸಿದಾಗ ಅರೂಪನು, ಸುಲೇಖೆಗೆ ಪೇಟೆಗೆ ಹೋಗಬಾರದಾಗಿ ಹೇಳಿದನು. ಆದರೆ ಪೇಟೆಯ ವಿಲಾಸ ಜೀವನದಲ್ಲಿ ಮರುಳಾಗಿದ್ದ ಸುಲೇಖೆಯು ಒಡಂಬಡದೆ ತನ್ನೊಡನೆಯೇ ಅವನನ್ನೂ ಪೇಟೆಗೆ ಕರದೊಯ್ಯಲು ಕೋರಿದಳು. ಕೊನೆಗೆ ಸುಲೇಖೆಯೂ ಅರೂಪನೂ ಪೇಟೆಗೆ ಬಂದರು.

ಅರೂಪನಿಗೂ ಅರಮನೆಯಲ್ಲಿ ನೌಕರಿಯು ದೊರೆಯಿತು. ಅಲ್ಲದೆ ತನ್ನ ಜಾಣ್ಮೆಯಿಂದ ಅಶೋಕನ ಗೆಳತನವನ್ನೂ ಅರೂಪನು ಸಂಪಾದಿಸಿಕೊಂಡನು

ಒಂದು ದಿನ ಸಮ್ರಾಟ್ ಅಶೋಕನು ಉಗ್ರಸೇನಾಪತಿಯಾದ ಉಶಿನರನೊಂದಿಗೆ ಬೇಟೆಯಾಡಲು ಹೋದನು. ಕಾಡಿನಲ್ಲಿ ದಾರಿತಪ್ಪಿ ಎಲ್ಲರೂ ಸುತ್ತಾಡತೊಡಗಿದರು.

ಅಶೋಕನು ರಾತ್ರಿಯಲ್ಲಿ ತಿರುಗುತ್ತಾ ಒಂದು ಕುಟೀರದ ಕಡೆಗೆ ತಲುಪಿದನು. ಬಾಗಿಲು ಹಾಕಿತ್ತು, ದೂಡಿದನು; ಒಬ್ಬ ತಪಸ್ವಿಯಾದ ಬ್ರಾಹ್ಮಣನು ಹೊರಕ್ಕೆ ಬಂದನು.

"ನಾನು ಅಶೋಕನ ಕೆಲಸಗಾರ. ಸ್ವಲ್ಪ ಆಶ್ರಯ ಸಿಗಬಹುದೇ?" ಅಶೋಕನು ಕೇಳಿದನು.

"ಇಲ್ಲ! ಇದು ಅಶೋಕನ ರಾಜಧಾನಿಯಲ್ಲ!!" ಬ್ರಾಹ್ಮಣನು ಸ್ಥಳಕೊಡಲು ನಿರಾಕರಿಸಿದನು.

ಒಂದು ದಿನ ರಾಜದರಬಾರದಲ್ಲಿ ಮಹೇಶ್ವರನು ಶೃಂಖಲಾಬದ್ಧನಾಗಿ ತರಲ್ಪಟ್ಟನು. ಆದರೆ ಆ ಬ್ರಾಹ್ಮಣನು, ಅಶೋಕನ ಶಾಸನಕಾಲವು ಲಂಚಪ್ರಪಂಚವೆಂದೂ, ಅನ್ಯಾಯ ಅತ್ಯಾಚಾರಗಳ ಮೂಲವೆಂದೂ ಸಾರಿದನು!

ಅಶೋಕನಿಗೆ ಬ್ರಾಹ್ಮಣನ ಹೇಳಿಕೆಯಲ್ಲಿ ಸತ್ಯಾಂಶವಿದೆಯೆಂದೆನಿಸಿತು. ಆತ ಸ್ವಯಂ ಸುರಾ, ಸುಂದರಿಯರ ಉಪಾಸಕನಿದ್ದನು!! ಅಶೋಕನು ತನ್ನ ಸರಕಾರವನ್ನು ಕಲಂಕಿತ ಸರಕಾರವೆನ್ನುವ ಆ ಬ್ರಾಹ್ಮಣನಿಗೆ 'ಒಂದು ವರುಷದ ಅವಧಿಯೊಳಗೆ ಅನ್ಯಾಯವೇನಾದರೂ ನಡೆದರೆ ನಿನ್ನನ್ನು ಶೂಳಿಗೇರಿಸಲಾಗುವುದೆ'ಂಬ ಶರತದ ಮೇಲೆ ಒಂದು ವರ್ಷ ಕಾಲ ಸಮ್ರಾಟ ಪೀಠವನ್ನು ಕೊಟ್ಟನು.

ಬ್ರಾಹ್ಮಣನೊಪ್ಪಿದ. ಒಂದು ವರುಷದ ವರೆಗೆ ಸಮ್ರಾಟನಾದ.

ಮಹೇಶ್ವರನು ರಾಜ್ಯದ ಹೊರಗೆ ಶಾಂತಿಯನ್ನು ಸ್ಥಾಪಿಸಿದನಾದರೂ ಅರಮನೆಯೊಳಗಡೆ ಒಳಸಂಚು ನಡೆಯುತ್ತಿದ್ದುವು. ಪ್ರಚಂಡನಾದ ಉಶಿನರನು ಸಮ್ರಾಟ್ ಅಶೋಕನನ್ನೇ ಕೊಲೆಗೆಯ್ಯಲು ನಿರ್ಧರಿಸಿದನು. ಅಶೋಕನು ತನ್ನ ಪೂರ್ವಕೃತ್ಯಗಳಲ್ಲಿ ಪಶ್ಚಾತ್ತಾಪಪಟ್ಟು, ಶಾಂತಿಮಯ ಜೀವನದಲ್ಲಿರಬಯಸಿ, ಅರೂಪನನ್ನು ಗೆಳೆಯನನ್ನಾಗಿ ಮಾಡಿಕೊಂಡನು

ಅತ್ತ ಮುದುಕಿಯು ಸುಲೇಖೆಗೆ ಯೋಗ್ಯ ವರನನ್ನು ಹುಡುಕುತ್ತಾ ಉಶಿನರನಿಗೆ ಕೊಡುವುದಾಗಿ ನಿಶ್ಚಯಿಸಿದಳು. ಆದರೆ ಆ ನಿಂಬೆಶಾಚಿಯನ್ನು ಸುಲೇಖೆಯು ತಿರಸ್ಕರಿಸುವಳು.

ಒಂದು ರಾತ್ರೆ ಅಶೋಕನು ಹೊರ ಹೊರಟಿದ್ದನು. ಆಗ ಅರೂಪನ ಹತ್ತಿರ ಉಶಿನರನನ್ನು ಕರತರ ಹೇಳಿದನು. ಅರೂಪನು ಉಶಿನರನ ಕೋಣೆಗೆ ತಲಪಿದಾಗ ಅಲ್ಲಿ ಸುರಾಪಾನ, ಸುಂದರಿಯರ ಗಾನಗಳು ನಡೆಯುತ್ತಿದ್ದುವು ಉಶಿನರನು ಸಂಗಡಿಗರೊಂದಿಗೆ ಅಶೋಕನನ್ನು ಕೊಲ್ಲಲು ಹವಣಿಸುತ್ತಿರುವುದನ್ನು ಮರೆಯಲ್ಲಿ ನಿಂತು ಕೇಳಿ ಅರೂಪನು ಅಶೋಕನಿಗೆ ತಿಳಿಸಲಿಕ್ಕೆಂದು ಮರಳಿದನು,

ಈ ಮಧ್ಯೆ, ಉಶಿನರನು ತನ್ನ ಭಾವಿ ಪತ್ನಿಯಾದ ಸುಲೇಖೆಗೆ ನರ್ತಿಸಲು ಆಜ್ಞಾಪಿಸಿದ

ತನ್ನ ಪ್ರೇಮಿಕೆಯು ಕ್ರೂರ ಉಶಿನರನಲ್ಲಿ ನಲಿಯುತ್ತಿರುವುದನ್ನು ನೋಡಿ ಅರೂಪನು ಸಂತಾಪಗೊಂಡು, ಅಶೋಕನ ಹತ್ತಿರ ಬಂದು ತನಗೆಲ್ಲಿಯಾದರೂ ಹೊರಟು ಹೋಗಲು ಅಪ್ಪಣೆಯನ್ನು ಕೇಳಿದನು.

ಅಶೋಕನು ಮರುಮಾತನ್ನಾಡದೆ ಎರಡು ದಿನ ಅವಧಿ ಕೇಳಿದ.

ಸುಲೇಖೆಯು ಮೂರ್ಛಿತಳಾಗಿ ಒಂದು ಮರದಡಿ ಬಿದ್ದಿರುವುದನ್ನು ಅರೂಪನು ನೋಡಿ ಆಕೆಯನ್ನು ತಿಳಿವಳಿಕೆ ಮಾಡಿದನು.

"ಅರೂಪ! ನನ್ನನ್ನೆಲ್ಲಿಗಾದರೂ ಕೊಂಡು ಹೋಗು." ಸುಲೇಖೆಯು ಹೇಳಿದಳು. ಉಶಿನರ, ತಾಯಿಯರ ಬಲಾತ್ಕಾರವನ್ನು ಹೇಳಿದಳು.

ಇಷ್ಟರಲ್ಲಿ ಕೈಬಡಿತದ ಸಪ್ಪಳವೊಂದು ಅವರನ್ನು ದಂಗು ಬಡಿಸಿತು. ತಿರುಗಿ ನೋಡಿದಾಗ ಉಶಿನರನ ರೌದ್ರ ಮೂರ್ತಿ!

"ನಡೆ ಇಲ್ಲಿಂದ " ಅಪರೂಪನಿಗೊಂದೇಟು ಬಡಿದು ಉಶಿನರನು ನುಡಿದನು. "ನಡ ಇಲ್ಲಿಂದ."

ಕೆಲ ಹೊತ್ತು ಮೌನವಾಗಿದ್ದ ಅರೂಪನು ಉಶಿನರನಿಗೂ ಒಂದೇಟು ಒಡಿದ ಅವರಲ್ಲಿ ತೀವ್ರ ಕಲಹವಾಯಿತು. ಉಶಿನರನು ಅರೂಪನನ್ನು ಕತ್ತಿಯಿಂದ ತಿವಿಯಬಯಸಿದಾಗ ಮಹೇಶ್ವರನು ಬಂದು ಆಪತ್ತಿಯನ್ನೊಡ್ಡಿದನು. ಶಾಂತಿಭಂಗವನ್ನು ಮಾಡಿದ ಕಾರಣ ಮಹೇಶ್ವರನು ಅವರಿಬ್ಬರನ್ನೂ ಕೆಲಸದಿಂದ ತೆಗೆದು ಹಾಕಲು ಆಜ್ಞಾಪಿಸುವನು.

ಒಂದು ದಿನ ಬೆಳಿಗ್ಗೆ ಉಶಿನರನ ಶವವು ರಾಜದ್ವಾರದಲ್ಲಿ ಬಿದ್ದಿತ್ತು! ಅರೂಪನ ವಸ್ತ್ರವು ರಕ್ತರಂಜಿತವಾಗಿತ್ತು!!

ಅರೂಪನನ್ನು ಜೀವಂತ ಸುಡಲು ರಾಜಾಜ್ಞೆ!!

ಅಶೋಕನು ತನ್ನ ಕೊಠಡಿಯಲ್ಲಿ ಹೊರಳುತ್ತಿದ್ದಾನೆ ಮಹೇಶ್ವರನೊಡನೆ ನಿಜವಾದ ಕೊಲೆಗಾರನಾರೆಂದು ಕೇಳಬೇಕೆಂದಿದ್ದ ಸುಲೇಖೆಯು ತಾಯಿಯಿಂದ ಬಂಧಿತಳಾಗಿದ್ದಾಳೆ

ಅರೂಪನು ವಧ್ಯ ಭೂಮಿಗೆ ಒಯ್ಯಲ್ಪಟ್ಟನು

ಅರೂಪನು ಮಾತಾಡದೆ ಉರಿಯುವ ಬೆಂಕಿಯಲ್ಲಿ ಹೋಗಿ ಕುಳಿತನು! ಇಷ್ಟರಲ್ಲಿ ಅಶೋಕನು ಧಾವಿಸಿ ಬಂದು ಅರೂಪನನ್ನು ಅಗ್ನಿ ಕುಂಡದಿಂದ ಹೊರಗೆಳದು ಹಾಕಿದನು

ಸುಲೇಖೆಯೂ ಮಹೇಶ್ವರರೂ ಅಲ್ಲಿಗೆ ಬರುವರು.

"ಬ್ರಾಹ್ಮಣ! ನಾನೇ ತಪ್ಪುಗಾರ. ನನ್ನ ಹೇಡಿತನಕ್ಕೆ ಶಿಕ್ಷೆಯಾಗಲಿ!" ಅಶೋಕನು ಆವೇಶಯುಕ್ತನಾಗಿ ಮಹೇಶ್ವರನಿಗೆ ಹೇಳಿದನು. "ಈ ಹತ್ಯೆಯನ್ನು ಮಾಡಿದವನು ನಾನು. ಆ ರಾತ್ರೆ ಉಶಿನರನು ನನ್ನನ್ನು ಕೊಲೆಗೈಯ್ಯಲು ಹವಣಿಸಿದ್ದನು. ನಮ್ಮೊಳಗಣ ಜಗಳವು ಪ್ರಕೋಪಕ್ಕಿಟ್ಟಿತು. ನಾನು ಬಲವಾಗಿ ಹೊಡೆದೆ. ಆತ–ಸತ್ತ! ಹೆಣವನ್ನು ರಾಜ ದ್ವಾರದಲ್ಲಿಟ್ಟೆ. ಮುಂದಿನ ವಿಚಾರವು ನಿಮಗೇ ತಿಳಿದಿದೆ."

ವಿಚಾರವನ್ನೆಲ್ಲಾ ನಿಧಾನಿಸಿ ಮಹೇಶ್ವರನು ಕೇಳಿದ. ಒಂದು ವಾರದ ಅನಂತರ ಅಶೋಕನಿಗೆ ಪ್ರಾಣ ದಂಡನೆಯ ಆಜ್ಞೆಯನ್ನು ಇತ್ತನು ರಾಜಧಾನಿಯಲ್ಲೆಲ್ಲಾ ಈ ಸುದ್ದಿಯು ಮಹತ್ತಾದ ಕೋಲಾಹಲವನ್ನೆಬ್ಬಿಸಿತು.

ಅಶೋಕನು ಉರಿವ ಕಂಬದ ಹತ್ತಿರ ಬಂದನು,

"ಇಂದಿಗೆ ಒಂದು ವರುಷವಾದುದರಿಂದ ನನ್ನಾಳ್ವಿಕೆಯು ಕೊನೆಗೊಂಡಿತು. ಅಶೋಕ! ಇಂದಿನಿಂದ ನೀನೇ ಸಮ್ರಾಟನು." ಬ್ರಾಹ್ಮಣನು ಹೇಳಿದ.

ಹರ್ಷೋಲ್ಲಾಸನಾದ–"ಅಶೋಕ ಮಹಾರಾಜಕೀ ಜಯ" ಅಶೋಕನು ಬ್ರಾಹ್ಮಣನನ್ನು ವಂದಿಸಿದನು.

"ವಿಲಾಸಿಯೂ ಉದಾಸೀನನೂ ಆದ ಅಶೋಕನು ಸತ್ತು ಹೋಗಿದ್ದಾನೆ. ಇಂದಿನಿಂದ ನವೀನ ಅಶೋಕನು ನಿಮ್ಮನ್ನಾಳುವನು" ಬ್ರಾಹ್ಮಣನು ಉದ್ಘೋಷಿಸಿದ. ಇಡೀ ರಾಜ್ಯಕ್ಕೆ ಆನಂದವೇ ಆನಂದ! ಬಲು ದೂರದಲ್ಲಿ ಒಂದು ಗಾಡಿ ಹೋಗುತ್ತಿತ್ತು ಪ್ರಕೃತಿ ಸುಂದರಿಯ ನಿವಾಸಸ್ಥಾನವಾದ ಪರ್ವತದತ್ತ ಆ ಗಾಡಿ ಸಾಗುತ್ತಿತ್ತು.

ಆದರೆ ಆ ಗಾಡಿಯ ಒಳಗೆ ...

ಅರೂಪನೂ, ಸುಲೇಖೆಯೂ, ಪತಿಪತ್ನಿಯರಂತೆ ದೃಢ ಆಲಿಂಗನ ಪಾಶದಲ್ಲಿ, ಅನಂತ ಪ್ರೇಮಗಾನವನ್ನು ಹಾಡುತ್ತಾ ಸ್ವರ್ಗೀಯ ಸುಖವನ್ನು ಅನುಭವಿಸುತ್ತಾ .... !!!

ಸುಸಮಯ' ಹಣ ಸಂಪಾದಿಸಿರಿ

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆ ಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚ ಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮನಸ್ಸೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ** ಹೆಚ್ಚಿನ ವಿವರ ಕಂಪನಿಯಿಂದ ಪಡೆಯಿರಿ

ಮೆನೇಜರ

**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**

# ರಷ್ಯದ ನೂತನ ನಿರ್ಮಾಣ

## ಸ್ವಾತಂತ್ರ್ಯದ ದುರುಪಯೋಗ.

**[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಆಶೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಯೇನಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]**
—ಸಂ. ನ

ರಷ್ಯದಲ್ಲೀಗ ಜ್ಯಾರಿಗೆ ಬಂದಿರುವ ನವೀನ ಲೈಂಗಿಕ ಮತ್ತು ವಿವಾಹ ಸ್ವಾತಂತ್ರ್ಯದ ದುರುಪಯೋಗವು ಆರಂಭದಲ್ಲಿ ಬಹಳವಾಗಿ ನಡೆದಿರುವುದು. ಕೋರ್ಟುಗಳಲ್ಲೆಲ್ಲಾ ಆಕುರಿತಾದ ರಿಕಾರ್ಡುಗಳು ತುಂಬಿ ಹೋಗಿರುವುವು. ಹಲವು ಪಟ್ಟಣಗಳಲ್ಲಿ ಈ ಸ್ವಾತಂತ್ರ್ಯದ ವಿಚಿತ್ರ ರೀತಿಯ ದುರುಪಯೋಗ ನಡೆದಿದೆ. ಕೆಲಸದ ಹುಡುಗಿಯರು ತಮಗೆ ಮಕ್ಕಳು ಹುಟ್ಟಿದಾಗ ಅವುಗಳ ಪಿತೃತ್ವವನ್ನು ತನ್ನ ಯಜಮಾನರ ಮೇಲೆ ಹಾಕಿ ಅವರಿಂದ ಹೆಚ್ಚಿನ ಭತ್ತೆ ಪಡೆಯುವ ಉಪಾಯಮಾಡುತ್ತಾರೆ. ಸರ್ವಸಾಮಾನ್ಯ ಕೆಲಸಗಾರನು ಮಗು ಹುಟ್ಟಿಸಿದುದೆಂದರೆ ಅವನಿಂದ ಹೆಚ್ಚೇನೂ ಭತ್ತೆ ದೊರೆಯಲಾರದು. ಆದುದರಿಂದ ಗಂಡಸರು ಮುದುಕಿಯರನ್ನು ಸೇವಕಿಯರನ್ನಾಗಿ ನೇಮಿಸಲು ಅಳಿಕುತ್ತಾರೆ. ಇದರಿಂದ ಭತ್ತೆ ಕೊಡುವ ಕುತಂತ್ರಕ್ಕೊಳಗಾಗುವ ಅಪಾಯವಿರುವುದಿಲ್ಲ. ಆಗಾಗ ಒಬ್ಬ ಸ್ತ್ರೀಯು ತನ್ನ ಮಗು ಇಂಥವನಿಗೇನೇ ಹುಟ್ಟಿನುದೆಂದು ಒಬ್ಬನ ಮೇಲೆ ಖಟ್ಲೆಮಾಡುವಳು. ಆದರೆ, ಅವನು ಸದ್ರಿ ಮಗುವು ತನಗೆ ಹುಟ್ಟಿದುದಲ್ಲೆಂದೂ ಬೇರೆಯವರೂ ಆ ಸ್ತ್ರೀಯ ಸಂಪರ್ಕವುಳ್ಳವರಿದ್ದರೆಂದೂ ಸಿದ್ಧಪಡಿಸುವನು ಆಗ ನಿಜವಾಗಿ ಮಗುವಿನ ತಂದೆ ಯಾರೆಂಬುದನ್ನು ಕೋರ್ಟಿನವರಿಗೆ ನಿಶ್ಚೈಸಲಾಗದೆ, ಎಲ್ಲರೂ ಮಗುವಿನ ತಂದೆಯರೆಂತ ತೀರ್ಮಾನಿಸಿ ಎಲ್ಲರಿಂದಲೂ ಅದರ ಪೋಷಣೆಗೆ ಭತ್ತೆ ಕೊಡಿಸುವರು. ಹೆಚ್ಚಿಗೆ ಸಂಬಳವಿರುವ ಉದ್ಯೋಗಸ್ಥರನ್ನು ತಮ್ಮ ಬಲೆಗೆಳೆದು ಅವರಿಂದ ಹುಟ್ಟುವ ಮಗುವಿಗೆ ಅವರ ಸಂಬಳದಿಂದ ಹೆಚ್ಚಿಗೆ ಭತ್ತೆ ಪಡೆಯುವ ವ್ಯಾಪಾರವನ್ನೇ ನಡಿಸುವ ಸ್ತ್ರೀಯರು ರಷ್ಯದಲ್ಲಿರುತ್ತಾರೆ. ಹೀಗೆ ಹಲವು ಮಂದಿಯನ್ನು ಸಿಕ್ಕಿಸಿಹಾಕಿ ಅವರಿಂದೆಲ್ಲಾ ಭತ್ತೆ ಪಡೆದು ಬೇಕಷ್ಟು ಆದಾಯ ದೊರೆತಮೇಲೆ ತೊಂದರೆಯಿಲ್ಲದೆ ಸುಖವಾಗಿರುತ್ತಾರೆ. ಇದೇ ರೀತಿ ಹಲವು ಮಂದಿ ಸ್ತ್ರೀಯರನ್ನು ಮದುವೆಯಾಗಿ ಬಿಟ್ಟುಬಿಡುವ ಗಂಡಸರೂ ಇದ್ದಾರೆ ದಕ್ಷಿಣ ರಷ್ಯದಲ್ಲಿ ಒಬ್ಬನು 31 ವರುಷವಾಗುವುದರೊಳಗೇನೇ 12 ಮಂದಿಯನ್ನು ಮದುವೆಮಾಡಿಕೊಂಡು ಬಿಟ್ಟಿದ್ದನು. ರಷ್ಯದ ಒಂದು ಪಟ್ಟಣದಲ್ಲಿ 3 ಮಂದಿ ಸ್ತ್ರೀಯರನ್ನು ಮದುವೆಮಾಡಿಕೊಂಡು ಒಂದೊಂದು ಮಗುವಾದ ಮೇಲೆ ಪ್ರತಿಯೊಬ್ಬರನ್ನೂ ಬಿಟ್ಟು ಮಗುವಿನ ಪೋಷಣೆಗೆ ಭತ್ತೆ ಕೊಡದುದಕ್ಕಾಗಿ ಒಬ್ಬನ ಮೇಲೆ ಖಟ್ಲೆ ನಡೆಯಿತು. ಅವನು ಕೋರ್ಟಿನ ಮುಂದೆ ಹಾಜರಾದಾಗ ಪ್ರತಿಯೋರ್ವ ಪತ್ನಿಗೆ ತಾನು ತನ್ನ ಸಂಬಳದ ಮೂರನೇ ಒಂದಂಶ ಭತ್ತೆಯಾಗಿ ಕೊಡಬೇಕೆಂಬ ಕಾನೂನಿರುವುದರಿಂದ ಹಾಗೆ ಕೊಟ್ಟರೆ ಸಂಬಳದಲ್ಲಿ ತನಗೇನೂ ದೊರೆಯುವುದಿಲ್ಲೆಂದು ತಾನು ಉದ್ಯೋಗವನ್ನೇ ಬಿಟ್ಟಿರುವನೆಂದು ಯಥಾರ್ಥಸಂಗತಿ ಹೇಳಿಬಿಟ್ಟನು. ರಷ್ಯದಲ್ಲಿ ಒಬ್ಬನು ಎಷ್ಟು ಮಂದಿಯನ್ನು ಬೇಕಾದರೂ ಮದುವೆಮಾಡಿಕೊಂಡು ಅವರಿಂದ ಎಷ್ಟು ಮಕ್ಕಳನ್ನೇ ಪಡೆಯಲಿ ಅವರಿಗೆಲ್ಲಾ ಕೊಡುವ ಭತ್ತೆಯು ಆತನ ಸಂಬಳದ ಅರೆವಾಸಿಗಿಂತ ಹೆಚ್ಚಾಗಬಾರದೆಂಬ ಕಾನೂನು ಮಾತ್ರ ಈತನಿಗೆ ತಿಳಿದಿರಲಿಲ್ಲ. ಹಳೆಯ ನಿರ್ಬಂಧ ಪವಿತ್ರಭಾವ, ವಿಧಿನಿಷೇಧ, ಭೀತಿ, ನಾಚಿಕೆಗಳನ್ನೆಲ್ಲಾ ರಷ್ಯಾನರು ಒಮ್ಮೆಯೇ ನಿರ್ಮೂಲಗ್ರವಾಗಿ ಕಿತ್ತು ಹಾಕಿದಾಗ ಉಂಟಾದ ಸ್ವೈರಪ್ರವೃತ್ತಿಯ ಪರಿಣಾಮವಿದು. ಕ್ರಾಂತಿಯು ಪ್ರಥಮಾವಸ್ಥೆಯಲ್ಲಿದ್ದಾಗ ರಷ್ಯದ ಪರಿಸ್ಥಿತಿಯೂ ಬಹಳ ಕೆಟ್ಟದಾಗಿತ್ತು. [illegible] ಸಾಹಿತ. ಅವರ [illegible] ಕ್ರಾಂತಿಯ ನಿಷ್ಲವದ ಹಾವಳಿ [illegible] ಗಾಲಿ ಸೀಡೆ. ಹೀಗೆ ಒಂದಲ್ಲ ನೂರಾರು ವಿಧದ ಮಹಾವಿಪತ್ತುಗಳೊದಗಿದಾಗ ಮಾನವನ ಮನಸ್ಸು ಸ್ಥಿರವಾಗಿ ನೀತಿನಿಯಮಬದ್ಧವಾಗಿರುವುದಾದರೂ ಹೇಗೆ? ಇದು ಹೊರತು ನವೀನ ಸ್ವಾತಂತ್ರ್ಯ ಪಡೆದ ಜನರೆಲ್ಲರೂ ವಿದ್ಯೆ ಬುದ್ಧಿಯುಳ್ಳವರೇ? ಜಡ ಮೂಢ ಒಕ್ಕಲಿಗ ಜನರು. ಯಾವ ತರದ ಆತ್ಮಗೌರವ ಮತ್ತು ಸಾಮಾಜಿಕ ಜವಾಬ್ದಾರಿಯ ತಿಳಿವೇ ಇಲ್ಲದವರು. ತಲಾಂತರಗಳಿಂದ ಅಜ್ಞಾನಕೂಪದಲ್ಲಿ ನರಳುತ್ತಿದ್ದವರು. ಇಂತಹ ಪಶು ಸ್ವಭಾವದ ಜನರು ಹಠಾತ್ತಾಗಿ ಪಡೆಯುವ ಸ್ವಾತಂತ್ರ್ಯವನ್ನು ಸ್ವೈರವಾಗಿ ಉಪಯೋಗಿಸದಿರುವರೇ? ಆದರೆ ರಷ್ಯವು ವಿದ್ಯೆ, ಸಂಸ್ಕೃತಿ, ನಾಗರಿಕತೆಯಲ್ಲೆಲ್ಲಾ ಮುಂದುವರಿದಂತೆ ಜನತೆಯ ಪಶುವೃತ್ತಿಯು ಕಡಿಮೆಯಾಗಿರುವುದು. ಅದರ ವಿರೋಧವಾಗಿ ಕ್ರಾಂತಿಕಾರರೇ ಪ್ರಬಲ ಪ್ರಚಾರ ನಡಿಸಿರುವರು.

### ಕುಟುಂಬ ಮತ್ತು ವಿವಾಹ

ರಷ್ಯದ ಸಮಾಜ ರಚನೆಯಲ್ಲೀಗ ಕುಟುಂಬಸ್ತಂಭವು ಸಂಪೂರ್ಣ ಅಲುಗಾಡ ಹತ್ತಿದೆ. ಕೆಲವೆಡೆ ಅದನ್ನು ಕಿತ್ತು ಹಾಕಲಾಗಿದೆ. ಹಳ್ಳಿಗಳಲ್ಲಿ ಕುಟುಂಬವು ಇನ್ನೂ ಸ್ಥಿರವಾಗಿ ಉಳಿದಿರುವುದಾದರೂ ಪಟ್ಟಣಗಳಲ್ಲಿ ಅದು ಮೂಲೆಗುಂಪಾಗಿದೆ. ವಿವಾಹಕ್ಕೆ ಯಾವ ತರದ ಪಾವಿತ್ರ್ಯವಾಗಲಿ ಪ್ರಾಮುಖ್ಯತೆಯಾಗಲಿ ಇರುವುದಿಲ್ಲ. ರಷ್ಯದಲ್ಲಿ ಕೌಟುಂಬಿಕ ಸಂಸ್ಥೆಯು ಬಾಳಿಕೊಂಡಿರಬೇಕಾದರೆ ಖಾಸಗಿ ಸೊತ್ತು, ಗೃಹ ಮತ್ತು ಸಂಸ್ಥೆಗಳ ಮೇಲೆ ಅವಲಂಬಿಸಿಕೊಂಡಿರಲು ಸಾಧ್ಯವಿಲ್ಲ. ಅದು ಸ್ತ್ರೀಪುರುಷರೊಳಗಣ ಪ್ರೇಮವನ್ನೇ ಹೊಂದಿಕೊಂಡಿರಬೇಕು. ಈ ಪ್ರೇಮವು ಸೊತ್ತು ಖಾಸಗಿ ಸ್ವಾಧೀನತೆಯಿಂದ ತಪ್ಪಿ ಸಮಾಜದ ಸಮಷ್ಟಿಹಕ್ಕಿನದಾಗಿ ಮಾಡಲ್ಪಟ್ಟರೆ ಮತ್ತು ಎಲ್ಲರಿಗೂ ಅನುಕೂಲವಾಗುವುದೆಂದು ಕ್ರಾಂತಿಕಾರರ ಅಭಿಮತ. ಆಗ ಮಾತ್ರ ಹಣವಂತೆ ಆಸ್ತಿ ಬದುಕು [illegible] ವಿನಾಶವಾಗುವುದು ನಿಶ್ಚಿತ. ಹೀಗೆ ನಿಜವಾಗಿ ಸ್ತ್ರೀಪುರುಷ ಪ್ರೇಮವೇ ದಾಂಪತ್ಯವಾಗುವುದೆಂದೇ ಅವರ [illegible] ಸ್ತ್ರೀಪುರುಷರಿಗೆ ಜನ್ಮ [illegible], ಸ್ವಾವಲಂಬಿಗಳಾಗಿ ಜೀವನ ನಡಿಸುವ ಅನುಕೂಲತೆಯಿತ್ತು, ಅವರಿಗೆ ಪೂರ್ಣ ಸತಿಪತಿಯನ್ನು ಆರಿಸುವ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರೆ ಅವರು ನಿಜಪ್ರೇಮ ಪ್ರೇರಿತರಾಗಿ ಒಟ್ಟುಗೂಡಿ ಸುಖದಾಂಪತ್ಯ ನಡಿಸುವರು. ಅವರ ಪ್ರೇಮವು ವಿಚಾರಪ್ರೇರಿತವಾಗುವುದು. ಅವರು ಕೇವಲ ಶಾರೀರಿಕ ಅಥವಾ ಸಾಂಪತ್ತಿಕ ವಿಷಯಗಳಿಂದ ಆಕರ್ಷಿತರಾಗದೆ ಸಾಮಾಜಿಕ, ಬೌದ್ಧಿಕ, ಚಾರಿತ್ರಿಕ ಮತ್ತು ವೈಯಕ್ತಿಕ ಸಹಾನುಭೂತಿಗಳ ಸಾಮರಸ್ಯದಿಂದ ಪರಸ್ಪರ ಆಕರ್ಷಿತರಾಗುವರು. ಇಂತಹ ಪ್ರೇಮದಲ್ಲಿ ಹೆಚ್ಚಿನ ಬಂಧುಭಾವ ಮತ್ತು ಮಾನವನ ಸಹಚರ್ಯೆಯಿರುವುದು. ಸ್ತ್ರೀಪುರುಷರಿಬ್ಬರೂ ಸ್ವತಂತ್ರ ಜೀವನ ನಡಿಸುವ ಶಕ್ತಿಯುಳ್ಳವರಿರುವುದರಿಂದ ಹಣದ ಸಂಬಂಧವಾಗಿ ಪರಸ್ಪರ ತೊಂದರೆ ಕೊಡುವ [illegible] ಇಲ್ಲ. ಗೃಹಕೃತ್ಯದ ಭಾರ ಮಕ್ಕಳ ಪೋಷಣೆಯ ಜವಾಬ್ದಾರಿ [illegible] ಸ್ತ್ರೀಯು ವಹಿಸಿಕೊಳ್ಳುವ ಅವಶ್ಯವಿಲ್ಲದಿರುವ ಆ ಸಂಬಂಧದಲ್ಲಿಯೂ [illegible] ವ ಹಾಗಿಲ್ಲ. ರಷ್ಯಾನರ ಅಭಿಪ್ರಾಯದಂತೆ ಅವರ ಸಮಾಜದಲ್ಲಿ ಸ್ತ್ರೀಪುರುಷರನ್ನು ಪರಸ್ಪರ ಆಕರ್ಷಿಸ ನಿಜವಾದ ಬಂಧುಭಾವ ಮತ್ತು ಸಹಚರ್ಯೆಯಿಂದ ದಾಂಪತ್ಯ ನಡಿಸುವಂತೆ ಮಾಡುವ ಅನುಕೂಲತೆಗಳು ಹಿಂದಿನ ಸಮಾಜಕ್ಕಿಂತ ಇಂದಿನ ಅವರ ಸಮಾಜರಚನೆಯಲ್ಲಿ ಬಹಳ ಹೆಚ್ಚಿರುವವು. ಸತಿಪತಿಗಳಿಗೆ ಸರಿಹೋಗದಿದ್ದರೆ ಅವರು ಒಬ್ಬರೊಬ್ಬರನ್ನು ಬಿಟ್ಟುಬಿಡಲಿ. ನಿರ್ಬಂಧದ ಮೋಸಮಯ ದಾಂಪತ್ಯದಿಂದೇನು? ಎಂದೇ ರಷ್ಯಾನರ ತರ್ಕ.

ಪ್ರಕೃತ ರಷ್ಯದಲ್ಲಿ ಕುಟುಂಬವೇನೂ ನಾಶವಾಗಿರುವುದಿಲ್ಲ. ವಿವಾಹವಿಚ್ಛೇದ ಕೂಡಾ ಅಷ್ಟೊಂದೇನೂ ಅಧಿಕವಾಗಿರುವುದಿಲ್ಲ. ಮೋಸ್ಕೋ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಮಾತ್ರ ವಿವಾಹ ವಿಮೋಚನೆಯೇ ಹೆಚ್ಚಿದೆ. ಇವಕ್ಕೆ ಆ ಪಟ್ಟಣಗಳಲ್ಲಿನ ರಾಜಕೀಯ ಅಸ್ಥಿರತೆ, ಜೀವನದ ಪರಿಸ್ಥಿತಿಯೇ ಕಾರಣ. ಆದರೆ ವಿವಾಹವಿಚ್ಛೇದವಾದೊಡನೆಯೇ ಕುಟುಂಬ ವಿಚ್ಛೇದವಾಯಿತೆಂದೇನೂ ಇಲ್ಲ. ವಿವಾಹವಿಚ್ಛೇದವಾದವರು ಪುನಃ ಮದುವೆಯಾಗುತ್ತಾರೆ. ಕೆಲವು ವೇಳೆ ಒಮ್ಮೆ ಬಿಟ್ಟವರೇ ಮತ್ತೊಮ್ಮೆ ಒಟ್ಟುಕೂಡಿ ಕೌಟುಂಬಿಕ ಜೀವನ ನಡಿಸುತ್ತಾರೆ. ಪ್ರೇಮ ಮತ್ತು ಕೌಟುಂಬಿಕಭಾವನೆಯು ಮಾನವ ಸ್ವಭಾವ ಸಹಜವಾದುದು. ಸ್ತ್ರೀಪುರುಷ ಶರೀರಪ್ರಕೃತಿಯಲ್ಲದು ಅಡಕವಾಗಿದೆ. ಏನು ಮಾಡಿದರೂ ಅದನ್ನು ನಾಶಮಾಡಲು ಸಾಧ್ಯವಿಲ್ಲೆಂದೇ ಕೆಲಮಂದಿ ಶರೀರಶಾಸ್ತ್ರಜ್ಞರ ಅಭಿಮತ. ಇದು ನಿಜವೆಂದು ಹೇಳಬಹುದು. ಸ್ತ್ರೀಪುರುಷರು ಒಬ್ಬರೊಬ್ಬರನ್ನು ಕಂಡು ಉತ್ತೇಜಿತರಾಗಿ ಪರಸ್ಪರ ಪ್ರೇಮ, ಸಹಚರ್ಯೆಯನ್ನಾಶಿಸಿದರೆ ಅವರು ಒಂದುಗೂಡಿ ಯಾವುದಾದರೊಂದು ರೀತಿಯ ಕೌಟುಂಬಿಕ ಜೀವನವನ್ನು ನಡಿಸಗಿರಲಾರರು. ಪ್ರೇಮವು ಯಾವಾಗಲೂ ಏಕಾಂತವನ್ನಾಶಿಸುವುದು. ಆದುದರಿಂದ ಅದಕ್ಕೆ ಮನೆಯೊಂದು ಅವಶ್ಯವಿರುವುದು. ಇದು ಹೊರತು ಮಾನವನು ಜನಸಂದಣಿಯ ಗಲಾಟೆ, ಗದ್ದಲದಿಂದ ದೂರವಾಗಿ ಶಾಂತಿಯಿಂದ ತನ್ನ ಆತ್ಮೀಯರೊಂದಿಗೆ ಕಾಲಕಳೆಯಲಿಚ್ಛಿಸುತ್ತಾನೆ. ತನ್ನ ಮಕ್ಕಳೊಂದಿಗೆ ಆಡಿ ಪಾಡಿ ಆನಂದಿಸಲಿಚ್ಛಿಸುತ್ತಾನೆ. ಪತ್ನಿಯೊಂದಿಗೆ ಪ್ರಣಯವಿನೋದದಲ್ಲಿ ಕಾಲಕಳೆಯಲಾತುರಪಡುತ್ತಾನೆ. ಇದರಿಂದೆಲ್ಲಾ ಕುಟುಂಬ ಮತ್ತು ಮನೆಯು ಅವಶ್ಯವಾಗುತ್ತದೆ.

ರಷ್ಯದ ಕುಟುಂಬವು ನಿಜವಾದ ಪ್ರೇಮಿಗಳಿಬ್ಬರ ಸಂಯೋಗ. ಆ ಸಂಯೋಗ ಸುಖಕ್ಕಾಗಿ ಅವರಿಗೊಂದು ಚಿಕ್ಕ ನಿವಾಸ. ಇದೇ ಅವರ ಗೃಹ. ರಷ್ಯದಲ್ಲಿ ಭವ್ಯ ನಿವಾಸಗಳು ಅವರಿಗೆ ದೊರೆಯಲಾರವು. ಚಿಕ್ಕ ಮನೆಗಳಿಂದಲೇ ತೃಪ್ತಿ ಹೊಂದಬೇಕು. ರಷ್ಯಾನ ಸತಿಪತಿಗಳಿಬ್ಬರೂ ಒಟ್ಟಾಗಿರಲೂ ಬಹುದು. ದೀರ್ಘಕಾಲ ಬೇರೆ ಬೇರೆಯಾಗಿ ತಮ್ಮ ತಮ್ಮ ಕೆಲಸ ಮಾಡುತ್ತಿರಲೂ ಬಹುದು. ಅವರ ಮಕ್ಕಳು ರಾತ್ರಿಯಲ್ಲಿ ಅಥವಾ ಅವರಿಗೆ ಬಿಡುವಿರುವಲ್ಲಿ ಅವರೊಂದಿಗಿರಬಹುದು. ಇಲ್ಲವಾದರೆ ಆಗಾಗ ಅವರ ಬಳಿಗೆ ಬಂದು ಹೋಗಬಹುದು. ತಮ್ಮ ತಮ್ಮ ಚಲನವಲನದ ವಿಷಯದಲ್ಲಿ ಗಂಡಹೆಂಡರಿಗೆ ಸಂಪೂರ್ಣ ಸ್ವಾತಂತ್ರ್ಯವಿರುವುದು. ಇದು ಪರಸ್ಪರ ಇಚ್ಛೆ ಮತ್ತು ಭಾವನೆಗಳಿಂದ ಮಾತ್ರ ನಿಯಮಿತವಾಗಿರುವುದು. ಅವರು ಸ್ವತಂತ್ರರಾಗಿ ಸ್ವಾವಲಂಬನೆಯ ಪರಸ್ಪರ ಹೊಂದಿಕೆಯಿಂದ ಜೀವಿಸುವರೇ ಹೊರತು ಒಬ್ಬರೊಬ್ಬರ ಮೇಲೆ ಯಾವ ರೀತಿಯಲ್ಲಿಯೂ ಅವಲಂಬಿಸಿಕೊಂಡಿಲ್ಲ. ಇದೇ ರಷ್ಯದ ಕುಟುಂಬವ್ಯವಸ್ಥೆ. ಕುಟುಂಬವು ಗೃಹದಧಿದೇವತೆಯಾದ ಗೃಹಿಣಿಯ ಗರ್ಭಗುಡಿಯಲ್ಲಿ ಹೊರಗಣ ಲೋಕ ಮತ್ತು ಸಮಾಜದ ಸಂಬಂಧವಿಲ್ಲದೆ, ತಮ್ಮದೇ ಆದ ಸುಖ–ದುಃಖ ಲಾಭ–ನಷ್ಟದಲ್ಲಿ ಮಗ್ನವಾಗಿರುವ ಚಿಕ್ಕ ಲೋಕವಲ್ಲ. ಸತಿಪತಿ ಸಂತತಿಯದು ಅಭೇದ್ಯಕೋಟೆಯಲ್ಲ. ಅದಕ್ಕೆ ಸಮಾಜದಲ್ಲಿ ಯಾವ ಪವಿತ್ರ ಮತ್ತು ಪ್ರಾಮುಖ್ಯಸ್ಥಾನವಿಲ್ಲ. ದಂಪತಿಗಳ ಏಕಾಂತ ಜೀವನದ ನಿವಾಸವಷ್ಟೆ!

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವವು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.



# ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

[ಸ್ಥಾಪನೆ: 1907]

**ಅತ್ಯಧಿಕ ಬೋನಸು !**

**ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,**
**ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.

**ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.**

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

**ಪಿ ಡಿ. ಭರ್ಗೋವಾ** ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, **ಅಜ್ಮೀರ್.**

ಅಥವಾ

**ಮೆನೇಜರ್,** 278, ಲಿಂಗ ಚೆಟ್ಟಿ ಸ್ಟ್ರೀಟ್, **ಮದ್ರಾಸ್.**

**ಸುಪರಿಂಟೆಂಡೆಂಟ್, ಬಳ್ಳಾರಿ.** ಆರ್ಗನೈಸ್ಟರ್, **ವೆಲ್ಲೂರು.**

**ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.**



# ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ



ಸ್ಥಾಪನೆ: 1926

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

**ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.**

**ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.**



**ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.**

# ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟೆಯವರಿಂದ ಮಂಜೂರಾಗಿದೆ.

**ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು**

ಯೋಗ್ಯವಾದ ಹಾಡುಗಳು.

**ಪ್ರತಿಗಳು:**—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,

**ನವಭಾರತ ಬುಕ್ ಡಿಪೋ**
**ಉಡುಪಿ**



**ತ್ವರೆಮಾಡಿರಿ!** ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಚಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ

# 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 58 Mody Street, Fort Bombay.



THE

# Vijaya Bank, Ltd.

**Head Office: MANGALORE** Branch Offices **Udipi Kaup & Coondapoor.**

**ದಿ ವಿಜಯ ಬೇಂಕ್ ಲಿಮಿಟೆಡ್,**

**ಹೆಡ್ ಆಫೀಸು: ಮಂಗಳೂರು.** ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

**ಚಾಲ್ತಿ ಠೇವಣಾತಿಗಳು** ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳುಸಾ. ಶೆ. $3\frac{1}{2}$

ಖಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. $3\frac{1}{2}$

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಒಡವೆ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ 8 101ರಿಂದ 500ರ ವರೆಗೆ ಸಾ. ಶೆ. 7.
501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ವರಾ ಸಾಲಕೊಡಲಾಗುತ್ತದೆ. ಸಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

**A. B. Shetty,** ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

**ವಿಜಯ ಬೇಂಕ್ ಲಿಮಿಟೆಡ್,** ಕದ್ರಿರೋಡ್, **ಮಂಗಳೂರು.**



**ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.**

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.**

**ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.**

P. A. PAI, BROS.
**ಪಿ. ಎ. ಪೈ. ಬ್ರದರ್ಸ್,**
**ಆಸ್ಪತ್ರೆ ಎದುರು, ಉಡುಪಿ.**



# ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವದು ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದೇಶಿ ಸ್ಟೋರ್ಸು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಸ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ ಕನ್ನಡ

## ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿ ರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

### ವಿದ್ಯಾ ಇಲಾಖೆಯೂ ಪಠ್ಯಪುಸ್ತಕಗಳೂ

ಶಾಲೆಗಳು ಪ್ರಾರಂಭವಾಗಿ ಈಗಾಗಲೇ ಒಂದು, ಒಂದೂವರೆ, ತಿಂಗಳಾಗಿ ಹೋಯಿತು. ಇನ್ನೂ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕೈಗೆ ಸಿಕ್ಕಿಲ್ಲ. ತ್ರೈಮಾಸಿಕ ಪರೀಕ್ಷೆ ಬರುವುದಕ್ಕಾದರೋ, ಬಹಳ ಅಲ್ಪಸಮಯ ಉಳಿದಿದೆ. ಈ ಪರೀಕ್ಷೆಗೆ ವಿದ್ಯಾರ್ಥಿಗಳು ಉತ್ತರಿಸುವುದೇನನ್ನು?

ಪಾಠಪಟ್ಟಿಯಲ್ಲಿ ಇಂತಿಷ್ಟು ಪಾಠ ಮಾಡಬೇಕಾಗಿದೆ ಎಂದು ಬರೆದು ಬಿಡುವುದು; ಪಠ್ಯಪುಸ್ತಕಗಳು ಯಾವುವೆಂದು ನಿರ್ಣಯವೇ ಇನ್ನೂ ಆಗಿಲ್ಲ. ಪಾಠಪಟ್ಟಿಯಲ್ಲಿ ಹೇಳಿದಷ್ಟು ಪಾಠಗಳನ್ನು ಉಪಾಧ್ಯಾಯರಿಗೆ ಮಾಡಲು ಸಾಧ್ಯವಿಲ್ಲ. ಹಾಗೆ ಮಾಡದಿದ್ದರೆ ವಿದ್ಯಾರ್ಥಿಗಳೇನು ಮಾಡುವುದು?

ಕೊನೆಯ ಪಾಯಿಂಟಿನಿಂದ ಶಾಲೆಗಂತೂ "ಪಬ್ಲಿಕ್ ಗವರ್ನಮೆಂಟ್" ಪರೀಕ್ಷೆಯಂತೆ. ಒಡಹುಡುಗರು ಅದಕ್ಕೂ ಫೀಸು ಕಟ್ಟಿ, ತಮ್ಮ ಅದೃಷ್ಟ ಪರೀಕ್ಷೆಯನ್ನು ಮಾಡಿಕೊಳ್ಳಲಿಕ್ಕಿರುವಾಗ ಪಾಠಪಟ್ಟಿಯಲ್ಲಿ ಹೇಳಿದುದೆಲ್ಲವನ್ನೂ ಕಲಿಯಬೇಡವೆ? ಅದನ್ನು ಚೆನ್ನಾಗಿ ಅಭ್ಯಾಸವನ್ನು ಕಲಿಯುವಾ ಎಂದರೆ, ಇನ್ನೂ ಪಠ್ಯಪುಸ್ತಕಗಳ ನಿರ್ಣಯವೇ ಆಗಿಲ್ಲ. ಇನ್ನು ಪಠ್ಯಪುಸ್ತಕಗಳ ನಿರ್ಣಯವಾದ ನಂತರವಾದರೂ ಪಾಠಪಟ್ಟಿಯಲ್ಲಿ ಇರುವ ಪಾಠಗಳನ್ನು ಅವಸರದಿಂದ ಮಾಡದೆ ನಿರ್ವಾಹವಿಲ್ಲ. ವಿದ್ಯಾ ಇಲಾಖೆಯವರು ಇದೆಲ್ಲವನ್ನೂ ಮೊದಲೇ ಆಲೋಚಿಸಿಕೊಳ್ಳಬೇಡವಾಗಿತ್ತೆ?

ಶಾಲೆಗಳ ದೀರ್ಘ ರಜೆ ಕಳೆದು ಶಾಲೆಯು ಪ್ರಾರಂಭವಾದೊಡನೆಯೇ ಪಾಠಕ್ಕಾರಂಭಿಸುವದಕ್ಕೋಸ್ಕರ ವಿದ್ಯಾ ಇಲಾಖೆಯವರು, ರಜೆ ತಿಂಗಳಲ್ಲೇ ಪಠ್ಯ ಪುಸ್ತಕಗಳ ನಿರ್ಣಯವೆಲ್ಲವನ್ನೂ ಮಾಡಬೇಕಿತ್ತು. ಅವರು ಆಗ ದೀರ್ಘ ನಿದ್ರೆಯಲ್ಲಿದ್ದರೋ? ಈಗ ಎಚ್ಚೆತ್ತು ಕೆಲಸಕ್ಕಾರಂಭಿಸಿರುವರಂತೆ ತೋರುತ್ತದೆ. ಬೆಳಿಗ್ಗೆ 5ಗಂಟೆಗೆ ಏಳದೆ, 10ಗಂಟೆಗೆ ಎದ್ದು ಮೊದಲಿನ ಕೆಲಸಗಳನ್ನು ಚಡಪಡಿಸಿಕೊಂಡು ಮಾಡುವುದಕ್ಕಿಂತ, 5ಗಂಟೆಗೇ ಎದ್ದಿದ್ದರೆ ಒಳ್ಳೇದಿತ್ತಲ್ಲ.

ಪ್ರತಿ ದಿನವೂ ಕ್ಲಾಸಿನಲ್ಲಿ ಪಾಠವಿಲ್ಲದಿರುವಂತೆ ಮಾಡದಿರಲಿಕ್ಕಾಗಿ, ಮಾನ್ಯ ವಿದ್ಯಾ ಇಲಾಖೆಯವರು ದಯೆಯಿಟ್ಟು, ಇನ್ನಾದರೂ, ಆದಷ್ಟು ಬೇಗನೆ ಪಠ್ಯ ಪುಸ್ತಕಗಳ ನಿರ್ಣಯದ ವ್ಯವಸ್ಥೆಯ ಕಡೆಗೆ ಗಮನ ಕೊಡಲಾರರೇ?

"ಗೆಳೆಯ"

### ಬೇಸಾಯ ಕ್ರಮದಲ್ಲಿ ತರಬೇತಿ

#### ತಳಿಪರಂಬಾ ಕೃಷಿಕ್ಷೇತ್ರದಲ್ಲಿ ಈ ಕುರಿತಾಗಿ ಅನುಕೂಲತೆಗಳು.

ತಳಿಪರಂಬಾ ವ್ಯವಸಾಯ ಕ್ಷೇತ್ರದಲ್ಲಿ 1937ನೇ ಇಸ್ವಿ ಆಗೋಸ್ಟು ತಿಂಗಳು 1ರಿಂದ ರೈತರಿಗೆ ತರಬೇತಿ ಕೊಡುವ ಅನುಕೂಲತೆಗಳನ್ನು ಏರ್ಪಡಿಸಿರುವರು. ... ಈ ತರಬೇತಿ ... 10 ತಿಂಗಳವರೆಗಾಗಿ ಬೇಸಾಯಕ್ಕೆ ಸಂಬಂಧಿಸಿದ ಈ ಕೆಳಗೆ ನಮೂದಿಸಿದ ವಿಷಯಗಳ ಕುರಿತು ಸಂಪೂರ್ಣ ತರಬೇತಿಯನ್ನು ಕೊಟ್ಟು ಮುಂದಕ್ಕೆ ಕಳುಹಿಸುವರು. ಈ ವಿದ್ಯೆಯಿಂದ ಆತನು ತನ್ನ ಸ್ವತಂತ್ರ ಯಾ ಇತರರ ಭೂಮಿಗಳಲ್ಲಿ ಉತ್ತಮ ರೀತಿಯಲ್ಲಿ ಕೃಷಿಕ್ರಮಗಳನ್ನು ನಡಿಸುವದಕ್ಕೆ ಯೋಗ್ಯನಾಗುವನು. ತರಬೇತಿ ಕೊಡುವ ವಿಷಯಗಳಾಗುವುವೆಂದರೆ:—

(1) ಸಾಮಾನ್ಯ ಬೇಸಾಯ ಕ್ರಮ. (2) ಯಂತ್ರ ಸಾಮಾನು ಉಪಯೋಗಿಸುವಿಕೆ. (3) ಪೈರುಗಳಿಗೂ ಗಿಡಮರಗಳಿಗೂ ಬಾಧಿಸುವ ರೋಗ ಮತ್ತು ಕ್ರಿಮಿರೋಗಗಳ ಕುರಿತು ವಿಚಾರಣೆ. (4) ಗೊಬ್ಬರಗಳು (5) ಪೈರುಗಳ ಸುಧಾರಣಾ ಕೆಲಸ (6) ಬೆಲ್ಲ ತಯಾರಿಸುವುದು (7) ತರಕಾರಿ ಹಣ್ಣು ಹಂಪಲು ಹೂವಿನ ತೋಟದ ಕೃಷಿ (8) ಜೇನು ಸಾಕುವಿಕೆ. (9) ಕೋಳಿ ಸಾಕುವಿಕೆ (10) ಹಾಲು ಮೊಸರುಗಳಿಗೆ ಸಂಬಂಧಿಸಿದ ಕ್ರಮಗಳು.

ಮೇಲೆ ಹೇಳಿದ ತರಬೇತಿಯನ್ನು ಧರ್ಮಾರ್ಥವಾಗಿ ಕೊಡುವುದು. ಇದಕ್ಕೆ ಸೇರುವ ಹುಡುಗರಿಗೆ ಉಳುಕೊಳ್ಳುವ ಅನುಕೂಲತೆಗಳನ್ನು ಕೊಟ್ಟಾಗ್ಯೂ ಊಟದ ಖರ್ಚು (ರೂಪಾಯಿ 8 ರಿಂದ 12) ಅವರೇ ನೋಡಿಕೊಳ್ಳತಕ್ಕದ್ದು.

ತರಬೇತು ಹೊಂದುವ ಕಾಲದಲ್ಲಿ ಬೆಳಿಗ್ಗೆ 3 ಘಂಟೆ ಸಮಯ ಗದ್ದೆಗಳಲ್ಲಿ ಕೆಲಸವೂ ಮಧ್ಯಾಹ್ನ 3 ಘಂಟೆ ಸಮಯ ಪಾಠ ಹೇಳಿ ಕೊಡುವುದೂ ಆಗಿರುತ್ತದೆ. ಆದುದರಿಂದ ಇದಕ್ಕೆ ಸೇರುವ ಹುಡುಗನು ಗದ್ದೆಗಳಲ್ಲಿ ಕೆಲಸಮಾಡಲು ಶಕ್ತನಾಗಿರಬೇಕು. ಮತ್ತು ಬೇಸಾಯದ ಕುರಿತು ಸ್ವಲ್ಪವಾದರೂ ಅನುಭವವುಳ್ಳವನಾಗಿರಬೇಕು. ಇದಕ್ಕೆ ಸೇರಲು ಬರುವವರು ತರಬೇತಿ ಮುಗಿದ ನಂತರ ನೌಕರಿಯನ್ನು ಅಪೇಕ್ಷಿಸಲಾಗದು.

ಇದಕ್ಕೆ ಸೇರಲು ಕುತೂಹಲವುಳ್ಳವರು ತಮ್ಮ ಅರ್ಜಿಯನ್ನು ದಿ ಡಿಪ್ಯುಟಿ ಡ್ಯಾರೆಕ್ಟರ್ ಓಫ್ ಎಗ್ರಿಕಲ್ಚರ್ 7ನೇ ಸರ್ಕಲ್ ತಲಚೇರಿ ಎಂಬ ವಿಳಾಸಕ್ಕೆ ಇದೇ ಜುಲೈ ತಿಂಗಳ ಒಳಗೆ ತಲುಪುವಂತೆ ಕಳುಹಿಸಿಕೊಡಬಹುದು.

ಹೆಚ್ಚಿನ ಅನುಭವದ ಕುರಿತಾಗಿಯೂ ಮೇಲಿನ ವಿಳಾಸಕ್ಕಾಗಲೀ ತಮ್ಮ ತಾಲೂಕಿನ ಎಗ್ರಿಕಲ್ಚರಲ್ ಡಿಮೊನ್ಸ್ಟ್ರೇಟರರ ಕೂಡೆ ವಿಚಾರಿಸಿರಿ.


## ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

THE ROYAL SEED CO.,
FLORISTS & SEEDSMEN,
27, Ilpay Thope ULSOOR, BANGLORE.

ವಿ. ಸೂ.— ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈ ಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡೆಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು

ಅತ್ಯುತ್ತಮ ಸೇವನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಫೌಂಟನ ಪೇನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚಲೋ ಸುವಾಸನೆಯ 'ಪೊಮೇಡ'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

Sole distributors:—V. V. Kamath & Bros. Mangalore.

## ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

### ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು. ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D. N. JASANI, Vitalbhai Patel Road, BOMBAY 4

# ಸ್ವದೇಶ | ಕೊಲೆಯಾಗಿದ್ದವನು ಸಜೀವವಾಗಿದ್ದುದು, ಮದ್ರಾಸ್ ಎಸೆಂಬ್ಲಿ ಸಭೆಯು, ರಾಜಕೀಯ ಕೈದಿಗಳ ಬಿಡುಗಡೆ, ಜಾಪಾನಿನ ಶರ್ತ, ಸ್ಪೈನಿನ ಯುದ್ಧ, ಚೀನದ ವಿಷಮ ಪರಿಸ್ಥಿತಿ. | ವಿದೇಶ

ನಿರೀಕ್ಷೆಯಿತ್ತು. ಅದು ಸಫಲವಾಗದಿದ್ದರೂ ನಮ್ಮ ಜಿಲ್ಲೆಯವರಾದ ಡಾಕ್ಟರ್ ಯು. ರಾಮರಾಯರು ಮದ್ರಾಸ್ ಕೌನ್ಸಿಲಿನ ಪ್ರೆಸಿಡೆಂಟರಾಗಿ ಒಮ್ಮತದಿಂದ ಆರಿಸಲ್ಪಟ್ಟುದು ಜಿಲ್ಲೆಗೊಂದು ದೊಡ್ಡ ಗೌರವ. ಶ್ರೀ. ರಾಯರು ಅದೆಷ್ಟು ಜನಪ್ರಿಯರಿರುವರೆಂಬುದು ಇದರಿಂದ ವ್ಯಕ್ತವಾಗುವುದು. ಅವರು ತನ್ನ ಅಧ್ಯಕ್ಷಪದವಿಯನ್ನು ದಕ್ಷತೆಯಿಂದ ನಿರ್ವಹಿಸಿ ಇನ್ನಷ್ಟು ಜನಪ್ರೀತರಾಗಿ ಜಿಲ್ಲೆಗೆ ಕೀರ್ತಿತರಲೆಂದೇ ನಮ್ಮ ಹಾರೈಕೆ. ಇದು ಹೊರತು ನಮ್ಮ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ. ಎ. ಬಿ. ಶೆಟ್ಟಿ, ಶ್ರೀ ಕೆ. ಆರ್. ಕಾರಂತ್ ಮತ್ತು ಮಿ. ಸಿ. ಜೆ. ವಾರ್ಕಿಯವರು ಪಾರ್ಲಿಮೆಂಟರಿ ಸೆಕ್ರಿಟರಿಗಳಾಗಿ ನೇಮಿಸಲ್ಪಟ್ಟಿರುವುದು ಅತಿ ಸಂತೋಷಕರ. ಇದರಿಂದಾಗಿ ನಮ್ಮ ಜಿಲ್ಲೆಯ ಮತಸಮುದಾಯವು ಈ ಮಹನೀಯರ ಆಸಕ್ತಿಯ ಸೇವೆಯನ್ನು ಕಳಕೊಳ್ಳುವುದಾದರೂ, ವೈಯಕ್ತಿಕವಾಗಿ ಅವರು ಹೆಚ್ಚಿನ ತ್ಯಾಗಮಾಡಿ ಈ ಹೊಸ ಜವಾಬ್ದಾರಿ ವಹಿಸಬೇಕಾದರೂ, ಕರ್ತವ್ಯವು ಎಲ್ಲಕ್ಕಿಂತಲೂ ಮೊದಲೆಂಬ ಭಾವನೆಯಿಂದ ಅವರು ಪಾರ್ಲಿಮೆಂಟರಿ ಸೆಕ್ರಿಟರಿಗಳಾಗಲೊಪ್ಪಿದುದಕ್ಕಾಗಿ ವಂದನಾರ್ಹರು. ಅದಕ್ಕಾಗಿ ಜಿಲ್ಲೆಯು ಅಭಿಮಾನಪಡಬೇಕು. ಈ ಮೂವರು ತಮ್ಮ ಹೊಸ ಜವಾಬ್ದಾರಿಯನ್ನು ಚತುರತೆಯಿಂದ ನಡಿಸಿ ಹೆಸರು ಪಡೆದು ಜನಪ್ರೀತರಾಗಲೆಂದೇ ನಮ್ಮ ಹೃತ್ಪೂರ್ವಕವಾದ ಅಪೇಕ್ಷೆ.

## ಸ್ವದೇಶ

### ಕೊಲೆಯಾಗಿದ್ದವನು ಸಜೀವವಾಗಿದ್ದುದು

ಸಂಯುಕ್ತ ಪ್ರಾಂತದ ಅತ್ತವ ಎಂಬ ಹಳ್ಳಿಯಲ್ಲಿ ಚಟ್ಟೋರಿ ಎಂಬವನೊಬ್ಬನನ್ನು ಅವನ ಭಾವ ಮೈಕು ಎಂಬವನು, ತನ್ನ ತಂಗಿಯನ್ನು ಹಣಪಡೆದು ಇನ್ನೊಬ್ಬನಿಗೆ ಮದುವೆಮಾಡಿ ಕೊಡುವ ದುರಾಶೆಯಿಂದ ಮನೆಗೆ ಕರೆಸಿ ಕುತ್ತಿಗೆ ಹಿಸುಕಿಕೊಂದು ಪೆಟ್ಟಿಗೆಯೊಳಗೆ ಹಾಕಿ ಹತ್ತಿರದ ನದಿಗೆ ಬಿಸಾಡಿದನೆಂದು ಚಟ್ಟೋರಿಯ ತಮ್ಮನು ಪೋಲೀಸರಿಗೆ ತಿಳಿಸಿದ. ಪೋಲೀಸರು ನದಿಯಲ್ಲೆಲ್ಲಾ ಹುಡುಕಾಡಿದರು ಶವ ಪೆಟ್ಟಿಗೆ ಸಿಗಲಿಲ್ಲ. ಹಳ್ಳಿಯವರು ಕೆಲವರು ತಾವು ಕೊಲೆ ಮಾಡಿದುದನ್ನು ನೋಡಿರುವೆವೆಂದು ಸಾಕ್ಷಿ ಹೇಳಿದ್ದರು. ಆಗ ಮೈಕು ಮತ್ತು ಇನ್ನು ಕೆಲವರ ದಸ್ತಗಿರಿಗಾಗಿ ವಾರಂಟು ಹೊರಟಿತು. ಆಗ ಚಟ್ಟೋರಿಯು ತನ್ನೊಬ್ಬ ಮಿತ್ರನ ಮನೆಯಲ್ಲಿ ಮಲಗಿದ್ದುದನ್ನು ಪೋಲೀಸರು ಪತ್ತೆಮಾಡಿದರು. ಈಗ ಪೋಲೀಸರನ್ನು ವಂಚಿಸಿದುದಕ್ಕಾಗಿ ಚಟ್ಟೋರಿಯ ತಮ್ಮನ ಮೇಲೆ ಖಟ್ಲೆಮಾಡಲಾಗಿದೆ.

ಇದೇ ತಾ ೧೮ರಲ್ಲಿ ಲಾಹೋರಿನ ಪೋಜಿಗೇಟಿನ ಬಳಿ ಐಸ್ ಮಾರುತ್ತಿದ್ದ ಹಿಂದು ಒಬ್ಬನನ್ನು ಮುಸಲ್ಮಾನ ಯುವಕನೊಬ್ಬನು ಕತ್ತಿಯಿಂದ ತಿವಿದು ಕೊಂದು ಗಲಾಟೆಯಾಯಿತು. ಹಿಂದುಗಳೂ ಮುಸಲ್ಮಾನರೂ ಸೇರಿಬಂದರು. ಆಗ ಪೋಲೀಸರು ಧಾವಿಸಿ ಬಂದು ಕೊಲೆಗಾರನನ್ನು ದಸ್ತಗಿರಿಮಾಡಿ ಜನರನ್ನು ಚೆದರಿಸಿದರು. ಈ ಕೊಲೆಯ ಸ್ಥಳದಲ್ಲಿ ಪೋಲೀಸ್ ಫೌಜೊಂದು ಪಹರೆ ನಡಿಸುತ್ತದೆ.

### ಮದ್ರಾಸ್ ಎಸೆಂಬ್ಲಿ ಸಭೆಯು

ಆಗೋಸ್ತು ತಾ. ೧೬ಕ್ಕೆ ನಡೆಯುವುದೆಂದು ಪ್ರಕಟವಾಗಿರುವುದಷ್ಟೆ. ಈಗ ಬರುವ ತಿಂಗಳ ಕೊನೆಯಲ್ಲಿ ನಡೆಸುವ ಆಲೋಚನೆ ನಡೆದಿದೆ. ಇಂಟೆರಿಮ್ ಮಂತ್ರಿಮಂಡಲವು ತಯಾರಿಸಿರುವ ಬಜೆಟನ್ನು ಬದಲಾಯಿಸಲು ಸ್ವಲ್ಪ ಹೆಚ್ಚು ಸಮಯ ಬೇಕಾಗುವುದು. ಶ್ರೀ. ರಾಜಗೋಪಾಲಾಚಾರ್ಯರು ರೈತರಿಗೆ ಸಹಾಯನೀಯುವ ವಿಷಯದಲ್ಲಿ ಹೆಚ್ಚಿನ ಉದಾರ ಧೋರಣೆ ವಹಿಸುವ ಆವಶ್ಯಕತೆಯನ್ನು ಕಂಡು ಬಜೆಟನ್ನು ಬದಲಾಯಿಸಲಿರುವರು. ನಿರ್ಮಾಣಕ ಕಾರ್ಯಗಳಿಗೂ ಹೆಚ್ಚಿನ ಹಣ ವ್ಯಯಿಸಲಾಗುವುದು. ಎಸೆಂಬ್ಲಿಯ ಅಧಿವೇಶನವನ್ನು ಮುಂದುವರಿಸುವ ಅಧಿಕಾರವು ಸ್ಪೀಕರ್ ಮತ್ತು ಗವರ್ನರರದು. ಶ್ರೀ ರಾಜಗೋಪಾಲಾಚಾರ್ಯರೂ, ಸ್ಪೀಕರರೂ ಇತರ ಮಂತ್ರಿಗಳೂ ಗವರ್ನರರು ಊಟಕ ಮಂಡಿಗೆ ಹೋಗುವ ಮೊದಲು ಅವರೊಡನೆ ಮಾತಾಡಿರುವರು

### ರಾಜಕೀಯ ಕೈದಿಗಳ ಬಿಡುಗಡೆ

ಅಂಡಮಾನಿನಲ್ಲಿರುವ, ಬಂಗಾಳದ ಡಿಟೆನ್ಯೂ ಮತ್ತು ಇತರ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡುವ ವಿಷಯದಲ್ಲಿ ಇಡೀ ಹಿಂದೂದೇಶದಲ್ಲಿ ಸಂಘಟಿತರಾಗಿ ತೀವ್ರ ಚಳವಳ ಮಾಡುವ ಕುರಿತು ಶ್ರೀ ಸುಭಾಸಚಂದ್ರಭೋಸರು ಪಂಡಿತ ಜವಾಹರಲಾಲರೊಡನೆ ಪತ್ರ ವ್ಯವಹಾರ ನಡಿಸಿರುವರು.

## ವಿದೇಶ

### ಸ್ಪೈನಿನ ಯುದ್ಧ

ಸ್ಪೈನಿನ ಯುದ್ಧ ಪ್ರಾರಂಭವಾಗಿ ಒಂದು ವರ್ಷವಾಯಿತಷ್ಟೆ. ಈ ವರ್ಷಂತಿಯನ್ನು ಸ್ಪೆನಿಶ್ ಸರಕಾರವು ಇದೇ ತಾ. ೧೮ರಲ್ಲು ವೆಲೆನ್ಸಿಯದಲ್ಲಿ ಸಂಭ್ರಮದಿಂದ ಆಚರಿಸಿತು, ಈ ಸಂದರ್ಭದಲ್ಲಿ ಪ್ರೆಸಿಡೆಂಟ್ ಅಜಾನರವರು ದೊಡ್ಡ ಜನಸಮುದಾಯದ ಮುಂದೆ ಭಾಷಣವೀಯುವಾಗ ಜರ್ಮನರು ಮತ್ತು ಇಟೆಲಿಯಾನರು ಸ್ಪೈನಿನ ಯುದ್ಧದಲ್ಲಿ ಕೈಹಾಕಿರುವುದು ಸ್ಪೆನಿಶ್ ರಿಪಬ್ಲಿಕನ್ನು ಅಪಜಯಗೊಳಿಸಲಿಕ್ಕಲ್ಲ ಇಂಗ್ಲೆಂಡು ಮತ್ತು ಫ್ರಾನ್ಸುಗಳಂತಹ ರಾಷ್ಟ್ರಗಳನ್ನು ತಡೆಗಟ್ಟಲು ಸ್ಪೈನಿನ ಮತ್ತು ನೌಕಾನಿಲಯಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ. ತಾಟಸ್ಥ್ಯವೆಂಬುದು ಬರೀ ಫಾರ್ಸು. ಈಗ ಸರಕಾರದ ಸೈನಿಕಬಲವು ಒಳ್ಳೇದಾಗಿದೆ. ಎಷ್ಟಕ್ಕೂ ಪರಾಜಯವಾಗಬಾರದ ಅರ್ಥವಿಲ್ಲ ಸೈನಿಕರೀಗ ಸಿದ್ಧರಿದ್ದಾರೆಂದು ಹೇಳಿದರು.

### ಚೀನದ ವಿಷಮಪರಿಸ್ಥಿತಿ ಜಾಪಾನಿನ ಶರ್ತ

ಉತ್ತರ ಚೈನದ ಸ್ಥಳೀಯ ಅಧಿಕಾರಿಗಳೊಡನೆ ಜಾಪಾನು ನಡಿಸುವ ಒಪ್ಪಂದವನ್ನು ಕೇಂದ್ರ ಸರಕಾರವು ವಿರೋಧಿಸಬಾರದೆಂದು ಉತ್ತರಕ್ಕೆ ಸೇನೆ ಮತ್ತು ವಿಮಾನಗಳನ್ನು ಕಳುಹಿಸಬಾರದು. ಯುದ್ಧಸಿದ್ಧತೆ ಮಾಡಬಾರದೆಂದು ಎಚ್ಚರಿಸಿರುವುದು. ಇದೇ ತಾ. ೧೯ರೊಳಗೆ ಉತ್ತರವೀಯದಿದ್ದರೆ ಅನಾಹುತ ಪರಿಣಾಮವಾಗುವುದೆಂದು ಬೆದರಿಕೆ ಹಾಕಿರುವುದು. ಈ ಕುರಿತು ಚೀನೀ ಸರಕಾರವು ಈ ವರೆಗೆ ಯಾವ ನಿರ್ಧಾರವನ್ನೂ ಮಾಡಿರುವುದಿಲ್ಲ. ಅಪಮಾನಕರವಾದ ಯಾವ ಶರ್ತವನ್ನೂ ತಾವು ಒಪ್ಪಲಿಕ್ಕಿಲ್ಲೆಂದು ಸೈನಿಕರು ಹಠಹಿಡಿದಿರುವರು. ಎರಡು ಕಡೆಗಳಲ್ಲಿ ಜಾಪಾನ್ ವಿಮಾನಗಳು ಚೀನೀ ಪ್ರಯಾಣಿಕ ಟ್ರೈನುಗಳ ಮೇಲೆ ಬೋಂಬೆಸೆದಿರುವವು. ಈ ಕುರಿತು ಚೀನದ ರಾಯಭಾರಿಯು ತನ್ನ ನಿಷೇಧ ಸೂಚಿಸಿರುವನು. ಜಾಪಾನರ ಎಚ್ಚರಿಕೆಯನ್ನು ಧಿಕ್ಕರಿಸಿ ಚೀನವು ಉತ್ತರದಲ್ಲಿ ಸೇನೆಯನ್ನು ಸಂಗ್ರಹಿಸುತ್ತಿರುವುದು ೩೫,೦೦೦ ಸೈನಿಕರು ಜೆಂಟಿಂಗ್ ಎಂಬ ಸ್ಥಳಕ್ಕೆ ಮುಟ್ಟಿರುವರು. ಇನ್ನೂ ಸೈನಿಕರು ಉತ್ತರಕ್ಕೆ ಕಳಿಸಲ್ಪಡುತ್ತಿರುವರು

## ಉಡುಪಿ

### ಪ್ರಸಿದ್ಧ ವಕೀಲರೊಬ್ಬರ ನಿಧನ

ಇಲ್ಲಿಯ ಜನಪ್ರೀತ ಹಾಗೂ ಸುಪ್ರಸಿದ್ಧ ವಕೀಲರಾದ ಶ್ರೀ| ಬಿ ಶ್ರೀನಿವಾಸರಾಯರು ೧೮-೭-'೩೭ರಲ್ಲು ತಮ್ಮ ೫೮ನೇ ವಯಸ್ಸಿನಲ್ಲಿ, ದಿವಂಗತರಾದರೆಂದು ತಿಳಿಸಲು ತುಂಬಾ ವಿಷಾದವೆನಿಸುವುದು. ಇವರು ಅಂಧ್ರವಾಯು ಪೀಡಿತರಿದ್ದು ಕೆಲವು ದಿನಗಳ ಹಿಂದೆ ಒಪರೇಶನ್ ಮಾಡಲ್ಪಟ್ಟಿದ್ದರು. ಎರಡು ಮೂರು ದಿನಗಳ ವರೆಗೆ ಹಾಸಿಗೆ ಹಿಡಿದಿದ್ದು ಆಕಸ್ಮಾತ್ತಾಗಿ ಮೃತ್ಯುವಶರಾದರು. ಇವರು ನ್ಯಾಯಪಕ್ಷಪಾತಿಗಳೂ ಸತ್ಯಪ್ರಿಯರೂ ಸರಳ ಸ್ವಭಾವಿಗಳೂ ಆಗಿದ್ದರು. ಮೃತರ ದುಃಖೀಕುಟುಂಬದೊಡನೆ ನಮ್ಮ ಸಹಾನುಭೂತಿಯನ್ನು ಸೂಚಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯಿರಲಿ!

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಎಂಬ ಜನಪ್ರಿಯ ಸಂಸ್ಥೆಯು ಈ ಮೊದಲು ರಿಸರ್ವ್ ಬ್ಯಾಂಕ್ ಓಫ್ ಇಂಡಿಯದ ಮೆಂಬರ್ ಆಗಿ ಆರಿಸಲ್ಪಟ್ಟಿತ್ತು. ಈಗದೊಂಬಾಯಿಯ ಕ್ಲಿಯರಿಂಗ್ ಹೌಸ್‌ನ ಮೆಂಬರ್ ಆಗಿಯೂ ಚುನಾಯಿಸಲ್ಪಟ್ಟಿರುವುದು ಅಭಿನಂದನೀಯವೂ ಅಭಿಮಾನಪ್ರದ ವಿಷಯವಿದೆ.

### ಶಿಕಾರಿಗಳಿಗೆ ಸುಸಂಧಿ

ಕುಂದಾಪುರ ತಾಲೂಕಿನ ಕೊಗಿಲ, ಕಳವಾರ್, ಅಸ್ಥಿ, ಮೊಳಹಳ್ಳಿ ಮೊದಲಾದ ಗ್ರಾಮಗಳಲ್ಲಿ ಹುಲಿಗಳನ್ನು ಕೊಲ್ಲುವರೆ ಇದೇ ತಿಂಗಳ ತಾ ೨೫ನು ಮತ್ತು ೨೬ರಲ್ಲಿ ಶಿಕಾರಿಗಳು ಬೇಟೆಯಾಡಬಹುದಾಗಿ ಜಿಲ್ಲಾಕಲೆಕ್ಟರರು ತಿಳಿಸುತ್ತಾರೆ.

### ಡಾ|ಯು. ರಾಮರಾಯರಿಗೆ ಸನ್ಮಾನ

ಇವರು ಮದ್ರಾಸು ಕೌನ್ಸಿಲಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಸಂತೋಷ ಸೂಚನಾರ್ಥವಾಗಿ ದ್ರಾವಿಡ ಬ್ರಾಹ್ಮಣ ಸಮಾಜದವರೂ ಉಡುಪಿ ಮಠಾಧಿಪತಿಗಳೂ ಅಭಿನಂದನಾ ತಂತಿಗಳನ್ನು ಕೊಟ್ಟು ಸನ್ಮಾನಿಸಿದರು. ಸ್ಥಳೀಯ ಸಂಸ್ಕೃತ ಕಾಲೇಜು ಸಹ ಈ ಶುಭ ವಾರ್ತೆಯ ಸಂತೋಷ ಪ್ರದರ್ಶನಕ್ಕಾಗಿ ಮುಚ್ಚಲ್ಪಟ್ಟಿತ್ತು.

ತಾ14-7-37ರಲ್ಲಿ ಡಾ| ಎನ್. ಶಂಕರ ಆಚಾರ್ಯ, ಎಲ್. ಬಿ. ಬಿ.ಎಸ್. ಇವರು ತಮ್ಮದೊಂದು ಡಿಸ್‌ಪೆನ್ಸರಿಯನ್ನು ಕೋಳದ ಪೇಟೆಗಸ್ತಿಯಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್,ವಕೀಲ್ ಇವರ ಲಕ್ಷ್ಮೀನಿವಾಸದ ಬಳಿಯ ಕಟ್ಟಡದಲ್ಲಿ ತೆರೆದಿರುತ್ತಾರೆ. ಪ್ರಾರಂಭದ ದಿನ ಹಲವು ಸ್ಥಳೀಕ ಗೃಹಸ್ಥರಿಗೆ ಟೀಪಾರ್ಟಿಯಿದ್ದಿತು. ಈ ತರುಣ ಹೊಸ ಡಾಕ್ಟರರು ತಮ್ಮ ಉದ್ಯಮದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಿ ಜನಪ್ರಿಯರಾಗಲೆಂದು ಹಾರೈಸುತ್ತೇವೆ.


**ಕೂದಲು ರಂಗು ಬಿಡಿ**

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತವೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. 5ರ, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೆ ಬರೆಯಿರಿ.

**Bal Kala Stores,**
P. O. Kansisimri (Darbhanga)

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸಾಫರ್ ಪೂರಿನ ತೋಟಿ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

**Bihar Nursery,**
**P. O. Bihar**
*Nursery (Darbhanga)* **BIHAR**

# THE UDIPI BANK LTD.

## UDIPI

ALL KINDS OF BANKING BUSINESS TRANSACTED
PERSONAL ATTENTION PAID TO ALL ENQUIRIES

ESTD. 1925

# ದಕ್ಷಿಣ ಕನ್ನಡ

## ಕುಂದಾಪುರ

ಕಾಂಗ್ರೆಸು ಅಧಿಕಾರವನ್ನು ಸ್ವೀಕರಿಸಿದ ವಿನಾಚರಣೆಯ ಸಲುವಾಗಿ ತಾ ೧೪-೭-೩೭ರಂದು ಮುಂಜಾನೆ ಪಟ್ಟಣದ ಎಲ್ಲೆಡೆಯಲ್ಲೂ ರಾಷ್ಟ್ರಧ್ವಜವು ಹಾರಾಡುತ್ತಿತ್ತು. ಆ ದಿನ ಸಾಯಂ ಘಂ ೫ಕ್ಕೆ ಶ್ರೀ ಕೊಡ್ಗಿಯವರ ಕಂಪೌಂಡಿನಿಂದ ತಾಲೂಕು ಕಾಂಗ್ರೆಸ್ ಕಮಿಟಿಯವರ ನೇತೃತ್ವದಲ್ಲಿ ಪ್ರಚಂಡ ಮೆರವಣಿಗೆ ಹೊರಟಿತು. ಹಲವು ರಾಷ್ಟ್ರಧ್ವಜಗಳು ಜನರ ಜಯಕಾರ, ಬೇಂಡು ವಾದ್ಯಗಳಿಂದ ಪಟ್ಟಣದ ಮುಖ್ಯ ಬೀದಿಗಳಲ್ಲಿ ಬಂದು, ಸಾಹಿತ್ಯ ಸಂಘದ ಕಟ್ಟಡದಲ್ಲಿ ಇಲ್ಲಿಯ ಪ್ರಮುಖ ವಕೀಲರಾಗಿರುವ ಶ್ರೀ ಬೆಳ್ಮಣ್ಣು ರಮಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಜನಸಂದಣಿಯು ಕಿಕ್ಕಿರಿದು ನೆರೆದಿತ್ತು. ಇಂದಿನ ಮೆರವಣಿಗೆ ಮತ್ತು ಸಭೆಯ ಉದ್ದೇಶ, ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಲು ಕೇಳಿದ ಆಶ್ವಾಸನೆ, ಕಾಂಗ್ರೆಸು ಮತ್ತು ಸರಕಾರಗಳೊಳಗಾದ ವಿಕಲ್ಪ, ಇತ್ತೀಚಿಗೆ ಇಬ್ಬರೊಳಗೆ ಉಂಟಾದ ಪರಿವರ್ತನೆ, ಕಾಂಗ್ರೆಸ ಸರಕಾರವನ್ನು ರಚಿಸುವ ಉದ್ದೇಶ, ಇದರಿಂದ ದೇಶಕ್ಕಾಗುವ ಪ್ರಯೋಜನ ಇವೇ ಮೊದಲಾದುವನ್ನು ವಿವರಿಸಿ, ಕಾಂಗ್ರೆಸು ಸರಕಾರಕ್ಕೆ ಜನರೆಲ್ಲರೂ ಬೆಂಬಲ ಕೊಡಬೇಕೆಂದೂ ಆದಷ್ಟು ಮಟ್ಟಿಗೆ ಎಲ್ಲರೂ ಕಾಂಗ್ರೆಸು ಸದಸ್ಯರಾಗಿ ಸೇರಬೇಕೆಂದೂ, ವಿನಂತಿಸಿ ಶ್ರೀಯುತ ಕೆ ಎಲ್ ಬಂಡಾರಿ ವಕೀಲ, ಮತ್ತು ಶ್ರೀಯುತ ಎಸ್ ಕೆ ಹೆಬ್ಬಾರ್ ಹೆಚ್ಚು ಮಾತನಾಡಿದರು. ಅಧ್ಯಕ್ಷರ ಉಪಸಂಹಾರ ಭಾಷಣಾನಂತರ ಜಯಘೋಷದೊಡನೆ ಸಭೆ ಮುಗಿಯಿತು.

## ಬಸರೂರು

ಇಲ್ಲಿಯು ಕಾಂಗ್ರೆಸು ಕಮಿಟಿಯವರ ಏರ್ಪಾಡಿನಿಂದ ಪಡಿಸಿದಲ್ಲದೆ, ಶ್ರೀ ಬಿ ದಾಮೋದರ ರಾವ್ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಪಿ ರಾಮಣ್ಣ ಹೆಗ್ಡೇರು, ಬಿ ಎ, ಶ್ರೀ ಎಮ್ ಶ್ರೀನಿವಾಸ ಭಟ್ಟ, ಎಸ್ ಸುಬ್ಬಣ್ಣ ಶೆಟ್ಟಿ, ಬಿ ಎ, ಇವರು ಕಾಂಗ್ರೆಸು ಅಧಿಕಾರ ಸ್ವೀಕರಿಸಿದುದು ದೇಶಕ್ಕೆ ಹಿತಕರವೆಂದೂ, ವರ್ಕಿಂಗ್ ಕಮಿಟಿಯ ನಿರ್ಧಾರವು ಕಾಲೋಚಿತವಾದುದೆಂದೂ ಭಾಷಣವಿತ್ತರು. ಅಧ್ಯಕ್ಷರ ಚಿಕ್ಕ ಭಾಷಣಾನಂತರ ಸಭೆಯು ಚದರಿತು. ಅಂದು ಎಲ್ಲೆಲ್ಲೂ ರಾಷ್ಟ್ರಧ್ವಜ ಹಾರಾಡುತ್ತಿತ್ತು.

## ಕೋಟ

"ಇಲ್ಲಿಯ ಸ್ಥಳೀಯ ವಾಚನಾಲಯದ ವಾರ್ಷಿಕೋತ್ಸವವು ಇದೇ ಜುಲೈ ತಿಂಗಳ ೧೪ನೇ ತಾರೀಕಿನ ದಿನ ಶ್ರೀಯುತ ಡಾ ನಾರಾಯಣ ಕಾರಂತರವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿತು. ಸುಮಾರು ೪೫ ಸದಸ್ಯರು ಹಾಜರಿದ್ದರು. ಡಾ ಮೋಗನಿಯರ ಮತ್ತು ರಿಬ್ಲಿಯಂದೊಡಗೂಡಿದ ನೇಣುಗಾರನ ವೇಲಂಡಾಡುವುಗಳು ಸಭಿಕರನ್ನು ಪರ್ವಗೊಳಿಸಿದುವು. ಪದನಂತರ ಸದ್ಯ ಶ್ರೀ ಶಾಂಭವಿ ವಾಚನಾಲಯದ ಕಾರ್ಯದರ್ಶಿಗಳಾದ ರಾ ಎಚ್ ಶಿವರಾವ ನಾಗೂರರು ವಾಚನಾಲಯದ ವರ್ಷದ ವರದಿಯನ್ನು ಸಭೆಯ ಮುಂದಿಟ್ಟು ಈ ಸಂಘದ ಆರ್ಥಿಕ ದುಸ್ಥಿತಿಯನ್ನು ಹೋಗಲಾಡಿಸಿ, ಇದಕ್ಕೆ ದಿನೇ ದಿನೇ ಹೆಚ್ಚು ಮಂದಿ ಸದಸ್ಯರು ಸೇರುವಂತೆ ಎಲ್ಲಾ ಸದಸ್ಯರು ಪ್ರಯತ್ನಿಸಬೇಕಾಗಿ ಕೇಳಿಕೊಂಡರು. ಪ್ರಕೃತ ಈ ವಾಚನಾಲಯಕ್ಕೆ ಹಿಂದೂ ದ್ಮೀಕಪ್ಪಾ ರಾಷ್ಟ್ರಬಂಧು, ನವಯುಗ, ಸ್ವದೇಶಾಭಿಮಾನಿ, ಕಂಠೀರವ ವಗೈರೆ ಹಲವು ಪತ್ರಿಕೆಗಳೂ ಬರುತ್ತಿವೆ. ಈ ಎಲ್ಲಾ ಪತ್ರಿಕೆಗಳು ನನ್ನ ಚಿಕ್ಕಿದ್ದುವುಗಳೇ. ಆದುದರಿಂದ ವ್ಯಸನಾರಿನಿಂದೊಂದು ಧಾರವಾಡದಿಂದೊಂದು ಹೀಗೆ ಬೇರೆ ಎರಡು ಪತ್ರಿಕೆಗಳನ್ನು ತರಿಸುವುದಾಗಿ ನಿರ್ಣಯವಾಯಿತು.

## ಬ್ರಹ್ಮಾವರ ಕೇಂದ್ರ ಕಾಂಗ್ರೆಸ್ ಕಮಿಟಿ

ತಾ ೧೪-೭-೩೭ನೇ ಗುರುವಾರ ಸಾಯಂಕಾಲ ೬ ಘಂಟೆಗೆ ಬ್ರಹ್ಮಾವರ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಶ್ರೀಯುತ ನಾರಾಯಣ ಶೆಟ್ಟರ (ಕಮಿಟಿಯ ಅಧ್ಯಕ್ಷ) ವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಕಮಿಟಿಯಮೆಂಬರರು ವಿವಿಧ ಕಾರ್ಯಕ್ರಮಗಳಮೇಲೆ ಭಾಷಣವನ್ನಿತ್ತ ಮೇಲೆ ಸದ್ರಿ ಕಮಿಟಿಯ ಕಾರ್ಯದರ್ಶಿಗಳಾದ ಮ ರಾ ಪಿ ವೈ ರಾಮನ್ ಗುರುಕ್ಕಳ್ ರವರು ಈ ಕೆಳಗಿನ ಠರಾವುಗಳನ್ನು ಸಭೆಯ ಮುಂದಿರಿಸಿದರು. ೧ ಪ್ರಾಂತಿಕ ಎಲ್ಲ ಪ್ರಾಂತಗಳಲ್ಲಿ ಕಾಂಗ್ರೆಸ್ ಮೆಂಬರರು ಮಂತ್ರಿಪದವಿ ಸ್ವೀಕರಿಸಿದ ಕುರಿತು ಈ ಕಮಿಟಿಯು ಸಂತೋಷಿಸುತ್ತದೆ. ೨ ಮುಂದೆ ಬರಲಿರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟನ್ನು ಪಡೆದು ಸ್ಪರ್ಧಿಸಬೇಕೆನ್ನುವವರು ಈ ಕಮಿಟಿಯ ಮೂಲಕ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಪ್ರಥಮ ಅರ್ಜಿ ಕಳುಹಿಸಬೇಕು. ... ಈ ಕಮಿಟಿಯ ಕಾರ್ಯದರ್ಶಿ ... ಕಾಂಗ್ರೆಸ್ಸಿನ ... ಪತ್ರಿಕೆ ಪ್ರಕೃತ ... ೬ ಎನ್ನುವ ... ಅವರಲ್ಲಿ ... ಪ್ರಕೃತ ... ಪತ್ರಿಕೆಯನ್ನು ... ತರಿಸುವುದು.

ಈ ಠರಾವುಗಳು ಒಮ್ಮತದಿಂದ ಸ್ವೀಕೃತವಾಗಿ ಅಧ್ಯಕ್ಷರ ಉಪಸಂಹಾರದ ನಂತರ ... ವಂದನಾರ್ಪಣೆಯ ... ಸಭೆ ಮುಕ್ತಾಯವಾಯಿತು.

## ಬಾರಕೂರು

ಇಲ್ಲಿಯ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಸಮಿತಿಯು ಸ್ವಾ ೧೧-೭-೩೭ರ ಆದಿತ್ಯವಾರ ಸಾಯಂಕಾಲ ಕಮಿಟಿಯ ಅಧ್ಯಕ್ಷರಾದ ಶ್ರೀ ... ಅಧ್ಯಕ್ಷತೆಯಲ್ಲಿ ... ಬಾರಕೂರಿನಲ್ಲಿ ಹಿಂದಿ ಪ್ರಚಾರವನ್ನು ಮಾಡಿಸಬೇಕೆಂದು ... ಸಹಾ ... ನಡೆಸಬೇಕಾಗಿಯೂ ... ತೀರ್ಮಾನವಾಯಿತು.

ಏರಡನೆಯ ಸಭೆಯು ತಾ ೧೮-೭-೩೭ನೇ ಆದಿತ್ಯವಾರ ಜರಗಿತು.

ಬಾರಕೂರಿನ ಹಿಂದಿ ಪ್ರಚಾರಕರ ಸಾರ್ವಜನಿಕ ಸಭೆಯು ಶ್ರೀಯುತ ಅಲ್ಲಾರು ರಾಮಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ ೧೮-೭-೩೭ನೇ ಸಾಯಂಕಾಲ ಜರಗಿತು. ಹಿಂದಿ ಪ್ರಚಾರದ ಕುರಿತು ಶ್ರೀ ... ಮತ್ತು ... ಸಮರ್ಥಿಸಲ್ಪಟ್ಟಿತು. ... ಕೆ ಸಭೆಯಲ್ಲಿ ... ಹಿಂದಿ ... ಸಂಘ ... ಸ್ಥಾಪನೆಯಾಯಿತು. ಅದರ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀಯುತ ಜೋನ್ ಪಿ ಸಿಕೇರ (ಅಧ್ಯಕ್ಷರು) ಬಿ ಲಕ್ಷ್ಮೀನಾರಾಯಣ ಅಡಿಗರು (ಕಾರ್ಯದರ್ಶಿಗಳು) ಪಿ ವೆಂಕಟ ಕಾಮತ (ಖಜಾಂಚಿ) ... ರಾಮಣ್ಣ ಶೆಟ್ಟಿ, ಬಿ ಲಕ್ಷ್ಮೀನಾರಾಯಣ, ... ಶೆಟ್ಟಿ, ರಾಮಣ್ಣ ಶೆಟ್ಟಿ ... ಕಾರ್ಯನಿರ್ವಾಹಕ ಸಮಿತಿಗೆ ಆಯ್ಕೆಯಾದರು ... ೧-೨-೦ ಮತ್ತು ... ಅಧ್ಯಕ್ಷರ ... ವಂದನಾರ್ಪಣೆಯಿಂದ ... ಈ ... ಹಿಂದಿ ಪ್ರಚಾರ ಮಂಡಲದ ಸದಸ್ಯರಾಗಲು ...

ವವರು ... ಕರ್ನಾಟಕ ಸ್ಟೋರ್ಸಿನಲ್ಲಿ ಯು ... ಶ್ರೀ ... ರ ... ಅವರ ... ಯನ್ನು ... ಕೊಳ್ಳಬೇಕಾಗಿ ... ಯಲಾಯಿತು.

## ರಾಯಚೂರು

**ಅಖಿಲ ಕರ್ನಾಟಕ ಪ್ರಾಂತೀಯ ಆಯುರ್ವೇದ ಮಹಾಮಂಡಲ ಮತ್ತು ವಿದ್ಯಾಪೀಠ ಕಾರ್ಯಾಲಯ, ಹುಬ್ಬಳ್ಳಿ, ಈ ಸಂಸ್ಥೆಯ ಗೌರವ ಕಾರ್ಯದರ್ಶಿ ಗಳಾದ ವೈದ್ಯ ಮಹೋಪಾಧ್ಯಾಯ ಶ್ರೀ ಹಲಸೀಕರರು**

ಪಂಡಿತ ತಾರಾನಾಥರ ಪ್ರೇಮಾಯತನ ಆಶ್ರಮದಿಂದ ಇಲ್ಲಿಗೆ ನೂತ್ನ ಬಂದರು. ಅಖಿಲ ಕರ್ನಾಟಕ ... ಆಯುರ್ವೇದ ... ರಾಯಚೂರಲ್ಲಿ ಕೊಡಿಸುವ ... ಇಲ್ಲಿ ಮ ಪ್ರಮುಖ ಡಾಕ್ಟರ್ ಮತ್ತು ವೈದ್ಯವರ್ಯನ್ನ ಸೆಟ್ಟಿಯಾದ ... ರಾವ್, ದೇಶಪಾಂಡೆ, ದಾ ... ಮಹಾಕೃಷ್ಣ, ಡಾ ಅಗ್ನಿಹೋತ್ರಿ ಮುಂತಾದವರೆ ಲ್ಲರೂ ಸೇರಿ ಬಂದು ಸಹಾಯಮಾಡುವರಾಗಿ ... ಇದರ ಪರಿಣಾಮವಾಗಿ ಡಾ ದೇಶಪಾಂಡೆಯವರ ನೇತೃತ್ವದಲ್ಲಿ ಡಾ ರಾಮಕೃಷ್ಣ ಇವರ ಸ್ಥಾನ ಸುಧಿಕೆರ್ ದಾಸ್‌ನೊಳಗೆ ರಾಯಚೂರ ಸ್ಥಾನಿಕ ವೈದ್ಯ ಡಾಗೂ ಡಾ ಜನರ ಸಕಿ ಯಿಂದ ೧೭-೭-೩೭ನೇ ದಿನ ಸೇರಿತ್ತು. ಶ್ರೀಯುತ ವೈದ್ಯ ಮಹೋಪಾಧ್ಯಾಯ ಹಲಸೀಕರರು ರಾಯಚೂರಲ್ಲಿ ಸಮ್ಮೇಲನವನ್ನು ಕರೆಯುವುದರಿಂದ ಆಗುವ ಲಾಭಗಳನ್ನು ವಿವರಿಸಿ ಹೇಳಿದರು. ಇದರಿಂದ ವೈದ್ಯಕೀಯ ಸ್ವಾತಂತ್ರ್ಯ ... ಸಾಧ್ಯವಾದಷ್ಟು ಉತ್ತಮ ಪರಿಣಾಮಕಾರಕವಾದ ಚಿಕಿತ್ಸಾ ಸಾಧನ ಪ್ರಚಾರ ಒಳ್ಳೆ ಜನತೆಗೆ ಹೇಗೆ ಸುಲಭವಾಗಿ ... ಗಳು ದೂರಕೆಯಬೇಕೆಂಬುದನ್ನು ವಿವರಿಸಿ ಹೇಳಿದರು. ಅಲ್ಲಿಯೇ ಒಂದು ತಾತ್ಕಾಲಿಕ ಮಂಡಲವು ಸ್ಥಾಪನೆಯಾಯಿತು. ಜ್ಞಾನವೃದ್ಧರೂ, ಅನುಭವ ಸ್ಥರೂ, ವಯೋವೃದ್ಧರೂ, ಆದರ ಶ್ರೀ ವಿಟ್ಠಲ ಪ್ರಭುರವರು ಈ ಮಂಡಲಕ್ಕೆ ಅಧ್ಯಕ್ಷರು.

ಈ ಮಂಡಲದ ಪರವಾಗಿ ಅಧ್ಯಕ್ಷರು ಶ್ರೀ ಹಲಸೀಕರರಿಗೆ ರಾಯಚೂರಲ್ಲಿಯೇ ಈಸೇ ಅಧಿವೇಶನವನ್ನು ಕೂಡಿಸುವುದಕ್ಕೋಸ್ಕರ ಆಮಂತ್ರಣವನ್ನು ಕೊಡುವುದಲ್ಲದೆ, ಈ ವಿಷಯದಲ್ಲಿ ಆಗಾಗ್ಗೆ ಅಗತ್ಯವಾಗಿ ಬೇಕಾಗುವ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಕೇಳಿಕೊಂಡರು. ಶ್ರೀ. ಹಲಸೀಕರರು ಈ ವಿಷಯ ಸಾದರದಿಂದ ಒಪ್ಪಿಕೊಂಡಿರುವುದಾಗಿ ತಿಳಿಸಿರುತ್ತದೆ.

### ಶ್ರೀ ಬಿ. ಕಿಷನ್ ರಾಯರ ಸಹಾನುಭೂತಿ

ಅನಂತರ ಮೇಲಿನ ವಿಷಯದ ಅಭಿಮಾನಿಗಳೆಲ್ಲರೂ ೧೪-೭-೩೭ನೇ ದಿನ ಇಲ್ಲಿಯ ಮುಖಂಡರೂ, ಮತ್ತದ್ದಿಗಳು ಮುಖ್ಯ ವಕೀಲರಾದ ಶ್ರೀ ಕಿಷನ್ ರಾವ್ ಇವರನ್ನು ಸಂದರ್ಶಿಸಿದರು. ಶ್ರೀಯುತ ಕಿಷನ್ ರಾಯರು ಒಂದು ಮಂಡಲಿಯನ್ನು ಆರಿಸಿ ಬರಮಾಡಿಕೊಂಡು, ಇವರಿಗೆ ಸರ್ವವಿಧದಿಂದಲೂ ಸಹಾಯಮಾಡಿ ಯಶಸ್ವಿಯಾಗುವಂತೆ ವ್ಯವಸ್ಥೆ ಮಾಡತಕ್ಕದೆಂದು ವಚನಕೊಟ್ಟಿರುವರಾಗಿ ತಿಳಿಯಬರುತ್ತದೆ. ಇವರ ಪ್ರೋತ್ಸಾಹದಿಂದ ರಾಯಚೂರಿಲ್ಲಿ ಹುರಿಗೊಂಡು ತೀರುವುದು ಎಂದು ನಿಸ್ಸಂದೇಹವಾಗಿ ಹೇಳಬಹುದು.

### ಅಗ್ನಿಗೆ ಆಹುತಿ

ಇದೇ ಕಳೆದ ಸೋಮವಾರ ಸುಟ್ಟದ ಹಳೇ ಗೇಟಿನ ಬಳಿಯಲ್ಲಿ ಒಬ್ಬ ಹ ಡಗನ ತುಂಟತನದಿಂದಾಗಿ ಒಂದು ಬಡಕುಟುಂಬದವರ ಮನೆಗೆ ಬೆಂಕಿ ತಗಲಿತು. ಈ ಗಲಾಟೆಯ ಲದಾಗಿ ಹದಿನಾಲ್ಕು ದಿನದ ಒಂದು ಎಳೆ ಗೂಸು ಉರಿಯುತ್ತಿರುವ ಮಾಡಿನ ಕೆಳ ಲವರತ್ತ ಮೈಮೇಲೆ ಬಿದ್ದು ಬೆಂದುಹೋಯಿತು. ಮಾತಾಪಿತರ ಉರಿಯುವ ಹೃದಯವು ಶೀಘ್ರ ನಾಗಲೆಂದು ದೇವರನ್ನು ಪ್ರಾರ್ಥಿಸುವೆವು.

"ಹಿತಚಿಂತಕ"

# LIFE SKETCH OF MR. P. G. MARATHEY

*GENERAL MANEGER*

**The General Assurance Society Limited, Ajmeer**

We announce with great pleasure that Mr. P G. Marathey is appointed General Manager of the General Assurance in the place of Mr P D Bhargava who retired on the 15th May 1937. He is the only son of Mr G S Marathey M A, A. I. A. the eminent Consulting Actuary in this country and was born in 1909.

After passing his matriculation he chose his father's profession and began his studies for the Actuarial Examination straight way. While working in his father's office he obtained valuable experience. He also worked in Life offices like the Bombay Life and the New India Assurance. In 1934 he went to England for further studies and worked in the London Life Association as an Actuarial Assistant. Here he gained valuable experienceabout office systems of large British life offices and on his way back he studied Insurance conditions in the Continent.

On return to India in 1935 he joined his father's office as an Assistant, and gathered much practical experience. His knowledge of actual conditions in India and abroad is of importance which will make him an asset to any Life office. He is qualified having passed the first two parts and section 'A' of part third of the Institute of Actuaries. We understand that he has appeared for Section B of the same examination and we hope he soon will be an A. I. A. Mr. P G Marathey was the publisher for three years of Bhadrayu the only Insurance Magazine in Marathey and is also the Joint author of a book on life assurance. While he very well deserves the place of honour which is his Mr P. D Bhargava the retired general manager as well as the Directors and Chairman of the 'General' are to be congratulated on their securing the services of such an experienced and versatile man.

We feel sure that under the able General managership of Mr P.G. Marathey the Society is bound to prosper and we hasten to wish him and the Society speedy progress.


**ತಾ. 16—7—'37ರಲ್ಲಿ**

# ಲಕ್ಕಿಟಿಕೇಟುಗಳ ನಂಬರುಗಳ ಮೇಲೆ

**ಪ್ರ್ಯಾಯಿಜ್ ಕೆಗೆದ ಪಟ್ಟಿ**

| ಟಿಕೇಟು ನಂಬ್ರ | ಪ್ರ್ಯಾಜ್ | ಟಿಕೇಟು ನಂಬ್ರ | ಪ್ರ್ಯಾಜ್ | ಟಿಕೇಟು ನಂಬ್ರ | ಪ್ರ್ಯಾಜ್ |
|---|---|---|---|---|---|
| 1731 | 1ನೇ | 2304 | 9 ,, | 1532 | 17 ,, |
| 1130 | 2 ,, | 1583 | 10 ,, | 1425 | 18 ,, |
| 1824 | 3 ,, | 2244 | 11 ,, | 2161 | 19 ,, |
| 2305 | 4 ,, | 1775 | 12 ,, | 1786 | 20 ,, |
| 1693 | 5 ,, | 1502 | 13 ,, | 1113 | 21 ,, |
| 1346 | 6 ,, | 1458 | 14 ,, | 2318 | 22 ,, |
| 1229 | 7 ,, | 1436 | 15 ,, | 1976 | 23 ,, |
| 1201 | 8 ,, | 1715 | 16 ,, | 1301 | 24 ,, |
| | | 2359 | 25 ,, | | |

ವಿ ಸೂ—ಮೇಲೆ ಕಾಣಿಸಿದ ಲಕ್ಕಿ ಟಿಕೇಟುಗಳುಳ್ಳವರು ತಾ 31-7-37ರ ಒಳಗಾಗಿ ಸದ್ರಿ ಟಿಕೇಟುಗಳನ್ನು ತೋರಿಸಿ ಪ್ರ್ಯಾಯಿಜ್ ಸಾಮಾನು ಪಡೆಯತಕ್ಕದ್ದು.

**ಎಸ್. ಅನಂತರಾಮಾಚಾರ್**

ಪುಸ್ತಕ ಮತ್ತು ಸ್ಟೇಶನರಿ ವ್ಯಾಪಾರಿ, ತಾಲೂಕು ಕಚೇರಿ ಬಳಿ, ಉಡುಪಿ

# ಸಮಾಚಾರ ಸಂಗ್ರಹ : ಭೀಕರ ಟ್ರೈನು ಅವಘಡ, ಚೀನದ ವಿಷಮ ಪರಿಸ್ಥಿತಿ ಸ್ಪೈನಿನ ಅಂತಃಕಲಹ, ರಸ್ಯದ ವೈಮಾನಿಕರ ಸಾಹಸ

## ವಾಯುವ್ಯ ಗಡಿನಾಡಿನ ಗಲಾಟೆ, ಆಯಾ ಪ್ರಾಂತದ ಮಂತ್ರಿಮಂಡಲ, ರಾಷ್ಟ್ರಪತಿಗಳ ಆಶೀರ್ವಾದ.

### ಭೀಕರ ಟ್ರೈನು ಅವಘಡ

**100ಕ್ಕಿಂತಲೂ ಮಿಕ್ಕಿದ ಮರಣ 150ಕ್ಕೆ ಮಿಕ್ಕಿದವರಿಗೆ ಜಖಮ್.**

ಇದೇ ತಾ 17ರಲ್ಲಿ ಪಾಟ್ನದ ಬಳಿಯುಲ್ಲುಂಟಾದ ಭೀಷಣ ಟ್ರೈನು ಅವಘಡಕ್ಕೆ 300 ಮಂದಿಯ ವರೆಗೆ ಸಿಕ್ಕಿ ಒಂದೋ ಜಖಮ್ ಹೊಂದಿರುವರು, ಇಲ್ಲವೆ ಕೊಲ್ಲಲ್ಪಟ್ಟಿರುವರು. ಬೆಳಗ್ಗೆ 4 ಘಂಟೆ ಸಮಯಕ್ಕೆ ಪಂಜಾಬು ಎಕ್ಸ್‌ಪ್ರೆಸ್ ಟ್ರೈನು ಪಾಟ್ನವನ್ನು ಸಮಾಪಿಸುತ್ತಿದ್ದಾಗ ಕಂಬಿ ತಪ್ಪಿ ಕೆಳಕ್ಕೆಸೆಯಲ್ಪಟ್ಟು ಈ ಅವಘಡವುಂಟಾಯಿತು. ಇತ್ತಲಾಗಿ ಇಷ್ಟೊಂದು ದೊಡ್ಡ ಅವಘಡವು ನಡೆದುದಿಲ್ಲ. ಟ್ರೈನು ಸಂಪೂರ್ಣವಾಗಿ ಕಂಬಿ ತಪ್ಪಿ ಹಾರಿ ರಸ್ತೆಯಿಂದ ಕೆಳಗುರುಳಿಬಿದ್ದು ಹೆಚ್ಚಿನ ಪ್ರಾಣಹಾನಿಯಾಗಲು ಕಾರಣವಾಯಿತು 3 ಗಾಡಿಗಳು ಸಂಪೂರ್ಣವಾಗಿ ಛಿನ್ನಭಿನ್ನವಾಗಿಹೋಗಿರುವವು. ಟ್ರೈನು ಮೋರಿಯೊಂದನ್ನು ಅರ್ಧ ದಾಟುವಷ್ಟರಲ್ಲಿ ಕಂಬಿ ತಪ್ಪಿ ಹಾರಿಬಿತ್ತು. ಕೊಲ್ಲಲ್ಪಟ್ಟವರಲ್ಲಿ 6 ಮಂದಿ ಸ್ತ್ರೀಯರು, ಒಂದು 6 ತಿಂಗಳ ಕೂಸು ಶವಗಳೆಲ್ಲಾ ಚೂರುಚೂರಾಗಿ ಹೋಗಿರುವವು. ಇಡೀ ದೃಶ್ಯವು ಅತ್ಯಂತ ಭೀಷಣವಾಗಿತ್ತು. ಕಾಂಗ್ರೆಸಿನವರೂ,ಸೇವಾಸಮಿತಿ ಸ್ಕೌಟರೂ, ಬ್ವಾ. ಸ್ಕೌಟರೂ, ಪೋಲೀಸರೂ ಇಡೀ ದಿವಸ ಎಡೆಬಿಡದೆ ಪ್ರಯತ್ನಿಸಿ 119 ಶವಗಳನ್ನು ಹೊರತೆಗೆದಿರುವರು. 150ಕ್ಕಿಂತಲೂ ಮಿಕ್ಕಿದ ಜಖಮ್ ಹೊಂದಿದವರು ಹೊರತೆಗೆಯಲ್ಪಟ್ಟಿರುವರು. ಉದ್ದೇಶ ಪೂರ್ವಕವಾಗಿ ಟ್ರೈನನ್ನು ಕಂಬಿ ತಪ್ಪಿಸಿ ಹಾಕಲಾಯಿತೆಂದು ನಂಬಲಾಗಿದೆ. ಗಾಡಿಗಳೆಲ್ಲಾ ನಜ್ಜುಗುಜ್ಜಾಗಿ ಮುರಿದುಬಿದ್ದು ಒಂದರೊಳಗೊಂದು ಸೇರಿಹೋಗಿ ರಕ್ಷಣಾ ಕಾರ್ಯವು ಬಹಳ ಕಷ್ಟವಾಗಿತ್ತು. ಈ ಟ್ರೈನಿನಲ್ಲಿದ್ದ ಹೆಚ್ಚಿನ ಪ್ರಯಾಣಿಕರು ಪಂಜಾಬಿನವರು. ಕೆಲವು ಚಿಕ್ಕ ಮಕ್ಕಳು ಬದುಕಿರುವವು. ಕಾಂಗ್ರೆಸಿನವರ ರಕ್ಷಣಾ ಕೆಲಸವು ಅತ್ಯಂತ ಪ್ರಶಂಸನೀಯವಾಗಿದ್ದಿತು.

### ಚೀನದ ವಿಷಮ ಪರಿಸ್ಥಿತಿ

ಉತ್ತರ ಚೀನದಲ್ಲೀಗ ಯುದ್ಧವೇನೂ ನಡೆಯುವುದಿಲ್ಲವಾದರೂ ಬೇಗನೆ ಪ್ರಬಲ ಸಮರವಾಗುವ ಸಂಭವ ತೋರುತ್ತದೆ. ಜಪಾನ್ ಸರಕಾರವು ತಮ್ಮ ಶರ್ತಗಳಿಗೆ ಚೀನವು ಒಪ್ಪಲೇಬೇಕೆಂದು ಹಠಹಿಡಿದಿರುವುದು. ಅವುಗಳಿಗೆ ಚೀನೀ ಸರಕಾರವು ಒಪ್ಪುವ ಹಾಗಿಲ್ಲ. ಮಂಚೂರಿಯದಂತೆ ಉತ್ತರ ಚೀನವನ್ನೂ ನುಂಗುವ ಕುತಂತ್ರವನ್ನು ವಿರೋಧಿಸುವ ದೃಢ ನಿರ್ಧಾರದಿಂದ ಚೀನವು ಭರದಿಂದ ಯುದ್ಧಸಿದ್ಧತೆ ನಡೆಸಿರುವುದು. ಆದುದರಿಂದ ಸಂಧಾನದ ಆಶೆಯು ಕಡಿಮೆಯಾಗುತ್ತಾ ಹೋಗುತ್ತಿದೆ. ಜಾಪಾನು ಎಚ್ಚರವಿತ್ತರೂ ಗಣಿಸದೆ ಚೀನೀ ಸರಕಾರವು ಉತ್ತರಕ್ಕೆ ದೊಡ್ಡ ಸೇನೆ ಕಳುಹಿಸಿರುವುದು. ಇದರಿಂದ ಅದು ಯುದ್ಧಕ್ಕೆ ಸಿದ್ಧವಾಗಿರುವುದೆಂದೇ ಹೇಳಬಹುದು. ಚೀನದಲ್ಲಿ ಜಾಪಾನರ ವಿರೋಧಭಾವವು ಅತಿ ಪ್ರಬಲವಾಗಹತ್ತಿರುವುದು.

### ಸ್ಪೈನಿನ ಅಂತಃಕಲಹ

ಕಳೆದ ಕೆಲವು ದಿನಗಳಲ್ಲಿ ಸ್ಪೈನಿನಲ್ಲಿ ಪ್ರಬಲ ಹೋರಾಟವೇನೂ ನಡೆದಿರುವಂತೆ ತೋರುವುದಿಲ್ಲ ಆದರೆ ಇದೇ ತಾ. 16ರಲ್ಲು ಸ್ಪೆನಿಶ್ ಸರಕಾರದ ಪ್ರಬಲ ಸಹಾಯಕರಾದ ಕ್ಯಾಟಲಾನಿನ ಸೈನಿಕರು ಹೂಸ್ಕ ಎಂಬ ಸ್ಥಳದ ಉತ್ತರದಲ್ಲಿ ಬಂಡಾಯಗಾರರ ಮೇಲೆ ಬಿದ್ದು ಮುಂದೊತ್ತಿರುವರು ಈ ಹೋರಾಟದಲ್ಲಿ 16,000 ಸೈನಿಕರೂ, 30 ಟಾಂಕಿಗಳೂ, 16 ವಿಮಾನಗಳೂ ಭಾಗಿಯಾಗಿದ್ದವು ಈ ಧಾಳಿಯು ನಿರರ್ಥಕವಾಗಿರುವುದೆಂದೂ ಇದರಲ್ಲಿ ಸರಕಾರದ ಕಡೆಯ ನೂರಾರು ಮಂದಿ ಕೊಲ್ಲಲ್ಪಟ್ಟಿರುವರೆಂದೂ ಬಂಡಾಯಗಾರರ ಕಡೆಯ ವಾರ್ತೆ. ಮೇದ್ರಿದಿನ ಪಶ್ಚಿಮದ ಸರಕಾರದ ಧಾಳಿಯು ನಿಂತುಹೋಗಿದಯಂತೆ ಇದೇ ತಾ. 17ರಲ್ಲು ಬಂಡಾಯಗಾರರು, ತಾವು ಯುದ್ಧವಾರಂಭಿಸಿ ಪ್ರಥಮ ವಾರ್ಷಿಕೋತ್ಸವವನ್ನು, ಎತ್ತಿನ ಹೋರಾಟವೇ ಮೊದಲಾದ ವಿನೋದಗಳಿಂದ ಸಂಭ್ರಮದಿಂದ ಆಚರಿಸಿರುವರು.

### ರಸ್ಯದ ವೈಮಾನಿಕರ ಸಾಹಸ.

**ಒಂದೇ ಸವನೆ 6750 ಮೈಲು ಹಾರಾಟ.**

ರಸ್ಯದ ವೈಮಾನಿಕರಿಬ್ಬರು ಮೋಸ್ಕೋ ಪಟ್ಟಣದಿಂದ ಹೊರಟು ಎಲ್ಲಿಯೂ ನಿಲ್ಲದೆ ಅಮೆರಿಕದ ಕ್ಯಾಲಿಪೋರ್ನಿಯದ ಸೇನ್ ಜೆಸಿಂಟೋ ಎಂಬಲ್ಲಿಗೆ ಬಂದಿಳಿದಿರುವರು. ಅಂದರೆ 60 ಘಂಟೆ 6 ಮಿನಿಟುಗಳ ವರೇಗೆ 6750 ಮೈಲು ಹಾರಾಡಿ, ಒಂದೇ ಸವನೆ ಅತಿ ಹೆಚ್ಚು ದೂರ ಪ್ರಯಾಣದ ಹಿಂದಿನ ದಾಖಲೆಯನ್ನು ಮುರಿದಿರುವರು. 1933ರಲ್ಲಿ ಫ್ರೆಂಚ್ ವೈಮಾನಿಕರಾದ ಕೋಡೋಸ್ ಮತ್ತು ರೋಸಿ ಎಂಬವರು ಒಂದೇ ಸವನೆ 5675ಮೈಲು ಹಾರಾಡಿ ದಾಖಲೆಮಾಡಿದ್ದರು. ಇದಕ್ಕಿಂತ 1000 ಮೈಲು ಹೆಚ್ಚು ಹಾರಾಡಿದಂತಾಯಿತು. ರಸ್ಯಾನರ ವೈಮಾನಿಕರು ಪ್ರೆಸಿಡೆಂಟ್ ರುಸವೆಲ್ಟರು ಈ ವೈಮಾನಿಕರನ್ನು ಅಭಿನಂದಿಸಿರುವರು.

### ವಾಯುವ್ಯ ಗಡಿನಾಡಿನ ಗಲಾಟೆಯು

ಇನ್ನೂ ನಿಂತಿಲ್ಲ ಅಲ್ಲಲ್ಲಿ ಹೋರಾಟಗಳು ನಡೆಯುತ್ತಲೇ ಇರುವವು. ಜುಲಾಯಿ ತಾ. 12–13ರಲ್ಲು ನಡೆದ ಹೋರಾಟದಲ್ಲಿ 6 ಮಂದಿ ಗುರ್ಖಾ ಸೈನ್ಯಾಧಿಕಾರಿಗಳು ಮತ್ತು ಸೈನಿಕರು ಕೊಲ್ಲಲ್ಪಟ್ಟು 10 ಮಂದಿ ಗಾಯಗೊಂಡಿರುವರು. ಪಂಗಡಿಗರು ಬ್ರಿಟಿಷ್ ಸೈನಿಕರ ಶಿಬಿರದ ಮೇಲೆ ಅನಿರೀಕ್ಷಿತವಾಗಿ ಧಾಳಿನಡಿಸಿ ಬೋಂಬು ಮತ್ತು ರೈಫ್ಲುಗಳಿಂದ ಹೋರಾಡಿದರು. ಇದರ ವಿವರವು ಇನ್ನೂ ತಿಳಿದಿಲ್ಲ. ಜುಲ್ಯಾ 12ರಲ್ಲು ಬ್ರಿಟಿಷ್ ಸೈನಿಕರು ಸಶಸ್ತ್ರ ಮೋಟರ್ ಕಾರು, ಟಾಂಕಿ ಮತ್ತು ವಿಮಾನಗಳ ಸಹಾಯದಿಂದ ಸ್ವಿನ್ವಾಮ್ ಪ್ರದೇಶದ ಮೇಲೆ ಧಾಳಿ ನಡಿಸಿ 15ಮಂದಿಯನ್ನು ದಸ್ತಗಿರಿಮಾಡಿ ಬಂಡಾಯಗಾರರ ಕೋಟೆಯೊಂದನ್ನು ನಾಶಮಾಡಿದರು. ದಕ್ಷಿಣ ವಜೀರಿಸ್ಥಾನವು ಶಾಂತವಾಗಿರುವುದು. ಇಫಿಯ ಫಕೀರರೂ ಮುಲ್ಲಾ ಶರಾಲಿಯವರ ದುರ್ಗಮವಾದ ಪರ್ವತ ಪ್ರದೇಶದಲ್ಲಿದ್ದುಕೊಂಡು ಹೆಚ್ಚೆಚ್ಚಾಗಿ ಅನುಯಾಯಿಗಳನ್ನು ಸೇರಿಸಿ ದಂಗೆ ಏಳಲು ಹುರಿಗೊಳಿಸುತ್ತಿರುವರು. ಆದರೆ ಅವರ ಸಹಾಯಕರೀಗ ಕಡಿಮೆಯಾಗಿರುವರು ಇದೇ ತಾ. 14ನೇ ಮಧ್ಯ ರಾತ್ರಿ 20 ಮಂದಿ ಪುಂಡರು ಧರಖಾನ್ ಎಂಬ ಹಳ್ಳಿಯ ಮೇಲೆ ಧಾಳಿನಡಿಸಿ ರಾಮಲ್ದಾಸನೆಂಬ ಹಿಂದುವನ್ನು ಕದ್ದೊಯ್ದಿರುವರು. ಬ್ರಿಟಿಷ್ ಸರಕಾರವು ಬಂಡಾಯಗಾರ ಪಂಗಡಿಗರೊಡನೆ ರಾಜಿ ಮಾಡುವ ಕುರಿತು ಆಲೋಚಿಸುತ್ತಿರುವುದು ಈ ಸಂಬಂಧವಾಗಿ ವಾಯುವ್ಯ ಗಡಿನಾಡಿನ ಗವರ್ನರರು ಸಿಮ್ಲಕ್ಕೆ ಹೋಗಿರುವರು.

### ಬೊಂಬಾಯಿಯ ಮಂತ್ರಿ ಮಂಡಲವು

ಬೊಂಬಾಯಿಯ ಪ್ರಧಾನ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ಬೊಂಬಾಯಿಯ ಕೌನ್ಸಿಲಿಗೆ ಗವರ್ನರರು ಮಾಡಿದ ನೇಮಕದ ಕುರಿತು ಗವರ್ನರರಿಗೆ ಅತೃಪ್ತಿ ಸೂಚಿಸಿ ಅವರಿಂದ ಸಮಾಧಾನಕರವಾದ ಉತ್ತರ ಪಡೆದು ಈ ಕೆಳಗಣ ಮಂತ್ರಿಮಂಡಲವನ್ನು ರಚಿಸಿರುವರು. ಶ್ರೀ ಬಿ ಜಿ. ಖೇರರು ಪ್ರಧಾನಮಂತ್ರಿಗಳು ಶ್ರೀ ಎ. ಬಿ. ಲಠೆ, ಡಾಕ್ಟರ್, ಎಮ್. ಬಿ ಗಿಲ್ಡರ್ ಶ್ರೀ ಕೆ. ಎಮ್. ಮುನ್ಷಿ, ಶ್ರೀ ಎಮ್. ಬಿ. ಪಾಟೀಲ್ ಮತ್ತು ಶ್ರೀ ಮುಲ್ರಾಜ್ ದೇಸಾಯಿಯವರು ಇತರ ಮಂತ್ರಿಗಳು ಮುಸಲ್ಮಾನರೊಬ್ಬರನ್ನು 7ನೇ ಮಂತ್ರಿಗಳಾಗಿ ನೇಮಿಸಲಾಗುವುದು. ಅವರು ಯಾರೆಂದು ಇನ್ನೂ ನಿಶ್ಚಯವಾಗಿರುವುದಿಲ್ಲ ಶ್ರೀ ನರಿಮೆನರಿಗೆ ಈ ಮಂತ್ರಿ ಮಂಡಲದಲ್ಲಿ ಯಾವ ಸ್ಥಾನವೂ ಇಲ್ಲದಿರುವುದು ಆಶ್ಚರ್ಯಕರವಾಗಿದೆ. ಪ್ರಾಯಶಃ ಅವರೇ ಮಂತ್ರಿಮಂಡಲಿಯಲ್ಲಿರಲು ನಿರಾಕರಿಸಿರಬೇಕು ಮುಸಲ್ಮಾನ ನೇಮಕದ ಕುರಿತು ಮೌಲನಾ ಅಬ್ದುಲ್ ಕಲಮ್ ಅಜದರು ಸರ್ದಾರ್ ವಲ್ಲಭಾಯಿ ಮತ್ತು ಖೇರರು ಆಲೋಚಿಸುತ್ತಿರುವರು. ಶ್ರೀ ಮವ್ಲಾಂಕರರು ಎಸೆಂಬ್ಲಿಯ ಪ್ರಸಿಡೆಂಟರಾಗಿ ನೇಮಿಸಲ್ಪಟ್ಟಿರುವರು. ಇದೇ ತಾ. 19ರಲ್ಲು ಬೊಂಬಾಯಿ ಎಸೆಂಬ್ಲಿ ಸಭೆಯು ಪೂನಾದಲ್ಲಿ ನಡೆಯುವುದು. ಆಗ ಕಾಂಗ್ರೆಸ್ ಎಸೆಂಬ್ಲಿ ಮೆಂಬರರೆಲ್ಲಾ ತಮ್ಮ ಪಕ್ಷದ ಆಫೀಸಿನಲ್ಲಿ ಧ್ವಜವಂದನೆಮಾಡಿ ದೇಶ ಸೇವಿಕೆಯರ ಗಣದಿಂದ ಮೆರವಣಿಗೆಯಿಂದ ಸಭಾಸದನಕ್ಕೆ ಹೋಗುವರು.

### ಮಂತ್ರಿ ಮತ್ತು ಸೆಕ್ರೆಟರಿಗಳ ಸಂಬಳ

ಮದ್ರಾಸಿನ ಪ್ರಧಾನ ಮಂತ್ರಿಗಳೂ ಇತರ ಮಂತ್ರಿಗಳೂ ತಿಂಗಳಿಗೆ ರೂ 500 ಸಂಬಳ ಮತ್ತು ರೂ. 150 ಮೋಟರ್ ಕಾರ್ ಮತ್ತು ರೂ. 150 ನಿವಾಸ ಭತ್ತೆ ಪಡೆಯುವರು ಪಾರ್ಲಿಮೆಂಟರಿ ಸೆಕ್ರೆಟರಿಗಳು ತಿಂಗಳೊಂದರ ರೂ 250 ಸಂಬಳ ಮತ್ತು ರೂ. 100 ಭತ್ತೆ ಪಡೆಯುವರು. ಸಾಮಾನ್ಯ ಮೆಂಬರರಿಗೆ ಪ್ರಯಾಣ ಭತ್ತೆ ಮತ್ತು ಅವರು ಸಭಾಕಾರ್ಯ ನಿರತರಿರುವಾಗ ದೈನಿಕ ವೆಚ್ಚದ ಭತ್ತೆ ಕೊಡಲಾಗುವದು ಇದು ಹೊರತು ತಿಂಗಳೊಂದರ ರೂ 100 ಸಂಬಳ ಕೊಡುವ ಆಲೋಚನೆಯಿದೆಯೆಂದು ತಿಳಿದು ಬರುತ್ತದೆ. ಸೆಕ್ರೆಟರಿಗಳು ಮದ್ರಾಸಿನಲ್ಲೇ ಇದ್ದು ಆಫೀಸಿನಲ್ಲಿ ಕೆಲಸ ಮಾಡಿ ಮಂತ್ರಿಗಳಿಗೆ ಸಹಾಯಮಾಡಬೇಕು. ಅವರು ಮತ್ತು ಮಂತ್ರಿಗಳು ಯಾವ ಯಾವ ವಿಷಯಗಳನ್ನು ನೋಡುತ್ತಿರಬೇಕೆಂದು ನಿರ್ಣಯಿಸಲಾಗವುದು.

### ಮಧ್ಯಪ್ರಾಂತೀಯ ಮಂತ್ರಿಮಂಡಲ

ಡಾಕ್ಟರ್ ಖಾರೆಯವರು ಮುಖ್ಯಮಂತ್ರಿಗಳು. ಪೋಲೀಸ್ ಖಾತೆಯ ಆಡಳಿತ ನೋಡುವವರು. ಪಂಡಿತ ರವಿಶಂಕರ ಶುಕ್ಲರು ಶಿಕ್ಷಣಮಂತ್ರಿಗಳು. ಪಂಡಿತ ದ್ವಾರಕಾಪ್ರಸಾದ ಮಿಶ್ರರವರು ಸ್ಥಳೀಯ ಸ್ವರಾಜ್ಯ ಖಾತೆಯ ಮಂತ್ರಿಗಳು. ಶ್ರೀ. ಆರ್, ಎಮ್ ದೇಶಮುಖರು ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳು. ಮಿ. ಮಹಮ್ಮದ್ ಯೂಸುಫ್ ಶರೀಫರು ನ್ಯಾಯ ಖಾತೆಯ ಮಂತ್ರಿಗಳು. ಶ್ರೀ. ದುರ್ಗಾಶಂಕರ ಕೃಪಾಶಂಕರಮೇಥಾರವರು ಅರ್ಥಸಚಿವರು, ಶ್ರೀ. ಪುರುಷೋತ್ತಮ ಬಲವಂತ ಗೋಳೆಯವರು ಭೂಕಂದಾಯಖಾತೆಯ ಮಂತ್ರಿಗಳು, ಶ್ರೀ ಘನಶ್ಯಾಮ ಸಿಂಘಗುಪ್ತ ಮತ್ತು ಶ್ರೀಮತಿ ಅನಸೂಯಬಾಯಿ ಕಾಳೆಯವರು ಎಸೆಂಬ್ಲಿಯ ಸ್ಪೀಕರ್ ಮತ್ತು ಡಿಪ್ಯೂಟಿ ಸ್ಪೀಕರರಾಗಿ ನೇಮಿಸಲ್ಪಟ್ಟಿರುವರು.

### ಉರ್ದುಪತ್ರಿಕೆಗೆ ರಾಷ್ಟ್ರಪತಿಗಳ ಆಶೀರ್ವಾದ

ಲಕ್ನೋಪಟ್ಟಣದ ಹಿಂದುಸ್ಥಾನ ನ್ಯೂಸ್‌ಪೇಪರ್ ಕಂಪೆನಿಯೊಂದು, ಕಾಂಗ್ರೆಸಿನ ಉದ್ದೇಶಗಳನ್ನು ಜನತೆಯಲ್ಲಿ ಪ್ರಚಾರಗೊಳಿಸಿ ಅದಕ್ಕೆ ಹೆಚ್ಚಿನ ಜನಸಮುದಾಯದ ಬೆಂಬಲದೊರೆಯುವಂತೆ ಮಾಡಲು ಉರ್ದು ಪತ್ರಿಕೆಯೊಂದನ್ನು ಪ್ರಕಟಿಸುವ ನಿರ್ಧಾರ ಮಾಡಿರುವುದು. ಇದು ಸ್ತುತ್ಯ ಕೆಲಸ. ಕಾಂಗ್ರೆಸಿನ ಆದರ್ಶಗಳನ್ನು ಜನರಲ್ಲಿ ಪ್ರಚಾರಗೊಳಿಸಿ, ವಿವಿಧ ಜಾತೀಯ ಮನೋವೃತ್ತಿಯನ್ನು ಮೂಲೆಗೊತ್ತಲೆತ್ನಿಸುವ ಪ್ರಯತ್ನವು ಇಂತಹ ಪತ್ರಿಕೆಗಳ ಮೂಲಕ ನಡಿಸಲ್ಪಡಬೇಕು ಇಂತಹ ಪತ್ರಿಕೆಗಳಿಗೆ ತಾನು ತನ್ನಿಂದಾದ ಸಹಾಯವೀಯುವೆನು ಮತ್ತು ಇತರರೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳುವೆನೆಂದು ಪಂಡಿತ ಜವಾಹರಲಾಲರು ಈ ಪತ್ರಿಕೆಯನ್ನು ಹರಸಿರುವರು. ಪಂಡಿತ ಗೋವಿಂದವಲ್ಲಭ ಪಂತರು ಮತ್ತು ಮಿ. ರಾಫಿ ಅಹಮ್ಮದ್ ಕಿದ್ವೈಯವರು ಈ ಪತ್ರಿಕಾ ಕಂಪೆನಿಯ ಡೈರೆಕ್ಟರರಾಗಿರುವರು.

# ನಿನ್ನೆಯ ಕೈದಿಗಳು ಇಂದಿನ ಪ್ರಧಾನ ಮಂತ್ರಿಗಳು

## — ದೇಶವೆಲ್ಲೆಲ್ಲಾ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಸ್ವಾಗತ —

ಇಂದಿಗೆ ಹಿಂದೂದೇಶದ 6 ಪ್ರಾಂತಗಳಲ್ಲಿ ಎಂದರೆ ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ, ಮಧ್ಯ ಪ್ರಾಂತ, ಬಿಹಾರ್ ಮತ್ತು ಒರಿಸ್ಸಗಳಲ್ಲಿ ಕಾಂಗ್ರೆಸ್ಸಿನ ರಾಜ್ಯಭಾರವು ಆರಂಭವಾಗಿರುವುದು. ವಾಯವ್ಯ ಗಡಿನಾಡು, ಬಂಗಾಳ ಮತ್ತು ಅಸ್ಸಾಮ್ ಪ್ರಾಂತಗಳಲ್ಲಿ ಮನಸ್ಸಿದ್ದರೆ ಕಾಂಗ್ರೆಸು ಅಧಿಕಾರಕ್ಕೆ ಬರಲು ಸಾಧ್ಯವಿರುವುದು. ಹಿಂದೂದೇಶದ ರಾಜಕೀಯ ಇತಿಹಾಸದಲ್ಲಿ ಇಂದೀಗ ಪ್ರಥಮವಾಗಿ 6 ಮಂದಿ ಕಾಂಗ್ರೆಸ್ ಮುಖಂಡರು ಪ್ರಧಾನ ಮಂತ್ರಿಗಳಾಗಿ ಪ್ರಾಂತಿಕ ಆಡಳಿತ ಸೂತ್ರಧಾರರಾಗಿರುವರು. ಇವರೆಲ್ಲರಿಗೂ ಈ ಕೆಲಸವು ಹೊಸತು. ಅವರು ಹಿಂದೆ ಹಲವು ಸಾರಿ ಸೆರೆಮನೆಗೆ ಹೋದವರು. ಸರಕಾರದ ಅಧಿಕಾರಿಗಳೊಡನೆ ಯಾವ ರೀತಿಯಲ್ಲಿಯೂ ಸಹಕರಿಸದೆ ದೂರವಿದ್ದು ಸ್ವಾತಂತ್ರ್ಯದ ಹೋರಾಟ ನಡೆಸಿಕೊಂಡಿದ್ದವರು. ಸರಕಾರದ ದೃಷ್ಟಿಯಲ್ಲಿ, ಪೋಲೀಸರ ವಕ್ರದೃಷ್ಟಿಗೊಳಗಾದವರು ಇಂದೀಗ ಸರಕಾರದಿಂದ ಸನ್ಮಾನಿತರಾಗಿ, ಪೋಲೀಸರಿಂದ ವಂದನೆ ಪಡೆದು ಗೌರವಿಸಲ್ಪಟ್ಟು ರಾಜ್ಯಭಾರ ನಡೆಸುವ ಜವಾಬ್ದಾರಿ ವಹಿಸಿರುವರು. ಒಮ್ಮೆ ರಾಜದ್ರೋಹಿಗಳಾಗಿದ್ದವರು, ಶಾಂತಿಭಂಗಕಾರರೆನಿಸಿಕೊಂಡಿದ್ದವರು, ಒರಟು ದಾರಿ ಹಿಡಿದವರೆಂದು ತಿರಸ್ಕೃತರಾಗಿದ್ದವರು ಇಂದು ಸರ್ವರಿಂದಲೂ ಮನ್ನಣೆ ಪಡೆಯುತ್ತಿರುವರು. ಕಾಲಚಕ್ರದ ಉರುಳಾಟವೆಂದರೆ ಹೀಗೆ!

6 ಪ್ರಾಂತಗಳಲ್ಲಿ ಕಾಂಗ್ರೆಸಿನ ಪರವಾಗಿ ಪ್ರಧಾನ ಮಂತ್ರಿತ್ವ ವಹಿಸಿರುವ 6 ಮಂದಿಯೂ ಗಾಂಧಿಜಿಯವರ ಶಿಷ್ಯರಾಗಿ ತರಬೇತಿ ಹೊಂದಿದವರು. ದೇಶದ ಸ್ವಾತಂತ್ರ್ಯ ಸಾಧನೆಗಾಗಿ ತನು, ಮನ, ಧನವ ಸೂಸಿರುವ ತ್ಯಾಗ ವೀರರು; ಕಾರ್ಯ ರಂಗದಲ್ಲಿ ಒರೆಗೆ ಹಚ್ಚಲ್ಪಟ್ಟ ಖಂಡಿತ ಕರ್ತವ್ಯದಕ್ಷ ನಾಯಕರು. ಅವರು ಪ್ರಸಿದ್ಧ ವಾಗ್ಮಿಗಳಾಗದಿರಬಹುದು. ಕೌನ್ಸಿಲ್ ಸಭಾ ಕಾರ್ಯಕಲಾಪಗಳಲ್ಲಿ ಚತುರರಾಗದಿರಬಹುದು, ರಾಜತಂತ್ರ ಪ್ರವೀಣರಲ್ಲದಿರಬಹುದು ಆದರೆ ಯಥಾರ್ಥ ಜನಹಿತ ಸಾಧಕರು ನಿಸ್ವಾರ್ಥ ದೇಶ ಸೇವಕರು. ಈ ಆರು ಮಂದಿಯಲ್ಲಿ ಅಗ್ರಗಣ್ಯರು ಶ್ರೀ. ಸಿ. ರಾಜಗೋಪಾಲಾಚಾರ್ಯರೆಂಬುದು ದಕ್ಷಿಣಭಾರತಕ್ಕೆ ಅಭಿಮಾನದ ಸಂಗತಿ. ಕಾಂಗ್ರೆಸಿನೊಳಗೆ ಇವರಷ್ಟು, ಬುದ್ಧಿ ಚಾತುರ್ಯ, ಕಾರ್ಯಕುಶಲತೆಯುಳ್ಳವರು ಅತ್ಯಪೂರ್ವ. ಎಲ್ಲರ ಗೌರವ ಮತ್ತು ವಿಶ್ವಾಸಕ್ಕೆ ಪಾತ್ರರಾಗಿರುವರು, ಗಾಂಧಿಜಿಯವರ ಬಲಗೈಯಾಗಿ ಮೆರೆಯುತ್ತಿರುವರು. ಯಾವ ವಿಷಯದಲ್ಲಿಯೂ ಶ್ರೀ ರಾಜಾಜಿಯವರ ಅಭಿಪ್ರಾಯವು ಗಣನೀಯವಿರುವುದು. ಇಂಥವರು ಇಡೀ ಹಿಂದೂ ದೇಶದಲ್ಲೇ ಪ್ರಮುಖಸ್ಥಾನ ಪಡೆದಿರುವ ಮದ್ರಾಸಿನ ಪ್ರಧಾನ ಮಂತ್ರಿಗಳಾದುದು ಅದೊಂದು ಸು-

### ಮದ್ರಾಸ್ ಮಂತ್ರಿಮಂಡಲದ ರಚನೆ

ದೈವನೆಂದೇ ಹೇಳಬಹುದು. ರಾಜಾಜಿಯವರಷ್ಟು ದೊಡ್ಡ ಹರಿಜನ ಮಿತ್ರರೂ, ಮದ್ಯಪಾನ ನಿಷೇಧಕರೂ ದಕ್ಷಿಣ ಹಿಂದುಸ್ಥಾನದಲ್ಲಾರೂ ಇರಲಾರರು. ಗಾಂಧಿಜಿಯವರು ದಕ್ಷಿಣ ಆಫ್ರಿಕದಿಂದ ಬರುವ ಮೊದಲೇ ರಾಜಾಜಿಯವರು ತೀವ್ರ ಸುಧಾರಕರಾಗಿ ಹರಿಜನರ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುತ್ತಿದ್ದವರು. ಅಂದಿನಿಂದ ಈ ವರೆಗೆ ದಿನೇ ದಿನೇ ಅಭಿವೃದ್ಧಿಯಾದ ನಿಷ್ಠೆಯಿಂದ ಕೆಲಸ ಮಾಡುತ್ತಾ ಬಂದವರು. ಇವರ ಪ್ರಾಮಾಣಿಕತೆ ಮತ್ತು ತ್ರಿಕರಣ ಶುದ್ಧತೆಯು ಸುಪ್ರಸಿದ್ಧವಾದುದು. ಎರಡು ಸಲ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ನಿರಾಕರಿಸಿದವರು. ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿ ಪಂಡಿತ ಪಂತರು ಸುರಿತ ಕಾಂಗ್ರೆಸ್ ಮುಖಂಡರು. ಅಸಾಧಾರಣ ಕೌನ್ಸಿಲ್ ಸಭಾ ಕಾರ್ಯಜ್ಞರು, ಉಜ್ವಲ ವಾಗ್ಮಿಗಳು. ಡಿಲ್ಲಿ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ತನ್ನ ವಿದ್ವತ್ತಿಕೆ ವಾಕ್ಪಟುತ್ವ, ರಾಜನೀತಿಜ್ಞತೆ ಮತ್ತು ರಾಜ್ಯಭಾರ ವಿಷಯಾನುಭವದಿಂದ ಸರಕಾರಿ ಪಕ್ಷದ ಎದೆಗೆ ಯಾವಾಗಲೂ ಶೂಲಪ್ರಾಯವಾಗಿ ಹೆಸರು ಮಾಡಿದವರು. ದೊಡ್ಡ ಜಮೀನ್ದಾರರಾದರೂ ಜನ ಸಾಮಾನ್ಯರ ದು ಖದಂಬರಿಗಳಿಗಾಗಿ ಕರುಬುತ್ತಿರುವ ಬಡಜನ ಪಕ್ಷಪಾತಿಯು. ವ್ಯವಸಾಯಗಾರರ ಹಿತಸಾಧನೆಗಾಗಿ ಎಡೆಬಿಡದೆ ಹೋರಾಡುತ್ತಿರುವವರು. ಪಂಡಿತ ಜವಾಹರಲಾಲರ ವಿಶೇಷ ಸಹೋದ್ಯೋಗಿಯಾಗಿ ಅವರೊಂದಿಗೆ ಎರಡು ಸಲ ಸೆರೆಮನೆಗೆ ಹೋದವರು. ಸರಕಾರಿ ಅಧಿಕಾರಿಗಳೊಡನೆಯೂ, ಜಮೀನ್ದಾರ ತಾಲೂಕುದಾರರೊಡನೆಯೂ ಸ್ನೇಹಿತ್ರಯಿಂದ ವ್ಯವಹಾರ ನಡೆಸಬಲ್ಲ ಸಹನೆ ಮತ್ತು ಜಾಣ್ಮೆಯುಳ್ಳವರು. ಸಂಯುಕ್ತ ಪ್ರಾಂತದಲ್ಲಿ ಪಂಡಿತ ವಲ್ಲಭ ಪಂತರಷ್ಟು ಪೋಲೀಸರ ಪೀಡೆಗೊಳಗಾದವರು ಇನ್ನೊಬ್ಬರಿಲ್ಲವೆನ್ನಬಹುದು. ಸೈಮನ್ ಕಮಿಶನು ಲಕ್ನೋವನ್ನು ಸಂದರ್ಶಿಸಿದಾಗ ಸ್ವಯಂ ಸೇವಕದಳದೊಂದಿಗೆ ಕರಿಧ್ವಜ ಹಿಡಿದು ಅದರ ವಿರೋಧ ಪ್ರದರ್ಶನ ಮಾಡಿ ಪೋಲೀಸ್ ಸವಾರರ ಲಾಠಿಪ್ರಹಾರಕ್ಕೆ ಎದೆಕೊಟ್ಟು ನಿಂತವರು. ರಾಷ್ಟ್ರಪತಿ ಪಂಡಿತ ಜವಾಹರಲಾಲರು ಮತ್ತು ಪಂಡಿತ ಪಂತರು ಸುದೈವದಿಂದ ರಾಷ್ಟ್ರಪತಿಗಳಿಗೆ ಹೆಚ್ಚಿನ ಪೆಟ್ಟೇನೂ ಆಗಲಿಲ್ಲ ಆದರೆ ಆರು ಅಡಿಗಿಂತಲೂ ಎತ್ತರವಿದ್ದು ದಪ್ಪವಿರುವ ಪಂಡಿತ ಪಂತರಿಗೆ ವಿಶೇಷ ಪೆಟ್ಟಾಯಿತು. ಅನಂತರ ಅವರಿಗೆ ದೀರ್ಘಕಾಲದ ವರೆಗೆ ಬೆನ್ನು ನೆಟ್ಟಗೆ ಮಾಡಲಾಗದೆ ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು. ಈಗಲೂ ಅವರಿಗೆ ಆ ನೋವು ಆಗಾಗ ಉಂಟಾಗುವುದು. ಅವರ ಭುಜವೊಂದು ಇನ್ನೊಂದಕ್ಕಿಂತ ಕುಗ್ಗಿಹೋಗಿರುವುದು. ಈಗ ಇವರೇ ಪೋಲೀಸರ ಅದೃಷ್ಟ ಚಾಲಕರಾಗಿರುವರು. ಮಧ್ಯಪ್ರಾಂತದ ಪ್ರಧಾನ ಮಂತ್ರಿ ಡಾಕ್ಟರ್ ಖಾರೆಯವರು ನಾಗಪುರದ ಪ್ರಸಿದ್ಧ ಡಾಕ್ಟರರು. ಎಡೆಬಿಡದೆ ಜನಸೇವೆಮಾಡಿ ಜನಪ್ರೀತರಾದವರು. ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗಿ ಜನಸೇವೆಮಾಡಿರುವ ಉಜ್ವಲ ದೇಶಭಕ್ತರು. ಬೆರಿಸ್ಟರ್ ಅಭ್ಯಂಕರರ ಶೋಚನೀಯ ಮರಣದ ನಂತರ ಮಧ್ಯಪ್ರಾಂತದ ಕಾಂಗ್ರೆಸ್ ನಾಯಕರಾಗಿ ಡಿಲ್ಲಿ ಎಸೆಂಬ್ಲಿ ಮೆಂಬರರಾಗಿದ್ದವರು. ಬೊಂಬಾಯಿಯ ಡಾಕ್ಟರ್ ಖಾರೆಯವರ ಹೆಸರನ್ನು, ಅವರು ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಡುವವರೆಗೆ ಹೆಚ್ಚಾಗಿ ಕೇಳಿದವರಿಲ್ಲ. ಶ್ರೀ ನರಿಮನರೇ ಬೊಂಬಾಯಿ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕರಾಗಿ ಆರಿಸಲ್ಪಡುತ್ತಿದ್ದರೆ ಚೆನ್ನಾಗಿತ್ತು. ಆದರೆ ಹಾಗಾಗದುದು ಶೋಚನೀಯ. ಡಾಕ್ಟರ್ ಖಾರೆಯವರು ಶ್ರೀ ನರಿಮನರ ನಂತರ ಸುರಿತ ದೇಶಭಕ್ತರು. ಶಾಂತರೀತಿಯಿಂದ ಕೆಲಸ ಮಾಡುವವರು. ಜಯಶೀಲ ವಕೀಲರು. ಕಾಯಿದೆ ಭಂಗ ಚಳವಳದ ಸಂದರ್ಭದಲ್ಲಿ ತನ್ನ ಮನೆಮಾರು ಕಳಕೊಂಡವರು. ಬೊಂಬಾಯಿಯ ಹೊರವಳಯದಲ್ಲಿ ಹರಿಜನರ ಕೋಲನಿಯೊಂದನ್ನು ನಡೆಸುತ್ತಿರುವರು. ತಾನು ಸಂಪಾದಿಸಿದ ಹೆಚ್ಚಿನ ಭಾಗವನ್ನು ಈ ಪರೋಪಕಾರ್ಯಕ್ಕಾಗಿ ವಿನಿಯೋಗಿಸುತ್ತಿರುವರು. ಯಾವ ಆಡಂಬರವೂ ಇಲ್ಲದೆ ಶಾಂತ ರೀತಿಯಿಂದ ಮತ್ತು ಸದೇಕ ನಿಷ್ಠೆಯಿಂದ ಕೆಲಸಮಾಡುವ ದೇಶಭಕ್ತರಲ್ಲೊಬ್ಬರು. ಒರಿಸ್ಸದ ಮುಖ್ಯಮಂತ್ರಿಗಳಾದ ಶ್ರೀ ವಿಶ್ವನಾಥ ದಾಸರು ಮದ್ರಾಸ್ ಕೌನ್ಸಿಲ್ ಮೆಂಬರರಾಗಿಯೂ, ಸ್ಥಳೀಯ ಸಂಸ್ಥೆಗಳ ಸದಸ್ಯರಾಗಿಯೂ ಒಳ್ಳೇ ಕೆಲಸ ಮಾಡಿ ಅನುಭವವುಳ್ಳವರು. ಕಾಯಿದೆ ಭಂಗ ಚಳವಳದಲ್ಲಿ ಭಾಗವಹಿಸಿ ತ್ಯಾಗ ಮಾಡಿದವರು. ಬಿಹಾರಿನ ಪ್ರಧಾನ ಮಂತ್ರಿಗಳಾದ ಶ್ರೀ ಕೃಷ್ಣ ಸಿಂಹರು ಬಾಬುರಾಜೇಂದ್ರ ಪ್ರಸಾದರ ವಿಧೇಯ ಶಿಷ್ಯರಲ್ಲೊಬ್ಬರು. ಅವರು ಹೇಳಿದಂತೆ ನಡೆಯುವವರು. ಬಾಬುರಾಜೇಂದ್ರ ಪ್ರಸಾದರಂತೆಯೇ ಅತ್ಯಂತ ಸರಳ ಸ್ವಭಾವದವರು, ನಿರ್ಮಲ ಚರಿತರು.

### ಮದ್ರಾಸ್ ಮಂತ್ರಿಮಂಡಲ

ಶ್ರೀ. ಸಿ. ರಾಜಗೋಪಾಲಾಚಾರ್ಯರು ಮದ್ರಾಸಿನ ಮುಖ್ಯ ಮಂತ್ರಿಗಳು. ಪಬ್ಲಿಕ್ ಅಂದರೆ ಪೋಲೀಸ್ ಮೊದಲಾದ ಖಾತೆಗಳ ಮತ್ತು ಆರ್ಥಿಕ ವಿಷಯದ ಆಡಳಿತವನ್ನು ಇವರು ನಡೆಸುವರು. ಇವರ ವಯಸ್ಸು 58. ಇವರು ಸೇಲಮಿನವರು. ಬೆಂಗಳೂರಿನ ಸೆಂಟ್ರಲ್ ಕೋಲೇಜಿನಲ್ಲಿ ಕಲಿತವರು. ಆ ಮೇಲೆ ವಕೀಲರಾಗಿ ಸೇಲಮಿನ ಮುನಿಸಿಪಲ್ ಅಧ್ಯಕ್ಷರಾಗಿದ್ದು ಹರಿಜನರಿಗೆ ನಳ್ಳಿನೀರನ್ನು ಉಪಯೋಗಿಸಬಿಡುವ ವಿಷಯದಲ್ಲಿ ಕಾದಾಡಿದವರು. 1920ರಲ್ಲಿ ಅಸಹಕಾರ ಚಳವಳದ ಸಂದರ್ಭದಲ್ಲಿ ವಕೀಲವೃತ್ತಿ ಬಿಟ್ಟು ರಾಜಕೀಯಕ್ಕೆ ಸಂಪೂರ್ಣವಾಗಿ ಜೀವಿತವನ್ನ ಪಿಸಿದರು. ನಾಲ್ಕು ಸಲ ಸೆರೆಮನೆಗೆ ಹೋದರು. ಬ್ರಾಹ್ಮಣರಾದರೂ ಮಗಳನ್ನು ಬನ್ಯಜಾತಿಯ ಗಾಂಧಿಜಿಯವರ ಮಗ ಶ್ರೀ. ದೇವದಾಸ ಗಾಂಧಿಜಿಯವರಿಗೆ ವಿವಾಹಮಾಡಿ ಕೊಟ್ಟರು. ಇವರನ್ನು ದಕ್ಷಿಣ ಭಾರತದ ಗಾಂಧಿಜಿಯವರೆಂದರೂ ತಪ್ಪಾಗದು.

ಶ್ರೀ. ಟಿ. ಪ್ರಕಾಶಮರು ಭೂಕಂದಾಯ ಖಾತೆಯ ಮಂತ್ರಿಗಳು. ಇವರು ಆಂಧ್ರ ದೇಶದ ಟಂಗಟೂರಿನಲ್ಲಿ ಹುಟ್ಟಿದವರು ಇವರು ಬ್ಯಾರಿಸ್ಟರರಾಗಿ ಹೆಚ್ಚು ಸಂಪಾದನೆ ಮಾಡುತ್ತಿದ್ದರು. ಸ್ವರಾಜ್ಯವೆಂಬ ಇಂಗ್ಲಿಷ್ ದೈನಿಕ ಪತ್ರಿಕೆಯನ್ನು ಸ್ಥಾಪಿಸಿ ಹೆಚ್ಚಿನ ಹಣ ಕಳಕೊಂಡರು. 1920ರಲ್ಲಿ ಅಸಹಕಾರಕ್ಕೆ ಸೇರಿ ವಕಾಲತು ಬಿಟ್ಟರು. ಕಾಯಿದೆಭಂಗ ಚಳವಳದಲ್ಲಿ ಎರಡು ಸಲ ಜೈಲಿಗೆ ಹೋಗಿರುವರು. ಇವರಿಗೆ ಆಂಧ್ರ ಕೇಸರಿಯೆಂಬ ಹೆಸರಿರುವುದು.

ಡಾಕ್ಟರ್ ಟಿ. ಎಸ್. ಎಸ್. ರಾಜನರು ಆರೋಗ್ಯಖಾತೆಯ ಮಂತ್ರಿಗಳು. ಎಂಡೋಮೆಂಟ್ ಖಾತೆಯೂ ಇವರ ಆಡಳಿತಕ್ಕೆ.

ರೂ. 2—12—0ಕ್ಕೆ
ಶ್ರೀಕೃಷ್ಣ ದೃಷ್ಟಿಚಕ್ರವುಳ್ಳ
ಬೇಬಿ ಬೋಕ್ಸ್ ಕೆಮರಾ
(1937ನೇ ಹೊಸ ಉಚಿತ)

ಕಲಿಯಲಿಚ್ಛಿಸುವವರು ಈ ಕೆಮರಾದಿಂದ ಕಾರ್ಡ ಸೈಜ, ಫ್ಯಾಮಿಲಿ ಯಾವುದರ ಫೋಟೋವನ್ನಾದರೂ ಉತ್ಕೃಷ್ಟವಾಗಿ ಒಂದೇ ಕ್ಷಣದೊಳಗೆ ತೆಗೆಯಬಹುದು ... ಇದರಿಂದ ದಿನಂಪ್ರತಿ ರೂ 5/ನ್ನು ಗಳಿಸಬಹುದು 1 ಡಜನ್ ಪ್ರಿಂಟಿಂಗ್ ಪೇಪರ್ ಚಿತ್ರಗಳನ್ನು ತೋರ್ಪಡಿಸುವ ಉಪಕರಣ ಮತ್ತು ಫೋಟೋ ತೆಗೆವ ವಿಧಾನಗಳನ್ನು ಉಚಿತವಾಗಿ ಕೊಡಲಾಗುವುದು. ಕ್ರಯ 2ನೇ ನಂಬ್ರಕ್ಕೆ ರೂ 2—12—0, 1ನೇದ್ದಕ್ಕೆ ರೂ 4—12—0, ಫೋಲ್ಡಿಂಗ್ ಕೆಮರಾಕ್ಕೆ ರೂ 3/- ಉತ್ತಮ ತರದ್ದಕ್ಕೆ ರೂ. 4—8—0 ಪೋಸ್ಟೇಜು ಅಲಾಹಿದಾ

DUTTA & Co.
15/1 Jaymittra Street,
P. O. Hatkhola (Calcutta)

# ಶ್ರೀ ಸತ್ಯನಾರಾಯಣ ವ್ರತ

ವಿಶ್ವಾಸಿಗಳ ಪ್ರಯೋಜನಾರ್ಥಕ್ಕಾಗಿ ನಮ್ಮಲ್ಲಿ ನಡೆಯುತ್ತಿರುವ ಸತ್ಯನಾರಾಯಣ ವ್ರತದ ಮಹತ್ವವನ್ನು ಈ ಕೆಳಗೆ ಕೊಟ್ಟಿರುತ್ತೇನೆ.

ಒಂದು ದಿನ ನಾರದರು ಮಹಾವಿಷ್ಣುವಿನ ಹತ್ತಿರ ಹೋಗಿ ಹೇ ಮಹಾವಿಷ್ಣೋ! ಮರ್ತ್ಯಲೋಕದಲ್ಲಿ ಸಮಸ್ತ ಜನರು ಅನೇಕ ದುಃಖಗಳನ್ನು ಅನುಭವಿಸುತ್ತಿರುವರು ಅಲ್ಪ ಉಪಾಯದಿಂದ ಸಮಸ್ತ ಲೋಕದ ದುಃಖವು ಹೇಗೆ ನಾಶವಾದೀತು.? ಕೃಪೆ ಮಾಡಿ ಹೇಳುವಂಥವನಾಗು—ಎಂದು ನೋರಿಯಿಡಲು ಮಹಾವಿಷ್ಣುವು—ಸತ್ಯನಾರಾಯಣ ದೇವತಾ ವ್ರತಮಾಡಿದರೆ ಮನುಷ್ಯರುಗಳು ಈ ಲೋಕದಲ್ಲಿ ಅಖಂಡ ಸುಖವನ್ನನುಭವಿಸುವಂಥವರಾಗಿ ಪರಲೋಕದಲ್ಲೂ ಸುಖವನ್ನು ಹೊಂದುವಂಥವರಾಗುತ್ತಾರೆ. ಎಂದು ಹೇಳುವಂಥವನಾದನು—ಮತ್ತು ಈ ವ್ರತವು ದುಃಖ ಶೋಕಾದಿಗಳನ್ನು ನಾಶಮಾಡುವಂಥಾದ್ದು, ಧನ ಧಾನ್ಯಾದಿಗಳನ್ನು ಅಭಿವೃದ್ಧಿ ಮಾಡುವಂಥಾದ್ದು, ಸಮಸ್ತ ಕಾರ್ಯಗಳನ್ನು ದಿಗ್ವಿಜಯ ಮಾಡುವಂಥಾದ್ದು ಎಂದೂ ಭಗವಂತನು ಹೇಳುವಂಥವನಾದ. ಇದರ ವಿಧಾನ ಹೇಗೆಂದು ನಾರದನು ಕೇಳುವಂತವನಾದಾಗ ಮಹಾವಿಷ್ಣುವು ಈ ಪ್ರಕಾರ ಹೇಳುವಂಥವನಾದ–ಹೇ ಮುನಿಯೇ! ಸಾಯಾಹ್ನ ಪ್ರದೋಷಕಾಲದಲ್ಲಿ ಸತ್ಯನಾರಾಯಣ ಪೂಜೆಯನ್ನು ಮಾಡಿ ಉತ್ತಮವಾದಂಥಾ ಭಕ್ಷ್ಯಗಳನ್ನು ನಾರಾಯಣನಿಗೆ ಸಮರ್ಪಣೆ ಮಾಡಬೇಕು. ಪಕ್ವವಾದ ಕದಳೀ ಫಲ, ಕ್ಷೀರ, ಘೃತ, ಶರ್ಕರ (ಸಿಕ್ಕದಿದ್ದರೆ ಬೆಲ್ಲವೂ ಆದೀತು) ಗೋಧೂಮಪಿಷ್ಟ (ದೊರೆಯದಿದ್ದರೆ ಅಕ್ಕಿಯ ರವೆಯೂ ಆದೀತು). ಇವುಗಳಿಂದ ಭಕ್ಷ್ಯವನ್ನು ಮಾಡಿ ದೇವರಿಗೆ ಸಮರ್ಪಿಸಿ ಆಪ್ತ ಜನರು ಮಿತ್ರರು ಬಂಧುಗಳು ಕೂಡಿಕೊಂಡು ಕಥಾಶ್ರವಣಮಾಡಿ ಬ್ರಾಹ್ಮಣರಿಗೆ ದಕ್ಷಿಣೆ ತಾಂಬೂಲಾದಿಗಳನ್ನು ಕೊಟ್ಟು ನಂತರ ಭೋಜನ ಮಾಡಬೇಕು. ಈ ಪ್ರಕಾರ ನಾಲ್ಕು ವರ್ಷ ವ್ರತಗಳನ್ನು ಮಾಡಿ ಆದಿ ಮಧ್ಯ ಅಂತ್ಯಗಳಲ್ಲಾದರೂ ಉದ್ಯಾಪನೆಯನ್ನು ಮಾಡಿದರೆ ಪೂರ್ಣ ಫಲ ಪ್ರಾಪ್ತವಾಗುವುದು".

ಪೂರ್ವದಲ್ಲಿ ಈ ವ್ರತವನ್ನು ಯಾರು ಮಾಡಿದರು ಎಂದು ಪ್ರಶ್ನಿಸಿದಾಗ ಶ್ರೀ ವಿಷ್ಣುವು ಈ ಪ್ರಕಾರ ಹೇಳುವಂಥವನಾದ. ಕಾಶಿಯಲ್ಲಿ ರಮ್ಯನೆಂಬೊಬ್ಬ ಬ್ರಾಹ್ಮಣನು ಭಿಕ್ಷಾಟನೆಗಾಗಿ ಊರೂರು ಸಂಚಾರ ಮಾಡುತ್ತಿರಲು ಭಗವಂತನು ಒಬ್ಬ ವೃದ್ಧ ಬ್ರಾಹ್ಮಣನ ರೂಪದಲ್ಲಿ ಅವನಿಗೆ ತೋರಿಸಿಕೊಂಡು ಅವನ ಕಷ್ಟದ ಪರಿಹಾರಕ್ಕಾಗಿ ಸತ್ಯನಾರಾಯಣನ ಪೂಜೆ ಮಾಡೆಂದು ಅವನಿಗೆ ಉಪದೇಶಿಸಿ ಅದರ ವಿಧಾನಗಳನ್ನೆಲ್ಲಾ ಹೇಳಿಕೊಟ್ಟು ಅದೃಶ್ಯನಾಗುವಂಥವನಾದ. ಮರುದಿನ ಆ ಬ್ರಾಹ್ಮಣನು ಸತ್ಯನಾರಾಯಣ ಪೂಜೆ ಮಾಡಬೇಕೆಂದು ಸಂಕಲ್ಪಿಸಿಕೊಂಡು ಭಿಕ್ಷೆಗೆ ಹೊರಡುವಂಥವನಾದಾಗ ಅವನಿಗೆ ಬಹಳ ದ್ರವ್ಯ ದೊರಕುವಂಥಾದ್ದಾಯಿತು. ಆದ್ದರಿಂದ ಅತನು ಸತ್ಯನಾರಾಯಣ ವ್ರತವನ್ನುಮಾಡಿ ಸರ್ವ ದುಃಖದಿಂದ ಮುಕ್ತನಾಗಿ ಸಕಲ ಸಂಪತ್ತಿನಿಂದ ಯುಕ್ತನಾಗಿ ಶ್ರೀಮಂತನಾಗುವವನಾದ, ಮಾತ್ರವಲ್ಲದೆ ಸಮಸ್ತಪಾಪದಿಂದ ವಿಮುಕ್ತನಾಗಿ ಮೋಕ್ಷವನ್ನೂ ಹೊಂದುವಂಥವನಾದ. ಈ ಪ್ರಕಾರ ಮಹಾ ವಿಷ್ಣುವು ನಾರದನಿಗೆ ಹೇಳಿದನೆಂದು ಸೂತಪುರಾಣಿಕರು ಶೌನಕಾದಿ ಮುನಿಗಳಿಗೆ ಹೇಳುವಂಥವರಾದರು ಇದು ಲೋಕದಲ್ಲಿ ಇತರರಿಗೆ ಹೇಗೆ ತಿಳಿಯುವಂತಾಯಿತೆಂದು ಕೇಳಿದ್ದಕ್ಕೆ ಸೂತಪುರಾಣಿಕರು ಈ ಪ್ರಕಾರ ಹೇಳುವಂತವರಾದರು. ಏನೆಂದರೆ ಈ ಬ್ರಾಹ್ಮಣನು ಸತ್ಯನಾರಾಯಣ ಪೂಜೆ ಮಾಡುತ್ತಿರುವಾಗ ಕಟ್ಟಿಗೆ ಹೊರುವವನೊಬ್ಬನು ಅಲ್ಲಿಗೆ ಬಂದು ಆ ಬ್ರಾಹ್ಮಣನಿಗೆ ನಮಸ್ಕಾರಮಾಡಿ ಇದೇನೆಂದು ಕೇಳಿದಾಗ ಬ್ರಾಹ್ಮಣನು ಅವನಿಗೆ ಈ ವ್ರತದ ವಿಧಾನವನ್ನು ಹೇಳುವಂಥವನಾದ. ಅವನಾ ಪೂಜೆ ಮಾಡಬೇಕೆಂದು ನಿಶ್ಚಯಿಸಿ ಕೊಂಡು ಅಲ್ಲಿಂದ ಹೊರಟು ಹೋಗಿ ಕಟ್ಟಿಗೆ ಮಾರುತ್ತಿರುವಾಗ ಅವನಿಗೆ ಒಂದಕ್ಕೆರಡು ಲಾಭದೊರೆಯುವಂತಾಯಿತು. ಆ ದ್ರವ್ಯದಿಂದ ಅವನು ಕದಳೀ ಫಲ ಇತ್ಯಾದಿ ಸಾಮಗ್ರಿಗಳನ್ನು ಕೊಂಡುಕೊಂಡು ಆ ವ್ರತವನ್ನು ಮಾಡಿ ಅತಿಸಂತೋಷದಿಂದ ಈ ಲೋಕದಲ್ಲಿ ಸುಖದಿಂದ ಇದ್ದವನಾಗಿ ನಂತರ ಸತ್ಯಲೋಕಕ್ಕ ಹೋಗುವಂಥವನಾದ.

ಇನ್ನೊಂದು ಕಥೆಯನ್ನು ಸೂತಪುರಾಣಿಕರು ಹೇಳುವಂಥವರಾದರು. ಅದೇನೆಂದರೆ, ಪ್ರಧ್ವೀಪಾಲಕನೆಂಬ ರಾಜನು ತನ್ನ ಪತ್ನಿಯೊಂದಿಗೆ ನದೀ ತೀರದಲ್ಲಿ ಸತ್ಯನಾರಾಯಣ ವ್ರತವನ್ನು ಮಾಡುತ್ತಿರುವುದನ್ನು ಮಧು ಎಂಬ ವೈಶ್ಯನೊಬ್ಬನು ಕಂಡು ರಾಜನಕೂಡೆ ಇದೇನೆಂದು ಪ್ರಶ್ನಿಸಿದಾಗ ತಾನು ಸಂತತಿಗಾಗಿಸತ್ಯನಾರಾಯಣ ವ್ರತವನ್ನು ಮಾಡುತ್ತಿದ್ದೇನೆಂದು ರಾಜನು ಹೇಳಿದ್ದನ್ನು ವೈಶ್ಯನು ಕೇಳಿ ತನಗೂ ಸಂತತಿಯಾದರೆ ತಾನು ಕೂಡಾ ಆ ವ್ರತವನ್ನು ಮಾಡುವುದಾಗಿ ಪ್ರಾರ್ಥಿಸುವಂಥವನಾದ. ನಂತರ ಸತ್ಯನಾರಾಯಣನ ಅನುಗ್ರಹದಿಂದ ಅವನಿಗೆ ಕಲಾವತಿ ಎಂಬ ಕನ್ಯೆಯು ಹುಟ್ಟುವಂಥವಳಾದಳು. ಅವಳಿಗೆ ವಿವಾಹ ಮುಗಿದರೂ ಹೇಳಿಕೊಂಡಂಥಾ ವ್ರತವನ್ನು ಮಾಡಲು ಆ ವೈಶ್ಯನು ಮರೆತುಬಿಟ್ಟದ್ದರಿಂದ ಸತ್ಯನಾರಾಯಣನು ಅವನ ಮೇಲೆ ಮಹಾಸಿಟ್ಟುಗೊಂಡು ಅವನಿಗೆ ಭಯಂಕರವಾದ ದುಃಖಪ್ರಾಪ್ತಿಯಾಗಲೆಂದು ಶಾಪಕೊಡುವಂಥವನಾದ. ಅದರ ಫಲವಾಗಿ ಆ ವೈಶ್ಯನು ಕಳ್ಳನೆಂದು ಸೆರೆಹಿಡಿಯಲ್ಪಟ್ಟು ಬಂಧಿಸಲ್ಪಟ್ಟ. ಅವನ ಹೆಂಡತಿಯೂ ವ್ಯಾಧಿಯಿಂದ ಪೀಡಿತಳಾದಳು. ಅವನ ಮಗಳು ಅನ್ನಕ್ಕೋಸ್ಕರ ಅಲ್ಲಲ್ಲಿ ತಿರುಗಾಡುತ್ತಿರಲು ಸತ್ಯನಾರಾಯಣ ಪೂಜೆಮಾಡುತ್ತಿರುವ ಒಂದು ಮನೆಯಲ್ಲಿ ಅವಳಿಗೆ ದೇವರ ಪ್ರಸಾದವು ಸಿಕ್ಕಿತು. ಮನೆಗೆ ಬಂದು ತಾಯಿಯ ಕೂಡೆ ಈ ವರ್ತಮಾನವನ್ನು ಹೇಳಿದಾಗ ತಾಯಿಗೆ ಕೂಡಲೇ ಸತ್ಯನಾರಾಯಣ ಪೂಜೆಯ ನೆನಪಾಗಿ ಅವಳೂ ಪೂಜೆಮಾಡಲು ಅವಳ ಗಂಡನು ಬಂಧ ವಿಮುಕ್ತನಾಗಿ ಮನೆಗೆ ಬಂದು ಸೇರುವಂಥವನಾದ. ನಂತರ ಪ್ರತಿ ಮಾಸದಲ್ಲೂ ಪೌರ್ಣಿಮಾ ಸಂಕ್ರಾಂತಿ ಈ ಪರ್ವ ಕಾಲದಲ್ಲಿ ಸತ್ಯನಾರಾಯಣ ಪೂಜೆಯನ್ನು ಮಾಡುವಂಥವನಾದ. ಈ ಮರ್ತ್ಯ ಲೋಕದಲ್ಲಿ ಸುಖವನ್ನನುಭವಿಸಿ ಅಂತ್ಯ ಕಾಲದಲ್ಲಿ ಸತ್ಯಲೋಕವನ್ನು ಹೊಂದುವಂಥವನಾದ.

ಸೂತಪುರಾಣಿಕರು ಮತ್ತೊಂದು ಕಥೆಯನ್ನು ಹೇಳುವಂಥವರಾದರು. ಅದು ಅಂಗಧ್ವಜನೆಂಬೊಬ್ಬ ರಾಜನು ಸತ್ಯನಾರಾಯಣ ಪ್ರಸಾದವನ್ನು ತ್ಯಾಗಮಾಡಿದುದಕ್ಕಾಗಿ ಅತೀ ದುಃಖವನ್ನು ಹೊಂದಿದ ಕಥೆ. ರಾಜನು ಬೇಟೆಗೆ ಹೋಗಿ ಹಿಂದೆ ಬರುತ್ತಿರಲು ಕೆಲವು ಗೋಪಾಲಕರು ಒಂದು ಕಡೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿ ಪ್ರಸಾದವನ್ನು ರಾಜನ ಮುಂದೆ ತಂದಿಡಲು ಆತನು ಪ್ರಸಾದ ಪರಿತ್ಯಾಗ ಮಾಡಿ ಹೊರಟುಹೋದುದರಿಂದ ಅವನ ನೂರು ಮಂದಿ ಮಕ್ಕಳು ನಾಶರಾದರು. ಇದರ ಪರಿಹಾರಾರ್ಥಕ್ಕಾಗಿ ಆತನು ಪೂಜೆಯನ್ನು ಮಾಡಿದ ಕೂಡಲೇ ಅವನು ಪುನಃ ಆ ಮಕ್ಕಳನ್ನು ಹೊಂದಿ ಅಂತ್ಯ ಕಾಲದಲ್ಲಿ ಸಾಕ್ಷಾತ್ ವೈಕುಂಠವನ್ನು ಹೊಂದುವಂಥವನಾದನು.

ಯಾವಾತನು ನಿತ್ಯದಲ್ಲಿ ಈ ಸತ್ಯನಾರಾಯಣ ಕಥೆಯನ್ನು ಪಠನಮಾಡುತ್ತಾನೋ ಯಾವಾತನು ಇದನ್ನು ಶ್ರವಣಮಾಡುತ್ತಾನೋ ಅವನ ಸಮಸ್ತ ದುಃಖವೂ ಪಾಪವೂ ನಾಶಹೊಂದುವಂಥಾದ್ದಾಗಿ ಅವನು ಸುಖದಿಂದ ಇರುವಂಥವನಾಗುತ್ತಾನೆ ಇದರಲ್ಲಿ ಸಂಶಯವಿಲ್ಲ. ಎಂಬುದಾಗಿ ಸೂತ ಪುರಾಣಿಕರು ಶೌನಕಾದಿ ಮುನಿಗಳಿಗೆ ನಿರೂಪಣಮಾಗಿದರೆಂದು ಸ್ಕಂದ ಪುರಾಣದ ರೇವಾಖಂಡದಲ್ಲಿ ಹೇಳುವಂಥಾದ್ದಾಗಿದೆ.

ಲೋಕದಲ್ಲಿ ಜನರು ಬಹಳ ದುಃಖಗಳನ್ನು ಅನುಭವಿಸುತ್ತಿರುವುದನ್ನು ಕಂಡು ಮನನೊಂದು ನಾರದ ಮುನಿಗಳು ಶ್ರೀ ವಿಷ್ಣುವಿನ ಹತ್ತಿರ ಹೋಗಿ ಮನುಷ್ಯರು ಇಹಪರಗಳಲ್ಲಿ ನಿರಂತರ ಸುಖವನ್ನು ಹೊಂದುವ ಈ ಸುಲಭೋಪಾಯವನ್ನು ಆತನಿಂದ ತಿಳಿದುಕೊಂಡರೆಂಬ ವಿಷಯವನ್ನು ಸೂತ ಪುರಾಣಿಕರು ಶೌನಕಾದಿ ಮುನಿಗಳಿಗೆ ಹೇಳುವಂಥವರಾದರು. ಎಲ್ಲೆಲ್ಲಿಯೂ ಈ ಸಾಧನವು ಜನರಿಗೆ ಸುಲಭದಲ್ಲಿ ದೊರೆಯುವಂತೆ ಕೆಲವರು ಮಹಾತ್ಮರು ಇದನ್ನು ಸಣ್ಣ ಪುಸ್ತಕವಾಗಿ ಛಾಪಿಸುವಂಥವರಾದರು. ನಾವೆಲ್ಲರೂ ಅಂತಹ ಪುಸ್ತಕವನ್ನು ಕೊಂಡುಕೊಂಡು ಈ ಸತ್ಯನಾರಾಯಣ ಪೂಜೆಯ ಮಹತ್ವವನ್ನು ಅರಿತವರಾಗಿ ಆಗಾಗ್ಗೆ ಆ ಪೂಜೆಯನ್ನು ಮಾಡಿಸಿದ್ದಾದರೆ ನಮ್ಮ ದೇಶದಲ್ಲಿರುವ ದಾರಿದ್ರ್ಯ ದುಃಖಗಳು ನಾಶವಾಗಿ ನಮ್ಮ ದೇಶದವರೆಲ್ಲರೂ ಕ್ಷಿಪ್ರದಲ್ಲಿಯೇ ಸಾಕ್ಷಾತ್ ವೈಕುಂಠಕ್ಕೆ ಹೋಗುವಂಥವರಾಗಬಹುದು. ಸುಖ ಪ್ರಾಪ್ತಿಯು ಇಷ್ಟು ಸುಲಭದಲ್ಲಿರುವಾಗ ಇದನ್ನು ನಂಬದೆ ಈಗಿನ ಕೆಲವು ತರುಣರು ಪುರಾಣದ ಈ ರೀತಿಯ ಕಥೆಗಳೆಲ್ಲವೂ ಇತರರ ಕಷ್ಟಾರ್ಜಿತ ದ್ರವ್ಯವನ್ನು ಸುಲಭೋಪಾಯದಿಂದ ಅಪಹರಿಸುವುದಕ್ಕಾಗಿ ಕೆಲವರಿಂದ ತಯಾರಿಸಲ್ಪಟ್ಟವುಗಳೆಂದು ಹೇಳುತ್ತಿರುವುದು ಶೋಚನೀಯವಲ್ಲವೇ?

**ಪುರಾಣಿಕ.**


THE

**PANGAL NAYAK BANK**

**LIMITED.**

**ESTABLISHED 1920.**

**Paid up Capital: Rs. 1,82,100/-**

***Head Office*: UDIPI.**

**Branches: MANGALORE, KATAPADI and KANHANGAD.**

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.



**ನವಭಾರತ ಬುಕ್ ಡಿಪೋದಲ್ಲಿ**

ಸಾಮಾನ್ಯ ಯಾವತ್ತೂ

**ಕನ್ನಡ ಗ್ರಂಥಗಳು**

ದೊರೆಯುತ್ತವೆ.

# ಕಾಂಗ್ರೆಸ್ ಮಂತ್ರಿಗಳು ಹೇಗಿರಬೇಕು?

## ಗಾಂಧಿಜಿಯವರ ಸೂಚನೆಗಳು.

ಕಳೆದ ವಾರದ ಹರಿಜನ ಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರು ಕಾಂಗ್ರೆಸಿನಲ್ಲಿ ಹೇಗೆ ಅಧಿಕಾರ ಸ್ವೀಕರಿಸುವ ಮನೋಪ್ರವೃತ್ತಿಯುಂಟಾಯಿತು? ಕಾಂಗ್ರೆಸ್ ಮಂತ್ರಿಗಳು ಹೇಗಿರಬೇಕು? ಮತ್ತು ಏನು ಮಾಡಬೇಕೆಂಬ ಕುರಿತು ಬರೆದಿರುವ ಲೇಖನದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಹಿಂದುಸ್ಥಾನದ ಸ್ವಾತಂತ್ರ್ಯ [illegible] ಗಾಗಿ ಇಂಡಿಯಾ ಆಕ್ಟಿನಿಂದ ಯಾವ ಪ್ರಯೋಜನವೂ [illegible] [illegible] [illegible] ಮತ್ತು [illegible] [illegible] ಬ್ರಿಟಿಷರ [illegible] [illegible] [illegible] ಸಾಧ್ಯ [illegible] [illegible] [illegible] [illegible] ಕಾಂಗ್ರೆಸ್ [illegible] [illegible] [illegible] [illegible] [illegible] [illegible] ಸಲು ಸಾಧ್ಯವಿಲ್ಲ. ಆದರೆ ಅವರ ಹಿಂದಿಯಲ್ಲಿ, ಇಂಡಿಯಾ ಆಕ್ಟನ್ನು ಸ್ವೀಕರಿಸಿ ತೃಪ್ತಿಗೊಂಡು ಆಳರಸರ ಸೂರೆಗೆ ಸಮ್ಮತಿಸಬಹುದೆಂಬ ನಿರೀಕ್ಷೆಯಿದೆ. 30ಮಿಲ್ಯ ಮತದಾರರ ಪ್ರತಿನಿಧಿಗಳು ಇಂಡಿಯಾ ಆಕ್ಟಿನ ಉದ್ದೇಶವನ್ನು ತಡೆಗಟ್ಟಲು ತಮ್ಮ ಕೈವಶವಾಗುವ ಅಧಿಕಾರವನ್ನುಪಯೋಗಿಸುವಷ್ಟರ ಬುದ್ಧಿವಂತಿಕೆ ಮತ್ತು ಆತ್ಮವಿಶ್ವಾಸವುಳ್ಳವರಾದರೆ ಬ್ರಿಟಿಷರ ಆಶೆ ನಿರಾಶೆಯಾಗುವುದು. ಇಂಡಿಯಾ ಆಕ್ಟನ್ನು ಅವರ ಉದ್ದೇಶಕ್ಕೆ ಪ್ರತಿ ವಿರುದ್ಧವಾಗಿ, ನಮಗೆ ಬೇಕಾದಂತೆ ಉಪಯೋಗಿಸಿದರಾಯಿತು

ಮಂತ್ರಿಗಳು ಕೂಡಲೆ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರಬಹುದು ಅಬ್ಕಾರಿ ಆದಾಯದಿಂದ ಶಿಕ್ಷಣಕ್ಕಾಗಿ ಹಣ ತುಂಬಿಸುವ ಬದಲಿಗೆ ಶಿಕ್ಷಣವನ್ನು ಸ್ವಾವಲಂಬಿಯಾಗಿ ಮಾಡಬಹುದು ಇದು ವಿಸ್ಮಯಕರವಾಗಿ ತೋರಬಹುದು, ಆದರೆ ಅದು ವ್ಯವಹಾರ್ಯ ಮತ್ತು ವಿವೇಕಪರವಾದುದೆಂದೇ ನನ್ನ ಅಭಿಪ್ರಾಯ ಕಾರಾಗೃಹಗಳನ್ನು ಕಾರ್ಯಾಲಯ ಮತ್ತು ಸುಧಾರಣೆಯ ನಿವಾಸಗಳನ್ನಾಗಿ ಮಾರ್ಪಡಿಸಬಹುದು. ಅವು ಸ್ವಾವಲಂಬಿಯಾಗಿ ವಿದ್ಯಾಪ್ರಚಾರಕವಾಗಬೇಕು. ಗಾಂಧಿ ಅರ್ವಿನ್ ಒಪ್ಪಂದದ ಪ್ರತಿಕೆ ಬಡವರಿಗೆ ಉಪ್ಪು ಧರ್ಮಾರ್ಥ ಸಿಗುವಂತಾಗಬೇಕು. ಎಲ್ಲರಕ್ಕೂ [illegible] ತೆಗೆದುಕೊಳ್ಳಬೇಕು. [illegible] [illegible] ಮತ್ತು ಬೇಸಾಯಗಾರರ ಕುರಿತು ಹೆಚ್ಚಿನ ಲಕ್ಷ್ಯ ಕೊಡಬೇಕು. ನನ್ನ ಮನಸ್ಸಿಗೆ ಹೊಳೆದಂತೆ ಸೂಚಿಸುವ ವಿಷಯಗಳು ಇವನ್ನು ಯಾವ ಆಕ್ಷೇಪವೂ ಇಲ್ಲದೆ ಕೈಕೊಳ್ಳಬಹುದು.

ಮಂತ್ರಿಗಳು ಹೇಗೆ ನಡೆಯಬೇಕು? ಯಾವ ಮಾದರಿ ತೋರಿಕೊಡಬೇಕು? ಅವರು ನಾಯಕರಾದ ಕಾಂಗ್ರೆಸಿನ ಪ್ರೆಸಿಡೆಂಟರು ಮೂರನೇ ತರಗತಿಯಲ್ಲಿ ಪ್ರಯಾಣಮಾಡುತ್ತಿರುವಾಗ ಅವರು ಫಸ್ಟ್ ಕ್ಲಾಸಿನಲ್ಲಿ ತಿರುಗಾಡುವರೇ? ಕಾಂಗ್ರೆಸ್ ಪ್ರೆಸಿಡೆಂಟರು, ಖಾದಿ ಧೋತಿ, ಜಿಬ್ಬ ಮತ್ತು ವೇಸ್ಟ್ ಕೋಟಿನಿಂದ ತೃಪ್ತರಾಗಿರುತ್ತಾರೆ. ಮಂತ್ರಿಗಳಿಗೆ ಪಾಶ್ಚಾತ್ಯ ರೀತಿಯ ವೇಷಭೂಷಣ ವೆಚ್ಚಾದಿಗಳು ಬೇಕೇ? ಕಳೆದ 17ವರ್ಷಗಳಿಂದ ಕಾಂಗ್ರೆಸ್ ಪಕ್ಷೀಯರು ಕಠಿಣ ಸರಳ ಜೀವನ ನಡೆಸಲು ತರಬೇತಿ ಹೊಂದಿರುವರು ಅಂತಹದೇ ಆದ ಸರಳತನವನ್ನು ಕಾಂಗ್ರೆಸ್ ಮಂತ್ರಿಗಳು ತಮ್ಮ ಆಡಳಿತದಲ್ಲಿ ಜ್ಯಾರಿಗೆ ತರಬೇಕು. ಅದರಿಂದ ಅವರು ನಾಚಿಕೆಪಡಬಾರದು, ಅಭಿಮಾನಪಡಬೇಕು ನಾವು ಇಡೀ ಲೋಕದಲ್ಲಿ ಅತ್ಯಂತ ಬಡ ಜನಾಂಗವು ಹಲವು ಮಿಲ್ಯ ಜನರು ಅರೆ ಹೊಟ್ಟೆಯಲ್ಲಿ ನರಳಿಕೊಂಡಿರಬೇಕಾಗಿರುವುದು ಪ್ರಜಾ ಪ್ರತಿನಿಧಿಗಳು ತಮ್ಮನ್ನು ಆರಿಸಿದ ಜನರಿಗಿಂತ ತೀರ ಭಿನ್ನವಾದ ರೀತಿಯಲ್ಲಿ ಜೀವಿಸಬಾರದು ವಿಜಯಿಗಳಾಗಿ ಮತ್ತು ಆಳರಸರಾಗಿ ಬಂದಿರುವ ಆಂಗ್ಲೇಯರು, ತಮ್ಮ ಅಧೀನರಾದ ಜನರ ಅಸಹಾಯಕ ಪರಿಸ್ಥಿತಿಯ ಗೊಡವೆಯೇ ಇಲ್ಲ ಜೀವನ ಪ್ರಮಾಣವನ್ನು ಸ್ಥಾಪಿಸಿದರು ಕಾಂಗ್ರೆಸ್ ಮಂತ್ರಿಗಳು ಗವರ್ನರರು ಮತ್ತು ಸಿವಿಲ್ ಸರ್ವೀಸಿನವರನ್ನು ಅನುಕರಿಸದೆ ಸರಳ ರೀತಿಯ ಜೀವನ ನಡೆಸಿದರೆ ಕಾಂಗ್ರೆಸಿನವರಿಗೂ ಆಳರಸರಿಗೂ ಇರುವ ಮನೋಪ್ರವೃತ್ತಿಯ ಭೇದವನ್ನು ತೋರಿಸಿದಂತಾಗುವುದು. 1920ರಿಂದ ನಡೆದುಬಂದ ಸರಳತನ ಮತ್ತು ನಿರಾಡಂಬರವನ್ನು ಕಾಂಗ್ರೆಸ್ ಮಂತ್ರಿಗಳು ಯಥಾ ಪ್ರಕಾರ ನಡೆಸಿದರೆ ಅವರ ಜೀವನದಲ್ಲಿ ಅನೋನ್ಯತೆಯನ್ನುಂಟುಮಾಡಿ ನೌಕರರ ಮನೋಪ್ರವೃತ್ತಿಯನ್ನ ಕೂಡಾ ಬದಲುಮಾಡಲು ಸಾಧ್ಯವಿದೆ.

ಸರಳತನವೆಂದರೆ ಕೊಳಕುತನವಲ್ಲ. ಅದರಲ್ಲಿಯೂ ಒಂದು ಸೌಂದರ್ಯ ಮತ್ತು ಕಲೆಯಿದೆ ಸರಳವಾಗಿಯೂ, ನಿರ್ಮಲವಾಗಿಯೂ ಗಂಭೀರವಾಗಿಯೂ ಇರಲು ಹಣಬೇಕಾಗಿಲ್ಲ ಆಡಂಬರ ವಿಜೃಂಭಣೆಗಳು ಹಲವು ವೇಳೆ ಒರಟಾಗಿರುವುವು

ಹಿಂದೂದೇಶವನ್ನು ಹಿಂದು ಮತ್ತು ಮುಸಲ್ಮಾನರಾಗಿ ವಿಭಾಗಿಸಲು ಆಂಗ್ಲೇಯ ಪತ್ರಿಕೆಗಳು ಪ್ರಯತ್ನಮಾಡಿರುವವು ಕಾಂಗ್ರೆಸಿಗೆ ಬಹುಪಕ್ಷವಿರುವ ಪ್ರಾಂತಗಳು ಹಿಂದುಗಳವು, ಇತರ ಪ್ರಾಂತಗಳು ಮುಸಲ್ಮಾನರವೆಂದು ಭೇದಮಾಡಲಾಗಿದೆ ಇದು ತಿರಸ್ಕಾರಾರ್ಹ ಸುಳ್ಳೆಂಬುದರ ಗೊಡವೆಯೇ ಅವರಿಗಿಲ್ಲ ಇಂತಹ ಸಂಶಯಕ್ಕೇನಾದರೂ ಆಸ್ಪದವು ದೊರೆಯದಂತೆ ಆ ಪ್ರಾಂತಗಳ ಕಾಂಗ್ರೆಸ್ ಮಂತ್ರಿಗಳು ನಡೆಯುವರೆಂದು ನನ್ನ ನಿರೀಕ್ಷೆ. ಹಿಂದು, ಮುಸಲ್ಮಾನ, ಕ್ರೈಸ್ತ ಮತ್ತು ಪಾರ್ಸಿಗಳೆಲ್ಲರೂ ತಮಗೆ ಒಂದೇ ರೀತಿ ಎಂಬುದನ್ನು ಅವರು ತೋರಿಸಬೇಕು ಉಚ್ಚ ಮತ್ತು ನೀಚ ಜಾತಿಯ ಹಿಂದುಗಳೆಂಬ ಭೇದವು ಅವರಿಗಿರಬಾರದು. ಎಲ್ಲರೂ ಭಾರತಮಾತೆಯ ಪುತ್ರರು, ಅವರಲ್ಲಿ ಮೇಲು ಕೀಳೆಂಬ ಭೇದವಿಲ್ಲೆಂಬುದನ್ನು ಕಾಂಗ್ರೆಸಿನವರು ಸಿದ್ಧಗೊಳಿಸುವಂತಾಗಬೇಕು ಬಡತನ ಮತ್ತು ಸೇವಾಗುಣವು ಎಲ್ಲರಿಗೂ ಸರ್ವಸಾಮಾನ್ಯವಾದುದು ಆಂಗ್ಲೇಯರೀತಿನೀತಿಗಳು ಮಾತ್ರ ನಮಗಿಂತ ತೀರಾಭಿನ್ನವಾದುವು. ಭಿನ್ನವಾದ ಎರಡು ಗುರಿಗಳ ಪ್ರತಿನಿಧಿಗಳೀಗ ಒಟ್ಟು ಸೇರಿ ಕೆಲಸಮಾಡಬೇಕಾಗಿರುವುದು ತಮ್ಮ ತಮ್ಮ ಚರಿತ್ರೆ, ಗುರಿ ಮತ್ತು ಮನೋಪ್ರವೃತ್ತಿಯಿಂದ ಒಬ್ಬರೊಬ್ಬರನ್ನು ಮತಾಂತರಪಡಿಸಲು ಅವರೀಗ ಒಟ್ಟಾಗಿರುವರೆಂದೇ ನನ್ನ ಭಾವನೆ. ಕೂಟಗಳು ಆತ್ಮರಹಿತವಾಗಿವೆ. ಆದರೆ ಅವನ್ನು ನಡಿಸುವವರು ಹಾಗಲ್ಲ. ಆಂಗ್ಲೇಯನು ಅಥವಾ ಆಂಗ್ಲೇಯ ರೀತಿ ನೀತಿಯನ್ನನುಸರಿಸಿರುವ ಹಿಂದೀಯನು, ಹಿಂದೀ ಅಂದರೆ ಕಾಂಗ್ರೆಸಿನ ದೃಷ್ಟಿಯನ್ನರಿತುಕೊಂಡನೆಂದರೆ ಕಾಂಗ್ರೆಸು ಗೆದ್ದಂತಾಯಿತು. ಆಗ ಒಂದು ಬಿಂದು ರಕ್ತವನ್ನೂ ಸುರಿಸದೆ ಸಂಪೂರ್ಣ ಸ್ವಾತಂತ್ರ್ಯವು ನಮ್ಮ ಬಳಿಗೆ ಬರುವುದು. ನಾನುಹೇಳುವ ಅಹಿಂಸಾತ್ಮಕರೀತಿ ಎಂದರೆ ಇದೇ. ಇದು ಆದರ್ಶಪರವಿರಬಹುದು. ಅವ್ಯವಹಾರ್ಯವಾಗಿರಬಹುದು. ಆದರೂ ಕಾಂಗ್ರೆಸ್ ಪಕ್ಷೀಯರೂ ಇತರ ಹಿಂದೀಯರೂ ಆಂಗ್ಲೇಯರೂ ಅದನ್ನರಿತುಕೊಳ್ಳುವುದು ಲೇಸು. ಇಂಡಿಯಾ ಆಕ್ಟನ್ನೊಪ್ಪಿ ಅದರಂತೆ ಕೆಲಸಮಾಡಲು ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿರುವುದಲ್ಲ. ಕಾಂಗ್ರೆಸಿನ ಗುರಿಯಾದ ಸಂಪೂರ್ಣ ಸ್ವರಾಜ್ಯ ಸಾಧನೆಯ ಮಾರ್ಗದಲ್ಲಿ ಇಷ್ಟರವರೆಗೆ ತೆಗೆದುಕೊಳ್ಳದ ಅದೊಂದು ಹೊಸಹೆಜ್ಜೆ ಇದು ಒಂದೆಡೆ ರಕ್ತಪಾತದ ಕ್ರಾಂತಿ ಮತ್ತು ಇನ್ನೊಂದೆಡೆ ಸಾಮುದಾಯಿಕ ಕಾಯಿದೆ ಭಂಗವನ್ನು ನಿವಾರಿಸಿ ಸಂಪೂರ್ಣ ಸ್ವಾತಂತ್ರ್ಯ ಸಾಧಿಸುವ ಹೊಸ ಪ್ರಯತ್ನ. ಇದಕ್ಕೆ ಭಗವಂತನ ಆಶೀರ್ವಾದದೊರೆಯಲಿ.


ಗಿಡಗಳು ಮತ್ತು ಬೀಜಗಳು

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ ಗಿಡಗಳು, ಬೀಜಗಳು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ. ಉಚಿತವಾಗಿ ರವಾನಿಸುತ್ತೇವೆ.

ಡಿ. ಗುರಪ್ಪ ಅಂಡ್ ಸನ್ಸ್
ಗಿಡ, ಬೀಜ ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್, ದೊಡ್ಡ ಮಾವಳ್ಳಿ,
ಬೆಂಗಳೂರು ಸಿಟಿ.



ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ— ಗುಡಪಿಪ್ಪಲಿ (ಲಿವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ

## ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

### ದ. ಕ. ಜಿಲ್ಲಾ ಬೋರ್ಡು ಸಭೆ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಅಭಿನಂದನೆ. ಬೋರ್ಡು ಆಫೀಸಿನಲ್ಲಿ ರಾ. ಧ್ವಜಕ್ಕೆ ಪುರಸ್ಕಾರ.

ಕಳೆದ ತಾ. ೧೪ನೇ ಬುಧವಾರ ಪೂರ್ವಾಹ್ನ ೧೧ ಘಂಟೆಗೆ ಸರಿಯಾಗಿ ದಕ್ಷಿಣಕನ್ನಡ ಜಿಲ್ಲಾಬೋರ್ಡಿನ ಸಭೆಯು ಸೇರಿತು. ಬೋರ್ಡಿನ ಅಧ್ಯಕ್ಷರಾದ ದಿವಾನ್ ಬಹದ್ದೂರು ಬಿ ಮಹಾಬಲ ಹೆಗ್ಗಡೆಯವರು ಬೋರ್ಡು ಆಫೀಸಿಗೆ ಬಂದಿದ್ದರು. ಸ್ವಲ್ಪ ದೇಹಾಲಸ್ಯವಿದ್ದ ಕಾರಣ ಅಧ್ಯಕ್ಷತೆ ವಹಿಸಲಿಲ್ಲ. ಉಪಾಧ್ಯಕ್ಷರಾದ ಶ್ರೀ ಎ. ಸಿ ಗೊನ್ಸಾಲಿಸರು ಅಧ್ಯಕ್ಷತೆವಹಿಸಿದ್ದರು.

### ಪ್ರಶ್ನೋತ್ತರಗಳು

ಹಿಂದಿನ ಸಭೆಯಲ್ಲಿ ಶ್ರೀ ಎ. ಬಿ ಶೆಟ್ಟಿಯವರು ಕೇಳಿದ್ದ ಕೆಲವು ಪ್ರಶ್ನೆಗಳಿಗೆ ಉತ್ತರಗಳು ಕೊಡಲ್ಪಟ್ಟವು ಬಾರ್ಕೂರಿನ ಸಮೀಪದ ಕಡವಿನ ವಿಷಯದಲ್ಲಿ ಇಂಜನಿಯರಿಂಗ್ ಇಲಾಖೆಯವರ ಸೂಚನೆಯಂತೆ ಕಡವಿನ ಕಂಟ್ರ್ಯಾಕ್ಟನ್ನು ಕೊಟ್ಟದುದಾಗಿ ಉತ್ತರ. ಉಪಾಧ್ಯಾಯರುಗಳ ಟ್ರಾನ್ಸ್‌ಫರ್ ಭತ್ತೆ ನೋದಲಾದ ಮತ್ತು ಇನ್ನು ಅನೇಕವಿಷಯಗಳ ಮೇಲೆ ಪ್ರಶ್ನೋತ್ತರಗಳಾದವು.

### ಠರಾವುಗಳು

ಪ್ರಶ್ನೋತ್ತರಗಳಾದ ಮೇಲೆ ಠರಾವುಗಳ ಪರಿಶೀಲನೆಯಾಗಿ ಮಂಜೂರುಮಾಡಲ್ಪಟ್ಟವು. ಉಡುಪಿ ಶ್ರೀಮತಿ ಮನೋರಮಾ ಬಾಯಿಯವರು ಮೊದಲನೆಯದಾಗಿ ಒಂದು ಠರಾವನ್ನು ಸೂಚಿಸಿ ಕಾಂಗ್ರೆಸ್ ಕಾರ್ಯಕಾರಿಮಂಡಲಿಯವರು ಅಧಿಕಾರ ಸ್ವೀಕರಿಸಲು ಅನುಮತಿಕೊಟ್ಟದಕ್ಕಾಗಿ ಅವರನ್ನು ವಂದಿಸಿದುದಲ್ಲದೆ ಮದ್ರಾಸಿನ ಪ್ರಧಾನ ಮಂತ್ರಿಗಳಾದ ಶ್ರೀ ಸಿ ರಾಜಗೋಪಾಲಾಚಾರ್ಯರೊಡನೆ ಈ ಬೋರ್ಡು ಸಹಕರಿಸಲು ನಿರ್ಧರಿಸುತ್ತದೆ, ಎಂದರು. ಡಾ. ವಿಠಲ ಶೆಟ್ಟಿಯವರು ಈ ಠರಾವನ್ನು ಅನುಮೋದಿಸಿದರು ಸರ್ವಾನುಮತಿಯಿಂದ ಅದು ಮಾನ್ಯವಾಯಿತು. ಆದಮೇಲೆ ಜಿಲ್ಲಾ ಬೋರ್ಡಿನ ಆಫೀಸಿನ ಶೃಂಗಾರದ ಬಗ್ಗೆ ತ್ರಿವರ್ಣದ ರಾಷ್ಟ್ರಧ್ವಜವನ್ನು ಇಡುವುದಕ್ಕೆ ಈ ಸಭೆಯು ನಿರ್ಧರಿಸುತ್ತದೆಂದು ಮತ್ತೊಂದು ಠರಾವನ್ನು ತಂದರು. ಅದೂ ಮಾನ್ಯವಾಯಿತು. ಅನಂತರ ಶ್ರೀಮತಿಯವರು ಬೋರ್ಡಿನ ಅಧೀನದಲ್ಲಿರುವ ಸ್ಕೌಟ್ (ಬಾಲಚಮೂ ಮತ್ತು ಗರ್ಲ್‌ಗೈಡ್) ದಳವನ್ನು ಬೇಡನ್‌ಪವೆಲ ಸಂಸ್ಥೆಯಿಂದ ಪ್ರತ್ಯೇಕಿಸಿ ಅದನ್ನು ಪಂಡಿತ ಮಾಲವೀಯರ ಸೇವಾಸಮಿತಿ ಚಮೂಮಂಡಲಕ್ಕೆ ಸೇರಿಸಬೇಕೆಂದು ಠರಾವುತಂದರು. ಶ್ರೀ ಬಿ ವೆಂಕಪ್ಪಶೆಟ್ಟಿಗಳು ಇದೇ ರೀತಿಯ ಠರಾವನ್ನು ತಂದಿದ್ದರು. ಒಂದೆರಡು ಸಣ್ಣ ತಿದ್ದುಪಡಿಯೊಂದಿಗೆ ಶ್ರೀ ಶೆಟ್ಟಿಗಳು ಮೊದಲಿನ ಠರಾವನ್ನು ಅಂಗೀಕರಿಸಿದರು.

### ಮಿ. ಜಫ್ರಿಯವರ ಪ್ರಶ್ನೆ

ಈ ಸಂದರ್ಭದಲ್ಲಿ ಬೋರ್ಡಿನ ಐರೋಪ್ಯ ಸದಸ್ಯರಾದ ಮಿ। ಜೆಫ್ರಿಯವರು ಚಮೂದಳವನ್ನು ಒಂದು ಸಂಸ್ಥೆಯಿಂದ ತೆಗೆಯುವ ಮತ್ತೊಂದರೊಡನೆ ಸೇರಿಸುವ ಅಧಿಕಾರವು ಬೋರ್ಡಿಗೆ ಇದೆಯೇ? ಎಂದು ಪ್ರಶ್ನಿಸಿದರು. ಡಾ. ವಿಟ್ಠಲ ಶೆಟ್ಟಿಯವರು ಉತ್ತರಕೊಡುತ್ತಾ ಚಮೂದಳವನ್ನು ಸ್ಥಾಪಿಸಿ ಅದರ ಶಿಕ್ಷಕರಿಗೆ (ಸ್ಕೌಟ್ ಮಾಸ್ಟರ್) ತರಬೇತಿಕೊಡುವ ಅಧಿಕಾರವು ಬೋರ್ಡಿಗೆ ಇರುವಾಗ ಮತ್ತು ಅದಕ್ಕಾಗಿ ಬೋರ್ಡ್ ಹಣವನ್ನು ವೆಚ್ಚ ಮಾಡುವಾಗ ಖಂಡಿತವಾಗಿಯೂ ಅದಕ್ಕೆ ಈ ಸಂಘವನ್ನು ಬೇರೆ ಸಂಘಕ್ಕೆ ಸೇರಿಸುವ ಅಧಿಕಾರವಿದೆಯೆಂದರು. ಠರಾವು ಮಾನ್ಯವಾಯಿತು.

### ಉಪಾಧ್ಯಾಯರ ಸಂಬಳದಲ್ಲಿ ಕಡಿತ!

ಪ್ರಾಥಮಿಕ ವಿದ್ಯಾಭ್ಯಾಸದ ಫಂಡಿನಲ್ಲಿ ಹಣವು ಬಹಳ ಕಡಿಮೆಯಿರುವುದರಿಂದಲೂ ಆ ಡೆಫಿಸಿಟನ್ನು ಸಮಾರಣೆ ಮಾಡುವುದಕ್ಕಾಗಿಯೂ ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿಗಳು ಕೆಲವು ಸೂಚನೆಗಳನ್ನು ಬೋರ್ಡಿನ ಸದಸ್ಯರ ಮುಂದಿರಿಸಿದರು ಅವುಗಳಲ್ಲಿ ಇವು ಕೆಲವು ಉಪಾಧ್ಯಾಯರ ಸಂಬಳದಲ್ಲಿ ಒಂದೂವರೆ ಆಣೆ (ರೂಪಾಯಿಯಲ್ಲಿ)ಯ ಕಡಿತ ಉಪಾಧ್ಯಾಯಿನಿಯರ ಸಂಬಳವನ್ನು ಉಪಾಧ್ಯಾಯರ ಸಂಬಳದ ಸಾಲಿಗೆ ತರುವುದು, ಸಂಚಾರ ಭತ್ತೆ, ಕಟ್ಟಡಗಳ ರಿಪೇರಿ ಮೊದಲಾದವುಗಳಲ್ಲಿ ಹಣವಿಳಿಸುವುದು, ಇತ್ಯಾದಿ ಈ ಸೂಚನೆಗಳಿಗೆ ಬೋರ್ಡಿನವರು ಸಮ್ಮತಿ ಇತ್ತರು. ಆದರೆ ಒಂದೂವರೆ ಆಣೆಕಡಿತದ ಸ್ಥಾನದಲ್ಲಿ ಒಂದಾಣೆ ಕಡಿತ ಮಾತ್ರಆಗುವಂತೆಮಾಡಲು ಸಾಧ್ಯವಿಲ್ಲವೇ ಎಂಬುದನ್ನು ವಿಚಾರಿಸಬೇಂದು ಸೂಚಿಸಿದರು

### ಜಿ. ಬೋ. ನೌಕರರ ಪ್ರಾರ್ಥನೆ ನಿರಾಕರಿಸಲ್ಪಟ್ಟಿತು.

ಜಿಲ್ಲಾ ಬೋರ್ಡ್ ನೌಕರರ ಸಂಘದವರು ಬೋರ್ಡ್ ನೌಕರರ ಪ್ರಾಂತಿಕ ಪರಿಷತ್ತಿಗೆ ಹೋಗುವ ಬಗ್ಗೆ ಇಬ್ಬರು ಪ್ರತಿನಿಧಿಗಳಿಗೆ ಸಂಚಾರ ವೆಚ್ಚವನ್ನು ತೆರಬೇಕೆಂದೂ ನೌಕರರಿಗೆ (ಹೆಡ್ ಕ್ವಾರ್ಟರಿನಲ್ಲಿರುವವರಿಗೆ) ಮನೆಗಳು ಇಲ್ಲವೆ ಮನೆಗಳಿಗೆ ಎಲೋವೆನ್ಸ್ ಕೊಡಬೇಕೆಂದೂ ಪ್ರಾರ್ಥಿಸಿದ್ದರು ಈ ಪ್ರಾರ್ಥನೆಗಳು ನಿರಾಕರಿಸಲ್ಪಟ್ಟವು.

### ಹಣತೆರದೆ ಇದ್ದುದಕ್ಕೆ ಜವಾಬ್ದಾರರಾರು ?

ಬೋರ್ಡಿನವರು ಓರ್ವ ಕಂಟ್ರ್ಯಾಕ್ಟರರಿಗೆ ಹಣವನ್ನು ಸ್ಯಾಂಕ್ಷನ್ ಮಾಡಿ ಅದನ್ನು ತೆರಬೇಕೆಂದು ತಿಳಿಸಿದ್ದರು. ಆದರೆ ಇಂಜನಿಯರಿಂಗ್ ಇಲಾಖೆಯವರು ಕಾರಣಾಂತರಗಳಿಂದ ಅದನ್ನು ತೆರಲಿಲ್ಲ. ಕಂಟ್ರ್ಯಾಕ್ಟರರು ದಾವೆ ಮಾಡಿ ಬೋರ್ಡಿನಮೇಲೆ ಡಿಕ್ರಿಪಡೆದಿದ್ದಾರೆ ಆದರೆ ಈ ಹಣವನ್ನು ಕೊಡಬೇಕೆಂದು ಬೋರ್ಡುಸೂಚಿಸಿದ್ದರೂ ಕೊಡದೆ ಬೋರ್ಡಿಗೆ ಈ ನಷ್ಟಬರುವಂತೆ ಮಾಡಿದವರಾರೆಂದು ಕಂಡುಹಿಡಿಯಬೇಕೆಂದೂ ತಪ್ಪಿತಸ್ಥರಿಂದ ಹಣವನ್ನು ವಸೂಲು ಮಾಡಬೇಕೆಂದೂ, ಬೋರ್ಡು ಹಣಕೊಡಲು ಜವಾಬ್ದಾರಿಯಲ್ಲವೆಂದೂ ನಿರ್ಧಾರವಾಯಿತು.

### ಮೂಲ್ಕಿ ಹೈಸ್ಕೂಲಿಗೆ ಕಟ್ಟಡ

ಮೂಲ್ಕಿ ಹೈಸ್ಕೂಲಿಗೆ ಕಟ್ಟಡದ ಬಗ್ಗೆ ಸರಕಾರದವರಿಗೆ ಪುನಃಬರೆದು ಗ್ರೇಂಟನ್ನು ಕೇಳಬೇಕೆಂದು ತೀರ್ಮಾನವಾಯಿತು

### ರಾಷ್ಟ್ರಧ್ವಜವು ಆಫೀಸಿನಲ್ಲಿಡಲ್ಪಟ್ಟಿತು

ಬೆಳಿಗ್ಗೆ ನಿರ್ಧಾರವಾದ ಮೇರೆಗೆ ಬೋರ್ಡ್ ಆಫೀಸಿನಲ್ಲಿ ರಾಷ್ಟ್ರಧ್ವಜವು ಇಡಲ್ಪಟ್ಟಿತು ಶ್ರೀ ಎ ಸಿ. ಗೊನ್ಸಾಲ್ವಿಸರು ಧ್ವಜವನ್ನು ಇಟ್ಟು ಈ ಧ್ವಜವುಚಿರಕಾಲ ದೇಶದ ಜನರ ಐಕ್ಯದ ಹೆಗ್ಗುರುತಾಗಿರಬೇಂದೂ ಭಾರತದ ಸ್ವಾತಂತ್ರ್ಯದ ಚಿಹ್ನೆಯಾಗಲೆಂದೂ ಹರಸಿ ಭಾಷಣವಾಡಿದರು.

### ಟೀಪಾರ್ಟಿ ಸತ್ಕಾರ

ಮೂಲ್ಕಿಯ ಮಹಾಜನರ ಅನುಮತಿಯಿಂದ ಬೋರ್ಡಿನ ಸದಸ್ಯರಿಗೆ ಜಿ ಬೋರ್ಡುಆಫೀಸಿನಲ್ಲಿ ಒಂದು ಟೀಪಾರ್ಟಿ ಸತ್ಕಾರ ನಡೆಯಿತು. ಇನ್ನು ಕೆಲ ವಿಷಯಗಳ ಪರ್ಯಾಲೋಚನೆಯಾದ ಬಳಿಕ ಸಭಾಂತ್ಯವಾಯಿತು.

### ಜಿ ಎಜುಕೇಶನಲ್ ಕೌನ್ಸಿಲ್ ಅಧ್ಯಕ್ಷರು

ಖಾನ್ ಬಹದ್ದೂರ ಮಹಮ್ಮದ್ ಶಫ್ಫಾಡ್ ಸಾಹೇಬ್ ಬಹದ್ದೂರ್ ಯಂ ಎಲ್. ಎ ಇವರು ಜಿಲ್ಲಾ ಎಜುಕೇಶನ್ ಕಮಿಟಿಯ ಅಧ್ಯಕ್ಷರಾಗಿ ಸೇವ ಕೈಕೊಂಡಿದರೆಂದು ವಾರ್ತೆ.

### ಬೀಡಿ ಕೆಲಸಗಾರರ ಅರ್ಧವಾರ್ಷಿಕ ಸಭೆ

ಮಂಗಳೂರಿನ ಬೀಡಿಕೆಲಸಗಾರರ ಸಂಘವು ಸ್ಥಾಪನೆಯಾಗಿ ಆರು ತಿಂಗಳುಗಳು ಕಳೆದು ಹೋದ್ದು ಆ ಪ್ರಯುಕ್ತ ಒಂದು ಮಹಾಸಭೆಯು ನಿನ್ನೆಯ ದಿನ (ತಾ ೧೮) ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ನಡೆಯಿತು ಶ್ರೀ ರಂಗರಾವ್ ತಲಚೇರಿಕರರು ಅಧ್ಯಕ್ಷರಾಗಿದ್ದರು ಕೇರಳದಿಂದ ಬಂದಿದ್ದ ಶ್ರೀ। ಕೃಷ್ಣಪಿಳ್ಳೆಯವರೂ ಶ್ರೀ ಎನ್ ಎಸ್ ಪಿಳ್ಳೆಯವರೂ ಕೆಲಸಗಾರರ ಸಂಘಗಳ ಆಗತ್ಯ ಸಂಘಟನೆ ರಾಷ್ಟ್ರಸಭೆಗೆ ಸೇರುವ ಆವಶ್ಯಕತೆ ಈ ವಿಷಯಗಳನ್ನು ಕುರಿತು ಕ್ರಮವಾಗಿ ಮಲೆಯಾಳ,ತುಳು ಭಾಷೆಗಳಲ್ಲಿ ಹೇಳಿದರು. ಪ್ರತಿಮೂರುತಿಂಗಳಿಗೊಂದು ಸಾರಿ ಜನರಲ್ ಮೀಟಿಂಗ್ ಕರೆಯಬೇಕೆಂಬ ನಿರ್ಧಾರವು ಆಯಿತು ಅಧ್ಯಕ್ಷರ ಸಮಯೋಚಿತ ಭಾಷಣವಾದ ಮೇಲೆ ಸಭಾಂತ್ಯವಾಯಿತು.

ಇಲ್ಲಿಯ ಮಹಿಳಾ ಸಭೆಯಲ್ಲಿ ಕೆಲಾಸ್ತ್ರೀಯ ಮಹಿಳೆಯರ ಉನ್ನತಿಗಾಗಿ, ಮುಂಬಾಯಿಯಲ್ಲಿ ಹಲವು ವರ್ಷಗಳಿಂದಿದ್ದು,ಪ್ರಸಿದ್ಧಿಯನ್ನು ಹೊಂದಿದ ಆರ್ಟ್ ಮಾಸ್ಟರ್ ಶ್ರೀ ಸಜೀವ್ ಶಿವರಾಯರಿಂದ ಪೈಂಟಿಂಗ್ ಕ್ಲಾಸುಗಳೂ, ಎಂಬ್ರಾಯ್ಡರಿಯಲ್ಲಿ ಅತ್ಯುತ್ತಮ ಶಿಕ್ಷಕಿಯಾದ ಶ್ರೀಮತಿ ಶಾರದಾ ಸೆಟ್ಟಿಯವರಿಂದ ಎಂಬ್ರಾಯ್ಡರಿ ಕ್ಲಾಸುಗಳೂ ನಡೆಸಲ್ಪಡುತ್ತವೆ. ಕ್ಲಾಸುಗಳ ವಿವರ.—ಪೈಂಟಿಂಗ್ —ಗುರುವಾರ, ಆದಿತ್ಯವಾರ ಸಾಯಂ. ೪ರಿಂದ ೬ ಎಂಬ್ರಾಯ್ಡರಿ:— ಬುಧವಾರ, ಶನಿವಾರ, ಸಂಜೆ ೪ರಿಂದ ೬ ಎಲ್ಲಾ ಕೆಲಾಸ್ತ್ರೀಯ ಮಹಿಳೆಯರಿಗೂ ಶಿಕ್ಷಣವು ಕೊಡಲ್ಪಡುವದು. ಎಲ್ಲಾ ವರ್ಗದ ಹಿಂದೀ ಕ್ಲಾಸುಗಳೂ ನಡೆಸಲ್ಪಡುತ್ತವೆ ಎಂದು ಆ ಸಭೆಯ ಅಧಿಕಾರಿಗಳು ತಿಳಿಸುತ್ತಾರೆ

### ನಗರ ಸಭೆ

ಮಂಗಳೂರು ನಗರ ಸಭೆಯು ನಿನ್ನೆ ಸಾಯಂಕಾಲ ಪುರ ಭವನದಲ್ಲಿ ಸೇರಿತು, ಡಾ। ಕೆ ವಿಟ್ಠಲ ಶೆಟ್ಟಿಯವರು ಅಧ್ಯಕ್ಷರಾಗಿದ್ದರು ಶ್ರೀ। ಕಾರಂತರು ತಮ್ಮ ಸದಸ್ಯತನಕ್ಕೆ ರಾಜಿಕೊಟ್ಟ ಪತ್ರವು ಸಭೆಯ ಮುಂದೆ ಓದಲಾಯಿತು ಶ್ರೀ। ಕಾರಂತರು ನಗರ ಸಭೆಯಲ್ಲಿ ಮಾಡಿದ ಕೆಲಸವು ಶ್ಲಾಘನೀಯವೆಂದು ತಿಳಿಸಿ ಅವರ ಕೆಲಸವನ್ನು ಪ್ರಶಂಸಿಸಿ ಒಂದು ಠರಾವನ್ನು ಶ್ರೀ। ಮಾಧವರಾಯರು ತಂದರು, ಅದನು ಶ್ರೀ। ಶೆಣೈರು ಅನುಮೋದಿಸಿದರು, ಸರ್ವಾನುಮತಿಯಿಂದ ಮಂಜೂರಾಯಿತು

ಹಿಂದಿನ ಮೀಟಿಂಗಿನಲ್ಲಿ ಅಧ್ಯಕ್ಷರು ಕೊಡಬೇಕಾಗಿದ್ದ ನಿರ್ಧಾರವು ನಿನ್ನೆ ಕೊಡಲ್ಪಟ್ಟಿತು. ಎರಡನೆಯ ಸಲ ಮತ ತೆಗೆದುಕೊಂಡುದು ನ್ಯಾಯ ವಿರುದ್ಧವಲ್ಲವೆಂದೂ ಮತವು ಪರವಾಗಿ ೧೨ ವಿರೋಧವಾಗಿ ೧೧ ಎಂದೂ ಆದ್ದರಿಂದ ಠರಾವು ಬಹು ಮತದಿಂದ ಅಂಗೀಕೃತವಾಯಿತೆಂದೂ ಹೇಳಿದರು. ಶ್ರೀ। ಕೆ ರಾಮಲು ನಾಯುಡು (ಮೇಯರ್, ಮದ್ರಾಸು) ಇವರ ಅಭಿಪ್ರಾಯವನ್ನು ಸಹ ಅಧ್ಯಕ್ಷರು ಸಭಿಕರ ಮುಂದಿಟ್ಟು ತಮ್ಮ ನಿರ್ಧಾರವು ಸರಿಯೆಂದರು


ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿಯ, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ ಟೈಮ್ ಪಾಕೆಟ್ ವಾಚು ಮತ್ತು ಟೈಮ್‌ಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.

*The Manager,*
**The Silver Jubilee Watch Co ,**
*Post Box No 571, BOMBAY.*



# THE BOMBAY LIFE ASSURANCE Co., LTD.

**ESTD 1908**

**Church Gate Street, Fort - - BOMBAY.**

**SPECIAL FEATURES.**

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:—*

**KOCHIKAR BROTHERS,**

*Madras Branch Secretaries.*

**BRANCHES AT:**

| | | |
|---|---|---|
| P. B. 337 Mount Road, Madras. | Visveswarapuram Circle, Bangalore City. | Soumyalayam Puthiyara, Calicut. |
| Car Street, Mangalore. | Udipi, S India | Charni Road, Bombay No 4. |

**INSPECTORATE OFFICE AT:**

1. Ottapalam, Malabar District. 2. Central Station Road, Trivandrum



# EVIDENCE OF SECURITY & STABILITY

**FIGURES THAT SPEAK FOR THEMSELVES**

TOTAL ASSETS **Rs. 80,66,600**

**Summary of 1935 Accounts**

| | | |
|---|---|---|
| Total Assets Over | . ... | Rs. 80,00,000 |
| Life Funds Over | ... .. | Rs 68,00,000 |
| Premium Income Over | ... | Rs. 22,54,000 |
| Interest Income | ... . . | Rs 3.16,000 |
| Claims Paid ... | ... ... | Rs. 5,75,000 |

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE **Rs. 4,42,51,200**

**The Canara Banking Corporation Udipi Ltd.**

(Incorporated in British India)

Estd 1906

**Member:- RESERVE BANK OF INDIA.**

| | | | |
|---|---|---|---|
| Subscribed Capital | Rs 3,50,000 | 0 | 0 |
| Paid up Capital | Rs 2,88,950 | 0 | 0 |
| Reserves | Rs 37,22,794 | 9 | 5 |
| Deposits | Rs 3,63,673 | 5 | 5 |

**Total Resources exceed Rs. 52,00,000/-**

**ANNOUNCEMENT.**

Branches of the Corporation will be shortly opened at **METTUPALAYAM** and **ERODE**

***V. R Kamath***, B. A., LL B.
Ag. Manager.

ಉಡುಪಿ, ಗುರುವಾರ, ತಾ. ೨೨-೭-'೩೭

# ಹೊಸ ಮನ್ವಂತರ

ನಾವು ಇನ್ನೊಂದೆಡೆ ಪ್ರಕಟಿಸಿರುವ ಗಾಂಧಿಜಿಯವರ ಲೇಖನವು, ಒಮ್ಮೆ ಕೌನ್ಸಿಲು ಪ್ರವೇಶಕ್ಕೆನೇ ಬಹು ವಿರೋಧಿಯಿದ್ದವರು ಈಗ ಕಾಂಗ್ರೆಸು ಮಂತ್ರಿಪದವಿ ಕೂಡಾ ಸ್ವೀಕರಿಸಬೇಕೆಂಬ ಮನೋವೃತ್ತಿಯುಳ್ಳವರಾಗಲು ಕಾರಣವೇನೆಂಬುದನ್ನು ವ್ಯಕ್ತಗೊಳಿಸುವುದು. ಕಾಂಗ್ರೆಸಿನ ಏಕಮಾತ್ರ ಗುರಿಯೆಂದರೆ ಸಂಪೂರ್ಣ ಸ್ವಾತಂತ್ರ್ಯಸಾಧನೆ. ಕಾಲಪರಿಸ್ಥಿತಿಗನುಗುಣವಾದ ಧೋರಣೆಯನ್ನು ವಹಿಸಿ ಅದನ್ನು ಆದಷ್ಟು ಶೀಘ್ರವಾಗಿ ಮತ್ತು ಅತ್ಯಂತ ಕಡಿಮೆಯ ಕಷ್ಟನಷ್ಟದಿಂದ ಆ ಗುರಿ ಮುಟ್ಟುವಂತೆ ನೋಡುವುದೇ ಪ್ರತಿಯೊಬ್ಬ ಕಾಂಗ್ರೆಸ್ ಮುಂದಾಳುವಿನ ಕರ್ತವ್ಯ. ಈ ದೃಷ್ಟಿಯಿಂದ ಗಾಂಧಿಜಿಯವರ ಪ್ರೇರಣೆಯಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ವಹಿಸಿರುವ ಧೋರಣೆಯು ಅತ್ಯಂತ ವಿವೇಕಪರವಾಗಿರುವುದಲ್ಲದೆ ಸ್ವಾತಂತ್ರ್ಯ ಸಮರದಲ್ಲಿ ಹೊಸ ಮನ್ವಂತರವೊಂದನ್ನು ಆರಂಭಿಸುವದಿದೆ ಇಷ್ಟರವರೆಗೆ ಕಾಂಗ್ರೆಸಿನ ಮುಂದಿದ್ದ ಕಾರ್ಯಕ್ರಮವೆಂದರೆ ರಕ್ತಪಾತದ ಕ್ರಾಂತಿ, ಅಥವಾ ಸಾಮೂದಾಯಿಕ ಕಾಯಿದೆ ಭಂಗ ಇವೆರಡೂ ಅನಿವಾರ್ಯ ಸಂದರ್ಭದ ಶಸ್ತ್ರ ಆ ವೆರಡನ್ನೂ ಕೈಕೊಳ್ಳದೆ ಅಂತಹ ಘೋರ ವಿಪ್ಲವಕ್ಕೆ ದೇಶವನ್ನು ಗುರಿಮಾಡದೆ ಬೇರೆಯಾವುದಾದರೂ ಉಪಾಯದಿಂದ ಸ್ವಾತಂತ್ರ್ಯದ ಗುರಿಯನ್ನು ಸೇರುವುದು ಸಾಧ್ಯವೆಂದಾದರೆ ಅದನ್ನು ಒಂದಿಷ್ಟು ಪ್ರತಿಷ್ಠೆಯಿಲ್ಲದೆ ಕಾಂಗ್ರೆಸಿನವರು ಸಂತೋಷದಿಂದ ಸ್ವೀಕರಿಸದಿರಲಾರರು ಆದುದರಿಂದಲೇ ಗಾಂಧಿಜಿಯವರು ಈ ಅಧಿಕಾರ ಸ್ವೀಕಾರವು ಬೇಗಾದರೂ ಇಂಡಿಯಾ ಆಕ್ಟನ್ನು ಕಾರ್ಯಕ್ಕೆ ಹಚ್ಚಲು ಕೈಕೊಳ್ಳಲ್ಪಟ್ಟಿಲ್ಲ ಆದ್ದರಿಂದ ಸಂಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಸಾಧಿಸುವ ಕಾಂಗ್ರೆಸ ಮಾರ್ಗದಲ್ಲಿ ಒಂದೆಡೆ ರಕ್ತಪಾತದ ಕ್ರಾಂತಿ, ಮತ್ತು ಇನ್ನೊಂದೆಡೆ ಸಾಮೂದಾಯಿಕ ಕಾಯಿದೆ ಭಂಗವನ್ನು ನಿವಾರಿಸುವ ನಿಯಮಬದ್ಧ ಪ್ರಯತ್ನವನು. ಇಷ್ಟರವರೆಗೆ ಈ ರೀತಿಯ ಪ್ರಯತ್ನವನ್ನು ಕಾಂಗ್ರೆಸ್ ನಡೆಸಿಲ್ಲ ಎಂದು ಗಾಂಧಿಜಿಯವರು ಕಾಂಗ್ರೆಸಿನ ಈ ಹೊಸ ಯತ್ನಕ್ಕೆ ಜಯವುಂಟಾಗಲೆಂದು ಹಾರೈಸುವರು. ಅಂದರೆ ಕಾಂಗ್ರೆಸು ಕೌನ್ಸಿಲು ಪ್ರವೇಶ ಮತ್ತು ಅಧಿಕಾರ ಸ್ವೀಕಾರದ ಹೊಸ ಕಾರ್ಯಕ್ರಮದಿಂದ ಸ್ವಾತಂತ್ರ್ಯಸಾಧನೆಯಾಗುವುದೋ ಎಂದು ನೋಡುವ ಹೊಸ ಪ್ರಯೋಗವನ್ನು ಕೈಕೊಂಡಿರುವುದು. ಹಳೆಯ ಹೋರಾಟವನ್ನು ಹೊಸ ಕ್ಷೇತ್ರದಲ್ಲಿ ಹೊಸರೀತಿಯಲ್ಲಿ ನಡೆಸುವ ನಿರ್ಧಾರಮಾಡಿರುವುದು ಇವನ್ನು ಆಂಗ್ಲೇಯರೂ ಮನಗಂಡಿರುವರೆಂಬುದು ಇಂಗ್ಲೆಂಡಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಅಭಿಪ್ರಾಯದಿಂದ ವಿದಿತವಾಗುವುದು. ಹಿಂದೂದೇಶವೇನೇನೂ ತೃಪ್ತಿಗೊಂಡಿರುವುದಿಲ್ಲ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರದಿಂದ ಹಿಂದೂದೇಶದ ಸಮಸ್ಯೆ ಬಿಡಿಸಲ್ಪಟ್ಟಿತೆಂದು ಯಾರೂ ಭಾವಿಸಕೂಡದು. ಬ್ರಿಟಿಷ್ ಸಾಮ್ರಾಜ್ಯದೊಳಗೆ ಅಥವಾ ಹೊರಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಹಿಂದೂದೇಶವು ಪಡೆಯುವ ವರೆಗೆ ಹಳೆಯ ಹೋರಾಟವು ಹೊಸ ಶಸ್ತ್ರಗಳಿಂದ ನಡೆಸಲ್ಪಡುವುದು ಕಾಂಗ್ರೆಸು ಮಂತ್ರಿಪದವಿ ವಹಿಸಿ ವಿಧಾಯಕ ಮತ್ತು ಜನಹಿತಸಾಧಕ ಕಾರ್ಯಕ್ರಮವನ್ನು ನಡಿಸುತ್ತಿರುವಾಗಲೇ ಸ್ವಾತಂತ್ರ್ಯಸಾಧನೆಯ ಪ್ರಯತ್ನವನ್ನೂ ನಡಿಸದಿರಲಾರದು ಅಂದ ಮೇಲೆ ಹಿಂದಿನ ಸಮಸ್ಯೆಯು ಅಂತೆಯೇ ಉಳಿದಿರುವುದು. ಈಗ ಹಿಂದೂದೇಶದ ರಾಜ್ಯಭಾರವು ವಿದೇಶೀಯ ಆಧೀನತೆಯ ಮೇಲೆ ಆದರಿಸಿದೆ ಆದುದರಿಂದ ಅದು ರಾಷ್ಟ್ರಾಭಿಮಾನಿ ಹಿಂದೀಯರಿಗೆಂದಿಗೂ ಸಹನೀಯವಾಗದು. ವಿದೇಶೀಯ ಅಧೀನತೆಯು ಸಂಪೂರ್ಣವಾಗಿ ನಿರ್ಮೂಲವಾಗುವನಕ ರಾಷ್ಟ್ರಾಭಿಮಾನಿ ಹಿಂದೀಯನು ಹಿಂದುಸ್ಥಾನದ ರಾಜ್ಯಭಾರ ಪದ್ಧತಿಯನ್ನು ತೀವ್ರವಾಗಿ ದ್ವೇಷಿಸಿ ನಿರಂತರವೂ ಅತೃಪ್ತಿಯುಳ್ಳವನಾಗಿಯೇ ಇರುವನು" ಎಂದು ಗಾರ್ಡಿಯನ್ ಪತ್ರಿಕೆಯು ಸ್ಪಷ್ಟಪಡಿಸಿರುವುದು. ಬ್ರಿಟಿಷ್ ಸರಕಾರವಾದರೂ ಈ ಸಲ ಕಾಂಗ್ರೆಸನ್ನು ಕೆಲ ಮಟ್ಟಿಗೆ ಸಮಾಧಾನಪಡಿಸುವ ಮನೋವೃತ್ತಿಯುಳ್ಳದಾಗಿರುವುದು. ಕಾಂಗ್ರೆಸಿನ ಈ ಹೊಸ ಧೋರಣೆಯಿಂದಾಗಿ ಕಾಂಗ್ರೆಸಿನವರೂ ಆಳರಸರೂ ಒಟ್ಟು ಸೇರಿ ಒಂದಾಗಿ ಕೆಲಸ ಮಾಡಿ ಪರಸ್ಪರ ದೃಷ್ಟಿಭೇದವನ್ನರಿತುಕೊಂಡು, ಕಾಂಗ್ರೆಸಿನ ದೃಷ್ಟಿಕೋನದೊಡನೆ ಸಹಾನುಭೂತಿಯುಂಟಾಗುವಂತಾದರೆ ಕಾಂಗ್ರೆಸಿಗೆ ವಿಜಯದೊರೆತಂತಾಯಿತು ಆಗ ಒಂದೇ ಒಂದು ಬಿಂದು ರಕ್ತವನ್ನಾದರೂ ಸುರಿಸದೆ ಹಿಂದೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ದೊರೆಯುವುದೆಂದೇ ಗಾಂಧಿಜಿಯವರ ವಿಶ್ವಾಸ. ಆಳರಸರೂ ಈ ಸುಸಂದರ್ಭದ ಸದುಪಯೋಗ ಪಡೆದು ದೇಶಕ್ಕೆ ಬೇಗನೆ ಪೂರ್ಣ ಆಡಳಿತ ಸ್ವಾತಂತ್ರ್ಯವಿತ್ತರಾದರೆ ಅದೊಂದು ಹೊಸ ಮನ್ವಂತರವೇ ಉದಯವಾಗಿ ಹಿಂದೀಯರ ಮತ್ತು ಬ್ರಿಟಿಷರ ಸಂಬಂಧವು ಕಡಿದು ಹೋಗದೆ, ಹಿಂದೂದೇಶವು ಸ್ವತಂತ್ರ ರಾಷ್ಟ್ರವಾಗಿ ಪರಸ್ಪರ ಹಿತಕ್ಕಾಗಿ ಸಾಮ್ರಾಜ್ಯದೊಳಗೆ ಸರಿಸಮಾನ ಸ್ಥಾನ ಮಾನ ಪಡೆದು ಮೆರೆಯುವಂತಾಗಬಹುದು.

## ಕಾಂಗ್ರೆಸ್ ಮತ್ತು ಸರಕಾರಿ ನೌಕರರು.

ಇಷ್ಟರವರೆಗೆ ನಡೆಯುತ್ತಿದ್ದುದು ಬಹುದೇಶ ನೌಕರ ಶಾಹಿಯ ರಾಜ್ಯಭಾರ ಸರಕಾರದ ಅಧಿಕಾರಿಗಳು ಜನತೆಯ ಮೇಲೆ ತಮ್ಮಿಷ್ಟಾನುಸಾರ ಅಧಿಕಾರ ನಡಿಸುತ್ತಿದ್ದರು ಜನರದನ್ನು ತಾಳ್ಮೆಯಿಂದ ಸಹಿಸಿಕೊಳ್ಳುತ್ತಿದ್ದರು ತಾವು ಜನತೆಯ ಮೇಲೆ ಸವಾರಿ ಮಾಡಿ ಅಧಿಕಾರ ಚಾಲುಮಾಡುವವರೆಂಬ ಮನೋವೃತ್ತಿಯು ಸರಕಾರಿ ನೌಕರರಲ್ಲಿಯೂ, ಸರಕಾರಿ ನೌಕರರು ಮಾಡಿದುದನ್ನೆಲ್ಲಾ ತುಟಿಯೆತ್ತದೆ ತಾಳಿಕೊಂಡು ಅಂತೆಯೇ ನಡೆಯದೆ ನಿರ್ವಾಹವಿಲ್ಲೆಂಬ ಮನೋವೃತ್ತಿಯು ಜನ ಸಾಮಾನ್ಯರಲ್ಲಿಯೂ ಇಷ್ಟರ ವರೆಗೆ ನೆಲೆಗೊಂಡಿತ್ತು. ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿಗಳಾದ ಪಂಡಿತ ವಲ್ಲಭ ಪಂತರು ಸರಕಾರಿ ನೌಕರರನ್ನುದ್ದೇಶಿಸಿ ಮಾತಾಡುವಾಗ ಹೇಳಿದಂತೆ ಇನ್ನು ಮುಂದೆ ಈ ಮನೋವೃತ್ತಿಯು ಸಂಪೂರ್ಣ ಮಾರ್ಪಡಬೇಕು. ಈಗಿನ ಪ್ರಜಾಸತ್ತಾತ್ಮಕ ರಾಜ್ಯಭಾರದಲ್ಲಿ ಜನರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಯಜಮಾನರು ಈ ಪ್ರತಿನಿಧಿಗಳ ಆಡಳಿತಕ್ಕೊಳಗಾಗಿರುವವರು ನೌಕರರು. ಅಂದ ಮೇಲೆ ಜನತೆಯ ಯಾಜಮಾನ್ಯವು ನೌಕರರ ಮೇಲೆಯೂ ಸ್ಥಾಪಿತವಾದಂತಾಯಿತು. ಸರಕಾರಿ ನೌಕರರೂ ಜನತೆಯ ಸೇವಕರಾದರು. ಎಲ್ಲಾ ರೀತಿಯಿಂದಲೂ ಜನತೆಯ ಹಿತಸಾಧನೆ ಮಾಡುವಂತೆ, ಅವರ ಸಂಕಷ್ಟಗಳನ್ನು ನಿವಾರಿಸುವಂತೆ ನೋಡುವುದುಸರಕಾರಿ ನೌಕರರ ಕರ್ತವ್ಯ. ಇನ್ನು ಮುಂದೆ ಪ್ರಜಾಧಿಕಾರದ ಹೊರತು ಬೇರೊಂದು ಸರಕಾರವೆಂಬುದಿರಲಾರದೆಂಬುದನ್ನು ಸರಕಾರಿ ನೌಕರರೂ ಜನ ಸಾಮಾನ್ಯರೂ ಚೆನ್ನಾಗಿ ಮನಗಂಡುಕೊಳ್ಳಬೇಕು. ಸರಕಾರವು ಜನತೆಯದು. ಜನಹಿತವೇ ಅದರ ಜೀವಾಳ, ಆದುದರಿಂದ ಸರಕಾರದ ಅಂಗವಾಗಿರುವ ನೌಕರರು ಜನತೆಯ ಸೇವಕರಾಗಿ ಕೇವಲ ಅವರ ಹಿತಸಾಧನೆಯ ಉಪಕರಣವಾಗಿ ತಮ್ಮ ಕೆಲಸ ಮಾಡಬೇಕು. ಈ ಮನೋವೃತ್ತಿಯ ಮಾರ್ಪಾಟನೇ ಕಾಂಗ್ರೆಸು ಅಧಿಕಾರ ಸ್ವೀಕರಿಸಿರುವುದರಿಂದ ದೇಶಕ್ಕುಂಟಾಗಿರುವ ಮಹತ್ತಾದ ಲಾಭ. ಪಂಡಿತ ಪಂತರು ಸ್ಪಷ್ಟವಾಗಿ ತಿಳಿಸಿದಂತೆ, ಇಷ್ಟರ ವರೆಗೆ ಸರಕಾರಿ ನೌಕರರು ರಾಷ್ಟ್ರೀಯ ಧ್ವಜದ ಮೇಲೆ ವಕ್ರದೃಷ್ಟಿ ಬೀರಿರಬಹುದು. ಕಾಂಗ್ರೆಸ್ ಮುಖಂಡರ ಮೇಲೆ ಪೋಲೀಸರು ಸದಾ ಕಣ್ಣಿಟ್ಟುಕೊಂಡಿರಬೇಕಾಗಿದ್ದಿರಬಹುದು. ಆದರೆ ಇನ್ನು ಮುಂದೆ, ರಾಷ್ಟ್ರದ ಗೌರವ ಸಂಕೇತವಾದ ರಾಷ್ಟ್ರೀಯ ಧ್ವಜವನ್ನವರು ಮಾನಿಸಬೇಕು. ಪೋಲೀಸರು ರಾಜಕೀಯ ಮುಖಂಡರನ್ನು ಕಾಡುವುದನ್ನು ಬಿಟ್ಟು ಜನತೆಗೆ ಸಹಾಯಕರಾಗಬೇಕು. ಶ್ರೀ. ರಾಜಗೋಪಾಲಾಚಾರ್ಯರ ಹೇಳಿಕೆಯಂತೆ, ಕಾಂಗ್ರೆಸ್ ಮಂತ್ರಿಗಳ ಆಡಳಿತದ ಜಯಾಪಜಯವು ನೌಕರರ ಮೇಲೆ ಹೊಂದಿರುತ್ತದೆ. ಅವರು ಸೌಹಾರ್ದದಿಂದ ಸಹಕರಿಸಿದರೆ ಮಾತ್ರ ಆಡಳಿತವನ್ನು ಸಸೂತ್ರವಾಗಿ ನಡೆಸಲು ಸಾಧ್ಯವಿದೆ

ಸರಕಾರಿ ನೌಕರರು ಹಿಂದೆ ಕಾಂಗ್ರೆಸಿಗೆ ವಿರೋಧವಾಗಿ ಎಂತಹ ಕೆಲಸ ಮಾಡಿದ್ದರೂ ಕಾಂಗ್ರೆಸ್ ಮಂತ್ರಿಗಳದನ್ನು ಗಮನಿಸದೆ, ಅವರನ್ನು ಸಹೋದರರಂತೆಯೇ ಕಾಣುವರೆಂಬುದರಲ್ಲಿ ನಿಸಂದೇಹವೇ ಇರಲಾರದು. ಶ್ರೀ ರಾಜಾಜಿಯವರು ಆ ಕುರಿತಾದ ಭೀತಿಯನ್ನೆಲ್ಲಾ ನಿವಾರಿಸಿರುವರು. ಆದುದರಿಂದ ನೌಕರರು ಕಾಂಗ್ರೆಸ್ ಮಂತ್ರಿಮಂಡಲದೊಡನೆ ಸಂಪೂರ್ಣ ಮನಸ್ಸಿನಿಂದ ಮತ್ತು ನವ ಉತ್ಸಾಹದಿಂದ ಸಹಕರಿಸಿ ಅವರ ಜನಸೇವೆಯು ಸತ್ಫಲದಾಯಕವಾಗುವಂತೆ, ಅವರ ಆಡಳಿತವು ಜಯಶೀಲವಾಗುವಂತೆ ನೆರವಾಗುವರೆಂದು ನಿರೀಕ್ಷಿಸಲಾಗಿದೆ.

## ಹಳ್ಳಿಗರ ಭಾಗ್ಯೋದಯ

ಈ ವರೆಗಿನ ರಾಜ್ಯಭಾರವು ಬಹುಶೀಕ ಪಟ್ಟಣಿಗರ, ಧನಿಕರ ಹಿತಕ್ಕಾಗಿಯೇ ನಡಿಸಲ್ಪಡುತ್ತಿದ್ದಿತೆಂದರೆ ಅತಿಶಯೋಕ್ತಿಯಾಗದು, ಹಳ್ಳಿಗರ ಬಾಳು ದಿನೇದಿನೇ ಕೆಟ್ಟು ಹೋಗಿ ಈಗ ಅವರು ತಲೆಯೆತ್ತದಂತಾಗಿದೆ. ಇದನ್ನು ಕಾಂಗ್ರೆಸ್ ಪಕ್ಷೀಯರು ಚೆನ್ನಾಗಿ ಮನಗಂಡಿರುವರು. ಗಾಂಧಿಜಿಯವರು ಹಳ್ಳಿಗರ ಹಿತಸಾಧಕ ಪ್ರವಾದಿಯೇ ಆಗಿರುವರು. ಕಾಂಗ್ರೆಸ್ ಮಂತ್ರಿಗಳು ಹಳ್ಳಿಗರ ಹಿತದ ಕಡೆಗೆ ವಿಶೇಷ ಲಕ್ಷ್ಯಕೊಡಬೇಕೆಂದು ಕೇಳಿಕೊಂಡಿರುವರು. ಮದ್ರಾಸಿನ ಪ್ರಧಾನ ಮಂತ್ರಿಗಳಾದ ಶ್ರೀ. ರಾಜಾಜಿಯವರು ಹಳ್ಳಿಗರ ದೀನಾವಸ್ಥೆಯು ಹೃದ್ರಾವಕವಿರುವುದೆಂದು ವಿವರಿಸಿ, ಅವರಲ್ಲಿ ಒಂದಿಷ್ಟು ನಗುವನ್ನುಂಟು ಮಾಡಲು ಸರಕಾರಿ ನೌಕರರೆಲ್ಲಾ ತನಗೆ ಸಹಾಯಮಾಡಬೇಕೆಂದು ಕೇಳಿಕೊಂಡಿರುವರು. ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿ ಪಂಡಿತ ಪಂತರು, ಹಳ್ಳಿಗಳ ದಾರಿದ್ರ್ಯ ಮತ್ತು ನಿರುದ್ಯೋಗ ನಿವಾರಣೆಯೇ ಕಾಂಗ್ರೆಸಿನ ಪ್ರಥಮ ಪ್ರಯತ್ನವಿರುವುದೆಂದಿರುವರು. ಆದುದರಿಂದ ಕಾಂಗ್ರೆಸು ಈಗ ತಾನೆ ಅಧಿಕಾರ ಸ್ವೀಕರಿಸಿರುವ ಆರು ಪ್ರಾಂತಗಳಲ್ಲಿ ಹಳ್ಳಿಗರ ಹಿತಸಾಧನೆಗೆ ಮಂತ್ರಿಗಳು ಮುಖ್ಯವಾಗಿ ಗಮನ ಕೊಡದಿರಲಾರರು. ಇನ್ನು ಮುಂದಾದರೂ ನಮ್ಮ ಹಳ್ಳಿಗರ ಭಾಗ್ಯೋದಯವಾಗುವುದೆಂದು ಆಶಿಸಬಹುದು.

## ಅಭಿನಂದನೆ.

ಈ ಸಲ ದಕ್ಷಿಣಕನ್ನಡಕ್ಕೊಂದು ಮಂತ್ರಿಪದವಿ ದೊರೆಯಬಹುದೆಂದು ಹಲವರ

ಸೇರಿದೆ. ಇವರು ತಿರುಚಿನಾಪಳ್ಳಿಯ ದೊಡ್ಡ ಡಾಕ್ಟರರು. ಸಹಸ್ರಗಟ್ಟಲೆಯಲ್ಲಿ ಸಂಪಾದನೆಮಾಡುವವರು. ಇಂಗ್ಲೆಂಡಿನಲ್ಲಿದ್ದಾಗ ಸುಪ್ರಸಿದ್ಧ ದೇಶಭಕ್ತರಾದ ಶ್ರೀ. ಸಾವರ್ಕರರ ಸಹಪಾಠಿಗಳು. ಒಮ್ಮೆ ಸೆರೆಮನೆಗೆ ಹೋದವರು. ಸನಾತನಿಗಳ ತೀವ್ರ ವಿರೋಧಿಗಳು. ತಮಿಳುನಾಡಿನ ಹರಿಜನ ಸೇವಾಸಂಘದ ಕಾರ್ಯದರ್ಶಿಗಳಾಗಿ ಪ್ರಶಂಸನೀಯ ಕೆಲಸಮಾಡಿದವರು. ಡಿಲ್ಲಿಯ ಎಸೆಂಬ್ಲಿಯ ಮೆಂಬರರಾಗಿ ಆರಿಸಲ್ಪಟ್ಟವರು. ಆ ಮೇಲೆ ತಿರುಚಿನಾಪಳ್ಳಿಯ ಮುನಿಸಿಪಲ್ ಚೆಯರ್ ಮೇನರ ಚುನಾವಣೆಯ ಸಂಬಂಧವಾಗಿ ಉಂಟಾದ ವೈಷಮ್ಯದಲ್ಲಿ ಕಾಂಗ್ರೆಸಿಗೆ ವಿರೋಧವಾಗಿ ನಡೆದು ಎಸೆಂಬ್ಲಿ ಮೆಂಬರಿಕೆ ಮೊದಲಾದುವುಗಳಿಗೆ ರಾಜಿನಾಮೆ ಕೊಟ್ಟರು. ಈ ಸಂಬಂಧವಾಗಿ ಶ್ರೀ. ರಾಜಗೋಪಾಲಾಚಾರ್ಯರಿಗೂ ಇವರಿಗೂ ತೀವ್ರ ಮತಭೇಧವುಂಟಾಗಿದ್ದಿತು. ತಿರುಚಿನಾಪಳ್ಳಿಯ ಮುನಿಸಿಪಲ್ ಚುನಾವಣೆಯು ಶ್ರೀ. ರಾಜಾಜಿಯವರನ್ನೇ ರಾಜಕೀಯದಿಂದ ನಿವೃತ್ತಿಗೊಳಿಸುವಷ್ಟು ಸಂತಾಪವನ್ನುಂಟುಮಾಡಿತ್ತು. ಆ ಮೇಲೆ ರಾಜಾಜಿಯವರು ಪುನಃ ರಾಜಕೀಯ ರಂಗಕ್ಕಿಳಿದು ಜಸ್ಟಿಸ್ ಪಕ್ಷವನ್ನು ಸದೆ ಬಡೆದು ಪ್ರಧಾನಮಂತ್ರಿಗಳಾದರು. ಒಡನೆಯೇ ತನ್ನ ಹಿಂದಿನ ಗೆಳೆಯ ಡಾಕ್ಟರ್ ರಾಜನರನ್ನು ಆರೋಗ್ಯ ಖಾತೆಯ ಮಂತ್ರಿಗಳಾಗಿ ನೇಮಿಸಿ ತಂತಿ ಮೂಲಕ ಅವರ ಒಪ್ಪಿಗೆಪಡೆದರು. ಎಷ್ಟೊಂದು ಭಿನ್ನಾಭಿಪ್ರಾಯವುಂಟಾದರೂ ಇವರ ಪರಸ್ಪರ ಗೌರವವು ಒಂದಿಷ್ಟು ಕಡಿಮೆಯಾಗಲಿಲ್ಲ. ಡಾಕ್ಟರ್ ರಾಜನರು ಎಸೆಂಬ್ಲಿ ಮೆಂಬರರು ಕೂಡಾ ಅಲ್ಲ. ಮದ್ರಾಸ್ ಕೌನ್ಸಿಲಿಗೆ ಗವರ್ನರರಿಂದ ನೇಮಿಸಲ್ಪಟ್ಟಿರುವರು. ಇದು ಅನುಚಿತವಾಯಿತೆಂದು ಕೆಲವರು ಟೀಕಿಸಿರುವರು. ಡಾಕ್ಟರ್ ರಾಜನರು ಕೌನ್ಸಿಲಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಟ್ಟಿರುವರು. ಇವರು 1875ರಲ್ಲಿ ನಾಗಪಟ್ಟಣದಲ್ಲಿ ಹುಟ್ಟಿದವರು.

ಮಿ. ಯಾಕೂಬ್ ಹಾಸನರು ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳು. ವಿದ್ಯಾಭ್ಯಾಸದ ಮೇಲೆ ಕೆಲಸಮಯ ಬೆಂಗಳೂರಲ್ಲಿ ವ್ಯಾಪಾರನಡಿಸಿ ಆ ಮೇಲೆ ಮದ್ರಾಸಿಗೆ ಹೋದರು. ಐಗುಪ್ತದ ಹೆಂಗಸೊಬ್ಬಳನ್ನು ಮದುವೆಯಾಗಿರುವರು. ವಯಸ್ಸು 62. ಮಂತ್ರಿಗಳಲ್ಲೆಲ್ಲಾ ಮುದುಕರು. 1921ರಲ್ಲಿ ಎರಡುಸಲ ಸೆರೆಮನೆಗೆ ಹೋದವರು. 1916ರಿಂದ 20ರ ವರೆಗೆ ಮತ್ತು ಆ ಮೇಲೆ 1931ರಿಂದ ಮದ್ರಾಸ್ ಕೌನ್ಸಿಲಿನ ಮೆಂಬರರಾಗಿದ್ದರು. ವಾಗ್ಮಿಗಳು ಮತ್ತು ಗಂಭೀರ ವೃತ್ತಿಯವರು. 1875ರಲ್ಲಿ ನಾಗಪುರದಲ್ಲಿ ಜನಿಸಿ ಅಲಿಘಾರಿನ ಮುಸಲ್ಮಾನ ಕೋಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದವರು.

ಡಾಕ್ಟರ್. ಪಿ. ಸುಬ್ಬರಾಯನರು ಶಿಕ್ಷಣ ಮತ್ತು ನ್ಯಾಯಖಾತೆಯ ಮಂತ್ರಿಗಳು. 1889ರಲ್ಲಿ ಸೇಲಮ್ ಜಿಲ್ಲೆಯ ಕುಮಾರಮಂಗಲಮಿನಲ್ಲಿ ಹುಟ್ಟಿದವರು ಕುಮಾರ ಮಂಗಲಮ್ ಎಂಬ ಚಿಕ್ಕ ಜಮೀನ್ದಾರಿಯೊಂದು ಇವರಿಗಿರುವುದು. ಮಂಗಳೂರಿನ ಪ್ರಸಿದ್ಧ ಹೆಂಚಿನ ಕೆಲಸಗಾರರಾಗಿದ್ದ ದಿವಂಗತ ಕೆ. ರಂಗರಾಯರ ಪುತ್ರಿ ಶ್ರೀಮತಿ ರಾಧಾಬಾಯಿಯವರನ್ನು ಮದುವೆಯಾಗಿರುವರು. ಇವರು ಬ್ಯಾರಿಸ್ಟರರು ಮತ್ತು ಎಲ್. ಎಲ್. ಡಿ ಪದವಿ ಪಡೆದವರು. 1920ರಲ್ಲಿ ಜಸ್ಟಿಸ್ ಪಕ್ಷದ ಕಡೆಯಿಂದ ಮದ್ರಾಸ್ ಕೌನ್ಸಿಲಿಗೆ ಆರಿಸಿಬಂದಿದ್ದರು. 1929–30ರ ವರೆಗೆ ಇಂಡಿಪೆಂಡೆಟ್ ಪಕ್ಷ ಸ್ಥಾಪಿಸಿ ಮಂತ್ರಿಮಂಡಲವನ್ನೇರ್ಪಡಿಸಿದ್ದರು. ಆ ಮೇಲೆ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಶ್ರೀ. ವಿ. ಐ. ಮುನಿಸ್ವಾಮಿ ಪಿಳ್ಳೆ, ಇವರು ವ್ಯವಸಾಯಖಾತೆ ಮತ್ತು ಗ್ರಾಮಾಭಿವೃದ್ಧಿಯ ಮಂತ್ರಿಗಳು. 1889ರಲ್ಲಿ ಹುಟ್ಟಿ ಕೊಯಂಮುತ್ತೂರಲ್ಲಿ ಮೆಟ್ರಿಕ್ಯುಲೇಶನ್ ವರೆಗೆ ಕಲಿತವರು. ಆದೊಂದು ಕಂಪೆನಿಯ ಹೆಡ್‌ಕ್ಲಾರ್ಕ್ ಮತ್ತು ಆ ಮೇಲೆ ಕಂಟ್ರಾಕ್ಟರ್ ಆಗಿದ್ದವರು. 1926ರಲ್ಲಿ ಹರಿಜನರ ಪರವಾಗಿ ಮದ್ರಾಸ್ ಕೌನ್ಸಿಲಿನ ನೇಮಕಹೊಂದಿದ ಮೆಂಬರರಾಗಿದ್ದರು. ಕೆಲವು ಆದಿದ್ರಾವಿಡ ಮತ್ತು ಹರಿಜನ ಸಂಘಗಳ ಅಧ್ಯಕ್ಷರಾಗಿರುವರು. ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಸೆನೆಟ್ ಮೆಂಬರರಾಗಿರುವರು. ಇತ್ತೀಚೆಗೆ ಕಾಂಗ್ರೆಸ್ ಪಕ್ಷಕ್ಕೆ ಸೇರಿ ತನ್ನ ರಾವ್ ಸಾಹೇಬ್ ಬಿರುದು ಬಿಟ್ಟುಬಿಟ್ಟಿರುವರು

ಶ್ರೀ. ವಿ. ವಿ. ಗಿರಿಯವರು ಕೈಗಾರಿಕೆ ಮತ್ತು ಮಜೂರ ಖಾತೆಯ ಮಂತ್ರಿಗಳು. 1891ರಲ್ಲಿ ಬರಹಂಪುರದಲ್ಲಿ ಹುಟ್ಟಿದವರು. ಪ್ರಸಿದ್ಧ ಕಾಂಗ್ರೆಸ್ ಭಕ್ತರು. ವಿಶೇಷವಾಗಿ ಮಜೂರ ಜನಹಿತ ಸಾಧಕರು. ಡಿಲ್ಲಿ ಎಸೆಂಬ್ಲಿಯ ಮೆಂಬರರಾಗಿ ಆರಿಸಲ್ಪಟ್ಟಿದ್ದರು. ಆ ಮೇಲೆ ಬೊಬ್ಬಿಲಿ ರಾಜರ ಎದುರಾಗಿ ಮದ್ರಾಸ್ ಎಸೆಂಬ್ಲಿ ಚುನಾವಣೆಗೆ ನಿಂತು ಅವರನ್ನು ಗೆದ್ದರು. ಬಂಗಾಳ ನಾಗಪುರ ರೈಲ್ವೆ ಮೊಕ್ಕದಮೆಯನ್ನು ರಾಜಿಮಾಡಿ ಯಶಸ್ಸು ಸಂಪಾದಿಸಿದರು. ಆಯರ್ಲೇಂಡಿನ ಡಬ್ಲಿನ್ ಯುನಿವರ್ಸಿಟಿಯಲ್ಲಿ ಕಲಿತು ಬೆರಿಸ್ಟರರಾದರು. ಗಂಜಾಮಿನಲ್ಲಿ 8 ವರ್ಷಗಳ ವರೆಗೆ ವಕಾಲತು ನಡಿಸಿ ಆ ಮೇಲೆ ವಕಾಲತು ಬಿಟ್ಟು ಮಜೂರ ಜೀವನದ ಸಮಸ್ಯೆಗಳನ್ನರಿತು ಅದನ್ನು ನಿವಾರಿಸುವುದರಲ್ಲಿ ನಿರತರಾದರು ಹಲವು ಅಂತರ ರಾಷ್ಟ್ರೀಯ ಮಜೂರ ಪರಿಷತ್ತುಗಳಲ್ಲಿ ಭಾಗ ವಹಿಸಿರುವರು. ಇವರ ತಂದೆ ಶ್ರೀ ಜೋಗಯ್ಯನವರು ಮದ್ರಾಸ್ ಕೌನ್ಸಿಲ್ ಮೆಂಬರರಾಗಿರುವರು.

ಶ್ರೀ. ಎಸ್. ರಮಾನಾಥನರು, ಪ್ರಕಟಣಾ ಶಾಖೆಯ ಮಂತ್ರಿಗಳು. ಇವರ ವಯಸ್ಸು 41 ವರ್ಷ. ಮದ್ರಾಸ್ ಯುನಿವರ್ಸಿಟಿಯ ಎಮ್. ಎ. ಬಿ. ಎಲ್. ಇವರು 1921ರಲ್ಲಿ ಅಸಹಕಾರ ಚಳವಳಿಕ್ಕೆ ಸೇರಿ ಸೆರೆಮನೆಗೆ ಹೋದರು. ತಮಿಳು ನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮತ್ತು ಆಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನಿನ ಮದ್ರಾಸ್ ಶಾಖೆಯ ಕಾರ್ಯದರ್ಶಿಗಳಾಗಿದ್ದರು. ಆ ಮೇಲೆ ತಮಿಳು ನಾಡಿನ ಸೆಲ್ಫ್ ರೆಸ್ಪೆಕ್ಟ್ ಚಳವಳಿಕ್ಕೆ ಸೇರಿ 'ರಿವೋಲ್ಟ್' ಎಂಬ ಸಾಮಾಜಿಕ ಕ್ರಾಂತಿಕಾರಕ ಪತ್ರಿಕೆಯ ಸಂಪಾದಕರಾಗಿದ್ದರು. ಆ ಮೇಲೆ ಅದನ್ನು ಬಿಟ್ಟುಬಿಟ್ಟರು. ಯುರೋಪಿನಲ್ಲೆಲ್ಲಾ ಸಂಚರಿಸಿ ಅನುಭವ ಪಡೆದವರು.

ಶ್ರೀ ಕೆ. ರಾಮನ್ ಮೆನನರು, ಕೋರ್ಟು ಮತ್ತು ಕಾರಾಗೃಹ ಮಂತ್ರಿಗಳು. ಇವರು ಕಲ್ಲಿಕೋಟೆಯ ವಕೀಲರು. ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. 1930–32ರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗ ವಹಿಸಿ ಎರಡು ಸಲ ಜೈಲಿಗೆ ಹೋದವರು. ಇವರ ಪ್ರಾಯ 36 ನಿಷ್ಠಾವಂತ ಕಾಂಗ್ರೆಸ್ ಕೆಲಸಗಾರರು.

ಶ್ರೀ. ಬಿ. ಗೋಪಾಲ ರೆಡ್ಡಿ, ಸ್ಥಳೀಯ ಸ್ವರಾಜ್ಯ ಖಾತೆಯ ಮಂತ್ರಿಗಳು. ಇವರು ಮಂತ್ರಿಗಳಲ್ಲೆಲ್ಲಾ ಎಳೆ ಹರೆಯದವರು. ಮೂವತ್ತರೊಳಗಿನ ಪ್ರಾಯ, ಶಾಂತಿನಿಕೇತನದಲ್ಲಿ ವಿದ್ಯಾಭ್ಯಾಸ ಮಾಡಿದವರು. ಒಳ್ಳೇ ತೆಲುಗು ವಿದ್ವಾಂಸರು ಮತ್ತು ಸುಸಂಸ್ಕೃತರು. ಉಪ್ಪಿನ ಸತ್ಯಾಗ್ರಹ ಮತ್ತು ಕಾಯಿದೆ ಭಂಗ ಚಳವಳದಲ್ಲಿ 3 ಸಲ ಜೈಲಿಗೆ ಹೋದವರು. ತನ್ನ ದಾಯಾದಿಯೂ ಕಳೆದ ಮದ್ರಾಸ್ ಕೌನ್ಸಿಲಿನ ಪ್ರೆಸಿಡೆಂಟರೂ ಆದ ದಿವಾನ್ ಬಹದೂರು ರಾಮಚಂದ್ರ ರೆಡ್ಡಿಯವರನ್ನು ಚುನಾವಣೆಯಲ್ಲಿ ಗೆದ್ದವರು.

ಪ್ರತಿಯೊಬ್ಬ ಮಂತ್ರಿಗಳಿಗೆ ಒಬ್ಬೊಬ್ಬ ಪಾರ್ಲಿಮೆಂಟರಿ ಸೆಕ್ರೆಟರಿಗಳು ನೇಮಿಸಲ್ಪಟ್ಟಿರುವರು ಶ್ರೀ. ಕಾಲೇಶ್ವರ ರಾಯರು ಪ್ರಧಾನ ಮಂತ್ರಿ ಶ್ರೀ. ರಾಜಗೋಪಾಲಾಚಾರ್ಯರ ಸೆಕ್ರೆಟರಿಗಳು, ಶ್ರೀ. ಜಿ. ವಿಶ್ವನಾಥನರು, ಶ್ರೀ.ಜಿ. ಪ್ರಕಾಶಮರ ಸೆಕ್ರೆಟರಿಗಳು. ಶ್ರೀ. ಎ. ಬಿ. ಶೆಟ್ಟಿ ಡಾಕ್ಟರ್, ಟಿ. ಎಸ್. ಎಸ್. ರಾಜನರಿಗೂ, ಶ್ರೀ. ಕೆ. ಆರ್. ಕಾರಂತರು, ಮಿ. ಯಾಕೂಬ್ ಹಾಸನರಿಗೂ ಎ. ಸಿ. ಜೆ. ವಾರ್ಕಿಯವರು ಡಾಕ್ಟರ್ ಸುಬ್ಬರಾಯನರಿಗೂ, ಶ್ರೀ. ಎನ್. ಎಸ್. ವರದಾಚಾರಿಯವರು ಶ್ರೀ. ಮುನಿ ಸ್ವಾಮಿ ಪಿಳ್ಳೆಯವರಿಗೂ, ಶ್ರೀ. ಬಿ. ಎಸ್. ಮೂರ್ತಿಯವರು ಶ್ರೀ. ವಿ. ವಿ. ಗಿರಿಯವರಿಗೂ, ಶ್ರೀ. ಬಾವನಿಂಡುರವರು ಶ್ರೀ. ರಮಾನಾಥನರಿಗೂ, ಮಿ ಅಹಮ್ಮದ್ ತಂಬಿ, ಮುಹಮ್ಮದ್ ವೈದೀನ್ ಮರಿಕೇರ್ ಸಾಹೆಬ್ ಬಹದೂರರು ಶ್ರೀ. ರಾಮನ್ ಮೆನನರಿಗೂ ಶ್ರೀ. ಎಮ್. ಭಕ್ತವತ್ಸಲ ಮುದಲಿಯಾರರು ಶ್ರೀ ಗೋಪಾಲ ರೆಡ್ಡಿಯವರಿಗೂ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟಿರುವರು.

(ಪಡಿಯಚ್ಚು ಚಿರಿಯರ ಪ್ರಪಂಚದಕ್ಕೆಸೆಯಿಂದ)

ಮದ್ರಾಸಿನ ಕ್ವೀನ್ ಮೇರೀಸ್ ಕಾಲೇಜಿನ ಕನ್ನಡ ಪಂಡಿತೆಯರಾದ ಶ್ರೀಮತಿ ಮಂದಾಕಿನೀ ಬಾಯಿ, ವಿದುಷೀ, ವಿಶಾರದ ಇವರು ಪಂಜಾಬ್ ಯುನಿವರ್ಸಿಟಿಯ 'ಹಿಂದೀ ಪ್ರಭಾಕರ' ಎಂಬ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಪರೀಕ್ಷೆಯಲ್ಲಿ ಪಾಸಾದವರು ದಕ್ಷಿಣ ಹಿಂದೂಸ್ಥಾನದಲ್ಲಿ ಕೆಲವರೇ ಇರುವರು


## WHAT BUILDS A GREAT BANK

The two vital features of a bank are its financial policy and its service. When for over thirty years a bank has been widely reputed for its SAFETY FIRST POLICY and for its courteous and efficient service it is no wonder that the people's confidence in it continues to grow.

RESOURCES OF A CRORE.

ESTD. 1906

CANARA BANK LIMITED.



## WANTED

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

# ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ
ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್
ರೀಡ್ಸಿನ ಕೈ, ಮತ್ತು ಕಾಲು
ಹಾರ್ಮೋನಿಯಮುಗಳು
ಬೇಕಾದ ನಮೂನೆಯಲ್ಲಿ
ದೊರೆಯುತ್ತವೆ.

ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದಗಾಯನ ಸಾಮಗ್ರಿಗಳನ್ನು
ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ
ಮಾಡಿಕೊಡಲಾಗುತ್ತದೆ.
ವಿಶೇಷ ಮಾಹಿತಿಗೆ ಬರೆಯಿರಿ.

*Proprietor.* **ATTAVAR BABOO,**
**Vasanthi Harmonium Works,**
**Hampankatta, Mangalore.**

ವಿ ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪ್ಪೋ, ಚರ್ಚರೋಡ್, ಉಡುಪಿ ಇಲ್ಲಿ ಮಾರಲ್ಪಡುತ್ತವೆ.



ಅದ್ಚಿ ನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮನಮೋಹಿನಿ!

# ಮಿಸ್ ಲಲಿತ

ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು
ಎತ್ತಿ ತೋರಿಸುವ ಪುಸ್ತಕವು.
ಹೊರಡಲಿರುವ ತಾರೀಕನ್ನು ಗಮನಿಸಿರಿ!
ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.
ಬರೆದವರು ಯಂ. ವಿ ಪುತ್ರಾನ್

ಕೂಡಲೇ ಬರೆಯಿರಿ        ಬೆಲೆ **0—8—0**

ವಿಳಾಸ — **M V. Puthran,**
*C/o* 34, Bomanji Lane, *2nd Floor.* ***Fort, BOMBAY***



**15 ವರ್ಷಗಳ ಅನುಭವ!**        **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸ್ಯೆನ್‌ಬೋರ್ಡುಗಳು ಮೊದಲಾದುವನ್ನು
ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು
ಪ್ರಸಿದ್ಧರಾಗಿರುವ

# ಪೈಂಟರ್ ಗಣಪತಿ ರಾವ್

**ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು
ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ
ಮಿತದರದಲ್ಲಿ ಮಾಡಿಕೊಡುವರು.**

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು
ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸಾಕ್ಷಾತ್ ಮಾತನಾಡಿರಿ

ಗಣಪತಿ ರಾವ್, ಪೈಂಟರ್,
ಸೋದೆ ಮಠದ ಲೇನು - - **ಉಡುಪಿ, ದ. ಕ.**



THE
# MOOLKY BANK, LTD.,
## MOOLKY.

# ದಿ ಮೂಲ್ಕಿ ಬೇಂಕ್, ಲಿಮಿಟೆಡ್,
## ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರದ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿಗದಿ ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ನೆರವು ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

**M. R Punja,**        ಯಂ. ಆರ್. ಪೂಂಜ,
*President & Manager,*        ಪ್ರೆಸಿಡೆಂಟ್ ಮತ್ತು ಮೆನೇಜರ್.



ಮಾಸ]        [ಪತ್ರಿಕೆ

# ವಿಶ್ವವಾಣಿ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

| | | |
|---|---|---|
| ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ) | ... . ... | ರೂ ೩—೮—೦ |
| ,, ,, (೬ ತಿಂಗಳಿಗೆ) | ... ... ... | ರೂ. ೨—೦—೦ |
| ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ) | | ರೂ. ೫—೦—೦ |

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

## ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

**ಹೆಚ್ಚು ವಿಚಾರಗಳಿಗೆ ಬರೆಯಿರಿ—**        ವ್ಯವಸ್ಥಾಪಕ—**'ವಿಶ್ವವಾಣಿ,'**
'ಅನ್ನಪೂರ್ಣ', ವಿಶ್ವೇಶ್ವರಪುರಂ, **ಬೆಂಗಳೂರು ನಗರ**
ಉಡುಪಿ ಏಜೆಂಟರು— **ನವಭಾರತ ಬುಕ್ ಡಿಪ್ಪೊ, ಉಡುಪಿ.**



# HOTEL INDIANA
## Bar and Restaurant

**ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು
ಯೋಚಿಸುವಿರೇಕೆ?**

# ಹೊಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದೆ.

**ಹೊಸ ಆಡಳಿತ!**        **ಹೊಸ ವ್ಯವಸ್ಥೆ!**

**ಎಲ್ಲವೂ ಹೊಸತೇ ಆಗಿ**

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

*Proprietor,*
**HOTEL INDIANA**
***Hampankatta, Mangalore***



# ಧರ್ಮಾರ್ಥ ಬಹುಮಾನಗಳು



**1—0—0ಗೆ!**

**-- ಯಾರಿಗೆ? --**

ರೂಪಾಯಿ 1-0-0 ಕೊಟ್ಟು 36 ಸೀಸೆ ಒಟ್ಟೊರೋಸ್ಟ್ ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

**ಇನಾಮುಗಳ ವಿವರ:—** 3 ಚಿಮ್ಮಿ ರಿಸ್ಟ್‌ವಾಚುಗಳು, 1 ರೈಲ್ವೆಟಾಯಿಂ ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟೆನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ಬೀರುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ '13 ಟಾಯಿಂಪೀಸು (10 ವರುಷ ಗ್ಯಾರಂಟಿ) ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. **ಇಂದೇ ಆರ್ಡರು ಕೊಡಿರಿ.**

**EASTERN TRADING COY.,**
*Post Box No.* ***12204, CALCUTTA. (N. Y.)***

## "ಅದೋ ಸುಮಿತ್ರಾಬಾಯಿಯವರು ಬಂದರಮ್ಮಾ! ನಾನೇನು ಮಾಡಲಿ!! ನಾ—ನೇ—ನು ಮಾಡಲಿ!!!"

ಸುದ್ದಿಯಷ್ಟು ದೊಡ್ಡ ಮತ್ತು ಶೀಘ್ರ 'ನ್ಯೂಸ್ ಏಜೆನ್ಸಿ'ಯು ಲೋಕದಲ್ಲಿ ಮತ್ತಾವುದೂ ಇಲ್ಲ. ಅದು ಎಷ್ಟೊಂದು ಚಮತ್ಕಾರವಾಗಿ ತನ್ನ ಕೆಲಸವನ್ನು ನಡಿಸಿಬಿಡುವುದು! ಮಾನವನ ಸ್ವಭಾವಸಿದ್ಧ ಉತ್ಸುಕತೆಯೇ ಸುದ್ದಿಯ ರೇಡಿಯೋ ಯಂತ್ರದ ವಿದ್ಯುಚ್ಛಕ್ತಿ. ಯಾವ ಪ್ರತಿಫಲದ ಆಶೆಯೂ ಇಲ್ಲದೆ, ಸಂಬಳಕ್ಕೆ ದುಡಿಯುವವರಿಗಿಂತ ಎಷ್ಟೋ ಹೆಚ್ಚಿನ ಉತ್ಸಾಹ ಮತ್ತು ಚಾತುರ್ಯದಿಂದ ತಾವಾಗಿ ಸುದ್ದಿಯ ವಾರ್ತಾವಾಹಕರು ಕೆಲಸನಡಿಸಿಬಿಡುವರು. ಅವರ ವಿಶಿಷ್ಟತೆಯೆಂದರೆ ಗುಟ್ಟನ್ನು ಗುಟ್ಟಾಗಿಯೇ ಬಯಲು ಮಾಡುವುದು. ಎಂತಹ ನಿಗೂಢವಾಗಿರುವ ರಹಸ್ಯವನ್ನಾದರೂ ಅವರು ಭೇದಿಸಿಬಯಲುಮಾಡಿಬಿಡುವರು. ಕಟ್ಟಕಡೆಗದು ಬಯಲು ರಹಸ್ಯವಾಗುವುದು. ಅಂತೆಯೇ ಶಿವಾನಂದರು ಅತಿ ರಹಸ್ಯವಾಗಿರಿಸಬೇಕೆಂದು ಅಷ್ಟೊಂದು ಚಡಪಡಿಸಿದ್ದ ಗುಟ್ಟು ಮರುದಿನ ಬೆಳಗ್ಗೆಯೇ ಶಿವಪುರಿಯಲ್ಲೆಲ್ಲಾ ಗುಜು ಗುಜು ಹಬ್ಬಿತ್ತು. ಎಲ್ಲೆಲ್ಲಿಯೂ ಅದೇ ಸುದ್ದಿ, ಅದೇ ಮಾತು. ಮಠದೊಳಗಣ ಗುಪ್ತ ಕೋಣೆಯೊಳಗೆ ಅಪರ ರಾತ್ರಿಯ ಮುಸುಕಿನಲ್ಲಿ ಅತಿ ಗೋಪ್ಯವಾಗಿ ನಡೆದ ಈ ರಹಸ್ಯವು ಬಯಲಾದ ಬಗೆಯಾದರೂ ಹೇಗೆ?

ನರಸಿಂಹಭಟ್ಟನು ಶಿವಾನಂದರ ಸೂತ್ರದ ಗೊಂಬೆ. ಆ ಗೊಂಬೆ, ಎಂದೆಂದಿಗೂ ಗುಟ್ಟು ಹೊರಗೆ ಬಿಡಲಾರದು. ನರಸಿಂಹನು ಡಾಕ್ಟರರನ್ನು ಕರೆಕೊಂಡುಬರಲು ಮಠದಿಂದ ಹೊರಬಿದ್ದು ಬೆಟ್ಟರಿಲೈಟ್ ಚಮಕಿಸಿದೊಡನೆಯೇ ಡ್ರೈವರನು, "ಹಾಂ, ಬನ್ನಿ ಸ್ವಾಮಿ ಇನ್ನೆಲ್ಲಿ ಹೋಗಬೇಕು?" ಎಂದು ಕೂಡಲೆ ಕಾರಿನ ದೀಪ ಬೆಳಗಿಸಿದನು. ಶಿವಾನಂದರ ದುಷ್ಕೃತ್ಯಗಳ ಅತಿ ನಿಪುಣ ಕೈಯಾಗಿದ್ದ ವೆಂಕಟ್ರಮಣನೂ ಆ ಸಂದರ್ಭದಲ್ಲಿ ಅಚಾತುರ್ಯದಿಂದ, "ಡ್ರೈವರ್, ಈಕ್ಷಣ ಹೋಗಬೇಕು ಡಾಕ್ಟರ್ ಗಂಗಾಧರರಾಯರಲ್ಲಿಗೆ! ಸ್ಟಾರ್ಟ್‌ಮಾಡು" ಎಂದು ಮೋಟರಿನ ಬಾಗಿಲು ತೆಗೆದು ಒಳ ಕೂತನು. ಈ ಅಚಾತುರ್ಯವೇ ಸುದ್ದಿಯ ದೂತನನ್ನೆಬ್ಬಿಸಿಬಿಟ್ಟಿತು. ಡ್ರೈವರನು ಮೋಟರ್ ಸ್ಟಾರ್ಟ್ ಮಾಡುವುದನ್ನೇ ಬಿಟ್ಟು "ಯಾಕೆ ಸ್ವಾಮಿ ಈ ರಾತ್ರಿಗೆ ಡಾಕ್ಟರರಲ್ಲಿ ಹೋಗುವುದು? ಏನಾಗಿದೆ ಮಠದಲ್ಲಿ? ಅದಾರು ಸ್ವಾಮಿ 'ಅಯ್ಯೋ! ಅಯ್ಯೋ!' ಎಂದು ಕೂಗಿದುದು? ಬಹಳ ಚಿಕ್ಕವಳು ಪಾಪ ಆ ಹುಡುಗಿ! ನಿಮ್ಮ ಸ್ವಾಮಿಯು ದೊಡ್ಡ ದೈತ್ಯ! ಏನಾಯಿತೋ ಪಾಪ! ಎಂದು ಡ್ರೈವರನು ಎಲ್ಲವನ್ನು ತಿಳಿದವನಂತೆ ಹೇಳುವಾಗ ವೆಂಕಟ್ರಮಣನು ವಿಸ್ಮಿತನಾದ. ಮೋಟರ್ ನಿಲ್ಲುವುದೊಂದೇ ತಡ, ಸ್ಟೀಯರಿಂಗಿಗೆ ತಲೆಯಿಟ್ಟು ಗೊರಕೆ ಹೊಡೆಯುವ ಈ ಟೊಣಪ್ಪನಿಗೆ ಇದೆಲ್ಲಾ ಹೇಗೆ ಗೊತ್ತಾಯಿತೆಂದು, ಆಲೋಚಿಸತೊಡಗಿದ. ಆ ಮೇಲೆ ದರ್ಪದ ನಟನೆಯಿಂದ, "ಏನೆಲ್ಲಾ ಹೇಳುತ್ತಿರುವೆಯೋ ಮನಬಂದಂತೆ? ಯಾವ ಹುಡುಗಿ? ಸ್ವಾಮಿಗಳಿಗೆ ಜ್ವರ ಬರತೊಡಗಿ ದಿವಸ ಹತ್ತಾಯಿತು. ಈಗ ಜ್ವರ ತಲೆಗೇರಿ ಬುದ್ಧಿಯೇ ಅವರ ಸ್ವಾಧೀನವಿಲ್ಲ. ಕೂಗಿದುದು ಅವರು, ಜ್ವರದ ಬಾಧೆ ತಡಕೊಳ್ಳಲಾರದೆ. ಅದಕ್ಕಾಗಿಯೇ ನಾನೀಗ ಡಾಕ್ಟರರನ್ನು ಕರತರಹೊರಟುದು ಈ ರಾತ್ರಿಗೆ." ಎಂದ ವೆಂಕಟ್ರಮಣ. "ಹೌದೌದು ಜ್ವರ! ನನಗೆಲ್ಲಾ ಗೊತ್ತಿಲ್ಲೆಂದು ತಿಳಿದಿರಾ? ಸಾಕು ಸಾಕು ಸುಮ್ಮಗಿರಿ" ಎಂದು ಡ್ರೈವರನು ವೆಂಕಟ್ರಮಣನ ಕಡೆಗೊಮ್ಮೆ ಕಳ್ಳನೋಟಬೀರಿ ಮೋಟರ್ ಸ್ಟಾರ್ಟ್‌ಮಾಡಿ ಓಡಿಸಿದ. ವೆಂಕಟ್ರಮಣನು ಡಾಕ್ಟರರನ್ನು ಕರೆತಂದೊಡನೆಯೇ ಆ ಡ್ರೈವರನನ್ನು ಕಳುಹಿಸಿಬಿಡುವ ನಿರ್ಧಾರಮಾಡಿದ. ಟೇಕ್ಸಿ ಡ್ರೈವರನೊಬ್ಬನು ಸುದ್ದಿಯ ದೂತನಾದನೆಂದರೆ ಮತ್ತೆ ಕೇಳಬೇಕೇ? ಇಲ್ಲವಾದರೆ ಅಷ್ಟು ಬೇಗ ಸುದ್ದಿಯು ತನ್ನ ಕೆಲಸ ಮಾಡುತ್ತಿದ್ದಿಲ್ಲ. ಯಾಕೆಂದರೆ ಡಾಕ್ಟರರಿಂದ ಎಂದೂ ಗುಟ್ಟು ಹೊರಬೀಳುವ ಹಾಗಿಲ್ಲ. ಇದು ಹೊರತು ಸ್ವಾಮಿಯು ರೂ. 200 ನಗ್ದಿ ಕೊಟ್ಟು ಗುಟ್ಟು ರಟ್ಟುಮಾಡದೆ ಮಾನವನ್ನುಳಿಸಿಕೊಡಬೇಕೆಂದು ಕೇಳಿಕೊಂಡಿದ್ದರು. ಮನೆಯಜ್ಜಿಯು ತನ್ನ ಮಕ್ಕಳು ಮೊಮ್ಮಕ್ಕಳಿಗೆ ಕಠಿಣ ಕಾಯಿಲೆಯಾದಾಗ ದಿಗಿಲುಗೊಂಡು ಬೇರೆ ಬೇರೆ ಕಡೆಯ ದೈವ ದೇವರುಗಳಿಗೆ ತೀರಿಸಲು ಸಾಧ್ಯವೇ ಇಲ್ಲದ ಹರಿಕೆಗಳನ್ನು ಹೇಳಿಕೊಳ್ಳುವಂತೆ ಶಿವಾನಂದರು ಶೋಕಿನಮನೆ, ಅಮೂಲ್ಯ ಚಿನ್ನಾಭರಣ, ಬೇಕಷ್ಟು ಆಸ್ತಿಪಾಸ್ತಿಯ ಆಶೆಬೀರಿ ನಾಗಿಯನ್ನು ಹೇಗೂ ಸಮಾಧಾನಪಡಿಸಿದರು. ಇದು ಹೊರತು ಆಗಲೇ ರೂಪಾಯಿ ನೂರು ಕೊಟ್ಟರು. ಲಲಿತೆಗೆ ಯಾವ ಅಪಾಯವೂ ಆಗಲ್ಲೆಂದು ಡಾಕ್ಟರರಿಂದ ಭರವಸೆ ಹೇಳಿಸಿದರು. ಆ ಮೇಲೆ ಬೆಳಗಾಗಲು ಎರಡು ಮೂರು ಘಂಟೆಯಿರುವಾಗಲೇ ಅರೆಮರವೆಯಲ್ಲಿದ್ದ ಲಲಿತೆಯನ್ನು ನಾಗಿಯೊಂದಿಗೆ ಅವಳ ಮನೆಗೆ ವೆಂಕಟ್ರಮಣನು ಮುಟ್ಟಿಸಿದ್ದನು. ಅದಕ್ಕಾಗಿ ಅವನು ಮೊದಲಿನದನ್ನು ಬಿಟ್ಟು ಬೇರೆಯೇ ಒಂದು ಟೇಕ್ಸಿ ತರಿಸಿದ್ದನು. ಎಲ್ಲವೂ ಅತಿ ರಹಸ್ಯವಾಗಿಯೇ ನಡೆದಿರುವುದು. ಹೊರಗಣ ಜನರಿಗೇನೂ ತಿಳಿದಿಲ್ಲೆಂಬ ಸಮಾಧಾನದಿಂದ ಶಿವಾನಂದರೂ ನರಸಿಂಹನೂ ಆಗಾಗ ಹೃದಯದಲ್ಲೇಳುತ್ತಿದ್ದ ತಳಮಳವನ್ನು ಮೂಲೆಗೊತ್ತುತ್ತಿದ್ದರು. ಆದರೆ ಪಾತಕವು ಒಳಗೊಳಗಿಂದಲೇ ಊರೆಲ್ಲಾ ತುಂಬಿ ನಾನಾ ಉದ್ಗಾರಗಳನ್ನೆಬ್ಬಿಸುತ್ತಿತ್ತು.

## ಅಧ್ಯಾಯ ೪

## ಭಿ ಕಾ ರಿ ಣಿ

### ಸಾಮಾಜಿಕ ಕಾದಂಬರಿ

ಶಿವಪುರದ ಹೆಮ್ಮಕ್ಕಳ ಟ್ರೈನಿಂಗ್ ಸ್ಕೂಲಿನ ಉಪಾಧ್ಯಾಯಿನಿಯರಲ್ಲೊಬ್ಬರೂ ವಿದ್ಯಾರ್ಥಿನಿಯರಿಗೆ ಪ್ರಿಯರೂ ಅತ್ಯಂತ ಪ್ರಗತಿಪರ ಮನೋವೃತ್ತಿಯವರೂ ಆದ ಶ್ರೀಮತಿ ಸುಮಿತ್ರಾಬಾಯಿಯವರು ಮರುದಿನ ಬೆಳಗ್ಗೆ ಶಾಲೆಗೆ ಹೋದಾಗ, ಲಲಿತೆಯ ಸಂಗಾತಿಯರು, "ಇವತ್ತು ಲಲಿತೆ ಶಾಲೆಗೆ ಬರುವುದಿಲ್ಲ ಸುಮಿತ್ರಮ್ಮಾ, ಅವಳಿಗೆ ಪಾಪ ಜ್ವರಬರುತ್ತದೆ; ಇನ್ನವಳು ಶಾಲೆಗೇನೇ ಬರುವುದಿಲ್ಲವಂತೆ; ಜ್ವರ ಗುಣವಾದ ಮೇಲೆ ಬರುತ್ತಾಳಂತೆ," ಎಂದೆಲ್ಲಾ ತಮಗೆ ತಿಳಿದಿರುವುದನ್ನು ಬಹಳ ಉಮೇದಿನಿಂದ ಸುಮಿತ್ರಾಬಾಯಿಯವರಿಗೆ ತಿಳಿಸಿದರು. ಲಲಿತೆಯ ಮೇಲೆ ಅವರಿಗೆಷ್ಟು ಪ್ರೀತಿ ಇರುವುದೆಂಬುದನ್ನವರು ಅರಿತಿದ್ದರು. ಆದುದರಿಂದ ಅವಳ ವಾರ್ತೆಯನ್ನವರಿಗೆ ತಿಳಿಸಿದರೆ ತಮ್ಮ ಮೇಲೆ ಅವರು ಪ್ರಸನ್ನರಾದಾರೆಂದೇ ಹುಡುಗಿಯರು ಅಷ್ಟೊಂದು ಉಮೇದುಗೊಂಡುದು. ಆದರೆ ಅಂದಿನ ಸುಮಿತ್ರಾಬಾಯಿಯೇ ಬೇರೆಯಾಗಿ ಹೋಗಿದ್ದರು. ಎಂದಿನಂತಹ ವಿನೋದ, ಉಲ್ಲಾಸ ಮತ್ತು ಮಾತು ನಗೆಯ ಚೆಲ್ಲಾಟವೆಲ್ಲಾ ಕುಂದಿ ಮುಖವು ಕಂದಿಹೋಗಿತ್ತು. ಅವರ ಮೃದು ಹೃದಯವನ್ನು ಅದಾವುದೋ ತೀವ್ರ ಚಿಂತೆಯು ಬೇನೆಯು ಸುಡುತ್ತಿತ್ತು. ಹುಡುಗಿಯರೆಲ್ಲಾ ಇದನ್ನು ಕಂಡು ವಿಸ್ಮಿತರಾಗಿ ಸುಮ್ಮನಾದರು. ಅಂದು ಸುಮಿತ್ರಾಬಾಯಿಯವರು ಕ್ಲಾಸಿನಲ್ಲಿ ಹುಡುಗಿಯರನ್ನು ಓದಹೇಳಿ ತಾನು ದೀರ್ಘಕಾಲ ಕುರ್ಚಿಯಲ್ಲೇ ಕೂತು ಗಾಢ ಚಿಂತಾಮಗ್ನರಾಗಿದ್ದರು. ಸ್ವಲ್ಪವೇನಾದರೂ ಪಾಠಮಾಡುವಾಗಲೂ ವಿಮನಸ್ಕರೇ ಆಗಿದ್ದರು. ಅವರು ಶಾಲೆಗೆ ಬಂದೊಡನೆಯೇ ಅವರ ಸಹೋದ್ಯೋಗಿನಿ ಸುಶೀಲೆಯು "ಸುಮಿತ್ರಮ್ಮಾ, ನಿಮ್ಮ ಲಲಿತೆಯ ಗತಿಯೇನಾಯಿತೆಂದು ಗೊತ್ತೇ? ಊರೆಲ್ಲಾ ಹಬ್ಬಿದೆ ಅವಳ ಸುದ್ದಿ" ಎಂದು ಗುಟ್ಟಿನಲ್ಲಿ ಎಲ್ಲಾ ಸಂಗತಿಗಳನ್ನವರಿಗೆ ತಿಳಿಸಿದರು. ಅವರದನ್ನು ಕೇಳಿ ಸ್ತಂಭಿತರಾದರು. ಒಂದು ಶಬ್ದ ಕೂಡಾ ಮಾತಾಡದಾದರು ಅವರ ಕಂಗಳಲ್ಲಿ ನೀರು ತುಂಬಿಬಂತು. "ಸುಶೀಲ ನಾನು ಹೊರಗೆ ಹೋಗಿಬರುತ್ತೇನೆ"ಂದು ಹೇಳಿ ಟೀಚರ್ ರೂಮಿನಿಂದ ಹೊರನಡೆದರು. ವರಾಂಡದ ಒಂದು ಮೂಲೆಗೆ ಹೋಗಿ ಉಕ್ಕಿ ಬರುವ ದುಃಖವನ್ನು ಸಹಿಸಲಾರದೆ ಬಿಕ್ಕಿ ಬಿಕ್ಕಿ ಅತ್ತರು. ಅಷ್ಟು ಕೋಮಲವಾಗಿತ್ತು ಅವರ ಹೃದಯ. ಆಗ ಶಾಲಾರಂಭವಾಗುವ ಘಂಟೆಯಾಯಿತು. ಒಡನೆಯೇ ಅವರ ದುಃಖವನ್ನು ಒತ್ತಿಕೊಂಡು ಕಣ್ಣೀರನ್ನೊರಸಿ ಕ್ಲಾಸ್ ರೂಮಿಗೆ ಹೋದರು. ಆಗ ಹುಡುಗಿಯರು ಮೇಲಿನ ಮಾತುಗಳನ್ನೆಲ್ಲಾ ಅವರೊಡನೆ ಹೇಳಿದರು.

"ಲಲಿತೆಗೆ ಈ ಗತಿಯಾಯಿತೇ? ಆಹ, ಎಷ್ಟು ಒಳ್ಳೆಯ ಹುಡುಗಿ! ಎಂತಹ ಗುಣನಡತೆಯವಳು! ಅದೆಷ್ಟು ಚುರುಕುಬುದ್ಧಿಯವಳು! ಮೇಲಾಗಿ ಎಷ್ಟೊಂದು ರೂಪವತಿ. ಅಯ್ಯೋ ದೇವರೆ! ಎಂತಹ ರಾಕ್ಷಸರಪ್ಪ ಪುರುಷ ಜಾತಿ! ಅದರೂ ಶಿವಾನಂದರು ಸರ್ವಬಿಟ್ಟ ಸನ್ಯಾಸಿ! ಸನ್ಮಾನ್ಯ ಯೋಗಿ!! ಸಮಾಜದ ಧರ್ಮಾಧಿಕಾರಿ!!! ಅವರೇ ಇಂತಹ ನರಪಿಶಾಚಿ!!!! ಅಹಹ, ಏನೆನ್ನಬೇಕು ಈ ವಿಪರ್ಯಾಸಕ್ಕೆ! ಇಂತಹ ನರಾಧಮನನ್ನೂ ವಿಚಾರಹೀನ ಸಮಾಜವು ಧರ್ಮಾಧಿಕಾರದ ಪೀಠಕ್ಕೇರಿಸಿ ಪೂಜಿಸುವುದಲ್ಲವೇ? ಅವನನ್ನೂ ಜನರು ಧರ್ಮಗುರುವಾಗಿ ಪಂಗಡಿಸಿ ಪತಾಕೆ, ಬುದ್ಧಿಯೆಂದು ತಲೆಯ ಮೇಲೆ ಹೊತ್ತು ತಿರುಗುವರಲ್ಲವೇ? ಕಾಣಿಕೆ ಉಡುಗೊರೆಗಳಿಂದ ಸತ್ಕರಿಸಿ ಕೊಬ್ಬಿಸುವುದಲ್ಲವೇ? ಛೀ! ಛೀ!! ಇಂತಹ ತುಚ್ಛ ನೀಚ ಧರ್ಮಾಧಿಕಾರಿಗೂ, ವಿವೇಕಹೀನ ಕರ್ತವ್ಯ ಭ್ರಷ್ಟ ಜಡ ಸಮಾಜಕ್ಕೂ ಶತಶಃ ಧಿಕ್ಕಾರವಿರಲಿ! ಅಯ್ಯೋ ಲಲಿತೆ ನಿನ್ನ ಗತಿ ಹೀಗಾಯಿತೇ? ನಿನ್ನ ತಾಯಿಯೇ ನಿನ್ನನ್ನು ಜೀವನ್ಮೃತಳಾಗಿ ಮಾಡಲು ನೆರವಾದಳಲ್ಲವೇ? ಅವಳೇನು ಮಾಡಿಯಾಳು ಮತ್ತೆ! ಅವಳ ಮಗಳು ಅವಳಂತೆಯೇ ಆಗದೆ ಬೇರೆ ರೀತಿಯಾಗಲು ಕ್ರೂರ ಸಮಾಜವು ಬಿಡುವುದೇ? ವೇಶ್ಯೆಯ ಮಗಳು ಎಷ್ಟೊಂದು ಸುಶೀಲೆಯಾದರೂ ವೇಶ್ಯೆಯೇ ಅಲ್ಲವೇ? ಸಮಾಜದ ರೀತಿಯೇ ಹಾಗಲ್ಲವೇ? ರೂಢಿಯ ಗೂಡೊಳಗಣ ಗೊಂಬೆಯಾದ ಅದಕ್ಕೆ ಲಲಿತೆಯ ಹೃದಯದ ಪರಿಯೇನು ಗೊತ್ತು! ಅಹ, ಎಳೆ ಬಾಲೆಯ ಮೇಲೆ ಎಂತಹ ಪೈಶಾಚಿಕ ಅತ್ಯಾಚಾರ! ಮನಸ್ಸಾದರೂ ಹೇಗೆ ಬಂತಪ್ಪಾ ಆ ಪಿಶಾಚಿಗೆ! ನ್ಯಾಯ, ನೀತಿ, ಧರ್ಮ, ದೇವರೆಲ್ಲಿ? ಅವೆಲ್ಲವೂ ಅಂಧರೂಢಿಯ, ಪುರುಷಾಧಿಕಾರದ ಧನ ದೌಲತ್ತಿನ ಕೈಗೊಂಬೆಗಳು! ಹಾಳು ಸಮಾಜ ಹಾಳು ರೀತಿ ನೀತಿ, ಹಾಳು ಧರ್ಮ ದೇವರು, ಎಲ್ಲವೂ ಹಾಳು ಇವೆಲ್ಲಾ ಹಾಳಾಗಿಹೋಗದೆ ಸ್ತ್ರೀಯರಿಗೆಲ್ಲಿ ಒಳ್ಳೇ ಬಾಳು!" ಎಂದೆಲ್ಲಾ ಸುಮಿತ್ರಾಬಾಯಿಯವರಲ್ಲಿ ತರಂಗವಾಗಿ ಭಾವನೆಗಳೆದ್ದು ಹೃದಯದಲ್ಲಿ ಪ್ರಚಂಡ ಕೋಲಾಹಲವನ್ನೆಬ್ಬಿಸಿದವು. ಸ್ತ್ರೀ ಸಮಾಜದ ಮರನಷ್ಟಿಗಾಗಿ ಅನುದಿನವೂ ಪರಿತಪಿಸುತ್ತಿದ್ದ ಸ್ವತಂತ್ರ ವಿಚಾರದ ಮಹಿಳೆಯಿದ್ದರವರು. ಕುರ್ಚಿಯಲ್ಲಿ ಕುಳಿತು ಚಿಂತಾಮಗ್ನರಾಗಿದ್ದ ಅವರಿಗೆ ತಾನೊಂದು ಕ್ಲಾಸು ನಡಿಸುತ್ತಿದ್ದೇನೆಂಬ ಗೋಷ್ಟಿಯೇ ಇರಲಿಲ್ಲ. ಎಳೆ ಬಾಲೆ—ಲಲಿತೆಯ ಚಿತ್ರವೇ ಅವರ ಮನೋದೃಷ್ಟಿಯ ಮುಂದೆ ಕಣ್ಣೀರಿಡುತ್ತಾ ನಿಂತಿದ್ದಿತು. ಅವರೆಷ್ಟು ಪ್ರಯತ್ನಿಸಿದರೂ ಮತ್ತೂ ಅದೇ ಚಿತ್ರ ಕಣ್ಣಮುಂದೆ ಬಂದು ನಿಲ್ಲುವುದು. ಅವಳನ್ನೊಮ್ಮೆ ನೋಡಿಯೇ ಬರಬೇಕೆಂದು ತೋರಿತವರಿಗೆ, ಅಂತೆಯೇ ಅವರು ನಿರ್ಧರಿಸಿದರು.

ಲಲಿತೆಗೆ ಸಂಜ್ಞಾನ ಬಂದಾಗ ಮೊದಲು ಆವಳೆತ್ತಿದ ಉದ್ಗಾರವೆಂದರೆ, "ಅದೋ ಸುಮಿತ್ರಾಬಾಯಿಯವರು! ನಾನೇನು ಮಾಡಲಮ್ಮಾ!! ನಾನೇನು ಮಾಡಲಿ!!!" ಎಂಬುದು. ನಾಗಿಯು ಯಾವ ರೀತಿಯಲ್ಲಿ ಸಂತೈಸಿದರೂ ಲಲಿತೆಯು ಭ್ರಾಂತಳಂತೆ ಮೇಲಿನ ಉದ್ಗಾರವನ್ನು ಆಗಾಗ ಎತ್ತುತ್ತಲೇ ಇದ್ದಳು. ಆ ಉದ್ಗಾರವೆತ್ತಿದಾಗಲೆಲ್ಲಾ ಅವಳ ಕಣ್ಣುಗಳಿಂದ ಒಂದೇ ರೀತಿ ನೀರಿಳಿದು ಬರುತ್ತಿತ್ತು. ಆಗ, "ಅಯ್ಯೋ! ನಾನೇಕಿವಳನ್ನು ಶಾಲೆಗೆ ಕಳುಹಿಸಿದೆನಪ್ಪಾ! ಎಲ್ಲಿಂದೊಬ್ಬರು ಸುಮಿತ್ರಾಬಾಯಿಯವರು ಇವಳಿಗೆ ಸಂಘಟನೆಯಾದರೋ!" ಎಂದು ನಾಗಿಯು ಹಂಬಲಿಸುತ್ತಿದ್ದಳು. ಶಿವಪುರ ಮಠದಲ್ಲಿ ನಡೆದ ವಿನ್ಯಾಸದ ಮರುದಿನ ಸಂಜೆ ಹಲವು ಬಾರಿ ಲಲಿತೆಯು ಮೇಲಿನ ಉದ್ಗಾರವೆತ್ತಿದ್ದಳು. ನಾಗಿಯು ಅದನ್ನೇನುಮಾಡುವುದೆಂದು ತೋರದೆ ಕಂಗೆಟ್ಟು ಅವಳ ಕಾಲಬುಡದಲ್ಲಿ ಕುಳಿತಿದ್ದಳು. ಆಗ ಸುಮಿತ್ರಾಬಾಯಿಯವರು ನಾಗಿಯ ಮನೆಗೆ ಪ್ರವೇಶಿಸುವಂತೆ ಬಹಳ ಶಂಕಿಸಿ ಶಂಕಿಸಿ ನಾಗಿಯ ಮನೆಯ ಒಳಹೊಕ್ಕರು. ರಸ್ತೆಬದಿಯ ಬಾಗಿಲಿಂದ ಒಳಗೆ ಬಂದೊಡನೆಯೇ ತುಸುಹೊತ್ತು ನಿಂತು ಯೋಚಿಸಿದರು. ಆಗ ಒಳಗಿಂದ, "ಅದೋ ಸುಮಿತ್ರಾಬಾಯಿಯವರು! ನಾನೇನು ಮಾಡಲಮ್ಮಾ! ನಾನೇನು ಮಾಡಲಿ!" ಎಂದು ಲಲಿತೆಯು ಗೋಳಿಡುವುದು ಕೇಳಿಬಂತು. ಅವರು ಚಕಿತರಾಗಿ ಗೊಂಬೆಯಂತೆ ಕ್ಷಣಕಾಲನಿಂತು ಉತ್ತರಕ್ಷಣದಲ್ಲೇ ಒಳಗೆ ಲಲಿತೆಯ ಕೋಣೆಗೆ ಹೋಗಿ "ಲಲಿತ! ಲಲಿತ!" ಎಂದು ಕರೆದು ಮುಂದೇನು ಹೇಳುವೆನೆಂದು ತೋಚದೆಯೇ ಸಂತಾಪಭರದಲ್ಲಿ ಕುತ್ತಿಗೆಯು ಬಿಗಿದು ಬಂದೋ ಸುಮ್ಮನಾದರು. ಲಲಿತೆಯು ದೃಷ್ಟಿ ತಿರುಗಿಸಿ ಸುಮಿತ್ರಾಬಾಯಿಯವರನ್ನು ಕಣ್ಣು ಕಣ್ಣು ನೋಡಿದಳು. ಎವೆಯಿಕ್ಕದೆ ನೋಡಿದಳು. ದೀನವದನಳಾಗಿ ನೋಡಿದಳು. ಧರಧರನೆ ಕಣ್ಣೀರು ಸುರಿಸಿದಳು. ತುಸು ಸಮಯದ ಮೇಲೆ ಮಾತಾಡಲೆತ್ನಿಸಿದಳು. ಆಗಲಿಲ್ಲ. ಬಹಳವಾಗಿ ಪ್ರಯತ್ನಿಸಿದಳು. ನಿಷ್ಫಲ. ಆ ಮೇಲೆ ಕೈಸನ್ನೆಯಿಂದ ಸುಮಿತ್ರಾಬಾಯಿಯವರನ್ನು ಸಮೀಪದ ಬರಹೇಳಿ ಅವರ ಅಂಗೈಗಳೆರಡನ್ನೂ ಹಿಡಿದು ಚುಂಬಿಸಿದಳು. ತನ್ನ ಕೈಗಳೆರಡನ್ನೂ ಪ್ರಯಾಸದಿಂದ ಒಟ್ಟುಮಾಡಿ ವಂದಿಸಿದಳು. ಸುಮಿತ್ರಾಬಾಯಿಯವರು ಎಷ್ಟೊಂದು ದೃಢನಿರ್ಧಾರದಿಂದ ದುಃಖವನ್ನು ಕಟ್ಟಿಕೊಂಡರೂ ಪ್ರಯೋಜನವಾಗಲಿಲ್ಲ. ಅದು ಒಮ್ಮೆಯೇ ಕಟ್ಟೊಡೆದು ಹೊರ ಸರಿಯಿತು. ಅವರು, ದೊಪ್ಪನೆ ಲಲಿತೆಯ ಬಳಿ ಕೂತು ಅವಳ ಕೈಗಳೆರಡನ್ನೂ ಹಿಡಿದು ಅತ್ತುಬಿಟ್ಟರು. ಎಷ್ಟೊಂದು ಪ್ರಯತ್ನಿಸಿದರೂ ಮತ್ತೆ ಶಬ್ದಗಳೇ ಹೊರಡವು ಅವರ ಬಾಯಿಯಿಂದ. ಇಬ್ಬರೂ ಒಬ್ಬರೊಬ್ಬರನ್ನು ನೋಡುತ್ತಾ ಕೆಲಸಮಯ ಕಳೆದರು. ಧಾರೆಕಟ್ಟಿ ಕಣ್ಣೀರು ಸುರಿಸಿದರು. ಆ ಮೌನವಾದರೂ ಅದೆಷ್ಟು ಅರ್ಥಪೂರ್ಣ! ಎಷ್ಟೊಂದು ಹೃದ್ಯಾವಹ! ಸುಮಿತ್ರಾಬಾಯಿಯವರೆಂದರೆ ಮುನಿಸುಬೀಳುತ್ತಿದ್ದ ನಾಗಿಯ ಮೇಲೂ ಅದು ಪರಿಣಾಮವನ್ನುಂಟುಮಾಡಿತು. ಎಂತಹ ವಜ್ರಹೃದಯವನ್ನೂ ಕರಗಿಸಿಬಿಡುವಷ್ಟು ಪ್ರಭಾವದ ಮೌನವದು. ನಾಗಿಯು ಮಾತೇನು ಮತ್ತೆ? ಅವಳೂ ಕಣ್ಣೀರಿಳಿಸಿ ದುಃಖಿಸುತ್ತಾ ಕೂತಳು. ಲಲಿತೆಯು ಏನೋ ಹೇಳಲೆತ್ನಿಸಿ ಗಂಟಲೊತ್ತಿಹಿಡಿದಂತಾಗಿ ಚಡಪಡಿಸಿದಳು. ಆಗ ಸುಮಿತ್ರಾಬಾಯಿಯವರು, "ಅಯ್ಯೋ ಲಲಿತ! ಬೇಡ ಮಗು ಬೇಡ ಮಾತಾಡಲೆತ್ನಿಸಬೇಡ!" ಎಂದು ಎದೆಯ ಭಾಗವನ್ನು ಪೂಸಿ ಲಲಿತೆಯನ್ನು ಸಮಾಧಾನ ಪಡಿಸಲೆತ್ನಿಸಿದರು. ಅವಳು ಜೀವಸಂಕಟವಾಗಿ ಕಣ್ಣು ಮುಚ್ಚಿದಳು.

"ಅಯ್ಯೋ ಮಗು! ಏನಾಯಿತು!! ಏನಾಯಿತು!!!" ಎಂದು ನಾಗಿಯು ತಲ್ಲಣಗೊಂಡು ಓಡಿಬಂದು ಲಲಿತೆಯ ಗಲ್ಲಹಿಡಿದೆತ್ತಿದಳು. "ಏನಿಲ್ಲ. ಸ್ವಲ್ಪ ಹಾಲುತನ್ನಿ, ಬೇಗತನ್ನಿ!" ಎಂದರು ಸುಮಿತ್ರಾಬಾಯಿಯವರು ಉದ್ವೇಗಗೊಂಡು. ನಾಗಿಯು ಅಡಿಗೆಮನೆಗೋಡಿ ಒಂದು ಕಂಚಿನ ಲೋಟೆಯಲ್ಲಿ ಹಾಲು ಹಿಡಕೊಂಡು ಓಡಿಬಂದಳು. ಅವಳ ಕೈಕಾಲುಗಳು ಕಂಪಿಸುತ್ತಿದ್ದವು. ಹೃದಯವು ಡಣಬಡಿಸುತ್ತಿತ್ತು. ಸುಮಿತ್ರಾಬಾಯಿಯವರು, "ಲಲಿತ, ಲಲಿತ! ಇದೋ ಸ್ವಲ್ಪ ಹಾಲುಕುಡಿ ಮಗು" ಎಂದರು. ಲಲಿತೆಯು ಮೆಲ್ಲಗೆ ಬಾಯಿತೆರೆದು ಹಾಲು ಕುಡಿದು ತುಸು ಸಮಯದಲ್ಲಿ ಕಣ್ಣು ತೆರೆದಳು. ಮತ್ತು ಕಣ್ಣೀರು ಹರಿಯತೊಡಗಿತು. ಆಗ ನಾಗಿಯು ತಳಮಳಗೊಂಡು, "ಅಮ್ಮಾ, ನೀವಿನ್ನು ಹೋಗಿ. ಡಾಕ್ಟರರು ಬರುವ ಹೊತ್ತಾಯಿತು. ಯಾರನ್ನೂ ಲಲಿತೆಯ ಹತ್ತಿರ ಬರಬಿಡಕೂಡದೆಂದವರು ಹೇಳಿರುವರು. ಮತ್ತೆ ಸಿಟ್ಟುಗೊಂಡಾರು" ಎಂದಳು. ಸುಮಿತ್ರಾಬಾಯಿಯವರು ತುಸು ಕಠಿಣ ದೃಷ್ಟಿಯನ್ನೊಮ್ಮೆ ನಾಗಿಯ ಕಡೆಗೆ ಬೀರಿ, "ಆಯ್ತಾಯ್ತು ಹೋಗುತ್ತೇನೆ; ಇನ್ನೊಮ್ಮೆ ಬರುತ್ತೇನೆ" ಎಂದರು. "ಯಾಕೆ ಇನ್ನೊಮ್ಮೆ ಬರುವುದಮ್ಮಾ? ಲಲಿತೆಯು ಇನ್ನು ಶಾಲೆಗೆ ಬರುವಹಾಗಿಲ್ಲ. ನಮ್ಮ ಮನೆಗೆಲ್ಲಾ ನೀವು ಯಾಕೆ ಬರುವುದು? ಇನ್ನು ಬರುವುದು ಬೇಡಮ್ಮಾ" ಎಂದುಬಿಟ್ಟಳು ನಿರ್ದಾಕ್ಷಿಣ್ಯವಾಗಿ. ಸುಮಿತ್ರಾಬಾಯಿಯವರನ್ನು ಕಂಡರೆ ಲಲಿತೆಗೆ ಅಸಹನೀಯ ದುಃಖವಾಗುವುದೆಂಬ, ಮತ್ತು ಲಲಿತೆಯನ್ನವರು ಪುನಃ ಎಲ್ಲಿಯಾದರೂ ತನ್ನ ವಶಮಾಡಿಕೊಂಡುಬಿಟ್ಟರೆ ಮತ್ತೇನು ಆಪತ್ತುಂಟಾಗುವುದೋ ಎಂಬ ಭೀತಿ ನಾಗಿಗೆ. ಸುಮಿತ್ರಾಬಾಯಿಯವರಿಗೆ ನಾಗಿಯ ಅಭಿಪ್ರಾಯವೆಲ್ಲಾ ತಿಳಿದುಹೋಯಿತು. ಅವರು ಲಲಿತೆಯನ್ನು ನೋಡಿ ದೀರ್ಘ ನಿಶ್ವಾಸಬಿಟ್ಟರು. "ಲಲಿತ ನಾನು ಹೋಗುತ್ತೇನೆ. ಸಂತಾಪಪಡಬೇಡ." ಎಂದು ಹೇಳುವಾಗಲೆ ಒಮ್ಮೆಯೇ ದುಃಖವು ಏರಿಬರಲು ಅವರು ಸೆರಗಿನ ತುದಿಯನ್ನು ಬಾಯಿಗೊತ್ತಿಟ್ಟು ಕಚ್ಚಿಹಿಡಿದು ಕಣ್ಣೀರಿಳಿಸುತ್ತಾ ಹೊರನಡೆದುಬಿಟ್ಟರು. ಆದರೆ ಲಲಿತೆಯ ಕೋಣೆಬಿಟ್ಟು ಚಾವಡಿಗೆ ಹೋದೊಡನೆಯೇ ಅವರಿಗೆ ಕಾಲೇ ಬಾರದು. ಎಷ್ಟು ಪ್ರಯತ್ನಿಸಿದರೂ ಹೆಜ್ಜೆಯಿಡಲು ಸಾಧ್ಯವಾಗದೆ ಹೋಯಿತು. ಅವರು ತುಸು ಹೊತ್ತು ನಿಂತಲ್ಲೇ ನಿಂತರು. ಆ ಮೇಲೆ ಅದೇನೋ ಬೇರೆ ಯೋಚನೆ ಮಾಡಿ ದೃಢ ನಿರ್ಧಾರ ಮಾಡಿದರು. ಮೆಲ್ಲಗೆ ನಾಗಿಯ ಮನೆಯಿಂದ ಹೊರ ನಡೆದರು. ಅವರು ಮನೆಗೆ ಹೋಗುವಾಗ ಅವರ ಮನಸ್ಸಿನಲ್ಲುಂಟಾದ ಭಾವನೆಗಳನ್ನೆಲ್ಲಾ ನಾವಿಲ್ಲಿ ವಿವರಿಸುವ ಅವಶ್ಯವಿಲ್ಲ. ವಾಚಕರೇ ಅದನ್ನು ಊಹಿಸಿಕೊಳ್ಳಬಹುದು.

**ಶಭಾಸು! ಶಭಾಸು!! ಬೇಡಮ್ಮಾ, ಬೇಡ! ಸಸಿಗಳನ್ನು ಕಾಡಿಸಬೇಡ!!**

(ಮುಂದಿನ ಸಂಚಿಕೆ ನೋಡಿರಿ)

"NAVAYUGA"—is the best medium for—ADVERTISEMENT.

# ವಿದ್ಯಾಭ್ಯಾಸದಲ್ಲಿ ಸುಧಾರಣೆಗಳ ಆವಶ್ಯಕತೆ

(ಲೇಖಕ:— ಗಣೇಶ ಸುಬ್ಬಯ್ಯ, ಬೆಳ್ಳಾರೆ, ದ. ಕ.)

ನಮ್ಮ ದೇಶದ ವಿದ್ಯಾಭ್ಯಾಸದ ರೀತಿಯು ಬಹಳ ಹೀನಸ್ಥಿತಿಯಲ್ಲಿದೆ. ಅದು ದೇಶದ ಸ್ಥಿತಿಗಳನ್ನನುಸರಿಸಿಕೊಂಡು, ಈ ಕಾಲಕ್ಕೆ ಸರಿಯಾಗಿ ಜೀವನವನ್ನು ನಡೆಸಲು ಅನುಕೂಲವಾಗುವಂತೆ ಇರುವುದಿಲ್ಲ. ನಮ್ಮಲ್ಲಿಯ ವಿದ್ಯಾಭ್ಯಾಸದ ರೀತಿಯು ದೇಶಸ್ಥಿತಿಗಳಿಗೆ ಸರಿಯಾಗಿ, ಪೂರ್ವಾರ್ಜಿತವಾಗಿ ಹೊಂದದ ಕಾರಣ, ಇತರ ಪಾಶ್ಚಾತ್ಯ ರಾಷ್ಟ್ರಗಳ ವಿದ್ಯಾಭ್ಯಾಸದ ಕ್ರಮಗಳಿಗಿಂತ ಹಿಂದಿನ ತರಗತಿ ಬರಲು ಕಾರಣವಾಗಿರುತ್ತದೆ. ಮುಖ್ಯವಾಗಿ ಆರ್ಥಿಕ ದುಸ್ಥಿತಿಯು ಇಡೀ ದೇಶವನ್ನೇ ವ್ಯಾಪಿಸಿರುತ್ತದೆ. ಆದುದರಿಂದ ಪ್ರತಿಯೊಬ್ಬನಿಗೂ ತನ್ನ ಜೀವನವನ್ನು ಸುಸೂತ್ರವಾಗಿ ಸಾಗಿಸತಕ್ಕ ವಿದ್ಯಾಭ್ಯಾಸದ ಅಗತ್ಯವಿರುತ್ತದೆ.

ಹಿಂದೂ ದೇಶದ ಈಗಿನ ಶಾಲೆ, ಕಾಲೇಜುಗಳಲ್ಲಿ ಬರೀ ನೌಕರಿಗೆ ಬೇಕಾಗುವ ರೀತಿಯ ಶಿಕ್ಷಣವನ್ನು ಮಾತ್ರ ಕೊಡುತ್ತಾರೆ. ಅಲ್ಲದೆ, ಪ್ರತಿವರ್ಷದಲ್ಲಿಯೂ ನೌಕರಿಗಳಿಗೆ ಯೋಗ್ಯವುಳ್ಳ ಅನೇಕ ಮಂದಿಗಳು ಕಾಲೇಜುಗಳಿಂದ ಉತ್ತೀರ್ಣರಾಗಿ ಬರುತ್ತಿದ್ದಾರೆ. ಅವರು ನೌಕರಿಗಾಗಿ ಬಹಳ ಅಲೆಯಬೇಕಾಗುವುದು. ನಿರುದ್ಯೋಗವು (Unemployment) ದಿನೇ ದಿನೇ ಪ್ರಾಬಲ್ಯ ಹೊಂದುತ್ತಿರಲು ಇಂತಹರಿಗೆ ಉದ್ಯೋಗವು ಹೇಗೆ ದೊರಕಬೇಕು? ನೌಕರಿಯೊಂದಲ್ಲದೆ ಇತರ ಯಾವ ಸ್ವತಂತ್ರವಾದ ವೃತ್ತಿಯನ್ನು ಅವಲಂಬಿಸಲು ಅವರು ದುರ್ಬಲರಾಗಿರುತ್ತಾರೆ.

ಇಂತಹ ನಿರುದ್ಯೋಗವನ್ನು ಕಡಿಮೆ ಮಾಡಬೇಕಾದರೆ, ನಮ್ಮ ದೇಶದ ವಿದ್ಯಾಭ್ಯಾಸದಲ್ಲಿ ಸುಧಾರಣೆಗಳ ಆವಶ್ಯಕತೆಯಿರುತ್ತದೆ. ನಮ್ಮ ಜೀವನವನ್ನು ಸ್ವತಂತ್ರವಾಗಿ ನಡೆಸುವ ವಿಧಾನವನ್ನು ಬೋಧಿಸತಕ್ಕ ಶಿಕ್ಷಣವೂ ನಮಗೆ ಅಗತ್ಯವಿರುತ್ತದೆ. ಅಂತಹ ಶಿಕ್ಷಣವನ್ನು ಅಭ್ಯಾಸಗಳ ಮೂಲಕ (Practically) ಬೋಧಿಸುವ ಏರ್ಪಾಡುಮಾಡಬೇಕು. ನಮಗೆ ಅಗತ್ಯವಿರುವ ಎಲ್ಲಾ ತರದ ಕೃಷಿ, ಕೈಗಾರಿಕೆ, ಮೊದಲಾದುವುಗಳನ್ನು ಕಲಿಸಬೇಕು.

ಕೃಷಿಯು ಅಭ್ಯಾಸವು ಪ್ರಧಾನವಾದುದು. "ಕೃಷಿತೋನಾಸ್ತಿ ದುರ್ಭಿಕ್ಷ"ವು ಬರಲಾರದು" ಎಂಬ ಗಾದೆಯು ಸತ್ಯ. ಶಾಲೆಯ ವಿದ್ಯಾರ್ಥಿಗಳು ಎಲ್ಲಾ ತರದ ಸಸ್ಯಗಳನ್ನು ವ್ಯವಸಾಯಮಾಡುವ ಕ್ರಮಗಳನ್ನು ಅಭ್ಯಾಸಿಸಬೇಕು. ಸಸ್ಯಗಳನ್ನು ಬೆಳೆಸುವ ಕ್ರಮವನ್ನು ಬೋಧಿಸುವುದರಿಂದ ಮಾತ್ರ ಪ್ರಯೋಜನವು ಸಿಗಲಾರದು. ಪ್ರತಿ ಒಂದು ತೆರನಾದ ಸಸ್ಯಗಳನ್ನು ವಿದ್ಯಾರ್ಥಿಗಳು ಸ್ವತಃ ಬೆಳೆಯಿಸಿ ಅದರ ಅನುಭವ (Experience) ವನ್ನು ಪಡೆಯಬೇಕು. ಹೊಲಗಳಲ್ಲಿ ವಿದ್ಯಾರ್ಥಿಗಳು ಕೆಲಸಮಾಡಬೇಕು. ಉಳುವುದು, ಬಿತ್ತುವುದು, ಪೈರನ್ನು ಶೇಖರಿಸುವುದು ಮೊದಲಾದುವುಗಳನ್ನು ಕಲಿತುಕೊಳ್ಳುವುದು ಅತ್ಯಾವಶ್ಯಕ. ಇಂತಹ ಯೋಜನೆಗಳಿಗೆ ಶಾಲೆಗಳಿಗೆ ಮಾದರಿಗಾಗಿ ಹೊಲಗಳೂ ತೋಟಗಳೂ ಅಗತ್ಯವಿರುತ್ತವೆ. ಪ್ರತಿಯೊಂದು ಶಿಕ್ಷಣವನ್ನು ಶಾಸ್ತ್ರೀಯವಾಗಿ ಕೊಡಬೇಕು.

ಕೃಷಿಯಂತೆ ಕೈಗಾರಿಕೆಯೂ ಪ್ರಧಾನವಾದುದು. ನಮ್ಮ ದೇಶಕ್ಕೆ ಬೇಕಾದ ಸಾಮಗ್ರಿಗಳನ್ನು ನಾವೇ ಒದಗಿಸಿಕೊಳ್ಳುವಷ್ಟು ಸಮರ್ಥರಾಗಬೇಕು. ಎಲ್ಲಾ ತರದ ಕೈಗಾರಿಕೆಗಳ ಶಿಕ್ಷಣವನ್ನು ಕೊಡುವ ಏರ್ಪಾಡು ಅಗತ್ಯವಿದೆ. ಕೈಗಾರಿಕೆಗಳನ್ನು ಸ್ವತಃ ವಿದ್ಯಾರ್ಥಿಗಳಿಂದಲೇ ಮಾಡಿಸಬೇಕು. ಇದಕ್ಕಾಗಿ ವಿದ್ಯಾರ್ಥಿಗಳು ತಮ್ಮ ಪಾಠದಸಮಯದಲ್ಲೇ ಕೈಗಾರಿಕೆಗಳ ಕಾರಖಾನೆಗಳಿಗೆ ಹೋಗಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬೇಕು. ಕಾರಖಾನೆಗಳಿಗೆ ಹೋಗಿ ಅಲ್ಲಿನ ಕೆಲಸಗಾರರೊಡನೆ (workers) ಕಲೆಯುವುದರಿಂದ ಹೆಚ್ಚಿನ ಅನುಭವವುಂಟಾಗಬಹುದು. ಈ ರೀತಿಯ ಏರ್ಪಾಡು ಅಮೇರಿಕಾ ಖಂಡದ ಸಂಯುಕ್ತ ಸಂಸ್ಥಾನ (United States of America)ದಲ್ಲಿದೆ. ಅದರಿಂದ ಅಲ್ಲಿನ ವಿದ್ಯಾರ್ಥಿಗಳು ಹೆಚ್ಚಿನ ಅನುಭವವನ್ನು ಪಡೆಯುತ್ತಿದ್ದಾರೆ. ಇಂತಹ ಕ್ರಮಗಳಿಲ್ಲವೆ ನಮಗೆ ಮಾತ್ರ ಹೊಸದು. ಇತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ರೀತಿಯ ವಿದ್ಯಾಭ್ಯಾಸವೂ ಆಚರಣೆಯಲ್ಲಿದೆ.

ಇನ್ನು ವ್ಯವಹಾರದ ಕ್ರಮವನ್ನು ಬೋಧಿಸುವುದು ಅಗತ್ಯವಿದೆ. ಸ್ವದೇಶ ಮತ್ತು ವಿದೇಶಗಳಲ್ಲಿ ವ್ಯವಹರಿಸುವ ಕ್ರಮಗಳನ್ನು ವಿದ್ಯಾರ್ಥಿಗಳು ಅರಿತಿರಬೇಕು. ಈ ರೀತಿಯ ಸುಧಾರಣೆಗಳು ವಿದ್ಯಾಭ್ಯಾಸದ ಕ್ರಮಗಳಲ್ಲಿ ಅಗತ್ಯವಿರುತ್ತದೆ. ಅವುಗಳನ್ನು ಇನ್ನಾದರೂ ಅನುಸರಿಸಿದರೆ ನಮ್ಮಲ್ಲಿನ ವಿದ್ಯಾವಂತ ತರುಣರಿಗೆ ಬರುವ ನಿರುದ್ಯೋಗದ ದುರವಸ್ಥೆಯು ದೂರವಾಗಬಹುದು.

## ಕಿರಿಯರ ಪ್ರಪಂಚದ
### ಪುಸ್ತಕಗಳು.

| | | | |
|---|---|---|---|
| ೧ ನಾಟಕಕಥೆಗಳು | ೦ | ೨ | ೦ |
| ೨ ಮುಂದಿನ ದೇವರು | ೦ | ೨ | ೦ |
| ೩ ಸ್ವತಂತ್ರ ಜೀವನೋಪಾಯ | ೦ | ೨ | ೬ |
| ೪ ಕುಶ-ಲವ | ೦ | ೪ | ೦ |
| ೫ ಸಂಶಯ ಪಿಶಾಚಿ | ೦ | ೬ | ೦ |
| ೬ ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ೭ ಮಧುವನ | ೧ | ೮ | ೦ |
| ೮ ವ್ಯಭಿಚಾರಿಣಿ ಯಾರು? | ೦ | ೮ | ೦ |
| ೯ ಹೆಂಡ್ತಿ ಗಂಡನಾದರೆ! | ೦ | ೪ | ೦ |
| ೧೦ ಪುರುಷವಧು! | ೦ | ೪ | ೦ |

**ಕಿರಿಯರ ಪ್ರಪಂಚ, ಉಡುಪಿ.**

## ಭಾಷಾಂತರಕಾರರು
**ದೊರೆಯದೆ ಪೇಚಾಡುವಿರೇಕೆ?**

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

**'ಟ್ರಾನ್ಸ್‌ಲೇಟರ್,'**
*C/o* **'ಕಿರಿಯರ ಪ್ರಪಂಚ,'**
**ಉಡುಪಿ.**

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

## ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ!
ವಿಶೇಷ ಮಾಹಿತಿಗೆ ಬರೆಯಿರಿ.

**ವ್ಯವಸ್ಥಾಪಕ, ಕಥಾಕುಂಜ**
ಬೆಳಗಾಂವಿ.

CHEAPEST SAFEST INDUSTRIAL
INSURE WITH & REPRESENT
**RANJIT**
BIMA C° L^TD AMRITSAR
APPLY FOR HONOURABLE JOB & DECENT SALARY

ವಾರ] 'ನವಯುಗ' [ಪತ್ರಿಕೆ
ವಾರ್ಷಿಕ ಚಂದಾ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦

**ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.**

## S. U. N. & CO. *Choukhamba, Benares City.*

**ಮೂರು ಇನಾಮುಗಳು.**

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದಹಾಸ್ಸಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಸ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮರಾಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಪಡಲು ಸಾದಾ 16 ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ, ಅರೆ ಕಡಮೆ 16 ಮೊಳ ಕ್ರವರ್ ಅಂಚು ರೂ. $10\frac{1}{2}$ ಯಿಂದ ರೂ. 16, ಖಣ 1ಕ್ಕೆ ರೂ. $1\frac{1}{4}$ರಿಂದ ರೂ. 10ರ ವರೆಗೆ, ಪೋಸ್ಟು ಚಾರ್ಜು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

**ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ,** ಚೌಖಂಬಾ, ಬೆನಾರಿಸ್, ಕಾಶಿ



## ಧರ್ಮಾರ್ಥ
## ಬಹುಮಾನಗಳು
## 1-4-0ಗೆ !
### --- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14 ಸೀಸೆ ಸ್ನೋ ಟ್ವೊರೋಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಹಮ್ಮ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಶ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿ; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರಾ, 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲ್ಯಾಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

**ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0.** ಇಂದೇ ಆರ್ಡರು ಕೊಡಿರಿ.

Bengal Watch Co.,
Post Box No. 12214, CALCUTTA

# The Combined Booking Agency
AND
# The Joint Booking Office
## MANGALORE, SOUTH KANARA.

**ಅತ್ಯಲ್ಪ ಖರ್ಚಿನಿಂದ !** **ಅತಿ ಸುಖಕರವಾದ ಪ್ರಯಾಣ !**

ಮುಂಬಾಯಿ, ಗೋವಾ, ಕಾರವಾರು ಇತ್ಯಾದಿ ಕಡೆಗಳಿಗೆ
ನಮ್ಮ ಬಸ್ಸುಗಳ ಮೂಲಕ—

**ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗಾ ಹರಿಹರಕ್ಕಾಗಿ ಹುಬ್ಬಳ್ಳಿ, ಬೆಳಗಾಂ, ಮುಂಬಾಯಿ ಪ್ರಾಂತ್ಯಕ್ಕೂ ಕಾರವಾರ ಮಾರ್ಗವಾಗಿ ಮುಂಬಾಯಿ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳಸಲನುಕೂಲ.**

ಊರುಗಳ ಬದಲಾವಣೆ, ನೋಟುಗಳ ಬದಲಾವಣೆ, ಜನತೆಯ ಸಂಪರ್ಕ, ಆಹಾರದ ಅನುಕೂಲ್ಯ, ವಿಶ್ರಾಂತಿ ಗೃಹಗಳ ಏರ್ಪಾಡು, ನೌಕರರ ಸಭ್ಯತೆ, ಇವೆಲ್ಲವೂ ಬಸ್ಸು ಪ್ರಯಾಣದಲ್ಲಿವೆ.

**ನೀವು ಕಂಡ ಕುಂದು ಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜ್ಯೊಂಟ್ ಮೆನೇಜರರಿಗೆ ಬರೆದು ತಿಳಿಸಿರಿ—**

**ಜ್ಯೊಂಟ್ ಮೆನೇಜರ್ಸ್,**
ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು,
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು.

## The Coondapoor Bank, Ltd.,

Head Office – **Coondapoor** Branch Office –**Brahmavar**

**Beg to announce that a new Branch has been opened at SHANKARANARAYANA on 4-6-37**

## ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿಜೂನ್ ತಾ 4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.

ಚಾಲ್ತಿ ಠೇವಣಾತಿಗಳು ಸಾ ಶೆ 2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ ಶೆ 4,

ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ ಶೆ 4

6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5%,

1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5½%

2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ.

ಭಂಗಾರದ ಈಡಿನಮೇಲೂ ಸಾಲದೊರೆಯುವುದು

ವಿಶೇಷ ಸೂಚನೆ —ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತದೆ ಸಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರೆಕೊಳ್ಳಿರಿ.

Halsnad Soorappayya, ಚೆಯರ್‌ಮೇನ್ — N. Sheshagiri Rao, ಸಕ್ರೇಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.



## ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲಿಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ಬಾ ಫೋಟೋಗಳನ್ನು ನೋಡುತ್ತಾ, ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

## ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತಂಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

**ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,**

**೩ ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜಿ. ಟಿ. ಮದರಾಸ್.**



ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦—೪—೦

# ಪುರುಷವಧು

ನಕ್ಕುಹುಣ್ಣು ನಗಿಸುವ ಏಕಾಂಕ ಪ್ರಹಸನ.
ಕಿರಿಯರ ಪ್ರಪಂಚ, ಉಡುಪಿ



# SUPPLY AGENCY LTD. UDIPI

## ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ

**Authorised Capital Rs. 1,00,000** **Subscribed & Paid up Capital Rs. 29,720**

**ಈ ಕೆಳಗಿನ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.**

| | | | | |
|---|---|---|---|---|
| 3 | ತಿಂಗಳಿಂದ | 6 | ತಿಂಗಳ ವರೆಗೆ | **4½%** |
| 7 | ,, | 9 | ,, | **5%** |
| 10 | ,, | 12 | ,, | **5½%** |
| 13 | ,, | 24 | ,, | **6¼%** |

**ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು ಅಥವಾ ಕಾಗದ ಬರಿಯಬಹುದು.**

**ಎಸ್. ಯು. ಪಣಿಯಾಡಿ,**
ಮೆನೇಜಿಂಗ್ ಡೈರಕ್ಟರ್.



USE
# *SUVASINI AGARBATHIES*
(REGISTERED)

**SRI BHARATHA VASTU MANDIRA, UDIPI.**


Printed by P VENKATARAMANACHARYA for & on behalf of SUPPLY AGENCY LTD, at THULUNAD PRESS UDIPI and Published by K H SHETTY at NAVAYUGA OFFICE UDIPI

Registered No. M. 3618

ಒಂದಾಣೆ

NAVAYUGA
A Nationalist Kanarese Weekly, UDIPI, S K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣು ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ

VOL XVI-NO 47

29-7-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ಹಾಡೊಳು ಮೊಳಗುತಿದೆ ತುಮುಲನಾದ,

# ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ

ಸಂಪುಟ ೧೬ ]  ಉಡುಪಿ, ಗುರುವಾರ ೨೯ ಜುಲಾಯಿ, ೧೯೩೭  [ಸಂಚಿಕೆ ೪೭

THE

# Canara Industrial & Banking SYNDICATE, LIMITED.

[INCORPORATED IN BRITISH INDIA]

ESTD:] [1925

**BRANCHES:**

| | |
|---|---|
| 1 BOMBAY | 16 BANGALORE CITY |
| 2 MANGALORE | 17 SAGAR |
| 3 UDIPI | 18 BYADGI |
| 4 KARKALA | 19 KARWAR |
| 5 KANHANGAD | 20 HONAVAR |
| 6 HUNGARCUTTA | 21 SIRSI |
| 7 BRAHMAVAR | 22 ANKOLA |
| 8 COONDAPOOR | 23 KUMTA |
| 9 UPPINANGADI | 24 BHATKAL |
| 10 KASARGODE | 25 NANDYAL |
| 11 PAYYANUR | 26 PRODATTUR |
| 12 TALIPARAMBA | 27 TADPATRI |
| 13 CANNANORE | 28 BELGAUM |
| 14 GADAG | 29 HOSPET |
| 15 HUBLI | 30 ADONI |
| 31 BELLARY | |

*Head Office*
"MUKUNDA NIVAS"
UDIPI, (S I)

***MEMBER:*** RESERVE BANK OF INDIA
***MEMBER:*** CLEARING HOUSE, BOMBAY

| | |
|---|---|
| Authorised & Issued Capital | Rs. 10,00,000 |
| Subscribed Capital | „ 7,74,300 |
| Paid up Capital & Reserves | „ 5,74,790 |
| Total resources exceed | „ 46 lakhs |

UDIPI,
*19th July 1937*

P A. Pai Bros,
*Managing Agents*

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

# ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

**ಅಮೃತಾಂಜನ ಡಿಪೋವಿನ ಶ್ರೀವರ್ಣದ 'ರೈಸಿಂಗ್ ಸನ್'**

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

**ಅಮೃತಾಂಜನ ಡಿಪೋ,** — ಬೊಂಬಾಯಿ, ಮದ್ರಾಸು, ಕಲ್ಕತ್ತ.

# ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
**೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

**ಡಾ. ಎ. ಎಸ್. ಮೂರ್ತಿ,**
**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**

DIAMONDS! DIAMONDS!!

# K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ತಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

# ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

## ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
**"ಯೋಗೀಶ್ವರರ ಶಕ್ತಿಸಾಹಸ"**
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಶಕ್ತಿ:—ಪಂಡಿತ್ ಎ. ವಿ. ಆರಮುಮ್
**ಚಿಕಾಕೋಲ್**

# Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums,
Specially Constructed in our Work Shop. Well tuned and fitted.

***Repairs of all kinds of Musical instruments undertaken at a very moderate rate to the Complete satisfaction of our customers***

***A Trial order is earnestly solicited.***

For Further Particulars
*Apply to.*

**M. K. KORAGAPPA,** *Propr'etor.*

# ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಇದೇ ಜುಲಾಯಿಯ ತಿಂಗಳಲ್ಲಿ ಪ್ರಾರಂಭವಾಗುವದು. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮೂಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "**ಪ್ರೊಸ್‌ಪೆಕ್ಟಸ್**"ಗಾಗಿ ೨ ಆಣೆ ಸ್ಟ್ಯಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್:
ತುಂಗಭದ್ರಾ
೧೦—೭—೧೯೩೭
**ಪ್ರೇಮ ವಿದ್ಯಾಪೀಠ**

ಉಡುಪಿಯ ಆದರ್ಶ ಉಪಹಾರಗೃಹ!

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು! ಮಿತ ದರದಲ್ಲಿ ಊಟ ಉಪಚಾರಗಳು!**
**ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ!** ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ!**
**ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**
**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕಿಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

# ಹಿಂದಿನ ಮತ್ತು ಇಂದಿನ ರಾಜ್ಯಭಾರ —

## ಜನತೆಯ ಹಿತಸಾಧನೆಗೆ ಬೇಕಷ್ಟು ಸಂದರ್ಭವಿದೆ

### ಮಹಾತ್ಮಾ ಗಾಂಧಿಯವರ ಅಭಿಮತ.

ಹಳೆಯ ಮತ್ತು ಇಂದಿನ ಹೊಸರಾಜ್ಯಭಾರ ಕ್ರಮಗಳೊಳಗಿರುವ ಪ್ರಾಮುಖ್ಯ ಅಭ್ಯಂತರವನ್ನು ನಾವು ಒಂದುಕ್ಷಣ ಸಮಾಲೋಚಿಸುವ ಆವಶ್ಯವಿದೆ. ಅದುಚೆನ್ನಾಗಿ ಮನವರಿಕೆಯಾಗಬೇಕಾದರೆ, ನಾವು ಇಂಡಿಯಾ ಆಕ್ಟಿನ ವಿಘಾತುಕದೋಷಗಳನ್ನು ತುಸುಸಮಯ ಮರೆತು ಬಿಡಲೆತ್ನಿಸಬೇಕು. ಕಾಂಗ್ರೆಸು ತನ್ನ ದಾರಿ ಬಿಟ್ಟು ಅತಿದೂರ ಸರಿದು ಅಧಿಕಾರಸ್ವೀಕರಿಸಿರುವದಾದರೂ, ಅದು ಪಡೆದಿರುವ ಅಧಿಕಾರ ಪ್ರತಿಯೊಬ್ಬ ಕಾಂಗ್ರೆಸ್ ವಾದಿಯು ಗಮನಿಸಿಕೊಳ್ಳಲಿ. ಮೊದಲು ಮಂತ್ರಿಗಳು ಗವರ್ನರರ ಅಧೀನರಾಗಿ ನಡೆಯಬೇಕಾಗಿತ್ತು. ಈಗ ಅವರು ಕಾಂಗ್ರೆಸಿನ ಅಧೀನವಿರುವರು ಕಾಂಗ್ರೆಸಿಗೆ ಜವಾಬ್ದಾರರಿರುವರು. ಕಾಂಗ್ರೆಸಿನಿಂದಾಗಿ ಅವರಿಗೆ ಆ ಸ್ಥಾನ ದೊರೆತಿರುವುದು. ಗವರ್ನರರನ್ನೂ ಐ. ಸಿ. ಯಸ್. ಮೊದಲಾದ ಉಚ್ಚ ಅಧಿಕಾರಿಗಳನ್ನೂ ತೆಗೆದು ಹಾಕಲು ಸಾಧ್ಯವಿಲ್ಲವಾದರೂ ಮಂತ್ರಿಗಳಮಾತನ್ನವರು ಮನ್ನಿಸತಕ್ಕದ್ದು. ಅಂದೊಂದು ಪರಿಧಿಯೊಳಗೆ ಮಂತ್ರಿಗಳಿಗೆ ಅವರ ಮೇಲೆ ಸಂಪೂರ್ಣ ಅಧಿಕಾರವಿರುವುದು. ಈ ಅಧಿಕಾರದಿಂದಾಗಿ ಕಾಂಗ್ರೆಸ್ ಮಂತ್ರಿಗಳು ಕಾಂಗ್ರೆಸಿನ ಅಂದರೆ ಜನತೆಯ ಶಕ್ತಿಯನು ಹೆಚ್ಚಿಸಬಹುದು. ಮಂತ್ರಿಗಳ ಕೆಲಸವು ಗವರ್ನರರಿಗೆ ಎಷ್ಟೊಂದು ಅಪ್ರಿಯವಾಗಿ ಇರಲಿ, ಅವರು ಇಂಡಿಯಾ ಆಕ್ಟಿನ ವ್ಯಾಪನೆಯೊಳಗೆ ನಡೆದರೆ ಅವರಕೈಯೇ ಮೇಲಾಗುವುದು ಇದನ್ನೆಲ್ಲಾ ಸರಿಯಾಗಿ ಪರಾಮರ್ಶಿಸಿದಾಗ, ಜನತೆಯು ಅಹಿಂಸಾವಾದಿಗಳಾಗಿರುವ ವರೆಗೆ ರಾಷ್ಟ್ರೀಯ ಜೀವನವನ್ನು ಬೆಳೆಸಲು ಕಾಂಗ್ರೆಸ್ ಮಂತ್ರಿಗಳಿಗೆ ಸಾಕಷ್ಟು ಸ್ವಾತಂತ್ರ್ಯವಿರುವುದು. ಈ ಅಧಿಕಾರವನ್ನು ಫಲಕಾರಿಯಾಗಿ ಉಪಯೋಗಿಸುವುದಕ್ಕಾಗಿ ಜನತೆಯು ಕಾಂಗ್ರೆಸ್ ಮಂತ್ರಿಗಳಿಗೆ ಯಥಾರ್ಥವಾದ ಸಹಾಯವನ್ನೀಯಬೇಕು. ಮಂತ್ರಿಗಳು ತಪ್ಪು ಮಾಡಿದರೆ ಅಥವಾ ಕರ್ತವ್ಯಬಾಹಿರರಾದರೆ ಅದನ್ನು ಯಾರಾದರೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಿಗೆ ತಿಳಿಸಿ ಅವರನ್ನೂ ದಾರಿಗೆ ಹಚ್ಚಬಹುದು. ಆದರೆ ಯಾರಾದರೂ ತಾನೇ ನ್ಯಾಯಕರ್ತನಾಗಿ ಬಿಡಬಾರದು. ಕಾಂಗ್ರೆಸಿನ ಅಧಿಕಾರವನ್ನು ಪ್ರಶ್ನಿಸುವ ರಾಜಕೀಯ ಪಕ್ಷವು ದೇಶದಲ್ಲಿ ಇನ್ನಾವುದೂ ಇಲ್ಲೆಂಬುದನ್ನು ಕಾಂಗ್ರೆಸ್ ಪಕ್ಷೀಯರು ಮನಗಂಡುಕೊಳ್ಳಬೇಕು. ಯಾಕೆಂದರೆ ಇತರ ಪಕ್ಷಗಳವರು ಹಳ್ಳಿಗಳೊಳಗೆ ಹೋಗಿರಲ್ಲಿಲ್ಲ. ಮತ್ತು ಆ ಕೆಲಸವೇನೂ ಒಂದು ದಿನದಲ್ಲಿ ಮಾಡಿ ಮುಗಿಸುವಂತಹದಲ್ಲ.

ಮಂತ್ರಿಗಳು ಅರೆಹೊಟ್ಟೆ, ಬರಿಹೊಟ್ಟೆಯಲ್ಲಿ ನರಳುತ್ತಿರುವ ಮಿಲ್ಯಾಂತರ ಜನರ ನಿಜವಾದ ಕ್ಷೇಮಸಾಧನೆಯ ಕಳಕಳಿಕೆಯುಳ್ಳವರಾಗಿ ನಿಸ್ವಾರ್ಥತೆಯಿಂದಲೂ ಪ್ರಾಮಾಣಿಕತೆಯಿಂದಲೂ ಎಚ್ಚರಿಕೆಯಿಂದಲೂ ಆಸಕ್ತಿಯಿಂದಲೂ ಕೆಲಸ ಮಾಡುವ ಮನಸ್ಸುಳ್ಳವರಾದರೆ, ಕಾಂಗ್ರೆಸಿನ ಉದ್ದೇಶವಾದ ಸಂಪೂರ್ಣ ಸ್ವಾತಂತ್ರ್ಯದಧ್ಯೇಯಕ್ಕನುಗುಣವಾಗಿಯೇ ಹೆಚ್ಚಿನ ಕೆಲಸಮಾಡುವ ಸಂದರ್ಭವು ಅವರಿಗಿದೆ ಇಂಡಿಯಾ ಆಕ್ಟು ಮಂತ್ರಿಗಳಿಗೆ ಪ್ರಜಾಹಿತಸಾಧನೆಯ ಕೆಲಸಮಾಡಲು ಹಣವೇನನ್ನೂ ಬಿಟ್ಟಿಲ್ಲೆಂಬವಾದವು ಸಿಂಧುವಾದುದೇ ಆಗಿದೆ. ಆದರೆ ಅದು ಬಹುತೇಕ ಭ್ರಾಮಕವಾದುದು. ನಿಜವಾದ ಹಣವುಶ್ರಮವಲ್ಲದೆ ಲೋಹವಲ್ಲೆಂಬ ಸರ್ ಡೇನಿಯೆಲ್ ಹೆಮಿಲ್ಟನರ ಅಭಿಪ್ರಾಯವನ್ನು ನಾನೊಪ್ಪುವೆನು. ಹಣಕ್ಕೆ ಶ್ರಮದ ಬೆಂಬಲವು ಶ್ರಮಕ್ಕೆ ಹಣದ ಬೆಂಬಲದಷ್ಟೇ ಉತ್ತಮವಾಗಿದೆ.

ಹಿಂದೂದೇಶದಲ್ಲಿ ದೊಡ್ಡ ಹುದ್ದೆ ಪಡೆದಿದ್ದ ಆಂಗ್ಲೇಯ ಅರ್ಥ ಶಾಸ್ತ್ರಜ್ಞರೊಬ್ಬರು 'ನಾವು ಹಿಂದೂದೇಶಕ್ಕೆ ಪರಂಪರಾಗತವಾಗಿ ಬಿಟ್ಟಿರುವ ಅತಿ ಕೆಟ್ಟ ಸೊತ್ತೆಂದರೆ ವಿಪರೀತ ಸಂಬಳದ ನೌಕರವರ್ಗ ಎಂದು ಹೇಳಿರುತ್ತಾರೆ. ಒಮ್ಮೆ ಮಾಡಿರುವುದನ್ನು ಈಗ ತೆಗೆದು ಹಾಕಲು ಸಾಧ್ಯವಿಲ್ಲ. ಈಗ ನಾನು ಸ್ವತಂತ್ರವಾದುದನ್ನೇನಾದರೂ ತೊಡಗಬೇಕು. ಈಗ ಕೇವಲ ಹಣದ ಪ್ರೇರಣೆಯಿಂದ ಏನೆಲ್ಲಮಾಡುತ್ತಲಿರುವುದೋ ಅದು ಇನ್ನು ಮುಂದೆ ಸೇವಾ ಪ್ರೇರಿತವಾಗಬೇಕು. ಡಾಕ್ಟರರಿಗೂ ಅಧ್ಯಾಪಕರಿಗೂ ಹೆಚ್ಚಿನ ಸಂಬಳವನ್ನೇಕೆ ತೆರಬೇಕು ಬಹುತೇಕವಾದ ಕೆಲಸವನ್ನೆಲ್ಲಾ ಯಾಕೆ ಸಹಕಾರ ತತ್ವದ ಆಧಾರದಿಂದ ನಡಿಸಬಾರದು? 700 ಮಿಲ್ಯ ಜನರು ಶ್ರಮಿಸಲು ಸಿದ್ಧರಿರುವಾಗ ಭಂಡವಾಳದ ಕುರಿತು ವ್ಯಥೆಪಡಬೇಕೇಕೆ? ಸಹಕಾರ ತತ್ವದ ಆಧಾರದ ಮೇಲೆ ಕೆಲಸ ಮಾಡಿದರೆ, ಇದನ್ನೇ ಬೇರೆ ಶಬ್ದಗಳಿಂದ ಹೇಳುವುದಾದರೆ ಸಮತೂವಾದವನ್ನು ಬದಲಾಯಿಸಿ ಕಾರ್ಯಕ್ಕೆ ಹಚ್ಚಿದರೆ ಯಾವುದಕ್ಕೂ ಹಣವು ಬಹಳವಾಗಿ ಬೇಕಾಗಿಲ್ಲ.

ಚಿಕ್ಕದಾದಶೆಗಾಂವ್ ಹಳ್ಳಿಯಲ್ಲಿ ನನಗಿದು ಪ್ರತ್ಯಕ್ಷ ಅನುಭವಕ್ಕೆ ಬಂದಿದೆ ಶೆಗಾಂವಿನ 400ಮಂದಿ ಪ್ರಾಯಸ್ಥರು ನಾನು ಹೇಳಿದ ಹಾಗೆ ಕೆಲಸ ಮಾಡುವ ಮನಸ್ಸುಳ್ಳವರಾದ ಪಕ್ಷದಲ್ಲಿ ವರ್ಷಕ್ಕೆ 10,000 ರೂಪಾಯಿ ಸಂಪಾದಿಸಬಹುದು. ಆದರೆ ಅವರು ಹಾಗೆ ಮಾಡುವುದಿಲ್ಲ ಅವರಲ್ಲಿ ಸಹಕಾರವಿಲ್ಲ ಬುದ್ಧಿವಂತಿಕೆಯಿಂದ ಕೆಲಸಮಾಡುವ ಕಲೆಯು ಅವರಿಗೆ ಗೊತ್ತಿಲ್ಲ ಹೊಸತೇನನ್ನಾದರೂ ಕಲಿಯುವ ಮನಸ್ಸು ಅವರಿಗಿಲ್ಲ. ಅಸ್ಪೃಶ್ಯತೆಯು ದೊಡ್ಡತೊಡಕಾಗಿ ನಿಂತಿದೆ. ಯಾರಾದರೊಬ್ಬರು ಅವರಿಗೆ ಒಂದ ಲಕ್ಷರೂ. ಕೊಟ್ಟರೂ ಅವರದನ್ನು ಪೋಲು ವೆಚ್ಚಮಾಡಿ ಬಿಡುವರು. ಈಪರಿಸ್ಥಿತಿಗೆ ಅವರು ಜವಾಬ್ದಾರರಲ್ಲ. ನಾವು ಮಧ್ಯತರಗತಿಯವರು. ಶೆಗಾಂವಿನಲ್ಲಿ ಯಾವ ನಿಜವಿರುವುದೋ ಅದೇ ಇತರ ಹಳ್ಳಿಗಳ ಅವಸ್ಥೆಯೂ ಆಗಿದೆ. ಒಂದು ಪೈಯೇನಾದರೂ ಹೆಚ್ಚು ವೆಚ್ಚಮಾಡದೆ ಸರಕಾರವು ಈ ವಿಷಯದಲ್ಲಿ ಹೆಚ್ಚಿನ ಕೆಲಸ ಮಾಡಬಹುದು ಸರಕಾರಿ ನೌಕರರು ಜನತೆಯ ಪೀಡಕರಾಗುವ ಬದಲಿಗೆ ಸೇವಕರಾಗಬಹುದು. ಹಳ್ಳಿಗರನ್ನು ಏನನ್ನಾದರೂ ಮಾಡುವಂತೆ ಬಲಾತ್ಕಾರಮಾಡಬಾರದು. ನೈತಿಕವಾಗಿಯೂ, ಶಾರೀರಿಕವಾಗಿಯೂ, ಸಾಂಪತ್ತಿಕವಾಗಿಯೂ, ಅವರ ಉನ್ನತಿ ಸಾಧನೆಯ ಕೆಲಸವನ್ನೇ ಮಾಡುವುದೆಂಬ ಅವರಲ್ಲಿ ಜಾಗ್ರತಿಯನ್ನುಂಟು ಮಾಡಬೇಕು.

---

## ಬೇಕಾಗಿದೆ

ಜಿಲ್ಲೆಯ ಒಳಗೂ ಹೊರಗೂ ಸಂಚರಿಸಿ 'ನವಯುಗ'ದ ಚಂದಾದಾರರಿಂದ ಹಣ ವಸೂಲು ಮಾಡಲಿಕ್ಕೂ ಹೊಸ ಚಂದಾದಾರರನ್ನು ಸೇರಿಸಲಿಕ್ಕೂ ನಂಬಿಗಸ್ತರಾದ, ಚೆನ್ನಾಗಿ ಎಂಗ್ಲಿಷ್ ಕನ್ನಡ ಬಲ್ಲ ಉತ್ಸಾಹೀ ಪ್ರತಿನಿಧಿಗಳೊಬ್ಬರು ಬೇಕು. ಸಂಬಳ ಮತ್ತು ಪ್ರಯಾಣ ವೆಚ್ಚ ಕೊಡಲಾಗುವುದು. ರೂ. 100/- ಡಿಪೋಜಿಟ್ ಇಡಲು ತಯಾರಿರುವವರು ವೆಚ್ಚದ ಸಮೇತ ನಮಗೆ ಬರೆಯಿರಿ; ಯಾ ಸ್ವತಃ ಬಂದು ಮಾತನಾಡಿರಿ.

ಮೆನೇಜರ್, ನವಯುಗ, ಉಡುಪಿ.


**THE BOMBAY LIFE ASSURANCE Co., LTD.**

ESTD. 1908

Church Gate Street, Fort - - BOMBAY.

**SPECIAL FEATURES.**

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:--*

**KOCHIKAR BROTHERS,**

*Madras Branch Secretaries.*

BRANCHES AT:

| | | |
|---|---|---|
| P. B. 337 Mount Road, Madras. | Visveswarapuram Circle, Bangalore City. | Soumyrlayam Puthiyara, Calicut. |
| Car Street, Mangalore. | Udipi, S. India. | Charni Road, Bombay No. 4. |

INSPECTORATE OFFICE AT:

1. Ottapalam, Malabar District. 2. Central Station Road, Trivandrum.

**EVIDENCE OF SECURITY & STABILITY**

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

| | |
|---|---|
| Total Assets Over ... ... | Rs. 80,00,000 |
| Life Funds Over ... ... | Rs. 68,00,000 |
| Premium Income Over ... | Rs. 22,54,000 |
| Interest Income ... .. | Rs. 3,16,000 |
| Claims Paid ... ... .. | Rs. 5,75,000 |

Total Claims paid Over Rs. 38,50,000
Total Business in Force Over Rs. 4,42,51,200

TOTAL BUSINESS IN FORCE Rs. 4,42,51,200

# ಸಮಾಚಾರ ಸಂಗ್ರಹಃ ಪ್ರಚಂಡ ವೈಮಾನಿಕ ಯುದ್ಧ, ಶ್ರೀ ಸುಭಾಸ ಚಂದ್ರರ ಪತ್ರಗಳೊಡೆಯಲ್ಪಡುವವು, ಡೊಂಗರೆ

## • • ಪುರದಲ್ಲಿ ನೆರೆ ಹಾವಳಿ, ಮೇದ್ರಿದಿನಲ್ಲಿ ಸರಕಾರದ ವಿಜಯ, ಚೀನದಲ್ಲಿ ಯುದ್ಧಾರಂಭ. • •

### ಪ್ರಚಂಡ ವೈಮಾನಿಕಯುದ್ಧ

ಇದೇ ತಾ. ೧೮ರಲ್ಲು ಮೇದ್ರಿದಿನ ವಾಯವ್ಯ ಭಾಗದಲ್ಲಿ ಇತಿಹಾಸದಲ್ಲೇ ಅತಿ ದೊಡ್ಡ ವೈಮಾನಿಕ ಯುದ್ಧವು ನಡೆಯಿತು ಇದರಲ್ಲಿ ೧೬೦ ವಿಮಾನಗಳು ಭಾಗಿಯಾಗಿದ್ದವು ಸ್ಪಾನಿಶ್ ಸರಕಾರದ ಕಡೆಯ ೪ ಮತ್ತು ಬಂಡಾಯಗಾರರ ಕಡೆಯ ೧೮ ವಿಮಾನಗಳು ನಾಶವಾದುವೆಂದು ಸರಕಾರದ ಕಡೆಯ ಸುದ್ದಿ. ಮೇದ್ರಿದಿನ ಪಶ್ಚಿಮದಲ್ಲಿ ಸರಕಾರದಕಡೆಯ ಸೈನಿಕರು ಇತ್ತಲಾಗಿ ವಶಮಾಡಿಕೊಂಡ ೩ ಹಳ್ಳಿಗಳನ್ನು ಪುನಃ ವಶಮಾಡಿ ಕೊಳ್ಳಲು ಬಂಡಾಯಗಾರರು ಪ್ರಬಲ ಹೋರಾಟ ನಡೆಸುತ್ತಿರುವರು ಆದರೆ ಸರಕಾರದ ಸೈನಿಕರು ಅವರನ್ನು ತಡೆಗಟ್ಟಿದರು.

### ಮಾರ್ಕೋನಿಯವರ ಮರಣ

ವ್ಯಾರ್‌ಲೆಸ್ ಯಂತ್ರವನ್ನು ಪ್ರಥಮವಾಗಿ ಕಂಡುಹಿಡಿದು ಆ ಕುರಿತು ಹಲವು ಹೊಸ ಶೋಧನೆಗಳನ್ನು ಮಾಡಿರುವ ಮಾರ್ಕೋನಿಯವರು ಇದೇ ತಾ ೨೦ರಲ್ಲು ಹೃದಯ ಪಕ್ಷವಾತದಿಂದ ಅಕಸ್ಮಾತ್ತಾಗಿ ಮೃತರಾಗಿರುವರು ಇವರ ಮರಣದಿಂದ ಇಡೀ ಇಟಲಿಯು ಶೋಕಗೊಂಡಿರುವುದು.

### ಬಣ್ಣದ ಓಟಿನ ಪೆಟ್ಟಿಗೆ

ಬರುವ ಲೋಕಲ್‌ಬೋರ್ಡ್ ಚುನಾವಣೆಗಳಲ್ಲಿ ಕಳೆದ ಎಸೆಂಬ್ಲಿ ಚುನಾವಣೆಯಂತೆಯೇ ಬಣ್ಣದ ಪೆಟ್ಟಿಗೆಗಳಲ್ಲಿ ಓಟು ಹಾಕುವ ಕ್ರಮವನ್ನು ಜ್ಯಾರಿಗೆ ತರಬೇಕೆಂದು ಹಲವು ಡಿಸ್ಟ್ರಿಕ್ಟ್‌ಬೋರ್ಡ್ ಮತ್ತು ಮುನ್ಸಿಪಾಲಿಟಿಗಳು ಸರಕಾರಕ್ಕೆ ಮನವಿಮಾಡಿಕೊಂಡಿರುವವು. ಇಂಟೆರಿಮ್ ಮಂತ್ರಿಗಳು ಈ ಕುರಿತು ವಿಚಾರಿಸಿ ಅದು ಕೆಟ್ಟದ್ದೆಂದು ನಿರಾಕರಿಸಿರುವರು ಕಾಂಗ್ರೆಸ್ ಪಕ್ಷೀಯರೀಗ ಅಧಿಕಾರಕ್ಕೆ ಬಂದಮೇಲೆ ಈ ವಿಷಯವನ್ನು ಪುನಃ ಆಲೋಚಿಸುತ್ತಿರುವರು

### ಶ್ರೀ ಸುಭಾಸಚಂದ್ರರ ಪತ್ರಗಳೊಡೆಯಲ್ಪಡುವವು

ಪಂಜಾಬಿನ ಡೌಲ್‌ಹೌಸಿಯೆಂಬ ಆರೋಗ್ಯನಿವಾಸದಲ್ಲಿರುವ ಶ್ರೀ ಸುಭಾಸಚಂದ್ರಭೋಸರ ಆರೋಗ್ಯವು ಈಗ ಸ್ವಲ್ಪ ಸುಧಾರಿಸಿದೆ ಅವರು ಇನ್ನೂ ಕೆಲಸಮಯ ಇಲ್ಲಿಯೇ ಇರುವರು. ಅವರಿಗೆ ಬರುವ ಪತ್ರಗಳನ್ನೆಲ್ಲಾ ಮೊದಲೇ ಯಾರೋ ಒಡೆದು ನೋಡುತ್ತಾರೆಂದು ತಿಳಿದು ಬಂದಿದೆ ಶ್ರೀ ಭೋಸರ ಪತ್ರಗಳನ್ನು ಒಡೆದು ನೋಡುವಂಥಾದ್ದು ಮೊದಲಿಂದಲೂ ನಡೆಸಲ್ಪಡುತ್ತಿದ್ದರೂ ಅವು ಬೇಗನೆ ಬಟ್ವಾಡೆ ಮಾಡಲ್ಪಡುತ್ತಿದ್ದವು ಈಗ ಬಟ್ವಾಡೆ ಕೂಡತಡವಾಗುತ್ತಿದೆ ಶ್ರೀ ಭೋಸರು ಈ ಕುರಿತು ಟಪ್ಪಾಲು ಇಲಾಖೆಯವರಿಗೆ ತಿಳಿಸಿ ಪ್ರಯೋಜನವಿಲ್ಲದಾಗಿದೆ ಇದೇ ರೀತಿ ಮಂತ್ರಿಗಳ ಪತ್ರಗಳು ಒಡೆದು ನೋಡಲ್ಪಟ್ಟು ವಿಳಂಬವಾಗಿ ತಲಪಿದರೆ ಹೇಗಾಗುತ್ತಿತ್ತೆಂದು ಶ್ರೀ ಭೋಸರ ಹೇಳಿಕೆ

### ಸಿಮ್ಲಾದ ಮಾರ್ಪಟ್ಟ ಮನೋವೃತ್ತಿ

ಆರು ಪ್ರಾಂತಗಳಲ್ಲಿ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿದುದರಿಂದ ಸಿಮ್ಲಾದ ಮನೋವೃತ್ತಿಯು ಕೂಡಲೇ ಮಾರ್ಪಾಟು ಹೊಂದಿದೆ ಹಿಂದೀ ಜನ ಮತವೆಂಬುದೊಂದಿದೆ, ಅದನ್ನು ಮನ್ನಿಸಿ ನಡೆಯಬೇಕೆಂಬ ಮನೋವೃತ್ತಿಯು ವರಿಷ್ಠ ಸರಕಾರದ ಆಡಳಿತಾಧಿಕಾರಿಗಳಲ್ಲಿ ಉಂಟಾಗಿರುತ್ತದೆ. ವೈಸರಾಯರ ಮಂತ್ರಿಮಂಡಲದ ಹಿಂದೀ ಮೆಂಬರರೆಲ್ಲ ಪ್ರಾಮುಖ್ಯ ಪ್ರಶ್ನೆಗಳ ಕುರಿತು ಒಮ್ಮತದ ಧೋರಣೆವಹಿಸಹತ್ತಿದ್ದಾರೆ.

### ಬೇಕಾಯಿದೇಶೀರ ಸಂಸ್ಥೆಗಳು

ಸಂಯುಕ್ತಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಸ್ವೀಕರಿಸಿದೊಡನೆಯೇ ಕೆಲಮಂದಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದುದಲ್ಲದೆ ರಾಜಕೀಯ ಕಾರಣಗಳಿಂದ ಪತ್ರಿಕೆಗಳಿಂದ ಪಡಕೊಂಡ ಜಾಮೀನುಗಳನ್ನೆಲ್ಲಾ ಹಿಂದೆಕೊಡುವಂತೆ ಮಾಡಿರುವರು ಇದು ಹೊರತು ಬೇಕಾಯಿದೇಶೀರವಾಗಿ ಮಾಡಲ್ಪಟ್ಟಿದ್ದ ನವಜವಾನ ಭಾರತ ಸಭೆ, ಹಿಂದುಸ್ಥಾನ ಸೇವಾದಳ, ಯುವಕ ಸಂಘ, ಮಜೂರ ಮತ್ತು ಬೇಸಾಯಗಾರರ ಸಂಘ, ಕಿಸನ್ ಸಭಾ, ಸೇವಾದಳ ಕಿಸನ್ ಸಂಘ, ಮತ್ತು ಮಹಾವೀರದಳ ಇವುಗಳ ಮೇಲಿನ ನಿಷೇಧವನ್ನು ತೆಗೆದು ಹಾಕಿರುವರು

### ಖಾನ್ ಅಬ್ದುಲ್ ಗಾಫರ್ ಖಾನರು

ಪಂಜಾಬಿಗೆ ಪ್ರವೇಶಿಸಬಾರದೆಂಬ ನಿರ್ಬಂಧದ ಹುಕುಮನ್ನು ಪಂಜಾಬಿನ ಪ್ರಧಾನ ಮಂತ್ರಿಗಳು ಇದೇ ತಾ. ೨೦ರಲ್ಲು ತೆಗೆದುಹಾಕಿದರು ಖಾನರು ಇನ್ನು ಮುಂದೆ ಪಂಜಾಬಿಗೆ ಯಾವ ಅಡ್ಡಿಯೂ ಇಲ್ಲದೆ ಪ್ರವೇಶಿಸಬಹುದು. ಖಾನರು ಕೂಡಲೇ ಪಂಜಾಬಿಗೆ ಬಂದು ಕೆಲಸ ಮಾಡಬೇಕೆಂದು ಡಾಕ್ಟರ್ ಸತ್ಯಪಾಲರು ಆಮಂತ್ರಿಸಿರುವರು

### ಡೊಂಗರ ಪುರದಲ್ಲಿ ನೆರೆಹಾವಳಿ

ಗುಜರಾಥಿನ ಡೊಂಗರ ಪುರಸಂಸ್ಥಾನದಲ್ಲಿ ಇದೇ ತಾ ೨೧ರಲ್ಲು ಮೂರು ದಿನಗಳಲ್ಲಿ ಎಡೆಬಿಡದೆ ಮಳೆಬಿದ್ದು ಹಾವಳಿಯಾಗಿರುವುದು. ಕೇವಲ ೨೪ ಘಂಟೆಗಳಲ್ಲಿ ೩.೨ ಇಂಚು ಮಳೆಬಿದ್ದಿರುವುದು ಇಡೀ ಹಳ್ಳಿಯೇ ನೆರೆಯಲ್ಲಿ ಮುಳುಗಿಹೋಗಿರುವುದು. ಮನೆಮಾರು ಬಸ್ತಿಗಳಲ್ಲೆಲ್ಲಾ ೧೦ಅಡಿ ಆಳ ನೀರಿದ್ದಿತು ಸ್ತ್ರೀಯರು ಪುರುಷರು ಮತ್ತು ಮಕ್ಕಳು ಮರವಟ್ಟ ಮತ್ತು ಮನೆಮಾಡುಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಸಬರ್ಮತಿ ನದಿಯ ಶಾಖೆಯೊಂದರಲ್ಲಿ ನೆರೆಯೇರಿ ಪರಿಸ್ಥಿತಿಯನ್ನು ಮತ್ತೂ ಕೆಡಿಸಿರುವುದು ಡೊಂಗರಪುರಸಂಸ್ಥಾನದ ರಾಜರ ಅರಮನೆಯು ನೆರೆಯಿಂದಾವರಿತವಾಗಿ ಅದರ ನಿವಾಸಿಕರನ್ನು ದೋಣಿ ಮೂಲಕ ಎತ್ತರದ ಗುಡ್ಡಸ್ಥಳಕ್ಕೊಯ್ಯಬೇಕಾಯಿತು. ಅನೇಕ ಮಂದಿ ಹಳ್ಳಿಗರು ದೋಣಿಗಳ ಮೂಲಕ ಗುಡ್ಡದ ತುದಿಗಳಿಗೊಯ್ಯಲ್ಪಟ್ಟಿರುವರು ನೂರಾರು ಮಂದಿ ಮನೆಮಾರು ಕಳಕೊಂಡಿರುವರು ಅನೇಕ ಜಾನುವಾರುಗಳು ಮುಳುಗಿಹೋಗಿರುವವು ಕೆಲವರ ಪ್ರಾಣಹಾನಿಯಾಗಿರುವುದು. ಸುಮಾರು ರೂ. ೨ ಲಕ್ಷದಷ್ಟು ನಷ್ಟವುಂಟಾಗಿರುವುದು. ಗುಜರಾಥಿನ ಕೈರ, ನದಿಯಾದ್, ಮಾಥಾರ್. ತಾರಪುರ ಮೊದಲಾದ ಹಳ್ಳಿಗಳೂ ನೆರೆಯಿಂದ ಆವರಿತವಾಗಿರುವವು.

### ಮಿ. ಮೆಹರಾಲಿಗಳ ಬಿಡುಗಡೆ

ಬೊಂಬಾಯಿಯ ಕಾಂಗ್ರೆಸ್ ಸೋಸಿಯಲಿಸ್ಟ ಪಕ್ಷದ ಮುಖಂಡರಲ್ಲೊಬ್ಬರಾದ ಮಿ. ಮೆಹರಾಲಿಯವರು ಕಳೆದ ತಿಂಗಳ ತಾ ೩೦ರಲ್ಲು ಮಲಬಾರಿನಲ್ಲಿ ಭಾಷಣ ಮಾಡಬಾರದೆಂಬ ಕಲೆಕ್ಟರರ ನಿಷೇಧ ಹುಕುಮನ್ನುಲ್ಲಂಘಿಸಿದುದಕ್ಕಾಗಿ ೬ ತಿಂಗಳ ಶಿಕ್ಷೆಗೊಳಗಾಗಿದ್ದರಷ್ಟೆ ಇವರನ್ನು ಇದೇ ತಾ. ೨೧ರಲ್ಲು ಬಿಡುಗಡೆಮಾಡಲಾಗಿದೆ. ಮೆಹರಾಲಿಗಳು ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಒಂದೊಡನೆಯೇ ಬಿಡುಗಡೆ ಹೊಂದುತ್ತಿದ್ದರು ಆದರೆ ಅವರು ಜಿಲ್ಲಾ ಜಡ್ಜರಲ್ಲಿ ಅಪೀಲುಮಾಡಿದ್ದುದರಿಂದ ಅದು ತೀರ್ಮಾನವಾಗುವವರೆಗೆ ಕಾಯಬೇಕಾಯಿತು

### ಗಡಿನಾಡಿನ ಹಿಂದುಗಳ ಅವಸ್ಥೆ

ವಾಯವ್ಯ ಗಡಿನಾಡಿನ ಹಿಂದುಗಳ ಅವಸ್ಥೆಯು ಅತ್ಯಂತ ಶೋಚನೀಯವಾಗಿದೆ ಅವರ ಜೀವನದಲ್ಲಿ ಸುರಕ್ಷಿತತೆಯಿಲ್ಲದಾಗಿದೆ ಅಲ್ಲಿಯ ಪಂಗಡಿಗರು ಅವರ ಮೇಲೆ ಯಾವಾಗ ಧಾಳಿನಡಿಸುವರೆಂದು ಹೇಳಬರುವುದಿಲ್ಲ. ಜನರನ್ನು ಹಿಡಿದೊಯ್ದು ಬಂಧನದಲ್ಲಿರಿಸಿ ಪರಿಹಾರ ದ್ರವ್ಯ ಕೇಳುವ ಅನಾಚಾರವು ಹಲವು ಕಡೆ ನಡೆದಿರುತ್ತದೆ ಹೀಗೆ ಕದ್ದೊಯ್ಯಲ್ಪಟ್ಟ ಇಬ್ಬರು ಹಿಂದುಗಳು ತಮ್ಮ ಪಾಡನ್ನು ಈ ರೀತಿ ವಿದಿತಗೊಳಿಸಿರುವರು. ಪಂಗಡಿಗರು ಇವರಿಬ್ಬರ ಕಣ್ಣುಗಳಿಗೂ ಗಟ್ಟಿಯಾಗಿ ವಸ್ತ್ರ ಬಿಗಿದು ತೋರದಂತೆ ಮಾಡಿದರು. ಕೈಗಳೆರಡನ್ನೂ ಹಿಂದಕ್ಕೆ ಕಟ್ಟಿದರು. ಇವರೆಲ್ಲಿಯಾದರೂ ತಪ್ಪಿಸಿಕೊಂಡು ಹೋಗದಂತೆ ದೊಡ್ಡ ಮರದ ಕೊರಡುಗಳನ್ನು ಕಾಲುಗಳಿಗೆ ಕಟ್ಟುತ್ತಿದ್ದರು. ಜೋಳದ ರೊಟ್ಟಿ ಮತ್ತು ನೀರೇ ಇವರ ಆಹಾರವಾಗಿದ್ದಿತು ಹೀಗೆ ಹಲವು ತಿಂಗಳ ವರೆಗೆ ಕಷ್ಟಕ್ಕೊಳಗಾಗಿದ್ದರು. ಬರಮಂಡ್ ಎಂಬ ಪ್ರದೇಶಕ್ಕೆ ಬ್ರಿಟಿಷ್ ಸೈನಿಕರು ಧಾಳಿಯಿಟ್ಟಾಗ ಇವರು ಬಿಡುಗಡೆ ಹೊಂದಿದರು.

### ಮೇದ್ರಿದಿನಲ್ಲಿ ಸರಕಾರದ ವಿಜಯ

ಇದೇ ತಾ 18ರಲ್ಲು ಮೇದ್ರಿದಿನ ಪಶ್ಚಿಮದಲ್ಲಿ ದೊಡ್ಡ ಯುದ್ಧವೊಂದು ನಡೆಯಿತು. ಇದರಲ್ಲಿ 40,000 ಮಂದಿ ಸೈನಿಕರು ಬಾಗಿಯಾಗಿದ್ದರು. 15 ದಿವಸಗಳ ಮೊದಲು ಸರಕಾರದ ಕಡೆಯ ಸೈನಿಕರು ವಶಮಾಡಿಕೊಂಡಿದ್ದ ಪಟ್ಟಣಗಳನ್ನು ಪುನಃ ವಶಮಾಡಿಕೊಳ್ಳಬೇಕೆಂದು ಬಂಡಾಯಗಾರರು ಮಾಡಿದ ಪ್ರಯತ್ನವೆಲ್ಲಾ ನಿರರ್ಥಕವಾಗಿರುವುದು. ಇದರಲ್ಲಿ 2,000 ಮಂದಿ ಬಂಡಾಯಗಾರರು ಕೊಲ್ಲಲ್ಪಟ್ಟನೆಂದು ಸರಕಾರದ ಕಡೆಯ ಸುದ್ದಿ. ಆದರೆ ಬಂಡಾಯಗಾರರ ಕಡೆಯ ಸುದ್ದಿಯ ಪ್ರಕಾರ ಮೇದ್ರಿದಿನ ಪಶ್ಚಿಮದಲ್ಲಿ ನಡೆದ 2 ದಿವಸಗಳ ಯುದ್ಧದಲ್ಲಿ ಸರಕಾರದ


THE

PANGAL NAYAK BANK

LIMITED.

ESTABLISHED 1920.

**Paid up Capital: Rs 1,82,100/-**

***Head Office*: UDIPI.**

**Branches· MANGALORE, KATAPADI and KANHANGAD.**

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc, are discounted at a nominal charge.

Current and Savings Bank deposits are accepted at moderate rates of interest

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಕಡೆಯ ಸೈನಿಕರು ಹಿಂದಕ್ಕಟ್ಟಲ್ಪಟ್ಟು ೪೦೦೦ ಮಂದಿ ಕೊಲ್ಲಲ್ಪಟ್ಟಿರುವರಂತೆ. ಇದು ಸುಳ್ಳೆಂದೂ ಸರಕಾರದ ಕಡೆಯ ಸೈನಿಕರೇ ಜಯಶೀಲರಾಗಿರುವರೆಂದೂ ರ್‍ಯೂಟರ್ ಸುದ್ಧಿ ಬಂದಿದೆ.

### ಚೀನದಲ್ಲಿ ಯುದ್ಧಾರಂಭ

ಇದೇ ತಾ. 20ರಲ್ಲು ಜಾಪಾನ್ ಸೈನಿಕರು ವಾಂಗ್‌ಪಿಂಗಿನ ಮೇಲೆ ತುಫಾಕಿ ಖಾಲಿಸಡಿಸಿದರು. ಇಲ್ಲಿರುವ ಚೀನಿಯರ ತುಫಾಕಿಗಳು ಗುಂಡು ಹಾರಿಸದಂತೆ ಮಾಡಿದರು. ಇನ್ನೊಂದು ಕಡೆಯಿರುವ ಚೀನೀ ಸೇನೆಯೊಡನೆ ತುಫಾಕಿಯುದ್ಧ ನಡೆದಿರುವುದು. ಶಾಂಘಾಯಿ ಮತ್ತು ನಾನ್ಕಿಂಗಿನಲ್ಲಿರುವ ಜಾಪಾನರ ಕುಟುಂಬಗಳನ್ನು ಜಾಪಾನಿಗೆ ಕಳುಹಿಸುತ್ತಿರುವರು. ಯುದ್ಧವು 40 ಮಿನಿಟುಗಳ ವರೆಗೆ ನಡೆದು ಆ ಮೇಲೆ ನಿಲ್ಲಿಸಲ್ಪಟ್ಟಿರುವುದು. ಜಾಪಾನಿನಿಂದ 35,000 ಸೈನಿಕರು ಉತ್ತರ ಚೀನಕ್ಕೆ ಕಳುಹಿಸಲ್ಪಟ್ಟಿರುವರು. ಇಷ್ಟರಲ್ಲೇ ಹಲವು ಸಹಸ್ರ ಸೈನಿಕರು ಕಳುಹಿಸಲ್ಪಟ್ಟಿರುವರು.

### ವಾಯುವ್ಯ ಗಡಿನಾಡಿನ ಪರಿಸ್ಥಿತಿ

ಸರಕಾರವು ವಾಯುವ್ಯ ಗಡಿನಾಡಿನ ಪಂಗಡಿಗರೊಡನೆ ಸಂಧಿಮಾಡುವ ಕುರಿತು ಪ್ರಸ್ತಾಪಿಸುತ್ತಿರುವುದಾದರೂ ಗಡಿನಾಡಿನ ಗಲಾಟೆಯೇನೂ ನಿಂತಿರುವುದಿಲ್ಲ. ಆಗಾಗ ಬಂಡಾಯಗಾರರು ಬ್ರಿಟಿಷ್ ಸೈನಿಕರ ಮೇಲೆ ಗುಂಡೆಸೆದು ಹಾವಳಿಮಾಡುತ್ತಿದ್ದಾರೆ. ಇಪ್ಪಿಯ ಫಕೀರರು ದುರ್ಗಮವಾದ ಸ್ಥಳದಲ್ಲಿದ್ದುಕೊಂಡು ಭಿಟನ್ನಿ ಮತ್ತು ಮಾಹ್ಸೂದ್ ಪಂಗಡಿಗಳ ಪ್ರದೇಶದ ಎಲ್ಲೆಯಲ್ಲಿ ಸರಕಾರದ ವಿರುದ್ಧವಾಗಿ ಯಥಾ ಪ್ರಕಾರ ಚಳವಳ ನಡಿಸುತ್ತಿದ್ದಾರೆ. ತಮ್ಮ ಅತಿಥಿಯಾಗುವ ವೈರಿಯನ್ನಾದರೂ ಸ್ವಾಗತೀಕರಿಸಿ ಅವನಿಗೆ ಆಶ್ರಯನೀಯಬೇಕೆಂದು ಗಡಿನಾಡಿನ ಪಂಗಡಿಗರದೊಂದು ಪದ್ಧತಿ. ಇದು ಇಪ್ಪಿಯ ಫಕೀರಂಗೆ ಬಹಳ ಅನುಕೂಲವಾಗಿದೆ. ಪಂಗಡಿಗರು ತಮ್ಮ ನಡುವೆ ಇರುವ ಫಕೀರರನ್ನು ಎಷ್ಟು ಮಾತ್ರಕ್ಕೂ ಬ್ರಿಟಿಷ್ ಸರಕಾರಕ್ಕೊಪ್ಪಿಸಲಾರರು.

### ಫ್ರೇಂಕೋರವರಿಗೆ ಹಣ ಬೇಕಾಗಿದೆ

ಸ್ಪೈನಿನ ತನ್ನ ಬಂಡಾಯವನ್ನು ಮುಂದುವರಿಸಲು ಜನರಲ್ ಫ್ರೇಂಕೋರವರಿಗೆ ಈಗ ಹಣ ಬೇಕಾಗಿದೆ. ಅವರು ಇಂಗ್ಲೆಂಡ್ ಮತ್ತು ಫ್ರಾನ್ಸಿನ ಬೇಂಕರರಿಂದ ಹಣ ಪಡೆಯುವ ಪ್ರಯತ್ನ ನಡಿಸುತ್ತಿದ್ದಾರೆ. ಅವರ ಏಜೆಂಟರು ಲಂಡನ್ ಮತ್ತು ಪೆರಿಸಿಗೆ ಹೋಗಿ 75 ಮಿಲ್ಯ ಪವನು ಸಾಲ ಪಡೆಯಲು ಪ್ರಯತ್ನಿಸಿದರು. ಆದರೆ ಅದಕ್ಕಾರೂ ಕಿವಿಗೊಡಲಿಲ್ಲ. ಲಂಡನಿನಿಂದ 25 ಮಿಲ್ಯ ಮತ್ತು ಪೆರಿಸಿನಿಂದ 50 ಮಿಲ್ಯ ಪವನು ಪಡೆಯಬಹುದೆಂದು ಜನರಲ್ ಫ್ರೇಂಕೋರವರ ಏಜಂಟರ ನಿರೀಕ್ಷೆಯಿತ್ತು. ಆದರೆ ಎಲ್ಲಾ ಬೇಂಕುಗಳವರೂ ಆ ವಿಷಯವನ್ನೇ ಆಲೋಚಿಸಲು ನಿರಾಕರಿಸಿ ಬಿಟ್ಟರು. ಜನರಲ್ ಫ್ರೇಂಕೋರವರಿಗೆ ಹಣ ಕೊಡುವುದೂ ಅದನ್ನು ನೀರಿಗೆ ಹಾಕುವುದೂ ಒಂದೇಯೆಂದು ಈ ಬೇಂಕರರು ಸ್ಪಷ್ಟವಾಗಿ ತಿಳಿಸಿರುವರು. ಫ್ರೇಂಕೋರವರ ಏಜಂಟರು ಲಂಡನಿನಲ್ಲಿ ಹಣ ದೊರೆಯುತ್ತದೆಂದು ಪೆರಿಸಿನಲ್ಲಿಯೂ, ಪೆರಿಸಿನಲ್ಲಿ ಸಿಗುತ್ತದೆಂದು ಲಂಡನಿನಲ್ಲಿಯೂ ಹೇಳಿ ಕುತಂತ್ರದಿಂದ ಹಣ ಪಡೆಯಲೆತ್ನಿಸಿದರೂ ಪ್ರಯೋಜನವಾಗಲಿಲ್ಲ.

### ಹರಿಜನೋದ್ಧಾರ ಕಾರ್ಯ

ಹರಿಜನೋದ್ಧಾರದ ವಿಷಯದಲ್ಲಿ ಮದ್ರಾಸ್ ಮಂತ್ರಿ ಮಂಡಲವು ವ್ಯಾಪಕವಾದ ಯೋಜನೆಯೊಂದನ್ನು ಕೈಕೊಳ್ಳಲಿರುವುದು. ಈ ಕುರಿತು ಮಜೂರ, ವ್ಯವಸಾಯ ಮತ್ತು ಸ್ಥಳೀಯ ಸ್ವರಾಜ್ಯ ಖಾತೆಗಳ ಮಂತ್ರಿಗಳೂ ಸಕ್ರೆಟರಿಗಳೂ ಇರತ ಕೆಲ ಮಂದಿ ಹರಿಜನೋದ್ಧಾರ ಕಾರ್ಯೋಪಾಸಕ ಮಹನೀಯರೊಂದಿಗೆ ಸಭೆ ಸೇರಿ ಆಲೋಚಿಸುತ್ತಿರುವರು.

### ಗಡಿನಾಡಿನ ಎಸೆಂಬ್ಲಿ ಮೆಂಬರರ ದಸ್ತಗಿರಿ

ವಾಯುವ್ಯ ಗಡಿನಾಡಿನ ಪಾರ್ಲಿಮೆಂಟರಿ ಬೋರ್ಡಿನ ಸೆಕ್ರೆಟರಿಗಳೂ ಎಸೆಂಬ್ಲಿ ಮೆಂಬರರೂ ಆದ ಮಿ. ಅರಬಿ ಅಬ್ದುಲ್ ಗಾಫೂರ್ ಖಾನರು ಇದೇ ತಾ. ೨೩ರಲ್ಲು ಪೇಶಾವರದಲ್ಲಿ ರಾಜದ್ರೋಹಾತ್ಮಕ ಭಾಷಣವಿತ್ತ ಆರೋಪದಿಂದ ದಸ್ತಗಿರಿ ಮಾಡಲ್ಪಟ್ಟು ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು.

### ಕೇರಳದಲ್ಲಿ ದೇವಸ್ಥಾನ ಪ್ರವೇಶ ಚಳವಳ

ವನ್ನು ಪುನಃ ಭರದಿಂದ ನಡೆಸಬೇಕೆಂದು ಕೇರಳ ಹರಿಜನ ಸಂಘದವರು ಸಭೆಸೇರಿ ನಿರ್ಣಯಮಾಡಿರುವರು. ಅದಕ್ಕಾಗಿ ಮಲಬಾರಿನ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಶ್ರೀ ಕೇಳಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ನೇಮಿಸಲ್ಪಟ್ಟಿರುವುದು. ಈ ಕಮಿಟಿಯವರು ಕೇರಳದಲ್ಲೆಲ್ಲಾ ಸಂಚರಿಸಿ ಜನಜಾಗ್ರತಿಯನ್ನುಂಟು ಮಾಡಲಿರುವರು. ಮತ್ತು ಬರುವ ಸೆಪ್ಟಂಬರ ತಿಂಗಳಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಎಂಡೋಮೆಂಟ್ ಖಾತೆಗಳ ಮಂತ್ರಿಗಳಾದ ಡಾಕ್ಟರ್ ರಾಜನರನ್ನು ಕೇರಳಕ್ಕೆ ಆಮಂತ್ರಿಸಿ ಪರಿಷತ್ತೊಂದನ್ನು ನಡೆಸುವ ಆಲೋಚನೆ ಮಾಡಿರುವರು.


**ಕನ್ನಡ ಸುದಿವೆಣ್ಣಗೊಂದು**

| | | |
|---|---|---|
| | ವ | |
| ವ | ತ್ಸ | ಲಾ |
| | ಲಾ | |

**ಕನ್ನಡಗಿತ್ತಿಯ ಕಿರುಗಾಣಿಕೆ**

ಲೇಖಕಿಯರು:
ಶ್ರೀಮತಿ ಮಟ್ಪಾಡಿ ಕಮಲಾಕ್ಷಿ.

ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನೂ ಸ್ತ್ರೀ-ಪುರುಷ ಹೃದಯಗಳ ಪರಿಚಯವನ್ನೂ ಸೊಗಸಾಗಿ ಚಿತ್ರಿಸಿದ ಸಾಮಾಜಿಕ ಕಾದಂಬರಿ. ಪ್ರತಿಯೊಬ್ಬರೂ ಓದಬೇಕಾದ ಪುಸ್ತಕ.

**ಬೆಲೆ: 0–7–3 ಮಾತ್ರ.**

ಒಂದು ಪ್ರತಿ ಬೇಕಾದವರು ಎಂಟಾಣೆ ಸ್ಟಾಂಪು ಕಳುಹಿಸಬೇಕು

ಆರಕ್ಕಿಂತ ಹೆಚ್ಚು ಪ್ರತಿ ಕೊಳ್ಳುವ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪ್ರತಿಗಳಿಗೆ ಬರೆಯಿರಿ—

**ನವಭಾರತ ಬುಕ್ ಡಿಪೊ**
**ಚರ್ಚ್‌ರೋಡ್, ಉಡುಪಿ.**


### ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ್‌ಕಾಜ್ ನಂಬ್ರ ೫೯೩/೩೭

ಸ್ವಸ್ತಿ! ಶ್ರೀ ಕಾರ್ಕಳ ದಾನಶಾಲೆ ಮಠದ ಲಲಿತಕೀರ್ತಿ ಭಟ್ಟಾರಕಜೀಯ ಸ್ವಾಮಿಗಳು

**ವಾದಿರು**

ಮತ್ತು

ಮಂಜಮ್ಮ ಹೆಗಡ್ತಿ ಕೂಡಾ 3 ಜನರು

**ಪ್ರತಿವಾದಿರು**

ಇವರೊಳಗೆ

ಈ ವ್ಯಾಜ್ಯದ 1ನೇ ಪ್ರತಿವಾದಿಳು—ಕಾರ್ಕಳ ಕಸಬಾ ಗ್ರಾಮದ ಕಾಬೆಟ್ಟಿನಲ್ಲಿರುವ ಕಾಂತು ಹೆಗಡೆರ ಸೊಸೆ ಮಂಜಮ್ಮ ಹೆಗಡ್ತಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ಪ್ರತಿವಾದಿರಿಂದ ಬರತಕ್ಕ ಮೂಲಗೇಣಿ ಬಾಕಿ ರೂಪಾಯಿ 31–3–11ನ್ನು ಬರ ಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ವಾದಿರು ದಾವಾ ತಂದಿರುತ್ತಾರೆ. ಈ ದಾವೆಯಲ್ಲಿ ಉದಹರಿಸುವದಿದ್ದರೆ, ಸದ್ರಿ ದಾವೆಯು ತನ್ಕಿಗೆ ಇಟ್ಟ ತಾರೀಕು 2–8–1937ನೇ ದಿನ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನೀವು ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪಾಯಿಮಾಡಿ ತೀರ್ಮಾನಿಸೋಣಾಗುತ್ತದೆಂತ ಈ ಮೂಲಕ ನಿಮಗೆ ತಿಳಿಸೋಣಾಗುತ್ತದೆ.

ತಾರೀಕು 22–7–1937.
ಕಾರ್ಕಳ

**K. L. Kudva,**
*Pleader for Plaintiff.*

**ನವಯುಗಕ್ಕೆ ಇಂದೇ ಚಂದಾದಾರರಾಗಿರಿ.**


ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

'ಗೊನೊಕಿಲರ್' (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D N. JASANI, Vitalbhai Patel Road, BOMBAY 4

# ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ನಡೆದ ವಾದವೇನು?

ಕಳೆದ ತಾ. 18ನೇ ತಾರೀಕಿನಲ್ಲಿ ಮಂಗಳೂರಲ್ಲಿ ನಡೆದ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಶೇಷ ಸಭೆಯಲ್ಲಿ ನಡೆದ ನಿಜವಾದ ಸಂಗತಿಗಳೇನೆಂಬುದನ್ನು ನನಗೀಗ ವಿವರಿಸಿ ಬರೆಯುವ ಅವಶ್ಯ ಬಂದಿರುವುದು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳು ನಿದ್ರಾವಸ್ಥೆಯಲ್ಲಿರದೆ ಉತ್ಸಾಹದಿಂದ ಕೆಲಸಮಾಡುವಂತಾಗಬೇಕು, ಕೆಲಸಮಾಡದಿದ್ದಲ್ಲಿ ಅವರ ಮೈ ಕುಲುಕಿಸಿ ಎಬ್ಬಿಸಿ ಕೆಲಸಮಾಡಿಸಬೇಕೆಂಬ ಉದ್ದೇಶದಿಂದಲೇ ನಾನು ಈ ವಿಶೇಷ ಸಭೆಯ ಚರ್ಚೆಯಲ್ಲಿ ಅಗ್ರಭಾಗವಹಿಸಿದುದು. ಇದಕ್ಕೆ ನನ್ನ ಉಡುಪಿಯ ಸಹವ್ಯವಸಾಯಿಗಳಲ್ಲಿರ ಮತ್ತು ಇತರ ಕಡೆಯ ಹಲವರ ಬೆಂಬಲವು ನನಗಿದ್ದಿತು ಉದ್ದೇಶವು ನೆರವೇರಿದಂತಾಯಿತೆಂದು ನನಗೆ ತೋರಿದುದರಿಂದ ನಾನು ರಗಳೆಯನ್ನು ಮುಂದೊತ್ತಲಿಲ್ಲ. ಸಭೆಯಲ್ಲಿ ನಡೆದ ವಾಗ್ವಾದವಾವುದನ್ನೂ ನವಯುಗದಲ್ಲಿ ಪ್ರಕಟಿಸಲಿಲ್ಲ. ಅದು ಅವಶ್ಯವೆಂದು ನನಗೆ ತೋರಲಿಲ್ಲ. ಆದರೆ ಆ ಕುರಿತು ಕೆಲವು ಪತ್ರಿಕೆಗಳು ಪ್ರಕಟಿಸಿರುವ ಸಂಗತಿಗಳು ಸರಿಯಲ್ಲದ್ದರಿಂದಲೂ, ಕೆಲವರಲ್ಲಿ ತಪ್ಪು ಅಭಿಪ್ರಾಯವುಂಟಾಗಲು ಕಾರಣವಾಗಿರುವುದರಿಂದಲೂ ನಾನೀಗ ವಾದದ ವಿಷಯಗಳನ್ನು ಪ್ರಕಟಿಸಬೇಕಾಗಿದೆ.

ಈ ಮೊದಲಿನ ಸಭೆಯಲ್ಲಿ ಓರ್ಗನೈಸಿಂಗ್ ಸೆಕ್ರೆಟರಿಗಳು ತಮ್ಮ ಕಾರ್ಯಕಲಾಪದ ವರದಿಯನ್ನೊಪ್ಪಿಸಬೇಕೆಂದು ಕೇಳಲಾಗಿತ್ತು. ಆ ಕುರಿತೊಂದು ಠರಾವಾಗಿತ್ತು. ಅದನ್ನು ಸದ್ರಿ ಸೆಕ್ರೆಟರಿಗಳಿಗೆ ತಿಳಿಸಲಾಗಿದೆಯೆ? ವರದಿ ಬಂದಿದೆಯೆ? ಎಂದು ನಾನು ಆರಂಭದಲ್ಲಿ ಅಧ್ಯಕ್ಷರ ಸಮ್ಮತಿ ಪಡೆದು ಪ್ರಶ್ನೆ ಕೇಳಿದೆ. ಇದು ವಿಶೇಷ ಸಭೆಯಾದುದರಿಂದ ಅದನ್ನು ಕೇಳುವುದು ಅಕ್ರಮವೆಂದು ಕೆಲವರು ವಾದವೆಬ್ಬಿಸಿದರು ಅಧ್ಯಕ್ಷರು ಸಮ್ಮತಿಸಿದ ಮೇಲೆ ಅಕ್ರಮವೇನೋ ನನಗೆ ತಿಳಿಯಲಿಲ್ಲ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳು, ಸದ್ರಿ ಠರಾವನ್ನು ಓರ್ಗನೈಸಿಂಗ್ ಸೆಕ್ರೆಟರಿಗಳಿಗೆ ತಿಳಿಸಲಾಗಿದೆಯೆಂದೂ ಅವರಿಂದ ಉತ್ತರವೇನೂ ಬರಲಿಲ್ಲೆಂದೂ ತಿಳಿಸಿದರು ಅಮೇಲೆ ಓರ್ಗನೈಸಿಂಗ್ ಸೆಕ್ರೆಟರಿಗಳಾದ ಶ್ರೀ ಕಿಲ್ಲೆಯವರು ನನ್ನ ಪ್ರಶ್ನೆಗಳಿಗೆ ಉತ್ತರವೀಯುತ್ತಾ, "ವರದಿ ತಯಾರಿದೆ. ಆದರೆ ನಾನು ಸಂಬಳ ಪಡೆದು ಕೆಲಸಮಾಡುವ ಓರ್ಗನೈಸಿಂಗ್ ಸೆಕ್ರೆಟರಿಯೋ ಅಲ್ಲವೋ ಎಂಬುದು ಇನ್ನೂ ನಿಶ್ಚಯವಾಗಲಿಲ್ಲ. ಆ ಕುರಿತೊಂದು ಠರಾವಾಗಬೇಕು. ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ನಿರ್ಣಯವಾದುದೇನೋ ನಿಜ ಆದರೆ ನಾನಾ ಸಭೆಯಲ್ಲಿರಲಿಲ್ಲ ಆ ನಿರ್ಣಯವನ್ನು ನಾನು ಸ್ವೀಕರಿಸಲಿಲ್ಲ. ಆ ಕುರಿತು ಆಕ್ಷೇಪಗಳಿವೆ. ನಾನು ಈ ಮೊದಲೊಮ್ಮೆ ಸಂಬಳಕ್ಕೆಂದು ನೇಮಿಸಲ್ಪಟ್ಟು ಸಂಬಳ ತೆಗೆದುಕೊಳ್ಳದೆ ಕೆಲಸ ಮಾಡಿದ್ದೇನೆ. ಇನ್ನೂ ಮಾಡಲು ಸಿದ್ಧನಿದ್ದೇನೆ"ಂದರು. ಇದು ಶ್ರೀ ಕಿಲ್ಲೆಯವರ ಕೇವಲ ಡಂಭಾಚಾರದ ಮಾತಾಗಿತ್ತು. ಅವರನ್ನು ಓರ್ಗನೈಸಿಂಗ್ ಸೆಕ್ರೆಟರಿಗಳಾಗಿ ನೇಮಿಸಿದ ಠರಾವನ್ನು ಅವರಿಗೆ ತಿಳಿಸಲಾಗಿತ್ತು. ಪತ್ರಿಕೆಗಳಲ್ಲೆಲ್ಲಾ ಹಾಗೆಯೇ ಪ್ರಕಟವಾಗಿತ್ತು. ಮಂಗಳೂರಲ್ಲೇ ಇದ್ದು ಎಲ್ಲವನ್ನೂ ತಿಳಿದಿದ್ದ ಅವರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ನಿರ್ಣಯ ಪ್ರಕಾರ ಪುತ್ತೂರು ಮತ್ತು ಕುಂದಾಪುರ ತಾಲೂಕುಗಳಲ್ಲಿ ಕೆಲವೆಡೆ ಸಂಚರಿಸಿ ಕೆಲಸಮಾಡಿದ್ದರು. ತನ್ನ ಕೆಲಸದ ಕುರಿತು ಓರ್ಗನೈಸಿಂಗ್ ಸೆಕ್ರೆಟರಿಯೆಂದು ತಾನೇ ಬರೆದು ಸಹಿಹಾಕಿ ಪತ್ರಿಕೆಗಳಿಗೆ ವರ್ತಮಾನ ಕಳುಹಿಸಿರುವರು ಕಾಂಗ್ರೆಸ್ ಕಮಿಟಿಯವರು ಸಂಬಳದ ಹೊರತು ಗೌರವ ಓರ್ಗನೈಸಿಂಗ್ ಸೆಕ್ರೆಟರಿಯನ್ನು ನೇಮಿಸುವ ನಿರ್ಣಯವೇನೂ ಮಾಡಿರಲಿಲ್ಲ. ಆದರೂ ಜನರಲ್ ಸೆಕ್ರೆಟರಿಗಳಾದ ಶ್ರೀ ಮಲ್ಯರು ಇದಕ್ಕೆ ಸೈಗುಟ್ಟಿದರು, ಕಾಂಗ್ರೆಸ್ ಕಮಿಟಿಯ ನಿರ್ಣಯಕ್ಕೆ ಬೇಕಾದ ಅರ್ಥಮಾಡಿಕೊಂಡು ಬೇಕಾದಂತೆ ನಡೆಯಬಹುದೆಂದು ಇದರಿಂದ ಸಿದ್ಧವಾಗುವುದು. ಆದರೂ ಈ ಕುರಿತು ನಾನು ಚರ್ಚೆಯೆಬ್ಬಿಸಲಿಲ್ಲ. ಗೌರವಾರ್ಥವಾಗಿ ಕೆಲಸಮಾಡುವುದಾಗಿದ್ದರೆ ಬಹಳ ಸಂತೋಷವೆಂದು ಸುಮ್ಮನಾದೆ.

ವಿಶೇಷ ಸಭೆಯನ್ನೇಕೆ ಕರೆದುದೆಂದು ಪ್ರಥಮವಾಗಿ ವಿವರಿಸಿಹೇಳುವ ಅವಶ್ಯವಿತ್ತು, ಆದರೆ ಅದಕ್ಕೂ ಕೆಲವರ ಆಕ್ಷೇಪವಿತ್ತು ಆದರೂ ಅಧ್ಯಕ್ಷರು ನನಗೆ ಸಮ್ಮತಿಯಿತ್ತರು. "ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಕೆಲಸವೇನೂ ಸರಿಯಾಗಿ ನಡೆಯುವುದಿಲ್ಲ. ಇನ್ನಾದರೂ ಉತ್ಸಾಹದಿಂದ ಕೆಲಸವಾಗುವಂತಾಗಬೇಕೆಂದೇ ಈ ವಿಶೇಷ ಸಭೆ ಕರೆದುದಲ್ಲದೆ ಯಾವುದಾದರೊಂದು ತಂಡವನ್ನು ವಿರೋಧಿಸಲಿಕ್ಕಲ್ಲ. ಯಾರೊಬ್ಬ ವ್ಯಕ್ತಿಯನ್ನೂ ಖಂಡಿಸಲಿಕ್ಕಲ್ಲ. ಎಸೆಂಬ್ಲಿ ಚುನಾವಣೆಯ ನಂತರ ಜನತೆಯಲ್ಲೆಲ್ಲಾ ಬಹಳ ಉತ್ಸಾಹವಿದ್ದಿತು, ಅದರ ಸದುಪಯೋಗವನ್ನು ಮಾಡಿದವರು ಯಾರೂ ಇಲ್ಲ. ತಮ್ಮಲ್ಲಿ ಬಂದು ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿರೆಂದು ಆಮಂತ್ರಿಸಿದವರೂ ಇದ್ದಾರೆ. ಜಿಲ್ಲಾ ಕಾಂಗ್ರೆಸ್ ಕಮಿಟಿಯು ಒಬ್ಬರಲ್ಲ ಇಬ್ಬರು ಸೆಕ್ರೆಟರಿಗಳಿಗೆ ತಿಂಗಳೊಂದರ ರೂ. 30ರಂತೆ ಸಂಬಳ ಕೊಡುತ್ತದೆ ಇನ್ನು ಕಟ್ಟೋಣ ಬಾಡಿಗೆ, ವಲಂಟೀಯರರೊಬ್ಬರ ಸಂಬಳವೆಲ್ಲಾ ಬೇರೆಯಿದೆ. ಇಬ್ಬರು ಸಂಬಳದ ಸೆಕ್ರೆಟರಿಗಳಿಗೆ ಸಾಕಷ್ಟು ಕೆಲಸವಿಲ್ಲ. ತಿಂಗಳಿಗೆ ಹತ್ತು ಹನ್ನೆರಡು ಕಾಗದ ಮತ್ತು ಸ್ವಲ್ಪವೇನಾದರೂ ಲೆಕ್ಕವಿಟ್ಟರಾಯಿತು ಇದನ್ನೊಬ್ಬ ಕ್ಲಾರ್ಕನು ಮಾಡಬಹುದು. ಕಾಂಗ್ರೆಸ್ ಕಮಿಟಿಯಲ್ಲಿ ದುಡ್ಡೇನೂ ಇಲ್ಲದಿರುವಾಗ ಸಂಬಳದ ಸೆಕ್ರೆಟರಿಗಳೇಕೆ? ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸ್ಥಿರವಾದ ಆದಾಯವೆಂದರೆ ಕಾಂಗ್ರೆಸ್ ಮೆಂಬರಿಕೆಯಿಂದ ದೊರೆಯುವ ಹಣ. ನಾಲ್ಕಾಣೆಯಲ್ಲಿ ಒಂದಾಣೆ ಮಾತ್ರ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ದೊರೆಯುವುದು. ಇಡೀ ಜಿಲ್ಲೆಯಲ್ಲಿ ಹೆಚ್ಚೆಂದರೆ 6000 ಮೆಂಬರರಾಗಬಹುದು. ಇದು ಒಬ್ಬ ಸೆಕ್ರೆಟರಿಗಳ ಸಂಬಳಕ್ಕೆ ಹೋಗುವುದು. ಇನ್ನೊಬ್ಬ ಸೆಕ್ರೆಟರಿಗಳಿಗೆ ಸಂಬಳವೆಲ್ಲಿಂದ ಕೊಡುವುದು? ಆಫೀಸು, ಪತ್ರ ವ್ಯವಹಾರ ವೆಚ್ಚಕ್ಕೆ ಎಲ್ಲಿಂದ ಹಣ ತರುವುದು? ಬೇರೆ ಕೆಲಸಗಳಿಗೆಲ್ಲಾ ಹಣ ಎಲ್ಲಿಂದ? ಆದುದರಿಂದ ಸೆಕ್ರೆಟರಿಗಳು ಗೌರವಕ್ಕಾಗಿ ಕೆಲಸಮಾಡುವವರಾಗಬೇಕು ಈ ಮೊದಲು ಗೌರವ ಕಾರ್ಯದರ್ಶಿಗಳು ಹೆಚ್ಚಿನ ಕೆಲಸಮಾಡಿರುವರು. ಈಗ ಮಾತ್ರ ಸಂಬಳದ ಕಾರ್ಯದರ್ಶಿಗಳೇಕೆ? ಯಾರಾದರೂ ಕಾಂಗ್ರೆಸ್ ಕಮಿಟಿಗೆ ಉಂಬಳಿಬಿಡುವವರಿರುವರೇ? ಚಾಪೆಯಿದ್ದಷ್ಟೇ ಕಾಲು ನೀಡುವುದು ಬೇಡವೇ? ಸಂಬಳದ ಸೆಕ್ರೆಟರಿಗಳಿಷ್ಟು ಕೆಲಸ ನಡೆದುದೇನು? ಹಳ್ಳಿಗಳಲ್ಲಿ ಕಾಂಗ್ರೆಸ ಕಮಿಟಿಗಳನ್ನು ರಚಿಸುವ ಕೆಲಸ ನಡೆದಿದೆಯೋ? ಕಾಂಗ್ರೆಸ್ ಮೆಂಬರರಾದರೂ ಎಷ್ಟು ಮಂದಿ ಸೇರಿಸಲ್ಪಟ್ಟಿದ್ದಾರೆ? ಇದ್ದ ಹಣವನ್ನು ಸಂಬಳಕ್ಕೆ ಉಪಯೋಗಿಸಿ ಸುಮ್ಮನೆ ಕೂತರಾಯಿತೇ? ಇಂದೀಗ ಕಾಂಗ್ರೆಸನ್ನು ಬಲಗೊಳಿಸಲು ಬಹಳ ಅನುಕೂಲ ಸಂದರ್ಭ. ಎಲ್ಲವರೂ ಉತ್ಸಾಹದಿಂದ ಸಹಕರಿಸದಿರಲಾರರು. ಸರಕಾರದ ವಿರೋಧವೂ ಇಲ್ಲ. ಕಾಂಗ್ರೆಸಿನವರು ಎಷ್ಟು ಕಾಲ ಅಧಿಕಾರದಲ್ಲಿರುವರೆಂದು ಹೇಳಬರುವುದಿಲ್ಲ. ಆರು ತಿಂಗಳೊಳಗೆ ಹೊರಬರಬಹುದು. ಪರಿಸ್ಥಿತಿ ಹೇಗೆ ನಿಲ್ಲುವುದೆಂದು ಹೇಳಬರುವುದಿಲ್ಲ ಆದುದರಿಂದ ಈಗಲೇ ಕಾರ್ಯಕ್ಕೆ ತೊಡಗಬೇಕು. ಹಳ್ಳಿಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಗಳು ಸ್ಥಾಪಿಸಲ್ಪಡಬೇಕು. ಕಾಂಗ್ರೆಸಿನ ಬಲವನ್ನು ಹೆಚ್ಚಿಸಬೇಕೆಂದೇ" ನಾನು ಆಗ್ರಹದಿಂದ ಕೇಳಿಕೊಂಡುದು.

ಸಂಬಳದ ನೌಕರರು ಬೇಡವೆಂಬ ನನ್ನ ಅಭಿಪ್ರಾಯವನ್ನು ಶ್ರೀ ಕಿಲ್ಲೆಯವರು ವಿರೋಧಿಸುತ್ತಾ, ಕೆಲಸಮಾಡಿದರೆ ಹಣದ ಅಭಾವವೇನೂ ಇರಲಾರದು. ಹಣವನ್ನು ಒಟ್ಟುಗೂಡಿಸುವೆನೆಂಬ ಧೈರ್ಯ ನನಗಿದೆ. ಸಂಬಳಕೊಟ್ಟು ನೌಕರರನ್ನೂ ನೇಮಿಸದಿದ್ದರೆ, ಕಾಂಗ್ರೆಸಿನ ಕೆಲಸಮಾಡಲು ನಿಜವಾದ ಉತ್ಸಾಹವುಳ್ಳ ಬಡವನೇನು ಮಾಡಬೇಕು? ಆಗ ಕಾಂಗ್ರೆಸು ಧನಿಕರ ಸಂಸ್ಥೆಯಾಗುವುದು. ಬಡವರಿಗೆ ಅದರಲ್ಲಿ ಸ್ಥಳವಿಲ್ಲೆಂದಾಗುವುದೆಂದರು. ಶ್ರೀ ಕೆ. ಆರ್. ಆಚಾರ್ಯರು, ಗೌರವದ ನೌಕರರು ಕೆಲಸ ಸರಿಮಾಡುವುದಿಲ್ಲ. ಅವರಿಗೆ ಬೇರೆ ವೆಚ್ಚವೆಲ್ಲಾ ಆಗುತ್ತದೆ. ನನಗದರ ಅನುಭವವಿದೆಯೆಂದರು. ಶ್ರೀ. ಸಿ. ವಿ. ಉಪಾಧ್ಯಾಯರೂ ಇದೇ ಅಭಿಪ್ರಾಯ ಪಟ್ಟರು. ಶ್ರೀ ರಂಗರಾವ್ ತಲಚೇರಿಕರರು, ಗೌರವ ಕಾರ್ಯದರ್ಶಿಗಳಿಂದ ಕೆಲಸವೇನೂ ಆಗುವುದಿಲ್ಲ. ಅವರು ಗೌರವಕ್ಕಾಗಿ ಅಧಿಕಾರ ವಹಿಸುವವರು ನಮಗೆಲ್ಲಾ ಅದರ ಅನುಭವವಿದೆ. ಪಂಡಿತ ಜವಾಹರಲಾಲರೆಂದಂತೆ ಸಂಡೇ ಪೊಲಿಟೀಶನ್ಸ್ ನಾವೆಲ್ಲ. ನಮಗೆಲ್ಲಾ ಬೇರೆ ಬೇರೆ ಕೆಲಸವಿದೆ. ಕೇವಲ ಸ್ಥಾನಮಾನಕ್ಕಾಗಿ ನಾವು ಅಧಿಕಾರವಹಿಸುವುದು. ಶ್ರೀ ಉಮೇಶರಾಯರೂ ಹಾಗೆ ಅವರಿಗೆ ಬಿಡುವಿಲ್ಲ ಕೋರ್ಟು ಕೆಲಸವಿದೆ. ಕ್ಲಬ್ಬಿಗೆ ಹೋಗಲಿದೆ. ಎಂದೆಲ್ಲಾ ಮಾತಾಡಿದರು.

ನಾನು ಕೊನೆಗೆ ಉತ್ತರ ಕೊಡುವ ಮನಸ್ಸುಳ್ಳವನಾಗಿರಲಿಲ್ಲ. ಆದರೆ ಶ್ರೀ. ರಂಗರಾವ್ ತಲಚೇರಿಕರರ ಮನೋವೃತ್ತಿಯನ್ನು ಖಂಡಿಸುವುದು ಅವಶ್ಯವೆಂದು ತೋರಿತು ನನಗೆ ನಾನು ಉತ್ತರವೀಯುತ್ತಾ, "ಶ್ರೀ. ರಂಗರಾಯರು ಹೆಸರಿನ ಮಟ್ಟಿಗೆ ಗೌರವದ ಕೆಲಸ, ಸಂಡೇ ಪೊಲಿಟೀಸಿಯನ್ಸ್ ಎಂದೆಲ್ಲಾ ಹೆಗ್ಗಳಿಕೆಯಿಂದ ಮಾತಾಡಿದಂತಿದೆ. ಇದು ಹೆಗ್ಗಳಿಕೆಯ ಸಂಗತಿಯಲ್ಲ, ನಾಚಿಕೆಯ ಸಂಗತಿ. ಸ್ಥಾನಮಾನಕ್ಕಾಗಿ ಕೆಲಸಮಾಡುವ ಸಂಸ್ಥೆ ಕಾಂಗ್ರೆಸಲ್ಲ. ಆ ಮನೋವೃತ್ತಿಯುಳ್ಳವರು ಕಾಂಗ್ರೆಸಿನೊಳಗಿರುವುದು ಸರಿಯಲ್ಲ. ನಮಗೆ ದಿವಸಕ್ಕೊಂದು ಅರ್ಧಘಂಟೆಯನ್ನು ತಿಂಗಳಿಗೊಂದು ನಾಲ್ಕೈದು ದಿವಸವನ್ನು ಕಾಂಗ್ರೆಸ್ ಕೆಲಸಕ್ಕಾಗಿ ವಿನಿಯೋಗಿಸಲು ಸಾಧ್ಯವಿಲ್ಲವೇ? ಕೆಲಸಮಾಡಲು ಅಸಾಧ್ಯವಾದವರು ಕಾಂಗ್ರೆಸಿನೊಳಗಿರುವುದೇಕೆ ಈಗ ಕಾಂಗ್ರೆಸ್ ಕೆಲಸ ಮಾಡುವುದೇನೂ ಕಷ್ಟವಲ್ಲ ಜನರು ತಾವಾಗಿ ಕಾಂಗ್ರೆಸ್ ಮೆಂಬರರಾಗಿ ಸೇರಲು ಮುಂದೆ ಬರುತ್ತಿದ್ದಾರೆ. ಇದು ನನ್ನ ಸ್ವಾನುಭವದ ವಿಷಯ. ಮೊದಲು ಕಷ್ಟದ ಕಾಲದಲ್ಲಿ ಜನರು ಹೆಚ್ಚಾಗಿ ವಿರೋಧಿಸುತ್ತಿದ್ದಾಗ

(೧೦ನೇ ಪೇಜಿಗೆ ಮುಂದರಿಯುವುದು.)


## ಎಚ್. ಎಸ್. ಮಿಯಾಜಿವಾಲಾ ಬ್ರದರ್ಸ್
**ಬೊಂಬಾಯಿ.**

ಚಿನಿವಾರ ಉಪಕರಣಗಳ ಬೊಂಬಾಯಿಯ ಸುಪ್ರಸಿದ್ಧ ಅಂಗಡಿ.

**ಕುರಂದದ ಕಡ್ಡಿ, ಕುರಂದದ ಕಾಗದ, ಪ್ರತಿಯೊಂದು ವಿಧದ ಅರ, ಸರಿಗೆಯ ಬ್ರಶ್ಯು, ತೂತುಮಾಡುವ ಗರಗಸವೇ ಮೊದಲಾದ ಚಿನಿವಾರ ಕೆಲಸಕ್ಕೆ ಬೇಕಾಗುವ ಯಾವತ್ತೂ ನವನವ ಸಾಮಾನುಗಳು ನಮ್ಮಲ್ಲಿ ಸ್ಟೋಕ್ ಇರುತ್ತವೆ.**

**ಒಮ್ಮೆ ಆರ್ಡರುಕೊಟ್ಟು ಪರೀಕ್ಷಿಸಬೇಕಾಗಿ ವಿನಂತಿ**

ಪಟ್ಟಣದ ಹೊರಗಣ ನಮ್ಮ ಗಿರಾಕಿಗಳ ಕುರಿತು ನಾವು ವಿಶೇಷ ಜಾಗ್ರತೆ ತೆಗೆದುಕೊಳ್ಳುತ್ತೇವೆ.

**H. S. Miyajiwala Bros.**
*114 Lohar Chawl,* **BOMBAY**

ಪತ್ರವ್ಯವಹಾರಗಳನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.

## ನಮ್ಮ ಸಿನೇಮಾ ಪುಟ

# ಸಂತ ತುಕಾರಾಮ

**["ಪ್ರಭಾತ" ಫಿಲ್ಮಿಂದ ಬಳಿಕ ಅದರ ಗುಣಗಾನದ ಅವಶ್ಯಕತೆ ಇಲ್ಲ. "ತುಕಾರಾಮ" ಸದಾ ಪ್ರಭಾತದ ಶ್ರೇಷ್ಠ ವಾಕ್ಚಲಚಿತ್ರ. ತಾ. 4-8-'37ರಿಂದ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುವುದು. ಎಲ್ಲೆಲ್ಲೂ ಮೆರೆದಾಡಿರುವ ಈ ಚಿತ್ರದ ಕಥಾ ಸಾರಾಂಶವನ್ನಿಲ್ಲಿ ಕೊಡಲಾಗಿದೆ.]**

ತುಕಾರಾಮನು ದೇಹು ಎಂಬ ಗ್ರಾಮದೊಳಗಿನ ಓರ್ವ ಬಡಸಂಸಾರಿ ಹಾಗೂ ವಿಠೋಬನ ಭಕ್ತನು. ಜೀಜಾಯಿ ಅವನ ಪತ್ನಿ. ಕಾಶಿ ಮತ್ತು ಮಹದೇವ ಇವರು ಅವನ ಮಕ್ಕಳು. ಅದೊಂದು ದಿನ ಅಕಸ್ಮಾತ್ತಾಗಿ ಮಹದೇವನು ಕಾಯಿಲೆ ಬೀಳುವನು. ಜೀಜಾಯಿಯು ತುಕಾರಾಮನೊಡನೆ ಔಷಧ ತರಹೇಳಲು ಅವನು ಮಗನಿಗೆ ಪಾಂಡುರಂಗನ ನಾಮಸ್ಮರಣೆ ಮಾಡಹೇಳುವನು. ಇದರಿಂದ ಕ್ರುದ್ಧಳಾದ ಜೀಜಾಯಿಯು ಪತಿಯನ್ನು ಜರೆದು ಮಹಾದೇವನನ್ನೆತ್ತಿಕೊಂಡು ವಿಠೋಬ ಮಂದಿರಕ್ಕೆ ತೆರಳಿ, ಕಾಲಲ್ಲಿದ್ದ ಜೋಡನ್ನು ತೆಗೆದು ವಿಠೋಬನ ಮೂರ್ತಿಗೆ "ಅರೆ ವಿಠ್ಯಾ! ನನ್ನ ಮಗನನ್ನು ಬದುಕಿಸು. ಇಲ್ಲವಾದಲ್ಲಿ ಇದರಿಂದಲೇ ನಿನ್ನ ಪೂಜೆ ಮಾಡುತ್ತೇನೆ." ಎಂದು ಹೇಳಲು, ಭಕ್ತವತ್ಸಲನು ಮಹದೇವನನ್ನು ಬದುಕಿಸುವನು. ಆದರೆ ಅಲ್ಲಿದ್ದ ಸಾಲೋ ಮಾಲೋ ಎಂಬವನು ಇದನ್ನು ನೋಡಿ ತುಕಾರಾಮನೊಡನೆ, "ಏನೋ ತುಕ್ಯಾ! ದೇವಸ್ಥಾನವೆಂದರೆ ಬಾಜಾರವೆಂದು ಗ್ರಹಿಸಿದೆಯಾ? ನಿನ್ನ ಪತ್ನಿ ಕಾಲಿನ ಜೋಡನ್ನು ತೆಗೆದು ಮೂರ್ತಿಗೆ ಹೊಡೆಯ ಹೋದಳಲ್ಲಾ? ಜಾಗ್ರತೆ! ಇನ್ನು ಮುಂದೆ ನಿನ್ನವರಾರೂ ಈ ದೇವಸ್ಥಾನದ ಹೊಸ್ತಿಲನ್ನು ದಾಟಕೂಡದು! ತಿಳಿಯಿತೆ" ಎಂದು ಕಟ್ಟಾಜ್ಞೆ ಮಾಡಿದನು. ಇದರಿಂದ ತುಕಾರಾಮನಿಗೆ ಹೇಳತೀರದಷ್ಟು ವ್ಯಸನ ಉಂಟಾಯಿತು. ಅವನು ವಿಠೋಬನೊಡನೆ ಕ್ಷಮೆಯನ್ನು ಬೇಡುತ್ತ, ಅವನ ಧ್ಯಾನದಲ್ಲಿ ತಲ್ಲೀನನಾಗಿ ದೇವಮಂದಿರದೆದುರುಗಡೆಯಿದ್ದ ಗುಡ್ಡದಲ್ಲಿ ಕುಳಿತುಕೊಂಡುಬಿಟ್ಟನು

ಬಹು ಹೊತ್ತು ಕಾದುಕೊಂಡು ಕೂತರೂ ತುಕಾರಾಮನು ಬರಲಿಲ್ಲವಾದುದರಿಂದ ಜೀಜಾಯಿಯು ರೊಟ್ಟಿ ಮತ್ತು ನೀರನ್ನು ಹಿಡಕೊಂಡು ತುಕಾರಾಮನನ್ನು ಹುಡುಕುತ್ತ ಹೊರಟಳು. ದೂರದ ಗುಡ್ಡದಲ್ಲಿ ತುಕಾರಾಮನನ್ನು ಕಂಡು ಗುಡ್ಡ ಹತ್ತುವಾಗ ಅವಳ ಕಾಲಿಗೆ ಮುಳ್ಳು ಚುಚ್ಚಿತು. ಅದನ್ನು ತೆಗೆಯಲು ಯತ್ನಿಸಿದಳು. ಇದನ್ನರಿತು ಪಾಂಡುರಂಗನು ಓರ್ವ ವೃದ್ಧನ ವೇಷದಿಂದ ಬಂದು ಅವಳ ಕಾಲಲ್ಲಿದ್ದ ಮುಳ್ಳನ್ನು ತೆಗೆಯುವನು. ಜೀಜಾಯಿಯು ಅವನ ಹೆಸರನ್ನು ಕೇಳಿದಾಗ ವೃದ್ಧನು ಹೇಳಿದನು. "ನನ್ನ ಹೆಸರು ವಿಠ್ಯಾ!" ಆ ಎಂಬ ಶಬ್ದಶ್ರವಣ ಮಾತ್ರದಿಂದ ಅವಳು ಕ್ರುದ್ಧಳಾಗಿ ವೃದ್ಧನನ್ನು ಕಲ್ಲಿನಿಂದ ಹೊಡೆದೋಡಿಸಿಬಿಟ್ಟಳು. ವೃದ್ಧನು ಅದೃಶ್ಯನಾಗುವನು. ಜೀಜಾಯಿಯು ನೀರನ್ನೂ ರೊಟ್ಟಿಯನ್ನೂ ತುಕಾರಾಮನಿಗೆ ಕೊಟ್ಟು ಅವನನ್ನು ಮನೆಗೆ ಕರತಂದಳು.

ತುಕಾರಾಮನು ಪತ್ನಿಯ ಒತ್ತಾಯದ ಮೇಲೆ ಜ್ಞಾನೋಬನೆಂಬವನಲ್ಲಿ ಪೈರು ಕಾಯುವ ಕೆಲಸಕ್ಕೆ ಸೇರಿಕೊಳ್ಳುವನು. ತುಕಾರಾಮನನ್ನು ತಿರಾನಿರ್ಗತಿಕನನ್ನಾಗಿ ಮಾಡಬೇಕೆಂದು ಅಪೇಕ್ಷಿಸಿ ಕುಹಕಿ ಸಾಲೋಮಾಲೋವು ತನ್ನ ಕಡೆಯ ಜನರಿಂದ ಜಾನುವಾರುಗಳನ್ನೆಲ್ಲಾ ಆ ಗದ್ದೆಗೆ ಬಿಡಿಸುವನು. ಪಾಂಡುರಂಗ ಧ್ಯಾನಾಸಕ್ತನಾದ ತುಕಾರಾಮನಿಗೆ ಇದು ತಿಳಿಯಲಿಲ್ಲ. ಅಷ್ಟರಲ್ಲಿ ಜ್ಞಾನೋಬನು ಅದನ್ನು ಕಂಡು ಪೈರು ನಾಶವಾದುದರಿಂದಾಗಿ ಕ್ರುದ್ಧನಾಗಿ, ತುಕಾರಾಮನ ಮನೆ-ಮಾರುಗಳನ್ನೆಲ್ಲಾ ದಂಡದ ರೂಪದಲ್ಲಿ ತನ್ನ ಹೆಸರಿಗೆ ಬರೆಸಿಕೊಂಡುಬಿಟ್ಟನು!

ಜ್ಞಾನೋಬನು ತನ್ನ ಗದ್ದೆಯ ಉತ್ಪತ್ತಿಯನ್ನು ಅಳೆಯತೊಡಗಿದನು. ಪ್ರತೀ ಸಲದ ಉತ್ಪತ್ತಿಗಿಂತ ಈ ಸಾರಿ 18 ಖಂಡುಗ ಭತ್ತವು ಜಾಸ್ತಿ ಬಂದುದರಿಂದ ಜ್ಞಾನೋಬನ ಮನಸ್ಸು ತುಕಾರಾಮನ ವಿಷಯವಾಗಿ ಪಶ್ಚಾತ್ತಾಪಪಡತೊಡಗಿತು. ಅವನು ಪಾಂಡುರಂಗನ ಭಕ್ತನಾದುದರಿಂದ ಪಾಂಡುರಂಗನೇ ತನಗೆ ಈ ಉತ್ಪತ್ತಿಯನ್ನು ಕೊಟ್ಟನೆಂದು ತಿಳಿದು 18 ಖಂಡುಗ ಭತ್ತವನ್ನೂ ತುಕಾರಾಮನ ಮನೆಗೆ ಸಾಗಿಸಹೇಳಿದನು. ಇದನ್ನರಿತು ಸಾಲೋಮಾಲೋವು ಗದ್ದೆ ತನ್ನದು. ಹೆಚ್ಚಿನ ಉತ್ಪತ್ತಿ ಎಲ್ಲಾ ತನಗೆ ಸಲ್ಲತಕ್ಕದ್ದು ಎಂದು ವಾದಿಸುವನು ಆದರೆ ಜ್ಞಾನೋಬನು ಅದಕ್ಕೊಪ್ಪದೆ ಗೇಣಿಯನ್ನು ಮಾತ್ರ ಸಾಲೋಮಾಲೋನಿಗೊಪ್ಪಿಸಿ ಉಳಿದುದನ್ನು ತುಕಾರಾಮನಿಗರ್ಪಿಸಿದನು. ತುಕಾರಾಮನಾದರೋ ಅದರಲ್ಲಿ ಒಂದು ಕಾಳನ್ನೂ ಇಟ್ಟುಕೊಳ್ಳದೆ ಎಲ್ಲವನ್ನೂ ದೀನದರಿದ್ರರಿಗೆ ದಾನಮಾಡಿಬಿಡುವನು.

ಅತಿ ಮತ್ಸರ ಸ್ವಭಾವದ ಸಾಲೋಮಾಲೋಗೆ ಇದು ಸಹಿಸಲಸಾಧ್ಯವಾಯಿತು. ತುಕಾರಾಮನನ್ನು ವೇಶ್ಯಾಪ್ರಿಯನನ್ನಾಗಿ ಮಾಡಬೇಕೆಂದು ವೇಶ್ಯೆಯೊಬ್ಬಳನ್ನು ಅವನಲ್ಲಿ ಕಳುಹಿಸಿದನು ಆದರೆ ಅವಳ ಹಾವ-ಭಾವಗಳಿಗೆ ತುಕಾರಾಮನು ಬಲಿಬೀಳಲಿಲ್ಲ. ಮೇಲಾಗಿ ಅವಳಿಗೆ ವೈರಾಗ್ಯತತ್ವವನ್ನು ಬೋಧಿಸಿದನು. ಇದರಿಂದ ಅವಳು ಪಶ್ಚಾತ್ತಾಪ ಪಟ್ಟು ತನ್ನನ್ನು ಶಿಷ್ಯಳನ್ನಾಗಿ ಸ್ವೀಕರಿಸಬೇಕೆಂದು ಬೇಡಿದಳು. ಆದರೆ ಜೀಜಾಬಾಯಿಯು ಅವಳನ್ನು ಮನೆಯಿಂದ ಹೊರದಬ್ಬಿ ಬಿಡುವಳು. ಆದರೂ ಹೊರಗಿನ ಹೊಸ್ತಿಲಲ್ಲೇ ಕುಳಿತು ವೇಶ್ಯೆಯು ಪಾಂಡುರಂಗಧ್ಯಾನದಲ್ಲಿ ಕಾಲ ಕಳೆಯಲಾರಂಭಿಸಿದಳು. ಭಗ್ನಮನೋರಥನಾದ ಸಾಲೋಮಾಲೋವು ಧರ್ಮಾಧಿಕಾರಿ ರಾಮೇಶ್ವರ ಶಾಸ್ತ್ರಿಗಳೆಡೆಗೆ ಹೋಗಿ, "ತುಕಾರಾಮನು ತನ್ನ ಪದ್ಯಗಳನ್ನೆಲ್ಲಾ ಕದ್ದು, 'ಸಾಲೋಮ್ಹಣೆ' ಇದ್ದಲ್ಲಿ 'ತುಕಾಮ್ಹಣೆ'ಯೆಂದು ಸೇರಿಸಿ ಅವುಗಳನ್ನು ತನ್ನವೆಂದು ಹೇಳಿಕೊಳ್ಳುತ್ತಾನೆ. ಹಾಗೂ ನಿಜಾರ್ಥಕ್ಕೆ ಕೆಟ್ಟ ಅರ್ಥ ಮಾಡಿಕೊಂಡು ಆ ಪದಗಳ ಕುಲ ಕೆಡಿಸುತ್ತಾನೆ. ಇತ್ಯಾದಿ ದುರ್ಬೋಧನೆಕೊಟ್ಟು ಶಾಸ್ತ್ರಿಗಳ ಮನಸ್ಸನ್ನು ಕೆಡಿಸಿದನು. ತುಕಾರಾಮನ ವಿಷಯವಾಗಿ ಅವರನ್ನೂ ವಿಮನಸ್ಕರನ್ನಾಗಿ ಮಾಡಿದನು. ಪ್ರತಿಫಲವಾಗಿ ತುಕಾರಾಮನು, ಅವನ ಅಭಂಗಗಳೆಲ್ಲವನ್ನೂ ಇಂದ್ರಾಯಿಣೀ ಹೊಳೆಯಲ್ಲಿ ಮುಳುಗಿಸಬೇಕೆಂಬ ಕಟ್ಟಾಜ್ಞೆ ಹೊರಟಿತು. ನಿರುಪಾಯನಾದ ತುಕಾರಾಮನು ಅಭಂಗಗಳೆಲ್ಲವನ್ನೂ ಇಂದ್ರಾಯಿಣಿಗರ್ಪಿಸಿ ಅಲ್ಲೇ 13ದಿನ ಕಠಿಣ ಉಪವಾಸವನ್ನು ಮಾಡಲು ಇಂದ್ರಾಯಣಿಯು ಪ್ರತ್ಯಕ್ಷಳಾಗಿ ಅಭಂಗಗಳೆಲ್ಲವನ್ನೂ ಪುನಃ ತುಕಾರಾಮನಿಗೇ ಕೊಟ್ಟಳು. ರಾಮೇಶ್ವರ ಶಾಸ್ತ್ರಿಗಳಿಗಂತೂ ಮೈಯೆಲ್ಲಾ ಉರಿಯೇಳಲಾರಂಭಿಸಿತು. ಅದರ ಬಾಧೆಯನ್ನು ತಾಳಲಾರದೆ ಅವರು ನದಿಯಲ್ಲಿ ಬೀಳುವುದಕ್ಕಾಗಿ ಓಡಿಬರತೊಡಗಿದರು. ತುಕಾರಾಮನು ಅವರ ಮೈಮೇಲೆ ಕೈಯಾಡಿಸಲು ಉರಿಯು ಶಮನವಾಯಿತು! ಪಶ್ಚಾತ್ತಾಪಭರಿತರಾಗಿ ರಾಮೇಶ್ವರ ಶಾಸ್ತ್ರಿಗಳು ತುಕಾರಾಮನಲ್ಲಿ ಕ್ಷಮೆಯನ್ನು ಬೇಡಿದರು.

ಇಷ್ಟರಿಂದಲೂ ತೃಪ್ತನಾಗದ ಸಾಲೋಮಾಲೋವು ಶಿವಾಜಿಯ ಬಳಿ ತೆರಳಿ ತುಕಾರಾಮನಿಗೆ ಶಿಕ್ಷೆಮಾಡಿಸಬೇಕೆಂದು ಕೇಳುವನು. ಶಿವಾಜಿಯು ತುಕಾರಾಮನನ್ನು ಪರೀಕ್ಷಿಸಬೇಕೆಂದು ವಿಪುಲ ಧನಕನಕ ವಸ್ತ್ರಾಭರಣಗಳನ್ನು ಕಳುಹಿಸಿಕೊಡುವನು. ತುಕಾರಾಮನು ಅವುಗಳನ್ನೆಲ್ಲಾ ತಿರಸ್ಕರಿಸಿಬಿಡುವನು. ಇದನ್ನರಿತು ಶಿವಾಜಿಯು ತುಕಾರಾಮನ ವಿರಕ್ತಿಗೂ ಭಕ್ತಿಗೂ, ವಿಶ್ವಾಸಕ್ಕೂ ಮೆಚ್ಚಿ ಅವನ ಶಿಷ್ಯನಾಗುವನು. ಅಷ್ಟರಲ್ಲಿ ಶಿವಾಜಿಯ ವೈರಿಗಳು ಅವನನ್ನು ಮುತ್ತುವರು. ಆದರೆ ತುಕಾರಾಮನು ಪಂಢರಿನಾಥನ ಸ್ತೋತ್ರ ಮಾಡಲು, ಶಿವಾಜಿಯ ವೈರಿಗಳಿಗೆ ಎಲ್ಲೆಲ್ಲೂ ಶಿವಾಜಿಯೇ ಕಂಡುಬಂದು ಭಗ್ನಮನೋರಥರಾಗಿ ಹಿಂತೆರಳುವರು. ಶಿವಾಜಿಯು ತುಕಾರಾಮನನ್ನು ಬಹಳವಾಗಿ ಕೊಂಡಾಡುವನು. ದುರಾಚಾರಿ ಸಾಲೋಮಾಲೋವು ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನನುಭವಿಸುವನು. ಶುಭಪ್ರದವಾದ ದಿವಸದಲ್ಲಿ ತುಕಾರಾಮನು ಸ್ವರ್ಗದಿಂದ ಬಂದ ವಿಮಾನವನ್ನೇರಿ ವೈಕುಂಠಕ್ಕೆ ತೆರಳುವನು.


**WHAT BUILDS A GREAT BANK**

The two vital features of a bank are its financial policy and its service. When for over thirty years a bank has been widely reputed for its SAFETY FIRST POLICY and for its courteous and efficient service it is no wonder that the people's confidence in it continues to grow.

RESOURCES OF A CRORE.

ESTD. 1906

**CANARA BANK**

**LIMITED.**

ಸುಸಮಯ! ಹಣ ಸಂಪಾದಿಸಿರಿ!!

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡಿಯುತ್ತಿರುವರು.

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸಾಫರ್ ಪೋರಿನ ತೋಟಿ ಹೂ ಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆಬರೆಯಿರಿ

**Bihar Nursery,**
**P. O. Bihar**

*Nursery (Darbhanga)* **BIHAR**

## ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ
ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್
ರೀಡ್ಡಿನ ಕೈ, ಮತ್ತು ಕಾಲು
ಹಾರ್ಮೋನಿಯಮುಗಳು
ಬೇಕಾದ ನಮೂನೆಯಲ್ಲಿ
ದೊರೆಯುತ್ತವೆ.

ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದಗಾಯನ ಸಾಮಗ್ರಿಗಳನ್ನು
ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ
ಮಾಡಿಕೊಡಲಾಗುತ್ತದೆ.
ವಿಶೇಷ ಮಾಹಿತಿಗೆ ಬರೆಯಿರಿ.

*Proprietor:* **ATTAVAR BABOO,**
**Vasanthi Harmonium Works,**
**Hampankatta, Mangalore.**

ವಿ ಸೂ ನಮ್ಮ ಹಾರ್ಮೋನಿಯಮುಗಳು ನವಭಾರತ
ಬುಕ್ ಡಿಪೋ, ಚರ್ಚರೋಡ್, ಉಡುಪಿ ಇಲ್ಲಿ ಮಾರಲ್ಪಡುತ್ತವೆ.

---

ಅಚ್ಚಿನಲ್ಲಿದೆ!　　　　?　　　　ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮನಮೋಹಿನಿ! — **ಮಿಸ್ ಲಲಿತ** — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

**ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು**
**ಎತ್ತಿ ತೋರಿಸುವ ಪುಸ್ತಕವು.**

ಹೊರಡಲಿರುವ ತಾರೀಕನ್ನು ಗಮನಿಸಿರಿ!
**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**
ಬರೆದವರು **ಯಂ. ವಿ. ಪುತ್ರಾನ್**

ಕೂಡಲೇ ಬರೆಯಿರಿ.　　　　**ಬೆಲೆ 0—8—0**

ವಿಳಾಸ — **M V. Puthran,**
*C/o* 34, Bomanji Lane, *2nd Floor*, ***Fort, BOMBAY***

---

**15 ವರ್ಷಗಳ ಅನುಭವ !**　　　　**ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು
ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು
**ಪ್ರಸಿದ್ಧರಾಗಿರುವ**

## ಪೈಂಟರ್ ಗಣಪತಿ ರಾವ್.

**ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು**
**ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ**
**ಮಿತದರದಲ್ಲಿ ಮಾಡಿಕೊಡುವರು.**

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು
ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ

**ಗಣಪತಿ ರಾವ್, ಪೈಂಟರ್,**
ಸೋದೆ ಮಠದ ಲೇನು - - **ಉಡುಪಿ, ದ. ಕ.**

---

THE
# MOOLKY BANK, LTD.,
**MOOLKY.**
## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
**ಮೂಲ್ಕಿ.**

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ
ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು
ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ವರೆಗಿನ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ಸರ್ವ ಚಿಂತನೆಯಾಗಿರುವುದು

**M. R Punja,**　　　　**ಯಂ. ಆರ್. ಪೂಂಜ,**
*President & Manager.*　　　　**ಪ್ರೆಸಿಡೆಂಟ್ ಮತ್ತು ಮೆನೇಜರ್.**

---

**ರೂ. 2—12—0ಕ್ಕೆ**
## ತೀಕ್ಷ್ಣ ದೃಷ್ಟಿಚಕ್ರವುಳ್ಳ
## ಬೇಬಿ ಬೋಕ್ಸ್ ಕೆಮರಾ



**(1937ನೇ ಮೈರಿ ಉಚಿತ)**

ಕಲಿಯಲಿಚ್ಛಿಸುವವರು ಈ ಕೆಮರಾದಿಂದ ಕಾರ್ಡು ಸೈಜು ಪ್ಲೇಟಿನಲ್ಲಿ ಯಾವದರ ಫೋಟೋವನ್ನಾದರೂ ಉತ್ಕೃಷ್ಟವಾಗಿ ಒಂದೇ ಕ್ಷಣದೊಳಗೆ ತೆಗೆಯಬಹುದು ನಿರುದ್ಯೋಗಿಗಳು ಇದರಿಂದ ದಿನಂಪ್ರತಿ ರೂ 5/ನ್ನು ಗಳಿಸಬಹುದು 1 ಡಜನ್ ಪ್ರಿಂಟಿಂಗ್ ಪೇಪರ್ ಚಿತ್ರಗಳನ್ನು ತೋರ್ಪಡಿಸುವ ಉಪಕರಣ ಮತ್ತು ಫೋಟೋ ತೆಗೆವ ವಿಧಾನಗಳನ್ನು ಉಚಿತವಾಗಿ ಕೊಡಲಾಗುವುದು ಕ್ರಯ 2ನೇ ನಂಬ್ರಕ್ಕೆ ರೂ 2—12—0, 1ನೇದ್ದಕ್ಕೆ ರೂ 3—12—0, ಫೋಲ್ಡಿಂಗ್ ಕೆಮರಾಕ್ಕೆ ರೂ 3/- ಉತ್ತಮ ತರದ್ದಕ್ಕೆ ರೂ 4—5—0 ಪೋಸ್ಟೇಜು ಅಲಾಹಿದಾ

**DUTTA & CO.**
*15/1, Jaymittra Street,*
***P. O. Hatkhola* (Calcutta)**

---

# HOTEL INDIANA
## Bar and Restaurant

**ಮಂಗಳೂರಿಗೆ ಹೋದಲ್ಲಿ ಉಳುಕೊಳ್ಳುವುದೆಲ್ಲೆಂದು**
**ಯೋಚಿಸುವಿರೇಕೆ?**

## ಹೊಟೇಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೆ ಕೇಂದ್ರವಾದ ಹಂಪನಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ನಮ್ಮನ್ನಿದಿರುಗೊಳ್ಳುತ್ತದೆ.

**ಹೊಸ ಆಡಳಿತ!**　　　　**ಹೊಸ ವ್ಯವಸ್ಥೆ!**

**ಎಲ್ಲವೂ ಹೊಸತೇ ಆಗಿ**

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ

*Proprietor,*
HOTEL INDIANA
***Hampankatta, Mangalore***

---

## ಧರ್ಮಾರ್ಥ ಬಹುಮಾನಗಳು



**1—0—0ಗೆ!**

**--- ಯಾರಿಗೆ? ---**

ರೂಪಾಯಿ 1-0-0 ಕೊಟ್ಟು 36 ಸೀಸೆ ಒಟ್ಟೋರೋಸ್ಸ್ ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

**ಇನಾಮುಗಳ ವಿವರ:—** 3 ಚಿಮ್ಮಿ ರಿಸ್ಟ್‌ವಾಚುಗಳು, 1 ರೈಲ್ವೆಟೈಂಯಂ ದಮ್ಮಿ ಪಾಕೆಟ್ ವಾಚು 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಷನ್ ಮೋತಿ ಮಫ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ಬೀರುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B ಟಾಯಂಪೀಸು (10 ವರುಷ ಗ್ಯಾರಂಟಿ) **ಪ್ಯಾಕಿಂಗ್ ಮತ್ತು ಪೋಸ್ಟೇಜು** 0 10 0. **ಇಂದೇ ಆರ್ಡರು ಕೊಡಿರಿ.**

**EASTERN TRADING COY.,**
*Post Box No. 12204,* ***CALCUTTA, (N. Y.)***

# ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

## ಧುರೀಣರಿಗೆ ಸತ್ಕಾರಗಳು

ಕಳೆದ ತಾ. ೨೩ನೇ ದಿನ ಶುಕ್ರವಾರ ಸಾಯಂಕಾಲ ೬ ಘಂಟೆಗೆ ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯವರು ನಮ್ಮ ಜಿಲ್ಲೆಯಿಂದ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ನೇಮಕಹೊಂದಿರುವ ಪ್ರೊ. ವಾರ್ಕಿ, ಶ್ರೀ ಎ. ಬಿ. ಶೆಟ್ಟಿ ಮತ್ತು ಶ್ರೀ ಕಾರಂತರಿಗೆ ಒಂದು ಟೀಪಾರ್ಟಿ ಸತ್ಕಾರವನ್ನೇರ್ಪಡಿಸಿದ್ದರು. ಪ್ರೊ. ವಾರ್ಕಿಯವರು ಮದ್ರಾಸಿಗೆ ಹೋಗಿದ್ದ ಕಾರಣ ಅವರು ಬರಲಿಲ್ಲ. ಶ್ರೀ ಗಳಾದ ಎ. ಬಿ ಶೆಟ್ಟಿಯವರೂ ಕಾರಂತರೂ ಬಂದಿದ್ದರು. ಫಲಾಹಾರದ್ಯುಪಚಾರವಾದ ಬಳಿಕ ಶ್ರೀ. ಕಿಲ್ಲೆಯವರು ಅತಿಥಿಗಳ ಗುಣಕಥನಮಾಡಿ ಮಾತಾಡಿದರು. ಶ್ರೀಗಳಾದ ಕಾರಂತರೂ, ಎ. ಬಿ. ಶೆಟ್ಟಿಯವರೂ ಟೌನ್ ಕಾಂಗ್ರೆಸ್ ಕಮಿಟಿಯವರಿಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು.

## ವಕೀಲರ ಸತ್ಕಾರ

ಮಂಗಳೂರು ವಕೀಲ ಸಂಘದವರು ಶ್ರೀ ಕಾರಂತರಿಗೆ ಕಳೆದ ತಾ. ೨೩ನೇ ಸಾಯಂ ಘಂಟೆ ೫ಕ್ಕೆ ಒಂದು ಟೀಪಾರ್ಟಿಯನ್ನಿತ್ತರು. ಶ್ರೀ ಕಾರಂತರಿಗೆ ಪಾರ್ಲಿಮೆಂಟರಿ ಸೆಕ್ರೆಟರಿಗಳ ಉದ್ಯೋಗವು ದೊರಕಿದುದಕ್ಕಾಗಿ ಶ್ರೀ ಪದ್ಮರಾಯರು ಸಂತೋಷವನ್ನು ಸೂಚಿಸಿ ಭಾಷಣವನ್ನಿತ್ತರು. ಶ್ರೀ ಕಾರಂತರು ಯಥೋಚಿತ ಉತ್ತರವನ್ನಿತ್ತರು. ಅದೇ ದಿನ ಥಿಯಾಸಾಫಿಕಲ್ ಲಾಜಿನಲ್ಲಿಯೂ ಒಂದು ಸತ್ಕಾರವು ನಡೆಯಿತು.

## ಆರ್ಯ ಸಮಾಜದಲ್ಲಿ

ಮಂಗಳೂರು ಆರ್ಯ ಸಮಾಜದವರು ಶ್ರೀ ಕಾರಂತರಿಗೂ ಅವರ ಕುಟುಂಬದವರಿಗೂ ಒಂದು ಟೀಪಾರ್ಟಿ ಸತ್ಕಾರವನ್ನಿತ್ತು ಮನ್ನಿಸಿದರು.

## ಶ್ರೀ ಎ. ಬಿ. ಶೆಟ್ಟಿಯವರಿಗೆ ಔತಣ

ತಾ. ೨೪ನೇ ಸಾಯಂಕಾಲ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಿದ್ಯಾರ್ಥಿಗಳು ಶ್ರೀ. ಎ ಬಿ, ಶೆಟ್ಟಿಯವರನ್ನು ಆಮಂತ್ರಿಸಿ ಅವರಿಗೊಂದು ವಿಶೇಷ ಔತಣವನ್ನಿತ್ತು ಸತ್ಕರಿಸಿದರು.

## ಅಲೋಸಿಯಸ್ ಕಾಲೇಜ್ ಯೂನಿಯನ್

ಸೈಂಟ್ ಅಲೋಸಿಯಸ್ ಕಾಲೇಜ್ ಯೂನಿಯನಿನ ಆರಂಭದ ಸಭೆಯು ಕಳೆದ ತಾ. ೨೨ರಲ್ಲಿ ನಡೆಯಿತು. ಪ್ರೊ. ಸಿ. ಜಿ. ವಾರ್ಕಿಯವರು ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನು ಮಾಡಿದರು. ವಿದ್ಯಾರ್ಥಿಗಳು ಭಾಷಣಕೊಡುವ ಕಲೆಯನ್ನು ಕಲಿತುಕೊಳ್ಳಬೇಕೆಂದೂ, ಕಾಲೇಜಿನಲ್ಲಿರುವ ಬೇರೆ ಬೇರೆ ಸಂಘಗಳ ಪ್ರಯೋಜನವನ್ನು ಸಂಪೂರ್ಣವಾಗಿ ಪಡೆಯಬೇಕೆಂದೂ, ಎಲ್ಲಾ ವಿದ್ಯಾರ್ಥಿಗಳೂ ಅಣ್ಣತಮ್ಮಂದಿರಂತೆ ಇರಲು ಈ ಯೂನಿಯನುಗಳು ಸಹಾಯಮಾಡುವುವೆಂದೂ ತಿಳಿಸಿದರು. ಶ್ರೀ ಯು. ಜಿ ರಾಯರು ಪ್ರೊ. ವಾರ್ಕಿಯವರಿಗೆ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭಾಂತ್ಯವಾಯಿತು.

## ಪ್ರೊ ವಾರ್ಕಿಯವರಿಗೆ ಸತ್ಕಾರ

ಸೈಂಟ್ ಅಲೋಸಿಯಸ್ ಕಾಲೇಜಿನ ಅಧ್ಯಾಪಕವೃಂದದವರು ಪ್ರೊ. ವಾರ್ಕಿಯವರಿಗೆ ತಾ. ೨೨ರಲ್ಲಿ ಒಂದು ಸತ್ಕಾರವನ್ನಿತ್ತರು.

## ಜಾಹೀರ ಸಭೆ

ಕಾಂಗ್ರೆಸಿನವರು ಅಧಿಕಾರ ಸ್ವೀಕಾರ ಮಾಡಿದ ವಿಷಯವನ್ನು ಭಾರತೀಯರಿಗೆ ತಿಳಿಸುವುದಕ್ಕಾಗಿ ಇದೇ ತಾ. ೧-೮-೩೭ರಲ್ಲಿ ಹಿಂದು ಸ್ಥಾನದ ಎಲ್ಲೆಡೆಗಳಲ್ಲಿಯೂ ಸಭೆಗಳು ನಡೆಯಬೇಕೆಂದು ರಾಷ್ಟ್ರಪತಿಗಳು ಅಪ್ಪಣೆ ಕೊಡಿಸಿರುವ ಮೇರೆಗೆ ನಾಳದು ತಾರೀಖು ೧-೮-೩೭ಕ್ಕೆ ಮಂಗಳೂರಲ್ಲಿ ಜಾಹೀರ ಸಭೆಯು ನಡೆಯುವುದು.

## ಪ್ರೆಸ್ ಕೆಲಸಗಾರರ ಸಂಘ

ನಿನ್ನೆಯ ದಿನ ಮಂಗಳೂರಿನ ಪ್ರೆಸ್ ಕೆಲಸಗಾರರ ಸಭೆಯ ಮೀಟಿಂಗು ಜರಗಿತು. ಶ್ರೀಮತಿ ಕಮಲಾದೇವಿಯವರು ಸಂಘದ ಅಧ್ಯಕ್ಷರಾಗಿ ಸರ್ವಾನುಮತಿಯಿಂದ ಆರಿಸಲ್ಪಟ್ಟಿರುವರು.

# ತಾ. 18—7—37ರಲ್ಲಿ ಸೇರಿದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಶೇಷ ಮಹಾಸಭೆಯಲ್ಲಿ ಮಂಜೂರಾದ ನಿರ್ಣಯಗಳು.

ಜಿಲ್ಲಾ ಕಮಿಟಿಯ ೫೦ ಮಂದಿ ಸದಸ್ಯರಲ್ಲಿ ೪೩ ಮಂದಿ ಸದಸ್ಯರು ಹಾಜರಿದ್ದು ಈ ಕೆಳಗಿನಂತೆ ನಿರ್ಣಯಗಳಾಗಿರುತ್ತವೆ:—

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಕಾರ್ಯದರ್ಶಿಯರಿಗೆ ಸಂಬಳ ಕೊಡಲು ಸಾಧ್ಯವಿಲ್ಲವಾಗಿಯೂ ಆ ಬದಲು ಕಾರ್ಯದರ್ಶಿಯರು ಗೌರವ ಕಾರ್ಯದರ್ಶಿಯರಾಗಿರಬೇಕಾಗಿಯೂ ಕಮಿಟಿಯ ಆಫೀಸಿನ ಪತ್ರವ್ಯವಹಾರ ನಡೆಸುವರೆ ಒಬ್ಬ ಕ್ಲಾರ್ಕನನ್ನು ತಿಂಗಳೊಂದರ ರೂ. ೧೫ರಂತೆ ವೇತನ ಕೊಟ್ಟು ನೇಮಿಸಬೇಕಾಗಿಯೂ ಸೂಚಿಸಿ ತಂದ ನಿರ್ಣಯವು ಸಭೆಯ ಅನುಮತಿಯಿಂದ ಹಿಂತೆಗೆಯಲಾಯಿತು.

ಜನರಲ್ ಕಾರ್ಯದರ್ಶಿಯವರು ಜಿಲ್ಲೆಯಲ್ಲಿ ತಿಂಗಳಿಗೆ ೨೦ ದಿನ ಪ್ರವಾಸ ಬೆಳೆಸಬೇಕಾಗಿಯೂ ಈ ಬಗ್ಗೆ ಅವರಿಗೆ ತಗಲುವ ಖರ್ಚಿನ ಕುರಿತು ತಾಲೂಕು ಕಮಿಟಿಗಳ ಕೂಡೆ ನಿಶ್ಚಯಿಸಬೇಕಾಗಿಯೂ ನಿರ್ಣಯಿಸಲ್ಪಟ್ಟಿತು.

ಜಿಲ್ಲಾ ಪರಿಷತ್ತನ್ನು ಜರಗಿಸಬೇಕಾಗಿಯೂ ಸ್ಥಳ ಮತ್ತು ಸಮಯಗಳನ್ನು ಕಾರ್ಯಕಾರೀ ಮಂಡಲಿಯವರು ನಿರ್ಣಯಿಸಬೇಕಾಗಿಯೂ ಈ ಮೊದಲು ಆದ ನಿರ್ಣಯವೇ ಮಂಜೂರಾಯಿತು.

ಅಬ್ದುಲ್ ಕಲಮ್ ಆಜಾದ್, ಡಾಕ್ಟರ್. ಸಯ್ಯದ್ ಮಹಮ್ಮದ್, ಡಾಕ್ಟರ್. ಅಶ್ರಫ್, ವ ಇತರ ಮುಸ್ಲೀಮ ಧುರೀಣರನ್ನು ಮೂರು ತಿಂಗಳ ಒಳಗೆ ಬರುವಂತೆ ಮಾಡಬೇಕಾಗಿ ನಿರ್ಣಯಿಸಲ್ಪಟ್ಟಿತು.

ಜಿಲ್ಲಾ ಬೋರ್ಡು ಮತ್ತು ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸಿನವರು ಭಾಗವಹಿಸಬೇಕೆಂದು ಈ ಮೊದಲು ಮಾಡಿದ ನಿರ್ಣಯವನ್ನು ಸರ್ವಸಮ್ಮತಿಯಿಂದ ಮಂಜೂರು ಮಾಡಲ್ಪಟ್ಟಿತು. ಡಾಕ್ಟರ್ ವಿಟ್ಠಲ ಶೆಟ್ಟರು ಕಮಿಟಿಯ ಉಪಾಧ್ಯಕ್ಷ ಪದವಿಗೆ ತಾನು ಕೊಟ್ಟ ರಾಜಿನಾಮೆಯನ್ನು ಸಭಿಕರ ಅಪೇಕ್ಷೆ ಮೇರೆಗೆ ಹಿಂದೆ ತೆಗೆದುಕೊಂಡರು.

ಶ್ರೀ ಕಾರ್ನಾಡು ಸದಾಶಿವರಾವ್ ಸ್ಮಾರಕ ನಿಧಿಯ ಉದ್ದೇಶವನ್ನು ಮಂಗಳೂರಲ್ಲಿ ಅವರ ಹೆಸರಲ್ಲಿ ಸ್ಮಾರಕ ಕಟ್ಟೋಣವನ್ನು ರಚಿಸುವುದಕ್ಕಾಗಿ ಉಪಯೋಗಿಸಬೇಕೆಂದು ಬದಲಾಯಿಸುವಂತೆ ಮಾಡಿದ ಸೂಚನೆಯು ಮಂಜೂರಾಯಿತು.

ಒಮ್ಮೆ ಮಂಜೂರು ಮಾಡಿದ ನಿರ್ಣಯವನ್ನು ಎಲ್ಲಾ ಸದಸ್ಯರಲ್ಲಿ ಒಂದು ಮೂರನೇ ಅಂಶದವರು ಕೇಳಿಕೊಂಡಲ್ಲಿ ಮಾತ್ರ ಪುನಃ ಮೂರು ತಿಂಗಳೊಳಗೆ ವಿಚಾರಿಸಬಹುದು. ಎರಡು ಮೂರನೆ ಅಂಶ ಸದಸ್ಯರ ಬಹು ಮತವಿದ್ದರೆ ಮಾತ್ರ ಪರಿವರ್ತಿಸಲಾಗುವುದೆಂಬ ನಿಯಮವು ಮಂಜೂರಾಯಿತು.

೧೯೩೮ನೇ ಜನವರಿ ತಾ. ೧ರ ವರೆಗೆ ಶ್ರೀಮತಿ ಸುಶೀಲಾಬಾಯಿಯವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗುತ್ತಿದಿಲ್ಲವಾಗಿ ನಿರ್ಣಯಿಸಲಾಯಿತು.

ಮದ್ರಾಸ್ ಪ್ರಾಂತದಲ್ಲಿ ರಚಿತವಾದ ಕಾಂಗ್ರೆಸ್ ಮಂತ್ರಿ ಮಂಡಲವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯು ಅಭಿನಂದಿಸುತ್ತದೆ. ಮತ್ತು ಜಿಲ್ಲೆಯವರಾದ ಡಾಕ್ಟರ್ ಯು ರಾಮರಾಯರು ಕೌನ್ಸಿಲು ಪ್ರೆಸಿಡೆಂಟರಾಗಿಯೂ ಶ್ರೀಗಳಾದ ಎ. ಬಿ ಶೆಟ್ಟಿ, ಕೆ ಆರ್. ಕಾರಂತ, ಮತ್ತು ಸಿ. ಜಿ. ವಾರ್ಕಿಯವರು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟದ್ದಕ್ಕಾಗಿ ಅವರನ್ನು ಅಭಿನಂದಿಸುತ್ತವೆ ಎಂಬುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಹಿ. ರಾಮರಾಯ ಮಲ್ಯ
ಕಾರ್ಯದರ್ಶಿ. ಜಿಲ್ಲಾ ಕಾಂಗ್ರೆಸ್ ಕಮಿಟಿ
ಮಂಗಳೂರು 23—7—37

# ಉಡುಪಿ

## ಅದ್ವೈತಾನಂದಜೀಯವರು

ಕಲ್ಕತ್ತೆಯ ಭಾರತಸೇವಾ ಸಂಘದ ಸ್ವಾಮಿ ಅದ್ವೈತಾನಂದಜೀಯವರು ಉಡುಪಿ ಮಹಾಜನರ ಸಹಾನುಭೂತಿಯಿಂದ ತಾ. ೨೩—೭—೩೭ರಂದು ಸಂಜೆ ಘಂಟೆ ೫ ೩೦ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ, ನಗರ ಸಭಾಪತಿಗಳಾದ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ "ಮಾನವನ ಜೀವನ ಧ್ಯೇಯಗಳು" ಎಂಬುದರ ಕುರಿತು ಸೊಗಸಾದ ಉಪನ್ಯಾಸವನ್ನಿತ್ತರು. ಸಭೆಯು ಶ್ರೋತೃವೃಂದದಿಂದ ತುಂಬಿಹೋಗಿದ್ದಿತು. ಅದ್ವೈತಾನಂದಜೀಯವರು ಒಂದು ಘಂಟೆಯಕಾಲ ಮಾಡಿದ ದೀರ್ಘ ಇಂಗ್ಲಿಷ್ ಭಾಷಣವನ್ನು 'ನವಯುಗ' ಸಂಪಾದಕರಾದ ಶ್ರೀ ಕೆ. ಕೆ. ಶೆಟ್ಟಿ ಇವರು ಕನ್ನಡಿಸಿದರು.

## ಭಾಷಣದ ಸಾರಾಂಶ

'ಹಿಂದೆ ದಕ್ಷಿಣ ಹಿಂದೂದೇಶೀಯರಾದ ಶಂಕರ, ಮಧ್ವ ರಾಮಾನುಜರು ಉತ್ತರದವರಿಗೆ ಧರ್ಮಬೋಧನೆಯನ್ನಿತ್ತಿದ್ದರು. ಈಗ ಉತ್ತರದವರು ದಕ್ಷಿಣದವರಿಗೆ ಉಪದೇಶಿಸುವ ಕಾಲವಾಗಿದೆ ಎಂತಲೇ ನಾವು ಸನ್ಯಾಸಿಗಳು ಇಲ್ಲೆಲ್ಲಾ ಸಂಚರಿಸುತ್ತಿದ್ದೇವೆ. ಹಿಂದೂಗಳು ಆತ್ಮಬಲವಿಲ್ಲದೆ, ಸಂಘಟನಾಶಕ್ತಿಯಿಲ್ಲದೆ, ವಿಧರ್ಮೀಯರ ಆಕ್ರಮಣದಿಂದ ಕಳೆಗುಂದುತ್ತಿದ್ದಾರೆ. ಆದರೆ ಆತ್ಮಬಲವೊಂದಿದ್ದರೆ ನೈತಿಕ ಜೀವನದ ಬೆಳಕನ್ನು ಸುಲಭವಾಗಿ ಕಂಡು ಕೊಳ್ಳಬಹುದಾಗಿದೆ. ಈಗ ನಾವೆಲ್ಲರೂ ಜಾಗ್ರತರಾಗುವ ಸಮಯ. ಜಾತಿಮತಗಳ ಕಲಹಕಿನಲ್ಲಿ ಕೊಳೆಯುವ ಕಾಲವಲ್ಲವಿದು! ಸಂಘಟಿತರಾಗಿ ವೇದ ಧರ್ಮವನ್ನು ಉಜ್ಜೀವನಗೊಳಿಸಬೇಕು. ತತ್ವಶಾಸ್ತ್ರದವಿಷಯದಲ್ಲಿ ಪ್ರಪಂಚದ ಯಾವತ್ತು ರಾಷ್ಟ್ರಗಳನ್ನು ಹಿಂದಿಕ್ಕಿದ ಹಿಂದೂದೇಶವು ಈಗ ತೀರಾ ಹಿಂದುಳಿದಿವೆ. ನಾವು ಅದನ್ನು ಮುಂದಕ್ಕೆ ತರಬೇಕಾಗಿದೆ. ನಮ್ಮ ಧರ್ಮದಲ್ಲಿ ವಿಶ್ವಶಾಂತಿಯ ಗುಟ್ಟಿದೆ ಆದುದರಿಂದ ಪ್ರತಿಯೊಬ್ಬನೂ ಪ್ರಕೃತದ ರಾಜಕೀಯ ಚಳವಳಿಯೊಂದಿಗೆ ನೈಜಧಾರ್ಮಿಕ ಉನ್ನತಿಯ, ಸಾಮಾಜಿಕ ಸಂಘಟನೆಯ ಚಳವಳಿಯನ್ನೂ ಹೂಡತಕ್ಕದ್ದಿದೆ.

## ಉದ್ದೇಶಗಳು

ಅದ್ವೈತಾನಂದಜೀಯವರು ಭಾಷಣವನ್ನು ಮುಂದುವರಿಸುತ್ತಾ ತಮ್ಮ ಭಾರತ ಸೇವಾ ಸಂಘದ ಉದ್ದೇಶಗಳ ಕುರಿತು ಹೀಗೆಂದರು. ಹಿಂದೂಗಳ ದುಃಸ್ಥಿತಿಯನ್ನು ಕಂಡೇ ಸ್ವಾಮಿ ಪ್ರಣವಾನಂದಜೀಯವರು, ಹಿಂದೂಗಳ ಮೇಲ್ಮೆಯನ್ನು ಸಾಧಿಸಲಿಕ್ಕಾಗಿ ಭಾರತ ಸೇವಾ ಸಂಘವನ್ನು ಸ್ಥಾಪಿಸಿದರು. ಆರ್ತರಿಗೆ ಶರಣುವನ್ನು, ದೀನರಿಗೆ ಕರುಣೆಯನ್ನು ಕೊಟ್ಟು ಜನಸೇವೆಮಾಡುವುದು, ಅಲ್ಲಲ್ಲಿ ಹಿಂದೂಧರ್ಮದ ಕುರಿತು ಬೋಧನೆಕೊಡುವುದು, ಸಮಾಜ ಮನ್ನಣೆಯ ಕಡೆಗೆ ಗಮನ ಕೊಡುವುದು ದೇವರ ಪ್ರಾರ್ಥನೆಗೆ ಯೋಗ್ಯಗಳಾದ ಸಾರ್ವಜನಿಕ ಮಿಲನ ಮಂದಿರಗಳನ್ನು ಸ್ಥಾಪಿಸುವುದು, ಜನಜಾಗ್ರತಿಕೆ ಹಾಗೂ ಸಮಾಜಹಿತ ಕಾರ್ಯಗಳನ್ನು ಮಾಡುತ್ತಿರುವುದು, ಜನರಿಗೆ ನೆರೆಹಾವಳಿಯೇ ಮೊದಲಾದ ಆಪತ್ಕಾಲದಲ್ಲಿ ಸಹಾಯವನ್ನೀಯುವುದು, ತೀರ್ಥಕ್ಷೇತ್ರಗಳನ್ನೂ ಶುಚಿಯಾಗಿರಿಸುವುದು. ಇವೇ ಮೊದಲಾದುವುಗಳು ಈ ಸಂಘದ ಗುರಿಯಾಗಿವೆ. ಇಂತಹ ಸಂಸ್ಥೆಗೆ ತಾವೆಲ್ಲರೂ ನೆರವನ್ನೀಯಬೇಕು. ಕೊನೆಗೆ ಅಧ್ಯಕ್ಷರು ಭಾರತಸೇವಾ ಸಂಘದ ಉದ್ದೇಶಗಳನ್ನೂ ಈ ಸನ್ಯಾಸಿಗಳ ಸದುದ್ದೇಶವನ್ನೂ ಪ್ರಶಂಸಿಸಿ ಹಿಂದೂ ಸಮಾಜಕ್ಕೀಗ ಇಂತಹ ಸನ್ಯಾಸಿಗಳ ಅಗತ್ಯವಿದೆ ಎಂದರು.

## ಅಭಿನಂದನಾ ಸಭೆ

ತಾ. ೨೪—೭—೩೭ರಂದು ಸಂಜೆ, ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಉಡುಪಿ ಮಹಾಜನರ ಸಭೆಯು ಸೇರಿತು. ಶ್ರೀಯುತ. ಆರೂರು ಲಕ್ಷ್ಮೀನಾರಾಯಣರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ನಮ್ಮ ಜಿಲ್ಲೆಯವರಾದ ಡಾ| ರಾಮರಾಯರು ಮದ್ರಾಸ್ ಕೌನ್ಸಿಲಿನ ಅಧ್ಯಕ್ಷರಾಗಿ ಆರಿಸಿ ಬಂದುದಕ್ಕೂ, ಶ್ರೀಗಳಾದ ಎ. ಬಿ. ಶೆಟ್ಟಿ. ಕೆ. ಆರ್. ಕಾರಂತ, ಸಿ.ಜಿ. ವಾರ್ಕಿಯವರು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ಆರಿಸಿಬಂದುದಕ್ಕೂ ಅವರೆಲ್ಲರನ್ನೂ ಅಭಿನಂದಿಸುವುದು ಅಂದಿನ ಸಭೆಯ ಉದ್ದೇಶವಾಗಿತ್ತು. ಸಭೆಯು ಜನರಿಂದ ಕಿಕ್ಕಿರಿದಿತ್ತು. ಮೊದಲು ಶ್ರೀ ಶಾರದಾ ಸಂಗೀತ ಕಲಾಶಾಲೆಯ ಹೆಮ್ಮಕ್ಕಳು ರಾಷ್ಟ್ರಗೀತೆಗಳನ್ನು ಹಾಡಿದ ಬಳಿಕ, ಶ್ರೀ ಕೆ. ಕೆ. ಶೆಟ್ಟರು ಸ್ಪಷ್ಟತಗತಿಯುಳ್ಳವನು ಎದೆಬಿಡಲಾರನು, ಕಾಂಗ್ರೆಸು ಸಂಘರ್ಷಗಳ ಹೋರಾಟದಲ್ಲಿ ಇಂದು ಜಯದ ಕುರುಹನ್ನು ಕಂಡಿರುವುದು. ನಾವೆಲ್ಲರೂ ಕಾಂಗ್ರೆಸಿನ ನೆರಳಲ್ಲಿನಿಂತು ಸಹಾಯವನ್ನು ತೋರಿಸಿದರೆ ಕಾಂಗ್ರೆಸಿನ ಜಯವೇನು ದೂರದ ಮಾತಲ್ಲ. ಕಾಂಗ್ರೆಸು ಇಂದು ಮಂತ್ರಿಪದವಿಸ್ವೀಕಾರವೆಂಬ ಒಂದು ಹೊಸ ಪ್ರಯೋಗವನ್ನು ಹೂಡಿದೆ. ಕಾಯಿದೆ ಭಂಗ ಚಳವಳಿ—ರಕ್ತಪಾತ ಇವುಗಳ ತುಮುಲವನ್ನು ತಡೆಗಟ್ಟುವದಕ್ಕಾಗಿ ಹೂಡಿರುವ ಪ್ರಯೋಗವಿದು. ನಾವೆಲ್ಲರೂ ಕಾಂಗ್ರೆಸಿನ ಹಿಂಬದಿಯಲ್ಲಿದ್ದರೆ ಆಳರಸರ ಆಟವೇನೂ ನಡೆಯದು. ಎಂಬರ್ಥವನ್ನುಳ್ಳ ಉಜ್ವಲ ಭಾಷಣವನ್ನು ಮಾಡಿದರು. ಶ್ರೀ ನಾಗಪ್ಪ ಕಮ್ತಿಯರ ಭಾಷಣವಾದ ಬಳಿಕ ಉಡುಪಿತಾಲೂಕು ಕಾಂಗ್ರೆಸು ಕಮಿಟಿಯ ಅಧ್ಯಕ್ಷ, ಶ್ರೀ. ಪಿ. ಮಂಜುನಾಥನಾಯ್ಕರು ಕಾಂಗ್ರೆಸಿನ ಮತ್ತು ನಮ್ಮ ಮುಂದಿನ ಕರ್ತವ್ಯಗಳ ಕುರಿತು ಮಾತನಾಡಿದರು. ನಂತರ ಶ್ರೀ. ಕೊಟ್ಟಾರಾ ಪದ್ಮನಾಭ ಪೈಗಳವರು 'ಕಾಂಗ್ರೆಸ್', ಸರಕಾರದ ಸೌಕರ್ಯ, ಕಾಂಗ್ರೆಸ್ ಮೆಂಬರರಾಗುವ ಅವಶ್ಯಕತೆಯ ಕುರಿತು ಸೊಗಸಾಗಿ ಎರಡು ಮಾತುಗಳನ್ನಾಡಿದರು. ಸಭಿಕರಲ್ಲಿ ಒಬ್ಬಿಬ್ಬರ ಭಾಷಣವಾದ ಬಳಿಕ ಅಧ್ಯಕ್ಷರು ಕಾಂಗ್ರೆಸಿನ ಪ್ರಶಂಸನೀಯ ಕಾರ್ಯವನ್ನು ಹೊಗಳಿ ಉಡುಪಿಯ ಜನರೆಲ್ಲಾ ಕಾಂಗ್ರೆಸಿಗೆ ಸೇರಿ ಅದನ್ನು ಬಲಪಡಿಸಬೇಕು. ಅದರ ವರ್ಚಸ್ಸನ್ನು ಹೆಚ್ಚಿಸಬೇಕೆಂದು ಆಗ್ರಹ ಪೂರ್ಣವಾಗಿ ಕೇಳಿಕೊಂಡು ಠರಾವುಗಳನ್ನು ಸಭೆಯ ಮುಂದಿಟ್ಟರು. ಶ್ರೀ ಕೆ. ಕೆ. ಶೆಟ್ಟರು ಅದನ್ನು ವಿವರಿಸಿಹೇಳಿದರು.

## ವರ್ಗಾವರ್ಗಿ

ಸ್ಥಳೀಯ ಸ್ಟೇಶನರಿ ಸಬ್‌ಮೆಜಿಸ್ಟ್ರೇಟರಾದ ಶ್ರೀ. ವಿ. ಕೆ. ಸುಂದರೇಶ ಶಾಸ್ತ್ರಿಗಳವರು ಬೆಳ್ತಂಗಡಿ ಡಿಪ್ಯುಟಿ ತಹಶಿಲ್ದಾರರಾಗಿ ಯೂ ಅಲ್ಲಿಯ ಡಿಪ್ಯುಟಿ ತಹಶಿಲ್ದಾರರಾದ ಶ್ರೀ. ಪರಶುರಾಮ ನಾಯರ್, ಬಿ. ಎ. ಯಲ್. ಯಲ್. ಬಿ. ಯವರು ಇಲ್ಲಿಯ ಸಬ್ ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.


# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

THE ROYAL SEED CO.,
FLORISTS & SEEDSMEN,
27 Ilpay Thope ULSOOR, BANGLORE.

ವಿ ಪೂ—ತರಕಾರಿಗಳು ಮಾರ್ಕೆಟ್ ರೇಟಿಗೆ ಸಪ್ಲೈಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡೆಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು


## ನಮ್ಮ ಪ್ರತಿನಿಧಿಗಳ ಸಂಚಾರ

### ಕುಂದಾಪುರ

ಈ ವಾರದಲ್ಲಿ ನಮ್ಮ ಪ್ರತಿನಿಧಿಗಳು ಕುಂದಾಪುರಕ್ಕೆ ಬರುವರು. ನಮ್ಮ ಕುಂದಾಪುರ ಚಂದಾದಾರರೂ ಜಾಹೀರಾತುದಾರರೂ ಬಾಕಿ ಇರುವ ಹಣವನ್ನು ಅವರೊಡನೆ ಕೊಡಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್, ನವಯುಗ.

**The Canara Banking Corporation Udipi Ltd.**
(Incorporated in British India)
Estd. 1906
**Member:- RESERVE BANK OF INDIA.**

| | | | |
|---|---|---|---|
| Subscribed Capital | Rs. 3,50,000 | 0 | 0 |
| Paid up Capital | Rs. 2,88,950 | 0 | 0 |
| Reserves | Rs. 3,63,673 | 5 | 5 |
| Deposits | Rs 37,22,794 | 9 | 5 |

**Total Resources exceed Rs. 52,00,000/-**

**ANNOUNCEMENT.**

Branch of the Corporation will be shortly opened at METTUPALAYAM.

*V. R. Kamath*, B. A., LL.B.
Ag. Manager.

ಉಡುಪಿ, ಗುರುವಾರ, ತಾ. ೨೯-೭-'೩೭

# ಗ್ರಾಮಜೀವನದ ಪುನರ್ಘಟನೆ

ಮದ್ರಾಸ್ ಯುನಿವರ್ಸಿಟಿಯ ವೈಸ್ ಚಾನ್ಸೆಲರಾದ ದಿವಾನ್‌ಬಹದ್ದೂರ್ ಎಸ್. ಇ. ರಂಗನಾಥನರು ಕೊಯಮುತ್ತೂರಿನ ಕೃಷಿಕಾಲೇಜಿನ ವರ್ಷಂತ್ಯುತ್ಸವದ ಅಧ್ಯಕ್ಷರಾಗಿ ಭಾಷಣವೀಯುವಾಗ ಕಾಂಗ್ರೆಸ್ ಮಂತ್ರಿಗಳು ಮದ್ರಾಸ್ ಪ್ರಾಂತದ ಹಳ್ಳಿಗಳ ಪರಿಸ್ಥಿತಿಯ ಕೂಲಂಕಷವಾದ ಸರ್ವೆ ನಡಿಸಿ ಹಳ್ಳಿ ಜೀವನದ ಪುನರ್ಘಟನೆಯ ಉಪಾಯಗಳನ್ನು ಕಂಡುಕೊಳ್ಳಬೇಕೆಂದು ಆಗ್ರಹದಿಂದ ವಿನಂತಿಯನ್ನು ಮಾಡಿಕೊಂಡಿರುವರು. ಈ ವರೆಗೆ ಸರಕಾರವು ಮಾಡಿರುವ ಯಾವ ಕೆಲಸವಾದರೂ ಕೃಷಿಕರ ಪರಿಸ್ಥಿತಿಯನ್ನು ಸುಧಾರಿಸಿರುವುದಿಲ್ಲ. ಹಳ್ಳಿಗರ ಕ್ಷೇಮವನ್ನು ಸ್ವಲ್ಪವಾದರೂ ಸಾಧಿಸಿರುವುದಿಲ್ಲ. ಇಂದಿನ ಹಳ್ಳಿಗಳ ಪರಿಸ್ಥಿತಿಯು ಅತ್ಯಂತ ಕೆಟ್ಟುಹೋಗಿದೆ. ಆದುದರಿಂದ ಈಗ ಎಲ್ಲಕ್ಕಿಂತಲೂ ಮೊದಲು, ಗ್ರಾಮ ಸಂಘಟನೆಯ ಸಮಸ್ಯೆಯನ್ನು ಜಯಶೀಲವಾಗಿ ನಡಿಸಲು ವ್ಯಾಪಕವಾದೊಂದು, ಯೋಜನೆಯನ್ನು ಕೈಕೊಳ್ಳುವುದು ಅತ್ಯಾವಶ್ಯಕವೆಂದೇ ಮಿ. ರಂಗನಾಥನರ ಅಭಿಮತ.

## ಹಳ್ಳಿಶಾಲೆಗಳ ಶಿಕ್ಷಣ ಹೇಗಿರಬೇಕು?

ಇದಕ್ಕಾಗಿ ಅವರು ಕೆಲವು ಅಮೂಲ್ಯ ಸೂಚನೆಗಳನ್ನಿತ್ತಿರುವರು. ಇನ್ನು ಮುಂದೆ ಶಿಕ್ಷಣದಲ್ಲಿ ಗ್ರಾಮ ಸಂಘಟನೆ, ಗ್ರಾಮೋದ್ಧಾರ ವಿಷಯವೇ ಪ್ರಧಾನವಿರಬೇಕು. ಹಿಂದೀ ಹಳ್ಳಿಗಳ ಜೀವಾಳ ಕೃಷಿ. ಆದುದರಿಂದ ಹಳ್ಳಿಹಳ್ಳಿಗಳಲ್ಲಿ ಅಲ್ಲಲ್ಲಿ ಕೃಷಿ ಶಾಲೆಗಳೂ ಕೃಷಿ ಪ್ರಯೋಗ ಕ್ಷೇತ್ರಗಳೂ ಸ್ಥಾಪಿಸಲ್ಪಡಬೇಕು. ಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲೆಗಳು ಕೃಷಿ ಸಂಬಂಧವಾಗಿ ವಿಶೇಷ ಲಕ್ಷ್ಯ ಕೊಡಬೇಕು. ಈಗಣ ಶಿಕ್ಷಣದ ಅತಿ ದೊಡ್ಡದಾದೊಂದು ಕೊರತೆಯೆಂದರೆ ಅದು ಜನತೆಯ ಜೀವನದಲ್ಲಿ ಬೇರುಗೊಂಡಿಲ್ಲ, ಅವರ ಆವಶ್ಯಕತೆಗಳಿಗೆ ಸಂಬಂಧಿಸಿರುವುದಿಲ್ಲ. ಪ್ರಕೃತ ಹಳ್ಳಿ ಶಾಲೆಗಳು ಪಟ್ಟಣ ಶಾಲೆಗಳಿಗಿಂತ ಭಿನ್ನವಾಗಿರುವುದಿಲ್ಲ. ಇದರ ಪರಿಣಾಮವಾದರೂ ಅನಾಹುತಕಾರಿಯಾಗಿದೆ. ಹಳ್ಳಿ ಶಾಲೆಯಲ್ಲಿ ಹಳ್ಳಿ ಜೀವನ ಸಂಬಂಧವಾದ ವಿಷಯಗಳು ಪ್ರಧಾನವಾಗಿ ಕಲಿಸಲ್ಪಡಬೇಕು. ಪ್ರತಿ ಶಾಲೆಗೆ ತಾಗಿ ಚಿಕ್ಕದೊಂದು ಹೊಲವಿರಬೇಕು. ಇಲ್ಲಿ ಮಕ್ಕಳು ಅಧ್ಯಾಪಕನ ಕೈಕೆಳಗೆ ಕೃಷಿ ತರಬೇತಿ ಪಡೆಯಬೇಕು. ಈ ಹೊಲದಲ್ಲಿ ಅಧ್ಯಾಪಕರು ಅವರಿಗೆ ಸುಧಾರಿತಕ್ರಮದ ಕೃಷಿಯನ್ನು ಕಲಿಸಬೇಕು. ಇದು ಹೊರತು, ಹಳ್ಳಿಯ ಆರೋಗ್ಯ, ಶುಚಿತ್ವ, ಆಡಳಿತ, ಮನೆಕೈಗಾರಿಕೆ, ತೋಟಗಾರಿಕೆ, ಸಹಕಾರ ತತ್ವಗಳಲ್ಲೆಲ್ಲಾ ತರಬೇತಿಯನ್ನೀಯಬೇಕು. ಹಳ್ಳಿ ಶಾಲೆಯ ಪಾಠಪಟ್ಟಿಯು ಗ್ರಾಮ ಸಂಘಟನೆಯ ಉದ್ದೇಶ ಮತ್ತು ಆದರ್ಶಗಳಿಂದಲೇ ತುಂಬಿರಬೇಕು. ಪ್ರಾಥಮಿಕ ಶಾಲೆಯನ್ನು ಹಳ್ಳಿ ಜೀವನದ ಕೇಂದ್ರವನ್ನಾಗಿಮಾಡಬೇಕು. ಪ್ರಾಯಸ್ಥರೂ ವಿದ್ಯೆಪಡೆಯುವ ಸ್ಫೂರ್ತಿಯನ್ನು ಅದರಿಂದ ಪಡೆಯಬೇಕು. ಗ್ರಾಮಾಭಿವೃದ್ಧಿಯ ಮುಖ್ಯ ಪ್ರೇರಣಾಶಕ್ತಿಯು ಅಲ್ಲಿ ಉಂಟಾಗಬೇಕು. ಇದನ್ನು ಸಾಧಿಸಬೇಕಾದರೆ ಎರಡು ಸಂಗತಿಗಳು ಅಗತ್ಯ. ಮೊದಲನೆಯಾಗಿ ಹಳ್ಳಿಶಾಲೆಯ ಅಧ್ಯಾಪಕನು ಹಳ್ಳಿಯ ಹಿತಸಾಧನೆಯ ಮನಸ್ಸುಳ್ಳವನಾಗಿ ಹಳ್ಳಿಯಿಂದಲೇ ಬಂದವನಿರಬೇಕು. ಅವನಿಗೆ ಯೋಗ್ಯ ತರಬೇತಿಯೂ ದೊರೆಯಬೇಕು. ಕೆಲವು ಟ್ರೈನಿಂಗ್ ಶಾಲೆಗಳಲ್ಲಿ ಕೃಷಿ ಪ್ರಯೋಗ ಕ್ಷೇತ್ರಗಳನ್ನೇರ್ಪಡಿಸಿ. ಇಲ್ಲವಾದರೆ ಸರಕಾರದ ಕೃಷಿ ಪ್ರಯೋಗ ಕ್ಷೇತ್ರಗಳ ಬಳಿ ಟ್ರೈನಿಂಗ್ ಶಾಲೆಗಳು ಕೆಲವನ್ನು ಸ್ಥಾಪಿಸಿ ಹಳ್ಳಿಯ ಅಧ್ಯಾಪಕರಿಗೆ ಸುಧಾರಿತ ಕ್ರಮದ ಕೃಷಿಯ ತರಬೇತಿಯನ್ನೀಯಬೇಕು. ನೂರಾರು ಮಂದಿ ಅಧ್ಯಾಪಕರು, ಹಳ್ಳಿಗರ ಸಾಗುವಳಿ ಮತ್ತು ಉಪವೃತ್ತಿಗಳಲ್ಲಿ ಕಾಯತಃ ನೆರವಾಗುವವರಾಗದೆ ಹಳ್ಳಿಯ ಶಿಕ್ಷಣದಿಂದ ಹಳ್ಳಿಗರಿಗೆ ನಿಜವಾದ ಪ್ರಯೋಜನವೇನೂ ಆಗಲಾರದು. ಎರಡನೇದಾಗಿ ಹಳ್ಳಿಗಳಲ್ಲಿ ಕೆಲಸ ಮಾಡುವ ಸರಕಾರದ ಕೃಷಿ, ಆರೋಗ್ಯ ಶಿಕ್ಷಣ, ಫೋರೆಸ್ಟ್ ಮತ್ತು ಕೋಪರೇಟಿವ್ ಡಿಪಾರ್ಟುಮೆಂಟುಗಳು ಒಂದುಗೂಡಿ ಕೆಲಸ ಮಾಡಬೇಕು. ಇತರ ಅನಧಿಕಾರಿ ಸಂಸ್ಥೆಗಳೂ ಇವುಗಳೊಂದಿಗೆ ಸೇರಿ ನಡೆಯಬೇಕು. ಹೀಗೆ ಸರಕಾರದ ಎಲ್ಲಾ ಖಾತೆಗಳೂ ಒಂದುಗೂಡಿ ಗ್ರಾಮೋನ್ನತಿಗಾಗಿ ಪ್ರಯತ್ನಿಸುವ ಏರ್ಪಾಡು ಪಂಜಾಬಿನಲ್ಲಿ ನಡೆದಿದೆ.

## ಕೃಷಿ ಇಲಾಖಾ ಇನ್ಸ್‌ಪೆಕ್ಟರರೇನು ಮಾಡಬೇಕು?

ಹುಡುಗರು ಶಾಲೆಬಿಟ್ಟ ಮೇಲೆ ತಾವು ಪಡೆದ ಶಿಕ್ಷಣವನ್ನು ಸದುಪಯೋಗ ಮಾಡುವಂತೆ ತಕ್ಕ ಏರ್ಪಾಡು ಮಾಡುವುದು ಇನ್ನೊಂದು ಮುಖ್ಯ ಪ್ರಶ್ನೆ. ಇದನ್ನು ಅಮೇರಿಕ ಮತ್ತು ಇಂಗ್ಲೆಂಡುಗಳಲ್ಲಿ ಸರಕಾರವೇ ಬಹಳ ಒಳ್ಳೇ ರೀತಿಯಲ್ಲಿ ನಡೆಸುತ್ತದೆ. ಪ್ರತಿ ಹಳ್ಳಿಯಲ್ಲಿ ಪ್ರದರ್ಶನಗಳನ್ನು ನಡಿಸಿ ಪ್ರಚಾರಮಾಡಿ ಹುಡುಗ ಹುಡುಗಿಯರ ಕ್ಲಬ್ಬುಗಳನ್ನು ಸ್ಥಾಪಿಸಿ, ಭಾಷಣ, ಲೇಖನಗಳ ಮುಖಾಂತರ ಹಳ್ಳಿಗರಿಗೆ ಅತ್ಯಾಧುನಿಕ ಕೃಷಿಯ ಕ್ರಮಗಳನ್ನು ತಿಳಿಸಿ ಅವನ್ನವರು ಕಾರ್ಯಕ್ಕೆ ಹಚ್ಚುವಂತೆ ನೋಡಲು ಪ್ರಚಾರಕರು ನೇಮಿಸಲ್ಪಡುತ್ತಾರೆ. ಇವರು ಒಳ್ಳೇ ತರಬೇತಿ ಪಡೆದ ವಿಶ್ವವಿದ್ಯಾಲಯದ ಪದವೀಧರರಿರುವರು. ಆಯಾಯ ಪ್ರದೇಶದ ಜನರ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದವರಿರುವರು. ಇಂಗ್ಲೆಂಡಿನಲ್ಲಿ ಈ ಪ್ರಚಾರಕರು ತರುಣ ಒಕ್ಕಲಿಗರ ಕೂಟಗಳನ್ನು ದೇಶದಲ್ಲೆಲ್ಲಾ ಸ್ಥಾಪಿಸಿರುವರು. ಅವುಗಳ ಮೂಲಕ ಕೃಷಿಕರಿಗೆ, ಬೆಳೆಗಳನ್ನು ಹೇಗೆ ಬೆಳಸಬೇಕು, ಹೇಗೆ ಉಪಯೋಗಿಸಬೇಕು, ಜಾನುವಾರುಗಳನ್ನು ಯಾವ ರೀತಿಯಲ್ಲಿ ಪಾಲಿಸಬೇಕು, ಲೆಕ್ಕ ಪತ್ರವನ್ನೆಲ್ಲಾ ಹೇಗಿಡಬೇಕು, ಎಲ್ಲೆಲ್ಲಿ ಮಿತವ್ಯಯಮಾಡಬೇಕು, ಹೇಗೆ ಎಲ್ಲರೂ ಸಹಕರಿಸಿ ಸ್ವಾವಲಂಬನೆಯಿಂದ ಕೆಲಸಮಾಡಬೇಕೆಂಬುದನ್ನೆಲ್ಲಾ ತಿಳಿಸುವರು. ಇಂತಹ ಕೆಲಸವನ್ನು ನಮ್ಮ ದೇಶದಲ್ಲಿಯೂ ಕೃಷಿ ಇಲಾಖಾ ಇನ್ಸ್‌ಪೆಕ್ಟರರು ಕೈಕೊಳ್ಳಬಹುದು.

## ಶಿಕ್ಷಿತ ತರುಣತರುಣಿಯರ ಕರ್ತವ್ಯ

ಹಿಂದೂ ದೇಶದಲ್ಲಿ ಗ್ರಾಮಾಭಿವೃದ್ಧಿಯ ಸಮಸ್ಯೆಯು ಅತಿ ಮಹತ್ವದ್ದಾಗಿದೆ. ಅದನ್ನು ಸಾಧಿಸಬೇಕಾದರೆ ಆಳವಾಗಿ ವಿಚಾರಿಸಿ ಪ್ಲೇನ್‌ಮಾಡಿ ಆ ಮೇಲೆ ತಕ್ಕ ಸಂಸ್ಥೆಗಳನ್ನು ಸ್ಥಾಪಿಸಿ ಅದನ್ನು ನಡಿಸಲು ಯೋಗ್ಯವಾದ ಜನರನ್ನು ನೇಮಿಸಿ ಅದಕ್ಕಾಗಿ ಸಾಕಷ್ಟು ಹಣವಿನಿಯೋಗಿಸಬೇಕು. ಸರಕಾರವು ತಜ್ಞರ ಸಹಾಯದಿಂದ ಸರಿಯಾದ ಪ್ಲೇನ್ ತಯಾರಿಸಿ, ಸಂಸ್ಥೆ ಸ್ಥಾಪಿಸಿ ಹಣ ವಿನಿಯೋಗಿಸ ಬಹುದು. ಆದರೆ ಈ ಸಂಸ್ಥೆಗಳನ್ನು ಜಯಶೀಲವಾಗಿ ನಡೆಸಲು, ಕೇವಲ ಸೇವಾಬುದ್ಧಿಯಿಂದ ಪ್ರೇರಿತರಾಗಿ ಹಳ್ಳಿಗರ ಹಿತಸಾಧನೆಯಲ್ಲಿ ನಿರತರಾಗುವ ಸ್ತ್ರೀಪುರುಷ ಕೆಲಸಗಾರರು ಬೇಕು. ನೂರಾರು ಶಿಕ್ಷಿತ ತರುಣ ತರುಣಿಯರು ಹಳ್ಳಿಗಳಿಗೆ ಹೋಗಿ ಜೀವಿಸಿ, ಹಳ್ಳಿಯ ಸಂಘಟನೆ, ಹಳ್ಳಿಗರ ಉದ್ಧಾರಕ್ಕಿಂತ ದೊಡ್ಡ ದೇಶಸೇವೆಯು ಇನ್ನೊಂದಿಲ್ಲೆಂಬ ಭಾವನೆಯಿಂದ ಕೆಲಸಮಾಡಬೇಕು. ಈಗಣ ಪರಿಸ್ಥಿತಿಯಲ್ಲಿ, ರಸ್ತೆ, ಬಾವಿ, ಕೆರೆ ಮೊದಲಾದ ಹಳ್ಳಿಯ ಅನುಕೂಲತೆಯನ್ನು ಹೆಚ್ಚಿಸುವುದಕ್ಕಿಂತಲೂ ಪ್ರಾಮುಖ್ಯವಾದುದೇದರೆ ಹಳ್ಳಿಯ ಒಕ್ಕಲಿಗನ ಜೀವನದಲ್ಲಿ ಒಂದಿಷ್ಟು ಬೆಳಕನ್ನುಂಟುಮಾಡುವುದು. ನಿರಾಶೆಯಲ್ಲಿ ಮುಳುಗಿಹೋಗಿರುವ ಅವನಲ್ಲಿ ಜೀವನದ ಯಾವ ಉತ್ಸಾಹವಾಗಲಿ, ಶಕ್ತಿಯಾಗಲಿ ಇರುವುದಿಲ್ಲ; ಅವನಲ್ಲಿ ಆಶೋತ್ಸಾಹವನ್ನುಂಟುಮಾಡಬೇಕು. ಸೌಹಾರ್ದದ ವರದಹಸ್ತದಿಂದ ಅವನನ್ನು ಮೇಲಕ್ಕೆತ್ತಿ ಅವನು ಸ್ವಾಭಿಮಾನ ತಳೆದು ಮಾನವನಾಗಿ ಜೀವಿಸುವಂತೆ ಮಾಡಬೇಕು. ಇದಕ್ಕಿಂತ ದೊಡ್ಡ ಮಾನವ ಸೇವೆ ಇನ್ನೇನು? ಎಂದೇ ಮಿ. ರಂಗನಾಥರ ಮನನೀಯವಾದ ಭಾಷಣದ ಸಾರಾಂಶ.

## ಹಳ್ಳಿಗರ ಸುದಿನ.

ಕಾಂಗ್ರೆಸ್ ಮಂತ್ರಿಗಳು ಹಳ್ಳಿಗರ ಉದ್ಧಾರದ ಪ್ರತಿಜ್ಞಾ ಬದ್ಧರಾಗಿರುವರು. ಮೇಲಾಗಿ ಹಳ್ಳಿಗರ ಉದ್ಧಾರಕ್ಕೇನೇ ಅವತರಿಸಿರುವಂತಿರುವ ಮಹಾತ್ಮಾ ಗಾಂಧಿಯವರು ಅವರ ಮಾರ್ಗದರ್ಶಿಗಳಾಗಿರುವರು. ಪ್ರತಿಯೊಬ್ಬ ಕಾಂಗ್ರೆಸ್ ಮಂತ್ರಿಯೂ ಹಳ್ಳಿಗಳಲ್ಲಿ ಕೆಲಸಮಾಡಿ ಅವರ ದುಃಖ ಪರಂಪರೆಗಳ ಸ್ವಾನುಭವವುಳ್ಳವನಿರುವನು. ಮದ್ರಾಸಿನ ಪ್ರಧಾನ ಮಂತ್ರಿಗಳಾದ ಶ್ರೀ. ಸಿ. ರಾಜಗೋಪಾಲಾಚಾರ್ಯರಂತೂ ದಕ್ಷಿಣ ಭಾರತದ ಗಾಂಧಿಯವರಂತಿರುವವರು. ಒಂದಿಷ್ಟು ಸುಖವೇನೆಂದರಿಯದೆ ದಾರಿದ್ರ್ಯದ ಬೇಗೆಯಲ್ಲಿ ಬೆಂದು ತೀವ್ರ ನಿರಾಶೆಯಿಂದ ಜೀವನ್ಮೃತಾವಸ್ಥೆಯಲ್ಲಿರುವ ಹಳ್ಳಿಗರ ಜೀವನದಲ್ಲಿ ಒಂದಿಷ್ಟು ನಗುವನ್ನುಂಟುಮಾಡಬೇಕು. ಅದಕ್ಕೆ ಸರಕಾರಿ ನೌಕರರೆಲ್ಲಾ ತನಗೆ ನೆರವಾಗಬೇಕೆಂದು ಅವರು ಅಧಿಕಾರ ಸ್ವೀಕರಿಸಿದೊಡನೆಯೇ ಹೇಳಿರುವರು. ಆದುದರಿಂದ ಇನ್ನು ಮುಂದಾದರೂ ಹಳ್ಳಿಗರು ಸುದಿನಗಳನ್ನು ಕಾಣುವಂತಾಗಬಹುದೆಂಬುದರಲ್ಲಿ ಸಂದೇಹವಿಲ್ಲ.

**ಚಂದಾದಾರರಲ್ಲಿ ವಿನಂತಿ**

ನಮ್ಮ ಹೆಚ್ಚಿನ ಚಂದಾದಾರರು ಇನ್ನೂ ತಮ್ಮ ಚಂದಾ ಹಣವನ್ನು ಪಾವತಿಮಾಡಿರುವುದಿಲ್ಲ. ಅಂಥವರು ದಯವಿಟ್ಟು ತಮ್ಮ ಚಂದಾ ಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ವಿನಂತಿಸಿ ಕೊಳ್ಳಲಾಗುತ್ತದೆ.

**ಮೆನೇಜರ್**, ನವಯುಗೆ

# ಸ್ವದೇಶ

## ಉಸಿರುಕಟ್ಟಿ, ಇಡೀ ಕುಟುಂಬ ನಾಶ

ಕಳೆದ ವಾರ ತಿರುವಾಂಕೂರು ಸಂಸ್ಥಾನದ ಮುನ್ನಾರ್ ಎಂಬಲ್ಲಿ ವರದ ರಾಜಲು ನಾಯುಡು ಎಂಬವನು ತನ್ನ ಹೆಂಡತಿ ಮಕ್ಕಳ ಸಮೇತವಾಗಿ ಕಿಟಕಿಯಿಲ್ಲದ ಕೋಣೆಯೊಂದರಲ್ಲಿ ಬಾಗಿಲು ಹಾಕಿ ಮಲಗಿದ್ದ. ಕೋಣೆಯನ್ನು ಬೆಚ್ಚಗಿರಿಸುವಂತೆ ಒಂದು ಅಗ್ಗಿಷ್ಟಿಕೆ ಕೂಡಾ ಇಡಲ್ಪಟ್ಟಿದ್ದಿತು. ಈ ಅಗ್ಗಿಷ್ಟಿಕೆಯಿಂದುಂಟಾದ ಹೊಗೆಯಿಂದ ೫ ಮಂದಿಯಿದ್ದ ಇಡೀ ಕುಟುಂಬವು ಉಸಿರುಕಟ್ಟಿ ಮೃತವಾಗಿರುವುದು.

## ಮದ್ರಾಸ್ ಮಂತ್ರಿ ಮಂಡಲ

ಮದ್ರಾಸ್ ಮಂತ್ರಿಗಳೂ ಪಾರ್ಲಿಮೆಂಟರಿ ಸೆಕ್ರೆಟರಿಗಳೂ ಈಗ ಬಜೆಟನ್ನು ತಯಾರಿಸುವುದರಲ್ಲಿ ನಿರತರಾಗಿರುವರು. ಇದೇ ತಾ. ೩೦ಕ್ಕೆ ಎಸೆಂಬ್ಲಿ ಅಧಿವೇಶನವು ನಡೆಯಲಿರುವುದು. ಮುಖ್ಯ ಮಂತ್ರಿಗಳು ಬಜೆಟಿನ ಸಂಬಂಧವಾಗಿ ಪ್ರತಿದಿನವೂ ತನ್ನ ಸಹಸ್ವವ್ಯವಸಾಯಿಗಳೊಡನೆ ಮಾತಾಡುತ್ತಿರುವರು. ಸಮಯದ ಅಭಾವದಿಂದ ಈ ಸಲ ಕಾಂಗ್ರೆಸಿನ ಕಾರ್ಯಕ್ರಮವನ್ನು ಸರಿಯಾಗಿ ಕಾರ್ಯರೂಪಕ್ಕೆ ತರುವಂತೆ ಬಜೆಟನ್ನು ತಯಾರಿಸಲು ಸಾಧ್ಯವಾಗಿರುವುದಿಲ್ಲ

# ಸ್ವದೇಶ — ಉಸಿರುಕಟ್ಟಿ ಇಡೀ ಕುಟುಂಬ ನಾಶ, ಮದ್ರಾಸ್ ಮಂತ್ರಿಮಂಡಲ, ನಡುಹಗಲಲ್ಲಿ ದರೋಡೆ, ಜಪ್ತಿಯಾದ ಜಮೀನು, ಉತ್ತರ ಚೀನದ ಪರಿಸ್ಥಿತಿ, ಬಾರ್ಸಿಲೋನದ ಮೇಲೆ ವಿಮಾನ ಧಾಳಿ. — ವಿದೇಶ

ಇಂಟರಿಮ್ ಮಂತ್ರಿಗಳು ತಯಾರಿಸಿರುವ ಬಜೆಟನ್ನಲ್ಲಿ ಆದಷ್ಟು ಬದಲಾವಣೆ ಮಾಡಲು ಪ್ರಯತ್ನ ನಡೆಯುತ್ತಿದೆ. ರಾಜಕೀಯ ಕೈದಿಗಳ ಬಿಡುಗಡೆಯ ವಿಷಯವನ್ನು ಕಾಂಗ್ರೆಸ್ ಮಂತ್ರಿಗಳು ಪರಿಶೀ...

## ವಿದೇಶ

### ಉತ್ತರ ಚೀನದ ಪರಿಸ್ಥಿತಿ

ಜಪಾನಿನಿಂದ ಬಂದ ವರ್ತಮಾನದ ಮೇರೆಗೆ ಉತ್ತರ ಚೀನದ ಅಧಿಕಾರಿಗಳು ಜಪಾನರ ಶರ್ತಕ್ಕೊಪ್ಪಿರು...

ನಾಯಕನ ಅನುಜ್ಞೆ ವಿನಾ ತಾವು ಹಿಂದೆಹೋಗಲಾರೆವೆಂದು ಹಠ ಹಿಡಿದು ನಿಂತಿರುವರು. ಜಪಾನರು ಇವರನ್ನು ಬಲಾತ್ಕಾರದಿಂದ ತಳ್ಳಿಹಾಕಬಹುದೆಂಬುದರಿಂದ ಉತ್ತರ ಚೀನದಲ್ಲಿ ತೀವ್ರ ಕ್ಷೋಭೆಯುಂ...

### ಉಡುಪಿ ತಾಲೂಕಿನ ಮಹಾಜನರಲ್ಲಿ ವಿನಂತಿ

ಆಗೋಸ್ತು ೧ನೇ ತಾರೀಕು ಕಾಂಗ್ರೆಸಿನ ಇತಿಹಾಸದಲ್ಲಿ ಅತಿ ವಿಶೇಷವಾದೊಂದು ದಿನ. ೧೭ ವರ್ಷಗಳ ಹಿಂದೆ ಹಿಂದುಸ್ಥಾನದ ಸ್ವಾಭಿಮಾನಹಾಗೂ ಚೈತನ್ಯಪೂರ್ಣವಾದ ರಾಜಕೀಯ ಆಂದೋಲನದ ಜನಕರಾದ ಲೋಕಮಾನ್ಯ ತಿಲಕರು ಸ್ವರ್ಗಸ್ಥರಾದುದು ಆಗೋಸ್ತು ತಾ. ೧ರಲ್ಲಿ. ಅಖಿಲಭಾರತವನ್ನೇ ಹೊಡೆದೆಬ್ಬಿಸಿ ಕಾಂಗ್ರೆಸನ್ನು ಸಾಮುದಾಯಿಕ ಚಳವಳದ ಸಾಧನವಾಗಿ ಮಾಡಿದ ಅಸಹಕಾರ ಚಳವಳವನ್ನು ಯುಗಪುರುಷರಾದ ಮಹಾತ್ಮಾ ಗಾಂಧಿಜೀಯವರು ಆರಂಭಿಸಿದುದು ಆಗೋಸ್ತು ತಾ ೧ರಲ್ಲಿ. ಇಂದೀಗ ಮಹಾತ್ಮಾ ಗಾಂಧಿಜೀಯವರ ಉಪದೇಶದಂತೆ ಕಾಂಗ್ರೆಸು ಹೊಸಪ್ರಯೋಗವೊಂದನ್ನು ಕೈಕೊಂಡು ಅಧಿಕಾರ ಸ್ವೀಕರಿಸಿದ ದಿನವನ್ನು ಆಚರಿಸಬೇಕೆಂದು ರಾಷ್ಟ್ರಪತಿ ಪಂಡಿತ ಜವಾಹಿರಲಾಲರು ಆಜ್ಞಾಪಿಸಿರುವುದು ಆಗೋಸ್ತು ತಾ. ೧ನ್ನು. ಆದುದರಿಂದ ಉಡುಪಿ ತಾಲೂಕಿನಲ್ಲಿ ಹಳ್ಳಿ ಹಳ್ಳಿಗಳಲ್ಲಿ ಈ ದಿನವು ಧ್ವಜವಂದನ, ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳ ಮೂಲಕ ಆಚರಿಸಬೇಕೆಂದು ವಿನಂತಿ.

### ಉಡುಪಿಯ ಕಾರ್ಯಕ್ರಮ

ಬೆಳಿಗ್ಗೆ ಘಂಟೆ ೮ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಧ್ವಜವಂದನೆ ಮಾಡಿ ಮೆರವಣಿಗೆಹೊರಟು ಪೇಟೆ ಸುತ್ತ ಬಂದು ಪುನಃ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಂಜೆ ೫ ಘಂಟೆಗೆ ಡಾಕ್ಟರ್ ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯುವುದು. ಉಡುಪಿಯ ನಿವಾಸಿಗಳೆಲ್ಲರೂ ಈ ಕಾರ್ಯದಲ್ಲಿ ಉತ್ಸಾಹದಿಂದ ಭಾಗಿಗಳಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಘಾಂಗಾಳ ಮಂಜುನಾಥ ನಾಯಕ್,
ಸೆಕ್ರೆಟ್ರಿ, ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿ.

### ಮಂಗಳೂರು

#### ರಾಷ್ಟ್ರಪತಿಗಳ ಸಂದೇಶ

#### ತಾ. 1—8—37ರ ಸಮಾರಂಭ.

ಕಾಂಗ್ರೆಸಿನವರು ಮಂತ್ರಿ ಪದವಿಗಳನ್ನು ಸ್ವೀಕರಿಸಿದ ಘೋಷಣೆಯನ್ನು ಮಹಾಜನರು ಸರಿಯಾಗಿ ತಿಳಿಯುವಂತೆ ಮಾಡುವುದು ಅಗತ್ಯವೆಂಬುದರಿಂದ ೧-೮-೩೭ನೇ ದಿನವನ್ನು ಈ ಬಗ್ಗೆ ಅಖಿಲ ಭಾರತ ದಿನವನ್ನಾಗಿ ಆಚರಿಸಬೇಕಾಗಿ ಪಂಡಿತ ಜವಾಹರಲಾಲರ ಸಂದೇಶವು ಬಂದಿರುತ್ತದೆ. ಅಂದಿನ ಕಾರ್ಯಕ್ರಮವು ಈ ಕೆಳಗಿನಂತಿದೆ.

ರಾಷ್ಟ್ರಧ್ವಜವಂದನೆ-ಬೆಳಿಗ್ಗೆ ಘಂಟೆ ೮ಕ್ಕೆ
ಸಾಯಂಕಾಲ ಸಾರ್ವಜನಿಕ ಸಭೆ.

(i) ಸಭೆಯಲ್ಲಿ ಜುಲಾಯಿ ೭ರಲ್ಲಿ ವಾರ್ಧಾದಲ್ಲಿ ವರ್ಕಿಂಗ್ ಕಮಿಟಿಯಲ್ಲಿ ಮಂಜೂರಾದ ನಿರ್ಣಯವನ್ನು ಓದಿ ವಿವರಿಸುವುದು.

(ii) ಕಾಂಗ್ರೆಸಿನ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಪುನಃ ದೃಢೀಕರಿಸುವುದು.

ಜಿಲ್ಲೆಯಲ್ಲಿಯ ಎಲ್ಲಾ ಪಟ್ಟಣ ಹಾಗೂ ಗ್ರಾಮಗಳಲ್ಲಿ ಈ ಕಾರ್ಯಕ್ರಮವನ್ನು ಆಚರಿಸಬೇಕಾಗಿ ಕಾಂಗ್ರೆಸ್ ಕಮಿಟಿಗಳಿಗೂ ಮಹಾಜನರಿಗೂ ನನ್ನ ವಿನಂತಿ

ಹಿ. ರಾಮರಾಯ ಮಲ್ಯ.

---

# ನವಯುಗ ತುಳು ಸಂಚಿಕೆ

ಸಂಪುಟ ೧ | ಕರ್ಕಾಟಕ (ಆಟಿ) ೧೪ ಗುರುವಾರ | ಸಂಚಿಕೆ ೧೧

## ಕನ

ಕವಿ—ಎಮ್. ವಿಠಲ ಹೆಗ್ಡೆ

'ಯಾನ್' 'ಯೆಂಕ್' ಪನ್ಪಿ ಮನಸ್
ಕುಟುದು ಪಾರದ್
ಕಣ್ಣ್‌ಮುಚಿದ್ ಸಿದ್ರೆದೊಣಸ್
ಉಣರ್ ಬೂರುದ್
ಲೋಕ ಯೆನನ್ ಕೈ ಬುಡುದು
ಪಾಡಿನಂಚ ಪ್ಯೈಬುಡುದು
ಅಮಲ್ ಯೇರದ್

ಮೆಲ್ಲ ಮೆಲ್ಲ ನ್ಯೈತ ಧಾತ್
ಲಕ್‌ದ್ ಪಾರ್‌ಂಡ್
ಉಲಯಿ ಬೊಮ್ಮ್ಯಂಡದಾತ್
ಸಾರಯೇರ್‌ಂಡ್
ಸುತ್ತಮುತ್ತ ಪದತನಸ್‌ಕ್
ಉಲತುಲಯಿಮಾ ತರೆತ ಮುಸುಕ್
ಮೋನ್‌ದರ್ಸೆಬೊಂಜಿ ರೂಪು
ಅವುಲು ಪಂದ್‌ಂಡ್
ಅಯ್ಯ ಕಾರ ಪಜ್ಜ್‌ದೊಯ್ಪು
ಇಂಚಿಗೊಂದುಂತು

"ಯಾ ಪಿನಯನ?" ಯಿಂದಿಲೆಕ್ಕ
ಅಯ್ತ ಕಣ್ಣ್‌ಡರಿಂಡ್ ದುಕ್ಕ
ಅರ್ಪಿಮೋನೆಡೆಂಕ್ ಪಕ್ಕ
ಗುರುತ ತಿಕ್ಕ್‌ಂಡ್!
ನಿನೆಪುದೊಂಜಿ ಬೇನ್ ತಿಗಲೆ
ನೊಸುದು ತಿಕ್ಕ್‌ಂಡ್!

"ಅಪ್ಪೆ!" "ಅಪ್ಪೆ!" ಯಿಂದ್‌ದೊರನೆ
ಲಕ್‌ದ್ ಪಾರಿಯೆ

ಅಮಲ್‌ದುಮಿಲ್ ತುಚಿದ್ ತರೆ‌ನೆ
ತೆಟ್‌ದ್ ಬೂರಿಯೆ
ಕಾರಪಜ್ಜ್ ದೆಕ್ಕೊಲಪ್ಪೆ
ಮೋನೆಡಿಕ್ಕ್‌ಡೊಂತ್ ಚಪ್ಪೆ
ಯೆನ ಬೆರಿಕ್ ಬೊಟುದು "ಪಣ್ಪೆ
ಕೇಣ್‌ಲಿ"ಂದೊಲು
"ಉಂತುಲೊಂಕ್ ಉಂತು ಮಗ
ಕಾರಸಂದುಲು
ಬಲಬರಡ್, ಸಾರಯುಗ
ಕೋಟೆಮುಂದೆಲು
ಎನ ಬದ್‌ಕ್, ಅದಗ ಮಗ
ಬಾರಿ ಗೋಂಮೊಲು!
ಪುಗ್ಗೆಲ್‌ಗ್ ಬೂರಿ ಮಗ
ಬಗ್ಗಂಡಿಂ"ದೊಲು

"ಇನಿಗೆನಸ್ 'ಅಪ್ಪೆ' ಪನ್ಪಿ
ಬಾರುಳೆತ್ತಿಗ್
ಏಗತ ಮರೊನು ಕರೆತ್ ತಿನ್ಪಿ
ಸಾತ್ ನೆತ್ತಿರ್!
ಲೋಕುಲೆ‌ನ ಧರ್ಮೊಡಾನಿ
ಲೋಕೊಗೊರ್ತಿ ಯಾನೆ ರಾಣಿ
ಪಿದಯಿದಗುಲು ಪತ್ತು ಗೋಣಿ
ನಿಲಿಕೆ ದಿಂಜದ್!
ನಿನನ್ ತುಂಬಿನಗಲೆನೊರ
ತುಂಬಿ ಬಂಜಿದ್
ನಿನನ್ ಪಸ್‌ದಿ ಪಂಚಿಗಿರ
ಕಯ್ತ ನಂಜಿದ್!

LTD.

...CTED
PERSONAL ATTENTION PAID TO ALL ENQUIRIES
ESTD. 1925

ಯೆಂಚ ಮಲ್ಪುನಿಂದ್‌ದೊರ
ಯೆತೆಟ್ ದಿಂಜಿದ್"

೫

ಅಪ್ಪೆ ಬಾಯಿ ಪನ್ನೊಂದುಂಡು
ಎನ ತರೆತ ತರೆದಿ ಬೊಂಡು
ದಿನ್ನದಿನ್ನಲಾಂಡ್ ಗುಂಡು
ಕಲ್ಲ್‌ದಂಚನೆ!
ತಿಗಲ್‌ದುಲಯಿ ಉರುಟು ಚೆಂಡ್
ಸಾರಿನಂಚನೆ!

ಮೋನೆ ತರ್ತ್ ಕಣ್ಣ್‌ಡರಿಂಡ್
ನೀರ್ ಬೊಟ್ಟುಡು
"ಯೆನ ಮದಪುಡು ಕಾಲಕರಿಂಡ್
ಅಪ್ಪೆ ನಟ್ಟೊಡು!
ಅಲೆನ ಖುಷೊಕುಲೆನಡನೊರಿಂಡ್
ಯಿಸೆನೆ ಯೆಟ್ಟೊಡು!
ಪಾಪು ಮಗ! ಪಾಪದರಿಂಡ್
ಪಣ್ದ್ ತಟ್ಟೊಡು!"
ಪನ್ಪಿಗೌಜಿಗಮಲ್ ಪಿರಿಂಡ್
ನಿದ್ರೆದೊಟ್ಟುಡೆ!

---

# ಅಲ್ಪನ ಆಶ್ಚರ್ಯೊ ಮರಿಯಲೊದ ತುದೆತಲೆಕೊ

(ಧಾಟಿ:—ತುಳುವ ನಾಡೊಳು ಹೊಳಲು ಮೆರೆವುದು ಹಳೆಯ ಕಾರ್ಕಳ ಎಂಬುದು) (ಆತಕೊ)

ಸರತ್ತು ತುದೆ ಈ ಪಳಪಳನೆ ಪರತೊಂದು ಮೆಲ್ಲನೆ ಪೋಲಗೆ.
ಸರಪು ನೋಟೊಲ, ಶಬ್ದೊಗುಳುಗುಳು, ತೂಯೆರಾತ್
ಪೊರ್ಲುಗೆ.
ತುದೆಲಸಾಗ್‌ಲ ಸಾವದಾನೊಡು ನಿನ್ನ ಅಂದೊನು ತೋಜಲ.
ತುದೆನೆ ಪರಪುಲ ಜಲೊತ ಆಶ್ರಯೊ ಬೇಗೊನೆಂಕ್ಲೆಗ್
ಕೊರ್ಲಯ.
ನಿನ್ನನೀರ್‌ನ್ ಪರ್‌ದ್ ಸನ್ತಸೊ ಪಡೆಪೊ ಜೀವೊದ ಜನ್ತುಲು.
ನಿನ್ನನೀರ್‌ಡ್ ಪೈರುನಚ್ಚಿನ್, ಮಲ್ತ್‌ತಿನ್‌ಪೊಯ ಎಂಕುಲು.
ಅರೆಗಾಲೊಡಾತುದೆ ಈಯಿ ಪೊರ್ಲುದ ಸಂಪುಮಲ್ಪಿನ ಮದ್ಮಲ್
ಬರುವೆರೇಲ್‌ಲ ನಿನ್ನ ಅಂದೊನು ತೂವೆರಪಗನೆ ಅರಿಗೇರ.
ಆಂಡ ತುದೆನೇ ಇನಿಲದಾನೆಗೆ ತೂಯೆರೀತೀ ಭೀಕರೊ?
ಕೆಂಡೆಬಲ್ಲಿಲು, ಪಿದ್‌ರ್, ಮದೊಕೊಲು, ಕೊನೊಪು
ನೋಡೆಯ ಈತರೊ?
ಕೆಂಪುದಾನೆಗೆ ನಿನ್ನನೀರ್‌ಲ ಸ್ವಚ್ಛಜಲೊನೀ ದಾಂದಯ?
ಇಂಪುಕಳೆಯುನೆ ಸ್ವರೊತಅನ್ದೊನು ನೀರ್‌ದಾನೆಗೆ ಮಂದೊಯ?
ದಾನೆ ಭೀಕರೊ ದಾನೆ ಗೌಜಿಗೆ ನಿಕ್ಕ್ ಇನಿತಾ ದಿನೊಟುಲ?
ದಾನೆ ಆವೊಡು ಎಂಡ್ ಗ್ರಹಿಪುವ ಪ್ರಳಯದಿಚ್ಚೆನ್‌ಮಲ್ಪಡ.
ಬರ್ಸೊ ಬತ್ತ್‌ಂಡ ಈತ್ ದಾಯಿಗ್ ನಿಕ್ಕ್ ಕೊಂಬುಲ
ಬಪ್ಪುಂಡು!

ಬರ್ಸೊ ನಂಬಡ ಒಂತೆದಿನೊತ ಗೊಬ್ಬುಗೊಬ್ಬುದು
ಪೋಪುಂಡು.
ದಡೊನು ಬುಡುದುಗೆ ಮಿತ್ತ್ ಎರ್ಕ್‌ದ್ ದಾಯಿ
ಎಂಕ್ಲೆನ್. ಕೆರ್ಪಯ?
ದಡೊನು ಬುಡುದು ತಿರ್ತ್‌ಜಪ್ಪುಗೆ ಉಂದುಲ ಒಂಜಿ
ಪೊರ್ಲೊಯ?
ಕಲ್ಲ್‌ಬಲ್ಲಿನ್ ದಾಯೆಕನತ್‌ಒ ಬುಳೆತನಾಶೊನು ಮಲ್ಪುವ?
ಬೊಳ್ಪು ಏರ್‌ದ್, ನೆಲ ಉಂತುದು, ದಾಯೆ ಹಾಳ್
ಮಲ್ಪುವ?
ಬರ್ಸೊ ಬತ್ತಿನ ಕೂಡ್ಲೆದಾನೆಯ ನಿಕ್ಕ್‌ಲೀತ್ ಕ್ರೌರ್ಯೊಗೆ?
ಬರ್ಸೊನಂಬಡ ನಾಲ್‌ದಿನೊತಾ ಬಾಳ್ವೆಲಯಿಕ್‌ಲ ತೂಲಗೆ.
ನಾಲ್‌ದಿನೊತ ಗರ್ವೊನೇಪೊಲ ದಾಯೆತೂಪವ ಲೋಕೊಗು
ಕಾಲೊಕರಿನಗ ಬರ್ಸೊರಾಜನ ನಿನ್ನದರ್ಪೊಲ ಓಲುಗೆ?
ತುದೆನೆ ಪರಪುಲ ಪಳಪಳನೆ ನಿನ್ನ ದರ್ಪೊನು ನೀಗ್‌ಲ.
ತುದೆನೆಸಾಗ್‌ಲ ಸ್ನಾಯೊಮಲ್ಪುಲ ನಿನ್ನಪೊರ್ಲುನುತೂಪಲ.
ನಿನ್ನ ಭೀಕರೊ ರೂಪಗೇರ್‌ಲ ಬಗ್ಯೆರಾಂಡಲಾ ಶಾಶ್ವತೊ,
ನಿನ್ನಸೌಮ್ಯೊನು ತೋಜದೆಂಕ್ಲೆಗ್ ಪುದರ್‌ಪಡೆಲಗೆಶಾಶ್ವತೊ.

**ಸಂಪಾಜೆ ಮುಂಡಪ್ಪರೈ,**
ದೇಶಕೋಡಿಕಾರ್.

# ಕೋರಿ ಕಿಲೆಪ್ಪುಗ

ಬರೆತಿನಾಯೆ:—'ತುಳುವ ಬಂಗ್ರು' ಬಾಲಪ್ಪಂಡೊ, ಸುಳ್ಯ

ಪುಲ್ಯಕೇಲ್ ಆವೊಡಂಡ,
ರೈತೆಲ್ ಮಾತ ಲಕ್ಕೊಡಂಡ,
ಕೋರಿಕಿಲೆಪ್ಪೊಡು.
ಕೊಕ್ಕೊಕೋ, ಕೊಕ್ಕೊಕೋ,
ಕೋರಿಕಿಲೆಪ್ಪೊಡು.
ನೆನ್ಪುತತ್ತುಲಮ್ಮತೀನ್ದ್,
ಸೀರೆಸೆರಂಗ್ ಒಟ್ಟುತ್ ಕುತ್ತ್‌ದ್,
ಪಾಲ್ ಪೋಪಲ್.
ಗುಡ್ಡೆತಡ್ಡೊ ಉಂತುದುಂತ್‌ದ್,
ಪಾರ್‌ಪೋಪಲ್.
ರೈತೆರ್ ಮಾತ ಪಕ್ಕಲಕ್ಕದ್,
ಬಂಜಿಗೀದ್ ಸಣ್ಣನೊ ಪಾಡ್ದ್,
ಕಂಡೊಗ್ ಪೋಪೆರ್.
ಎರುಕುಲೆನ್ ದೆರೊಂದ್,
ಕಂಡೊಗ್ ಪೋಪೆರ್.
ನೇಗಿಲುಲೆನ್ ಕೈಟ್ ಪತ್ತ್‌ದ್,
ಓ ಓ ಓ ಪಂಡೊಂದ್,
ರೈತೆರ್ ಪೋಪೆರ್.
ಪೋಪಿನಗ ಆಪಿ ಪೊರ್ಲು,
ಏರ್ ತೂಪೆರ್.
ಸೂರ್ಯೆ ಮೂಡ್‌ದಾಯಿನಗ,
ರೈತೆರ್ ಮಾತ ಅಡಪುನಗ,
ಕೋರಿ ಕಿಲೆಪುಂಡು.
ಕೊಕ್ಕೊಕೋ, ಕೊಕ್ಕೊಕೋ,
ಕೋರಿ ಕಿಲೆಪುಂಡು
ರಾತ್ರೆ ರಾಣಿ ಆಳೆ ನಿಶೆ,
ಬೊಕ್ಕಬರ್ಪುನಾಳೆ ಉಷೆ,
ಕೋರಿ ಕಿಲೆಪ್ಪುಗ.
ಕೆಕ್ಕಿಲ್‌ನ್ ಉದ್ದೊ ಮಲ್ತ್‌ದ್,
ಕೋರಿ ಕಿಲೆಪ್ಪುಗ.
ಪಳ್ಳಿಡಪಗ ಪಾಂಗ್ ಕೊರ್ಪೆರ್,
ಇಗರ್ಜಿಡ್ ಗಂಟೆ ಹಾಕ್ಪೆರ್,
ಕೋರಿ ಕಿಲೆಪ್ಪುಗ
ದೇವಸ್ಥಾನೊಗ್ ಭಟ್ರ್ ಪೋಪೆರ್,
ಕೋರಿ ಕಿಲೆಪ್ಪುಗ.
ಲಕ್ಪೆರಪಗ ಕಲ್ಪಿ ಜೋಕುಲು,
ಪತ್ಪೆರಕ್‌ಲೆ ಕೈಟ್ ಬೂಕುಲು,—
ಪುಲ್ಯಕೇಲ್‌ಗ್.
ಐಟ್ ಇತ್ತಿನ್ ಮನನೊ ಮಲ್ಪೆರ್,
ಪುಲ್ಯಕೇಲ್‌ಗ್.
ಕವಿಕುಲೊಂಜಿಕಡೆಟ್ ಕುಲ್ದ್,
ಜಗೊದ ಸೊಬಗ್‌ನಕ್‌ಲ್ ತೂದ್,
ಕವನೊಕಟ್ಪೆರ್.
ನನ್ನನ, ನನ್ನನ,
ಕವನೊಕಟ್ಪೆರ್.

* *

(ನಮೊಲಾ—ಕೋರಿಲುಲು)
ಎಂಕ್ಲೆಗೀದ್ ದಯೆಲ ಇಜ್ಜಿ,
ಕೋರಿ ಕೆರ್ದ್ ತಿನ್ಪೊ ಸಜ್ಜಿ,
ನಮೊ ಕೃತಘ್ನೆರ್.
ಕೆಕ್ಕಿಲ್ ಪಿಜಕ್ದ್ ನೆತ್ತೆರ್ ಪರ್ಪ.
ಮಹಾಕೃತಘ್ನೆಲ್.
ನಂಕ್ ಕ್ಲಾಲ್ ಉಂಡ್ ಇತ್ತೆ,
ಕೋರಿಪಾಯೆಗೆಂಕ್ಲೆಗಿತ್ತೆ,
ಏರ್ ಕೃತಘ್ನೆರ್?
ಹಾಲ್ ಕೋರಿಲೇನ್ ಕೆರ್ಪೊ,
ಜನೊಕ್‌ಕೃತಜ್ಞೆರ್.

* * *

ಪುಲ್ಯಕೇಲ್ ಆವೊಡಾಂಡ,
ಸಮಸ್ತ ಪ್ರಾಣಿ ಲಕ್ಕೊಡಂಡ,
ಕೋರಿ ಕಿಲೆಪ್ಪೊಡು
ಕೊಕ್ಕೊಕೋ, ಕೊಕ್ಕೊಕೋ,
ಕೋರಿ ಕಿಲೆಪ್ಪೊಡು.

# ಮೆಟ್ರಿಕ್

ಬರೆತಿನಾಯೆ:
ಸುಳ್ಯೊತ ಮುಮ್ಮಡೆ, ಬಾಲವೃಂದೊ

ಹಳ್ಳಿಟತ್ತ್ ಶಾಲೆಟಂಡ್,
ನೇಟೆಗಿತ್ತ್ ಪೋವೊಡಾಂಡ್.
ಕಲ್ಪೆರಿತ್ತ್ ಕಾಸ್ ಓಂಡ್?
ಜಗತ ಬಾಳ್ವೆ ಇಂಚಿನೇ—
ಮಾಸ್ಟ್ರೆರಿತ್ತ್ ಪಂಡೋಂತುಲ್ಲೆರ್,
ಸಾಲೊಕೊರ್ಪೆರ್ ಸುಬ್ರಾಯ ಮಲ್ಯೆರ್,
ಅಮ್ಮನ ಮನಸ್, ಚಲ್ಲರೆ ಪಿಲ್ಲರೆ,
ಮಲ್ಪುನೆಂಚಿನಾ?— ೧

ಹೈಸ್ಕೂಲ್‌ಗ್ ಬಡತ್‌ದಾಂಡ್,
ಫೋರ್ತ್‌ಫೋರ್ಮ್‌ಡ್ ಕುಳ್ಳುದಾಂಡ್.
ಕಷ್ಟಪಾತೊ ಕಲ್ಪೆರಾಂಡ್.
ಮಿತ್ತ್‌ಕ್ಲಾಸ್ ಎಂಚನಾ?
ಹಳ್ಳಿಶಾಲೆ ಪೊಳ್ಳು ಇತ್ತ್‌ಂಡ್,
ಅಲ್ಲ್ ಬಿರುದು ಬತ್ತ್‌ದಿತ್ತ್‌ಂಡ್,
ಮಾತಪಾತೊ ಸುಲಭೊ ಇತ್ತ್‌ಂಡ್,
ಮೂಲ್ ಆಂಚನಾ? ೨

ಪರೀಕ್ಷೆ ಆಂಡ್ ವರ್ಷಾವಧಿತ,
ಅದೃಷ್ಟೊ ತೂಂಡ್ ಜೋಕ್ಲೆತರೆತ,
ಹಳ್ಳಿಹುಡುಗೆ ಪಾಸ್ ಆತೆ.
ಬರ್ಪಿ ವರ್ಸೊನಾ?
ಆಯನಮ್ಮೆ ಯೋಚನೆ ಮಲ್ತ್‌ದ್,
ಸಾಲೊಬಡ್ಡಿಗ್—ಬಡ್ಡಿಕೊರ್ದ್,
ರಡ್ಡ್—ನಾಲ್ ಬುದ್ಧಿಪಂಡ್‌ದ್,
ಕಡಪುಡ್ಯೆರಾಯನ್—

ದುಂಬುತ ಒಡೆಂಪಿ ಆವೆನೆ?
ಆಯನ ಕುಟುಂಬೊ ತೂವೆನೆ?
ನುಪ್ಪುಕೊರ್ದ್ ಸಾಂಕ್ವೆನೆ?
ಎಡ್ಡೆ ಕಲ್ಪೊಡು.
ಮೆಟ್ರಿಕೊಂಜಿ ಕಲ್ತ್‌ಬುಡ್‌ದ್,
ಆಯಗೊಂಜಿ ಬೇಲೆತಿಕ್‌ದ್,
ಅಮ್ಮೆಗಪ್ಪೆಗ್ನುಪ್ಪು ಕೊರ್ದ್
ಆಯಿ ಸಾಂಕೊಡು, ೪

ಇತ್ತಿಚೂರು ಬುಟ್ಟುಪೋಂಡು,
ಪೋರ್ಟ್ರ್ಯಾಫ್ ತರೆಟ್ ಕುಲ್‌ಂಡ್,
ಬೊಲ್ದುಬತ್ತಿ ಬಾಯಿಟಾಂಡ್,
ಶೋಕು ಸುರುವಾಂಡ್,
ಐಕ್‌ನೆಕ್ಕ್ ಕಾಸ್‌ಪೋಂಡು,
ಅಲ್ಲ್‌ಮೂಲ್ ಸಾಲೊ ಆಂಡ್,
ಕಾಕ ಪೋಕೆರಿಸ್ಟೊ ಆಂಡ್,
ಒಟ್ಟುಕೆಟ್ಟ್‌ಂಡ್.

ಪರೀಕ್ಷೆಕರಿಂಡ್ ಆ ವರ್ಸೊ.
ಅಮ್ಮಗಾಂಡ್ ಬಡ್ಡಿತಬರ್ಸೊ.
ಆಂಚಿ, ಇಂಚಿ, ಆಂಡ್‌ಪಾಸ್.
ಫಿಫ್ತ್ ಫೋರ್ಮ್‌ಡ್.
ಒಂಜಿವರ್ಸೊ ಉಂಡು ನನ,
ಕಲ್ಪೆರಿತ್ತ್ ಓಂಡುಪಣ—ವ್,
ಎಂಚಾಂಟಲಾ ಕುಲ್ಪೊಡ್ಪನಾ,
ಮೆಟ್ರಿಕ್ಕ್‌ಡ್.

ಸಾಲೊ ಇಂಚ ಏರ್‌ದ್ ಪೋಂಡು,
ಅಸ್‌ಲ್‌ತಾತ್ ಬಡ್ಡಿಆಂಡ್,
ಅಮ್ಮನತರೆಟ್ ಚಿಂತೆಕುಲ್‌ಂಡ್,
ಮಗನಮೆಟ್ರಿಕ್ಕ್.
ಮಗನಬುದ್ಧಿ ಹಾಲ್‌ಆಂಡ್,
ಬತ್ತಿದುಡ್ಡು ಶೋಕುಗಾಂಡ್,
ಓದಾಟೆಂಚಿ ಉಂತ್‌ದ್‌ಪೋಂಡು,
ಕ್ಲಾಸ್ ಮೆಟ್ರಿಕ್ಕ್.

ಮಲ್ಲಪರೀಕ್ಷೆ ಕರಿತ್‌ಪೋಂಡು,
ಪಾಸ್, ಫೈಲ್, ಪಟ್ಟಿ ಆಂಡ್,
ಆಯನನಂಬರ್ ಫೈಲ್ ಆಂಡ್,
ದೈವಲೀಲೆ.
ಮಗನಮೋರೆ ಆಮ್ಮೆ ತೂಜಿ,
ಮೆಟ್ರಿಕ್ಕ್-ದ ಕೋಪೊ ಪೋಜಿ,
ಸಾಲೊತ, ವಾರಂಟ್, ಬತ್ತ್‌ಂಡ್ ಆರ್ಜಿ,
ಅಮ್ಮಗ್ ಜೈಲ್.

# ಸಮಾಜ ಸರ್ಪೊ

ಬರೆತಿನಾಯೆ:—ಕಿಶೋರ 'ಬಾಲವ್ಯಂದೊ' ಸುಳ್ಯ.

೧

"ರುಕ್ಕೊ.......ನನ ಆಂಡ್ ಬಾಜೆಲ್......." ಮುರ್ಕ್ ಮಂಚೊದ ಮಿತ್ತ್ ಜೆತ್‌ತಿತ್ತಿನ ಮಾಧು, ಮರ್ಮಾಂತಿಕ ವೇದನೆಡ್ ಪಂಡೆ. ರುಕ್ಮಿಣಿ, ಆಯನಬೊಡೆದಿ, ಬಾರ್ಲಿದ ನೀರ್‌ನ್ ಬಾಯಿಗ್ ಬುಡಿಯಲ್. "ಏ...ನ್ ಎಂಚಲಾ.......ಪೋಪೆ ಈ..........ದಾನ್ವ?" "ದೇವೆರೆ ಮನಸ್ಸ್‌ಡ್ ಅಂಚ ಇತ್ತ್‌ಂಡ ಯಾನ್ಲಾ ಬರ್ಪೆ...." ರುಕ್ಮಿಣಿನ ಕಣ್ಣ್‌ಡ್ದ್, ಗಂಗಾ ಯಮುನಾ ಪ್ರವಾಹೊ ತಡೆ ಇಜ್ಜಾಂದೆ ಪರಿಪ್ಪೇತ್‌ಂಡ್.

"ಆ!.......ಬಲ್ಲಿ.......ನನ ಒಂಜೇ ತಿಂಗಳು....... ಬಾಳಿ.......ಈ....ಬಂಜಿನಾಲ್" ರುಕ್ಮಿಣಿ ದೀನ ದೃಷ್ಟಿಡ್ ಮಾಧವನ್ ತೂಯಲ್. "ಅಂಡ್.......ಗೊತ್ತು....ರು..ಕ್ಮೀ ....ಜೀವನೊ....ರಾಟಿನೊ....ಲು, ಪಂಗ್.......ಬಲ್ಲಿ" ಮಾಧವನ ಸ್ವರೊ ಕ್ಷೀಣೊ ಆವೊಂದ್ ಬತ್ತ್ಂಡ್.—"ಪಾತೆರಡೆ, ಅಯಾ ಸಾವು" ರುಕ್ಮಿಣಿ ತನ ಕಣ್ಣೀರ್‌ನ್ ಸೆರಗ್‌ಟ್ ಉದ್ದೊಂದ್ ಪಂಡಲ್, "ಥೂ! ಹಾ!...ಉಂತಿ...ಬತ್ತಿ. ರುಕ್ಮಿಣೀ ಪೋಪೆ. ಓಳು...ಯಾನ್ ಪಂಡಿನ....ಮದಪ್ಪಡಾ ... ಉಂತ್‌ಲೆಪ್ಪಾ, ಬತ್ತ್, ಬತ್ತ್ ಕಟುಕೆರ್....ಬಾಜೆಲ್.... ಬಾ....ಜೆ...ಲ್" ರುಕ್ಮಿಣಿ ಪೆರಪ್ಪ ಒಂಜೀತ್ ಬಾರ್ಲಿತ ನೀರ್‌ನ್ ಪರ್ಪಾಯಲ್. "ಆಂಡ್.......ಪೋಪೆ....... ರುಕ್ಕೀೀ.......ಪೋ....ಪೆ" ಮಾಧವನ ಪ್ರಾಣಪಕ್ಷಿ, ಗೂಡ್‌ಡ್ದ್ ಪಿದಾಯಿ ಪಾರ್‌ದ್ ಪೋಂಡ್.

೨

ಶೇಷಾಚಾರ್ಯೆರ್ ಪಂಡ್ಂಟ ಎಂಕ್ಲೆ ಊರ್‌ಡ್ ಪಾತೆರೆಗ್ಲಾ ಬೋಡ್ಯಾಸಿಜಿ. ಎಂಕ್ಲೆಗ್ ಎಂಚಿನವಾಂಟ್ಲಾ ಶುಭ ಕಾರ್ಯೊ ಆವೊಡ್‌ಂದಿತ್ತ್ಂಟ ಆರ್ ಬೋಡೇ ಬೋಡು. ಆರ್ ಬಡವೆ. ಅಲ್ತ್ ಮುಲ್ತ್, ಸಮಾರಂಭೊ, ಸಮಾರಾಧನೆಲೆಡ್ ತಿಕ್ಕಿನ ದಕ್ಷಿಣೆನ್, ಕಟ್ಟ್‌ದ್ ದೀವೊಂದಿತ್ತೆರ್. ಈ ಭೂಮಿಡ್, ಆ ತೊಂಡಗಿತ್ತಿನ ಸಂಬಂಧಿಕೆರ್ ಪಂಡ್ಂಟ, ಆರೆ ಐನ್ ವರ್ಸೊದ ಒಂಜಿ ಪುಳ್ಳಿಲಾ, ಏಳ್ ವರ್ಸೊದ, (ಆರ್ ಸಾಂಕಿನ ದಿಕ್ಕಿಜ್ಜಾಂತಿ ಹುಡುಗೆ) ಹುಡುಗೆ ಮಾಧುಲಾ. ಎಂಕ್ಲೆ ಕಥಾರಂಭೊಡ್ ಬತ್ತ್‌ನ ಮಾಧವನೇ ಈ ಹುಡುಗೆ. ಆ ರುಕ್ಮಿಣಿಯೇ ಈ ತೊಂಡನ ಪುಳ್ಳಿ.

ಆ ಆಚಾರ್ಯೆರ್ ತನ ಅಂತಿಮ ಕಾಲೊಡ್, ಮಾಧವಗ್ ರುಕ್ಮಿಣಿನ್ ಕೊರ್‌ದ್ ಮದ್ಮೆ ಮಲ್ತ್‌ದ್, ಒಂಜಿ ರಡ್ಡ್ ಹಿತೊ ಬುದ್ಧಿ ಪಂಡ್‌ದ್, ಪರಲೋಕೊದ ಸಾದಿ ಪತ್ತೆರ್... ಈ ದಂಪತಿಳೆನ ಪೊಸ ಜೀವನೊಗು ಸುರುವಾಂಡ್. ಮಾಧವೆ ಸಮ್ಮೆಲೆಲೆಕ್ಕೊನೇ ಮಲ್ತ್‌ದ್, ಜೀವನೊ ನಡಪುಡ್ಯೆರೆ ಸುರು ಮಲ್ತೆ. ಅವ್ವು ಬಹುಕಾಲೊ ನಡತ್‌ಜಿ, ದಾಲಾ ಒಂಜಿ ಚಾಕ್ರಿ ತಿಕ್ಕ್ಯೊಂದ್‌ದ್ ನಲಿತ್ತೆ. ಅಲ್ತ್ ದೇವಸ್ಥಾನೊದ ಮೊಕ್ತೇಸರೆರಾದಿತ್ತಿನ ಕೇಶವ ಭಟ್ರ್ ಆಯೆಗ್ ಒಂಜಿ ಗುಮಾಸ್ತೆರೆ ಬೇಲೆ ಕೊರ್ಪಾಯೆರ್. ತಿಂಗೊಳುಗು ಒನಸ್ಸ್ ಕರೀದ್ ರಡ್ಡ್ ರುಪಾಯಿ ಸಂಬೊಳೊ. ಈ ಬೇಲೆಡ್ದ್ ಮಾಧವಗ್ ಒಂಜೊಂಜಿ ದಿನೊ ಇಲ್ಲಡೆಗೇ ಬರಿಯೆರ ಆಪೇತ್‌ಜಿ. ಇಂಚ್ಚೇ ಸಮಯೊಡ್ ಕೇಶವ ಭಟ್ರ್ ತನ್ನ ಓರೆಗಣ್ಣ್‌ದ ಪ್ರತಾಪೊನು ರುಕ್ಮಿಣಿನ ಮಿತ್ತ್ ತೋಜ್ಪಾವೆರ ಸುರುಮಲ್ತೆರ್. ಮಾಧವಗ್ ಈ ಸಂಗತಿನ್ ರುಕ್ಮಿಣಿ ಪಂಡಲ್. ಮಾಧವೆ, ಆನಿಡ್ತ್ ಬೊಕ್ಕ ತನ ಗುಮಾಸ್ತಿಕೆನ್ ಬುಡ್ರಿಯೆ.

ಇಂಚಿ ತನ ದೇಶೊಗು ಬೋಡಾದಾಂಟ್ಲ ತನ ಪ್ರಾಣೊನ್ ಕಳೆವೊಡ್‌ಂದ್‌ತ್, ಮಾಧು ಗ್ರೆತ್‌ದ್, ಖದ್ದರ್‌ಧಾರಿ ಆತ್ ಅಲ್ಲಲ್ಲ್ ಭಾಷಣೊ ಕೊರಿಯೆರ ಸುರು ಮಲ್ತೆ. ನೆತ್ತ ಪರಿಣಾಮೊ, ಕಡೆಗ್ ರಡ್ಡ್ ಮೂಜಿ ಸರ್ತಿ ಲಾಕಪ್ ತೂಪೆರ ಮಲ್ತ್ಂಡ್. ಒಂಜಿ ಸರ್ತಿ ಇಂಚನೇ ಭಾಷಣೊ ಕೊರೊಂದಿಪ್ಪ್‌ನಗ ಒರೊ ಲಾಠಿಚಾರ್ಜ್ ಆಂಡ್. ಒರಿ ಪೋಲಿಸ್ತ್‌ಯನ ಲಾಠಿತ ಪೆಟ್ಟ್ ಮಾಧವನ ಸರೆಕ್ಕ್ ಬೂರ್ದು ಸರಿ ನರಿಂಡ್.

ರಡ್ಡ್‌ಮೂಜಿ ಸಿಂಗೊಲು ಆಸ್ಪತ್ರೆದ ಸುಖಾನುಭವೊಲಾ ಆಂಡ್. ಆ ಲಾಠಿ ಚಾರ್ಜ್‌ಡ್ತ್‌ದ್ ಮಾಧವನ ಮನಸ್ಸ್ ಭಾರೀ ಪರಿವರ್ತನೆ ಹೊಂದ್‌ಂಡ್. ಆಸ್ಪತ್ರೆಡ್ತ್ ಬಿಡುಗಡೆ ಆಯ್ನಾನಿಯೇ ಮಾಧವೆ ಒಂಜಿ ಕಡೆಟ್ಟ್ ಭಾಷಣೊ ಕೊರ್ಯೆ. ಸರೆಡ್ದ್ ಪೆರಪ್ಪ ರಕ್ತಸ್ರಾವೊ ಆಂಡ್. ಕಥೆತ್ತ ಸುರುಟ್ಟ್ ಪಂಡಿಲೆಕ್ಕೊ ಆಯೆಗ್ ಅಯ್ಟೇ ಅಂತ್ಯೊ ಆಂಡ್.

೩

ರುಕ್ಮಿಣಿ ಕೆಲಸನಾಯೊ ಪೋಯಿಬುಕ್ಕೊ, ಒಂಜಿ ಆಣ್ ಬಾಲೆನ್ ಪೆದ್ಯಲ್. ಒಡವೆರೆ ಬುಣಂತಿ....ಗೊತ್ತುಉಂಡತ್ತ್, ಪೆದ್ಯೊಳ್ ಆನಿಯೇಲಕ್ಯಲ್. ಇಜ್ಜಂಡ ಜೀಪನೊಸಾಗುನಿ ಎಂಚ? ಕೇಶವಭಟ್ರ್ ತನ ಇಚ್ಛೆ ಪೂರ್ತಿಸಾವೆರೆ ಸಮಯೊ ಕಾಪೋಂದಿತ್ತೆರ್. ರುಕ್ಮಿಣಿಗ್ ಅವುಗೊತ್ತೇ ಇತ್ತ್ಂಡ್. ಆಂಟ ಆಲೆ ಭಾರೊ ಪೂರಾ ದೇವೆರೆ ಮಿತ್ತ್.

ರಾತ್ರೆ ಎಣ್ಮೊಗಂಟೆದ ಪೊರ್ತು ರುಕ್ಮಿಣಿ ಉಂಡುದ್, ಬಾಲೆನ್ ಜೆಪ್ಪಾದ್, ಬಾಕಿಲ್ ಪಾಡ್ದ್ ಜೆಪ್ಪೆರ ಅಟ್ಟಣೆಸ್ಸ್ ಲ್ಪೋಂದಿತ್ತಲ್.

“ಬಾಕಿಲ್ ದೆಪ್ಪು.......ಬಾಕಿಲ್” ಬಾಕಿಲ್ ತಟ್ಟ್‌ದ್ ಪಂಡಿಲೆಕ್ಕ ಆಂಡ್. ಕೇಶವ ಭಟ್ರೆ ಸ್ವರೊ. ಆಲ್ ಗಡಗಡ ನಡ್ಗ್ಯಲ್. “ಏರ್?” ಕೇಂಡಲ್ ರುಕ್ಮಿಣಿ. “ಬುಕ್ಕೊ ಪಾತೆರ್ಗ.......ಬಾಕಿಲ್ ದೆಪ್ಪು....ಬೇಗೊ....”—“ಬಾಕಿಲ್! ದಾಯೆ? ಏರ್ಂದ್ ಪಣಿಯರಾಪುಜೊ”?—“ಯಾನ್....... ಪನಿತ್ ಬೇಲೆ ಉಂಡು....ಕೇಶವ ಭಟ್ಟ್”—“ನಡಪ್ಪುವರಾ ಇಜ್ಜಾ ಪುಳ್ಪಡ್ತ್, ಎಂಚಿ ಬೇಲೆ ಅವು. ಮಾತ ಪಗೆಲ್— ರಾತ್ರೆ ಅತ್ತ್....” “ಛೆ, ಛೆ, ಅವು ಇತ್ತೆನೇ ಅಪೊಡು ಬಾಕಿಲ್ ದೆಪ್ಪು, ಇಜ್ಜಂಡ ನರಿಪ್ಪುಪೆ”. — “ದಾನೆ? ನರಿಪ್ಪುನ, ಎಂಚಿನೆನ್,....ಆ ಕಜ್ಪುಗ್....ಕಡೆಯಿ ಅರಿಪ್ಪು ಒಂಜೋಂಡು” “ರುಕ್ಮಿಣಿ, ಏನ್ ಏರ್ಂದ್ ಗೊತ್ತೀತ” “ಈರ್ ಆರೇ....ಬತ್ತೆ.... ಆ ಪಾತ್ರೊ—....” “ಇಂಚಿಕೇಣ್” “ಕೇಣ್ಣೆ! ತಿಕ್ಂಡ್....ಬತ್ತೆ....” “ದಾನೆ! ಬಾಕಿಲ್—” “ಬೋಡ್ಚಿ ಕೆಂಡಿತಾಡೆಗ್ ಬಲ್ಲೆ, ಈರೆ ನೋರೆಗೆ ಮಯ್ಪುವೆ. ಬೊಕ್ಕ ಓದಾಯಿದ ಪಾತೆರೊ ಕೇಂಡ್‌ಜಿ.

೪

ಮನತ್ತಾನಿ, ದೇವಸ್ಥಾನೊಡ್ ಮಾಪಲ್ಲ ಪೂಜೆ; ರುಕ್ಮಿಣಿಲಾ ಹಣ್ಣ್‌ಕಾಯಿ ದೆತೋಂದ್ ಪೋಯಲ್. ಅಲ್ಲಿತ್ತಿ ಬಾಕಿ ಪೊಣ್ಜೋವ್ಲೆನ ಎರ್ಗ, ತೆಲಿತ್ತೋಂಡ್ ಪೋಯಲ್. ಆಲೆ ತೆಲಿಕೆಗ್, ಪಿರ ತೆಲಿಕ್ಕೆ ಆವಡ್ ಪಾತೆರೋವಡ್ ಬತ್ತ್‌ಜಿ. ರುಕ್ಮಿಣಿಗ್ ಸಾವಿರೊ ಚೇಳ್ ತುಚ್ಚಿಲೆಕ್ಕ ಆಂಡ್, ಆಲ್ ಆ ಪೊಣ್ಜೋವ್ಲೆನ ಒಟ್ಟುಗ್ ಪೋತ್ ಉಂತ್ಯಲ್. ಆಗ್ಲ್ ಮಾತ, ಆಲೆನ್ ಬುಡ್ದ್ ಬೊಕ್ಕಂಜಿ ದಿಕ್ಕ್‌ಗ್ ಸೀದಾ ಪೋಯೆರ್, ಆಲ್‌ಲಾ ಅಕ್ಲ್ ಪೋಯಿನಾಡೆಗೇ ಪೋಯಲ್. “ದಾನೆ? ಕಲಿಕಾಲೊ.......ಎಂಕ್ಲೆ ಒಟ್ಟುಗ್ ಉಂತೆರ ಈ ಏರ್? ನಡಪ್ಪಂಚಿ!.......” ಒಂಜಿ ಅಜ್ಜಮ್ಮ ದುಂಬು ಬತ್ತ್‌ದ್ ರುಕ್ಮಿಣಿಗ್ ಪಂಡಲ್. ರುಕ್ಮಿಣಿಗ್ ಆಶ್ಚರ್ಯೊಲಾ ದುಃಖೊಲಾ ಒಟ್ಟುಗು ಆಂಡ್. “ನಿಕ್ಕ್....ಸ್ವಾಮಿಲು ಬಹಿಷ್ಕಾರೊ ಕೊರ್ತೆರ್ ಅಂಚ....” ಇತ್ತಿತ ಪಾತೆರೊ ರಾಗತವು, ರುಕ್ಮಿಣಿ ತರೆ ದೆತ್ತ್‌ಗತ್ ತೂಯಲ್, ಶಂಕರ ಭಟ್ರೆ ಬೊಡೆದಿ.

ರುಕ್ಮಿಣಿ, ಅಲ್ಲ್, ಒಂಜಿ ಮಿನಿಟ್‌ಲಾ ಉಂತಂದೆ, ಸ್ವಾಮಿಲೆ ಸಾಡೆಗ್ ಪೋಯಲ್. ಆರೆ ಬಾಯಿಡ್‌ದ್ಲಾ ಕೇಂಡ್‌ದಾಂಡ್. ಆಲ್ ಅಲ್ಲ್, ಒಂಜಿ ಮಿನಿಟ್ ಕೂಡಾ ಉಂತಂದೆ, ಇಲ್ಲಡೆಗ್ ಪೋಯಲ್.

ಈಸಂಗತಿ ನಡತಿಬೊಕ್ಕ ರುಕ್ಮಿಣಿನ್ ಏರ್ಲಾ ತೂತು ನೆಟಜ್ಜಿ. ಆಲ್ ಓಡೆಗ್ ಪೋಯಲ್ ದಾನೆ ಆಯಲ್ಂದ್‌ದ್ ಏರೆಗ್ಲಾ ಗೊತ್ತಿಜ್ಜಿ. ಆ ದೇವೆರೆಗ್ ಗೊತ್ತುಪ್ಪಂದಿಪ್ಪೊ? ಉಪ್ಪು. ಆರೆಗ್ ಗೊತ್ತಿಪ್ಪು.

ಆ ಬಾಲೆ ಮಾಧವಗ್ ಪುಟ್ಟ್‌ನವತ್ತೊ? ಅ....ತ್ತ್..... ಎಂಚಿನೆಡ್ತಾವೆರ ಅತ್ತ್? ಬಹಿಷ್ಕಾರೊ ದಾಯೆಗ್? ಕೇಶವ ಭಟ್ರೆನ ಇಚ್ಛೆ ಪೂರ್ತಿಸಾವಂದ್ನೆಗ್. ಹೇ, ಕ್ರೂರ ಸಮಾಜೊನೇ, ನನ ಆಂಟ್ಲಾ ಕಣ್ಣ್ ಬುಲಾದ್ ತೂಲಾ.


**ತುಳುವೆರ್ ಅವಶ್ಯ ಓದರೆತ್ತಿ ಪುಸ್ತಕಳು**

| | | | | | | | |
|---|---|---|---|---|---|---|---|
| ಕೃಷ್ಣಸಂಧಾನ | ೦ | ೮ | ೦ | ಕಾನಿಗೆ | ೦ | ೪ | ೦ |
| ಮಿತ್ಯನಾರಾಯಣ ಕತೆ | ೦ | ೮ | ೦ | ಅಳಿಯಸಂತಾನ ಕಟ್ಟ್‌ದ ಗುಟ್ಟು | ೦ | ೪ | ೦ |
| ಜನಮರ್ಲ್ | ೦ | ೬ | ೦ | ಮದ್‌ಪಾಳತ್ತ್ ಮುನ್ನಾಯಿ | ೦ | ೨ | ೦ |
| ಸತೀ ಕಮಲೆ | ೦ | ೬ | ೦ | ತುಳು ವ್ಯಾಕರಣ | ೦ | ೮ | ೦ |

ಎಸ್. ಯು. ಪಣಿಯಾಡಿ, ತುಳುವ ಸಾಹಿತ್ಯಮಾಲೆ, ಉಡುಪಿ

# ಚುಟುಕೊಲು

(ಈ ಚುಟುಕೊಲೆ ವ್ಯವಸಾಯೊನ್, ಮೈಸೂರುದಂಚಿದ 'ರಾಜರತ್ನ'ರ್ ಕನ್ನಡೊಡ್ ಮಲ್ತ್‌ದಿನಿ; ಆಕ್‌ಲೆ ಕೈಡ್ದ್ ಎಂಕ್ಲ್ ತುಳುಟ್ ಮಲ್ಪಿರ ಕಲ್ತ್‌ದಿನಿ.)

೧

ಇಂದು ಬರ್ಸ ಕಾಲೊ
ಕಪ್ಪೆಲೆ ಹರ್ಷ ಕಾಲೊ
ಟೊರಂ ಟೊರಂ
ಡೊರಂ ಡೊರಂ
ಕೇಣ್ಲ ಕಪ್ಪೆಲೆ ಕೋಲೊ

೨

ಎಂಕ್ಲೆ ನೆರೆತ್ತ ಸೂಪಿ
ಹೋಟ್ಲ್‌ಡ್ ಪರ್ದ್ ಕಾಪಿ
ಕಾಸ್ ಕೊರಂದೆ
ನೋಸೊ ಮಲ್ತ್‌ದ್
ದೀಡ್ಯೆ ನೆಲ್ಲ ಟೋಪಿ

೩

ಛಳಿ! ಛಳಿ! ಛಳಿ!
ಎಂಚಿ ಹಾಳ್ ಛಳಿ
ಸಮ್ಮಲೆ ಉಂಜೊಳಿ
ಕೊರಿ ಕಂಬೊಳಿ
ತಡೆ-ವಂತಿ ಛಳಿ

೪

ಸೆಕೆ! ಸೆಕೆ! ಸೆಕೆ!
ತಡೆವರಾವಂತಿ ಸೆಕೆ
ಬಜಿ ಮೈಟ್
ಕುಲ್ಲುಂಟ್ಲ
ಏರ್ ತಡೆವೆ ಬೇಂಕೆ

೫

ಕಳ್ಳಿ ಕಟ್ಯೆ ಮೂಟೆ
ಬಡಕ್ಯೆ ಗುಡ್ಡೆ ಕೋಟೆ
ನೆಲ್ಲ ಉಂತ್‌ದ್
ಸಿಳ್ಳ್ ಪಾಡ್‌ದ್
ಬೊಟ್ಯೆ ತಾಟೆ! ತಾಟೆ!

೬

ರಸಪುರಿ ಕುಕ್ಕು
ತಿಕ್ಕ್‌ಂಟೆ ಕಸತ್ತ್ ಮುಕ್ಕು
ಆಣೆಗೊಂಜಿ
ಸಿಂಜು ಬಂಜಿ
ಸಿಂದ್‌ಂಟೆ ಒಂಜಿ ಕುಕ್ಕು

# ಬೊಲ್ಪು

ಬರೆತಿನಾಯೆ:
**ಕೆ. ಕೃಷ್ಣ ಶೆಟ್ಟಿ**

ಹಿಂದೂದೇಶದ ನೇಲ್ಯ ಬೊಲ್ಪು ।
ಗಾಂಧಿಮಹಾತ್ಮೆರತ್ತೆಯೆ ॥ ೧ ॥
ಆತ್ ಮಲ್ಲ ಬೊಲ್ಪುಗೇರ್ ।
ಎಣ್ಣೆ ಪದಗಯಿನಾರ್‌ಯೆ ॥ ೨ ॥
ಧೀರ ಆರ್ಯ ಪುರುಷೆ ಆರ್ ।
ವೀರ ಪಂಡಿತನೆಹರುಯೆ ॥ ೩ ॥
ಬೊಲ್ಪು ತೂವರೆಗಾದ್ ಜಾಬು ।
ಪ್ರಾಣತ್ಯಾಗ ಮಲ್ತೆಯೆ ॥ ೪ ॥
ಚಿತ್ತರಂಜನ ದಾಸೆ ಸಯಿತೆರ್ ।
ಆವ್ವೆ ಬೊಲ್ಪುಡು ಇತ್ತ್‌ಡ್ ॥ ೫ ॥
ಇತ್ತ್‌ಲರೆನಾ ಪೊರ್ಲ್ಯ ಪುದರ್ ।
ಮೆರೆವುಂಡೇತ್ ಲೋಕೊಡು ॥ ೬ ॥
ಬತ್ತ್‌ಲಾದ್ ಕತ್ತಲೇಡ್ ಉಂತುದೀ ।
ನಮ ಅಪ್ಪೆಗ್ ॥ ೭ ॥
ಕುಂಟು ತುತ್ತ್‌ದ್ ಕೈಟ್ ಪತ್ತ್‌ದ್ ।
ಅಲೆಸ್ ಬೊಲುಪುಗು ಕನಕಂಗ್ ॥ ೮ ॥
ಹಿಂದುಮುಸಲ್ಮಾನ ಬಂಧುಲೆ ಬಲ್ಲೆ ।
ಪೋಯಿಯೆ ದೇವದಡಿಕ್ ॥ ೯ ॥
ಅಪ್ಪೆಸೇವೆನ್ ಮಲ್ಪುಗೆ ।
ಸ್ವರ್ಗಸುಖೊನು ಪಡೆಪರ್ ॥ ೧೦ ॥

**The Canara Banking Corporation Udipi Ltd.**
(Incorporated in British India)
Estd 1906
Member:- RESERVE BANK OF INDIA.

| | | | |
|---|---|---|---|
| Subscribed Capital | Rs. 3,50,000 | 0 | 0 |
| Paid up Capital | Rs 2,88,950 | 0 | 0 |
| Reserves | Rs 3,63,073 | 5 | 5 |
| Deposits | Rs 37,22,794 | 9 | 5 |

Total Resour

A NN
Branch of the
opened at METTUPA

ಉಡುಪಿ ಗುರುವಾರ, ತಾ ೨೯

## ಗ್ರಾಮ ಜೀವನ ಪುನರ್ಘಟನೆ

ಮದ್ರಾಸ್ ಯುನಿವರ್ಸಿಟಿಯ
ಕಾಸ ಲರಾದ ದಿವಾನ್‌ಬಹದೂರ್
ಇ ರಂಗನಾದನರು ಕೊಯಮುತ
ಕೃಷಿಕಾ ಲೇಜಿನ ವರ್ಧಂತ್ಯುತ್ಸವ
ಕ್ಷರಾಗಿ ಭಾಷಣಮಾಡುವಾಗ ಕಾ
ಮಂತ್ರಿಗಳು ಮದ್ರಾಸ್ ಪ್ರಾಂತ
ಗಳ ಪರಿಸ್ಥಿತಿಯ ಕೂಲಂಕಷವಾದ
ನಡಿಸಿ ಹಳ್ಳಿ ಜೀವನದ ಪುನರ್ಘ
ಪಾಯಗಳನ್ನು ಕಂಡುಕೊಳ್ಳಬೆ
ಆಗ್ರಹದಿಂದ ವಿನಂತಿಯನ್ನು ಮಾ
ಡಿರುವರು. ಈ ವರೆಗೆ ಸರಕಾರವು
ರುವ ಯಾವ ಕೆಲಸವಾದರೂ
ಪರಿಸ್ಥಿತಿಯನ್ನು ಸುಧಾರಿಸಿರುವುದಿ
ಳ್ಳಿಗರ ಕ್ಷೇಮವನ್ನು ಸ್ವಲ್ಪವಾದರ
ಧಿಸಿರುವುದಿಲ್ಲ. ಇಂದೀಗ ಹಳ್ಳಿಗ
ಸ್ಥಿತಿಯು ಅತ್ಯಂತ ಕೆಟ್ಟುಹೋಗಿದೆ
ದರಿಂದ ಈಗ ಎಲ್ಲಕ್ಕಿಂತಲೂ ಮ
ಗ್ರಾಮ ಸಂಘಟನೆಯ ಸಮಸ್ಯೆಯ
ಯಶಸ್ವಿಯಾಗಿ ನಡಿಸಲು ವ್ಯಾ
ದೊಂದು, ಯೋಜನೆಯನ್ನು ಕೈ
ವುದು ಅತ್ಯಾವಶ್ಯಕವೆಂದೇ ಮಿ
ದನರ ಅಭಿಮತ

### ಹಳ್ಳಿಶಾಲೆಗಳ ಏಕ್ಸ್ ಹೇಗಿರಬೇಕು?

ಇದಕ್ಕಾಗಿ ಅವರು ಕೆಲವು ಅ
ಸೂಚನೆಗಳನ್ನಿತ್ತಿರುವರು. ಇನ್ನು
ದೆ ಶಿಕ್ಷಣದಲ್ಲಿ ಗ್ರಾಮ ಸಂಘಟನೆ
ಜೋದ್ಧಾರ ವಿಷಯವೇ ಪ್ರಧಾನ
ಕು ಹಿಂದೀ ಹಳ್ಳಿಗಳ ಜೀವಾಳ
ಆದುದರಿಂದ ಹಳ್ಳಿಹಳ್ಳಿಗಳಲ್ಲಿ ಅ
ಷಿ ಶಾಲೆಗಳೂ ಕೃಷಿ ಪ್ರಯೋಗ
ಗಳೂ ಸ್ಥಾಪಿಸಲ್ಪಡಬೇಕು ಹಳ್ಳಿ
ರುವ ಪ್ರಾಥಮಿಕ ಶಾಲೆಗಳು ಕೃಷಿ ಸಂ
ಬಂಧವಾಗಿ ವಿಶೇಷ ಲಕ್ಷ್ಯ ಕೊಡಬೇಕು.
ಈಗಣ ಶಿಕ್ಷಣದ ಅತಿ ದೊಡ್ಡದಾದೊಂ
ದು ಕೊರತೆಯೆಂದರೆ ಅದು ಜನತೆಯ
ಜೀವನದಲ್ಲಿ ಬೇರುಗೊಂಡಿಲ್ಲ, ಅವರ ಅವ

ಶಿಕ್ಷಣ, ಫೋರಿಸ್ಟ್ ಮತ್ತು ಕೋಪರೇಟಿವ್
ಡಿಪಾರ್ಟುಮೆಂಟುಗಳು ಒಂದುಗೂಡಿ ಕೆ
ಲಸ ಮಾಡಬೇಕು ಇತರ ಅನಧಿಕಾರಿ
ಸಂಸ್ಥೆಗಳೂ ಇವುಗಳೊಂದಿಗೆ ಸೇರಿ ನಡೆ
ಯಬೇಕು ಹೀಗೆ ಸರಕಾರದ ಎಲ್ಲಾ ಖಾ

ತೆಗಳೂ ಒಂದುಗೂಡಿ ಗ್ರಾಮೋನ್ನತಿಗಾಗಿ
ಪ್ರಯತ್ನಿಸುವ ಏರ್ಪಾಡು ಪಂಜಾಬಿನಲ್ಲಿ
ನಡೆದಿದೆ.

### ಕೃಷಿ ಇಲಾಖಾ ಇನ್ಸ್‌ಪೆಕ್ಟರ ರೇನು ಮಾಡಬೇಕು?

ಹುಡುಗರು ಶಾಲೆಬಿಟ್ಟ ಮೇಲೆ ತಾವು
ಪಡೆದ ಶಿಕ್ಷಣವನ್ನು ಸದುಪಯೋಗ
ಮಾಡುವಂತೆ ತಕ್ಕ ಏರ್ಪಾಡು

ಪರಿಸ್ಥಿತಿಯಲ್ಲಿ, ರಸ್ತೆ, ಬಾವಿ, ಕೆರೆ ಮೊದ
ಲಾದ ಹಳ್ಳಿಯ ಅನುಕೂಲತೆಯನ್ನು
ಹೆಚ್ಚಿಸುವುದಕ್ಕಿಂತಲೂ ಪ್ರಮುಖ್ಯವಾ
ದುದೇನೆಂದರೆ ಹಳ್ಳಿಯ ಒಕ್ಕಲಿಗನ ಜೀವನ
ದಲ್ಲಿ ಒಂದಿಷ್ಟು ಬೆಳಕನ್ನುಂಟುಮಾಡು
ವುದು. ನಿರಾಶೆಯಲ್ಲಿ ಮುಳುಗಿಹೋಗಿ

ರುವ ಅವನಲ್ಲಿ ಜೀವನದ ಯಾವ ಉತ್ಸಾಹ
ವಾಗಲಿ, ಶಕ್ತಿಯಾಗಲಿ ಇರುವುದಿಲ್ಲ, ಅವ
ನಲ್ಲಿ ಆಶೋತ್ಸಾಹವನ್ನುಂಟುಮಾಡಬೇಕು.
ಸೌಹಾರ್ದದ ವರದಹಸ್ತದಿಂದ ಅವನನ್ನು
ಮೇಲಕ್ಕೆತ್ತಿ ಅವನು ಸ್ವಾಭಿಮಾನ ತಳೆದು
ಮಾನವನಾಗಿ ಜೀವಿಸುವಂತೆ ಮಾಡಬೇ
ಕು ಇದಕ್ಕಿಂತ ದೊಡ್ಡ ಮಾನವ ಸೇವೆ
ಇನ್ನೇನು? ಎಂದೇ ಮಿ. ರಂಗನಾಥರ ಮತ

ತರಾಗಿರುವರು ಇದೇ ತಾ ೩೦ಕ್ಕೆ ಎಸೆಂಬ್ಲಿ ಅಧಿ
ವೇಶನವು ನಡೆಯಲಿರುವುದು. ಮುಖ್ಯ ಮಂತ್ರಿಗಳು
ಬಜೆಟಿನ ಸಂಬಂಧವಾಗಿ ಪ್ರತಿದಿನವೂ ತನ್ನ ಸಹವ್ಯ
ವಸಾಯಿಗಳೊಡನೆ ಮಾತಾಡುತ್ತಿರುವರು. ಸಮಯ
ದ ಅಭಾವದಿಂದ ಈ ಸಲ ಕಾಂಗ್ರೆಸಿನ ಕಾರ್ಯಕ್ರ
ಮವನ್ನು ಸರಿಯಾಗಿ ಕಾರ್ಯರೂಪಕ್ಕೆ ತರುವಂತೆ
ಬಜೆಟನ್ನು ತಯಾರಿಸಲು ಸಾಧ್ಯವಾಗಿರುವುದಿಲ್ಲ



# ತುಳುದೇಶ ವರ್ಣನೆ (ವೃತ್ತೊ)

ಲೇಖಕೆ.— ಬಿ. ಶ್ರೀನಿವಾಸ ಭಟ್ಟ್, ಸಾಹಿತ್ಯ ಶಿರೋಮಣಿ

(ನಮುಸೆಗಾದ್)

ಆ ರಾಜಗೇಳ್ ಬಾಳ್ದ್ |
ಪುತ್ಯೆರ್ ಪುಟ್ಟ್ಯೆರಾನಿ ಬೊಕೆಯೆರ್ ||
ಆಲ್ವೆರೊ ಯೇಳ್ ದ್ವೀಪನಿ |
ಪಾಂಟ್ವೆರೆಗ್ ಯೇಳ್ ಕಡಲುಳೆನಿ ಯೆಂತಿತ್ತೆರ್ || ೩೧ ||

ಮಲ್ಲಾಯೆ ವಿಶ್ವಭೋಜೇ |
ಯೆರಡನೆ ಸಿರಿದೇವ ಭೋಜೆ ರಾಮ್ಬೋಜಗ್ ||
ಸಿರಿ ವಾಸುದೇವ ಭೋಜೇ |
ಮೂಜನೆ ಸಿರಿಕೃಷ್ಣ ಭೋಜೆ ನಾಲೆನಯೇ || ೩೨ ||

ಸಿರಿವಿಷ್ಣು ಭೋಜೆಲ್ಯೆನನೆ |
ವಾಮನಭೋಜೇ ಸನಾಜೆನಾಯಾಯೇ ||
ವಿಕ್ರಮಭೋಜೇ ಯೇಳನೆ |
ಮಾಂತೆರ್ ಶೂರೆರ್ ಪೊಡುಳೆರ್ ಗುಣವಂತೆರ್ || ೩೩ ||

ರಾಮಭೋಜೆ ಸ್ವರ್ಗಗಾನಿ ಪೋನಗಾ |
ದಾನೆ ಕೊರ್ತ್ ಭೂಮಿ ಮಾಂತ ಬಾರ್ಣೆಗ್ ||
ಪ್ರೇಮಡಾಯೆ ಪಾಲ್‌ಮಾಂತ್ ದೀಯೆಗೇ |
ಪಲ್ಲಿ ಪಾಲ್ ಕೊರ್ತಿ ವಿಶ್ವಭೋಜಗೇ || ೩೪ ||

ಕತ್ತಯೊಂಚನೆಂಪ್ಪಗೈಸ್ ತೌಳವಾ |
ದೇಶವುಂದೆ ಯೇಳ್‌ಪಾಲ್ದ್ ಮಲ್ತೊವೂ ||
ಯೆಂಕು ಮಾಂತೆರೆಗ್ಲ ಸೋಜು ಪೊರ್ಲುಡೂ |
ಪುಣ್ಯದೆ ಶ ಪುಣ್ಯಭೂಮಿ ಪೊರ್ಲುದೋ || ೩೫ ||

ಶ್ರೀರಾಮಭೋಜ ಕುಲಜೆರ್ ತುಳುರಾಜೆರೆಂದ್ |
ತೋಳಾರೆರೆಂದ್ ತುಳುದೇಶದ ರಾಯೆರೆಂದ್ ||
ಪ್ರಖ್ಯಾತೆರಾದ್ ಸನೊಟೊಳ್ಯೆರ್ ದೇಶನುಂದೆನ್ |
ಯೆಳ್ಪತ್ತೆರಡ್ನ ಜನೊಕುಳ್ ಕುಲೊಟ್ಟೆಟ್ ರಾಜೆರ್ || ೩೬ ||

ರಮಣಿನೊಳೆತ್ ಮೂಜಿ ಕಣ್ಣ್‌ದಾ ದೇವೆರಾನೇ |
ತಿರ್‌ಗ್‌ತ್ ಸುವೆರೆಂದ್‌ತ್ ಬಾಣೊದಾ ಕೇರ್‌ಯೇರ್ದ್ ||
ಪಿದಡ್‌ದ್ ತಿರುಗೊಂತೂ ಪಡ್ಡೆಗುಡ್ಡೆಳೆ ಪುಲ್ದ್ |
ಕುಶಲ್‌ಡ್ ಮೃಗಪಕ್ಸಿಳ್ ಪೊಣ್ಣುಕೆನ್ ಕೂಡೊಂದ್
ಸಾಯೈರ್ || ೩೭ ||

ಅವ್ವೇನ್ ಸೂತು ಮನಸುತ್ ತ್ರಿಶೂಲಪಾಣಿ |
ಗೌರೀನ್ ಕೂಡ್ದು ರಮಿತೇರಪನಾಕ್ಕೆ ರೇತಸ್ ||
ಬೈನೇಪ್ಪಿ ಮಲ್ಲ ಮರಕೊಟ್ಟೆಡ್ ಬೂಳುತ್ತೈಟ್ |
ಮೂಜ್ಕಣ್ಣ ನಾಲ್‌ಕಯಿತೋ ಪುಟ್ಟನಬ್ಬ! ಬಾಲೇ || ೩೮ ||

ಕದಂಬ ವೃಕ್ಷೊಂಟು ಜನಿತ್ತಿ ಬಾಲೆಗ್ |
ಕದಂಬೆಯೆಂದ್‌ತ್ ಪುದರಿಜ್ಜಿತಾಕುಳ್ ||
ಸುಮಂಗಳಾಶೀರ್ವಚನೊಂಕ್ಕು ಪಂಡ್‌ತ್ |
ಕದಂಬಗೀರಾಜ್ಯ ಕೊಳುತ್ತು ಪೋಯೆರ್ || ೩೯ ||

ಆ ದೇವಪುತ್ರೆ ವರಧರ್ಮೊಡು ದೇಶನುಂದೆನ್ |
ಆಳೊಂತುಯಿಪ್ಪಿ ಸಮಯೊಡ್ ತುಳುದೇಶವೊಂಜೇ ||
ಸ್ವರ್ಗೊತ್ಲ ಮಿತ್ತ್ ಸುಖಭಾಗ್ಯ ಸುಭೋಗಯಿತ್ತ್ |
ಯೆಂದೆರ್ ಲೋಕಜನೊಕುಳ್ ಮಿತಿದಾಂತಿ ಸೌಖ್ಯೊಡ್
|| ೪೦ ||

**The Canara Banking Corporation Udipi Ltd.**
(Incorporated in British India)
Estd 1906
Member:- RESERVE BANK OF INDIA.

| | | | |
|---|---|---|---|
| Subscribed Capital | Rs 3,50,000 | 0 | 0 |
| Paid up Capital | Rs 2,88,950 | 0 | 0 |
| Reserves | Rs 3,63,073 | 5 | 5 |
| Deposits | Rs 37,22,794 | 9 | 5 |

Total Resour

A NN

Branch of the
opened at METTUPA

ಉಡುಪಿ ಗುರುವಾರ, ತಾ ೨೯-

## ಗ್ರಾಮ ಜೀವನ ಪುನರ್ಘಟನೆ

ಮದ್ರಾಸ್ ಯುನಿವರ್ಸಿಟಿಯ ಚಾನ್ಸಲರಾದ ದಿವಾನ್ ಬಹದೂರ್ ಇ ರಂಗನಾಥನರು ಕೊಯಮುತ್ ಕೃಷಿಕಾ ಲೇಜಿನ ವರ್ಧಂತ್ಯುತ್ಸವ ಕ್ಕಾಗಿ ಭಾಷಣಮಾಡುವಾಗ ಕಾ ಮಂತ್ರಿಗಳು ಮದ್ರಾಸ್ ಪ್ರಾಂತ ಗಳ ಪರಿಸ್ಥಿತಿಯ ಕೂಲಂಕಷವಾದ ನಡಿಸಿ ಹಳ್ಳಿ ಜೀವನದ ಪುನರ್ಘ ಪಾಯಗಳನ್ನು ಕಂಡುಕೊಳ್ಳಬೆ ಆಗ್ರಹದಿಂದ ವಿನಂತಿಯನ್ನು ಮಾ ಡಿರುವರು. ಈ ವರೆಗೆ ಸರಕಾರವು ರುವ ಯಾವ ಕೆಲಸವಾದರೂ ಪರಿಸ್ಥಿತಿಯನ್ನು ಸುಧಾರಿಸಿರುವುದಿ ಳ್ಳಿಗರ ಕ್ಷೇಮವನ್ನು ಸ್ವಲ್ಪವಾದರ ದಿಸಿರುವುದಿಲ್ಲ. ಇಂದೀಗ ಹಳ್ಳಿಗ ಸ್ಥಿತಿಯು ಅತ್ಯಂತ ಕೆಟ್ಟುಹೋಗಿದೆ ದರಿಂದ ಈಗ ಎಲ್ಲಕ್ಕಿಂತಲೂ ಮೊ ಗ್ರಾಮ ಸಂಘಟನೆಯ ಸಮಸ್ಯೆಯ ಯಶಸ್ವಿಯಾಗಿ ನಡಿಸಲು ವ್ಯಾ ದೊಂದು, ಯೋಜನೆಯನ್ನು ಕೈ ವುದು ಅತ್ಯಾವಶ್ಯಕವೆಂದೇ ಮಿ ಥನರ ಅಭಿಮತ

### ಹಳ್ಳಿಶಾಲೆಗಳ ಏರ್ಪಾ ಹೇಗಿರಬೇಕು?

ಇದಕ್ಕಾಗಿ ಅವರು ಕೆಲವು ಅ ಸೂಚನೆಗಳನ್ನಿತ್ತಿರುವರು. ಇನ್ನು ದೆ ಶಿಕ್ಷಣದಲ್ಲಿ ಗ್ರಾಮ ಸಂಘಟನೆ ಜೋದ್ಧಾರ ವಿಷಯವೇ ಪ್ರಧಾ ಕು. ಹಿಂದೀ ಹಳ್ಳಿಗಳ ಜೀವಾಳ ಆದುದರಿಂದ ಹಳ್ಳಿಹಳ್ಳಿಗಳಲ್ಲಿ ಅ ಷಿ ಶಾಲೆಗಳೂ ಕೃಷಿ ಪ್ರಯೋಗ ಗಳೂ ಸ್ಥಾಪಿಸಲ್ಪಡಬೇಕು ಹಳ್ಳಿ ರುವ ಪ್ರಾಥಮಿಕ ಶಾಲೆಗಳು ಕೃಷಿ ಸಂ ಬಂಧವಾಗಿ ವಿಶೇಷ ಲಕ್ಷ್ಯ ಕೊಡಬೇಕು. ಈಗಣ ಶಿಕ್ಷಣದ ಅತಿ ದೊಡ್ಡದಾದೊಂ ದು ಕೊರತೆಯೆಂದರೆ ಅದು ಜನತೆಯ ಜೀವನದಲ್ಲಿ ಬೇರುಗೊಂಡಿಲ್ಲ, ಅವರ ಅವ

ಶಿಕ್ಷಣ, ಫೋರೆಸ್ಟ್ ಮತ್ತು ಕೋಪರೇಟಿವ್ ಡಿಪಾರ್ಟುಮೆಂಟುಗಳು ಒಂದುಗೂಡಿ ಕೆ ಲಸ ಮಾಡಬೇಕು ಇತರ ಅನಧಿಕಾರಿ ಸಂಸ್ಥೆಗಳೂ ಇವುಗಳೊಂದಿಗೆ ಸೇರಿ ನಡೆ ಯಬೇಕು ಹೀಗೆ ಸರಕಾರದ ಎಲ್ಲಾ ಖಾ ತೆಗಳೂ ಒಂದುಗೂಡಿ ಗ್ರಾಮೋನ್ನತಿಗಾಗಿ ಪ್ರಯತ್ನಿಸುವ ಏರ್ಪಾಡು ಪಂಜಾಬಿನಲ್ಲಿ ನಡೆದಿದೆ.

### ಕೃಷಿ ಇಲಾಖಾ ಇನ್ಸ್‌ಪೆಕ್ಟರ ರೇನು ಮಾಡಬೇಕು?

ಹುಡುಗರು ಶಾಲೆಬಿಟ್ಟ ಮೇಲೆ ತಾವು ಪಡೆದ ಶಿಕ್ಷಣವನ್ನು ಸದುಪಯೋಗ ಮಾಡುವಂತೆ ತಕ್ಕ ಏರ್ಪಾಡು

ಪರಿಸ್ಥಿತಿಯಲ್ಲಿ, ರಸ್ತೆ, ಬಾವಿ, ಕೆರೆ ಮೊದ ಲಾದ ಹಳ್ಳಿಯ ಅನುಕೂಲತೆಯನ್ನು ಹೆಚ್ಚಿಸುವುದಕ್ಕಿಂತಲೂ ಪ್ರಾಮುಖ್ಯವಾ ದುದೇಂದರೆ ಹಳ್ಳಿಯ ಒಕ್ಕಲಿಗನ ಜೀವನ ದಲ್ಲಿ ಒಂದಿಷ್ಟು ಬೆಳಕನ್ನುಂಟುಮಾಡು ವುದು. ನಿರಾಶೆಯಲ್ಲಿ ಮುಳುಗಿಹೋಗಿ ರುವ ಅವನಲ್ಲಿ ಜೀವನದ ಯಾವ ಉತ್ಸಾಹ ವಾಗಲಿ, ಶಕ್ತಿಯಾಗಲಿ ಇರುವುದಿಲ್ಲ; ಅವ ನಲ್ಲಿ ಆಶೋತ್ಸಾಹವನ್ನುಂಟುಮಾಡಬೇಕು. ಸೌಹಾರ್ದದ ವರದಹಸ್ತದಿಂದ ಅವನನ್ನು ಮೇಲಕ್ಕೆತ್ತಿ ಅವನು ಸ್ವಾಭಿಮಾನ ತಳೆದು ಮಾನವನಾಗಿ ಜೀವಿಸುವಂತೆ ಮಾಡಬೇ ಕು ಇದಕ್ಕಿಂತ ದೊಡ್ಡ ಮಾನವ ಸೇವೆ ಇನ್ನೇನು? ಎಂದೇ ಮಿ. ರಂಗನಾಥರ ಮತ

ತಲಾಗಿರುವವು ಇದೇ ತಾ ೩೦ಕ್ಕೆ ಎಸೆಂಬ್ಲಿ ಅಧಿ ವೇಶನವು ನಡೆಯಲಿರುವುದು. ಮುಖ್ಯ ಮಂತ್ರಿಗಳು ಬಜೆಟಿನ ಸಂಬಂಧವಾಗಿ ಪ್ರತಿದಿನವೂ ತನ್ನ ಸಹವ್ಯ ವಸಾಯಿಗಳೊಡನೆ ಮಾತಾಡುತ್ತಿರುವರು. ಸಮಯ ದ ಅಭಾವದಿಂದ ಈ ಸಲ ಕಾಂಗ್ರೆಸಿನ ಕಾರ್ಯಕ್ರ ಮವನ್ನು ಸರಿಯಾಗಿ ಕಾರ್ಯರೂಪಕ್ಕೆ ತರುವಂತೆ ಬಜೆಟನ್ನು ತಯಾರಿಸಲು ಸಾಧ್ಯವಾಗಿರುವುದಿಲ್ಲ

---



# ತುಳುದೇಶ ವರ್ಣನೆ (ವೃತ್ತೊ)

ಲೇಖಕೆ:— ಬಿ. ಶ್ರೀನಿವಾಸ ಭಟ್ಟ, ಸಾಹಿತ್ಯ ಶಿರೋಮಣಿ

(ನಮುನೆಗಾದ್)

ಆ ರಾಜಗೇಳ್ ಬಾಳ್ಯ |
ಪುಟ್ಯೆರ್ ಪುಟ್ರಾಯೆರಾನಿ ಬೊಳೆಯೆರ್ ||
ಅಳ್ವೆರೊ ಯೇಳ್ ದ್ವೀಪನಿ |
ಪಾಂಟ್ವೆರೊ ಯೇಳ್ ಕಡಲುಳೆನಿ ಯೆಂತಿತ್ತೆರ್ || ೩೧ ||

ಮಲ್ಲಾಯೆ ವಿಶ್ವಭೋಜೇ |
ಯೆರಡನೆ ಸಿರಿದೇವ ಭೋಜೆ ರಾಜ್ಯೋಚಗ್ ||
ಸಿರಿ ವಾಸುದೇವ ಭೋಜೇ |
ಮೂಜನೆ ಸಿರಿಕೃಷ್ಣ ಭೋಜೆ ನಾಲೆನೆಯೇ || ೩೨ ||

ಸಿರಿವಿಷ್ಣು ಭೋಜೆಲ್ಪೆನನೆ |
ವಾಮನಭೋಜೇ ಸಿನಾಜೆನಾಯಾಯೇ ||
ವಿಕ್ರಮಭೋಜೇ ಯೇಳನೆ |
ಮಾಂತೆರ್ ಪೂರೆರ್ ಪೊರುಳೆರ್ ಗುಣವಂತೆರ್ || ೩೩ ||

ರಾಮಭೋಜೆ ಸ್ವರ್ಗಗಾನಿ ಪೋನಗಾ |
ರಾಮೆ ಕೊಲಿ ಭೂಮಿ ಮಾಂತ ಬಾಳೆಗ್ಗೇ ||
ಪ್ರೇಮಡಾಯೆ ಪಾಲ್ ಮಾಂತ್ ದೀಯೆಗೇ |
ಪುಲ್ಲೆ ಪಾಲ್ ಕೊಳ್ತೆ ವಿಶ್ವಭೋಜಗೇ || ೩೪ ||

ಕತ್ತಯೋಂಚನೆಂಪ್ನಗೈನ್ ತೌಳವಾ |
ದೇಶವುಂಡೆ ಯೆಂಚಾ ಪಾಲ್ದ ಮಲ್ಲೊವು ||
ಯೆಂಕ್ ಪೂಂತೆರೆಗ್ಲ ಸೋಜು ಪೊರ್ಲುಡೂ |
ಪುಣ್ಯದೇಶ ಪುಣ್ಯಭೂಮಿ ಪೊರ್ಲುದೋ || ೩೫ ||

ಶ್ರೀರಾಮಭೋಜ ಕುಲಜೆರ್ ತುಳುರಾಜೆರೆಂದ್ |
ಕೋಳಾರೆರೆಂದ್ ತುಳುದೇಶದ ರಾಯೆರೆಂದ್ ||
ಪ್ರಖ್ಯಾತೆರಾದ್ ಸಮೊಟೊಳ್ಯೆರ್ ದೇಶನುಂದೆನ್ |
ಯೆಳ್ಪತ್ತರಡ್ಡ ಜನೊಕುಳ್ ಕುಲೊಟ್ಟೆಟ್ ರಾಜೆರ್ || ೩೬ ||

ರಮಣಿನೊಳೆತ್ ಮೂಜಿ ಕಣ್ಣ್‌ದಾ ದೇವೆರಾಸೇ |
ತಿರ್ಗ್‌ತ್ ಸುವೆರೆಂದ್‌ತ್ ಬಾಣೊದಾ ಕೇರ್ ಯೇದ್ಗೇ ||
ಪಿದಡ್‌ದ್ ತಿರುಗೊಂತೂ ಪಡ್ಡೆಗುಡ್ಡೆಳೆ ಸಾಲ್ಡೇ |
ಕುಶಲ್‌ಡ್ ಮೃಗಪಕ್ಷ್ಯುಳ್ ಪೊಣ್ಣುಳೆನ್ ಕೂಡ್ಗೊ
ಸಾಯ್ಯೆರ್ || ೩೭ ||

ಅವ್ವೇನ್ ಸೂತು ಮನಸಾತ್ ತ್ರಿಶೂಲಪಾಣಿ |
ಗೌರೀನ್ ಕೂಡ್ದು ರಮಿತೇರಪನಾಕ್ಯೆ ರೇಶನ್ ||
ಬೈನೇಪ್ಪಿ ಮಲ್ಲ ಮರತೊಟ್ಟೆಡ್ ಬೂಳುತ್ತೈಟ್ |
ಮೂಕ್ಕಣ್ಣ ನಾಲ್‌ಕಯಿತೋ ಪುಟ್ಟನಬ್ಬ! ಬಾಲೇ || ೩೮ ||

ಕದಂಬ ವೃಕ್ಷೊಂಟು ಜನಿತ್ತಿ ಬಾಲೆಗ್ |
ಕದಂಬೆಯೆಂದ್‌ತ್ ಪುದರಿಜ್ಜಿತಾಕುಳ್ ||
ಸುಮಂಗಳಾಶೀರ್ವಚನೊಂಕ್ಯ ಪಂಡ್‌ತ್ |
ಕದಂಬಗೀರಾಜ್ಯ ಕೊಳುತ್ತು ಪೋಯೆರ್ || ೩೯ ||

ಆ ದೇವಪುತ್ರೆ ವರಧರ್ಮೊಡು ದೇಶನುಂದೆನ್ |
ಆಳೊಂತುಯಿಪ್ಪಿ ಸಮಯೊಡ್ ತುಳುದೇಶವೊಂಜೇ ||
ಸ್ವರ್ಗೊತ್ತ ಮಿತ್ತ್ ಸುಖಭಾಗ್ಯ ಸುಭೋಗಯಿತ್ತ್ಯೋ |
ಯೆಂದೆರ್ ಲೋಕಜನೊಕುಳ್ ಮಿತಿದಾಂತಿ ಸೌಖ್ಯೊಡ್
|| ೪೦ ||

## ಸ್ವದೇಶ | ಉಸಿರುಕಟ್ಟಿ ಇಡೀ ಕುಟುಂಬ ನಾಶ, ಮದ್ರಾಸ್ ಮಂತ್ರಿಮಂಡಲ, ನಡುಹಗಲಲ್ಲಿ ದರೋಡೆ, ಜಪ್ತಿಯಾದ ಜಮೀನು, ಉತ್ತರ ಚೀನದ ಪರಿಸ್ಥಿತಿ, ಬಾರ್ಸೆಲೋನದ ಮೇಲೆ ವಿಮಾನ ಧಾಳಿ. | ವಿದೇಶ

ಇಂಟರಿಮ್ ಮಂತ್ರಿಗಳು ತಯಾರಿಸಿರುವ ಬಜೆಟನ್ನು ಆದಷ್ಟು ಬದಲಾವಣೆ ಮಾಡಲು ಪ್ರಯತ್ನ ನಡೆಯುತ್ತಿದೆ. ರಾಜಕೀಯ ಕೈದಿಗಳ ಬಿಡುಗಡೆಯ ವಿಷಯವನ್ನು ಕಾಂಗ್ರೆಸ್ ಮಂತ್ರಿಗಳು ಪರಿಶೀಲಿಸುತ್ತಿದ್ದಾರೆ. ಆ ಕುರಿತು ಗಾಂಧಿಜಿಯವರ ಅಭಿಪ್ರಾಯ ಕೇಳಲು ಪಬ್ಲಿಸಿಟಿ ಮಂತ್ರಿಗಳಾದ ಶ್ರೀ ಎಸ್. ರಮಾನಾಥನರು ವಾರ್ಧಾಕ್ಕೆ ತೆರಳಿದ್ದಾರೆ. ಶಿಕ್ಷಣ ಮಂತ್ರಿಗಳಾದ ಡಾಕ್ಟರ್ ಸುಬ್ಬರಾಯನರು, ಇಂಗ್ಲೆಂಡಿನೊಡನೆ ವ್ಯಾಪಾರ ಸಂಬಂಧದ ಕುರಿತು ವಿಚಾರಿಸುವ ಹಿಂದೀ ಸರಕಾರದ ಪರವಾದ ಕಮಿಟಿಯ ಮೆಂಬರರಾಗಿ ಇಂಗ್ಲೆಂಡಿಗೆ ತೆರಳಿದ್ದು, ಶ್ರೀ ರಾಜಗೋಪಾಲಾಚಾರ್ಯರ ಅನುಜ್ಞೆಯಂತೆ ಆ ಕಮಿಟಿ ಮೆಂಬರಿಕೆಗೆ ರಾಜಿನಾಮೆಕೊಟ್ಟು ವಿಮಾನ ಮೂಲಕ ಇದೇ ತಾ ೩೦ಕ್ಕೆ ಹಿಂದೂದೇಶಕ್ಕೆ ಬರಲಿರುವರು.

### ನಡುಹಗಲಲ್ಲಿ ದರೋಡೆ

ಇದೇ ತಾ. ೨೦ರಲ್ಲು ಬಂಗಾಳದ ಡಕ್ಕಾ ಪಟ್ಟಣದ ಅವನೀನಾಥ ದಾಸನೆಂಬ ಚಿನ್ನದ ವ್ಯಾಪಾರಿಯು ರೂ. ೧೫,೦೦೦ ಬೆಲೆಯ ೪೦೦ ತೊಲೆ ಚಿನ್ನದ ಕೊರಡು ಮತ್ತು ೧೧೦೦ ತೊಲೆ ಬೆಳ್ಳಿಯನ್ನು ಹಿಡಕೊಂಡು ಮನೆಗೆ ಬರುತ್ತಿದ್ದಾಗ ೪ ಬಂಗಾಳಿ ತರುಣರು ಸೈಕ್ಲಿನಲ್ಲಿ ಹಿಂದಿನಿಂದ ಬಂದು ಅವನನ್ನು ಹಿಡಿದು ಕರಿಯಿಂದ ತಿವಿದು ಹಾಕುವ ಬೆದರಿಕೆ ಬೀರಿ ಅವನ ಕೈಯಲ್ಲಿದ್ದ ಚಿನ್ನವನ್ನು ಕಸಕೊಂಡರು. ಆಗ ಅವನೀನಾಥ ದಾಸನು ಬೊಬ್ಬೆ ಹಾಕಲು ದಾರಿಯಲ್ಲಿ ಹೋಗುತ್ತಿದ್ದವರು ಓಡಿ ಬಂದು ಇಬ್ಬರು ತರುಣರನ್ನು ಹಿಡಿದರು. ಉಳಿದಿಬ್ಬರು ಚಿನ್ನ ಹಿಡಕೊಂಡು ತಪ್ಪಿಸಿಕೊಂಡು ಹೋದರು. ಈ ಕುರಿತು ಹಲವು ಮನೆಗಳ ಜಡ್ತಿಯಾಗಿ ಕೆಲಮಂದಿ ಕೈದು ಮಾಡಲ್ಪಟ್ಟಿರುವರು. ಆದರೆ ಚಿನ್ನ ಸಿಗಲಿಲ್ಲ.

### ಜಪ್ತಿಯಾದ ಜಮೀನು ಹಿಂದೆ ಕೊಡಲ್ಪಡುವುದು

ಜಮೀನುಗಳೆಲ್ಲಾ ಹಿಂದೆ ಕೊಡಲ್ಪಡುವವು. ರೆವಿನ್ಯೂ ಖಾತೆಯ ಮಂತ್ರಿಗಳು, ೧೯೩೦ನೇ ಇಸ್ವಿಯಲ್ಲಿ ಗುಜರಾಥಿನ ಬಾರ್ಡೋಲಿ ಮೊದಲಾದ ಸ್ಥಳಗಳಲ್ಲಿ ಸರಕಾರವು ಜಪ್ತಿ ನೀಲಾಮು ಮಾಡಿದ್ದ ಸಾವಿರಾರು ಎಕ್ರೆ ಜಮೀನನ್ನು ಹಿಂದೆ ಕೊಡುವ ಕುರಿತು ವರದಿಯನ್ನು ತಯಾರಿಸಬೇಕೆಂದು ಅಲ್ಲಿಯ ಕಮಿಶನರರಿಗೆ ತಿಳಿಸಿರುವರು. ಸದ್ರಿ ಜಮೀನುಗಳನ್ನು ಏಲಮಿನಲ್ಲಿ ವಹಿಸಿಕೊಂಡವರಿಂದ ಅವರು ತೆಗೆದುಕೊಂಡ ಕ್ರಯಕ್ಕೇನೇ ಹಿಂದೆ ಪಡೆದು ಆಯಾಯ ಮಾಲಕರಿಗೆ ಅದನ್ನು ಕೊಡಲಾಗುವುದು. ಕರ್ನಾಟಕದ ಅಂಕೋಲೆಯೇ ಮೊದಲಾದ ಸ್ಥಳಗಳಲ್ಲಿ ಜಪ್ತಿಯಾದ ಜಮೀನು ಕೂಡಾ ಇದೇ ರೀತಿ ಹಿಂದೆ ಕೊಡಲ್ಪಡುವುದೆಂದೂ, ಆ ವಿಷಯದಲ್ಲಿಯೂ ಅಲ್ಲಿಯ ಕಲೆಕ್ಟರರಿಂದ ವರದಿಯನ್ನು ಕೇಳಲಾಗಿದೆಯೆಂದೂ ತಿಳಿದು ಬರುತ್ತದೆ.

---

## ವಿದೇಶ

### ಉತ್ತರ ಚೀನದ ಪರಿಸ್ಥಿತಿ

ಜಪಾನಿನಿಂದ ಬಂದ ವರ್ತಮಾನದ ಮೇರೆಗೆ ಉತ್ತರ ಚೀನದ ಅಧಿಕಾರಿಗಳು ಜಪಾನರ ಶರ್ತ ಕೈಕೊಳ್ಳಿರುವರೆಂದು ತಿಳಿದು ಬರುತ್ತದೆ. ಈ ಪ್ರಕಾರ ಜಾಪಾನರಿಗೆ ಅಹಿತವೆಂದು ತೋರುವ ಅಧಿಕಾರಿಗಳನ್ನೆಲ್ಲಾ ತೆಗೆದು ಹಾಕಿ ಜಾಪಾನಿನ ವಿರೋಧವಾದ ಚಳವಳಿವು ನಿಲ್ಲಿಸಲ್ಪಡುವುದು. ಚೀನೀಯರ ಶಾಲೆಗಳ ಪಾಠಪುಸ್ತಕಗಳನ್ನು ಜಪಾನರು ಮೊದಲು ಪರೀಕ್ಷಿಸಿಕೊಳ್ಳತಕ್ಕದ್ದು.

ಆದರೆ ಚೀನದ ನಾನ್ಕಿಂಗ್ ಸರಕಾರಕ್ಕೆ ಈ ರಾಜಿಯ ಸಂಗತಿಯೇನೂ ತಿಳಿದಿರುವುದಿಲ್ಲ. ಅದು ಸೇನೆಯನ್ನು ಸಿದ್ಧ ಮಾಡುತ್ತಿರುವುದು. ಮೇಲಿನ ಶರ್ತಗಳಿಗೆ ನಾನ್ಕಿಂಗ್ ಸರಕಾರವು ಒಪ್ಪುವ ಹಾಗಿಲ್ಲ. ಚೀನದ ಕೋಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲಾ ಕೊಲೇಜು ಬಿಟ್ಟು ಸೈನಿಕರ ತರಬೇತಿ ಹೊಂದುತ್ತಿರುವರು. ಅವರಿಗೆ ೨ ತಿಂಗಳ ಸೈನಿಕ ತರಬೇತಿಯಾಯಲು ಅಲ್ಲಲ್ಲಿ ಕೇಂದ್ರಗಳು ತೆರೆಯಲ್ಪಟ್ಟಿರುವವು. 'ಸಿದ್ಧರಾಗಿರಿ' ಎಂಬುದೇ ಪ್ರತಿಯೊಬ್ಬರ ಪಲ್ಲವಿಯಾಗಿದೆ. ಪ್ರತಿಯೊಂದು ದೊಡ್ಡ ದೊಡ್ಡ ಪಟ್ಟಣಗಳು ಸೇನಾ ತರಬೇತಿಯ ಶಿಬಿರಗಳಾಗಿ ಹೋಗಿವೆ. ಹೈಸ್ಕೂಲುಗಳ ವಿದ್ಯಾರ್ಥಿಗಳಿಗೂ ಸೈನಿಕ ತರಬೇತಿ ಕೊಡಲಾಗುತ್ತದೆ. ವಿದ್ಯಾರ್ಥಿನಿಯರು ಹೆಚ್ಚಾಗಿ ಪ್ರಥಮಚಿಕಿತ್ಸೆ ಮತ್ತು ನರ್ಸಿಂಗಿನಲ್ಲಿ ತರಬೇತಿ ಹೊಂದುತ್ತಿದ್ದಾರೆ.

ಮಿಯುಜಾಕಿ ಎಂಬ ಜಾಪಾನ ಕಲಾಸಿಯೊಬ್ಬನು ಶಿಂಘಾಯಿಯಿಂದ ವಿಚಿತ್ರವಾಗಿ ಕಣ್ಮರೆಯಾಗಿದ್ದವನು. ಅವನನ್ನು ಯಾರೋ ಒಯ್ದಿರುವರು. ಇದರಿಂದಾಗಿ ಜಪಾನು ಎಂತಹ ಪ್ರತೀಕಾರ ಮಾಡುವುದೋ ಎಂದು ಶಿಂಘಾಯಿಯ ಜನರೆಲ್ಲಾ ದಿಗಿಲುಗೊಂಡಿದ್ದಾರೆ. ಇದೇ ತಾ ೨೫ರಲ್ಲು ಟಾಪೆಯಿ ಪಟ್ಟಣಕ್ಕೆ ಜಪಾನ್ ಸೈನಿಕರು ಬಂದಾಗ ದಿಗಿಲುಗೊಂಡು ೨೦ಸಾವಿರ ಜನರು ಅಂತರ ರಾಷ್ಟ್ರೀಯ ನಿವಾಸಕ್ಕೆ ಹೋಗಿ ಆಶ್ರಯ ಪಡೆದರು.

ಚೀನದ ೩೭ನೇ ಪಟ್ಲಾಮ್ ವಾಂಗ್‌ಪಿಂಗಿನಿಂದ ಹಿಂತೆಗೆಯಲ್ಪಟ್ಟರೂ ಕೆಲಮಂದಿ ಸೈನಿಕರು ಸೇನಾನಾಯಕನ ಅನುಜ್ಞೆ ಮೀರಿ ತಾವು ಹಿಂದೆಹೋಗಲಾರೆವೆಂದು ಹಠ ಹಿಡಿದು ನಿಂತಿರುವರು. ಜಪಾನರು ಇವರನ್ನು ಬಲಾತ್ಕಾರದಿಂದ ತಳ್ಳಿಹಾಕಬಹುದೆಂಬುದರಿಂದ ಉತ್ತರ ಚೀನದಲ್ಲಿ ತೀವ್ರ ಕ್ಷೋಭೆಯುಂಟಾಗಿರುವುದು. ಉತ್ತರ ಚೀನದ ಅಧಿಕಾರಿಗಳು ಜಪಾನರೊಡನೆ ಯಾವ ಒಪ್ಪಂದ ಮಾಡಿರುವರೆಂದು ತಿಳಿಯಲು ನಾನ್ಕಿಂಗ್ ಸರಕಾರದ ಪ್ರೆಸಿಡೆಂಟರು ದೂತನೊಬ್ಬನನ್ನು ಉತ್ತರಕ್ಕೆ ಕಳುಹಿಸಿರುವರು.

ಸ್ಪೈನಿನ ತಾಟಸ್ಥ್ಯದ ಪ್ರಶ್ನೆಯು ಇನ್ನೂ ಯಾವ ಇತ್ಯರ್ಥಕ್ಕೂ ಬಂದಿರುವುದಿಲ್ಲ. ಇಂಗ್ಲೆಂಡಿನ ಸೂಚನೆಗಳಿಗೆ ಇಟೆಲಿಯು ಆಕ್ಷೇಪಿಸುವುದು. ಸ್ಪೈನಿನಲ್ಲಿರುವ ವಿದೇಶೀ ವಲಂಟೀಯರೆಲ್ಲಾ ಹಿಂದೆ ಕರೆಯಲ್ಪಡಬೇಕೆಂಬ ವಿಷಯದಲ್ಲಿ ಇಟೆಲಿಗೆ ಸಮ್ಮತಿಯಿಲ್ಲ. ಇಂಗ್ಲೆಂಡು ಇನ್ನೂ ರಾಜಿಯ ಪ್ರಯತ್ನ ಮಾಡುತ್ತಿರುವುದು.

### ಬಾರ್ಸೆಲೋನದ ಮೇಲೆ ವಿಮಾನಧಾಳಿ

ಇದೇ ತಾ ೨೫ನೇ ರಾತ್ರಿ ಸ್ವಚ್ಛ ಬೆಳ್ದಿಂಗಳಲ್ಲಿ ಬಂಡಾಯಗಾರರ ಕಡೆಯ ೫ ವಿಮಾನಗಳು ಬಾರ್ಸೆಲೋನ ಪಟ್ಟಣದ ಮೇಲೆ ಹಾರಿ ಪಟ್ಟಣದ ನಡುವೆ ಸುಮಾರು ೧೦ ಬಾಂಬುಗಳನ್ನೆಸೆದುವು. ಇದರಿಂದಾಗಿ ೬೫ ಮಂದಿ ಕೊಲ್ಲಲ್ಪಟ್ಟು ೧೫೦ ಮಂದಿ ಗಾಯಗೊಂಡಿರುವರು.

---

### ಉಡುಪಿ

ಕಲ್ಕತ್ತೆಯ ಭಾರತ ಸೇವಾ ಸಂಘದ ಸ್ವಾಮಿ ಅದ್ವೈತಾನಂದಜೀಯವರು ಮತ್ತು ಅವರ ಸಂಗಡಿಗರು ಕಳೆದ ಸೋಮವಾರ ಸಂಜೆ ಇಲ್ಲಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಭಜನೆ, ಅವರ ಗುರುವಾದ ಸ್ವಾಮಿ ಪ್ರಣಯಾನಂದಜೀಯವರ ಭಾವಚಿತ್ರದ ಪೂಜಾದಿಗಳನ್ನು ನಡೆಸಿದರು. ಜನವೃಂದವು ಕಿಕ್ಕಿರಿದಿತ್ತು. ಸ್ವಾಮಿ ಅದ್ವೈತಾನಂದರು ದೀನಸನ್ಯಾಸಿಗಳಾದ ತಾವು ಉಡುಪಿಯವರ ಆದರ ಸತ್ಕಾರಕ್ಕೆ ತುಂಬಾ ಋಣಿಗಳಾಗಿದ್ದೇವೆಂದು ಹೇಳಿ, ಆತ್ಮಜಾಗೃತಿ ಎಂಬ ಕುರಿತು ಜೋರಾದ ಭಾಷಣವಿತ್ತರು. ಶ್ರೀ ಕೊಚ್ಚಿಕಾರ ಪದ್ಮನಾಭ ಪೈಗಳು ಸ್ವಾಮಿ ಅದ್ವೈತಾನಂದಜೀಯವರಿಗೆ ವಂದನೆಯನ್ನಿತ್ತರು.

ಅತ್ಯುತ್ತಮ ಪೇನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ
'ಕುಶಾ' (ರಿಜಿಸ್ಟರ್ಡ್) ಫೌಂಟನ ಪೇನಿನ 'ಶಾಯಿ'
'ಕುಶಾ' (ರಿಜಿಸ್ಟರ್ಡ್) ಚೆಲೊ ಸುವಾಸನೆಯ 'ಪ್ರಮೋದ'
ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ
*Sole disributtors:*—V V Kamath & Bros, Mangalore

### ಉಡುಪಿ ತಾಲೂಕಿನ ಮಹಾಜನರಲ್ಲಿ ವಿನಂತಿ

ಆಗೋಸ್ತು ೧ನೇ ತಾರೀಕು ಕಾಂಗ್ರೆಸಿನ ಇತಿಹಾಸದಲ್ಲಿ ಅತಿ ವಿಶೇಷವಾದೊಂದು ದಿನ. ೧೭ ವರ್ಷಗಳ ಮೊದಲು ಹಿಂದುಸ್ಥಾನದ ಸ್ವಾಭಿಮಾನಹಾಗೂ ಸ್ವತಂತ್ರ ಪೂರ್ಣವಾದ ರಾಜಕೀಯ ಆಂದೋಲನದ ಜನಕರಾದ ಲೋಕಮಾನ್ಯ ತಿಲಕರು ಸ್ವರ್ಗಸ್ಥರಾದುದು ಆಗೋಸ್ತು ತಾ ೧ರಲ್ಲು. ಅಖಿಲಭಾರತವನ್ನೇ ಹೊಡೆದೆಬ್ಬಿಸಿ ಕಾಂಗ್ರೆಸನ್ನು ಸಾಮುದಾಯಿಕ ಚಳವಳದ ವಾಹನವಾಗಿ ಮಾಡಿದ ಅಸಹಕಾರ ಚಳವಳವನ್ನು ಯುಗಪುರುಷರಾದ ಮಹಾತ್ಮಾ ಗಾಂಧೀಜೀಯವರು ಆರಂಭಿಸಿದುದು ಆಗೋಸ್ತು ತಾ ೧ರಲ್ಲು. ಇಂದೀಗ ಮಹಾತ್ಮಾ ಗಾಂಧೀಜೀಯವರ ಉಪದೇಶದಂತೆ ಕಾಂಗ್ರೆಸು ಹೊಸಪ್ರಯೋಗವೊಂದನ್ನು ಕೈಕೊಂಡು ಅಧಿಕಾರ ಸ್ವೀಕರಿಸಿದ ದಿನವನ್ನು ಆಚರಿಸಬೇಕೆಂದು ರಾಷ್ಟ್ರಪತಿ ಪಂಡಿತ ಜವಾಹಿರಲಾಲರು ಅಪ್ಪಣೆಯಿಸಿರುವುದು. ಆಗೋಸ್ತು ತಾ ೧ನ್ನು ಆದುದರಿಂದ ಉಡುಪಿ ತಾಲೂಕಿನಲ್ಲಿ ಹಳ್ಳಿ ಹಳ್ಳಿಗಳಲ್ಲಿ ಈ ದಿನವು ಧ್ವಜವಂದನೆ, ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳ ಮೂಲಕ ಆಚರಿಸಬೇಕೆಂದು ವಿನಂತಿ.

### ಉಡುಪಿಯ ಕಾರ್ಯಕ್ರಮ

ಸಂಜೆ ಘಂಟೆ ೪ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಧ್ವಜವಂದನೆ ಮಾಡಿ ಮೆರವಣಿಗೆಹೊರಟು ಪಟ್ಟಣದ ಸುತ್ತ ಬಂದು ಪುನಃ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಂಜೆ ೫ ಘಂಟೆಗೆ ಡಾಕ್ಟರ್ ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯುವುದು. ಉಡುಪಿಯ ನಿವಾಸಿಗಳೆಲ್ಲರೂ ಈ ಕಾರ್ಯದಲ್ಲಿ ಉತ್ಸಾಹದಿಂದ ಭಾಗಿಗಳಾಗಬೇಕಾಗಿ ಕೇಳಿಕೊಳ್ಳುತ್ತೇನೆ.

ಪಾಂಗಾಳ ಮಂಜುನಾಥ ನಾಯಕ್,
ಅಧ್ಯಕ್ಷ, ಉಡುಪಿ ತಾಲೋಕು ಕಾಂಗ್ರೆಸ್ ಕಮಿಟಿ

### ಮಂಗಳೂರು

#### ರಾಷ್ಟ್ರಪತಿಗಳ ಸಂದೇಶ

#### ತಾ. 1—8—37ರ ಸಮಾರಂಭ.

ಕಾಂಗ್ರೆಸಿನವರು ಮಂತ್ರಿ ಪದವಿಗಳನ್ನು ಸ್ವೀಕರಿಸಿದ ಧೋರಣೆಯನ್ನು ಮಹಾಜನರು ಸರಿಯಾಗಿ ತಿಳಿಯುವಂತೆ ಮಾಡುವುದು ಅಗತ್ಯವೆಂಬುದರಿಂದ ತಾ ೧—೮ ೩೭ನೇ ದಿನವನ್ನು ಈ ಬಗ್ಗೆ ಅಖಿಲ ಭಾರತ ದಿನವನ್ನಾಗಿ ಆಚರಿಸಬೇಕಾಗಿ ಪಂಡಿತ ಜವಾಹರಲಾಲರ ಸಂದೇಶವು ಬಂದಿರುತ್ತದೆ. ಅಂದಿನ ಕಾರ್ಯಕ್ರಮವು ಈ ಕೆಳಗಿನಂತಿದೆ

೧ ರಾಷ್ಟ್ರಧ್ವಜವಂದನೆ ಬೆಳಿಗ್ಗೆ ಘಂಟೆ ೮ಕ್ಕೆ
೨ ಸಾಯಂಕಾಲ ಸಾರ್ವಜನಿಕ ಸಭೆ

(i) ಸಭೆಯಲ್ಲಿ ಜುಲಾಯಿ ೭ರಲ್ಲಿ ವಾರ್ಧಾದಲ್ಲಿ ವರ್ಕಿಂಗ್ ಕಮಿಟಿಯಲ್ಲಿ ಮಂಜೂರಾದ ನಿರ್ಣಯವನ್ನು ಓದಿ ವಿವರಿಸುವುದು

(ii) ಕಾಂಗ್ರೆಸಿನ ಸಂಪೂರ್ಣ ಸ್ವಾತಂತ್ರ್ಯದ ಉದ್ದೇಶವನ್ನು ಪುನಃ ದೃಢೀಕರಿಸುವುದು.

ಜಿಲ್ಲೆಯಲ್ಲಿಯ ಎಲ್ಲಾ ಪಟ್ಟಣ ಹಾಗೂ ಗ್ರಾಮಗಳಲ್ಲಿ ಈ ಕಾರ್ಯಕ್ರಮವನ್ನು ಆಚರಿಸಬೇಕಾಗಿ ಎಲ್ಲಾ ಕಾಂಗ್ರೆಸ್ ಕಮಿಟಿಗಳಿಗೂ ಮಹಾಜನರಿಗೂ ಈ ಮೂಲಕ ವಿನಂತಿ

ಹಿ ರಾಮರಾಯ ಮಲ್ಯ

THE UDIPI BANK LTD.
UDIPI
ALL KINDS OF BANKING BUSINESS TRANSACTED
PERSONAL ATTENTION PAID TO ALL ENQUIRIES
ESTD. 1925

# ದಕ್ಷಿಣ ಕನ್ನಡ

## ಬೆಳ್ಳಾರೆ

ಇಲ್ಲಿ ಶ್ರೀ ಅಗಲ್ಪಾಡಿ ದೇವಣ್ಣ ಶೆಟ್ಟರ ಮನೆಯಲ್ಲಿ ಕಾಂಗ್ರೆಸು ಸಭೆಯು ಜರಗಿತು ಶ್ರೀ। ಮಂಗಲ್ಪಾಡಿ ಸೀತಾರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ನಮ್ಮ ಜಿಲ್ಲೆಯವರಾದ ಶ್ರೀ। ಡಾಕ್ಟರ್ ರಾಮರಾಯರು ಕೌನ್ಸಿಲ್ ಅಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ಆರ್. ಕಾರಂತ ಎ. ಬಿ. ಶೆಟ್ಟಿ, ಸಿ. ಜಿ. ವಾಕಿಲ್, ಇವರುಗಳು ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿದಕ್ಕೆ ಅಭಿನಂದನಗಳನ್ನು ಸಮರ್ಪಿಸುವ ಸೂಚನೆಯು ಮಾನ್ಯವಾಯಿತು. ತಾಲೂಕು ಕಾಂಗ್ರೆಸು ಕಮಿಟಿಗೆ, ಶ್ರೀಗಳಾದ ಮಂಗಲ್ಪಾಡಿ ಸೀತಾರಾಮಯ್ಯ, ಅಗಲ್ಪಾಡಿ ದೇವಣ್ಣ ಶೆಟ್ಟಿ, ಇವರುಗಳನ್ನು ಪ್ರತಿನಿಧಿಗಳನ್ನಾಗಿ ಆರಿಸಲಾಯಿತು ಶ್ರೀ ಬಿ. ರಾಮಯ್ಯ ಶ್ಯಾನುಭಾಗರು 'ಕಾಂಗ್ರೆಸಿಗೆ ಏಕೆ ಸದಸ್ಯರಾಗಬೇಕು' ಎಂಬ ವಿಷಯವನ್ನೆತ್ತಿ ಮಹಾಜನರಿಗೆ ಬೋಧಪ್ರದವಾದ ಭಾಷಣವಿತ್ತರು. ಧನ್ಯವಾದಾರ್ಪಣೆಯ ನಂತರ ಸಭೆಯು ಮುಕ್ತಾಯವಾಯಿತು ಅತಿಥಿಗಳಿಗೆ ಒಂದು ಫಲಾಹಾರವಿದ್ದಿತು.

## ದುರ್ಗ

ಇಲ್ಲಿಯ ಪಂಚಾಯತ ಬೋರ್ಡು ಪ್ರೆಸಿಡೆಂಟನ ಚುನಾವಣೆ ಬಗ್ಗೆ ಎಲಿಮೆಂಟರಿ ಶಾಲೆಯಲ್ಲಿ ಇದೇ ತಿಂಗಳ ತಾರೀಕು ೩ರಲ್ಲಿ ಜಿಲ್ಲಾ ಪಂಚಾಯತ್ ಆಫೀಸರರ ಸಮಕ್ಷಮ ಸಭೆಸೇರಿ ಶ್ರೀಯುತ ಮಲೆಬೆಟ್ಟು ಸೀತಾರಾಮಭಟ್ಟರು ಪ್ರೆಸಿಡೆಂಟರಾಗಿಯೂ ಶ್ರೀಯುತ ಕೆಳ್ಬೈರ ನಾಹಾರ್ಲ್ ಅನಂತರಾಮ ಭಟ್ಟರು ವೈಸ್‌ಪ್ರೆಸಿಡೆಂಟರಾಗಿಯೂ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು. ಇದ್ರ ಅನಂತರಾಮ ಭಟ್ಟರು ಗುಣವಂತರೂ ಪರೋಪಕಾರಿಗಳೂ ಗ್ರಾಮ ಸೇವೆಯಲ್ಲಿ ಪ್ರೀತಿವುಳ್ಳವರೂ ಆಗಿರುವರು. ಇನ್ನು ಮೇಲಾದರೂ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಒಂದೇ ಬುದ್ಧಿಯಿಂದ ಮೆಂಬರರ ಮನಸ್ಸಿಗೆ ವಿರೋಧವಾಗದಂತೆ ಇದೇ ಗ್ರಾಮದ ಯೋಗಕ್ಷೇಮವನ್ನು ನೋಡಿ ಗ್ರಾಮ ಉದ್ಧಾರವನ್ನು ಮಾಡಿ ಕೀರ್ತಿಗೆ ಪಾತ್ರರಾಗಲೆಂದು ಹಾರೈಸುವ ಗ್ರಾಮಸ್ಥರಲ್ಲೊಬ್ಬ.

## ನಿಟ್ಟೆ

ಮುಲ್ಕಿ ಶಂಕರನಾರಾಯಣ ಸಾಮಗರು ಹಲವು ದಿನಗಳಿಂದ ಇಲ್ಲಿ ತಮ್ಮ ಆಧ್ಯಾತ್ಮಿಕ ರೀತಿಯ ಹರಿಕಥೆಗಳನ್ನು ಮಾಡುತ್ತಿದ್ದಾರೆ. ಹೊಸ ಹೊಸ ಭಾವನೆಗಳು ಜನರಲ್ಲಿ ನೆಲೆಗೊಳ್ಳುವಂತೆ ಮಾಡುವ ಇವರ ಹರಿಕೀರ್ತನೆಗಳನ್ನು ಜನರು ಮೆಚ್ಚಿ ಪ್ರೋತ್ಸಾಹಿಸುತ್ತಿರುವುದು ಸ್ತುತ್ಯ.

## ಕಾರ್ಕಳ

ಇಲ್ಲಿ ಸಾಧಾರಣ ೫-೬ ತಿಂಗಳುಗಳ ಲಾಗಾಯ್ತು ದಿನಂಪ್ರತಿ ಎಂಬಂತೆ ಅಲ್ಲಲ್ಲಿ ಚಿಕ್ಕ ಚಿಕ್ಕ ಕಳವುಗಳು ನಡೆಯುತ್ತಲಿವೆ. ಹೀಗಿರುವಲ್ಲಿ ಸಂಬಂಧಪಟ್ಟವರು ಇತ್ತ ನಿಗಾ ಕೊಡದೆ ಇದ್ದಲ್ಲಿ ನಿವಾಸಿಕರಿಗೆ ತುಂಬಾ ಅಪಾಯಕರ.

ಬರುವ ಜಿಲ್ಲಾ ಬೋರ್ಡು ಚುನಾವಣೆಗೆ ನಮ್ಮ ಹಿರಿಯಡ್ಕ ಸರ್ಕಲಿನಿಂದ ಶ್ರೀಯುತ ಬಿ. ಗೋಪಾಲಕೃಷ್ಣ ಹೆಗ್ಡೆಯವರು ಸ್ವತಂತ್ರವಾಗಿ ನಿಲ್ಲಲಿರುವರೆಂದು ತಿಳಿಯಬರುತ್ತದೆ.

## ಬಾರಕೂರು

ಇಲ್ಲಿಯ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಭೆಯು ತಾ. ೨೫-೭-೩೭ರಲ್ಲಿ ಜರಗಿತು. ಈ ಕೆಳಗಣ ಠರಾವುಗಳೆಲ್ಲಾ ಸರ್ವಾನುಮತದಿಂದ ಸ್ವೀಕರಿಸಲಾಯಿತು. (1)ಮದ್ರಾಸು ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಈ ಸಭೆಯು ತನ್ನ ವಿಶ್ವಾಸವನ್ನು ಸೂಚಿಸುತ್ತದೆ. (2)ಶ್ರೀಯುತ ಡಾ. ಟಿ. ಎಸ್. ಎಸ್. ರಾಜನವರನ್ನು ಪುನಃ ರಾಜಕೀಯ ರಂಗಕ್ಕೆ ಪ್ರವೇಶಮಾಡಿಸಿದುದಕ್ಕಾಗಿ ಶ್ರೀಯುತ ಸಿ. ರಾಜಗೋಪಾಲಾಚಾರ್ಯರವರನ್ನು ಈ ಸಭೆಯು ಅಭಿವಂದಿಸುತ್ತದೆ (3) ನಮ್ಮ ಜಿಲ್ಲೆಯವರಾದ ಶ್ರೀಯುತ ಡಾ ಯು. ರಾಮರಾಯರು ಸರ್ವಾನುಮತದಿಂದ ಕೌನ್ಸಿಲು ಅಧ್ಯಕ್ಷರಾಗಿ ಆರಿಸಲ್ಪಟ್ಟುದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆ. (4) ನಮ್ಮ ಜಿಲ್ಲಾ ಪ್ರತಿನಿಧಿಗಳಾದ ಶ್ರೀಯುತ ಎ. ಬಿ. ಶೆಟ್ಟಿ, ಕೆ. ಆರ್ ಕಾರಂತ, ಪ್ರೊ. ಸಿ. ಜಿ. ವಾಕಿಲ್, ಇವರನ್ನು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ಆರಿಸಿದುದಕ್ಕಾಗಿ ಈ ಸಭೆಯು ತನ್ನ ಸಂತೋಷವನ್ನು ಸೂಚಿಸುತ್ತದೆ.

ಇನ್ನು ಕೆಲವು ಮುಖ್ಯವಾದ ವಿಷಯಗಳನ್ನು ಚರ್ಚಿಸಿ ಸಭೆಯನ್ನು ಅಂತ್ಯಮಾಡಲಾಯಿತು.

## ರಾಯಚೂರಲ್ಲಿ

### ನಿಖಿಲ ಕರ್ನಾಟಕ ಆಯುರ್ವೇದ ಮಹಾಮಂಡಲದ ೧ನೇ ಅಧಿವೇಶನ.

### ಕಾರ್ಯನಿರ್ವಹಿಗಳು

ನಿನ್ನೆ ಇಲ್ಲಿಯ ಸ್ಥಾನಿಕ ವೈದ್ಯರ ಮತ್ತು ನಾಗರಿಕರ ಸಭೆ ಸೇರಿತ್ತು. ಆಯುರ್ವೇದ ಮಹಾಮಂಡಲದ ೧ನೇ ಅಧಿವೇಶನವನ್ನು ಈ ಊರಲ್ಲಿ ಕೂಡಿಸುವ ನಿಮಿತ್ತ ಇಲ್ಲಿ ಪೂರ್ವಸಿದ್ಧತೆಯನ್ನು ಮಾಡುವುದಕ್ಕೋಸ್ಕರ ಕಾರ್ಯಕಾರಿ ಮಂಡಳವೊಂದು ಸ್ಥಾಪಿತವಾಯಿತು. ಶ್ರೀ. ವಿಟ್ಠಲ ಪ್ರಸಾದ ವೈದ್ಯ ಹಾಗೂ ಶ್ರೀ। ರಾಮಾಚಾರ್ಯ ಆರಳೀಕಟ್ಟಿ ಇವರ ಸೂಚನೆಯ ಮೇರೆಗೆ, ಪ್ರತಿಯೊಬ್ಬ ವೈದ್ಯರು ಮತ್ತು ನಾಗರಿಕರು ಈ ಅಧಿವೇಶನಕ್ಕಾಗಿ ಐದೈದು ರೂಪಾಯಿಗಳನ್ನು ಸಂತೋಷದಿಂದ ಕೊಡಲೊಪ್ಪಿದರು. ಹೀಗೆ ಜಮೆ ಆಗಿರುವ ಹಣವು ರೂ. ೩೩೫ ಆಗುವದೆಂದು ತಿಳಿದುಬಂದಿದೆ. ಕಾರ್ಯಕೌಶಲರು ಆದ ಶ್ರೀ. ಪಿ. ಕಿಶನ್ ರಾಯರ ಪ್ರಯತ್ನದಿಂದ ಅಧಿಕಾರಿಯಾಗು ವ್ಯಾಪಾರಿ ವರ್ಗದವರಿಬ್ಬರೂ ಮುಂದೆ ಬಂದು, ಈ ಅಧಿವೇಶನಕ್ಕೆ ಬೇಕಾದ ಜನ, ಧನ ಸಹಾಯಗಳೆಲ್ಲವನ್ನೂ ದೊರಕಿಸಿಕೊಡಬಹುದೆಂದು ಜನತೆಯಲ್ಲಿ ಬಲವಾದ ನಂಬಿಗೆಯು ಕಂಡುಬರುವಂತೆ ತೋರುವದು.

ಕಾರ್ಯಕಾರೀ ಮಂಡಲದ ಮೆಂಬರರು ಮತ್ತು ಕಾರ್ಯನಿರ್ವಾಹಕರು.

(೧) ಡಾ। ಭಗೀರಥ ರಾವ್ ದೇಶಪಾಂಡೆ, ಅಧ್ಯಕ್ಷ (ಕಾರ್ಯಕಾರಿ ಮಂಡಲಿ) (೨) ವೈದ್ಯ ವಿಠಲ ಪ್ರಸಾದ, ಉಪಾಧ್ಯಕ್ಷ (೩) ಡಾ। ರಾಮಕೃಷ್ಣ, ಕಾರ್ಯದರ್ಶಿ (೪) ಡಾ। ಅಗ್ನಿಹೋತ್ರಿ, ಸಹಾಯಕ ಕಾರ್ಯದರ್ಶಿ (೫) ಶ್ರೀ ಗೋವಿಂದ ರಾವ್, ಸರಾಫ್ ಕೋಶಾಧ್ಯಕ್ಷ (೬) ವೈದ್ಯಗೋವಿಂದಾಚಾರ್ಯ, ಮೆಂಬರ್ (೭) ವೈದ್ಯ ರಾಮಾಚಾರ್ಯ ಆರಳೀಕಟ್ಟಿ (೮) ಪಂಡಿತ ಬುದ್ಧಿ ಪ್ರಸಾದ ವೈದ್ಯ (೯) ವೈದ್ಯ ನಾರಾಯಣಸಿಂಗ್ (೧೦) ಡಾ। ಭೀಮರಾವ್‌ಯಡವನೂರು (೧೧) ಶ್ರೀ। ಪದ್ಮರಾಜ ಹರದರ (೧೨) ಡಾ। ಗಣೇಶಲಾಲ.

---

(೭ನೇ ಪೇಜಿನಿಂದ ಮುಂದರಿಸುದು)

ಗೌರವದ ನೌಕರರಿಂದ ಎಷ್ಟೋ ಕೆಲಸವಾಗಿರುವುದು. ಈಗ ಮಾತ್ರ ಸಾಧ್ಯವಿಲ್ಲವೇ? ಗೌರವಕ್ಕಾಗಿ ಕಾಂಗ್ರೆಸಿಗೆ ಸೇರಿ ಸುಮ್ಮನಿರುವವರು ನಮಗೆ ಬೇಕಾಗಿಲ್ಲ. ನನ್ನ ಅಭಿಪ್ರಾಯ ಪ್ರಕಾರ, ಏನೂ ಕೆಲಸ ಮಾಡದ ಗೌರವದ ಪ್ರೆಸಿಡೆಂಟರಿಗಿಂತ, ಒಳ್ಳೇ ಉತ್ಸಾಹದಿಂದ ಕೆಲಸ ಮಾಡುವ ವಲಂಟೀಯರ್ ಶೀನಶೆಟ್ರು ಪ್ರೆಸಿಡೆಂಟರಾಗುವುದು ಮೇಲು" ಎಂದು ಹೇಳುವಾಗ ಸಭೆಯಲ್ಲಿ ಕೆಲವು ಮಂದಿ, 'ಹಿಂತೆಗೆಯಿರಿ! ಹಿಂತೆಗೆಯಿರಿ!!!' ಎಂದು ಬೊಬ್ಬೆಹಾಕಿದರು. ಹೀಗೆ ಬೊಬ್ಬೆಹಾಕಿದವರು 43 ಮಂದಿ ಸದಸ್ಯರಲ್ಲಿ ಕೇವಲ ಹತ್ತುಹನ್ನೆರಡು ಮಂದಿ. "ನಾನು ಹೇಳಿದುದೇನೆಂದು ನಿಮಗೆ ತಿಳಿಯಲಿಲ್ಲ. ನನ್ನನ್ನು ವಿವರಿಸಬಿಡಿ" ಎಂದು ನಾನು ಕೇಳಿಕೊಂಡೆ. ಪ್ರಯೋಜನವಾಗಲಿಲ್ಲ. ಕೂಗಾಟ ನಡೆಯುತ್ತಲೇ ಇತ್ತು. ಆಗ ನಾನು "ನೀವು ಎಷ್ಟು ಬೇಕಾದರೂ ಕೂಗಿರಿ. ನಾನೆಷ್ಟಕ್ಕೂ ಹಿಂತೆಗೆಯುವದಾಗಿಲ್ಲೆಂದು" ಹೇಳಿದೆ. ಮತ್ತೂ ಕೂಗುನಿಲ್ಲಲಿಲ್ಲ. "ನಾನು ಹೇಳಿದ ಮಾತಿನವಿಷಯದಲ್ಲಿ ಬೇಕಾದರೆ ಬಹುಪಕ್ಷದ ಅಭಿಪ್ರಾಯ ತೆಗೆಯುವ. ನೀವು ಕೂಗಿದಾಕ್ಷಣ ನಾನೇನೂ ತಲ್ಲಣಿಸುವುದಿಲ್ಲೆಂ"ದು ಹೇಳಿದೆ. ಇದು ಓಟು ತೆಗೆಯುವ ವಿಷಯವಲ್ಲೆಂದು ಒಬ್ಬರೆಂದರು. ಸಭೆ ಮುಂದುವರಿಸಿರೆಂದು ಇನ್ನೊಬ್ಬರೆಂದರು. "ಅಧ್ಯಕ್ಷರೇ ನಿಮ್ಮ ಅಭಿಪ್ರಾಯ ಕೊಡಿರಿ"ಎಂದು ಇನ್ನೊಬ್ಬರು ಕೂಗಿದರು. ನಾನೀ ತಮಾಷೆ ನೋಡುತ್ತಾ ದೃಢವಾಗಿನಿಂತೆ. ಇವರ ಆಟವೇನೆಂಬುದು ನನಗೆ ಗೊತ್ತೇ ಇತ್ತು. ಆಗ ಅಧ್ಯಕ್ಷರೆದ್ದು, ತನಗೇನೂ ಅಪಮಾನ ವಿಲ್ಲೆಂದು ಹೇಳಿಬಿಟ್ಟರು. ಆದರೂ ಕೂಗು ನಿಲ್ಲಲಿಲ್ಲ. ಪ್ರೆಸಿಡೆಂಟತನದ ಗೌರವವನ್ನು ಕಾಪಾಡುವ ಭಾರವನ್ನು ಪ್ರೆಸಿಡೆಂಟರಿಗಿಂತಲೂ ಹೆಚ್ಚಾಗಿ ಇವರು ಹೊತ್ತಿರುವಂತೆ ತೋರುತ್ತಿತ್ತು. ಕೂಗಿ ನನ್ನನ್ನು ಬಾಯಿ ಮುಚ್ಚಿಸುವ ದಬ್ಬಾಳಿಕೆಗೆ ಎಷ್ಟಕ್ಕೂ ಬಗ್ಗಬಾರದೆಂದೇ ನನ್ನ ನಿರ್ಧಾರವಾಗಿತ್ತು. ಆಗ ಡಾಕ್ಟರ್. ಕೆ. ವಿಠಲ ಶೆಟ್ರು ಎದ್ದು ನನ್ನನ್ನು ಹಿಂತೆಗೆಯಬೇಕೆಂದು ಕೇಳಿಕೊಂಡರು. "ಏನನ್ನು ಹಿಂತೆಗೆಯುವುದು? ನಾನೇನೂ ಅಧ್ಯಕ್ಷರಿಗೆ ಅಪಮಾನದ ಸಂಗತಿ ಹೇಳಲಿಲ್ಲೆಂದು" ನಾನು ವಾದಿಸಿದೆ. "ಹೇಗೂ ಇರಲಿ. ನಿಮ್ಮ ಮಾತಿನ ಅರ್ಥ ಹಾಗಾಗುವುದು. ನೀವು ಹಿಂತೆಗೆಯಿರಿ ಗಲಾಟೆ ಬೇಡ"ವೆಂದರು ನನ್ನ ಮಾತಿನ ಅರ್ಥ ಹಾಗಾಗುವುದಾದರೆ ಅದನ್ನು ಹಿಂತೆಗೆಯಲು ನನಗೇನೂ ಆಕ್ಷೇಪ ವಿಲ್ಲೆಂದು ನಾನು ಹೇಳಿದೆ" ಇಷ್ಟು ಹೇಳಿದುದೇ ಸಾಕಾಯಿತು ಕೂಗೆಬ್ಬಿಸಿದವರಿಗೆ. ಅವರು ಸುಮ್ಮನಾದರು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಕೃತದ ಆರ್ಥಿಕ ಪರಿಸ್ಥಿತಿಯಲ್ಲಿ ಸಂಬಳದ ನೌಕರರನ್ನು ನೇಮಿಸುವುದು ಸಾಧ್ಯವಿಲ್ಲ. ಆದುದರಿಂದ ಗೌರವದ ಕಾರ್ಯದರ್ಶಿಗಳನ್ನು 'ನೇಮಿಸಿ' ಆಫೀಸು ಕೆಲಸ ನಡಿಸಲು ತಿಂಗಳೊಂದರ ರೂ. 15ಕ್ಕೆ ಮಿಕ್ಕದ ಸಂಬಳದ ಕ್ಲಾರ್ಕನನ್ನು ನೇಮಿಸತಕ್ಕದ್ದೆಂಬುದೇ ನಾನು ತಂದ ಸೂಚನೆ ಶ್ರೀಗಳಾದ ಅಧಿಕಾರಿ ಮತ್ತು ಡಾಕ್ಟರ್ ವಿಠಲಶೆಟ್ರು ಇದನ್ನು ವಿರೋಧಿಸಿ, ಸಂಬಳದ ಕಾರ್ಯದರ್ಶಿಯೊಬ್ಬರು ಬೇಕು. ಆದರೆ ಅವರು ತಿಂಗಳಿಗೆ 20 ದಿನ ಸಂಚಾರಮಾಡಬೇಕು ತನ್ನ ಕೆಲಸದ ವರದಿಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೂ, ತಾಲೂಕು ಕಾಂಗ್ರೆಸ್ ಕಮಿಟಿಗಳಿಗೂ ಕಳುಹಿಸಬೇಕೆಂಬ ಠರಾವು ತಂದರು. ಕಡೆಗೆ ಶ್ರೀ. ಬಿ. ವೆಂಕಟ್ರಾಯ ಬಾಳಿಗರು ಅಧ್ಯಕ್ಷರ ಸಮ್ಮತಿಪಡೆದು, ಶ್ರೀ. ಕೆ. ಕೆ. ಶೆಟ್ರ ಉದ್ದೇಶವು ಈಗ ನೆರವೇರಿದಂತಾಗಿದೆ. ಆದುದರಿಂದ ಅವರು ತನ್ನ ಸೂಚನೆಯನ್ನು ಹಿಂತೆಗೆಯಬಹುದೆಂದು ಕೇಳಿಕೊಂಡರು. ಆಗ ನಾನು, "ನನಗೆ ಬೇಕಾದುದು ಕಾಂಗ್ರೆಸ್ ಕೆಲಸ ಸರಿಯಾಗಿ ನಡಿಯಬೇಕೆಂಬುದು. ಏನೂ ಕೆಲಸವಾಗುವುದಿಲ್ಲೆಂಬ ಪಶ್ಚಾತ್ತಾಪದಿಂದಲೇ ನಾನಿಷ್ಟು ಆಗ್ರಹದಿಂದ ಮಾತಾಡಲು ಕಾರಣ ಇನ್ನು ಉತ್ಸಾಹದಿಂದ ಕೆಲಸ ನಡಿಯುವಂತಾದರೆ ನನ್ನ ಠರಾವನ್ನು ಹಿಂತೆಗೆದುಕೊಳ್ಳುತ್ತೇನೆಂದು ಹೇಳಿದೆ." ಅನಂತರ ಶ್ರೀ. ಅಧಿಕಾರಿಗಳ ಠರಾವು ಮಂಜೂರಾಯಿತು.

**ಕೆ. ಕೆ. ಶೆಟ್ಟಿ**

---


# ನವಯುಗ

ಪ್ರತಿ ಗುರುವಾರ ಹೊರಡುವ ವಾರಪತ್ರಿಕೆ.

**ಚಂದಾದಾರರಿಗೆ**

**ವಾರ್ಷಿಕ ಚಂದಾ** (ಅಂಚೆ ವೆಚ್ಚ ಸಹಿತ) **ಸ್ವದೇಶ ರೂ. 3-4-0**
**ವಿದೇಶ „ 4-8-0**
**ಅರ್ಧವಾರ್ಷಿಕ- ಸ್ವದೇಶ 1-12-0, ವಿದೇಶ „ 2-8-0**

ಯಾವ ಸಂಚಿಕೆಯಿಂದಲೂ ಚಂದಾದಾರರಾಗಬಹುದು. ಚಂದಾ ಹಣವನ್ನು ಮುಂಚಿತವಾಗಿಯೇ ಕಳುಹಿಸಬೇಕು. ಅಥವಾ ವಿ. ಪಿ. ಯಿಂದ ತರಿಸಿಕೊಳ್ಳಬೇಕು. ಚಂದಾ ಅವಧಿ ಕೊನೆಗೊಳ್ಳುವ ಎರಡು ವಾರಗಳ ಮುಂಚಿತವಾಗಿ ಚಂದಾದಾರರಿಗೆ ತಿಳಿಸಲಾಗುವುದು ಪತ್ರಿಕೆ ಬೇಡವಾದವರು ನಮಗೆ ಮೊದಲೇ ತಿಳಿಸಬೇಕು. ಇಲ್ಲದಿದ್ದರೆ ಮುಂದಿನ ವರ್ಷದ ಚಂದಾ ಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳುಹಿಸಲಾಗುವುದು. ಚಂದಾದಾರರು ನಮ್ಮೊತನೆ ಪತ್ರವ್ಯವಹಾರ ಮಾಡುವಾಗ ಅವರ ಚಂದಾ ನಂಬ್ರವನ್ನು ಬರೆಯಬೇಕಾಗಿದೆ. ಇಲ್ಲನೆ ಪೂರ್ತಿ ವಿಳಾಸ ಕೊಡಬೇಕಾಗಿದೆ. ವಿಳಾಸ ಬದಲಾಗಿದ್ದರೆ ಮೊದಲಿನ ಮತ್ತು ಬದಲಾದ ವಿಳಾಸವನ್ನು ಸರಿಯಾಗಿ ಚಂದಾ ನಂಬ್ರದೊಡನೆ ಬರೆಯಬೇಕು.

**ಜಾಹೀರಾತುದಾರರಿಗೆ**

'ನವಯುಗ'ವು ಅಖಿಲ ಕರ್ನಾಟಕದಲ್ಲಿ ವಿಶಾಲವಾಗಿ ಪ್ರಚಾರದಲ್ಲಿರುವುದಲ್ಲದೆ ದೇಶ-ವಿದೇಶಗಳಿಗೂ ಹೋಗುವುದರಿಂದ ಜಾಹೀರಾತುಗಳಿಗೆ ಉತ್ತಮ ವಾಹನವಾಗಿದೆ. ಜಾಹೀರಾತುದಾರರು ¼ ಭಾಗ ಹಣವನ್ನು ಮುಂಗಡ ಕಳುಹಿಸಬೇಕು. ಒಂದೇ ಬಾರಿ ಪ್ರಕಟಣೆ ಹಾಕುವವರು ಪೂರ್ತಿ ಹಣವನ್ನು ಮುಂಗಡ ಕಳುಹಿಸಬೇಕು. ಪ್ರಕಟಣೆಯ ದರಗಳಿಗೆ ಬರೆದುಕೊಳ್ಳಿರಿ.

**ಬಾತ್ಮೀದಾರರಿಗೆ**

ಬಾತ್ಮಿಗಳು ಆದಷ್ಟು ಚುಟುಕಾಗಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಸುಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು. ಬಾತ್ಮಿಗಳು ನಮಗೆ ಮಂಗಳವಾರದ ಟಪ್ಪಾಲಲ್ಲಿ ಸಿಕ್ಕಿದರೇನೇ ಆ ವಾರದ ಸಂಚಿಕೆಯಲ್ಲಿ ಪ್ರಕಟಿಸಲು ಸಾಧ್ಯ. ದೀರ್ಘ ಬಾತ್ಮಿಗಳಿಗೆ ಎಂದೂ ಎಡೆಸಿಗಲಾರದು. ಬಾತ್ಮಿಗಳು ಸ್ವೀಕೃತ ವ ಅಸ್ವೀಕೃತ ಎಂದು ತಿಳಿಯಬಯಸುವವರು ತಕ್ಕಷ್ಟು ಅಂಚೆ ಚೀಟನ್ನು ಕಳುಹಿಸಬೇಕು.

**ಮೆನೇಜರ್, ನವಯುಗ.**

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

---

## ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

**ಅತ್ಯಧಿಕ ಬೋನಸು !**

**ಮರಣಾಂತ್ಯ ಪೋಲಿಸಿಗಳಮೇಲೆ ಸೇಕಡಾ 25,**
**ಎಂಡೋಮೆಂಟ್ ಪೋಲಿಸಿಗಳಮೇಲೆ ಸೇಕಡಾ 20,**

ಬಲವಂತ ಪೋಲಿಸಿಗಳು ರೂ. 3 ಕೋಟಿ ಮಿಕ್ಕಿವೆ.
ಮೂಲಧನವು ರೂ. 75 ಲಕ್ಷ ಮೀರಿವೆ.

**ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.**

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

**ಪಿ. ಡಿ. ಭರ್ಗೋವಾ** ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, **ಅಜ್ಮೀರ್.**

ಅಥವಾ

**ಮೆನೇಜರ್,** 278, ಲಿಂಗ ಚೆಟ್ಟಿ ಸ್ಟ್ರೀಟ್, **ಮದ್ರಾಸ್.**

ಸುಪರಿಂಟೆಂಡೆಂಟ್, **ಬಳ್ಳಾರಿ.** ಆರ್ಗನೈಸರ್, **ವೆಲ್ಲೂರು.**

ಚೀಫ್ ಏಜೆಂಟ್ಸ್, **ಮಧುರ, ತ್ರಿಚಿನಾಪಳ್ಳಿ.**

---

THE
## Vijaya Bank, Ltd.

**Head Office: MANGALORE.** Branch Offices **Udipi, Kaup & Coondapoor.**

**ದಿ ವಿಜಯ ಬೇಂಕ್ ಲಿಮಿಟೆಡ್,**

**ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳುಸಾ. ಶೆ. $3\frac{1}{2}$

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. $3\frac{1}{2}$

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ. ನೋಟು, ಹುಂಡಿ, ಸರಕು, ಸಗ್ಸೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ 500ರ ವರೆಗೆ ಸಾ. ಶೆ 7.
501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ವರೆಗಾ ಸಾಲಕೊಡಲಾಗುತ್ತದೆ. ಹಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

**A. B. Shetty,** ಚೇರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

**ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.**

---

## ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ

ಸ್ಥಾಪನೆ: 1928

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಪೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನ ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

**ಹೆಚ್ಚಿಟ್ಟು ಒಪ್ಪುವ ಸೆಟ್ಟುಗಳು ಕೂಡಾ ಸಿಗುವವು.**

**ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಃ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.**

---

**ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.**

## ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿವೆ.

**ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು**

ಯೋಗ್ಯವಾದ ಹಾಡುಗಳು.

**ಪ್ರತಿಗಳು:**—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,

**ನವಭಾರತ ಬುಕ್ ಡಿಪೊ**
**ಉಡುಪಿ**

---

**ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!**

**ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ**

**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ**

## 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 58 Mody Street, Fort Bombay.

---

**ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.**

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.**

**ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.**

**P. A. PAI, BROS.**
**ಪಿ. ಎ. ಪೈ. ಬ್ರದರ್ಸ್,**
**ಆಸ್ಪತ್ರೆ ಎದುರು, ಉಡುಪಿ.**

---

## ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು ಹುರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು ಗಿಡವೊಂದರ ಕ್ರಯ ರೂ 1-0-0 ಮಾತ್ರ ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ಯಾದ ಕೋಫು, ಕಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

# ಪತ್ರ ವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿ ರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ ನ]

## ಪುತ್ತೂರಿನ ಪತ್ರ

[ಇಂದಿನ ವಾತಾವರಣ ನಾಟಕ ಕಲೆಯ ಅಣಕಾಟ'-'ಜ್ಞಾನೋದಯ'ದ ಸೆಣಸಾಟ'-ಒಂದು 'ಕಾಲಕೂಟ'-'ಕಲಾ ಸೇವಕ'ನ ಮೇಲೆ ವಕ್ರನೋಟ'!]

ಅಯ್ಯಾ ಕಲಾಸೇವಕ,

ನಿನ್ನ ಮಾತು ವೇದವಾಕ್ಯವೆಂದೊತ್ತಿ ಹೇಳಬೇಕೆಂದಿರುವವರೇ ಬಹಳವಿಲ್ಲ! ಆದರೆ, ಕೆಲವರು ತೀರ ರೇಗಿಕೊಂಡಿರುವರು! ಅವರ ಹಿತೋಕ್ತಿಗಳೆಂದರೆ ಕಿವಿ ಮುಚ್ಚಿಕೊಳ್ಳುವರು. ಕಂಡದ್ದು ಆಡಿದರಂತೂ ಕೇಳದಂಥ ಕೋಪವವರಿಗೆ! ಭಾಪು, ಕಲಾಸೇವಕ ಭಾಪು! ಶರೀರ ಸಾಮರ್ಥ್ಯಕ್ಕಂಜಿ ಮನಸ್ಸಿನಲ್ಲಿದ್ದುದನ್ನು ಅಲ್ಲೇ ಬಚ್ಚಿಟ್ಟುಕೊಳ್ಳುವಷ್ಟು ಹೇಡಿ ಹೃದಯವಲ್ಲ ನಿನ್ನದು. ಪ್ರಾಣಹಾರುವುದೆಂದಿದ್ದರೂ ಇದ್ದುದನ್ನು ಇದ್ದಂತೆಯೇ ಬರೆವ ಕೆಚ್ಚೆದೆಯು ನಿನಗಿದೆ! ಇದಕ್ಕೆ ನಿನ್ನ 'ಕಲೆಯ ಕೊಲೆ'ಯೇ ಸಾಕ್ಷಿ! ನಿನ್ನ ಲೆಕ್ಕಣಿಕೆಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು ಹೃದಯವನ್ನು ತೆರೆದು ಬಿಟ್ಟು ಪುತ್ತೂರನ್ನು ಸಿದ್ಧೆಯಿಂದೆಬ್ಬಿಸಿದೆ ನೀನು! ಸುತ್ತ ಕಣ್ದೆರೆದು ನೋಡುವುದೇನನ್ನು? ವಿಶ್ವರೂಪವೇ ಕಂಡ ಮೇಲೆ ಬಣ್ಣದ ಆಟಗಳಿಗೆ ನೋಡಹೋಗುವುದುಂಟೇ?

ನಿನ್ನ ಹಿತವಚನಗಳು ಯಾವ ಕಿವಿಗಳನ್ನು ಹೊಕ್ಕು ಪರಿಣಾಮಕಾರಿಯಾಗಿಲ್ಲ? ಆದರೆ ಜ್ಞಾನೋದಯಕ್ಕಿನ್ನೂ ಜ್ಞಾನ ಬಂದಿಲ್ಲ. ಅದಿನ್ನೂ ಗಾಢನಿದ್ರೆಯಿಂದೆಚ್ಚೆತ್ತಿಲ್ಲ. ಹೊತ್ತು ಏರಿ ಹೋಗಿದ್ದರೂ ಕಿವಿ ಕಣ್ಣುಗಳನ್ನು ಮುಚ್ಚಿಕೊಂಡು ಜಡವಾಗಿ ತೂಕಡಿಸುತ್ತದೆ! ನಿನ್ನ ಮಾತುಗಳು ಅಲ್ಲಿ 'ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ'!

ಅವರಿಂದ 'ನವಯುಗ' (ಶ್ರೀ ಕೊಂಡೆ ವಿರಚಿತ ನಾಟಕ)ವು ಇನ್ನೊಮ್ಮೆ ರಂಗಭೂಮಿಗೆ 'ಎಳೆಯ'ಲ್ಪಡುವುದಂತೆ! ಕಳೆದ ಬಾರಿ ಕೇವಲ ಬೆರಳುಗಳಲ್ಲೆಣಿಸಬಹುದಾದಷ್ಟೇ ಪ್ರೇಕ್ಷಕರಿದ್ದರು. ಈ ಬಾರಿ ಅದಕ್ಕೆ ಪ್ರೋತ್ಸಾಹವೀಯುವವರಿರಬಹುದೇ ಎಂದು ನೋಡಬೇಕಾಗಿದೆ!

ಸಿಡಿಲು ಮಿಂಚುಗಳು ಬರುವುವೆಂದು ಎದೆಗೆಡದೆ ಬರೆದು ಬಿಟ್ಟುದು ಒಳ್ಳಿತು. ಅದು ಸರ್ವಮಾನ್ಯವೂ ಅಹುದು! ಆದರೆ, 'ಕರ್ನಾಟಕ ಸಂಘ'ವನ್ನೂ ಇತರ ಸಂಘಗಳೊಡನೆ ಕೂಡಿಸಿದುದು ವಿಷಾದಕರ. ಅವೇನೋ ಅರಿಯದೆ ತಪ್ಪು ಮಾಡಿದ್ದರೂ ಆ ತಪ್ಪುಗಳು ಮನ್ನಿಸಲ್ಪಡತಕ್ಕುವು! ಉಳಿದ ಸಂಘಗಳ ಕುರಿತಾದ ಟೀಕೆಯು ಸಹಜವಾದುದೇ! ಎಲ್ಲರ ಅಭಿಪ್ರಾಯವೂ ಅಂತಿರಲು ನಿನ್ನ ಲೇಖನಿಯು ಅದಕ್ಕೆ ರೂಪವನ್ನಿತ್ತುದು ಸರಿಯೇನಿಸದೆ? ಹೇಗಿದ್ದರೂ 'ತಾನು ಹಿಡಿದ ಕೋಳಿಗೆ ಮೂರೇ ಕಾಲುಗಳೆ'ಂದು ಹಟಸಾಧಿಸುವವರಿಗೆ ಸೊಪ್ಪು ಹಾಕದೆ ಕಲಾಸೇವೆ ಮಾಡಬೇಕೆಂದು ನನ್ನ ಸವಿನಯ ವಿನಂತಿ.

ಹಿತಾಕಾಂಕ್ಷಿ,
"ಸಮತಾವಾದಿ" ಪುತ್ತೂರು.

## ಹೊಸ ಪೋಲಿಂಗ್ ಆಫೀಸು ಬಗ್ಗೆ

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಮೂಡಬಿದ್ರೆ ಸರ್ಕಲಿನ ಮೆಂಬರಿಕೆಯ ಉಮೇದ್ವಾರರ ಅವಗಾಹನೆ ಬಗ್ಗೆ ಪುತ್ತಿಗೆ ಪೋಲಿಂಗ್ ಸ್ಟೇಷನಿಗೆ ಅನೇಕ ದೂರದಿಂದ ಓಟರರು ಬಹು ಕಷ್ಟರೀತಿಯಿಂದ ಹೋಗಬೇಕಾಗುತ್ತದೆ. ಅಲ್ಲದೆ ನಡಕೊಂಡು ಹೋಗುವರಿಗೆ ೬ ಯಾ ೭ ಮೈಲುಗಳು ತಗಲುತ್ತವೆ. ಯಾವದೇ ಒಂದು ಪಾರ್ಟಿಯ ಸಂಗ (ಮೋಟರ್) ಇಲ್ಲದೆ ಸ್ವತಂತ್ರ ರೀತಿಯಿಂದ ಹೋಗಿ ಓಟು ಕೊಡಲು ಸಾಧ್ಯವಾಗುವುದಿಲ್ಲ. ಇದೇ ಕಾರಣದಿಂದ ೨, ೮ ವರ್ಷಗಳ ಹಿಂದೆ ಕಾರ್ಕಳ ತಾಲ್ಲೂಕು ಬೋರ್ಡು ಚುನಾವಣೆಯಲ್ಲಿ ಪುತ್ತಿಗೆ ಸ್ಟೇಷನಿಗೆ ದೂರವಿರುವ ೩ ಗ್ರಾಮಗಳನ್ನು ಪ್ರತ್ಯೇಕಪಡಿಸಿ ಅದರ (ಸೆಂಟರ್) ಮಧ್ಯಸ್ಥಳವಾದ ಅಶ್ವತ್ಥಪುರದಲ್ಲಿ ಪೋಲಿಂಗ್ ಆಫೀಸು ನೇಮಕಮಾಡಿದ್ದರು. ಆ ಸಮಯದಲ್ಲಿ ತೆಂಕ ಮಿಜಾರು ಬಡಗ ಮಿಜಾರು ಕಲ್ಲಮುಡ್ಕೂರುಗಳಾದ ೩ ಗ್ರಾಮಗಳಿಂದ ಶೇಕಡಾ ೯೦ರಂತೆ ಓಟುಗಳು ಬಂದಿರುತ್ತವೆ. ಕಳೆದ ಚುನಾವಣೆಯಲ್ಲಿ ಈ ರೀತಿ ಕಷ್ಟಕ್ಕಾಗಿ ಅನೇಕ ಓಟರ್ಸ್‌ಗಳು ಹೋಗಲೇ ಇಲ್ಲ. ಆದ್ದರಿಂದ ೩ ಗ್ರಾಮಗಳ ಮಟ್ಟಿಗೆ ಅಶ್ವತ್ಥಪುರವನ್ನೇ ಪೋಲಿಂಗ್ ಸ್ಟೇಷನ್ ಮಾಡಿದ್ದಲ್ಲಿ ಓಟರ್ಸ್‌ಗಳಿಗೆ ತುಂಬಾ ಸಂತೋಷವೂ ಅಲ್ಲದೆ ಉಮೇದ್ವಾರರಿಗೂ ಅನೇಕ ಬಸ್ಸುಗಳ ಬಗ್ಗೆ ಖರ್ಚು ಉಳಿತಾಯವಾಗಬಹುದು. ಈ ಎಲ್ಲಾ ಕಾರಣಗಳಿಂದ ಅಶ್ವತ್ಥಪುರದಲ್ಲಿ ಪೋಲಿಂಗ್ ಆಫೀಸುಮಾಡಿಸಬೇಕಾಗಿ ಈಗ ಆರಿಸಿ ಬಂದ ಮೆಂಬರರಾದ ಮ॥ ರಾ॥ ರಾ॥ ಕಡಂದಲೆ ಗುತ್ತು ದೇಜು ಶೆಟ್ರು ಮತ್ತು ಇನ್ನು ಮುಂದೆ ಉಮೇದ್ವಾರರಾಗಿ ನಿಲ್ಲುವವರೂ ಕೂಡಾ ಪ್ರಯತ್ನ ಪಡುವರೆಂಬುದಾಗಿ ನಂಬಿರುತ್ತೇನೆ.

ಓಟರರೊಲ್ಲೊಬ್ಬ,
ತೆಂಕ ಮಿಜಾರು ಗ್ರಾಮ.

## ಬಿಲ್ಲವ ಸಮಾಜದ ಬಂಧುಗಳಲ್ಲಿ ವಿನಂತಿ

ಸ್ವಜಾತಿ ಬಾಂಧವರೇ!

ನಮ್ಮ ಸಮಾಜವು ಬೇರೆಸಮಾಜಗಳಷ್ಟು ಐಕ್ಯತೆಯಲ್ಲಿಯೂ ಪರಸ್ಪರ ಪ್ರೀತಿಯಲ್ಲಿಯೂ ಜಾತಿಮತ್ಸರದಲ್ಲಿಯೂ ಮುಂದೆ ಬರಲಿಲ್ಲ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಮ್ಮ ಜಾತಿಯ ಜನರು ಕ್ರೈಸ್ತಮತಕ್ಕೆ ಸೇರುವಷ್ಟು ಅನ್ಯ ಸಮಾಜದವರು ಸೇರುವದಿಲ್ಲ. ಆದುದರಿಂದ ಇನ್ನು ಮುಂದಕ್ಕೆ ಬಿಲ್ಲವ ಸಮಾಜದವರು ಅನ್ಯ ಮತಕ್ಕೆ ಸೇರದ ಹಾಗೆ ನಮ್ಮ ಜಾತಿಯ ವಿದ್ಯಾವಂತರು ಸಮಾಜದ ಮೇಲೆ ಪ್ರೇಮವಿಟ್ಟು ಅಂಥವರಿಗೆ ತಕ್ಕ ಸದ್ಬೋಧನೆಯನ್ನು ಕೊಟ್ಟು ಅವರು ನಮ್ಮ ಸಮಾಜದಲ್ಲಿಯೇ ಇರುವ ಹಾಗೆ ಪ್ರಯತ್ನಿಸಬೇಕಾಗಿ ನನ್ನ ವಿನಂತಿ. ಈ ವಿಷಯದಲ್ಲಿ ನಮ್ಮ ಸಮಾಜದವರು ತಕ್ಕ ಜಾಗ್ರತೆಯನ್ನು ತೆಗೆದುಕೊಂಡು ಸಾಧ್ಯವಿದ್ದಷ್ಟು ಮಟ್ಟಿಗೆ ಪರಸ್ಪರ ಸಹಾಯವನ್ನು ಮಾಡಿಕೊಂಡು ಬಂದರೆ ನಿಜವಾಗಿಯೂ ಬಿಲ್ಲವ ಸಮಾಜವು ಊರ್ಜಿತ ಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ.

ಹಾಗೆಯೇ ಮುಂಬೈಯಲ್ಲಿ ಕೂಡ ನಮ್ಮ ಸಮಾಜದವರಿಗೆ ಈಗ ಇರುವ ಆರು ಸಂಘಗಳು ಅನಗತ್ಯವೆಂದೇ ಹೇಳಬೇಕಾಗುತ್ತದೆ. ಮೇಲೆ ಹೇಳಿದ ಆರು ಸಂಘಗಳಿರುವುದರಿಂದ ಇಲ್ಲಿ ಇರುವ ಸಮಾಜದ ಬಂಧುಗಳಿಗೆ ತಾವು ಯಾವ ಸಂಘಕ್ಕೆ ಸದಸ್ಯರಾಗಬೇಕೆಂತ ಗೊತ್ತಾಗುವುದಿಲ್ಲ. ಕಾರಣ ಒಂದು ಸಂಘದವರಿಗೆ ಮತ್ತೊಂದು ಸಂಘದವರ ಕುರಿತು ಸೌಹಾರ್ದವಿಲ್ಲವೆಂತ ಅವರವರ ವರ್ತನೆಯಲ್ಲಿಯೂ ಮತ್ತು ಅವರು ವರುಷಕ್ಕೆ ಒಂದಾವರ್ತಿ ಆಚರಿಸಿಕೊಂಡು ಬರುವ ಮಹಾ ಶಿವರಾತ್ರಿ ಪೂಜೆಯ ದಿವಸವೂ, ಶಾರದಾ ಪೂಜೆಯ ದಿವಸವೂ, ಗುರುಸ್ವಾಮಿಗಳವರ ಜನ್ಮ ದಿನಾಚರಣೆಯ ದಿನವೂ ಮತ್ತು ಆಯಾಯ ಸಂಘದ ವಾರ್ಷಿಕೋತ್ಸವದ ದಿವಸವೂ ಅಲ್ಲಿ ಜರಗುವ ಸಭೆಯನ್ನು ನೋಡಿ ನಮಗೆ ಗೊತ್ತಾಗುತ್ತದೆ. ಬಿಲ್ಲವ ಸಮಾಜದ ಹೆಚ್ಚಿನ ವಿದ್ಯಾವಂತರು ಇಲ್ಲಿರುವ ಯಾವ ಸಂಘಗಳಲ್ಲಿಯೂ ಇಷ್ಟರ ವರೆಗೆ ಸದಸ್ಯರಾಗಿ ಸೇರಲಿಲ್ಲವೆಂದು ೬ ಸಾವು ಸಂಘದ ವಾರ್ಷಿಕ ವರದಿಯಲ್ಲಿ ಗೊತ್ತಾಗುತ್ತದೆ. ಹೆಚ್ಚಿನ ವಿದ್ಯಾವಂತರ ಅಭಿಪ್ರಾಯವೇನೆಂದರೆ ಎಂದಿನ ತನಕ ಇಲ್ಲಿರುವ ನಮ್ಮ ಸಮಾಜದ ಸಂಘಗಳು ಒಂದಾಗುವುದಿಲ್ಲವೋ ಅಲ್ಲಿಯ ತನಕ ಸದ್ರಿಯವರು ಯಾವ ಸಂಘಕ್ಕೂ ಸೇರುವುದಿಲ್ಲವೆಂದು. ಇದನ್ನು ನೋಡುವಾಗ ಇಲ್ಲಿ ಇರುವ ಎಲ್ಲಾ ಸಂಘಗಳ ಮುಖಂಡರು ಒಟ್ಟುಗೂಡಿ ಒಂದು ಸಭೆ ಮಾಡಿ ಏಕೀಕರಣಕ್ಕೆ ಒಪ್ಪುವುದು ಮಾತ್ರವಲ್ಲದೆ ತ್ವರಿತ ಕಾರ್ಯದಲ್ಲಿಯೇ ಎಲ್ಲಾ ಸಂಘಗಳು ಒಂದಾಗಿ ಸಮಾಜದ ಮೇಲ್ಮೆಯನ್ನು ಬಯಸುವುದು ಪ್ರತಿಯೊಬ್ಬ ಬಿಲ್ಲವನ ಮುಖ್ಯ ಕರ್ತವ್ಯವಾಗಿರುವುದು. ಈ ವಿಷಯದಲ್ಲಿ ಮುಂಬೈಯಲ್ಲಿರುವ ಬಿಲ್ಲವ ತರುಣರು ಕೂಡ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿ ನನ್ನ ವಿನಂತಿ.

ಇಂತಿ ಬಿಲ್ಲವ ತರುಣರಲ್ಲೊಬ್ಬ.

## ಆಯಾ ಊರವರೇ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ನಿಲ್ಲಬೇಕು.

ಮೂಡಬಿದಿರೆಯ ನಿಜಸ್ಥಿತಿ ಗೊತ್ತಿದ್ದವರಿಗೆ ನಾನು ಬರೆದ ವಿಷಯವು ಸಮಂಜಸವೆಂದು ವ್ಯಕ್ತವಾಗದಿರದು. ಮರಕಡಗುತ್ತಿನವರ ಸಹಾಯದಿಂದ ಚುನಾವಣೆಯಲ್ಲಿ ಜಯಲಕ್ಷ್ಮಿಯನ್ನು ಒಲಿಸಲು ಯಾವ ವ್ಯಕ್ತಿಗೂ ಸಾಧ್ಯವಿದೆಯೆಂದು ಹೇಳವರೆ ಅದೊಂದು ದೊಡ್ಡ ತಪ್ಪೇ? ನಮ್ಮ ಮೂಡಬಿದರೆ ಊರಿನಲ್ಲಿಯೇ ವಾಸಿಸುವವರು ಯಾರಾದರೂ ಚುನಾವಣಾ ರಂಗಸ್ಥಳಕ್ಕೆ ಇಳಿಯಲು ಸಿದ್ಧರಿರುವರೇ? ಗುಟ್ಟಿನಲ್ಲಿ ಬೇಡಿ ಕಾಲು ಹಿಡಿದು ಕೇಳುವ ಬದಲಿಗೆ ಬಹಿರಂಗವಾಗಿ ಗುತ್ತಿನವರ ಸಹಾಯ ಕೇಳಿದ್ದು ದೊಡ್ಡ ತಪ್ಪೇ? ಪ್ರತಿಸ್ಪರ್ಧಿಗಳನ್ನು ಎದುರಾಳಿಸಿ ಗೆದ್ದವರು ಸರ್ವವಿಧದಿಂದಲೂ ಮೆಂಬರಿಕೆಗೆ ಯೋಗ್ಯರೆಂದು ಹೇಳಲಾದೀತೇ? ನಮ್ಮ ಊರಲ್ಲಿ ತಿಂಗಳಿಗೊಂದು ಸಲವಾದರೂ ಬಾರದೆ ಊರಿಗೆ ತೀರ ಅಪರಿಚಿತರಾಗಿರುವವರನ್ನು ನಮ್ಮ ಪ್ರತಿನಿಧಿಯಾಗಿ ಕಳುಹಿಸಿದರೆ ನಮಗೆ ಊರವರಿಗಾದರೂ ಲಾಭವೇನು? ಅಯ್ಯಾ, "ನಮ್ಮ ಊರ ನಿವಾಸಿಕರೇ" ಮೂಡಬಿದರೆಯವರೇ ಆರಿಸಿ ಬರಬೇಕೆಂಬ ನಿಯಮವಿಲ್ಲ. ಆದರೆ ಊರಲ್ಲಿಯೇ ವಾಸವಾಗಿದ್ದುಕೊಂಡು ಊರಿನ ಅನುಭವವಿದ್ದವರು ಚುನಾಯಿಸಲ್ಪಟ್ಟರೆ ಒಳಿತೆಂದು ಆಶಿಸಿದ ನಾನೆ ಸ್ವಾಭಿಮಾನ ಶೂನ್ಯನಲ್ಲವೇ? ನಾನೇನೂ ನಾಮಧಾರಿ ಪ್ರತಿನಿಧಿಯಲ್ಲ. ಬೇರೆಯವರಿಂದ ಕುಣಿಸಲ್ಪಡುವವನೂ ಅಲ್ಲ. ನಮ್ಮ ಊರಿನಲ್ಲಿಯೇ ವಾಸಿಸುವ ಯೋಗ್ಯ ಮಹನೀಯರನ್ನು ಎಲ್ಲರೂ ಒಮ್ಮನಸ್ಸಿನಿಂದ ಚುನಾಯಿಸಬೇಕೆಂದು ಅಭಿಲಾಷೆ ಇರುವವರಲ್ಲಿ ಒಬ್ಬನು. ಪ್ರತಿಸ್ಪರ್ಧಿಗಳಿದ್ದರೂ ಊರಿನವರೇ ಆದಲ್ಲಿ ನನ್ನ ಆಕ್ಷೇಪವಿಲ್ಲ. ಪರಸ್ಥಳದವರು ಬಂದು ನಮ್ಮವರಿಗೆ ಅಡ್ಡಬರಬಾರದಾಗಿ ನಾನು ಯಾಚಿಸಿದ್ದಲ್ಲಿ ನಾನು ಸ್ವಾಭಿಮಾನಶೂನ್ಯನೆಂದಾದರೆ ಅದೊಂದು ಹೆಗ್ಗಳಿಕೆಯೇ ಎಂದು ಭಾವಿಸುವೆನು. ಪ್ರತಿಸ್ಪರ್ಧಿಗಳೊಡನೆ ಹೆಣಗಾಡುವರೆ ಸಾಧ್ಯವಿಲ್ಲದಿದ್ದಲ್ಲಿ ಮೆಂಬರಿಕೆಗೆ ಯೋಗ್ಯತೆ ಇಲ್ಲವೆಂದಾಯಿತೆ? ನಮ್ಮ ಊರಲ್ಲಿ ಮಾತ್ರವಲ್ಲ, ಇತರ ಕಡೆಗಳಲ್ಲಿಯೂ ಮೆಂಬರಿಕೆಗೆ ಎಲ್ಲ ತರದಿಂದಲೂ ಯೋಗ್ಯತೆ ಇದ್ದರೂ ಹಣದ ಅಭಾವದಿಂದಲೋ ದಾಕ್ಷಿಣ್ಯಕ್ಕಾಗಿಯೋ ತಮ್ಮ ಉಮೇದುವಾರಿಕೆಯನ್ನು ಮುಂದೊತ್ತಲು ಮನಸ್ಸಿಲ್ಲದವರು ಹಲವರಿರುವರು.

ಎದುರಾಳಿಗಳೊಡನೆ ಹೋರಾಡಿ ಗೆಲ್ಲುವ ಸಾಮರ್ಥ್ಯವಿಲ್ಲದುದರಿಂದ ಊರಿನ ಶ್ರೇಯಸ್ಸನ್ನು ಬಯಸಿ ಗುತ್ತಿನವರ ಆಶಯವನ್ನು ಅಪೇಕ್ಷಿಸಿದರೆ ಸ್ವಾಭಿಮಾನ ಶೂನ್ಯವೆಂದು ಎಣಿಸುವ 'ತಮ್ಮ ಊರನಿವಾಸಿಕ'ರು ನಮ್ಮ ಊರಿನ ಕಾಂಗ್ರೆಸು ಆಫೀಸಿನಲ್ಲಿರುವ ಅಧ್ಯಕ್ಷ ಕಾಂಗ್ರೆಸು ಮುಂದಾಳುಗಳು ತಮ್ಮಲ್ಲೇ ಯೋಗ್ಯತೆ ಇದ್ದರೂ ಮಂಗಳೂರಿನಲ್ಲಿ ವಾಸಿಸುವ ಮಹನೀಯರನ್ನು ನಮ್ಮ ಊರಿನ ಪರವಾಗಿ ನಿಲ್ಲಬೇಕೆಂದು ಒತ್ತಾಯ ಪಡಿಸುವುದಕ್ಕೆ ಏನೆನ್ನುವರೋ ತಿಳಿಯದು. ಊರಿನಲ್ಲಿ ಯೋಗ್ಯ ಪ್ರತಿನಿಧಿಗಳು ಇಲ್ಲವೆಂದು ಅವರ ಅಭಿಪ್ರಾಯವೇ? ಅಥವಾ ಚುನಾವಣಾ ರಂಗದಲ್ಲಿ ಹೋರಾಡಲು ಸಾಮರ್ಥ್ಯವಿಲ್ಲದಿರುವುದರಿಂದ ಪರಊರಿನ ಬಲಾಢ್ಯರನ್ನು ತರಿಸಿ ನಮ್ಮ ಊರನ್ನು ಉದ್ಧರಿಸುವ ಯತ್ನವೇ?

ಅಯ್ಯಾ, ನವಯುಗವೇ, ನಿನ್ನ ಪತ್ರಿಕೆ ಮೂಲಕವೂ ಜಿಲ್ಲಾ ಕಾಂಗ್ರೆಸ್ ಕಮಿಟಿಯವರಲ್ಲಿ ನನ್ನದೊಂದು ಪ್ರಾರ್ಥನೆಯೇನೆಂದರೆ, ಹಣವನ್ನು ಗಣಿಸದೆ ನಮ್ಮ ಮೂಡಬಿದರೆಯೊಳಗಿನ ಯೋಗ್ಯ ಗೃಹಸ್ಥರನ್ನೇ ಚುನಾವಣೆಗೆ ನಿಲ್ಲಿಸಿ ಅವರು ಎಂತಹ ಪ್ರತಿಪಕ್ಷಿಗಳ ಎದುರಿಗೂ ನಿಂತು ಕಾಂಗ್ರೆಸಿನ ವರ್ಚಸ್ಸಿನಿಂದ ಅವರೇ ಗೆಲ್ಲುವಂತೆ ಮಾಡಬೇಕು. ಹೀಗಾದಲ್ಲಿ ಕಾಂಗ್ರೆಸಿಗೆ ಕೀರ್ತಿಯೂ ಊರಿಗೆ ಸುಖವೂ ಕಾಂಗ್ರೆಸು ಶತ್ರುಗಳ ಧನಬಲಕ್ಕೆ ಅಪಜಯವೂ ಉಂಟಾಗಿ ಯೋಗ್ಯತೆಯುಳ್ಳವರೇ ಚುನಾಯಿತರಾಗುವಲ್ಲಿ ಅನುಮಾನವಿಲ್ಲ.

"ಮೂಡಬಿದರೆ ನಿವಾಸಿಕ"

## ಉಪಾಧ್ಯಾಯರೊಬ್ಬರ ನಿರ್ಘೃಣ ವರ್ತನೆ

ಉಡುಪಿಯ, ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ 'ಫರ್ಸ್ಟ್ ಫೋರ್ಮಿ'ನಲ್ಲಿ ಓದುತ್ತಿರುವ ಓರ್ವ ಋತುಮತಿಯಾದ ವಿದ್ಯಾರ್ಥಿನಿಯನ್ನು ಸದ್ರಿ ಶಾಲೆಯ ಕನ್ನಡ ಉಪಾಧ್ಯಾಯರು ಅಕಾರಣವಾಗಿ ವಿಪರೀತ ಹೊಡೆದಿರುವರೆಂಬ ಸಂಗತಿಯು ಶೋಚನೀಯವಿರುವುದು. ಯಾರಿಗೂ ಅಕಾರಣವಾಗಿ ಹೊಡೆಯುವುದೇ ತಪ್ಪೆನ್ನುವಾಗ ಪ್ರಾಪ್ತವಯಸ್ಕಳಾದ ವಿದ್ಯಾರ್ಥಿನಿಯನ್ನು ಹೊಡೆಯುವುದೆಂದರೆ ಅದೇನು ಸಾಮಾನ್ಯವಿಷಯವೇ? ಹುಡುಗಿಯು ಅಪರಾಧಿನಿಯೆಂದು ಸಾಧಿಸಬರುವಂತಿಲ್ಲ. ಏಕೆಂದರೆ ಹುಡುಗಿಯ ಸೌಮ್ಯ ಸ್ವಭಾವಕ್ಕೆ ಶಾಲೆಯೇ ಸದಭಿಪ್ರಾಯಪಟ್ಟಿರುವಾಗ ಇವರಿಗೆ ಮಾತ್ರ ಅಕ್ಷಮ್ಯ ಅಪರಾಧವನ್ನು ಮಾಡಿರುವಳೇ?

ಸದರಿ ಉಪಾಧ್ಯಾಯನು ಶಾಲೆಯಿಂದೊಮ್ಮೆ ತಗೆಯಲ್ಪಟ್ಟು ಪುನಃ ಪ್ರಯಾಸದಿಂದ ಶಾಲೆಗೆ ಸೇರಿದರೂ ವಿವೇಕದ ವಿಚಾರವನ್ನು ಮಾಡದಿದ್ದುದು ಅತಿಶೋಚನೀಯ! ಮಾತ್ರವಲ್ಲದೆ 'ನಾನು ನಿಷ್ಪಕ್ಷಪಾತಬುದ್ಧಿಯಿಂದ ಆ ಹುಡುಗಿಗೂ ಹೊಡೆದುಬಿಟ್ಟೆ' ಎಂದು ಹಿಣ ಪೌರುಷ ಕೊಚ್ಚಿಕೊಳ್ಳುತ್ತಿರುವುದು ಅತಿ ವಿಚಿತ್ರ!!

ಶಾಲಾಧಿಕಾರಿಗಳು ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ಜಾಗ್ರತೆಯನ್ನಿಡಬೇಕು. ಇಂತಹ ನಿರ್ಘೃಣ ವರ್ತನೆಗಳಿಂದ ಶಾಲೆಯ ಕೀರ್ತಿಗೆ ಕಳಂಕವೂ ಮೇಲ್ಮೆಗೆ ಭಂಗವೂ ಇದೆಯೆಂಬುದನ್ನು ತಿಳಿದಿರಬೇಕು.

—ಶಾಲಾಹಿತೇಚ್ಛು


**ಆತಂಕನಿಗ್ರಹ ಮಾತ್ರೆಗಳು**

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶೇಷ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ ಡಬ್ಬಿ ೧ಕ್ಕೆ ೧-೦-೦

**ವಾಜೀಕರಣ ತೈಲ:**—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦

**ಅಮೃತಾರ್ಣವ ಲೇಹ್ಯ:**— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇಸಬು ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ಪಿತ್ತಸೋವು, ಮುಂತಾದ ವ್ಯಾಧಿಗಳಿಗೆ ಅನ್ಯತಪ್ರಾಯವಾದುದು. **ಕ್ರಯ: ಡಬ್ಬಿ ೧ಕ್ಕೆ ೨-೦-೦**

**'ಕಾಮಶಾಸ್ತ್ರ'** ದರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

**ಆತಂಕ ನಿಗ್ರಹ ಫಾರ್ಮಸಿ, ೩೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ**



**ಕೂದಲು ರಂಗು ಬಿಡಿ**

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ ೧ರ, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ ೨ರ ಬಾಟಲಿಗೆ ಬರೆಯಿರಿ.

**Bal Kala Stores,**
P. O Kansisimei (Dar bhanga)



**ನವಭಾರತ ಬುಕ್ ಡಿಪೋದಲ್ಲಿ**
ಸಾಮಾನ್ಯ ಯಾವತ್ತೂ
**ಕನ್ನಡ ಗ್ರಂಥಗಳು**
ದೊರೆಯುತ್ತವೆ.

# ಹಿಂದೂ ಮತದ ಪತನಕ್ಕೆ ಕಾರಣವೇನು?

## ಭಿನ್ನಾಭಿಪ್ರಾಯವು ಅನುಚಿತವಾದುದು.

[ಲೇಖಕ – ಕೆ. ವಿ ನರಸಿಂಹಾಚಾರ್ಯ, ಸುಬ್ರಹ್ಮಣ್ಯ]

ಹಿಂದೂಮತವು ಇಷ್ಟು ಅವನತಿಗಿಳಿಯಲು ಕಾರಣವೇನೆಂದು ಸ್ವಲ್ಪ ಹೊತ್ತು ವಿಚಾರಿಸಿದರೆ ನಮ್ಮಲ್ಲಿರುವ ಭಿನ್ನ ಭಿನ್ನ ಮತಗಳೇ ಕಾರಣವೆಂದು ನಿಸ್ಸಂಶಯವಾಗಿ ಹೇಳಬಹುದು. ನಮ್ಮಲ್ಲಿ ಸಾವಿರಾರು ಮತಪ್ರಚಾರಕರಿದ್ದಾರೆ ಅವರವರು ಅವರವರ ಮತದ ಸಂಖ್ಯಾಬಲವನ್ನು ಹೆಚ್ಚಿಸುವುದಕ್ಕೋಸ್ಕರ ಜನರಿಗೆ ಬೋಧನೆ ಕೊಟ್ಟು ತಮ್ಮ ಮತಕ್ಕೆ ಜನರನ್ನು ಸೆಳೆಯುತ್ತಿದ್ದಾರೆ. ಇದರಿಂದಾಗಿ ಸಾಮಾನ್ಯ ಜನರು, ಅವರ ಬುದ್ಧಿಭ್ರಂಶವಾಗಿ ಸ್ವೇಚ್ಛೆಯಿಂದ ವಿಚಾರಮಾಡಲು ಅರಿಯದೆಯೋ ಅಥವಾ ಮತಪ್ರಚಾರಕರ ಒಲಾತ್ಕಾರದಿಂದಲೋ ಬೋಧಿಸಲ್ಪಟ್ಟ ಮತಕ್ಕೆ ಸೇರಿಸಲ್ಪಡುತ್ತಾರೆ.

ಭರತಖಂಡದಲ್ಲಿ ಈಗ ಹಿಂದೂಮತದಿಂದ ದ್ವೈತ, ಅದ್ವೈತ, ವಿಶಿಷ್ಟಾದ್ವೈತವೆಂಬ ಮೂರು ಮುಖ್ಯ ಮತಗಳೂ ಮತ್ತು ಜೈನ, ಬೌದ್ಧ, ಆರ್ಹ, ನಾಸ್ತಿಕ, ಸಾಂಖ್ಯ, ಶೈವ,ಶಾಕ್ತ,ಯೋಗ ಮೊದಲಾದ ಅನೇಕ ಉಪಮತಗಳೂ ಜನಿಸಿವೆ. ಒಬ್ಬ ಮತಸ್ಥಾಪಕನು ಒಂದುವಿಷಯವು ಧರ್ಮವೆಂದರೆ ಮತ್ತೊಬ್ಬನು ಅದೇ ಅಧರ್ಮವೆಂದು ಸಾಧಿಸುತ್ತಾನೆ. ಇದರ ಪರಿಣಾಮವಾಗಿ 'ತಮ್ಮ ಮತ ಮೇಲು, ತಮ್ಮ ಮತ ಮೇಲೆಂದು ಮತಪ್ರಚಾರಕರೇ ಹೊಡೆದಾಡಿಕೊಳ್ಳುತ್ತಾರೆ ನವೀನ ವಿಮರ್ಶೆಯನ್ನು ನೋಡಿದಾಗ ಒಬ್ಬನು ಅಸ್ಪೃಶ್ಯತಾ ನಿವಾರಣೆಯು ಆಗಬೇಕೆಂದರೆ ಮತ್ತೊಬ್ಬನು ಅದನ್ನೇ ಬಲವಾಗಿ ವಿರೋಧಿಸುತ್ತಾನೆ. ಒಬ್ಬನದು ವಿಧವಾವಿವಾಹವಾಗಬಹುದೆಂದು; ಮತ್ತೊಬ್ಬನದು ಕೂಡದೆಂದು. ಒಬ್ಬನು ಅಂತರ್ಜಾತೀಯವಿವಾಹವಾಗಬಹುದೆಂದು, ಮತ್ತೊಬ್ಬನು ಕೂಡದೆಂದು, ಹೀಗೆ ಹಿಂದೂ ಮತೀಯರಿಗೆ ಹಲವು ತರದ ಅಭಿಪ್ರಾಯಗಳಿರುವುದರಿಂದ ನಮ್ಮ ಮತವು ಅಬಲವಾಗಿದೆ

ಎಲ್ಲರೂ ಒಂದೇ ರೀತಿಯ ಅಭಿಪ್ರಾಯವನ್ನಿಟ್ಟುಕೊಳ್ಳಬೇಕು. ಅದರಂತೆಯೇ ವರ್ತಿಸಬೇಕು, ನಮ್ಮ ಮತದಲ್ಲಿ ನಮಗೆ ಸಂಪೂರ್ಣ ನಂಬಿಕೆಯಿರಬೇಕು. ಅನ್ಯ ಮತೀಯರು ಎಷ್ಟು ಒತ್ತಾಯಪಡಿಸಿದರೂ ಅವರ ಬಲೆಗೆ ಸಿಲುಕಬಾರದು. ಹೀಗಿದ್ದರೇನೇ ಹಿಂದೂಮತದ ಉದ್ಧಾರವಾಗಬಹುದು.

ಕ್ರೈಸ್ತ ಮುಸಲ್ಮಾನ ಮೊದಲಾದ ಮತಗಳಲ್ಲಿ ನಮ್ಮ ಮತದಲ್ಲಿರುವಂತೆ ಭಿನ್ನ ಅಭಿಪ್ರಾಯಗಳು ಇಲ್ಲವಾದುದರಿಂದ ಅವುಗಳು ದಿನ ದಿನಕ್ಕೂ ಅಷ್ಟು ಅಭಿವೃದ್ಧಿಯನ್ನು ಹೊಂದಿಕೊಂಡಿವೆ. ಅವರಲ್ಲಿ ಒಂದೇ ಶಾಸ್ತ್ರ, ಒಂದೇ ಅಭಿಪ್ರಾಯ, ಒಂದೇ ಆಚರಣೆ. ಅವರ ಮತದ ಸಕಲ ಜನರೂ ಅದನ್ನು ಶ್ರದ್ಧೆಯಿಂದ ಆಚರಿಸುತ್ತಾರೆ. ಅವರಲ್ಲಿ ಒಗ್ಗಟ್ಟು ಉಂಟು. ನಮ್ಮಲ್ಲಿ ಭಿನ್ನಾಭಿಪ್ರಾಯಗಳ ದೆಸೆಯಿಂದ ಒಗ್ಗಟ್ಟಿಲ್ಲ

ನಮ್ಮ ದೇಶದಲ್ಲಿ ದಿನೇ ದಿನೇ ಅಧರ್ಮವು ಒಂದೇ ಸಮನೆ ಏರುತ್ತಿದೆ ಅಂತಹ ಅಧರ್ಮಗಳು ನಡೆಯಲು ನಾವು ಎಡೆ ಕೊಡಬಾರದು. ಈ ರೀತಿಯಾಗದಿದ್ದರೆ ನಮ್ಮ ದೇಶದ ಉದ್ಧಾರವಾಗಲಾರದು.

ಮೊದಲು ಧರ್ಮಸ್ಥಾಪನೆಯಾಗಬೇಕು. ಅದಕ್ಕೋಸ್ಕರ ನಾವು ನಮ್ಮಿಂದ ಕೂಡಿದಷ್ಟು ಪ್ರಯತ್ನಮಾಡಬೇಕು. ಧರ್ಮಸ್ಥಾಪನೆಗೆ ಎಲ್ಲರೂ ಒಗ್ಗಟ್ಟಾಗಿ ಒಮ್ಮನಸ್ಸಿನಿಂದ ಹೋರಾಡಬೇಕು. ಧನದ ಆಸೆಗಾಗಿ ಎಷ್ಟೋ ಜನರು ಪರಮತಾವಲಂಬನೆ ಮಾಡುವರು. ಈ ಮಧ್ಯೆ ನೂರಾರು ಮತಪ್ರಚಾರಕರು ಸೇರಿ ಜನರ ಚಿತ್ತಚಾಂಚಲ್ಯವನ್ನು ಅಭಿವೃದ್ಧಿಗೊಳಿಸುತ್ತಾರೆ ಈ ರೀತಿಯಲ್ಲಿ ಮನಶ್ಚಾಂಚಲ್ಯವನ್ನು ಹೊಂದಿದವರು ಧನದ ಆಸೆಗಾಗಿ ಸ್ವಮತವನ್ನು ತ್ಯಜಿಸುವುದು, ಪರಮತಾವಲಂಬನೆ ಮಾಡುವುದು, ಇದೇ ರೀತಿ ಮಾನವನ ಇಡೀ ಜೀವಮಾನದಲ್ಲಿ ಮತಾಂತರದ ಗಲಾಟೆಗಳೇ ಆದರೆ ಅವನು ದೇಶಸೇವೆಮಾಡುವುದಾವಾಗ?.

ಹಿಂದೂಮತ ಒಂದನ್ನು ಬಿಟ್ಟು ಬೇರೆ ಯಾವ ಮತದಲ್ಲಿಯೂ ಈ ರೀತಿಯ ಕಲಂಕವಿಲ್ಲದಿರುವುದಕ್ಕೆ ಅವರಲ್ಲಿಯ ಒಗ್ಗಟ್ಟು, ಏಕಾಭಿಪ್ರಾಯವೇ ಕಾರಣ. ನಮ್ಮಲ್ಲಿಯ ಕಳಂಕವನ್ನು ಹೋಗಲಾಡಿಸಬೇಕಾದರೇ ಅನುಸರಣೀಯವಾದ ಒಂದೇ ಮಾರ್ಗದಲ್ಲಿ ನಮ್ಮ ಜೀವನವನ್ನು ನಡೆಸಲು ಪ್ರಾರಂಭಿಸಬೇಕು.

**WANTED**

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

**ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.**

| ಕೊಲೆರಾ ಫಿಲ್ಸ್ | ಭೈರವ ಮಾತ್ರೆಗಳು |
| --- | --- |
| ಕೊಲರಾ ರೋಗಕ್ಕೆ ರಾಮಬಾಣ ಔಷಧ. | ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ. |
| ೧೦೦ ಮಾತ್ರೆಗಳಿಗೆ ರೂ ೩—೮—೦ | ೧೦೦ ಮಾತ್ರೆಗಳಿಗೆ ರೂ ೨—೮—೦ |

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು ಪಿ ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

**ON THE EVE OF THE**

*SILVER JUBILEE OF THE*

# East & West Insurance Co., Ltd.

**MESSRS. PADUBIDRI BROTHERS,**

The accredited Chief Agents of the Company invite applications for liberal Agency contracts from Gentlemen of status and influence to cooperate in the production of a record business of Rs. 10,00,000 as a gift in honour of the advent of the auspicious event.

*For particulars apply to:*

**Messrs. Padubidri Bros.,**

*CHIEF AGENTS.*

**KARNATAKA & MAHARASTRA.**

**40, Narayanlal Bansilal Mansion,**

***Bellasis Road, BOMBAY 8.***

## ಶರಾಬು! ಶರಾಬು!!
## ಅಮ್ಮಾ, ನನಗೆ ಶರಾಬು ಕುಡಿಸಿದೆಯಾ?

ಎಂತಹ ಸ್ಮರಣೆಯಾದರೂ ಕಾಲದ ಉರುಳಾಟದಲ್ಲಿ ಮರೆಮಾಜಿಯೇ ಬಿಡುವುದು. ಎಷ್ಟೊಂದು ಛಿನ್ನಭಿನ್ನವಾಗಿ ಒಡೆದುಹೋದ ಹೃದಯವನ್ನಾದರೂ ಕಾಲ ವೈದ್ಯನು ಸರಿಮಾಡಿ ಬಿಡುವನು. ಚಮತ್ಕಾರವಾಗಿ ಒರಸಿ ಮರೆಸಿಬಿಡುವ ಕಾಲನ ಜಾದು ವಿದ್ಯೆಯಿಂದಲೇ ಜೀವನ ವ್ಯಾಪಾರವು ಸಾಧ್ಯವಾಗಿದೆ. ಲೋಕ ವ್ಯವಹಾರದ ಸಂಚಾಲಕ ಶಕ್ತಿಯೇ ಅದೆನ್ನಬಹುದು. ಭವಿಷ್ಯದ ಗರ್ಭದಲ್ಲಿ ಭೀಕರವಾಗಿ ಅಸಹನೀಯವಾಗಿ ತಲ್ಲಣಗೊಳಿಸುವ ಪರಿಸ್ಥಿತಿಯು ವರ್ತಮಾನ ಮಡಿಲಿಗೆ ಬರುವಾಗ ತುಸು ಸಮಯದ ವೇದನೆಯನ್ನಷ್ಟೇ ಉಂಟುಮಾಡುವುದು. ಆಮೇಲೆ ಕೆಲಸಮಯ ಸಂತಾಪದ ಬಿಸಿಯುಸಿರನ್ನೆಬ್ಬಿಸಿ ಭೂತಕಾಲದ ಮರವೆಯೊಳಗೆ ಮರೆಯಾಗುವುದು.

ಶಿವಪುರವನ್ನೊಮ್ಮೆ ಚಕಿತಗೊಳಿಸಿ ಎಲ್ಲೆಲ್ಲಿಯೂ ಕ್ಷೋಭೆಯನ್ನೆಬ್ಬಿಸಿದ್ದ ಆ ಭೀಕರ ಸುದ್ದಿಯ ನಲಿದಾಟವು ಇಂದೀಗ ಮುಗಿದು ಅಂಕದ ಪರದೆ ಎಳೆಯಲ್ಪಟ್ಟಿತ್ತು. ಶಿವಪುರಸ್ಥರು ಯಥಾಪ್ರಕಾರ ತಮ್ಮ ಅನುನಿತ್ಯದ ಜೀವನ ವ್ಯಾಪಾರದಲ್ಲಿ ನಿರತರಾಗಿದ್ದರು. ಶಿವಾನಂದರು ಕೆಲದಿನ, ಗಂಡ ಸತ್ತ ಸ್ತ್ರೀಯಂತೆ ಹೊರಗೆ ಮುಖ ಸಹ ತೋರಿಸದೆ ಒಳಗೊಳಗೇನೇ ಇದ್ದರೂ ದಿನ ಹೋದಂತೆಲ್ಲಾ ದೆಚ್ಚಿ ಧೈರ್ಯಗೊಂಡು ಮುಂಪಡಿಯಿಟ್ಟು ಹಿಂದಿನ ಜೀವನದ ದಾರಿಗೇನೇ ಬಂದುಬಿಟ್ಟರು. ಸ್ವಲ್ಪ ಸಮಯ ಕಾಕಪೋಕರು ಕೆಲವರು ಅವರನ್ನು ಕಂಡೊಡನೆಯೇ ಏನೇನೋ ಹೇಳಿ ಕೂಗಿಬಿಡುತ್ತಿದ್ದರು. ಗೊಳ್ಳೆಂದು ನಗುತ್ತಿದ್ದರು. ಮಾನವಂತವೆನಿಸುವ ಸಮಾಜವು ಕಣ್ಮುಚ್ಚಿ ಸುಮ್ಮನಿರುತ್ತಿದ್ದಾಗ ಕಾಕಪೋಕ ಹೃದಯವು ಶಿವಾನಂದರನ್ನು ಬಹಿರಂಗವಾಗಿ ಅವಮಾನಿಸಲು ಎದೆಗೊಂಡಿತ್ತು. ಆದರೆ ಶಿವಾನಂದರು ಅದನ್ನು ಗಣ್ಯಮಾಡಬೇಕೇಕೆ? ಸಮಾಜದ ಆಧಾರ ಸ್ತಂಭದಂತಿರುವ ಆಢ್ಯಗೃಹಸ್ಥರು ಅವರನ್ನು ಯಥಾಪ್ರಕಾರ ಮಾನಿಸುತ್ತಿರುವಾಗ ಈ ಕಾಕಪೋಕರೇನು ಮಾಡಿಯಾರು?

ಆದರೆ ಲಲಿತೆಯ ಮೇಲೆ ಕಾಲನ ಕೈಚಳಕವು ಅಷ್ಟೊಂದು ಜಯಶೀಲವಾಗಿ ನಡೆಯಲಿಲ್ಲ. ಅವಳು ನೀಳಬಡಿಯು ರೋಗಿಯಂತಿದ್ದಳು. ರಕ್ತ ಬಾಡಿ ಬಿಳುಪೇರಿದ ಮುಖವೆಲ್ಲಾ ಬಿಳುಪೇರಿ ಹೋಗಿತ್ತು. ಕಂಗಳು ನಿಸ್ತೇಜವಾಗಿದ್ದವು. ನಾಗಿಯೂ ಹತ್ತು ಮಾತಾಡಿದರೆ ಒಂದೇನಾದರೂ ಶಬ್ದವು ಅವಳ ತುಟಿಗಳಿಂದ ಬಹು ಪ್ರಯಾಸದಿಂದ ಹೊರಬೀಳುತ್ತಿತ್ತು. ಅವಳೆಲ್ಲಿಯಾದರೂ ದಿನಕ್ಕೊಂದು ಸಲ ಒಂದು ಮುಷ್ಟಿ ಊಟಮಾಡಿದರೆ ದೊಡ್ಡದು. ಜೀರ್ಣವೇ ಇದ್ದಿಲ್ಲ. ಇಡೀ ದಿನ ಮಲಗಿಕೊಂಡು ಕಣ್ಣೀರಿಡುವುದೊಂದೇ ಅವಳ ಕೆಲಸ. ಎದ್ದು ಕೂತರೂ ಕೂತಲ್ಲೇ ಕೂತು ಯೋಚಿಸುವುದೇ. ನಾಗಿಯು ಏನೇನೆಲ್ಲಾ ಮದ್ದು ಮಾಡಿಸಿದಳು. ಬಗೆ ಬಗೆಯ ಟೋನಿಕ್‌ಗಳನ್ನೆಲ್ಲಾ ಒತ್ತಾಯದಿಂದ ಕುಡಿಸಿದಳು. ಹಲವು ಪರಿಯಿಂದ ಸಮಾಧಾನ ಪಡಿಸಲೆತ್ನಿಸಿದಳು. ಏನು ಮಾಡಿದರೂ ಲಲಿತೆಯು ಕ್ಷೀಣಳಾಗುತ್ತಾ ಬರುತ್ತಿದ್ದಳೇ ಹೊರತು ಸ್ವಲ್ಪವೂ ಪುಷ್ಟಿಯಾಗುತ್ತಿದ್ದಿಲ್ಲ. "ನಾನಿನ್ನು ಯಾವಾಗ ಶಾಲೆಗೆ ಹೋಗುವುದಮ್ಮಾ? ಸುಮಿತ್ರಾ ಬಾಯಿಯವರನ್ನೊಮ್ಮೆ ನೋಡಿ ಬರಲೇ?" ಎಂದು ಮಾತ್ರ ನಾಗಿಯೊಡನೆ ಆಗಾಗ ಪ್ರಶ್ನಿಸುತ್ತಿದ್ದಳು ಮೊದಮೊದಲು ನಾಗಿಯು, "ನೀನು ಸಂಪೂರ್ಣ ಆರೋಗ್ಯವಂತಳಾಗು. ಆಮೇಲೆ ಶಾಲೆಗೂ ಹೋಗಬಹುದು, ಸುಮಿತ್ರಾಬಾಯಿಯವರನ್ನೂ ನೋಡಬಹುದು" ಎಂದು ಲಲಿತೆಯನ್ನು ಸಮಾಧಾನ ಪಡಿಸುತ್ತಿದ್ದಳು. ಆದರೆ ಯಾವ ಸಮಾಧಾನವೂ ಲಲಿತೆಯ ಹೃದಯದ ಕೊಳಗಿನ ನೊನೆಯನ್ನು ಮೊಂಡುಮಾಡಲಿಲ್ಲ. ಹೀಗಾದರೆ ಅವಳು ಬದುಕುವ ಬಗೆ ಹೇಗೆಂಬ ದುಗುಡದಿಂದ ನಾಗಿಯು ಬಹಳ ತಳಮಳಗೊಂಡಿದ್ದಳು. ಲಲಿತೆಯನ್ನು ನೋಡಿದಾಗಲೆಲ್ಲಾ ಅವಳ ಕಣ್ಣಲ್ಲಿ ನೀರು ತುಂಬಿ ಬರುತ್ತಿತ್ತು.

ಇನ್ನು ಮುಚ್ಚುಮರೆಮಾಡಿದರೆ ಫಲವಿಲ್ಲೆಂದು ಒಂದು ದಿನ ನಾಗಿಯು ಲಲಿತೆಗೆ ಎಲ್ಲವನ್ನೂ ಸ್ಪಷ್ಟವಾಗಿ ಹೇಳಿಬಿಟ್ಟಳು "ಮಗು ಲಲಿತಾ ಇನ್ನು ನೀನು ಶಾಲೆ ಮತ್ತು ಸುಮಿತ್ರಾಬಾಯಿಯವರ ಯೋಚನೆ ಬಿಡಬೇಕು. ಈ ಪಾಪಿನಿಯ ಗರ್ಭದಲ್ಲಿ ಹುಟ್ಟಿದ ನಿನಗೆ ವಿದ್ಯೆ, ಬುದ್ಧಿ ಕಲಿತು, ಮದುವೆಯಾಗಿ ಮಾನವಂತ ಜೀವನ ನಡಿಸುವ ಭಾಗ್ಯವಿಲ್ಲ. ನೀನಿನ್ನು ಪತಿತೆ. ಸಮಾಜವು ಆ ಮುದ್ರೆಯನ್ನು ಇಷ್ಟರಲ್ಲೇ ನಿನ್ನ ಹಣೆಗೊತ್ತಿಬಿಟ್ಟಿರುವುದು. ಅಂದಮೇಲೆ ನೀನು ಈ ರೀತಿ ಕೊರಗಿ ನಿನ್ನ ಶರೀರವನ್ನು ಕರಗಿಸಿಕೊಂಡೇನು ಫಲ ಮಗು? ಹೇಗೂ ಆದುದಾಯಿತು ಶಿವಾನಂದರ ಕಾಮುಕತನದಿಂದಾಗಿ ಅತ್ಯಾಚಾರದಿಂದಾಗಿ ನಿನ್ನ ಜೀವನಲತೆಯು ಬೇರುಸಹಿತ ಮುರಿದು ನೆಲಕ್ಕೊರಗಿರುವುದದು. ಇನ್ನು ಅದರ ಬುಡಕ್ಕನೇ ಗೊಬ್ಬರ ಹಾಕಿ ಅದರಿಂದ ಆದಷ್ಟು ಫಲ ಪಡೆಯುವುದೊಂದೇ ದಾರಿಯುಳಿದಿರುವುದು. ಮಗು, ಹೀನರೀತಿ ಜೀವನವನ್ನು ಹಾಳುಮಾಡಿಕೊಂಡು ಫಲವೇನು? ಇದೇ ರೀತಿ ನಡೆದರೆ ಹೆಚ್ಚುಕಾಲ ಬದುಕಲಾರೆ ನನಗೂ ..." ಎನ್ನುವಷ್ಟರಲ್ಲಿ ನಾಗಿಯ ಕಂಠಗೆಯು ಕಟ್ಟಿಹೋಯಿತು. ಅವಳು ಬಾಯ್ಬಿಟ್ಟು ಅತ್ತುಬಿಟ್ಟಳು. ಆದರೆ ಲಲಿತೆಯ ಬಾಯಿಯಿಂದ ಒಂದು ಶಬ್ದವೂ ಹೊರಡಲಿಲ್ಲ. ಒಂದೇ ಒಂದು ಬೊಟ್ಟು ಕಣ್ಣೀರಾದರೂ ಅವಳ ಕಂಗಳಿಂದ ಹೊರಬೀಳಲಿಲ್ಲ. ಗೊಂಬೆಯಂತೆ ಕೂತು ತಾಯಿಯು ಹೇಳುವುದನ್ನೆಲ್ಲಾ ಕೇಳುತ್ತಿದ್ದಳವಳು.

## ಅಧ್ಯಾಯ ೫

## ಭಿಕಾರಿಣಿ

### ಸಾಮಾಜಿಕ ಕಾದಂಬರಿ

ಈ ಮಧ್ಯೆ ನರಸಿಂಹನು ಆಗಾಗ ಬಂದು, ಲಲಿತೆಗೆ ಸೌಖ್ಯವಾಗಿರುವುದೋ ಎಂದು ನೋಡಿ ಹೋಗುತ್ತಿದ್ದನು. ಶಿವಾನಂದರ ಕಾಮದಾಹವು ಅವನನ್ನು ನಾಗಿಯ ಮನೆಗಟ್ಟುತ್ತಿತ್ತು. ಶಿವಾನಂದರಿಗೀಗ ಇಡಿ ಮುಳುಗಿದ ಮೇಲೆ ಚಳಿಯೇನೂ ಇರಲಿಲ್ಲ. ಮೊದಮೊದಲು ಸಮಾಜವು ಏನು ಮಾಡಿಬಿಡುವುದೋ ಎಂಬೊಂದು ಭೀತಿ ಅವರಲ್ಲಿತ್ತು. ತಾನೊಬ್ಬ ಸನ್ಯಾಸಿ ಹಾಗೆಲ್ಲ ಮಾಡುವುದು ತಪ್ಪೆಂದು ಮನಸ್ಸಾಕ್ಷಿಯೂ ಕೂಗಿಡುತ್ತಿತ್ತು. ಆದರೆ ಸಮಾಜವು ಕೆಲಸಮಯ ಮಾತ್ರ ಬರಿಯ ಗುಲ್ಲೆಬ್ಬಿಸಿ ಸುಮ್ಮನಾದುದರಿಂದ, ಮಾತ್ರವಲ್ಲದೆ ತನ್ನನ್ನು ಯಥಾಪ್ರಕಾರ ಮಾನಿಸ ಹತ್ತಿದುದರಿಂದ ಅದರ ಹಣೆಬರಹ ಇಷ್ಟೇ ಎಂದವರು ಬೆಲೆಕಟ್ಟಿ ನಿರ್ಭಯರಾದರು. ಮನಸ್ಸಾಕ್ಷಿಯ ಕೂಗಿನ ಕುತ್ತಿಗೆಯನ್ನೇ ಹಿಸುಕಿಬಿಟ್ಟರು. ಮೊದಮೊದಲು ಬೀದಿಹೋಕರ ಅಪಹಾಸ್ಯದ ಕೂಗು ಅವರ ಹೃದಯವನ್ನೊಮ್ಮೆ ಕಿವಿದು ಬಿಡುತ್ತಿತ್ತು. ಆ ಮೇಲೆ ಅದವರಿಗೆ ಅಭ್ಯಾಸವಾಗಿ ಹೋಯಿತು. ಹುಸಿನಗೆಯಿಂದ ಅದನ್ನವರು ಮೂಲೆಗೊತ್ತುತ್ತಿದ್ದರು. ಶಿವಾನಂದರಿಗೆ ಶಿವಪುರದಲ್ಲಿ ಹುಡುಗಿಯರಿಗೇನೂ ಬರಗಾಲಬಿದ್ದಿರಲಿಲ್ಲ. ಅವರನ್ನೊದಗಿಸಿ ಕೊಡುವ ದಲಾಲಿಗಳಿಗೂ ಕೊರತೆಯಿದ್ದಿಲ್ಲ. ಯಾಕೆಂದರೆ ಶಿವಪುರ ಮಠದಲ್ಲಿದ್ದ ಹೆಚ್ಚಿನವರೆಲ್ಲಾ ಅವರು ಹೇಳಿದಂತೆ ಕುಣಿಯಲು ಸಿದ್ಧರಿದ್ದರು. ಅವರೇನಾದರೂ ಆಜ್ಞಾಪಿಸಿದರೆಂದರೆ, 'ಪರಾಕೆ, ಬುದ್ಧಿ'ಯೆಂದು ಎಂತಹ ಹೀನ ಕೆಲಸಮಾಡಲೂ ಹೇಸುತ್ತಿದ್ದಿಲ್ಲ. ಅಷ್ಟೊಂದು ಕೆಟ್ಟುಹೋಗಿತ್ತು ಮಠದ ವಾತಾವರಣ. ಯಾವುದು ಧರ್ಮಪೀಠವಾಗಿ ಧರ್ಮಪ್ರಚಾರ, ನೀತಿನಿಯಮ ಪಾಲನೆ, ಸಮಾಜದ ಸಂಘಟನೆ ಮತ್ತು ಕ್ಷೇಮ ಸಾಧನೆಯ ಉಪಕರಣವಾಗಿ, ಆತ್ಮತೇಜಸ್ಸಿನ ಪವಿತ್ರ ವಾತಾವರಣವಾಗಿರಬೇಕಿತ್ತೋ ಅದೇ ಇಂದು ಅಧರ್ಮ, ಅನೀತಿ, ಅನಾಚಾರದ ತವರುಮನೆಯಾಗಿ, ಕೊಳೆತು ಹುಳಿತು ನಾರುತ್ತಿತ್ತು. ವೇಶ್ಯೆಯರನ್ನು ಶಿವಾನಂದರಿಗೆ ತಂದುಕೊಡುವ ಮಾತಂತಿರಲಿ, ತಮ್ಮ ಸ್ತ್ರೀಯರನ್ನೂ ಅವರಿಗೊಪ್ಪಿಸಲು ಹಿಂಜರಿಯುವ ಲಂಡರಿಗೇನೂ ಮಠದಲ್ಲಿ ಕಡಿಮೆಬಿದ್ದಿರಲಿಲ್ಲ. ಮಠದಲ್ಲಿದ್ದವರೆಲ್ಲಾ ಶಿವಾನಂದರಿಗೆ ಅನುಕೂಲರಾಗಿಯೇ ಇದ್ದರು. ಅವರ ದುರ್ವರ್ತನೆಯನ್ನು ಧೈರ್ಯದಿಂದ ವಿರೋಧಿಸುವ ನೈತಿಕ ಬಲವುಳ್ಳ ಒಬ್ಬನೇ ಒಬ್ಬ ವ್ಯಕ್ತಿಯಾದರೂ ಶಿವಪುರ ಮಠದಲ್ಲಿರಲಿಲ್ಲ. ಎಲ್ಲರೂ ಶಿವಾನಂದರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವವರು. ಅವರ ಅಧಿಕಾರ, ಅವರ ಧನದೌಲತ್ತು, ಅವರ ಆಸ್ತಿ, ಅವರ ಶಕ್ತಿಯಿಂದೆಲ್ಲಾ ಅವರಿಗೇನು ಮಾಡಲೂ ಸಾಧ್ಯವಿದೆ. ನಾಳೆ ತಮ್ಮನ್ನು ಹೊರಹಾಕಿದರೆ ತಮ್ಮ ಪಾಡೇನು? ಅವರೇನು ಬೇಕಾದರೂ ಮಾಡಲಿ ತಮಗೇನು? ಎಂಬ ತಮ್ಮ ತಮ್ಮ ಸುರಕ್ಷಿತತೆಯ ಸ್ವಾರ್ಥಭಾವನೆಯು, ಅಭಿಮಾನ ಶೂನ್ಯತೆಯು, ಆತ್ಮಬಲದ ಅಭಾವವು ಸ್ವಲ್ಪ ಸ್ವಗೌರವವಿದ್ದ ಕೆಲವರನ್ನೂ ಜಡಭರಿತರನ್ನಾಗಿ ಮಾಡಿಬಿಟ್ಟಿದ್ದಿತು. ಅವರು ಯಂತ್ರದೋಪಾದಿ ತಮ್ಮ ನಿಯಮಿತ ಕೆಲಸ ಮಾಡಿ ಮಜೂರಿ ಪಡೆದು ಸುಮ್ಮನಿರುತ್ತಿದ್ದರು. ಸಮಾಜದ ಕಣ್ಣಿಗೆ ಮಣ್ಣುಹಾಕಲು ಮಠದಲ್ಲಿ ಪೂಜೆ ಪುನಸ್ಕಾರ, ಪುರಾಣ ಪಾರಾಯಣ, ವಾಚನ ಭಜನ ಕೀರ್ತನೆ ಆರಾಧನೆ ವ್ರತ ನಿಯಮ ನಿಷ್ಠೆ, ದಾನ ಧರ್ಮ ದಕ್ಷಿಣೆಯೆಲ್ಲಾ ಸಾಂಗವಾಗಿ ನಡೆಯುತ್ತಿದ್ದಿತು. ಈ ಕಣ್ಣುಕಟ್ಟೊಂದು ನಡೆದರೆ ಸರಿಯಷ್ಟೆ ಸಮಾಜಕ್ಕೆ ಮತ್ತೇನು ಬೇಕು? ಹೊರಗಣ ವೇಷ ಭೂಷಣಗಳು ಸರಿಯಾಗಿದ್ದರಾಯಿತು. ಒಳಗೆ ಎಂತಹ ಕೊಳಕಿದ್ದರೇನು?

ಶಿವಾನಂದರು, ಜನತೆಯ ದೌರ್ಬಲ್ಯ ಸಮಾಜದ ಅಸಡ್ಡೆಯಿಂದಾಗಿ ಚೆನ್ನಾಗಿ ಪಳಗಿದ ವಿಟಪುರುಷನಂತಾಗಿ ಬಿಟ್ಟರು. ನಗೆನಾಚಿಕೆ ಮಾನ ಮರ್ಯಾದೆಯ ಲವಲೇಶವೂ ಅವರಿಗಿಲ್ಲದಾಯಿತು. ಅವರ ಕಾಮಲಾಲಸೆಯು ದಿನೇ ದಿನೇ ಅಧಿಕಾಧಿಕವಾಗಹತ್ತಿತು. ಅವರು ಸಾಮಾನ್ಯ ವಿಟರಂತೆ ರಾತ್ರಿ ಮಠ ಬಿಟ್ಟು ಹೊರಹೋಗಲಾರಂಭಿಸಿದರು. ಅದಕ್ಕಾಗಿ ಸೆಲೂನ್ ಕಾರೊಂದನ್ನು ತೆಗೆದುಕೊಂಡಿದ್ದರು. ನರಸಿಂಹನ ಕೆಲಸವು ಇಂದೀಗ ಬಹಳ ಸುಲಭವಾಗಿತ್ತು. ಹುಡುಗಿಯರನ್ನು ಗುಟ್ಟಿನಲ್ಲಿ ಮಠಕ್ಕೆ ಕರದೊಯ್ದು ಕೊಡುವ ಕಷ್ಟವು ಅವನಿಗೆ ತಪ್ಪಿತು. ಶಿವಾನಂದರು ಇವತ್ತು ರಾತ್ರಿ ಕಾರಿನಲ್ಲಿ ಅಲ್ಲಿ ಹೋದರು, ಇಲ್ಲಿ ಹೋದರು ಎಂಬ ಸುದ್ದಿಯು ದಿನದಿನ ಶಿವಪುರದಲ್ಲಿ ಹಬ್ಬುತ್ತಿತ್ತು. ಸುದ್ದಿಯ ದೂತರು ಹೇಗಾದರೂ ಮಾಡಿ ಆ ರಹಸ್ಯವನ್ನು ಬಯಲಿಗೆಳೆದು ಬಿಡುತ್ತಿದ್ದರು. ಶಿವಪುರಸ್ಥರಿಗೂ ಈ ಸುದ್ದಿಗಳು ನಿತ್ಯಗಟ್ಟಲೆಯವುಗಳಾಗಿ ಬಿಟ್ಟುವು. ವಿಶೇಷವೇನೂ ಇಲ್ಲದ ಅನುನಿತ್ಯದ ವ್ಯವಹಾರದಂತಾದುವು. ಶಿವಾನಂದರ ವಿಷಯ ಲಾಲಸೆಯು, ಕಾಮಚೇಷ್ಟೆಯು ಅದಾವ ರೂಪದಲ್ಲೆಲ್ಲಾ ಆವಿಷ್ಕಾರವಾಗುತ್ತಿತ್ತೆಂಬುವುದನ್ನು ಬರೆಯುತ್ತಾ ಹೋದರೆ ಅದಕ್ಕಾಗಿಯೇ ಇನ್ನೊಂದು ಪುಸ್ತಕ ಬೇಕಾದೀತು. ನಮ್ಮ ಲೇಖನಿಯು ಮುಟ್ಟದಷ್ಟು ಹೇಯವಾಗಿರುವ ಅವರ ಭೋಗವಿಲಾಸದ ಸಂಗತಿಗಳನ್ನು ನಾವಿಲ್ಲಿ ವಿವರಿಸಹೋಗದೆ ನಮ್ಮ ವಾಚಕರ ಕಲ್ಪನೆಗೇನೇ ಅವನ್ನು ಬಿಟ್ಟುಬಿಡುವೆವು. ಶಿವಾನಂದರು ಶೋಕು ಡ್ರೆಸ್ ಹಾಕಿಕೊಂಡು ಆ ಊರಿಗೆ ಹೋದರು, ಅಲ್ಲಿ ಹಾಗೆ ಮಾಡಿದರು; ಫುಲ್ ಸೂಟ್ ಹಾಕಿಕೊಂಡು ಆ ನಾಟಕಕ್ಕೆ ಹೋದರು, ಈ ಸರ್ಕಸ್ ನೋಡಿದರು; ಇಂದು ರಾತ್ರಿ ಅಲ್ಲಿ ಥಾವಿಸಿದರು, ಆ ಮನೆಗೆ ಪ್ರವೇಶಿಸಿದರು, ಎಂದೆಲ್ಲಾ ಸುದ್ದಿಗಳ ಮೇಲೆ ಸುದ್ದಿಗಳು ಶಿವಪುರದ ವಾತಾವರಣವನ್ನು ದಟ್ಟವಾಗಿ ತುಂಬಿಬಿಟ್ಟುವು. ಕಾಕ-ಪೋಕರಿಗದೊಂದು ದಿನ ನಿತ್ಯದ ಅತ್ಯಂತ ರುಚಿಕರ ಆಹಾರವಾ

ಗಿದ್ದಿತು. ಅನೇಕ್ಕವರು ಬೇಕುಬೇಕಾದ ಬಣ್ಣಕೊಟ್ಟು ಕತೆಕಟ್ಟಿ ಹೇಳುತ್ತಿದ್ದರು. ಆದರೂ ಶಿವಪುರದ ಪ್ರತಿಷ್ಠಿತ ಸಮಾಜದ ಹೃದಯವು ಅದರಿಂದ ಒಂದಿಷ್ಟು ಕಂಪಿಸಲಿಲ್ಲ. ಶಿವಾನಂದರ ಸ್ಥಾನ-ಮಾನಕ್ಕೆ ಒಂದಿಷ್ಟೇನೂ ಧಕ್ಕೆಯುಂಟಾಗಲಿಲ್ಲ. ಆದರ ಬದಲಿಗೆ, ಅವರು ಬಹಳ ಬುದ್ಧಿಶಾಲಿ, ಕಾರ್ಭಾರಿ, ಏನುಮಾಡುವುದಕ್ಕೂ ಶಕ್ತಿಯುಳ್ಳವರೆಂಬ ಖ್ಯಾತಿ ಮತ್ತು ಭೀತಿಯ ಭೂಷಣವೇ ಅವರಿಗೆ ದೊರೆಯಹತ್ತಿತು. ಇದೀಗ ಸಮಾಜದ ಇಂದಿನ ರೀತಿ.

ಶಿವಾನಂದರೊಂದು ದಿನ, "ಏನೋ ನರಸಿಂಹ, ಆ ಲಲಿತೆಗಿನ್ನೂ ಸೌಖ್ಯವಾಗಿಲ್ಲವೇ? ನಾಳೆ ರಾತ್ರಿ ನನಗಲ್ಲಿ ಹೋಗಲೇಬೇಕು" ಎಂದು ಬಿಟ್ಟರು ನಿರ್ಧಾರ ಪೂರ್ವಕವಾಗಿ. ನರಸಿಂಹನು ಅಗ ಬೇರೇನು ಹೇಳುವುದಕ್ಕೂ ಹೆದರಿ, "ಅಯ್ತು ಬುದ್ಧಿ" ಎಂದು ಬಿಟ್ಟನು. ಕೈಯ ಪಕ್ಷಿಯು ಎಷ್ಟೊಂದು ಸುಂದರವಾಗಿದ್ದರೂ ಕೈಗೆ ಸಿಗದೆ ದೂರದ ಮರದಲ್ಲಿ ಎಲೆಗಳ ಮರೆಯಲ್ಲಿ ಕುಳಿತಿರುವ ಪಕ್ಷಿಯ ಮೇಲೆ ಕಣ್ಣುಹಾಕಿ ಅದನ್ನು ಪಡೆಯಲು ಹಾತೊರೆಯುವುದು ಮಾನವನ ಸ್ವಾಭಾವಿಕವಾದೊಂದು ಮನೋವೃತ್ತಿ. ಅಂತೆಯೇ ಶಿವಾನಂದರು ಎಲ್ಲೆಲ್ಲಿ ಹೋಗಿ ಎಷ್ಟು ಮಂದಿ ಸ್ತ್ರೀಯರನ್ನೆಲ್ಲಾ ಕಾಮಿಸಿ ರಮಿಸಿದರೂ, ಲಲಿತೆಯ ಮೇಲಿನ ಅವರ ಕಾಮತೃಷೆಯು ಒಳಗೊಳಗೆ ಉರಿಯುತ್ತಿತ್ತು. ಆದರೆ, ಅವಳಿಗೆ ಇನ್ನೂ ಸೌಖ್ಯವಾಗಲಿಲ್ಲ, ಬಹಳ ಆಶಕ್ತಿಯಿದೆ, ಕೃಶವಾಗಿದ್ದಾಳೆಂದು ನರಸಿಂಹನು ಲಲಿತೆಯನ್ನು ಆಗಾಗ ನೋಡಿ ಬಂದು ಹೇಳುತ್ತಿದ್ದುದರಿಂದ ಶಿವಾನಂದರು ಅದನ್ನು ನಿರ್ವಾಹವಿಲ್ಲದೆ ತಡೆದಿಟ್ಟುಕೊಳ್ಳುತ್ತಿದ್ದರು. ಅದು ತಡೆದಿಟ್ಟಷ್ಟು ಹೆಚ್ಚೆಚ್ಚು ಉಗ್ರವಾಗುತ್ತಿತ್ತು. ಕಡೆಗವರು ತಡಕೊಳ್ಳಲಾರದೆ ನರಸಿಂಹನೊಡನೆ ಮೇಲಿನ ಮಾತನ್ನು ಹೇಳಿದರು. ಆವನು ಮೊದಲು, "ಅಯ್ತು ಬುದ್ಧಿ" ಎಂದು ಸುಮ್ಮನಾದವನು, ಸ್ವಲ್ಪ ಸಮಯವಾದಮೇಲೆ "ಅಂದಿನಂತೆಯೇ ಆದರೆ? ಕೆಲವು ದಿನ ಹೋಗಲಿ ಪರಾಕೆ. ಇನ್ನೂ ಅವಳಿಗೆ ಸಂಪೂರ್ಣ ಸೌಖ್ಯವಾಗಲಿಲ್ಲ" ಎಂದನು. "ಯಾವಾಗ ಸೌಖ್ಯವಾಗುವುದೋ ಇನ್ನು?" ಎಂದು ನಿರಾಶೆಯ ಉದ್ಗಾರವೆತ್ತಿ ಸುಮ್ಮನಾದರು ಶಿವಾನಂದರು ಕಡೆಗೆ.

ದಿನಹೋದಂತೆ ಲಲಿತೆಯ ದುಃಖವು ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಹೋದರೂ ದೇಹವು ಕೃಶವಾಗಿಯೇ ಇತ್ತು. ಜೀರ್ಣಶಕ್ತಿಯು ಹೆಚ್ಚಾಗಲಿಲ್ಲ. "ಏನು ಮಾಡುವುದು? ಇನ್ನೇನು ಮಾಡುವುದು?" ಎಂಬ ಚಿಂತೆಯಿಂದ ನಾಗಿಯೂ ಸೊರಗಿ ಹೋಗಿದ್ದಳು. ಸಿಕ್ಕಿದವರೊಡನೆ ಅವರು ಮಾತಾಡುವ ಮಾತೇ ಇದು. ಅವಳಿಗೆ ಅದೇ ಒಂದು ಹುಚ್ಚು ಹಿಡಿದಂತಾಗಿತ್ತು. ಯಾರು ಏನು ಮದ್ದು ಹೇಳಿದರೂ ನಂಬಿ ಒಂದೊಮ್ಮೆ ಅತಿ ಉತ್ಸಾಹದಿಂದ ಲಲಿತೆಗದನ್ನು ಮಾಡುವಳು. ಆದರೆ ಅದು ನಿಷ್ಫಲವಾದಾಗ ಮತ್ತಷ್ಟು ನಿರುತ್ಸಾಹಪಡುವಳು. ಅವಳ ದಪ್ಪದೇಹದ ಮಾಂಸವು ಜಾರಹತ್ತಿತು. ಗಟ್ಟಿ ಮೈಗಟ್ಟು ಸಡಿಲಾಯಿತು. ಕಡೆಗೆ ಯಾರೋ ಅವಳಿಗೊಂದು ಗುಟ್ಟಿನ ಮದ್ದು ಹೇಳಿದರು. "ಒಡನೆಯೇ ಅದು ಹೌದೆಂದು ತೋರಿತು ನಾಗಿಗೆ. ಗುಟ್ಟಾಗಿ ಆ ಮದ್ದನ್ನವಳು ತರಿಸಿಟ್ಟಳು. ಅಂದು ರಾತ್ರಿ ಲಲಿತೆಯು ಮಲಗುವಾಗ ನಾಗಿಯು ಪ್ರೀತಿಯಿಂದ ಅವಳನ್ನು ಕರೆದು "ಮಗು ಹೀಗಾದರೆ ಬದುಕುವುದು ಹೇಗೆ? ನಾನು ಇವತ್ತು ಬೆಳಿಗ್ಗೆ ಡಾಕ್ಟರ್ ಗಂಗಾಧರರಾಯರ ಬಳಿಗೆ ಹೋಗಿ ಹೊಸ ಔಷಧಿಯೊಂದನ್ನು ತಂದಿದ್ದೇನೆ. ಅದನ್ನು ತೆಗೆದುಕೊಂಡರೆ ಯಾರಿಗಾದರೂ ಜೀರ್ಣಶಕ್ತಿಯುಂಟಾಗುವದಂತೆ. ದೇಹ ಪುಷ್ಟಿಯಾಗುತ್ತದಂತೆ. ಅದನ್ನು ಸ್ವಲ್ಪ ಕೊಡಲೇ?" ಎಂದಳು ಬಹಳ ಸಂದೇಹಗೊಂಡು. "ನಾನಿನ್ನು ಬದುಕಿ ಫಲವೇನಮ್ಮಾ? ಬೇಗನೇ ಸತ್ತರೆ

‘ನವಯುಗ’ದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಲೇಸಲ್ಲವೇ?" ಎಂದಳು ಲಲಿತೆ ತೀವ್ರ ವೈರಾಗ್ಯಗೊಂಡು. "ಹಾಗೆ ಹೇಳಬಾರದು ಮಗು, ಹೇಳಬಾರದು. ನಾನು ನಿನ್ನ ತಾಯಿಯಲ್ಲವೇ? ನನ್ನ ಮಾತನ್ನು ಕೇಳಲಾರೆಯಾ? ಇದೇ ರೀತಿ ನಡೆದರೆ ನಾನೂ ಬದುಕುವ ಹಾಗಿಲ್ಲ ಮಗು," ಎಂದು ನಾಗಿಯು ದುಃಖಿಸಲಾರಂಭಿಸಿದಳು. ಲಲಿತೆಯು ಬಹಳ ಹೊತ್ತು ಏನನ್ನೋ ಆಲೋಚಿಸುತ್ತಾ ಸುಮ್ಮನಿದ್ದಳು. ಅವಳ ದೃಷ್ಟಿಯು ಕೋಣೆಯ ಕಿಟಕಿಯಿಂದ ಅತಿ ದೂರದ ದಿಗಂತಕ್ಕೆ ಹರಿದಿತ್ತು. ಅವಳ ಜೀವನದ ದೃಶ್ಯಗಳೆಲ್ಲಾ ನಿಸ್ತೇಜ ಚಂದ್ರಪ್ರಕಾಶದಿಂದ ತುಂಬಿದ ವಾತಾವರಣದಲ್ಲಿ ಚಿತ್ರಿತವಾದಂತಿತ್ತು. ಅವಳು ನೋಡಿದಳು, ಅದನ್ನೇ ಮತ್ತಾ ನೋಡಿದಳು. ಆ ಮೇಲೆ ಥಕ್ಕನೆ ದೃಷ್ಟಿತಿರುಗಿಸಿ ನಾಗಿಯನ್ನು ನೋಡುತ್ತಾ ಕುಳಿತಳು. ನಾಗಿಯು ದುಃಖಿಸಿ ದುಃಖಿಸಿ ಅಳುತ್ತಾ ಕುಳಿತಿದ್ದಳು. ಆಮೇಲೆ ಆದೇನೋ ಹೃದಯದ ದೊಡ್ಡ ವಿಪ್ಲವವನ್ನು ತಡೆಗಟ್ಟಿದಂತೆ ಒಂದೊಮ್ಮೆ ನಿಟ್ಟುಸುರಿಟ್ಟಳು. ತೆರೆಯೇರಿ ಬೀಳುವಂತಾಯಿತು ಹೃದಯಪ್ರದೇಶ. "ಆಯಿತಮ್ಮಾ, ಇನ್ನು ನೀನು ಹೇಳಿದಂತೆಯೇ ಮಾಡುವೆನು" ಎಂದಳು ತಕ್ಷಣವೇ ಅಷ್ಟರವರೆಗೆ ಆರಿ ಒಣಗಿಹೋಗಿದ್ದ ಅಶ್ರುಧಾರೆಯು ಒಂದೇ ಸವನೆ ಅವಳ ಕಂಗಳಿಂದ ಹರಿಯತೊಡಗಿತು. ಅವಳು ಎಷ್ಟೊಂದು ತಡಕೊಂಡರೂ ಸಾಧ್ಯವಾಗದೆ ಬಿಕ್ಕಿ ಬಿಕ್ಕಿ ಅಳತೊಡಗಿದಳು, "ಅಳಬೇಡ ಮಗು ಅಳಬೇಡ. ಈ ಹೊಸ ಮದ್ದಿನಿಂದ ನಿನಗೆ ಜೀರ್ಣಶಕ್ತಿಯೆಲ್ಲಾ ಸರಿಯಾಗಿ ಸೌಖ್ಯವಾಗುವುದು" ಎಂದು ನಾಗಿಯು ಸೈದಡವಿ ಸಂತೈಸಿ ಆಮೇಲೆ ಬಹಳ ಮೃದುವಾಗಿ, "ಮದ್ದು ಸ್ವಲ್ಪ ತರಲೇ?" ಎಂದಳು. "ಆಯ್ತು" ಎಂದಳು ಲಲಿತೆ ಬಹಳ ನಿಧಾನವಾಗಿ. ಆಗ ನಾಗಿಯು ಅಡಿಗೆ ಕೋಣೆಗೆ ಹೋಗಿ ಕಪಾಟೊಂದರ ಬೀಗ ತೆಗೆದು ಒಂದು ಗ್ಲಾಸಿನಲ್ಲಿ ಸುಮಾರು ಅರೆಪಾಸಿಗಿಂತಲೂ ಹೆಚ್ಚು ಮದ್ದನ್ನು ಹಾಕಿತಂದು, "ಇದನ್ನು ಕುಡಿದರೆ ಎಲ್ಲ ಸೌಖ್ಯವಾಗುತ್ತದೆ ಮಗು. ಸರಿ ನಿದ್ದೆ ಹಿಡಿದು ನಿನ್ನೀ ಚಿಂತೆಯೆಲ್ಲಾ ತೊಲಗಿ ಹೋಗುತ್ತವೆ. ಚೆನ್ನಾಗಿ ಜೀರ್ಣಶಕ್ತಿ ಬಂದು ದೇಹವು ಪುಷ್ಟಿಯಾಗುತ್ತವೆ. ಒಂದೇ ಸವನೆ ಕುಡಿದು ಬಿಡಬೇಕಂತೆ. ಸ್ವಲ್ಪ ಘಾಟಿರಬಹುದಂತೆ. ಡಾಕ್ಟರರು ಹೇಳಿರುವರು" ಎಂದಳು. ಗ್ಲಾಸುಹಿಡಿದ ನಾಗಿಯ ಕೈನಡುಗುತ್ತಿತ್ತು. ಅವಳು ಬಹಳವಾಗಿ ತಲ್ಲಣಗೊಂಡಿದ್ದಳು. ಲಲಿತೆಯು ಗ್ಲಾಸನ್ನು ನಾಗಿಯ ಕೈಯಿಂದ ತೆಗೆದುಕೊಂಡು ಅವಳು ಹೇಳಿದುದೆಲ್ಲಾ ಸತ್ಯವೆಂದು ನಂಬಿ ಒಂದೇ ಸವನೆ ಕುಡಿದುಬಿಟ್ಟಳು. ಕುಡಿದೊಡನೆಯೇ ಅವಳ ಹೊಟ್ಟೆಯಲ್ಲಿ ಬೆಂಕಿಯೆದ್ದಿತು. ತಲೆ ತಿರುಗಹತ್ತಿತು. ಬಾಯಿಯೆಲ್ಲಾ ವಾಸನೆಯಿಂದ ತುಂಬಿತು. "ಅಮ್ಮಾ ನೀರು ಕೊಡು ನೀರು! ಎದೆಯೆಲ್ಲಾ ಸುಡುತ್ತಿದೆ!!" ಎಂದು ಕೂಗಿದಳು. ನಾಗಿಯು ಗಲಿಬಿಲಿಗೊಂಡು ಓಡಿ ಹೋಗಿ ಒಂದು ಲೋಟೆ ನೀರು ತಂದುಕೊಟ್ಟಳು. ಲಲಿತೆಯು ಒಂದೇ ಸವನೆ ಲೋಟೆಯ ನೀರನ್ನೆಲ್ಲಾ ಕುಡಿದಳು. "ಇನ್ನೊಂದು ಲೋಟೆ ತಾ. ಇನ್ನೂ ಸುಡುತ್ತಿದೆ" ಎಂದು ಮೊರೆಯಿಟ್ಟಳು ಲಲಿತೆ. ನಾಗಿಯು ಮತ್ತೂ ಒಂದು ಲೋಟೆ ತಂದುಕೊಟ್ಟಳು ಲಲಿತೆಯ ಹೊಟ್ಟೆಯ ಉರಿಯು ಸ್ವಲ್ಪ ಶಾಂತವಾಯಿತು. ಆದರೆ ತಲೆತಿರುಗಿ ಲೋಕವೇ ಮೇಲೆ ಕೆಳಗಾದಂತಾಯಿತು. "ಅಮ್ಮಾ ಶರಾಬು! ಶರಾಬು!!! ನನಗೆ ಶರಾಬು ಕೊಟ್ಟೆಯಾ?" ಎಂದು ಕೂಗಿ ಜೋಥತಪ್ಪಿ ಬಿದ್ದುಬಿಟ್ಟಳು.

**‘ಅತಿ ಆಶೆಗೆ ಹೋಗಿ ಗತಿಗೇಡು ಮಾಡಿಕೊಳ್ಳಬೇಡಮ್ಮಾ.**
**ಸ್ವಾಮಿಗಿಗೆ ನಿನ್ನ ಕೈಯಲ್ಲಿದ್ದ ಹಣಕೊಡಬೇಡ!!’**

(ಮುಂದಿನ ಸಂಚಿಕೆ ನಿರೀಕ್ಷಿಸಿರಿ.)


ನವವಿಧದ ಲೇಖನಗಳಿಂದೊಪ್ಪುವ ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ.

ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ---

ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

**ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು!** ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರಕೊಳ್ಳಿರಿ.

# ವಿದ್ಯಾರ್ಥಿಗಳ ಗುರಿ ಏನಾಗಿರಬೇಕು?

## ಧ್ಯೇಯ ರಹಿತವಾದ ವಿದ್ಯೆ ಅನರ್ಥಕಾರಿ.

**ಧ್ಯೇಯಭಾಸ್ಕರನ ಆರಾಧನೆಯಿಂದಲೇ ಹೃದಯ ಪುಷ್ಪ ಅರಳುವುದು. ಗುಣವೂ ವಿದ್ಯೆಯೂ ಜತೆಗೊಂಡರೇನೇ ಬೆಳಕು. ಹೊರಗಿನ ಅನುಕರಣವು ಗಮ್ಯವಲ್ಲ. ಒಳಗಿನ ತತ್ವಸಾಧನೆ.**

[ತಾರೀಕು ೧೫–೭–೩೭ರಲ್ಲಿ ಪ್ರೇಮ ಮೆಡಿಕಲ್ ಕೋಲೇಜಿನ ಹೊಸ ವರ್ಷದ ಆರಂಭದಲ್ಲಿ ಪಂಡಿತ ತಾರಾನಾಥ (ಪ್ರಿನ್ಸಿಪಲ್, ಪ್ರೇಮ ಮೆಡಿಕಲ್ ಕಾಲೇಜ್)ರು ಮಾಡಿದ ಭಾಷಣದ ಸಾರಸಂಗ್ರಹವಿದು. ಅಂದು ಪುಬ್ಬಳ್ಳಿಯ ವೈದ್ಯ ಮಹೋಪಾಧ್ಯಾಯ ಹಲಸೀಕರರು ಹಾಜರಿದ್ದರು.]

ಮಾನ್ಯ ಹಲಸೀಕರರೆ, ಮಿತ್ರರೆ—

ಇಂದು ನಮ್ಮ ಹೊಸ ವರ್ಷದ ಆರಂಭದಿನದಲ್ಲಿ ಶ್ರೀ ವೈದ್ಯ ಮಹೋಪಾಧ್ಯಾಯ ಹಲಸೀಕರರೂ ಅತಿಥಿಗಳಾಗಿರುವುದು ಸಂತೋಷದ ಸಂಗತಿ. ಇವರು ಅಖಿಲ ಕರ್ನಾಟಕದಲ್ಲಿ ಆಯುರ್ವೇದದ ಪ್ರಚಾರಕ್ಕಾಗಿ ದುಡಿಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದ ಇಂಥಾ ಮಹನೀಯರ ಆಶೀರ್ವಾದವು ಆಯುರ್ವೇದದ ಶ್ರೀಗಣೇಶವನ್ನು ತೊಡಗುವ ನಿಮಗೆ ಈ ದಿನದಲ್ಲಿ ದೊರೆತಂಥಾದ್ದು ಹೆಚ್ಚಿನದಲ್ಲವೆ?

ನಮ್ಮ ಕಾಲೇಜು ಇಂದಿಗೆ ಆರಂಭವಾಗುವದಿದ್ದರೂ ಹೆಚ್ಚಿನ ವಿದ್ಯಾರ್ಥಿಗಳು ಬರುವವರು ಹಿಂದುಳಿದಿರುವರು. ಕೆಲವರು ನಾವು ಎರಡು ದಿನ ತಡೆದು ಬರುತ್ತೇವೆ, ನಮಗೆ ಸ್ವಲ್ಪ ಅಡಚಣೆಯಾಗಿದೆ ಎಂದು ಬರೆದಿರುತ್ತಾರೆ. ಕೆಲವರು ಸ್ವಲ್ಪ ತಡವು ಬರುತ್ತೇವೆ ಎಂದು ಬರೆದಿರುತ್ತಾರೆ. ಇಂಥಾ ಸಾವಕಾಶಕ್ಕೆ ನಮ್ಮಲ್ಲಿ ಸರಕಾರಿ ಕಾನೂನು ಕಾಯಿದೆಗಳ ಬಿಗಿ ಇಲ್ಲದಿರುವುದೇ ಕಾರಣವೆನ್ನಬಹುದು. ಅವರ ಅಂಥಾ ಕಟ್ಟುಪಾಡುಗಳನ್ನು ಇಡುವುದಕ್ಕೆ ಸಾಧ್ಯವಿಲ್ಲದೆ ನಾವು ಬಿಟ್ಟಿದ್ದಲ್ಲ. ಹೊರಗಿನ ಒತ್ತಾಯಕ್ಕೆ ಒಗ್ಗಿ ನಡೆಯುವ ಮನೋಗತಿಯು ನಮ್ಮ ಸ್ವಭಾವವಾಗಿದೆ. ಇನ್ನು ಅಂಥಾ ಕಟ್ಟುಗಳಿಂದ ನಮ್ಮಲ್ಲಿ ದಾಸ್ಯತ್ವವೇ ಹೆಚ್ಚುವುದಲ್ಲದೆ ಸ್ವಾವಲಂಬನವು ಮೊಳೆಯದು. ವ್ಯಕ್ತಿತ್ವವು ಅರಳಬೇಕಾದರೆ ಒತ್ತಾಯವು ಒಳಗಿನಿಂದ ಇರಬೇಕಲ್ಲದೆ ಹೊರಗಿನಿಂದ ಅಲ್ಲ. ಆದ್ದರಿಂದ ಸಾಧ್ಯವಿದೆಯೆಂದು ಒಂದು ಕಟ್ಟನ್ನು ಮಾಡುವುದಿಲ್ಲ. ಅದು ಯೋಗ್ಯವೂ ಹಿತವಿಕಾಸಕಾರಕವೂ ಆಗಿರಬೇಕು. ಆದ್ದರಿಂದ ಹೊರಗಿನ ಒತ್ತಾಯಕ್ಕೆ ಶರಣರಾಗಿ ತೆರಳುವ ಸ್ವಭಾವವನ್ನು ಬಿಟ್ಟು ಒಳಗಿನ ಧ್ಯೇಯವನ್ನು ಕಂಡು ಸ್ವತಂತ್ರರಾಗಿ ಮುಂದುವರಿಯುವುದನ್ನು ಕಲಿಯಿರಿ.

ಇಲ್ಲಿ ವೈದ್ಯಕೀಯವನ್ನು ಕಲಿತುಹೋಗಬೇಕೆಂಬುದೇ ನಿಮ್ಮ ಉದ್ದೇಶವಾಗಿರಬಹುದು. ಆದರೆ ಯಾವ ಕಸಬಿಗೂ ಒಂದು ಧ್ಯೇಯವಿದೆ. ಕಸಬು ಧ್ಯೇಯ ಸಾಧನೆಗೆ ಸಾಧನವಾಗಿದೆಯೇ ಹೊರತು ಅದೇ ಧ್ಯೇಯವಾಗಲಾರದು. ಆದ್ದರಿಂದ ಧ್ಯೇಯವನ್ನು ಮೊದಲು ತಿಳಿಯಬೇಕು. ಕಸಬು ಮತ್ತೆ, ಪ್ರೇಮ ವಿದ್ಯಾಪೀಠವು ಧ್ಯೇಯಸಾಧನೆಯ ಕಡೆಗೆ ಲಕ್ಷ್ಯವಿಟ್ಟಿರುವುದು ಹೆಚ್ಚು. ಆದ್ದರಿಂದಲೇ ನೀವೀಗ ಬಿಟ್ಟು ಹೊರಟಿರುವ ಸರಕಾರೀ ಶಿಕ್ಷಣ ಪದ್ಧತಿಗಿಂತ ಇದು ವ್ಯತ್ಯಾಸವಾಗಿ ತೋರಬಹುದು.

ಅದು ಇರಲಿ. ಧ್ಯೇಯಸಾಧನೆಯು ಆದ್ಯಕರ್ತವ್ಯವೆಂಬುದನ್ನು ಮರೆಯದಿರಿ. ಅಂಥ ಸಾಧನೆಯನ್ನು ಬೇಕಾದರೆ ಯೋಗವೆನ್ನಿರಿ ಅಥವಾ ಉಪಾಯವೆನ್ನಿರಿ, ಏನಿದ್ದರೂ ಅದು ಮಾನವನ ಕರ್ತವ್ಯ. ಇಂಥಾ ಧ್ಯೇಯವಿಲ್ಲದೆ ಬರೀ ಹೊಟ್ಟೆ ಹೊರೆವುದಕ್ಕಾಗಿ ಮಾಡುವ ಕಸಬುಗಳೆಲ್ಲವೂ ಇತರ ಪ್ರಾಣಿಗಳ ದುಡಿತಕ್ಕೆ ಮೇಲಲ್ಲ. ಹೊಟ್ಟೆ ಹೊರೆವುದಕ್ಕಾಗಿ ಹುಳ ಹುಪ್ಪಟೆಯಾದರೂ ದುಡಿಯುವುದಿಲ್ಲವೇ? ಬದುಕುವುದಿಲ್ಲವೆ? ಮಾನವನು ಒಂದು ಹೊಟ್ಟೆಗಾಗಿ ಹೆಣಗುವ ಜೀವಿಯಲ್ಲ. ಅವನು ಸಂಶ-ಸೇವಾ—ಸಾಧನಾಪ್ರಿಯನು. ಜಗದ್ಧಿತಾಯ ಆತ್ಮನೋಮೋಕ್ಷಾಯ, ಇದು ಅವನ ಮಂತ್ರ, ಇದು ಅವನ ಧ್ಯೇಯ, ಇದನ್ನು ಸಾಧಿಸುವವನೇ ಮಾನವನು.

ಧ್ಯೇಯರಹಿತವಾಗಿರುವ ವಿದ್ಯೆಯು ಅನರ್ಥಕಾರಿಯಿದೆ. ಅದು ತನ್ನ ಸಂಕುಚಿತ ದೃಷ್ಟಿಯಿಂದ ಕೆಲವರ ಸುಖವನ್ನು ಸಾಧಿಸಲು ಹಲವರ ಸಂಕಟವನ್ನು ಉಂಟುಮಾಡುವುದು. ಉದಾಹರಣೆಗಾಗಿ ಮಾನವ ಧ್ಯೇಯವನ್ನರಿಯದೆ ಸಂಕುಚಿತದೃಷ್ಟಿಯಿಂದ ಹೋರಾಡುವ ಜರ್ಮನಿಯ ಹಿಟ್ಲರ್, ಇಟಲಿಯ ಮುಸಲೋನಿ ಇವರ ಕೃತ್ಯವನ್ನು ನೋಡಿರಿ.

ಇಲ್ಲಿ ಕಲಿಯುವ ವಿದ್ಯಾರ್ಥಿಗಳು ಮಾನವಧ್ಯೇಯವನ್ನು ಕಲಿಯುವುದು ಮೊದಲ ಕರ್ತವ್ಯ. ಆಯುರ್ವೇದವು ಆ ಧ್ಯೇಯ ಸಾಧನೆಯ ವಿಶಾಲಮಾರ್ಗವೂ, ಗಮ್ಯವೂ ಆಗಿದೆ. ಅದರ ಜ್ಞಾನವು ಅಪಾರವಾದುದು. ಈಗ ಆಯುರ್ವೇದವನ್ನು ಈಗಾಗಲೇ ಸ್ವಲ್ಪ ಮಟ್ಟಿಗೆ ಓದಿರುವ ವಿದ್ಯಾರ್ಥಿಗಳಿಗೊಂದು ಪ್ರಶ್ನೆ ಕೇಳುತ್ತೇನೆ. ಮುಖ್ಯವಾದ ಆಯುರ್ವೇದ ಗ್ರಂಥ ವಿಷಯವು ಹೇಗೆ ಪ್ರತಿಪಾದಿಸಲ್ಪಟ್ಟಿದೆ? ಅದು ಮೊದಲು ಇಡೀ ವಿಶ್ವದ ರಚನೆಯನ್ನು ನಿರೂಪಿಸುತ್ತದೆ. ಅದರ ಸಮಗ್ರತೆಯನ್ನು ತೋರಿಸುತ್ತದೆ. ಮತ್ತೆ ಬಿಡಿಯಾಗಿ ವಸ್ತುವಿಶೇಷಗಳನ್ನು ವಿವರಿಸುತ್ತದೆ. ಇದಿಯಾದ ಅದರ ದರ್ಶನವನ್ನು ಮೊದಲು ಮಾಡಿಕೊಟ್ಟು ಮತ್ತೆ ಬಿಡಿಯಾದ ಜೀವಜಂತುಗಳ ದರ್ಶನವನ್ನು ಮಾಡುತ್ತದೆ.

ಆದರೆ ಈ ಸೂತ್ರದಿಂದಲೇ ನಾವುನಮ್ಮ ಗಮ್ಯವನ್ನು ನಿರ್ಧರಿಸುತ್ತೇವೆ. ಅದೇನು? ಅದನ್ನು ಅಭ್ಯಸಿಸುವ ನಮಗೂ ನಮ್ಮ ಕಣ್ಣಿಗೂ ಜಗತ್ತಿನ ಗೊಡವೆ ಮೊದಲಿನದಿರಕು ಅನಂತರ ನಮಗೆ ನಾವಾಗಬೇಕು. ಈ ಸಾಧನೆಯನ್ನು ಆಯುರ್ವೇದವು ಕಲಿಸುವುದು. ಇದರಿಂದ ಮಾನವನ ಪುಷ್ಪವನ್ನು ಅರಳಿಸುವುದು. ಪರಿಮಳವನ್ನು ಪಸರಿಸುವುದು. ಧ್ಯೇಯ ಭಾಸ್ಕರನ ಆರಾಧನೆಯಿಂದಲೇ ಈ ಪುಷ್ಪವು ಅರಳಬೇಕು. ಆದ್ದರಿಂದ ಆಯುರ್ವೇದದಲ್ಲಿ ಸಾಧನೆಯ ಹಾದಿಯೂ ಇದೆ; ಸಿದ್ಧಿಯ ದರ್ಶನವೂ ಇದೆ. ಇಂಥಾ ಮಾರ್ಗದಲ್ಲಿ ನಡೆದು ನಿಮ್ಮ ಗುಣವನ್ನು ಬೆಳಗಿಸಿರಿ, ಗುಣವೂ ವಿದ್ಯೆಯೂ ಜತೆಗೊಂಡರೇನೇ ಬೆಳಕು. ಒಪ್ಪವಿಲ್ಲದ ಚಿನ್ನವೂ ಕೆತ್ತನೆಯಿಲ್ಲದ ವಜ್ರವೂ ಹೊಳೆಯುವುದೇ? ಅದು ಸೂರ್ಯ ಕಿರಣದ ಹೊಳಪನ್ನೂ ಪ್ರಕಟಿಸಲಾರದು. ಅದರ ನೀರು ಮಿಂಚ ಬೇಕಾದರೆ ತಕ್ಕ ಕೆತ್ತನೆ ಬೇಕು. ಗುಣವು ಒಡನಾಡಿಯಾದರೇನೇ ಒಳಗಿನ ಬೆಳಕು ಹೊರಹೊಮ್ಮುವುದು.

ನಮ್ಮಲ್ಲಿ ವಿದ್ಯೆಯು ಗುಣ ಪೂರ್ಣವಾಗಿ ಅರಳಿದಾಗ ಅದರ ಪರಿಮಳವು ತಾನೇ ತಾನಾಗಿ ಹರಡುವುದು. ಪುಷ್ಪವು ಸ್ವಸ್ಥಾನದಲ್ಲಿ ಅರಳಿ ಪರಿಮಳವನ್ನು ವಿಸ್ತಾರವಾಗಿ ಬೀರುವುದು, ಅಪ್ರಫುಲ್ಲ ಪುಷ್ಪದ ಪರಿಮಳವನ್ನು ಘ್ರಾಣಿಸುವುದಕ್ಕೆ ಯಾರಿಗೂ ಆಮಂತ್ರಣ ಕೊಡಬೇಕಾಗಿಲ್ಲ. ಹಾಗೆಯೇ ಉಚ್ಚಕರ್ಮಗಳೆಲ್ಲವೂ ಸಿದ್ಧವ್ಯಕ್ತಿಗಳ ಸಾಧನೆಯ ಸುವಾಸನೆ. ಭಾರತೀಯ ಮಹಾವ್ಯಕ್ತಿಗಳ ಆದರ್ಶವು ಇಲ್ಲಿದೆ. ಇಂದು ಜಗತ್ತಿಗೆ ಆದರ್ಶಪ್ರಾಯರಾದ ಮಹಾತ್ಮಾಗಾಂಧಿಯವರನ್ನು ನೋಡಿರಿ. ಅವರ ಮಹತ್ವವನ್ನು ಲೋಕದಲ್ಲಿ ಸುತ್ತಿ ಅವರು ಪಸರಿಸಿದುದಲ್ಲ. ಸ್ವಸ್ಥಾನದಲ್ಲಿ ಅರಳಿ ತಾನಾಗಿ ವಿಶ್ವದಲ್ಲಿ ಹಬ್ಬಿದುದು. ಆದ್ದರಿಂದ ಅವರ ಅನುಯಾಯಿಗಳಲ್ಲಿ ಬೇಕಾದುದೂ ಹೊರಗಿನ ಅನುಕರಣವಲ್ಲ. ಒಳಗಿನ ಸಾಧನೆ. ಆಯುರ್ವೇದದ ಉಪಾಸಕರಾಗಿ ಹೊರಟ ನಿಮಗಾದರೂ ಹೊರಗಿನ ಅನುಕರಣವು ಗಮ್ಯವಲ್ಲ. ಒಳಗಿನ ತತ್ವ ಸಾಧನೆಯೇ ಗಮ್ಯ. ಅದರ ಅಂತರ್ಗತ ರಸವನ್ನು ಕುಡಿದು, ಅರಗಿಸಿ, ಮೈಗೂಡಿಸಿ ಬೆಳಸಬೇಕು.

ನೀವು ೨–೪ ವರ್ಷದಲ್ಲಿ ಆಯುರ್ವೇದವನ್ನೇ ಕಲಿತು ಬಿಡುವೆವೆಂದು ನೆನಸಿ ಬಂದವರೂ ಇರಬಹುದು. ಮತ್ತೆ ಕೆಲವರು ನಾವು ಒಂದೆರಡು ವರ್ಷ ಕಲಿತೆವು ನಮಗೇನು ತಿಳಿಯಿತು—ಎಂದು ಕೇಳುವವರೂ ಇರಬಹುದು. ಇಲ್ಲಿ ನಿಮಗೊಂದು ಪ್ರಶ್ನೆ ಕೇಳುತ್ತೇನೆ. ೨೦ ವರ್ಷಗಳಿಂದ ಅಭ್ಯಾಸ ಮಾಡುತ್ತಿರುವ ನನಗಾದರೂ ಆಯುರ್ವೇದವು ಏನು ಗೊತ್ತು? ಆಯುರ್ವೇದದಲ್ಲಿ ನಾನೂ ಒಂದು ಕೂಸು, ಹೀಗಿರುವಾಗ ಒಂದೆರಡು ವರ್ಷದಲ್ಲಿ ನೀವು ಅರಗಿಸಿಕೊಳ್ಳುವ ಆಯುರ್ವೇದವೆಷ್ಟಿರಬಹುದೆಂದು ನೀವೇ ಗ್ರಹಿಸಿರಿ. ಆದರೆ ಈ ಚಿಕ್ಕ ಅವಧಿಯಲ್ಲಿ ಆಯುರ್ವೇದವು ಒಂದು ಕಸಬಾಗಿ ನಿಮಗೆ ಬರುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ ಆಯುರ್ವೇದವು ಕಸಬನ್ನು ಮೀರಿದುದು. ಕಸಬು ಒಂದಕ್ಕೇ ಮರುಳಾಗಿ ಆಯುರ್ವೇದದ ವಿಶಾಲ ಧ್ಯೇಯವನ್ನು ಮರೆಯಬೇಡಿರಿ.

ಕಸಬನ್ನೇ ಆದರೂ ಎರಡು ವಿಧದಿಂದ ಬಳಸಬಹುದು. ೧ ಸ್ವಸುಖ ದೃಷ್ಟಿಯಿಂದ ೨ ಜನಹಿತ ದೃಷ್ಟಿಯಿಂದ. ಸುಖಕ್ಕೂ ಹಿತಕ್ಕೂ ವ್ಯತ್ಯಾಸವಿದೆ. ಸುಖವು ತಾತ್ಕಾಲಿಕ, ಹಿತವು ಶಾಶ್ವತ. ಸುಖವು ಕರ್ಮಮಾತ್ರದಲ್ಲೇ ಅಂತ್ಯವಾಗಬಹುದು. ಹಿತವು ಫಲದಲ್ಲೇ ಮುಖ್ಯವಾಗಿ ಪ್ರಕಟವಾಗುವುದು. ವ್ಯಭಿಚಾರ ಅನಾಚಾರದಲ್ಲಿಯೂ ಸುಖವು ತೋರಬಹುದು. ಆದರೆ ಅದು ಕ್ಷಣವೇ ಇದ್ದು ಬರಬರುತ್ತ ದುಷ್ಪರಿಣಾಮ ಮಾಡಬಹುದು. ಆದ್ದರಿಂದ ಈ ದೃಷ್ಟಿಯಿಂದಲೇ ಆಚಾರ ವಿಚಾರಗಳನ್ನು ಸರಿಪಡಿಸಿ ಮುಂದುವರಿಯಬೇಕು. ನಿಮ್ಮ ದುಡಿತವು ಜಗದ್ಧಿತವನ್ನು ಸಾಧಿಸಲಿ. ಕೇವಲ ಧನಮಾನಗಳ ಹಂಬಲಕ್ಕೆ ಬಲಿಬೀಳದಿರಿ. ಹಿತಸಾಧನೆಯಲ್ಲಿ ಧನಮಾನಗಳೆರಡೂ ಕಾಲಕಸವಾಗಿ ನಿಮಗೆ ಸಲ್ಲುವುವು. ಧನವೆಂಬ ಧ್ಯೇಯಕ್ಕೆ ವಿದ್ಯೆಯನ್ನು ಮಾರುವ ಪಾಮರರಾಗಬೇಡಿರಿ.

ನೀವು ಗುಣವನ್ನೂ ವಿದ್ಯೆಯನ್ನೂ ನಿಮ್ಮದಾಗಿ ಬೆಳಸಿರಿ. ಸ್ವಬುದ್ಧಿಗೆ ಸರಿದೋರಿದಂತೆ ನಡೆಯಿರಿ. ಅನ್ಯರ ಹೊರಗಿನ ಅನುಕರಣಕ್ಕೆ ಹೋಗದಿರಿ. ಆಂತರಿಕ ಶಕ್ತಿಯನ್ನು ಎಬ್ಬಿಸಿ ಒಳಗೂ ಹೊರಗೂ ಹೊಂದಿಕೆ ಹಾಕಿಕೊಂಡು ಮುಂದರಿಯಿರಿ. ನನ್ನ ಮಾತುಗಳಿಗೂ ಹೂಂ ಗುಟ್ಟಿ ಹೋಗಬೇಡಿರಿ. ಅವುಗಳಿಗೆ ಇದ್ದಕ್ಕಿದ್ದಂತೆ ಸ್ವೀಕಾರ ಬೇಡಿರಿ. ಯಾರ ಮಾತೇ ಆಗಲಿ ಅದನ್ನು ಸ್ವಪರ ಹಿತದ ಒರೆಗಲ್ಲಿಗೆ ಹಚ್ಚಿನೋಡಿ ನಡೆಯುವ ಶಕ್ತಿ ನಿಮ್ಮಲ್ಲಿ ಬರಲಿ.

ಈ ವಾತಾವರಣವೇ ನಿಮ್ಮ ಸುತ್ತುಮುತ್ತಲಿರಲಿ. ಈ ಧ್ಯೇಯವು ನಿಮ್ಮ ಮೈಗೂಡಿರಲಿ.

ಗಿಡಗಳು ಮತ್ತು ಬೀಜಗಳು

ಪಂಡನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ **ಗಿಡಗಳು, ಬೀಜಗಳು ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ.** ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ.

**ಡಿ. ಗುರಪ್ಪ ಅಂಡ್ ಸನ್ಸ್**
ಗಿಡ, ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್, ದೊಡ್ಡ ಮಾವಳ್ಳಿ,
**ಬೆಂಗಳೂರು ಸಿಟಿ.**

ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿಯ, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ ಟಾಯಂ ಪಾಕೆಟ್ ವಾಚು ಮತ್ತು ಟಾಯಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ನಿವರಕ್ಕೆ ಬರೆಯಿರಿ.

*The Manager,*
**The Silver Jubilee Watch Co.,**
*Post Box No. 571, BOMBAY.*

**ಶಾಲೆಗಳಿಗೆ ಬೇಕಾದ ಯಾವತ್ತೂ ರಿಜಿಸ್ಟ್ರಗಳೂ ಫೋರ್ಮುಗಳೂ ಮಿತ ದರದಲ್ಲಿ ದೊರೆಯುತ್ತವೆ.**
ನವಭಾರತ ಬುಕ್ ಡಿಪೋ, ಉಡುಪಿ

## ಕಿರಿಯರ ಪ್ರಪಂಚದ

**ಪುಸ್ತಕಗಳು**

| | | | |
|---|---|---|---|
| ೧ ನಾಡಕಥೆಗಳು | ೦ | ೨ | ೦ |
| ೨ ಪಟುಂಗಿನ ದೇವರು | ೦ | ೨ | ೦ |
| ೩ ಸ್ವತಂತ್ರ ಜೀವನೋಪಾಯ | ೦ | ೨ | ೬ |
| ೪ ಕುಶ ಲವ | ೦ | ೪ | ೦ |
| ೫ ಸಂಶಯ ಪಿಶಾಚಿ | ೦ | ೬ | ೦ |
| ೬ ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ೭ ಮಧುವನ | ೧ | ೮ | ೦ |
| ೮ ವ್ಯಭಿಚಾರಿಣಿ ಯಾರು? | ೦ | ೮ | ೦ |
| ೯ ಹೆಂಡ್ತಿ ಗಂಡನಾದರೆ! | ೦ | ೪ | ೦ |
| ೧೦ ಪುರುಷವಧು! | ೦ | ೪ | ೦ |

**ಕಿರಿಯರ ಪ್ರಪಂಚ, ಉಡುಪಿ.**

## ಭಾ ಷಾಂ ತ ರ ಕಾ ರ ರು

**ದೊರೆಯದೆ ಪೇಚಾಡುವಿರೇಕೆ?**

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
*C/o* 'ಕಿರಿಯರ ಪ್ರಪಂಚ,'
ಉಡುಪಿ.

## WANTED

A clerk strong in English & Kanarese with knowledge of Typewriting and Office work. Apply stating age qualification and minimum salary reqd. The selected candidate will be required to give a security of Rs. 250/-.

'XX'
**C/o NAVAYUGA,**
UDIPI.

RANJIT
BIMA CO. LTD. AMRITSAR

ವಾರ] 'ನ ವ ಯು ಗ' [ಪತ್ರಿಕೆ

| | |
|---|---|
| ವಾರ್ಷಿಕ ಚಂದಾ | ರೂ. ೩—೪—೦ |
| ೬ ತಿಂಗಳಿಗೆ | ರೂ. ೧-೧೨—೦ |

**ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.**

**S. U. N. & CO.** ***Choukhamba, Benares City.***

**ಮೂರು ಇನಾಮುಗಳು.**

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಕಾಲುಗಳ ಕಟಲಾಗು ೧, ಕಾಶೀಪಕ್ಷಿ ೧, ವಿಶ್ವೇಶ್ವರ ಪಟ ೧, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಪಾಡಿ, ಕದಪಾನ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಉಲ್ಲನ್ ಚೌಕ, ಧಾವಳಿ, ಸಾಮಕಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ 20ರಿಂದ 55 ವರೆಗೆ ಸಾದಾ 16 ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ 35ರ ವರೆಗೆ, ಅರೆ ಕಡಮೆ 16 ಮೊಳ ಕ್ಲಾಥ್ ಅಂಚು ರೂ. 10½ ಯಿಂದ ರೂ 16, ಖಣ 1ಕ್ಕೆ ರೂ 1¼ರಿಂದ ರೂ 10ರ ವರೆಗೆ ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

**ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ,** ಚೌಖಂಬಾ, ಬೆನಾರಿಸ್, ಕಾಶಿ



## ಧರ್ಮಾರ್ಥ ಬಹುಮಾನಗಳು

**1-4-0ಗೆ !**

**--- ಯಾರಿಗೆ? ---**

ರೂಪಾಯಿ 1—4—0 ಕೊಟ್ಟು 14 ಸೀಸೆ ಓಟ್ಟೊ ರೋಸ್ಡ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

**ಇನಾಮುಗಳ ವಿವರ:**—3 ಡಮ್ಮಿ ರಿಸ್ಟ್‌ವಾಚುಗಳು; 1 ಕ್ರೈಸ್ಟೆಲಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿ, 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

**ಪ್ಯಾಕಿಂಗ್ ಮತ್ತು ಪೋಸ್ಟೇಜು** 0—12—0 ಇಂದೇ ಆರ್ಡರುಕೊಡಿರಿ

Bengal Watch Co.,
Post Box No. 12214. CALCUTTA

# The Combined Booking Agency

AND

# The Joint Booking Office

## MANGALORE, SOUTH KANARA.

**ಅತ್ಯಲ್ಪ ಖರ್ಚಿನಿಂದ !** **ಅತಿ ಸುಖಕರವಾದ ಪ್ರಯಾಣ !**

ಮುಂಬಾಯಿ, ಗೋವಾ, ಕಾರವಾರು ಇತ್ಯಾದಿ ಕಡೆಗಳಿಗೆ
ನಮ್ಮ ಬಸ್ಸುಗಳ ಮೂಲಕ—

**ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗಾ ಹರಿಹರಕ್ಕಾಗಿ ಹುಬ್ಬಳ್ಳಿ, ಬೆಳಗಾಂ, ಮುಂಬಾಯಿ ಪ್ರಾಂತ್ಯಕ್ಕೂ ಕಾರವಾರ ಮಾರ್ಗವಾಗಿ ಮುಂಬಾಯಿ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳಸಲನುಕೂಲ.**

ಊರುಗಳ ಬದಲಾವಣೆ, ನೋಟುಗಳ ಬದಲಾವಣೆ, ಜನತೆಯ ಸಂಪರ್ಕ, ಆಹಾರದ ಅನುಕೂಲ್ಯ, ವಿಶ್ರಾಂತಿ ಗೃಹಗಳ ಏರ್ಪಾಡು, ನೌಕರರ ಸಭ್ಯತೆ, ಇವೆಲ್ಲವೂ ಬಸ್ಸು ಪ್ರಯಾಣದಲ್ಲಿವೆ.

**ನೀವು ಕಂಡ ಕುಂದು ಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜ್ಯೊಂಟ್ ಮೇನೇಜರರಿಗೆ ಬರೆದು ತಿಳಿಸಿರಿ—**

**ಜ್ಯೊಂಟ್ ಮೆನೇಜರ್ಸ್,**
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು,
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲ ಬೈಲು.

**The Coondapoor Bank, Ltd.,**

Head Office - **Coondapoor** Branch Office -**Brahmavar**.

Beg to announce that a new Branch has been opened at SHANKARANARAYANA on 1-6-37

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿ ಜೂನ್ ತಾ 1ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.
ಚಾಲ್ತಿ ಠೇವಣಾತಿಗಳು ಸಾ ಶೆ.2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ.ಶೆ 4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%.
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.
ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ.
ಬಂಗಾರದ ಈಡಿನಮೇಲೂ ಸಾಲದೊರೆಯುವುದು.
**ವಿಶೇಷ ಸೂಚನೆ.**—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯ 10 ಸಹಾ ನಾಲ್ಕೊಡಲಾಗುತ್ತದೆ ಸಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರೆಕೊಳ್ಳಿರಿ.

Halsnad Soorappayya, ಛೆಯರ್ಮೇನ್ — N. Sheshagiri Rao, ಸೆಕ್ರಿಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ನೀವು ಓದಿರುವಿರಾ?
ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?

ಅಡ್ಡಬಳಿದ ಗಿಡ್ಡಿಯ ಮದುವೆ
(ಕ್ರಯ ಬರೇ ಒಂದಾಣೆ)

ಮುದುಕನ ಹೆಂಡತಿ ಧಕ್ಕೈರಾದೆ
(ಕ್ರಯ ಬರೇ ಒಂದಾಣೆ)

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ
ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ
ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ
ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ
**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**
ಶ್ರೀ ಕೊರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ
ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.
ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರೆ ಆಣೆ ಸ್ಟಾಂಪು ಕಳುಹಿಸಬೇಕು.

**NAVABHARAT BOOK DEPOT
UDIPI**

ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ 0—4—0

# ಪುರುಷವಧು

ಸಕ್ಕಷ್ಟು ನಗಿಸುವ ಏಕಾಂಕ ಪ್ರಹಸನ.
ಕಿರಿಯರ ಪ್ರಪಂಚ, ಉಡುಪಿ

# SUPPLY AGENCY LTD. UDIPI.

ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ

Authorised Capital Rs. 1,00,000 — **Subscribed & Paid up Capital Rs. 29,720**

ಈ ಕೆಳಗಿನ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

| | | | | |
|---|---|---|---|---|
| 3 | ತಿಂಗಳಿಂದ | 6 | ತಿಂಗಳ ವರೆಗೆ | **4½%** |
| 7 | ,, | 9 | ,, | **5%** |
| 10 | ,, | 12 | ,, | **5½%** |
| 13 | ,, | 24 | ,, | **6¼%** |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು ಅಥವಾ ಕಾಗದ ಬರೆಯಬಹುದು.

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

USE
# *SUVASINI AGARBATHIES*
(REGISTERED)
SRI BHARATHA VASTU MANDIRA, UDIPI.

Printed by P VENKATARAMANACHARYA for & on behalf of SUPPLY AGENCY LTD, at THULUNAD PRESS, UDIPI and Published by K H SHETTY at "NAVAYUGA" OFFICE, UDIPI.

**Registered No. M. 3618**

ಒಂದಾಣೆ

**NAVAYUGA**
**A Nationalist Kanarese Weekly, UDIPI, S. K.**



**It will pay you to advertise in 'NAVAYUGA' The Leading Nationalist Kanarese Weekly of Karnatak**

**FOR RATES OF ADVT. Etc.**
*APPLY TO THE MANAGER*



ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ



**VOL. XVI-NO. 48** | **5-8-1937**

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ಹಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ಹಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ ] ಉಡುಪಿ, ಗುರುವಾರ ೫ ಅಗೋಸ್ತು, ೧೯೩೭ [ಸಂಚಿಕೆ ೪೮



THE

# Canara Industrial & Banking SYNDICATE, LIMITED.

[INCORPORATED IN BRITISH INDIA]

**ESTD:]** **[1925**

**BRANCHES:**

| | |
|---|---|
| 1 BOMBAY | 16 BANGALORE CITY |
| 2 MANGALORE | 17 SAGAR |
| 3 UDIPI | 18 BYADGI |
| 4 KARKALA | 19 KARWAR |
| 5 KANHANGAD | 20 HONAVAR |
| 6 HUNGARCUTTA | 21 SIRSI |
| 7 BRAHMAVAR | 22 ANKOLA |
| 8 COONDAPOOR | 23 KUMTA |
| 9 UPPINANGADI | 24 BHATKAL |
| 10 KASARGODE | 25 NANDYAL |
| 11 PAYYANUR | 26 PRODATUR |
| 12 TALIPARAMBA | 27 TADPATRI |
| 13 CANNANORE | 28 BELGAUM |
| 14 GADAG | 29 HOSPET |
| 15 HUBLI | 30 ADONI |

31 BELLARY

*Head Office.*
"MUKUNDA NIVAS"
UDIPI, (S. I)

*MEMBER:* RESERVE BANK OF INDIA
*MEMBER:* CLEARING HOUSE, BOMBAY

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,74,790 |
| Total resources exceed | „ 46 lakhs |

UDIPI,
*27th July 1937.*

P A Pai Bros,
*Managing Agents*



# ನ್ಯೂ ಕೋಮಲ ವಿಲಾಸ ಹೋಟೆಲ್

**91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ**

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

# ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

**ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'**

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

---

# ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
**೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

**ಡಾ. ಎ. ಎಸ್. ಮೂರ್ತಿ,**
**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**

---

DIAMONDS! DIAMONDS!!

# K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಒಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

**ಕೆ. ರಾಮಚಂದ್ರ ಕೃಷ್ಣ ಶೇಟ್,**
**ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.**

---

## ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

# ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುಮ್
**ಚಿಕಾಕೋಲ್**

---

# ಕುಶಲವ

**(ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾಗಿದೆ)**

ಹಳೆಯ ಕಥೆಯನ್ನು ಹೊಸ ಮಾದರಿಯಲ್ಲಿ ಎರಕಹೊಯ್ದ ಪೌರಾಣಿಕ ನಾಟಕವಿದು. ಬೆಲೆ ಬಹು ಕಡಿಮೆ.

**ಪುಟ ೬೨ . . . . ಬೆಲೆ ೦—೪—೦.**

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ಬರೆಯಿರಿ—

**ನವಭಾರತ ಬುಕ್ ಡಿಪೊ, ಉಡುಪಿ.**

---

## ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಕಳೆದ ಜುಲಾಯಿ ತಿಂಗಳಲ್ಲಿ ಪ್ರಾರಂಭವಾಗಿದೆ. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮುಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "**ಪ್ರೋಸ್‌ಪೆಕ್ಟಸ್**"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್
**ಪ್ರೇಮ ವಿದ್ಯಾಪೀಠ**

ತುಂಗಭದ್ರಾ
೧೦-೭-೧೯೩೭

---

ಉಡುಪಿಯ ಆದರ್ಶ ಉಪಹಾರಗೃಹ !

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !**
**ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ !** ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ !**
**ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**
**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಲ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. 12ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

# — ಈಗ ತಾನೆ ಬಂದ ಹೊಸ ಪುಸ್ತಕಗಳು —

| | ರೂ. | ಆ | ಪೈ |
|---|---|---|---|
| ಜ್ಞಾನೇಶ್ವರಿ | 1 | 4 | 0 |
| ಕಥಾಗುಚ್ಛ | 0 | 8 | 0 |
| ಮ-ಗಾಂಧಿ | 0 | 4 | 0 |
| ವೀರವಲ್ಲಭಭಾಂಗು | 0 | 10 | 0 |
| ಕನ್ನಡಿಗರ ಸರ್ವಸ್ವ | 1 | 0 | 0 |
| ವರದಕ್ಷಿಣೆ | 0 | 6 | 0 |
| ಹಂಪೆ | 0 | 4 | 0 |
| ಹೂ ಗೊಂಚಲು | 0 | 8 | 0 |
| ವಿಕ್ರಮೋರ್ವಶೀಯ | 0 | 6 | 0 |
| ಕನ್ನಡ ಪಗಟುಗಳು | 0 | 2 | 0 |
| ಬುದ್ಧಿ ಬಂತು | 0 | 1 | 0 |
| ಮಾದಿಗರ ಮಲ್ಲಪ್ಪ | 0 | 1 | 0 |
| ಸಂಪುಷ್ಟ ರಾಮಾಯಣ | 0 | 1 | 0 |
| ವೇದಾಂತಿ | 0 | 1 | 0 |
| ಪುನರುಜ್ಜೀವನ | 0 | 1 | 0 |
| ಸಮಾಜಸೇವೆ | 0 | 1 | 0 |
| ಪಾಪವೋ ಪುಣ್ಯವೊ | 0 | 1 | 0 |
| ದಾಜಾಹರದೌಲ | 0 | 1 | 0 |
| ಕವಿಕರ್ಮ | 0 | 1 | 0 |
| ಆದರ್ಶನೊಬ್ಬನೆ | 0 | 1 | 0 |
| ವೀರಎಚ್ಚಮ | 0 | 1 | 0 |
| ನಾಬಲಾಗದ ನಿಜ | 0 | 1 | 0 |
| ಹಿಂದು ಮುಸಲ್ಮಾನ | 0 | 1 | 0 |
| ಚಂದ್ರನಾಥ | 0 | 6 | 0 |
| ನಡುಮನೆಯಲ್ಲಿ | 0 | 6 | 0 |
| ಹೇಗಾವರೇನು | 0 | 10 | 0 |
| ಹಣೇಬರಹ | 0 | 3 | 0 |
| ಕಟ್ಟೆ ಪುರಾಣ | 0 | 3 | 0 |
| ನಾರದ ಗರ್ವಭಂಗ | 0 | 3 | 0 |
| ಏಕಾಂಕ ನಾಟಕಗಳು | 0 | 8 | 0 |
| ಕನ್ನಡ ಕೈಪಿಡಿ | 1 | 0 | 0 |
| ಹಾರ್ಮೋನಿಯಂ ಬೋಧನ ಕ್ರಮ | 0 | 12 | 0 |
| ಹರಿಗೋಲು | 0 | 8 | 0 |
| ಐತಿಹಾಸಿಕ ಕಥಾವಳಿ | 0 | 6 | 0 |
| ಸರಸ್ವತಿ | 0 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ | 0 | 8 | 0 |
| ಪಂಚಕಜ್ಜಾಯ | 1 | 0 | 0 |
| ಪದ್ಯರತ್ನಾವಳಿ | 0 | 3 | 6 |
| ಪದ್ಯಕಥಾವಳಿ | 0 | 6 | 0 |
| ಕೋಟಿ ಚೆನ್ನಯ | 0 | 6 | 0 |
| ಕ್ಷಾತ್ರತೇಜ | 0 | 8 | 0 |
| ಸೀತಾರಾಮ | 0 | 6 | 0 |
| ಶ್ರೀಕೃಷ್ಣ ಸಂಧಾನ | 0 | 4 | 0 |
| ವಿಚಿತ್ರ ನ್ಯಾಯ | 0 | 1 | 0 |
| ಪೋಸ್ಟ್‌ಮಾಸ್ಟರ್ | 0 | 1 | 0 |
| ಒಕ್ಕಟ್ಟಿನ ರಾಜ್ಯಪದ್ಧತಿ | 0 | 1 | 0 |
| ಭಾರತವೀರ ಚರಿತೆ | 0 | 4 | 6 |
| ಕರ್ನಾಟಕ ಸಂಸ್ಕೃತಿ | 1 | 8 | 0 |
| ಪಿಶಾಚ ಪರಿವಾರ | 0 | 10 | 0 |
| ದುಷ್ಟ ಚತುಷ್ಟಯ | 0 | 5 | 0 |
| ಗುರುತುಕಂಡ ಕಳ್ಳ | 0 | 5 | 0 |
| ಶೋಭನೆ | 0 | 12 | 0 |
| ಮಹಾ ರಾಜಸಿಂಹೆ | 1 | 0 | 0 |
| ಲೀಲೆ | 0 | 6 | 0 |
| ರಾಧಾರಾಣಿ | 0 | 4 | 0 |

| | ರೂ | ಆ | ಪೈ |
|---|---|---|---|
| ವಿಷವೃಕ್ಷ | 1 | 8 | 0 |
| ಪರಿಮಳ | 0 | 12 | 0 |
| ಹೆಂಗಸು ಎಂದರೆ ಹೆಂಗಸು | 0 | 12 | 0 |
| ಮಾರ್ಕಂಡೇಯ | 0 | 10 | 0 |
| ಗುಣಸಾಗರ | 0 | 4 | 0 |
| ಭರತನ ಬಂಧುಪ್ರೇಮ | 0 | 10 | 0 |
| ಶರೀರ ಸಾಧನ ಯೋಗ | 1 | 0 | 0 |
| ವಿಕ್ರಮ | 1 | 4 | 0 |
| ಬಾಲಕರ ಮಹಾಭಾರತ | 0 | 6 | 0 |
| ಭೀಷ್ಮನ ಕಥೆ | 0 | 6 | 0 |
| ಕಿರಾತಾರ್ಜುನೀಯ | 0 | 12 | 0 |
| ಸಂಸ್ಕೃತ ನಾಟಕಗಳ ಕನ್ನಡ ಕಥಾವಳಿ | 0 | 10 | 0 |
| ಕಿಂಡರ್ ಗಾರ್ಟನ್ ಬೋಧನ ಕ್ರಮ | 0 | 2 | 0 |
| ಆರ್ಯನೀತಿ ಕಥೆಗಳು Iನೇ ಭಾಗ | 0 | 4 | 0 |
| " II " | 0 | 4 | 0 |
| ಯಶೋಧರ | 0 | 8 | 6 |
| ಚಿತ್ರಮಯ ದಕ್ಷಿಣ ಕನ್ನಡ | 0 | 8 | 0 |
| ತೆನ್ನಾಲಿರಾಮ | 0 | 1 | 0 |
| ಅಗೋಳಿಮಂಜಣ್ಣ | 0 | 2 | 0 |
| ಸಿಂದಬಾದನಾವಿಕ | 0 | 2 | 0 |
| ಶಾಂತಿಪುರಾಣ | 3 | 0 | 0 |
| ಜಾಗ್ರತಿ | 0 | 8 | 0 |
| ದೀಪೋತ್ಸವ | 0 | 3 | 0 |
| ಕೋಗಿಲೆ | 0 | 8 | 0 |
| ಮಹಾ ಬಲಿ ಚರಿತ್ರೆ | 0 | 4 | 0 |
| ಮೋಹಿನೀ ನಾಟಕ | 0 | 12 | 0 |
| ಗುಲಗಂಜಿ | 0 | 3 | 0 |
| ಕಲ್ಲುಸಕ್ಕರೆ | 0 | 3 | 0 |
| ಪ್ರಫುಲ್ಲೆ | 1 | 0 | 0 |
| ಮಾಯಾವಿ | 2 | 0 | 0 |
| ಗುರು ಚರಿತ್ರೆ | 1 | 8 | 0 |
| ರಾಜರಹಸ್ಯ | 0 | 12 | 0 |
| ಸುಶೀಲೆ | 0 | 8 | 0 |
| ಉಗಾದಿ ಉಡುಗೊರೆ | 0 | 2 | 0 |
| ಯಾತ್ರಾಪ್ರದರ್ಶಕ ಗ್ರಂಥ | 0 | 8 | 0 |
| ಮನೋರಮಾ | 0 | 12 | 0 |
| ಹೂವಿನ ಆಸೆ | 0 | 12 | 0 |
| ಮಾಂದಳಿರು | 0 | 12 | 0 |
| ಶಿಲಾಮುಖ | 0 | 12 | 0 |
| ಅಸುರಕೋಶ | 0 | 1 | 0 |
| ಮಿಂಚು | 0 | 10 | 0 |
| ಬೈಲಹೊಂಗಲ ಸರ್ವೆ | 0 | 12 | 0 |
| ಪಾಲಿಪಜ್ಜ ಪುಷ್ಪಾಂಜಲಿ | 0 | 8 | 0 |
| ಬ್ರಹ್ಮಚರ್ಯೆಯೋ ಕಾಮ ಸಾಧನೆಯೋ | 0 | 8 | 0 |
| ಬಂಧವಿಮೋಚನೆ | 0 | 8 | 0 |
| ಆಹಾರ ವಿಜ್ಞಾನ | 1 | 8 | 0 |
| ಆಟದ ಬಯಲು | 0 | 4 | 0 |
| ಒಳಸಂಚು | 0 | 6 | 0 |
| ಮದವಣಿಗ | 0 | 4 | 0 |
| ಸಾಹಿತ್ಯ | 0 | 12 | 0 |
| ಪ್ರತಿಜ್ಞಾಪಾಲನ | 1 | 0 | 0 |
| ಅಂತರಗಂಗೆ | 0 | 8 | 0 |
| ಸುಖಲತೆ | 0 | 10 | 0 |

| | ರೂ. | ಆ. | ಪೈ |
|---|---|---|---|
| ಪ್ರಜಾ ರಾಜ್ಯಭಾರ | 0 | 2 | 0 |
| ಭಾಗ್ಯಚಕ್ರ | 0 | 1 | 0 |
| ಶೇಕ್ಸಪಿಯರ್ ಕಥೆಗಳು | 0 | 12 | 0 |
| ಅಡವಿಯ ಹುಡುಗಿ | 0 | 8 | 0 |
| ರುಕ್ಮಿಣೀ ಸ್ವಯಂವರ | 0 | 12 | 0 |
| ಲಂಚದ ಪ್ರಪಂಚ | 0 | 3 | 0 |
| ವಿವೇಕಾನಂದರ ವೇದಾಂತ | 0 | 4 | 0 |
| ಕಂಠಾಭರಣ | 0 | 12 | 0 |
| ಸೂರ್ಯಭೇದನ ವ್ಯಾಯಾಮ | 0 | 8 | 0 |
| ಮಾನಸ ಶಾಸ್ತ್ರದ ಮಾತು | 0 | 8 | 0 |
| ಚಂಡ ಕೌಶಿಕ ನಾಟಕ | 0 | 12 | 0 |
| ಶೂರಸೇನ ಚರಿತ್ರೆ | 1 | 0 | 0 |
| ನವೀನ ಕಾಲದ ಹೆಂಗಸು | 0 | 6 | 0 |
| ಸೌಭಾಗ್ಯ ಸಂಪತ್ಕುಮಾರ | 0 | 6 | 0 |
| ಭಾರತದ ಸವಿಕಟ್ಟು | 0 | 12 | 0 |
| ತಾಮುಸಪ್ರಭು ಚರಿತ್ರೆ | 0 | 4 | 0 |
| ರಾಣೀ ಚೌಧುರಾಣಿ | 0 | 14 | 0 |
| ನರಬಲಿ | 0 | 6 | 0 |
| ಮಾನಸ ಶಾಸ್ತ್ರದ ಪರಿಚಯ | 0 | 12 | 0 |
| ಸೋಲೋ ಗೆಲವೊ | 0 | 12 | 0 |
| ವೇದಾಂತ ರೂಪರೇಖೆ | 0 | 5 | 0 |
| ಚಮತ್ಕಾರ ರೂಪರೇಖೆ | 0 | 10 | 0 |
| ಸುಭದ್ರೆ | 0 | 6 | 0 |
| ಜಯಸಿಂಹರಾಯನ ಚರಿತ್ರೆ | 0 | 8 | 0 |
| ಸುನಂದಿನಿ | 0 | 4 | 0 |
| ಪುಟ್ಟಿಂಕು | 0 | 4 | 0 |
| ರಾಜಾನಂದ | 0 | 10 | 0 |
| ಮಕ್ಕಳ ನಾಟಕ | 0 | 4 | 0 |
| ನಿರ್ಮಲ | 0 | 2 | 0 |
| ತಾರಾಪ್ಯಾರಿ | 1 | 4 | 0 |
| ಅಬಲಾ ದೌರ್ಜನ್ಯ | 0 | 6 | 0 |
| ಕಣ್ಣಲ್ಲಿಬಟ್ಟು | 0 | 1 | 0 |
| ಹರಿಣಾಕ್ಷಿ | 0 | 8 | 0 |
| ಭೀಷ್ಮ | 1 | 0 | 0 |
| ಜಗನ್ಮೋಹಿನಿ | 0 | 12 | 0 |
| ರುಗ್ಣಶಯ್ಯೆ | 0 | 4 | 0 |
| ಚಿಪ್ಪು ತಕ್ಕಡಿ | 0 | 3 | 0 |
| ನಿರ್ಭಾಗ್ಯ ಬೋರೆಗೌಡ | 0 | 4 | 0 |
| ಧರ್ಮಸಾಮ್ರಾಜ್ಯ | 0 | 12 | 0 |
| ದುರ್ಗೇಶನಂದಿನೀ | 2 | 0 | 0 |
| ರಾಮೇಶ್ವರನ ಅದೃಷ್ಟ | 0 | 4 | 0 |
| ಗ್ರಾಮಫೋನ್ ಕೀರ್ತನೆ | 0 | 4 | 0 |
| ಸೌಂದರ್ಯ ಲಹರಿ | 0 | 6 | 0 |
| ಸೀತಾದೇವಿ | 0 | 3 | 0 |
| ನವೀನ ಭರತಖಂಡ | 0 | 6 | 0 |
| ಬೆಂಜಮಿನ್ ಫ್ರಾಂಕ್ಲಿನ್ | 0 | 10 | 0 |
| ಅಶೋಕ ಚಕ್ರವರ್ತಿ | 0 | 12 | 0 |

| | ರೂ | ಆ | ಪೈ |
|---|---|---|---|
| ಕರ್ನಾಟಕ ಗತ ವೈಭವ | 1 | 0 | 0 |
| ಅನುಪಮಾ | 0 | 12 | 0 |
| ರಾಮಸಿಂಗ್ | 0 | 8 | 0 |
| ಅದ್ವೈತ ಮಕರಂದ | 0 | 8 | 0 |
| ಭವಾನಿ ಬಾಳು | 0 | 12 | 0 |
| ರಂಗಾಚಾರ್ಯ | 0 | 6 | 0 |
| ಗಂಡುಗೊಡಲಿ | 0 | 4 | 0 |
| ಅನುಭವಾಮೃತ | 1 | 8 | 0 |
| ರಾಮ ರಾಜ್ಯ | 0 | 8 | 0 |
| ರಾಮದಾಸ ಚರಿತ್ರೆ | 0 | 12 | 0 |
| ಹೋಂ ರೂಲ್ | 0 | 12 | 0 |
| ದಾಂಪತ್ಯ ವಿಜ್ಞಾನ | 1 | 8 | 0 |
| ರಾಮಕೃಷ್ಣ ವಚನಾಮೃತ | 1 | 4 | 0 |
| ಸುಶೀಲೆಯ ಗಂಡ | 0 | 6 | 0 |
| ಗೋಪಾಲಕೃಷ್ಣ ಗೋಖಲೆ | 1 | 6 | 0 |
| ಶಾಂತಿ | 0 | 6 | 0 |
| ಅಂತರ ಗಂಗೆ | 0 | 8 | 0 |
| ಇಲೆಕ್ಷನ್ | 0 | 4 | 0 |
| ದೀನಬಂಧು ಕಬೀರ | 0 | 4 | 0 |
| ರತ್ನ ಸಿಂಹಾಸನ | 0 | 8 | 0 |
| ಬಾಲ ಪ್ರಭಾತ | 0 | 6 | 0 |
| ನರಕದಲ್ಲಿ ನರಸಿಂಹ | 0 | 6 | 0 |
| ಉಪದೇಶ ಪಂಚಕ | 0 | 2 | 0 |
| ಕಾಮದ ಗುಟ್ಟು | 0 | 12 | 0 |
| ಶ್ಯಾಮ ಕುಬ್ಜ | 0 | 8 | 0 |
| ಕಿಂಡರ್ ಗಾರ್ಟನ್ ಕಥೆಗಳು | 1 | 0 | 0 |
| ಉದರ ವೈರಾಗ್ಯ | 1 | 0 | 0 |
| ಪಾಂಡವ ಕಥೆ | 1 | 0 | 0 |
| ನೆಪೋಲಿಯನ್ | 1 | 0 | 0 |
| ಬುದ್ಧದೇವ | 0 | 1 | 0 |
| ವಿವೇಕೋದಯ | 0 | 10 | 0 |
| ವಾಲಿ | 0 | 8 | 0 |
| ಅಂತರಂಗ | 0 | 12 | 0 |
| ಮಳೆಗಾಲದ ಮಲೆನಾಡು | 0 | [illegible] | 0 |
| ಅರುಣೋದಯ | 0 | 3 | 0 |
| ದೈವೀಪಾಶವೋ? ಕಾಮಪಾಶವೊ | 0 | 2 | 0 |
| ಎಲ್ಲಾ ಒಳ್ಳೇದಕ್ಕೆ | 0 | [illegible] | 0 |
| ವೈದ್ಯರಾಜ | 1 | 0 | 0 |
| ಅಸ್ಪೃಶ್ಯತೆಯ ಕಳಂಕ | 0 | 8 | 0 |
| ರಮಾನಂದ | 0 | 10 | 0 |
| ವಿದ್ಯುಲ್ಲತಾ | 1 | 0 | 9 |
| ಚಂದ್ರವದನಾ | 0 | 10 | 0 |
| ರಘುನಾಥ ಸಿಂಹ | 1 | 8 | 0 |
| ಮುಕುಂದಾನಂದಬಾಣ | 0 | 12 | 0 |
| ಭಾರತ ಮಹಿಳ | 0 | 1 | 0 |

(ಟಪ್ಪಾಲು ಖರ್ಚು ಪ್ರತ್ಯೇಕ)

ಪಂಚಾಯತ ಬೋರ್ಡು, ಹೈಸ್ಕೂಲ್, ಮುನಿಸಿಪಲ್ ಮೊದಲಾದ ಯಾವತ್ತೂ ಲೈಬ್ರೆರಿಗಳಿಗೆ ಬೇಕಾದ ಸಕಲ ಗ್ರಂಥಗಳೂ ದೊರೆಯುತ್ತವೆ. ಹೊಗನ್ನಡ ಹೊಸಗನ್ನಡದ ಯಾವ ಗ್ರಂಥ ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

## ನವಭಾರತ ಬುಕ್ ಡಿಪೊ,

## ಉಡುಪಿ.

# ಸಮಾಚಾರ ಸಂಗ್ರಹ: ಚೀನಾ ಜಾಪಾನ್ ಯುದ್ಧ ೧೫,೦೦೦ ಚೀನೀಯರು ಹತರಾದರು, ಸೇಲಮ್ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ, ಮೇಡ್ರಿಡ್ ರಣರಂಗದಲ್ಲಿ ಸಹಸ್ರಮಂದಿಯ ವಧೆ, ಕೊಟ್ಟಪಾಟಮ್ ಕೈದಿಗಳ ಬಿಡುಗಡೆ.

### ಚೀನಾ ಜಾಪಾನ್ ಯುದ್ಧ 15000 ಚೀನೀಯರು ಹತರಾದರು

ಉತ್ತರ ಚೀನದಲ್ಲಿ ಚೀನ ಮತ್ತು ಜಾಪಾನ್ ಸೈನಿಕರೊಳಗೆ ಕಳೆದ ತಾ. 28ರಲ್ಲು ಹೋರಾಟ ನಡೆದು ಚೀನೀಯರು ಪಾಂಗ್ ಫಿಂಗ್ ಎಂಬ ಸ್ಥಳವನ್ನು ಬಿಟ್ಟು ಹಿಂದೆ ಸರಿಯಬೇಕಾಗಿರುವುದು. ಜಾಪಾನರು ವಿಮಾನ ಮತ್ತು ತೋಪುಗಳ ಮೂಲಕ ಗುಂಡುಗಳ ಮಳೆಗರೆದು ಅನೇಕ ಮಂದಿ ಸೈನಿಕರನ್ನು ಕೊಂದಿರುವರು. ಪೈಪಿಂಗ್ ಎಂಬ ಪ್ರಾಮುಖ್ಯ ಪಟ್ಟಣದಲ್ಲಿರುವ ಚೀನೀಯರ 29ನೇ ಸೇನೆಯ ನಾಯಕರಾದ ಜನರಲ್ ಸಂಗರು ಪೋಟಿಂಗ್‌ಫು ಎಂಬಲ್ಲಿಗೆ ಪಲಾಯನಮಾಡಿದರೆಂದೂ ಜನರಲ್ ಚೀಂಗರು ನಾಯಕತ್ವವನ್ನು ವಹಿಸಿರುವರೆಂದೂ ತಿಳಿದುಬರುತ್ತದೆ. ಈ ಸೇನೆಯನ್ನು ಪೈಪಿಂಗ್ ಪ್ರದೇಶದಿಂದ ಹೊರ ಹಾಕಲು ಜಾಪಾನರು ದೃಢ ನಿರ್ಧಾರದಿಂದ ಮುಂದೊತ್ತುವರು. ಈ ಹೋರಾಟದಲ್ಲಿ 42ಮಂದಿ ಜಾಪಾನ ಸೈನಿಕರು ಕೊಲ್ಲಲ್ಪಟ್ಟು 113ಮಂದಿ ಗಾಯಗೊಂಡಿರುವರು

ಉತ್ತರ ಚೀನದ ಪ್ರಾಮುಖ್ಯ ಪಟ್ಟಣವಾದ ಪೈಪಿಂಗಿನ ಶೋಚನೀಯ ಪರಿಸ್ಥಿತಿ, 29ನೇ ಚೀನೀ ಸೇನೆಯ ಅಪಜಯ, ಮತ್ತು ಜನರಲ್ ಸಂಗರ ಪಲಾಯನಕ್ಕೆಲ್ಲಾ ತಾನೇ ಜವಾಬ್ದಾರನೆಂದು ಹೇಳಿ ಮಾರ್ಶಲ್ ಚಿಯಂಗ್ ಕೈಶೇಕ್ಕರು, ಜಾಪಾನು ಉತ್ತರ ಚೀನದಲ್ಲಿ ತನ್ನ ಅಧಿಕಾರ ಸ್ಥಾಪಿಸುವ ಕುತಂತ್ರ ಬಿಟ್ಟು, ಚೀನೀ ಸರಕಾರದ ಅಧಿಕಾರವನ್ನೊಪ್ಪುವ ತನ್ನ 4ಶರ್ತಗಳ ಗೊಪ್ಪದಿದ್ದರೆ ಸಂಧಿಯು ಸಾಧ್ಯವೇ ಇಲ್ಲೆಂದು ಪ್ರತಿಪಾದಿಸಿರುವರು. ಜನರಲ್ ಸಂಗರು ಜಾಪಾನದೊಡನೆ ಸಂಧಿ ಪ್ರಸ್ತಾಪ ಮಾಡುತ್ತಾ, ಕೇಂದ್ರ ಸರಕಾರದ ಸೇನೆಯು ಮುಂದುವರಿಯುವುದು ಬೇಡೆಂದು ಕೇಳಿಕೊಂಡುದರಿಂದ ಪೈಪಿಂಗಿನಲ್ಲಿ ಹೋರಾಟ ನಡೆದಾಗ ಜಾಪಾನರನ್ನು ಪ್ರಬಲವಾಗಿ ಇದಿರಿಸಲು ಸಾಧ್ಯವಾಗದೆ ಹೋಯಿತೆಂದು ಮಾರ್ಶಲ್ ಚಿಯಂಗರು ವಿಶದಗೊಳಿಸಿರುವರು. ಪೈಪಿಂಗಿನ ಅಪಜಯದಿಂದ ಮಾರ್ಶಲರೇನೂ ನಿರುತ್ಸಾಹಗೊಂಡಿರುವುದಿಲ್ಲ. ಸೇನಾಶಕ್ತಿಯಿಂದ ಅಪೇಕ್ಷಣೀಯ ಪ್ರಾಮುಖ್ಯವಲ್ಲೆಂದೇ ಅವರ ಅಭಿಮತ. ಇಂದಿಗೆ ಉತ್ತರ ಚೀನದ ಕಲಹವು ಇಡೀ ರಾಷ್ಟ್ರದ ಪ್ರಶ್ನೆಯಾಗಿರುವುದರಿಂದ ಚೀನೀಯರು ತಮ್ಮ ಸರ್ವಸ್ವವನ್ನೆಲ್ಲಾ ಸಂಪೂರ್ಣವಾಗಿ ಉಪಯೋಗಿಸಿ ಸಹಾಯಮಾಡಬೇಕೆಂದು ವಿನಂತಿಮಾಡಿಕೊಂಡಿರುವರು.

ಕಳೆದ ತಾ. 29ರಲ್ಲು ಜಾಪಾನ್ ವಿಮಾನಗಳು ಬೊಂಬೆಸೆದು ಟೇಂಟ್ಸಿನಿನ ಬಳಿಯ ಕೆಲವು ಹಳ್ಳಿಗಳು ಸುಟ್ಟುಹೋಗಿರುವವು. ಸೆಂಟ್ರಲ್ ರೈಲ್ವೇ ಸ್ಟೇಶನ್, ನಾಂಕೈ ವಿಶ್ವವಿದ್ಯಾಲಯ ಮತ್ತು ಸೇನಾ ಕೇಂದ್ರ ಕಟ್ಟಡಗಳಿಗೆ ಬೆಂಕಿಹಿಡಿದಿರುವುದು, ನೂರಾರು ಮಂದಿ ಚೀನೀಯರು ಕೊಲ್ಲಲ್ಪಟ್ಟಿರುವರು. ಪೈಪಿಂಗಿನ ಬಳಿ ನಡೆದ ಯುದ್ಧದಲ್ಲಿ 1000ಮಂದಿ ಚೀನೀ ಸೈನಿಕರು ಕೊಲ್ಲಲ್ಪಟ್ಟಿರುವರು. ಕಳೆದ ವಾರಗಳಿಂದ ನಡೆದ ಹೋರಾಟದಲ್ಲಿ 29ನೇ ಸೇನೆಯ 15,000ಚೀನೀ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬರುತ್ತದೆ. ಕಳೆದ ತಾ. 29ನೇ ರಾತ್ರಿ ಟೇಂಟ್ಸಿನಿನ ಸುತ್ತಲೂ ತೀವ್ರ ಹೋರಾಟ ನಡೆದಿರುವುದು. ಚೀನೀಯರು ಮನೆಗಳ ಮೇಲಿಂದ ಗುಂಡೆಸೆಯುತ್ತಿರುವರು. ಚೀನೀಯರು ಜಾಪಾನರ ವಿಮಾನ ನಿಲಯ ಮತ್ತು ಮದ್ದು ಸಂಗ್ರಹಾಲಯವನ್ನು ವಶಪಡಿಸಿಕೊಳ್ಳಲೆತ್ನಿಸಿದಾಗ, ಜಾಪಾನ್ ವಿಮಾನಗಳೆಲ್ಲಾ ಮೇಲಕ್ಕೇರಿ ಅವರ ಮೇಲೆ ಬೊಂಬು ಮತ್ತು ಗುಂಡೆಸೆದುವು. ಜಾಪಾನರ ಯುದ್ಧನಾವೆಗಳು ಬಂದು ಚೀನೀಯರ ಮೇಲೆ ಫಿರಂಗಿ ಗುಂಡುಗಳನ್ನೆಸೆದುವು. ಈ ಹೋರಾಟದಲ್ಲಿ 1201ಮಂದಿ ಚೀನೀ ಮತ್ತು 309ಮಂದಿ ಜಾಪಾನರು ಕೊಲ್ಲಲ್ಪಟ್ಟಿರುವರು. ಟುಂಗುಟೋವಿ ಎಂಬಲ್ಲಿದ್ದ 300ಮಂದಿ ಜಾಪಾನರು ಕೊಲೆಮಾಡಲ್ಪಟ್ಟರ ವರಂದು ತಿಳಿದುಬರುತ್ತದೆ

ಜಾಪಾನರು ಉತ್ತರ ಚೀನದಲ್ಲಿ ತಮ್ಮ ಕೈಗೊಂಬೆಯಂತೆ ನಡೆಯುವ ಸರಕಾರವನ್ನು ಸ್ಥಾಪಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ಅದನ್ನು ನಾನ್ಕಿಂಗಿನ ಕೇಂದ್ರ ಸರಕಾರವು ಅಂಗೀಕರಿಸುವ ಹಾಗಿಲ್ಲ. ಕೇಂದ್ರ ಸರಕಾರದ ಸೈನಿಕರು ಹೊಸ ಎಂಬಲ್ಲಿ ತಮ್ಮ ಸ್ಥಾನವನ್ನು ಬಲಪಡಿಸುತ್ತಿದ್ದಾರೆ. ಪ್ರಬಲ ಸಮರವು ಸನ್ನಿಹಿತವೆಂಬಂತೆ ತೋರುತ್ತದೆ. ಲೀಗ್ ಆಫ್ ನೇಶನ್ಸಿನವರು ಇದರಲ್ಲೇನೂ ಕೈಹಾಕುವ ಹಾಗಿಲ್ಲ. ಬ್ರಿಟಿಷ್, ಅಮೆರಿಕ ಮೊದಲಾದ ರಾಷ್ಟ್ರಗಳು ಯುದ್ಧದ ಕುರಿತು ತಮ್ಮ ವಿರೋಧವನ್ನು ಎರಡು ರಾಷ್ಟ್ರಗಳಿಗೂ ತಿಳಿಸಿರುವವು.

ಇಡೀ ಚೀನವು ಜಾಪಾನಿಗೆ ವಿರೋಧವಾಗಿ ಎದ್ದಿರುವುದು. ಟೇಂಟ್ಸಿನಿನ ಬಳಿ ಜಾಪಾನರು ನಡೆಸಿದ ವಿಮಾನಧಾಳಿ ನಡೆಸಿದಾಗ 700ಮಂದಿ ಚೀನೀಯರು ಕೊಲ್ಲಲ್ಪಟ್ಟು 1000ಮನೆಗಳು ಮುರಿದುಹೋಗಿರುವವು. ಕಳೆದ ತಾ. 31ರಲ್ಲು ಟುಂಗ್ಜೋವಿನಲ್ಲಿ ಜಾಪಾನ್ ಸೈನಿಕರು, ವಿಮಾನ ಪಡೆಯ ಸಹಾಯದಿಂದ ಚೀನೀಯರ ಮೇಲೆ ಬಿದ್ದು ಅವರನ್ನೆಲ್ಲಾ ನಿಶ್ಯಸ್ತ್ರರನ್ನಾಗಿ ಮಾಡಿ ಹಿಂದಕ್ಕಟ್ಟಿರುವರು ಚೀನೀಯ ಸೈನಿಕರು ಪೈಪಿಂಗಿಗೆ ಸಂದಿರುವರು.

### ಸೇಲಮ್ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ

#### ಮದ್ರಾಸ್ ಮಂತ್ರಿಮಂಡಲದ ನಿರ್ಧಾರ

ಮದ್ರಾಸ್ ಮಂತ್ರಿಮಂಡಲವು ಆದಷ್ಟು ಬೇಗನೇ ಇಡೀ ಪ್ರಾಂತದಲ್ಲಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರಲಿರುವುದು. ಪ್ರಥಮದಲ್ಲೀಗ ಸೇಲಮ್ ಜಿಲ್ಲೆಯಲ್ಲಿ ಸಂಪೂರ್ಣ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರುವ ನಿರ್ಧಾರಮಾಡಿರುವುದು. ಇಡೀ ಸೇಲಮ್ ಜಿಲ್ಲೆಯಲ್ಲಿ ಈ ವರ್ಷ ಮದ್ಯದಂಗಡಿಗಳ ಏಲಮ್ ನಡಿಸಬಾರದೆಂದು ಇಷ್ಟರಲ್ಲೇ ಹುಕುಮು ಹೊರಟಿರುವುದೆಂದು ತಿಳಿದುಬರುತ್ತದೆ. ಸೇಲಮ್ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರಲು ಕಷ್ಟವೇನೂ ಆಗಲಾರದೆಂದೂ, ಅಧಿಕಾರಿಗಳೂ ಅನಧಿಕಾರಿಗಳೂ ಅದಕ್ಕೆ ಬೇಕಾದ ಸಹಾಯವನ್ನೀಯದಿರರೆಂದೂ ಪ್ರಧಾನ ಮಂತ್ರಿಗಳ ನಿರೀಕ್ಷೆಯಿರುವುದು. ಕಳವಿನಿಂದ ಮದ್ಯ ತಯಾರಿಸದಂತೆ ನೋಡಲು ಪ್ರಧಾನ ಮಂತ್ರಿಗಳು ಅಬ್ಕಾರಿ ಪೋಲೀಸರ ಮೇಲೆ ಹೊಂದಿಕೊಂಡಿರದೆ ಸರ್ವ ಸಾಮಾನ್ಯ ಪೋಲೀಸರಿಗೇನೇ ಅದನ್ನು ಒಪ್ಪಿಸಬಿಡುವರು. ಬಾಟ್ಲಿ ಬಾಟ್ಲಿಯಾಗಿ ಸಾರಾಯಿ ಮಾರುವುದೂ ನಿಷೇಧಿಸಲ್ಪಡುವುದು ವೈಯಕ್ತಿಕ ಮತ್ತು ಖಾಸಗಿ ಉಪಯೋಗಕ್ಕಾಗಿ ಮದ್ಯ ತಯಾರಿಸಲು ಅನುಮತಿಕೊಡಲು ಪ್ರಧಾನ ಮಂತ್ರಿಗಳು ಸಿದ್ಧರಿರುವರು. ಸರಕಾರದ ಈ ನಿರ್ಧಾರದ ಮೇರೆಗೆ ಸೇಲಮ್ ಜಿಲ್ಲೆಯೊಂದರಲ್ಲೇ ರೂ. 11ಲಕ್ಷಗಳಷ್ಟರ ಅಬ್ಕಾರಿ ಆದಾಯವು ಕಡಿಮೆಯಾಗುವುದು. ಇಡೀ ಪ್ರಾಂತದಲ್ಲಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತಂದಲ್ಲಿ ರೂ. ನಾಲ್ಕೂವರೆ ಕೋಟಿಯಷ್ಟರ ಆದಾಯ ನಷ್ಟವಾಗುವುದು. ಸೇಲಮಿನ ಕಲೆಕ್ಟರರಾದ ಶ್ರೀ ರಾಮಮೂರ್ತಿಯವರು ಮದ್ಯಪಾನ ನಿಷೇಧದ ಪ್ರಯೋಗವು ಜಯಶೀಲವಾಗುವಂತೆ ಉತ್ಸಾಹದಿಂದ ಪ್ರಯತ್ನಿಸಲಿರುವರು. ಆ ಕುರಿತು ಅವರು ಪೋಲೀಸರೇ ಮೊದಲಾದವರಿಗೂ ಎಚ್ಚರವಿತ್ತಿರುವರು

### ಮೇಡ್ರಿಡ್ ರಣರಂಗದಲ್ಲಿ ಅನೇಕ ಸಹಸ್ರಮಂದಿಯ ವಧೆ

ಜುಲೈ ತಾ. 26ರಲ್ಲು ಜನರಲ್ ಫ್ರೇಂಕೋರವರ ಪ್ರಚಂಡ ಸೇನೆಯು ಮೇಡ್ರಿಡಿನ ಪೂರ್ವರಂಗದಲ್ಲಿ ಸ್ಪೈನಿಶ್ ಸರಕಾರದ ಸೇನೆಯ ಮೇಲೆ ಬಿದ್ದು ಭೀಷಣ ಹೋರಾಟ ನಡೆಯಿತು. ಬಂದ ವೈರಿ ಸೇನಾ ಪ್ರವಾಹವನ್ನು ಸರಕಾರದ ಸೈನಿಕರು ತಡೆಗಟ್ಟಿದರು. ಬಂಡಾಯಗಾರರ 80 ವಿಮಾನಗಳು ಬೋಂಬೆಸೆಯುವಾಗ ವಿಮಾನಭೇದಕ ಯಂತ್ರಗಳು ಅವುಗಳ ಮೇಲೆ ಗುಂಡೆಸೆದು 4 ವಿಮಾನಗಳನ್ನು ನೆಲಕ್ಕೆ ಕೆಡಹಿದುವು. ಸರಕಾರದ ಕಡೆಯಿಂದ ಬಂದ ಸುದ್ದಿಯ ಮೇರೆಗೆ ಮೇಡ್ರಿಡಿನ ಪಶ್ಚಿಮದಲ್ಲಿ ನಡೆದ ಭಯಂಕರ ಕದನದಲ್ಲಿ 23,000 ಬಂಡಾಯಗಾರ ಸೈನಿಕರು ಕೊಲ್ಲಲ್ಪಟ್ಟಿರುವರು. ಆದರೆ ಬಂಡಾಯಗಾರರ ಕಡೆಯಿಂದ ಬಂದ ವಾರ್ತೆಯ ಮೇರೆಗೆ ಸರಕಾರದ ಕಡೆಯ ಸೈನಿಕರು ಒಟ್ಟು 30,000 ಕೊಲ್ಲಲ್ಪಟ್ಟಿರುವರೆಂದೂ, 50ಕ್ಕಿಂತಲೂ ಮಿಕ್ಕಿದ ಟಾಂಕಿಗಳು ವಶವಾಗಿರುವವೆಂದೂ ತಿಳಿದು ಬರುತ್ತದೆ. ಬ್ರನ್ಕೆಟ್ ಎಂಬ ಪ್ರಾಮುಖ್ಯಸ್ಥಳವನ್ನು ಬಂಡಾಯಗಾರರು ಪ್ರಚಂಡ ಧಾಳಿ ಮತ್ತು ತೋಪು ಗುಂಡುಗಳಿಂದ ಸಂಪೂರ್ಣ ನಾಶಮಾಡಿರುವರು. ಇಲ್ಲಿ ಭೀಕರ ಕೈಕೈ ಹೋರಾಟ ನಡೆದು 6000 ಮಂದಿ ಬಂಡಾಯಗಾರರು ಕೊಲ್ಲಲ್ಪಟ್ಟಿರುವರು. ಸರಕಾರದ ಕಡೆಯ ಸೈನಿಕರು ಹಿಂದೆ ಸರಿದು ಆ ಮೇಲೆ ಪುನಃ ಮುಂದೊತ್ತಿ ಬ್ರನ್ಕೆಟನ್ನು ಸ್ವಾಧೀನಪಡಿಸಿಕೊಂಡಿರುವರು. ಮೇಡ್ರಿಡ್ ರಣರಂಗದಲ್ಲಿ ಈಗ ಯುದ್ಧವೇ ನಡೆದಿರುವುದಿಲ್ಲ. ಬಂಡಾಯಗಾರರು ಉತ್ಸಾಹಗುಂದಿರುವಂತಿದೆ.

### ಕೊಟ್ಟಪಾಟಮ್ ಕೈದಿಗಳ ಬಿಡುಗಡೆ

ಗುಂಟೂರಿನ ಕೊಟ್ಟಪಾಟಮ್ ಎಂಬಲ್ಲಿ ಆಂಧ್ರದ ಸಮತಾವಾದಿಗಳು ಬೇಸಗೆ ಶಾಲೆಯೊಂದನ್ನು ತೆರೆದು, ಅದನ್ನು ಸರಕಾರದವರು ನಿಷೇಧಿಸಿ, ಆ ನಿಷೇಧವನ್ನು ಲ್ಲಂಘಿಸಿದ ಕೆಲವರನ್ನು ಪೋಲಿಸರು ದಸ್ತಗಿರಿ ಮಾಡಿ 16 ಮಂದಿ ಶಿಕ್ಷೆಗೆ ಗುರಿಯಾಗಿರುವರಷ್ಟೆ. ಈ 16 ಮಂದಿಯನ್ನೂ ಜುಲೈ ತಾ. 28ರಲ್ಲು ಕಾಂಗ್ರೆಸ್ ಮಂತ್ರಿಗಳು ಬಿಡುಗಡೆ ಮಾಡಿರುವರು. ಈ ಶಾಲೆಯ ಸ್ಥಾಪಕರಾದ ಶ್ರೀ ಕಾಮೇಶ್ವರ ರಾಯರ ಮೇಲೆ ನಡೆದಿರುವ ಖಟ್ಲೆಯೂ ಹಿಂತೆಗೆಯಲ್ಪಟ್ಟಿರುವುದು. ರಾಜಕೀಯ, ಸಾಮಾಜಿಕ ಅಥವಾ ಸಾಂಪತ್ತಿಕ ತತ್ವ ಪ್ರಚಾರಕ್ಕೆ ಸರಕಾರದ ಯಾವ ಆಕ್ಷೇಪವೂ ಇರಲಾರದು. ಆದರೆ ವರ್ಗದ್ವೇಷವನ್ನೆಬ್ಬಿಸಿ, ಹಿಂಸಾತ್ಮಕ ಹೋರಾಟವನ್ನು ಪ್ರೋತ್ಸಾಹಿಸುವ ಭಾವನಾ ಪ್ರಚಾರವನ್ನು ಸರಕಾರವು ತಾಳಿಕೊಳ್ಳಲಾರದೆಂದು ಮುಖ್ಯ ಮಂತ್ರಿಗಳು ಕೊಟ್ಟಿರುವ ಬಿಡುಗಡೆಯ ಹುಕುಮಿನಲ್ಲಿ ಸೂಚಿಸಿರುವರು.

ಅತ್ಯುತ್ತಮ ಪೆನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ
'ಕುಶಾ' (ರಜಿಸ್ಟರ್ಡ್) ಫೌಂಟನ ಪೆನಿನ 'ಶಾಯಿ'
'ಕುಶಾ' (ರಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ'
ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ
Sole disributtors:—V V Kamath & Bros, Mangalore.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

# — ಕಾಂಗ್ರೆಸ್ ಮಂತ್ರಿಗಳ ಕಾರ್ಯಕ್ರಮ —

ಮಹಾತ್ಮಾಗಾಂಧಿಯವರು ತನ್ನ ಹರಿಜನ ಪತ್ರಿಕೆಯಲ್ಲಿ ದೀರ್ಘವಾದೊಂದು ಲೇಖ ಬರೆದು ಕಾಂಗ್ರೆಸ್ ಮಂತ್ರಿಗಳು ಅನುಸರಿಸಬೇಕಾದ ಕಾರ್ಯಕ್ರಮವೇನಿರಬೇಕೆಂಬ ದಿಗ್ದರ್ಶನಮಾಡಿಕೊಟ್ಟಿರುವರು. ಅದರ ಮುಖ್ಯಾಂಶಗಳನ್ನು ಈ ಕೆಳಗೆ ಕೊಡಲಾಗಿದೆ.

## ಮದ್ಯಪಾನ ನಿಷೇಧವನ್ನು ಕೂಡಲೆ ಜ್ಯಾರಿಗೆ ತರುವುದು ಹೇಗೆ?

ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಸ್ವೀಕರಿಸಿದ ಜುಲೈ ತಾ. ೧೪ರಿಂದ ೩ ವರ್ಷದೊಳಗೆ ಮದ್ಯಪಾನನಿಷೇಧವನ್ನು ಸಂಪೂರ್ಣವಾಗಿ ಜ್ಯಾರಿಗೆ ತರುವುದಾದರೂ ಹೇಗೆ? ಎರಡೇ ವರ್ಷಗಳೊಳಗೆ ಅದನ್ನು ಜ್ಯಾರಿಗೆ ತರುವುದು ಸಾಧ್ಯವೆಂದು ನನ್ನ ಕಲ್ಪನೆಯಾಗಿದೆ. ಆದರೆ ಆಡಳಿತದ ತೊಡಕುಗಳನ್ನರಿಯದೆ ನಾನು ೩ ವರ್ಷಗಳ ಅವಧಿಯನ್ನಿತ್ತಿರುವೆನು. ಇದರಿಂದಾಗುವ ಆದಾಯ ನಷ್ಟಕ್ಕೆ ನಾನು ಯಾವ ಬೆಲೆಯನ್ನೂ ಕೊಡುವುದಿಲ್ಲ. ರಾಷ್ಟ್ರದ ದೃಷ್ಟಿಯಲ್ಲಿ ಅತಿ ಮಹತ್ವದ ಮದ್ಯಪಾನ ನಿಷೇಧದ ವಿಷಯದಲ್ಲಿ ಕಾಂಗ್ರೆಸ್ಸಿನವರು ಅದರಿಂದಾಗುವ ನಷ್ಟವನ್ನಾಲೋಚಿಸುತ್ತಾ ಹೋದರೆ ಅದನ್ನು ಜ್ಯಾರಿಗೆ ತರಲು ಸಾಧ್ಯವಾಗಲಾರದು. ಮದ್ಯ ಮತ್ತು ಅಮಲು ಪದಾರ್ಥಗಳಿಂದ ದೊರೆಯುವ ಆದಾಯವು ಅತ್ಯಂತ ತುಚ್ಛವಾದುದೆಂಬುದನ್ನು ಯಾರೂ ಮರೆಯಬಾರದು. ಈ ಆದಾಯ ನಷ್ಟವೆಂಬುದು ಕೇವಲ ತೋರುವಿಕೆಗೆ ಮಾತ್ರ. ಅಧೋಗತಿಗಿಳಿಸುವ ಈ ತೆರಿಗೆಯನ್ನು ತೆಗೆದು ಹಾಕುವುದರಿಂದ ಮದ್ಯಪಾಯಿ ತೆರಿಗೆದಾರನು ಒಳ್ಳೇ ರೀತಿಯಲ್ಲಿ ಸಂಪಾದಿಸಿ ವ್ಯಯಿಸುವಂತಾಗುವದು. ಕಾಂಗ್ರೆಸ್ ಮಂತ್ರಿಗಳು ಅನುಸರಿಸಬೇಕಾದ ಕಾರ್ಯಕ್ರಮದಲ್ಲಿ ನಾನು ಮದ್ಯಪಾನ ನಿಷೇಧಕ್ಕೆ ಪ್ರಥಮಸ್ಥಾನ ಕೊಟ್ಟಿರುವುದೇಕೆಂದರೆ ಅದು ಶೀಘ್ರ ಪರಿಣಾಮಕಾರಿಯಾಗಿದೆ.

## ಅಮೇರಿಕದ ಪರಿಶೋಧನೆ

ಕಳ್ಳಭಟ್ಟಿಯಿಂದ ಮದ್ಯ ತಯಾರಿಸಿ ಮಾರುವುದನ್ನು ತಡೆಗಟ್ಟಲು ಹೆಚ್ಚಿನ ವ್ಯಯತಾಗುವುದೆಂಬುದು ವಿಚಾರವಿಲ್ಲದ ಮಾತಾಗಿದೆ. ಅಮೇರಿಕದ ಉದಾಹರಣೆಯನ್ನೆತ್ತಿ ಹೇಳುವುದು ಸರಿಯಲ್ಲ. ಹಿಂದು ದೇಶವು ಅಮೇರಿಕವಲ್ಲ. ಅಮೇರಿಕದ ಉದಾಹರಣೆಯು ನಮಗೆ ಸಹಾಯವಾಗುವ ಬದಲಿಗೆ ತೊಡಕಾಗಿರುವುದು. ಅಮೇರಿಕದಲ್ಲಿ ಮದ್ಯಪಾನವು ನಾಚಿಕೆಕರವಾಗಿರುವುದಿಲ್ಲ. ಅಲ್ಲಿ ಕುಡಿಯುವುದೊಂದು "ಫೇಶನ್"ಆಗಿರುತ್ತದೆ. ಅಮೇರಿಕದ ದೃಢನಿರ್ಧಾರವುಳ್ಳ ಅಲ್ಪಸಂಖ್ಯಾಕರು ಕೇವಲ ತಮ್ಮ ನೈತಿಕಶಕ್ತಿಯ ಬಲದಿಂದ ಕೆಲ ಕಾಲ ಮಟ್ಟಿಗಾದರೂ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರಲು ಶಕ್ತರಾದುದು ಅತ್ಯಂತ ಪ್ರಶಂಸನೀಯವಾದುದು. ಈ ಪ್ರಯೋಗವು ನಿರರ್ಥಕವಾಗಿರುವುದೆಂದು ನಾನು ಪರಿಗಣಿಸುವುದಿಲ್ಲ. ಅಮೇರಿಕವು

## ಗಾಂಧೀಜಿಯವರ ಸೂಚನೆ.

### ಮದ್ಯಪಾನ ನಿಷೇಧ, ಪ್ರಾಯಶ್ಚಿತ್ತ ಶಿಕ್ಷಣ, ಜೈಲು ಸುಧಾರಣೆ, ಮಕ್ಕಳಿಗೆ ಹೊಸ ರೀತಿಯ ತರಬೇತಿ, ಶ್ರೀಮಂತರ ಮೇಲೆ ಹೆಚ್ಚಿನ ಕರ, ಒಕ್ಕಲಿಗರಿಗೆ ಸಹಾಯದ ಕಾರ್ಯಕ್ರಮ.

●○●

ಇನ್ನೊಮ್ಮೆ ಇನ್ನೂ ಹೆಚ್ಚಿನ ಉತ್ಸಾಹ ಮತ್ತು ಅನುಭವದಿಂದ ಮದ್ಯಪಾನ ನಿಷೇಧವನ್ನು ಕೈಕೊಳ್ಳಬಹುದೆಂಬ ವಿಷಯದಲ್ಲಿ ನಾನು ನಿರಾಶೆ ಪಡುವುದಿಲ್ಲ. ಹಿಂದು ದೇಶವು ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತಂದರೆ ಅದರಿಂದಾಗಿ ಅಮೇರಿಕವು ಬೇಗನೆ ಅದನ್ನು ಕೈಕೊಳ್ಳುವಂತಾಗಬಹುದು. ಮದ್ಯಪಾನ ನಿಷೇಧವನ್ನು ಹಿಂದು ದೇಶದಷ್ಟು ಸುಲಭವಾಗಿ ಲೋಕದ ಮತ್ತಾವ ಭಾಗದಲ್ಲಿಯೂ ಜ್ಯಾರಿಗೆ ತರಲು ಸಾಧ್ಯವಿಲ್ಲ. ಯಾಕಂದರೆ ನಮ್ಮಲ್ಲಿ ಕುಡಿಯುವವರು ಅಲ್ಪಸಂಖ್ಯಾಕರು.

ಕಾಂಗ್ರೆಸ್ಸಿನವರು, ವಿಶೇಷವಾಗಿ ಸ್ತ್ರೀಯರು ಮದ್ಯಪಾನ ನಿಷೇಧಕ್ಕಾಗಿ ರಕ್ತ ಸುರಿಸಿರುವರು. ನಾನು ಕಲ್ಪಿಸಬಹುದಾದ ಇನ್ನಾವುದೊಂದು ಕಾರ್ಯದಿಂದಾದರೂ ರಾಷ್ಟ್ರದ ಪ್ರತಿಷ್ಠೆಯು ಮದ್ಯಪಾನ ನಿಷೇಧದಿಂದಾಗುವಷ್ಟು ಹೆಚ್ಚಲಾರದು. ಉಳಿದ ೫ ಪ್ರಾಂತಗಳು ೬ ಪ್ರಾಂತಗಳ ಮಾದರಿಯನ್ನನುಸರಿಸಬಹುದು. ಹಿಂದು ದೇಶವು ಕುಡಿದು ಮತ್ತವಾಗಿರುವುದಕ್ಕಿಂತ ವಿವೇಕವುಳ್ಳದಾಗಿರಬೇಕೆಂದು ಕಾಂಗ್ರೆಸ್ಸಿನವರಲ್ಲದ ಮುಸಲ್ಮಾನ ಮಂತ್ರಿಗಳೂ ಆಶಿಸದಿರಲಾರರು. ಕಳ್ಳಭಟ್ಟಿಕೆಯ ಮದ್ಯ ತಯಾರಿಯನ್ನು ತಡೆಗಟ್ಟಲಿಕ್ಕೆ ಇತರ ತಕ್ಸೀರುಗಳನ್ನು ತಡೆಗಟ್ಟಲು ತಾಗುವುದಕ್ಕಿಂತ ಹೆಚ್ಚಿನ ವೆಚ್ಚವೇಕೆ ಬೇಕು? ಕಳ್ಳಭಟ್ಟಿಕೆಯಲ್ಲಿ ಮದ್ಯ ತಯಾರಿಸುವುದನ್ನು ಕಠಿಣವಾಗಿ ದಂಡಿಸಿ ಬಿಟ್ಟರಾಯಿತು. ಕಳ್ಳಭಟ್ಟಿಕೆಯಂತೆ, ಕೆಲಮಟ್ಟಿಗೆ ಈ ಕಳವು ನಿರಂತರವೂ ನಡೆಯದಿರಲಾರದು. ಕಳ್ಳಭಟ್ಟಿಕೆಯ ಮದ್ಯತಯಾರಿಯನ್ನು ಕಂಡುಹಿಡಿಯಲು ಪ್ರತ್ಯೇಕವಾದೊಂದು ಸಿಬ್ಬಂದಿಯೇನೂ ಬೇಕಾಗಿಲ್ಲ. ಆದರೆ ರಸ್ತೆಯಲ್ಲಾಗಲಿ, ಇತರ ಸಾರ್ವಜನಿಕ ಸ್ಥಳಗಳಲ್ಲಾಗಲಿ ಕುಡಿದು ಮತ್ತನಾಗಿರುವವನಿಗೆ ಹೆಚ್ಚಿನ ಜುಲ್ಮಾನೆ ಇಲ್ಲವೆ ಅವನು ಆ ವ್ಯಸನದಿಂದಲೇ ದೂರವಾಗಿ ವಿಚಾರವಂತನಾಗುವ ವರೆಗೆ ಅನಿಶ್ಚಿತಾವಧಿಯ ಶಿಕ್ಷೆ ವಿಧಿಸಬೇಕು. ವಿಶೇಷವಾಗಿ ಸ್ತ್ರೀಯರಿಂದ ನಡಿಸಲ್ಪಡುವ ಜನಹಿತಕಾರಿಕ ಸಂಘಗಳು ಮಜೂರರಲ್ಲಿ ಕೆಲಸಮಾಡಬೇಕು. ಈ ಸಂಘಗಳವರು ಕುಡುಕರನ್ನು ಹೋಗಿ ಕಂಡು ಅವರು ಆ ದುರ್ವ್ಯಸನವನ್ನು ಬಿಡುವಂತೆ ಮಾಡುವರು. ಮಜೂರರಿಂದ ಕೆಲಸಮಾಡಿಸುವವರು ಅವರಿಗಾಗಿ ಅಗ್ಗವಾದ ಮತ್ತು ಆರೋಗ್ಯಕರವಾದ ಉಪಹಾರಗೃಹ, ವಾಚನಾಲಯ ಮತ್ತು ವಿನೋದ ನಿಲಯಗಳನ್ನು ಸ್ಥಾಪಿಸಬೇಕೆಂದು ಕಾನೂನು ಮಾಡತಕ್ಕದ್ದು. ಮಜೂರ ಸ್ತ್ರೀಪುರುಷರು ಈ ಗೃಹಗಳಿಗೆ ಹೋಗಿ ಜ್ಞಾನ, ಆರೋಗ್ಯಕರವಾದ ಭೋಜನ, ಪಾನ ಮತ್ತು ನಿರ್ದೋಷವಾದ ವಿನೋದವನ್ನು ಪಡೆಯುವಂತಾಗಬೇಕು.

ಹೊಸತಾಗಿ ಯಾವ ಗುತ್ತಿಗೆಗಳನ್ನೂ ತೆರೆಯದೆ, ಅಥವಾ ಜನತೆಗೆ ತೊಂದರೆಯನ್ನುಂಟುಮಾಡುವ ಅಪಾಯಕರ ಸ್ಥಳದಲ್ಲಿರುವವುಗಳು ಕೆಲವನ್ನು ಮುಚ್ಚಿ ಮದ್ಯಪಾನ ನಿಷೇಧವನ್ನಾರಂಭಿಸಬೇಕು. ಹೆಚ್ಚಿನ ಪರಿಹಾರವನ್ನೀಯದೆ ಎರಡನೇಯದು ಹೇಗೆ ಸಾಧ್ಯವೋ ನನಗೆ ತಿಳಿಯದು. ಹೇಗಾದರೂ ಅವಧಿಯಾಗುವ ಲೈಸೆನ್ಸುಗಳನ್ನು ನವೀಕರಿಸಬಾರದು. ಯಾವ ಸಂದರ್ಭದಲ್ಲಾದರೂ ಹೊಸ ಗುತ್ತಿಗೆಯನ್ನು ತೆರೆಯಬಾರದು.

ಸಂಪೂರ್ಣ ಮದ್ಯಪಾನ ನಿಷೇಧವು ಎಷ್ಟರ ಮಟ್ಟಿಗಿರಬೇಕು? ಸಂಪೂರ್ಣವಾಗಿ ಅಮಲು ಪಾನ ಮತ್ತು ಪದಾರ್ಥಗಳೆಲ್ಲವನ್ನೂ ನಿಷೇಧಿಸಬೇಕು. ಲೈಸೆನ್ಸ್ ಹೊಂದಿದ ವೈದ್ಯರ ಸೂಚನೆಯಂತೆ ಔಷಧಿಗಾಗಿ ಬೇಕಾದರೆ ಮಾತ್ರ ಅದಕ್ಕಾಗಿಯೇ ಇರಿಸಲ್ಪಟ್ಟಿರುವ ಸರಕಾರಿ ಡಿಪೋಗಳಿಂದ ಮಾತ್ರ ಅವನ್ನು ಪಡೆದುಕೊಳ್ಳುವಂತಾಗಬೇಕು. ಮದ್ಯಪಾನವಿಲ್ಲದೆ ಸಾಧ್ಯವೇ ಆಗದ ಯುರೋಪಿಯನರ ಉಪಯೋಗಕ್ಕಾಗಿ ಮಾತ್ರವೆ ಮಿತ ಪ್ರಮಾಣದಿಂದ ವಿದೇಶೀ ಮದ್ಯ ತರಿಸಬೇಕು. ಈ ಮದ್ಯವನ್ನು ಕೂಡಾ ಕೆಲವೇ ಸ್ಥಳಗಳಲ್ಲಿ ಸರಕಾರದಿಂದ ಸರ್ಟಿಫಿಕೇಟು ಪಡೆದು ಬಾಟ್ಲಿಗಳಲ್ಲಿ ಮಾರಬೇಕು. ಹೋಟೆಲು ಮತ್ತು ರೆಸ್ಟೋರೆಂಟ್‌ಗಳು ಮದ್ಯ ವಿಕ್ರಯವನ್ನು ನಿಲ್ಲಿಸತಕ್ಕದ್ದು.

## ಶ್ರೀಮಂತಿಕೆಯ ಮೇಲೆ ಸಾಕಷ್ಟು ಕರ ಹಾಕಲ್ಪಟ್ಟಿರುವುದಿಲ್ಲ

ಅಬ್ಕಾರಿ ಆದಾಯದಿಂದ ಶಿಕ್ಷಣಕ್ಕೆ ಬೇಕಾದ ಹಣವನ್ನು ದೊರಕಿಸಿಕೊಳ್ಳಲಾಗುತ್ತದೆ- ಈ ಸಮಸ್ಯೆಯನ್ನು ಬಿಡಿಸುವುದಾದರೂ ಹೇಗೆ? ಶಿಕ್ಷಣವು ಅಬ್ಕಾರಿ ಆದಾಯದ ಮೇಲೆ ಹೊಂದಿರುವುದು ಮದ್ದುರ್ದೈವದ ಸಂಗತಿಯು! ಇಷ್ಟರ ವರೆಗೆ ಶ್ರೀಮಂತಿಕೆಯ ಮೇಲೆ ಸಾಕಷ್ಟು ತೆರಿಗೆಯು ಹಾಕಲ್ಪಟ್ಟಿರುವುದಿಲ್ಲ. ಅದೊಂದು ಪ್ರಮಾಣವನ್ನು ಮೀರಿದ ಶ್ರೀಮಂತಿಕೆಯ ಮೇಲೆ ಪರಮಾವಧಿಯ ತೆರಿಗೆಯು ಹೊರಿಸಲ್ಪಟ್ಟಿರುವುದೇ ಇಲ್ಲ. ಇಂಗ್ಲೆಂಡಿನಲ್ಲಿ ಅದೊಂದು ಪ್ರಮಾಣವನ್ನು ಮೀರಿದ ಆದಾಯದ ಮೇಲೆ ಶೇಕಡ ೭೦ರ ವರೆಗಿನ ತೆರಿಗೆ ಹೊರಿಸಬಾಗುತ್ತದೆ. ಹಿಂದು ದೇಶವು ಇದಕ್ಕಿಂತಲೂ ಹೆಚ್ಚಿಗೆ ಹೊರಿಸಬಾರದೆಂದೇನೂ ಇಲ್ಲ. ಇಂಗ್ಲೆಂಡಿನಂತೆ ಹಿಂದು ದೇಶದಲ್ಲಿಯೂ ಶ್ರೀಮಂತರ ಮೇಲೆ ಮರಣ ತೆರಿಗೆ ಹೊರಿಸಬಾರದೇಕೆ?

ಮಗುವಿನ ವಿದ್ಯೆಯು ಆರಂಭವಾಗುವಾಗಲೇ ಅದಕ್ಕೆ ಉಪಯೋಗಕರ ಕೈಗಾರಿಕೆಯ ತರಬೇತಿ ಕೊಡಬೇಕು. ಅದು ತನ್ನ ಶಿಕ್ಷಣವೊಂದಿಗೇನೇ ಜನೋಪಯೋಗಕರವಾದ ಸಾಮಗ್ರಿಗಳನ್ನು ತಯಾರಿಸುವಂತಾಗಬೇಕೆಂದೇ ಗಾಂಧೀಜಿಯವರ ಅಭಿಪ್ರಾಯ.

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
*Head Office:* UDIPI.
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಶಿಕ್ಷಣವೆಂದರೆ, ಶಾರೀರಿಕವಾಗಿಯೂ ಮಾನಸಿಕವಾಗಿಯೂ, ಆತ್ಮಿಕವಾಗಿಯೂ ಮಗು ಮತ್ತು ಮನುಷ್ಯನಲ್ಲಿರುವ ಉತ್ಕೃಷ್ಟ ಗುಣಗಳನ್ನು ಹೊರಗೆಳೆಯುವುದಾಗಿದೆ. ಅಕ್ಷರ ಜ್ಞಾನವು ವಿದ್ಯೆಯ ಕೊನೆಯೂ ಅಲ್ಲ, ಆದಿಯೂ ಅಲ್ಲ. ಸ್ತ್ರೀಪುರುಷರು ವಿದ್ಯಾವಂತರಾಗುವ ಅದೊಂದು ಸಾಧನ. ಅಕ್ಷರಜ್ಞಾನವೊಂದೇ ಯಾವ ವಿದ್ಯೆಯೂ ಅಲ್ಲ. ಆದರೆ ನಾವು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವೆವು. ನಮ್ಮ ವಿದ್ಯಾಭಿವೃದ್ಧಿಯ ಕಾರ್ಯಕ್ರಮವು ಕೇವಲ ಹಣದ ಮೇಲೆಯೇ ಅವಲಂಬಿಸಿದ್ದರೆ ಈ ತಲಾಂತರದಲ್ಲಿ ಅದೊಂದು ನಿಶ್ಚಿತ ಕಾಲದೊಳಗೆ ವಿದ್ಯಾಪ್ರಚಾರದ ಕುರಿತು ರಾಷ್ಟ್ರದ ನಮ್ಮ ಬಾಧ್ಯತೆಯನ್ನು ನೆರವೇರಿಸುವ ಆಸೆಯನ್ನು ನಮಗೆ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ವಿಧಾಯಕ ಕಾರ್ಯಚಾತುರ್ಯದ ಕುರಿತು ನಾನು ಪಡೆದಿರುವ ಪ್ರಖ್ಯಾತಿಯನ್ನೆಲ್ಲಾ ಕಳಕೊಳ್ಳುವ ಅಪಾಯಕ್ಕೊಳಗಾಗಿಯಾದರೂ ಶಿಕ್ಷಣವು ಸ್ವಾವಲಂಬಿಯಾಗಬೇಕೆಂದು ಸೂಚಿಸುವ ಸಾಹಸಕ್ಕೆ ನಾನು ಮನಸ್ಸುಕೊಟ್ಟಿರುವೆನು. ಮಗುವಿನ ವಿದ್ಯೆಯು, ಅದಕ್ಕೆ ಪ್ರಯೋಜನಕರವಾದಂತಹ ಕೈಗಾರಿಕೆಯ ತರಬೇತಿಯನ್ನೀಯುವುದರಿಂದ ಆರಂಭವಾಗಬೇಕು. ಮತ್ತು ಆ ತರಬೇತಿಯೊಂದಿಗೇನೇ ಅದು ಉತ್ಪತ್ತಿಯನ್ನುಂಟುಮಾಡಬೇಕು. ಹೀಗೆ ಪ್ರತಿಯೊಂದು ಶಾಲೆಯನ್ನು ಸ್ವಾವಲಂಬಿಯನ್ನಾಗಿ ಮಾಡಬಹುದು. ಆದರೆ ಈ ಬಾಲಕರು ತಯಾರಿಸಿದ ಸಾಮಾನುಗಳನ್ನೆಲ್ಲಾ ಸರಕಾರವು ತೆಗೆದುಕೊಳ್ಳಬೇಕು. ಇಂತಹ ಶಿಕ್ಷಣ ಪದ್ಧತಿಯಲ್ಲಿ ಅತ್ಯುಚ್ಚವಾದ ಮಾನಸಿಕ ಮತ್ತು ಆತ್ಮಿಕ ಬೆಳವಣಿಗೆಯು ಸಾಧ್ಯವೆಂದು ನನ್ನ ಅಭಿಮತ. ಪ್ರತಿಯೊಂದು ಕೈಗಾರಿಕೆಯನ್ನು ಮಾತ್ರ ಈಗಿನಂತೆ ಕೇವಲ ಯಾಂತ್ರಿಕವಾಗಿ ಕಲಿಸದೆ ಶಾಸ್ತ್ರೀಯವಾಗಿ ಕಲಿಸಬೇಕು. ಅಂದರೆ ಬಾಲಕನು ಪ್ರತಿಯೊಂದು ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ತಿಳಿಯುವಂತಾಗಬೇಕು. ನಾನಿದನ್ನು ಅಂಧ ವಿಶ್ವಾಸದಿಂದೇನೂ ಬರೆಯುವುದಿಲ್ಲ; ಅನುಭವದ ಬೆಂಬಲದಿಂದ. ಕೆಲಸಗಾರರಿಗೆ ಚಕ್ರದಿಂದ ನೂಲುವುದನ್ನು ಕಲಿಸಲ್ಪಡುವಲ್ಲೆಲ್ಲಾ ಈ ವಿಧಾನವು ಅನುಸರಿಸಲ್ಪಡುತ್ತಿದೆ. ನಾನೇ ಮೆಟ್ಟು ಮಾಡುವುದನ್ನು ಮತ್ತು ನೂಲುವುದನ್ನು ಒಳ್ಳೇ ಫಲಕಾರಿಯಾಗಿ ಕಲಿಸಿರುವೆನು. ಚರಿತ್ರೆ ಮತ್ತು ಭೂಗೋಳ ಜ್ಞಾನವು ಈ ಪದ್ಧತಿಗೇನೂ ಬಾಧ್ಯವಾಗಿರುವುದಿಲ್ಲ. ಮತ್ತು ಹಲವು ಸಾರಪುಸ್ತಕಗಳ ಬದಲಿಗೆ ಬಾಯಿಯಿಂದಲೇ ಕಲಿಸುವುದು ಒಳ್ಳೇದು. ಬಾಲಕನು ಹೊಟ್ಟಾವುದು ನಿಜವಾದ ಭತ್ತವಾವುದೆಂಬುವರ ಭೇದವನ್ನು ಕಂಡುಕೊಳ್ಳುವವರೆಗೆ ಅಂದರೆ ಸರ್ವಸಾಮಾನ್ಯತಿಳುವಳಿಕೆ ಪಡೆದ ಮೇಲೆ ಅವನಿಗೆ ಸಂಕೇತ ಮತ್ತು ಅಕ್ಷರಾಭ್ಯಾಸಮಾಡಬಹುದು. ಇದು ಕ್ರಾಂತಿಕಾರಕವಾದ ಸೂಚನೆ. ಆದರೆ ಇದರಿಂದ ಅತಿ ಹೆಚ್ಚಿನ ಶ್ರಮವನ್ನು ಉಳಿಸಬಹುದು. ಮಾತ್ರವಲ್ಲದೆ ವಿದ್ಯಾರ್ಥಿಯು ಅತಿ ದೀರ್ಘಸಮಯ ಕಲಿತು ಪಡೆಯುವ ಜ್ಞಾನವನ್ನು ಈ ರೀತಿಯಲ್ಲಿ ಒಂದೇ ವರ್ಷದಲ್ಲಿ ಪಡೆಯಬಹುದು. ಅದರಿಂದ ಎಲ್ಲಾ ವಿಧದಿಂದಲೂ ಮಿತವ್ಯಯವಾಗುವುದು.

ಪ್ರಾಥಮಿಕ ಶಿಕ್ಷಣವು ಅತ್ಯಂತ ಪ್ರಾಮುಖ್ಯವಾದುದು. ಅವರ ಭಾವನೆಯಂತೆ ಪ್ರಾಥಮಿಕ ಶಿಕ್ಷಣಜ್ಞಾನವು ಇಂಗ್ಲಿಷೊಂದರ ಹೊರತು ಮಿಕ್ಕಿದ ಈಗಣ ಮೆಟ್ರಿಕ್ಲೇಶನಿಗೆ ಸರಿಯಾಗಿರಬೇಕಾಗಿದೆ. ಕೋಲೇಜ್ ಶಿಕ್ಷಣವನ್ನೇ ಸಂಪೂರ್ಣವಾಗಿ ಬದಲಾಯಿಸಿ ಅದನ್ನು ನಮ್ಮ ರಾಷ್ಟ್ರೀಯ ಆವಶ್ಯಕತೆಗಳಿಗನುಸಾರವಾಗಿ ರೂಪಿಸಬೇಕು. ಮಿಕೇನಿಕಲ್ ಮತ್ತು ಇತರ ಇಂಜಿನೀಯರಿಂಗ್ ಪದವೀಧರರೇನೋ ನಮಗೆ ಬೇಕಾಗಿದೆ. ಆದರೆ ಇವರ ತರಬೇತಿಯ ಭಾರವನ್ನು ಬೇರೆ ಬೇರೆ ಕೈಗಾರಿಕೆಗಳವರು ಹೊರಬೇಕು. ಹೀಗೆ ಇಂಜಿನೀಯರರನ್ನು ತರಬೇತಿಮಾಡಲು ಟಾಟಾ ಕಂಪೆನಿಯವರು ಒಂದು ಕೋಲೇಜನ್ನು ನಡಿಸಬಹುದು. ಇತರ ಕಲಾ ಕೋಲೇಜುಗಳನ್ನು ಖಾಸಗಿ ಸಂಸ್ಥೆಗಳವರು ನಡಿಸಬಹುದು. ವೈದ್ಯಕೀಯ ಕೋಲೇಜುಗಳನ್ನು ಸರ್ಟಿಫೈಡ್ ಆಸ್ಪತ್ರೆಗೆ ಸೇರಿಸಿ ನಡಿಸಬೇಕು. ಇದನ್ನು ನಡಿಸಲು ಹಣವನ್ನು ಶ್ರೀಮಂತರಿಂದ ಪಡೆಯಬೇಕು.

## ಜೈಲುಗಳಲ್ಲಿ ನೂಲುತೆಗೆಯುವ ಏರ್ಪಾಡು.

ಕಾರಾಗೃಹಗಳಲ್ಲಿ, ಲಾಭಕರವಲ್ಲದ ಕೈಗಾರಿಕೆಗಳನ್ನೆಲ್ಲಾ ನಿಲ್ಲಿಸಬೇಕು. ಎಲ್ಲಾ ಸೆರೆಮನೆಗಳನ್ನೂ ಚರ್ಕದಿಂದ ನೂಲು ತೆಗೆಯುವ ಮತ್ತು ಕೈಮಗ್ಗದಿಂದ ನೇಯುವ ಸಂಸ್ಥೆಗಳನ್ನಾಗಿ ಮಾರ್ಪಡಿಸಬೇಕು. ಅಲ್ಲಿಯೇ ಹತ್ತಿಯನ್ನು ಬೆಳೆಸಿ ಅದರಿಂದ ನಾಜೂಕಾದ ವಸ್ತ್ರತಯಾರಿಸುವ ಏರ್ಪಾಡು ಮಾಡಬೇಕು. ಕಾರಾಗೃಹಗಳಲ್ಲಿ ಅದಕ್ಕೆ ಎಲ್ಲಾ ಅನುಕೂಲತೆಯೂ ಇರುವುದು. ಆದರೆ ಆ ಮನಸ್ಸು ಮಾತ್ರ ಬೇಕು. ಕೈದಿಗಳನ್ನು ಸಹಾನುಭೂತಿಯಿಂದ ಮಾನಸಿಕ ದೋಷವುಳ್ಳವರಾಗಿ ಪರಿಗಣಿಸಬೇಕೇ ಹೊರತು ಕೇಡಿಗಳಾಗಿ ತುಚ್ಛೀಕರಿಸಬಾರದು.

ಕಾರಾಗೃಹಗಳಲ್ಲಿ ಮಾರ್ಕೆಟುಗಳಲ್ಲಿ ಮಾರಾಟವಾಗುವ ಸಾಮಾನುಗಳು ತಯಾರಿಸಲ್ಪಟ್ಟಲ್ಲಿ ಅವುಗಳಿಂದ ಮಾರ್ಕೆಟುಗಳಲ್ಲಿ ಅಯೋಗ್ಯವಾದ ಮೇಲಾಟ ನಡೆಯಲು ಎಡೆದೊರೆಯುವುದೆಂಬ ಮಾತಿನಲ್ಲಿ ಹುರುಳಿಲ್ಲ. ನಾನು ಎರವಾಡ ಜೈಲಿನಲ್ಲಿದ್ದಾಗ ಈ ಪ್ಲೇನನ್ನು ಕಾರಾಗೃಹದ ಇನ್‌ಸ್ಪೆಕ್ಟರ್ ಜನರಲ್ ಮತ್ತು ಸುಪರಿಂಟೆಂಡೆಂಟರಿಗೆ ತಿಳಿಸಿ ಅವರ ಸಮ್ಮತಿ ಪಡೆದಿದ್ದೆ. ಆಗಣ ಹೋಮ್ ಮೆಂಬರರು ಆ ವಿಷಯದಲ್ಲಿ ಬಹಳ ಉತ್ಸಾಹ ಕೂಡಾ ತೋರಿಸಿದ್ದರು. ನನ್ನ ಸ್ಕೀಮನ್ನವರು ಬರೆದು ತಿಳಿಸಬೇಕೆಂದರು. ಆದರೆ ಮಾನ್ಯ ಗವರ್ನರರು ಕೈದಿಯೊಬ್ಬನಿಂದ ಜೈಲಿನ ಆಡಳಿತದ ಕುರಿತು ಸೂಚನೆ ಪಡೆಯಲೊಪ್ಪಲಿಲ್ಲ. ಕೈದಿಗಳು ತಯಾರಿಸುವ ಖಾದಿಯನ್ನೆಲ್ಲಾ ಅದನ್ನು ತಯಾರಿಸಲು ತಾಗಿದ ವೆಚ್ಚಕ್ಕೇನೇ ಸರಕಾರದವರು ತೆಗೆದುಕೊಳ್ಳಬೇಕು. ಆ ಮೇಲೆ ಹೆಚ್ಚಿಗೆ ಏನಾದರೂ ಇದ್ದರೆ ಅದನ್ನು ಜನರಿಗೆ, ವಿಕ್ರಯದ ಏರ್ಪಾಡಿನ ವೆಚ್ಚ ಹಿಡಿದು ಸ್ವಲ್ಪ ಹೆಚ್ಚು ಬೆಲೆಗೆ ಮಾರಬಹುದು. ನನ್ನೀ ಸೂಚನೆಯನ್ನು ಸರಕಾರವು ಅಂಗೀಕರಿಸಿ ಜ್ಯಾರಿಗೆ ತಂದಲ್ಲಿ ಜೈಲುಗಳಿಗೂ ಹಳ್ಳಿಗಳಿಗೂ ಸಂಬಂಧವುಂಟಾಗಿ ಹಳ್ಳಿ ಹಳ್ಳಿಗಳಿಗೆ ಖಾದಿಯ ಸಂದೇಶವು ಹಬ್ಬುವಂತಾಗುವುದು. ಮಾತ್ರವಲ್ಲದೆ ಕೈದಿಗಳು ಸರಕಾರದ ಮಾದರಿಯಾದ ನಾಗರಿಕರಾಗಬಹುದು.

ಬಡಹಳ್ಳಿಗರು ತಮ್ಮ ಉಪಯೋಗಕ್ಕೆ ಬೇಕಷ್ಟು ಉಪ್ಪನ್ನು ತಯಾರಿಸಲು ಕೇಂದ್ರ ಸರಕಾರವು ಅವರಿಗೆ ತೊಂದರೆಮಾಡದಂತೆ ಪ್ರಾಂತಿಕ ಸರಕಾರಗಳೂ ನೋಡಬೇಕು. ಕಾಂಗ್ರೆಸು ಜನ್ಮಕ್ಕೆ ಬಂದಾರಭ್ಯದಿಂದಲೂ ಬೇಸಾಯಗಾರರ ಸಂಕಷ್ಟ ನಿವಾರಣೆಯು ಕಾಂಗ್ರೆಸ್ ಪಕ್ಷೀಯನ ಮುಖ್ಯ ಉದ್ದೇಶಗಳಲ್ಲೊಂದಾಗಿ ಬಂದಿದೆ. ಅದೇ ಕಾಂಗ್ರೆಸಿನ ಅಸ್ತಿತ್ವಕ್ಕೆ ಮುಖ್ಯವಾದೊಂದು ಕಾರಣವಾಗಿರುತ್ತದೆ. ಆದುದರಿಂದ ಈ ವಿಷಯವು ಕಡೆಗಣಿಸಲ್ಪಡುವುದೆಂಬ ಯಾವ ಭೀತಿಯೂ ಇರುವುದಿಲ್ಲ.


**WANTED.**

Lady saleswoman, Catholic or Christian prefered, for a leading cutlery, hardware and cutlery shop at Udipi town. Must be smart, good looking and of pleasing manners, capable of reading and writing English and Kanarese. Apply with one anna stamp stating minimum salary required.

'X'
C/o Navayuga, Udipi.

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ಸಾಫರ್ ಪೋರಿನ ತೋಟ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

**Bihar Nursery,**
**P. O. Bihar**
*Nursery (Darbhanga)* **BIHAR**

# THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:—*

**KOCHIKAR BROTHERS,**
*Madras Branch Secretaries.*

BRANCHES AT:

| | | |
|---|---|---|
| P. B. 337 Mount Road, Madras. | Visveswarapuram Circle, Bangalore City. | Soumyalayam Puthiyara, Calicut. |
| Car Street, Mangalore. | Udipi, S India. | Charni Road Bombay No. 4. |

INSPECTORATE OFFICE AT:
1 Ottapalam, Malabar District. 2. Central Station Road, Trivandrum.

# EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

**Summary of 1935 Accounts**

| | |
|---|---|
| Total Assets Over ... ... | Rs. 80,00,000 |
| Life Funds Over ... ... | Rs. 68,00,000 |
| Premium Income Over ... | Rs. 22,54,000 |
| Interest Income ... ... | Rs. 3,16,000 |
| Claims Paid ... ... ... | Rs. 5,75,000 |
| Total Claims paid Over | Rs. 38,50,000 |
| Total Business in Force Over | Rs. 4,4251.200, |

TOTAL BUSINESS IN FORCE **Rs. 4,42,51,200**

## ಅಡಿಕೆಯ ಕೊಳೆರೋಗ- ಅಡಿಕೆಯ ತೋಟಗಾರರಿಗೆ ಎಚ್ಚರಿಕೆ.

(ಮದ್ರಾಸು ವ್ಯವಸಾಯ ಇಲಾಖೆಯಿಂದ)

### ಮಹಾಳಿ ಅಥವಾ ಕೊಳೆರೋಗವು— ದಕ್ಷಿಣ ಹಿಂದೂಸ್ಥಾನದ ಅಡಿಕೆ.

ಮಹಾಳಿ ಅಥವಾ ಕೊಳೆರೋಗವು ತೋಟಗಳಿಗೆ ಬಹಳವಾಗಿ ನಾಶವನ್ನುಂಟು ಮಾಡುವ ರೋಗವಾಗಿದೆ. ಅದು ಒಂದು ತರದ ಪರತಂತ್ರಜೀವಿಯ ಅಣಬೆಯಿಂದ ಉಂಟಾಗುತ್ತದೆ ಮತ್ತು ಅದು ಬಹಳ ನಾದ ಮಳೆಯಲ್ಲಿ ವೃದ್ಧಿಯಾಗುವುದು. ಆದುದರಿಂದ ಅದು ವಿಪರೀತ ಮಳೆ ಬೀಳುವ ಬಾಗ್ಯಾತು ಪ್ರಾಂತಗಳಲ್ಲಿ ಉಂಟಾಗುವುದು. ದಕ್ಷಿಣ ಹಿಂದೂಸ್ಥಾನದ ಮಲಬಾರು, ದ. ಕನ್ನಡ, ಮೈಸೂರು ಪ್ರಾಂತದ ಮಲೆನಾಡುಗಳಲ್ಲಿ, ಕೊಚ್ಚಿ ಮತ್ತು ತಿರುವಾಂಕೂರು ಪ್ರಾಂತಗಳಲ್ಲಿ ಪ್ರತಿ ವರ್ಷವೂ ತಲೆದೋರುವುದಾಗಿ ಕಂಡು ಬರುತ್ತದೆ. ಈ ರೋಗವು ಹೆಚ್ಚಾಗಿ ಬೆಳೆಯುವ ಅಡಿಕೆಗಳಿಗೆ ತಗಲಿ ಅವುಗಳನ್ನು ಕೊಳೆತು ಬೀಳಿಸುವುದು. ಮಳೆಯು ಹೆಚ್ಚಾಗಿದ್ದ ಕಾಲಗಳಲ್ಲಿ ಈ ರೋಗವು ಬಹಳ ಕಠಿಣವಾಗಿ ಇಡೀ ಫಲವನ್ನೇ ನಾಶಮಾಡುವುದು. ಕೆಲವು ವೇಳೆ ಈ ರೋಗವು ಮರದ ಕೊಂಬೆಗೆನೇ ತಗಲಿ ಮರವೇ ಸತ್ತುಹೋಗುವುದು.

### ನಿವಾರಣೆ

ಈ ರೋಗವನ್ನು ನಿವಾರಣೆ ಮಾಡುವ ಒಂದು ಬಹಳ ಒಳ್ಳೆಯ ಉಪಾಯವು ಈಗ ಕಂಡುಹಿಡಿಯಲ್ಪಟ್ಟಿದೆ. ಅದೇನೆಂದರೆ, ಅಡಿಕೆಗೊನೆಗಳಿಗೆ "ಬೋರ್ಡೋಮಿಕ್ಸ್ಚರ್" ಎಂಬ ದ್ರಾವಕವನ್ನು ಪಂಪಿನ ಮೂಲಕ ಚಿಮಿಕಿಸುವುದು. ಅಡಿಕೆಗಳ ಮೇಲೆ ಬಿದ್ದ ಈ ಮಿಶ್ರಣವು ಒಣಗಿ ಒಂದು ಕವಚವಾಗಿ ನಿಲ್ಲುತ್ತದೆ. ಅನೇಕ ಬಾಗ್ಯಾತುದಾರರು ಪ್ರತಿ ವರ್ಷವೂ ರಕ್ಷಣೋಪಾಯಗಳನ್ನು ಅನುಸರಿಸಿ ಹೆಚ್ಚಾದ ಗುಣಗಳನ್ನು ಹೊಂದಿರುವರು. ಕಳೆದ ಮಳೆಗಾಲದಲ್ಲಿ ಈ ರೋಗವು ಸಾಂಕ್ರಾಮಿಕ ರೂಪದಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ತಲೆದೋರಿತು. ಸಮಯಕ್ಕೆ ಸರಿಯಾಗಿ ಔಷಧಿಯನ್ನು ಪ್ರಯೋಗಿಸಿದವರು ತಮ್ಮ ಫಲಗಳನ್ನು ರಕ್ಷಿಸಿಕೊಂಡರು. ಅದಕ್ಕೆ ತಪ್ಪಿದವರು ಫಲವನ್ನು ಕಳಕೊಂಡರು.

ಹಲವು ಕಡೆಗಳಲ್ಲಿ ಇಡೀ ಫಸಲೇ ನಾಶ ಹೊಂದಿತು ಮತ್ತು ಅಡಿಕೆತೋಟಗಳೇ ಜೀವನಕ್ಕೆ ಪೂರ್ಣಾಧಾರವಾಗಿದ್ದಂಥಾ ಬಾಗ್ಯಾತುದಾರರು ಬಹಳ ಕಂಗಾಲು ಸ್ಥಿತಿಯಲ್ಲಿ ಬಿದ್ದರು. ಅತ್ಯುತ್ತಮ ಫಲವು ದೊರೆಯ ಬೇಕಾದರೆ ಅಡಿಕೆಗೊನೆಗಳಿಗೆ ಎರಡು ಸಲ ಮದ್ದು ಚಿಮಿಕಿಸತಕ್ಕದ್ದು. ಮಳೆಗಾಲವು ಪ್ರಾರಂಭವಾಗುವ ಸ್ವಲ್ಪ ಮೊದಲು ಅಂದರೆ ಅಡಿಕೆ ಸಣ್ಣದಿರುವಾಗ ಮತ್ತು ಒಂದು ಸಲ, ಮತ್ತು ಕೆಲವು ಹಪ್ತೆಗಳನಂತರ (ಸುಮಾರು 6 ಹಪ್ತೆಗಳು) ಅಡಿಕೆಗಳು ಸ್ವಲ್ಪ ದೊಡ್ಡದಾದ ಮೇಲೆ ಎರಡನೇ ಸಲ. ಈ ಮಿಶ್ರಣವನ್ನು ಅಡಿಕೆ ಬೆಳೆಸುವ ಪ್ರಾಂತಗಳ ಅಂಗಡಿಗಳಲ್ಲಿ ಸಿಕ್ಕುವ ಔಷಧಿಗಳಿಂದ ತೋಟದ ಮಾಲಿಕರೇ ತಯಾರಿಸಬಹುದು. ಇಂಗ್ಲೀಷ್ ಮತ್ತು ದೇಶಭಾಷೆಯ ಮದ್ದು ತಯಾರಿಸುವ ಪಂಪುಗಳ ಉಪಯೋಗ ಮೊದಲಾದ ವಿಷಯಗಳ ಕರಪತ್ರಗಳನ್ನು ಮದ್ರಾಸ್ ವ್ಯವಸಾಯ ಇಲಾಖೆಯವರು ಪ್ರಕಟಿಸಿರುವರು. ಇವುಗಳನ್ನು ಡೆಮೊನಸ್ಟ್ರೇಟರವರಿಂದಲೂ ಅಥವಾ ತಲಚೇರಿಯ ಕೃಷಿಯ ಡಿಪ್ಯುಟಿ ಡೈರೆಕ್ಟರ್‌ರವರಿಂದಲೂ ಪಡಕೊಳ್ಳಬಹುದು. ಇದರ ವಿಷಯ ಹೆಚ್ಚಿನ ಮಾಹಿತಿಗಳನ್ನು ಈ ಆಫೀಸರರು ಸಂತೋಷದಿಂದ ಕೊಡಲು ತಯಾರಿರುತ್ತಾರೆ.

---

**ಕಾರ್ಕಳ ತಾಲ್ಕು ಕಾಂತಾವರ ಗ್ರಾಮದ ಕೇಪುಳಾಜೆ ಎಂಬಲ್ಲಿರುವ ವೆಂಕು ಹೆಂಗ್ಸಿನ ಮಗಳು ನೊಕ್ಕೆ ಸೆಡ್ತಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದ್ರೆ—**

ನನ್ನ ಕುಟುಂಬದಲ್ಲಿ ನಿಸ್ಸಂತತಿಯಾದವರ ಪಾಲನ್ನು ಅವರ ವಶಲ್ಲಿಗೇಂದ ನನಗೆ ನನ್ನ ಕುಟುಂಬದ ಹಕ್ಕಿನ ಆಸ್ತಿಯನ್ನು ಸ್ವಾಧೀನತೆ ಮಾಡಿಸಿಕೊಡುತ್ತೇನೆಂತ ಹೆಂಗಸಾದ ನನ್ನನ್ನು ನಂಬಿಸಿ ಕಾರ್ಕಳ ತಾಲ್ಕು ಕಡಂದ್ಲೆ ಗ್ರಾಮದ ಕಡಂದ್ಲೆ ಗುತ್ತು ಪಟೇಲ್ ದೇಜು ಸೆಟ್ಟಿ ಅಳಿಯ ಕೆ. ಸಂಜೀವ ಸೆಟ್ಟ್ರು ನನ್ನನ್ನು ಅವರ ಕಡಂದ್ಲೆ ದೇವಸ್ಥಾನದ ಅಂಗಡಿಗೆ ಕರಕೊಂಡು ಬಂದು ಮೂರು ಕಾಲಿ ಕಾಗದಗಳಿಗೆ ನನ್ನ ಎಡ ಕೈ ಹೆಬ್ಬೆಟ್ಟಿನ ಮೂರು ಮುದ್ರೆಗಳನ್ನು ತಾ 16–7–37 ನೇ ದಿನ ಮಧ್ಯಾಹ್ನದಲ್ಲಿ ಪಡೆದು ಕೊಂಡಿದ್ದಾರೆ. ಅವರು ನಂತ್ರ ಯಾವ ನಿವೃತ್ತಿಯನ್ನೂ ನಡಿಸಲಿಲ್ಲ. ಇತ್ತಲಾಗಿ ತಿಳಿಯುವಾಗ್ಗೆ ಸದ್ರಿ ಕೆ. ಸಂಜೀವ ಸೆಟ್ಟ್ರು ಅವರೀಗೆ ಬೇಕಾದ ಜನರ ಹೆಸರಲ್ಲಿ ಬೇಕಾದ ರಿಕಾರ್ಡುಗಳನ್ನು ಕಲ್ಪಿಸಿಕೊಂಡಿರುತ್ತಾರೆ ಎಂಬದಾಗಿ ನಾನು ತಿಳಿಯುತ್ತೇನೆ. ಅವರು ಆ ರೀತಿ ಮಾಡಿ ನನ್ನ ಮೇಲೆ ಯಾವದೊಂದು ವ್ಯವಹಾರ ನಡಿಸಿದಲ್ಲಿ ಸದ್ರಿ ವ್ಯವಹಾರಗಳು ನನ್ನ ಮೇಲಾಗಲೀ ನನ್ನ ಕುಟುಂಬದವರ ಮೇಲಾಗಲೀ ಬದ್ಧೀಕೃತವಾಗ ತಕ್ಕದ್ದಲ್ಲ. ನನ್ನ ಮೂರು ಎಡ ಹೆಬ್ಬೆಟ್ಟಿನ ಮುದ್ರೆ ಪಡೆದ 3 ಕಾಗದಗಳನ್ನು ನನಗೆ ಕೊಡಬೇಕಾಗಿ ಸದ್ರಿ ಸಂಜೀವ ಸೆಟ್ಟ್ರೀಗೆ ಈ ದಿನ ಅಲುಸಿದ ರಿಜಿಸ್ಟ್ರಿ ನೋಟೀಸು ಕೊಟ್ಟಿದ್ದೇನೆ. ನನಗೆ ಅಡುವಿನ ಬಾಬ್ತು ರೂ 1600ರ ಸಾಲ ವ ಅದರ ಬಾಬ್ತು ಬಡ್ಡಿ ಮಾತ್ರ ಸಾಲಯಿರುವದಲ್ಲದೆ ಬೇರೆ ಯೇನೂ ಸಾಲ ಇಲ್ಲ ವ ಸಾಲಮಾಡುವ ಗರ್ಜಿ ಕೂಡ ಇಲ್ಲ. ಸದ್ರಿ ನನ್ನ ಮುದ್ರೆಗಳನ್ನು ಪಡದ ಕಾಲಿ ಕಾಗದಗಳಿಂದ ಏನಾದ್ರೂ ರಿಕಾರ್ಡು ಕಲ್ಪಿಸಿ ನನ್ನ ಮೇಲೆ ದಾವ ಮಾಡಿದ್ರೆ ಹಾಗೆ ದಾವ ಮಾಡಿದವರಿಗೆ ಏನೂ ನಿವೃತ್ತಿ ಸಿಕ್ಕಲಿಕ್ಕಿಲ್ಲ. ನನ್ನ ಸಕಲ ನಷ್ಟ ತೆರಬೇಕಾದೀತು ಮೊಕ್ಕಾಂ ಕಾಂತಾವರ.

||| ಈ ಗೆರೆ ನೊಕ್ಕೆ ಸಡ್ತಿ ರುಜು

ತಾರೀಕು 21–7–37


ಸುಸಮಯ! ಹಣ ಸಂಪಾದಿಸಿರಿ!!

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡಿಯುತ್ತಿರುವರು.

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ.** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**



**ಶಾಲೆಗಳಿಗೆ ಬೇಕಾದ**

ಯಾವತ್ತೂ ರಿಜಿಸ್ಟ್ರಗಳೂ ಫೋರ್ಮುಗಳೂ

**ಮಿತ ದರದಲ್ಲಿ ದೊರೆಯುತ್ತವೆ.**

ನವಭಾರತ ಬುಕ್ ಡಿಪ್ಪೊ, ಉಡುಪಿ



**WHAT BUILDS A GREAT BANK**

The two vital features of a bank are its financial policy and its service. When for over thirty years a bank has been widely reputed for its SAFETY FIRST POLICY and for its courteous and efficient service it is no wonder that the people's confidence in it continues to grow.

RESOURCES OF A CRORE.

ESTD. 1906

**CANARA BANK**

LIMITED.



**ಕನ್ನಡ ನುಡಿವೆಣ್ಣಿಗೊಂದು**

ವ
ವ ತ್ಸ ಲಾ
ಲಾ

**ಕನ್ನಡಗಿತ್ತಿಯ ಕಿರುಗಾಣಿಕೆ**

ಲೇಖಕಿಯರು-

ಶ್ರೀಮತಿ ಮಟ್ಟುಪಡಿ ಕಮಲಾಕ್ಷಿ.

ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನೂ ಸ್ತ್ರೀ-ಪುರುಷ ಹೃದಯಗಳ ಪರಿಚಯವನ್ನೂ ಸೊಗಸಾಗಿ ಚಿತ್ರಿಸಿದ ಸಾಮಾಜಿಕ ಕಾದಂಬರಿ. ಪ್ರತಿಯೊಬ್ಬರೂ ಓದಬೇಕಾದ ಪುಸ್ತಕ.

**ಬೆಲೆ: 0–7–3 ಮಾತ್ರ.**

ಒಂದು ಪ್ರತಿ ಬೇಕಾದವರು ಎಂಟಾಣೆ ಸ್ಟಾಂಪು ಕಳುಹಿಸಬೇಕು

ಹತ್ತಕ್ಕಿಂತ ಹೆಚ್ಚು ಪ್ರತಿ ಕೊಳ್ಳುವ ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳಿಗೆ ಬರೆಯಿರಿ—

**ನವಭಾರತ ಬುಕ್ ಡಿಪ್ಪೊ**

**ಚರ್ಚ್‌ರೋಡ್, ಉಡುಪಿ.**



**ಕೂದಲು ರಂಗು ಬಿಡಿ**

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ 5ರ, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೆ ಬರೆಯಿರಿ.

**Bal Kala Stores,**

P. O. Kausisimri (Darbhanga)



**ಬೇಕಾಗಿದೆ**

ಜಿಲ್ಲೆಯ ಒಳಗೂ ಹೊರಗೂ ಸಂಚರಿಸಿ '**ನವಯುಗ**'ದ ಚಂದಾದಾರರಿಂದ ಹಣ ವಸೂಲು ಮಾಡಲಿಕ್ಕೂ, ಹೊಸ ಚಂದಾದಾರರನ್ನು ಸೇರಿಸಲಿಕ್ಕೂ ನಂಬಿಗಸ್ತರಾದ, ಚೆನ್ನಾಗಿ ಇಂಗ್ಲಿಷ್ ಕನ್ನಡ ಬಲ್ಲ ಉತ್ಸಾಹೀ ಪ್ರತಿನಿಧಿಗಳೊಬ್ಬರು ಬೇಕು. ಸಂಬಳ ಮತ್ತು ಪ್ರಯಾಣ ವೆಚ್ಚ ಕೊಡಲಾಗುವುದು. ರೂ. 100/ ಡಿಪೋಜಿಟ್ ಇಡಲು ತಯಾರಿರುವವರು ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ಮಾತನಾಡಿರಿ.

**ಮೆನೇಜರ್, ನವಯುಗ, ಉಡುಪಿ.**



**ನವಭಾರತ ಬುಕ್ ಡಿಪ್ಪೋದಲ್ಲಿ**

ಸಾಮಾನ್ಯ ಯಾವತ್ತೂ

**ಕನ್ನಡ ಗ್ರಂಥಗಳು**

ದೊರೆಯುತ್ತವೆ.

## ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಡಿನ ಕೈ ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.

ವಿಶೇಷ ಮಾಹಿತಿಗೆ ಬರೆಯಿರಿ.

*Proprietor:* **ATTAVAR BABOO,**
**Vasanthi Harmonium Works,**
**Hampankatta, Mangalore.**

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ. ಇಲ್ಲಿ ದೊರೆಯುತ್ತವೆ.

---

ಅಚ್ಚಿನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮುನ್ನುಡಿ ... ಹಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

## ಮಿಸ್ ಲಲಿತ

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು.

ಹೊರಡಲಿರುವ ತಾರೀಕನ್ನು ಗಮನಿಸಿರಿ!

**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**

ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ **0—8—0**

ವಿಳಾಸ— M V. Puthran,
*C/o* 34, Bomanji Lane, *2nd Floor,* ***Fort, BOMBAY***

---

**15 ವರ್ಷಗಳ ಅನುಭವ!** **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು ಪ್ರಸಿದ್ಧರಾಗಿರುವ

## ಪೈಂಟರ್ ಗಣಪತಿ ರಾವ್

**ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ಸಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.**

ಜ್ಯೋತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು.
ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿ

ಗಣಪತಿ ರಾವ್, ಪೈಂಟರ್,
ಸೋದೆ ಮಠದ ಲೇನು - - **ಉಡುಪಿ, ದ. ಕ.**

---

THE
# MOOLKY BANK, LTD.,
MOOLKY.
## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಶೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸ್ಥಿರಖು ಠೇವಣಾತಿ ಶೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಶೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

**M. R. Punja,** ಯಂ. ಆರ್. ಪೂಂಜ,
*President & Manager,* ಪ್ರೆಸಿಡೆಂಟ್ ಮತ್ತು ಮೆನೇಜರ್.

---

## ರೂ. 2—12—0ಕ್ಕೆ



ತೀಕ್ಷ್ಣ ದೃಷ್ಟಿಚಕ್ರವುಳ್ಳ
## ಬೇಬಿ ಬೋಕ್ಸ್ ಕೆಮರಾ
**(1937ನೇ ಡೈರಿ ಉಚಿತ)**

ಕಲಿಯಬಿಚ್ಛಿಸುವವರು ಈ ಕೆಮರಾದಿಂದ ಕಾರ್ಡು ಸೈಜು ಪ್ಲೇಟಿನಲ್ಲಿ ಯಾವದಾದ ಫೋಟೋವನ್ನಾದರೂ ಉತ್ಕೃಷ್ಟವಾಗಿ ಒಂದೇ ಕ್ಷಣದೊಳಗೆ ತೆಗೆಯಬಹುದು ನಿರುದ್ಯೋಗಿಗಳು ಇದರಿಂದ ದಿನಂಪ್ರತಿ ರೂ. 5/ನ್ನು ಗಳಿಸಬಹುದು. 1 ಡಜನ್ ಪ್ರಿಂಟಿಂಗ್ ಪೇಪರ್ ಚಿತ್ರಗಳನ್ನು ತೊಳೆಯುವ ಉಪಕರಣ ಮತ್ತು ಫೋಟೋ ತೆಗೆವ ವಿಧಾನಗಳನ್ನು ಉಚಿತವಾಗಿ ಕೊಡಲಾಗುವುದು ಕ್ರಯ 2ನೇ ನಂಬ್ರಕ್ಕೆ ರೂ. 2—12—0; 1ನೇದ್ದಕ್ಕೆ ರೂ. 3—12—0; ಫೋಲ್ಡಿಂಗ್ ಕೆಮರಾಕ್ಕೆ ರೂ. 2/- ಉತ್ತಮ ತರಹದ್ದಕ್ಕೆ ರೂ. 4—8—0. ಫೋಸ್ಟೇಜು ಅಲಾಹಿದಾ.

**DUTTA & CO.**
*15/ 1, Jaymittra Street,*
***P. O. Hatkhola* (Calcutta)**

---

# HOTEL INDIANA
## Bar and Restaurant

**ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ?**

## ಹೊಟೇಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ಸಿಮ್ಮನ್ನಿದಿರುಗೊಳ್ಳುತ್ತದೆ.

**ಹೊಸ ಆಡಳಿತ!** **ಹೊಸ ವ್ಯವಸ್ಥೆ!**

**ಎಲ್ಲವೂ ಹೊಸತೇ ಆಗಿ**

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

*Proprietor,*
HOTEL INDIANA
***Hampankatta, Mangalore***

---

## ಧರ್ಮಾರ್ಥ ಬಹುಮಾನಗಳು

**1—0—0ಗೆ!**

**— ಯಾರಿಗೆ ? —**

ರೂಪಾಯಿ 1—0—0 ಕೊಟ್ಟು 36 ಸೀಸೆ ಒಟ್ಟೊರೋಸ್ ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

**ಇನಾಮುಗಳ ವಿವರ:—** 3 ಚಿಮ್ಮಿ ರಿಸ್ಟ್‌ವಾಚುಗಳು, 1 ರೈಲ್ವೆಟಾಯಿಂ ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ಬೀರುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (10 ವರುಷ ಗ್ಯಾರಂಟಿ)

**ಪ್ಯಾಕಿಂಗ್ ಮತ್ತು ಪೋಸ್ಟೇಜು** 0 10 0. **ಇಂದೇ ಆರ್ಡರು ಕೊಡಿರಿ.**

**EASTERN TRADING COY.,**
*Post Box No. 12204,* ***CALCUTTA. (N. Y.)***

## ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

**ಬಿರುದುದಾನ**— ಈ ದಿನ ಸಾಯಂಕಾಲ ಮಂಗಳೂರು ಗವರ್ನಮೆಂಟ್ ಕಾಲೇಜಿನ ಭವ್ಯವಾದ ಮಂದಿರದಲ್ಲಿ ಜಿಲ್ಲಾ ಕಲೆಕ್ಟರ್ ಧೊರೆಗಳವರಾದ ಶ್ರೀ. ವೆಲ್ಲೋಡಿಯವರು ಒಂದು ದರ್ಬಾರನ್ನು ಅತ್ಯಂತ ವಿಜೃಂಭಣೆಯಿಂದ ನಡೆಸಿದರು. ಪಟ್ಟಣದ ಅನೇಕ ಆಢ್ಯ ಮಹನೀಯರೂ, ಅಧಿಕಾರಿಗಳೂ, ಅನಧಿಕಾರಿಗಳೂ ಸ್ತ್ರೀಯರೂ ಬಂದಿದ್ದರು. ಈ ಸಮಾರಂಭವು ಶ್ರೀ| ರಂಗನಾಥ ಪುಂಜರಿಗೆ ರಾವ್ ಸಾಹೇಬ್ ಎಂಬ ಬಿರುದನ್ನು ಕೊಡುವುದಕ್ಕಾಗಿ ಏರ್ಪಡಿಸಲ್ಪಟ್ಟದ್ದಾಗಿದ್ದಿತು ಕಲೆಕ್ಟರವರು ಶ್ರೀ| ಪುಂಜರ ಗುಣಕಥನಮಾಡಿ ಅವರಿಗೆ ಸಾರ್ವಭೌಮ ಸರಕಾರದವರು ದಯಪಾಲಿಸಿದ್ದ ಬಿರುದನ್ನು ನೆರೆದ ಮಹಾಜನರ ಕರತಾಡನಗಳ ಮಧ್ಯೆ ದಾನಮಾಡಿದರು

**ಅಧಿಕಾರ ಸ್ವೀಕಾರದ ದಿನ**— ಕಾಂಗ್ರೆಸಿನವರು ಅಧಿಕಾರ ಸ್ವೀಕಾರ ಮಾಡಿದ್ದಕ್ಕಾಗಿ ಆಗೋಸ್ಟು ೧ನೇ ತಾರೀಕನ್ನು ಪ್ರತ್ಯೇಕವಾಗಿ ಒಂದು ಪವಿತ್ರದಿನವಾಗಿ ಆಚರಿಸಬೇಕೆಂದು ರಾಷ್ಟ್ರಪತಿ ಜವಾಹರಲಾಲ ನೆಹರುಗಳು ಆಜ್ಞಾಪಿಸಿದ ಮೇರೆಗೆ ಮಂಗಳೂರಲ್ಲಿ ನಿನ್ನೆಯ ದಿವಸ ಅಧಿಕಾರ ಸ್ವೀಕಾರದ ದಿನವಾಗಿ ಆಚರಿಸಲಾಯಿತು ಬೆಳಿಗ್ಗೆ ಧ್ವಜವಂದನೆಯ ಸಮಾರಂಭವು ನಡೆಯಿತು ಶ್ರೀ| ಕಿಲ್ಲೆಯವರು ಧ್ವಜವನ್ನೇರಿಸಿ ರಾಷ್ಟ್ರಧ್ವಜದ ಮಹತ್ವವನ್ನು ವಿವರಿಸಿ ಹಿಂದೆ ಇದೇ ಧ್ವಜದ ಕೆಳಗೆ ನಿಂತು ರಾಷ್ಟ್ರಸಭೆಯು ಹೋರಾಡಿದ್ದಿತೆಂದೂ, ಇಂದು ಆ ಹೋರಾಟದ ಫಲವಾಗಿ ತನ್ನ ವಿಜಯವನ್ನು ಆಚರಿಸುತ್ತದೆಂದೂ ತಿಳಿಸಿದರು

ಸಾಯಂಕಾಲ ಥಿಯಾಸಾಫಿಕಲ್ ಲಾಜಿನಲ್ಲಿ ಡಾ| ಕೆ ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಮಹಾಸಭೆಯು ಸೇರಿತು ಶ್ರೀ|ಗಳಾದ ಕೆ ಕೃಷ್ಣರಾಯರು, ಎಸ್. ಎಸ್ ಕಿಲ್ಲೆಯವರು, ಬಿ ಪಿ ಬಾಳಿಗ, ಯಂ ಎಲ್ ಎ. ಯವರು, ಕೆ. ಪಿ. ಕಾರಂತರು ಮತ್ತು ಶ್ರೀ| ಬಾಳಿಗರು ಉತ್ಸವದ ಉದ್ದೇಶವನ್ನು ಕುರಿತು ಮಾತಾಡಿದರು ಅಧ್ಯಕ್ಷರು ಭಾರತ ವರ್ಷದ ೧೫೦ ವರ್ಷಗಳ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹೇಳಿದ್ದಲ್ಲದೆ, ಕಳೆದ ೫೦ ವರ್ಷಗಳ ಹೋರಾಟದಲ್ಲಿ ರಾಷ್ಟ್ರ ಸಭೆಯು ಎಷ್ಟರ ಮಟ್ಟಿಗೆ ಪ್ರಜಾಹಿತವನ್ನು ಸಂಪಾದಿಸಿದೆಯೆಂಬುದನ್ನು ವಿವರಿಸಿ ಹೇಳಿದರು ೧೯೨೧ರ ವರೆಗೆ ಈ ದೇಶದಲ್ಲಿ ಜನರಿಗೆ ಮತದಾನದ ಹಕ್ಕು ಬಹಳ ಕಡಿಮೆಯಾಗಿತ್ತೆಂದೂ, ೧೯೨೧ರಿಂದ ಇದು ಸ್ವಲ್ಪ ಮಟ್ಟಿಗೆ ಹೆಚ್ಚಾಗಿ ಕೊಡಿಸಲ್ಪಟ್ಟಿತೆಂದೂ ೧೯೩೫ನೇ ಇಸವಿಯ ಆಕ್ಟಿಗನುಸಾರ ೩ ಕೋಟಿ ಜನರಿಗೆ ಮತದಾನದ ಹಕ್ಕು ಬಂದಿರುವುದಾಗಿಯೂ ತಿಳಿಸಿದರು. ಮತ್ತು ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿದುದು ಬಹಳ ಯುಕ್ತತೆಯೆಂದೂ, ದೇಶದ ಎಲ್ಲಾ ಜನರೂ ಕಾಂಗ್ರೆಸ್ ಸದಸ್ಯರಾಗಿ ಸೇರಿ ಕಾಂಗ್ರೆಸಿನ ಮಂತ್ರಿಗಳಿಗೆ ಬೆಂಬಲ ಕೊಟ್ಟರೆ ಈಗಿನ ಸುಧಾರಣೆಯನ್ನು ಬೇಗನೆ ತಿದ್ದುಪಡಿಸುವುದಕ್ಕೆ ಸಾಧ್ಯವಿದೆಯೆಂದರು ಅನಂತರ ಅನೇಕ ಠರಾವುಗಳನ್ನು ಸಭೆಯ ಮುಂದಿಟ್ಟರು ಅವೆಲ್ಲವೂ ಮಂಜೂರಾದುವು ಶ್ರೀ. ಕೆ ಹೈದರರು ಧನ್ಯವಾದಗಳನ್ನರ್ಪಿಸಿದ ತರುವಾಯ ಸಭಾಂತ್ಯವಾಯಿತು.

**ಹೋಟೆಲ್ ಕೆಲಸಗಾರರ ಸಂಘ**— ಮಂಗಳೂರಿನ ಹೋಟೆಲ್ ಕೆಲಸಗಾರರ ಒಂದು ಸಭೆಯು ನಿನ್ನೆಯ ದಿನ ರಾತ್ರಿ ೯–೩೦ಕ್ಕೆ ಕಾಂಗ್ರೆಸ್ ಸಮಾಜವಾದಿ ಆಫೀಸಿನಲ್ಲಿ ಶ್ರೀ| ಬಿ ಪಿ ಬಾಳಿಗ ಯಂ. ಎಲ್ ಎ. ಯವರ ಅಧ್ಯಕ್ಷತೆಯಲ್ಲಿ ನಡೆದಿರುವುದಾಗಿ ತಿಳಿದು ಬರುತ್ತದೆ

**ಮೋಟರ್ ಡ್ರೈವರರ ಸಂಘ**— ಮಂಗಳೂರಿನಲ್ಲಿ ಒಂದು ಮೋಟರ್ ಡ್ರೈವರರ ಮತ್ತು ಕಂಡಕ್ಟರರ ಸಂಘವು ಸ್ಥಾಪಿಸಲ್ಪಡುವುದೆಂದು ವದಂತಿಯಿದೆ.

**ಮುನ್ಸಿಪಲ್ ಚುನಾವಣೆ**— ಮಂಗಳೂರು ಮ್ಯುನಿಸಿಪಾಲಿಟಿಯ ಚುನಾವಣೆಯ ತಾರೀಕು ಸ್ವಲ್ಪ ಮುಂದುವರಿಯುವ ಸಂಭವವಿರುವುದರಿಂದ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರಾಗಿ ನಿಲ್ಲತಕ್ಕ ಮಹನೀಯರಿಂದ ಅರ್ಜಿಗಳನ್ನು ಸ್ವೀಕರಿಸುವ ತಾರೀಕನ್ನು ಸ್ವಲ್ಪ ಮುಂದಕ್ಕೆ ವರಿಸಿದ್ದಾರೆ. ಈಗಾಗಲೆ ಅನೇಕ ಅರ್ಜಿಗಳು ಬಂದಿರುವುದಾಗಿ ಅಂದಾಜು ಮಾಡಲ್ಪಟ್ಟಿದೆ.

## ಉಡುಪಿ

**ಮಾಸಿಕ ಸಂಗೀತೋತ್ಸವ**— ಇಲ್ಲಿಯ ಶ್ರೀ ಶಾರದಾ ಸಂಗೀತಕಲಾ ಶಾಲೆಯ ಈ ತಿಂಗಳ ಮಾಸಿಕ ಸಂಗೀತೋತ್ಸವವು ತಾ ೩೧—೭—೩೭ನೇ ಶನಿವಾರ ಸಂಜೆ ಘಂಟೆ ೬ಕ್ಕೆ ಸರಿಯಾಗಿ ಶಾಲಾಭವನದಲ್ಲಿ ಶ್ರೀ ಕೆ. ಕೆ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಮ್ಮಕ್ಕಳ ಗಾಯನ ಜಡೆ ಆಟಗಳಾದ ಬಳಿಕ ಶ್ರೀ| ಪಿ. ಎನ್ ಬನ್ನಂಜೆ ರಾಮಾಚಾರ್ಯರು ಸಂಗೀತದ ಮಹತ್ವದ ಕುರಿತು ಎರಡು ಮಾತುಗಳನ್ನಾಡಿದರು. ಅಧ್ಯಕ್ಷರು ಸಮಯೋಚಿತ ಭಾಷಣವನ್ನು ಮಾಡಿದ ಬಳಿಕ ಪದ್ಮನಾಭಾಚಾರ್ಯರು ಎಲ್ಲರಿಗೂ ಧನ್ಯವಾದವನ್ನರ್ಪಿಸಿದ ಬಳಿಕ ಉತ್ಸವವು ಕೊನೆಗೊಂಡಿತು.

**'ಮಂತ್ರಿಪದವಿ, ದಿನಾಚರಣೆ**— ಲೋಕಮಾನ್ಯ ತಿಲಕರ ಪುಣ್ಯದಿನವಾದ ತಾ ೧–೮–೩೭ರಂದು ರಾಷ್ಟ್ರಪತಿಗಳ ನಿವೇದನೆಯಂತೆ ಕಾಂಗ್ರೆಸ್ ರಾಜ ದಿನಾಚರಣೆಯು ಉಡುಪಿಯಲ್ಲಿಯೂ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಬೆಳಿಗ್ಗೆ ೮ ಘಂಟೆಗೆ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು 'ಧ್ವಜವಂದನೆ'ಯನ್ನು ಮಾಡಿದರು ಸಂಜೆ ಘಂಟೆ ೪ಕ್ಕೆ ಮೆರವಣಿಗೆಯಾಗಿ ಘಂಟೆ ೫ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಮಹಾಸಭೆಯು ಸೇರಿತು. ಸೂಚನೆಯಂತೆ ಶ್ರೀ ಡಾ| ಮಾಧವ ಪೈಯವರು ಅಧ್ಯಕ್ಷಪದವಿಯನ್ನೇರಿದರು. ಮೊದಲು ಶ್ರೀ ಶಾರದಾ ಸಂಗೀತ ಕಲಾಶಾಲೆಯ ವಿದ್ಯಾರ್ಥಿನಿಯರು ರಾಷ್ಟ್ರಗೀತೆಗಳನ್ನು ಹಾಡಿದ ಬಳಿಕ, ಡಾ| ಮಾಧವ ಪೈಯವರು "ಕಾಂಗ್ರೆಸು ಅಧಿಕಾರ ಸ್ವೀಕರಿಸಿದ ವಿದ್ಯಮಾನಗಳನ್ನೆಲ್ಲಾ ವಿವರಿಸಿ ತಮ್ಮಂಥವರು ರಾಜಕೀಯದಲ್ಲಿ ಭಾಗವಹಿಸದಿದ್ದರೂ ಕಳೆದ ಚುನಾವಣೆಯ ತರುಣ ಮತ್ತು ಬಾಲಕರ ಉತ್ಸಾಹದಿಂದ ಸುಮ್ಮನಿರಲು ಸಾಧ್ಯವಿಲ್ಲದಾಯಿತೆಂದೂ ಕಾಂಗ್ರೆಸು ಅಧಿಕಾರ ಸ್ವೀಕರಿಸಿದುದರಿಂದ ದೇಶದ ಪರಿಸ್ಥಿತಿಯೇ ಬದಲಾಗಿರುವುದೆಂದೂ, ಇನ್ನು ನಿಜವಾದ ಜನಹಿತ ಸಾಧಕ ಕೆಲಸವು ನಡೆಸುವಂತಾಗಬಹುದೆಂದೂ, ಪ್ರತಿಯೊಂದು ಹಳ್ಳಿಯವರೂ ಸ್ವಾವಲಂಬಿಯಾಗಲು ಸತಂತ್ರ ಮತ್ತು ನಿಶ್ಚಿತಯೋಜನ ಕೈಕೊಳ್ಳಬೇಕೆಂದೂ" ಸೂಚಿಸಿ ಬೋಧಪರ ಪ್ರಾರಂಭಿಕ ಭಾಷಣವನ್ನು ಮಾಡಿದರು ಮಧ್ಯೆ ಅನಿವಾರ್ಯಕಾರಣದಿಂದಾಗಿ ಶ್ರೀ. ಮಾಧವ ಪೈಗಳು ಅಧ್ಯಕ್ಷಪೀಠವನ್ನು ಬಿಟ್ಟು ತೆರಳಬೇಕಾಗಿ ಒಂದುದರಿಂದ ಜನಾಭಿಪ್ರಾಯದ ಮೇರೆಗೆ, ಶ್ರೀ ಆರೂರವರ ಸೂಚನೆಯಂತೆ ಶ್ರೀ ವಕೀಲ್ ಕೆ ರಮಾನಾಥ ಪೈಯವರು ಅಧ್ಯಕ್ಷಪೀಠವನ್ನಲಂಕರಿಸಿದರು ಶ್ರೀ ಕೆ ಕೆ ಶೆಟ್ಟರು ಆಗೋಸ್ಟು ತಾ ೧ರ ಮಹತ್ವವನ್ನು ವಿವರಿಸಿ "ಕಾಂಗ್ರೆಸ್ಸು ಜನಹಿತದ ಗುರಿಯುಳ್ಳ ಏಕೈಕ ರಾಜಕೀಯ ಸಂಸ್ಥೆಯೆಂಬ ಮಾತು ಆಳರಸರಿಗೆ ಗೊತ್ತಾಗಿಯೇ ಪದವೀ ಸ್ವೀಕಾರದ ವಾತಾವರಣವನ್ನು ಅವರು ಕಲ್ಪಿಸಿಕೊಟ್ಟರು ಅದರ ಮರ್ಮವನ್ನರಿಯಲಿಕ್ಕೆ ಇದೇ ಸಮಯ. ಇಂದ ಕಳುಹಿಸಲ್ಪಟ್ಟ ಪ್ರತಿನಿಧಿಗಳು ಕೌನ್ಸಿಲಿನೊಳಕ್ಕೆ ಹೊಕ್ಕಿದ್ದಾರೆ ಅವರು ಜನರಿಗೆ ಬೇಕಾಗುವ ಸೌಕರ್ಯಗಳನ್ನು ಮಾಡಲಿಕ್ಕೆ ಸಿದ್ಧರಾಗಿದ್ದಾರೆ ಗಾಂಧಿಯವರಂದಂತೆ ಸಿದ್ಧತೆಯ ಅಳ್ವಿಕೆಯು ಹೋಗಿ ಪ್ರಜಾಸತ್ತೆಯು ಆರಂಭವಾಗಿದೆ ನಾವು ಆಗಂಬರೂರವಷ್ಟೇ ಆಗದೆ ಕಾರ್ಯಶೂರರೂ ಆಗಿ ಉಳಿದರೆ ಪೂರ್ಣ ಸ್ವಾತಂತ್ರ್ಯದ ದಿನವನ್ನು ಬಿರಕಾಲ ನಿರೀಕ್ಷಿಸುವ ಅವಶ್ಯವಿಲ್ಲ ಎಲ್ಲರೂ ಮತಭೇದ ಬಿಟ್ಟು ಹಿಂದೀಯರೆಲ್ಲಾ ಒಂದೇ ಎಂಬ ಅಭಿಮಾನದಿಂದ ಒಟ್ಟಾಗಿ ಕೆಲಸಮಾಡಬೇಕೆಂದು ಉಜ್ವಲಭಾಷಣವನ್ನು ಮಾಡಿ ಬರುವ ಚುನಾವಣೆಯಲ್ಲಿ ಯಾರಾದರೂ ಜಾತೀಯ ಭಾವನೆ ಕಟ್ಟಿಕೊಂಡು ಕೆಲಸಮಾಡಬಾರದೆಂದು ಆಗ್ರಹದಿಂದ ಕೇಳಿಕೊಂಡು ಸಭೆಯ ಮುಂದಿಡಬೇಕಾದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಠರಾವನ್ನು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಓದಿ ಹೇಳಿ ವಿವರಿಸಿದರು ಅನಂತರ ಮುನ್ಸಿಪಲ್ ಚೇರ್ಮೇನ್ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಕಾಂಗ್ರೆಸ್ಸಿನವರು ಅಧಿಕಾರ ಸ್ವೀಕರಿಸಿದುದರಿಂದ ಉಂಟಾಗಿರುವ ಮನೋವೃತ್ತಿಯ ಮಾರ್ಪಾಟು ಕಾಂಗ್ರೆಸ್ ಮಂತ್ರಿಗಳಿಂದ ಜನತೆಗಾಗುವ ಪ್ರಯೋಜನ, ರೈತರು ಪಡೆಯಬಹುದಾದ ಸಹಾಯವನ್ನೆಲ್ಲಾ ವಿವರಿಸಿ ಎಲ್ಲರೂ ಕಾಂಗ್ರೆಸ್ಸಿಗೆ ಸೇರಿ ಕಾಂಗ್ರೆಸ್ಸನ್ನು ಬಲಗೊಳಿಸಿ ಮಂತ್ರಿಗಳಿಗೆ ನೆರವಾಗಬೇಕೆಂದು ವಿನಂತಿ ಮಾಡಿಕೊಂಡರು

ಶ್ರೀ| ಪಿ ಎನ್ ಬನ್ನಂಜೆ ರಾಮಾಚಾರ್ಯರು ಕಾಂಗ್ರೆಸ್ ಮೆಂಬರರಾಗತಕ್ಕ ಅವಶ್ಯಕತೆಯ ಕುರಿತು ಕೆಲ ಮಾತುಗಳನ್ನಾಡಿದರು ಶ್ರೀ| ಮಿಯಾಳ ನರಸಿಂಹಾಚಾರ್ಯರು "ಕಳೆದ ಚುನಾವಣೆಯಲ್ಲಿ ಕಾಂಗ್ರೆಸು ತಾನು ಗಳಿಸಿರುವ ಕೀರ್ತಿಯ ಅಧಿಕ ಜಯವನ್ನು ಹೊಂದಿರುವುದಲ್ಲದೆ ನಮ್ಮ ಸಾಹಸ ಮಾತ್ರದಿಂದಲ್ಲ ಅಂತಹ ಸಂಸ್ಥೆಗೆ ನಾವು ಬೆಂಬಲವನ್ನು ಕೊಡುವುದರಲ್ಲಿ ವಿವೇಕವಿದೆ" ಎಂದು ಹೇಳಿದರು. ಶ್ರೀ| ಬಿ ರಾಮಕೃಷ್ಣಾಚಾರ್ಯರು 'ಹಿಂದೀ ಚಳವಳಿ'ದ ಕುರಿತು ಹಿಂದಿಯಲ್ಲೇ ಒಂದು ಭಾಷಣವನ್ನು ಮಾಡಿದರು. ಅಧ್ಯಕ್ಷರು ಕಾಂಗ್ರೆಸಿನ ಮಹಿಮೆಯನ್ನು ಕೊಂಡಾಡಿ ಮನೋರಂಜಕವಾದ ಭಾಷಣ ಮಾಡಿದರು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ| ಪಿ ಮಂಜುನಾಥ ನಾಯ್ಕರು ಕಾಂಗ್ರೆಸ್ಸು ವಸೂಲುಮಾಡುವ ವಾರ್ಷಿಕ ವೇತನವಾದ ೦—೪—೦ಯು ಎಲ್ಲಿಗೆ ಹೋಗುವುದೆಂಬುದನ್ನು ವಿವರಿಸಿ ಎಲ್ಲರಿಗೂ ಧನ್ಯವಾದವನ್ನರ್ಪಿಸಿದರು ಕೊನೆಗೆ 'ಧ್ವಜಾವರೋಹಣ'ವಾಗಿ ಸಭೆಯು ವಿಸರ್ಜಿತವಾಯಿತು

**ಕೊಡವೂರು**— ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಾ. 4ನೇ ಮಂಗಳವಾರ ರಾತ್ರಿ ಪಂಡಿತ ಯು. ಬಿ ಆಚಾರ್ಯರ ನೇತೃತ್ವದಲ್ಲಿ ಅಂಗದ ಸಂಧಾನ ಎಂಬ ಪ್ರಸಂಗವು ಸುಶ್ರಾವ್ಯವಾಗಿ ಹಾಡಲ್ಪಟ್ಟಿತು

**ಶ್ರೀ ಕೃಷ್ಣ ವಾಚನಾಲಯವು**— ಆರು ವರುಷಗಳಿಂದ ಜನತೆಯಲ್ಲಿ ವಾಚನಾಭಿವೃದ್ಧಿಯನ್ನುಂಟುಮಾಡುತಿದ್ದ, ಸಾರ್ವಜನಿಕ ಶ್ರೀಕೃಷ್ಣವಾಚನಾಲಯವನ್ನು, ಈ ವರೆಗಿದ್ದ ದರ್ಮಾಪೀರ ಸಂಘದ ಕಟ್ಟಡದಲ್ಲಿ ಸ್ಥಳ ಸಂಕೋಚವಾಗುವುದರಿಂದಲೂ ಹಲವು ಮಂದಿ ಮಹನೀಯರ ಅಭಿಪ್ರಾಯದಿಂದಲೂ ಶಾರದಾ ಸಂಗೀತ ಶಾಲೆ (ಸಾರಸ್ವತರ ದೇವಸ್ಥಾನದ ಬಳಿ)ಯಲ್ಲಿ ೧೮-೩೭ರಿಂದ ತೆರೆಯಲಾಗಿದೆ ಸದ್ರಿ ಶಾಲಾ ಸ್ಥಾಪಕರಾದ ಕೆ ಪದ್ಮನಾಭಾಚಾರ್ಯರನ್ನು ಮೇನೇಜರರಾಗಿಯೂ, ಕೆ ಶ್ರೀನಿವಾಸ ಉಪಾಧ್ಯಾಯರನ್ನು ಕಾರ್ಯದರ್ಶಿಯಾಗಿಯೂ ಆರಿಸಲಾಗಿದೆ

ಆದ್ದರಿಂದ ಎಲ್ಲಾ ಮೆಂಬರ್ಸುಗಳೂ ತಮ್ಮಲ್ಲಿರುವ ಪುಸ್ತಕಗಳನ್ನು ಕೂಡಲೆ ಅಲ್ಲಿಗೇನೆ ತಲ್ಪಿಸಬೇಕಲ್ಲದೆ ಸರ್ವರೂ ಉತ್ಸಾಹದಿಂದ ಸಾರ್ವಜನಿಕವಾದೀ ಕಾರ್ಯಕ್ಕೆ ಪ್ರೋತ್ಸಾಹಿಸಬೇಕೆಂದು ವಿನಂತಿ.

ಸ್ಥಾಪಕ.

**ಕೊಡಂಗಳ ರಾಮದಾಸ ಭಟ್ಟ.**

## ಸಂಚಾರ

**ಸಂಚಾರ**— ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ| ಹಿ ರಾಮರಾಯ ಮಲ್ಯರು ಕಾಂಗ್ರೆಸ್ ಸದಸ್ಯರನ್ನು ಸೇರಿಸಲಿಕ್ಕೂ, ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು ವ್ಯವಸ್ಥೆಗೊಳಿಸಲಿಕ್ಕೂ, ಕಾಂಗ್ರೆಸಿನ ಈಗಿನ ಕಾರ್ಯಕ್ರಮಗಳನ್ನು ವಿವರಿಸಲಿಕ್ಕೂ ಮಂಗಳೂರು ತಾಲೂಕಿನಲ್ಲಿ ಈ ಕೆಳಗಿನಂತೆ ಸಂಚರಿಸಿರುವರು ಮತ್ತು ಸಂಚರಿಸಲಿಕ್ಕಿರುವರು

ಆಗೋಸ್ತು ೧ ಬಂಟ್ವಾಳ, ೩ ಪುಂಜಾಲಕಟ್ಟೆ, ೪ ಕೈಕ್ಕಲ, ೫ ಪಾಣೆ ಮಂಗಳೂರು, ೭ ಮೂಲ್ಕಿ, ೮ ಹಳೆ ಅಂಗಡಿ, ೯ ಸುರತ್ಕಲ್, ೧೦ ಪಣಂಬೂರು, ೧೩ ಮುಂಡ್ಕೂರು, ೧೪ ಕಿನ್ನಿಗೋಳಿ, ೧೫ ಕಟೀಲ್, ೧೬ ಬಜ್ಪೆ, ೧೭ ಗುರ್ಪುರ, ೧೮ ಕೋಟೆಕಾರ

### ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಕಟಣೆ

ಈ ಕೆಳಗೆ ಕಾಣಿಸಿದ ವಿಷಯಗಳ ಕುರಿತು ಜಿಲ್ಲಾ ಕಮಿಟಿಯವರು ಮಾಹಿತಿಯನ್ನು ಸಂಗ್ರಹಿಸುತ್ತಿರುವುದರಿಂದ ಸರಿಯಾದ ಮಾಹಿತಿಯಿದ್ದವರು ಅದನ್ನು ಆದಷ್ಟು ಬೇಗನೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿಗೆ ಕಳುಹಿಸಬೇಕಾಗಿ ಈ ಮೂಲಕ ವಿನಂತಿ

೧ ಅಸಹಕಾರ ಚಳವಳಿ ಮತ್ತು ಸತ್ಯಾಗ್ರಹ ಚಳವಳಿಗಳಲ್ಲಿ ಭಾಗ ವಹಿಸಿದ ಕಾರಣದಿಂದಾಗಿ ಕೆಲಸವನ್ನು ತೆಗೆದ ಗ್ರಾಮ ಉದ್ಯೋಗಸ್ಥರು, ಉಪಾಧ್ಯಾಯರು, ಸರಕಾರಿ ಮತ್ತು ಸ್ಥಳೀಕ ಬೋರ್ಡು ವಗೈರೆ ಸಂಸ್ಥೆಗಳ ನೌಕರರು- ಇವರ ಹೆಸರು ಮತ್ತು ವಿಳಾಸಗಳು

೨ ರಾಜಕೀಯ ತಕ್ಸೀರುಗಳಿಂದ ಶಿಕ್ಷೆ ಹೊಂದಿ ಇನ್ನೂ ಜೈಲಿನಲ್ಲಿರುವವರ ಹೆಸರು ಮತ್ತು ವಿಳಾಸ ಮತ್ತು ಇವರ ಮೇಲಾದ ನಂಬ್ರದ ಮಾಹಿತಿ ಮತ್ತು ಶಿಕ್ಷೆಯ ವಿವರ.

**ಹಿ. ರಾಮರಾಯ ಮಲ್ಯ,**
ಕಾರ್ಯದರ್ಶಿ, ಜಿಲ್ಲಾ ಕಾಂಗ್ರೆಸ್ ಕಮಿಟಿ,
ಮಂಗಳೂರು

### ಇಡೀ ಜಿಲ್ಲೆಯಲ್ಲೇ ಕಾಂಗ್ರೆಸ್ ರಾಜ ದಿನಾಚರಣೆ

ರಾಷ್ಟ್ರಪತಿಗಳ ಸಂದೇಶದಂತೆ ಇದೇ ತಾ ೧ರಲ್ಲು ನಮ್ಮ ಜಿಲ್ಲೆಯ ಎಲ್ಲಮೂಲೆಗಳಲ್ಲೂ ಕಾಂಗ್ರೆಸ್ ರಾಜ ದಿನಾಚರಣೆಯು ಸಂಭ್ರಮದಿಂದ ಆಚರಿಸಲಾಯಿತು. **ಕುಂದಾಪುರ**ದಲ್ಲಿ ಶ್ರೀ| ಕೆ. ಸುಂದರರಾಯರ ಅಧ್ಯಕ್ಷತೆಯಲ್ಲಿ, **ಮೂಡಾವಿನ**ಲ್ಲಿ ಶ್ರೀ| ಜತ್ತಪ್ಪ ರೈಯವರ ಅಧ್ಯಕ್ಷತೆಯಲ್ಲಿ, **ಬೆಳ್ತಂಗಡಿ**ಯಲ್ಲಿ ಶ್ರೀ| ಯುವರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ, **ಖಂಬದ ಕೋಣೆ**ಯಲ್ಲಿ ಶ್ರೀ| ಎ ಶೀನಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ **ಮೂಡಬಿದಿರೆ**ಯಲ್ಲಿ ಶ್ರೀ| ಧರ್ಮಸಾಮ್ರಾಜಯ್ಯನವರ ಅಧ್ಯಕ್ಷತೆಯಲ್ಲಿ, **ಬ್ರಹ್ಮಾವರ**ದಲ್ಲಿ ಶ್ರೀ| ತಿಮ್ಮಣ್ಣಾಚಾರ್ಯರ ಅಧ್ಯಕ್ಷತೆಯಲ್ಲೂ ಆಚರಿಸಲ್ಪಟ್ಟಿತು. ವಿವರಗಳು ನಮಗೆ ತಲಪುವಾಗ ವಿಳಂಬವಾದುದರಿಂದ ಸಂಪೂರ್ಣ ಪ್ರಕಟಿಸಲಾಗಲಿಲ್ಲ.


**ಮೂರುಗಡಿಯಾರಗಳು ಮತ್ತು ೧೨೬೫ ಆಕರ್ಷಕ ಬಹುಮಾನಗಳ ಸಮೇತ ರೂ. ೧—೨—೦ಮಾತ್ರ.**



ನಮ್ಮ ಸುಗಂಧ ಪರಿಮಳ "ಒಟ್ಟೊ ದಿಲ್ ಕುಶ್" 12 ಶೀಸೆಗಳನ್ನು ಅಥವಾ 12 ಡಬ್ಬಿ ರಿಂಗ್‌ವರ್ಮ್ ಮುಲಾಮನ್ನಾಗಲೀ ರೂ. 1–2–0ಗೆ ಕೊಂಡುಕೊಳ್ಳುವವರಿಗೆ ಈ ಕೆಳಗಿನಂತೆ ಬಹುಮಾನಗಳು ಉಚಿತವಾಗಿ ಕೊಡಲಾಗುವವು

ಒಂದು ರೈಲ್ವೆ ಟೈಂ ಪೀಸ್ ಪಾಕೆಟ್ ವಾಚ್, ಪಟ್ಟಿಸಹಿತ ಒಂದು ರೋಲ್ಡ್ ಗೋಲ್ಡ್ ಗಿಲ್ಟ್ ದಮ್ಮಿ ರಿಸ್ಟ್‌ವಾಚ್, ಒಂದು ಜಿಲ್ಲೆಟ್ ಸೇಫ್ಟಿ ರೇಜರ್, ಒಂದು ಷೇವಿಂಗ್ ಸೋಪು ಒಂದು ಷೇವಿಂಗ್ ಬ್ರಷ್ ಒಂದು ಕನ್ನಡಿ, ಒಂದು ಪ್ಯಾಕೇಟು ಪೌಡರು, ಒಂದು ಬಾಚಣಿಗೆ, ೧೨೫೦ ಸ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ಬುಳ್ಳ ಒಂದು ಫೌಂಟನ್ ಪೆನ್ನು, ಒಂದು ರೋಲ್ಡ್ ಗೋಲ್ಡ್ ಉಂಗುರ ೫೫ ಅಡಿ ಫೋಕಸ್ ಉಳ್ಳ ಒಂದು ಟಾರ್ಚ್ ಲೈಟು ಅಥವಾ ಒಂದು ಸಲ ಬಿಗಿದರೆ ೩೬ ಘಂಟೆಕಾಲ ನಡೆಯುವ ೧೦ ವರುಷಗಳ ಗ್ಯಾರಂಟಿಯಾದ ಮತ್ತು ಮಜಬೂತಾದ ಸಾಮಾನುಗಳಿಂದ ಕೂಡಿರುವ ಒಂದು ಜರ್ಮನ್ ಟೈಂ ಪೀಸ್. ಪ್ಯಾಕಿಂಗ್ ಮತ್ತು ಪೋಸ್ಟೇಜು ರೂ ೦–೧೪–೦ ಪ್ರತ್ಯೇಕ.

**THE AMERICAN COMMERCIAL, STORES,**
P. B. No. 12213, Calcutta.

ESTD. 1906

**The Canara Banking Corporation Udipi Ltd.**

(Incorporated in British India)

**Members:- RESERVE BANK OF INDIA.**

| | | | |
|---|---|---|---|
| Paid up Capital | Rs. 2,88,925 | 0 | 0 |
| Reserves | Rs. 3,52,213 | 0 | 0 |
| Deposits | Rs. 37,98,217 | 0 | 0 |
| Govt. Securities | Rs. 12,46,325 | 0 | 0 |

**Total Resources exceed Rs. 52 00,000/-**

**ANNOUNCEMENT.**

The Mettupalayam branch of the Corporation will be opened on 11—8—1937 and all kinds of Banking transactions will be under takenfrom that date.

*V. R. Kamath,* B. A., LL.B.

Bg. Manager

ಉಡುಪಿ, ಗುರುವಾರ, ತಾ ೫-೮-'೩೭

# ಮದ್ಯಪಾನ ನಿಷೇಧ.

ಮದ್ರಾಸಿನ ಕಾಂಗ್ರೆಸ್ ಮಂತ್ರಿಮಂಡಲವು ಇಡೀ ಪ್ರಾಂತದಲ್ಲಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರುವ ನಿರ್ಧಾರ ಮಾಡಿರುವುದು ಪ್ರಥಮವಾಗಿ ಈಗ ಸೇಲಮ್ ಜಿಲ್ಲೆಯೊಂದರಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಲಾಗುವದು. ಮದ್ಯಪಾನದಿಂದುಂಟಾಗುವ ಹಾವಳಿಯು ಎಲ್ಲರಿಗೂ ವಿದಿತವಾದುದು. ವಿಶೇಷವಾಗಿ ಬಡತನವನ್ನು ಮತ್ತಷ್ಟು ದುರವಸ್ಥೆಗೀಡುಮಾಡುವ ಮಹತ್ತಾದ ದುರ್ವ್ಯಸನವದು. ಆ ವ್ಯಸನ ಪ್ರಾಂಪಕ್ಕೆ ಅನ್ನದ ದೊರೆಯದಿದ್ದರೆ ಸಹ ಪ್ರಗಟ್ಟೆ ಒಡಕುಟುಂಬಗಳು ತಮ್ಮ ಜೀವನದಲ್ಲಿ ಒಂದಿಷ್ಟು ಬೆಳಕನ್ನು ಕಾಣುವಂತಾಗುವುದು. ಮಜೂರರು ದಿನವೆಲ್ಲಾ ದುಡಿದು ಸಂಪಾದಿಸಿದ ಹಣವು ಸದ್ವಿನಿಯೋಗವಾಗಿ ದಿನಕ್ಕೊಂದು ಗಂಜಿಯನ್ನು ಸುಖವಾಗಿ ಕಾಣದ ಅವರ ಕುಟುಂಬಗಳು ಕೆಲಮಟ್ಟಿಗಾದರೂ ಸುಖ ಶಾಂತಿಯನ್ನು ಕಾಣುವಂತಾಗುವುದು. ಮಹಾತ್ಮಾಗಾಂಧಿಯವರು ಹೇಳಿರುವಂತೆ ಹಿಂದು ದೇಶದಲ್ಲಿ ಮದ್ಯಪಾನ ನಿಷೇಧವು ಅತ್ಯಂತ ಸುಲಭವಾಗಿರುವುದು. ಹಿಂದು ಮುಸಲ್ಮಾನ ಧರ್ಮಗಳೆರಡಕ್ಕೂ ಮದ್ಯವು ನಿಷೇಧವಾಗಿದೆ. ಈ ಸಮಾಜಗಳಲ್ಲೇ ಮದ್ಯಪಾನವೆಂಬುದು ನಾಚಿಕೆಕರ ಸಂಗತಿಯದ್ದು ಅದು ಹೆಚ್ಚಾಗಿ ಗುಪ್ತವಾಗಿ ನಡೆಸಲ್ಪಡುತ್ತದೆ. ಪಾಶ್ಚಾತ್ಯ ದೇಶಗಳಂತೆ ಇದೊಂದು 'ಫೇಶನಾಗಿ'ರುವುದಿಲ್ಲ. ಅಪಮಾನಕರವಿರುವುದು.

ಮದ್ಯಪಾನವು ಪ್ರಬಲವಾದುದು ಬ್ರಿಟಿಷರ ಆಳ್ವಿಕೆಯಿಂದೆಂದು ಹೇಳಬಹುದು. ಅವರ ಧೋರಣೆಯು ಮದ್ಯ ವಿಕ್ರಯದಿಂದ ಆದಷ್ಟು ಹೆಚ್ಚಿನ ಆದಾಯ ಪಡೆಯುವುದಾಗಿತ್ತು; ಅದಕ್ಕಾಗಿಯೇ ಅಬ್ಕಾರಿ ಖಾತೆಯು ಪರಿಣಾಮವೇ ಅಷ್ಟೆಂದು ದೃಢವಾಗಿ ಹೇಳಬಹುದು. ಅತಿ ಹೆಚ್ಚಿನ ಆದಾಯ, ಅತಿ ಕಡಿಮೆಯ ಉಪಯೋಗ ಎಂಬ ಸರಕಾರದ ಧೋರಣೆಯ ಪರಿಣಾಮವು ಪ್ರತಿ ವಿರುದ್ಧವಾಗಿರುವುದು. ಅಬಕಾರಿ ಖಾತೆಯ ಆದಾಯವು ಹೆಚ್ಚಿದಂತೆ ಮದ್ಯದ ಉಪಯೋಗ ಅಧಿಕವಾಗುತ್ತಾ ನಡೆದಿರುವುದು. ಮದ್ಯ ಮತ್ತು ಸಾರಾಯಿ ಗುತ್ತಿಗೆಗಳ ಸಂಖ್ಯೆಯು ಹೆಚ್ಚಿರುವುದು. ಜಸ್ಟಿಸ್ ಪಕ್ಷವು 10 ವರ್ಷದೊಳಗೆ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸುವ ಕಾರ್ಯಕ್ರಮವನ್ನು ಕೈಕೊಂಡಿದ್ದರೂ ಅಧಿಕಾರಕ್ಕೆ ಬಂದನಂತರ ಅದರ ಗೊಡವೆಗೇನೇ ಹೋಗಲಿಲ್ಲ; ಮಾತ್ರವಲ್ಲದೆ ಮದ್ಯಪಾನ ಪ್ರಚಾರವನ್ನು ಹೆಚ್ಚಿಸುವ ಧೋರಣೆಗೆ ಪ್ರೋತ್ಸಾಹವೀಯುತ್ತಿತ್ತು. ಡಾಕ್ಟರ್ ಸುಬ್ಬರಾಯನವರ ಮಂತ್ರಿಮಂಡಲದ ಕಾಲದಲ್ಲಿ ಮದ್ಯಪಾನವನ್ನು ಕಡಿಮೆ ಮಾಡಲು ಪ್ರಯತ್ನ ನಡೆಸಲ್ಪಟ್ಟಿತು. ಆದರೆ ಅಬ್ಕಾರಿ ಖಾತೆಯವರೇ ಅದಕ್ಕೆ ಅಡ್ಡಗಾಲಿಟ್ಟರು. ಆ ಮೇಲೆ ಮದ್ಯಪಾನ ಮಾಡುವವರಿಗೆ ಅದನ್ನು ಬಿಡುವ ಮನಸ್ಸಿಲ್ಲ. ಹೊರಗಿನಿಂದ ಹಾಕಲ್ಪಡುವ ನಿರ್ಬಂಧವು ಕಟ್ಟಕಡೆಗೆ ಫಲಕಾರಿಯಾಗಿ ಪರಿಣಮಿಸಲಿಕ್ಕಿಲ್ಲ. ಕಳ್ಳಭಟ್ಟಿಕೆಯ ತಯಾರಿ ಮತ್ತು ವ್ಯಾಪಾರವು ಹೆಚ್ಚುವಂತಾಗುದೆಂಬ ಕಾರಣಗಳಿಂದ ಆ ಪ್ರಯತ್ನವನ್ನೇ ನಿಲ್ಲಿಸಿಬಿಡಲಾಯಿತು. ಮುಖ್ಯ ವಿಷಯವೆಂದರೆ ಮದ್ಯಪಾನ ತ್ಯಾಗಕ್ಕಿಂತಲೂ ಅದರಿಂದ ದೊರೆಯುವ ಆದಾಯವೇ ಪ್ರಾಮುಖ್ಯವಾದುದು, ಅದು ಹೊರತು ಆಡಳಿತವನ್ನು ಸಸೂತ್ರವಾಗಿ ನಡೆಸಲು ಸಾಧ್ಯವೇ ಇಲ್ಲೆಂಬ ಮನೋವೃತ್ತಿಯು ಅಬ್ಕಾರಿ ಮತ್ತು ಸರಕಾರಿ ನೌಕರರಲ್ಲಿ ರೂಢವಾಗಿತ್ತು; ಮತ್ತು ದ್ವಿದಳ ರಾಜ್ಯ ಪದ್ಧತಿಯಲ್ಲಿ ತಮ್ಮಿಚ್ಛೆಯನ್ನು ಧೈರ್ಯದಿಂದ ಮುಂದೊತ್ತಲು ಬೇಕಷ್ಟು ಅವಕಾಶವೂ ಇರಲಿಲ್ಲ.

ಇಡೀ ಹಿಂದುಸ್ಥಾನದಲ್ಲಿ ಮದ್ಯಪಾನ ನಿಷೇಧಕ್ಕಾಗಿ ಪ್ರಚಂಡ ಚಳವಳ ಹೂಡಿ, ಅದಕ್ಕಾಗಿ ರಕ್ತವನ್ನು ಕೂಡಾ ಸುರಿಸಿ ಮಹತ್ತಾದ ತ್ಯಾಗ ಮಾಡಿದವರು ಕಾಂಗ್ರೆಸಿನವರು. ಈಗ ಕಾಂಗ್ರೆಸು ಅಧಿಕಾರಕ್ಕೆ ಬಂದೊಡನೆಯೇ ಮದ್ರಾಸಿನಲ್ಲಿ ಪ್ರಥಮವಾಗಿ ಆ ಪ್ರಯೋಗವು ಕೈಕೊಳ್ಳಲ್ಪಟ್ಟಿರುವುದು ಆನಂದದ ವಿಷಯವಿದೆ. ಈ ಪ್ರಯೋಗಕ್ಕೆ ಇಡೀ ದೇಶದ ಆಶೀರ್ವಾದವಿರದಿರಲಾರದು. ಮದ್ಯಪಾನ ನಿಷೇಧದ ವಿಷಯದಲ್ಲಿ ಅತ್ಯಂತ ತೊಡಕಿನ ಪ್ರಶ್ನೆಯೆಂದರೆ ಪ್ರಾಂತದ ಒಟ್ಟು ಉತ್ಪತ್ತಿಯಲ್ಲಿ ನಾಲ್ಕರೊಂದು ಪಾಲಷ್ಟು ಉಂಟಾಗುವ ಆದಾಯ ನಷ್ಟ. ಇದನ್ನು ಭರ್ತಿ ಮಾಡುವುದು ಹೇಗೆಂಬುದೇ ದೊಡ್ಡ ಸಮಸ್ಯೆ. ಗಾಂಧಿಜಿಯವರು ಅಬ್ಕಾರಿ ಆದಾಯವು ತುಚ್ಛವಾದುದು. ಶಿಕ್ಷಣವನ್ನು ಕುಡುಕತನದಂತಹ ದುರ್ವ್ಯಸನದ ಉತ್ಪತ್ತಿಯಿಂದ ಪೋಷಿಸುವುದು ದೊಡ್ಡ ಅನೀತಿ. ಆದಾಯ ಪ್ರಶ್ನೆಯನ್ನು ಗಮನಿಸುತ್ತಾ ಹೋದರೆ ಹಿಂದುದೇಶದಲ್ಲಿ ಮದ್ಯಪಾನ ನಿಷೇಧಿಸಲು ಈ ಕಲಾಂತರದಲ್ಲಿ ಸಾಧ್ಯವಿಲ್ಲೆಂದು ಗಾಂಧಿಯವರು ಅಭಿಪ್ರಾಯಪಟ್ಟು ಶಿಕ್ಷಣವನ್ನು ಆರಂಭದಿಂದಲೇ ಸ್ವಾವಲಂಬಿಯನ್ನಾಗಿ ಮಾಡಬೇಕೆಂದುಸೂಚನೆಗಳನ್ನಿತ್ತಿರುವರು. ಪ್ರಕೃತದ ಪರಿಸ್ಥಿತಿಯಲ್ಲಿ ಅದು ಎಷ್ಟರಮಟ್ಟಿಗೆ ವ್ಯವಹಾರ್ಯವೆಂದು ಹೇಳಬರುವುದಿಲ್ಲ. ಆದರೆ ಶ್ರೀ ರಾಜಗೋಪಾಲಾಚಾರ್ಯರ ಸೂಚನೆಯಂತೆ ಲೋಕದಲ್ಲಿ ಎಲ್ಲಿಯೂ ಇಲ್ಲದಷ್ಟು ತಲೆ ಭಾರವಾಗಿರುವ ಮೇಲಧಿಕಾರಿಗಳ ಸಂಬಳವನ್ನು ಕಡಿಮೆ ಮಾಡುವುದು ವ್ಯವಹಾರ್ಯ ಮಾತ್ರವಲ್ಲದೆ ಅತ್ಯಾವಶ್ಯಕವಾಗಿದೆ. ರೂ. 100ಕ್ಕಿಂತ ಹೆಚ್ಚು ಸಂಬಳವಿರುವವರೆಲ್ಲರೂ ತಮ್ಮ ಸಂಬಳದ ಗಣನೀಯ ಭಾಗವನ್ನು ಬಿಟ್ಟುಕೊಡಲೊಪ್ಪಬೇಕು. ಹೊಸತಾಗಿ ಕೆಲಸಕ್ಕೆ ಸೇರುವವರು ಅತಿ ಕಡಿಮೆ ಸಂಬಳದಲ್ಲಿ ತೃಪ್ತರಾಗಿ ಸೇವಾಬುದ್ಧಿಯುಳ್ಳವರಾಗಬೇಕು ಸರಕಾರಿ ನೌಕರರೆಲ್ಲಾ ತಮ್ಮ ಜೀವನವೆಚ್ಚವನ್ನು ಕಡಿಮೆ ಮಾಡಿ ಸಾದಾ ಮಾಡಬೇಕೆಂಬ ಪ್ರಧಾನ ಮಂತ್ರಿಗಳ ವಿನಂತಿಯು ಸಂದರ್ಭೋಚಿತವೂ ವಿವೇಕಪರವೂ ಆಗಿದೆ. ಶ್ರೀ ರಾಜಗೋಪಾಲಾಚಾರ್ಯರು ನಿರೀಕ್ಷಿಸಿದಂತೆ ಐ. ಸಿ. ಎಸ್. ಅಧಿಕಾರಿಗಳೂ ಈ ಸಂಬಳ ಕಡಿತಕ್ಕೊಪ್ಪಿದರೆ, ಮದ್ಯಪಾನ ನಿಷೇಧದಿಂದುಂಟಾಗುವ ನಷ್ಟವನ್ನು ಭರ್ತಿಮಾಡಲು ಏನೂ ಕಷ್ಟವಾಗಲಾರದು. ಇದು ಹೊರತು ಸರಕಾರದ ಕೆಲವು ಡಿಪಾರ್ಟ್‌ಮೆಂಟುಗಳನ್ನೇ ತೆಗೆದು ಹಾಕಬಹುದು. ಕಾಂಗ್ರೆಸ್ ಮಂತ್ರಿಗಳು ಒಳ್ಳೇ ರೀತಿಯಲ್ಲಿ ತಮ್ಮ ಆಡಳಿತವನ್ನಾರಂಭಿಸಿರುವರು ಅವರಿಗೆ ಜನರು ಬೇಕಾದ ಬೆಂಬಲವಿತ್ತರೆ ಪ್ರಾಂತಿಕ ಆಡಳಿತವನ್ನು ಸಂಪೂರ್ಣವಾಗಿ ಸುಧಾರಿಸಿ, ನಿಜವಾದ ಜನಹಿತವಾಗುವ ಸುದಿನವು ಬಲು ದೂರವಿರಲಾರದು.

---

## ಗಾಂಧಿಜೀಯವರ ದೇಹಸ್ಥಿತಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧಿವೇಶನದ ನಂತರ ಕೆಲವು ದಿನಗಳವರೆಗೆ ಗಾಂಧಿಜೀಯವರಿಗೆ ವಿಶೇಷ ಪರಿಶ್ರಮದ ನಿಮಿತ್ತ ಅಸ್ವಸ್ಥವುಂಟಾಯಿತು. ಅವರ ಮೆದುಳಿಗೆ ವಿಶ್ರಾಂತಿ ಬೇಕೆತ್ತೆಂಬುದಕ್ಕೆ ರಕ್ತದ ಒತ್ತಾಟವು ಹೆಚ್ಚಾದುದೇ ಸೂಚನೆ. ಅವರೀಗ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳುತ್ತಿರುವರು. ಪ್ರತಿ ದಿನ ಸಂಜೆ ಪ್ರಾರ್ಥನೆ ಮುಗಿದ ಮೇಲೆ ಮೌನಧಾರಣೆ ಮಾಡುವರು. ಮಲಗಿಕೊಂಡೇ ಯಾರಿಗಾದರೂ ಭೇಟಿ ಕೊಡುವರು. ಸರ್ದಾರ್ ವಲ್ಲಭಾಯಿ ಪಟೇಲರು ವಾರ್ಧಾದಿಂದ ಸಿವಿಲ್ ಸರ್ಜನರೊಬ್ಬರನ್ನು ಕರೆದೊಯ್ದು ಗಾಂಧಿಜೀಯವರನ್ನು ಪರೀಕ್ಷೆ ಮಾಡಿಸಿರುವರು. ಗಾಂಧಿಜೀಯವರು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರು ಹೇಳಿರುವರು.

---

## ನಮ್ಮ ಚಂದಾದಾರರಲ್ಲಿ ವಿನಂತಿ

ಬರುವ ಸಪ್ಟಂಬರ ತಿಂಗಳ ಆರಂಭಕ್ಕೆ ನವಯುಗವು ಹೊಸ ಆಡಳಿತಕ್ಕೊಳಗಾಗಿ ಮಂಗಳೂರಿಂದ ಉಡುಪಿಗೆ ಬಂದು ಒಂದು ವರ್ಷವಾಗುವುದು. ನಾವು ನವಯುಗವನ್ನು ನಡಿಸುವ ಮಹತ್ತಾದ ಜವಾಬ್ದಾರಿಗೆ ಹೆಗಲೊಡ್ಡುವಾಗಲೇ ವಿದಿತಪಡಿಸಿದಂತೆ ಕೇವಲ ದೇಶ ಸೇವೆಯ ಸ್ಫೂರ್ತಿಯಿಂದ ನಮ್ಮ ಶಕ್ತಿ ಮೀರಿದ ಸೇವೆಯನ್ನು ಕೈಕೊಂಡಿರುವೆವು. ನಮ್ಮಾ ಹೊಸ ಆಡಳಿತದಲ್ಲೇ ಕಾಗದದ ಬೆಲೆಯು ವಿಪರೀತವಾಗಿ ಏರಿ ಬಹಳ ನಷ್ಟವಾಗುವಂತಾದರೂ ನಮ್ಮ ಸದುದ್ದೇಶದ ಮತ್ತು ಜನತೆಯ ಉದಾರಾಶ್ರಯದ ಮೇಲಿನ ದೃಢ ವಿಶ್ವಾಸದಿಂದ ಯಥಾಪ್ರಕಾರ ಸೇವೆಯನ್ನು ಮಾಡುತ್ತಾ ಬಂದಿರುವೆವು. ವರ್ಷಾಂತ್ಯವಾಗಲಿರುವ ಈ ಸಂದರ್ಭದಲ್ಲಿ ನಾವು ನಮ್ಮ ಚಂದಾದಾರರೊಡನೆ ಆಗ್ರಹದಿಂದ ವಿನಂತಿ ಮಾಡಿಕೊಳ್ಳುವುದೇನಂದರೆ, ಇಷ್ಟರ ವರೆಗೆ ತಮ್ಮ ಚಂದಾಹಣ ಕೊಡದವರೆಲ್ಲಾ ಆದಷ್ಟು ಬೇಗನೆ ಮುಟ್ಟಿಸುವುದು ಮಾತ್ರವಲ್ಲದೆ, ಸಾಧ್ಯವಾದಷ್ಟು ಮಟ್ಟಿಗೆ ಹೊಸ ಚಂದಾದಾರರನ್ನೂ ಸೇರಿಸಿ ನಮಗೆ ಸಹಾಯ ಮಾಡಬೇಕೆಂದು ನಾವು ನೋಟೀಸು ಕೊಟ್ಟು, ಕಾಗದ ಬರೆದು ಬಾರಿ ಬಾರಿ ವಿನಂತಿ ಮಾಡಿಕೊಂಡರೂ ನಮ್ಮ ಇನ್ನೂ ಹಲವು ಮಂದಿ ಚಂದಾದಾರರು ತಮ್ಮ ಚಂದಾ ಹಣ ತೆರದಿರುವುದು ಶೋಚನೀಯವಿದೆ ಇನ್ನಾದರೂ ಅವರು ದಯಮಾಡಿ ತಮ್ಮ ಚಂದಾ ಹಣ ಬಾಕಿಯನ್ನು ಕೂಡಲೆ ಕೊಡಬೇಕಾಗಿ ಕೇಳಿಕೊಳ್ಳುತ್ತೇವೆ. ವೃಥಾ ನಮ್ಮನ್ನೂ ಟಪ್ಪಾಲು ವೆಚ್ಚಕ್ಕೆ ಗುರಿಮಾಡುವುದರಿಂದ ಮತ್ತಷ್ಟು ನಷ್ಟಪಡಿಸಿದಂತಾಗುವುದು. ಪತ್ರಿಕೆ ಬೇಡವಾದವರು ತಮ್ಮ ಬಾಕಿ ಚಂದಾ ಹಣವನ್ನು ಪಾವತಿ ಮಾಡಿ ನಮಗೆ ತಿಳಿಸಬೇಕಾಗಿ ಅಪೇಕ್ಷಿಸುತ್ತೇವೆ. ನವಯುಗವು ಯಾವ ಆಶೆಯ ಹಂಗು ದಾಕ್ಷಿಣ್ಯಕ್ಕೂ ಸಂಕುಚಿತತೆಗೂ ಬಲಿಬೀಳದೆ ನಿರ್ಭೀತವಾದ ವಿಶಿಷ್ಟತ್ವೇಯದಿಂದ ಮುಂದಡಿಯಿಡುತ್ತಾ ಹೋಗಿರುವಾಗ ನಮ್ಮ ಚಂದಾದಾರರು ಅದಕ್ಕೆ ಉದಾರಾಶ್ರಯವಿತ್ತು ಅದರಅಭಿವೃದ್ಧಿಯಲ್ಲಿ ಪಾಲು ಪಡೆಯದಿರಲಾರರೆಂದು ನಂಬುತ್ತೇವೆ.

**ನಮ್ಮ ಪ್ರತಿನಿಧಿಗಳ ಸಂಚಾರ**

**ಕಾರ್ಕಳ ಮತ್ತು ಮಂಗಳೂರು.**

ಈ ವಾರದಲ್ಲಿ ನಮ್ಮ ಪ್ರತಿನಿಧಿಗಳು ಕಾರ್ಕಳ ಮತ್ತು ಮಂಗಳೂರಿಗೆ ಬರುವರು ನಮ್ಮ ಕಾರ್ಕಳ ಮತ್ತು ಮಂಗಳೂರ ಚಂದಾದಾರರೂ ಜಾಹೀರಾತುದಾರರೂ ಬಾಕಿ ಇರುವ ಹಣವನ್ನು ದಯವಿಟ್ಟು ಅವರೊಡನೆ ಕೊಡಬೇಕಾಗಿ ಅಪೇಕ್ಷಿಸುತ್ತೇವೆ.

**ಮೆನೇಜರ್, ನವಯುಗ.**

ಸ್ವದೇಶ

# ಮೆಡಿಕಲ್ ಕೊಲೆಜಿನ ಪ್ರಥಮ ಹಿಂದೀ ಪ್ರಿನ್ಸಿಪಾಲರು, ಒರಿಸ್ಸ ಎಸೆಂಬ್ಲಿ ಸಭೆ, ನೋಟು ಕಳವು, ಕೇಂದ್ರ ಎಸೆಂಬ್ಲಿ ಚುನಾವಣೆ, ಬೆಲ್ಫಾಸ್ಟಿಗೆ ಬ್ರಿಟಿಷ್ ಚಕ್ರವರ್ತಿಗಳ ಸಂದರ್ಶನ.

ವಿದೇಶ

## ಮೆಡಿಕಲ್ ಕೋಲೇಜಿನ ಪ್ರಥಮ ಹಿಂದೀ ಪ್ರಿನ್ಸಿಪಾಲರು

ಯಾವಾಗಲೂ ಯುರೋಪಿಯನ್ ಐ. ಎಮ್. ಎಸ್. ಆಫೀಸರರೇ ಮದ್ರಾಸ್ ಮೆಡಿಕಲ ಕೋಲೇಜಿನ ಪ್ರಿನ್ಸಿಪಾಲರಾಗಿ ಆರಿಸಲ್ಪಡುತ್ತಿದ್ದರು. ಕಾಂಗ್ರೆಸ್ ಮಂತ್ರಿ ಮಂಡಲವು, ಮೆಡಿಕಲ್ ಕೋಲೇಜಿನ ಹಿರಿಯ ಪ್ರೊಫೆಸರರಲ್ಲೊಬ್ಬರಾದ ಡಾಕ್ಟರ್ ಲಕ್ಷ್ಮಣಸ್ವಾಮಿ ಮುದಲಿಯಾರರನ್ನು ಮೆಡಿಕಲ್ ಕೋಲೇಜಿನ ಪ್ರಿನ್ಸಿಪಾಲರಾಗಿ ಆಕ್ಟ್ ಮಾಡಲು ನೇಮಿಸಿರುವುದು. ಇದೀಗ ಪ್ರಥಮವಾಗಿ ಹಿಂದೀಯರು ಈ ಹುದ್ದೆಗೆ ನೇಮಿಸಲ್ಪಡುವುದು. ಇದು ಹೊಂತು ಡಾಕ್ಟರ್ ಲಕ್ಷ್ಮಣಸ್ವಾಮಿಯವರು ಜಸ್ಟಿಸ್ ಪಕ್ಷೀಯರು. ಜಸ್ಟಿಸ್ ಪಕ್ಷದ ಪ್ರಮುಖ ಮುಖಂಡರಲ್ಲೊಬ್ಬರಾದ ಶ್ರೀ| ರಾಮಸ್ವಾಮಿ ಮುದಲಿಯಾರರ ಸಹೋದರರು.

## ಒರಿಸ್ಸ ಎಸೆಂಬ್ಲಿ ಸಭೆಯು

ಜುಲ್ಯಾ ತಾ ೨೮ರಲ್ಲಿ ಶ್ರೀ| ವಿಚಿತ್ರಾನಂದ ದಾಸರ ಅಧ್ಯಕ್ಷತೆಯಲ್ಲಿ ನಡೆದು ಕಾಂಗ್ರೆಸ್ ಉಮೇದ್ವಾರಿಯಾದ ಶ್ರೀ| ಮುಕುಂದ ಪ್ರಸಾದ ದಾಸರು ಪ್ರತಿಸ್ಪರ್ಧಿಯಿಲ್ಲದೆ ಎಸೆಂಬ್ಲಿಯ ಸ್ಪೀಕರರಾಗಿ ಆರಿಸಲ್ಪಟ್ಟಿರುವರು. ಆ ಮೇಲೆ ಎಸೆಂಬ್ಲಿ ಸಭೆ ಆರಂಭವಾದಾಗ ಸದಸ್ಯರಲ್ಲೊಬ್ಬರಾದ ಶ್ರೀ| ನಂದ ಕಿಶೋರ್ ದಾಸರು ವಂದೇ ಮಾತರಂ ಹಾಡಿದರು. ಈ ಸಂದರ್ಭದಲ್ಲಿ ಯುರೋಪಿಯನ್ ಸೆಕ್ರೆಟರಿಗಳ ಸಮೇತವಾಗಿ ಎಲ್ಲರೂ ಎದ್ದು ನಿಂತರು.

## ರೂ. 25000ದ ನೋಟು ಕಳವು

ಮದ್ರಾಸಿನ ತ್ರಿವೆಂಕೂರು ನೇಶನಲ್ ಬೇಂಕಿನವರು ತಮ್ಮ ಕೊಲೊಂಬೋ ಶಾಖೆಗೆ ರೂ, ೨೫೦೦೦ದ ಪ್ಯರ ನೋಟು ಕಳುಹಿಸಿದ್ದರು. ಅದು ಕೊಲೊಂಬಕ್ಕೆ ಮುಟ್ಟಿದಾಗ ಅದರೊಳಗೆ ರೂ ೧೦೦೦ದ ಒಂದು ನೋಟು ಮತ್ತು ಕೆಲವು ಗಾಜಿನ ತುಂಡುಗಳು ಮಾತ್ರ ಇದ್ದುವು. ಬೇಂಕಿನ ಅಧಿಕಾರಿಗಳು ಪೋಲೀಸರಿಗೆ ಫಿರ್ಯಾದಿ ಕೊಟ್ಟು ಪತ್ತೆ ನಡೆಯಿತು. ಪೋಲೀಸರು ಈ ಸಂಬಂಧವಾಗಿ ಬೇಂಕಿನ ೩ ಮಂದಿ ಜವಾನರನ್ನು ದಸ್ತಗಿರಿಮಾಡಿ, ಒಂದು ಟ್ರಂಕಿನೊಳಗಿದ್ದ ರೂ. ೨೪೩೭೦ನ್ನು ಪಡೆದಿರುವರು. ಈ ಜವಾನರು ಪಾರ್ಸೆಲು ಮಾಡಕೊಟ್ಟ ಪೆಟ್ಟಿಗೆಯನ್ನು ಬದಲಾಯಿಸಿ ಇನ್ನೊಂದು ಟಿನ್ ಪೆಟ್ಟಿಗೆಯನ್ನು ಕೊಲಂಬಕ್ಕೆ ಕಳುಹಿಸಿದ್ದರು.

## ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಇದೇ ತಾ. ೧೭ರ ಮತ್ತು ಅನಂತರದ ದಿನಗಳಲ್ಲಿ ವಾರ್ಧಾದಲ್ಲಿ ನಡೆಯಲಿರುವುದೆಂದು ಜನರಲ್ ಸೆಕ್ರೆಟರಿಯವರು ಪ್ರಕಟಪಡಿಸಿರುತ್ತಾರೆ.

## ಅಂಡಮಾನ್ ಕೈದಿಗಳ ಉಪವಾಸ

ದ ಕುರಿತು ಕಲ್ಕತ್ತಾದಲ್ಲಿ ಬಹಳ ಚಳವಳವುಂಟಾಗಿರುವುದು. ಕಾಂಗ್ರೆಸಿನವರೂ ಇತರರೂ ಒಟ್ಟುಸೇರಿ ಸಾರ್ವಜನಿಕ ಸಭೆ ನಡಿಸಿ ಸರಕಾರದ ವರ್ತನೆಯನ್ನು ನಿಷೇಧಿಸುವ ಏರ್ಪಾಡಾಗಿರುವುದು. ಕವೀಂದ್ರ ರವೀಂದ್ರರೇ ಮೊದಲಾದವರು ಇದಕ್ಕೆ ಪ್ರೋತ್ಸಾಹಕೊಟ್ಟಿರುವರು. ಅಂಡಮಾನಿಗೆ ಅನಧಿಕಾರಿ ಪ್ರತಿನಿಧಿಗಳಬ್ಬರನ್ನು ಕಳುಹಿಸುವ ಆಲೋಚನೆ ನಡೆದಿರುವುದು.

## ಮಿ ಬ್ರೆಕೆನ್ ಬರಿಯವರು ಖಾದಿ ಡ್ರೆಸ್ಸಿನಲ್ಲಿ

ಮದ್ರಾಸ್ ಸರಕಾರದ ಮುಖ್ಯ ಸೆಕ್ರೆಟರಿಗಳಾದ ಮಿ. ಸಿ, ಎಫ್, ಬ್ರೆಕೆನ್‌ಬರಿಯವರು ಇದೇ ತಾ ೩೦ರಲ್ಲಿ ಖಾದಿ ಸೂಟ್ ಹಾಕಿಕೊಂಡು ಆಫೀಸಿಗೆ ಬಂದಿದ್ದರು. ಕಾಸುಟ್ಟ ಖಾದಿಯು ಒಳ್ಳೇದೂ ನಾಜೂಕಾಗಿಯೂ ಇದೆಯೆಂದು ಅವರ ಅಭಿಪ್ರಾಯ. ಸ್ವಲ್ಪ ಬೆಲೆ ಹೆಚ್ಚಾಯಿತೆಂದು ಅವರ ಆಕ್ಷೇಪ. ಪ್ರಧಾನ ಮಂತ್ರಿಯವರು, ಅಧಿಕಾರವಹಿಸಿದೊಡನೆಯೇ ಮಿ ಬ್ರೆಕೆನ ರವರಿಗಿತ್ತ ಖಾದಿ ವಸ್ತ್ರದಿಂದ ಈ ಸುಟ್ ತಯಾರು ಮಾಡಲ್ಪಟ್ಟಿತ್ತು.

## ಅಧಿಕಾರಿಗಳ ತಲಬಿನ ಕಡಿತ

ಇದೇ ತಾ. ೭ರಲ್ಲಿ ಮದ್ರಾಸಿನ ಪ್ರಧಾನ ಮಂತ್ರಿಗಳಾದ ಶ್ರೀ| ಸಿ. ರಾಜಗೋಪಾಲಾಚಾರ್ಯರು ಮುಸಲ್ಮಾನ ಪದವಿಧರರನ್ನು ಸಂಬೋಧಿಸಿ ಮಾತಾಡುವಾಗ ಜನತೆಯ ಕಷ್ಟನಿವಾರಣೆಗಾಗಿ ರೂ. 100ಕ್ಕಿಂತ ಹೆಚ್ಚಿನ ಸಂಬಳವುಳ್ಳ ಸರಕಾರಿ ನೌಕರರು ತಮ್ಮ ಸಂಬಳದಲ್ಲಿ ಕಡಿತಮಾಡಲು ಸ್ವೇಚ್ಛೆಯಿಂದೊಪ್ಪಬೇಕು. ಹೊಸತಾಗಿ ಕೆಲಸಕ್ಕೆ ಸೇರುವವರು ಕಡಿಮೆ ಸಂಬಳಕ್ಕೆ ಸೇರಲೊಪ್ಪಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಂಡಿರುವರು ಮತ್ತು ಐ. ಸಿ. ಎಸ್. ಅಧಿಕಾರಿಗಳೂ ತಮ್ಮ ಸಂಬಳದಲ್ಲಿ ಕಡಿತ ಮಾಡಲು ಸ್ವಸಂತೋಷದಿಂದ ಒಪ್ಪದಿರಲಾರರೆಂದು ಹೇಳಿರುವರು

## ಉಪ್ಪಿನ ರಿಯಾಯತಿ

ಗಾಂಧಿ ಅರ್ವಿನ್ ಒಡಂಬಡಿಕೆಯ ಮೇರೆಗೆ, ಹಳ್ಳಿಗರು ತಮ್ಮ ಉಪಯೋಗಕ್ಕಾಗಿ ಉಪ್ಪು ತಯಾರಿಸಬಹುದೆಂದು ಕೊಡಲ್ಪಟ್ಟ ರಿಯಾಯತಿಯನ್ನು, ಅವನ್ನು ಹಳ್ಳಿಗರು ದುರುಪಯೋಗಪಡಿಸಿ ಹೇರಳ ಉಪ್ಪು ತಯಾರಿಸಿ ಮಾರುವರೆಂಬ ಕಾರಣದಿಂದ ಮದ್ರಾಸಿನಲ್ಲಿ ಹಿಂತೆಗೆಯಲ್ಪಟ್ಟಿತ್ತು. ಕರಾವಳಿಯ ಹಳ್ಳಿಗರನ್ನು ತಮ್ಮ ಉಪಯೋಗಕ್ಕಾಗಿ ಉಪ್ಪು ತಯಾರಿಸಬಿಡುವ ಕುರಿತು ಮದ್ರಾಸ್ ಸರಕಾರವು ಈಗ ಆಲೋಚಿಸುತ್ತಿರುವುದು.

**ರಾಷ್ಟ್ರೀಯ ಧ್ವಜದ ಮೇಲೆ ನಿಷೇಧವಿಲ್ಲ**—ಮುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಮೇಲೆ ರಾಷ್ಟ್ರೀಯಧ್ವಜವು ಏರಿಸಲ್ಪಡಕೂಡದೆಂಬ ಮೊದಲಿನ ಸರಕಾರದ ನಿಷೇಧವು ಇನ್ನು ಜ್ಯಾರಿಗೆ ತರಲ್ಪಡ ವುದಿಲ್ಲೆಂದು ತಿಳಿದು ಬರುತ್ತದೆ ಸರಕಾರದ ಸೊತ್ತಲ್ಲದ ಸಾರ್ವಜನಿಕ ಕಟ್ಟಡಗಳಲ್ಲಿ ರಾಷ್ಟ್ರೀಯ ಧ್ವಜವನ್ನೇರಿಸುವುದನ್ನು ನಿಷೇಧಿಸಕೂಡದೆಂದು ಸರಕಾರದ ಅಭಿಪ್ರಾಯವಿರುವಂತಿದೆ ಆದರೆ ಯಾವಾಗಲೂ ಕಟ್ಟಡಗಳ ಮೇಲೆ ರಾಷ್ಟ್ರೀಯಧ್ವಜವನ್ನೇರಿಸುವುದರಿಂದ ಅದರ ಪ್ರಾಮುಖ್ಯತೆಯು ಹೋಗುವಂತಾಗಬಹುದೆಂದೂ ಆಗಾಗ ಯೋಗ್ಯ ಸಂದರ್ಭಗಳಲ್ಲಿ ಮಾತ್ರ ಅದನ್ನೇರಿಸಬೇಕೆಂದೂ ಕಾಂಗ್ರೆಸ್ಸಿನ ಕೆಲಮಂದಿ ಅಧಿಕಾರಿಗಳ ಅಭಿಮತ.

## ಕೇಂದ್ರ ಎಸೆಂಬ್ಲಿಯ ಚುನಾವಣೆ

ಆಂಧ್ರ ದೇಶದ ಗೋದಾವರಿ ಮತ್ತು ಕೃಷ್ಣಾ ಜಿಲ್ಲೆಗಳ ಮತ ಸಮುದಾಯದಿಂದ ಕೇಂದ್ರ ಎಸೆಂಬ್ಲಿಗೆ ಶ್ರೀ. ನಾಗೇಶ್ವರರಾಯರ ಸ್ಥಾನದಲ್ಲಿ ಒಬ್ಬ ಮೆಂಬರರನ್ನು ಆರಿಸಲು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದ್ವಾರರಾದ ಶ್ರೀ. ಎಮ್. ತಿರುಮಲ ರಾಯರಿಗೆ ೧೭೯೯೦ ಮತ್ತು ಅವರ ವಿರೋಧಿಯಾದ ಶ್ರೀ| ಸಿ. ವಿ. ವೆಂಕಟಕೃಷ್ಣಯ್ಯನವರಿಗೆ ೩೬೬೭ ವೋಟುಗಳು ದೊರೆತಿರುವವು

---

## ವಿದೇಶ

## ಬೆಲ್ಫಾಸ್ಟಿಗೆ ಬ್ರಿಟಿಷ್ ಚಕ್ರವರ್ತಿಗಳ ಸಂದರ್ಶನ

ಆಯರ್ಲೆಂಡಿನ ಒಂದು ಭಾಗವಾದ ಅಲ್‌ಸ್ಟರಿನ ಪ್ರಧಾನ ಪಟ್ಟಣವಾದ ಬೆಲ್ಫಾಸ್ಟಿಗೆ ಜುಲೈ ೨೮ರಲ್ಲಿ ಬ್ರಿಟಿಷ್ ಚಕ್ರವರ್ತಿಗಳು ಮತ್ತು ಚಕ್ರವರ್ತಿನಿಯರು ಹೋದಾಗ ಸುಮಾರು ೫೫,೦೦೦ಮಂದಿ ನೆರೆದು ಅವರಿಗೆ ಪ್ರಚಂಡ ಸ್ವಾಗತವಿತ್ತರು. ಈ ಸಂದರ್ಭದಲ್ಲಿ ಅಲ್‌ಸ್ಟರಿನ ಗಡಿಪ್ರದೇಶದಲ್ಲಿ ಬ್ರಿಟಿಷ್ ಸಾರ್ವಭೌಮತನದ ವಿರೋಧಿಗಳಾದ ಐಯರ್ಲೆಂಡಿನ ರಿಪಬ್ಲಿಕನ್ ಪಕ್ಷೀಯರು ಕೆಲವು ಮನೆಗಳನ್ನು ಸುಟ್ಟುಹಾಕಿ, ಕೈಬೇ ಸಂಕವೊಂದನ್ನು ಸ್ಫೋಟಗೊಳಿಸಿ ಅತ್ಯಾಚಾರ ಮಾಡಿರುವರು. ಪೋಲೀಸರು ಅಸಹಾಯಕರಾಗಿ ನಿಂತು ಅದನ್ನೆಲ್ಲಾ ನೋಡುತ್ತಲಿದ್ದರು. ಕಿಲೀನ್‌ಎಂಬಲ್ಲಿಯ ಪೋಲೀಸ್ ಠಾಣೆಯ ಮೇಲೆಯೇ ಮುತ್ತಿಗೆ ಹಾಕಲ್ಪಟ್ಟಿತ್ತು. ಈ ಸಂಬಂಧವಾಗಿ ೫ ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು ಇದುಹೊರತು ಟ್ರೈನು ಕಟ್ಟಡಗಳನ್ನು ಮುರಿದುಹಾಕುವ ಇನ್ನೂ ಕೆಲವು ಒಳಸಂಚುಗಳು ನಡೆದಿದ್ದುವು. ಬ್ರಿಟಿಷ ಚಕ್ರವರ್ತಿಗಳು ಹಗಲಲ್ಲಿ ಹೋಗಿ ಅಂದೇ ಹಿಂತಿರುಗಿರುವರು

## ಉತ್ತರ ಚೀನಕ್ಕೆ ಸಹಾಯ

ನಾಂಕಿಂಗಿನ ಕೇಂದ್ರ ಸರಕಾರದ ಸೈನಿಕರು ಉತ್ತರದ 29ನೇ ಸೇನೆಯೊಂದಿಗೆ ಸಹಕರಿಸಿ ಜಪಾನರನ್ನು ಇದಿರಿಸ ಹತ್ತಿರುವರು. ಕೇಂದ್ರ ಸರಕಾರದ ಹೆಚ್ಚಿನ ಸೇನೆಯು ಉತ್ತರಕ್ಕೆ ಹೋಗಿ ಅಲ್ಲಲ್ಲಿ ಪ್ರಮುಖ್ಯ ಸ್ಥಳಗಳಲ್ಲಿ ಸಂಗ್ರಹವಾಗಿರುವುದು

ಶಾಂಘಾಯಿಯಲ್ಲಿ ಜಪಾನಿನ ಸಾಮಾನುಗಳನ್ನು ಬಹಿಷ್ಕರಿಸುವ ಚಳವಳವು ನಡೆದಿದೆ. ಕಳ್ಳಾಟಿಕೆಯಿಂದ ಮಾರಲ್ಪಡುವ ಜಪಾನ್ ಸಾಮಾನುಗಳನ್ನು ಬಹಿಷ್ಕರಿಸುವ ಚಳವಳವು ಇಡೀ ಚೀನದಲ್ಲೆಲ್ಲಾ ಪ್ರಬಲವಾಗಿ ನಡೆದಿರುವುದು 12 ಮಿಲ್ಯ ಡಾಲರು ಬೆಲೆಯ ಸಾಮಾನುಗಳು ಕಳೆದ ವರ್ಷ ಕಳ್ಳಾಟಿಕೆಯಿಂದ ಚೀನಕ್ಕೆ ತರಲ್ಪಟ್ಟಿದ್ದುವಂತೆ. ವಿದ್ಯಾರ್ಥಿಗಳೆಲ್ಲರೂ ಇಂತಹ ಸಾಮಾನುಗಳನ್ನು ತೆಗೆದುಕೊಳ್ಳಬಾರದೆಂದು ಪ್ರತಿಜ್ಞೆ ಮಾಡುತ್ತಿರುವರು

ಸ್ತ್ರೀಯರೆಲ್ಲರೂ ಸ್ವಾಭಿಮಾನದಿಂದ ಸರಕಾರಕ್ಕೆ ಸಹಾಯಮಾಡಿ ಪರಾಜಯ ಮತ್ತು ಗುಲಾಮಗಿರಿಯಿಂದ ಚೀನವನ್ನು ರಕ್ಷಿಸಬೇಕೆಂದು ಜನರಲ್ ಚಿಯಂಗರ ಪತ್ನಿ ಮೇಡಮ್ ಚಿಯಂಗರು ಚೀನೀ ಸ್ತ್ರೀಯರೊಡನೆಲ್ಲಾ ವಿನಂತಿ ಮಾಡಿಕೊಂಡಿರುವರು.

ಜರ್ಮನಿಯ ಹಿಟ್ಲರ್ ಯುವಕ ಸಂಘದವರು ಬೆಳೆಕೊಯಿಲಿನ ಕೆಲಸ ಮಾಡುವುದಕ್ಕಾಗಿ 250 ಸಾವಿರಕ್ಕಿಂತಲೂ ಮಿಕ್ಕಿದ ತರುಣ ತರುಣಿಯರನ್ನೊಟ್ಟುಗೂಡಿಸಿರುವರು. ಸಾವಿರಾರು ಮಂದಿ 43 ಮಿಲ್ಯ ಟನ್ ಬಟಾಟೆಗಳನ್ನೊಟ್ಟುಗೂಡಿಸಹತ್ತಿರುವರು. ಈ ಬಟಾಟೆಗಳ ಹಿಟ್ಟನ್ನು ಇತರ ಹಿಟ್ಟಿನೊಂದಿಗೆ ಸೇರಿಸಿ ರೊಟ್ಟಿ ತಯಾರಿಸಲಾಗುವುದು

ಸ್ಪೈನಿನ ಅಂತಃಕಲಹದ ವಿಷಯದಲ್ಲಿ ಇಂಗ್ಲೆಂಡಿನ ಸೂಚನೆಗಳಿಗೆ ಇಟಲಿ, ಜರ್ಮನಿ ಮತ್ತು ರಷ್ಯಗಳೊಪ್ಪದೆ ಯಾವ ಇತ್ಯರ್ಥವೂ ಆಗಿರುವುದಿಲ್ಲ. ಜನರಲ್ ಫ್ರೇಂಕೋರವರ ಸರಕಾರವನ್ನು ಅಂಗೀಕರಿಸಬೇಕೆಂಬುದಕ್ಕೆ ರಷ್ಯವು ಆಕ್ಷೇಪಿಸಿರುವುದು ಸ್ಪೈನಿನಿಂದ ವಿದೇಶೀಯ ಸ್ವಯಂಸೇವಕರನ್ನು ಹಿಂದೆ ಕರೆಯಬೇಕೆಂಬುದನ್ನು ಇಟಲಿಯು ವಿರೋಧಿಸಿರುವುದು.

---

## ಬಣ್ಣದ ಪೆಟ್ಟಿಗೆಯ ಓಟಿನ ಕ್ರಮ

ಕಳೆದ ಎಸೆಂಬ್ಲಿ ಚುನಾವಣೆಯಂತೆಯೇ ಲೋಕಲ್ ಬೋರ್ಡು ಚುನಾವಣೆಯಲ್ಲಿಯೂ ಬಣ್ಣದ ಪೆಟ್ಟಿಗೆಯ ಕ್ರಮವನ್ನು ಜ್ಯಾರಿಗೆ ತರುವ ಕ್ರಮದ ಕುರಿತು ಕಾಂಗ್ರೆಸ್ ಮಂತ್ರಿಮಂಡಲವು ಆಲೋಚಿಸುತ್ತಿರುವುದು ಈ ಸಂಬಂಧವಾಗಿ ಲೋಕಲ್ ಬೋರ್ಡ್ಸ್ ಆಕ್ಟಿನ ನಿಯಮಗಳನ್ನು ಬದಲಾಯಿಸಲಾಗುವುದು ಪ್ರೆಸಿಡೆಂಟರುಗಳ ಚುನಾವಣೆ ಕೂಡಾ ಬಣ್ಣದ ಪೆಟ್ಟಿಗೆಯ ಕ್ರಮದಲ್ಲೇ ನಡೆಯಬೇಕೆಂದು ಸರಕಾರದ ಅಭಿಪ್ರಾಯವಿರುವುದು. ಸದ್ಯ ನಡೆಯಲಿರುವ ಚುನಾವಣೆಗಳು ಆಕ್ಟೋಬರ ಎರಡನೇ ವಾರಕ್ಕೆ ಮುಂದುವರಿಸಲ್ಪಡುವವು ಬಣ್ಣದಪೆಟ್ಟಿಗೆಯ ಓಟಿನ ಕ್ರಮವನ್ನು ಜ್ಯಾರಿಗೆ ತರಲು ಬೇಕಾದ ಸಿದ್ಧತೆ ಮಾಡಬೇಕೆಂದು ಲೋಕಲ್ ಬೋರ್ಡು ಅಧಿಕಾರಿಗಳಿಗೆ ಹುಕುಮು ಕೊಡೋಣಾಗಿದೆ ಎಂದು ತಿಳಿದು ಬರುತ್ತದೆ


# THE UDIPI BANK LTD.

## UDIPI

ALL KINDS OF BANKING BUSINESS TRANSACTED
PERSONAL ATTENTION PAID TO ALL ENQUIRIES

ESTD. 1925

## ದಕ್ಷಿಣ ಕನ್ನಡ

### ಕಟಪಾಡಿ

[illegible] ನೆಪ್ಚೂನ್ ಕ್ಲಬ್ ಎಂಬ [illegible] ಯುವಕರು [illegible] ಶ್ರೀ [illegible] ಮತ್ತು [illegible] ಸ್ಥಳೀಯ [illegible] ಕಾಂಗ್ರೆಸ್ [illegible] ದಕ್ಷಿಣ ಕನ್ನಡ ಜಿಲ್ಲೆ [illegible] ಅಭಿನಂದಿ [illegible]

**ಕಟಪಾಡಿ ಕೇಂದ್ರ ಕಾಂಗ್ರೆಸ್ ಕಮಿಟಿ**—[illegible] ಸಭೆಯಲ್ಲಿ, [illegible], ಮೂಡಬೆಟ್ಟು, ಮಟ್ಟು, [illegible] ಕೇಂದ್ರ ಕಾಂಗ್ರೆಸ್ ಕಮಿಟಿಯ [illegible] ಅವರನ್ನು [illegible] ಕಟಪಾಡಿಯಲ್ಲಿ [illegible]

**ಹಿಂದರ್ಗಳ್ಳಿ**—ಇಲ್ಲಿ [illegible] ಸರಿಕಕ್ಷಕ (ಪಟ್ಟೇಲ)ಗಳ ಲ್ಲಿ ಒಂದನ್ನು ಹರಿಜನ ಜಾತಿಯ [illegible] ಇನ್ನೊಂದನ್ನು ಕುಂದಾಪುರ ಪೋಸ್ಟ್ ಆಫೀಸ್ ಕ್ಲಾರ್ಕ [illegible] ಪ್ರಕಾರ [illegible] ಕೊಂಡಿರುವರು ಆ ಪ್ರಾಂತದ ಜನರಿಗೆ ಇದರಿಂದ ದೊಡ್ಡ ಸಂಕಟವೊಂದನ್ನು ನಿವಾರಿಸಿದ ಹಾಗಾಯಿತು

**ಕುಂಬಳೆ**—ತಾ ೧-೮-೩೭ರಲ್ಲಿ ರಾಷ್ಟ್ರಪತಿಗಳ [illegible] ಕಾಂಗ್ರೆಸ್ ದಿನಾಚರಣೆಯು ಆಚರಿಸಲ್ಪಟ್ಟಿತು [illegible] ರಾಷ್ಟ್ರೀಯ ಗೀತೆ ಮತ್ತು [illegible] ಸ್ಥಳೀಯ ಪಂಚಾಯತ [illegible] ಸಂದೇಶ [illegible] ಪತ್ರಿಕೆಯ ಸಂಪಾದಕರಾದ ಶ್ರೀ [illegible] ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸ [illegible] ಕಾಂಗ್ರೆಸ್ಸಿನವರು ಅಧಿಕಾರ [illegible] ವರ್ಕಿಂಗ್ ಕ [illegible] ಮಂತ್ರಿಮಂಡಳದಲ್ಲಿ ಸಂಪೂರ್ಣ ವಿಶ್ವಾಸ [illegible]

ಈ ಸಂದರ್ಭ [illegible] ಕಾಂಗ್ರೆಸ್ಸಿನೊಡನೆ ಸಹಕರಿ [illegible]

[illegible]

**ಬೈಲೂರು**—[illegible] ಸಂಯುಕ್ತ ಕಾಂಗ್ರೆಸ್ ಕಮಿಟಿಯ [illegible] ಅಧಿವೇಶನವು ತಾ [illegible] ಶ್ರೀ ಜಿ ನಾಗಪ್ಪ ಹೆಗ್ಡೆ [illegible] ಅಧ್ಯಕ್ಷತೆಯಲ್ಲಿ ನಡೆದು ಧ್ವಜ ವಂದನೆ ಮಾಡಿದ ಬಳಿಕ, ಮೊದಲಿನ ಕಾರ್ಯಕ್ರಮಗಳು ಜರಗಿದ ಮೇಲೆ ಶ್ರೀ ಶಿವ ಸಂಕಪ್ಪ ಹೆಗ್ಡೆ [illegible] ಕಾರ್ಕಳ ವಕೀಲ್ ಶ್ರೀ ಕೆ ಲಕ್ಷ್ಮಣ ಕುಡ್ವರು ಮತ್ತು ಶ್ರೀ [illegible] ಸಂಜೀವ ಶೆಟ್ಟಿ, [illegible] ಅವರು ಕಾಂಗ್ರೆಸ್ ಧ್ಯೇಯವನ್ನು ಪಾಲಿಸುವ ಕ್ರಮ, ಗ್ರಾಮಸಂಘಟನೆ ಇನ್ನೇ ಮೊದಲಾದ ವಿಷಯಗಳ ಮೇಲೆ ಭಾಷಣಕೊಟ್ಟದ್ದಲ್ಲದೆ ಶ್ರೀ ಕುಡ್ವರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಸಭೆಯಲ್ಲಿ ಪಾಸ್‌ಮಾಡಬೇಕಾಗುವ ನಿರ್ಣಯಗಳ ವಿಷಯ ಸವಿಸ್ತಾರವಾಗಿ ವಿವರಿಸಿ ಹೇಳಿದ ಮೇಲೆಗೆ ಆ ನಿರ್ಣಯಗಳು ಸರ್ವಸಮ್ಮತಿಯಿಂದ ಮಂಜೂರುಮಾಡಲಾದುವು

**ಶಿಲಿವಸೂರು**—ಸ್ಥಳೀಕ ಬೋ ಹಾ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯು ರಾ| ರಾಮಯ್ಯ ನ್ಯಾಕ ಬಿ ಎ, ಎಲ ಟಿ ಅವರುಗಳವರಿಂದ ಜರಗಿಸಲ್ಪಟ್ಟಿತು ಶಾಲೆಯು ವ್ಯವಸ್ಥಿತವಾಗಿ ನಡೆಯುತ್ತಿರುವುದನ್ನು ನೋಡಿ ಬಹಳ ಸಂತೋಷ ಪಟ್ಟದ್ದಲ್ಲದೆ ೫ರಿಂದ ವರೆಗೆ ವಿದ್ಯಾರ್ಥಿಗಳಿರುವ ಈ ಶಾಲೆಯ ಸ್ಥಳಾಭಾವ ಅಧ್ಯಾಪಕರ ಅಭಾವಗಳನ್ನೆಲ್ಲಾ ನೀಗಲಾಡಿಸುವಲ್ಲಿ ತಮ್ಮ ರಿಪೋರ್ಟಿನಲ್ಲಿಮೊಂದು ಮಾಡಿರಿ ಶಾಲೆಯಾಗಲಿಕ್ಕೆ ಯಾತ ತೊಂದರೆಯೂ ಇಲ್ಲದಿಕ್ಕೆಂದು ಮಾನ್ಯ ಇನ್ಸಪೆಕ್ಟರವರು ಅಭಿಪ್ರಾಯ ಪಟ್ಟಿರುತ್ತಾರೆ ಹೆಣ್ಣುಮಕ್ಕಳಿಗೆ ಉಪ್ಪಿ ಕೃಷ್ಣಾಚಾರ್ಯರವರಿಂದ ಹಾರ್ಮೋನಿಯಮ್ ಶಿಕ್ಷಣವು ದೊರಕುವಂತೆ ವ್ಯವಸ್ಥೆ ಮಾಡಲಾಗಿದೆ

**ಬಂಟರ ಯಾನೆ ನಾಡವರ ಸಂಘ ಬೊಂಬಾಯಿ**—ಈ ಸಂಘದ ಆಡಳಿತ ಮಂಡಳಿಯ ಸಭೆಯು ಕಳೆದ ತಾ ೨೫ಕ್ಕೆ ಬಾಯಿ ಪಾರ್ವತಿ ಬಾಯಿಯ ವರ ಅಧ್ಯಕ್ಷತೆಯಲ್ಲಿ ಜರಗಿತು ಕೆ. ಪಿ ಕೆ ಶೆಟ್ಟಿಯವರ ಬಂದ ರಾಜಿನಾಮೆಯನ್ನು ಹಿಂತೆಗೆದುಕೊಳ್ಳುವ ಹಾಗೆ ಕಾರ್ಯದರ್ಶಿಗಳು ಶೆಟ್ಟಿಗೆ ಉತ್ತರ ಬರೆಯಬೇಕಾಗಿ ನಿರ್ಣಯವಾಯ್ತು ವಿದ್ಯಾರ್ಥಿ ಸುರತ್ಕಲ್ಲಿನ ದೇವಪ್ಪ ಶೆಟ್ಟಿಗೆ ಒಂದು ವರುಷದ ಶಾಲೆಯ ಸಂಬಳವನ್ನು ಕೊಡುವುದಾಗಿ ನಿಶ್ಚಯಿಸಲಾಯಿತು ಮತ್ತು ಸಂಘದ ಲೆಖ್ಖಪತ್ರಗಳನ್ನು ಆಡಿಟರಿಂದ ಪರಿಶೋಧಿಸುವುದರ ಏರ್ಪಾಡಿಗಾಗಿ ರಾ| ಬ್ರಹ್ಮಾವರ ನಾರಾಯಣ ಶೆಟ್ರನ್ನು ನೇಮಿಸಲಾಯಿತು ಸಂಘದ ವರ್ಷಾವಧಿ ಸಭೆಯನ್ನು ಅಗೋಸ್ತು ೨೯ನೇ ಆದಿತ್ಯವಾರ ಜರಗಿಸಬೇಕೆಂದಾಯಿತು ಸ್ವಜಾತಿಯ ಹುಡುಗರಿಗೆ ಧರ್ಮಾರ್ಥವಾಗಿ ಟೈಪಿಂಗ್ ಮತ್ತು ಶೋರ್ಟ್‌ಹೇಂಡ್ ಕಲಿಸುವ ಬಗ್ಗೆ ಸಂಘದಿಂದ ಟೈಪ್‌ರೈಟಿಂಗ್ ಮತ್ತು ಶೋರ್ಟ್‌ಹೇಂಡ್ ಪುಸ್ತಕಗಳನ್ನು ಕೋಟೆಯ ಕೆಂಪ್ಬ್ರು ಪೂಂಜ ಕಂಪೆನಿಯಲ್ಲಿ ಇರಗೊಡಿಸಬೇಕಾಗಿ ನಿರ್ಣಯವಾಯಿತು

### 'ಬಾಲವನ' ಪುತ್ತೂರು

[ನಮ್ಮನಾಡಿಗೇಒಂದುಆದರ್ಶ ಕಲಾಶಾಲೆ]

ಪಾಶ್ಚಿಮಾತ್ಯ ದೇಶಗಳಲ್ಲಿ ಕೊಡಲ್ಪಡುವ ನೂತನ ವಿದ್ಯಾಭ್ಯಾಸ ಕ್ರಮವನ್ನನುಸರಿಸಿ, ನಮ್ಮೂರ ಬಾಲಕರಿಗೂ ಅಂತಹ ವಿದ್ಯಾಭ್ಯಾಸವಾಗಬೇಕೆಂಬ ಹಂಬಲವೇ 'ಬಾಲವನ'ದ ಸ್ಥಾಪನೆಗೆ ಕಾರಣ ಇಲ್ಲಿಯ ಶ್ರೇಷ್ಠ ಕಲಾವಿದರೂ, ವಿದ್ಯಾಭಿಮಾನಿಗಳೂ ಆದ ಶ್ರೀ| ಶಿವರಾಮ ಕಾರಂತರೇ ಅದರ ಸ್ಥಾಪಕರು ಹಲವು ಕಲಾಭಿಮಾನಿಗಳೂ ಅವರಿಗೆ ತನು-ಮನ ಧನಗಳಿಂದ ನೆರವಾದರು. ಆದರೆ ಊರವರ ಪ್ರೋತ್ಸಾಹವಿಲ್ಲದುದರಿಂದ ಅದು ಯಶಸ್ವಿಯಾಗಲಿಲ್ಲ! ನಮ್ಮವರಿಗೆ ಅಂತಹ ಸಂಸ್ಥೆಗಳು ಬೇಕಾಗಿಲ್ಲವೇ? ಅಥವಾ ಇಂದು ದೊರಕುವ ವಿದ್ಯಾಭ್ಯಾಸವೇ 'ಪೂರ್ಣವಾದುದೆಂಬ ಮೂಢನಂಬಿಗೆಯೋ ಹೇಳಬರುವಂತಿಲ್ಲ. ನಮ್ಮದೂ ಒಂದು ಆದರ್ಶ ಜನಾಂಗವಾಗಬೇಕೆಂಬ ಆಸೆಯೇ ನಮ್ಮ ಹೃದಯದಾಳದಲ್ಲಿ ಹುಟ್ಟಿ ಪ್ರವಹಿಸದಿದ್ದರೆ ಇಂತಹ ಸಂಸ್ಥೆಗಳೆಂತು ಹುಟ್ಟುವುವು? ಹುಟ್ಟಿದರೂ ಪೋಷಕರಿರಬೇಡವೇ?

x x x

'ವಿದ್ಯೆ' ಎಂದರೆ ಬರಿಯ ಓದುಬರಹವಲ್ಲ- ಅದರಲ್ಲಿ ಉಚ್ಚ ಧ್ಯೇಯವೊಂದು ಅಡಗಿಕೊಂಡಿದೆ- ಮನುಷ್ಯನನ್ನು ಮನುಷ್ಯನನ್ನಾಗಿಸುವ ಒಂದ ಶ್ರೇಷ್ಠ ಗುಣವಿದೆ! ಅದು ಇಂದು ದೊರಕುವ ವಿದ್ಯೆಯಲ್ಲಿಲ್ಲ. ಅದಿಲ್ಲದ ಹೊರತು ನಮಗೆ ಲೋಕದಲ್ಲಿ ಸ್ಥಾನವಿಲ್ಲ!

ಈಗ ಬಾಲವನ ವಿದ್ಯಾ ಸಂಸ್ಥೆಗೆ ದೊರಕುವ ಪ್ರೋತ್ಸಾಹವು ಅತ್ಯಲ್ಪವಾದುದು. ಇಂತಹ ಪ್ರೋತ್ಸಾಹವು ಸ್ಥಾಪಕರ ಮತ್ತು ವಿದ್ಯಾಭಿಮಾನಿಗಳಾದ ಹಿರಿಯರ ಉತ್ಸಾಹವನ್ನು ಕುಂದಿಸುವುದಲ್ಲದೆ ಬೇರೆಯಲ್ಲ ಹೀಗಾದರೆ ಇಂತಹ ಶಾಲೆಗಳೆಷ್ಟು ಕಾಲ ಸೇವೆಮಾಡಬಹುದೆಂಬ ನಂಬಿಕೆಯು ನನಗೇ ಇಲ್ಲ. ಆದ್ದರಿಂದ ನಮ್ಮೂರವರು, ಇನ್ನು ಮುಂದಾದರೂ ಇಂತಹ ಸಂಸ್ಥೆಗಳಿಗೆ ನೆರವಾಗಿ ವಿದ್ಯಾಭಿವೃದ್ಧಿಯ ಮೂಲಕ ಜನಾಂಗೋದ್ಧಾರ ಕಾರ್ಯದಲ್ಲಿ ಭಾಗಿಗಳಾಗುವರೆಂದು ನನ್ನ ದೃಢ ನಂಬುಗೆ.

**ಮುಂಬಯಿ ಮೊಗವೀರ ಯುವಕ ಸಂಘ**—ದ ದ್ವಿತೀಯ ವರ್ಧಂತ್ಯುತ್ಸವವೂ ಮೊಗವೀರ ಯುವಕ ಸ್ವಯಂ ಸೇವಾದಳದ ಸ್ಥಾಪನೋತ್ಸವವೂ, ಕಳೆದ ತಾ ೧೧—೭—೩೭ರಲ್ಲು ಡಾ ಜಿ ಕೆ ಮುಲ್ಕಿ. ಎಂ. ಬಿ ಬಿ ಎಸ್ ಎಲ್. ಆರ್ ಸಿ ಪಿ (ಲಂಡನ್) ಎಫ್ ಆರ್. ಸಿ (ಎಸ್ಗ್ಲೆಂಡ್)ರವರ ಸನ್ಮಾನ್ಯಧ್ಯಕ್ಷತೆಯಲ್ಲಿ ಸರ್ ಇತಾಂಗೀರ ಸಭಾ ಸದನದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು

**'ಮದ್ಮೆಯ ಮದ್ಮಲ್'**—ಎಂಬ ನಾಟಕ ಬರೆದ ಶ್ರೀ ಕಾಂತಾವರ ಸೇಸು ಮೆಂಡನರಿಗೂ, 'ಮಿಸ್ ಲಲಿತೆ' ಎಂಬ ಪುಸ್ತಕವನ್ನು ಬರೆದ ಮೂಲ್ಕಿ ವಾಮನ ಪುತ್ರನರಿಗೂ ರಜತಪದಕಗಳನ್ನು ಕೊಡಲಾಯಿತು

ಬಳಿಕ ಶ್ರಿಮಾನ್ ಕೆ ಯನ್ ಗ್ಯಾತೊಂಡೆ ಯು ಬಿ ನಾರಾಯಣರಾವ್ ಡಾ. ಯು. ಎಸ್ ರಾವ್, ಕೋಮ್ರೇಡ ಮದನ್ ಶೆಟ್ಟಿ, ಮಿಸೆಸ್ ಕರ್ಕೊಟ್, ರಾ ವಿ ಸತಾರ್ಥಿ, ಶ್ರೀಯುತ ವಾಮನ್ ರಾವ್ ತ್ರಿಲೋಕೆಕಾರ್ ಮತ್ತು ಶ್ರೀ ವೈ. ಕೊರಗಪ್ಪ ಇವರುಗಳು ಯುವಕರಿಂದಾಗತಕ್ಕ ಧಾರ್ಮಿಕ ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳನ್ನು ವಿವರಿಸಿ ಹೇಳಿದ್ದಲ್ಲದೆ ಸಂಘದ ಮತ್ತು ಸೇವಾದಳದ ಅಭಿವೃದ್ಧಿಯನ್ನು ಬಯಸಿ ಸುರಸ ಭಾಷಣಗಳನ್ನಿತ್ತರು

ತದನಂತರ ಅಧ್ಯಕ್ಷರು ಮೊಗವೀರ ಸಮಾಜದ ಸುಧಾರಣೆಯನ್ನೊಳಗೊಂಡ ಬೋಧಪ್ರದ ಭಾಷಣವಿತ್ತರು

ನಂತರ ಉಪಕಾರಸ್ಮರಣೆ ಅಂತೆಯೇ ಒಂದು ಸಾಮಾಜಿಕ ನಾಟಕದೊಂದಿಗೆ ಸಭೆಯು ಕೊನೆಗೊಂಡಿತು.

ಕಾರ್ಯದರ್ಶಿ.


## ಗಿಡಗಳು ಮತ್ತು ಬೀಜಗಳು

**ಡಿ. ಗುರಪ್ಪ ಅಂಡ್ ಸನ್ಸ್**
ಗಿಡ,ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್, ದೊಡ್ಡ ಮಾವಳ್ಳಿ,
**ಬೆಂಗಳೂರು ಸಿಟಿ.**

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ **ಗಿಡಗಳು,ಬೀಜಗಳುನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ.** ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ.



## ನವಯುಗ

ಪ್ರತಿ ಗುರುವಾರ ಹೊರಡುವ ವಾರಪತ್ರಿಕೆ.

**ಚಂದಾದಾರರಿಗೆ**

**ವಾರ್ಷಿಕ ಚಂದಾ** (ಅಂಚೆ ವೆಚ್ಚ ಸಹಿತ) **ಸ್ವದೇಶ ರೂ 3-4-0**
**ವಿದೇಶ „ 4-8-0**
**ಅರ್ಧವಾರ್ಷಿಕ- ಸ್ವದೇಶ 1-12-0, ವಿದೇಶ „ 2-8-0**

ಯಾವ ಸಂಚಿಕೆಯಿಂದಲೂ ಚಂದಾದಾರರಾಗಬಹುದು. ಚಂದಾ ಹಣವನ್ನು ಮುಂಚಿತವಾಗಿಯೇ ಕಳುಹಿಸಬೇಕು. ಅಥವಾ ಪತ್ರಿಕೆಯನ್ನು ವಿ.ಪಿ. ಯಿಂದ ತರಿಸಿಕೊಳ್ಳಬೇಕು. ಚಂದಾ ಅವಧಿ ಕೊನೆಗೊಳ್ಳುವ ಎರಡು ವಾರಗಳ ಮುಂಚಿತವಾಗಿ ಚಂದಾದಾರರಿಗೆ ತಿಳಿಸಲಾಗುವುದು. ಪತ್ರಿಕೆ ಬೇಡವಾದವರು ನಮಗೆ ಮೊದಲೇ ತಿಳಿಸಬೇಕು. ಇಲ್ಲದಿದ್ದರೆ ಮುಂದಿನ ವರ್ಷದ ಚಂದಾ ಹಣಕ್ಕಾಗಿ ಪತ್ರಿಕೆಯನ್ನು ವಿ ಪಿ ಮೂಲಕ ಕಳುಹಿಸಲಾಗುವುದು. ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ನಡೆಸುವಾಗ ಅವರ ಚಂದಾ ನಂಬ್ರವನ್ನು ಬರೆಯಬೇಕಾಗಿದೆ. ಇಲ್ಲವೆ ಪೂರ್ತಿ ವಿಳಾಸ ಕೊಡಬೇಕಾಗಿದೆ. ವಿಳಾಸ ಬದಲಾಗಿದ್ದರೆ ಮೊದಲಿನ ಮತ್ತು ಬದಲಾದ ವಿಳಾಸವನ್ನು ಸರಿಯಾಗಿ ಚಂದಾ ನಂಬ್ರದೊಡನೆ ಬರೆಯಬೇಕು. ಬರೇ ಸಹಿ ಪ್ರಯೋಜನವಿಲ್ಲ

**ಜಾಹೀರಾತುದಾರರಿಗೆ**

'ನವಯುಗ'ವು ಅಖಿಲ ಕರ್ನಾಟಕದಲ್ಲಿ ವಿಶಾಲವಾಗಿ ಪ್ರಚಾರದಲ್ಲಿರುವುದಲ್ಲದೆ ದೇಶ-ವಿದೇಶಗಳಿಗೂ ಹೋಗುವುದರಿಂದ ಜಾಹೀರಾತುಗಳಿಗೆ ಉತ್ತಮ ವಾಹನವಾಗಿದೆ. ಜಾಹೀರಾತುದಾರರು ¼ ಭಾಗ ಹಣವನ್ನು ಮುಂಗಡ ಕಳುಹಿಸಬೇಕು. ಒಂದೇ ಬಾರಿ ಪ್ರಕಟಣೆ ಹಾಕುವವರು ಪೂರ್ತಿ ಹಣವನ್ನು ಮುಂಗಡ ಕಳುಹಿಸಬೇಕು ಪ್ರಕಟಣೆಯ ದರಗಳಿಗೆ ಬರೆದುಕೊಳ್ಳಿರಿ.

**ಬಾತ್ಮೀದಾರರಿಗೆ**

ಬಾತ್ಮಿಗಳು ಆದಷ್ಟು ಚುಟುಕಾಗಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಸುಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು. ಬಾತ್ಮಿಗಳು ನಮಗೆ ಮಂಗಳವಾರದ ಟಪ್ಪಾಲಲ್ಲಿ ಸಿಕ್ಕಿದರೇನೇ ಆ ವಾರದ ಸಂಚಿಕೆಯಲ್ಲಿ ಪ್ರಕಟಿಸಲು ಸಾಧ್ಯ ದೀರ್ಘ ಬಾತ್ಮಿಗಳಿಗೆ ಎಂದೂ ಎಡೆಸಿಗಲಾರದು. ಬಾತ್ಮಿಗಳು ಸ್ವೀಕೃತ ವ ಅಸ್ವೀಕೃತ ಎಂದು ತಿಳಿಯ ಬಯಸುವವರು ತಕ್ಕಷ್ಟು ಅಂಚೆ ಚೀಟನ್ನು ಕಳುಹಿಸಬೇಕು.

**ಮೆನೇಜರ್, ನವಯುಗ.**



**ಚಂದಾದಾರರಲ್ಲಿ ವಿನಂತಿ**

ನಮ್ಮ ಹೆಚ್ಚಿನ ಚಂದಾದಾರರು ಇನ್ನೂ ತಮ್ಮ ಚಂದಾ ಹಣವನ್ನು ಪಾವತಿಮಾಡಿರುವುದಿಲ್ಲ. ಅಂಥವರು ದಯವಿಟ್ಟು ತಮ್ಮ ಚಂದಾ ಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ವಿನಂತಿಸಿ ಕೊಳ್ಳಲಾಗುತ್ತದೆ.

**ಮೆನೇಜರ್, ನವಯುಗ**

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.

---

# ಕ್ರೌನ ರಬ್ಬರ್ ಸ್ಟಾಂಪ್ ಕಂಪನಿ

ಸ್ಥಾಪನೆ: 1926



**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

**ಹೆಪ್ಪೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.**

**ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಃ ಬಂದು ಯಾ ಪತ್ರಮುಖೇನ ತಿಳಕೊಳ್ಳಬಹುದು.**

---

**ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.**

# ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್‌ಕಮಿಟಿಯವರಿಂದ ಮಂಜೂರಾಗಿದೆ.

**ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು**

ಯೋಗ್ಯವಾದ ಹಾಡುಗಳು.

**ಪ್ರತಿಗಳು:**—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಬುಕ್ ಡಿಪ್ಪೊ
ಉಡುಪಿ

---

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

**ಅತ್ಯಧಿಕ ಬೋನಸು !**

**ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,**
**ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,**

ಬಲವಂತ ಪೊಲಿಸಿಗಳು ರೂ. 3 ಕೋಟಿ ಮಿಕ್ಕಿವೆ.
ಮೂಲಧನವು ರೂ. 75 ಲಕ್ಷ ಮೀರಿದೆ.

**ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.**

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರೂಚಾ ಎಸ್ಕ್ವಾಯರ್, ಎಫ್. ಎಸ್. ಎಸ್ (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

**ಮೆನೇಜರ್,** 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

**ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ನೆಲ್ಲೂರು.**

**ಚೀಫ್ ಏಜೆಂಟ್ಸ್, ಮಧುರೆ, ತ್ರಿಚಿನಾಪಳ್ಳಿ.**

---

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

**ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ**

**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ**

# 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 58 Mody Street, Fort Bombay.

---

THE

# Vijaya Bank, Ltd.

**Head Office, MANGALORE** Branch Offices **Udipi, Kaup & Coondapoor.**

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

**ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3¾

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ 8 101ರಿಂದ 500ರ ವರೆಗೆ ಸಾ. ಶೆ. 7.
501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಡಾಲುಗಳು ದೊರೆಯುತ್ತವೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

**A B Shetty,** ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬ್ಯಾಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

---

**ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.**

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ**

**ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.**

**P. A. PAI, BROS.**
**ಪಿ. ಎ. ಪೈ. ಬ್ರದರ್ಸ್,**
**ಆಸ್ಪತ್ರೆ ಎದುರು, ಉಡುಪಿ.**

---

# ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ಇಂದಿನ ಪರಿಸ್ಥಿತಿಯಲ್ಲಿ ಆರ್ಥಿಕ ಸಮಸ್ಯೆಯ ಮಹತ್ವವನ್ನು ವರ್ಣಿಸುವುದೇ ಬೇಕಾಗಿಲ್ಲ. ಯಾಕೆಂದರೆ, ಬದುಕಿ ಬಾಳುವೆ ಮಾಡುವ ಪ್ರತಿಯೊಬ್ಬನ ಜೀವಿತಕ್ಕೂ ಕಚ್ಚಿಕೊಂಡ ಪ್ರಶ್ನೆಯೆಂದರೆ, ಈ ಆರ್ಥಿಕ ಪ್ರಶ್ನೆಯೇ! ಆದರೀ ಸಮಸ್ಯೆಯನ್ನು ಬಿಡಿಸಿನೋಡುವ ಕ್ರಮವನ್ನು ನಮಿಸುವುದು ಮಾತ್ರ ಸಾಮಾನ್ಯರಿಗೆ ಆಗದು. ಇದೀಗ ನಮ್ಮ ಶೌಲಭ್ಯ ಪ್ರಿಯ ಮನೋಗತಿ ಕಷ್ಟಪಡದೇ ಇಷ್ಟಪಡೆಯಬೇಕೆಂಬುದೇ ನಮ್ಮ ಬೇಡಿಕೆ. ಇದಕ್ಕಾಗಿ ದೇವ ಪ್ರಾಣಿಗಳಿಗೆ ಮೊರೆ ಇಟ್ಟರಾಯಿತು! ಗಂಟೆಹಾರಿಸಿದರಾಯಿತು! ಪರಿಣಾಮವೇನು? ಕಷ್ಟವಿಲ್ಲದೇ ಇಷ್ಟದೊರೆಯಲಾರದೆಂಬುದು ಮಾತ್ರ ದಿನೇ ದಿನೇ ನಿಶ್ಚಿತವಾಗುತ್ತ ಹೋಯಿತು.

ಸುಪ್ರವರ್ವೋ ದುರ್ದೈವವೋ ಹಿಂದೂಸ್ಥಾನಕ್ಕೆ ಫಲವತ್ತಾದ ಭೂಮಿಇದೆ. ಇದರ ಉತ್ಪತ್ತಿಯನ್ನು ನೋಡಿ ಎಲ್ಲರೂ ಬಾಯಿ ನೀರುಬಿಡುತ್ತಾರೆ. ಆದರೆ ಹಿಂದುಗಳ ಮೇಲೆ ಈ ಉತ್ಪತ್ತಿಯ ಪರಿಣಾಮವಾದ ರೀತಿಯೇ ಬೇರೆ. ಮೂರು ತಿಂಗಳು ಮಾತ್ರ ದುಡಿದು ಒಂಭತ್ತು ತಿಂಗಳು ಕೂತುಣ್ಣುವ ಸೋಮಾರಿತನ ಬೆಳೆದಿದೆ ನಮ್ಮಲ್ಲಿ. ಈ ಸೋಮಾರಿತನದ ಫಲವೇ ನಮ್ಮ ಕೊರಳಿಗೆ ಬಿದ್ದ ಗುಲಾಮಗಿರಿಯ ಪಾಶವೆಂದು ಬೇರೆ ಹೇಳಬೇಕಾಗಿಲ್ಲ. ಅಫಗಾನ್, ತುರ್ಕ, ಇಂಗ್ಲೀಷ್, ಫ್ರೆಂಚ್, ಫೋರ್ಚುಗೀಸರನ್ನೆಲ್ಲಾ ಇಲ್ಲಿಗೆ ಒದಗಮಾಡಿದ್ದು ಹಿಂದೂಸ್ಥಾನದ ಈ ಉತ್ಪತ್ತಿಯೇ. ಬಂದಬಂದವರನ್ನೆಲ್ಲಾ ಮನೆಹಾಕಿ ಕೂರಿಸಿದ್ದು, ಅದೇಕೆ ಸಿಂಹಾಸನಕ್ಕೇರಿಸಿದ್ದು ನಮ್ಮಾ ಸೋಮಾರಿತನವೇ. ಮತ್ತೆ ಪ್ಯಗಳ್ಳತನಕ್ಕೆ ತಕ್ಕ ತಿರುಗೇಟಿತನ, ಇಂದಮೇಲೆ ಬಂತೇನು ಹೋಯ್ತೇನು ಎಂಬುದರ ಲಕ್ಷ್ಯಾಚಾರವಾದರೂ ಎಚ್ಚರಿಸುವ ಬಗೆಹೇಗೆ?

ಭೂಮಿಯು ಫಲವತ್ತಾಗಿರುವಂತೆ, ನಮ್ಮ ವ್ಯಾಪಾರ ಉದ್ದಿಮೆಯೂ ಬೆಳೆಯಬೇಕಾಗಿತ್ತು. ಆದರೆ ಅದು ಅಷ್ಟು ಬೆಳೆಯಲಿಲ್ಲ ಎಂದು ಹೇಳಬಹುದು ಯಾಕೆಂದರೆ ನಮ್ಮಲ್ಲಿ ಚಾಣಕ್ಯನ ಅರ್ಥಶಾಸ್ತ್ರವೊಂದನ್ನು ಬಿಟ್ಟರೆ, ಬೇರೆ ಯಾವ ಅರ್ಥ ಶಾಸ್ತ್ರಗಳೂ ಬೆಳಕಿಗೇ ಬರಲಿಲ್ಲವೆಂಬ ವಿವಾದಕರ ಸಂಗತಿಯೇ ನಮ್ಮಲ್ಲಿ ವ್ಯಾಪಾರಬುದ್ಧಿ ಬೆಳೆಯಲಿಲ್ಲ ಎಂಬುದಕ್ಕೆ ಆಧಾರವಲ್ಲವೇ? ನಮ್ಮಲ್ಲಿ ಇಷ್ಟೆಷ್ಟೋ ಶಾಸ್ತ್ರಗಳಿವೆ. ಅವುಗಳ ಧ್ಯೇಯವೂ ಸಾಕಷ್ಟು ಶ್ಲಾಘನೀಯವಾಗಿಯೇ ಇದೆ. ಹೀಗಿರುವಾಗ ಅರ್ಥಶಾಸ್ತ್ರಕ್ಕೊಂದಕ್ಕೇ ನಿಕೃಷ್ಟತನ ಹಿಡಿಯಬೇಕೇ? ಈ ಗ್ರಹಣವೇನನ್ನು ತೋರಿಸುತ್ತದೆ? ನಮ್ಮವರಿಗೆ ಲೆಕ್ಕಪತ್ರ ಇಡುವ ಪಾಠವೇ ಬೇಕಾಗಿಲ್ಲ ಎಂಬುದನ್ನೇ ಅಲ್ಲವೇ? ನಮ್ಮ ಹಿಂದೂಸ್ಥಾನದ ಫಲವತ್ತೆಯಿಂದ ನಮಗೆ ದೊರಕಿದ್ದು ಅಂದರೆ, ಮೂರು ಕಹಿ ಹಣ್ಣುಗಳು. (೧) ಸೋಮಾರಿತನ, (೨) ಲೆಕ್ಕಪತ್ರ ಇಡುವುದು ಬೇಡ, (೩) ಪಕ್ಷಪಾತವಾಗಿ ಹೊರಗಿನವರ ಆಗಮನ ಮತ್ತು ಅಧಿಕಾರ.

ನಾಲ್ಕಾರು ಎಕ್ರೆ ಭೂಮಿಗಳನ್ನು ಒಬ್ಬ ರೈತನು ತನ್ನವೇ ಆದ ಎರಡೇ ಎತ್ತುಗಳಿಂದ ಹೊಡಿ ಬಿತ್ತಿ ಜೀವನ ಸಾಗಿಸಬಲ್ಲನು. ಆದನಿಗೆ ಇತರರೊಡನೆ ಸಾಕಷ್ಟು ಸಂಘಟನೆಮಾಡಿಕೊಂಡೇ ಬಾಳಬೇಕೆಂಬ ಆಗತ್ಯ

# ಒಂದು ಸಾಂಪತ್ತಿಕ ವಿಚಾರ

ಆಯುರ್ವೇದ ಚೂಡಾಮಣಿ ಸ್ವಾಮಿರಾಚಾರ್ಯ, ಪ್ರೇಮ ವಿದ್ಯಾಪೀಠ, ತುಂಗಭದ್ರಾ

**ಮೂರು ತಿಂಗಳು ಮಾತ್ರ ದುಡಿದು ಒಂಭತ್ತು ತಿಂಗಳು ಕೂತುಣ್ಣುವ ಸೋಮಾರಿತನ ಬೆಳದಿದೆ ನಮ್ಮಲ್ಲಿ. ಈ ಸೋಮಾರಿ ತನದ ಫಲವೇ ನಮ್ಮ ಕೊರಳಿಗೆ ಬಿದ್ದ ಗುಲಾಮಗಿರಿಯ ಪಾಶ.**

**ಹಿಂದುವಿನ ರಕ್ತದಲ್ಲಿ ಸಂಘಟನಾ ಶಕ್ತಿಯ ಕಣ ಕೂಡಾ ಕಾಣಬರುವುದಿಲ್ಲ. ಏಕಾಕಿಯಾಗಿ ಬದುಕುಮಾಡಿದ ಹಿಂದುವು ಇಂದು ಪರರೊಡನೆ ಹೊಂದಿ ಬಂದಾಗಿ ಬಾಳಬೇಕಾದುದು ಕಠಿಣವಾಗಿದೆ. ಅವನಲ್ಲಿ ತನ್ನ ಜಮಾ ಖರ್ಚಿನ ವಿಚಾರವಿಲ್ಲ ಸಂಘ ಬಲವಿಲ್ಲ.**

**ವೈದ್ಯಕೀಯ ಕ್ಷೇತ್ರವೊಂದನ್ನು ನೋಡಿದರೆ ಹಿಂದೀಯರ ದುರವಸ್ಥೆಯು ಚಿತ್ರವೇಧಕವಾಗಿ ವೇದ್ಯವಾಗುವುದು. ಹಿಂದೀ ಹಳ್ಳಿಹಳ್ಳಿಗಳಿಂದ ಕಚ್ಚಾಮಾಲುಗಳು ಪರದೇಶಗಳಿಗೆ ಹೋಗಿ ಅವುಗಳಿಂದ ತಯಾರಿಸಲ್ಪಟ್ಟ ಔಷಧಿಗಳನ್ನು ನಾವು ನಾಲ್ಕು ಪಾಲು ಹೆಚ್ಚು ಬೆಲೆಕೊಟ್ಟು ಪಡೆದುಕೊಳ್ಳುವೆವು. ಹಿಂದೂದೇಶಕ್ಕೆ ಹೊರಗಿಂದ ಬರುವ ಔಷಧಿಗಳ ಬೆಲೆಯೇ ರೂ. ೩೦ ಮಿಲ್ಯಕ್ಕೆ ಮಿಕ್ಕಿದೆ.**

●○●

ಬೀಳಲಿಲ್ಲ. ಅವನಿಗೆ ಇನ್ನುಳಿದ ಇತರ ಜನರ ಹಳ್ಳಿಗಳ, ಪಟ್ಟಣಗಳ ಅಥವಾ ಪ್ರಾಂತಗಳ ಸಂಬಂಧವೇ ಬೇಕಾಗಲಿಲ್ಲ. ಹೀಗಾಗಿ ಇಂದು ಹಿಂದುವಿನ ರಕ್ತದಲ್ಲಿ, ಸಂಘಟನಾಶಕ್ತಿಯ ಕಣಗಳೂ ಕೂಡಾ ಕಾಣಬರುವುದು ಕಷ್ಟವಾಗಿದೆ. ಮಗ್ಗುಲಿನ ಮನೆಯವರೊಡನೆ, ಒಂದಾಗಿ ಹೊಂದಿಕೊಳ್ಳದೇ ಏಕಾಕಿಯಾಗಿ ಬದುಕುಮಾಡಿದ ಹಿಂದುವು ಇಂದು ಪರರೊಡನೆ, ಪಟ್ಟಣಿಗರೊಡನೆ, ಪರಪ್ರಾಂತಗಳೊಡನೆ, ಅದೇಕೆ ಪರರಾಷ್ಟ್ರದೊಡನೆ, ಸಹ ಹೊಂದಿ ಒಂದಾಗಿ ಬಾಳಬೇಕಾದುದು ಅತ್ಯಂತ ಕಠಿಣ ತರದ ಸಂಗತಿಯಾಗಿದೆ. ಇದು ಕೃಷಿ ಕರ್ಮಫಲವತೆಯ ನಾಲ್ಕನೇ ದುಷ್ಪರಿಣಾಮ. ಸಾರಾಂಶ ಫಲವತೆಯು ಪರಿಣಾಮವಾಗಿ (೧) ಸೋಮಾರಿಗಳಾದೆವು. (೨) ಜಮಾ ಖರ್ಚಿನ ವಿಚಾರ ಸಾಕಷ್ಟು ಇಲ್ಲದೇ ಹೋಯಿತು. (೩) ನೆರೆಹೊರೆಯವರೊಡನೆ ಹೊಂದಿಕೊಳ್ಳದೇ ಗೂಬೆಗಳಾದುವು. (೪) ಸಂಘ ಬಲವಿಲ್ಲದ ನಾವು ಪರದೇಶೀಯರ ದಾಸರಾದೆವು.

ಇಂದಿನ ನಮ್ಮ ಉಪವಾಸಕ್ಕೆ ಇವು ನಾಲ್ಕು ಕಾರಣಗಳಾದುವು. ಬೋರೇ ಗೌಡನಿಗೆ ಬುದ್ಧಿ ಇಲ್ಲದೇ ಹೋಯಿತು. ಆತನಿಗ ಸೋಮಾರಿಯಾದರೂ ಕೈಸೋತು ನೆಲಕ್ಕೆ ಬೀಳುವವರೆಗೂ ದುಡಿಯಲಿಕ್ಕೇನೂ ಕೊರತೆಯಿಲ್ಲ. ತನ್ನ ದುಡಿಮೆಯಿಂದ ಬಂದಿತೆಷ್ಟು ಹೋಯಿತೆಷ್ಟು ಎಂಬುದರ ಲೆಕ್ಕ ಆತನ ತಲೆಗೇ ಹತ್ತುವದಿಲ್ಲ. ಹೀಗಿರುವಾಗ ನಮ್ಮ ಇಂದಿನ ದುರ್ದೆಶೆಗೆ ಸಾಕಷ್ಟು ಮಳೆ ಬೀಳಬಾರದೊಂದೇ ಕಾರಣವಲ್ಲ. ಇಡೀ ರಾಷ್ಟ್ರದ ಅದೇಕೆ ಜಗತ್ತಿನ ವ್ಯಾಪಾರದ ಸ್ಥಿತಿಗತಿಯೂ ಬೋರೆ ಗೌಡನ ಬಡತನಕ್ಕೆ ಮೂಲವೆಂಬ ಮಾತು ಇವನ ತಲೆಗೆ ಹೇಗೆ ಹೊಕ್ಕಬೇಕು? ಇವನ ಸಂಪತ್ತಿನ ಸ್ಥಿತಿಯೂ ಸಹ ಹೀಗೆಯೇ. ಅಲ್ಲಿಯೂ ಇವನ ಊಹೆಗೆ ತ್ರಾಣವಿಲ್ಲ, ಪ್ರಾಣವಿಲ್ಲ, ತನ್ನದು ಅಂದರೆ, ಮುರುಕು ಮನೆ, ಹರಕು ಬಟ್ಟೆ ಇಷ್ಟೇ. ರಾಷ್ಟ್ರ ತನ್ನದು ತಾನು ರಾಷ್ಟ್ರದವನು, ರಾಷ್ಟ್ರ ಸಂಪತ್ತಿಯೇ ತನ್ನ ಸಂಪತ್ತಿ ಎಂಬ ಉದಾತ್ತ ಭಾವನೆ ಹೇಗೆ ಬರಬೇಕು ಪಾಪ ಈತನಿಗೆ. ಈ ಭಾವನೆಯೇ ಬಾರದಿದ್ದರೆ ಬೋರೆ ಗೌಡನಿಗೆ ಮುಕ್ತಿಯೇ ಇಲ್ಲ. ಮಹಾತ್ಮರ ಪ್ರಭಾವದಿಂದಲೋ, ಪಂಡಿತ ಜವಾಹಿರರ ಪ್ರಯತ್ನದಿಂದಲೋ ಈ ವಿಧದ ರಾಷ್ಟ್ರೀಯ ಭಾವನೆಯು ಬೋರೆ ಗೌಡನಲ್ಲಿ ತುಸು ಮೂಡುತ್ತಲಿದೆ. ಈ ಎಚ್ಚರವೇ ಕೋಂಗ್ರೆಸಿನ ಮಹಾ ವಿಜಯಕ್ಕೆ ಕಾರಣ.

ರಾಷ್ಟ್ರದ ಕಲ್ಪನೆ, ರಾಷ್ಟ್ರೀಯ ಭಾವನೆ, ರಾಷ್ಟ್ರ ಸಾಂಪತ್ತಿಯ ಲೆಕ್ಕಾಚಾರ ಇವು ಸಾಕಷ್ಟಿಲ್ಲವೆಂಬುದಂತೂ ಒತ್ತಟ್ಟಗಿರಲಿ. ಹಾಗೂ ಹೀಗೂ ಕೂಡಿ ಬೀಳಲಿರುವ ರಾಷ್ಟ್ರ ಸಂಪತ್ತಿಯನ್ನು ಹಾಳುಮಾಡುವ ಹೆಗ್ಗಣದ ಹೋರುಗಳ ಸೇರ ಇವೆಇಲ್ಲಿ. ಅವನ್ನೆಲ್ಲ ಚರ್ಚಿಸಲೇ ಬೇಕು. ಅದರಲ್ಲಿ ಎಲ್ಲ ವಿಷಯಗಳಿಗವಕಾಶವಿಲ್ಲ, ಆಯಾ ಶಾಸಕೋವಿದರು ಆಯಾ ವಿಷಯಗಳನ್ನು ಕೈಕೊಳ್ಳುವರು. ಮೇಲು ನಾನೊಬ್ಬ ವೈದ್ಯ. ಅದರಲ್ಲಿಯೂ ಹಳ್ಳಿಯಲ್ಲಿರತಕ್ಕವ. ಹಳ್ಳಿಗಳ ನಾಡಾದ ಹಿಂದುಸ್ಥಾನಕ್ಕೆ ಹಳ್ಳಿಯ ದೃಷ್ಟಿಯಿಂದ ವೈದ್ಯರ ವಿಷಯದಲ್ಲಿ ಒದಗುವ ಲಾಭಹಾನಿಗಳನ್ನಷ್ಟೇ ತಕ್ಕಷ್ಟು ತೂಗುವುದು ನನ್ನೀ ಲೇಖನದ ಉದ್ದೇಶ. ಪರದೇಶದಿಂದ ಬರುವ ಔಷಧಿಗಳು ನಮ್ಮ ರಾಷ್ಟ್ರೀಯ ಸಂಪತ್ತಿಗೆ ಹೆಗ್ಗಣಗಳಾಗಿ ಹೇಗೆ ಪೆದರಿಕೆದರಿ ತಮ್ಮ ಹೇರುಗಳಿಗೆ ಹೊತ್ತುಕೊಂಡು ಹೋಗುತ್ತಲಿವೆ. ಎಂಬುದನ್ನು ಸಂಕ್ಷಿಪ್ತವಾಗಿ ತೋರಿಸಿಕೊಡುವುದೇ ನನ್ನ ಪ್ರಯತ್ನ.

ಇಂದು ಪಶ್ಚಿಮದಿಂದ ಎಷ್ಟೋ ವಿಧದ ಔಷಧಿಗಳು ಬಂದು ಬೀಳುತ್ತಿವೆ ಇಲ್ಲಿ. ಈ ಪಾಶ್ಚಾತ್ಯ ಔಷಧಿಗಳನ್ನು ತಯಾರಿಸಲು ಅಗತ್ಯವಾಗಿ ಬೇಕಾಗುವ ಕಚ್ಚಾವನೌಷಧಿಗಳು ನಮ್ಮ ಹಳ್ಳಿಪಳ್ಳಿಗಳಲ್ಲಿ ತಾನಾಗಿಯೇ ಹುಟ್ಟಿ ಬೆಳೆಯುತ್ತಿವೆ. ಈ ದೇಶದಿಂದ ಹತ್ತಿಯು ಪರದೇಶಕ್ಕೆ ಹೋಗಿ ಅಲ್ಲಿ ಬಟ್ಟೆಗಳಾಗಿ ಇಲ್ಲಿಗೆ ಬಂದು ನಮ್ಮಿಂದ ದುಡ್ಡನ್ನು ಸುಲಿವಂತೆ ಈ ಔಷಧಿಗಳಲ್ಲಿಯೂ ಸುಲಿಗೆ ನಡೆದಿದೆ, ಇಲ್ಲಿಂದ ಔಷಧಿಯ 'ಕಚ್ಚಾಮಾಲು' ಪರದೇಶಗಳಿಗೆ ಒಯ್ಯಲಾಗುವುದು. ಅಲ್ಲಿ ಔಷಧಿ ವಟಿಕೆಗಳೂ ಟಿಂಕ್ ಚಾಕ್‌ಬಾಕ್ಸ್‌ಗಳೂ, ಸತ್ವಗಳೂ, ಯಂತ್ರಯೋಗದಿಂದ ತಯಾರಾಗಿ, ಇಲ್ಲಿಗೆ ಕಳುಹಲ್ಪಟ್ಟು ನಮಗೇ ಮಾರಲಾಗುವವು. ಮಾರುವವರು ಅವರು. ಬೆಲೆ ಹೇಳುವವರು ಅವರು. ಅಲ್ಲಿಂದ ತಯಾರಾಗಿ ಬಂದ ಔಷಧಿಗಳನ್ನು ಕೊಂಡುಕೊಳ್ಳುವವರು ಮಾತ್ರ ನಾವು. ಕಚ್ಚಾ ಮಾಲಿಗೆ ತಾವು ಕೊಟ್ಟ ಬೆಲೆ, ಅದರ ಮೇಲೆ ಇಲ್ಲಿಂದ ತಾವು ತಮ್ಮ ದೇಶಕ್ಕೆ ಒಯ್ಯುವ ಮತ್ತು ಅಲ್ಲಿಂದ ಪುನಃ ಇಲ್ಲಿಗೆ ತರುವ ಖರ್ಚು, ಅಲ್ಲಿ ತಮ್ಮ ತಮ್ಮ ಯಂತ್ರಗಳಲ್ಲಿ ಕೆಲಸಮಾಡಿದವರ ಕೂಲಿ ಇದೆಲ್ಲದರ ಮೇಲೆ ಉಪಯೋಗಿಸುವ ಮೂಲಧನಕ್ಕೆ ಬಡ್ಡಿ ಮತ್ತು ವ್ಯಾಪಾರ ನ್ಯಾಯದಂತೆ ತಕ್ಕಷ್ಟು ಲಾಭ ಇತ್ಯಾದಿಗಳನ್ನು ಕೊಂಡುಕೊಳ್ಳುವ ಗಿರಾಕಿಗಳಾದ ನಮ್ಮ ಮೇಲೆಯೇ ಹೇರಿ ಅವರು ವ್ಯಾಪಾರ ಮಾಡುತ್ತಾರೆ. ನಾವು ಕಣ್ಣುಮುಚ್ಚಿಕೊಂಡು ಅವರು ಹೇಳುವ ಬೆಲೆಗೇ ಅವರ ಔಷಧಿಯನ್ನು ತಕ್ಕೊಳ್ಳುತ್ತೇವೆ. ಈ ವಿಷಯವನ್ನೇ ಅಂದರೆ ಹೀಗೆ ವರ್ಷಂಪ್ರತಿ ಕೋಟ್ಯಾವಧಿ ರೂಪಾಯಿಗಳು ಹಿಂದೂಸ್ಥಾನದಿಂದ ಬರೀ ಔಷಧಿಗಾಗಿ ಹೇಗೆ ಹೊರಗೆ ಹೋಗುತ್ತದೆ ಎಂಬುದನ್ನೂ, ಮತ್ತದನ್ನು ನಿಲ್ಲಿಸಿ ಹಿಂದುಸ್ಥಾನಕ್ಕೆ ಲಾಭ ದೊರಕುವಂತೆ ಮಾಡಲು ಹೇಗೆ ಶಕ್ಯವಿದೆಯೆಂಬುದನ್ನೂ ಕರ್ನಲ್ ಕೋಪ್ರಾರವರಿಂದ ಪ್ರಸಿದ್ಧ ರಿಪೋರ್ಟಿನಲ್ಲಿ ಚೆನ್ನಾಗಿ ನೋಡಬಹುದು. ಅವರು ಇಂಡಿಜೆನಸ್ ಡ್ರಗ್ಸ್ ಒಫ್ ಇಂಡಿಯಾ" (ಹಿಂದೂಸ್ಥಾನದ ವನೌಷಧಿಗಳು) ಎಂಬ ಪುಸ್ತಕದ ೩೬ನೇ ಪುಟದಲ್ಲಿ ಹೇಳಿರುವದು ಹೀಗೆ "ನಿಜವಾಗಿಯೂ ಔಷಧಿ ದ್ರವ್ಯಗಳ ಮೊದಲ ಸಂತೆಯೆಂದರೆ, ಇಂಡಿಯಾ ದೇಶವೇ.


ಎಚ್. ಎಸ್. ಮಿಯಾಜಿವಾಲಾ ಬ್ರದರ್ಸ್

**ಬೊಂಬಾಯಿ.**

ಚಿನಿವಾರ ಉಪಕರಣಗಳ ಬೊಂಬಾಯಿಯ ಸುಪ್ರಸಿದ್ಧ ಅಂಗಡಿ.

**ಕುರಂದದ ಕಡ್ಡಿ, ಕುರಂದದ ಕಾಗದ, ಪ್ರತಿಯೊಂದು ವಿಧದ ಅರ, ಸರಿಗೆಯ ಬ್ರಶ್ಶು, ತೂತುಮಾಡುವ ಗರಗಸವೇ ಮೊದಲಾದ ಚಿನಿವಾರ ಕೆಲಸಕ್ಕೆ ಬೇಕಾಗುವ ಯಾವತ್ತೂ ನವನವ ಸಾಮಾನುಗಳು ನಮ್ಮಲ್ಲಿ ಸ್ಟೋಕ್ ಇರುತ್ತವೆ.**

**ಒಮ್ಮೆ ಆರ್ಡರುಕೊಟ್ಟು ಪರೀಕ್ಷಿಸಬೇಕಾಗಿ ವಿನಂತಿ**

ಪಟ್ಟಣದ ಹೊರಗಣ ನಮ್ಮ ಗಿರಾಕಿಗಳ ಕುರಿತು ನಾವು ವಿಶೇಷ ಜಾಗ್ರತೆ ತೆಗೆದುಕೊಳ್ಳುತ್ತೇವೆ.

**H. S. Miyajiwala Bros.**

*114 Lohar Chawl*, **BOMBAY**

ಪತ್ರವ್ಯವಹಾರಗಳನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.

ಬ್ರಿಟಿಷ್ ಮತ್ತು ಇತರ ಫಾರ್ಮೊಕೋಪಿಯಾ (ಔಷಧಿನಿಘಂಟು)ಗಳಲ್ಲಿ ಕೊಟ್ಟಿರುವ ಔಷಧಿಗಳಲ್ಲಿ ಮುಕ್ಕಾಲು ಭಾಗ ಔಷಧಿಗಳು ಇಲ್ಲಿ ತಾನಾಗಿಯೇ ಬೆಳೆಯುತ್ತಿದೆ. ಇಷ್ಟೇ ಅಲ್ಲದೆ ವಿಧವಿಧವಾದ ಪರಿಮಳ ದ್ರವ್ಯಗಳು ಪ್ರಪಂಚವೆಲ್ಲವೂ ಉಪಯೋಗಿಸುವ ಮಸಾಲೆ ದ್ರವ್ಯಗಳೂ ಇಲ್ಲಿ ಧಾರಾಳವಾಗಿ ಬೆಳೆಯುತ್ತಿವೆ. ಭೂಗೋಳದ ಶೀತವಲಯದಿಂದ ಉಷ್ಣವಲಯದ ವರೆಗೆ ಇರುವ ವಿಧವಿಧವಾದ ಹವಾಮಾನಗಳನ್ನೂ ಈ ಒಂದೇ ದೇಶದಲ್ಲಿಯೇ ಕಾಣಬಹುದು ..........ಹೀಗಿರುವಾಗ ನಮ್ಮ ದೇಶಕ್ಕೇ ಬೇಕಾದ ಎಲ್ಲಾ ಔಷಧಿಗಳನ್ನು ಇಲ್ಲಿಯೇ ಏತಕ್ಕೆ ಬೆಳೆಸಬಾರದು ....... ... ಬಹಳ ಬೆಲೆಬಾಳುವ ಪಾಶ್ಚಾತ್ಯ ಔಷಧಿಗಳು ಇಂಡಿಯಾದ ಬಡತನಕ್ಕೆ ಒಗ್ಗವು. ಈ ಆರ್ಥಿಕ ಬಡತನದ ಕಾರಣದಿಂದಲೇ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಪಾಶ್ಚಾತ್ಯ ಪದ್ಧತಿಗೆ ಇಲ್ಲಿ ಆಸಕ್ತಿಗಳೇ ಬರುತ್ತಿವೆ. ಇಷ್ಟು ಅಲ್ಲದೆ ಪೇಟೆಯಲ್ಲಿ ಸಿಕ್ಕುವ ಸಾಮಾನ್ಯ ಔಷಧಿ ದ್ರವ್ಯಗಳನ್ನು ಬುದ್ಧಿಯಿಂದ ಉಪಯೋಗಿಸಿದರೆ ಇವು ಅಲ್ಲಿಂದ ಬರುವ ಔಷಧಿಗಳಿಗಿಂತೇನು ಕಡಿಮೆ ಪರಿಣಾಮಕಾರಕವಾಗಿರುವುದಿಲ್ಲ.. ... ...

ಇಂಡಿಯಾಕ್ಕೆ ಹೊರಗಿಂದ ಬರುವ ಔಷಧಿಗಳ ಬೆಲೆಯು ೨೦,೨೧,೯೮,೫೭೭ ರೂಪಾಯಿಗಳು. ಇಲ್ಲಿಂದ ರಫ್ತಾಗಿಹೋದ ಕಚ್ಚಾ ಮಾಲಿನ ಬೆಲೆಯು ೪೧೯೭,೦೯೮೮ ರೂಪಾಯಿಗಳು ಮಾತ್ರ. ಇದು ೧೯೩೫ನೇ ಲೆಕ್ಕಾಚಾರ" ಇತ್ತೀಚೆ ಈ ಪರವು ಏರುತ್ತದೇ ವಿನಾ ಕಡಿಮೆ ಇಲ್ಲ. ಕೊನೆಗೆ ಕರ್ನಲ್ ಚೋಪ್ರಾರವರೇ ಸರಾಸರಿ ಲೆಕ್ಕಕೊಟ್ಟು ಪ್ರತಿವರ್ಷ ೧೬,೬೪೦,೧೯೭ ರೂಪಾಯಿಗಳ ಔಷಧಿಯು ಹೊರಗಿನಿಂದ ನಮ್ಮಲ್ಲಿಗೆ ಆಮದು ಆಗಿ ಬರುತ್ತದೆಂದೂ, ಮತ್ತು ೩,೯೧೯,೮೭೦ ರೂಪಾಯಿಗಳ ಔಷಧಿಯ ಕಚ್ಚಾಮಾಲು ಇಲ್ಲಿಂದ ರಫ್ತಾಗಿ ಹೋಗುತ್ತದೆಂದೂ ವಿವರಿಸಿರುವರು. ಇದರಿಂದ, ನಾವು ಇಲ್ಲಿಂದ ಕಳುಹಿಸುವ ಒಂದು ರೂಪಾಯಿ ಮಾಲನ್ನೇ ಪುನಃನಾವೇ ಅಂದಾಜು ನಾಲ್ಕೂವರೆ ರೂಪಾಯಿಗಳಿಗೆ ಕೊಂಡುಕೊಳ್ಳುತ್ತೇವೆ ಎಂದಂತಾಗುವುದು.

ಇದಕ್ಕೇನು ಮಾಡಬೇಕು? ಹೇಗಾದರೂ ನಮ್ಮ ಆಡಳಿತವಿಂದು ನಮ್ಮ ಕೊಂಗ್ರೆಸ್ ಕೈಗೇ ಸೇರುತ್ತಲಿರುವುದು. ನಮ್ಮ ದುಡ್ಡು ನಮ್ಮಲ್ಲಿ ಉಳಿಯುವಂತೆ, ನಮ್ಮವರು ಉದ್ಯೋಗವಿಲ್ಲದೇ ತಿರುಗದಂತೆ ಯೋಗ್ಯವಾಗಿ ಏರ್ಪಾಟುಮಾಡುವುದು ಕೋಂಗ್ರೆಸಿನ ಮುಖ್ಯ ಕರ್ತವ್ಯಗಳಿಗೇ ಸೇರಿದ ವಿಷಯವಲ್ಲವೆ? ಆಯಾ ಪ್ರಾಂತಗಳಿಗೆ ಬೇಕಾಗುವಷ್ಟು, ಸಾಕಾಗುವಷ್ಟು, ಔಷಧಿ ದ್ರವ್ಯಗಳು ಆಯಾ ಹಳ್ಳಿಗಳಲ್ಲಿ ತಾನಾಗಿಯೇ ಅನಾಯಾಸವಾಗಿ ಬೆಳೆಯುವವು. ಅವುಗಳನ್ನು ಸಕಾಲದಲ್ಲಿ ಸಂಗ್ರಹಿಸಿ, ಅವುಗಳಿಂದ ಔಷಧಿಗಳನ್ನು ತಯಾರುಮಾಡಿ, ಆಯಾ ಪ್ರಾಂತದ ಸಮಸ್ತ ಹಳ್ಳಿ, ಪಟ್ಟಣಗಳಿಗೂ ಪೂರೈಸಿ ಕೊಡುವಂತೆ ಏರ್ಪಾಡುಮಾಡಿದರೆ ಉದ್ಯೋಗವಿಲ್ಲದೇ ತಿರುಗುವ ಹಳ್ಳಿಗರಿಗೊಂದು ಹೊಸ ಉದ್ಯೋಗವಾಗುವುದು. ಔಷಧಿ ತಯಾರಿಸುವ ಕೈಗಾರಿಕೆಯೂ ಬೆಳೆಯುವುದು. ಇಲ್ಲಿಂದ ಪರದೇಶಕ್ಕೆ ಕೇವಲ ಔಷಧಿಗಳಿಗಾಗಿ ಮಾತ್ರ ಹೋಗುವ ಕೋಟ್ಯಾನು ಕೋಟಿ ರೂಪಾಯಿಗಳು ನಮ್ಮಲ್ಲಿಯೇ ಉಳಿಯುವವು. ಇಷ್ಟೇ ಅಲ್ಲದೇ ನಮ್ಮ ಅತೀ ಪ್ರಾಚೀನವಾದ ಸಶಾಸ್ತ್ರೀಯವಾದ ಆಯುರ್ವೇದಗ ಅಂತಸ್ತು ಸಹ ಇನ್ನೂ ಮೇಲಕ್ಕೇರುತ್ತಲೇ ಹೋಗುವದು.

# ಪತ್ರ ವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣವಿಳಾಸವನ್ನು ನಮಗೆ ಕೊಡಬೇಕಾಗಿದೆ ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿ ರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ ) [ಸಂ. ನ.]

## ಜಿಲ್ಲಾ ಅಧ್ಯಾಪಕರ ಕೇಂದ್ರಗಳ ಕಾರ್ಯದರ್ಶಿಗಳಿಗೆ—ಹಾಗೂ ಬೋರ್ಡು ಅಧ್ಯಾಪಕ ಅಧ್ಯಾಪಕಿಯರ ಅವಗಾಹನೆಗೆ

ಉಡ್ಪಿ:— ಉಪಾಧ್ಯಾಯರ ಸಂಬಳದಲ್ಲಿ ೧-೪-೩೭ರಿಂದ ರೂಪಾಯಿಗೆ ೩ ಆಣೆಯಂತೆಯೂ ಉಪಾಧ್ಯಾಯಿನಿಯರಿಗೆ ಅವರ ಸ್ಕೇಲಿನಲ್ಲಿ ಕಡಿತವಲ್ಲದೆ, ನಂತರ ಸಿಗುವ ತಲಬಿನಲ್ಲಿಯೂ ೩ ಆಣೆಯಂತೆಯೂ, ಪ್ರತಿ ತಿಂಗಳಲ್ಲಿ ಕಡಿತ ಮಾಡಬೇಕಾಗಿ ಸರಕಾರದ ಹುಕುಂ ಬಂದಿರುವುದಷ್ಟೆ! ಈ ವಿಷಯದಲ್ಲಿ ಬೋರ್ಡು ಉಪಾಧ್ಯಾಯರು, ಅವರವರ ತಾಲೂಕುಗಳಲ್ಲಿ ತಾಲೂಕು ಸಭೆಗಳನ್ನಾಗಲಿ, ಅಥವಾ ಜಿಲ್ಲಾ ಸಭೆಗಳನ್ನಾಗಲಿ ಜರಗಿಸಿ, ಕಡಿತದ ವಿಷಯ ನಾವು ಬಹಳ ಅನ್ಯಾಯಹೊಂದುತ್ತೇವೆ, ಎಂಬ ಆಕ್ಷೇಪವನ್ನು ಸೂಚಿಸುವ ನಿರ್ಣಯವನ್ನು ಮಾಡುವುದು. ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಗೂ ಮುಖ್ಯ ಮಂತ್ರಿಗಳಿಗೂ ನಮ್ಮ ಜಿಲ್ಲೆಯ ಸರಕಾರಿ ಕಡೆಯ ಮಂತ್ರಿಗಳ ಮತ್ತು ಕಾರ್ಯದರ್ಶಿಗಳಿಗೂ ಕಳುಹಿಸುವ ಏರ್ಪಾಡು ತ್ವರೆಯಲ್ಲಿ ಮಾಡಬೇಕಾಗಿ ಕೆಲವು ಪತ್ರಗಳು ನನಗೆ ಬಂದಿರುತ್ತವೆ. ಆದರೆ ಇಂತಹ ಸಭೆಗಳನ್ನು ಎಷ್ಟೋ ಸಲ ಜರಗಿಸಿ ಕಡಿತಗಳ ವಿಷಯ ನಾವು ನಮ್ಮ ಆಕ್ಷೇಪವನ್ನು ಸೂಚಿಸಿದ್ದೇವೆ, ಬಡ ಉಪಾಧ್ಯಾಯರು ಆಗಾಗ್ಗೆ ಸಭೆಗಳಿಗೆ ಹೋಗಿ ಬರಲು ಅನಾವಶ್ಯ ಖರ್ಚುಮಾಡಲು ಅಸಮರ್ಥರಾದುದರಿಂದ, ಜಿಲ್ಲೆಯಲ್ಲಿ ಉಪಾಧ್ಯಾಯರ ಅನುಕೂಲಕ್ಕೆ ಸರಿಯಾಗಿ ಪ್ರಕೃತ ಇರುವ ೬೦ ಯಾ ೬೬ ಕೇಂದ್ರಗಳಲ್ಲಿ ಇದೇ ಬರುವ ಆಗೋಸ್ಟು 14ನೇ ಶನಿವಾರ ಮಾಸಿಕ ಸಭೆ ಜರಗುತ್ತದಷ್ಟೆ ಈ ಎಲ್ಲಾ ಕೇಂದ್ರಗಳ ಸಭೆಗಳಲ್ಲಿ ಅಧ್ಯಾಪಕರು ಕಡಿತದ ವಿಷಯ ತನ್ನು ಆಕ್ಷೇಪ ಸೂಚಿಸುವ ನಿರ್ಣಯವನ್ನು ಮಾಡಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಗೂ, ವ ಅವರು ನಮ್ಮ ಜಿಲ್ಲೆಯ ಕಾರ್ಯದರ್ಶಿಗಳಿಗೂ ಆ ನಿರ್ಣಯಗಳನ್ನು ಕಳುಹಿಸಿಕೊಡುವ ವ್ಯವಸ್ಥೆಯನ್ನು ಆಯಾ ಕೇಂದ್ರಗಳಲ್ಲಿನ ಉಪಾಧ್ಯಾಯರು ಮಾಡಿಕೊಳ್ಳಲು ದಯಮಾಡಿ ನೋಡಿರಿ. ಹೀಗೆ ಮಾಡಿದರೆ ಬಡ ಉಪಾಧ್ಯಾಯರಿಗೆ ಖರ್ಚು ಕಡಿಮೆ, ಮತ್ತು ಆಕ್ಷೇಪವನ್ನು ಮಾಡಿದ್ದರೆ, ಕಡಿತಕ್ಕೆ ನಮ್ಮ ಸಮ್ಮತಿಕೊಟ್ಟ ಹಾಗಾಗುವುದು. ಅದ್ದರಿಂದ ಆಗೋಸ್ಟು ತಿಂಗಳ 14ರಲ್ಲು ಜರಗುವ ಜಿಲ್ಲಾ ಮಾಸಿಕ ಕೇಂದ್ರ ಸಭೆಗಳಲ್ಲಿ ಬೋರ್ಡು ಉಪಾಧ್ಯಾಯರು ಮೇಲೆ ಹೇಳಿದಂತೆ ಮಾಡಲುವು ರೆಯುವರಲಿ.

**B. Vamana Padiyar,**
ಉಡ್ಪಿ ತಾಲೂಕು ಬೋರ್ಡು
ಉಪಾಧ್ಯಾಯ ಸಂಘದ ಕಾರ್ಯದರ್ಶಿ.

## ದ. ಕ. ಜಿಲ್ಲಾ ಬೋರ್ಡು ಉಪಾಧ್ಯಾಯ, ಉಪಾಧ್ಯಾಯಿನಿಯರ ತಿಳುವಳಿಕೆ ಬಗ್ಗೆ —

ಮಹಾಸಭೆ 8-8-37ಕ್ಕೆ ಮಂಗಳೂರಲ್ಲಿ

ಮಾನ್ಯ ಡಿ.ಬೋರ್ಡಿನವರು ಒಮ್ಮೆ ಉಪಾಧ್ಯಾಯರ ಸಂಬಳದ ಕಡಿತವನ್ನು ತೆಗೆದುಹಾಕಿದ ಬಾಬಿನಲ್ಲಿ ಮಾನ್ಯ ಸರಕಾರವು ಅದಕ್ಕೆ ಸಮ್ಮತಿ ಕೊಟ್ಟು ಬೋರ್ಡಿಗೆ ದ್ರವ್ಯ ಸಹಾಯಮಾಡುವಂತೆ ಉಪಾಧ್ಯಾಯರ ಕಷ್ಟ ಸಂಕಷ್ಟಗಳ ಕುರಿತು ಸರಕಾರಕ್ಕೆ 'ಮೆಮೋರಿಯಲ್' ಕಳುಹಿಸುವ ವಿಷಯದಲ್ಲಿ ಎಲ್ಲಾ ಸೆಂಟರುಗಳಿಗೂ ತಿಳಿಸಿರುವೆನಷ್ಟೆ' ಆದರೆ ಆ ವಿಷಯದಲ್ಲಿ ಹೆಚ್ಚಿನ ಉಪಾಧ್ಯಾಯರು ಗಮನ ಕೊಡದ್ದರಿಂದ ಮೆಮೋರಿಯಲ್ ತಯಾರಿಸುವ ಕೆಲಸವನ್ನು ಬಾಕಿಯಿಡಬೇಕಾಯಿತು. ಆದರೆ ಈಗ ಸರಕಾರದ ಸೂಚನೆ ಮೇರೆಗೆ ಡಿ ಬೋರ್ಡಿನವರು ತಿರುಗಿ ರೂಪಾಯಿಗೆ 1½ ಆಣೆಯಂತೆ ಕಡಿತ ಮಾಡಿದ್ದಾರಾಗಿಯೂ ಉಪಾಧ್ಯಾಯಿನಿಯರ ಸ್ಕೇಲನ್ನು ಉಪಾಧ್ಯಾಯರ ಸ್ಕೇಲಿನ ಮಟ್ಟಕ್ಕೆ ತಂದು ನಿಲ್ಲಿಸಿದ್ದಾರಾಗಿಯೂ ವದಂತಿ ಇದೆ ಈ ಬಾಬಿನಲ್ಲಿ ಉಪಾಧ್ಯಾಯರು ಮಾಡತಕ್ಕ ಪ್ರಯತ್ನ ಏನಾದರೂ ಇವೆಯೆ? ಇರುವುದಾದರೆ ಏನು ಮಾಡಬೇಕು ಎಂದು ನಿರ್ಧಯಿಸುವುದಕ್ಕೆ ತಾ. 8-8-37ನೇ ಆದಿತ್ಯವಾರ10ಘಂಟೆಗೆ(ಪೂರ್ವಾಹ್ನ) ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರ್ಟ್ರೈನಿಂಗ್‌ಶಾಲೆಯ ವಠಾರದಲ್ಲಿ ಡಿ ಬೋರ್ಡು ಸ್ಕೂಲ್ ಉಪಾಧ್ಯಾಯ, ಉಪಾಧ್ಯಾಯಿನಿಯರ ಮಹಾಸಭೆಯು ಜರಗುವುದು. ಅದಕ್ಕೆ ತಪ್ಪದೆ ಎಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರು ದಯಮಾಡಿಸಿರಿ. ಇದೇ ಬರುವ ಆಗೋಸ್ತು ೩೦ಕ್ಕೆ ಸರಕಾರದ ಬಜೆಟ್ ಮಂಜೂರಾಗಲಿಕ್ಕೆ ಇದೆಯಂತೆ. ಅದಕ್ಕೆ ಮೊದಲು ತಾ. 10-8-37ರ ಒಳಗಾದರೂ ನಮ್ಮ ನಿರ್ಣಯವು ಯೂ ನಮ್ಮ ಮನವಿಗಳು ಸರಕಾರಕ್ಕೆ ಡಿ. ಬೋರ್ಡಿನ ಮುಖಾಂತ್ರ ತಲುಪಬೇಕು

ವಿ. ಬಾಬು ಸೆಟ್ಟಿ
ಕಾರ್ಯದರ್ಶಿ.


ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿಯ, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ ಟಾಯಿಂ ಪಾಕೆಟ್ ವಾಚು ಮತ್ತು ಟಾಯಿಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.

*The Manager,*
**The Silver Jubilee Watch Co,**
*Post Box No 571, BOMBAY.*



## ಆತಂಕನಿಗ್ರಹ ಮಾತ್ರೆ

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶ್ವಸ್ತ ಗುಣ ಉಂಟಾಗುವಂತೆ ಮಾಡುತ್ತವೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು.

ಕ್ರಯ: ಡಬ್ಬಿ ೧ಕ್ಕೆ ೧—೦—೦.

**ವಾಜೀಕರಣ ತೈಲ:**—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣಗೊತ್ತಾಗುತ್ತದೆ.

ಕ್ರಯ: ಸೀಸೆ ಒಂದಕ್ಕೆ ೫—೦—೦.

**ಅಮೃತಾರ್ಣವ ಲೇಹ್ಯ:**— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ,ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು,ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು.

ಕ್ರಯ: ಡಬ್ಬಿ ೧ಕ್ಕೆ ೨-೧-೦

**'ಕಾಮುಶಾಸ್ತ್ರ'** ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ

**ಆತಂಕ ನಿಗ್ರಹ ಫಾರ್ಮಸಿ,**
೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ



## ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೊಲೆರಾ ಫಿಲ್ಸ್**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೧—೮—೦

**ಭೈರವ ಮಾತ್ರೆಗಳು**
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.
**ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.**



# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

**THE ROYAL SEED CO.,**
FLORISTS & SEEDSMEN,
27, Ilpay Thope ULSOOR, BANGLORE.

ವಿ ಪಿ—ತರಕಾರಿಗಳು ಮಾರ್ಕೆಟ್ ರೇಟಿಗೆ ಸಪ್ಲೈಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡಿಯುತ್ತೇವೆ ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು.



**ಹೊಸಪುಸ್ತಕ!**

ಕೆ. ಶಾಂತಪ್ಪ ಶೆಟ್ಟಿಯವರಿಂದ ರಚಿತವಾದ

## ಹೆಂಡ್ತಿ ಗಂಡನಾದರೆ?

ಹಾಸ್ಯರಸ ಪ್ರಧಾನವಾದ ಏಕಾಂಕ ಪ್ರಹಸನ ಸ್ಕೂಲ್‌ಡೇ ಮೊದಲಾದ ಸಂದರ್ಭಗಳಲ್ಲಿ ಅಭಿನಯಿಸಲು ಯೋಗ್ಯ ನಾಟಕಗಳು.

ಬೆಲೆ. ೦ ೪ ೦ ಮಾತ್ರ

**ನವಭಾರತ ಬುಕ್ ಡಿಪೋ ಉಡುಪಿ**
ಬೊಂಬಾಯಿಯಲ್ಲಿ
**ವಿ. ಎಸ್. ಸಿಬ್ರ್ಯಾಕರ್**
ದಿ ನೇಶನಲ್ ಕೆಮಿಸ್ಟ್ರೀಸ್ ಏಜನ್ಸಿಯಲ್ಲಿ ಪ್ರತಿಗಳು ದೊರೆಯುತ್ತವೆ

# ಭಿಕಾರಿಣಿ

ಸಾಮಾಜಿಕ ಕಾದಂಬರಿ

## ಅಧ್ಯಾಯ ೬

### "ಅತಿಆಸೆಗೆ ಹೋಗಿ ಗತಿಗೇಡು ಮಾಡಿಕೊಳ್ಳಬೇಡವಮ್ಮಾ: ಸ್ವಾಮಿಯವರಿಗೆ ನಿನ್ನ ಕೈಯಲಿದ್ದ ಹಣಕೊಡಬೇಡ"

ಪರಿಸ್ಥಿತಿಯನ್ನು ಗೆದ್ದು ಅದರ ಮೇಲೆ ಸ್ವಾಮಿತ್ವವನ್ನು ಸ್ಥಾಪಿಸುವ ಪೌರುಷವುಳ್ಳ ಮಾನವರಾದರೂ ಅದೆಷ್ಟು ಮಂದಿ! ಎಲ್ಲರೂ, ತಾವು ಹುಟ್ಟಿ ಬೆಳೆದ, ತಮ್ಮನ್ನು ಸುತ್ತುಮುತ್ತಲಿನಲ್ಲೂ ಒತ್ತುತ್ತಿರುವ ವಿಷ್ಯಮಾನಗಳ ಗುಲಾಮರು. ಪ್ರವಾಹದೊಂದಿಗೆ ಅನಾಯಾಸವಾಗಿ ತೇಲಿ ಸುಗಮವಾಗಿ ಜೀವನ ನಡಿಸುವ ಬದಲಿಗೆ ಅದಕ್ಕೆ ಎದುರಾಗಿ ಅದರ ವಿರುದ್ಧವಾಗಿ ತೇಲುವ ಪ್ರಯಾಸವಾದರೂ ಯಾರಿಗೆ ಬೇಕಾಗಿದೆ? ಆದುದರಿಂದ ಸರ್ವಸಾಮಾನ್ಯವಾಗಿ ಜನರು ತಮ್ಮ ಪೌರುಷವನ್ನು ಕಳೆಕೊಂಡಾದರೂ, ಎಂತಹ ಅಧೋಗತಿ ಗಿಳಿದಾದರೂ ಪರಿಸ್ಥಿತಿಯ ಕೈಗೂಸಾಗಿ ಹೋಗುವರು. ಲೋಕ ರೂಢಿಯೇ ಹೀಗಿರುವಾಗ ಲಲಿತೆಯಂತಹ ಬಾಲಿಕೆಯಾದರೂ ಏನುಮಾಡಿಯಾಳು! ಸುಮಿತ್ರಾಬಾಯಿಯ ನೀತಿಬೋಧೆಯ ಆಶ್ರಯವಿಲ್ಲದ ಅವಳ ಜೀವನವು ಚುಕ್ಕಾಣಿಯಿಲ್ಲದ ದೋಣಿಯಂತಾಯಿತು. ಏನುಮಾಡಿದರೂ ತಾನಿನ್ನು ಪತಿತೆ; ಸಮಾಜವು ತನ್ನ ಬೆನ್ನಿಗೆ ಆ ಕಳಂಕದ ಬರೆ ಹಾಕಿಬಿಟ್ಟಿರುವುದೆಂಬ ಚಿಂತಾಕೀಟವು ಲಲಿತೆಯ ಮನಸ್ಸನ್ನು ಕೊರೆ ಕೊರೆದು ದುರ್ಬಲ ಗೊಳಿಸಿತು. ವಿಶೇಷವಾಗಿ ತಾಯಿಯು, ಒಬ್ಬಳೇ ಮಗಳಾದ ತನ್ನನ್ನು ಪ್ರಾಣಕ್ಕಿಂತಲೂ ಹೆಚ್ಚಿಂದು ಬಗೆದು ಲಾಲಿಸಿ ಪಾಲಿಸಿ ತನಗಾಗಿ ಎಂತಹ ಕಷ್ಟವೂ ದೊಡ್ಡದಲ್ಲೆಂದು ಭಾವಿಸಿಕೊಂಡಿರುವ ಆ ಪ್ರಿಯ ಮಾತೆಯು ಪ್ರತಿ ದಿನವೂ, ಕ್ಷಣಕ್ಷಣವೂ ತನ್ನನ್ನು ಕಂಡು ಕಣ್ಣೀರಿಡುತ್ತಾ ಕೊರಗಿ ಕರಗು ತ್ತಿರುವಾಗ ಅವಳನ್ನು ನಿರಾಶೆಪಡಿಸಿ ಅವಳ ಜೀವನವನ್ನು ಈ ಅಪರ ವಯಸ್ಸಿನಲ್ಲಿ ದುಃಖಮಯವಾಗಿ ಮಾಡಲು ಯಾವ ಮಗಳ ಮನಸ್ಸಾದರೂ ಒಪ್ಪೀತೇ? ಅದು ದೊರತು ಲಲಿತೆಯ ಮುಂದಿನ ಗತಿಯಾದರೂ ಏನು? ಅವಳ ಜೀವನದ ಕೈದೀವಿಗೆಯಾಗಿದ್ದ ಸುಮಿತ್ರಾ ಬಾಯಿಯನ್ನವಳು 'ಪುನಃ ಬಳಿಸಲೇ?' ಛೀ! ಛೀ! ಕಳಂಕಿನಿಗಿನ್ನಾವಗತಿಯನ್ನವರು ತೋರಿಸುವುದು! ಅವರ ಮುಖವನ್ನಾದರೂ ಲಲಿತೆಯು ಹೇಗೆ ನೋಡುವುದು?

ದಿನಹೋದಂತೆ ಲಲಿತೆಯ ಹಿಂದಿನ ಸ್ಮರಣೆಯು ಮಾಸಿಹೋಗಹತ್ತಿತು. ಶರಾಬು ಅವಳ ಶರೀರದ ಮೇಲೆ ಯಾವ ಟಾನಿಕೂ ಮಾಡದ ಪರಿಣಾಮ ಮಾಡಿಬಿಟ್ಟಿತು. ಅವಳ ವಿವೇಕವನ್ನೂ ಮಬ್ಬುಗೊಳಿಸಿತು. ನಾಗಿಗೀಗ ಸಂತೋಷವೇ ಸಂತೋಷ. ತನ್ನ ಮಗಳು ಸುಖ ವೈಭವದಲ್ಲಿ ಮೆರೆಯು ವುದನ್ನು ಕಂಡು ಆನಂದಿಸುವ ತನ್ನ ಕಲ್ಪನೆಯ ಸ್ವರ್ಗವು ಬಾಗಿಲಿಗೆ ಬಂದಿರುವು ದೆಂದೇ ಭಾವಿಸಿ ಆಸಳು ಉಬ್ಬಿ ನಲಿಯುತ್ತಿದ್ದಳು. ತನ್ನ ಜನ್ಮವಿನ್ನು ಸಾರ್ಥಕ ವಾಯಿತೆಂದು ಅವಳೆನಿಸಿಕೊಂಡಿದ್ದಳು. ಬಹಳ ಲಾವಣ್ಯವತಿಯಾಗಿಯೂ ಪುಷ್ಟಿಯಾಗಿಯೂ ಬೆಳೆದ ಲಲಿತೆಗೆ ಶಿವಾನಂದರು ಸಂಪೂರ್ಣವಾಗಿ ಒಲಿದು ಹೋಗಿದ್ದರು. ಅವಳಿಗೆ ಬೇಕುಬೇಕಾದ ಚಿನ್ನಾಭರಣಗಳನ್ನೆಲ್ಲಾ ಮಾಡಿಸಿ ಹಾಕಿದ್ದರು. ಇದಕ್ಕೆಲ್ಲಾ ನಾಗಿಯೇ ಕಾರಣ. ಈಗ ತನ್ನ ಮಾತಿನಂತೆಕೇಳುವ ಲಲಿತೆಯ ಶರೀರವನ್ನವಳು ಶಿವಾನಂದರಿಗೆ ವಿಕ್ರಯಿಸಿ ಆಗಾಗ ಅದಕ್ಕೆ ತಕ್ಕ ಬೆಲೆಪಡೆಯುತ್ತಿದ್ದಳು. ಶಿವಾನಂದರಿಗೆ ಲಲಿತೆಯೆಂದರೆ ಪ್ರಾಣ. ಒಂದು ರಾತ್ರಿಯಾದರೂ ಅವರಿಗೆ ಅವಳನ್ನು ಬಿಟ್ಟಿರಲು ಸಾಧ್ಯವೇ ಆಗುತ್ತಿದ್ದಿಲ್ಲ. ಅವರೆಲ್ಲಿಯಾದರೂ ಊರುಬಿಟ್ಟು ಸಂಚಾರಕ್ಕೆ ಹೋದರೆಂದರೆ ರಾತ್ರಿ ಮೋಟರ್‌ಕಾರಿನಲ್ಲಿ ಲಲಿತೆಯು ಅವರ 'ಕ್ಯಾಂಪಿಗೆ' ಗುಪ್ತವಾಗಿ ಒಯ್ಯ ಲ್ಪಡಬೇಕು. ಶಿವಪುರದ ಮಠದಲ್ಲಂತೂ ಕೆಲವು ವೇಳೆ ರಾತ್ರಿ ಹಗಲು ಶಿವಾನಂದ ಲಲಿತೆಯರ ಭೋಗವಿಲಾಸ ನಡೆಯುತ್ತಿತ್ತು. ಸ್ವಾಮಿಯವರು ಲಲಿತೆ ಯನ್ನು ಎರಡು ಮೂರು ದಿವಸ ಮನೆಗೆ ಕಳುಹಿಸದೆ ಮಠದಲ್ಲಿಯೇ ಇರಿಸಿ ಕೊಳ್ಳುವುದೂ ಇತ್ತು. ಆಗ ನಾಗಿಯೂ ಮನೆಗೆ ಬಾಗಿಲುಹಾಕಿ ಒಂದು ಮಗಳೊಂದಿಗೆ ಮಠದಲ್ಲಿಯೇ ಇದ್ದುಬಿಡುತ್ತಿದ್ದಳು. ಮಠದಲ್ಲಿದ್ದ ಕೆಲವರಿಗಿದು ಅಸಹನೀಯವಾಗುತ್ತಿತ್ತು. ಆದರೆ ಮಾಡುವುದೇನು? "ಶಿವ ಶಿವ! ಅನಾಚಾರ ಇದು!" ಎಂದು ಗುಪ್ತವಾಗಿ ಕೆಲವುಂದಿ ಮುದುಕಿಯರು ಮಾತಾಡಿಕೊಳ್ಳುತ್ತಿದ್ದರಷ್ಟೆ. ಶಿವಾನಂದರ ಭೋಗ ವಿಲಾಸವು ಮಠದೊಳ ಗೇನೇ ಅಪ್ರತಿಹತವಾಗಿ ನಡೆಯುತ್ತಿತ್ತು. ಶಿವಪೂಜೆಗೆ ಕೂಡ, ಮಠದ ಪಾರುಪತ್ಯಗಾರರು ಪರಶಿಂಪೆಯ ಮುಖಾಂತರ ಮೂರು ಮೂರು ಸಲ ನೆನಪು ಮಾಡಿಸಿ ಅವರನ್ನು ಬರುವಂತೆ ಮಾಡಬೇಕಾಗಿದ್ದಿತು. ಶಿವಾನಂದರು ಕ್ಷಣ ಮಾತ್ರದಲ್ಲಿ ಪೂಜೆ ಮುಗಿಸಿ ಹೋಗಿಬಿಡುತ್ತಿದ್ದರು. ಒಂದಿಷ್ಟೇನಾದರೂ ವಿಳಂಬವಾದರೆ ಉರಿದುಬೀಳುತ್ತಿದ್ದರು. ಪೂಜಾ ಸಾಹಿತ್ಯವನ್ನೊದಗಿಸಿ ಭಟ್ಟನಿಗೆ ಕೊಡುವ ಸಿಟ್ಟಿನ ಭರದಿಂದ ಹೊಡೆದುದೂ ಇದೆ.

ಶಿವಪುರದ ಪ್ರತಿಷ್ಠಿತ ಸಮಾಜವು ಶಿವಾನಂದರ ಭೋಗವಿಲಾಸದ ಕತೆಗಳನ್ನೆಲ್ಲಾ ರುಚಿಕರವಾಗಿ ಸವಿಸವಿದು ಜಡವಾಗಿ ಬಿದ್ದಿತಾದರೂ, ಹೆಚ್ಚೆಂದರೆ, "ಛೀ! ಛೀ!! ಮಠದೊಳಗೇನೇ ತಂದಿಟ್ಟುಕೊಂಡಿರುವರೇ? ಇನ್ನೇನೂ ಮಾಡಿಯಾರು ಅವರು!" ಎಂದಿಷ್ಟೇ ಛೀಕರಿಸಿ ತಣ್ಣಗಿದ್ದಿತಾದರೂ, ಶಾಕ ಪ್ರೋಕ ಕೊಟವು ಶಿವಾನಂದರನ್ನೇನೂ ಹಾಗೆಯೇ ಬಿಡಲಿಲ್ಲ. ಅದು ಶಿವಾನಂದರು ನೋಡ ಸಿಕ್ಕಿದಲ್ಲೆಲ್ಲಾ "ಲಲಿತೆ! ಲಲಿತೆ!!"ಯೆಂದು ಕೂಗಿಡು ತ್ತಿತ್ತು. ಮಠ, ಮತ್ತು ಶಿವಗುಡಿಯ ಗೋಡೆಗಳಲ್ಲೆಲ್ಲಾ ದೊಡ್ಡದೊಡ್ಡ ಕಪ್ಪು ಅಕ್ಷರಗಳಲ್ಲಿ 'ಶಿವಾನಂದ ಲಲಿತಾ ವಿಲಾಸ' ಎಂದು ಬರೆದಿಟ್ಟಿತು. ಎಲ್ಲಿಯಾದರೂ ಲಲಿತೆಯು ಸಿಕ್ಕಿದಳೆಂದರೆ ಅವಳ ಬೆನ್ನುಹತ್ತಿ, "ಶಿವಾನಂದ! ಶಿವಾನಂದ!!" ಎಂದು ಕೂಗಿಟ್ಟುಕಾಡುತ್ತಿತ್ತು. ಇದರಿಂದಾಗಿ ಲಲಿತೆಗೆ ಸರಾಗವಾಗಿ ಹೊರಗೆ ಮುಖವೆತ್ತಿ ಹೋಗಲೂ ಇದ್ದಿಲ್ಲ. ಎಲ್ಲಿಯಾದರೂ ಅಪರೂಪವಾಗಿ ಶಿವಗುಡಿಗೆ ಹೋದಳೆಂದರೆ ಅಲ್ಲಿಯೂ ಅವಳಿಗೆ ಈ ತಲೆಹೋಕ ತರುಣರ ಕಾಟ ತಪ್ಪುತ್ತಿದ್ದಿಲ್ಲ.

ಇದೀಗ ತನ್ನ ಮನೋರಥವನ್ನು ಸಂಪೂರ್ಣವಾಗಿ ನೆರವೇರಿಸಿ ಕೊಳ್ಳುವ ಸಂದರ್ಭವೆಂದು ನಾಗಿಯು, ಲಲಿತೆಯೊಡನೆ, "ಇವತ್ತು ಸ್ವಾಮಿ ರೊಡನೆ ಆ ಚಿನ್ನವಾಗಬೇಕೆಂದು ಹೇಳು, ಈ ವಸ್ತ್ರ ತೆಗೆದುಕೊಡಹೇಳು, ಒಂದು ಒಳ್ಳೇ ಮನೆ ಕಟ್ಟಿಸಿಕೊಡಲು ಒತ್ತಾಯಮಾಡು," ಎಂದೆಲ್ಲಾ ಪರಿಪರಿ ಹೇಳಿಕೊಟ್ಟರೂ ಲಲಿತೆಯು ಒಂದನ್ನೂ ಕೇಳದೆ ಶರಾಬು ಕುಡಿದು ತನ್ನ ದೇಹವನ್ನಷ್ಟೆ ಶಿವಾನಂದರ ಭೋಗಕ್ಕಾಗಿ ಒಪ್ಪಿಸಿ ಸುಮ್ಮನಿರುತ್ತಿದ್ದಳು. ನಾಗಿಯು ಬಹಳ ಒತ್ತಾಯಮಾಡಿದರೆ, "ಅದೆಲ್ಲಾ ನನ್ನಿಂದಾಗದು. ನೀನು ಬೇಕಾದರೆ ಕೇಳು" ಎಂದು ಬಿರುನುಡಿಯುತ್ತಿದ್ದಳು. ನಾಗಿಯು ಒಂದೊಮ್ಮೆ ನಿರಾಶೆಗೊಂಡರೂ ಅಷ್ಟರಲ್ಲೇ ಬಿಡದೆ ತಾನೇ ಸ್ವತಃ ಆಗಾಗ ಸ್ವಾಮಿಯ ಬಳಿಗೆ ಹೋಗಿ ಮೊದಲು ಮಾತುಕೊಟ್ಟುದನ್ನು ನೆನಪುಮಾಡು ತ್ತಿದ್ದಳು. "ಲಲಿತೆಗೊಂದು ಒಳ್ಳೇ ಮನೆ ಕಟ್ಟಿಸಿ ಹಾಕಬೇಕು ಪರಾಕೆ. ಜೀವನಕ್ಕೆ ಬೇಕಷ್ಟು ಆಸ್ತಿಯನ್ನೂ ಮಾಡಿಕೊಡಬೇಕು. ಅವಳಿಗೆ ಅದನ್ನೆಲ್ಲಾ ನಿಮ್ಮೊಡನೆ ಹೇಳಲು ನಾಚಿಕೆಯಾಗುತ್ತದಂತೆ." ಎಂದು ಕಾಡುತ್ತಿದ್ದಳು. ಶಿವಾನಂದರು, "ಆಯ್ತು ಎಲ್ಲಾ ಮಾಡುವ- ಈಗ ಅವಸರವೇನು? ಒಳ್ಳೇ ಆಸ್ತಿಯೊಂದನ್ನು ಕೊಡುಕುತ್ತಿದ್ದೇನೆ. ಅದರಲ್ಲೇ ಮನೆಕಟ್ಟಿಸಿದರೆ ಒಳ್ಳೇದಲ್ಲವೇ?" ಎಂಬ ಸವಿ ಮಾತುಗಳಿಂದ ನಾಗಿಯನ್ನು ಸಮಾಧಾನಪಡಿಸುತ್ತಿದ್ದರು.

ಶಿವಾನಂದರು ಯಾರ ತಲೆ ಬಡಿದಾದರೂ, ಯಾವ ಸಂಚುವಂಚನೆ ಮಾಡಿಯಾದರೂ ತನ್ನ ವೆಚ್ಚಕ್ಕೆ ಬೇಕಷ್ಟು ಹಣ ಸಂಪಾದನೆ ಮಾಡಿಕೊಳ್ಳು ತ್ತಿದ್ದರು. ಅದರಿಂದಾಗಿಯೇ ಸಮಾಜವು "ಬುದ್ಧಿವಂತ, ಕಾರುಬಾರಿ" ಎಂಬ ಬಿರುದುಗಳ ಸನದನ್ನು ಅವರ ಕುತ್ತಿಗೆಗೆ ತೂಗಹಾಕಲು ಕಾರಣ. ಆದರೆ ಸ್ವಲ್ಪ ಸಮಯ ಎಲ್ಲವರನ್ನೂ ವಂಚಿಸಬಹುದು. ಕೆಲವರನ್ನು ಎಲ್ಲಾ ಸಮಯ ವಂಚಿಸಬಹುದು. ಎಲ್ಲವರನ್ನೂ ಯಾವಾಗಲೂ ವಂಚಿಸಲು ಸಾಧ್ಯವೇ ಇಲ್ಲ. ಶಿವಾನಂದರು ತನ್ನ ಸ್ಥಾನಮಾನದ ಬಲದಿಂದ ಕೆಲ ಸಮಯ ಹಲವರನ್ನು ತನ್ನ ಬಲೆಯೊಳಗೆ ಹಾಕಿ, ಮಂಕುಬೂದಿ ಬಳೆದು ಹಣ ಸಂಪಾದಿಸುತ್ತಿದ್ದರು. ಅವರಿವರಿಂದ ನಾಳೆ ನಾಡದು ಕೊಡುತ್ತೇನೆಂದು ಕೈಕಡವಾಗಿಯೇ ಹಲವು ಸಹಸ್ರ ರೂಪಾಯಿ ಪಡೆದರು. ಆಮೇಲೆ ಕೈಕಡ ಸಿಗಲಿಲ್ಲ. ಮಠದ ಚಿನ್ನಾಭರಣಗಳೆಲ್ಲಾ ಬೇಂಕಿಗೆ ಹೋದುವು. ದೇವರ ಮೇಲಿನ ತಮ್ಮ ಭಕ್ತಿಯ ಸಂಕೇತವಾಗಿ, ತಮ್ಮ ತ್ಯಾಗ ಬುದ್ಧಿಯ ಹೆಗ್ಗುರುತಾಗಿ, ಮಠವು ಧರ್ಮಪ್ರಚಾರಕ ಸಮಾಜೋಪಕಾರಿ ಸಂಸ್ಥೆಯೆಂಬ ವಿಶ್ವಾಸದಿಂದ ಭಜಕ ಜನರಿತ್ತಿದ್ದ ಉಂಬಳಿಯಾದ ಹೇರಳ ಆಸ್ತಿಯ ಉತ್ಪತ್ತಿಯು ದುರ್ವ್ಯಯವಾಗುವುದಂತಿರಲಿ; ಭಕ್ತ ಜನರು ದೇವಮೂರ್ತಿಯ ಮೇಲಿನ ತಮ್ಮ ನಿತಾಂತ ಭಕ್ತಿಯ ಬಾಹ್ಯ ಸ್ವರೂಪವಾಗಿ ಕಷ್ಟಾರ್ಜಿತ ದ್ರವ್ಯದಿಂದ ತಯಾರಿಸಿ ಸಮರ್ಪಿಸಿದ ಚಿನ್ನಾಭರಣಗಳೆಲ್ಲಾ ಬೇಂಕಿನ ತ್ರಿಜೋರಿಯೊಳಗೆ ಸೇರಿದುವು. ಅವಶ್ಯಕತೆಯು ಯಾವ ವಿಧಿ ನಿಯಮ ವನ್ನಾದರೂ ಗಣಿಸುವುದೇ? ಶಿವಾನಂದರ ಭೋಗವಿಲಾಸವು ಹೆಚ್ಚಿದಂತೆ ವೆಚ್ಚವೂ ದಿನೇ ದಿನೇ ಬೆಳೆಯಿತು. ಹಣದ ಅತಚಣೆಯು ಅವರ ಜೀವನವನ್ನೇ ತಿನ್ನಹತ್ತಿತು. ಒಮ್ಮೊಮ್ಮೆ ಅವರಿಗೆ ಐದು ಹತ್ತು ರೂಪಾಯಿಗಳ ಅಡಚಣೆಯೂ ಆಗಿ ಏನುಮಾಡುವುದೆಂದು ತೋಚದೆ ತಳಮಳಿಸುತ್ತಿದ್ದರು.

ನಾಗಿಯು ಬಹಳ ಸೂಕ್ಷ್ಮದವಳು. ಜೀವನದಲ್ಲೊಂದು ಕ್ರಮವಿದ್ದ ವಳು. ಎಂದಿಗೂ ಕ್ರಮತಪ್ಪಿ ಹೋಗುತ್ತಿದ್ದೇ ಇಲ್ಲ. ಪ್ರಾಯದ ಕಾಲದಲ್ಲಿ ಸಿಕ್ಕಾಬಟ್ಟೆಯಾಗಿ ಶರೀರವನ್ನು ವಿಕ್ರಯಿಸಿ ಸುಖೋಪಭೋಗದಲ್ಲಿ ಮುಳುಗಿ ದ್ವಿಪಾದ ಪಶುವಿನಂತೆ ವರ್ತಿಸಲಿಲ್ಲ. ಪ್ರತಿಷ್ಠಿತರೆನಿಸುವ ಕೆಲವೇ ಮಂದಿ ಯನ್ನುಮಾತ್ರ ನಂಬಿಕೊಂಡಿದ್ದಳು. ಮತ್ತು ಅವರಿಗೆ ಬೇಕಾದ ರುಚಿಕರವಾದ ತಿಂಡಿತಿನಸನ್ನೋ ಊಟವನ್ನೋಮಾಡಿ ಹಾಕಿಒಲಿಸಿಕೊಳ್ಳುತ್ತಿದ್ದಳು. ಒಂದೇ ಮಾತಿನಲ್ಲಿ ಹೇಳುವುದಾದರೆ ನಾಗಿಯು ಮರ್ಯಾದೆಯ ಸೂಳೆಯಾಗಿದ್ದಳು. ಪ್ರಾಯ ಮೀರಿದ ಮೇಲೂ ತನ್ನ ಹಿಂದಿನ ಸ್ನೇಹಿತರಿಗೆ ಊಟಹಾಕುವುದನು ನಿಲ್ಲಿಸಲಿಲ್ಲ. ನಾಗಿಯ ಊಟದ ಸವಿಗಂಡ ಆ ಸದ್ಗೃಹಸ್ಥರು ಪೇಟೆಗೆ ಬಂದಾಗ ಊಟಕ್ಕೆ ಬೇರೆ ಎಲ್ಲಿಯೂ ಹೋಗುತ್ತಿದ್ದಿಲ್ಲ. ನಾಗಿಯೂ ತಾನು ಉತ್ತಮ ಜಾತಿಯವಳೆಂದು ಹೇಳಿಕೊಳ್ಳುತ್ತಿದ್ದಳು. ಅವಳು ಯಾವ ಜಾತಿ ಯವಳಾದರೂ ಸವಿ ತಿಂಡಿತಿನಿಸುಗಳಿಗೆ ಮರುಳಾಗದವರೇ ಅಪರೂಪವಲ್ಲವೆ? ನಾಲಿಗೆ ಸವಿಯಿಂದ ಮನಸ್ಸು ಅದೆಷ್ಟು ಬೇಗ ಸೂರೆಯಾಗಿ ಬಿಡುವುದು! ಹೀಗೆ ನಾಗಿಯ ಮನೆಗೆ ಆಗಾಗ ಊಟಕ್ಕೆ ಬರುತ್ತಿದ್ದ ಸದ್ಗೃಹಸ್ಥರು ಅವಳಿ ಗೇನಾದರೂ ಪ್ರತಿಫಲಕೊಟ್ಟು ಹೋಗುತ್ತಿದ್ದರು. ಅದವಳ ಊಟಕ್ಕೆ ಬೆಲೆ ಯಲ್ಲ, ಅವಳ ಮೆಹನತ್ತಿಗೆ ಪ್ರತಿಫಲ. ಹಿಂದೆ ನಾಗಿಯ ಸವಿ ತಿನಸುಗಳನ್ನು ತಿಂದು ಅವಳೊಡನೆ ಸುಖಿಸಿದ ಕೆಲವರು ನಾಗಿಗೆ ತಮ್ಮ ತಮ್ಮ ಶಕ್ತ್ಯನು ಸಾರ ಈಗಲೂ ಸಹಾಯಮಾಡುತ್ತಿದ್ದರು. ಹೀಗೆ ನಾಗಿಯು ಕೆಲವೇ ಜನರ ಮನಸ್ಸನ್ನೊಲಿಸಿಕೊಂಡು ಅವರು ಆತ್ಮಸಂತೋಷದಿಂದಲೇ ಕೊಡುವ ಹಣ ವನ್ನೆಲ್ಲಾ ಸ್ವಲ್ಪಸ್ವಲ್ಪವಾಗಿ ಉಳಿಸಿ ನಾಲ್ಕೈದು ಸಾವಿರ ರೂಪಾಯಿಗಳನ್ನು

ಬೇಂಕಿನಲ್ಲಿಟ್ಟಿದ್ದಳು. ಅದರ ಬಡ್ಡಿ ಕೂಡಾ ತೆಗೆದುಕೊಳ್ಳದೆ ಬೇಂಕಿನಲ್ಲಿದ್ದು ಹಾಗೆಯೇ ಬೆಳೆಯುತ್ತಿತ್ತು. ಇದು ಶಿವಾನಂದರಿಗೆ ತಿಳಿದಿತ್ತು. ಅಡಚಣೆಯ ಸಮಯದಲ್ಲಿ ಮನಸ್ಸು ಅದನ್ನು ನಿವಾರಿಸುವುದಕ್ಕಾಗಿ ಎಂತೆಂತಹ ತಂತ್ರಗಳನ್ನೆಲ್ಲಾ ಮಾಡುವುದೆಂದು ಹೇಳಬರುವುದಿಲ್ಲ. ಶಿವಾನಂದರು ಒಂದು ದಿನ ತನ್ನ ಬೈಠಕು ಖಾನೆಯಲ್ಲಿ ಗರ್ಜಿಯ ಸರಳಮಂಚದ ಮೇಲೆ ಪವಡಿಸಿ ಚಡಪಡಿಸುತ್ತಿದ್ದವರು ಜಗ್ಗನೆದ್ದು ನರಸಿಂಹನನ್ನು ಕರೆದು ಕೂಡಲೆ ಕಾರುಕೊಂಡು ಹೋಗಿ ನಾಗಿಯನ್ನು ಕರೆತರ ಹೇಳಿದರು. ಅವನು ಕೂಡಲೆ ಅವಳನ್ನು ಕರೆತಂದನು.

"ನಾಗಿ, ನೀನು ಯಾವಾಗಲೂ 'ಆಸ್ತಿ, ಮನೆ' ಎಂದು ಕಾಡುತ್ತಾ ಇರುವೆಯಲ್ಲ. ಅದಕ್ಕಾಗಿ ಈಗ ಒಳ್ಳೇ ಆಸ್ತಿಯೊಂದನ್ನು ತೆಗೆದುಕೊಂಡು ಅದರಲ್ಲೊಂದು ಭವ್ಯ ಮನೆ ಕಟ್ಟಿಸುವ ನಿರ್ಧಾರಮಾಡಿದ್ದೇನೆ. ಶಿವಪುರದಿಂದ ೫ ಮೈಲು ದೂರದಲ್ಲಿದೆ ಅದು. ಬಹಳ ಒಳ್ಳೇ ಆಸ್ತಿ. ಬಹಳ ಅನುಕೂಲ. ಬಹಳ ಸಲೀಸಾಗಿಯೂ ಸಿಗುತ್ತದೆ. ಮರಕ್ಕಾದರೆ ಒಂದೆರಡು ಸಾವಿರ ಬಿಟ್ಟುಕೊಡಲಿಕ್ಕೂ ಆ ಆಸ್ತಿಯ ಮಾಲಿಕ ಒಪ್ಪಿದ್ದಾನೆ. ಅವನೊಬ್ಬ ಬ್ರಾಹ್ಮಣ. ನಮ್ಮ ಕಾರುಪತ್ಯಗಾರರಿಗೂ ಅವನಿಗೂ ದೂರದ ಸಂಬಂಧವಿದೆ. ಅವನಿಗೀಗ ಜರೂರೊಂದು ಗರ್ಜಿಯಿದೆ. ನಾಳೆಯೇ ಬೇಂಕಿಗೆ ಕಟ್ಟಲು ರೂ. 5000 ಬೇಕಂತೆ. ಆಸ್ತಿಗೆ ಕಣ್ಣುಮುಚ್ಚಿ ರೂ. 12,000 ಕೊಡಬೇಕು. ನಮಗೆ ಮತ್ತೂ ಕಡಿಮೆಮಾಡಿ ರೂ 10,000ಕ್ಕೆ ಕೊಡುವೆನೆಂದು ಹೇಳಿದ್ದಾನೆ. ಮನುಷ್ಯ ಒಳ್ಳೆಯವ, ಸಾಧುಪ್ರಾಣಿ. ನಮ್ಮ ಹತ್ತಿರ ಈಗ ನಾಳೆಗೇನೇ ಹಣ ಒದಗಿಸಲು ಸಾಧ್ಯವಿಲ್ಲ. ಒಂದು ವಾರದ ಮೇಲೆ ನನಗೊಂದು ರೂ. 10,000 ಬರುವುದಿದೆ. ಒಂದು ಆಸ್ತಿ ಅಡವಿನ ಮೇಲೆ ಹಾಕಿದುದು. ಆ ಆಸಾಮಿ ಬೊಂಬಾಯಿಯಲ್ಲಿ ಹೊಟೇಲಿಟ್ಟು ದುಡ್ಡು ಮಾಡಿದೆ. ಅಡವಿನ ಹಣ ಕಟ್ಟುತ್ತದಂತೆ. ಆದರೆ ಒಂದು ಹಪ್ತೆಯವರೆಗೆ ಈ ಬ್ರಾಹ್ಮಣನಿಗೆ ಕಾಯಲು ಸಾಧ್ಯವಿಲ್ಲ. ಅವನಿಗೀಗ ರೂ. 5000 ನಾಳೆ ಆಗದೆ ನಿರ್ವಾಹವಿಲ್ಲವಂತೆ. ಏನು ಮಾಡುವುದೆಂದು ನಿನ್ನೊಡನೆ ವಿಚಾರಿಸಲು ನಿನ್ನನ್ನೀಗ ಕರೆಸಿದುದು" ಎಂದರು ಶಿವಾನಂದರು ನಾಗಿಯೊಡನೆ ಬಹಳ ಉತ್ಸಾಹದರ ಮುಖಮುದ್ರೆಯಿಂದ. "ನಾನೇನು ಮಾಡುವುದು ಬುದ್ಧಿ? ನನ್ನ ಹತ್ತಿರ ಹಣವಿದೆಯೋ?" ಎಂದಳು ನಾಗಿ ಮಂದಹಾಸದಿಂದ. "ಅದೆಲ್ಲಾ ಕಣ್ಣುಕಟ್ಟು ಬೇಡ. ಬೇಂಕಿನಲ್ಲಿ ನಿನ್ನದು ಐದಾರು ಸಾವಿರ ರೂಪಾಯಿ ಇದೆಯಂತೆ. ಅದರಲ್ಲೀಗ ಒಂದು 4000 ರೂಪಾಯಿ ತೆಗೆದುಕೊಡು. ಬಾಕಿ ಒಂದು ಸಾವಿರ ನಾವು ಹೇಗಾದರೂ ಮಾಡಿ ಹಾಕುತ್ತೇವೆ. ಒಂದು ಹಪ್ತೆಯ ಮೇಲೆ ನಿನ್ನ ಹಣ ನಿನಗೆ ಹಿಂದೆಕೊಡುವ" ಎಂದರು ಸ್ವಾಮಿಯು ಮುಗುಳ್ನಗೆ ಬೀರುತ್ತ ಬೀರುತ್ತ. ತನ್ನ ಮಗಳಿಗೊಂದು ಆಸ್ತಿ ಮತ್ತು ಮನೆಯಾಗಬೇಕೆಂಬ ಹುಚ್ಚೇ ಹಿಡಿದ ನಾಗಿಯ ಆನಂದಕ್ಕೀಗ ಪಾರವೇ ಇಲ್ಲದಾಯಿತು. ಆ ಆನಂದೋತ್ಸಾಹದ ಪ್ರವಾಹದಲ್ಲಿ ಅವಳ ವಿಚಾರ ವಿವೇಕವೆಲ್ಲವೂ ಕೊಚ್ಚಿಹೋಯಿತು. ಅವಳು ಒಡನೆಯೇ, "ಆಯ್ತು ಧರಾಕೆ, ಈಗಿನ ಮಟ್ಟಿಗೆ ಹೇಗಾದರೂ ಮಾಡಿ ರೂ. ನಾಲ್ಕು ಸಾವಿರ ನಾನು ಕೊಡುತ್ತೇನೆ. ಒಂದು ಹಪ್ತೆಯ ನಂತರ ಮಾತ್ರ ಹಿಂದೆ ಕೊಡಬೇಕು. ತಪ್ಪಬಾರದು. ಆಸ್ತಿ ಮಾತ್ರವಲ್ಲ ಒಳ್ಳೆ ಮನೆಯೊಂದನ್ನೂ ಬೇಗನೆ ಕಟ್ಟಿಸಬೇಕು. ನಿಮಗೂ ಆದು ಅನುಕೂಲ ಧರಾಕೆ ಬಂದು ಹೋಗಲಿಕ್ಕೆ. ಈಗ ನಿಮಗೂ ತೊಂದರೆ ನಮಗೂ ತೊಂದರೆ. ಈ ಊರೇ ಬಿಟ್ಟು ದೂರವಿದ್ದು ಬಿಟ್ಟರೆ ಬಹಳ ಒಳ್ಳೇದು ಬುದ್ಧಿ" ಎಂದಳು. ಶಿವಾನಂದರು ಇಷ್ಟು ಸುಲಭವಾಗಿ ತನ್ನ ಕೆಲಸವಾಗುವುದೆಂದು ಎಣಿಸಿದ್ದಿಲ್ಲ. ಅವರಿಗೆ ಹೊಸ ಪ್ರಾಣವೇ ಬಂದಂತಾಯಿತು. ಅವರು "ನಿನಗೆ ಯಾವ ಸಂದೇಹವೂ ಬೇಡ. ನನ್ನ ಲಲಿತೆಯು ಸುಖವಾಗಿರುವಂತೆ ನೋಡುವುದು ನನ್ನ ಕರ್ತವ್ಯವಲ್ಲವೇ? ಸದಾ ಅದೇ ಯೋಚನೆಯಲ್ಲಿರುವ ನನಗೆ ನೀನು ಆ ವಿಷಯದಲ್ಲಿ ಹೇಳಬೇಕೇ? ನನಗೀಗ ಪೂಜೆಗೆ ಹೊತ್ತಾಯಿತು. ನೀನು ಹೋಗಿ ಇಂದೇ ಹಣತೆಗೆದು ರಾತ್ರಿ ತಂದುಕೊಡು"ಎಂದರು. "ಆಯ್ತು ಬುದ್ಧಿ ಆಯ್ತು" ಎಂದು ನಾಗಿಯು ಹೊರಟುಹೋದಳು. ನರಸಿಂಹನು ಅವಳನ್ನು ಕಾರಿನಲ್ಲೇ ಅವಳ ಮನೆಗೊಯ್ದು ಬಿಟ್ಟನು. ಈಗ ಎಲ್ಲವೂ ಬಹಿರಂಗವಾಗಿಯೇ ನಡೆಯುತ್ತಿತ್ತು. ನಾಗಿ ಲಲಿತೆಯರು ಶಿವಾನಂದರ ಪರಿವಾರಕ್ಕೆ ಸೇರಿಹೋಗಿದ್ದರು.

‘ನವಯುಗ’ಕ್ಕೊಪ್ಪುವ ಪತ್ರಿಕೆಯೆಂದರೆ ‘ನವಯುಗ’.

ಮನೆಗೆ ಹೋದೊಡನೆಯೇ ನಾಗಿಗೆ ಮತ್ತಷ್ಟು ಆನಂದವಾಯಿತು. ಆನಂದದುಬ್ಬಿನಲ್ಲಿ ಅವಳ ಶರೀರವು, ವಿಶೇಷ ನಾಳಿ ತುಂಬಿದ ಕಾಲ್ಚೆಂಡಿನಂತೆ ನಿಂತಲ್ಲಿ ನಿಲ್ಲದೆ ನಲಿಯುತ್ತಿತ್ತು. ಅವಳು ಎರಡೆರಡು ಸಲ ಒಳ ಹೋದವಳು ಹೊರಬಂದು ರಸ್ತೆಯ ಕಡೆ ಇಣಕಿ ನೋಡಿ ಒಳಹೋದಳು. ಆ ಮೇಲೆ, "ಲಲಿತ! ಲಲಿತ!! ಎಲ್ಲಿರುವೆ?" ಎಂದು ಬೊಬ್ಬೆ ಹಾಕಿ ಕರೆದು ಲಲಿತೆಯ ಕೋಣೆಗೆ ಧಾವಿಸಿದಳು. ಕುರ್ಚಿಯ ಮೇಲೆ ಕುಳಿತು ಏನೋ ಪುಸ್ತಕವೊಂದ ನೋಡುತ್ತಿದ್ದ ಲಲಿತೆಯನ್ನು ಥಕ್ಕನೆ ಬಿಗಿಹಿಡಿದು ಮುದ್ದಾಡಿ, "ಇನ್ನು ನಿನ್ನ ಭಾಗ್ಯೋದಯವಾಯಿತು ಮಗು! ನಿನಗೇನಿನ್ನು ಕಡಿಮೆಬರಲಿಕ್ಕಿಲ್ಲ. ನಾನಿನ್ನು ಸತ್ತರೂ ಚಿಂತೆಯಿಲ್ಲ" ಎಂದಳು. ನಾಗಿಯ ಹಠಾತ್ತಾದ ಈ ಉತ್ಸಾಹಕ್ಕೆ ಕಾರಣವೇನೆಂದು ತಿಳಿಯದೆ ಲಲಿತೆಯು ತುಸುಸಮಯ ವಿಸ್ಮಯಪಟ್ಟಳು. ಆ ಮೇಲೆ, "ಏನಮ್ಮಾ? ಏನಾಯಿತು ಅಂತಹದೀಗ?" ಎಂದು ಪ್ರಶ್ನಿಸಿದಳು. "ಏನಾಯಿತೊ? ರೂಪಾಯಿ ಹತ್ತುಸಾವಿರದ ಆಸ್ತಿಯಾಯಿತು. ಆ ಮೇಲೊಂದು ಒಳ್ಳೇ ಮನೆ. ಸ್ವಾಮಿಯು ಕಟ್ಟಿಸುವಾಗ ರೂಪಾಯಿ ಐದು ಸಾವಿರವಾದರೂ ಅದಕ್ಕೆ ಖರ್ಚುಮಾಡದಿರಲಿಕ್ಕಿಲ್ಲ. ಇದು ಹೊರತು ನಾನು ಗಳಿಸಿಟ್ಟ ಹಣ ಐದುಸಾವಿರ. ಒಟ್ಟು ರೂಪಾಯಿ ಇಪ್ಪತ್ತು ಸಾವಿರವಾಯಿತು! ಇನ್ನೇನು ಬೇಕು?" ಎಂದಳು ನಾಗಿ. "ಏನಾಯಿತಮ್ಮಾ ಸರಿಯಾಗಿ ಹೇಳಬಾರದೇ? ನಿನ್ನನ್ನೇಕೆ ಸ್ವಾಮಿಯು ಕರೆಸಿದುದು?" ಎಂದಳು ಲಲಿತೆ ನಾಗಿಯ ಉತ್ಸಾಹದಲ್ಲಿ ಭಾಗಿಯಾಗದೆ ತಣ್ಣಗಿದ್ದು. "ನನ್ನನ್ನು ಸ್ವಾಮಿಯು ಕರೆಸಿದುದು ರೂಪಾಯಿ ಹತ್ತು ಸಾವಿರದ ಆಸ್ತಿಮಾಡುವೆನೆಂದು ಹೇಳಲಿಕ್ಕೆ. 'ನನ್ನ ಲಲಿತೆಯನ್ನು ನಾನು ಕೈಬಿಡುವೆನೇ?' ಎಂದರವರು. ಅವರಿಗೆ ಇನ್ನೊಂದು ಹಪ್ತೆಯಲ್ಲಿ ರೂಪಾಯಿ ಹತ್ತುಸಾವಿರ ಸಿಗುವುದಂತೆ. ಈಗ ಒಬ್ಬ ಬ್ರಾಹ್ಮಣ ಒಂದು ಒಳ್ಳೇ ಆಸ್ತಿ ಮಾರಾಟಮಾಡುವನಂತೆ. ಅವನಿಗ ನಾಳೆಯೇ ರೂಪಾಯಿ ಐದು ಸಾವಿರದ ಗರ್ಜುಯಿದೆಯಂತೆ. ಈಗ ನಾನು ರೂಪಾಯಿ ನಾಲ್ಕುಸಾವಿರ ಬೇಂಕಿನಿಂದ ತೆಗೆದುಕೊಡಬೇಕಂತೆ. ರೂಪಾಯಿ ಒಂದು ಸಾವಿರ ಅವರು ಒದಗಿಸುವರಂತೆ. ಒಂದು ಹಪ್ತೆಯ ಮೇಲೆ ನನ್ನ ನಾಲ್ಕು ಸಾವಿರ ನನಗೆ ಕೊಟ್ಟು ನಿನ್ನ ಹೆಸರಲ್ಲಿ ಒಟ್ಟು ಹತ್ತುಸಾವಿರದ ಆಸ್ತಿಮಾಡುವರಂತೆ. ಬಹಳ ಒಳ್ಳೇ ಆಸ್ತಿಯಂತೆ, ಅದರಲ್ಲಿ ಒಳ್ಳೇದಾದೊಂದು ಮನೆ ಕಟ್ಟಿಸುವರಂತೆ" ಎಂದಳು ನಾಗಿ ತನ್ನ ಅತುಲ ಸಂತೋಷವನ್ನು ಪ್ರತಿ ವಾಕ್ಯ ವಾಕ್ಯದಲ್ಲಿ ಹೊರಸೂಸಿ. "ಇಷ್ಟೆಯೋ? ನೀನೀಗ ನಿನ್ನ ಹಣವನ್ನು ಬೇಂಕಿನಿಂದ ತೆಗೆದು ಕೊಡಬೇಕೇ? ಅದಕ್ಕಾಗಿಯೇ ನಿನ್ನನ್ನು ಮೋಟರ್ ಕಾರ್ ಕಳುಹಿಸಿ ಕರೆಸಿದುದೇ? ಅತಿ ಆಶೆಮಾಡಿ ಗತಿಗೇಡು ಮಾಡಿಕೊಳ್ಳಬೇಡಮ್ಮಾ. ನಿನ್ನ ಹಣ ಸ್ವಾಮಿಯರಿಗೆ ಕೊಡಬೇಡ" ಎಂದಳು ಲಲಿತೆ ಸ್ವಾಭಾವಿಕವಾಗಿ ತನ್ನಲ್ಲಿ ಹುಟ್ಟಿದ ಸಂದೇಹದಿಂದ. ಆದರೆ ನಾಗಿಯು ಅದಕ್ಕೆ ಕಿವಿಗೊಡುವಳೇ? ಅವಳಿಗೇನು ಗೊತ್ತು ಶಿವಾನಂದರ ಆರ್ಥಿಕ ಪರಿಸ್ಥಿತಿ? "ಸಾಕು ಸಾಕು ನಿನ್ನ ಬುದ್ಧಿವಾದ! ನಿನಗೇನು ಗೊತ್ತು ಸ್ವಾಮಿಯರ ಸಂಗತಿ? ಅದಕ್ಕೆಲ್ಲಾ ನಾನು ಜವಾಬ್ದಾರಿ. ನೀನು ಸುಮ್ಮನಿರು" ಎಂದು ನಾಗಿಯು ತನ್ನ ಉಲ್ಲಾಸಕ್ಕೆ ಲಲಿತೆಯು ಇನ್ನೆಲ್ಲಿಯಾದರೂ ಭಂಗವನ್ನುಂಟು ಮಾಡುವಳೋ ಎಂಬ ಅಸಹಿಷ್ಣುತೆಯಿಂದ ಕೂಡಲೆ ಕೋಣೆಬಿಟ್ಟು ಹೊರ ನಡೆದುಬಿಟ್ಟಳು.

**ಅಮ್ಮಾ! ಅಮ್ಮಾ!! ಮಗುವೆಲ್ಲಿ? ಮಗುವೆಲ್ಲಿ?**

(ಮುಂದಿನ ಸಂಚಿಕೆ ನಿರೀಕ್ಷಿಸಿರಿ)

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—

ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಕೂಳೆ, ಗರ್ಭಸ್ರಾವಕ್ಕೆ) — ಚಂದ್ರಮುಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

# ಆಹಾರ ವಿಷಯವಾಗಿ ಜನರಲ್ಲಿರುವ ಕೆಲವು ತಪ್ಪು ತಿಳಿವಳಿಗೆಗಳು.

●

ಮಂಡಾ ವೆಂಕಟನರಸಿಂಹ್ಮ ರಾವ್, ಬಿ. ಎ ಬಹರ್ಾಂಪೂರ್.

●

ನಮ್ಮ ಇಂಡಿಯಾದೇಶದಲ್ಲಿ ಜನರು ಕೆಲಕೆಲವು ಭಾಗಗಳಲ್ಲಿ ಚಲ್ಲಸಲ್ಲವ ಸಂದೇಹಗಳನ್ನೂ ವಿಚಿತ್ರ ಭಾವನೆಗಳನ್ನೂ ಇಟ್ಟುಕೊಂಡಿರುವರು. ಆರೋಗ್ಯಕ್ಕೆ ಇವೆಲ್ಲ ಅನೇಕವೇಳೆ ಹಾನಿಕರಗಳಾದುದರಿಂದ ಅವನ್ನು ಮೊದಲು ತಪ್ಪಿಸಬೇಕು. ಮುಖ್ಯವಾಗಿ ಆಹಾರವಿಷಯದಲ್ಲಿ ಅವರಿಗಿರುವ ಕೆಲವು ಸಂದೇಹಗಳೂ, ತಪ್ಪುತಿಳುವಳಿಕೆಗಳೂ ನೀಗುವಂತೆ ಮಾಡಬೇಕು. ಶಾಸ್ತ್ರಾಧಾರವಿಲ್ಲದ ನಂಬಿಕೆಗಳಿಂದಲೂ, ಪರಂಪರೆಯಾಗಿ ಬಂದ ಮೂಢವಿಶ್ವಾಸಗಳಿಂದಲೂ, ನಮ್ಮ ಜನರಲ್ಲಿ ಹಲವು ತೆರನ ತಪ್ಪುತಿಳುವಳಿಕೆಗಳು ದೃಢವಾಗಿ ಬೇರೂರಿವೆ. ಇಂತಹ ತಪ್ಪುಭಾವನೆಗಳು ನಮ್ಮವರಲ್ಲಿರಲು ಅವಕಾಶವಿರುವ ವರೆಗೆ ನಮ್ಮ ಜೀವನ ಕ್ರಮವು ತೃಪ್ತಿಕರವಾಗಿರದು. ಆ ವಿಧವಾದ ಭ್ರಾಂತಿಯೊಂದು ಮಹೋನ್ನತಿಗೆ ನಮ್ಮನ್ನು ಸಮೀಪಿಸುತ್ತಲೇ ಇರುವುದು.

ಇದಕ್ಕೆ ಕೆಲವು ನಿದರ್ಶನಗಳನ್ನು ತೋರಿಸಬಹುದು. ನಮ್ಮಲ್ಲಿ ಸರ್ವಜನಸಾಧಾರಣವಾಗಿ ಅನುಭವದಲ್ಲಿ ಬಂದಿರುವ ಒಂದು ವಿಷಯವನ್ನು ನೋಡಿರಿ. ಭೋಜನಕಾಲದಲ್ಲಿ ನೀರನ್ನು ಧಾರಾಳವಾಗಿ ಕುಡಿಯದಿದ್ದರೆ ಆಹಾರವು ಜೀರ್ಣವಾಗುವುದಿಲ್ಲವಾದುದರಿಂದ ನೀರನ್ನು ಕುಡಿಯಬೇಕೆಂದು ಹೇಳುವರು. ಹಾಗೆ ನೀರನ್ನು ಕುಡಿಯುವುದರಿಂದ ಆಗುವ ನಿಜವಾದ ಪರಿಣಾಮವು ಹೆಚ್ಚು ಹಾನಿಕರವಾದುದೇ ಹೊರತು ಅದರಲ್ಲಿ ಸ್ವಲ್ಪವೂ ಗುಣವಿಲ್ಲ. ಇದಕ್ಕೆ ಕಾರಣವನ್ನು ಸುಲಭವಾಗಿ ನಿರೂಪಿಸಬಹುದು. ಹೇಗೆಂದರೆ ದೇಹದಲ್ಲಿ ಉತ್ಪನ್ನವಾಗತಕ್ಕ ಹಲವುಬಗೆಯ ಜೀರ್ಣರಸಗಳುಂಟು. ಅನ್ನ ಆಹಾರವನ್ನು ಮೆಲ್ಲುವಾಗ ಬಾಯಲ್ಲಿಯೂ, ನುಂಗುವಾಗ ಕಂಠನಾಳದಲ್ಲಿಯೂ, ನುಂಗಿದಮೇಲೆ ಜಠರದಲ್ಲಿಯೂ ಅವುಗಳು ಉತ್ಪನ್ನವಾಗುತ್ತಿರುವುವು. ಇವೆಲ್ಲಾ ನೀರಿನೊಡನೆ ಕಲೆತು ತಮ್ಮ ಕಾರ್ಯಶಕ್ತಿಯನ್ನು ಕಳೆದುಕೊಳ್ಳುವುದರಿಂದ, ಜೀರ್ಣಕಾರ್ಯವು ಸರಿಯಾಗಿ ನಡೆಯದು. ಅಲ್ಲದೆ ಊಟಮಾಡುವಾಗ ನೀರನ್ನು ಕುಡಿದರೆ ಅದು ಕಂಠನಾಳವನ್ನು ಚೆನ್ನಾಗಿ ತೊಳೆದುಬಿಡುವುದರಿಂದ, ಬಾಯಲ್ಲಿ ಮೆಲ್ಲುವ ಕಾರ್ಯವೂ ಕಡಿಮೆಯಾಗಿ, ಜೊಲ್ಲಿನ ಮಿಶ್ರಣವಿಲ್ಲದೆಯೇ ಕೆಲವು ಪದಾರ್ಥಗಳು ಜಠರಕ್ಕೆ ಸೇರಿ ಜೀರ್ಣವಾಗದೆ ನಿಲ್ಲುವುವು.

ನಮ್ಮ ಆಹಾರವಿಷಯದಲ್ಲಿ ಮತ್ತೊಂದು ತಪ್ಪುತಿಳಿವಳಿಕೆಯು ಜನರಲ್ಲಿ ಹರಡಿರುವುದೇನೆಂದರೆ, ಆಸಿಡ್ ಎಂದರೆ ಆಮ್ಲಪದಾರ್ಥವು ಹಾಲಿನೊಡನೆ ಕಲೆಯಬಾರದೆಂಬುದು. ಈ ಕಾರಣದಿಂದಲೇ ಸಾಮಾನ್ಯವಾಗಿ ಅನೇಕರು ಹಾಲನ್ನಾಗಲಿ, ಹಾಲಿನಿಂದ ತಯಾರಿಸಿದ ಪಾಯಸಾದಿಗಳನ್ನಾಗಲಿ ತೆಗೆದುಕೊಂಡಮೇಲೆ, ಮಜ್ಜಿಗೆ ಅಥವಾ ಬೇರೆ ಯಾವ ಹುಳಿಪದಾರ್ಥಗಳನ್ನೂ ತೆಗೆದುಕೊಳ್ಳಬಾರದೆಂದು ನಿರಾಕರಿಸುವರು. ಈ ಅಭಿಪ್ರಾಯವು ತಪ್ಪು. ಆರೇಂಜ್ ಅಥವಾ ಕಿತ್ತಳೆ ಹಣ್ಣಿನ ರಸವನ್ನು ಹಾಲಿಗೆ ಸೇರಿಸಿ ತೆಗೆದುಕೊಳ್ಳುವುದು ಬಹಳ ಉತ್ತಮವಾದ ಆಹಾರವೆನಿಸಿದೆ. ಅದು ಬೇಗನೆ ಜೀರ್ಣವಾಗುವುದು ಇವೆರಡೂ ಮಿಶ್ರವಾಗುವಾಗುವಾಗ ಅದರಿಂದುಟಾಗುವ ಮೊಸರಿನ ಗಟ್ಟಿಯು ಸುಲಭಜೀರ್ಣವಾಗುವ ಒಳ್ಳೇ ಆಹಾರವೆನಿಸುವುದು.

ಅನೇಕರು ಹಾಲು ಮತ್ತು ಸಕ್ಕರೆ ಇವೆರಡನ್ನೂ ಸೇರಿಸಿ ತೆಗೆದುಕೊಳ್ಳುವ ಪದ್ಧತಿಯಿದೆ. ಹಾಲಿಗೆ ಸಕ್ಕರೆಯನ್ನು ಬೆರಸದೆ ತೆಗೆದುಕೊಳ್ಳಬಾರದೆಂದೂ ಕೆಲವರು ಹೇಳುವುದುಂಟು. ಇದೂ ತಪ್ಪು. ಹಾಲಿಗೆ ಸಕ್ಕರೆ ಸೇರಿಸುವುದರಿಂದ ಅದು ಹೊಟ್ಟೆಯಲ್ಲಿ ಹುಳಿಯುವುದಕ್ಕೆ ಅವಕಾಶವನ್ನುಂಟುಮಾಡುವುದು.

ಹಣ್ಣುಗಳನ್ನೂ ತರಕಾರಿಗಳನ್ನೂ ಒಂದಾಗಿ ತೆಗೆದು ಕೊಳ್ಳುವುದು ಒಳ್ಳೆಯದೆಂದು ಅನೇಕರು ನೆನೆಸಿರುವರು. ಆ ಅಭಿಪ್ರಾಯವೂ ತಪ್ಪು. ಅದೂ ಆರೋಗ್ಯಕ್ಕೆ ಸಹಕಾರಿಯಾದ ಮಿಶ್ರಣವಲ್ಲ. ಏಕೆಂದರೆ ಹಣ್ಣುಗಳು ಬೇಗನೇ ಜೀರ್ಣವಾಗಿ, ಕಾಯಿಪಲ್ಯಗಳು ಜೀರ್ಣವಾಗದೆ ನಿಂತುಹೋಗುವುವು. ಇದರಿಂದ ಅಜೀರ್ಣಬಾಧೆಗಳು ಏರ್ಪಡುವವು. ಆದುದರಿಂದ ಹಣ್ಣುಗಳನ್ನು ಪ್ರತ್ಯೇಕವಾಗಿಯೇ ತೆಗೆದುಕೊಳ್ಳುವುದು ಒಳ್ಳೆಯದು.

ಇಂಡಿಯಾ ದೇಶೀಯರ ಆಹಾರ ಪದ್ಧತಿಯಲ್ಲಿರುವ ಇನ್ನೊಂದು ವಿಷಯವೇನೆಂದರೆ, ಹೆಚ್ಚಾಗಿ ಉಪ್ಪನ್ನು ಉಪಯೋಗಿಸುವುದು. ಇದರಿಂದ ಜೀರ್ಣಕಾರ್ಯವು ತ್ವರಿತವಾಗಿ ನಡೆಯುವುದೆಂದೂ ಉಪ್ಪು ದೇಹಕ್ಕೆ ಆರೋಗ್ಯಕಾರಿಯೆಂದೂ ತಿಳಿದಿರುವರು. ಹಾಗೆಣಿಸುವುದು ತಪ್ಪು. ಉಪ್ಪನ್ನು ಹೆಚ್ಚಾಗಿ ಉಪಯೋಗಿಸುವುದರಿಂದ, ಅದು ಜಲಕೋಶದ ಕಾರ್ಯಕ್ಕೆ ತಡೆಮಾಡುವುದು ಅದರಿಂದ ದೇಹಕ್ಕೆ ಕೆಡುಕುಂಟು.

ಅನೇಕರು, ಆರೋಗ್ಯಕ್ಕೂ, ದೇಹದ ಬೆಳವಣಿಗೆಗೂ ಮಾಂಸಾಹಾರವು ಅವಶ್ಯವೆಂದೂ, ಶಾಕಾಹಾರದಲ್ಲಿ ಆ ಗುಣವಿಲ್ಲವೆಂದೂ ತಿಳಿದಿರುವರು. ಇದೂ ಒಂದು ತಪ್ಪು ತಿಳಿವಳಿಕೆಯೇ! ಶಾಕಾಹಾರದಲ್ಲಿ ಹೆಚ್ಚು ಗುಣವುಂಟೆಂಬುದು ನಮ್ಮ ದೇಶದವರಿಗೆ ಅನುಭವಸಿದ್ಧವಾದುದರಿಂದ ಅದನ್ನು ಕುರಿತು ಇಲ್ಲಿ ನಾವು ಹೆಚ್ಚೇನೂ ಹೇಳಬೇಕಾಗಿಲ್ಲ.

ಕಪಿಜಾತಿಗಳಿಗಿರುವ ಅಸಾಧಾರಣವಾದ ಚಟುವಟಿಕೆ, ಆನೆಗಳಿಗಿರುವ ಶರೀರಪುಷ್ಟಿ ಮತ್ತು ದೇಹದಾರ್ಢ್ಯ, ಗೋವುಗಳಿಗಿರುವ ಸಾಧುತ್ವ ಮತ್ತು ದೇಹ ಬಲ ಇವುಗಳನ್ನು ನೋಡಿರಿ! ಶಾಕಾಹಾರಗಳಲ್ಲಿ ಎಂತಹ ಅತಿಶಯವಾದ ಗುಣಗಳುಂಟೆಂಬುದಕ್ಕೆ ಇದಕ್ಕಿಂತಲೂ ಬೇರೆ ನಿದರ್ಶನವೇನು ಬೇಕಾಗಿದೆ? ಮೊಟ್ಟೆ, ಹಾಲು, ಮುಂತಾಗಿ ಪ್ರಾಣಿಸಂಬಂಧವಾದ ಕೆಲವು ಆಹಾರಗಳನ್ನು ಕುರಿತು ವಿವಾದಗಳಿರಬಹುದು. ಆದರೆ ದೀರ್ಘವಿಮರ್ಶೆಯಿಂದ ನೋಡುವಾಗ, ಅವೆರಡನ್ನೂ ಸಸ್ಯಾಹಾರಿಗಳ ಆಹಾರವರ್ಗದಲ್ಲಿಯೇ ಸೇರಿಸಬಹುದೆಂದು ನನ್ನ ಅಭಿಪ್ರಾಯವು. ಆದರೆ ಅವುಗಳ ಸೇವನೆಯಲ್ಲಿ ಮಿತವಿರಬೇಕು.

ಅನೇಕರಲ್ಲಿರುವ ಇನ್ನೊಂದು ತಪ್ಪು ತಿಳುವಳಿಕೆ ಏನೆಂದರೆ 'ನಾವು ಜೀವಿಸುವುದು ತಿನ್ನುವುದಕ್ಕೂ, ಕುಡಿಯುವುದಕ್ಕೂ ಮಾತ್ರ'ವೆಂದು ಹೇಳುವುದುಂಟು. ಇದು ಸರಿಯಲ್ಲ. ಇದರಿಂದ ಅನೇಕ ಅಪಾಯಗಳು ಸಂಭವಿಸುವುವು. ನಾವು ಆಹಾರವನ್ನು ವಿಶೇಷವಾಗಿ ತಿಂದು, ಜಠರಕ್ಕೆ ವಿಶ್ರಾಂತಿಯನ್ನು ಕೊಡದಿರುವುದರಿಂದ, ಅನೇಕವ್ಯಾಧಿಗಳಿಂದ ಬಾಧೆಪಡುವೆವು. ಕೆಲವರು ಬೆಳಗಿನಿಂದಾರಂಭಿಸಿ ರಾತ್ರಿ ನಿದ್ರೆಗೆ ಹೋಗುವವರೆಗೆ, ಕಾಫಿ, ತಿಂಡಿ, ಮಧ್ಯಾಹ್ನದ ಊಟ, ಮೂರನೇ ಜಾವದ ತಿಂಡಿ, ಸಾಯಂಕಾಲದ ಟೀ, ರಾತ್ರಿ ಭೋಜನ, ಮಲಗುವಾಗ ಹಾಲು ಹೀಗೆ ವಿಶ್ರಾಂತಿಯಿಲ್ಲದೆ ಘಂಟೆಘಂಟೆಗೂ ಏನನ್ನಾದರೂ ತೆಗೆದುಕೊಳ್ಳುತ್ತಲೇ ಇರುವರು. ಇದು ಬಹಳ ಕೆಟ್ಟದ್ದು. ಅನೇಕವ್ಯಾಧಿಗಳಿಗೆ ಇದೇ ಮೂಲವು.

ಕೊನೆಯಲ್ಲಿ ನಮ್ಮ ವಾಚಕರಿಗೆ ಎಚ್ಚರಿಸಬೇಕಾದ ಮುಖ್ಯವಿಷಯವೊಂದುಂಟು. ಕಾರವಾದ ಪದಾರ್ಥಗಳನ್ನು ಬಹಳ ಮಿತವಾಗಿ ಸೇವಿಸಬೇಕು. ಪ್ರಕೃತಿಯೂ ದೇಹಸ್ವಭಾವವೂ ಒಂದಕ್ಕೊಂದು ಹೊಂದಿಕೊಂಡು, ನಮಗೆ ಅವೇ ಒಳ್ಳೇ ಮಾರ್ಗದರ್ಶಕಳಾಗಿವೆ. ಅವುಗಳನ್ನು ಅನುಸರಿಸಿ ಹೋದವರಿಗೆ ಯಾವಲೋಪವೂ ಸಂಭವಿಸದು —ಆರೋಗ್ಯ ಚಂದ್ರಿಕೆ.


ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರ್ಹಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಕೆ, ಸರ್ವಪ್ರಕಾರದ ಪ್ರಮೇಹ (ಹೊಸ್ತೇ ಹಳತೂ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—0 (ಮೂರು) ವಿ. ಪಿ ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D. N. JASANI, Vitalbhai Patel Road, BOMBAY 4



**WANTED.**

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

## ಕಿರಿಯರ ಪ್ರಪಂಚದ

### ಪುಸ್ತಕಗಳು.

| | | | |
|---|---|---|---|
| ೧ ನಾಡಕಥೆಗಳು | ೦ | ೨ | ೦ |
| ೨ ಮುಂದಿನ ದೇವರು | ೦ | ೨ | ೦ |
| ೩ ಸ್ವತಂತ್ರ ಜೀವನೋಪಾಯ | ೦ | ೨ | ೬ |
| ೪ ಕುಶ ಲವ | ೦ | ೪ | ೦ |
| ೫ ಸಂಶಯ ಪಿಶಾಚಿ | ೦ | ೬ | ೦ |
| ೬ ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ೭ ಮಧುವನ | ೧ | ೮ | ೦ |
| ೮ ವ್ಯಭಿಚಾರಿಣಿ ಯಾರು? | ೦ | ೮ | ೦ |
| ೯ ಹೆಂಡ್ತಿ ಗಂಡನಾದರೆ! | ೦ | ೪ | ೦ |
| ೧೦ ಪುರುಷವಧು! | ೦ | ೪ | ೦ |

**ಕಿರಿಯರ ಪ್ರಪಂಚ, ಉಡುಪಿ.**

## ಭಾ ಷಾಂ ತ ರ ಕಾ ರ ರು

**ದೊರೆಯದೆ ಪೀಡಾಡುವಿರೇಕೆ?**

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

**'ಟ್ರಾನ್ಸ್‌ಲೇಟರ್,'**

*C/o* **'ಕಿರಿಯರ ಪ್ರಪಂಚ,'**

**ಉಡುಪಿ.**

## WANTED

A clerk strong in English & Kanarese with knowledge of Typewriting and Office work. Apply stating age qualification and minimum salary reqd. The selected candidate will be required to give a security of Rs. 250/-.

'XX'

**C/o NAVAYUGA,**

UDIPI

ವಾರ] 'ನವಯುಗ' [ಪತ್ರಿಕೆ

| | |
|---|---|
| ವಾರ್ಷಿಕ ಚಂದಾ | ರೂ ೩—೪—೦ |
| ೬ ತಿಂಗಳಿಗೆ | ರೂ ೧—೧೨—೦ |

**ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.**

**S. U. N. & CO.** ***Choukhamba, Benares City.***

**ಮೂರು ಇನಾಮುಗಳು.**

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀದಕ್ಷಿ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವಿನ್ನ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಉಲ್ಲನ್ ಚೌಕ, ಧಾವಳ, ನಾಮರ್ದ, ತರತಂದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಜೋಷನವೂನೆಯ ನವಲು ಬುಟ್ಟಿ ದಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ 20ರಿಂದ 55 ವರೆಲು ಸಾದಾ 16ಮೊಳದ ಸೀರೆ 1ಕ್ಕೆ ರೂ 16 ರಿಂದ ರೂ 35ರ ವರೆಗೆ, ಅರಿ ಕದಮು 16ಮೊಳ ಕ್ಲಾಥ್ ಅಂಚು ರೂ. 10½ ಯಿಂದ ರೂ 16 ಖಣ 1ಕ್ಕೆ ರೂ 1½ರಿಂದ ರೂ 10ರ ವರೆಗೆ ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

**ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ,** ಚೌಕಂಬಾ, ಬನಾರಿಸ್, ಕಾಶಿ



## ಧರ್ಮಾರ್ಥ ಬಹುಮಾನಗಳು 1-4-0ಗೆ!

### — ಯಾರಿಗೆ? —

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೊ ರೋಜ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ —3 ಡಮ್ಮಿ ರಿಸ್ಟ್ ವಾಚುಗಳು, 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿ, 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

**ಪ್ಯಾಕಿಂಗ್ ಮತ್ತು ಪೋಸ್ಟೇಜು** 0—12—0 ಇಂದೇ ಆರ್ಡರುಕೊಡಿರಿ

Bengal Watch Co.,

Post Box No. 12214, CALCUTTA

# WANTED

Applications are invited from energetic young men for the posts of a **TRAFFIC INSPECTOR** and an assistant **TRAFFIC INSPECTOR** carrying a salary of Rs 25/- to 30/- and Rs 20/ to 25/- per month respetcively and a consolidated travelling allowance of Rs. 15/- per month each. Applicants should have studied up to VIth Form Preference will be given to **GRADUATES**.

***Applications should be made to the following address—***

**JOINT MANAGERS,**

**The Combined Booking Agency, Mangalore.**

**The Coondapoor Bank, Ltd.,**

Head Office.- Coondapoor. Branch Office:-Brahmavar.

Beg to announce that a new Branch has been opened at SHANKARANARAYANA on 4-6-37.

# ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿ ಜೂನ್ ತಾ.4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತವೆ.
ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ.4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4.
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%.
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.
ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ.
ಭಂಗಾರದ ಒಡಿವೆಮೇಲೂ ಸಾಲದೊರೆಯುವುದು.
ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತದೆ. ಸಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. — N. Sheshagiri Rao. ಸಕ್ರೆಟರಿ.

## ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.



ನೀವು ಓದಿರುವಿರಾ?

**ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?**

## ಅಡ್ಡಬಳಿದ ಗಿಡ್ಡಿಯ ಮದುವೆ
(ಕ್ರಯ ಬರೇ ಒಂದಾಣೆ)

## ಮುದುಕನ ಹೆಂಡತಿ ಭಕ್ತೆಯಾದೆ
(ಕ್ರಯ ಬರೇ ಒಂದಾಣೆ)

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ.
ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ
ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ
ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**

ಶ್ರೀ ಕೊರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ

**ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.**

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರೆ ಆಣೆ ಸ್ಟಾಂಪು ಕಳುಹಿಸಬೇಕು.

**NAVABHARAT BOOK DEPOT**
**UDIPI**



ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦—೨—೦

# ಪುರುಷವಧು

ನಕ್ಕುನಕ್ಕು ನಗಿಸುವ ಏಕಾಂಕ ಪ್ರಹಸನ.
ಸಿರಿಯರ ಪ್ರಪಂಚ, ಉಡುಪಿ



## SUPPLY AGENCY LTD.
### UDIPI

Authorised Capital .... Rs. 1,00,000/-
Subscribed & Paid up Capital Rs. 29,720/-

**ಈ ಕೆಳಗಿನ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.**

| | | | | |
|---|---|---|---|---|
| 3 ತಿಂಗಳಿಂದ | 6 | ತಿಂಗಳ ವರೆಗೆ | | 4½% |
| 7 | ,, | 9 | ,, | 5% |
| 10 | ,, | 12 | ,, | 5½% |
| 13 | ,, | 24 | ,, | 6½% |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು ಅಥವಾ ಪತ್ರವ್ಯವಹಾರ ಮಾಡಬಹುದು.

ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ, 1—8—1937

ಎಸ್. ಯು. ಪಣಿಯಾಡಿ, ಮೆನೇಜಿಂಗ್ ಡೈರೆಕ್ಟರ್.



## ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ | 3 | 0 | 0 |
| ಚಂದ್ರಗುಪ್ತ | 1 | 0 | 0 |
| Buddhadeva | 0 | 8 | 0 |
| ಮಧುವನ | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ | 0 | 8 | 0 |
| ಸರಸ್ವತಿ | 0 | 8 | 0 |
| ಗೀತೆಯ ಕೈಗನ್ನಡಿ | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) | 0 | 4 | 0 |
| ಕೃಷ್ಣ ಸಂಧಾನ | 0 | 8 | 0 |
| ತುಳು ವ್ಯಾಕರಣ | 0 | 8 | 0 |
| ಸತೀ ಕಮಲೆ | 0 | 6 | 0 |
| ಮಿತ್ರನಾರಾಯಣ ಕಥೆ | 0 | 8 | 0 |

ಇದಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

**ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.**

## ತುಳುನಾಡ್ ಪ್ರೆಸ್, ಉಡುಪಿ.



USE

# *SUVASINI AGARBATHIES*

(REGISTERED)

**SRI BHARATHA VASTU MANDIRA, UDIPI.**


Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618 Office ಬಂದಾಣೆ copy

**NAVAYUGA**
A Nationalist Kanarese Weekly, UDIPI.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc APPLY TO THE MANAGER

# ನವಯುಗ

TO LET
FOR RATES APPLY TO THE MANAGER
ಜಾಹೀರಾತಿಗೆ ಸ್ಥಳ
ದರಕ್ಕೆ ಬರೆಯಿರಿ.

VOL XVI-NO 49 | 12-8-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ ] ಉಡುಪಿ, ಗುರುವಾರ ೧೨ ಅಗೋಸ್ತು, ೧೯೩೭ [ಸಂಚಿಕೆ ೪೯

THE

# Canara Industrial & Banking SYNDICATE, LIMITED.

[INCORPORATED IN BRITISH INDIA]

ESTD:] [1925

**BRANCHES:**

1 BOMBAY
2 MANGALORE
3 UDIPI
4 KARKALA
5 KANHANGAD
6 HUNGARCUTTA
7 BRAHMAVAR
8 COONDAPOOR
9 UPPINANGADI
10 KASARGODE
11 PAYYANUR
12 TALIPARAMBA
13 CANNANORE
14 GADAG
15 HUBLI
16 BANGALORE CITY
17 SAGAR
18 BYADGI
19 KARWAR
20 HONAVAR
21 SIRSI
22 ANKOLA
23 KUMTA
24 BHATKAL
25 NANDYAL
26 PRODATTUR
27 TADPATRI
28 BELGAUM
29 HOSPET
30 ADONI
31 BELLARY

*Head Office:*
'MUKUNDA NIVAS'
UDIPI, (S. I)

*MEMBER:* RESERVE BANK OF INDIA
*MEMBER:* CLEARING HOUSE, BOMBAY

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,74,790 |
| Total resources exceed | „ 46 lakhs |

UDIPI,
*27th July 1937.*

P. A Pai Bros,
*Managing Agents.*

# ನ್ಯೂ ಕೋಮಲ ವಿಲಾಸ ಹೋಟೆಲ್

**91-101 ಕನಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ**

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯಿತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಸ್ವಾಮುಖ್ಯ ಪ್ರಕಟಣೆ

# ಅಮೃತಾಂಜನ

— ಡಿಪ್ಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ದಾನ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾಡಲಾಗಿದೆ.

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳಬೇಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

**ಅಮೃತಾಂಜನ ಡಿಪ್ಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.**

# ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
**೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

**ಡಾ. ಎ. ಎಸ್. ಮೂರ್ತಿ,**
**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**

DIAMONDS! DIAMONDS!!

# K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

# ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುದ್
**ಚಿಕಾಕೋಲ್**

# ಕುಶಲವ

**(ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾಗಿದೆ)**

ಹಳೆಯ ಕಥೆಯನ್ನು ಹೊಸ ಮಾದರಿಯಲ್ಲಿ ಬರಕದೊಂದು ಪೌರಾಣಿಕ ನಾಟಕವಿದು. ಬೆಲೆ ಬಹು ಕಡಿಮೆ.

**ಪುಟ ೬೨ . . . . ಬೆಲೆ ೦—೪—೦.**

ಪ್ರತಿಗಳು ಸಮೀಪ್ಕರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುವಪ್ಪತಿ ಬರೆಯಿರಿ—

**ನವಭಾರತ ಬುಕ್ ಡಿಪ್ಪೊ, ಉಡುಪಿ.**

# ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಕಳೆದ ಜುಲಾಯಿ ತಿಂಗಳಲ್ಲಿ ಪ್ರಾರಂಭವಾಗಿದೆ. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸಕೆಂಡರಿ, ಮೂಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "**ಪ್ರೊಸ್‌ಪೆಕ್ಟಸ್**"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್.
ತುಂಗಭದ್ರಾ } **ಪ್ರೇಮ ವಿದ್ಯಾಪೀಠ**
೧೦—೭—೧೯೩೭

ಉಡುಪಿಯ ಆದರ್ಶ ಉಪಹಾರಗೃಹ !

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !**
**ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ !**
ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.
**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟದೆ.

## ಅತ್ಯಾಚಾರ

### 5 ಮಂದಿಯ ಕೊಲೆ

ಇದೇ ತಾ. ೧೨ರಲ್ಲು ಲಂಡನಿನ ಗ್ಲಾಸ್ಗೋವಿನಲ್ಲಿ ವೈದ್ಯಕೀಯವನ್ನು ಕಲಿಯುವ ವಿದ್ಯಾರ್ಥಿಯು, ಲೋರೆನ್ಸ್ ರಸ್ತೆಯಲ್ಲಿರುವ ಮಾವನ ಮನೆಗೆ ಪ್ರವೇಶಿಸಿ, ತನ್ನ ಮಾವ, ಹೆಂಡತಿ, ಹೆಂಡತಿತಂಗಿ, ಮತ್ತು ಒಂದು ಹೆಣ್ಣುಮಗುವಿಗೆ ಗುಂಡುಹೊಡೆದನು. ಹೆಂಡತಿಯ ಹೊರತು ಇತರರೆಲ್ಲಾ ಆಗಲೇ ಮೃತರಾಗಿರುವರು. ಹೆಂಡತಿಯು ಮರಣೋನ್ಮುಖಳಾಗಿರುವಳು. ಇದಾದ ಮೇಲೆ ವಿಶ್ವಾಸನು ಒಬ್ಬ ಟೇಕ್ಸಿಡ್ರೈವರನನ್ನು ಗುಂಡು ಹೊಡೆದು ಕೊಂದು ಕಡೆಗೆ ತನಗೇನೇ ಗುಂಡುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನು.

## ನರಿಮನ್ ಪಟೇಲವಾದ

ನರಿಮನ್ ಪಟೇಲವಾದವು ಇನ್ನೂ ಕೊನೆಗೊಂಡಿರುವುದಿಲ್ಲ. ಬೊಂಬಾಯಿಯ ಪತ್ರಿಕೆಗಳು ಈ ವಾದವನ್ನು ಇನ್ನೂ ಪ್ರಬಲವಾಗಿ ನಡೆಸುತ್ತಿರುವವು. ಇದರಿಂದ ಗಾಂಧಿಯವರು ಬಹಳ ನೊಂದುಗೊಂಡಿರುವರು. ಅವರು ತಾನೇ ಈ ವಾದದ ಸಂಗತಿಗಳನ್ನೆಲ್ಲಾ ವಿಚಾರಿಸಿ ಪಟೇಲರು ತಪ್ಪಿತಸ್ಥರೆಂದು ಕಂಡುಬಂದರೆ ಅವರಿಗೆ ಅದಕ್ಕಾಗಿ ತಕ್ಕ ದಂಡನೆಮಾಡುವೆನೆಂದೂ ನರಿಮೆನರು ತಪ್ಪಿತಸ್ಥರೆಂದು ಕಂಡುಬಂದಲ್ಲಿ, ತನ್ನ ನಿರ್ಧಾರವನ್ನು ಶ್ರೀ ಬಹದೂರ್ಜಿ ಮತ್ತು ಸರ್ ಗೋವಿಂದರಾವ್ ಮದ್ಗಾಂವ್ಕರರು ಪರಿಶೀಲಿಸಿ ಅವರು ತಮಗೆ ತೋರಿದ ನಿರ್ಣಯಕ್ಕೆ ಬರಬಹುದೆಂದೂ, ನರಿಮೆನರು ಅಪರಾಧಿಯೆಂದಾದರೆ ಅವರಿಗೂ ತಕ್ಕ ಶಾಸ್ತಿ ಮಾಡಲಾಗುವುದೆಂದೂ ಪ್ರಕಟಪಡಿಸಿರುವರು. ಅಷ್ಟರವರೆಗೆ ಪತ್ರಿಕೆಗಳು ಈ ವಿಷಯದಲ್ಲೇನೂ ವಾದ ನಡಿಸಬಾರದೆಂದುವಿನಂತಿಮಾಡಿಕೊಂಡಿರುವರು.

## ವಕ್ಕಲುಗಳಿಗೆ ಸಹಾಯ

ವಕ್ಕಲುಗಳಿಗೆ ಸಹಾಯಮಾಡುವ ಕುರಿತು ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಮಂತ್ರಿಮಂಡಲವು ಶೀಘ್ರವಾಗಿ ಹುಕುಮು ಜ್ಯಾರಿಮಾಡಿರುವುದು. ಈ ಪ್ರಕಾರ ಕೋರ್ಟಿನವರು, ವಕ್ಕಲುಗಳನ್ನು ತೆಗೆದುಹಾಕುವ, ಅವರ ಗೇಣಿ ಬಾಕಿ ವಸೂಲಿಗಾಗಿ ಡಿಕ್ರಿ ಕೊಡುವ, ಕೊಟ್ಟಿರುವ ಡಿಕ್ರಿಗಳನ್ನು ಜ್ಯಾರಿಮಾಡುವ ಖಟ್ಲೆಗಳನ್ನೆಲ್ಲಾ ನಿಲ್ಲಿಸುವಂತೆ ಅಲಹಾಬಾದಿನ ಕಲೆಕ್ಟರರು ಹುಕುಮು ಕೊಟ್ಟಿರುವರು. ರೂ. 1000 ಕ್ಕಿಂತ ಕಡಿಮೆಯ ಸಾಲದ ಮೇಲೆ ಡಿಕ್ರಿ ಕೊಡಬಾರದೆಂದೂ ಹುಕುಮು ಕೊಡಲಾಗಿದೆ.

## ದೇವಸ್ಥಾನಗಳ ಆಡಳಿತ

ಎಂಡೋಮೆಂಟ್ ಖಾತೆಯ ಮಂತ್ರಿಗಳಾದ ಡಾಕ್ಟರ್ ರಾಜನರು ಇದೇ ತಾ. 9ರಲ್ಲು ತಿನ್ನವೆಲ್ಲಿಯಲ್ಲಿ ಭಾಷಣವೀಯುವಾಗ, ದೇವಸ್ಥಾನ ಕಮಿಟಿಗಳೂ ಮೊಕ್ತೇಸರರೂ ಉಂಬಳಿಗಳ ಆಡಳಿತವನ್ನು ಒಂದು ವರ್ಷದೊಳಗೆ ಸುಧಾರಿಸದಿದ್ದಲ್ಲಿ ಸರಕಾರವು ಆ ಕುರಿತು ಕಠಿಣ ಕಾನೂನುಗಳನ್ನು ಮಾಡಬೇಕಾಗುವುದೆಂದು ಎಚ್ಚರಿಸಿರುವರು. ಎಂಡೋಮೆಂಟ್ ಆಕ್ಟಿನ ಆಡಳಿತದಿಂದ ದೇವಸ್ಥಾನಗಳ ಆಡಳಿತವು ಕೆಲ ಮಟ್ಟಿಗೆ ಸುಧಾರಿಸಿರುವುದೆಂದೇ ಮಂತ್ರಿಗಳ ಅಭಿಮತ.

## ಹಿಂದೀ ಶಿಕ್ಷಣ

ಇದೇ ತಾ. 11ರಲ್ಲು ಮದ್ರಾಸಿನ ಮುಖ್ಯ ಮಂತ್ರಿಗಳಾದ ಶ್ರೀ. ಸಿ. ರಾಜಗೋಪಾಲಾಚಾರ್ಯರು, ಮದ್ರಾಸಿನ ರಾಮಕೃಷ್ಣ ಮಿಶನಿನ ಸ್ಟೂಡೆಂಟ್ಸ್ ಹೋಮಿನ ಕೋಲೆಜ್ ವಿಭಾಗದಲ್ಲಿ ಭಾಷಣವೀಯುವಾಗ, ಕಾಂಗ್ರೆಸ್ ಮಂತ್ರಿಮಂಡಲವು ಒಂದನೇ, ಎರಡನೇ ಮತ್ತು ಮೂರನೇ ಫೋರ್ಮುಗಳಲ್ಲಿ ಹಿಂದಿಯನ್ನು ಖಡ್ಡಾಯವಾಗಿ ಕಲಿಸುವ ಏರ್ಪಾಡು ಮಾಡಲಿರುವುದೆಂದು ವಿದಿತಗೊಳಿಸಿರುವರು. ಆ ಮೇಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿಷಯಗಳನ್ನು ಕಲಿಯಲಿರುವುದರಿಂದ ಹಿಂದಿಯನ್ನು ಖಡ್ಡಾಯವಾಗಿ ಮಾಡುವುದು ಯುಕ್ತವಲ್ಲೆಂದೇ ರಾಜಾಜೀಯವರ ಅಭಿಮತ.

---

## ಮದ್ರಾಸ್ ಲೋ ಕೊಲೇಜಿನ ಕರ್ಣಾಟಕ ಸಂಘದಸಭೆ

### ಕರ್ನಾಟಕ ಪ್ರಾಂತರಚನೆಯ ಆವಶ್ಯಕತೆ

ಇದರ ಪ್ರಥಮ ಸಭೆಯು ಈ ಸಂಘದ ಅಧ್ಯಕ್ಷರಾದ ಎಡ್ವಕೇಟ್ ಮತ್ತು ಪ್ರೊಫೆಸರ್ ಶ್ರೀ| ಬಿ. ಲಕ್ಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ತಾ. 13–8–37ಕ್ಕೆ ಸರಿಯಾದ ಶುಕ್ರವಾರ ಸಾಯಂ. ಘಂಟೆ 5–30ಕ್ಕೆ ನಡೆಯಿತು. ಭಾಷಣಕರ್ತರಾದ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷ ಮಾನ್ಯ ಡಾ. ಯು. ರಾಮರಾಯರು ಕರ್ಣಾಟಕ ಪ್ರಾಂತದ ಏಕೀಕರಣದ ಮಹತ್ಕಾರ್ಯದಲ್ಲಿ ಕನ್ನಡಿಗ ಯುವಕರ ಉತ್ಸಾಹ ಮತ್ತು ಕಾರ್ಯಗಳ ಆವಶ್ಯಕತೆಯ ಕುರಿತು ಬೋಧಪ್ರದವಾದ ಭಾಷಣವನ್ನು ಮಾಡಿದರು. ಕರ್ಣಾಟಕ ಸಂಘದವರ ಭಾವಚಿತ್ರ ತೆಗೆದಾದಮೇಲೆ ಅಧ್ಯಕ್ಷರು ಮದ್ರಾಸಿನಲ್ಲಿ ಇಂಥಾ ಸಂಘದ ಆವಶ್ಯಕತೆ ಮತ್ತು ತನ್ಮೂಲಕ ಇಲ್ಲಿಗೆ ಬೇರೆ ಬೇರೆ ಜಿಲ್ಲೆಗಳಿಂದ ಬರುವ ಕನ್ನಡಿಗರಿಗಾಗುವ ಪ್ರಯೋಜನಗಳನ್ನೆತ್ತಿ ಮಾತನಾಡಿದರು. ಮಾನ್ಯ ಭಾಷಣಕರ್ತರು ವಕಾಲತು ಕಲಿಯುವ ಯುವಕರ ಭಾವೀಜೀವನದ ಮಹತ್ವವನ್ನೂ ಅವರಘನೋದ್ಯೋಗವನ್ನೂ ಸುರಸವಾದ ಮಾತಿನಿಂದ ಕೊಂಡಾಡಿದರು. ಕನ್ನಡಿಗರು ಮುಂಬಯಿ, ಮದರಾಸ್, ಮೈಸೂರು, ಹೈದರಾಬಾದು, ಕೊಡಗು ಮುಂತಾದ ಬೇರೆ ಬೇರೆ ಪ್ರಾಂತಗಳಲ್ಲಿ ಚದರಿರುತ್ತಾರೆ. ಇಷ್ಟೆಲ್ಲಾ ಕಡೆಗಳಲ್ಲಿ ಒಟ್ಟಾರೆ ಜನಸಂಖ್ಯೆಯು ಏಳು ಮಿಲಿಯ್‌ವೆಂದು ಅಂದಾಜಾಗಿದೆ. ಇಡೀ ಕರ್ಣಾಟಕದ ಮೊತ್ತ ಆದಾಯವು ಸುಮಾರು ಇನ್ನೂರೈವತ್ತು ಲಕ್ಷ ರೂಪಾಯಿಯೆಂದು ಪರಿಗಣಿಸಲ್ಪಟ್ಟಿದೆ. ಇದರ ಪೈಕಿ ನೂರು ಲಕ್ಷವು ರಾಜ್ಯಾಡಳಿತಕ್ಕೆ ಖರ್ಚಾಗಿ ಉಳಿದ ಐವತ್ತು ಲಕ್ಷ ರೂಪಾಯಲ್ಲಿ ಕನ್ನಡಿಗರಿಗೆ ತಮ್ಮದೇ ಒಂದು ಪ್ರಾಂತವನ್ನು ಸ್ಥಾಪಿಸಿ ಅದಕ್ಕೆ ಗವರ್ನರರನ್ನು ಇಟ್ಟು ನಡೆಯಿಸಲಿಕ್ಕೆ ಸುಲಭಸಾಧ್ಯವಿದೆ. ಕನ್ನಡಿಗರಿಗೆ ತಮ್ಮದೇ ವಿಶ್ವವಿದ್ಯಾಲಯವೂ ಹೈಕೋರ್ಟೂ ಇರುವುದಿಲ್ಲ. ಅಲ್ಲದೆ ಇವಕ್ಕೆ ಅನುಕೂಲವಾಗಿ ಹೊಸ ಇಂಡಿಯಾ ಆಕ್ಟಿನಲ್ಲಿ ಅಗತ್ಯತೋರಿದಲ್ಲಿ ಹೊಸಪ್ರಾಂತ್ಯಗಳನ್ನು ಸ್ಥಾಪಿಸಬಹುದೆಂದುಂಟು. ಕರ್ಣಾಟಕದವರಿಗಿಂತಲೂ ಅಲ್ಪ ಜನ ಸಂಖ್ಯೆ ಆದಾಯವುಳ್ಳ ಸಿಂಧು, ಒರಿಸ್ಸಾ ಪ್ರಾಂತದವರು ತಮ್ಮದೇ ಸ್ವಂತವಾದ ಪ್ರಾಂತ್ಯಗಳನ್ನು ಅತ್ಯಲ್ಪಕಾಲದ ಪ್ರಯತ್ನದಿಂದ ಸ್ಥಾಪಿಸಿದರು. ಆದರೆ ಬೇರೆ ಅನುಕೂಲಗಳು ಕನ್ನಡಿಗರಿಗೆ ತುಂಬಾ ಇದ್ದರೂ, ಕನ್ನಡಮಾತೆಯ ಶ್ರೇಯೋಭಿವೃದ್ಧಿಗೆ ತುಂಬಾ ಸಹಾಯವಾಗುವ ಈ ಮಹತ್ಕಾರ್ಯದಲ್ಲಿ ಮುಂದೊತ್ತಿ ಸಾಹಸಪಡುವ ಜನರು ಬಹಳವಿರಳವಾದ ವಿಷಯವು ಕನ್ನಡಿಗರಿಗೆ ದುಃಖವನ್ನುಂಟುಮಾಡದಿರದು. ಆದುದರಿಂದ ಸ್ವತಂತ್ರ ಪ್ರಿಯನಾದ ಪ್ರತಿಯೊಬ್ಬ ಕನ್ನಡಿಗ ಯುವಕನುಸೊಂಟಕಟ್ಟಿ ಈ ಮಹಾತ್ಕಾರ್ಯವು ಸಾಧಿಸುವ ವರೆಗೆ ತನ್ನ ಕೈಲಾದ ಪ್ರಯತ್ನವನ್ನು ಮಾಡಿಯೇ ತೀರಬೇಕೆಂದು ಹೇಳಿ ಭಾಷಣ ಕರ್ತರು ತಮ್ಮ ಅಮೋಘ ಭಾಷಣವನ್ನುಕೊನೆಗೊಳಿಸಿದರು. ಬಿ. ಎಲ್. ಕ್ಲಾಸಿನ ಶ್ರೀ| ಕೆ. ವರದರಾಯ ಪೈಗಳು ಪಾರ್ಲಿಮೆಂಟರಿ ಸೆಕ್ರೆಟರಿ ಸ್ಥಾನಗಳಿಗೆ ನೇಮಿಸಲ್ಪಟ್ಟ ಮ. ರಾ. ಶ್ರೀ| ಕೆ ಆರ್. ಕಾರಂತ, ಪ್ರೋ| ಶ್ರೀ| ಜೆ. ವಾರ್ಕಿ, ಶ್ರೀ| ಎ. ಬಿ ಶೆಟ್ಟಿಯವರನ್ನು ಅಭಿನಂದಿಸುವ ಸಂತೋಷ ಸೂಚಕ ಠರಾವನ್ನು ಸಭೆಯ ಮುಂದಿಟ್ಟರು. ಅದು ಸರ್ವಾನುಮತದಿಂದ ಮಂಜೂರಾಯಿತು. ಆ ಮೇಲೆ ಅಧ್ಯಕ್ಷರು ಕರ್ಣಾಟಕ ಏಕೀಕರಣದ ಕೆಲಸದಲ್ಲಿ ಯುವಕರ ಕರ್ತವ್ಯಗಳನ್ನು ಹುರುಪಿನ ಮಾತುಗಳಿಂದ ಒತ್ತಿ ಹೇಳಿದರು. ಕೊನೆಗೆ ಕಾರ್ಯದರ್ಶಿಗಳಾದ ಶ್ರೀ| ಎಮ್. ನರಸಿಂಹ ವಿಠಲ ಕಾಮತರು ರಸಭರಿತವಾದ ಪುಟ್ಟಭಾಷಣದಲ್ಲಿ ಅಧ್ಯಕ್ಷರಿಗೂ ಭಾಷಣಕರ್ತರಿಗೂ ವಂದನೆಯನ್ನರ್ಪಿಸಿ "ವಂದೇ ಮಾತರಂ" ಹಾಡಿದ ಬಳಿಕ ಸಭೆ ಮುಕ್ತಾಯವಾಯಿತು.

---

### ಅಯ್ಯಾ ನವಯುಗವೇ

ನಿನ್ನ ತಾ. 29–7–37ನೇ ಸಂಚಿಕೆಯಲ್ಲಿ ಉಡುಪಿಯ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಕುರಿತು "ಉಪಾಧ್ಯಾಯರೊಬ್ಬರ ನಿರ್ಘೃಣವರ್ತನೆ" ಎಂಬ ಬಾತ್ಮಿಯನ್ನು ಕೊಟ್ಟಿದ್ದೆ. ಅದನ್ನು ಮುಂದಕ್ಕೆ ಅಂತಹ ಪ್ರಸಂಗಗಳು ನಡೆಯದಿರಲೆಂಬ ಉದ್ದೇಶದಿಂದಲೇ ಬರೆದಿರುವುದಲ್ಲದೆ ಶಾಲೆಯವರನ್ನಾಗಲೀ, ಸದ್ರಿ ಉಪಾಧ್ಯಾಯರನ್ನಾಗಲೀ ತೆಗಳುವ ಉದ್ದೇಶದಿಂದಲ್ಲ. ಆದರೆ ಆ ಲೇಖನದಿಂದ ಶಾಲೆಯವರಿಗೂ ಸದ್ರಿ ಉಪಾಧ್ಯಾಯರಿಗೂ ಮನನೊಂದಿರುವುದೆಂದು ಕೇಳಿ ನಾನು ವಿಷಾದಪಡುತ್ತೇನೆ. ಮತ್ತು ಆ ಭಾಗದಲ್ಲಿ ನಾನು ಅವರೊಡನೆ ಕ್ಷಮೆ ಯಾಚಿಸುತ್ತೇನೆ.

ಇತಿ,

"ಬಾಲಹಿತೇಚ್ಛು."


ಸೀವು ನಿಮ್ಮ–ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ ?

ಇಲ್ಲವಾದರೆ, ಹೇಗೆ ಮಾಡುವುದೆಂಬುದನ್ನು ಭದ್ರತೆಯ, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ.

**ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ**

**ಲಿಮಿಟೆಡ್ (ಅಜ್ಮೀರು)**

**ನಮ್ಮ ಅಭಿವೃದ್ಧಿಯ ಅಂಕೆ ಸಂಕೆಗಳು**

| | |
|---|---|
| ಚಾಲ್ತಿಯಲ್ಲಿರುವ ಪೋಲಿಸಿಗಳು .... .... | ರೂ. **3 ಕೋಟಿ** ಮಿಕ್ಕಿದೆ. |
| ಮೂಲಗಳು .... .... .... | ರೂ. **80** ಲಕ್ಷಕ್ಕೂ ಮಿಕ್ಕಿದೆ. |
| ವಾರ್ಷಿಕ ಉತ್ಪನ್ನ .... .... .... | ರೂ. **18** ಲಕ್ಷಕ್ಕೂ ಮಿಕ್ಕಿದೆ. |
| ವಿಮೆ ತೆತ್ತುದು .... .... .... | ರೂ. **42** ಲಕ್ಷಕ್ಕೂ ಮಿಕ್ಕಿದೆ. |

**ಅತ್ಯಧಿಕ ಬೋನಸು**

| ಜೀವಾಂತ್ಯ ವಿಮೆ: | ಎಂಡೋಮೆಂಟ್: |
|---|---|
| ವರ್ಷಕ್ಕೆ ರೂ. 1000ಕ್ಕೆ **25**ರಂತೆ. | ವರ್ಷಕ್ಕೆ ರೂ. 1000ಕ್ಕೆ **20**ರಂತೆ. |

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲಿ ಕೆಳಗಿನವರಿಗೆ ಬರೆಯಿರಿ—

ಪಿ. ಜಿ. ಮರಾಠೆ ಎಸ್ಕ್ವಾಯರ್, ಜನರಲ್ ಮೆನೇಜರ್

(ಅಥವಾ) ಎಂ. ಮಾಧವ ರಾವ್ ಎಸ್ಕ್ವಾಯರ್, ಬಿ. ಎ., ಸುಪರಿಂಟೆಂಡೆಂಟ್ ಒಫ್ ಬ್ರಾಂಚೆಸ್ ಎಂಡ್ ಚೀಫ್ ಏಜನ್ಸಿಸ್, ಯನ್. ಐ. ಎಂಡ್ ಸಿಲೋನ್.

**ಪಶ್ಚಿಮ ಕರಾವಳಿಗೆ ಓರ್ವ ಪ್ರಾಮುಖ್ಯ ಪ್ರತಿನಿಧಿಗಳು ಬೇಕು.**



ಹೊಸ ರಕಂ! ಗ್ಯಾರಂಟಿ ಇದೆ!

Imitation Diamond Ear Rings

ಇಮಿಟೇಷನ್ ವಜ್ರದ ಬೆಂಡೋಲೆ

ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸಮನಾಗಿದೆ. ಇವನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಇದರ ಬಣ್ಣವು ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ. 7 ಕಲ್ಲಿನ ಬಿಳಿಯ ಓಲೆ ಜೋಡಿ 1ಕ್ಕೆ ರೂ. 1–8–0. 7 ಕಲ್ಲಿನ ಕೆಂಪು ಓಲೆ ಜೊತೆ 1ಕ್ಕೆ ರೂ. 1–10–0. ಬಳೆಗಳು ಜೋಡಿ 1ಕ್ಕೆ ರೂ. 2–0–0. ಉಂಗುರ 1ಕ್ಕೆ ರೂ. 1–4–0.

ಸಿಗುವ ವಿಳಾಸ:

**ದೇವಕರ್ ಅಂಡ್ ಕಂಪನಿ,**

ನಂಬುಲಿಯರ್ ಬೀದಿ, ಜಿ. ಟಿ.

ಮದರಾಸು.



**ನವಭಾರತ ಬುಕ್ ಡಿಪೋದಲ್ಲಿ**

**ರಬ್ಬರ್ ಸ್ಟಾಂಪ್**

**ಮೊಹರುಗಳು**

ದೊರೆಯುತ್ತವೆ.

# ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಸಿನ ಕೈ, ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದಗಾಯನ ಸಾಮಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.

ವಿಶೇಷ ಮಾಹಿತಿಗೆ ಬರೆಯಿರಿ.

*Proprietor:* **ATTAVAR BABOO,**
**Vasanthi Harmonium Works,**
**Hampankatta, Mangalore.**

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪ್ಪೋ, ಚರ್ಚ್‌ರೋಡ್, ಉಡುಪಿ ಇಲ್ಲಿ ದೊರಲ್ಪಡುತ್ತವೆ.

---

ಪ್ರಕಟವಾಗಿದೆ! ? ಪ್ರಕಟವಾಗಿದೆ!

ನವಯುವಕರನ್ನು ಮುಗ್ಧಗೊಳಿಸುವ ಮಹಾ ಮಹಾ ಜನ ವಾಚಕರ ಮನಸ್ಸನ್ನು ಸೂರೆಮಾಡುವ ಅಭಿಜಾತ ಜನ!

## ಮಿಸ್ ಲಲಿತ

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು ಇದೀಗಲೇ ಹೊರಬಿದ್ದಿದೆ.

**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**

ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ 0 8 0

ವಿಳಾಸ:— M. V. Puthran,
C/o 34, Bomanji Lane, *2nd Floor, Fort*, BOMBAY

---

**15 ವರ್ಷಗಳ ಅನುಭವ!** **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು ಪ್ರಸಿದ್ಧರಾಗಿರುವ

## ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಚಿತ್ರನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಚೌಕಿ ವಿನ ಯಕ ದೇವರ ಸುಂದರ ವಿಗ್ರಹಗಳನ್ನು ಮಾಡಿಕೊಡುವರು ... ಸ್ಥ ಪ್ರಕರ್ಷವು ತಮ್ಮ ವಿಶೇಷ ಸಾಮರ್ಥ್ಯ.

ಗಣಪತಿ ರಾವ್, ಪೈಂಟರ್,
ಗೋಧಿ ಮಠದ ಲೇನು - - **ಉಡುಪಿ, ದ. ಕ.**

---

THE
# MOOLKY BANK, LTD.,
MOOLKY.

## ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲ ಸಾಲಕೊಡ ಲಾಗುವುದು.

ಸಿರಖು ಠೇವಣಾತಿ ಸೇಕಡ 5ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಹಾ ಕೊಡುವುದಲ್ಲದೆ ಸಾಲ ಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
*President & Manager,* ಪ್ರೆಸಿಡೆಂಟ್ ಮತ್ತು ಮೆನೇಜರ್.

---

# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜ ಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

## THE ROYAL SEED CO.,
FLORISTS & SEEDSMEN,
27, Ilpay Thope ULSOOR, BANGLORE.

ವಿ. ಸೂ — ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈ ಮಾಡಿ 0—0—0 ಒಂದಕ್ಕೆ— ಕಮಿಷನ್ ಪಡೆಯುತ್ತೇವೆ ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು.

---

# HOTEL INDIANA
## Bar and Restaurant

ಮಂಗಳೂರಿಗೆ ಹೋದಲ್ಲಿ ಇಳಕೊಳ್ಳುವುದೆಲ್ಲಿ ಎಂದು ಯೋಚಿಸುವಿರೇಕೆ?

## ಹೊಟೇಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಆಧ್ಯಾಧುನಿಕ ಸೌಕರ್ಯಗಳಿಂದ ನಿಮ್ಮನ್ನು ಎದಿರುಗೊಳ್ಳುತ್ತದೆ.

**ಹೊಸ ಆಡಳಿತ!** ಹೊಸ ವ್ಯವಸ್ಥೆ!

ಎಲ್ಲವೂ ಹೊಸತೇ ಆಗಿ ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

*Proprietor,*
HOTEL INDIANA
*Hampankatta, Mangalore*

---

# ಧರ್ಮಾರ್ಥ ಬಹುಮಾನಗಳು



**1—0—0ಗೆ!**

-- ಯಾರಿಗೆ? --

ರೂಪಾಯಿ 1—0—0 ಕೊಟ್ಟು 36 ಸೀಸೆ ಒಟ್ಟೊರೋಸ್ಟು ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಡಬ್ಬಿ ರಿಸ್ಟ್‌ವಾಚುಗಳು, 1 ಕ್ರೋಮಿಯಂ ಡಬ್ಬಿ ಪಾಕೆಟ್ ವಾಚು, 1 ಸೇಫ್ಟಿ ರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ವಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ಬೀರುವ 1 ಟಾರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟೈಮ್‌ಪೀಸು (10 ವರುಷ ಗ್ಯಾರಂಟಿ) ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. **ಇಂದೇ ಆರ್ಡರು ಕೊಡಿರಿ.**

## EASTERN TRADING COY.,
*Post Box No. 12204, CALCUTTA, (N. Y.)*

## ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

**ಟೌನ್ ಕಾಂಗ್ರೆಸ್ ಕಮಿಟಿ**—ಕಳೆದ ತಾ ೧೧ರಲ್ಲಿ ಮಂಗಳೂರಲ್ಲಿ ಟೌನ್ ಕಾಂಗ್ರೆಸ್ ಕಮಿಟಿಯ ಸಭೆಯು ಸೇರಿ, ಸಮಿತಿಗೆ ಒಂದು ಕಾನಸ್ಟಿಟ್ಯೂಶನನ್ನು ತಯಾರಿಸಿ ಅದನ್ನು ಸ್ವೀಕರಿಸಿತು. ನಗರದಲ್ಲಿ ಡಿವಿಜನ್ ಕಾಂಗ್ರೆಸ್ ಸಮಿತಿಗಳನ್ನು ಏರ್ಪಡಿಸಬೇಕೆಂದೂ ಮತ್ತು ಅವುಗಳಿಗೆ ಎಷ್ಟು ಪ್ರಾತಿನಿಧ್ಯವನ್ನು ಕೊಡಬೇಕೆಂಬುದನ್ನೂ ನಿರ್ಧರಿಸಲಾಯಿತು

**ಚುನಾವಣಾ ಸಮಿತಿ**—ಮಂಗಳೂರು ನಗರ ಸಭೆಯು ಚುನಾವಣೆಯನ್ನು ನಡೆಸುವರೆ ಏರ್ಪಡಿಸಲ್ಪಟ್ಟ ಚುನಾವಣಾ ಸಮಿತಿಯ ಸಭೆಯು ತಾ ೧೧ನೇ ಸಾಯಂಕಾಲ ಸೇರಿತು. ಒಬ್ಬ ಪ್ರೊಟೆಸ್ಟೆಂಟ್ ಕ್ರಿಸ್ತ ಸದಸ್ಯರನ್ನು ಚುನಾವಣಾ ಸಮಿತಿಗೆ ನೇಮಿಸಬೇಕೆಂದಾಯಿತು ಉಮೇದ್ವಾರರನ್ನು ಇದೀ ಸಮಿತಿಯವರೇ ಆರಿಸಬೇಕೆಂದೂ, ಉಮೇದ್ವಾರರ ಹೆಸರನ್ನು ಶಿಫಾರಸು ಮಾಡುವ ಬಗ್ಗೆ ಒಂದು ಚಿಕ್ಕ ಸಮಿತಿಯನ್ನು ನೇಮಿಸಬಹುದೆಂದೂ ನಿರ್ಧಾರವಾಯಿತು. ಇದೇ ತಾ ೨೫ರಲ್ಲಿ ಚುನಾವಣೆಯ ಚಳವಳಿಯನ್ನು ಆರಂಭಿಸಬೇಕೆಂದು ತೀರ್ಮಾನವಾಯಿತು ಉದ್ದೇಶ ಪತ್ರವನ್ನು ಸರಿಪಡಿಸುವುದಕ್ಕಾಗಿ ಅದನ್ನು ತಂ ಡಾರಿಸಿದ ಸಮಿತಿಗೆ ಹಿಂದಕ್ಕೆ ಕಳುಹಿಸಲ್ಪಟ್ಟಿತು.

**ಯೂನಿಯನ್ ಅಸೆಂಬ್ಲಿ**—ಸ್ಯೆಂಟ್ ಅಲೋಶಿಯಸ್ ಕಾಲೇಜ್ ಯೂನಿಯನ್ ಅಸೆಂಬ್ಲಿಯ ಸಭೆಯು ಕಳೆದ ತಾ ೧೩ರಲ್ಲಿ ಸೇರಿ ಮದ್ರಾಸ್ ಮಂಡಲದವರ ಮದ್ಯಪಾನ ನಿಷೇಧದ ಯೋಜನೆಯನ್ನು ಕೈಕೊಂಡದ್ದಕ್ಕಾಗಿ ಅವರನ್ನು ವಂದಿಸಿತು ಬೇಡನ್ ಪವೆಲರ ಚಮೂ ದಳದಿಂದ ಹಿಂದೀ ಚಮೂ ದಳವನ್ನು ಪ್ರತ್ಯೇಕವಾಡಬೇಕೆಂದು ನಿರ್ಧರಿಸಿತು. ಮತ್ತು ಪ್ರಪಂಚದ ಶಾಂತಿ ಭಂಗಕ್ಕೆ ಹಿಟ್ಲರರೂ ಅವರ ಸಂಗಡಿಗರೂ ಕಾರಣಭೂತರೆಂದು ತೀರ್ಮಾನಿಸಲ್ಪಟ್ಟಿತು ಪ್ರೊ ಮ್ಯಾಥ್ಯು ಸ್ತೋಲಕರು ಸ್ಪೀಕರರಾಗಿದ್ದರು

**ಅಂಡಮಾನ್ ಕೈದಿಗಳ ದಿನಾಚರಣೆ**
ರಾಷ್ಟ್ರಪತಿಗಳ ಅಪ್ಪಣೆಯ ಮೇರೆಗೆ ೩೧ ೧೪ ಅಂಡಮಾನ ಕೈದಿಗಳ ದಿನಾಚರಣೆಯಾಗಿ ಆಚರಿಸಲ್ಪಟ್ಟಿತು ಅಂದು ಸಾಯಂಕಾಲ ಮೈದಾನಿನಲ್ಲಿ ಸಭೆಸೇರಿತು. ಶ್ರೀ ರಾಮರಾಯ ಮಲ್ಯರು ಅಧ್ಯಕ್ಷತೆ ವಹಿಸಿ ಅಂದಿನ ದಿನದ ಮಹತ್ವವನ್ನು ವಿವರಿಸಿ ಹೇಳಿದರು ಶ್ರೀ ಕೆ. ಆರ್ ಆಚಾರ್ಯರು ಭಾಷಣಮಾಡುತ್ತಾ ಅಂಡಮಾನದ ರಾಜಕೀಯ ಕೈದಿಗಳು ಅನುಭವಿಸುತ್ತಿರುವ ಅಸಹನೀಯ ಸಂಕಷ್ಟಗಳನ್ನು ವರ್ಣಿಸಿ, ಅವರಲ್ಲಿ ಅನೇಕರು ವಿಚಾರಣೆಯಿಲ್ಲದೆ ಜೈಲಲ್ಲಿಡಲ್ಪಟ್ಟವರೆಂದೂ ಅವರನ್ನು ಅಂತಹ ಕೆಟ್ಟ ಹವೆಯ ಪ್ರದೇಶದಲ್ಲಿಡುವುದು ಅನ್ಯಾಯವೆಂದೂ ತಿಳಿಸಿ ಸರಕಾರದ ವರ್ತನೆಯನ್ನು ತೀವ್ರವಾಗಿ ಖಂಡಿಸಿದರು. ಶ್ರೀ ಗಳಾದ ವಿಟ್ಠಲ ಹೆಗ್ಗಡೆ, ಕೆ ಪಿ ಕಾರಂತ್ ರಂಗರಾವ್ ತಲಚೇರಿಕರ ಮತ್ತು ಪ್ಲೇಫರ್ ಇವರು ಮಾತಾಡಿದರು ಸರಕಾರದ ವರ್ತನೆಯನ್ನು ಖಂಡಿಸಿ, ಕೈದಿಗಳನ್ನು ಬಿಡುಗಡೆಮಾಡಬೇಕೆಂದೂ ಸೂಚಿಸಿ, ನಿರಶನ ವ್ರತವನ್ನು ಚರಿಸುವವರೊಡನೆಯೂ ಅವರಲ್ಲಿ ಸಹಾನುಭೂತಿ ತೋರಿಸಿ ನಿರಶನ ವ್ರತವನ್ನಾಚರಿಸಿದವರೊಡನೆಯೂ ಸಹಾನುಭೂತಿ ತೋರಿಸುವ ಠರಾವುಗಳಾದುವು

**ಉಪನ್ಯಾಸ**—ನಿನ್ನೆಯ ದಿನ ವೈ ಯಂ. ಸಿ ಎ ಸಭೆಯಲ್ಲಿ ಶ್ರೀ ಎಫ್ ಸೋನ್ಸರ ಅಧ್ಯಕ್ಷತೆಯಲ್ಲಿ ಡಾ| ಪಿ ಜ ಜಿ ಉಣ್ಣಿತ್ತಾನ್, ಜಿಲ್ಲಾ ಹೆಲ್ತ್ ಆಫೀಸರರು ಪೌಷ್ಟಿಕ ಆಹಾರದ ವಿಷಯವಾಗಿ ಉಪಯುಕ್ತ ಭಾಷಣವಿತ್ತರು

**ಜಿಲ್ಲಾ ಶ್ಯಾನುಭೋಗರ ಪರಿಷತ್ತು**—ಈ ಪರಿಷತ್ತು ನಿನ್ನೆ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಬಿ ವ್ಯಾಸರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು ಅಧ್ಯಕ್ಷರು ಶ್ಯಾನುಭೋಗರ ಕಷ್ಟ ಸುಖಗಳ ವಿಷಯ ತಿಳಿಸಿ ಅವರ ವೇತನವನ್ನು ಸರಕಾರದವರು ಹೆಚ್ಚಿಸುವುದು ಅಗತ್ಯವೆಂದು ಸೂಚಿಸಿದರು ಶ್ಯಾನುಭೋಗರಿಗೆ ಸಂಬಳ ಹೆಚ್ಚಿಸಬೇಕೆಂದೂ, ಅವರಿಗೆ ವರ್ಷಕ್ಕೆ ಸಂಬಳ ಸಮೇತ ಒಂದು ತಿಂಗಳ ರಜೆ ಸಿಕ್ಕಬೇಕೆಂದೂ ಅವರನ್ನು ಪಟೇಲರ ಕ್ಲಾರ್ಕರೆಂದು ಎಣಿಸಲ್ಪಡಬಾರದೆಂದೂ, ಅವರ ಉದ್ಯೋಗ ವಂಶಪಾರಂಪರ್ಯದ ಹಕ್ಕೆಂದು ಸದ್ದನ್ನಾಗಿ ಮಾಡಬೇಕೆಂದೂ, ಶ್ಯಾನುಭೋಗರ ಸಭೆಯನ್ನು ರಿಜಿಸ್ಟರಮಾಡಬೇಕೆಂದೂ ಮುಂತಾದ ಠರಾವುಗಳು ಮಂಜೂರು ಮಾಡಲ್ಪಟ್ಟವು

**ಹರಿಜನ ಲೇಬರ್ ಲೀಗ್**—ಈ ಲೀಗಿನ ವಾರ್ಷಿಕ ಸಭೆಯು ನಿನ್ನೆಯ ದಿನ ಸೇರಿತು ಶ್ರೀ ಬಿ ಘೋಜರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು ಗತವರ್ಷದ ವರದಿಯನ್ನು ಶ್ರೀ ಕೆ ಈಶ್ವರ ಯಂ. ಎಲ್ ಎ ರವರು ಓದಿದರು ಮದ್ರಾಸ ಮಂತ್ರಿ ಮಂಡಲದವರಿಗೆ, ತಿರುವಾಂಕೂರು ಮಹಾಜನರಿಗೆ (ಕ್ಷೇತ್ರ ಪ್ರವೇಶ ಕೊಟ್ಟದ್ದಕ್ಕಾಗಿ) ಧನ್ಯವಾದಗಳ ಸಿಸಲ್ಪಟ್ಟವು ಹರಿಜನ ಬಾಲಕರಿಗೆ ಹೆಚ್ಚು ವಿದ್ಯಾರ್ಥಿ ವೇತನ, ಹರಿಜನರ ವಸತಿಗೆ ಸ್ಥಳ ಕೂಡಿಸುವ, ವಿಚಾರ, ಹರಿಜನರನ್ನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ವಿಚಾರ ಮದ್ಯಪಾನವನ್ನು ನಿವಾರಿಸುವುದು ಇತ್ಯಾದಿ ವಿಷಯಗಳಲ್ಲಿ ಠರಾವುಗಳಾದುವು ಶ್ರೀ ಕಿಟ್ಟೆಲಯವರು ಹರಿಜನರಿಗೆ ಉಪಯುಕ್ತವಾದ ಹಿತಸೂಚನೆಗಳನ್ನಿತ್ತರು.

**ಮಿತ್ರ ಮಂಡಲಿ**—ಶ್ರೀ ತಲಚೇರಿ ರಂಗರಾಯರ ಅಧ್ಯಕ್ಷತೆಯಲ್ಲಿ ಮಂಗಳೂರು ಮಿತ್ರಮಂಡಲಿಯ ಪ್ರಥಮ ಸಭೆಯು ನಿನ್ನೆ ಜರಗಿತು ವಿದ್ವಾನ್ ಎಸ್. ಕೃಷ್ಣ ಭಟ್ಟರು ಕನ್ನಡದ ಸೇವೆ ಎಂಬುದರ ಕುರಿತು ಭಾಷಣಮಾಡಿದರು, ಶ್ರೀ ಕೆ ರಂಗನಾಥ ಭಟ್ಟರು, ಮಂಡಲಿಯವರು ಈ ವರ್ಷ ನಾಡಹಬ್ಬವನ್ನು ಇಲ್ಲಿಯೂ ನಡಿಸುವ ಏರ್ಪಾಡನ್ನು ಮಂಡಲಿಯವರು ಕೈಕೊಳ್ಳುವರೆಂದು ಸೂಚಿಸಿದರು


ದೀರ್ಘ ಬಾತ್ಮಿಗಳಿಗೆ
ನವಯುಗದಲ್ಲಿ
ಎಂದೂ ಎಡೆಸಿಗಲಾರದು.



ಅಲಭ್ಯ ಲಾಭ! ಉಡುಪಿ ನಿಜವಾದ ಭದ್ರತೆಗೆ!!

**ಶ್ರೀ ಪೇಜಾವರ ಮಠದ ಪರ್ಯಾಯಂ**

**ಬೋಂಡನ್ನು ಇಂದೇ ಕೊಂಡುಕೊಳ್ಳಿರಿ!**

ಮಠದವರಿಗೆ ಅವಶ್ಯವಾದ ಗರ್ಜಿನ ಬಗ್ಗೆ ಸಾಲಮಾಡುವ ಆಗತ್ಯ ಉಂಟೆಂದೂ, ಅದು ಮಠಗಳ ಹುಟ್ಟುವಳಿ ಮೇಲೆ ಸಿಂಧುವಾಗತಕ್ಕದ್ದೆಂದೂ ಪ್ರೀವಿಕೌನ್ಸಿಲಿನ ತೀರ್ಪು ಇದೆ.

ರೂ. 75, 80, 85, 90ರ ಬೋಂಡನ್ನು ಪಡಕೊಂಡು ಕ್ರಮವಾಗಿ 5, 4, 3, 2 ವರ್ಷಗಳಲ್ಲಿ ಒಂದು ನೂರು ರೂಪಾಯಿಗಳನ್ನು ವಾಪಾಸು ಪಡೆಯಿರಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಜನರಲ್ ಏಜಂಟ್, ಪೇಜಾವರ ಮಠ, ಉಡುಪಿ.**


## ಉಡುಪಿ

### ಅಬ್ದುಲ್ಲಾ ಸಾಹೇಬರ ಪುಣ್ಯದಿನೆ

ಕೀರ್ತಿಶೇಷರಾದ ಖಾನಬಹಾದೂರ್ ಹಾಜೀ ಅಬ್ದುಲ್ಲಾ ಹಾಜೀ ಕಾಸೀಂ ಸಾಹೇಬರವರ ಪುಣ್ಯ ದಿನವನ್ನು ೧೩-೮-೩೭ರಂದು ಸಂಜೆ ಸ್ಥಳೀಯ ಅಂಜುಮಾನ್ ಕ್ಲಬ್ಬಿನಲ್ಲಿ ಸಭೆಸೇರಿ, ಕೀರ್ತಿಶೇಷರ ಗುಣಕಥನಗಳನ್ನುಮಾಡಿ ಅಲ್ಲಿಂದ ಅವರ ಸಮಾಧಿಸ್ಥಾನಕ್ಕೆ ಹೋಗಿ ಪುಷ್ಪಹಾರವನ್ನು ಅರ್ಪಿಸಿದರು ಜಾತಿ ಮತಗಳ ಭೇದವಿಲ್ಲದೆ ಸರ್ವರೂ ಸಹಕರಿಸಿದ್ದರು

**ಹರಿಕಥೆ**—ತಾ. ೧೪ರಂದು ಬೆಂಗಳೂರಿನ ಶ್ರೀ ಶ್ರೀ ನಿವಾಸಾಚಾರ್ಯರ ಶ್ರೀ ಶಾರದಾ ಸಂಗೀತ ಕಲಾ ಶಾಲೆಯಲ್ಲಿ, ಶ್ರೀ ಬಿ ಕೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ "ಖಾಂಡವ ದಹನ" ಎಂಬ ಕತೆಯನ್ನು ಸೊಗಸಾಗಿ ಮಾಡಿರುತ್ತಾರೆ

ತಾ ೧೬ನೇ ದಿನ ಇಲ್ಲಿಯ ಅಂಜುಮಾನ್ ಕ್ಲಬ್ಬಿನಲ್ಲಿ ಶ್ರೀ ಸಂಜೀವರಾಯರು ಹಿಂದೂ ಮುಸ್ಲಿಮರಿಂದಲೂ ಸ್ತ್ರೀ ಪುರುಷರಿಂದಲೂ ತುಂಬಿದ ಸಭೆಯಲ್ಲಿ "ಶೇಕ್ ಮಹಮ್ಮದ" ಎಂಬ ಕತೆಯನ್ನು ಉತ್ತಮ ರೀತಿಯಿಂದ ಮಾಡಿರುತ್ತಾರೆ.

### ಕಲ್ಯಾಣಪುರ

ಉಡುಪಿ ತಾಲೂಕಿನ ಉಪಾಧ್ಯಾಯಿನಿಯರು ತಾ ೧೧-೮-೩೭ ರಂದು ಕಲ್ಯಾಣಪುರದ ಡಿ ಬೋ. ಹಾಯರ್ ಎಲಿಮೆಂಟರಿ ಬಾಲಿಕಾ ಪಾಠಶಾಲೆಯಲ್ಲಿ ಉಡುಪಿ ನಗರ ಸಭೆಯ ಅಧ್ಯಕ್ಷರಾದ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿಸಿ ತಮ್ಮ ಸಂಬಳ ಕಡಿತದ ವಿಷಯ ಒಂದು ನಿಷೇಧ ಠರಾವನ್ನು ಮಾಡಿ ಸರಕಾರದ ಅವಗಾಹನೆಗಾಗಿ ಕಳುಹಿಸಿರುವರು.

### ಕರ್ನಾಟಕ ಸ್ಟೋರ್ಸ್, ಲಿಮಿಟೆಡ್

ಮೇಲ್ಕಂಡ ಹೆಸರಿನ ಸಂಸ್ಥೆಯೊಂದು, ಇಲ್ಲಿ ಸ್ಥಾಪಿತವಾಗಿ ಅದರ ಷೇರುದಾರರುಗಳ ಪ್ರಥಮ ಸಭೆಯು ಕಳೆದ ತಾ ೧೫ನೇ ಆದಿತ್ಯವಾರ ಜರಗಿತು ಡಾ| ಪಿ ಜ ಆಚಾರ್ಯರು ಅಧ್ಯಕ್ಷರಾಗಿಯೂ ಶ್ರೀ ಸಿ. ವಿ. ಆಚಾರ್ಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು.

---

**ಪುತ್ತೂರು**—ಇಲ್ಲಿ ಹಿಂದೀಪ್ರಚಾರ ಕಾರ್ಯವು ಬಹು ಜೋರಿಂದ ಸಾಗುತ್ತಿದೆ ಇಲ್ಲಿಯ ಹಿಂದೀಪ್ರಚಾರಕರಾದ ವರ್ಧಮಾನಹೆಗ್ಡೆ, ವಿಟ್ಠಲರಾವ ರು ಪ್ರಚಾರ ಕಾರ್ಯದಲ್ಲಿ ತುಂಬಾ ಶ್ರಮವಹಿಸುತ್ತಿದ್ದು ಸ್ತೋತ್ರಾರ್ಹವಾಗಿದೆ ಇಲ್ಲಿಯ ಪ್ರಾಥಮಿಕ ಬಾಲಿಕಾ ಪಾಠಶಾಲೆಯಲ್ಲಿ ಮಧ್ಯಾಹ್ನ ೧-೩೦ರಿಂದ ೩ ಗಂಟೆಗಳವರೆಗೆ 'ಪ್ರಾಥಮಿಕ' ಮತ್ತು 'ಮಧ್ಯಮ' ಕ್ಲಾಸುಗಳು ನಡೆಯುತ್ತಿವೆಯಲ್ಲದೆ ಸಮ್ರಿಯವರಿಂದಲೇ ಇತರ ಹಲವೆಡೆಗಳಲ್ಲಿಯೂ ಕ್ರಮವಾಗಿ ಕ್ಲಾಸುಗಳು ನಡೆಸಲ್ಪಡುತ್ತಿವೆ

**ಕೊಲ್ಲ ಮೊಗರು**—ತಾ 8-8 37ರಲ್ಲಿ, ಬೆಳ್ಳಾರೆಯಿಂದ ಬಂದಿದ್ದ ಶ್ರೀಯುತ, ಗಣಪ ಶಾಸ್ತ್ರಿ ಪಯ್ಯನವರು, ಹರಿಹರ ಪಲ್ಲತಡ್ಕ, ಕೊಲ್ಲಮೊಗರು, ಕಲ್ಮಕಾರು ಗ್ರಾಮಗಳನ್ನೊಳಗೊಂಡ, ಒಂದು ಸಂಯುಕ್ತ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿದರು ಅಂದಿನ ಮಹಾಜನರ ಸಭೆಗೆ, ಮ. ರಾ ಕೆಜ್ಜೋಡಿ ತಿಮ್ಮ ಗೌಡರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಈ ಕಮಿಟಿಗೆ ಏಳು ಮಂದಿಯ ಒಂದು ಕಾರ್ಯಕಾರಿ ಮಂಡಳಿಯನ್ನು ರಚಿಸಲಾಗಿ ಮ ರಾ ನಡುಮನೆ ಗೋವಿಂದಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಕೆಜ್ಜೋಡಿ ಚೆನ್ನಪ್ಪ ಗೌಡರನ್ನು ಉಪಾಧ್ಯಕ್ಷರನ್ನಾಗಿಯೂ, ಮ ಮೂವಪ್ಪನವರನ್ನು ಕಾರ್ಯದರ್ಶಿ ತಾಲೂಕು ಕಾಂಗ್ರೆಸ್ ಕಮಿಟಿಯ ಪ್ರತಿನಿಧಿಯನ್ನಾಗಿಯೂ ಆರಿಸಲಾಯಿತು

---


SUSHEELA & CO., KOLLEGAL (S. INDIA.)

**1000 ರೂಪಾಯಿಗಳ ಬಹುಮಾನದ**

**ನಂ. ೧ ಸ್ಪರ್ಧೆಯ ಸರಿಯಾದ ನಮ್ಮ ಮೂರು ಉತ್ತರಗಳು.**

| | | | | |
|---|---|---|---|---|
| 7 | 20 | 13 | 26 | 19 |
| 24 | 12 | 25 | 18 | 6 |
| 11 | 29 | 17 | 5 | 23 |
| 28 | 16 | 9 | 22 | 10 |
| 15 | 8 | 21 | 14 | 27 |

| | | | | |
|---|---|---|---|---|
| 20 | 7 | 13 | 19 | 26 |
| 12 | 24 | 25 | 6 | 18 |
| 29 | 11 | 17 | 23 | 5 |
| 16 | 28 | 9 | 10 | 22 |
| 8 | 15 | 21 | 27 | 14 |

| | | | | |
|---|---|---|---|---|
| 24 | 12 | 25 | 18 | 6 |
| 15 | 8 | 21 | 14 | 27 |
| 11 | 29 | 17 | 5 | 23 |
| 7 | 20 | 13 | 26 | 19 |
| 28 | 16 | 9 | 22 | 10 |

ಬಹುಮಾನ ಪಡೆದವರ ಹೆಸರುಗಳನ್ನು ಮುಂದಿನವಾರ ಪ್ರಕಟಿಸಲಾಗುವುದು.

ಮ್ಯಾನೇಜರ್: ಸುಶೀಲಾ ಎಂಡ್ ಕೋ., ಕೊಳ್ಳೇಗಾಲ.

ESTD. 1906

**The Canara Banking Corporation Udipi Ltd.**

(Incorporated in British India)

Members:- RESERVE BANK OF INDIA.

| | | | |
|---|---|---|---|
| Paid up Capital | Rs. 2,88,925 | 0 | 0 |
| Reserves | Rs. 3,52,213 | 0 | 0 |
| Deposits | Rs 37,98,217 | 0 | 0 |
| Govt. Securities | Rs. 12,46,325 | 0 | 0 |

**Total Resources exceed Rs. 52,00,000/-**

**ANNOUNCEMENT.**

**The Mettupalayam branch of the Corporation will be opened on 11—8—1937 and all kinds of Banking transactions will be undertaken from that date.**

*V. R. Kamath*, B. A., LL.B.

Ag. Manager.

ಉಡುಪಿ, ಗುರುವಾರ, ತಾ ೧೯-೮-'೩೭

## ಹೃದಯರಹಿತ ಧೋರಣೆ

ಕಾಂಗ್ರೆಸು ಅಧಿಕಾರದಲ್ಲಿರುವ ಆರು ಪ್ರಾಂತಗಳಲ್ಲಿ ಅಧಿಕಾರಿಗಳ ಮನೋವೃತ್ತಿಯು ಸಂಪೂರ್ಣ ಮಾರ್ಪಾಟ ಹೊಂದಿ ಹೊಸ ಮನ್ವಂತರವೊಂದು ಉದಯವಾಗಿರುತ್ತದೆ. ಜನತೆಗೆ ಸಂಪೂರ್ಣವಾಗಿ ಭಾಷಣ ಲೇಖನ ಮತ್ತು ಸಂಘಟನಾ ಸ್ವಾತಂತ್ರ್ಯ ದೊರೆತಿರುತ್ತದೆ. ರಾಜಕೀಯ ಕೈದಿಗಳೆಲ್ಲಾ ಬಿಡುಗಡೆ ಹೊಂದುತ್ತಲಿದ್ದಾರೆ. ಕಾಂಗ್ರೆಸ್ಸಿನ ಅಂಗಭೂತವಾದ ಬೇರೆ ಬೇರೆ ಸಂಸ್ಥೆ ಮತ್ತು ಹಿಂದೀ ರಾಷ್ಟ್ರೀಯ ಧ್ವಜದ ಮೇಲಿನ ನಿಷೇಧವು ತೆಗೆದುಹಾಕಲ್ಪಟ್ಟು ಸರಕಾರಿ ಕಟ್ಟಡಗಳಲ್ಲಿಯೂ ತ್ರಿವರ್ಣ ಧ್ವಜವು ಹಾರಾಡಲಾರಂಭಿಸಿದೆ. ಆಡಳಿತ ರೀತಿಯು ಸಂಪೂರ್ಣ ಬದಲಾವಣೆ ಹೊಂದಿದೆ. ಹಿಂದಿನಂತೆ, ಮಂತ್ರಿಗಳೂ ಅವರ ಕೈಕೆಳಗಣ ಅಧಿಕಾರಿಗಳೂ ಜನತೆಯ ಮೇಲೆ ಅಧಿಕಾರ ನಡಸಿ ಅವರನ್ನು ಪೀಡಿಸುವವರಾಗಿರದೆ ಅವರ ಸೇವಕರಾಗಿ ಅವರ ಹಿತಸಾಧನೆಮಾಡುವವರಾಗಿದ್ದಾರೆ. ಜನಮತಕ್ಕೆ ತಲೆಬಾಗಿ ನಡೆಯುವವರಾಗಿದ್ದಾರೆ.

ಆದರೆ ಕಾಂಗ್ರೆಸು ಅಧಿಕಾರಕ್ಕೆ ಬಾರದಿರುವ ಪ್ರಾಂತಗಳಲ್ಲಿ ಹಿಂದಿನ ರೀತಿಯ ರಾಜ್ಯಭಾರವೇ ನಡೆಯುತ್ತಿರುವುದೆಂಬುದಕ್ಕೆ ಬಂಗಾಳ ಪ್ರಾಂತವೇ ಸಾಕ್ಷಿ. ಅಲ್ಲಿ ಇನ್ನೂ ೨೦೦೦ದ ವರೆಗಣ ಡಿಟೆನ್ಯೂ ಕೈದಿಗಳು ಯಾವ ವಿಚಾರಣೆಯೂ ಇಲ್ಲದೆ ಬಂಧನದಲ್ಲಿರಿಸಲ್ಪಟ್ಟು ಕೊಳೆಯುತ್ತಿದ್ದಾರೆ. ಅಂಡಮಾನ್ ಕೈದಿಗಳ ಕುರಿತು ಬಂಗಾಳ ಸರಕಾರವು ವಹಿಸಿದ ಧೋರಣೆಯು ಹೃದಯರಹಿತವಿರುವುದು. ಅಂಡಮಾನಿನಲ್ಲೀಗ ಉಪವಾಸ ಹಿಡಿದಿರುವ ಕೈದಿಗಳಲ್ಲಿ ಹೆಚ್ಚಿನವರು ಬಂಗಾಳದವರು. ಆದುದರಿಂದ ಬಂಗಾಳ ಸರಕಾರವು ಅವರ ವಿಷಯದಲ್ಲಿ ಅತ್ಯುದಾರ ಧೋರಣೆ ವಹಿಸಬೇಕಾಗಿತ್ತು. ಆದರೆ ಅದು ಕೇಂದ್ರ ಸರಕಾರದ ದಾರಿಯನ್ನೇ ಹಿಡಿದು ನಡೆದಿರುವುದು. ಅಂಡಮಾನ್ ಕೈದಿಗಳು ಮುಷ್ಕರ ಹಿಡಿದಿರುವರು; ಮುಷ್ಕರ ನಡೆದಿರುವ ವರೆಗೆ ಅವರ ಕೇಳಿಕೆಗಳನ್ನು ಗಮನಿಸಲು ಸಾಧ್ಯವಿಲ್ಲೆಂದಿಷ್ಟೇ ಹೇಳಿ ಕೇಂದ್ರ ಸರಕಾರವು ಸುಮ್ಮನಾಗಿರುವುದು. ಈ ಕೈದಿಗಳ ನಿಜವಾದ ಪರಿಸ್ಥಿತಿಯು ಈ ವರೆಗೆ ತಿಳಿದು ಬಂದಿಲ್ಲ. ಮೂರು ಮಂದಿ ಅಂಡಮಾನ್ ಕೈದಿಗಳ ಶವವನ್ನು ಸಮುದ್ರಕ್ಕೆಸೆಯಲಾಗಿದೆ ಎಂಬುದನ್ನು ಬಂಗಾಳ ಸರಕಾರವು ನಿರಾಕರಿಸುವುದಿಲ್ಲ. ಮತ್ತು ಆ ವಿಷಯದ ಜವಾಬ್ದಾರಿಯು ಕೇಂದ್ರ ಸರಕಾರದ್ದೆಂದು ವಾದಿಸಿರುವುದು. ಇದರಲ್ಲಿ ಹುರುಳಿಲ್ಲ. ಯಾಕೆಂದರೆ ಅಂಡಮಾನ್ ಕೈದಿಗಳ ಶಿಕ್ಷೆಯನ್ನು ರದ್ದು ಮಾಡುವ ಅಧಿಕಾರ ಬಂಗಾಳಸರಕಾರದ್ದು. ಮತ್ತು ತಮ್ಮ ಕೈದಿಗಳು ಎಷ್ಟು ಮಂದಿ ಬದುಕಿರುವರು, ಎಷ್ಟು ಮಂದಿ ಸತ್ತಿರುವರೆಂಬುದನ್ನು ಅವರು ತಿಳಿದಿರತಕ್ಕದ್ದು. ಇಂಡಿಯಾ ಮತ್ತು ಬಂಗಾಳ ಸರಕಾರಗಳು ಈ ರೀತಿ ಹೃದಯರಹಿತವಾಗಿ ವರ್ತಿಸುವಾಗ ಅಂಡಮಾನ್ ಕೈದಿಗಳು ಕೆಲವರು ಪ್ರಾಣ ಕಳೆದುಕೊಂಡಿರುವರು. ಹಲವರು ಪ್ರಾಣಾಪಾಯಕ್ಕೊಳಗಾಗಿರುವರು.

ಒಂದೀಗ ಇಡೀ ದೇಶವು ಅಂಡಮಾನ್ ಕೈದಿಗಳ ಕುರಿತು ತಲ್ಲಣಗೊಂಡಿರುವುದು. ಜನರೆಲ್ಲಾ ಘಂಟಾಘೋಷವಾಗಿ ಕೇಂದ್ರ ಮತ್ತು ಬಂಗಾಳ ಸರಕಾರದ ಧೋರಣೆಯನ್ನು ನಿಷೇಧಿಸಿರುವರು. ಕಾಂಗ್ರೆಸ್ ಮಂತ್ರಿಗಳು ಈ ಕುರಿತು ಸಂಪೂರ್ಣ ಸಹಾನುಭೂತಿಯುಳ್ಳವರಾಗಿ ತಮ್ಮಿಂದ ಸಾಧ್ಯವಾದ ಕೆಲಸಮಾಡಿರುವರು. ಆದರೆ ಬಂಗಾಳ ಸರಕಾರವು ಈ ವಿಷಯದಲ್ಲಿ ಅತ್ಯಂತ ಮೂರ್ಖತನದಿಂದ ವರ್ತಿಸಿರುವುದು. ಉಪವಾಸ ಹಿಡಿದ ಕೈದಿಗಳೆಲ್ಲಾ ಬಂಗಾಳದವರಾದುದರಿಂದ ಬಂಗಾಳದಲ್ಲಿ ದೇಶದ ಇತರ ಕಡೆಗಳಿಗಿಂತ ಹೆಚ್ಚಿನ ಕ್ಷೋಭೆಯೇಳುವುದು ಸ್ವಾಭಾವಿಕ. ಆದರೆ ಅದು ಬಂಗಾಳ ಕಾಂಗ್ರೆಸ್ ಪಕ್ಷೀಯರು, ಉದ್ದೇಶಪೂರ್ವಕವಾಗಿ ತಮಗೆ ಅಪಯಶಸ್ಸುಂಟುಮಾಡಲು ಎಬ್ಬಿಸಿರುವ ಚಳವಳವೆಂಬ ತಪ್ಪುಭಾವನೆಯಿಂದ ಬಂಗಾಳ ಸರಕಾರವು ಮತಿಗೆಟ್ಟು ವರ್ತಿಸಿರುವುದು. ಇದೇ ತಾ. 14ರಲ್ಲು ಅಂಡಮಾನ್ ಕೈದಿಗಳ ದಿನಾಚರಣೆಯ ಸಂದರ್ಭದಲ್ಲಿ ಕಲ್ಕತ್ತದಲ್ಲಿ ನಡೆದ ಮೆರವಣಿಗೆಯ ಮೇಲೆ ಪೋಲಿಸರು ಲಾಠಿಪ್ರಹರ ನಡಸಿ, ಜನರ ಕೈಯಲ್ಲಿದ್ದ ರಾಷ್ಟ್ರೀಯಧ್ವಜಗಳನ್ನು ಕೆಳಗಿಳಿಸಿ ಕಠಿಣ ದಬ್ಬಾಳಿಕೆಯನ್ನುಪಯೋಗಿಸಿರುವರು. 100ಕ್ಕಿಂತ ಮಿಕ್ಕಿದವರು ಗಾಯಗೊಂಡು ಸುಮಾರು 100 ಮಂದಿ ಕೈದುಮಾಡಲ್ಪಟ್ಟಿರುವರು. ಇದರಿಂದ ನಿಜವಾದ ಪ್ರಜಾ ಜವಾಬ್ದಾರಿಯುಳ್ಳ ಕಾಂಗ್ರೆಸ್ ರಾಜ್ಯಭಾರಕ್ಕೂ, ಬೇರೆ ರಾಜ್ಯಭಾರಕ್ಕೂ ಇರುವ ಅಭ್ಯಂತರವು ವ್ಯಕ್ತವಾಗುತ್ತದೆ. ಬಂಗಾಳದಲ್ಲಿ ಕಾಂಗ್ರೆಸ್ಸಿನವರು ಅಧಿಕಾರದಲ್ಲಿರುತ್ತಿದ್ದರೆ, ಅಂಡಮಾನ್ ಕೈದಿಗಳ ಪ್ರಶ್ನೆಯನ್ನೆತ್ತಿ ಹಿಡಿದು ಹೋರಾಡುತ್ತಿದ್ದರು. ಗವರ್ನರರಾಗಲಿ, ಕೇಂದ್ರ ಸರಕಾರದವರಾಗಲಿ ತಮ್ಮನ್ನು ವಿರೋಧಿಸುತ್ತಿದ್ದರೆ ತಮ್ಮ ಅಧಿಕಾರಕ್ಕೇನೇ ತಿಲಾಂಜಲಿಯಿತ್ತು ಹೊರಗೆ ಬರುತ್ತಿದ್ದರು. ಆದರೆ ಬಂಗಾಳದ ಹಕ್ ಮಂತ್ರಿಮಂಡಲವು ಕೇವಲ ಕೇಂದ್ರ ಸರಕಾರದ ಹಸ್ತಕವಾಗಿ ಒಂದಿಷ್ಟು ಮಾನವ ಸಹಜ ಕನಿಕರವಿಲ್ಲದೆ ಪ್ರತಿಷ್ಠಾಂಧತೆಯಿಂದ ಅಂಡಮಾನ್ ಕೈದಿಗಳ ಪ್ರಾಣದೊಡನೆ ಆಟವಾಡಹೊರಟಿರುವುದು.

---

### ದೇವಸ್ಥಾನಗಳ ಆಡಳಿತ

ಕಾಂಗ್ರೆಸ್ ರಾಜ್ಯಭಾರದಲ್ಲಿ ಅಧಿಕಾರದ ಬಿಗಿತವೆಲ್ಲಾ ಸಡಿಲಾಗುವುದು. ಎಲ್ಲಾ ವಿಷಯದಲ್ಲಿಯೂ ಜನರು ತಮ್ಮಿಚ್ಛಾನುಸಾರ ನಡೆಯುವಂತಾಗುವುದೆಂಬ ಭ್ರಾಂತಿಯನ್ನಾರೂ ಕಟ್ಟಿಕೊಂಡಿದ್ದರೆ, ಆರೋಗ್ಯ ಮತ್ತು ಎಂಡೋಮೆಂಟ್ ಮಂತ್ರಿಗಳು ತಿನ್ನವೆಲ್ಲಿಯಲ್ಲಿ ಮಾಡಿದ ಭಾಷಣವು ಅದನ್ನು ಉಚ್ಚಾಟನೆಮಾಡದಿರದು. ದೊಡ್ಡದೊಡ್ಡ ದೇವಸ್ಥಾನ, ಮಠಗಳವರು ಕೆಲವರು ಎಂಡೋಮೆಂಟ್ ಆಕ್ಟೇ ಹೋಗುವುದೆಂದು ಬಗೆದಿರಬಹುದು. ಕಾಂಗ್ರೆಸ್ ಮಂತ್ರಿಗಳು ದೇವಸ್ಥಾನಗಳ ಆಡಳಿತದ ವಿಷಯದಲ್ಲಿ ತಮಗೆ ಹೆಚ್ಚಿನ ಸ್ವಾತಂತ್ರ್ಯವೀಯಬಹುದೆಂಬ ಅಭಿಪ್ರಾಯ ಕಟ್ಟಿಕೊಳ್ಳಬಹುದು. ಈ ಅಪೇಕ್ಷೆಯಿಂದಲೇ ಡಾಕ್ಟರ್ ರಾಜನರನ್ನು ಹಲವು ದೇವಸ್ಥಾನಗಳವರು ಆಮಂತ್ರಿಸಿ ಸಂಭ್ರಮದ ಸ್ವಾಗತ ನಿತ್ತಿರಬಹುದು ಆದರೆ ಕಾಂಗ್ರೆಸಿಗೆ ಅವ್ಯವಸ್ಥೆ, ದುರ್ವ್ಯಯ, ಸ್ವೇಚ್ಛಾಪರತೆಯು ಎಂದಿಗೂ ಸಹನೀಯವಾಗಲಾರದು ಅದನ್ನದು ಕಠಿಣವಾಗಿ ನಿವಾರಿಸಲೆತ್ನಿಸುವುದು. ಆದುದರಿಂದ ಡಾಕ್ಟರ್ ರಾಜನರು, ದೇವಸ್ಥಾನಗಳ ಆಡಳಿತ ಮೋಕ್ತೇಸರರಿಗೆಲ್ಲಾ ಒಂದು ವರ್ಷದ ಅವಧಿಯಿತ್ತು ಎಚ್ಚರಿಸಿರುವರು. ಈ ಒಂದು ವರ್ಷದಲ್ಲಿ ಪ್ರಾಂತದ ಮಠದೇವಸ್ಥಾನಗಳ ಆಡಳಿತವು ಸುಧಾರಿತವಾಗದಿದ್ದಲ್ಲಿ ಅವುಗಳ ಮೇಲೆ ಎಂಡೋಮೆಂಟ್ ಆಕ್ಟನ್ನು ಮತ್ತಷ್ಟು ಕಠಿಣವಾಗಿ ಜ್ಯಾರಿಮಾಡಲಾಗುವುದೆಂದು ಹೇಳಿರುವರು. ತಮ್ಮ ಸ್ವಾರ್ಥಕ್ಕೆ ತೊಡಕುಂಟಾದವರು ಎಂಡೋಮೆಂಟ್ ಆಕ್ಟನ್ನು ಎಷ್ಟು ದೂರಿದರೂ ಅದರಿಂದಾಗಿ ಹಲವು ದೇವಸ್ಥಾನಗಳು ಉತ್ತಮಸ್ಥಿತಿಗೆ ಬಂದಿವೆಯೆಂಬುದರಲ್ಲಿ ಸಂದೇಹವಿಲ್ಲ. ಅದನ್ನು ಇನ್ನಷ್ಟು ವ್ಯಾಪಕವಾಗಿಯೂ, ತೃಪ್ತಿಕರವಾಗಿಯೂ, ಕಠಿಣವಾಗಿಯೂ ಜ್ಯಾರಿಗೆ ತಂದಲ್ಲಿ ಮಠದೇವಸ್ಥಾನಗಳು ಬಹಳ ಸುಧಾರಣೆ ಹೊಂದದಿರಲಾರವು.

### ಉಡುಪಿ ಮಠಗಳು

ಉಡುಪಿಯ ಅಷ್ಟಮಠಗಳ ಇಂದಿನ ಶೋಚನೀಯ ಪರಿಸ್ಥಿತಿಯು ಅನೇಕರಿಗೆ ತಿಳಿದ ವಿಷಯ. ಧರ್ಮಾಧಿಕಾರಿಗಳಾದ ಸನ್ಯಾಸಿಗಳಿಗೆ ಲೌಕಿಕಾಡಳಿತದ ಅಧಿಕಾರ ವಿತ್ತರೆ ಆಗುವ ಅವಸ್ಥೆಯೇ ಇದು. ಕೆಲವು ಮಠಾಧಿಪತಿಗಳಂತೂ ತಾವು ಸನ್ಯಾಸಿಗಳೆಂಬುವದನ್ನು ಮರೆತು ಜಮೀನ್ದಾರರೇ ಆಗಿ ಹೋಗಿದ್ದಾರೆ. ಧರ್ಮಾಧಿಕಾರದ ಸೋಗಿನಿಂದ ಲೌಕಿಕರಿಗಿಂತಲೂ ಹೆಚ್ಚಿನ ಭೋಗವಿಲಾಸ ಮತ್ತು ಆಡಂಬರವುಳ್ಳವರಾಗಿದ್ದಾರೆ. ವಿತಜೀವನ ಉದಾತ್ತಭಾವನೆಯೆಂಬುದೇನೆಂದು ಅವರಿಗೆ ಗೊತ್ತಿರುವಂತಿಲ್ಲ. ಅವರು ಅತ್ತ ಧರ್ಮಾಧಿಕಾರಿಗಳೂ ಅಲ್ಲ, ಇತ್ತ ಮಠದ ಆಡಳಿತದಾರರೂ ಅಲ್ಲದ ವಿಲಕ್ಷಣ ಅವಸ್ಥೆಯಲ್ಲಿ ಎರಡರ ಜವಾಬ್ದಾರಿಯನ್ನು ವಹಿಸಿ ಒಂದನ್ನೂ ಸರಿಯಾಗಿ ಮಾಡಲಾರದೆ ಕೆಡಿಸುವಂತಾಗಿದೆ. ಆದುದರಿಂದ ಅವರು ಕೇವಲ ಧರ್ಮಾಧಿಕಾರಿಗಳಾಗಿದ್ದು ಮಠಗಳ ಲೌಕಿಕಾಧಿಕಾರವನ್ನು ಮಠದ ಶಿಷ್ಯವರ್ಗದಿಂದ ಆರಿಸಲ್ಪಡುವ ಕಮಿಟಿಯೊಂದು ನಡಿಸುವಂತಾಗಬೇಕು. ಮಠಗಳ ಲೌಕಿಕ ಆಡಳಿತವು ಈ ಸ್ವಾಮಿಗಳಿಂದ ತಪ್ಪಿದರೆ ಮಾತ್ರ ಈಗಿನ ಅವ್ಯವಸ್ಥೆ, ಅನಾಚಾರ, ದುರ್ವ್ಯಯ, ದುಂದುಗಾರಿಕೆಗಳು ನಿಲ್ಲುವಂತಾಗಬಹುದು. ಈ ಕುರಿತಾದ ಮಸೂದೆಯೊಂದು ತಯಾರಿಸಲ್ಪಡುತ್ತಿದ್ದು ಬೇಗನೆ ಮುಂದೆ ಬರುವುದೆಂಬುದು ಸಂತೋಷಕರ. ಮಠಾಧಿಕಾರಿಗಳ ನಿರಂಕುಶವರ್ತನೆಗೆ ಶಿಷ್ಯವರ್ಗದವರ ಅಂಕುಶವಿರುವಂತಾದರೆಮಾತ್ರ ಮಠಗಳ ಧಾರ್ಮಿಕ ಮತ್ತು ಲೌಕಿಕ ಆಡಳಿತವು ಅದೊಂದು ಕ್ರಮವಾದ ಹಾದಿ ಹಿಡಿದು ಜನ ಹಿತಕರವಾಗಬಹುದು. ಇದು ಹೊರತು ನಿಜವಾದ ಧರ್ಮಪ್ರಚಾರಕ ಸನ್ಯಾಸಿಗಳ ಹಿತದೃಷ್ಟಿಯಿಂದಲೇ ಇದು ಆವಶ್ಯಕವಾದದು. ಯಾಕೆಂದರೆ ಆಗ ಅವರು ಲೌಕಿಕ ಆಡಳಿತದ ಯಾವ ಚಿಂತೆ ಮತ್ತು ಗೊಡವೆಯೇ ಇಲ್ಲದೆ ಧರ್ಮಪ್ರಚಾರ ಮತ್ತುಸಮಾಜದ ನೀತಿನಿಯಮಪಾಲನೆಗೇನೇ ಸಂಪೂರ್ಣ ಲಕ್ಷ್ಯಕೊಡಲು ಆಸ್ಪದ ದೊರೆಯುವುದು, ಆದುದರಿಂದ ಮಠಾಧಿಪತಿಗಳೂ ಶಿಷ್ಯವರ್ಗವೂ ಈಗಣ ದುರವಸ್ಥೆಯನ್ನು ಹೋಗಲಾಡಿಸಿ ಹೊಸವ್ಯವಸ್ಥೆಯನ್ನು ತರುವ ಯೋಚನೆಯೊಂದನ್ನು ಸ್ವಾಗತೀಕರಿಸುವರೆಂದು ನಂಬುತ್ತೇವೆ.

### ಉಡುಪಿ ಮುನಿಸಿಪಾಲಿಟಿ

ಯನ್ನು ತೆಗೆದುಹಾಕುವ ಕುರಿತು ವಿಚಾರಿಸಲು ನಿನ್ನೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮುನಿಸಿಪಲ್ ಚೇಯರ್‌ಮೆನ್ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯೊಂದರಲ್ಲಿ, ಅಧ್ಯಕ್ಷರ ವಿಚಾರಪರ ಸಲಹೆ ಮೇರೆಗೆ, ಆ ಸಂಬಂಧವಾಗಿ ಮನವಿಯೊಂದನ್ನು ಸರಕಾರಕ್ಕೆ ಕಳುಹಿಸಲು ಕಮಿಟಿಯೊಂದು ನೇಮಿಸಲ್ಪಟ್ಟಿರುವುದು. ಈ ವಿಷಯದಲ್ಲಿ ಸ್ಥಳೀಯ ಕಾಂಗ್ರೆಸ್ ಕಮಿಟಿಯವರ ಧೋರಣೆಯೇನೆಂದು ಕೆಲವರು ಪ್ರಶ್ನಿಸಬಹುದು. ಅದನ್ನು ಶ್ರೀ ಆರೂರವರೇ ಕೆಲಮಟ್ಟಿಗೆ ಸ್ಪಷ್ಟಪಡಿಸಿರುತ್ತಾರೆ. ಕಾಂಗ್ರೆ

## ಚಂದಾದಾರರಲ್ಲಿ ವಿನಂತಿ.

**ಈ ತಿಂಗಳಾಂತ್ಯಕ್ಕೆ 'ನವಯುಗ'ದ ೧೩ನೇ ವರ್ಷವು ಕೊನೆಗೊಂಡು ಸೆಪ್ಟಂಬರ ತಿಂಗಳಿಂದ ಹೊಸ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ಮುಂದಿನ ವರ್ಷದ ಚಂದಾ ಹಣವನ್ನೂ ಈ ವರೆಗೆ ಚಂದಾ ಹಣ ಬಾಕಿ ಇರುವವರು ಬಾಕಿ ಹಣದೊಂದಿಗೆ ಮುಂದಿನ ವರ್ಷದ ಚಂದಾ ಹಣವನ್ನೂ ದಯವಿಟ್ಟು ಕಳುಹಿಸಿಕೊಟ್ಟು, ಪತ್ರಿಕೆಯನ್ನು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.**

**ವಿ. ಪಿ. ಮಾಡುವುದು ಅನಾವಶ್ಯಕ ವೆಚ್ಚಕ್ಕೆ ಕಾರಣವಾಗುವುದರಿಂದ ಚಂದಾ ಮೊಬಲಗನ್ನು ಮನಿಯಾರ್ಡರ್ ಮಾಡಿ ಕಳುಹಿಸುವುದು ಲಾಭಕರ. ಈ ತಿಂಗಳಾಂತ್ಯದೊಳಗೆ ಹಣಕಳುಹಿಸದಿದ್ದರೆ ಸೆಪ್ಟಂಬರ ಮೊದಲನೆ ವಾರದ ಯಾ ಅನಂತರದ ಸಂಚಿಕೆಯನ್ನು ವಿ. ಪಿ. ಮಾಡಿ ರವಾನಿಸಲಾಗುವುದು. ಚಂದಾ ಅವಧಿ ಮುಗಿದ ಮೇಲೆ ಪತ್ರಿಕೆ ಬೇಡವಾದವರು ದಯವಿಟ್ಟು ನಮಗೆ ಮುಂದಾಗಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇವೆ. ತಿಳಿಸದಿದ್ದಲ್ಲಿ ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರುತ್ತೇವೆ.**

ಮೆನೇಜರ್, **ನವಯುಗ**, ಉಡುಪಿ

ಸ್ ಕಮಿಟಿಯವರು ಈ ಕಮಿಟಿಯ ಕೆಲಸದಲ್ಲಿ ಸಹಾನುಭೂತಿಯುಳ್ಳವರಿರುವರಾದರೂ ಅವರೊಡನೆ ಸಹಕರಿಸುವಂತೆ ಅದರ ಏರ್ಪಾಡಾಗಲಿ ರಚನೆಯಾಗಲಿ ನಡೆದಿರುವುದಿಲ್ಲ. ಕಾಂಗ್ರೆಸ್ ಕಮಿಟಿಯವರು ಉಡುಪಿ ಮುನಿಸಿಪಾಲಿಟಿಯ ಕುರಿತು ಸ್ವತಂತ್ರವಾಗಿ ಕೆಲಸಮಾಡಲಿರುವರು ಆದರೆ ಈಗಲೇ ಏನುಮಾಡುವುದಕ್ಕೂ ಸಾಧ್ಯವಿಲ್ಲ. ಮುನಿಸಿಪಾಲಿಟಿಯನ್ನು ತೆಗೆದುಹಾಕುವುದು ಎಷ್ಟರಮಟ್ಟಿಗೆ ವ್ಯವಹಾರ್ಯವೋ ತಿಳಿಯದು. ಆದರೆ ತೆರಿಗೆಯ ಸಂಕಷ್ಟವನ್ನು ಕೆಲಮಟ್ಟಿಗೆ ಕಡಿಮೆ ಮಾಡುವುದು ಸಾಧ್ಯವಿದೆ. ಕಾಂಗ್ರೆಸ್ ಕಮಿಟಿಯವರು ಈ ಕುರಿತೆಲ್ಲಾ ವಿಚಾರಿಸಿ ಅಗತ್ಯವಿರುವ ಕೆಲಸಮಾಡಿ ಅದರ ಫಲಿತಾಂಶವನ್ನು ಜನತೆಗೆ ತಿಳಿಸಲಿರುವರು. ಈ ಕುರಿತು ಬರುವ ಎಸೆಂಬ್ಲಿ ಸಭೆಯಲ್ಲಿ ಮಿ. ಹುಸೇನ್ ಸಾಹೇಬರು ಪ್ರಶ್ನೆ ಕೂಡಾ ಕೇಳಲಿರುವರು. ಅದಕ್ಕೆ ಮಂತ್ರಿಗಳು ಕೊಡುವ ಉತ್ತರವನ್ನು ತಿಳಿದು ಮುಂದೇನು ಮಾಡಬೇಕೆಂಬುದನ್ನು ಕಾಂಗ್ರೆಸ್ ಕಮಿಟಿಯವರು ನಿಶ್ಚೈಸಲಿರುವರು. ಕಾಂಗ್ರೆಸಿನವರು ಅಧಿಕಾರಕ್ಕೆ ಬಂದರೆಂದು ಕಾಂಗ್ರೆಸ್ ಕಮಿಟಿಯವರು ಉಮೇದಿನಿಂದ ಜನರಲ್ಲಿ ಅಲ್ಲಸಲ್ಲದ ಆಶೆ ಹುಟ್ಟಿಸುವುದರಲ್ಲಿ ಅರ್ಥವಿಲ್ಲ ಮತ್ತು ಮಂತ್ರಿಗಳನ್ನು ಅವರು ಅಧಿಕಾರ ವಹಿಸಿದ ಕೆಲವೇ ದಿನಗಳಲ್ಲಿ ಉಭಯ ಸಂಕಟದಲ್ಲಿ ಸಿಲುಕಿಸಲೂ ಸಿದ್ಧರಿಲ್ಲ. ಜನತೆಯು ಸ್ವಲ್ಪ ತಾಳ್ಮೆಯಿಂದಿದ್ದು ಕಾಂಗ್ರೆಸಿಗೆ ನೆರವಾದರೆ ಅದು ತನ್ನ ಪಾಲಿನ ಕರ್ತವ್ಯವನ್ನು ಮಾಡದಿರಲಾರದು.

## ಸ್ವದೇಶ

### ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಇದೇ ತಾ. ೧೫ರಲ್ಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ೩ಘಂಟೆಗಳ ವರೆಗೆ ಆಲೋಚಿಸಿ, ಜಂಜಿಬಾರಿನ ಹಿಂದೀಯರ ವಿರೋಧವಾದ ಕಾನೂನುಗಳನ್ನು ನಿಷೇಧಿಸುವ ಮತ್ತು ಜಂಜಿಬಾರ್ ಕ್ಲೋವ್ಸ್‌ಗಳನ್ನು ಬಹಿಷ್ಕರಿಸುವ ನಿರ್ಣಯಗಳನ್ನು ಮಂಜೂರುಮಾಡಿರುವುದು ವರ್ಕಿಂಗ್ ಕಮಿಟಿಯು ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳೊಡನೆ ವಿಚಾರಿಸಿ ಬರುವ ಎಸೆಂಬ್ಲಿ ಸಭೆಗಳ ಮುಂದೆ, ಕಾಂಗ್ರೆಸಿನ ಕೇಳಿಕೆಯಂತೆ ಕಾನ ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆದು ಈಗಣ ರಾಜ್ಯಾಂಗ ರಚನೆಯನ್ನು ತೆಗೆದುಹಾಕಿ ಹೊಸತೊಂದನ್ನು ರಚಿಸಬೇಕೆಂಬ ನಿರ್ಣಯವನ್ನು ಮಂತ್ರಿಗಳು ತರಬೇಕೆಂದಾಯಿತು. ಈ ಸಂಬಂಧವಾಗಿ ಮಂತ್ರಿಗಳು ಹೇಗೂ ಚಳವಳಿಸಬೇಕೆಂದಾಯಿತು. ಅಂಡಮಾನ್ ಪ್ರಶ್ನೆಯನ್ನು ವಿಚಾರಿಸಲು ಹೆಚ್ಚಿನ ಸಮಯತಾಗಿತು. ಅದಕ್ಕಾಗಿಯೇ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಇಬ್ಬರು ಬಂದಿದ್ದರು. ಅಂಡಮಾನ್ ಕೈದಿಗಳ ಕುರಿತು ಹಿಂದೀಯ ಲಕ್ಷ್ಯವನ್ನೆಳೆದ ಅವರ ಉಪೋಷಣೆಗೆ ನೆರವೇರಿರುವುದರಿಂದ ಸದ್ರಿ ಕೈದಿಗಳಿಗೆ ತಮ್ಮ ಉಪವಾಸ ನಿಲ್ಲಿಸಬೇಕೆಂದು ವರ್ಕಿಂಗ್ ಕಮಿಟಿಯವರು ಅಂಡಮಾನಿಗೆ ತಂತಿಕೊಡಲಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ತಾ. ೧೬ನೇ ಬೆಳಗ್ಗೆ ಘಂಟೆ ೮ರಿಂದ ಸಂಜೆ ೬ರವರೆಗೆ ನಡೆಯಿತು. ಮಧ್ಯೆ ಊಟಕ್ಕೆ ೯೦ಮಿನಿಟುಗಳ ಅವಕಾಶ ಮಾತ್ರವಿದ್ದಿತು. ಮಹಾತ್ಮಾ ಗಾಂಧಿಯವರು ತನಗೂ ವೈಸರಾಯರಿಗೂ ನಡೆದ ಭೇಟಿಯವಿಷಯವನ್ನು ತಿಳಿಸಿದರು. ಮತ್ತು ೩ವರ್ಷಗಳೊಳಗೆ ಕಾಂಗ್ರೆಸಿನವರು ಅಧಿಕಾರ ವಹಿಸಿರುವ ಪ್ರಾಂತಗಳಲ್ಲಿ ಸಂಪೂರ್ಣವಾಗಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆತರಬೇಕೆಂದು ಸೂಚಿಸಿದರು. ಕೈಗಾರಿಕೋದ್ಯಮಗಳ ಪ್ರಶ್ನೆಯ ಕುರಿತೂ ಹೆಚ್ಚಿನ ಚರ್ಚೆ ನಡೆಯಿತು. ಮಜೂರರ ಉನ್ನತಿಸಾಧನೆಯ ವಿಷಯಕ್ಕೆ ಹೆಚ್ಚಿನ ಗಮನ ಕೊಡಲ್ಪಟ್ಟಿತು. ಮಂತ್ರಿಗಳ ಮತ್ತು ಇತರರ ಸಂಬಳದ ಕುರಿತು ಬಹಳ ಚರ್ಚೆ ನಡೆಯಿತು. ಬಂಗಾಳದಿಂದ ಶ್ರೀ ಶರಚ್ಚಂದ್ರಭೋಸರು ಬಂದಿರಲಿಲ್ಲ. ಅವರ ಬದಲಿಗೆ ಶ್ರೀ ಟಿ. ಸಿ. ಗೋಸ್ವಾಮಿಯವರು ಬಂದಿದ್ದರು. ಕಮಿಟಿಯವರು ಅವರೊಡನೆ ಬಂಗಾಳದ ಪರಿಸ್ಥಿತಿಯನ್ನು ವಿಚಾರಿಸಿದರು. ಪಂಜಾಬಿನಿಂದ ಡಾಕ್ಟರ್ ಗೋಪೀಚಂದಭಾರ್ಗವರೂ ಸಿಂಧಿನಿಂದ ಶ್ರೀ. ಜೈರಾಮ್ ಗಿದ್ವಾನಿಯವರೂ ಬಂದಿದ್ದರು. ಕಾಂಗ್ರೆಸ್ ಪಕ್ಷದ ಮಂತ್ರಿಗಳೆಲ್ಲರೂ ಬಹುತೇಕ ಒಂದೇ ರೀತಿಯ ಧೋರಣೆ ವಹಿಸುವಂತೆ ಶ್ರೀ ರಾಜಗೋಪಾಲಾಚಾರ್ಯರ ಅಭಿಪ್ರಾಯ ತಿಳಿಯಲು ವರ್ಕಿಂಗ್ ಕಮಿಟಿ ಸಭೆಯು ತಾ. ೧೭ಕ್ಕೆ ಮುಂದುವರಿಸಲ್ಪಟ್ಟಿರುವುದು ಶ್ರೀ ರಾಜಾಜಿಯವರೊಡನೆ ಚರ್ಚಿಸಿದ ಮೇಲೆ ಮಂತ್ರಿಗಳ ಕಾರ್ಯಕ್ರಮದ ಕುರಿತು ಕಮಿಟಿಯು ಕೆಲವು ನಿರ್ಣಯಗಳನ್ನು ಮಾಡಲಿರುವುದು. ಆದರೆ ಅದನ್ನು ಪ್ರಕಟಿಸಲಾಗುವುದಿಲ್ಲ.

### ಜಮೀನ್ದಾರರ ದಿಗಿಲು

ಗೇಣಿ ಬಾಕಿಯಿರುವ ಒಕ್ಕಲುಗಳ ಮೇಲಿನ ಎಲ್ಲಾ ಖಟ್ಲೆಗಳನ್ನು ನಿಲ್ಲಿಸಬೇಕೆಂದು ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಮಂತ್ರಿಗಳು ಎಸೆಂಬ್ಲಿಯ ಅಭಿಪ್ರಾಯವನ್ನು ಕೂಡಾ ಕೇಳದೆ ಜ್ಯಾರಿಗೆ ತಂದಿರುವ ಹುಕುಮಿನಿಂದ ಅಲ್ಲಿಯ ಜಮೀನುದಾರರು ದಿಗಿಲುಗೊಂಡಿರುವರು. ಬಾಕಿ ಉಳಿದಿರುವ ಗೇಣಿಯು ರೂ. ೧೬ರಿಂದ ೨೦ ಕೋಟಿಯಾಗಿದೆ. ಆದರೆ ಜಮೀನ್ದಾರರು ಕಂದಾಯವಾಗಿ ರೂ. ೮೦ ಕೋಟಿ ಕೊಟ್ಟಿರುತ್ತಾರೆಂದು ಜಮೀನ್ದಾರರೊಬ್ಬರ ಅಭಿಪ್ರಾಯವಿದೆ

## ಉಡುಪಿ

### ಉಡುಪಿ ಕೋಪರೇಟಿವ್ ಸೊಸೈಟಿ

ಕಳೆದ ಆದಿತ್ಯವಾರ ಈ ಸೊಸೈಟಿಯ ವಾರ್ಷಿಕ ಸಭೆಯು ಸೊಸೈಟಿಯ ಪ್ರೆಸಿಡೆಂಟರಾದ ಶ್ರೀ. ಟಿ. ಎನ್ ಕೇಳು ನಂಬಿಯಾರರ ಅಧ್ಯಕ್ಷತೆಯಲ್ಲಿ ನಡೆದು ಉಡುಪಿ ಕೋಪರೇಟಿವ್ ಸೊಸೈಟಿಯನ್ನು ಬಡಗುಬೆಟ್ಟು ಸೊಸೈಟಿ ಮತ್ತು ಉಡುಪಿ ಟೌನ್ ಬ್ಯಾಂಕಿನೊಂದಿಗೆ ಅಥವಾ ಅವುಗಳಲ್ಲಿ ಯಾವುದಾದರೊಂದಿಗೆ ಸೇರಿಸಿ ಉಡುಪಿ ಮುನಿಸಿಪಲ್ ಪರಿಧಿಯಲ್ಲಿ ಒಂದೇ ಕೋಪರೇಟಿವ್ ಟೌನ್ ಬ್ಯಾಂಕನ್ನು ಸ್ಥಾಪಿಸುವಂತಾಗಬೇಕೆಂದಾಯಿತು. ಕಾಂಗ್ರೆಸ್ಸಿನವರು ಅಧಿಕಾರ ಸ್ವೀಕರಿಸಿದುದಕ್ಕಾಗಿ ಅವರನ್ನು ಅಭಿನಂದಿಸುವ ಮತ್ತು ಕಾಂಗ್ರೆಸ್ ಮಂತ್ರಿಗಳಿಗೆ ಬೆಂಬಲದ ಆಶ್ವಾಸನೆಯಾಯುವ ನಿರ್ಣಯವಾಯಿತು. ಬಾಲ್ತಿ ವರ್ಷದ ಬಜೆಟು ಪಾಸಾದ ಮೇಲೆ ಶ್ರೀಗಳಾದ ಟಿ. ಎನ್. ಕೇಳುನಂಬಿಯಾರ್, ಡಾಕ್ಟರ್ ಕೆ ಎಲ. ಐತಾಳ, ಪಿ. ಎ. ಪೈ, ಎಚ್ ನಾರಾಯಣ ನಾಯ್ಕ್, ಕೆ. ಶ್ರೀನಿವಾಸ ಪೈ, ಎಮ್. ವಾಮನ ಭಟ್, ಮತ್ತು ಪಿ. ಎ. ಕಾಮತರು ಬಾಲ್ತಿ ವರ್ಷಕ್ಕೆ ಡೈರೆಕ್ಟರರಾಗಿ ಆರಿಸಲ್ಪಟ್ಟರು. ಬೈಲೋಗಳಲ್ಲಿ ಕೆಲವು ಸ್ವಾಮುಖ್ಯ ಬದಲಾವಣೆ ಮತ್ತು ಹೊಸ ಬೈಲೋಗಳನ್ನು ಮಾಡಲಾಯಿತು.

### ತೆರಿಗೆದಾರರ ಸಂಘ

ಇದರ ಸಭೆಯೊಂದು ಮೊನ್ನೆ ಸಂಜೆ ಶ್ರೀಯಮುಕೃಷ್ಣ ಥಿಯೇಟರಿನಲ್ಲಿ ಮುನಿಸಿಪಲ್ ಚೇಯರ್‌ಮೇನ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಸದ್ರಿ ಸಂಘದ ಸೆಕ್ರೆಟರಿಗಳಾದ ಶ್ರೀ ವಾಸುದೇವ ಶೆಣೈಯವರು ಮುನಿಸಿಪಾಲಿಟಿಯನ್ನು ತೆಗೆದು ಹಾಕುವ ಕುರಿತು ವಿಚಾರಿಸುವುದೇ ಈ ಸಭೆಯ ಉದ್ದೇಶವೆಂದರು. ಆ ವೇಳೆ ಶ್ರೀ. ನಾಗಪ್ಪ ಕಾಮತರು ಮಾತಾಡಿದರು. ಅಧ್ಯಕ್ಷರು ಮುನಿಸಿಪಾಲಿಟಿಯು ಯಾರಿಗೂ ಬೇಡವಾಗಿದೆ ಆದರೆ ಅದನ್ನು ತೆಗೆದುಹಾಕುವುದು ಅಷ್ಟೇನು ಸುಲಭವಲ್ಲ. ಖಾಲಿ ಸ್ಥಳ ಮತ್ತು ಬೇಸಾಯ ಜಮೀನಿನ ಮೇಲಿನ ಕರ ತೆಗೆದುಹಾಕಬೇಕು, ಕಮಿಶನರನ್ನು ತೆಗೆಯಬೇಕೆಂದು ಮುನಿಸಿಪಾಲಿಟಿಯವರು ಠರಾವು ಮಾಡಿ ತನ್ನ ಶಿಫಾರಸಿನ ಮೇರೆಗೆ ಸರಕಾರಕ್ಕೆ ಕಳುಹಿಸಲ್ಪಟ್ಟಾಗ ಅವರ್ಕ್ಯವರು ಗಮನಕೊಡಲಿಲ್ಲ. ಮೊದಲು ಉಡುಪಿಯವರೆಲ್ಲಾ ಮಂತ್ರಿಗಳಿಗೊಂದು ಮನವಿ ಕಳುಹಿಸಬೇಕು ಈ ಮನವಿ ತಯಾರಿಸಲೊಂದು ಕಮಿಟಿಯಾಗಬೇಕೆಂದು ಸೂಚಿಸಿದರು. ಆ ಪ್ರಕಾರ ಒಂದು ಕಮಿಟಿಯು ರಚಿಸಲ್ಪಟ್ಟಿತು.

### ಬೇಕಾಗಿದೆ.

ಜಿಲ್ಲೆಯ ಒಳಗೂ ಹೊರಗೂ ಸಂಚರಿಸಿ **'ನವಯುಗ'**ದ ಚಂದಾದಾರರಿಂದ ಹಣ ವಸೂಲು ಮಾಡಲಿಕ್ಕೂ ಹೊಸ ಚಂದಾದಾರರನ್ನು ಸೇರಿಸಲಿಕ್ಕೂ ನಂಬಿಗಸ್ಥರಾದ, ಚೆನ್ನಾಗಿ ಇಂಗ್ಲಿಷ್ ಕನ್ನಡ ಬಲ್ಲ ಉತ್ಸಾಹೀ ಪ್ರತಿನಿಧಿಗಳೊಬ್ಬರು ಬೇಕು. ಸಂಬಳ ಮತ್ತು ಪ್ರಯಾಣ ವೆಚ್ಚ ಕೊಡಲಾಗುವುದು. ರೂ. 100/- ಡಿಪೋಜಿಟ್ ಇಡಲು ತಯಾರಿರುವವರು ತಿಂಗಳೊಂದರ ಎಷ್ಟು ಚಂದಾದಾರರನ್ನು ಸೇರಿಸ ಬಹುದೆಂಬುದನ್ನೂ ತಿಂಗಳಿಗೆ ಎಷ್ಟು ಸಂಬಳ ಸಿಗಬೇಕೆಂಬುದನ್ನೂ ತಿಳಿಸಿರಿ. ಹೆಚ್ಚಿನ ಮಾಹಿತಿಗೆ ಈ ತಿಂಗಳಂತ್ಯದೊಳಗೆ ಬರೆಯಿರಿ; ಯಾ ಸ್ವತಃ ಬಂದು ಮಾತನಾಡಿರಿ.

**ಮೆನೇಜರ್, ನವಯುಗ, ಉಡುಪಿ.**

ಸುಸಮಯ! ಹಣ ಸಂಪಾದಿಸಿರಿ!!

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ.** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**

**Loans & Advances**

ON THE SECURITY OF GOLD, JEWELS AND OTHER VALUABLES ALWAYS AVAILABLE AT MODERATE RATES

**THE UDIPI BANK LTD.**

UDIPI.

# ದಕ್ಷಿಣ ಕನ್ನಡ

**ಕಿನ್ನಿಗೋಳಿ**—ಇಲ್ಲಿ ಶ್ರೀ! ಹಿರಿಯತ್ತ ರಾಮರಾಯ ಮಲ್ಯ ಹಾಗೂ ಶ್ರೀ! ಯಂ. ರಾಮಕೃಷ್ಣ ಪೂಂಜರ ನೇತೃತ್ವದಲ್ಲಿ ಒಂದು ಕಾಂಗ್ರೆಸ್ ಕಮಿಟಿಯು ಏರ್ಪಾಡು ಆಯಿತು. ಶ್ರೀ! ಯಸ್. ಸೋಮ ಶೆಟ್ರು ಅಧ್ಯಕ್ಷರಾಗಿಯೂ ಶ್ರೀ! ಕೆ. ಸಂಜೀವ ರಾವ್ ಇವರು ಕಾರ್ಯದರ್ಶಿಯರಾಗಿಯೂ ೨೫ ಜನ ಕಮಿಟಿಮಂಬರರಾಗಿಯೂ ಆರಿಸಲ್ಪಟ್ಟರು.

**ಹೆಜ್ಮಾಡಿ**—ಇಲ್ಲಿ ಶ್ರೀಗಳಾದ ಯಸ್. ಭೋಜರಾವ್, ಯಚ್. ಅಂತಯನಾಯ್ಕ, ಖಟ್. ಶೀನ ಶೆಟ್ಟಿ, ಯಚ್. ಜರ್ಮಿಸ್ಟಾರೀಸ್, ಯಚ್. ಸಾಧು ಶೆಟ್ಟಿ, ಯಚ್. ಕೃಷ್ಣರಾವ್, ಮತ್ತು ಯಚ್. ವೀರಯ್ಯ ನಾಯ್ಕರೇ ಈ ೭ ಜನರು ಸ್ಥಾಪಕರಾಗಿ ಸೇರಿ, ಒಂದು ವಾಚನಾಲಯವನ್ನು ತೆರೆಯುವ ಬಗೆ ತಾ ೧೧-೮-'೩೭ರಲ್ಲು ಒಂದು ಸಾರ್ವಜನಿಕ ಸಭೆಯನ್ನು ನೆರವೇರಿಸಿದರು. ನೆರೆದ ಸಭೆಯಲ್ಲಿ ಶ್ರೀಯುತ, ಯಚ್. ಮುದ್ದಣ್ಣ ಶೆಟ್ಟಿ, ಬಿ. ಯಸ್. ಸಿ. (ಎಟ) ಯಲ್. ಟಿ. ಯವರು ಸೂಚಿಸಿ, ಕೆ. ನಂದ್ಯಪ್ಪ ಶೆಟ್ರು ಅನುಮೋದಿಸಲು ಸರ್ವಸಮ್ಮತದಿಂದ ಶ್ರೀಯುತ. ಡಾಕ್ಟರ್, ಯಚ್. ನಾರಾಯಣ ಗಡಿಯಾರ್, ಯಲ್. ಯಂ. ಪಿ ಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟು, ತದನಂತರ ಸಭಾಧ್ಯಕ್ಷರಿಂದ ವಾಚನಾಲಯವು ತೆರೆಯಲ್ಪಟ್ಟು, ಹಲವರ ಅಪೇಕ್ಷೆಯ ಮೇರೆಗೆ ಅದಕ್ಕೆ "ಹೆಜ್ಮಾಡಿ ನೆಹರು ಕ್ಲಬ್"ಎಂಬ ಹೆಸರನ್ನಿಡಲಾಯಿತು. ವಾಚನಾಲಯಗಳಿಂದ ಭಾಷಾಭಿವೃದ್ಧಿಗೂ, ಜ್ಞಾನವೃದ್ಧಿಗೂ ಮತ್ತು ಸಂಘಟನಾ ಶಕ್ತಿಗೂ ಎಷ್ಟರ ಮಟ್ಟಿಗೆ ಪ್ರಯೋಜನವಿದೆಯೆಂಬದನ್ನು ಶ್ರೀಯುತ ಯಚ್ ಶೀನ ಶೆಟ್ರು ಸಭಿಕರಿಗೆ ವಿವರಿಸಿ ಹೇಳಿದ ನಂತರ, ನೆರೆದಿದ್ದ ಮಹನೀಯರ ಪೈಕಿ ಶ್ರೀಯುತ ಯಂ. ಬಿ. ನರ್ಸಪ್ಪನವರು, ಕೆ. ನಂದ್ಯಪ್ಪ ಶೆಟ್ರು ಮತ್ತು ಕಿನ್ನಿಗೋಳಿ ಡಾಕ್ಟರ್, ಯಚ್. ಗೋವಿಂದ ಭಟ್ರು ವಾಚನಾಲಯಗಳ ಪ್ರಯೋಜನ ಹಾಗೂ ಆಡಳಿತೆ ಮಂಡಳಿಯವರ ಮತ್ತು ಚಾಲಕರ ಜವಾಬ್ದಾರಿಯ ಕುರಿತು ವಿವರವಾಗಿ ತಿಳಿಸಿದರು. ಅಧ್ಯಕ್ಷರು ತಮ್ಮ ಅಮೂಲ್ಯವಾದ ಸಲಹೆಗಳನ್ನು ಸೂಚಿಸಿ ಸಭಾಕಾರ್ಯವನ್ನು ಅಂತ್ಯಗೊಳಿಸಲಾಗಿ, ನಂತರ ಶ್ರೀಯುತ ಯಚ್. ಶೀನ ಶೆಟ್ರು ಅಧ್ಯಕ್ಷರ ಹಾಗೂ ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿ ನೆರೆದ ಸಭಿಕರಿಗೆ ಫಲಾಹಾರ ತಾಂಬೂಲಾದಿಗಳಿಂದ ಉಪಚರಿಸಿ ಅಂದಿನ ಸಮಾರಂಭವು ಕೊನೆಗೊಂಡಿತು.

ಇಲ್ಲಿಯೂ ಸಾಯಂಕಾಲ ೪॥ ಘಂಟೆಗೆ ಸಾರ್ವಜನಿಕ ಸಭೆ ಸೇರಿ 'ಅಂಡಮಾನ ರಾಜಕೀಯ ಕೈದಿಗಳ' ದಿನಾಚರಣೆಯನ್ನು ಆಚರಿಸಿದರು. ಸಭೆಯಲ್ಲಿ ಶ್ರೀ! ಕಿನ್ನಿಯವರ ಭಾಷಣವಿತ್ತು; ಸರಕಾರದ ಧೋರಣೆಯನ್ನು ಖಂಡಿಸಿ, ಕೂಡಲೇ ಅಂಡಮಾನದ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಬೇಕೆಂಬ ಠರಾವು ಸಭೆಯಲ್ಲಿ ಪಾಸಾಯಿತು.

**ಹಲಿವಾರು**—ಇದೇ ಕಳೆದ ತಾ. ೫ನೇ ಆದಿತ್ಯವಾರ ವಾಮನ ನ್ಯಾಕ ಎಂಬವರು ಕತ್ತಿಗೆಗೆ ಕ್ಷೌರಕತ್ತಿಯಿಂದ ಕಡಿದು ಖೂನಿ ಮಾಡಲ್ಪಟ್ಟನೆಂದೂ ಆ ಆಧಿಕಾರಿಗಳ ಕೈವಶವಾದ ನಿಂದ ಕಿಯಿಂದ ಸದ್ರಿಯವರು ಮೂಲ್ಕಿ ಲೋಕ. ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ಉಡುಪಿ ಪೋಲಿಸರು ತನಿಖೆ ಕ್ರಮ ನಡಿಸುತ್ತಿದ್ದಾರೆ. ಸದ್ರಿ ತಕ್ಸೀರು ಕಳೆದ ವರ್ಷದ ಇಲ್ಲಿಯ ಮದ್ಯ ಮಾರಾಟದ ತಕ್ಸೀರಿಗೆ ಸಂಬಂಧ ಪಟ್ಟುದಾಗಿ ಊಹಿಸಲಾಗುತ್ತದೆ. ಕಾರಣ ಸದ್ರಿ ಮದ್ಯದ ಸಂಬಂಧದಲ್ಲಿ ಸಾಕ್ಷಿಗಳಾಗಿದ್ದ ೧೭ ಜನರ ಪೈಕಿ ಒಬ್ಬನ ತನ್ನ ಆದ ಹಾಗಾಯಿತು. ಇನ್ನುಳಿದ ೧೬ರ ತನ್ನ ಕ್ರಮೇಣ ಎಂಬ ಬೆದರಿಕೆಯ ಮಾತುಗಳು ಅಲ್ಲಲ್ಲಿ ಕೇಳಿಸುತ್ತವೆಂದು ವಾರ್ತೆ.

**ಮೂಲ್ಕಿ**—ಕಳೆದ ತಾ. ೧೪-೮-೩೭ನೇ ಶನಿವಾರ ಬೆಳಿಗ್ಗೆ ೯ ಘಂಟೆಗೆ ಇಲ್ಲಿಯ ಕಾಂಗ್ರೆಸು ಕಮಿಟಿಯ ನೇತೃತ್ವದಲ್ಲಿ ಸೇರಿದ ಅಂಡಮಾನ ರಾಜಕೀಯ ಕೈದಿಗಳ ದಿನಾಚರಣೆಯ ಸಾರ್ವಜನಿಕ ಸಭೆಯಲ್ಲಿ ಶ್ರೀಯುತ ನಾರಾಯಣ ಕಿಲ್ಲೆಯವರೂ,ಶ್ರೀ! ಪಿ ರಾಮರಾಯ ಮಲ್ಯರೂ ಅಂಡಮಾನ ಕೈದಿಗಳ ಉಪವಾಸದ ಕಾರಣವನ್ನೂ ಆವಿಷಯದಲ್ಲಿ ಸರಕಾರವು ತೋರಿಸುತ್ತಿರುವ ಅಸಡ್ಡೆಯನ್ನೂ ವಿವರಿಸಿ ಭಾಷಣ ಮಾಡಿದರು. ಸಭೆಯಲ್ಲಿ ಶ್ರೀ! ಯಂ. ಆರ್. ಪೂಂಜರು ಅಧ್ಯಕ್ಷಸ್ಥಾನವನ್ನ ವಹಿಸಿದ್ದರು ಅಂಡಮಾನದಲ್ಲಿರುವ ರಾಜಕೀಯ ಕೈದಿಗಳ ಬೇಡಿಕೆಯನ್ನು ಸರಕಾರವು ನಿರಾಕರಿಸಿದ ಧೋರಣೆಯನ್ನು ಖಂಡಿಸಿಯೂ ಸದರಿ ರಾಜಕೀಯ ಡಿಟೆನ್ಯೂಗಳನ್ನು ಕೂಡಲೇ ಬಂಧವಿಮುಕ್ತ ಪಡಿಸಬೇಕೆಂದೂ, ಮತ್ತು ಅಂಡಮಾನದ ಜೈಲನ್ನು ಕೂಡಲೇ ಮುಚ್ಚಬೇಕೆಂದೂ, ಠರಾವು ಪಾಸುಮಾಡಿದರು.

ಇಲ್ಲಿ ಈ ವರೆಗೆ ಸುಮಾರು ೩೦೦ ಕಾಂಗ್ರೆಸ್ ಸಭಾಸದರನ್ನು ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಸೇರಿಸಿರುವರೆಂದು ತಿಳಿದು ಬರುತ್ತದೆ.

ಬರುವ 'ಜಿಲ್ಲಾ ರಾಜಕೀಯ ಪರಿಷತ್ತನ್ನು' ಮೂಲ್ಕಿಯಲ್ಲಿ ಜರಗಿಸುವಂತೆ ಸಹಾಯ ಮಾಡಬೇಕಾಗಿ ಮೂಲ್ಕಿ ಕಾಂಗ್ರೆಸ್ ಕಮಿಟಿಯವರು ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಂಡಿರುವರಾಗಿ ತಿಳಿದು ಬರುತ್ತದೆ.

**ಬ್ರಹ್ಮಾವರ**—ಕಟಪಾಡಿ ಶ್ರೀ ನಾರಾಯಣ ಕಿಣಿಯವರ ಜ್ಯೇಷ್ಠ ಪುತ್ರ ಜನಪ್ರೀತ ಶ್ರೀ. ಕೇಶವ ಕಿಣಿಯವರು ಇದೇ ತಾ ೧೪-೮-೩೭ನೇ ಶನಿವಾರ ಪ್ರಾತಃಕಾಲ ತಮ್ಮ ೧೯ನೇ ವಯಸ್ಸಿನಲ್ಲಿ ಕಟಪಾಡಿಯಲ್ಲಿ ನಿಧನ ಹೊಂದಿದುದು ಅತ್ಯಂತ ಶೋಚನೀಯವಿದೆ ಇತ್ತೀಚೆಗೆ ೬ ತಿಂಗಳುಗಳ ಲಾಗಾಯ್ತು ಪಾಂಗಾಳ ನ್ಯಾಕ್ ಬ್ಯಾಂಕಿನಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇವರು ಇತ್ತೀಚೆಗೆ ಎರಡು ವಾರಗಳಿಂದ ವಿಷಮಜ್ವರ ಪೀಡಿತರಾಗಿದ್ದರು. ಜನಪ್ರೀತರೂ, ಎಲ್ಲಾ ಸಾರ್ವಜನಿಕ ಕಾರ್ಯಗಳಲ್ಲಿ ಅತ್ಯುತ್ಸಾಹದಿಂದ ಮುಂದಾಳಾಗಿ ಕೆಲಸ ಮಾಡುವವರೂ ಆಗಿದ್ದರು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬಕ್ಕೆ ಈ ದುಃಖವನ್ನು ಸಹಿಸುವ ಶಕ್ತಿಯನ್ನೂ ಕರುಣಿಸಲೆಂದು ಶ್ರೀ ಭಗವಂತನಲ್ಲಿ ಪ್ರಾರ್ಥಿಸುವೆವು.

**ಪಣಂಬೂರು**—ಇದೇ ಕಳೆದ ತಾ. ೧೦ನೇ ದಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರೂ, ಶ್ರೀ! ಬಿ ಭೋಜರಾಯರೂ, ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರೂ ಇಲ್ಲಿಗೆ ಬಂದಿದ್ದು ಕಾಂಗ್ರೆಸಿನ ಕುರಿತು ಭಾಷಣಾದಿಗಳನ್ನು ಮಾಡಿ ಶ್ರೀ! ಪಿ. ಶ್ಯಾಮರಾವ್ ಇವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ! ಡಾ. ಈಶ್ವರ ಶರ್ಮ ಮತ್ತು ಶ್ರೀ! ಯಂ. ಆರ್. ಪಣಂಬೂರು ಇವರನ್ನು ಜತೆ ಕಾರ್ಯದರ್ಶಿಗಳನ್ನಾಗಿಯೂ ನೇಮಿಸಿ ಇತರ ೯ ಜನ ಕಾರ್ಯಕಾರಿ ಸಮಿತಿಯ ಸದಸ್ಯರುಗಳನ್ನೊಳಗೊಂಡು ಒಂದು ಕಾಂಗ್ರೆಸ್ ಸಮಿತಿಯನ್ನು ನಿರ್ಮಾಣಮಾಡಿ ಹೋಗಿರುವರು. ಜನರು ಹೆಚ್ಚು ಸಂಖ್ಯೆಯಿಂದ ಮೆಂಬರರಾಗಿ ಸೇರುತ್ತಿರುವುದು ಸ್ತುತ್ಯ.

ಇದೇ ತಾ ೧೫ನೇ ಆದಿತ್ಯವಾರ ದಿನ ಪಣಂಬೂರು, ಬೈಕಂಪಾಡಿ, ತಣ್ಣೀರ್ಭಾವಿಗ್ರಾಮಗಳ ಓಟರರ ಒಂದು ಸಭೆನಡೆದು, ಬರುವ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯಿಂದ ಶ್ರೀ! ಯಚ್. ದಾಮೋದರ ರಾಯರನ್ನು ಸುರತ್ಕಲ್ಲು ಸರ್ಕಲಿನಿಂದ ಪ್ರತಿಸ್ಪರ್ಧಿಯಿಲ್ಲದೆ ಚುನಾಯಿಸುವುದಾಗಿ ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟಿತು.

**ಬೈಲೂರು**—ಅಂಡಮಾನ ದಿವಸವನ್ನು ಆಚರಿಸಬೇಕಾಗಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಪಂಡಿತ ಜವಹರಲಾಲನೆಹರೂರವರ ಸಂದೇಶದ ಮೇರೆಗೆ ಇಲ್ಲಿಯೂ ಕೂಡಾ ತಾ. ೧೪-೮-೧೯೩೭ರಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಇಲ್ಲಿಯ ಕಾಂಗ್ರೆಸ್ ಕಚೇರಿಯಲ್ಲಿ ಕೂಡಿಸಲಾಯ್ತು. ಮತ್ತು ಮ. ರಾ. ಕೆ. ರಾಮಯ್ಯ ಹೆಗ್ಡೆ ಇವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯ್ತು.

ಸಭಿಕರ ಪೈಕಿ ಶ್ರೀಯುತ ಡಿ. ಡಿ. ಅಶ್ವಾಲರೂ ಶ್ರೀಯುತ ಸೀತಾರಾಮ ರಾಯರೂ ಮತ್ತು ಶ್ರೀಯುತ ಯು. ಕೃಷ್ಣರಾಯ ಕಿಣಿಯವರೂ ಈ ದಿವಸದ ಸಭೆಯ ಉದ್ದೇಶವನ್ನು ಅಂಡಮಾನದಲ್ಲಿ ಕೊಳೆಯುತ್ತಿರುವ ರಾಜಕೀಯ ಕೈದಿಗಳ ಸಂಕಷ್ಟವನ್ನೂ ಸಭಿಕರಿಗೆ ತಿಳಿಸಿದ ಮೇಲೆ ಅಧ್ಯಕ್ಷರ ಭಾಷಣವಾಯ್ತು. ನಂತರ ರಾಜಕೀಯ ಕೈದಿಗಳ ಮೇಲೆ ಸಹಾನುಭೂತಿಯನ್ನು ತೋರಿಸಿಯೂ ಮತ್ತು ಸಂಬಂಧಪಟ್ಟ ಸರಕಾರದವರು ಅವರ ಮನವಿಗೆ ಕೂಡಲೇ ನಿಗಾ ತಕ್ಕೊಂಡು ಅವರನ್ನು ಬಿಡುಗಡೆಮಾಡಬೇಕಾಗಿಯೂ ಠರಾವುಗಳು ಸರ್ವಾನುಮತದಿಂದ ಮಂಜೂರಾದುವು.

**ಬಳಕುಂಜ**—ಸನ್ ೧೯೩೭ನೇ ಯಿಸವಿ ಆಗೋಸ್ತು ತಿಂಗಳ ತಾರೀಕು ೧೩ನೇ ಶುಕ್ರವಾರ ಅಪರಾಹ್ನ ಘಂಟೆ ೪ಕ್ಕೆ ಬಳಕುಂಜ ಪಂಚಾಯತ ಬೋರ್ಡು ಆಫೀಸಿನಲ್ಲಿ ಮ. ರಾ. ರಾ. ಯು. ಟಿ. ಶಾಂತೀಸರವರ ಅಧ್ಯಕ್ಷತೆಯಲ್ಲಿ ಜರಗಿದ ಬಳಕುಂಜ, ಕವತಾರು, ಕರ್ನಿರೆ ಗ್ರಾಮಸ್ಥರ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲ್ಪಾಯಿತು. ಬರುವ ಜಿಲ್ಲಾ ಬೋರ್ಡಿಗೆ ಮೂಲ್ಕಿ ಸರ್ಕಲಿಗೆ ನಮ್ಮ ಗ್ರಾಮಗಳಪರವಾಗಿ ಶ್ರೀಯುತ ಎಸೊಲ್ಲಿ ರಾಮಕೃಷ್ಣ ಪೂಂಜರೇ ಮೆಂಬರರಾಗಿ ನಿಲ್ಲುವಂತೆ ಕೇಳಿಕೊಂಡು ಸರ್ವಾನುಮತದಿಂದ ನಿರ್ಣಯಿಸಲ್ಪಾಯಿತು. ಶ್ರೀಯುತ ಪೂಂಜರವರು ನಮ್ಮ ಗ್ರಾಮಗಳ ಮಾಹಿತಿಯಿದ್ದವರೂ। ಕಾಂಗ್ರೆಸು ಧುರೀಣರೂ ಆದ ಕಾರಣ ಸದ್ರಿಯವರನ್ನೇ ಜಿಲ್ಲಾ ಕಾಂಗ್ರೆಸು ಕಮಿಟಿಯವರು ಆರಿಸುವಂತೆ ಕೇಳಿಕೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲ್ಪಾಯಿತು. ನಮ್ಮ ಮೂರು ಗ್ರಾಮಗಳ ಬಗ್ಗೆ ಕೆಳಗೆ ನಮೂದಿಸಿದ ಮೆಂಬರರಿಂದ ಕೂಡಿದ ಕಮಿಟಿಯನ್ನು ಏರ್ಪಡಿಸಿ ಮುಂದಿನ ಚುನಾವಣೆ ಕಾರ್ಯದಲ್ಲಿ ಕಾಂಗ್ರೆಸಿಗೆ ಸಹಾಯವನ್ನೀಯಬೇಕಾಗಿ ನಿರ್ಣಯಿಸಲ್ಪಾಯಿತು.

**ಅಚ್ಲಾಡಿ**—ಇಲ್ಲಿಯ ಅದಾರ ಮಂಜಮ್ಮ ಸಡ್ತಿಯವರು ತಮ್ಮ ೧೧೦ನೇ ವಯಸ್ಸಿನಲ್ಲಿ ತಾ. ೧೪-೮-೧೯೩೭ರಂದು ದೈವಾಧೀನರಾದರು. ಇಷ್ಟು ಪ್ರಾಯವಾಗಿದ್ದರೂ ಸಾಯುವ ದಿನ ಸಹ ಗಟ್ಟಿಮುಟ್ಟಾಗಿದ್ದು ತನ್ನ ಕೆಲಸಗಳನ್ನು ತಾನೇ ಮಾಡಿಕೊಂಡಿದ್ದರು. ಮೃತರ ಶವ ಸಂಸ್ಕಾರವು ಬಹಳ ಸಂಭ್ರಮದಿಂದ ನಡೆಯಿತು. ಮೃತರ ಆತ್ಮಕ್ಕೆ ದೇವರು ಚಿರ ಶಾಂತಿಯನ್ನೀಯಲಿ, ಎಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

**ಬೊಂಬಾಯಿಯಲ್ಲಿ**

ಶ್ರೀ. ವಿ ಎಸ್. ಶಿಬ್ರೂರ್ಕರ್.
ದಿ. ನೇಶನಲ್ ಕೆನರಾ ನ್ಯೂಸ್ ಏಜನ್ಸಿ, ಫೋರ್ಟ್,
**ಇವರಲ್ಲಿ ನವಯುಗದ ಬಿಡಿಪ್ರತಿಗಳು ದೊರೆಯುತ್ತವೆ.**

**Photo Camera Rs. 3-10-0**
**ಫೋಟೋ ಕ್ಯಾಮರಾ**



ಈ ಫೋಟೋ ಕ್ಯಾಮರಾಗಳು ವಿಲಾಯಿತಿಯಲ್ಲಿ ತಯಾರಾದವು. ಈ ಕ್ಯಾಮರಾಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಫೋಟೋ ತೆಗೆಯುವದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು. ಮತ್ತು ಫೋಟೋ ತೆಗೆಯಲು ಬೇಕಾಗುವ ಪೇಪರು, ಪ್ಲೇಟು, ಸಾಲ್ಟ್ ಕೆಮಿಕಲ್ಸ್‌ಗಳನ್ನೂ ಕೊಡುವೆವು.

ಕ್ರಯ ಕ್ಯಾಮರಾ ೧ಕ್ಕೆ 3-10-0
**ಆರ್. ಕೆ. ರಾಜನ್, ಅಂಡ್ ಕೊ.**
ನೇಪತ್ತಿ, ಮದರಾಸು.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ.

**ಕಟಪಾಡಿ, ದ. ಕ.**

**ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.**

**ಇವರಲ್ಲಿ---**

| ಗುಡಪಿಪ್ಪಲಿ | ಗರ್ಭಪಾಲ | ಚಂದ್ರಮಸ್ |
| --- | --- | --- |
| **(ಲೀವರ್ ರೋಗಕ್ಕೆ)** | **(ಗರ್ಭಶೂಲೆ, ಗರ್ಭಸ್ರಾವಕ್ಕೆ)** | **(ವಾಂತಿಭೇದಿ, ಅತಿಸಾರಕ್ಕೆ)** |

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

**ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು!** ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

**I. ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

**II. ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

**III. ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
**ಮಂಗಳೂರು, ದ.ಕ.**

---

# ಗಿಡಗಳು ಮತ್ತು ಬೀಜಗಳು

ಮಹಾಶಯರೇ, ತಮಗೆ ಬೇಕಾಗಿರುವ ಎಲ್ಲಾ ತರದ ಗಿಡಗಳು, ಬೀಜಗಳು ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ. ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ. ಉಚಿತವಾಗಿ ರವಾನಿಸುತ್ತೇವೆ.

**ಡಿ. ಗುರಪ್ಪ ಅಂಡ್ ಸನ್ಸ್**
ಗಿಡ, ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್ ದೊಡ್ಡ ಮಾವಳ್ಳಿ,
**ಬೆಂಗಳೂರು ಸಿಟಿ.**

---

## ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೋಲೆರಾ ಪಿಲ್ಸ್**
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

**ಭೈರವ ಮಾತ್ರೆಗಳು**
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ
**ಯು. ಪಿ. ಮೇಸ್ತ್ರ**, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

---

## ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ. 1926

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ನೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

**ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.**

**ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.**

---

**ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.**

# ಮುಗುಳು

ಬೆಲೆ ೦ ೩ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

**ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು**
ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

**ನವಭಾರತ ಬುಕ್ ಡಿಪೊ**
ಉಡುಪಿ

---

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

**ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ**
**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ**

## 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್‌ಪ್ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು ಪ್ರತಿಗಳನ್ನು ಈಗಾಗಲೇ ಕಾದಿರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

*The Manager*, **The National Kanara News Agency,**
No. 58 Mody Sreet, Fort Bombay.

---

THE

# Vijaya Bank, Ltd.

**Head Office. MANGALORE** Branch Offices. **Udipi, Kaup & Coondapoor.**

**ದಿ ವಿಜಯ ಬೇಂಕ್ ಲಿಮಿಟೆಡ್,**

**ಹೆಡ್ ಆಫೀಸು: ಮಂಗಳೂರು.** ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

**ಚಾಲ್ತಿ ರೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ರೇವಣಾತಿಗಳುಸಾ. ಶೆ. 3½**

**ಕಾಯಂ ರೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3¾**

**6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.**

**2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 10ರಿಂದ 100ರ ವರೆಗೆ ಸಾ. ಶೆ. 8. 101ರಿಂದ 500ರ ವರೆಗೆ ಸಾ. ಶೆ. 7.
501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 6

**ವಿಶೇಷ ಸೂಚನೆ:**—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಸಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

**A B. Shetty,** ಚೆಯರ್‌ಮೇನ್.
**K. Gopalakrishna Shetty.** ಸೆಕ್ರಟರಿ.

**ವಿಜಯ ಬೇಂಕ್ ಲಿಮಿಟೆಡ್**, ಕದ್ರಿರೋಡ್, **ಮಂಗಳೂರು.**

---

## ಸ್ವದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.**

**ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.**

**P. A. PAI BROS.,**
**ಪಿ. ಎ. ಪೈ ಬ್ರದರ್ಸ್,**
**ಆಸ್ಪತ್ರೆ ಎದುರು, ಉಡುಪಿ.**

---

## ಕಸಿ ಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವದು ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು ಹಣ್ಣು ಅತಿ ಮಧುರ, ಒಳ್ಳೇ ರುಚಿ. ಶಾಹಿಬೆಯವರಿಗೆ ಉತ್ತಮ ಆಹಾರ ಆದಂಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಮರದಲ್ಲಿ ಯಾವಾಗಲೂ ಹಣ್ಣು ಇರುವದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೀ ಶಾಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ ಕನ್ನಡ

ನೈಕಲ್ಲ. ನಮ್ಮ ಲಕ್ಷ್ಯವು ಬೇರೆ ಕಡೆಗೆ ತಿರುಗಿದೊಡನೆಯೇ ತಾನೂ ಓರೆ ಸರಿದು ಬಿಡುವುದುಂಟು. ಅಂತೆಯೇ ಮಾನವ ಸಮಾಜವೂ ಥಕ್ಕನೆ ತಿಳಿದೂ ತಿಳಿಯದೆಯೂ ವಿನಾಶೋನ್ಮುಖ ಮಾರ್ಗವನ್ನು ಹಿಡಿದು ಬಿಡುವುದುಂಟು. ಮಾನವ ಸ್ವಭಾವವು ಚಂಚಲವಾದುದು. ಅದು ತನ್ನ ನಿಶ್ಚಿತ ಗುರಿಯನ್ನು ಮುಟ್ಟುವುದರೊಳಗಾಗಿ ಅಡ್ಡ ದಾರಿಗೆ ಸರಿಯುತಿರುತ್ತದೆ. ಆಗ ಯಾರಾದರೊಬ್ಬ ವಿವೇಕಿಗೆ ಅದು ಅಮಾರ್ಗವೆಂದು ತಿಳಿಯುವುದು ಆದರೆ ಆತನು ಅದನ್ನು ಅಮಾರ್ಗವೆಂದರೆ ತೀರಿತು ಅವನು 'ಸಮಾಜದ್ರೋಹಿಯಾಗುತ್ತಾನೆ ಕ್ರಾಂತಿಕಾರನಾಗುತ್ತಾನೆ' ತನ್ನ ದಾರಿಯೇ ಸರಿಯೆಂದು ನಂಬಿರುವ ಕುರುಡು ಸಮಾಜವು ಆ ವಿವೇಕಿಗ ಕೊಡುವ ಪುರಸ್ಕಾರವೆಂದರೆ— 'ಕ್ರಾಂತಿಕಾರ' ಅಥವಾ 'ಉಗ್ರಸುಧಾರಕ' ಎಂಬ ಬಿರುದು!

ಆದರೆ ನಾವು ಮಾತ್ರ ಸ್ವಲ್ಪ ವಿಚಾರಿಸೋಣ—ಕ್ರಾಂತಿಕಾರ ಅಥವಾ ಸುಧಾರಕನೆಂದರೆ ಏನೆಂದು. ಕ್ರಾಂತಿಕಾರ ಅಥವಾ ಸುಧಾರಕ ಎಂಬ ಶಬ್ದದಲ್ಲಿ ಏನೂ ಇಲ್ಲ ಸಮಾಜವು ಅದನ್ನು ತಿಳಿದಿರುವುದು ಮಾತ್ರ ದ್ರಾವಿಡ ಪ್ರಾಣಾಯಾಮದ ಅರ್ಥದಿಂದ. ತಾನು ಹೋದ ದಾರಿಯೇ ಸರಿಯಾದುದೆಂದು ಬಗೆದ ಸಮಾಜವು, ಅದನ್ನು ತಪ್ಪೆನ್ನುವುದು. ಮೂರ್ಖತನವೆಂದು ತಿಳಿಯುವುದು—ಕ್ರಾಂತಿಯೆಂದು ತಿಳಿಯುವುದು. ಅವನ ಮಾತಿನ ಕಡೆಗೆ ಗಮನವನ್ನೇ ಕೊಡುವುದಿಲ್ಲ ಹೀಗಾಗಿ ಅವನು ಕ್ರಾಂತಿಕಾರನಾಗಿ ಉಳಿಯುತ್ತಾನೆ! ದೋಷಯುಕ್ತವಾದುದನ್ನು ಸುಧಾರಿಸುವವನೇ ಸುಧಾರಕ. ಆ 'ಸುಧಾರಕ' ಎಂಬ ಶಬ್ದದಲ್ಲಿ ಏನೊಂದು ಕೆಟ್ಟ ಅಭಿಪ್ರಾಯವೂ ನಮಗೆ ಕಾಣುವುದಿಲ್ಲ. ಆದರೆ

# ಕ್ರಾಂತಿಕಾರರೇ ಲೋಕಾಧಾರರು

ಲೇಖಕ:— "ಉಗ್ರನರಸಿಂಹ"

ಸಮಾಜವೇತೋ ಆ ಹೆಸರಿಗೆ ವಿಕಲ್ಪಾರ್ಥವನ್ನು ಕಲ್ಪಿಸಿದೆ ಈ ಅಪಾರ್ಥದಿಂದಾಗಿ ಆ ಶಬ್ದವನ್ನೇ ದ್ವೇಷಿಸುವ ಸಮಾಜವೂ ಉಂಟೆನ್ನುವುದನ್ನು ನಾಚಿಕೆಯಿಂದ ತಿಳಿಸಬೇಕಾಗಿದೆ.

ಆದರೆ ಈ ಕ್ರಾಂತಿಕಾರ—ಅಥವಾ—ಸುಧಾರಕರಿಲ್ಲದಿದ್ದರೆ ಸಮಾಜವು ಎಂದೋ ಅಳಿದು ಹೋಗುತ್ತಿತ್ತು. ವಿನಾಶದ ಕಡೆ ಸಾಗಿರುವ ಸಮಾಜವನ್ನು ಉದ್ಧಾರದ ಕಡೆಗೆ ಹಠಾತ್ತಾಗಿಯಾದರೂ ತಿರುಗಿಸಿದವರೆಲ್ಲರೂ ಇಂದು ಮಾನ್ಯರಾಗಿದ್ದಾರೆ ಅಂತಹ ವಿಚಾರಿಸಿದರೆ ಅವರೆಲ್ಲರೂ ಸುಧಾರಕರೇ—ಕ್ರಾಂತೀಕಾರರೇ! ಪ್ರಕೃತ ಶ್ರೀಕೃಷ್ಣನನ್ನು ದೃಷ್ಟಾಂತವಾಗಿಟ್ಟುಕೊಳ್ಳೋಣ. ಪರಮ ಪೂಜ್ಯರಾದ ದ್ರೋಣ—ಅಶ್ವತ್ಥಾಮ—ಭೀಷ್ಮ—ವಿದುರ ಮೊದಲಾದವರಿಂದ ಸಂರಕ್ಷಿತವಾಗಿದ್ದ ಕೌರವ ಸಾಮ್ರಾಜ್ಯಶಾಹಿಯನ್ನು ವಿಧ್ವಂಸಗೊಳಿಸಿ ಜನಹಿತಕರವಾದ ಪಾಂಡವರಾಜ್ಯವನ್ನು ಸ್ಥಾಪಿಸಿದ ಕೃಷ್ಣನು ಉಚ್ಚಕ್ರಾಂತಿಕಾರನಿದ್ದಾನೆ ಈ ಕಾಲದಲ್ಲಿ ನಾವೆಲ್ಲರೂ ಅವನನ್ನು ಪೂಜಿಸುತ್ತಿರುವೆವಾದರೂ ಆ ಕಾಲದಲ್ಲಿ ಅವನೆಷ್ಟೋ ಅಪವಾದಗಳನ್ನು ಕೇಳಿದ್ದನು. ಒಂದು ಕಾಲದಲ್ಲಿ ಪಶುಗಳಂತಿದ್ದ ಜನರನ್ನು ಕರ್ತವ್ಯದ ಕಡೆಗೆ ತಿರುಗಿಸಿದ ಯಶಸ್ಸು ಬುದ್ಧನಿಗೆ ಸಲ್ಲಬೇಕಾಗಿದೆ ಆದರೆ ಆ ಬುದ್ಧನಾದರೂ ಆ ಕಾಲದ ಜನರಿಂದ ನಿಂದಿಸಿಕೊಳ್ಳಲಿಲ್ಲೆಂದು ಹೇಳುವ ಸಾಹಸ ನಮ್ಮಲ್ಲಿಲ್ಲ. ಶಂಕರಾಚಾರ್ಯರೂ, ಮಧ್ವಾಚಾರ್ಯರೂ ಕ್ರಾಂತಿಕಾರರಿದ್ದಾರೆ. ಶಂಕರಮತ ಖಂಡನೆಮಾಡುತ್ತಿದ್ದಾಗ ಮಧ್ವಾಚಾರ್ಯರು ಮೊದಮೊದಲು ಗೌರವವನ್ನೇನೂ ಹೊಂದಿಲ್ಲ. ಬೇಕಷ್ಟು ಅಪಹಾಸಕ್ಕೊಳಗಾಗಿಯೇ ಇದ್ದರು. ಈಗಲೂ ವಿಪಕ್ಷೀಯರು ಅವರನ್ನು ದೂರುವುದನ್ನು ನಾವು ಕಾಣಬಹುದು. ಅರ್ಥಾತ್, ಆಗ ರೂಢಿಯಲ್ಲಿಲ್ಲದ ಒಂದು ಹೊಸ ತತ್ವವನ್ನು ಆಚರಣೆಗೆತರುವಾತನನ್ನು ಸಮಾಜವು ಒಂದೊಂನ್ಮೆ ನಿಂದಿಸಿದರೂ ಕೊನೆಗೆ ವಂದಿಸದಿರದು. ಏಕೆಂದರೆ ಜಗತ್ತೇ ಒಂದಲ್ಲೊಂದು ರೀತಿಯಲ್ಲಿ ಕ್ರಾಂತಿಕಾರರ ತತ್ವಾನುಯಾಯಿಯಾಗಿಯೇ ಇದೆ

ಕ್ರಾಂತಿಯ ಹಿಂದಿದೆ ಶಾಂತಿ. ಆ ಕ್ರಾಂತಿಯಲ್ಲೂ ಒಂದು ಸೌಂದರ್ಯವಿದೆ. ರುದ್ರ ಸೌಂದರ್ಯ! ಸಮಾಜವು ಮೊದಮೊದಲು ತಿರಸ್ಕರಿಸಿದರೂ, ತನ್ನನ್ನು ಪುರಸ್ಕರಿಸಿಕೊಳ್ಳುವ ಶಕ್ತಿಯು ಕ್ರಾಂತಿಯಲ್ಲಿದೆ. ಎಂದರೆ ನಿದ್ರಾಲು ಸಮಾಜವು ಘೋರ ನಿದ್ರೆಯಲ್ಲಿದ್ದಾಗ ಅದನ್ನು ಜಾಗ್ರತಗೊಳಿಸಲು ಕ್ರಾಂತಿಯೇ ಸಾಧನವಲ್ಲದೆ ಬೇರೆಯಲ್ಲ. ಎಂತಲೇ ನಾವು ಹಾಗೆ ಹೇಳಿದುದು 'ಕ್ರಾಂತಿಕಾರರೇ ಲೋಕಾಧಾರರೆಂದು. ಆದರೆ ಸಮಾಜಹಿತಕರವಾದ, ಸಮಾಜ ಸಮನ್ವಯಕ್ಕೆ ಹೇತುವಾದ ಕ್ರಾಂತಿಯನ್ನೇ ನಾವು ಲಕ್ಷ್ಯವನ್ನಾಗಿಟ್ಟುಕೊಂಡಿರುವೆವಲ್ಲದೆ ಸಮಾಜದ ಪ್ರಗತಿಘಾತುಕ ಧಾಷ್ಟ್ರ್ಯತೆಯನ್ನು ಕ್ರಾಂತಿಯೆಂದು ಕರೆದಿಲ್ಲ. ಅಂತಹ ಕ್ರಾಂತಿಕಾರರು ಇಲ್ಲಿ ಉಬ್ಬಬೇಕಾಗಿಲ್ಲ.

ಅತ್ಯುತ್ತಮ ಪೇನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಸ್ಟರ್ಡ್) ಫೌಂಟಿನ ಪೇನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚೆಲೊ ಸುವಾಸನೆಯ 'ಪೊಮೇಡ'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

*Sole disributtors:*—**V. V Kamath & Bros, Mangalore.**

ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

'ಗೋನೋಕಿಲರ್' (ರಿಜಿಸ್ಟರ್ಡ್)

GONO KILLER

ಸಕಲ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಉಪಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಚಾತುಬಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಸೆರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D N. JASANI,** Vitalbhai Patel Road, BOMBAY 4.

## ಮೈಸೂರು ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೆಂಗಳೂರು

ನಮ್ಮ ನಾಡಿನ ಮೇಲ್ತರಗತಿಯ ವಿಮಾ ಸಂಸ್ಥೆಯಿದು. ಇದರ 36ನೇ ವಾರ್ಷಿಕ ವರದಿಯು ನಮ್ಮ ಕೈಸೇರಿದೆ ಅಧಿಕೃತ ಷೇರು ಭಂಡವಾಳವು ೧೦೦,೦೦೦ರೂ. ಗಳಿಂದ ೩೦೦,೦೦೦ರೂ ಗಳಿಗೆ ಹೆಚ್ಚಿರುವುದನ್ನು ನೋಡುವಾಗ ಜನತೆಗೆ ಕಂಪೆನಿಯ ಮೇಲಿರುವ ವಿಶ್ವಾಸವು ವ್ಯಕ್ತವಾಗುವುದು. ವರದಿಯ ವರ್ಷದಲ್ಲಿ ಕಳೆದ ವರ್ಷಕ್ಕಿಂತ ಹೊಸ ಉದ್ಯಮವು ಶೇಕಡ 65ರಷ್ಟು ಮತ್ತು ಪೂರ್ಣವಾದ ಉದ್ಯಮವು ಶೇಕಡ 53ರಷ್ಟು ಏರಿದೆಯೆಂದು ಕಾಣಿಸಿದೆ. ಅಂದರೆ ಕಂಪೆನಿಯ ಪ್ರಗತಿಗಾಮಿತ್ವಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನಬೇಕಾಗಿಲ್ಲ. ಕಂಪನಿಯು ತನ್ನ ಔದಾರ್ಯವನ್ನು ಮೈಸೂರಿನವರಿಗೆ ಮಾತ್ರ ತೋರಿಸುವುದರಲ್ಲಿ ತೃಪ್ತಿಪಡೆಯದೆ ಅಖಿಲ ಭಾರತೀಯರಿಗೂ ತೋರಿಸುವ ಉದ್ದೇಶದಿಂದ ತನ್ನ ಕಾರ್ಯಕ್ಷೇತ್ರವನ್ನು ಬ್ರಿಟಿಷ್ ಇಂಡಿಯಾ, ಸಿಲೋನಾ, ಬರ್ಮಾ ಮುಂತಾದ ಕಡೆಗಳಲ್ಲೂ ವಿಸ್ತರಿಸುವುದರಲ್ಲಿದೆ ಎಂಬುದು ಕನ್ನಡಿಗರಿಗೇ ಅಭಿಮಾನಾಸ್ಪದ ಸಂಗತಿಯಾಗಿದೆ. ಕಂಪೆನಿಯು ಇದೇ ರೀತಿ ಮುಂದುವರಿದರೆ, ನಾವೆಲ್ಲರೂ ಪ್ರೋತ್ಸಾಹಿಸಿದರೆ ವಿಮಾಪ್ರಪಂಚದಲ್ಲಿ ಒಂದು ಗಣ್ಯಸ್ಥಾನವನ್ನು ಗಳಿಸುವುದರಲ್ಲಿ ಸಂದೇಹವಿಲ್ಲ. ಕಂಪೆನಿಯು ತನ್ನಾಸೆಯಂತೆ ತೀವ್ರವೇಪ್ರಗತಿಹೊಂದಿ ಅಭಿವೃದ್ಧಿಯ ಇತಿಹಾಸವನ್ನೊಳಗೊಂಡ ಮುಂದಿನ ವರದಿಯನ್ನು ಆತುರದಿಂದ ನಿರೀಕ್ಷಿಸುತ್ತಿದ್ದೇವೆ.

**WANTED**

Lady saleswoman, Catholic or Protestant for a leading cutlery, hardware and Stationery shop at Udipi town. Must be smart, good looking and of pleasing manners, capable of reading and writing English and Kanarese. Apply with one anna stamp stating minimum salary required.

'X' C/o Navayuga, Udipi.

(೭ನೇ ಅಧ್ಯಾಯ. ಕಳೆದ ಸಂಚಿಕೆಯಿಂದ ಮುಂದರಿದುದು.)

ಮರುದಿನ ಸುಮಾರು ಒಂಭತ್ತು ಘಂಟೆ ರಾತ್ರಿಯಿರಬಹುದು. ಲಲಿತೆಯು ಮಗುವಿಗೆ ನಿದ್ದೆ ಬರಲೆಂದು ಜೋಗುಳ ಹಾಡುತ್ತಾ ತೂಗುತ್ತಿದ್ದಳು. ಆದರೆ ಮಗುವು ಅಳುತ್ತಿದ್ದಿತು ಮಗುವೆಲ್ಲಿಯಾದರೂ ಅತ್ತರೆ ನಾಗಿಗೆ ಸಹಿಸಿಕೊಳ್ಳಲು ಸಾಧ್ಯವೇ ಆಗುತ್ತಿದ್ದಿಲ್ಲ. ಅವಳು ಅಡಿಗೆ ಮನೆಯಿಂದೋಡಿ ಬಂದು "ಯಾಕೆ ಲಲಿತ ಕೂಗಿಸುವುದು ಮಗುವನ್ನು? ಸ್ವಲ್ಪ ಮೊಲೆ ಕೊಡಬಾರದೆ?" ಎಂದು ಗದರಿಸಿದಳು. "ಮೊಲೆ ಕೊಟ್ಟು ಅರ್ಧ ಘಂಟೆಯಾಗಲಿಲ್ಲ; ನಿನ್ನ ಮಾತು ಕೇಳಿದರಾಯಿತು. ಲೇಡಿ ಡಾಕ್ಟರರು ಮೂರು ಘಂಟೆಗೊಮ್ಮೆ ಮೊಲೆಯಾಗಲಿ ಹಾಲಾಗಲಿ ಕೊಡಬೇಕೆಂದು ಹೇಳಿದ್ದಲ್ಲವೇ?" ಎಂದಳು ಲಲಿತೆ. "ನಿಮ್ಮ ಘಂಟೆಗಿಂಟೆಗೆ ಹೋದರೆ ಮಗುವನ್ನು ಕೊಲ್ಲಬೇಕಾದೀತು. ಈಗ ಕೊಡು ಮೊಲೆ. ಮೊಲೆ ಕೊಡದೆ ಅದ ಮಲಗಲಿಕ್ಕಿಲ್ಲ" ಎಂದು ನಾಗಿಯು ಮಗುವನ್ನೆತ್ತಿ ಮುದ್ದಾಡಿದಳು. ಒಂದು ಹತ್ತಿಪ್ಪತ್ತು ಸಲ ಚುಂಬಿಸಿದಳು "ಹೂಂ ಕೊಡು ಮೊಲೆ"ಎಂದು ಒತ್ತಾಯಮಾಡಿ ಮಗುವನ್ನು ಲಲಿತೆಯ ಕೈಯ ಮೇಲಿಟ್ಟಳು. "ಮೊಲೆಯಲ್ಲೇನಿದೆ? ಈಗ ಕೊಟ್ಟದು" ಎಂದು ಲಲಿತೆಯು ತುಸು ಸಿಟ್ಟಿನಿಂದ ಮಗುವನ್ನು ಆಚೆ ಈಚೆ ಎಳೆದು ಮೊಲೆ ಕೊಡಲಾರಂಭಿಸಿದಳು. ಅಷ್ಟರಲ್ಲಿ ರಸ್ತೆಯ ಬಾಗಿಲು ಬಡಿದು ಯಾರೋ ಕರೆದ ಶಬ್ದವಾಯಿತು. "ಯಾರದು? ಬಂದೆ" ಎಂದು ನಾಗಿಯು ಹೊರಹೋಗಿ ಬಾಗಿಲು ತೆರೆದು ನೋಡುವಾಗ ರಸ್ತೆಬದಿಯಲ್ಲಿ ಎರಡು ಕಾರುಗಳು ನಿಂತಿದ್ದುವು. ನರಸಿಂಹನು ನಾಗಿಯ ಮುಖ ಸಹ ನೋಡದೆ ಥಕ್ಕನೆ ಒಳನುಗ್ಗಿದನು. ನಾಗಿಯೂ ಅವನನ್ನೇ ಹಿಂಬಾಲಿಸಿ, "ಏನು ಸಮಾಚಾರ ನರಸಿಂಹ ಭಟ್ರೆ? ಎರಡು ಮೋಟರ್‌ಕಾರು ಯಾರದು?" ಎಂದು ಗಟ್ಟಿಯಾಗಿ ಪ್ರಶ್ನಿಸಿದಳು "ಸ್ವಲ್ಪ ಮೆಲ್ಲಗೆ ಮಾತಾಡು. ಸ್ವಾಮಿರು ಬಂದಿದ್ದಾರೆ ಮಗು ನೋಡಲಿಕ್ಕೆ. ಎಲ್ಲಿದೆ ಮಗು? ಬೇಗ ಇಲ್ಲ ತಾ"ಎಂದ ನರಸಿಂಹ ಇನ್ನೊಂದು ಕಾರಿನಲ್ಲಿ ಯಾರಿದ್ದಾರೆ?" ಎಂದು ಪುನಃ ಪ್ರಶ್ನಿಸಿದಳು ನಾಗಿ ಬಹಳ ಉಲ್ಲಾಸಗೊಂಡು. "ಅದೆಲ್ಲಾ ಯಾಕೆ ನಿನಗೀಗ? ಬೇಗ ಮಗುವನ್ನಿಲ್ಲಿ ತಾ. ಸ್ವಾಮಿರಿಗೊಮ್ಮೆ ನೋಡದೆ ನಿದ್ದೆ ಬರುವುದಿಲ್ಲವಂತೆ" ಎಂದು ನರಸಿಂಹನು ನಾಗಿಯನ್ನೊಮ್ಮೆ ದಿಟ್ಟಿಸಿ ನೋಡಿದ. ಕೂಡಲೆ ನಾಗಿಯು ಒಳಗೋಡಿದಳು. "ಲಲಿತ, ಲಲಿತ! ಸ್ವಾಮಿರು ಬಂದಿದ್ದಾರೆ ಮಗು ನೋಡಲಿಕ್ಕೆ, ಸ್ವಾಮಿರು ಬಂದಿದ್ದಾರೆ!" ಎಂದು ಲಲಿತೆಯ ಕೈಯಿಂದ ಮಗುವನ್ನು ಕಸಕೊಂಡು ಹೊರಗೋಡಿ ಬಂದು, "ನಾನೇ ತೋರಿಸುತ್ತೇನೆ ಸ್ವಾಮಿರಿಗೆ ಅವರ ಪ್ರತಿ ಮೂರ್ತಿಯನ್ನು" ಎಂದು ನರಸಿಂಹನನ್ನು ಲಕ್ಷಿಸದೇನೇ ಹೊರಗೆ ಹೋಗುವುದರಲ್ಲಿದ್ದಳು. ಆಗ ನರಸಿಂಹನು ತಡೆದು, "ನೀವಾರೂ ಹೊರಗೆ ಬರಕೂಡದಂತೆ. ನಾನೇ ಗುಟ್ಟಿನಲ್ಲಿ ತೋರಿಸಿ ಒಳಗೆ ತರುತ್ತೇನೆ" ಎಂದು ಮಗುವನ್ನು ನಾಗಿಯ ಕೈಯಿಂದ ತೆಗೆದುಕೊಂಡು ಅದರ ಮೇಲೆ ತಾನು ಹೊದೆದುಕೊಂಡಿದ್ದ ವಸ್ತ್ರ ಹಾಕಿ ಹೊರ ನಡೆದು ಮಗುವನ್ನು ಮೋಟರ್ ಕಾರಿನಲ್ಲಿರಿಸಿ ಹಿಂದೆ ಧಾವಿಸಿ ಬಂದು, "ನಾಗಿ, ನಾಗಿ, ನಾವು ಮುಂದೆ ಹೋಗುತ್ತೇವೆ. ಮಗುವನ್ನು ನಮ್ಮೊಂದಿಗೆ ಕೊಂಡೊಯ್ಯುತ್ತೇವೆ. ನೀನೂ ಲಲಿತೆಯೂ ಇನ್ನೊಂದು ಕಾರಿನಲ್ಲಿ ಬನ್ನಿರಿ" ಎಂದು ಹೇಳಿ ಪುನಃ ಮೋಟರ್ ಕಾರಿನ ಕಡೆಗೋಡಿ ದಡಕ್ಕನೆ ಬಾಗಿಲು ತೆರೆದು ಒಳಗೆ ಕೂತು, "ಹೂಂ ಹೋಗುವ" ಎಂದನು. ಸ್ವಾಮಿರ ಸಲೂನ್ ಕಾರು ಕೂಡಲೇ ಅದೆಲ್ಲಿಗೋ ಓಡಿಹೋಯಿತು. ನಾಗಿಯು ನರಸಿಂಹನ ಚಲನವಲನವನ್ನು ಕಂಡು ವಿಸ್ಮಿತಳಾಗಿ ತುಸು ಹೊತ್ತು ನಿಂತಲ್ಲಿಯೇ ನಿಂತುಬಿಟ್ಟಳು. ಅವಳು ನೋಡುತ್ತಿರುವಂತೆಯೇ ಸ್ವಾಮಿರ ಮೋಟರು ಧಾವಿಸಿತು. ಅವಳು ಕೂಡಲೆ ಒಳಗೋಡಿ, "ಲಲಿತ, ಲಲಿತ! ನಾವು ಮಠಕ್ಕೆ ಹೋಗಬೇಕಂತೆ, ಸ್ವಾಮಿರು ಹೇಳಿದರು, ನಮಗಾಗಿ ಇನ್ನೊಂದು ಕಾರು ಕಾದು ನಿಂತಿದೆ. ನಡೆ ಬೇಗ ಸೀರೆ ಉಡು, ಹೋಗುವ" ಎಂದಳು. ಮತ್ತು ತಾನು ಅವಸರವಸರದಿಂದ ಸೀರೆ ಉಡುವ ಸನ್ನಾಹಮಾಡಿದಳು. ಆಗ ಲಲಿತೆಯು, "ಅಮ್ಮಾ! ಅಮ್ಮಾ!! ಮಗುವೆಲ್ಲಿ? ಮಗುವೆಲ್ಲಿ?" ಎಂದು ಕೂಗಿಬಿಟ್ಟಳು. ಮಗುವನ್ನು ಕಾಣದೆ ತಲ್ಲಣಿಸುವ ಮಾತೃಹೃದಯದ ಕೂಗದು. ನಾಗಿಯ ಹೃದಯವನ್ನು ಭೇದಿಸಿ ಬಿಟ್ಟಿತು. ಅವಳು, "ಮಗುವನ್ನು ಸ್ವಾಮಿರುಮಠಕ್ಕೆ ಕೊಂಡೊಯ್ದರು ಮಗು. ಗಾಬರಿಪಡಬೇಡ ನಾವೀಗಲೇ ಮಠಕ್ಕೆಹೋಗುವ" ಎಂದಳು. "ಮಗುವನ್ನೇಕವರು ಮಠಕ್ಕೊಯ್ಯುವರಮ್ಮಾ? ಅದು ಸುಳ್ಳು. ಅಮ್ಮಾ, ಮಗುವೆಲ್ಲಿದೆಯೆಂದು ಹೇಳಲಾರೆಯಾ? ಯಾರು ಕೊಂಡೊಯ್ದರು? ಯಾರಿಗೆ ಕೊಟ್ಟೆ ನೀನು? ಸ್ವಾಮಿರಿಗೆ ಬೇಕಾಗಿದ್ದರೆ ನಾನೇ ಕೊಂಡು ಹೋಗಬಾರದಿತ್ತೇ? ಅಮ್ಮಾ ಅದೆಲ್ಲಿರುವುದೋ? ಎಷ್ಟು ಕೂಗುವುದೋ? ಸೀರೆ ಶೃಂಗಾರಕ್ಕೆ ಬೆಂಕಿಹಾಕಲಿ! ನಡೆ, ಅಮ್ಮಾ ಹೋಗುವ. ನಾನು ನನ್ನ ಮಗುವನ್ನು ಒಂದು ಕ್ಷಣವೂ ಬಿಟ್ಟು ಇರಲಾರೆ. ಹೃದಯದ ಉದ್ವೇಗವನ್ನು ತಾಳಲಾರೆನಮ್ಮಾ. ನನ್ನ ಪ್ರಾಣವೇ ಹಾರಿ ಹೋಗುವಂತಾಗುವುದು. ಹೋಗುವ ಅಮ್ಮಾ ಬೇಗ ಹೋಗುವ" ಎಂದು ನಾಗಿಯು ಹೊರಡುವ ವರೆಗೆ ಕಾಯದೆ ತಾನು ಹೊರಗೆ ನಡೆದಳು. ನಾಗಿಯೂ ಅವಳನ್ನು ಹಿಂಬಾಲಿಸಿದಳು. ಇಬ್ಬರೂ ಮೋಟರ್ ಕಾರುಹತ್ತಿ ಕುಳಿತುಕೊಂಡರು. ಡ್ರೈವರನು ಅವರನ್ನು ಮಠಕ್ಕೆ ಕೊಂಡೊಯ್ದನು.

---

## ಅಧ್ಯಾಯ ೮

## ಭಿ ಕಾ ರಿ ಣಿ

ಸಾಮಾಜಿಕ ಕಾದಂಬರಿ

### "ಮಗುವನ್ನೇನು ಮಾಡಿದೆ? ಕೊಂದೆಯಾ ರಾಕ್ಷಸ?"

ಹೆಚ್ಚೆಂದರೆ ನಾಗಿಯ ಮನೆಯಿಂದ ಶಿವಪುರಮಠದ ಬಾಗಿಲಿಗಿರುವುದು ಒಂದು ಮೈಲು. ಐದಾರು ನಿಮಿಷಗಳಲ್ಲಿ ಟೇಕ್ಸಿಯು ಮಠದ ಬಾಗಿಲಿಗೆ ಬಂದು ನಿಂದಿರಬೇಕು. ಆದರೆ ನಾಗಿ ಲಲಿತೆಯರಿಗೆ ಕೆಲವು ಘಂಟೆ ತಾವು ಟೇಕ್ಸಿಯೊಳಗಿದ್ದಂತೆ ತೋರಿತು. ಮುಳ್ಳಿನ ಮೇಲಿದ್ದಂತಿದ್ದರವರು ಅವರೊಳಗೆ. ಟೇಕ್ಸಿಯು ಮಠದ ಬಾಗಿಲಿಗೆ ಮುಟ್ಟುತ್ತಿರುವಾಗಲೆ ಲಲಿತೆಯು ಅದರ ಬಾಗಿಲು ತೆರೆಯಲೆತ್ನಿಸಿದಳು. ಆದರೆ ಅವಳಿಂದದು ಸಾಧ್ಯವಾಗಲಿಲ್ಲ ಬಹಳ ಅಸಹಿಷ್ಣುತೆಯಿಂದ 'ಶೆಕ್' ಎಂದು ಇನ್ನೊಂದು ಕಡೆಯ ಬಾಗಿಲು ತೆರೆಯಲು ಪ್ರಯತ್ನಿಸಿದಳು. ಅಷ್ಟರಲ್ಲಿ ಟೇಕ್ಸಿಯು ನಿಂತಿತು. ಲಲಿತೆಯು ಬಾಗಿಲು ತೆರೆಯಲು ಚಡಪಡಿಸುವುದನ್ನು ಡ್ರೈವರನು ಕಂಡು, "ಏನಿಷ್ಟವಸರಪ್ಪ! ಸ್ವಾಮಿರೆಲ್ಲಿಯಾದರೂ ಓಡಿ ಹೋಗುವುದಿಲ್ಲ" ಎಂದು ಬೆರಳುಗಳ ನಡುವೆಯಿದ್ದ ಬೀಡಿ ಕಡೆಯನ್ನೊಮ್ಮೆ 'ಹೂ' ಎಂದೆಳೆಯುವಷ್ಟರಲ್ಲಿ ನಾಗಿಯು, "ಡ್ರೈವರ್ರೇ! ಓ ಡ್ರೈವರ್ರೇ!! ಸ್ವಲ್ಪ ಬಾಗಿಲು ತೆರೆಯಿರಪ್ಪ! ಮತ್ತೆ ಬೀಡಿ ಎಳೆಯಿರಿ! ನಿಮ್ಮ ಬಾಗಿಲೊಂದು ಎಂತಹದಪ್ಪ" ಎಂದಳು. ಲಲಿತೆಯು ಎರಡೂ ಬಾಗಿಲನ್ನು ತೆರೆಯಲಾರದೆ 'ಶೂ' ಎಂದು ಸೀಟಿಗೊರಗಿಬಿಟ್ಟಳು. ಡ್ರೈವರನು ಬೀಡಿಕಡೆ ಬಿಸಾಡಿ ಕ್ರೋಪನ್ನೊಮ್ಮೆ ಸರಿಮಾಡಿ ಮುಂಡಸ್ನೆತ್ತಿ ತೊಡೆಗಳ ನಡುವೆ ಸಿಕ್ಕಿಸಿ ಬಂದು ಟಪ್ಪನೆ ಬಾಗಿಲು ತೆರೆದು ಲಲಿತೆಯನ್ನೇ ಕಣ್ಣಿಟ್ಟು ನೋಡುತ್ತಾ ನಿಂತನು. ಲಲಿತೆಯು ಕೂಡಲೆ ಹೊರಬಿದ್ದು ಮಠದೊಳಗೋಡಿದಳು. ನಾಗಿಯು ಅವಳನ್ನು ಹಿಂಬಾಲಿಸಿದಳು.

ಒಂದೇ ಒಂದು ಕ್ಷಣದಲ್ಲಿ ಲಲಿತೆಯು ಸ್ವಾಮಿರ ಬೈರಕುಖಾನೆಗೆ ಬಂದಳು. ನಾಗಿಗೆ ಅವಳ ಬೆನ್ನು ಹಿಡಿದು ಬರಲಾಗಲಿಲ್ಲ. ಒಳಗೆ ಸರಿದು ನೋಡುವಾಗ ಶಿವಾನಂದರೊಬ್ಬರೇ ಇದ್ದರು. ಮಗುವಿರಲಿಲ್ಲ. ಲಲಿತೆಯು ಒಂದು ಕ್ಷಣ ಸ್ತಂಭಿತಳಾಗಿ ನಿಂತುಬಿಟ್ಟಳು. ಅವಳ ಹೃದಯವು ತಪತಪನೆನ್ನುತ್ತಿತ್ತು. ಸರ್ವಾಂಗ ಬೆವರಿ ನೀರು ಹರಿಯುತ್ತಿತ್ತು. ಉತ್ತರ ಕ್ಷಣದಲ್ಲೇ ಓಡಿಹೋಗಿ,ಮಂಚದ ಮೇಲೆ ಪದ್ಮಾಸನ ಹಾಕಿ ಕುಳಿತು ಚಿಂತಾಮಗ್ನರಾಗಿರುವ ಶಿವಾನಂದರ ಬಳಿಗೋಡಿ, ಅವರ ಕಾಲಿಗೆ ಬಿದ್ದು "ಮಗುವೆಲ್ಲಿ? ನನ್ನ ಮಗುವೆಲ್ಲಿ?"ಎಂದು ಕೂಗಿ ಬೋಧತಪ್ಪಿ ಬಿದ್ದುಬಿಟ್ಟಳು. ಇಷ್ಟರಲ್ಲಿ, ಶಿವಾನಂದರು ಮಗುವನ್ನು ಹಿಡಿದು ಮುದ್ದಾಡುತ್ತಿರಬೇಕೆಂದೇ ಅವಳು ಕಲ್ಪಿಸಿಕೊಂಡು ಆ ಆನಂದದ ದೃಶ್ಯವನ್ನೊಮ್ಮೆ ನೋಡಬೇಕೆಂಬ ತವಕದಿಂದ ನಾಗಿಯು ಕೋಣೆಯೊಳಗೆ ಪ್ರವೇಶಿಸಿ ಮಗುವಿರದುದನ್ನು ಕಂಡು ತಬ್ಬಿಬ್ಬಾದಳು. "ಪರಾಕೆ, ಪರಾಕೆ! ಮಗುವೆಲ್ಲಿ?ಇದೇನು? ನನ್ನ ಲಲಿತೆಗೇನಾಯಿತು?" ಎಂದು ಓಡಿಹೋಗಿ ಲಲಿತೆಯನ್ನು ಹಿಡಿಯುವಷ್ಟರಲ್ಲಿ, ಶಿವಾನಂದರುಕುತ್ತಿಗೆಯೊಳಗೆ ತಡೆಗಟ್ಟಲ್ಪಟ್ಟ ಮಾತುಗಳಿಂದ, "ನಾಗಿ ನಾಗಿ! ಲಲಿತೆಗೇನೂ ಆಗಿಲ್ಲ. ಬೇಗ ಹೋಗಿ ಸ್ವಲ್ಪ ನೀರು ತಾ" ಎಂದರು. ನಾಗಿಯು ಗಡಿಬಿಡಿಯಿಂದ ಓಡಿಹೋಗಿ,ತುಂಗಮ್ಮ ಎಂಬ ಮಠದ ಅಜ್ಜಿಯೊಬ್ಬರು ಶುಭ್ರವಾಗಿ ತೊಳೆದು ನೀರು ತುಂಬಿಸಿಟ್ಟಿದ್ದ ತಂಬಿಗೆಯನ್ನು ಹೇಳದೆ ಕೇಳದೆ ಹಿಡಕೊಂಡು ಒಂದೇ ಉಸಿರಿನಿಂದ ಬೈರಕು ಕೋಣೆಗೆ ಧಾವಿಸಿದಳು. "ಹೆ! ಹೆ!! ನನ್ನ ತಂಬಿಗೆ ಅದು ಎಲ್ಲಿಗೊಯ್ಯುತ್ತಿ? ನನಗೀಗ ಬೇಕನು" ಎಂದು ತುಂಗಮ್ಮನು ಬಹಳ ಸಿಟ್ಟಿನಿಂದ ಬಾಗಿದ ಬೆನ್ನನ್ನೊಮ್ಮೆ ನೆಟ್ಟಗೆ ಮಾಡಿ ನಾಗಿಯನ್ನು ಮನಸೇಚ್ಛೆ ಬೈಯ್ದು ಅವಳ ಬೆನ್ನು ಹಿಡಿದು ಸ್ವಾಮಿರ ಬೈರಕು ಕೋಣೆಯ ವರೆಗೂ ಹೋದಳು. ಆದರೆ ಒಳಪ್ರವೇಶಿಸಲು ಧೈರ್ಯ ಬರಲಿಲ್ಲ. "ಹೇಗೂ ಉಂಟೆ ಪರಾಕೆ! ನಾನು ಮಡಿಯಿಂದ ತಂದಿಟ್ಟ"....ಎನ್ನುವಷ್ಟರಲ್ಲಿ ಅವಳ ಮುಖದ ಮೇಲೆಯೇ ಕೋಣೆಯ ಬಾಗಿಲು ಡಬ್ಬನೆ ಹಾಕಲ್ಪಟ್ಟಿತು. "ಶಿವ! ಶಿವ!! ನನಗೇಕೆ ಸಾವು ಬರುವುದಿಲ್ಲಪ್ಪ!" ಎಂದು ತುಂಗಮ್ಮನು ಹಣೆಗೆ ಬಡಕೊಂಡು ಬೈರಕು ಕೋಣೆಯ ಬಾಗಿಲಿಂದ ದಡದಡನೆ ಇಳಿದು ಹೋಗಿ ನಡೆದ ಸಂಗತಿಯನ್ನು ಸಿಕ್ಕಿ ಸಿಕ್ಕಿದವರೊಡನೆಲ್ಲಾ ಬಹಳ ಸಿಟ್ಟಿನಿಂದ ಹೇಳಿ ನಾಗಿಯನ್ನು ಶಪಿಸಿದಳು.

ನಾಗಿಯು ಲಲಿತೆಯ ಮುಖದ ಮೇಲೆ ನೀರು ಚುಮುಕಿಸಿ ಸೆವಗಿಂದೊರಸಿದಳು. ಶಿವಾನಂದರು ಹತ್ತಿರದಲ್ಲೇ ಲಲಿತೆಯನ್ನು ನೋಡುತ್ತಾ ನಿಂತಿದ್ದರು. ನೋಡುತ್ತಿದ್ದಂತೆಯೇ ಅವರ ಕಣ್ಣಲ್ಲಿ ಅದೇಕೋ ನೀರು ತುಂಬಿ ಬಂತು. ಅದನ್ನವರು ಮುಖ ತಿರುಗಿಸಿ ಒರಸುವಷ್ಟರಲ್ಲಿ, "ಅಯ್ಯೋ, ಮಗು! ಮಗು!! ನನ್ನ ಮಗು!" ಎಂದು ಲಲಿತೆಯು ಎಚ್ಚತ್ತು, "ಅಮ್ಮಾ, ಎಲ್ಲಿ?. ನನ್ನ ಮಗುವೆಲ್ಲಿ? ಎಲ್ಲಿ ಹೋಯಿತು? ಯಾರು ಕೊಂಡೊಯ್ದರು?" ಎಂದು ಜಗ್ಗನೆ ಎದ್ದುನಿಂತಳು. ಆಗ "ಮಗುವೆಲ್ಲಿದೆಯೆಂದು ದಯಮಾಡಿ ಹೇಳಬಾರದೆ ಪರಾಕೆ? ಯಾಕೆ ಸುಮ್ಮನಿರುವಿರಿ?" ಎಂದು ನಾಗಿಯು ಬೇಡಿಕೊಂಡಳು ಕಣ್ಣೀರಿಟ್ಟು. ಶಿವಾನಂದರು ನಾಗಿ ಮತ್ತು ಲಲಿತೆಯರನ್ನೊಮ್ಮೆ ನೋಡಿದರು. ಆಮೇಲೆ ದೀರ್ಘ ಶ್ವಾಸಬಿಟ್ಟು ಸುಮ್ಮನೆ ನಿಂತುಬಿಟ್ಟರು. ಅವರ ಕಣ್ಣುಗಳಲ್ಲಿಯೂ ಧಾರೆಕಟ್ಟಿ ನೀರು ಹರಿಯತೊಡಗಿತು. ಎಷ್ಟೊಂದು ಕಟ್ಟಿಕೊಂಡರೂ ನಿಲ್ಲಲಾರದದು. "ಪರಾಕೆ ಸತ್ಯ ಹೇಳಿ. ಮಗುವನ್ನು ನೀವಲ್ಲವೇ ತರಹೇಳಿದುದು ಮೋಟರ್‌ಕಾರಿಗೆ? ಅದನ್ನಿಲ್ಲಿ ತರಲಿಲ್ಲವೆ? ನರಸಿಂಹಭಟ್ಟರೆಲ್ಲಿಹೋದರು? ಮಗುವೇನಾಯಿತು? ಸಂಗತಿ ಏನೆಂದು ತಿಳಿಸಬಾರದೆ? ಯಾಕೆ ಕಣ್ಣೀರಿಡುತ್ತಾ ನಿಂತಿರುವಿರಿ ಬುದ್ಧಿ?" ಎಂದು ನಾಗಿಯು

ಪುನಃ ಕೇಳಿಕೊಂಡಳು. ಶಿವಾನಂದರು ಮತ್ತೂ ಮೌನವನ್ನೇ ಧರಿಸಿದ್ದರು. ಇಷ್ಟರಲ್ಲಿ, "ಪರಾಕ್, ಪರಾಕ್! ಬಾಗಿಲು ತೆರೆಯಿರಿ, ಬಾಗಿಲು ತೆರೆಯಿರಿ. ಕೆಲಸವೆಲ್ಲಾ ಸಾಂಗವಾಗಿ ನೆರವೇರಿತು" ಎಂದು ನರಸಿಂಹನು ಬಾಗಿಲು ಬಡಿದನು." ನರಸಿಂಹನು ಮಗುವನ್ನು ಹಿಡಕೊಂಡು ಬಂದನೆಂಬ ಉತ್ಸಾಹದಿಂದ ನಾಗಿಯು ಓಡಿಹೋಗಿ ಬಾಗಿಲು ತೆರೆದಳು. ಅವನು ಒಳಗೆ ಪ್ರವೇಶಿಸುವಾಗಲೆ, "ಶವ ಸಹ ಸಿಕ್ಕದಹಾಗೆ ಮಾಡಿದ್ದೇನೆ ಪರಾಕ್" ಎಂದು ಹೇಳುವಷ್ಟರಲ್ಲಿ ನಾಗಿ ಲಲಿತೆಯರನ್ನು ಕಂಡು ಅವಾಕ್ಕಾದನು. "ಏನು? ಯಾವ ಶವ? ನನ್ನ ಕೂಸನ್ನು ಕೊಂದಿರೇ? ಅಯ್ಯೋ! ದೇವರೇ" ಎಂದು ನಾಗಿಯು ದೊಪ್ಪನೆ ನೆಲಕ್ಕೆ ಬಿದ್ದುಬಿಟ್ಟಳು. "ನರಸಿಂಹ, ಅದೋ ಅಲ್ಲಿ ನೀರಿದೆ ತಂಬಿಗೆಯಲ್ಲಿ! ನಾಗಿಗೆ ಬೋಧಬರುವಂತೆ ಮಾಡು" ಎಂದು ಮಿಂಚುಬಡಿದಂತೆ ನಿಂತಿರುವ ಲಲಿತೆಯ ಬಳಿಗೆ ಸರಿದು "ಲಲಿತ! ಲಲಿತ!" ಎಂದು ಗದ್ಗದ ಕಂಠದಿಂದ ಕರೆದು ಅವಳ ಕೈ ಹಿಡಿದರು. ಶಿವಾನಂದರ ಸ್ಪರ್ಶ ಮಾತ್ರದಿಂದ ಲಲಿತೆಯಲ್ಲಿ ಒಂದು ಕ್ಷಣ ನಿಂತುಹೋದಂತಿದ್ದ ರಕ್ತ ಚಲನೆಯು ಒಂದೇ ಸವನೆ ಪ್ರವಹಿಸಿದಂತಾಯಿತು. ಸ್ವಾಮಿಯ ಕಿರುಬೆರಳಿಂದ ನೂಕಿದರೆ ಬೀಳುವ ಅವಳು, ಅದಾವ ಶಕ್ತಿಯಿಂದಲೋ ಶಿವಾನಂದರು ಹಿಡಿದ ಕೈ ಬಿಡಿಸಿ ಅವರ ಕುತ್ತಿಗೆ ಹಿಡಿದೊತ್ತಿ "ನರಪಿಶಾಚಿ! ಎಲ್ಲಿ? ನನ್ನ ಮಗು ಎಲ್ಲಿ? ಹೇಳು ಬೇಗಹೇಳು! ಇಲ್ಲವಾದರೆ ಕತ್ತು ಹಿಸುಕಿ ಕೊಲ್ಲುವೆನು" ಎಂದು ಸಿಂಹಿಣಿಯಂತೆ ಗರ್ಜಿಸಿದಳು. "ಹೆ—ಹೆ—ಹೇಳು—ಹೊ—ಹೊ—ಹೊ" ಎಂದು ಸ್ವಾಮಿಯು ಚೀರಿದರು. ಲಲಿತೆಯ ಹಿಡಿತಕ್ಕೆ ಸಿಕ್ಕಿ ಶಿವಾನಂದರು ಕಂಗೆಟ್ಟರು. ದೊಡ್ಡ ಜಟ್ಟಿಯಂತಿದ್ದ ಅವರಿಗೆ ಲಲಿತೆಯಂತಹ ಅಬಲೆಯರು ತೃಣ ಸಮಾನ. ಆದರೆ ಈ ಸಂದರ್ಭದಲ್ಲಿ ಅದಾವ ವಿಚಿತ್ರ ಶಕ್ತಿಯಿಂದಲೋ ಲಲಿತೆಯು ಅವರನ್ನು ಉಸಿರಾಡದಂತೆ ಮಾಡಿಬಿಟ್ಟಳು. ಅಷ್ಟರಲ್ಲಿ ನರಸಿಂಹನು, "ಪರಾಕ್ ಏನಾಯಿತು! ಏನಾಯಿತು!!" ಎಂದು ಓಡಿಬಂದು ಲಲಿತೆಯು ಶಿವಾನಂದರ ಕುತ್ತಿಗೆಯನ್ನು ಬಿಗಿಹಿಡಿದುದನ್ನು ನೋಡಿ ಒಂದೇ ಸವನೆ ಅವಳ ಮೇಲೆ ಹಾರಿ ಕೈ ಬಿಡಿಸಲೆತ್ನಿಸಿದನು. ಆಗ ಮಗುವನ್ನು ಕೊಂದವನು ನರಸಿಂಹನೆಂದವಳಿಗೆ ಥಕ್ಕನೆ ಹೊಳೆದು ಅವಳ ಸಿಟ್ಟೆಲ್ಲಾ ಅವನ ಮೇಲೆ ಕೇಂದ್ರೀಕೃತವಾಯಿತು. ಅವಳು ಶಿವಾನಂದರ ಕುತ್ತಿಗೆ ಬಿಟ್ಟು, "ಮಗುವನ್ನೇನು ಮಾಡಿದೆ? ಕೊಂದುಹಾಕಿದೆಯಾ ರಾಕ್ಷಸ?" ಎಂದು ನರಸಿಂಹನ ಕುತ್ತಿಗೆ ಹಿಡಿದು ದೂಡಿಬಿಟ್ಟಳು. ಅವನು ಡಬ್ಬನೆ ನೆಲಕ್ಕೆ ಬಿದ್ದು ತಲೆ ಗೋಡೆಗೆ ತಾಗಿ ತಲೆತಿರುಗಿ ಬಿದ್ದುಬಿಟ್ಟನು. ಆಗ ಲಲಿತೆಯ ದೃಷ್ಟಿಯು ಬೋಧತಪ್ಪಿ ಬಿದ್ದಿರುವ ನಾಗಿಯ ಮೇಲೆ ಬಿತ್ತು. ಅವಳು ಕೂಡಲೆ ನಾಗಿಯ ಬಳಿಗೆ ಸರಿದು ಅವಳ ಕೈಗಳನ್ನು ಹಿಡಿದು ಭರದಿಂದ ಕುಲುಕಿಸಿ, "ಅಮ್ಮಾ! ಅಮ್ಮಾ!! ಅಮ್ಮಾ!!!" ಎಂದು ಕೂಗಿ ಕರೆದಳು. ಆಗ ನಾಗಿಗೂ ಎಚ್ಚರವಾಗಿ ಅವಳು ಆವೇಗದಿಂದ ಲಲಿತೆಯನ್ನು ಬಿಗಿದಪ್ಪಿ, "ಮಗೂ ಲಲಿತ, ನೀನು ಮೊದಲೇ 'ನನ್ನನ್ನಾ ನರಕಕ್ಕೆಳೆಯ ಬೇಡೆಂ'ದು ಬಗೆಬಗೆಯಿಂದ ಬೇಡಿಕೊಂಡೆ. 'ಅತಿ ಆಶೆ ಗತಿಗೇಡುಮಾಡಿಕೊಳ್ಳಬೇಡಮ್ಮಾ!' ಎಂದು ಎಚ್ಚರಿಸಿದೆ. ಆದರೆ, ಮಗು ನಿನ್ನ ಮಾತಿಗೆ ನಾನು ಒಂದಿಷ್ಟು ಗಮನ ನೀಡದೆ ನನ್ನಿಚ್ಛಾನುಸಾರ ನಡೆದು ನಿನ್ನ ಜೀವನ ಸುಖವನ್ನು ಮಣ್ಣುಗೂಡಿಸಿದೆ. ನಾನು ನಿನ್ನ ಮಾತೆಯಲ್ಲ, ಘಾತಕಿ. ಆಹ, ಆ ಎಳೆ ಕೂಸನ್ನು ಕೊಲ್ಲಲು ನರಸಿಂಹಭಟ್ಟರಿಗೆ ಮನಸ್ಸಾದರೂ ಹೇಗೆ ಬಂತಪ್ಪ! ಎಷ್ಟೊಂದು ಚಂದವಾಗಿದ್ದಿತು ಕೂಸು! ಆಹಹ...... ..." ಎಂದು ಮುಂದೆ ಮಾತಾಡಲಾರದೆ ಗೋಳಿಟ್ಟಳು. ಆಗ ಲಲಿತೆಯು ಗಟ್ಟಿ ಮನಸ್ಸುಮಾಡಿ, "ನಾವು ಮಾಡಿದ ಕರ್ಮಕ್ಕೆ ಅನ್ಯರನ್ನು ದೂರಿ ಫಲವೇನಮ್ಮಾ? ನಡೆ ಇಲ್ಲಿಂದೊಮ್ಮೆ ತೊಲಗುವ" ಎಂದು ಇಬ್ಬರೂ ಹೊರಡಲುದ್ಯುಕ್ತರಾದರು. ಅಷ್ಟರ ವರೆಗೂ ಗೊಂಬೆಯಂತೆ ನಿಂತಿದ್ದ ಶಿವಾನಂದರು, "ನಿಲ್ಲಿರಿ, ಮೋಟರ್ ಕಾರಿನಲ್ಲಿ ಹೋಗಿರಿ" ಎಂದರು. ನೀವು ಈವರೆಗೆ ಮಾಡಿದ ಉಪಕಾರವೇ ಸಾಕು ಪರಾಕ್. ನಮಗೆ ಮೋಟರ್ ಕಾರೇಕೆ? ನಡೆದೇ ಹೋಗುತ್ತೇವೆ" ಎಂದಳು ನಾಗಿ ಶಿವಾನಂದರನ್ನೊಮ್ಮೆ ದಿಟ್ಟಿಸಿ. ಆಗ ಶಿವಾನಂದರು ನಾಗಿ ಲಲಿತೆಯರಿಬ್ಬರನ್ನು ಕೈ ಹಿಡಿದು ಎಳೆತಂದು "ನಿಲ್ಲಿರಿ, ನಾನು ಹೇಳುವುದನ್ನೆಲ್ಲಾ ಕೇಳಿ ಮತ್ತೆ ಹೋಗಿರಿ." ಎಂದರು. ನಾಗಿ ಲಲಿತೆಯರು ವಿಸ್ಮಿತರಾಗಿ ಮಾತಾಡದೆ ಸುಮ್ಮನೆ ನಿಂತರು. ಶಿವಾನಂದರ ಕಂಗಳಲ್ಲಿ ಪುನಃ ನೀರು ತುಂಬಿಬಂತು. ಅವರು "ನಾಗಿ, ಎಲ್ಲವನ್ನೂ ಮಾಡಿದವನು ನಾನು. ಹೃದಯವನ್ನು ಕಲ್ಲುಮಾಡಿ ಲಲಿತೆಯ ಮಗುವನ್ನು ಕೊಲ್ಲಿಸಿದ ನರಪಿಶಾಚಿ ನಾನು! ನರಸಿಂಹನು ಕೇವಲ ನನ್ನ ಹಸ್ತಕ. ಈ ಪಾಪಕೃತ್ಯಗಳ ಹೊಣೆಗಾರಿಕೆಯೆಲ್ಲಾ ನನ್ನದು. ನಾಗಿ, ನಾನೂ ಮಾನವನು; ನನಗೂ ಹೃದಯವಿದೆ; ಕರುಣೆಯು ಉಳಿದಿದೆ. ನನ್ನ ವೀರ್ಯಕ್ಕೇನೇ ಹುಟ್ಟಿದ ನನ್ನ ಪ್ರತಿ ಮೂರ್ತಿಯಾದ ಹಸುಗೂಸನ್ನು ಕೊಲೆಮಾಡಿಸುವಾಗ ನನ್ನ ಹೃದಯವು ಅದೆಷ್ಟು ವೇದನೆಗೊಳಗಾಗಿದ್ದಿತೆಂಬುದನ್ನು ನನ್ನ ಹೊರತು ಇನ್ನಾರೂ ಅರಿಯಲಾರರು. ಆದರೆ ನನ್ನೀ ನಾಟಕವನ್ನು ಇಷ್ಟರವರೆಗೆ ನಡಿಸಿ, ಈ ಅಧಿಕಾರ ಸ್ಥಾನಮಾನದ ಸವಿಯುಂಡು ಕೊಬ್ಬಿ ಇನ್ನು ಅನ್ಯರೀತಿಯ ಜೀವನವಾರಂಭಿಸುವುದಾದರೂ ಹೇಗೆ? ನಾನು ದೀರ್ಘಕಾಲ ಯೋಚಿಸಿ, ಹಲವು ದಿನಗಳ ತೀವ್ರ ವೇದನೆಯನ್ನನುಭವಿಸಿ ಇದೇ ನಾಟಕವನ್ನು ಕೊನೆಯಂಕದ ವರೆಗೆ ನಡಿಸುವ ನಿರ್ಧಾರ ಮಾಡಿರುವೆನು. ಅದಕ್ಕೆ ಅಡ್ಡಿ ಬಂದಿರುವ ಲಲಿತೆಯ ಕೂಸನ್ನು ಕೊಲ್ಲಿಸುವ ಕಟುಕ ಹೃದಯವುಳ್ಳವನಾದೆನು. ಲಲಿತೆಯು ಗರ್ಭಿಣಿಯೆಂದು ನಾನು ಸಂಚಾರಕ್ಕೆ ಹೊರಡುವ ಮೊದಲೇ ಗೊತ್ತಿದ್ದರೆ ಗರ್ಭಪಾತ ಮಾಡಿಸುತ್ತಿದ್ದೆನು. ನನಗದು ತಿಳಿಯದೆ ಹೋಯಿತು. ನನ್ನೀ ನಾಟಕದಲ್ಲಿ ನೀವೂ ಭಾಗಿಗಳಾಗಿ ನನ್ನೊಂದಿಗೆ ಬಹಳ ಮುಂದುವರಿದಿರುವಿರಿ. ಇನ್ನು ನನ್ನನ್ನು ಕೈಬಿಡುವುದರಿಂದ ಫಲವಿಲ್ಲ. ನಾಗಿ, ನಾನೀಗ ಬಹಳ ಅಡಚಣೆಯಲ್ಲಿರುವೆನು. ನನ್ನ ಪ್ಲೇನೆಲ್ಲಾ ಆಕಾಶ ಕುಸುಮವಾಗಿರುವುದು. ಆದುದರಿಂದ ನಿನಗೆ ಕೊಟ್ಟ ಮಾತನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ಇನ್ನಾದರೂ ನನ್ನಿಂದ ಸಾಧ್ಯವಾದ ಸಹಾಯವನ್ನೆಲ್ಲಾ ನಿಮಗೆ ಮಾಡುವೆನು. ನೀವು ಈ ಸಂಗತಿಯನ್ನೆಲ್ಲಾ ಬಹಳ ರಹಸ್ಯವಾಗಿರಿಸಬೇಕು" ಎನ್ನುವಷ್ಟರಲ್ಲಿ "ಹಾ..........!" ಎಂದು ಆಕಳಿಸಿ ನರಸಿಂಹನು ಮೈಕೊಡಹಿ ಎದ್ದು ನಿಂತನು. "ನರಸಿಂಹ, ಇವರನ್ನು ಮೋಟರ್ ಕಾರಿನಲ್ಲಿ ಅವರ ಮನೆಯಲ್ಲಿ ಬಿಟ್ಟು ಬಾ" ಎಂದರು ಶಿವಾನಂದರು. ನರಸಿಂಹನು ಚಕಿತನಾಗಿ ನಾಗಿ ಲಲಿತೆಯರನ್ನು ಕಣ್ಣಿಟ್ಟು ನೋಡುತ್ತಾ ನಿಂತನು. "ಏನು ನೋಡುತ್ತಿರುವುದು? ಹೇಳಿದ್ದು ಕೇಳಲಿಲ್ಲವೆ?" ಎಂದರು ಶಿವಾನಂದರು. "ಬನ್ನಿ ನಾಗಿ ಹೋಗುವ" ಎಂದು ನರಸಿಂಹ ಮುಂದಾಗಿ ಹೊರಟ. ಅವನ ಹಿಂದೆ ನಾಗಿ ಲಲಿತೆಯರು ಹೊರಟುಹೋದರು

**"ಮಗು, ಲಲಿತ! ನಾನಿನ್ನು ಬದುಕುವ ಹಾಗಿಲ್ಲ! ನಿನ್ನ ಗತಿಯೇನು?"**

(ಮುಂದಿನ ಸಂಚಿಕೆ ನಿರೀಕ್ಷಿಸಿರಿ)

Advertised goods are the best goods.

THE BOMBAY LIFE ASSURANCE Co., LTD.
ESTD. 1908
Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:—*

KOCHIKAR BROTHERS,
*Madras Branch Secretaries.*

BRANCHES AT:

| | | |
|---|---|---|
| P. B. 337 Mount Road, Madras. | Visveswarapuram Circle, Bangalore City. | Soumyalayam Puthiyara, Calicut. |
| Car Street, Mangalore. | Udipi, S. India. | Charni Road, Bombay No 4. |

INSPECTORATE OFFICE AT:
1. Ottapalam, Malabar District. 2. Central Station Road, Trivandrum.

EVIDENCE OF SECURITY & STABILITY
FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

| | |
|---|---|
| Total Assets Over ... ... | Rs. 80,00,000 |
| Life Funds Over ... ... | Rs. 68,00,000 |
| Premium Income Over ... | Rs. 22,54,000 |
| Interest Income ... ... | Rs. 3,16,000 |
| Claims Paid ... ... ... | Rs. 5,75,000 |

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

ದಾರಿಯು ತಡೆಗಟ್ಟಲ್ಪಟ್ಟಾಗ ಸ್ವಾಭಾವಿಕ ಪ್ರವೃತ್ತಿಯು ಪಡಮಾರಿ ಹರಿದು ಹಾವಳಿಮಾಡಿತು. ಇನ್ನೇನು ಮಾಡಲಿ ನರಸಿಂಹ? ಇನ್ನೇನು ಮಾಡಲಿ? ನನ್ನನ್ನು ನನ್ನಷ್ಟಕ್ಕೇನೇ ಬಿಡುತ್ತಿದ್ದರೆ ನನ್ನ ಜೀವನದ ಗತಿಯೇ ಬೇರೆಯಿತ್ತು. ಈಗಲಾದರೂ ಸ್ವಾಭಾವಿಕ ಇಚ್ಛೆಯಂತೆ ನಾನು ನಡೆಯುವಂತಾಗುವುದಾದರೆ ನನ್ನ ಲಲಿತೆಯನ್ನು, ನಾನು ಅತ್ಯಾಚಾರಮಾಡಿ ಮಾನಗೆಡಿಸಿದ ಆ ನಿರ್ದೋಷಿ ಬಾಲೆಯನ್ನು ಮದುವೆಯಾಗಿ....

ನರಸಿಂಹ—ಛೆ! ಛೆ!! ಏನಿದು ಪರಾಕೆ? ಏನು ಹೇಳುತ್ತಿರುವಿರಿ! ನಿಮ್ಮ ಬುದ್ಧಿಯೇ ನಿಮ್ಮ ಸ್ವಾಧೀನವಿಲ್ಲದಂತಾಗಿದೆ ಈಗೀಗ ವಿಪರೀತ ಚಿಂತೆಯಿಂದ!

ಶಿವಾನಂದ—ಸಂಪೂರ್ಣ ವಿವೇಕದಿಂದಲೇ ನಾನೀ ಮಾತುಗಳನ್ನಾಡುವುದು ನರಸಿಂಹ. ನೀನೇನೂ ಗಾಬರಿಪಡಬೇಡ. ನನ್ನ ಹೃದಯವನ್ನೊಮ್ಮೆ ನಿನ್ನ ಮುಂದೆ ಬಿಚ್ಚಿಟ್ಟೆದು. ಅದು ಕೂಡಾ ಕೇವಲ ನನ್ನ ಸಮಾಧಾನಕ್ಕಾಗಿ. ನನ್ನ ಅಂತರಂಗದ ಬೇಗೆಯನ್ನು ಒಂದಿಷ್ಟು ತಣಿಸುವುದಕ್ಕಾಗಿ. ನಿನ್ನೊಡನೆ ನಾನು ಏನು ಹೇಳಿದರೇನು? ನಮ್ಮ ಮಠದ ಆಚಾರ್ಯರೊಡನೆ ಶಿವಜ್ಞಾನ ಸಮಾಜದ ಸಮ್ಮುಖದಲ್ಲಿ, ಹಿಂದೂ ಸಮಾಜದ ಮುಂದೆ ಇದೇನನ್ನೂ ಹೇಳದೆ ದೊಡ್ಡ ನಟನೆ ನಡಿಸಿದಂತಾಯಿತು. ಮತ್ತೇನು? ನೀನೇನೂ ಬೆದರಬೇಕಾಗಿಲ್ಲ ನರಸಿಂಹ. ನಾನಿನ್ನು ಹೊಸ ಜೀವನವನ್ನೇನೂ ಆರಂಭಿಸುವ ಹಾಗಿಲ್ಲ. ಸಮಾಜಕ್ಕೆ ಈ ನಟನೆಯ ಜೀವನವೇ ಬೇಕಾಗಿರುವಾಗ, ಅದನ್ನದು ಸನ್ಮಾನಿಸುತ್ತಿರುವಾಗ, ನಾನೂ ಅದರಲ್ಲಿ ಇಷ್ಟೊಂದು ಮುಂದುವರಿದಿರುವಾಗ ಈಗ ಈ ಅಸ್ವಾಭಾವಿಕ ಜೀವನದ ಮುಸುಕನ್ನು ಹರಿದೊಗೆದು ಈ ಉಚ್ಚಸ್ಥಾನ ಮಾನವನ್ನೆಲ್ಲಾ ತೃಣೀಕರಿಸಿ, ಸಮಾಜದ ದೃಷ್ಟಿಯಲ್ಲಿ ಎಷ್ಟೊಂದು ತುಚ್ಛವಾದರೂ ಸ್ವಾಭಾವಿಕ ಜೀವನವನ್ನು ನಡೆಸುವ ಸಾಹಸಕ್ಕೆ ಕೈಯಿಕ್ಕುವಷ್ಟರ ನೈತಿಕ ಬಲವಾದರೂ ನನ್ನಲ್ಲಿಲ್ಲ ನರಸಿಂಹ. ಸಮಾಜಕ್ಕೆ ಬೇಕಾಗುವ ವರೆಗೆ ನಾನೀ ಕಣ್ಣುಕಟ್ಟಿನ ಜೀವನವನ್ನೇ ಸಾಗಿಸುವೆನು. ಅದಕ್ಕೆ ಅದೇ ಬೇಕಾಗಿರುವಾಗ ನನಗೇನು?

ನರಸಿಂಹ—ಅದೆಲ್ಲಾ ಹಾಗಿರಲಿ ಪರಾಕೆ, ನನ್ನನ್ನೀ ಅಪರ ರಾತ್ರಿಯಲ್ಲಿ ಕರೆಸಿದುದೇಕೆ?

ಶಿವಾನಂದ—ನನಗೆ ನಿದ್ದೆಬರುವುದಿಲ್ಲೆಂದು ಮಾತಾಡುತ್ತಾ ಕುಳಿತುಕೊಳ್ಳಲಿಕ್ಕೆ.

ನರಸಿಂಹ—ಇನ್ನು ನಾನು ಹೋಗಲೆ?

ಶಿವಾನಂದ—ಎಲ್ಲಿಗೆ? ನನಗಿನ್ನೂ ಮಾತಾಡಲಿದೆ?

ನರಸಿಂಹ—ಏನು ಪರಾಕೆ? ಇದೇ ಮಾತಲ್ಲವೇ?

ಶಿವಾನಂದ—ಅಲ್ಲ . ...ಅಲ್ಲ! ಇದೇ ಮಾತಲ್ಲ....... .

ನರಸಿಂಹ—ಏನು ಏನು ಪರಾಕೆ? ನಿಮ್ಮ ಮನಸ್ಸಿನಲ್ಲಿದ್ದುದನ್ನು ಸ್ಪಷ್ಟವಾಗಿ ಹೇಳಬಾರದೆ ನಿಮ್ಮಿ ಸೇವಕನೊಡನೆ?

ಶಿವಾನಂದ—ನಾನು ಹೇಳಿದರೆ ನೀನು ಆ ಪ್ರಕಾರ ಮಾಡುವೆಯಾ?

ನರಸಿಂಹ—ಅದಕ್ಕೇನಡ್ಡಿ ಪರಾಕೆ? ನಾನು ಇಷ್ಟರವರೆಗೆ ನಿಮ್ಮ ಮಾತಿನಂತೆ ನಡೆಯದುದೇನಾದರೂ ಇದೆಯೇ? ನಿಮಗಾಗಿ ನಾನು ಏನು ಮಾಡುವುದಕ್ಕೂ ಸಿದ್ಧನಿರುವೆನು. ನಿಮಗೆ ಸುಖವಾಗುವುದಾದರೆ ಪ್ರಾಣಕೊಡಲೂ ಸಿದ್ಧನೇ ಸರಿ.

ಶಿವಾನಂದ—ಮತ್ತೆ ಹಿಂಜೆಗೆಯಲಾರೆಯಲ್ಲ?

ನರಸಿಂಹ—ಛೆ! ಎಷ್ಟಕ್ಕೂ ಇಲ್ಲ ಪರಾಕೆ. ನಿಮಗೆ ಆ ಸಂದೇಹವೇ ಬೇಡ. ನಾನು ಇಷ್ಟರತನಕ ನಿಮ್ಮ ಮಾತಿನಂತೆ ನಡೆಯದ ಒಂದೇ ಒಂದು ಸಂದರ್ಭವಾದರೂ ಇದೆಯೇ?

ಶಿವಾನಂದ—ಹಾಗಾದರೆ ಮನಬಿಚ್ಚಿ ಹೇಳಲೆ?

ನರಸಿಂಹ—ಅಡ್ಡಿಯಿಲ್ಲದೆ ಹೇಳಿ ಪರಾಕೆ.

BUY ADVERTISED GOODS.

ಶಿವಾನಂದ—ನನ್ನ ಪ್ರತಿರೂಪವೊಂದು ಈ ಶಿವಪುರದ ಜನರೆಲ್ಲರ ಕಣ್ಣೆದುರಲ್ಲಿಯೇ ಬೆಳೆಯುತ್ತಿರುವಾಗ ನಾನು ಸನ್ಯಾಸಿಯಾಗಿರುವುದಾದರೂ ಹೇಗೆ ನರಸಿಂಹ? ಪ್ರತ್ಯಕ್ಷವಾದ ರುಜುವಾತು ಮುಂದಿರುವಾಗ ಸೋಗು ಹಾಕಿಕೊಳ್ಳುವುದಾದರೂ ಹೇಗೆ? ಒಂದೋ ನಾನು ನನ್ನೀ ಸೋಗನ್ನೇ ತೆಗೆದು ಹಾಕಿ ಶಿವಪುರವನ್ನೇ ಬಿಟ್ಟು ಎಲ್ಲಿಗಾದರೂ ಹೋಗಿಬಿಡಬೇಕು. ಇಲ್ಲವಾದರೆ .......

ನರಸಿಂಹ—ಇಲ್ಲವಾದರೇನು ಪರಾಕೆ?

ಶಿವಾನಂದ—ಇಲ್ಲವಾದರೆ ನನ್ನೀ ಸೋಗನ್ನು ಅಲ್ಲಗಳೆಯುವ ಆ ಪ್ರತ್ಯಕ್ಷ ಸಿದ್ಧಾಂತವು ಇಲ್ಲದಂತಾಗಬೇಕು.

ನರಸಿಂಹ—ಅಂದರೆ?

ಶಿವಾನಂದ—ಅಂದರೇನೆಂದು ತಿಳಿಯದೆ ನರಸಿಂಹ? ಈ ನಟನೆಯೆಲ್ಲ ಯಾಕೆ?

ನರಸಿಂಹ—ನಿಜವಾಗಿಯೂ ನಟನೆಯಲ್ಲ ಪರಾಕೆ. ನಾನೇನು ಮಾಡಬೇಕೆಂದು ಸ್ಪಷ್ಟವಾಗಿ ಹೇಳಬಾರದೆ?

ಶಿವಾನಂದ—ಆಹ! ಇನ್ನೂ ಸ್ಪಷ್ಟವಾಗಿ ಹೇಳಬೇಕೆ ನರಸಿಂಹ? (ನಿಟ್ಟುಸಿರು ಬಿಡುವರು.)

ನರಸಿಂಹ—ಯಾಕಿಷ್ಟು ಉದ್ವೇಗ ಬುದ್ಧಿ? ಸಂಗತಿಯೇನೆಂದು ಮನಬಿಚ್ಚಿ ಹೇಳಲಾಗದೇ?

ಶಿವಾನಂದ—ಏನು ಹೇಳುವುದು ನರಸಿಂಹ! ಆಗಲಿ ನನ್ನೀ ಮನಸ್ಸನ್ನು ಕಲ್ಲುಮಾಡಿ, ಒಂದಿಷ್ಟು ಮಾನವತ್ವವಿಲ್ಲದ ದಾನವನೇ ಆಗಿ ಹೇಳುವೆನು, ಸ್ಪಷ್ಟವಾಗಿ ಹೇಳುವೆನು. ನರಸಿಂಹ, ನೀನಾ ಮಗುವನ್ನು ಹೇಗಾದರೂ ಕೊಂದು ಹಾಕಬೇಕು.

ನರಸಿಂಹ—ಏನು, ಮಗುವನ್ನು ಕೊಲ್ಲುವುದೆ? ಪರಾಕೆ........ಪರಾಕೆ! (ದಂಗುಬಡೆದು ಅವಾಕ್ಕಾಗಿ ನಿಂತುಬಿಡುವನು.)

ಶಿವಾನಂದ—ಹೌದು. ನನಗಾಗಿಯಲ್ಲ, ಈ ಸನ್ಯಾಸಿ ಪಟ್ಟಕ್ಕಾಗಿ, ಆದರ್ಶಸ್ಥಾನ ಮಾನಕ್ಕಾಗಿ ನೀನಾ ಪೈಶಾಚಿಕ ಕೃತ್ಯಮಾಡಲೇ ಬೇಕು.

ನರಸಿಂಹ—ಆಗದು, ಅದೊಂದು ಕೆಲಸ ನನ್ನಿಂದಾಗದು ಪರಾಕೆ! ನಾನಾ ಶಿಶು ಹತ್ಯಮಾಡಲಾರೆ! ಕ್ಷಮಿಸಬೇಕು ಬುದ್ಧಿ ಕ್ಷಮಿಸಬೇಕು! ಈ ಸಲ ನನ್ನನ್ನು ಮಾಫಿಬಿಡಬೇಕು.

ಶಿವಾನಂದ—ಆದಾಗದು. ಈ ಕೆಲಸ ನಿನ್ನಿಂದಲ್ಲದೆ ಮತ್ತಾರಿಂದಲೂ ಸಾಧ್ಯವೇ ಇಲ್ಲ. ನೀನೀಗ ಕೊಟ್ಟ ಮಾತಿಗೆ ತಪ್ಪಬಾರದು. ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ನಿನ್ನ ಪ್ರಾಣಕ್ಕನೇ ಸಂಚಕಾರ ಬಂದೀತು.

ನರಸಿಂಹ—ಅಯ್ಯೋ ಪರಾಕೆ! ನಾನೇನು ಮಾಡಲಿ! ಆ ಕೂಸನ್ನು ಹೇಗೆ ಕೊಲ್ಲಲಿ! (ಬಾಯಿಗೆ ಕೈ ಒತ್ತಿಟ್ಟು ಅಳುವನು)

ಶಿವಾನಂದ—ಉಪಾಯ ನಾನು ಹೇಳುವೆನು. ನಿನಗಾ ವಿಷಯದಲ್ಲಿ ಯಾವ ಭೀತಿಯೂ ಬೇಡ ಎಲ್ಲದಕ್ಕೂ ಹೊಣೆಗಾರ ನಾನು ನೀನು ಕೇವಲ ನನ್ನ ಕೈಯ ಉಪಕರಣ ಮಾತ್ರ. ನಿನಗದರಲ್ಲಿ ಯಾವ ಪಾಪವೂ ಇಲ್ಲ. ನಾನು ಸನ್ಯಾಸಿ, ನನಗೆ ಹೃದಯವಿಲ್ಲ,ಯಾವ ಪಾಪದ ಭೀತಿಯೂ ಇಲ್ಲ.

ನರಸಿಂಹ—ಆಗಲಿ ಪರಾಕೆ. ನೀವು ಹೇಳಿದಂತೆ ಮಾಡುವೆನು (ಎಂದು ಎಲ್ಲಾ ಪಾಪವನ್ನೂ ಸ್ವಾಮಿರ ತಲೆಯಮೇಲೆ ಹಾಕಿಬಿಡುವಂತೆ ನರಸಿಂಹನು ದೀರ್ಘ ಶ್ವಾಸಬಿಟ್ಟು ಗೊಂಬೆಯಂತೆ ನಿಂತುಬಿಟ್ಟನು. ಅವನೇನೆಲ್ಲಾ ಮಾಡಬೇಕೆಂದು ಶಿವಾನಂದರು ಅತಿ ರಹಸ್ಯವಾಗಿ ಅವನಿಗೆ ತಿಳಿಸಿದರು.

(ಮುಂದಿನ ಸಂಚಿಕೆ ನಿರೀಕ್ಷಿಸಿರಿ.)

ಬಲ್ಲಿರಾ? ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ---

| ಗುಡಪಿಪ್ಪಲಿ (ಲೀವರ್ ರೋಗಕ್ಕೆ) | ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) | ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ) |
|---|---|---|

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ

ರಾಯಚೂರಲ್ಲಿ ಬರುವ ನವಂಬ್ರ ತಿಂಗಳಲ್ಲಿ ಆಗಲಿರುವ ಅಖಿಲ ಕರ್ನಾಟಕ ಪ್ರಾಂತೀಯ ಆಯುರ್ವೇದ ಪರಿಷತ್ತಿನ ಕಾರ್ಯಕಾರಿ ಮಂಡಲದ ಪರವಾಗಿ ವೈದ್ಯ ಶ್ರೀ। ವಿಟ್ಠಲ ಪ್ರಸಾದರು ಪಂ ತಾರಾನಾಥರ ಕೆಲವು ಶಿಷ್ಯ ವೈದ್ಯರೊಡನೆ ದಯಮಾಡಿಸಿದ್ದರು. ಇವರು ತಮ್ಮ ಸಂಸ್ಥೆಯ ಪರವಾಗಿ ತಂದ ಕಾಣಿಕೆಗಳನ್ನು ಅರ್ಪಿಸುವುದಕ್ಕೆ ಮೊದಲು ಹೀಗೆಂದರು. "ಪಂಡಿತರನ್ನು ನಾನು ೨೦ ವರ್ಷಗಳಿಂದ ಬಲ್ಲೆ. ಹಲವು ಭಾಷಾ ಶಾಸ್ತ್ರ ವಿಜ್ಞಾನಗಳಲ್ಲಿ ಅವರಿಗಿರುವ ಪ್ರೌಢಿಮೆಯು ಎಲ್ಲರಿಗೂ ಗೊತ್ತೇ ಇದೆ. ಆದರೆ ನಾನು ಅವರಲ್ಲಿ ಈ ಎಲ್ಲ ವರ್ಷಗಳಿಂದಲೂ ಮನ್ನಿಸಿದ್ದು, ಅವರ ಸದ್ಗುಣ, ಭೂತದಯೆ, ನಿರ್ಭೀತ ವಾಕ್ಚರ್ಯ. ತಾವು ಆಗಾಗ ಇಟ್ಟುಕೊಂಡ ದೀಕ್ಷೆಗಳಲ್ಲಿ ಅವರಿಗಿರುವ ಅಚಲ ನಿಷ್ಠೆ, ಅವರ ಶಕ್ತಿ-ಪ್ರಭಾವಗಳ ಮೂಲ ಎಂದರೆ ಇವೇ ಗುಣಗಳು. ನಾನು ಮುದುಕನು, ಆದರೂ ಅವರನ್ನು ಅವರ ಮೊದಲ ಯೌವನದಿಂದ ಇಂದಿನ ವರೆಗೂ ಏಕರೀತಿಯಾಗಿ ಆ ಗುಣಗಳಿಗಾಗಿಯೇ ಪೂಜ್ಯರೆಂದು ಮನ್ನಿಸುತ್ತಿದ್ದೇನೆ. ಮತ್ತು ಆ ಗುಣಶಕ್ತಿಯಿಂದಲೇ ಅವರು ನಮ್ಮ ಆಯುರ್ವೇದವನ್ನು ಹಲಬಗೆಯಿಂದ ಉದ್ಧರಿಸಿದ್ದಾರೆ. ಹಲವು ದೇಶಗಳಲ್ಲಿ ಕೀರ್ತಿಗೇರಿಸಿದ್ದಾರೆ. ಅವರಿಗೆ ದೀರ್ಘಾಯುಷ್ಯವನ್ನು ಪರಮಾತ್ಮನು ದಯಪಾಲಿಸಲಿ."

ಪಂಡಿತರ ವಿದ್ಯಾರ್ಥಿಗಳಲ್ಲೊಬ್ಬರಾದ ಮೌಲ್ವಿ ಅಬ್ದುಲ್ ವಹಾಬ್ ಪಿ. ಎಚ್. ಡಿ. Registrar Co-operative Dept; Hyderabad ಇವರು ಪಂಡಿತರಿಗೊಂದು ಹಾರವನ್ನು ಹಾಕಿದರು. ಅದನ್ನು ಪಂಡಿತರು ತೆಗೆದು ಪುನಃ ಅವರಿಗೇ ಹಾಕಿದರು. ಆಗ ಅವರು ಹೀಗೆಂದರು—"ನನ್ನ ಗುರುಗಳು ಹಾಕಿದ ಈ ಪ್ರಾಸಾದಿಕ ಹಾರವು ನನಗೆ ಅವರ, ನನ್ನ ಹಿಂದಿನ ಯೋಗ್ಯತೆಗಾಗಿ ಕೊಟ್ಟ ಬಹುಮಾನವೆಂದು ನಾನು ಭಾವಿಸಲಾರೆ. ಅದು ನನ್ನ ಮುಂದಿನ ಜೀವನಕ್ಕಾಗಿ ಅವರು ಕೊಟ್ಟ ಆಜ್ಞೆ. ನಮ್ಮ ಗುರುಗಳು ನಮ್ಮ ಮಹಮ್ಮದೀಯ ಧರ್ಮ ಸಂಸ್ಕೃತಿ ಸಾಹಿತ್ಯಗಳನ್ನೂ ಚೆನ್ನಾಗಿ ಬಲ್ಲವರು. ಆದುದರಿಂದ ನನ್ನನ್ನು ಹೇಗೆ ಉಪದೇಶಿಸಬೇಕೋ ಹಾಗೆಯೇ ಅವರು ಉಪದೇಶಿಸಿದ್ದಾರೆ. ನಮ್ಮ ಕಾವ್ಯಗಳಲ್ಲಿ ಹೂ ಒಂದು ಲಲಿತ; ಆದರೂ ಸ್ವಲ್ಪ ಕಾಲಿಕ ಜೀವನದ ಸಾಮಾನ್ಯ ಉಪಮಾನವಾಗಿದೆ. ಆದರೆ ಅದಕ್ಕೆ ತನ್ನ ಅಲ್ಪಾಯುಷ್ಯದ ಪರಿವೆಯಿಲ್ಲ. ತನ್ನ ಹೃದಯವನ್ನು ಜಗತ್ತಿನ ಮುಂದೆ ಬಿಚ್ಚಿಟ್ಟು ಅದರೊಳಗಣ ಪರಾಗ ಪರಿಮಳಗಳನ್ನು ಹೊರ ಹೊಮ್ಮುವುದೇ ಅದರ ಮಹತ್ವದ ಸಾಹಸ. ಮಾಸ್ತರರು ನನ್ನ ಕೊರಳಿಗೆ ಹಾಕಿದ ಪ್ರಸಾದದ ಪ್ರತಿಯೊಂದು ಹೂವೂ ಈ ಉಪದೇಶವನ್ನು ಬೀರುತ್ತಿದೆ. ಮತ್ತು ಹಾಗಾಗಿ ನನ್ನಲ್ಲಿ ಎಚ್ಚರಿಕೆ ಆಗಬೇಕೆಂದೇ ಅವರು ನನಗೆ ಈ ಹಾರವನ್ನು ಹಾಕಿರಬೇಕು.

ಆದರೆ ನನ್ನ ಚಿಂತೆಯು ಇಷ್ಟೇ. ಇನ್ನೂ ಹಲವು ವಿದ್ಯಾರ್ಥಿಗಳೊಡನೆ ನಮ್ಮನ್ನು ಅವರು ನಮ್ಮ ಬಾಲ್ಯದಿಂದ ಸುಮಾರು ಮಧ್ಯ ಯೌವ್ವನದ ವರೆಗೆ ತಮ್ಮ ಆದರ್ಶಾತ್ಮಕ ಜೀವನದ ವಾತಾವರಣದಲ್ಲಿಯೇ ಇಟ್ಟುಕೊಂಡು ಬೆಳೆಸಿದರು. ನಾವಿಂದು ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದೇವೆ. ಆದರೆ ಅವರ ಮಾದರಿಯಾದ ಜೀವನದ ಅರ್ಥವನ್ನು ನಾವೆಷ್ಟರ ಮಟ್ಟಿಗೆ ಸಾಧಿಸುತ್ತಿದ್ದೇವೋ ನಮಗೇ ತಿಳಿಯದು. ನಮ್ಮ ಲೋಪಗಳಿಗಾಗಿ ಅವರ ಹೃದಯವು ನೊಂದಿರಬೇಕು. ಅದು ಸಹಜವೇ. ಅದಕ್ಕಾಗಿಯೇ ಈ ಹಾರದ ಮೂಲಕ ಅವರು ನನ್ನನ್ನು ಎಚ್ಚರಪಡಿಸಿರಬೇಕು. ಹೆಚ್ಚೇನೂ ಹೇಳಲಾರೆ, ನಮ್ಮ ಗುರುಗಳ ಜೀವನವೇ ನಮಗೆ ಮಾದರಿಯಾಗಿರಲಿ, ಬೆಳಕಾಗಿರಲಿ! ತಮ್ಮ ಆಯುಷ್ಯವು ಬಹು ದೀರ್ಘವಾಗಿರಲಿ!

# ಪಂ. ತಾರಾನಾಥರ ಜನ್ಮದಿನಾಚರಣೆ.

## — ಪಂಡಿತರ ಬೋಧಪರ ಭಾಷಣ. —

**ಶಿಷ್ಯರ ಹಿತವೇ ಗುರುವಿನ ಹಿತ. ಶಿಷ್ಯರ ಸುಖವೇ ಗುರುವಿನ ಸುಖ. ನಿಜವಾದ ಆನಂದವು ಕಾಡನ್ನು ನಾಡಾಗಿ ಮಾಡುವುದರಲ್ಲಿದೆ.**

(ಪಂಡಿತ ತಾರಾನಾಥರ ಜನ್ಮದಿವಸದ ಉತ್ಸವವು ಅವರ ಇಷ್ಟ ಮಿತ್ರರಿಂದಲೂ ವಿದ್ಯಾರ್ಥಿಗಳಿಂದಲೂ ೧ನೇ ತಾರೀಕಿಗೆ ನಡೆಸಲ್ಪಟ್ಟಿತು. ವೈದ್ಯಗುರುಮಾಳಕರರು ಎಲ್ಲರನ್ನು ಸ್ವಾಗತಿಸಿದ ನಂತರ ಸಭೆಯಲ್ಲಿ ನೆರೆದ ಹಲವರಲ್ಲಿ ಇಬ್ಬರು ಕೊಟ್ಟ ವ್ಯಾಖ್ಯಾನಗಳ ಸಾರಾಂಶಗಳನ್ನೂ ಅವುಗಳಿಗೆ ಪಂಡಿತರು ಕೊಟ್ಟ ಉತ್ತರದ ಸಾರಾಂಶವನ್ನು ಇಲ್ಲಿಕೊಡುತ್ತೇನೆ.)

### ಅನಂತರ—
### ಪಂಡಿತ ತಾರಾನಾಥರು ಹೀಗೆಂದು ಉತ್ತರಕೊಟ್ಟರು.

ಪೂಜ್ಯ ಮಿತ್ರ ವೈದ್ಯ ವಿಟ್ಠಲ ಪ್ರಸಾದರೇ, ಬಂಧುಗಳೇ,

ಜನ್ಮೋತ್ಸವವನ್ನು ಜರಗಿಸುವುದು ಒಂದು ರೂಢಿ. ಇದಕ್ಕೊಂದು ಉದ್ದೇಶವೂ ಇದೆ. ವರ್ಷ ವರ್ಷಕ್ಕೆ ಬರುವ ಈ ಉತ್ಸವ ದಿನವು ತನ್ನ ಗಮ್ಯದ ನೆನಪನ್ನು ಮಾಡುತ್ತದೆ. ಬದುಕಿನ ಧ್ಯೇಯವನ್ನು ಎಷ್ಟರ ತನಕ ಸಾಧಿಸಿರುವೆನೆಂಬುದರ ಸಿಂಹಾವಲೋಕನ ಮಾಡಿಸುತ್ತದೆ. ಆದರೆ, 40-45ನೇ ವರ್ಷ ದಾಟಿದ ಬಳಿಕ ಈ ಉತ್ಸವದಲ್ಲೊಂದು ಹೊಸ ಭಾವವೇ ಮೂಡಿಬರುತ್ತದೆ: ಒಂದೊಂದು ಜನ್ಮೋತ್ಸವವೂ ಸ್ಮಶಾನದ ಕಡೆಗೆ ಸಾಗುವ ಒಂದೊಂದು ಹೆಜ್ಜೆಯನ್ನು ಸೂಚಿಸುತ್ತದೆ. ಸ್ವಾಮಿ, ವಿವೇಕಾನಂದರೇ ಕೊನೆಗೆ ಒಮ್ಮೆ ತನ್ನ ಶರೀರವನ್ನು ನೋಡುತ್ತ "ಓ, ಇದನ್ನು ನೋಡಿದರೆ....ಭಯವೆನಿಸುತ್ತದೆ" ಎಂದು ಉದ್ಗಾರ ಎತ್ತಿದ್ದಾರಂತೆ! ಆದರೆ ಇದು ದೇಹದಮೇಲಿನ ಮೋಹದಿಂದಲ್ಲ ತನ್ನ ಧ್ಯೇಯಸಿದ್ಧಿಯ ಯೋಚನೆಯಿಂದ. ತಾನು ಮೊದಲು ಮಾಡಿದ ಮಹತ್ಕಾರ್ಯವು ಘಟ ಬಿದ್ದ ಮೇಲೂ ಹಾಗೆಯೇ ನಡಿದೀತೋ ಇಲ್ಲವೋ ಎಂಬ ಚಿಂತೆಯಿಂದ. ಇಂದು ನನಗೆ 47 ವಯಸ್ಸು ದಾಟಿದುದರಲ್ಲಿ ನನಗೆ ಹಿಗ್ಗು ಕುಗ್ಗುಗಳಿಲ್ಲ. ಆದರೆ ಆ ವಿಧವಾದ ಚಿಂತೆಯೊಂದು ತಪ್ಪಿದ್ದಲ್ಲ.

ಮಾನವನಿಗೆ ಒಳಗಿನ ಧ್ಯೇಯಪುಷ್ಪವು ಅರಳಿ ಪರಿಮಳಿಸುವುದರಲ್ಲಿ ಆನಂದವಿದೆ. ಆದರೆ ನನಗಷ್ಟೇ ಸಾಲದು. ಇತರರ ಹಿತವೂ ಬೆಳೆಯುತ್ತ ಹೋಗಬೇಕೆಂಬ ಉತ್ಕಟೇಚ್ಛೆ ನನಗೆ. ಒಳಗಿನ ಸಾಧನಾನಂದಕ್ಕೆ ತಕ್ಕಂತೆ ಹೊರಗೂ ಒಂದು ಕರ್ಮರಂಗದಲ್ಲಿ ಬಹಳವಾದ ಪ್ರೇಮವಿದೆ. ಆದೇ ನನ್ನ ಪ್ರೇಮಾಯತನ. ಈ ಪ್ರೇಮ ವಿದ್ಯಾರ್ಥಿ—ಇತ್ಯಾದಿ.

ನನ್ನೊಬ್ಬನ ಸುಖವೇ ನನ್ನ ಸುಖವಲ್ಲ! ನಿಮ್ಮ ಹಿತವೂ ನನ್ನ ಸುಖವೇ. ಈ ದೃಷ್ಟಿಯಿಂದ ನೋಡುವಾಗ ನನ್ನ ಕರ್ಮರಂಗದ ಪ್ರೇಮದಿಂದ ನನಗೆ ಅದರ ಭವಿಷ್ಯದ ಚಿಂತೆಯ ಒಂದು ಮುಳ್ಳು ಚುಚ್ಚುತ್ತಲೇ ಇದೆ. ಅದನ್ನು ಕಿತ್ತೊಗೆಯುವುದು ನಿಮ್ಮ ಕೈಯಲ್ಲಿಯೇ ಹೆಚ್ಚಾಗಿ ಇದೆ. ನಿಮ್ಮ ಜ್ಞಾನ ವೈರಾಗ್ಯ ಕರ್ಮಪ್ರೇಮಗಳು ಬೆಳೆದಂತೆ ನನ್ನಲ್ಲಿಯ ಮುಳ್ಳೂ ಅವಶ್ಯವಾಗಿ ಉದುರಿ ಬೀಳಬೇಕು. ಆದುದರಿಂದ ಅದನ್ನು ಚೂಪಾಗಿ ಬೆಳೆಸುವುದೇ ಆಗಲಿ, ಅಳಿಸುವುದೇ ಆಗಲಿ ನಿಮ್ಮ ಬುದ್ಧಿ—ಹೃದಯ—ಹಸ್ತಗಳನ್ನು ಅವಲಂಬಿಸಿಕೊಂಡೇ ಇದೆ. ಈ ಹೊರಗಣ ಹಬ್ಬಕ್ಕಿಂತ ಆ ಒಳಗಣ ಹಬ್ಬವನ್ನು ನೀವು ಮಾಡಿದರೆ ನನಗೆ ಇಂದೂ ಮುಂದೂ ಹೊರಗೂ—ಒಳಗೂ ಸುಖವಾಗುವುದು. ನನ್ನ ಕರ್ಮರಂಗವು ದಿನೇ ದಿನೇ ನಿಮ್ಮಿಂದ ಬೆಳೆಯುತ್ತಾ ಹೋಗುವದೆಂಬ ಅಭಯವು ನಿಮ್ಮ ಕರ್ಮಪ್ರಮಾಣದಿಂದ ನನಗಾದರೇನೇ ನನಗೆ ನಿಜವಾದ ಆನಂದ. ಈ ಕರ್ಮರಂಗದಲ್ಲಿ ನಾವೆಲ್ಲರೂ ಏಕಹೃದಯರಾಗಿ ದುಡಿಯುವವರಾಗಬೇಕು. ಇದರಲ್ಲಿ ನಿಜವಾಗಿ ನೋಡಿದರೆ ಯಾರೂ ಗುರು ಅಲ್ಲ; ಶಿಷ್ಯರೂ ಅಲ್ಲ. ಅವರವರ ಭಾವನೆಯೇ ಮುಖ್ಯ. "ಜಗತ್ತೆಂಬ ಜಾತ್ರೆಯಲ್ಲಿ ಗುರು ಯಾರು ಶಿಷ್ಯ ಯಾರು"? ಎಂದು ಒಬ್ಬ ಮಹಾಸಾಧು ಹೇಳಿದ್ದಾನೆ. ಆದರೆ ವ್ಯಕ್ತಿಯು ಇನ್ನೊಂದು ವ್ಯಕ್ತಿಯನ್ನು ಯಾವ ದೃಷ್ಟಿಯಿಂದ ನೋಡುತ್ತಾನೋ ಅದೇ ಆ ವ್ಯಕ್ತಿಯ ಹಕ್ಕು ಮತ್ತು ಅಧಿಕಾರ; ಶಿಷ್ಯರಿಗೆ ಗುರುವಿನಲ್ಲಿರುವ ಭಕ್ತಿಯೇ ಗುರುವಿಗೆ ಶಿಷ್ಯರ ಮೇಲಿರುವ ಅಧಿಕಾರ.

ಸುಖವನ್ನು ಯಾರೂ ಬಿಟ್ಟಿಲ್ಲ. ಎಲ್ಲರ ಗಮ್ಯವೂ ಸುಖವೇ. ಆದರೆ ಅದು ಎಂತಹ ಸುಖ? ಮಾನವನ ಗಮ್ಯವಾದ ಆ ಸುಖವು ಆಹಾರ ನಿದ್ರಾದಿಗಳಿಗಿಂತ ಮಿಕ್ಕಿದುದು. ಅದನ್ನು ಪಶುದೃಷ್ಟಿಯಿಂದ ತೂಗಿಸಲಾಗದು. ಮಾನವದೃಷ್ಟಿಯಿಂದಲೇ ನೋಡಬೇಕು. ಮಾನವನಲ್ಲಿ ದೇಹ—ಮನಸ್ಸುಗಳ ನಡುವೆ ಆವರ್ತ ಎಂಬುದೊಂದು ಇದೆ. ಆ ಶಕ್ತಿಯ ವಿಕಾಸದಿಂದಾಗುವ ಸುಖವೇ ಸುಖ. ಅದರ ಬೆಳಕೇ ಬೆಳಕು. ಆ ಬೆಳಕು ನಿಮ್ಮಲ್ಲಿ ವಿಶ್ವಪ್ರೇಮದ ಪುಷ್ಪವನ್ನು ಅರಳಿಸುತ್ತ ಹೋದಂತೆ ನಮ್ಮೊಳಗೆ ಚುಚ್ಚುವ ಮುಳ್ಳೂ ಹೂವಾಗಿ ಅರಳಿ ಪರಿಮಳಿಸುವುದು.

ಮನುಷ್ಯನು ಹೀಗೆ ಎರಡು ಸಾಧನಗಳಿಂದಲೂ ಅರಳಬೇಕು. **ಒಳಗೆ ಧ್ಯಾನ ವಿವೇಕಗಳಿಂದ ಅರಳುವ ಜೀವನ ಪುಷ್ಪಕ್ಕೆ ಹೊರಗಿನ ಕರ್ಮರಂಗ ಸಂಗ್ರಾಮ ಭೂಮಿಕೆಯ ಬಿಸಿಯೂ ಹತ್ತಿದರೆ ಆ ಹೂ ಇನ್ನೂ ಬೇಗನೇ ಅರಳುವುದು.** ಇಂಥ ಹೊರ—ಒಳಗಣ ಸಮನ್ವಯ ಸಾಧನಗಳಿಂದಲೇ 'ಜಗದ್ಧಿತಾಯ ಆತ್ಮನೋ ಮೋಕ್ಷಾಯ' ಎಲ್ಲವೂ ನೆರವೇರಬೇಕು. ಆ ಪೂರ್ವದ ಅಪೂರ್ವ ತಪಸ್ವಿಗಳು ಆಡಿ ಮಾಡಿದ ಧ್ಯೇಯವೇ ಇಂದೂ ನಮಗೆ ಬೇಕಾದುದು. ನೀವು ನನಗೆ ಹಾಕಿದ ಹಾರವು ನನ್ನ ಅಲಂಕಾರವೆಂದು ನಾನು ಭಾವಿಸಲಾರೆ. ನಾನು ಅರಣ್ಯಗಳಲ್ಲಿಯೂ ಗುಹೆಗಹ್ವರಗಳಲ್ಲಿಯೂ ಎಷ್ಟೋ ಕಾಲ ಕಳೆದಿದ್ದೇನೆ. ಹುಲಿ ಹಾವುಗಳ ವಾಸಸ್ಥಾನವಾದ ಅವುಗಳಲ್ಲಿ ನನಗಿದ್ದ ಆನಂದಕ್ಕಿಂತ ಹೆಚ್ಚಾದ ಆನಂದವು ನನಗೆ ಈ ಹಾರ ಮನ್ನಣೆಯಿಂದ ಆಗಲಿಲ್ಲ; ಆಗುವುದಿಲ್ಲ. **ನಿಜವಾದ ಆನಂದವು ಕಾಡನ್ನು ನಾಡನ್ನಾಗಿ ಮಾಡುವ ಸಾಧನದಲ್ಲಿದೆ.** ಈ ಧ್ಯೇಯ ನಿಮಗಿದೆಯೋ? ಹಾಗಿದ್ದರೆ ಈ ಹಾರಕ್ಕೆ ಅಂಗೀಕಾರ: ಇದರಿಂದ ನನಗೆ ತುಷ್ಟಿ, ಪುಷ್ಟಿ, ನಿಮಗೂ ಹಿತ. ನಿಮ್ಮ ಸಾಧನೆಗಳ ಮೂಲಕ ದೇಶಕ್ಕೆ ಹಿತ; ಜಗತ್ತಿಗೆ ಹಿತ.

ಹಾರ ಮನ್ನಣೆಗಳು ನಿಮ್ಮ ಧ್ಯೇಯ ಸಾಧನಗಳ ಸಂಕಲ್ಪ ಸಂಕೇತಗಳಾಗಿರಬೇಕೇ ಹೊರತು ಬರೇ ರೂಢಿಯ ಹುಚ್ಚಾಟವಾಗಿರಕೂಡದು! ಅರ್ಥವಾಗದ ರೂಢಿಯನ್ನೇ ನಡೆಸುವುದರಿಂದ ಹೃದಯವು ಅರಳುವುದಿಲ್ಲ. ಜ್ಞಾನ ಸಂಕಲ್ಪಗಳಿಂದಲೇ ತಪಸ್ಸು ಬೆಳೆಯಬೇಕು. ನನ್ನ ಮಿತ್ರರಾದ ದಿವಂಗತ ಅಬ್ದುಲ್ ಮಜೀದ್ ಶರರ್‌ರವರು ಒಮ್ಮೆ ಹೇಳಿದಂತೆ ನಾವು ಹಾಕಿದ ಹಾರವು ನಮ್ಮ ಕರುಳನ್ನೇ ಕಿತ್ತು ಆದರ್ಶದ ಕೊರಳನ್ನು ಶೃಂಗರಿಸಲಿಕ್ಕೆ ನಮಗಿರುವ ಸಿದ್ಧತೆಯ ಸಂಕೇತವಾಗಿರಬೇಕು. ಅವರ ಆ ಮಾತುಗಳು ಇನ್ನೂ ನನ್ನ ಹೃದಯದಲ್ಲಿ ಸ್ಪಂದಿಸುತ್ತಲೇ ಇವೆ. ಹಾರವು ತಮ್ಮ ಲೋಪಗಳಿಗಾಗಿ ಮಾಡಿದ ಭರ್ತಿಯಾಗಿರಕೂಡದು.

ಒಟ್ಟಿನ ಮೇಲೆ ಹೇಳುವುದಾದರೆ ನಮಗೆ ಬೇಕಾದುದು ಇಷ್ಟೇ. ಆ ಆರ್ಯಧೈರ್ಯ, ಆರ್ಯಸಾಹಸ, ಆರ್ಯವೈರಾಗ್ಯ, ಆರ್ಯವಾತ್ಸಲ್ಯ ಮತ್ತು ಇವುಗಳಿಂದಾಗತಕ್ಕಂಥಾ ಸರ್ವಾಂಗ ವಿಕಾಸ. ಇದೇ ನಮ್ಮ ಹಬ್ಬ. ಶಿಷ್ಯರ ಹಿತವೇ ಗುರುವಿನ ಹಿತ; ಶಿಷ್ಯರ ಸುಖವೇ ಗುರುವಿನ ಸುಖ!


ರೋಲ್ಡ್ ಗೋಲ್ಡ್, ನಿಕ್ಕಲ್
ಬೆಳ್ಳಿಯ, 9 ಕ್ಯಾರಟಿನ ಗಟ್ಟಿ
ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ
ಟಾಯಂ ಪಾಕೆಟ್ ವಾಚು ಮತ್ತು
ಟಾಯಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.

*The Manager,*
**The Silver Jubilee Watch Co,**
*Post Box No. 571, BOMBAY.*

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ಸಾಫರ್ ಪೋರಿನ ತೋಟಿ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

**Bihar Nursery,**
**P. O. Bihar**
*Nursery (Darbhanga)* **BIHAR**

## ಕಿರಿಯರ ಪ್ರಪಂಚದ

**ಪುಸ್ತಕಗಳು.**

| | | | | |
|---|---|---|---|---|
| ೧ | ನಾಟಕಕಥೆಗಳು | ೦ | ೨ | ೦ |
| ೨ | ಮುಂದಿನ ದೇವರು | ೦ | ೨ | ೦ |
| ೩ | ಸ್ವತಂತ್ರ ಜೀವನೋಪಾಯ | ೦ | ೨ | ೬ |
| ೪ | ಕುಶ-ಲವ | ೦ | ೪ | ೦ |
| ೫ | ಸಂಶಯ ಪಿಶಾಚಿ | ೦ | ೬ | ೦ |
| ೬ | ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ೭ | ಮಧುವನ | ೧ | ೮ | ೦ |
| ೮ | ವ್ಯಭಿಚಾರಿಣಿ ಯಾರು? | ೦ | ೮ | ೦ |
| ೯ | ಹೆಂಡ್ತಿ ಗಂಡನಾದರೆ! | ೦ | ೪ | ೦ |
| ೧೦ | ಪುರುಷವಧು! | ೦ | ೪ | ೦ |

**ಕಿರಿಯರ ಪ್ರಪಂಚ, ಉಡುಪಿ.**

## ಭಾಷಾಂತರಕಾರರು

**ದೊರೆಯದೆ ಹೋಗಾಡುತ್ತಿರೇಕೆ?**

ಇನ್ಸೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

**'ಟ್ರಾನ್ಸ್‌ಲೇಟರ್,'**
*C/o* **'ಕಿರಿಯರ ಪ್ರಪಂಚ,'**
**ಉಡುಪಿ.**

## WANTED

A clerk strong in English & Kanarese with knowledge of Typewriting and Office work. Apply stating age qualification and minimum salary reqd. The selected candidate will be required to give a security of Rs. 250/-.

'XX'
**C/o NAVAYUGA,**
UDIPI.

ವಾರ] 'ನವಯುಗ' [ಪತ್ರಿಕೆ

| | |
|---|---|
| ವಾರ್ಷಿಕ ಚಂದಾ | ರೂ. ೩—೪—೦ |
| ೬ ತಿಂಗಳಿಗೆ | ರೂ. ೧—೧೨—೦ |

ನಮ್ಮ ಜರಿ ಪೀತಾಂಬರ, ರೇಷ್ಮೆ ಮಡಿಗಳಿಗೆ ಗಮನಕೊಡಿರಿ.

## S. U. N. & CO. *Choukhamba, Benares City.*

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಷ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಅಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಷ್ಮೆ ಸೀರೆಗಳೂ, ಖಣ, ಮಡಿ ಕದಪಾನ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳೆ, ಛಾವಳಿ, ನಾಮಗಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55 ಪಡಲು ಸಾದಾ 16 ಮೊಳದ ಶೀರೆ 1 ಕ್ಕೆ ರೂ. 16 ರಿಂದ ರೂ. 35 ರ ವರೆಗೆ, ಅರೆ ಕಡಮೆ 16 ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ. 18, ಖಣ 1 ಕ್ಕೆ ರೂ. 1½ ರಿಂದ ರೂ. 10 ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

**ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ,** ಚೌಕಂಬಾ, ಬೆನಾರಿಸ್, ಕಾಶಿ

## ಎಚ್. ಎಸ್. ಮಿಯಾಜಿವಾಲಾ ಬ್ರದರ್ಸ್

**ಬೊಂಬಾಯಿ.**

ಚಿನಿವಾರ ಉಪಕರಣಗಳ ಬೊಂಬಾಯಿಯ
ಸುಪ್ರಸಿದ್ಧ ಅಂಗಡಿ.

**ಕುರಂಪದ ಕಡ್ಡಿ, ಕುರಂಪದ ಕಾಗದ, ಪ್ರತಿಯೊಂದು ವಿಧದ ಅರ, ಸರಿಗೆಯ ಬ್ರಶ್ಶು, ತೂಕುಮಾಡುವ ಗರಗಸವೇ ಮೊದಲಾದ ಚಿನಿವಾರ ಕೆಲಸಕ್ಕೆ ಬೇಕಾಗುವ ಯಾವತ್ತೂ ನವನವ ಸಾಮಾನುಗಳು ನಮ್ಮಲ್ಲಿ ಸ್ಟೋಕ್ ಇರುತ್ತವೆ.**

**ಒಮ್ಮೆ ಆರ್ಡರುಕೊಟ್ಟು ಪರೀಕ್ಷಿಸಬೇಕಾಗಿ ವಿನಂತಿ**

ಪಟ್ಟಣದ ಹೊರಗಣ ನಮ್ಮ ಗಿರಾಕಿಗಳ ಕುರಿತು
ನಾವು ವಿಶೇಷ ಜಾಗ್ರತೆ ತೆಗೆದುಕೊಳ್ಳುತ್ತೇವೆ.

H. S. Miyajiwala Bros.
*114 Lohar Chawl,* BOMBAY
ಪತ್ರವ್ಯವಹಾರಗಳನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.


# WANTED

Applications are invited from energetic young men for the posts of a **TRAFFIC INSPECTOR** and an assistant **TRAFFIC INSPECTOR** carrying a salary of Rs. 25/- to 30/- and Rs. 20/- to 25/- per month respetcively and a consolidated travelling allowance of Rs. 15/- per month each. Applicants should have studied up to VIth Form. Preference will be given to **GRADUATES**.

***Applications should be made to the following address—***

JOINT MANAGERS,
**The Combined Booking Agency, Mangalore.**

## The Coondapoor Bank, Ltd.,

Head Office:- **Coondapoor**. Branch Office:-**Brahmavar**.

**Beg to announce that a new Branch has been opened at SHANKARANARAYANA on 4-6 37.**

## ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿ ಜೂನ್ ತಾ.4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.

**ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ.ಶೆ 4,**
**ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ. 4.**
**6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,**
**1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%.**
**2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ.
ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

**Halsnad Soorappayya,** ಚೆಯರ್‌ಮೇನ್. **N. Sheshagiri Rao,** ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
**ಕೊಡ್ಗಿ ಬಿಲ್ಡಿಂಗ್, ಕುಂದಾಪುರ.**

ನೀವು ಓದಿರುವಿರಾ?
**ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?**

## ಅಡ್ಡಬಳಿದ ಗಿಡ್ಡಿಯ ಮದುವೆ

**(ಕ್ರಯ ಬರೇ ಒಂದಾಣೆ)**

## ಮುದುಕನ ಹೆಂಡತಿ ಥಕಥೈರಾದೆ

**(ಕ್ರಯ ಬರೇ ಒಂದಾಣೆ)**

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ
ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ
ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ
ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**
ಶ್ರೀ ಕೊರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ
**ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.**

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರೆ ಆಣೆ ಸ್ಟಾಂಪು ಕಳುಹಿಸಬೇಕು.

**NAVABHARAT BOOK DEPOT
UDIPI**

ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ.
ಬೆಲೆ ೦—೪—೦

# ಪುರುಷವಧು

ನಕ್ಕುಷ್ಟು ನಗಿಸುವ ಏಕಾಂಕ ಪ್ರಹಸನ.
ಕಿಂಯ.ರ ಪ್ರಪಂಚ, ಉಡುಪಿ

## SUPPLY AGENCY LTD.
## UDIPI

| | |
|---|---|
| Authorised Capital .... | Rs. 1,00,000/- |
| Subscribed & Paid up Capital | Rs. 29,720/- |

**ಈ ಕೆಳಗಿನ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.**

| | | | | |
|---|---|---|---|---|
| 3 | ತಿಂಗಳಿಂದ | 6 | ತಿಂಗಳ ವರೆಗೆ | 4½% |
| 7 | ,, | 9 | ,, | 5% |
| 10 | ,, | 12 | ,, | 5½% |
| 13 | ,, | 24 | ,, | 6¼% |

**ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು ಅಥವಾ ಪತ್ರವ್ಯವಹಾರ ಮಾಡಬಹುದು.**

ಸಪ್ಲೈ ಏಜೆನ್ಸಿ ಲಿಮಿಟೆಡ್
ಉಡುಪಿ
1—8—1937

**ಎಸ್. ಯು. ಪಣಿಯಾಡಿ,**
ಮೆನೇಜಿಂಗ್ ಡೈರೆಕ್ಟರ್.

ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ .... .... .... | 3 | 0 | 0 |
| ಚಂದ್ರಗುಪ್ತ .... .... .... | 1 | 0 | 0 |
| Buddhadeva .... .... .... | 0 | 8 | 0 |
| ಮಧುವನ .... .... .... | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ .... .... | 0 | 8 | 0 |
| ಸರಸ್ವತಿ .... .... .... | 0 | 8 | 0 |
| ಗೀತೆಯ ಕೈಗನ್ನಡಿ .... .... .... | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) .. | 0 | 4 | 0 |
| ಕೃಷ್ಣಸಂಧಾನ .... .... .... | 0 | 8 | 0 |
| ತುಳು ವ್ಯಾಕರಣ .... .... .... | 0 | 8 | 0 |
| ಸತೀ ಕಮಲೆ .... .... .... | 0 | 6 | 0 |
| ಸತ್ಯನಾರಾಯಣ ಕತೆ .... .... | 0 | 8 | 0 |

ಇದಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
**ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.**

ತುಳುನಾಡ್ ಪ್ರೆಸ್, ಉಡುಪಿ.

USE
## *SUVASINI AGARBATHIES*
(REGISTERED)

**SRI BHARATHA VASTU MANDIRA, UDIPI.**


Printed by P. VENKATARAMANACHARYA for & on behalf of SUPPLY AGENCY LTD , at THULUNAD PRESS, UDIPI and Published by K H SHETTY at "NAVAYUGA" OFFICE UDIPI

Registered No. M. 3618

ಒಂದಾಣೆ

NAVAYUGA
A Nationalist Kanarese Weekly, UDIPI, S. I.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc.
*APPLY TO THE MANAGER*

# ನವಯುಗ

TO LET
FOR RATES
APPLY TO THE
MANAGER.
ಜಾಹೀರಾತಿಗೆ
ಸ್ಥಳ
ದರಕ್ಕೆ ಬರೆಯಿರಿ.

VOL. XVI-NO. 50 — 19-8-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ಕಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ ] ಉಡುಪಿ, ಗುರುವಾರ ೧೯ ಅಗೋಸ್ತು, ೧೯೩೭ [ಸಂಚಿಕೆ ೫೦

THE

# Canara Industrial & Banking
## SYNDICATE, LIMITED.

[INCORPORATED IN BRITISH INDIA]

**ESTD:]** **[1925**

**BRANCHES:**

1 BOMBAY
2 MANGALORE
3 UDIPI
4 KARKALA
5 KANHANGAD
6 HUNGARCUTTA
7 BRAHMAVAR
8 COONDAPOOR
9 UPPINANGADI
10 KASARGODE
11 PAYYANUR
12 TALIPARAMBA
13 CANNANORE
14 GADAG
15 HUBLI
16 BANGALORE CITY
17 SAGAR
18 BYADGI
19 KARWAR
20 HONAVAR
21 SIRSI
22 ANKOLA
23 KUMTA
24 BHATKAL
25 NANDYAL
26 PRODATTUR
27 TADPATRI
28 BELGAUM
29 HOSPET
30 ADONI
31 BELLARY

*Head Office:*
"MUKUNDA NIVAS"
UDIPI, (S. I.)

*MEMBER:* RESERVE BANK OF INDIA
*MEMBER:* CLEARING HOUSE, BOMBAY

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,74,790 |
| Total resources exceed | „ 46 lakhs |

UDIPI,
*27th July 1937.*

**P. A. Pai Bros.,**
*Managing Agents.*

# ನ್ಯೂ ಕೋಮಲ ವಿಲಾಸ ಹೋಟೆಲ್

**91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ**

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

## ಅಮೃತಾಂಜನ

— ಡಿಪೋವಿನ ರಿಂಗ್‌ಸರ್ನ್ ಮುಲಾಮು —

ಇಷ್ಟರ ವರೆಗಣ ನಮ್ಮ
**ವಿಲಿಯಮ್ ಎಂಡ್ ಕೋ ರವರ**
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕ್‌ಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

**ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'**

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿನಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

**ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.**

---

## ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
**೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

**ಡಾ. ಎ. ಎಸ್. ಮೂರ್ತಿ,**
**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**

---

DIAMONDS! **DIAMONDS!!**

## K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

**ಕೆ. ರಾಮಚಂದ್ರ ಕೃಷ್ಣ ಶೇಟ್,**
**ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.**

---

## ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ಪರ್ಣಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

## ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
**"ಯೋಗೀಶ್ವರರ ಶಕ್ತಿಸಾಹಸ"**
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

**ಪತ್ತೆ:—ಪಂಡಿತ್ ಎ. ವಿ. ಆರಮುಮ್**
**ಚಿಕಾಕೋಲ್**

---

## ಕುಶಲವ

**(ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾಗಿದೆ)**

ಹಳೆಯ ಕಥೆಯನ್ನು ಹೊಸ ಮಾದರಿಯಲ್ಲಿ ಎರಕಹೊಯ್ದ
ಪೌರಾಣಿಕ ನಾಟಕವಿದು. ಬೆಲೆ ಬಹು ಕಡಿಮೆ.

**ಪುಟ ೬೨ . . . . ಬೆಲೆ ೦—೪—೦.**

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ಬರೆಯಿರಿ—

**ನವಭಾರತ ಬುಕ್ ಡಿಪೊ, ಉಡುಪಿ.**

---

## ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಕಳೆದ ಜುಲಾಯಿ ತಿಂಗಳಲ್ಲಿ ಪ್ರಾರಂಭವಾಗಿದೆ. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮುಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "**ಪ್ರೊಸ್‌ಪೆಕ್ಟಸ್**"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್
**ಪ್ರೇಮ ವಿದ್ಯಾಪೀಠ**

ತುಂಗಭದ್ರಾ
೧೦—೭—೧೯೩೭

---

ಉಡುಪಿಯ ಆದರ್ಶ ಉಪಹಾರಗೃಹ !

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !**
**ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ !** ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ !**
**ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳಿಗಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**
**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಕರ್ಣಾಟಕದ ಸಾಹಸ! ಕರ್ಣಾಟಕದ ಕೀರ್ತಿ!!

# ಸೇವೆ ಮತ್ತು ಗೆಲುವು

ಸೇವೆಯೇ

# ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿಯ

# ಪರಮಧ್ಯೇಯ

## ಸೇವೆಯೇ ಅದರ ಗೆಲುವಿನ ಗುಟ್ಟು

**ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು, ಆಡಳಿತ ಮಂಡಳಿಗಿರುವ ಉತ್ಸಾಹವೇ 'ಮೈಸೂರು' ಅಭ್ಯುದಯದ ಜೀವಾಳ.**

**ಕಂಪೆನಿಯು** ಸೇವೆಗಾಗಿಯೇ ನಿರಂತರವೂ ನೂತನ ಮಾರ್ಗಗಳನ್ನು ಹುಡುಕುವುದರಲ್ಲಿಯೂ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಳ್ಳುವುದರಲ್ಲಿಯೂ ನಿರತನಾಗಿದೆ. ಕಂಪೆನಿಯು ನಾಡಿಗರೆಲ್ಲರ ಸಹಾನುಭೂತಿಯನ್ನು ಕೋರಿ. ಅವರಿಂದ ಸೇವೆಗಾಗಿ ಹೆಚ್ಚಿನ ಕರೆ ಬರಲೆಂದು ಆಗ್ರಹಪೂರ್ವಕವಾಗಿ ಬೇಡುವುದು.

**ಅದು ಬಾಳಿರುವುದು ಸೇವೆಯಿಂದ; ಬಾಳುವುದು ಸೇವೆಗಾಗಿಯೇ.**

**— ಇಂದಿನ ಕೆಲವು ಅಂಶಗಳು—ಅಂಕೆಗಳು —**

| | |
|---|---|
| ಅಧಿಕೃತ ಷೇರು ಬಂಡವಾಳ ರೂ ೩,೦೦,೦೦೦ | ಇಂಡಿಯಾ ಸರಕಾರದ ಠೇವಣಾತಿಯ ಬೆಲೆ ರೂ. ೨೫,೦೦೦ |
| ಹೊರಹಾಕಿದ ಬಂಡವಾಳ ರೂ. ೨,೦೦,೦೦೦ | ಜೀವ ವಿಮಾ ನಿಧಿ ರೂ. ೧೭,೨೨೧-೪-೪ |
| ಚಂದಾ ಆದ ಬಂಡವಾಳ ರೂ. ೧,೪೯,೬೦೦ | ಸಾಧಿಸಿದ ಉದ್ಯಮ ರೂ. ೧೦,೬೭,೪೫೩ |
| ತೆತ್ತ ಬಂಡವಾಳ ರೂ. ೬೫,೦೦೦ | ಪೂರ್ಣವಾದ ಉದ್ಯಮ ರೂ. ೭,೬೫,೩೪೫ |
| ಷೇರುದಾರರ ಮೇಲಣ ನಿಧಿ ರೂ. ೮೪,೯೦೦ | ಪ್ರೀಮಿಯಂ ಆದಾಯ ರೂ. ೫೫,೨೦೦ |

**ಆಸ್ತಿ ರೂ. ೧ ಲಕ್ಷಕ್ಕೆ ಮೀರಿದೆ**
**ಮೂರನೇ ವರ್ಷದ ಡೈರೆಕ್ಟರುಗಳ ಅಂಗೀಕೃತವಾದ ವರದಿಯ**
**ಕೆಲವು ಮುಖ್ಯಾಂಶಗಳು.**

(೧) ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ೭೦ರಷ್ಟು ಏರಿದೆ. (೨) ಹೊಸ ಉದ್ಯಮವು ಶೇಕಡ ೬೫ರಷ್ಟೂ, ಪೂರ್ಣವಾದ ಉದ್ಯಮವು ಶೇಕಡ ೫೩ರಷ್ಟೂ ಏರಿದೆ. (೩) ಷೇರುಗಳು ಸರಿಬೆಲೆಗೆ ಮಾರಾಟವಾಗುತ್ತಿವೆ (೪) ಹೆಚ್ಚಿಸಿರುವ ಷೇರು ಬಂಡವಾಳಕ್ಕೆ ಚಂದಾ ಕೊಡಲು ಸಾರ್ವಜನಿಕರು ನಾನು ತಾನೆಂದು ಮುಂದೆ ಬಂದಿರುವರು. (೫) ಉದ್ಯಮವು ಅಧಿಕವಾಗುತ್ತಿರುವ ಸಮಯದಲ್ಲಿಯೇ ಖರ್ಚಿನ ಪ್ರಮಾಣವು ತಗ್ಗುತ್ತಲಿದೆ (೬) ರದ್ದಾದ ಉದ್ಯಮದ ಪ್ರಮಾಣವು ತೀರ ಕಡಿಮೆಯಿದ್ದು, ಸಾಧಿಸಿರುವ ಉದ್ಯಮದ ಶ್ರೇಷ್ಠತರಗತಿಯನ್ನು ಸೂಚಿಸುತ್ತಲಿದೆ. ಹಾಗೂ ಆದರ ಶ್ರೇಷ್ಠತೆಯನ್ನು ಕಂಪೆನಿಯು ಇದುವರೆಗೆ ಭರಿಸಬೇಕಾಗಿ ಬಂದ ಕ್ಲೈಮುಗಳು ಸ್ಥಿರೀಕರಿಸುತ್ತವೆ.

**ಕಾರ್ಯ ಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.**

**'ಮೈಸೂರು'** ಆದರ್ಶ ಸಂಸ್ಥಾನದ ಆದರ್ಶ ಜೀವವಿಮಾ ಸಂಸ್ಥೆಯೆನಿಸಿ, ಮೈಸೂರು ದೇಶದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕಾರ್ಯ ನಡೆಯಿಸುತ್ತಿದ್ದಾಗ್ಯೂ ಪ್ರಥಮ ವರ್ಷದಲ್ಲಿಯೇ ಇಡೀ ಕರ್ಣಾಟಕಕ್ಕೇ ಅಭೂತಪೂರ್ವವಾದ ಉದ್ಯಮವನ್ನು ಸಾಧಿಸಿದೆ. ಈ ಕೀರ್ತಿ ಪತಾಕೆ ಹಿಡಿದು—ಈ ಅನುಭವ ಬೆಂಬಲದಿಂದ—ಕರ್ಣಾಟಕದ ಇತರ ಭಾಗಗಳಲ್ಲೂ, ಬ್ರಿಟಿಷ್ ಇಂಡಿಯ, ಬರ್ಮಾ ಮತ್ತು ಸಿಲೋನ್‌ಗಳಲ್ಲೂ, ವಿಜಯಿಯೆನಿಸಲು ಮುಂದಡಿ ಇಟ್ಟಿದೆ.

**ಬೇಕು!** ಕರ್ಣಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯ ಬರ್ಮಾ ಸಿಲೋನ್‌ಗಳ ಎಲ್ಲ ಪ್ರಾಂತ್ಯಗಳಲ್ಲೂ ಕೇಂದ್ರ ಸ್ಥಳಗಳಲ್ಲೂ ಏಜಂಟರುಗಳೂ, ಸ್ಪೆಷಲ್ ಏಜಂಟರುಗಳೂ, ಚೀಫ್ ಏಜಂಟರುಗಳೂ, ಆರ್ಗನೈಜರುಗಳೂ ಬೇಕು. ಸಂಬಳದ ಮತ್ತು ಕಮಿಷನ್ ಅಥವಾ ಇವೆರಡರ ಮೇಲೂ ಕೆಲಸಮಾಡಲವಕಾಶವುಂಟು. ಪ್ರತಿನಿಧಿಗಳಾಗಲಿಚ್ಛಿಸುವವರು ಕಂಪೆನಿಗೆ ಅವರು ಕೊಡುವ ಉದ್ಯಮದ ಭರವಸೆಯನ್ನೂ ಮತ್ತು ಅವರ ಕಾರ್ಯಕ್ಷೇತ್ರಗಳನ್ನೂ ತಿಳಿಸುವುದು.

**ಹೆಚ್ಚು ವಿವರಗಳಿಗೆ:—**

ಜನರಲ್ ಮ್ಯಾನೇಜರ್,

ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

"ನಾಗೇಶ್ವರ ಬಿಲ್ಡಿಂಗ್ಸ್", ಶ್ರೀ ನರಸಿಂಹರಾಜಾ ರೋಡ್, ಬೆಂಗಳೂರು ಸಿಟಿ.

# ಸಮಾಚಾರ ಸಂಗ್ರಹ: ಚೀನಾ ಜಾಪಾನು ಯುದ್ಧ, ಅಂಡಮಾನ್ ದಿನಾಚರಣೆ, ಹಿಂದೀ ವಿದ್ಯಾರ್ಥಿಯ ಅತ್ಯಾಚಾರ, ನರಿಮನ್ ಪಟೇಲರ ವಾದ, ಒಕ್ಕಲುಗಳಿಗೆ ಸಹಾಯ.

### ಚೀನಾ ಜಾಪಾನು ಯುದ್ಧ
### ವಿಮಾನಧಾಳಿಯ ಹಾವಳಿ

ಈಗ ಚೀನಾ ಜಾಪಾನುಗಳೊಳಗೆ ಮಹಾಯುದ್ಧವೇ ಆರಂಭವಾಗಿರುವುದೆಂದು ಹೇಳಬಹುದು. ಚೀನದ ರಾಷ್ಟ್ರೀಯ ಸರಕಾರದ ಸೈನಿಕರು ಜಾಪಾನ್ ಸೇನೆಯನ್ನು ಎದುರಿಸಹತ್ತಿರುವರು. ಯಾಂಗ್‌ಟ್ಸಿ ನದಿಯ ಪೂಸಂಗಿಗೆ 20ಜಾಪಾನ್ ಯುದ್ಧ ಹಡಗುಗಳು ಬಂದಿರುವವು. ಈ ಮೊದಲೇ 12ಯುದ್ಧ ನಾವೆಗಳು ಬಂದಿದ್ದುವು. ನಾನ್ಕೋ ಎಂಬಲ್ಲಿ ಚೀನೀ ರಾಷ್ಟ್ರೀಯ ಸರಕಾರದ ಮತ್ತು ಜಾಪಾನ್ ಸೈನಿಕರೊಳಗೆ ಪ್ರಥಮವಾಗಿ ಹೋರಾಟ ನಡೆದು ಜಾಪಾನರು ಕಿಚ್ಚಿಟ್ಟಿಸುವ ಬೋಂಬೆಸೆದು ನಾನ್ಕೋ ಪಟ್ಟಣವು ಸುಟ್ಟುಹೋಗಿರುವುದು. ಈ ಪಟ್ಟಣದ ಬಳಿಯ ರೈಲ್ವೇ ಮಾರ್ಗವನ್ನು ಚೀನೀಯರು ಸಿಡಿಮದ್ದಿನಿಂದ ನಾಶಮಾಡಿರುವರು.

ಉತ್ತರ ಚೀನದ ಪ್ರಾಮುಖ್ಯ ಮತ್ತು ಇಡೀ ಲೋಕದಲ್ಲೇ ಅತ್ಯಂತ ದೊಡ್ಡ ಪಟ್ಟಣಗಳಲ್ಲೊಂದಾದ ಶಾಂಘಾಯಿಯನ್ನು 100,000ಚೀನೀ ಸೈನಿಕರು ಆವರಿಸಿರುವರು. ಪಟ್ಟಣದೊಳಗೆ 10,000ಸಶಸ್ತ್ರ ಮಿಲಿಶಿಯ ಸೈನಿಕರು ಪಹರೆನಡಿಸುತ್ತಿರುವರು. ಶಾಂಘಾಯಿ ಬಂದರಿನಲ್ಲಿ ಜಾಪಾನ್ ಯುದ್ಧನಾವೆಗಳು ಬಂದುನಿಂತಿರುವವು. ಇದೇ ತಾ. 13ರಲ್ಲು ಶಾಂಘಾಯಿಯ ಉತ್ತರದಲ್ಲಿ ಚೀನೀ ಜಾಪಾನ್ ಸೈನಿಕರೊಳಗೆ ಹೋರಾಟ ನಡೆದಿರುವುದು. ಇತ್ತಂಡದವರೂ, ಪ್ರತಿಪಕ್ಷೀಯರು ಮೊದಲು ಗುಂಡೆಸೆದುದೆಂದು ಸಾಧಿಸಹತ್ತಿರುತ್ತಾರೆ. ಶಾಂಘಾಯಿಯ ಪರಿಸ್ಥಿತಿಯು ಪ್ರಕ್ಷುಬ್ಧವಾಗಿದೆ. ಚೀನೀಯರು ಶಾಂಘಾಯಿಯ ಸುತ್ತಲೂ ಕಂದಕ ತೋಡಿ, ಸರಿಗೆ ಬೇಲಿಹಾಕಿ ಭದ್ರಗೊಳಿಸುತ್ತಿದ್ದಾರೆ. ಸಾರ್ವತ್ರಿಕವಾದ ಯುದ್ಧವು ಆರಂಭವಾದ ಪಕ್ಷದಲ್ಲಿ ಚೀನವು ಕೂಡಲೆ ಲೀಗ್ ಓಫ್ ನೇಶನ್ಸಿಗೆ ವಿನಂತಿಮಾಡಿಕೊಳ್ಳಲಿರುವುದೆಂದು ತಿಳಿದು ಬರುತ್ತದೆ ಶಾಂಘಾಯಿಯ ಅಂತರ ರಾಷ್ಟ್ರೀಯ ವಸಾಹತನ್ನು ಕಾಪಾಡಲು, ಇಂಗ್ಲೆಂಡು, ಅಮೇರಿಕ ಮೊದಲಾದ ದೇಶಗಳಿಂದ ಯುದ್ಧನಾವೆಗಳು ಕಳುಹಿಸಲ್ಪಟ್ಟಿರುತ್ತವೆ.

ಜಾಪಾನ್ ಯುದ್ಧ ಹಡಗುಗಳು, ಶಾಂಘಾಯಿ ಮತ್ತು ಪೂಸಂಗ್ ಪಟ್ಟಣಗಳ ನಡುವೆ, 5ಮಿಲ್ಯ ಡೋಲರು ವೆಚ್ಚಮಾಡಿ ಇತ್ತಲಾಗಿ ಕಟ್ಟಲ್ಪಟ್ಟಿರುವ ಧಕ್ಕೆಯನ್ನು ನಾಶಮಾಡುತ್ತಿರುವವು. ತಾ. 13ರಲ್ಲು ಅಲ್ಲಲ್ಲಿ ಚಿಕ್ಕ ಹೋರಾಟಗಳು ನಡೆದಿರುವವು ಚೀನೀಯರು ಜಾಪಾನ್ ಸೈನಿಕರ ವಸತಿಯ ಮೇಲೆ ಧಾಳಿ ನಡಿಸಿದಾಗ ಜಾಪಾನರು, ಬೋಂಬು, ಮಿಶನ್ ತೋಪುಗಳಿಂದದನ್ನುಎದುರಿಸಿದರು. ಶಾಂಘಾಯಿಯ ಉತ್ತರದ ಜಿಲ್ಲೆಗಳಿಂದ ಸಾವಿರಾರು ಜನರು ತಮ್ಮ ಮನೆಮಾರು ಬಿಟ್ಟು ದಕ್ಷಿಣಕ್ಕೆ ಹೋಗುತ್ತಿರುವರು.

ಚೀನದ ಕೇಂದ್ರ ಪಟ್ಟಣವಾದ ನಾನ್ಕಿಂಗಿನ ಮೇಲೆ ಜಾಪಾನರು ಧಾಳಿನಡಿಸಬಹುದಾದ್ದರಿಂದ ಅದನ್ನು ಮೇದ್ರಿದಿನಂತೆಯೇ ಭದ್ರಪಡಿಸುವ ಪ್ರಯತ್ನವು ಭರದಿಂದ ನಡೆದಿದೆ. ಪಟ್ಟಣದೊಳಗೆಲ್ಲಾ ದೊಡ್ಡ ದೊಡ್ಡ ಕಂದಕಗಳು ತೋಡಲ್ಪಟ್ಟವೆ. ವಿಮಾನ ಭೇದಕತೋಪುಗಳನ್ನು ಅಲ್ಲಲ್ಲಿಸ್ಥಾಪಿಸಲಾಗಿದೆ ರಾಷ್ಟ್ರೀಯ ಸರಕಾರದೊಳಗಿರುವ ವೈಷಮ್ಯವನ್ನೆಲ್ಲಾ ಮೂಲೆಗೊತ್ತಿ ದೇಶದ ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಒಕ್ಕಟ್ಟಿನಿಂದ ಕಾದಿ ಪ್ರಾಣವನ್ನರ್ಪಿಸುವ ಪ್ರತಿಜ್ಞೆಯನ್ನು ಎಲ್ಲರೂ ತೆಗೆದುಕೊಂಡಿದ್ದಾರೆ ವ್ಹಾಂಗ್‌ಪೂನದಿಯೊಳಗೆ ಯುದ್ಧನಾವೆಗಳ ಮೂಲಕ ಜಾಪಾನರು ಸೇನೆಯನ್ನು ತರದಂತೆ ಸದ್ರಿ ನದಿಯ ನಡುವೆ ಚೀನಿಯರೊಂದು ಕಟ್ಟುಹಾಕಿದ್ದಾರೆ. ಇದರಿಂದ ಅವರಲ್ಲಿ ಹಡಗ ಸಂಚಾರವು ತಡೆಗಟ್ಟಲ್ಪಟ್ಟಿದೆ.

ಇದೇ ತಾ. 14ರಲ್ಲು ಬೋಂಬೆಸೆವ ಚೀನೀ ವಿಮಾನಗಳು ಶಾಂಘಾಯಿಯ ವಿದೇಶೀಯ ವಸಾಹತಿನ ಮೇಲೆ ಹಾರಾಡಿದಾಗ ಜನರೆಲ್ಲಾ ದಿಗಿಲುಗೊಂಡರು. ಜಾಪಾನ್ ಯುದ್ಧನಾವೆಗಳು ಅವುಗಳ ಮೇಲೆ ಗುಂಡೆಸೆದುವು ಚೀನೀ ವಿಮಾನಗಳು ಜಾಪಾನ್ ನೌಕಾಕೇಂದ್ರದ ಮೇಲೆಬೋಂಬೆಸೆದುವು. ಜಾಪಾನಿ ಯುದ್ಧನಾವೆಗಳು ಊಸಂಗ್ ಬಂದರಗಳ ಮೇಲೆ ಗುಂಡೆಸೆದುವು. ಚೀನೀ ವಿಮಾನಗಳು ಜಾಪಾನಿ ಯುದ್ಧನಾವೆಯ ಮೇಲೆ ಬೋಂಬೆಸೆಯಲು ಮಾಡಿದ ಪ್ರಯತ್ನವು ಫಲಕಾರಿಯಾಗಲಿಲ್ಲ. ಚೀನೀಯರು ವಿಮಾನಧಾಳಿ ನಡಿಸಿದ ಪ್ರತೀಕಾರಾರ್ಥವಾಗಿ ಜಾಪಾನರು ನಾನ್ಕಿಂಗಿನ ಮೇಲೆ ಧಾಳಿನಡಿಸುವ ಬೆದರಿಕೆ ಹಾಕಿರುವರು.

ಚೀನೀಯರು ವಿಮಾನಧಾಳಿ ನಡಿಸಿದಾಗ ಕೆಲವು ಬೋಂಬುಗಳು ಅಂತರ ರಾಷ್ಟ್ರೀಯ ವಸತಿಯ ಮುಖ್ಯ ರಸ್ತೆಯ ಮೇಲೆ ಬಿದ್ದು ಕೆಲವು ದೊಡ್ಡ ಕಟ್ಟಡಗಳಿಗೆ ಹಾವಳಿಯಾಗಿರುವುದು. 25ಮಂದಿ ಚೀನೀಯರೂ ಕೆಲವು ಮಂದಿ ವಿದೇಶೀಯರೂ ಕೊಲ್ಲಲ್ಪಟ್ಟಿರುವರು. ಕೆಲವೆಡೆ ಬೆಂಕಿಯೆದ್ದು ಹಲವು ಮೋಟರ್‌ಕಾರುಗಳು ಸುಟ್ಟು ಹೋಗಿರುವವು. ಒಟ್ಟು ಕಡಿಮೆಯೆಂದರೆ 200ಮಂದಿ ಕೊಲ್ಲಲ್ಪಟ್ಟಿರುವರು.

ಚೀನೀಯರ ಸೇನಾ ಬಲವು ಬಹಳ ಹೆಚ್ಚಾಗಿರುವುದರಿಂದ, ಬಿರುಗಾಳಿಯ ನಿಮಿತ್ತ ಜಾಪಾನರಿಗೆ ನೇನಾ ಸಹಾಯವು ಬರಲು ತೊಂದರೆಯಾದುದರಿಂದಲೂ ಜಾಪಾನರು ಯುದ್ಧವೇನೂ ಮಾಡದೆ ಸುಮ್ಮನಿರುವರು. ಮಾತ್ರವಲ್ಲದೆ ಶಾಂಘಾಯಿಯ ತಮ್ಮ ವಸತಿಯಲ್ಲಿರುವ ಜಾಪಾನರನ್ನು ಬೇರೆಕಡೆ ಕಳುಹಿಸುವ ಆಲೋಚನೆ ಮಾಡಿರುವರು.

### ಅಂಡಮಾನ್ ದಿನಾಚರಣೆ
### ಕಲ್ಕತ್ತದಲ್ಲಿ ಲಾಠಿಪ್ರಹರ

ಅಂಡಮಾನಿನಲ್ಲ 200ಕ್ಕಿಂತಲೂ ಮಿಕ್ಕಿದ ಡಿಟೆನ್ಯೂಕೈದಿಗಳು ಉಪಾವಸ ದೀಕ್ಷೆ ಹಿಡಿದು ಈಗ ಎರಡು ವಾರ ಮಿಕ್ಕಿತು. ಈ ಕೈದಿಗಳಲ್ಲಿ ಹೆಚ್ಚಿನವರು ಬಂಗಾಳದವರು. ಆದುದರಿಂದ ಬಂಗಾಳದಲ್ಲಿ ವಿಶೇಷ ಕ್ಷೋಭೆಯೆದ್ದಿರುವುದು. ಈ ಕೈದಿಗಳಲ್ಲಿ 3 ಮಂದಿ ಇಷ್ಟರಲ್ಲೇ ಮೃತರಾಗಿರುವರೆಂದೂ, ಅವರ ಶವವನ್ನು ಸಮುದ್ರಕ್ಕೆಸೆಯಲಾಗಿದೆಯೆಂದೂ ಸುದ್ದಿಯುಂಟಾಗಿರುವುದು. ಸರಕಾರವು, ಈ ಉಪವಾಸ ದೀಕ್ಷೆಯ ಬೆದರಿಕೆಯಿಂದ ಅಂಡಮಾನ್ ಕೈದಿಗಳನ್ನು ಬಿಡುಗಡೆ ಮಾಡಲು ಅಥವಾ ಹಿಂದೂದೇಶಕ್ಕೆ ಕಳುಹಿಸಲು ಸಾಧ್ಯವಿಲ್ಲ. ಕೈದಿಗಳು ತಮ್ಮ ಉಪವಾಸ ದೀಕ್ಷೆ ನಿಲ್ಲಿಸಿದರೆ ಅವರ ಕೇಳಿಕೆಗಳನ್ನು ಪರ್ಯಾಲೋಚಿಸಲಾಗುವುದೆಂದು ಪ್ರಕಟಗೊಳಿಸಿರುವುದು. ಕಾಂಗ್ರೆಸ್ ಮುಖಂಡರೂ, ಮಂತ್ರಿಗಳೂ ಅಂಡಮಾನ್ ಕೈದಿಗಳು ಉಪವಾಸ ನಿಲ್ಲಿಸಬೇಕೆಂದು ಕೇಳಿಕೊಂಡಿರುವರು. ಆದರೆ ಅಂಡಮಾನ್ ಕೈದಿಗಳು ಉಪವಾಸನಿಲ್ಲಿಸಿರುವುದಿಲ್ಲ. ಈ ಕೈದಿಗಳ ಮೇಲಿನ ಸಹಾನುಭೂತಿಯಿಂದ ಬಂಗಾಳದ ದಿವ್ರೋಲಿ ಜೈಲಿನಲ್ಲಿರುವ 150 ಮಂದಿ ಕೈದಿಗಳು ಉಪವಾಸ ದೀಕ್ಷೆ ಹಿಡಿದಿರುವರು.

ಇದೇ ತಾ. 14ರಲ್ಲು ಇಡೀ ದೇಶದಲ್ಲೆಲ್ಲಾ ಅಂಡಮಾನ್ ಕೈದಿಗಳ ದಿನವು ಆಚರಿಸಲ್ಪಟ್ಟಿರುವುದು ಕಲ್ಕತ್ತದಲ್ಲಿ ಸುಮಾರು 2000 ಮಂದಿಯ ಮೆರವಣಿಗೆಯೊಂದು ನಡೆದಾಗ ಸುಮಾರು ೧೦೦ ಮಂದಿ ಕೈದುಮಾಡಲ್ಪಟ್ಟಿರುವರು. ಇವರಲ್ಲಿ ಕೆಲವರು ಹುಡುಗಿಯರು. ಪೋಲಿಸರು ಲಾಠಿಪ್ರಹರಮಾಡಿ ಮೆರವಣಿಗೆಯನ್ನು ಚದರಿಸಿದರು. ಟೌನ್ ಹೋಲಿನಲ್ಲಿ ನಡೆಯಲಿದ್ದ ಸಭೆಗೆ ಈ ಮೆರವಣಿಗೆಯು ಹೋಗುತ್ತಿದ್ದಿತು. ಆಗ ಪೋಲೀಸರು ಬಂದು, ರಾಷ್ಟ್ರೀಯ ಧ್ವಜವನ್ನು ಕೆಳಗಿಳಿಸಿ ಚದರಬೇಕೆಂದು ಅನುಜ್ಞೆಯಿತ್ತರು. ಜನರು ಅದಕ್ಕೊಪ್ಪದಿರಲು ಪೋಲೀಸರು ೧೦ ನಿಮಿಷದ ಸಮಯವಿತ್ತು ಆ ಮೇಲೆ ಲಾಠಿಪ್ರಹರ ಮಾಡಿದರು. ಹಲವರು ಗಾಯಗೊಂಡಿರುವರು. ಹುಡುಗಿಯರು ಹಿಡಕೊಂಡಿದ್ದ ರಾಷ್ಟ್ರೀಯ ಧ್ವಜಗಳನ್ನು ಪೋಲೀಸರು ಕಿತ್ತುಕೊಂಡರು. ಕೈದುಮಾಡಲ್ಪಟ್ಟವರಲ್ಲಿ, ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಆಕ್ಟಿಂಗ್ ಅಧ್ಯಕ್ಷರಾದ ಡಾಕ್ಟರ್ ಜೆ.ಎಮ್ ದಾಸಗುಪ್ತರೊಬ್ಬರು.ಸುಮಾರು ೧೦೦ ಮಂದಿ ಗಾಯಗೊಂಡಿರುವರು. ಈ ಮೆರವಣಿಗೆಯು ಪೋಲೀಸ್ ಕಮಿಶನರರ ಹುಕುಮಿಗೆ ವಿರೋಧವಾಗಿ ನಡಿಸಲ್ಪಟ್ಟಿತು. ಈ ಲಾಠಿ ಚಾರ್ಜಿನ ನಂತರ ಬಂದ ಹಲವು ಮೆರವಣಿಗೆಗಳವರು ಹಿಡಕೊಂಡಿದ್ದ ರಾಷ್ಟ್ರೀಯ ಧ್ವಜವನ್ನು ಕೆಳಗಿಳಿಸಬೇಕೆಂದು ಪೋಲೀಸರು ಕೇಳಿದಾಗ ಅವರು ತಾವು ಹಿಂದೆ ಹೋಗುವೆವೇ ಹೊರತು ಧ್ವಜವನ್ನಿಳಿಸಲಾರೆವೆಂದು ಹೇಳಿದರು. ಪೋಲೀಸ್ ಕಮಿಶನರ ನೇತೃತ್ವದಲ್ಲಿ ೨೦೦೦ ಮಂದಿ ಪೋಲೀಸರು ಈ ದಿವ ಟೌನ್ ಹೋಲಿನ ಪ್ರದೇಶದಲ್ಲಿ ಪಹರೆ ನಡಿಸುತ್ತಿದ್ದರು.


THE
**PANGAL NAYAK BANK**
**LIMITED.**
ESTABLISHED 1920.
**Paid up Capital: Rs. 1,82,100/-**
***Head Office*: UDIPI.**
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at $4\frac{1}{2}$% on 2 years deposits.

Every other description of up-to-date Banking business is also undertaken.



**ಚುನಾವಣೆ**

ಉಮೇದ್ವಾರಿಗಳ ಪ್ರಕಟನೆಗಳನ್ನು (ಮೆನಿಫೆಸ್ಟೊ) ಅತ್ಯಂತ ದಕ್ಷತೆಯಿಂದ ಪ್ರಕಟಿಸಲಾಗುವುದು. ದರಗಳಿಗೆ ಬರೆಯಿರಿ.

**ಮೆನೇಜರ್, ನವಯುಗ**

# SHRI VISHNUMOORTHI TEMPLE, MUTTU VILLAGE.

## Receipts and Disbursements Account for the period from 23-4-1929 — 1-11-1929.

RECEIPTS

| | Rs. As. Ps. | Rs. As. Ps. |
|---|---|---|
| To **Lands**— | | |
| Income from Lands including Tasdik | | 982 5 7 |
| „ **Customary payments and Votive Offerings**— | | |
| Kanika ... ... ... ... ... | | 4 0 0 |
| „ **Grants**— | | |
| Tasdik included in income from lands | | |
| „ **Miscellaneous**— | | |
| Rent of copper vessels ... ... ... | 12 0 0 | |
| Sundry sale proceeds ... ... ... | 0 8 9 | 12 8 9 |
| „ **Extraordinary & Debts**— | | |
| Loans taken... .. ... ... ... | | 430 1 9 |
| **Rupees** ... | | 1,429 0 1 |

DISBURSEMENTS

| | Rs. As Ps | Rs. As. Ps. |
|---|---|---|
| By **Establishment**— | | |
| Purohits ... ... ... ... | 5 0 0 | |
| Travelling expenses ... ... | 1 0 0 | |
| Printing and Stationery ... | 8 4 0 | 14 4 0 |
| „ **Ordinary Puja Expenses**— | | |
| Nithyasantharpana & Pooja ... | 337 3 4 | |
| Tasdik Samaradhana ... ... | 30 0 0 | 367 3 4 |
| „ **Festivals**— | | |
| Festival & Occasional Pooja ... | | 302 5 5 |
| „ **Taxes**— | | |
| Assessment ... ... ... | | 393 10 0 |
| „ **Paraphernalia**— | | |
| Repair and purchase of copper vessels etc. ... ... ... | | 24 2 0 |
| „ **Extraordinary & Debts**— | | |
| Loans repaid ... ... ... | | 271 0 11 |
| „ Contribution to Board & Committee ... ... ... | | 47 0 0 |
| „ Closing balance ... ... ... | | 9 6 5 |
| **Rupees** ... | | 1,429 0 1 |

Examined and found correct subject to the remarks contained in my report of this date

Mangalore, 9th August 1937. } ಮುಡಿರ್ಕತ್ತಾಯ ಗುರುರಾಜ ಭಟ್ಟನ ರುಜು.

P. M. Hegde,
*Registered Accountant.*

## Receipts and Disbursements Account for the year 1929-1930 (2-11-1929 — 21-10-1930.)

RECEIPTS

| | Rs. As. Ps. | Rs. As As. |
|---|---|---|
| To Opening balance ... ... ... | | 9 6 5 |
| „ **Lands**— | | |
| Income from lands including Tasdik ... ... ... ... | | 1,158 14 11 |
| „ **Customary payments and Votive Offerings**— | | |
| Kanika ... ... ... ... | 19 0 0 | |
| Collections for renovation of Garbhagraha ... ... .. | 474 5 0 | 493 5 0 |
| „ **Grants**— | | |
| Tasdik | | |
| „ Decree amount realised ... .. | | 850 8 8 |
| „ **Miscellaneous**— | | |
| Sundry sale proceeds ... ... | 13 3 0 | |
| Rent of copper vessels ... ... | 32 9 0 | 45 12 0 |
| „ **Extraordinary and Debts**— | | |
| Loans taken ... ... ... | 1,508 2 7 | |
| Sundry creditors ... ... ... | 721 10 9 | |
| Advance refund ... ... ... | 10 0 0 | 2,239 13 4 |
| **Rupees** ... | | 4,797 12 4 |

DISBURSEMENTS

| | Rs. As Ps. | Rs As. Ps |
|---|---|---|
| By **Establishment**— | | |
| Purohits ... ... ... ... | 155 11 0 | |
| Valaga ... ... ... ... | 105 2 1 | |
| Travelling ... ... ... ... | 10 13 3 | |
| Postage .. ... ... ... | 2 3 0 | |
| Printing & Stationery ... ... | 4 4 0 | 278 1 4 |
| „ **Ordinary Puja Expenses**— | | |
| Nithyasantharpana & Puja ... | 675 10 0 | |
| Samaradhana Tasdik ... ... | 30 0 0 | 705 10 0 |
| „ **Festivals**— | | |
| Festival & Occasional Puja ... | | 1,492 13 4 |
| „ **Buildings**— | | |
| Repairs & Additions (Garbhagraha) | | 674 15 10 |
| „ **Taxes**— | | |
| Assessment ... ... ... ... | | 378 12 0 |
| „ **Trustees commission for collection of rents** ... ... | | 179 0 0 |
| „ **Paraphernalia**— | | |
| Repairs of copper vessels etc. ... | | 29 2 0 |
| Contribution to the Board & Committee .. .. ... ... | | 120 0 0 |
| „ **Cost of litigation**— | | |
| Lawyers and writing fees etc. ... | | 21 6 0 |
| „ **Extraordinary & debts**— | | |
| Loans repaid ... ... ... | | 893 6 2 |
| „ Closing balance ... ... ... | | 24 9 8 |
| **Rupees** ... | | 4,797 12 4 |

Examined and found correct subject to the remarks contained in my report of this date.

Mangalore, 9th August 1937 } ಮುಡಿರ್ಕತ್ತಾಯ ಗುರುರಾಜ ಭಟ್ಟನ ರುಜು.

P. M. Hegde,
*Registered Accountant.*

## Receipts and Disbursements Account for the year 1930-31 (22-10-1930 to 9-11-1931)

RECEIPTS

| | Rs. As. Ps. | Rs. As. Ps. |
|---|---|---|
| To Opening balance ... ... ... | | 24 9 8 |
| „ **Lands**— | | |
| Income from leases, including Tasdik ... ... ... ... | | 1,395 14 0 |
| „ **Customary payments & Votive Offerings**— | | |
| Vantige collection ... ... | | 49 2 0 |

PAYMENTS

| | Rs. As. Ps | Rs. As. Ps. |
|---|---|---|
| By **Establishment**— | | |
| Purohits ... ... ... ... | 45 12 0 | |
| Valaga ... ... ... ... | 73 11 2 | |
| Travelling expenses ... ... | 62 6 9 | |
| Postage ... ... ... ... | 0 11 0 | |
| Printing and stationery ... ... | 8 3 0 | 190 11 11 |

## Receipts and Disbursements Account for the year 1930-31 (22-10-1930 to 9-11-1931) *(Continued)*

**RECEIPTS**

| | Rs. As. Ps. | Rs. As. Ps. |
|---|---|---|
| To **Miscellaneous**— | | |
| Sundry sale proceeds ... ... | 37 10 9 | |
| Fines ... ... ... ... | 1 8 0 | |
| Rent of copper vessels ... ... | 15 8 0 | 54 10 9 |
| „ **Extraordinary and Debts**— | | |
| Temporary Advances .. . | 552 2 0 | |
| Advances recovered ... ... | 3 0 0 | |
| Amount recovered from previous Trustee ... .. ... ... | 1,500 0 0 | |
| Sundry creditors ... ... ... | 264 0 2 | 2,319 2 2 |
| „ **Income from Investments** – | | |
| Interest . ... ... .. | | 95 15 4 |
| **Rupees** ... | | 3,939 5 11 |

**PAYMENTS**

| | Rs. As. Ps. | Rs. As. Ps. |
|---|---|---|
| By **Ordinary Puja Expenses**— | | |
| Nithya Santharpana & Pooja ... | 112 15 7 | |
| Samaradhana Tasdik ... ... | 30 0 0 | 142 15 7 |
| „ **Festivals & Occasional Pujas**— | | |
| Festivals and other Pujas ... | | 583 11 3 |
| „ **Buildings**— | | |
| Repairs etc. ... ... ... | | 39 7 3 |
| „ **Taxes and rent**— | | |
| Assessment ... ... ... ... | | 402 7 0 |
| „ **Paraphernalia**— | | |
| Purchases & repairs of copper vessels etc. ... ... ... | | 40 11 6 |
| Contribution to the Board & Committee ... ... ... | | 81 13 4 |
| „ **Cost of Litigation**— | | |
| Lawyers fee, writing fees etc. ... | | 169 7 5 |
| „ **Miscellaneous**— | | |
| Sundry expenses ... ... ... | | 30 11 11 |
| „ **Extraordinary and Debts**— | | |
| Purchase of mulgeni rights ... | 350 14 0 | |
| Temporary Loan ... ... ... | 54 3 8 | |
| Loan on mortgage of landed property .. ... ... ... | 1,200 0 0 | |
| Sundry creditors paid ... ... | 79 8 9 | |
| Advances repaid ... ... ... | 539 2 0 | 2,223 12 5 |
| „ Closing Balance ... ... ... | | 33 4 |
| **Rupees** ... | | 3,939 5 11 |

Examined and found correct subject to the remarks contained in my report of this date.

Mangalore,
*9th August 1937.*

ಮುಡಿಗೆತ್ತಾಯ ಗುರುರಾಜ ಭಟ್ಟನ ರುಜು.

**P. M. Hegde,**
*Registered Accountant.*

## Receipts and Disbursements Account for the year 1931-32 (10-11-1931 — 29-10-1932)

**RECEIPTS**

| | Rs. As. Ps. | Rs. As. Ps. |
|---|---|---|
| To Opening balance ... ... ... | | 33 8 4 |
| „ **Lands**— | | |
| Income from leases including tasdik ... ... ... ... | | 926 5 5 |
| „ **Customary payments & Votive offerings**— | | |
| Marriage kanike . ... .. | 11 0 0 | |
| Kanike . . ... ... | 1 12 0 | |
| Dubbi collection ... ... | 41 15 11 | 54 11 11 |
| „ **Miscellaneous**— | | |
| Rent of copper vessels ... ... | 21 2 0 | |
| Sundry sale proceeds ... ... | 9 1 6 | 30 3 6 |
| „ **Extraordinary and Debts**— | | |
| Loans taken ... ... ... | 723 4 0 | |
| Sundry Creditors ... ... ... | 213 10 0 | 936 14 0 |
| „ **Advance recovered**— | | |
| Temporary... ... .. ... | | 50 0 0 |
| **Rupees** ... | | 2,031 11 2 |

**EXPENDITURE**

| | Rs. As. Ps. | Rs. As. Ps. |
|---|---|---|
| By **Establishment**— | | |
| Purohits ... .. ... ... | 72 0 0 | |
| Valaga ... ... ... ... | 75 0 10 | |
| Cooly .. ... ... ... | 5 3 6 | |
| Postage ... ... ... ... | 1 0 3 | |
| Printing ... ... ... ... | 7 8 0 | |
| Travelling expenses ... .. | 23 10 6 | 184 7 1 |
| „ **Ordinary Puja Expenses**— | | |
| Nithyasantharpana ... ... | 445 11 10 | |
| Samaradhana Tasdik... ... ... | 30 0 0 | 475 11 10 |
| „ **Festivals**— | | |
| Festivals & Occasional puja ... | | 261 0 10 |
| „ **Buildings**— | | |
| Repairs of buildings ... ... | | 7 8 0 |
| „ **Taxes**— | | |
| Assessment... ... ... ... | | 402 7 0 |
| Trustees commission on collections of rents ... ... | | 140 0 0 |
| „ **Paraphernalia**— | | |
| Repairs of copper vessels etc. ... | | 64 14 6 |
| Contribution to the Board & to the Committee ... ... ... | | 32 0 0 |
| „ **Cost of litigation**— | | |
| Lawyers fee & writing fee etc. ... | | 299 6 3 |
| „ **Miscellaneous**— | | |
| Miscellaneous ... ... ... | | 3 2 6 |
| „ **Extraordinary and Debts**— | | |
| Loans repaid ... ... ... | | 70 2 0 |
| „ **Advance Recovered**— | | |
| Temporary advance ... ... | | 50 0 0 |
| „ Closing Balance .. ... ... | | 40 15 2 |
| **Rupees** ... | | 2,031 11 2 |

Examined and found correct subject to the remarks contained in my report of this date.

Mangalore,
*9 th August 1937*

ಮುಡಿಗೆತ್ತಾಯ ಗುರುರಾಜ ಭಟ್ಟನ ರುಜು.

**P. M. Hegde,**
*Registered Accountant.*

## ಅತ್ಯಾಚಾರ

### 5 ಮಂದಿಯ ಕೊಲೆ

ಇದೇ ತಾ. ೧೨ರಲ್ಲು ಲಂಡನಿನ ಗ್ಲಾಸ್ಗೋವಿನಲ್ಲಿ ವೈದ್ಯಕೀಯವನ್ನು ಕಲಿಯುವ ವಿದ್ಯಾರ್ಥಿಯು, ಲೋರೆನ್ಸ್ ರಸ್ತೆಯಲ್ಲಿರುವ ಮಾವನ ಮನೆಗೆ ಪ್ರವೇಶಿಸಿ, ತನ್ನ ಮಾವ, ಹೆಂಡತಿ, ಹೆಂಡತಿತಂಗಿ, ಮತ್ತು ಒಂದು ಹೆಣ್ಣುಮಗುವಿಗೆ ಗುಂಡುಹೊಡೆದನು. ಹೆಂಡತಿಯ ಹೊರತು ಇತರರೆಲ್ಲಾ ಆಗಲೇ ಮೃತರಾಗಿರುವರು. ಹೆಂಡತಿಯು ಮರಣೋನ್ಮುಖಳಾಗಿರುವಳು. ಇದಾದ ಮೇಲೆ ವಿಶ್ವಾಸನು ಒಬ್ಬ ಟೇಕ್ಸಿಡ್ರೈವರನನ್ನು ಗುಂಡು ಹೊಡೆದು ಕೊಂದು ಕಡೆಗೆ ತನಗೇನೇ ಗುಂಡುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನು.

## ನರಿಮೆನ್ ಪಟೇಲವಾದ

ನರಿಮೆನ್ ಪಟೇಲವಾದವು ಇನ್ನೂ ಕೊನೆಗೊಂಡಿರುವುದಿಲ್ಲ. ಬೊಂಬಾಯಿಯ ಪತ್ರಿಕೆಗಳು ಈ ವಾದವನ್ನು ಇನ್ನೂ ಪ್ರಬಲವಾಗಿ ನಡೆಸುತ್ತಿರುವವು. ಇದರಿಂದ ಗಾಂಧಿಯವರು ಬಹಳ ನೊಂದುಗೊಂಡಿರುವರು. ಅವರು ತಾನೇ ಈ ವಾದದ ಸಂಗತಿಗಳನ್ನೆಲ್ಲಾ ವಿಚಾರಿಸಿ ಪಟೇಲರು ತಪ್ಪಿತಸ್ಥರೆಂದು ಕಂಡುಬಂದರೆ ಅವರಿಗೆ ಅವಕ್ಕಾಗಿ ತಕ್ಕ ದಂಡನೆಮಾಡುವೆನೆಂದೂ ನರಿಮೆನರು ತಪ್ಪಿತಸ್ಥರೆಂದು ಕಂಡುಬಂದಲ್ಲಿ, ತನ್ನ ನಿರ್ಧಾರವನ್ನು ಶ್ರೀ ಬಹದೂರ್ಜಿ ಮತ್ತು ಸರ್ ಗೋವಿಂದರಾವ್ ಮಡ್ಗಾಂವ್ಕರರು ಪರಿಶೀಲಿಸಿ ಅವರು ತಮಗೆ ತೋರಿದ ನಿರ್ಣಯಕ್ಕೆ ಬರಬಹುದೆಂದೂ, ನರಿಮೆನರು ಅಪರಾಧಿಯೆಂದಾದರೆ ಅವರಿಗೂ ತಕ್ಕ ಶಾಸ್ತಿ ಮಾಡಲಾಗುವುದೆಂದೂ ಪ್ರಕಟಪಡಿಸಿರುವರು. ಅಷ್ಟರವರೆಗೆ ಪತ್ರಿಕೆಗಳು ಈ ವಿಷಯದಲ್ಲೇನೂ ವಾದ ನಡಿಸಬಾರದೆಂದು ವಿನಂತಿಮಾಡಿಕೊಂಡಿರುವರು.

## ಒಕ್ಕಲುಗಳಿಗೆ ಸಹಾಯ

ಒಕ್ಕಲುಗಳಿಗೆ ಸಹಾಯಮಾಡುವ ಕುರಿತು ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಮಂತ್ರಿಮಂಡಲವು ಶೀಘ್ರವಾಗಿ ಹುಕುಮು ಜ್ಯಾರಿಮಾಡಿರುವುದು. ಈ ಪ್ರಕಾರ ಕೋರ್ಟಿನವರು, ಒಕ್ಕಲುಗಳನ್ನು ತೆಗೆದು ಹಾಕುವ, ಅವರ ಗೇಣಿ ಬಾಕಿ ವಸೂಲಿಗಾಗಿ ಡಿಕ್ರಿ ಕೊಡುವ, ಕೊಟ್ಟಿರುವ ಡಿಕ್ರಿಗಳನ್ನು ಜ್ಯಾರಿಮಾಡುವ ಖಟ್ಲೆಗಳನ್ನೆಲ್ಲಾ ನಿಲ್ಲಿಸುವಂತೆ ಅಲಹಾಬಾದಿನ ಕಲೆಕ್ಟರರು ಹುಕುಮು ಕೊಟ್ಟಿರುವರು. ರೂ. 1000ಕ್ಕಿಂತ ಕಡಿಮೆಯ ಸಾಲದ ಮೇಲೆ ಡಿಕ್ರಿ ಕೊಡಬಾರದೆಂದೂ ಹುಕುಮು ಕೊಡಲಾಗಿದೆ.

## ದೇವಸ್ಥಾನಗಳ ಆಡಳಿತ

ಎಂಡೋಮೆಂಟ್ ಖಾತೆಯ ಮಂತ್ರಿಗಳಾದ ಡಾಕ್ಟರ್ ರಾಜನರು ಇದೇ ತಾ. 9ರಲ್ಲು ತಿನ್ನವೆಲ್ಲಿಯಲ್ಲಿ ಭಾಷಣವೀಯುವಾಗ, ದೇವಸ್ಥಾನ ಕಮಿಟಿಗಳೂ ಮೊಕ್ತೇಸರರೂ ಉಂಬಳಿಗಳ ಆಡಳಿತವನ್ನು ಒಂದು ವರ್ಷದೊಳಗೆ ಸುಧಾರಿಸದಿದ್ದಲ್ಲಿ ಸರಕಾರವು ಆ ಕುರಿತು ಕಠಿಣ ಕಾನೂನುಗಳನ್ನು ಮಾಡಬೇಕಾಗುವುದೆಂದು ಎಚ್ಚರಿಸಿರುವರು. ಎಂಡೋಮೆಂಟ್ ಆಕ್ಟಿನ ಆಡಳಿತನಿಂದ ದೇವಸ್ಥಾನಗಳ ಆಡಳಿತವು ಕೆಲ ಮಟ್ಟಿಗೆ ಸುಧಾರಿಸಿರುವುದೆಂದೇ ಮಂತ್ರಿಗಳ ಅಭಿಮತ.

## ಹಿಂದೀ ಶಿಕ್ಷಣ

ಇದೇ ತಾ. 11ರಲ್ಲು ಮದ್ರಾಸಿನ ಮುಖ್ಯ ಮಂತ್ರಿಗಳಾದ ಶ್ರೀ. ಸಿ. ರಾಜಗೋಪಾಲಾಚಾರ್ಯರು, ಮದ್ರಾಸಿನ ರಾಮಕೃಷ್ಣ ಮಿಶನಿನ ಸ್ಟುಡೆಂಟ್ಸ್ ಹೋಮಿನ ಕೋಲೆಜ್ ವಿಭಾಗದಲ್ಲಿ ಭಾಷಣವೀಯುವಾಗ, ಕಾಂಗ್ರೆಸ್ ಮಂತ್ರಿಮಂಡಲವು ಒಂದನೇ, ಎರಡನೇ ಮತ್ತು ಮೂರನೇ ಫೋರ್ಮುಗಳಲ್ಲಿ ಹಿಂದಿಯನ್ನು ಖಡ್ಡಾಯವಾಗಿ ಕಲಿಸುವ ಏರ್ಪಾಡು ಮಾಡಲಿರುವುದೆಂದು ವಿದಿತಗೊಳಿಸಿರುವರು. ಆ ಮೇಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಜೆಚ್ಚಿನ ವಿಷಯಗಳನ್ನು ಕಲಿಯಲಿರುವುದರಿಂದ ಹಿಂದಿಯನ್ನು ಖಡ್ಡಾಯವಾಗಿ ಮಾಡುವುದು ಯುಕ್ತವಲ್ಲೆಂದೇ ರಾಜಾಜೀಯವರ ಅಭಿಮತ.

## ಮದ್ರಾಸ್ ಲೋ ಕೊಲೇಜಿನ ಕರ್ಣಾಟಕ ಸಂಘದಸಭೆ

### ಕರ್ನಾಟಕ ಪ್ರಾಂತರಚನೆಯ ಆವಶ್ಯಕತೆ

ಇದರ ಪ್ರಥಮ ಸಭೆಯು ಈ ಸಂಘದ ಅಧ್ಯಕ್ಷರಾದ ಎಡ್ವಕೇಟ್ ಮತ್ತು ಪ್ರೊಫೆಸರ್ ಶ್ರೀ| ಬಿ. ಲಕ್ಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ತಾ. 13–8–37ಕ್ಕೆ ಸರಿಯಾದ ಶುಕ್ರವಾರ ಸಾಯಂ. ಘಂಟೆ 5–30ಕ್ಕೆ ನಡೆಯಿತು. ಭಾಷಣಕರ್ತರಾದ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷ ಮಾನ್ಯ ಡಾ. ಯು. ರಾಮರಾಯರು ಕರ್ಣಾಟಕ ಪ್ರಾಂತದ ಏಕೀಕರಣದ ಮಹತ್ಕಾರ್ಯದಲ್ಲಿ ಕನ್ನಡಿಗ ಯುವಕರ ಉತ್ಸಾಹ ಮತ್ತು ಕಾರ್ಯಗಳ ಆವಶ್ಯಕತೆಯ ಕುರಿತು ಬೋಧಪ್ರದವಾದ ಭಾಷಣವನ್ನು ಮಾಡಿದರು. ಕರ್ಣಾಟಕ ಸಂಘದವರ ಭಾವಚಿತ್ರ ತೆಗೆದಾದಮೇಲೆ ಅಧ್ಯಕ್ಷರು ಮದ್ರಾಸಿನಲ್ಲಿ ಇಂಥಾ ಸಂಘದ ಆವಶ್ಯಕತೆ ಮತ್ತು ತನ್ಮೂಲಕ ಇಲ್ಲಿಗೆ ಬೇರೆ ಬೇರೆ ಜಿಲ್ಲೆಗಳಿಂದ ಬರುವ ಕನ್ನಡಿಗರಿಗಾಗುವ ಪ್ರಯೋಜನಗಳನ್ನೆತ್ತಿ ಮಾತನಾಡಿದರು. ಮಾನ್ಯ ಭಾಷಣಕರ್ತರು ಪಠಾಲಸು ಕಲಿಯುವ ಯುವಕರ ಭಾವೀಜೀವನದ ಮಹತ್ವವನ್ನೂ ಅವರಘನೋದ್ಯೋಗವನ್ನೂ ಸುರಸವಾದ ಮಾತಿನಿಂದ ಕೊಂಡಾಡಿದರು. ಕನ್ನಡಿಗರು ಮುಂಬಯಿ, ಮದರಾಸ್, ಮೈಸೂರು, ಹೈದರಾಬಾದು, ಕೊಡಗು ಮುಂತಾದ ಬೇರೆ ಬೇರೆ ಪ್ರಾಂತಗಳಲ್ಲಿ ಚದರಿರುತ್ತಾರೆ. ಇಷ್ಟೆಲ್ಲಾ ಕಡೆಗಳಲ್ಲಿ ಒಟ್ಟಾರೆ ಜನಸಂಖ್ಯೆಯು ಏಳು ಮಿಲಿಯ ವೆಂದು ಅಂದಾಜಾಗಿದೆ. ಇಡೀ ಕರ್ಣಾಟಕದ ಮೊತ್ತ ಆದಾಯವು ಸುಮಾರು ಇನ್ನೂರೈವತ್ತು ಲಕ್ಷ ರೂಪಾಯಿಯೆಂದು ಪರಿಗಣಿಸಲ್ಪಟ್ಟದೆ. ಇದರ ಪೈಕಿ ನೂರು ಲಕ್ಷವು ರಾಜ್ಯಾಡಳಿತಕ್ಕೆ ಖರ್ಚಾಗಿ ಉಳಿದ ಐವತ್ತು ಲಕ್ಷ ರೂಪಾಯಲ್ಲಿ ಕನ್ನಡಿಗರಿಗೆ ತಮ್ಮದೇ ಒಂದು ಪ್ರಾಂತವನ್ನು ಸ್ಥಾಪಿಸಿ ಅದಕ್ಕೆ ಗವರ್ನರರನ್ನು ಇಟ್ಟು ನಡೆಯಿಸಲಿಕ್ಕೆ ಸುಲಭಸಾಧ್ಯವಿದೆ. ಕನ್ನಡಿಗರಿಗೆ ತಮ್ಮದೇ ವಿಶ್ವವಿದ್ಯಾಲಯವೂ ಹೈಕೋರ್ಟೂ ಇರುವುದಿಲ್ಲ. ಅಲ್ಲದೆ ಇದಕ್ಕನುಕೂಲವಾಗಿ ಹೊಸ ಇಂಡಿಯಾ ಆಕ್ಟಿನಲ್ಲಿ ಅಗತ್ಯತೋರಿದಲ್ಲಿ ಹೊಸಪ್ರಾಂತ್ಯಗಳನ್ನು ಸ್ಥಾಪಿಸಬಹುದೆಂದುಂಟು. ಕರ್ಣಾಟಕದವರಿಗಿಂತಲೂ ಅಲ್ಪ ಜನ ಸಂಖ್ಯೆ ಆದಾಯವುಳ್ಳ, ಸಿಂಧು, ಒರಿಸ್ಸಾ ಪ್ರಾಂತದವರು ತಮ್ಮದೇ ಸ್ವಂತವಾದ ಪ್ರಾಂತ್ಯಗಳನ್ನು ಅತ್ಯಲ್ಪಕಾಲದ ಪ್ರಯತ್ನದಿಂದ ಸ್ಥಾಪಿಸಿದರು. ಆದರೆ ಬೇರೆ ಅನುಕೂಲಗಳು ಕನ್ನಡಿಗರಿಗೆ ತುಂಬಾ ಇದ್ದರೂ, ಕನ್ನಡಮಾತೆಯ ಶ್ರೇಯೋಭಿವೃದ್ಧಿಗೆ ತುಂಬಾ ಸಹಾಯವಾಗುವ ಈ ಮಹತ್ಕಾರ್ಯದಲ್ಲಿ ಮುಂದೊತ್ತಿ ಸಾಹಸಪಡುವ ಜನರು ಬಹಳವಿರಳವಾದ ವಿಷಯವು ಕನ್ನಡಿಗನಿಗೆ ದುಃಖವನ್ನುಂಟುಮಾಡದಿರದು. ಆದುದರಿಂದ ಸ್ವತಂತ್ರ ಪ್ರಿಯನಾದ ಪ್ರತಿಯೊಬ್ಬ ಕನ್ನಡಿಗ ಯುವಕನೂ ನೊಂಟಕಟ್ಟಿ ಈ ಮಹಾಕಾರ್ಯವು ಸಾಧಿಸುವ ವರೆಗೆ ತನ್ನ ಕೈಲಾದ ಪ್ರಯತ್ನವನ್ನು ಮಾಡಿಯೇ ತೀರಬೇಕೆಂದು ಹೇಳಿ ಭಾಷಣ ಕರ್ತರು ತಮ್ಮ ಅಮೋಘ ಭಾಷಣವನ್ನುಕೊನೆಗೊಳಿಸಿದರು. ಬಿ. ಎಲ್. ಕ್ಲಾಸಿನ ಶ್ರೀ| ಕೆ. ವರದರಾಯ ಪೈಗಳು ಪಾರ್ಲಿಮೆಂಟರಿ ಸೆಕ್ರಿಟರಿ ಸ್ಥಾನಗಳಿಗೆ ನೇಮಿಸಲ್ಪಟ್ಟ ಮ. ರಾ. ಶ್ರೀ| ಕೆ ಆರ್. ಕಾರಂತ, ಪ್ರೋ। ಶ್ರೀ। ಜಿ. ವಾರ್ಕಿ, ಶ್ರೀ| ಎ. ಬಿ ಶೆಟ್ಟಿಯವರನ್ನು ಅಭಿನಂದಿಸುವ ಸಂತೋಷ ಸೂಚಕ ಠರಾವನ್ನು ಸಭೆಯ ಮುಂದಿಟ್ಟರು. ಅದು ಸರ್ವಾನುಮತದಿಂದ ಮಂಜೂರಾಯಿತು. ಆ ಮೇಲೆ ಅಧ್ಯಕ್ಷರು ಕರ್ಣಾಟಕ ಏಕೀಕರಣದ ಕೆಲಸದಲ್ಲಿ ಯುವಕರ ಕರ್ತವ್ಯಗಳನ್ನು ಹುರುಪಿನ ಮಾತುಗಳಿಂದ ಒತ್ತಿ ಹೇಳಿದರು. ಕೊನೆಗೆ ಕಾರ್ಯದರ್ಶಿಗಳಾದ ಶ್ರೀ| ಎಮ್. ನರಸಿಂಹ ವಿಠಲ ಕಾಮತರು ರಸಭರಿತವಾದ ಪುಟ್ಟಭಾಷಣದಲ್ಲಿ ಅಧ್ಯಕ್ಷರಿಗೂ ಭಾಷಣಕರ್ತರಿಗೂ ವಂದನೆಯನ್ನು ಸಿ "ವಂದೇ ಮಾತರಂ" ಹಾಡಿದ ಬಳಿಕ ಸಭೆ ಮುಕ್ತಾಯವಾಯಿತು.

---

## ಅಯ್ಯೋ ನವಯುಗವೇ

ನಿನ್ನ ತಾ. 29–7–37ನೇ ಸಂಚಿಕೆಯಲ್ಲಿ ಉಡುಪಿಯ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಕುರಿತು "ಉಪಾಧ್ಯಾಯರೊಬ್ಬರ ನಿರ್ಘೃಣವರ್ತನೆ" ಎಂಬ ಬಾತ್ಮಿಯನ್ನು ಕೊಟ್ಟಿದ್ದೆ. ಅದನ್ನು, ಮುಂದಕ್ಕೆ ಅಂತಹ ಪ್ರಸಂಗಗಳು ನಡೆಯದಿರಲೆಂಬ ಉದ್ದೇಶದಿಂದಲೇ ಬರೆದಿರುವುದಲ್ಲದೆ ಶಾಲೆಯವರನ್ನಾಗಲೀ, ಸದ್ರಿ ಉಪಾಧ್ಯಾಯರನ್ನಾಗಲೀ ತೆಗಳುವ ಉದ್ದೇಶದಿಂದಲ್ಲ. ಆದರೆ ಆ ಲೇಖನದಿಂದ ಶಾಲೆಯವರಿಗೂ ಸದ್ರಿ ಉಪಾಧ್ಯಾಯರಿಗೂ ಮನನೊಂದಿರುವುದೆಂದು ಕೇಳಿ ನಾನು ವಿಷಾದಪಡುತ್ತೇನೆ. ಮತ್ತು ಆ ಭಾಗದಲ್ಲಿ ನಾನು ಅವರೊಡನೆ ಕ್ಷಮೆ ಯಾಚಿಸುತ್ತೇನೆ.

ಇತಿ,

"ಶಾಲಾಹಿತೇಚ್ಛು."


ನೀವು ನಿಮ್ಮ–ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ?

ಇಲ್ಲವಾದರೆ, ಹೇಗೆ ಮಾಡುವುದೆಂಬುವನ್ನು ಭದ್ರತೆಯ, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ.

**ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್ (ಅಜ್ಮೀರು)**

**ನಮ್ಮ ಅಭಿವೃದ್ಧಿಯ ಅಂಕೆ ಸಂಕೆಗಳು**

| | |
|---|---|
| ಚಾಲ್ತಿಯಲ್ಲಿರುವ ಪೊಲಿಸಿಗಳು .... | .... ರೂ. **3 ಕೋಟಿ** ಮಿಕ್ಕಿನ. |
| ಮೂಲಗಳು .... .... | .... ರೂ. **80 ಲಕ್ಷ**ಕ್ಕೂ ಮಿಕ್ಕಿದೆ. |
| ವಾರ್ಷಿಕ ಉತ್ಪನ್ನ .... .... | .... ರೂ. **18 ಲಕ್ಷ**ಕ್ಕೂ ಮಿಕ್ಕಿದೆ. |
| ವಿಮೆ ತೆತ್ತುದು .... .... | .... ರೂ. **42 ಲಕ್ಷ**ಕ್ಕೂ ಮಿಕ್ಕಿದೆ. |

**ಅತ್ಯಧಿಕ ಬೋನಸು**

| ಜೀವಾಂತ್ಯ ವಿಮೆ: | ಎಂಡೋಮೆಂಟ್: |
|---|---|
| ವರ್ಷಕ್ಕೆ ರೂ. 1000ಕ್ಕೆ **25ರಂತೆ.** | ವರ್ಷಕ್ಕೆ ರೂ. 1000ಕ್ಕೆ **20ರಂತೆ.** |

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲಿ ಕೆಳಗಿನವರಿಗೆ ಬರೆಯಿರಿ—

**ಪಿ. ಜಿ. ಮರಾಥೆ ಎಸ್ಕ್ವಾಯರ್,** ಜನರಲ್ ಮೆನೇಜರ್

(ಅಥವಾ) **ಎಂ. ಮಾಧವ ರಾವ್ ಎಸ್ಕ್ವಾಯರ್,** ಬಿ. ಎ., ಸುಪರಿಂಟೆಂಡೆಂಟ್ ಒಫ್ ಬ್ರಾಂಚಸ್ ಎಂಡ್ ಚೀಫ್ ಏಜನ್ಸಿಸ್, ಯಸ್. ಐ. ಎಂಡ್ ಸಿಲೋನ್.

**ಪಶ್ಚಿಮ ಕರಾವಳಿಗೆ ಓರ್ವ ಪ್ರಮುಖ ಪ್ರತಿನಿಧಿಗಳು ಬೇಕು.**



ಹೊಸ ರಕಂ! ಗ್ಯಾರಂಟ ಇದೆ!

Imitation Diamond Ear Rings

ಇಮಿಟೇಷನ್ ವಜ್ರದ ಬೆಂಡೋಲೆ



ಈ ಬೆಂಡೋಲೆಗಳನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸಮನಾಗಿದೆ. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಜಮೀನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಇದರ ಬಣ್ಣವು ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ. 7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ ರೂ. 1–8–0. 7 ಕಲ್ಲಿನ ಕೆಂಪು ಓಲೆ ಜೊತೆ 1ಕ್ಕೆ ರೂ. 1–10–0. ಬಳೆಗಳು ಜೊತೆ 1ಕ್ಕೆ ರೂ. 2–0–0. ಉಂಗುರ 1ಕ್ಕೆ ರೂ. 1 4–0.

ಸಿಗುವ ವಿಳಾಸ:

**ದೇವಕರ್ ಅಂಡ್ ಕಂಪನಿ,**

ನಂಬುಲಿಯರ್ ಬೀದಿ, ಜಿ. ಟಿ.

ಮದರಾಸು.



**ನವಭಾರತ ಬುಕ್ ಡಿಪೋದಲ್ಲಿ**

**ರಬ್ಬರ್ ಸ್ಟಾಂಪ್ ಮೊಹರುಗಳು**

ದೊರೆಯುತ್ತವೆ.

## ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ
ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್
ರೀಡ್ಡಿನ ಕೈ. ಮತ್ತು ಕಾಲು
ಹಾರ್ಮೋನಿಯಮುಗಳು
ಬೇಕಾದ ನಮೂನೆಯಲ್ಲಿ
ದೊರೆಯುತ್ತವೆ.

ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದಗಾಯನ ಸಾಮಗ್ರಿಗಳನ್ನು
ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ
ಮಾಡಿಕೊಡಲಾಗುತ್ತದೆ.

ವಿಶೇಷ ಮಾಹಿತಿಗೆ ಬರೆಯಿರಿ.

*Proprietor:* **ATTAVAR BABOO,**
**Yasanthi Harmonium Works,**
**Hampankatta Mangalore**

ವಿ ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ
ಬುಕ್ ಡಿಪ್ಪೋ, ಚರ್ಚ್ ರೋಡ, ಉಡುಪಿ ಇಲ್ಲಿ ಮಾರಲ್ಪಡುತ್ತವೆ.

---

ಪ್ರಕಟವಾಗಿದೆ! ? ಪ್ರಕಟವಾಗಿದೆ!

ನವಯುವಕರನ್ನು ಮುಗ್ಧಗೊಳಿಸುವ ನುಡಿ ಮುತ್ತು ನಿ! — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

## ಮಿಸ್ ಲಲಿತ

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು
ಎತ್ತಿ ತೋರಿಸುವ ಪುಸ್ತಕವು
ಇದೀಗಲೇ ಹೊರಬಿದ್ದಿದೆ.
**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**
ಬರೆದವರು: ಯಂ. ವಿ. ಪುತ್ರಾನ್
ಕೂಡಲೇ ಬರೆಯಿರಿ. ಬೆಲೆ **0—8—0**
ವಿಳಾಸ — **M V. Puthran,**
*C/o* 31, Bomanji Lane, *2nd Floor, Fort, BOMBAY*

---

**15 ವರ್ಷಗಳ ಅನುಭವ!** **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು
ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು
ಪ್ರಸಿದ್ಧರಾಗಿರುವ

## ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು
ಕನ್ನಡಿಯಲ್ಲಿ ಚಿತ್ರದ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ
ಮಿತದರದಲ್ಲಿ ಮಾಡಿಕೊಡುವರು
ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು
ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ

ಗಣಪತಿ ರಾವ್, ಪೈಂಟರ್,
ಸೋದೆ ಮಠದ ಲೇನು - - **ಉಡುಪಿ, ದ. ಕ.**

---

THE
## MOOLKY BANK, LTD.,
**MOOLKY.**
## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
**ಮೂಲ್ಕಿ.**

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

**M. R Punja,** ಯಂ. ಆರ್. ಪುಂಜ,
*President & Manager,* ಪ್ರೆಸಿಡೆಂಟ್ ಮತ್ತು ಮೆನೇಜರ್,

---

## ಕಸಿಗಿಡಗಳು.

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

## THE ROYAL SEED CO.,
FLORISTS & SEEDSMEN,
27 Ilpay Thope ULSOOR, BANGLORE.

ವಿ ಸೂ—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈಮಾಡಿ ೧—೦—೦ ಸಿಂದಕೆ ೦—೨—೦ ಕಮಿಷನ್ ಪಡಿಯುತ್ತೇವೆ ಆರ್ಡರ್ ಗಿಡಗಳಿಗೆ, ತರಕಾರಿಗಳಿಗ ಪೂರ್ತಿ ಹಣ ಬರಬೇಕು.

---

# HOTEL INDIANA
## Bar and Restaurant

**ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು**
**ಯೋಚಿಸುವಿರೇಕೆ?**

## ಹೊಟೇಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ಸಿನ್ನದ್ಧವಿರುಗ್ಯೂತ್ತದೆ

**ಹೊಸ ಆಡಳಿತ!** ಹೊಸ ವ್ಯವಸ್ಥೆ!

**ಎಲ್ಲವೂ ಹೊಸತೇ ಆಗಿ**

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

*Proprietor,*
HOTEL INDIANA
***Hampankatta, Mangalore***

---

## ಧರ್ಮಾರ್ಥ ಬಹುಮಾನಗಳು



**1—0—0ಗೆ!**

**— ಯಾರಿಗೆ? —**

ರೂಪಾಯಿ 1—0—0 ಕೊಟ್ಟು 36 ಸೀಸೆ ಒಟ್ಟೊರೋಸ್ಟೂ ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— ೪ ಡಮ್ಮಿ ರಿಸ್ಟ್‌ವಾಚುಗಳು, ೧ ರೈಲ್ವೆಟೈಯಂ ಡಮ್ಮಿ ಪಾಕೆಟ್ ವಾಚು, ೧ ಸೇಫ್ಟಿರೇಜರ್, ೧ ಶೇವಿಂಗ್ ಬ್ರಶ್, ೧ ಶೇವಿಂಗ್ ಸೋಪು, ೧ ಕನ್ನಡಿ, ೧ ಪೌಡರ್, ೧ ಜತೆ ಗುಬ್ಬಿಗಳು, ೧ ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ, ೧ ಇಮಿಟೇಶನ್ ಮೋತಿ ಮಫ್ಲರ್, ೧ ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, ೩೦೦ ಅಡಿ ದೂರಕ್ಕೆ ಪ್ರಕಾಶ ಬೀರುವ ೧ ಟೋರ್ಚ್‌ಲೈಟ್ ಅಥವಾ ೧ ಅತ್ಯುತ್ತಮ 'B ಟಾಯಂಪೀಸು (10 ವರುಷ ಗ್ಯಾರಂಟಿ) ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. **ಇಂದೇ ಆರ್ಡರು ಕೊಡಿರಿ.**

**EASTERN TRADING COY.,**
*Post Box No 12204, CALCUTTA, (N. Y.)*

## ಉಡುಪಿ ತಾಲೂಕಿನಲ್ಲಿ
# ಕಾಂಗ್ರೆಸ್ ಪ್ರಚಾರಕಾರ್ಯ

ಉಡುಪಿ ತಾಲೋಕು ಕಾಂಗ್ರೆಸ್ ಕಮಿಟಿಯವರ ಪರವಾಗಿ ಶ್ರೀಗಳಾದ ಸಾಂಗಾಳ ಮಂಜುನಾಥ ನಾಯ್ಕ್, ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಸಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಮತ್ತು ಕೆ. ಕೆ. ಶೆಟ್ಟರು ಉಡುಪಿ ತಾಲೋಕಿನ ಕಟಪಾಡಿ, ಶಿರ್ವ, ಕಾಪು ಮತ್ತು ಪಡುಬಿದ್ರಿ ಕೇಂದ್ರಗಳಿಗೆ ಹೋಗಿ ಕಾಂಗ್ರೆಸ್ ಮೆಂಬರರನ್ನು ಸೇರಿಸಿ, ಸಭೆ ನಡಿಸಿ, ದೇಶದ ಪ್ರಕೃತದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಕೇಂದ್ರ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿರುವರು.

### ಕಟಪಾಡಿ ಕೇಂದ್ರ ಕಮಿಟಿ

ಇದೇ ತಾ 8ನೇ ಆದಿತ್ಯವಾರ ಕಟಪಾಡಿಯ ನೆಶನಲ್ ಕ್ಲಬ್ಬಿನ ಕಟ್ಟಡದಲ್ಲಿ ಶ್ರೀ| ಕೆ. ಕೆ. ಶೆಟ್ರ ಅಧ್ಯಕ್ಷತೆಯಲ್ಲಿ ಏಣಗುಡ್ಡೆ. ಮೂಡಬೆಟ್ಟು, ಸಾಂಗಾಳ, ಕೋಟೆ, ಮಟ್ಟು, ಕುರ್ಕಾಲು ಮತ್ತು ಬೆಳ್ಳೆ ಈ ಗ್ರಾಮಸ್ಥರ ಸಭೆ ನಡೆಯಿತು ಶ್ರೀ ಗಳಾದ ಕೆ. ಕೆ. ಶೆಟ್ರು, ಸಾಂಗಾಳ ಮಂಜುನಾಥ ನಾಯಕ್, ಡಾಕ್ಟರ್ ಕಿಣಿ, ಕೆ. ಗಣಪಯ್ಯ ಶೆಟ್ರು, ಲಕ್ಷ್ಮಣ ಶೆಣೈ, ಜನಾರ್ದನ ಕಿಣಿ, ಲಕ್ಷ್ಮೀನಾರಾಯಣ ನಾಯ್ಕರೇ ಮೊದಲಾದವರು ಮಾತಾಡಿದ ನಂತರ ಶ್ರೀಗಳಾದ ಲಕ್ಷ್ಮೀನಾರಾಯಣ ನಾಯ್ಕರು ಅಧ್ಯಕ್ಷರಾಗಿ ಒಂದು ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಲಾಯಿತು. ಶ್ರೀಗಳಾದ ಕುರ್ಕಾಲು ಗಣಪಯ್ಯ ಶೆಟ್ಟಿ ಮತ್ತು ಲಕ್ಷ್ಮಣ ಶೆಣೈಯವರನ್ನು ಜತೆ ಕಾರ್ಯದರ್ಶಿಯರನ್ನಾಗಿಯೂ ಶ್ರೀ| ಡಾಕ್ಟರ್ ಕಿಣಿಯವರನ್ನು ಕೋಶಾಧಿಕಾರಿಯನ್ನಾಗಿಯೂ ಆರಿಸಲಾಯಿತು ಆಮೇಲೆ ಶ್ರೀಗಳಾದ ಕೆ. ವಿಜಯ ಕಾಮತ್, ವೈ. ನಂದ್ಯಪ್ಪ ಹೆಗ್ಡೆ, ಕೆ. ದೇವಪ್ಪ ಶೆಟ್ಟಿ, ಕೆ. ಸಂಜೀವ ಬಲ್ಲಾಳ್, ಬಿ. ಎನ್ ಅಮ್ಮಣ್ಣ, ಕೆ. ಗುರುರಾಜಭಟ್, ಅಧಿಕಾರಿ ಪದ್ಮನಾಭರಾವ್, ಸೋಮಯ್ಯ ಶೆಟ್ಟಿ, ಲಕ್ಷ್ಮೀನಾರಾಯಣ ರಾವ್, ಕೃಷ್ಣರಾಜ ಶ್ಯಾನುಭಾಗ್, ವೈ. ನಾರಾಯಣ ಹೆಗ್ಡೆ ಮತ್ತು ಜನಾರ್ದನ ಕಿಣಿಯವರುಳ್ಳ ಕಾರ್ಯನಿರ್ವಾಹಕ ಕಮಿಟಿಯನ್ನೇರ್ಪಡಿಸಲಾಯಿತು. ಈ ಕಾರ್ಯನಿರ್ವಾಹಕ ಕಮಿಟಿಯವರು ಇದೇ ತಾ. 11ರಲ್ಲಿ ಶ್ರೀ| ಲಕ್ಷ್ಮೀನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ಪುನಃ ಸಭೆ ಸೇರಿ, ಅಂಡಮಾನ್ ಕೈದಿಗಳ ಕುರಿತು ಸಹಾನುಭೂತಿ ತೋರಿಸುವ, ಹೆಚ್ಚಿನ ಕಾಂಗ್ರೆಸ್ ಮೆಂಬರರನ್ನು ಸ್ಥಾಪಿಸುವ ಹಿಂದೀ ಮತ್ತು ಖಾದಿ ಪ್ರಚಾರಮಾಡುವ ನಿರ್ಣಯಮಾಡಿರುವರು.

### ಶಿರ್ವ ಕೇಂದ್ರ ಕಮಿಟಿ

ಶ್ರೀಗಳಾದ ಸಾಂಗಾಳ ಲಕ್ಷ್ಮೀನಾರಾಯಣ ನಾಯ್ಕ್, ಮಂಜುನಾಥ ನಾಯ್ಕ್, ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೆ ಮತ್ತು ಕೆ. ಕೆ. ಶೆಟ್ರು ತಾ. 12ನೇ ಗುರುವಾರ ಬೆಳಗ್ಗೆ ಮಂಚಕಲ್ಲಿಗೆ ಹೋಗಿ ನೂರು ಮಂದಿಯನ್ನು ಮೆಂಬರರನ್ನಾಗಿ ಸೇರಿಸಿದರು. ಸಂಜೆ ಶ್ರೀ| ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆ ನಡೆದಾಗ ಶ್ರೀ. ಕೆ. ಕೆ ಶೆಟ್ರು, ಅಧಿಕಾರ ಸ್ವೀಕರಿಸಿದುದರಿಂದ ಉಂಟಾಗಿರುವ ಪರಿಸ್ಥಿತಿಯನ್ನು ವಿವರಿಸಿ ದೀರ್ಘಭಾಷಣವಿತ್ತರು. ಆ ಮೇಲೆ ಅಧ್ಯಕ್ಷರೂ ಕಾಂಗ್ರೆಸ್ಸಿಗೆ ಮೆಂಬರರಾಗಿ ಸೇರಿ ಸಹಾಯಮಾಡುವ ಉದ್ದೇಶವನ್ನು ವಿವರಿಸಿದರು. ಅನಂತರ ಶಿರ್ವ, ಕುತ್ಯಾರು ಕಳತೂರು ಗ್ರಾಮಗಳಿಗೆ ಕಾಂಗ್ರೆಸ್ ಕಮಿಟಿಯೊಂದನ್ನು ಸ್ಥಾಪಿಸಿ ಅದರ ಅಧಿಕಾರಿಗಳನ್ನು ಆರಿಸಲಾಯಿತು. ಈ ಕಾಂಗ್ರೆಸ್ ಕಮಿಟಿಯವರು ಇದೇ ತಾ. 14 ರಲ್ಲು ಪುನಃ ಸಭೆ ಸೇರಿ, ಅಧಿಕಾರಿಗಳು ಕೆಲವರನ್ನು ಬದಲಾಯಿಸಿದರು. ಕಾಂಗ್ರೆಸ್ ಕಮಿಟಿ ಮೆಂಬರರೆಲ್ಲಾ ಖಾದಿಯನ್ನುಡಬೇಕು; ಪ್ರತಿಯೊಬ್ಬನೂ ಹತ್ತತ್ತು ಕಾಂಗ್ರೆಸ್ ಮೆಂಬರರನ್ನು ಸೇರಿಸಬೇಕೆಂದಾಯಿತು. ಸಭೆಯಲ್ಲಿ ಬದಲಾವಣೆ ಮಾಡಿದಂತೆ ಈ ಶ್ರೀ| ಕೆ. ಸರ್ವೋತ್ತಮ ಕಾಮತರು ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರು. ಶ್ರೀ| ಕೆ. ಎಲ್ಲಪ್ಪ ಹೆಗ್ಡೆಯವರು ವೈಸ್ ಪ್ರೆಸಿಡೆಂಟರು. ಕೆ. ರಾಮಚಂದ್ರ ಶೆಣೈಯವರು ಕೋಶಾಧಿಕಾರಿ ಮತ್ತು ಎಮ್. ಸಂಕಪ್ಪ ಹೆಗ್ಡೆಯರು ಕಾರ್ಯದರ್ಶಿಗಳು. ಶ್ರೀಗಳಾದ ಕೆ. ತಿಮ್ಮಪ್ಪ ಹೆಗ್ಡೆ, ಮುಹಮ್ಮದ್ ಹಾಸೀಮ್ ಸಾಹೇಬ್, ಸಾತುರ್ನಿ ಮಿನೇಜಿಸ್, ಕೆ. ಜೋಗಿ ಶೆಟ್ಟಿ, ಸೂರ್ಯಣ್ಣ ಶೆಟ್ಟಿ, ಸಿದ್ದ ಶೆಟ್ಟಿ, ಶ್ರೀನಿವಾಸ ಕುಡ್ವ, ಕೆ. ಕುಮಾರ ಹೆಗ್ಡೆ, ಕೆ. ಜಿನರಾಜ ಶೆಟ್ಟಿ, ಎಮ್. ವೆಂಕಟ್ರಮಣ ಕಾಮತ್, ಎಮ್. ಚಿನ್ನ ಶೆಟ್ಟಿ, ಮಿ. ಮತ್ತಾಯಸ್ ಫೆರ್ನಾಂಡಿಸ್ ಮತ್ತು ಕೆ. ಮುದ್ದಣ್ಣ ಶೆಟ್ಟಿ ಇವರು ಕಾರ್ಯನಿರ್ವಾಹಕ ಕಮಿಟಿ ಮೆಂಬರರು.

### ಕಾಪು ಕೇಂದ್ರ ಕಮಿಟಿ

ಶ್ರೀ|ಗಳಾದ ಮಂಜುನಾಥ ನಾಯ್ಕ್, ಲಕ್ಷ್ಮೀನಾರಾಯಣ ನಾಯ್ಕ್, ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೆ ಮತ್ತು ಕೆ. ಕೆ. ಶೆಟ್ರು ತಾ. 13ನೇ ಬೆಳಗ್ಗೆ ಕಾಪಿಗೆ ಹೋಗಿ ಕಾಂಗ್ರೆಸ್ ಮೆಂಬರರನ್ನು ಸೇರಿಸಿ ಸಂಜೆ ಡಾಕ್ಟರ್ ಬೇಕಲರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ| ಕೆ. ಕೆ. ಶೆಟ್ಟರು ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸುವ ಆವಶ್ಯಕತೆಯ ಕುರಿತು ಮಾತಾಡಿದರು. ಆ ಮೇಲೆ ಕಾಪು ಕೇಂದ್ರ ಕಮಿಟಿಯೊಂದು ಸ್ಥಾಪಿಸಲ್ಪಟ್ಟಿತು.

### ಪಡುಬಿದ್ರೆ ಕೇಂದ್ರ ಕಮಿಟಿ

ಮೇಲಿನ ಕಾಂಗ್ರೆಸ್ ಕೆಲಸಗಾರರು ಇದೇ ತಾ. 14ನೇ ಶನಿವಾರ ಪಡುಬಿದ್ರೆಗೆ ಹೋಗಿ ಕಾಂಗ್ರೆಸ್ ಮೆಂಬರರನ್ನು ಸೇರಿಸಿದರು. ಪಡುಬಿದ್ರೆ ಶಾಲೆಗೆ ಹೋಗಿ ಅಲ್ಲಿ ನೆರೆದಿದ್ದ ಅಧ್ಯಾಪಕರ ಸಭೆಯಲ್ಲಿ ಶ್ರೀ. ಕೆ. ಕೆ. ಶೆಟ್ರು, ಕಾಂಗ್ರೆಸಿನ ಉದ್ದೇಶ ಮತ್ತು ತತ್ವಗಳನ್ನು, ಅಧ್ಯಾಪಕರು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರಮಾಡಿ ಕಾಂಗ್ರೆಸಿಗೆ ಸಹಾಯ ಮಾಡಬೇಕೆಂದು ಕೇಳಿಕೊಂಡು ದೀರ್ಘ ಭಾಷಣವಿತ್ತರು. ಆ ಮೇಲೆ ಕೆಲಮಂದಿ ಅಧ್ಯಾಪಕರು ಕಾಂಗ್ರೆಸ್ ಮೆಂಬರರಾಗಿ ಸೇರಿದರು. ಸಂಜೆ ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆ ನಡೆದಾಗ ಶ್ರೀ. ಕೆ. ಕೆ. ಶೆಟ್ರು ಕಾಂಗ್ರೆಸ್ ಕಮಿಟಿಯ ಮೂಲಕ ಯಾವ ಕೆಲಸವನ್ನೆಲ್ಲಾ ಮಾಡಬಹುದೆಂಬುದನ್ನು ವಿವರಿಸಿದರು. ಆ ಮೇಲೆ ಪಡುಬಿದ್ರೆ ನಡ್ಸಾಲು ಮತ್ತು ಪಾದೆಬೆಟ್ಟು ಗ್ರಾಮಗಳಿಗೊಂದು ಕೇಂದ್ರ ಕಮಿಟಿಯು ಸ್ಥಾಪಿಸಲ್ಪಟ್ಟಿತು. ಶ್ರೀ. ಪದ್ಮನಾಭ ಶ್ಯಾನುಭಾಗರು ಅಧ್ಯಕ್ಷರು, ಶ್ರೀ|ಗಳಾದ ಕರಿಯಣ್ಣ ಶೆಟ್ರು ಮತ್ತು ಡಾಕ್ಟರ್ ಎಚ್. ಎನ್. ಗಡಿಯಾರರು ಜತೆಕಾರ್ಯದರ್ಶಿಗಳು. ಶ್ರೀ ಸುಬ್ಬಣ್ಣ ಶಾನುಭಾಗರು ಕೋಶಾಧಿಕಾರಿ. ಶ್ರೀ. ಗಳಾದ ರಾಮಕೃಷ್ಣ ಶಾನುಭಾಗ್, ಶೀನ ಶೆಟ್ಟಿ, ಕೋಮ ಪೂಜಾರಿ, ಬಾಬುರಾಯ ಆಚಾರಿ, ದೇಜು ಶೆಟ್ಟಿ, ಪಾಂಡ್ಯಾರು ಕಾಂತಪ್ಪ ಶೆಟ್ಟಿ, ಬಾದೆಟ್ಟು ನಾರ್ಣಪ್ಪಯ್ಯ, ರಾಮ ಶರ್ಮ ಇವರು ಕಾರ್ಯನಿರ್ವಾಹಕ ಕಮಿಟಿ ಮೆಂಬರರು.

### ಕಲ್ಯಾಣಪುರ ಕೇಂದ್ರ ಕಮಿಟಿ

ಕಳೆದ ಆದಿತ್ಯವಾರ ಶ್ರೀ. ಮಂಜುನಾಥ ನಾಯ್ಕರು ಹೋಗಿ ಕಲ್ಯಾಣಪುರದಲ್ಲೊಂದು ಕೇಂದ್ರ ಕಮಿಟಿಯನ್ನು ಸ್ಥಾಪಿಸಿರುವರು. ಈ ಕಮಿಟಿಯ ಸಭೆಯೊಂದು ಬರುವ ಆದಿತ್ಯವಾರ ಸಂಜೆ ನಡೆದು ಸಂಘಟಿತವಾಗಿ ಕೆಲಸ ನಡಿಸುವ ಕುರಿತು ಪರ್ಯಾಲೋಚಿಸಲಾಗುವುದು.

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರು ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯ ಪ್ರತಿಯೊಂದು ಸರ್ಕಲುಗಳಲ್ಲಿ ಕೇಂದ್ರ ಕಮಿಟಿಗಳನ್ನು ಇನ್ನು 10-15 ದಿವಸಗಳಲ್ಲಿ ಸ್ಥಾಪಿಸಲಿರುವರು. ಇದು ಹೊರತು ಇತರ ಹಳ್ಳಿಗಳಲ್ಲಿ ಕಮಿಟಿಗಳು ಬೇಕೆಂದು ಅಪೇಕ್ಷಿಸುವವರು ಕೂಡಲೆ ತಾಲೂಕು ಕಾಂಗ್ರೆಸ್ ಕಮಿಟಿ, ನವಯುಗ ಆಫೀಸು ಉಡುಪಿ, ಈ ವಿಳಾಸಕ್ಕೆ ಬರಕೊಳ್ಳಬೇಕು. ಇನ್ನು ಮುಂದೆ ಕಾಂಗ್ರೆಸ್ ಕಮಿಟಿಗೆ ಸಂಬಂಧಿಸುವ ಎಲ್ಲಾ ಪತ್ರವ್ಯವಹಾರವನ್ನು ಮೇಲಿನ ವಿಲಾಸಕ್ಕೆ ನಡಿಸಬೇಕು. ಬೇರೆ ಬೇರೆ ಕೇಂದ್ರಗಳಿಂದ ಮೆಂಬರರನ್ನು ಸೇರಿಸಲು ಪುಸ್ತಕಗಳು ಬೇಕೆಂದು ನಮ್ಮೊಡನೆ ಹಲವರು ಕೇಳಿರುವರಾದರೂ ನಮ್ಮಲ್ಲಿ ಪುಸ್ತಕಗಳಿಲ್ಲದಿರುವುದರಿಂದ ಪುಸ್ತಕ ಕಳುಹಿಸಲಾಗಲಿಲ್ಲ. ಅದು ಹೊರತು ನಮಗೇನೇ ಕೆಲಸಮಾಡಲು ಬಹಳ ತೊಂದರೆಯಾಗಿದೆ. ಪುಸ್ತಕಗಳು ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದಲೂ ಬಂದಿರುವುದಿಲ್ಲ, ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ತಂತಿ ಬಿಟ್ಟಿರುತ್ತಾರೆ.

ಸಾಂಗಾಳ ಮಂಜುನಾಥ ನಾಯ್ಕ್
ಪ್ರೆಸಿಡೆಂಟ್
ಉಡುಪಿ ತಾ. ಕಾಂಗ್ರೆಸ್ ಕಮಿಟಿ.


**JOBS FOR UNEMPLOYED RUPEES.**

You know vividly the evils of unemployment. But probably you do not know that unemployed money causes as much poverty and suffering. A bank is an employment agency for rupees. It finds jobs for them and thus contributes to the prosperity of the nation. You can help in this work by investing your savings in the bank.

**Resources of A CRORE**
ESTD. 1906
**CANARA BANK**
LIMITED.

ರೋಲ್ಡ್ ಗೋಲ್ಡ್, ನಿಕ್ಕಲ್
ಬೆಳ್ಳಿಯ, 9 ಕ್ಯಾರೆಟಿನ ಗಟ್ಟಿ
ಚಿನ್ನದ ರಿಸ್ಟ್ ವಾಚುಗಳು, ಟೈಂಪೀ
ಸು, ಪಾಕೆಟ್ ವಾಚು ಮತ್ತು
ಟೈಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.

*The Manager,*
**The Silver Jubilee Watch Co,**
*Post Box No. 571, BOMBAY.*

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸಾಫರ್ ಪೋರಿನ ತೋಟಿ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

**Bihar Nursery,**
**P. O. Bihar**
*Nursery (Dubhanga)* **BIHAR**

# ಮಹಾಜನರಲ್ಲಿ ವಿನಂತಿ

## ಶ್ರೀ ಕೃಷ್ಣ ದೇವರ ಮಠದ ಕನಕನ ಕಿಟಕಿ ಇದ್ದಲ್ಲಿ ಮಹಾದ್ವಾರವಿಡುವುದರ ಕುರಿತಾದ ಭಿನ್ನಾಭಿಪ್ರಾಯಗಳಿಗೆ ಸಮಾಧಾನ.



ಉಡುಪಿ ಶ್ರೀ ಕೃಷ್ಣದೇವಸ್ಥಾನದ ಪಶ್ಚಿಮದಲ್ಲಿ ಕನಕನ ಕಿಟಕಿ ಇರುವ ಸ್ಥಳ ಇಲ್ಲೇ ಮಹಾದ್ವಾರವನ್ನಿಡಬೇಕೆಂದು ಶ್ರೀ ಪೇಜಾವರ ಮಠದವರ ಹಾರೈಕೆ.

ಉಡುಪಿ ಶ್ರೀಕೃಷ್ಣದೇವರ ಮಠದ ಇದಿರು ಈಗ ಕನಕನಕಿಟಕಿ ಇರುವ ಸ್ಥಳದಲ್ಲಿ ಮಹಾಜನರ ಅನುಕೂಲತೆಗೋಸ್ಕರ ಒಂದು ಮಹಾದ್ವಾರವನ್ನಿಡಬೇಕೆಂದಿರುವ ನಮ್ಮ ಉದ್ದೇಶಕ್ಕೆ ಕೆಲವರು ಅಪಾರ್ಥವನ್ನು ಕಲ್ಪಿಸಿ ಅಲ್ಲಲ್ಲಿ ಗೊಣಗುಟ್ಟುತ್ತಿರುವುದರಿಂದಲೂ, ಪತ್ರಿಕೆಯಲ್ಲೂ ಕೂಡ ವಿವಿಧ ಅರ್ಥಗಳಿಂದ ವರ್ತಮಾನಗಳು ಪ್ರಕಟಿಸಲ್ಪಟ್ಟದ್ದರಿಂದಲೂ ನಮಗೆ ಈ ಲೇಖನವನ್ನು ಮಹಾಜನರ ಮನಸ್ಸಮಾಧಾನಕ್ಕೋಸ್ಕರ ಬರೆಯುವ ಆವಶ್ಯಕತೆಯು ಸಂಭವಿಸಿತು.

ಈಗ ಕನಕನಕಿಟಕಿ ಇರುವ ಸ್ಥಳದಲ್ಲಿ ಒಂದು ಮಹಾದ್ವಾರವನ್ನಿಡಬೇಕೆಂದು ನಮಗೆ ಉದ್ದೇಶವಿರುವುದೇಕೆಂದರೆ ನಿಜ ಶ್ರೀ ಮಠಕ್ಕೆ ಈಗ ಸರಿಯಾದ ಮಹಾದ್ವಾರವೇ ಇಲ್ಲ. ಎಲ್ಲಿಯೋ ಹಿಂಬದಿಯಿಂದ ಹೇಗೋ ಹೋಗಿ ಎಲ್ಲಿಯೋ ದೇವರ ದರ್ಶನ ಮಾಡುವುದೂ, ಪೂಜೆಯ ಸಮಯದಲ್ಲಿ ಎಲ್ಲಿಯೋ ವಾದ್ಯಾದಿಗಳು ನಡೆಯುವುದೂ, ಉತ್ಸವ ಸಮಯಗಳಲ್ಲಿಯೂ ಇತರ ಸಮಯಗಳಲ್ಲಿಯೂ ದೇವರು ಹೊರಗೆ ಬರಬೇಕಾದರೆ ಹಿಂಬದಿಯ ಮಾರ್ಗವನ್ನನುಸರಿಸುವುದೂ, ರಥಾದಿವಾಹನಗಳು ದೇವರ ಇದಿರುಬಂದು ನಿಲ್ಲದೆ ಯಾವುದೋ ಒಂದು ಸಂದು ಮೂಲೆಯಲ್ಲಿ ಬಂದು ನಿಲ್ಲುವುದೂ ಇಲ್ಲಿಯ ವಿಚಿತ್ರ ಪದ್ಧತಿಯಾಗಿರುತ್ತದೆ. ಅಲ್ಲದೆ ಉತ್ಸವಕಾಲಗಳಲ್ಲಿ ಜನಸಮ್ಮರ್ದವು ವಿಶೇಷವಾಗಿರುವಾಗ ಈಗಿನ ಇಕ್ಕಟ್ಟಾದ ದ್ವಾರದಿಂದ ಮಂದಿಯು ದರ್ಶನಕ್ಕೆ ಹೋಗಿಬರುವಾಗಒದಗುವ ಉಪದ್ರವಗಳು ಒಂದೆರಡು ಬಗೆಯವುಗಳಲ್ಲ. ಹೆಚ್ಚಾಗಿ ಹೆಂಗಸರು ಮಕ್ಕಳು ಅಲ್ಲಿ ಅನೇಕ ತೊಂದರೆಗಳಿಗೆ ಗುರಿಯಾಗುತ್ತಾರೆ. ಈ ಕುಂದು ಕೊರತೆಗಳಿಗೆಲ್ಲಾ ದೇವರ ಇದಿರಿನಲ್ಲಿ ಮಹಾದ್ವಾರವನ್ನಿಡುವುದೊಂದೇ ಪರಿಹಾರ ಎಂಬುದನ್ನು ಅಲ್ಲಗಳೆಯುವರಾರು? ಆದರೆ ಹಾಗೆ ಮಾಡುವುದರಲ್ಲಿ ಕೆಲವರಿಗೆ ಸಮಾಧಾನವಿಲ್ಲವೆಂತಲೂ, ಅವರಲ್ಲೂ ಅಷ್ಟಮಠಿಯರಲ್ಲೇ ಭಿನ್ನಾಭಿಪ್ರಾಯವಿರುವುದೆಂದೂ ತಿಳಿದುಬಂದಿದೆ. ಪ್ರತಿಯೊಂದು ಕಾರ್ಯದಲ್ಲಿಯೂ ಭಿನ್ನಾಭಿಪ್ರಾಯವಿರುವುದು ಸಹಜವೆಂತಲೂ, ಕೆಲವರು ಸರಿಯಾದ ವಿವರ ಗೊತ್ತಾಗದೆ ಅಸಮಾಧಾನಪಡುವರೆಂತಲೂ, ಹಿಂದೆ ಇದ್ದುದಕ್ಕೆ ಸ್ವಲ್ಪ ಬದಲಾವಣೆ ಉಂಟಾದಾಗ ಇಂತಹ ಆಕ್ಷೇಪಗಳು ಸ್ವಾಭಾವಿಕವೆಂತಲೂ, ಅಂತಹ ಬದಲಾವಣೆಯಾದ ಮೇಲೆ ಜನರು ಆ ವಿಷಯದಲ್ಲಿ ಸಮಾಧಾನಪಡುತ್ತಾರೆಂತಲೂ ಈಗ ನಮಗೆ ಅನುಭವಸಿದ್ಧವಾಗಿದೆ. ಆದರೆ ಪ್ರಕೃತದ ಈ ವಿಷಯವು ನಮ್ಮ ಒಂದು ಮಠಕ್ಕೆ ಮಾತ್ರ ಸಂಬಂಧಪಟ್ಟದ್ದಲ್ಲವಾದ್ದರಿಂದ ಮಠೀಯರಲ್ಲಿಯೂ ಜನತೆಯಲ್ಲಿಯೂ ಅಸಮಾಧಾನವಿರುವುದಾದರೆ ಈ ಕಾರ್ಯದಲ್ಲಿ ನಾವು ಕೈಯಿಕ್ಕುವುದೇ ಇಲ್ಲ. ಈ ವಿಷಯದಲ್ಲಿ ನಮ್ಮಲ್ಲಿ ಸ್ವತಃ ಮತ್ತು ಪರಸ್ಪರ ಸಹ ಸೂಚಿಸಿದ ಹಲಕೆಲವು ಆಕ್ಷೇಪಗಳನ್ನು ನಮಗೆ ಯುಕ್ತತೋರಿದ ರೀತಿಯಲ್ಲಿ ಈ ಕೆಳಗೆ ವಿಮರ್ಶೆಮಾಡಿದ್ದೇವೆ. ಇನ್ನು ಜನತೆಯು ಈ ಭಾಗದಲ್ಲಿ ಹೆಚ್ಚಿನ ವಿಮರ್ಶೆಮಾಡಿ, ಬೇಕೆಂದು ಅಪೇಕ್ಷಿಸುವುದಾದರೆ ನಾವು ಹಾಗೆ ಮಹಾದ್ವಾರವನ್ನಿಡಲಿಕ್ಕೆ ತಯಾರಿದ್ದೇವೆ. ಆಕ್ಷೇಪವೆತ್ತುವ ಇತರ ಕೆಲವು ಮಠೀಯರನ್ನು ಸಮಾಧಾನಪಡಿಸುವ ವಿಷಯದಲ್ಲಿಯೂ ಕೂಡ ಜನತೆಯು ನಮಗೆ ಬೆಂಬಲವಾಗಿರಬೇಕಾಗಿ ನಮ್ಮ ವಿನಂತಿ.

ಮಹಾದ್ವಾರವನ್ನು ತೆರೆದರೆ ದ್ವಾರವು ಸಾರ್ವಜನಿಕವಾಗಿ ಹರಿಜನರಿಗೆ ಸಹ ಪ್ರವೇಶಮಾಡಲು ಅನುಕೂಲವಾಗುತ್ತದೆಂದು ನಮ್ಮಲ್ಲಿ ಕೆಲವರು ಮುಖತಃ ಆಕ್ಷೇಪಿಸಿ, ಅದು ಸಹಜವಾದ ಆಕ್ಷೇಪವಲ್ಲವೆಂದು ನಮ್ಮ ಉತ್ತರದಿಂದ ಅವರು ತಾವಾಗಿಯೇ ಸಮಾಧಾನಗೊಂಡಿರುವರೆಂದು ನಮ್ಮ ನಂಬಿಕೆ. ಪ್ರಕೃತ ಶ್ರೀಕೃಷ್ಣದೇವರ ಮಠಕ್ಕೆ ಹರಿಜನರಿಗೂ ಕೂಡ ಪ್ರವೇಶ ಕೊಡುವುದು ಆಗತ್ಯವೋ ಅಲ್ಲವೋ ಎಂಬ ವಿಷಯವನ್ನು ನಾವು ಚರ್ಚಿಸುವುದಿಲ್ಲ. ಈಗ ಮಹಾದ್ವಾರವಿಲ್ಲದಿರುವುದರಿಂದ ಮಾತ್ರ ಹರಿಜನರ ಪ್ರವೇಶಕ್ಕೆ ತಡೆಯುಂಟಾಗಲಿಲ್ಲ. ಈಗಿರುವ ಬಾಗಿಲುಗಳಿಂದಲೇ ಅವರು ಪ್ರವೇಶ ಮಾಡಬಹುದು. ಅನಂತಶಯನವೇ ಮೊದಲಾದ ದೇವಸ್ಥಾನಗಳಲ್ಲಿ ಹೊಸತಾದೊಂದು ಮಹಾದ್ವಾರವಿಟ್ಟು ಅವರಿಗೆ ಪ್ರವೇಶ ಕೊಡಲಿಲ್ಲ. ಇಲ್ಲಿಯೂ ಸಹ ಮಹಾದ್ವಾರವಿಡುವ ಇತರ ದೇವಾಲಯಗಳಲ್ಲಿ ಹರಿಜನರು ಪ್ರವೇಶ ಮಾಡಲಿಲ್ಲ. ಮಹಾದ್ವಾರವನ್ನು ತೆರೆದ ಮಾತ್ರದಿಂದ ಹರಿಜನರು ನುಗ್ಗುವುದಿಲ್ಲ. ನುಗ್ಗಬೇಕೆಂದೂ ಇಲ್ಲ. ಕೆಲವು ಸಮಯದ ಹಿಂದೆ ಪ್ರವೇಶ ಕೊಡದಿದ್ದ ಹಲವುಜನಾಂಗಗಳಿಗೆ ಇದೇ ದ್ವಾರದಿಂದಲೇ ಪ್ರವೇಶ ಸಿಕ್ಕಿರುವುದು. ಹರಿಜನರ ಪ್ರವೇಶವು ಕೇವಲ ಅಧಿಕಾರಿಗಳ ಮತ್ತು ಸ್ಥಳೀಯ ಮುಖಂಡರ ಅಭಿಪ್ರಾಯಗಳನ್ನು ಮಾತ್ರ ಹೊಂದಿಕೊಂಡಿರುತ್ತದೆ. ಅಭಿಮತವಿಲ್ಲದಿದ್ದರೆ ಹೊಸ ಮಹಾದ್ವಾರವಿಟ್ಟರೂ ಪ್ರವೇಶ ಕೊಡುವ ಆಗತ್ಯವಿಲ್ಲ. ಚರಿತ್ರಾರ್ಹವಾದ ಕನಕನ ಕಿಟಕಿಯನ್ನು ತೆಗೆದಂತಾಗಲಿಲ್ಲವೇ ಎಂಬುದು ಇನ್ನೊಂದು ಪ್ರಶ್ನೆ. ಇಲ್ಲಿ ಕನಕನ ಕಿಟಕಿ ಎಂದರೆ ಏನರ್ಥವೆಂದು ಸ್ವಲ್ಪ ವಿಚಾರಿಸಬೇಕಾಗಿದೆ. ಕನಕನು ದೇವರನ್ನು ನೋಡಿದ ಕಿಟಕಿ ಎಂದರ್ಥವೇ? ಅಥವಾ ಕನಕನು ಇಡಿಸಿದ ಕಿಟಕಿ ಎಂದರ್ಥವೇ? ಕನಕನು ನೋಡಿದ ಕಿಟಕಿ ಎಂದರ್ಥವಾಗಲು ಕಾರಣವಿಲ್ಲ. ಏಕೆಂದರೆ ದೇವರು ಹಿಂದೆ ಪೂರ್ವ ಮುಖವಾಗಿ ಇದ್ದರೆಂದೂ, ಕನಕನಿಗೆ ಇದಿರು ಬಂದು ದರ್ಶನ ಮಾಡಲು ಬಿಡದ ಕಾರಣ ಹಿಂದಿನಿಂದ ಬೀದಿಯಲ್ಲಿ ಕುಳಿತುಕೊಂಡು ದೇವರನ್ನು ಆತನು ಧ್ಯಾನಮಾಡಲು ದೇವರು ತಿರುಗಿ ನಿಂತರೆಂಬ ಕಥೆಯನ್ನು ಎಲ್ಲರೂ ಬಲ್ಲರು. ಹೀಗಿರುವಾಗ ದೇವರ ಹಿಂಬದಿ ಮುಂಚೆ ಕಿಟಕಿ ಇತ್ತೆಂಬುದಕ್ಕೆ ಆಧಾರವಿಲ್ಲ. ಅದು ಹೊರತು ದೇವರ ಹಿಂಬದಿಯಲ್ಲಿ ಎಲ್ಲಿಯೂ ಕಿಟಕಿ ಇದ್ದುದು ಕಂಡು ಬರುವುದಿಲ್ಲ. ಮತ್ತು ಧ್ಯಾನ ಶಕ್ತಿಯಿಂದ ದೇವರನ್ನು ತಿರುಗಿ ನಿಲ್ಲಿಸಲು ಸಾಮರ್ಥ್ಯವಿದ್ದ ಕನಕನು ತಿರುಗಿ ನಿಂತ ದೇವರನ್ನು ಕಿಟಕಿಯಿಂದ ನೋಡಿದನೆಂದೂ, ಇಲ್ಲವಾದರೆ ಗೋಡೆ ಅಡ್ಡ ಬರುತ್ತನೆಂದೂ ನಾವು ಕಲ್ಪಿಸುವ ಆಗತ್ಯವೂ ಇಲ್ಲ, ಆತನಿಗೆ ಗೋಡೆಯು ಅಡ್ಡ ಬರಲೂ ಇಲ್ಲ. ಕಿಟಕಿ ಇಡಿಸಲಿಕ್ಕೆ ಅವನಿಗೆ ಅಧಿಕಾರವೂ ಆಗತ್ಯವೂ ಇಲ್ಲ. ಆದುದರಿಂದ ಕನಕನು ದೇವರನ್ನು ತಿರುಗಿಸಿದ ಮೇಲೆ ದೇವರ ದರ್ಶನಕ್ಕೆ ಉಳಿದವರಿಗೆ ಅನುಕೂಲವಾಗುವಂತೆ ಕನಕನಿಂದಾಗಿ ಇಟ್ಟ ಕಿಟಕಿ ಎಂದು ಅರ್ಥಮಾಡಬೇಕಾಗಿದ್ದರೆ ಅಂತಹ ಕಿಟಕಿಯನ್ನು ತೆಗೆದು ಬಾಗಿಲು ಇಡುವುದರಲ್ಲಿ ಯಾವ ಅಭ್ಯಂತರವೂ ತೋರುವುದಿಲ್ಲ. ಅದು ಹೊರತು ಈಗ ಮಧ್ಯರಾತ್ರಿ ಸಮಯದಲ್ಲಿಯೂ ದೇವರ ದರ್ಶನಕ್ಕೆ ಅನುಕೂಲವಿರುವಂತೆ ಮುಂದೆ ಬಾಗಿಲು ಮಾಡಿದರೂ ಕೂಡ ಅದರ ಮಧ್ಯದಲ್ಲಿಯೇ ಒಂದು ಕಿಟಕಿ ಇಟ್ಟು ಈಗಿದ್ದ ಅನುಕೂಲತೆಯನ್ನೇ ಒದಗಿಸಿಕೊಡುವ ಆಲೋಚನೆಯೂ ಇದೆ. ಮಠಗಳಿಗೆ ಮಹಾದ್ವಾರಗಳನ್ನಿಟ್ಟರೆ ಹಲವು ವಿಧದ ಜನಾಂಗದವರಿಗೆ ಒಳಗೆ ಬರಲು ಅನುಕೂಲವಾಗಿ ಸಂಸ್ಥೆಯು ಸಾರ್ವಜನಿಕವಾಗುತ್ತದೆಂದು ಮಗದೊಂದು ಆಕ್ಷೇಪ. ಇದಕ್ಕೆ ಕೂಡಲೆ ಸಮಾಧಾನ ಹೇಳುವುದು ಬಹಳ ಕಷ್ಟ. ಏಕೆಂದರೆ ಇದು ಅವರವರ ಮನೋವೃತ್ತಿಯನ್ನು ಹೊಂದಿಕೊಂಡಿರುತ್ತದೆ. ಮನೋವೃತ್ತಿಯು ಸಂಕುಚಿತವಾಗಿದ್ದರೆ, ಇಂತಹ ಆಕ್ಷೇಪಗಳು ಹುಟ್ಟುತ್ತವೆ. ವಿಶಾಲವಾಗಿದ್ದರೆ ಹುಟ್ಟುವುದೇ ಇಲ್ಲ. ಕೆಲವರಿಗೆ ತಮ್ಮ ಮನೆಗೆ ಎಲ್ಲರೂ ಬಂದು ಹೋಗುವಂತಾಗಬೇಕೆಂದು ಇಷ್ಟ. ಇನ್ನೂ ಕೆಲವರಿಗೆ ಯಾರೂ ಬಾರದಂತಾಗಬೇಕೆಂದಿಷ್ಟ. ಆದರೆ ಪ್ರಕೃತ ಈ ಸಂಸ್ಥೆಯು ಸಾರ್ವಜನಿಕವಾಗಿಯೇ ಇರುತ್ತದೆಂಬುದನ್ನು ಯಾರೂ ಅಲ್ಲಗಳೆಯಲಾರರು. ದೇವರ ದರ್ಶನವನ್ನು ಎಲ್ಲರೂ ಮಾಡಬಾರದೆಂಬ ಸಂಕುಚಿತ ಬುದ್ಧಿಯು ಯೋಗ್ಯವಲ್ಲ. ಶಾಸ್ತ್ರ ದೃಷ್ಟಿಯಿಂದಲೂ ಕೂಡ ದೇವರ ದರ್ಶನವು ಯಾರಿಗೂ ವಿರೋಧವಲ್ಲವು. ದೇವಸ್ಥಾನಗಳೂ ಮಠಗಳೂ ಅಜ್ಞ ಜನರನ್ನುದ್ದೇಶಿಸಿಯೇ ನಿರ್ಮಿಸಲ್ಪಟ್ಟಿರುತ್ತವೆ. ಅಪ್ರಬುದ್ಧ ಜನರಿಗೇನೇ ಮೂರ್ತಿ ಪೂಜೆಯು ವಿಧಿಸಲ್ಪಟ್ಟಿರುವುದು. ಪ್ರಬುದ್ಧ ಜನರಿಗೆ ಅದು ಆಗತ್ಯವೇ ಇಲ್ಲ. ಅವರಿಗೆ ದೇವರು ಸರ್ವತ್ರ ವ್ಯಾಪ್ತನೆಂದೇ ತಿಳುವಳಿಕೆ ಇರುತ್ತದೆ.

ಆದುದರಿಂದ ಮೇಲಿನ ಆಕ್ಷೇಪಗಳು ಕೇವಲ ಕ್ಷುದ್ರ ಮತ್ತು ಅಸಂಬದ್ಧವೆಂದೂ ಮಹಾದ್ವಾರವಿಡುವುದು ಅತ್ಯಗತ್ಯವೆಂದೂ ನಮ್ಮ ಹೇಳಿಕೆ. ಆದುದರಿಂದ ಈ ವಿಷಯವನ್ನು ವಿಮರ್ಶೆ ಮಾಡಿ ಜನತೆಯು ಈ ಕೆಲಸಕ್ಕೆ ನೆರವಾಗಲೆಂದು ನಮ್ಮ ಕೋರಿಕೆ.

**ಮಿಯಾರ್ ನರಸಿಂಹಾಚಾರ್ಯ,**
ಜನರಲ್ ಏಜಂಟ್, ಶ್ರೀ ಪೇಜಾವರ ಮಠ,
ಉಡುಪಿ. ತಾ. 10-8-'37


## TENDER NOTICE.

Tenders of rates to reach the Assistant Director before 31-8-1937 are invited for transporting salt bags and stacking them in fish curing yards and salt gollahs on the West coast from vessels or railway waggons and for sundry other works. Details and terms of contract can be obtained from the Assistant Director of Fisheries (Coast) Calicut.

**Assistant Director of Fisheries (*Coast*), *Calicut*.**



## ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. 5ರ, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೆ ಬರೆಯಿರಿ.

**Bal Kala Stores,**
P. O. Kansisiuri (*Da bhanga*)

## ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

**ಟೌನ್ ಕಾಂಗ್ರೆಸ್ ಕಮಿಟಿ**—ಕಳೆದ ತಾ ೧೧ರಲ್ಲಿ ಮಂಗಳೂರಲ್ಲಿ ಟೌನ್ ಕಾಂಗ್ರೆಸ್ ಕಮಿಟಿಯ ಸಭೆಯು ಸೇರಿ, ಸಮಿತಿಗೆ ಒಂದು ಕಾನಸ್ಟಿಟ್ಯೂಶನನ್ನು ತಯಾರಿಸಿ ಅದನ್ನು ಸ್ವೀಕರಿಸಿತು ನಗರದಲ್ಲಿ ಡಿವಿಜನ್ ಕಾಂಗ್ರೆಸ್ ಸಮಿತಿಗಳನ್ನು ಏರ್ಪಡಿಸಬೇಕೆಂದೂ ಮತ್ತು ಅವುಗಳಿಗೆ ಎಷ್ಟು ಪ್ರಾತಿನಿಧ್ಯವನ್ನು ಕೊಡಬೇಕೆಂಬುದನ್ನೂ ನಿರ್ಧರಿಸಲಾಯಿತು

**ಚುನಾವಣಾ ಸಮಿತಿ**—ಮಂಗಳೂರು ನಗರ ಸಭೆಯ ಚುನಾವಣೆಯನ್ನು ನಡೆಸುವರೆ ಏರ್ಪಡಿಸಲ್ಪಟ್ಟ ಚುನಾವಣಾ ಸಮಿತಿಯ ಸಭೆಯು ತಾ ೧೧ನೇ ಸಾಯಂಕಾಲ ಸೇರಿತು. ಒಬ್ಬ ಪ್ರೊಟೆಸ್ಟೆಂಟ್ ಕ್ರಿಸ್ತ ಸದಸ್ಯರನ್ನು ಚುನಾವಣಾ ಸಮಿತಿಗೆ ಸೇರಿಸಬೇಕೆಂದಾಯಿತು ಉಮೇದ್ವಾರರನ್ನು ಇಡೀ ಸಮಿತಿಯವರೇ ಆರಿಸಬೇಕೆಂದೂ, ಉಮೇದ್ವಾರರ ಹೆಸರನ್ನು ಶಿಫಾರಸು ಮಾಡುವ ಬಗ್ಗೆ ಒಂದು ಚಿಕ್ಕ ಸಮಿತಿಯನ್ನು ನೇಮಿಸಬಹುದೆಂದೂ ನಿರ್ಧಾರವಾಯಿತು. ಇದೇ ತಾ ೨೧ರಲ್ಲಿ ಚುನಾವಣೆಯ ಚಳವಳಿಯನ್ನು ಆರಂಭಿಸಬೇಕೆಂದು ತೀರ್ಮಾನವಾಯಿತು ಉದ್ದೇಶ ಪತ್ರವನ್ನು ಪರಿಷ್ಕರಿಸುವುದಕ್ಕಾಗಿ ಅದನ್ನು ತಯಾರಿಸಿದ ಸಮಿತಿಗೆ ಹಿಂದಕ್ಕೆ ಕಳುಹಿಸಲ್ಪಟ್ಟಿತು.

**ಯೂನಿಯನ್ ಅಸೆಂಬ್ಲಿ**—ಸ್ಯಾಂಟ್ ಅಲೋಸಿಯಸ್ ಕಾಲೇಜ್ ಯೂನಿಯನ್ ಅಸೆಂಬ್ಲಿಯ ಸಭೆಯು ಕಳೆದ ತಾ ೧೩ರಲ್ಲಿ ಸೇರಿ ಮದ್ರಾಸ್ ಮಂಡಲದವರು ಮದ್ಯಪಾನ ನಿಷೇಧದ ಯೋಜನೆಯನ್ನು ಕೈಕೊಂಡದ್ದಕ್ಕಾಗಿ ಅವರನ್ನು ವಂದಿಸಿತು ಬೇಡನ್ ಪವೆಲರ ಚಮೂ ದಳದಿಂದ ಹಿಂದೀ ಚಮೂ ದಳವನ್ನು ಪ್ರತ್ಯೇಕಮಾಡಬೇಕೆಂದು ನಿರ್ಧರಿಸಿತು. ಮತ್ತು ಪ್ರಪಂಚದ ಶಾಂತಿ ಭಂಗಕ್ಕೆ ಹಿಟ್ಲರರೂ ಅವರ ಸಂಗಡಿಗರೂ ಕಾರಣಭೂತರೆಂದು ತೀರ್ಮಾನಿಸಲ್ಪಟ್ಟಿತು ಪ್ರೊ ಮ್ಯಾಥ್ಯು ಪೋಳಕರು ಸ್ಪೀಕರರಾಗಿದ್ದರು

**ಅಂಡಮಾನ್ ಕೈದಿಗಳ ದಿನಾಚರಣೆ**

ರಾಷ್ಟ್ರಪತಿಗಳ ಅಪ್ಪಣೆಯ ಮೇರೆಗೆ ತಾ ೧೪ ಅಂಡಮಾನ ಕೈದಿಗಳ ದಿನಾಚರಣೆಯಾಗಿ ಆಚರಿಸಲ್ಪಟ್ಟಿತು. ಅಂದು ಸಾಯಂಕಾಲ ಮೈದಾನಿನಲ್ಲಿ ಸಭೆಸೇರಿತು. ಶ್ರೀ|| ವಾಮರಾಯ ಮಲ್ಯರು ಅಧ್ಯಕ್ಷತೆ ವಹಿಸಿ ಅಂದಿನ ದಿನದ ಮಹತ್ವವನ್ನು ವಿವರಿಸಿ ಹೇಳಿದರು ಶ್ರೀ|| ಕೆ. ಆರ್ ಆಚಾರ್ಯರು ಭಾಷಣಮಾಡುತ್ತಾ, ಅಂಡಮಾನದ ರಾಜಕೀಯ ಕೈದಿಗಳು ಅನುಭವಿಸುತ್ತಿರುವ ಅಸಹನೀಯ ಸಂಕಷ್ಟಗಳನ್ನು ವರ್ಣಿಸಿ, ಅವರಲ್ಲಿ ಅನೇಕರು ವಿಚಾರಣೆಯಿಲ್ಲದೆ ಜೈಲಲ್ಲಿ ಇಟ್ಟವರೆಂದೂ ಅವರನ್ನು ಅಂತಹ ಕೆಟ್ಟ ಹವೆಯ ದೇಶದಲ್ಲಿಡುವುದು ಅನ್ಯಾಯವೆಂದೂ ತಿಳಿಸಿ ಸರಕಾರದ ವರ್ತನೆಯನ್ನು ತೀವ್ರವಾಗಿ ಖಂಡಿಸಿದರು. ಶ್ರೀಗಳಾದ ವಿಠ್ಠಲ ಹೆಗ್ಗಡೆ, ಕೆ ಪಿ ಕಾರಂತ್ ರಂಗರಾವ್ ತಲಚೇರಿಕರ ಮತ್ತು ಹೈದರ್ ಇವರು ಮಾತಾಡಿದರು ಸರಕಾರದ ವರ್ತನೆಯನ್ನು ಖಂಡಿಸಿ, ಕೈದಿಗಳನ್ನು ಬಿಡುಗಡೆಮಾಡಬೇಕೆಂದೂ ಸೂಚಿಸಿ, ನಿರಶನ ವ್ರತವನ್ನು ಚರಿಸುವವರೊಡನೆಯೂ ಅವರಲ್ಲಿ ಸಹಾನುಭೂತಿ ತೋರಿಸಿ ನಿರಶನ ವ್ರತವನ್ನಾಚರಿಸಿದವರೊಡನೆಯೂ ಸಹಾನುಭೂತಿ ತೋರಿಸಿ ಠರಾವುಗಳಾದುವು

**ಉಪನ್ಯಾಸ**—ನಿನ್ನೆಯ ದಿವಸ ವೈ. ಯಂ. ಸಿ ಎ ಸಭೆಯಲ್ಲಿ ಶ್ರೀ|| ಎಫ್ ಸೋನ್ಸರ ಅಧ್ಯಕ್ಷತೆಯಲ್ಲಿ ಡಾ|| ಪಿ ಜಿ ಜಿ ಉಣ್ಣಿತ್ತಾನ್, ಜಿಲ್ಲಾ ಹೆಲ್ತ್ ಆಫೀಸರರ ಪೌಷ್ಟಿಕ ಆಹಾರದ ವಿಷಯವಾಗಿ ಉಪಯುಕ್ತ ಭಾಷಣವಿತ್ತರು

**ಜಿಲ್ಲಾ ಶ್ಯಾನುಭೋಗರ ಪರಿಷತ್ತು**—ಈ ಪರಿಷತ್ತು ನಿನ್ನೆ ಗಣಪತಿ ಹ್ಯಾಸ್ಕೂಲಿನಲ್ಲಿ ಶ್ರೀ|| ಬಿ ವ್ಯಾಸರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಅಧ್ಯಕ್ಷರು ಶ್ಯಾನುಭೋಗರ ಕಷ್ಟಸುಖಗಳ ವಿಷಯ ತಿಳಿಸಿ ಅವರ ವೇತನವನ್ನು ಸರಕಾರದವರು ಹೆಚ್ಚಿಸುವುದು ಅಗತ್ಯವೆಂದು ಸೂಚಿಸಿದರು ಶ್ಯಾನುಭೋಗರಿಗೆ ಸಂಬಳ ಹೆಚ್ಚಿಸಬೇಕೆಂದೂ, ಅವರಿಗೆ ವರ್ಷಕ್ಕೆ ಸಂಬಳ ಸಮೇತ ಒಂದು ತಿಂಗಳ ರಜೆ ಸಿಕ್ಕಬೇಕೆಂದೂ ಅವರನ್ನು ಪಟೇಲರ ಕ್ಲಾರ್ಕರೆಂದು ಎಣಿಸಲ್ಪಡಬಾರದೆಂದೂ, ಅವರ ಉದ್ಯೋಗವು ವಂಶಪಾರಂಪರ್ಯದ ಹಕ್ಕಿನದ್ದನ್ನಾಗಿ ಮಾಡಬೇಕೆಂದೂ, ಶ್ಯಾನುಭೋಗರ ಸಭೆಯನ್ನು ರಿಜಿಸ್ಟರಮಾಡಬೇಕೆಂದೂ ಮುಂತಾದ ಠರಾವುಗಳು ಮಂಜೂರು ಮಾಡಲ್ಪಟ್ಟವು

**ಹರಿಜನ ಲೇಬರ್ ಲೀಗ್**—ಈ ಲೀಗಿನ ವಾರ್ಷಿಕ ಸಭೆಯು ನಿನ್ನೆಯ ದಿನ ಸೇರಿತು ಶ್ರೀ ಬಿ ಭೋಜರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು ಗತವರ್ಷದ ವರದಿಯನ್ನು ಶ್ರೀ ಕೆ ಈಶ್ವರ ಯಂ. ಎಲ್ ಎ ರವರು ಓದಿದರು, ಮದ್ರಾಸು ಮಂತ್ರಿಮಂಡಲದವರಿಗೆ, ತಿರುವಾಂಕೂರು ಮಹಾಜನರಿಗೆ (ಕ್ಷೇತ್ರ ಪ್ರವೇಶ ಕೊಟ್ಟದ್ದಕ್ಕಾಗಿ) ಧನ್ಯವಾದಗಳ ಪಿಸಲ್ಪಟ್ಟವು ಹರಿಜನ ಬಾಲಕರಿಗೆ ಹೆಚ್ಚು ವಿದ್ಯಾರ್ಥಿ ವೇತನ, ಹರಿಜನರ ವಸತಿಗೆ ಸ್ಥಳಕೊಡಿಸುವ, ವಿಚಾರ, ಹರಿಜನರನ್ನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ವಿಚಾರ, ಮದ್ಯಪಾನವನ್ನು ನಿವಾರಿಸುವುದು ಇತ್ಯಾದಿ ವಿಷಯಗಳಲ್ಲಿ ಠರಾವುಗಳಾದುವು ಶ್ರೀ ಕಿಟ್ಟೆಲ್ಯವರು ಹರಿಜನರಿಗೆ ಉಪಯುಕ್ತವಾದ ಹಿತಸೂಚನೆಗಳನ್ನಿತ್ತರು

**ಮಿತ್ರ ಮಂಡಲಿ**—ಶ್ರೀ|| ತಲಚೇರಿ ರಂಗರಾಯರ ಅಧ್ಯಕ್ಷತೆಯಲ್ಲಿ ಮಂಗಳೂರು ಮಿತ್ರಮಂಡಲಿಯ ಪ್ರಥಮ ಸಭೆಯು ನಿನ್ನೆ ಜರಗಿತು ವಿದ್ವಾನ್ ಎಸ್. ಕೃಷ್ಣ ಭಟ್ಟರು ಕನ್ನಡದ ಸೇವೆ ಎಂಬುದರ ಕುರಿತು ಭಾಷಣಮಾಡಿದರು, ಶ್ರೀ|| ಕೆ ಶಂಕರ ಭಟ್ಟರು, ಮಂಡಲಿಯವರು ಈ ವರ್ಷ ನಾಡಹಬ್ಬವನ್ನು ಇಲ್ಲಿಯೂ ನಡಿಸುವ ಏರ್ಪಾಡನ್ನು ಮಂಡಲಿಯವರು ಕೈಕೊಳ್ಳುವರೆಂದು ಸೂಚಿಸಿದರು

ದೀರ್ಘ ಬಾತ್ಮಿಗಳಿಗೆ
ನವಯುಗದಲ್ಲಿ
ಎಂದೂ ಎಡೆಸಿಗಲಾರದು.

ಅಲಭ್ಯ ಲಾಭ! ಉಡುಪಿ ವಿಜಯಾದ ಛಪ್ರಿಕೆಗೆ!!

**ಶ್ರೀ ಪೇಜಾವರ ಮಠದ ಪರ್ಯಾಯ**

**ಬೋಂಡನ್ನು ಇಂದೇ ಕೊಂಡುಕೊಳ್ಳಿರಿ!**

ಮಠದವರಿಗೆ ಅವಶ್ಯವಾದ ಗರ್ಜಿನ ಬಗ್ಗೆ ಸಾಲಮಾಡುವ ಅಗತ್ಯ ಉಂಟೆಂದೂ, ಅದು ಮಠಗಳ ಹುಟ್ಟುವಳಿ ಮೇಲೆ ಸಿಂಧುವಾಗತಕ್ಕದ್ದೆಂದೂ ಪ್ರಿವಿಕೌನ್ಸಿಲಿನ ತೀರ್ಪು ಇದೆ.

ರೂ. 75, 80, 85, 90ರ ಬೋಂಡನ್ನು ಪಡಕೊಂಡು ಕ್ರಮವಾಗಿ 5, 4, 3, 2 ವರ್ಷಗಳಲ್ಲಿ ಒಂದು ನೂರು ರೂಪಾಯಿಗಳನ್ನು ವಾಪಾಸು ಪಡೆಯಿರಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಜನರಲ್ ಏಜಂಟ್, ಪೇಜಾವರ ಮಠ, ಉಡುಪಿ.**

## ಉಡುಪಿ

**ಅಬ್ದುಲ್ಲಾ ಸಾಹೇಬರ ಪುಣ್ಯದಿನ**

ಕೇಂದ್ರಶಾಸನ ಸಭೆಯ ಖಾನಬಹಾದೂರ್ ಹಾಜೀ ಅಬ್ದುಲ್ಲಾ ಹಾಜೀ ಕಾಶೀಂ ಸಾಹೇಬರವರ ಪುಣ್ಯ ದಿನವನ್ನು ೧೪-೮-೩೭ರಂದು ಸಂಜೆ ಸ್ಥಳೀಯ ಅಂಜುಮಾನ್ ಕ್ಲಬ್ಬಿನಲ್ಲಿ ಸಭೆಸೇರಿ, ಕೀರ್ತಿಶೇಷರ ಗುಣಕಥನಗಳನ್ನುಮಾಡಿ ಅಲ್ಲಿಂದ ಅವರ ಸಮಾಧಿಸ್ಥಾನಕ್ಕೆ ತೆರಳಿ ಪುಷ್ಪಹಾರವನ್ನು ಅರ್ಪಿಸಿದರು ಜಾತಿ ಮತಗಳ ಬೇಧವಿಲ್ಲದೆ ಸರ್ವರೂ ಸಹಕರಿಸಿದ್ದರು

**ಹರಿಕಥೆ**—ತಾ. ೧೪ರಂದು ಬೆಂಗಳೂರಿನ ಶ್ರೀ|| ಶ್ರೀ ನಿವಾಸಾಚಾರ್ಯರು ಶ್ರೀ ಶಾರದಾ ಸಂಗೀತ ಕಲಾ ಶಾಲೆಯಲ್ಲಿ, ಶ್ರೀ|| ಬಿ ಕೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ "ಪಾಂಡವ ವಿಜಯ" ಎಂಬ ಕತೆಯನ್ನು ಸೊಗಸಾಗಿ ಮಾಡಿದ್ದಾರೆ

ತಾ ೧೬ನೇ ದಿನ ಇಲ್ಲಿಯ ಅಂಜುಮಾನ್ ಕ್ಲಬ್ಬಿನಲ್ಲಿ ಶ್ರೀ|| ಸಂಜೀವರಾಯರು ಹಿಂದೂ ಮುಸ್ಲಿಮರಿಂದಲೂ ಸ್ತ್ರೀ ಪುರುಷರಿಂದಲೂ ತುಂಬಿದ ಸಭೆಯಲ್ಲಿ "ಶೇಕ್ ಮಹಮ್ಮದ್" ಎಂಬ ಕತೆಯನ್ನು ಉತ್ತಮ ರೀತಿಯಿಂದ ಮಾಡಿರುತ್ತಾರೆ.

**ಕಲ್ಯಾಣಪುರ**

ಉಡುಪಿ ತಾಲೂಕಿನ ಉಪಾಧ್ಯಾಯಿನಿಯರು ತಾ ೧೫-೮-೩೭ ರಂದು ಕಲ್ಯಾಣಪುರದ ವಿ ಬೊ. ಹಾಯರ್ ಎಲಿಮೆಂಟರಿ ಬಾಲಿಕಾ ಪಾಠಶಾಲೆಯಲ್ಲಿ ಉಡುಪಿ ನಗರ ಸಭೆಯ ಅಧ್ಯಕ್ಷರಾದ ಶ್ರೀ|| ಆರೂರು ಲಕ್ಷ್ಮೀನಾರಾಯಣರಾಯರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿಸಿ ತಮ್ಮ ಸಂಬಳ ಕಡಿತದ ವಿಷಯ ಒಂದು ನಿಷೇಧ ಠರಾವನ್ನು ಮಾಡಿ ಸರಕಾರದ ಅವಗಾಹನೆಗಾಗಿ ಕಳುಹಿಸಿರುವರು.

**ಕರ್ನಾಟಕ ಸ್ಟೋರ್ಸ್, ಲಿಮಿಟೆಡ್**

ಮೇಲ್ಕಂಡ ಹೆಸರಿನ ಸಂಸ್ಥೆಯೊಂದು, ಇಲ್ಲಿ ಸ್ಥಾಪಿತವಾಗಿ ಅದರ ಷೇರ್ದಾರರುಗಳ ಪ್ರಥಮ ಸಭೆಯು ಕಳೆದ ತಾ ೧೫ನೇ ಆದಿತ್ಯವಾರ ಜರಗಿತು ಡಾ|| ಪಿ ಜಿ ಆಚಾರ್ಯರು ಅಧ್ಯಕ್ಷರಾಗಿಯೂ ಶ್ರೀ|| ಪಿ ವಿ ಆಚಾರ್ಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು.

---

**ಪುತ್ತೂರು**—ಇಲ್ಲಿ ಹಿಂದೀಪ್ರಚಾರ ಕಾರ್ಯವು ಬಹು ಭರದಿಂದ ಸಾಗುತ್ತಿದೆ ಇಲ್ಲಿಯ ಹಿಂದೀಪ್ರಚಾರಕರಾದ ವರ್ಧಮಾನಯ್ಯ 'ವಿಶಾರದ'ರವರ ಪ್ರಚಾರ ಕಾರ್ಯದಲ್ಲಿ ತುಂಬಾ ಶ್ರಮವಹಿಸುತ್ತಿರುವುದು ಸ್ತೋತ್ರಾರ್ಹವಾಗಿದೆ ಇಲ್ಲಿಯ ಪ್ರಾಥಮಿಕ ಬಾಲಿಕಾಪಾಠಶಾಲೆಯಲ್ಲಿ ಮಧ್ಯಾಹ್ನ ೧ರಿಂದ ೨ ಗಂಟೆಗಳವರೆಗೆ 'ಪ್ರಾಥಮಿಕ' ಮತ್ತು 'ವಿಶಾರದ' ಕ್ಲಾಸುಗಳು ನಡೆಯುತ್ತಿವೆಯಲ್ಲದೆ ಸದ್ರಿಯವರಿಂದಲೇ ಇತರ ಹಲವೆಡೆಗಳಲ್ಲಿಯೂ ಕ್ರಮವಾಗಿ ಕ್ಲಾಸುಗಳು ನಡೆಸಲ್ಪಡುತ್ತವೆ

**ಕೊಲ್ಲಮೊಗರು**—ತಾ 8-8 37ರಲ್ಲು, ಬೆಳ್ಳಾರೆಯಿಂದ ಬಂದಿದ್ದ ಶ್ರೀಯುತ, ಗಣೇಶ ಸ್ವಬ್ಬಯ್ಯನವರು ಹರಿಹರಪಳ್ಳತಡ್ಕ, ಕೊಲ್ಲಮೊಗರು, ಕಲ್ಮಕಾರು ಗ್ರಾಮಗಳನ್ನೊಳಗೊಂಡ, ಒಂದು ಸಂಯುಕ್ತ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿದರು ಅಂದಿನ ಮಹಾಜನರ ಸಭೆಗೆ, ಮ ರಾ ಕಜ್ಜೋಡಿ ತಮ್ಮಗೌಡರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಕಮಿಟಿಗೆ ಏಳು ಮಂದಿಯ ಒಂದು ಕಾರ್ಯಕಾರಿ ಮಂಡಳಿಯನ್ನು ರಚಿಸಲಾಗಿ, ಮ ರಾ ಪಡುಮನೆ ಗೋವಿಂದಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಕಜ್ಜೋಡಿ ಚೆನ್ನಪ್ಪ ಗೌಡರನ್ನು ಉಪಾಧ್ಯಕ್ಷರನ್ನಾಗಿಯೂ, ಮ ಹೂವಪ್ಪನವರನ್ನು ಕಾರ್ಯದರ್ಶಿ ಹಾಗೂ ತಾಲೂಕು ಕಾಂಗ್ರೆಸ್ ಕಮಿಟಿಯ ಪ್ರತಿನಿಧಿಯರನ್ನಾಗಿಯೂ ಆರಿಸಲಾಯಿತು

---

SUSHEELA & CO., KOLLEGAL (S. INDIA.)

**1000 ರೂಪಾಯಿಗಳ ಬಹುಮಾನದ**

**ನಂ. ೧ ಸ್ಪರ್ಧೆಯ ಸರಿಯಾದ ಮೂರು ಉತ್ತರಗಳು.**

| | | | | |
|---|---|---|---|---|
| 7 | 20 | 13 | 26 | 19 |
| 24 | 12 | 25 | 18 | 6 |
| 11 | 29 | 17 | 5 | 23 |
| 28 | 16 | 9 | 22 | 10 |
| 15 | 8 | 21 | 14 | 27 |

| | | | | |
|---|---|---|---|---|
| 20 | 7 | 13 | 19 | 26 |
| 12 | 24 | 25 | 6 | 18 |
| 29 | 11 | 17 | 23 | 5 |
| 16 | 28 | 9 | 10 | 22 |
| 8 | 15 | 21 | 27 | 14 |

| | | | | |
|---|---|---|---|---|
| 24 | 12 | 25 | 18 | 6 |
| 15 | 8 | 21 | 14 | 27 |
| 11 | 29 | 17 | 5 | 23 |
| 7 | 20 | 13 | 26 | 19 |
| 28 | 16 | 9 | 22 | 10 |

ಬಹುಮಾನ ಪಡೆದವರ ಹೆಸರುಗಳನ್ನು ಮುಂದಿನವಾರ ಪ್ರಕಟಿಸಲಾಗುವುದು.

ಮ್ಯಾನೇಜರ್: ಸುಶೀಲಾ ಎಂಡ್ ಕೋ., ಕೊಳ್ಳೇಗಾಲ.

ESTD. 1906

**The Canara Banking Corporation Udipi Ltd.**

(Incorporated in British India)

Members:- RESERVE BANK OF INDIA.

| | | | |
|---|---|---|---|
| Paid up Capital | Rs. 2,88,925 | 0 | 0 |
| Reserves | Rs. 3,52,213 | 0 | 0 |
| Deposits | Rs. 37,98,217 | 0 | 0 |
| Govt. Securities | Rs. 12,46,325 | 0 | 0 |

**Total Resources exceed Rs. 52,00,000/-**

**ANNOUNCEMENT.**

**The Mettupalayam branch of the Corporation will be opened on 11—8—1937 and all kinds of Banking transactions will be undertaken from that date.**

***V. R. Kamath***, B. A., LL.B.

Ag. Manager.

ಉಡುಪಿ, ಗುರುವಾರ, ತಾ. ೧೯–೮–'೩೭

# ಹೃದಯರಹಿತ ಧೋರಣೆ

ಕಾಂಗ್ರೆಸು ಅಧಿಕಾರದಲ್ಲಿರುವ ಆರು ಪ್ರಾಂತಗಳಲ್ಲಿ ಅಧಿಕಾರಿಗಳ ಮನೋವೃತ್ತಿಯು ಸಂಪೂರ್ಣ ಮಾರ್ಪಾಟ ಹೊಂದಿ ಹೊಸ ಮನ್ವಂತರವೊಂದು ಉದಯವಾಗಿರುತ್ತದೆ. ಜನತೆಗೆ ಸಂಪೂರ್ಣವಾಗಿ ಭಾಷಣ ಲೇಖನ ಮತ್ತು ಸಂಘಟನಾ ಸ್ವಾತಂತ್ರ್ಯ ದೊರೆತಿರುತ್ತದೆ. ರಾಜಕೀಯ ಕೈದಿಗಳೆಲ್ಲಾ ಬಿಡುಗಡೆ ಹೊಂದುತ್ತಲಿದ್ದಾರೆ ಕಾಂಗ್ರೆಸ್ಸಿನ ಅಂಗಭೂತವಾದ ಬೇರೆ ಬೇರೆ ಸಂಸ್ಥೆ ಮತ್ತು ಹಿಂದೀ ರಾಷ್ಟ್ರೀಯ ಧ್ವಜದ ಮೇಲಿನ ನಿಷೇಧವು ತಗೆದುಹಾಕಲ್ಪಟ್ಟು ಸರಕಾರಿ ಕಟ್ಟಡಗಳಲ್ಲಿಯೂ ತ್ರಿವರ್ಣ ಧ್ವಜವು ಹಾರಾಡಲಾರಂಭಿಸಿದೆ. ಆಡಳಿತ ರೀತಿಯು ಸಂಪೂರ್ಣ ಬದಲಾವಣೆ ಹೊಂದಿದೆ. ಹಿಂದಿನಂತೆ, ಮಂತ್ರಿಗಳೂ ಅವರ ಕೈಕೆಳಗಣ ಅಧಿಕಾರಿಗಳೂ ಜನತೆಯ ಮೇಲೆ ಅಧಿಕಾರ ನಡಿಸಿ ಅವರನ್ನು ಪೀಡಿಸುವವರಾಗಿರದೆ ಅವರ ಸೇವಕರಾಗಿ ಅವರ ಹಿತಸಾಧನೆಮಾಡುವವರಾಗಿದ್ದಾರೆ. ಜನಮತಕ್ಕೆ ತಲೆಬಾಗಿ ನಡೆಯುವವರಾಗಿದ್ದಾರೆ.

ಆದರೆ ಕಾಂಗ್ರೆಸು ಅಧಿಕಾರಕ್ಕೆ ಬಾರದಿರುವ ಪ್ರಾಂತಗಳಲ್ಲಿ ಹಿಂದಿನ ರೀತಿಯ ರಾಜ್ಯಭಾರವೇ ನಡಿಯುತ್ತಿರುವುದೆಂಬುದಕ್ಕೆ ಬಂಗಾಳ ಪ್ರಾಂತವೇ ಸಾಕ್ಷಿ. ಅಲ್ಲಿ ಇನ್ನೂ 2000ದ ಮೇಗಣ ಡಿಟೆನ್ಯೂ ಕೈದಿಗಳು ಯಾವ ವಿಚಾರಣೆಯೂ ಇಲ್ಲದೆ ಬಂಧನದಲ್ಲಿರಿಸಲ್ಪಟ್ಟು ಕೊಳೆಯುತ್ತಿದ್ದಾರೆ. ಅಂಡಮಾನ್ ಕೈದಿಗಳ ಕುರಿತು ಬಂಗಾಳ ಸರಕಾರವು ವಹಿಸಿದ ಧೋರಣೆಯು ಹೃದಯರಹಿತವಿರುವುದು. ಅಂಡಮಾನಿನಲ್ಲೀಗ ಉಪವಾಸ ಹಿಡಿದಿರುವ ಕೈದಿಗಳಲ್ಲಿ ಹೆಚ್ಚಿನವರು ಬಂಗಾಳದವರು. ಆದುದರಿಂದ ಬಂಗಾಳ ಸರಕಾರವು ಅವರ ವಿಷಯದಲ್ಲಿ ಅತ್ಯುದಾರ ಧೋರಣೆ ವಹಿಸಬೇಕಾಗಿತ್ತು. ಆದರೆ ಅದು ಕೇಂದ್ರ ಸರಕಾರದ ದಾರಿಯನ್ನೇ ಹಿಡಿದು ನಡೆದಿರುವುದು. ಅಂಡಮಾನ್ ಕೈದಿಗಳು ಮುಷ್ಕರ ಹಿಡಿದಿರುವರು; ಮುಷ್ಕರ ನಡೆದಿರುವ ವರೆಗೆ ಅವರ ಕೇಳಿಕೆಗಳನ್ನು ಗಮನಿಸಲು ಸಾಧ್ಯವಿಲ್ಲೆಂದಿಷ್ಟೇ ಹೇಳಿ ಕೇಂದ್ರ ಸರಕಾರವು ಸುಮ್ಮನಾಗಿರುವುದು. ಈ ಕೈದಿಗಳ ನಿಜವಾದ ಪರಿಸ್ಥಿತಿಯು ಈ ವರೆಗೆ ತಿಳಿದು ಬಂದಿಲ್ಲ. ಮೂರು ಮಂದಿ ಅಂಡಮಾನ್ ಕೈದಿಗಳ ಶವವನ್ನು ಸಮುದ್ರಕ್ಕೆಸೆಯಲಾಗಿದೆ ಎಂಬುದನ್ನು ಬಂಗಾಳ ಸರಕಾರವು ನಿರಾಕರಿಸುವುದಿಲ್ಲ. ಮತ್ತು ಆ ವಿಷಯದ ಜವಾಬ್ದಾರಿಯು ಕೇಂದ್ರ ಸರಕಾರದ್ದೆಂದು ವಾದಿಸಿರುವುದು. ಇದರಲ್ಲಿ ಹುರುಳಿಲ್ಲ. ಯಾಕಂದರೆ ಅಂಡಮಾನ್ ಕೈದಿಗಳ ಶಿಕ್ಷೆಯನ್ನು ರದ್ದು ಮಾಡುವ ಅಧಿಕಾರ ಬಂಗಾಳಸರಕಾರದ್ದು ಮತ್ತು ತಮ್ಮ ಕೈದಿಗಳು ಎಷ್ಟು ಮಂದಿ ಬದುಕಿರುವರು, ಎಷ್ಟು ಮಂದಿ ಸತ್ತಿರುವರೆಂಬುದನ್ನು ಅವರು ತಿಳಿದಿರತಕ್ಕದ್ದು. ಇಂಡಿಯಾ ಮತ್ತು ಬಂಗಾಳ ಸರಕಾರಗಳು ಈ ರೀತಿ ಹೃದಯರಹಿತವಾಗಿ ವರ್ತಿಸುವಾಗ ಅಂಡಮಾನ್ ಕೈದಿಗಳು ಕೆಲವರು ಪ್ರಾಣ ಕಳೆದುಕೊಂಡಿರುವರು. ಹಲವರು ಪ್ರಾಣಾಪಾಯಕ್ಕೊಳಗಾಗಿರುವರು.

ಒಂದೀಗ ಇಡೀ ದೇಶವು ಅಂಡಮಾನ್ ಕೈದಿಗಳ ಕುರಿತು ತಲ್ಲಣಗೊಂಡಿರುವುದು. ಜನರೆಲ್ಲಾ ಘಂಟಾಘೋಷವಾಗಿ ಕೇಂದ್ರ ಮತ್ತು ಬಂಗಾಳ ಸರಕಾರದ ಧೋರಣೆಯನ್ನು ನಿಷೇಧಿಸಿರುವರು. ಕಾಂಗ್ರೆಸ್ ಮಂತ್ರಿಗಳು ಈ ಕುರಿತು ಸಂಪೂರ್ಣ ಸಹಾನುಭೂತಿಯುಳ್ಳವರಾಗಿ ತಮ್ಮಿಂದ ಸಾಧ್ಯವಾದ ಕೆಲಸಮಾಡಿರುವರು. ಆದರೆ ಬಂಗಾಳ ಸರಕಾರವು ಈ ವಿಷಯದಲ್ಲಿ ಅತ್ಯಂತ ಮೂರ್ಖತನದಿಂದ ವರ್ತಿಸಿರುವುದು. ಉಪವಾಸ ಹಿಡಿದ ಕೈದಿಗಳೆಲ್ಲಾ ಬಂಗಾಳದವರಾದುದರಿಂದ ಬಂಗಾಳದಲ್ಲಿ ದೇಶದ ಇತರ ಕಡೆಗಳಿಗಿಂತ ಹೆಚ್ಚಿನ ಕ್ಷೋಭೆಯೇಳುವುದು ಸ್ವಾಭಾವಿಕ. ಆದರೆ ಅದು ಬಂಗಾಳ ಕಾಂಗ್ರೆಸ್ ಪಕ್ಷೀಯರು, ಉದ್ದೇಶಪೂರ್ವಕವಾಗಿ ತಮಗೆ ಅಪಯಶಸ್ಸುಂಟುಮಾಡಲು ಎಬ್ಬಿಸಿರುವ ಚಳವಳವೆಂಬ ತಪ್ಪುಭಾವನೆಯಿಂದ ಬಂಗಾಳ ಸರಕಾರವು ಮತಿಗೆಟ್ಟು ವರ್ತಿಸಿರುವುದು. ಇದೇ ತಾ. 14ರಲ್ಲು ಅಂಡಮಾನ್ ಕೈದಿಗಳ ದಿನಾಚರಣೆಯ ಸಂದರ್ಭದಲ್ಲಿ ಕಲ್ಕತ್ತದಲ್ಲಿ ನಡೆದ ಮೆರವಣಿಗೆಯ ಮೇಲೆ ಪೋಲಿಸರು ಲಾಠಿಪ್ರಹರ ನಡಿಸಿ, ಜನರ ಕೈಯಲ್ಲಿದ್ದ ರಾಷ್ಟ್ರೀಯಧ್ವಜಗಳನ್ನು ಕೆಳಗಿಳಿಸಿ ಕಠಿಣ ದಬ್ಬಾಳಿಕೆಯನ್ನುಪಯೋಗಿಸಿರುವರು. 100ಕ್ಕಿಂತ ಮಿಕ್ಕಿದವರು ಗಾಯಗೊಂಡು ಸುಮಾರು 100 ಮಂದಿ ಕೈದುಮಾಡಲ್ಪಟ್ಟಿರುವರು. ಇದರಿಂದ ನಿಜವಾದ ಪ್ರಜಾ ಜವಾಬ್ದಾರಿಯುಳ್ಳ ಕಾಂಗ್ರೆಸ್ ರಾಜ್ಯಭಾರಕ್ಕೂ, ಬೇರೆ ರಾಜ್ಯಭಾರಕ್ಕೂ ಇರುವ ಅಭ್ಯಂತರವು ವ್ಯಕ್ತವಾಗುತ್ತದೆ. ಬಂಗಾಳದಲ್ಲಿ ಕಾಂಗ್ರೆಸ್ಸಿನವರು ಅಧಿಕಾರದಲ್ಲಿರುತ್ತಿದ್ದರೆ, ಅಂಡಮಾನ್ ಕೈದಿಗಳ ಪ್ರಶ್ನೆಯನ್ನೆತ್ತಿ ಹಿಡಿದು ಹೋರಾಡುತ್ತಿದ್ದರು. ಗವರ್ನರರಾಗಲಿ, ಕೇಂದ್ರ ಸರಕಾರದವರಾಗಲಿ ತಮ್ಮನ್ನು ವಿರೋಧಿಸುತ್ತಿದ್ದರೆ ತಮ್ಮ ಅಧಿಕಾರಕ್ಕೇನೇ ತಿಲಾಂಜಲಿಯಿತ್ತು ಹೊರಗೆ ಬರುತ್ತಿದ್ದರು. ಆದರೆ ಬಂಗಾಳದ ಹಕ್ ಮಂತ್ರಿಮಂಡಲವು ಕೇವಲ ಕೇಂದ್ರ ಸರಕಾರದ ಹಸ್ತಕವಾಗಿ ಒಂದಿಷ್ಟು ಮಾನವ ಸಹಜ ಕನಿಕರವಿಲ್ಲವೆ ಪ್ರತಿಷ್ಠಾಂಧತೆಯಿಂದ ಅಂಡಮಾನ್ ಕೈದಿಗಳ ಪ್ರಾಣದೊಡನೆ ಆಟವಾಡಹೊರಟಿರುವುದು.

---

## ದೇವಸ್ಥಾನಗಳ ಆಡಳಿತ

ಕಾಂಗ್ರೆಸ್ ರಾಜ್ಯಭಾರದಲ್ಲಿ ಅಧಿಕಾರದ ಬಿಗಿತವೆಲ್ಲಾ ಸಡಿಲಾಗುವುದು. ಎಲ್ಲಾ ವಿಷಯದಲ್ಲಿಯೂ ಜನರು ತಮ್ಮಿಚ್ಛಾನುಸಾರ ನಡೆಯುವಂತಾಗುವುದೆಂಬ ಭ್ರಾಂತಿಯನ್ನಾರೂ ಕಟ್ಟಿಕೊಂಡಿದ್ದರೆ, ಆರೋಗ್ಯ ಮತ್ತು ಎಂಡೋಮೆಂಟ್ ಮಂತ್ರಿಗಳು ತಿನ್ನವೆಲ್ಲಿಯಲ್ಲಿ ಮಾಡಿದ ಭಾಷಣವು ಅದನ್ನು ಉಚ್ಚಾಟನೆಮಾಡದಿರದು. ದೊಡ್ಡ ದೊಡ್ಡ ದೇವಸ್ಥಾನ, ಮಠಗಳವರು ಕೆಲವರು ಎಂಡೋಮೆಂಟ್ ಆಕ್ಟೇ ಹೋಗುವುದೆಂದು ಬಗೆದಿರಬಹುದು. ಕಾಂಗ್ರೆಸ್ ಮಂತ್ರಿಗಳು ದೇವಸ್ಥಾನಗಳ ಆಡಳಿತದ ವಿಷಯದಲ್ಲಿ ತಮಗೆ ಹೆಚ್ಚಿನ ಸ್ವಾತಂತ್ರ್ಯ ವೀಯಬಹುದೆಂಬ ಅಭಿಪ್ರಾಯ ಕಟ್ಟಿಕೊಳ್ಳಬಹುದು. ಈ ಅಪೇಕ್ಷೆಯಿಂದಲೇ ಡಾಕ್ಟರ್ ರಾಜನರನ್ನು ಹಲವು ದೇವಸ್ಥಾನಗಳವರು ಆಮಂತ್ರಿಸಿ ಸಂಭ್ರಮದ ಸ್ವಾಗತವಿತ್ತಿರಬಹುದು ಆದರೆ ಕಾಂಗ್ರೆಸಿಗೆ ಅವ್ಯವಸ್ಥೆ, ದುರ್ವ್ಯಯ, ಸ್ವೇಚ್ಛಾಪರತೆಯು ಎಂದಿಗೂ ಸಹನೀಯವಾಗಲಾರದು. ಅದನ್ನದುಕಠಿಣವಾಗಿ ನಿವಾರಿಸಲೆತ್ನಿಸುವುದು. ಆದುದರಿಂದ ಡಾಕ್ಟರ್ ರಾಜನರು, ದೇವಸ್ಥಾನಗಳ ಆಡಳಿತ ಮೋಕ್ತೇಸರರಿಗೆಲ್ಲಾ ಒಂದು ವರ್ಷದ ಅವಧಿಯಿತ್ತು ಎಚ್ಚರಿಸಿರುವರು. ಈ ಒಂದು ವರ್ಷದಲ್ಲಿ ಪ್ರಾಂತದ ಮಠದೇವಸ್ಥಾನಗಳ ಆಡಳಿತವು ಸುಧಾರಿತವಾಗದಿದ್ದಲ್ಲಿ ಅವುಗಳ ಮೇಲೆ ಎಂಡೋಮೆಂಟ್ ಆಕ್ಟನ್ನು ಮತ್ತಷ್ಟು ಕಠಿಣವಾಗಿ ಜ್ಯಾರಿಮಾಡಲಾಗುವುದೆಂದು ಹೇಳಿರುವರು. ತಮ್ಮ ಸ್ವಾರ್ಥಕ್ಕೆ ತೊಡಕುಂಟಾದವರು ಎಂಡೋಮೆಂಟ್ ಆಕ್ಟನ್ನು ಎಷ್ಟು ದೂರಿದರೂ ಅದರಿಂದಾಗಿ ಹಲವು ದೇವಸ್ಥಾನಗಳು ಉತ್ತಮಸ್ಥಿತಿಗೆ ಬಂದಿವೆಯೆಂಬುದರಲ್ಲಿ ಸಂದೇಹವಿಲ್ಲ. ಅದನ್ನು ಇನ್ನಷ್ಟು ವ್ಯಾಪಕವಾಗಿಯೂ, ತೃಪ್ತಿಕರವಾಗಿಯೂ. ಕಠಿಣವಾಗಿಯೂ ಜ್ಯಾರಿಗೆ ತಂದಲ್ಲಿ ಮಠದೇವಸ್ಥಾನಗಳು ಬಹಳ ಸುಧಾರಣೆ ಹೊಂದದಿರಲಾರವು.

## ಉಡುಪಿ ಮಠಗಳು

ಉಡುಪಿಯ ಅಷ್ಟಮಠಗಳ ಇಂದಿನ ಶೋಚನೀಯ ಪರಿಸ್ಥಿತಿಯು ಅನೇಕರಿಗೆ ತಿಳಿದ ವಿಷಯ. ಧರ್ಮಾಧಿಕಾರಿಗಳಾದ ಸನ್ಯಾಸಿಗಳಿಗೆ ಲೌಕಿಕಾಡಳಿತದ ಅಧಿಕಾರವಿತ್ತರೆ ಆಗುವ ಅವಸ್ಥೆಯೇ ಇದು. ಕೆಲವು ಮಠಾಧಿಪತಿಗಳಂತೂ ತಾವು ಸನ್ಯಾಸಿಗಳೆಂಬುದನ್ನು ಮರೆತು ಜಮೀನ್ದಾರರೇ ಆಗಿ ಹೋಗಿದ್ದಾರೆ. ಧರ್ಮಾಧಿಕಾರದ ಸೋಗಿನಿಂದ ಲೌಕಿಕರಿಗಿಂತಲೂ ಹೆಚ್ಚಿನ ಭೋಗವಿಲಾಸ ಮತ್ತು ಆಡಂಬರವುಳ್ಳವರಾಗಿದ್ದಾರೆ. ಮಿತಜೀವನ ಉದಾತ್ತಭಾವನೆಯೆಂಬುದೇನೆಂದು ಅವರಿಗೆ ಗೊತ್ತಿರುವಂತಿಲ್ಲ. ಅವರು ಅತ್ತ ಧರ್ಮಾಧಿಕಾರಿಗಳೂ ಅಲ್ಲ, ಇತ್ತ ಮಠದ ಆದಳಿತದಾರರೂ ಅಲ್ಲದ ವಿಲಕ್ಷಣ ಅವಸ್ಥೆಯಲ್ಲಿ ಎರಡರ ಜವಾಬ್ದಾರಿಯನ್ನು ವಹಿಸಿ ಒಂದನ್ನೂ ಸರಿಯಾಗಿ ಮಾಡಲಾರದೆ ಕೆಡಿಸುವಂತಾಗಿದೆ. ಆದುದರಿಂದ ಅವರು ಕೇವಲ ಧರ್ಮಾಧಿಕಾರಿಗಳಾಗಿದ್ದು ಮಠಗಳ ಲೌಕಿಕಾಧಿಕಾರವನ್ನು ಮಠದ ಶಿಷ್ಯವರ್ಗದಿಂದ ಆರಿಸಲ್ಪಡುವ ಕಮಿಟಿಯೊಂದು ನಡಿಸುವಂತಾಗಬೇಕು. ಮಠಗಳ ಲೌಕಿಕ ಆಡಳಿತವು ಈ ಸ್ವಾಮಿಗಳಿಂದ ತಪ್ಪಿದರೆ ಮಾತ್ರ ಈಗಿನ ಅವ್ಯವಸ್ಥೆ,ಅನಾಚಾರ, ದುರ್ವ್ಯಯ, ದುಂದುಗಾರಿಕೆಗಳು ನಿಲ್ಲುವಂತಾಗಬಹುದು. ಈ ಕುರಿತಾದ ಮಸೂದೆಯೊಂದು ತಯಾರಿಸಲ್ಪಡುತ್ತಿದ್ದು ಬೇಗನೆ ಮುಂದೆ ಬರುವುದೆಂಬುದು ಸಂತೋಷಕರ. ಮಠಾಧಿಕಾರಿಗಳ ನಿರಂಕುಶವರ್ತನೆಗೆ ಶಿಷ್ಯವರ್ಗದವರ ಅಂಕುಶವಿರುವಂತಾದರೆಮಾತ್ರ ಮಠಗಳ ಧಾರ್ಮಿಕ ಮತ್ತು ಲೌಕಿಕ ಆಡಳಿತವು ಅದೊಂದು ಕ್ರಮವಾದ ಹಾದಿ ಹಿಡಿದು ಜನ ಹಿತಕರವಾಗಬಹುದು. ಇದು ಹೊರತು ನಿಜವಾದ ಧರ್ಮಪ್ರಚಾರಕ ಸನ್ಯಾಸಿಗಳ ಹಿತದೃಷ್ಟಿಯಿಂದಲೇ ಇನು ಆವಶ್ಯಕವಾದದು. ಯಾಕಂದರೆ ಆಗ ಅವರು ಲೌಕಿಕ ಆಡಳಿತದ ಯಾವ ಚಿಂತೆ ಮತ್ತು ಗೊಡವೆಯೇ ಇಲ್ಲದೆ ಧರ್ಮಪ್ರಚಾರ ಮತ್ತುಸಮಾಜದ ನೀತಿನಿಯಮಪಾಲನೆಗೇನೇ ಸಂಪೂರ್ಣ ಲಕ್ಷ್ಯಕೊಡಲು ಆಸ್ಪದ ದೊರೆಯುವುದು. ಆದುದರಿಂದ ಮಠಾಧಿಪತಿಗಳೂ ಶಿಷ್ಯವರ್ಗವೂ ಈಗಣ ದುರವಸ್ಥೆಯನ್ನು ಹೋಗಲಾಡಿಸಿ ಹೊಸವ್ಯವಸ್ಥೆಯನ್ನು ತರುವ ಯೋಚನೆಯೊಂದನ್ನು ಸ್ವಾಗತೀಕರಿಸುವರೆಂದು ನಂಬುತ್ತೇವೆ.

## ಉಡುಪಿ ಮುನಿಸಿಪಾಲಿಟಿ

ಯನ್ನು ತೆಗೆದುಹಾಕುವ ಕುರಿತು ವಿಚಾರಿಸಲು ನಿನ್ನೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮುನಿಸಿಪಲ್ ಚೇಯರ್‌ಮೆನ್ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯೊಂದರಲ್ಲಿ, ಅಧ್ಯಕ್ಷರ ವಿಚಾರಪರ ಸಲಹೆ ಮೇರೆಗೆ, ಆ ಸಂಬಂಧವಾಗಿ ಮನವಿಯೊಂದನ್ನು ಸರಕಾರಕ್ಕೆ ಕಳುಹಿಸಲು ಕಮಿಟಿಯೊಂದು ನೇಮಿಸಲ್ಪಟ್ಟಿರುವುದು. ಈ ವಿಷಯದಲ್ಲಿ ಸ್ಥಳೀಯ ಕಾಂಗ್ರೆಸ್ ಕಮಿಟಿಯವರ ಧೋರಣೆಯೇನೆಂದು ಕೆಲವರು ಪ್ರಶ್ನಿಸಬಹುದು. ಅದನ್ನು ಶ್ರೀ ಆರೂರವರೇ ಕೆಲಮಟ್ಟಿಗೆ ಸ್ಪಷ್ಟಪಡಿಸಿರುತ್ತಾರೆ. ಕಾಂಗ್ರೆ

## ಚಂದಾದಾರರಲ್ಲಿ ವಿನಂತಿ.

**ಈ ತಿಂಗಳಾಂತ್ಯಕ್ಕೆ 'ನವಯುಗ'ದ ೧೬ನೇ ವರ್ಷವು ಕೊನೆಗೊಂಡು ಸೆಪ್ಟೆಂಬರ ತಿಂಗಳಿಂದ ಹೊಸ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ಮುಂದಿನ ವರ್ಷದ ಚಂದಾ ಹಣವನ್ನೂ ಈ ವರೆಗೆ ಚಂದಾ ಹಣ ಬಾಕಿ ಇರುವವರು ಬಾಕಿ ಹಣ ದೊಂದಿಗೆ ಮುಂದಿನ ವರ್ಷದ ಚಂದಾ ಹಣವನ್ನೂ ದಯವಿಟ್ಟು ಕಳುಹಿಸಿ ಕೊಟ್ಟು ಪತ್ರಿಕೆಯನ್ನು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.**

**ವಿ. ಪಿ. ಮಾಡುವುದು ಅನಾವಶ್ಯಕ ವೆಚ್ಚಕ್ಕೆ ಕಾರಣವಾಗುವುದರಿಂದ ಚಂದಾ ಮೊಬಲಗನ್ನು ಮನಿಯಾರ್ಡರ್ ಮಾಡಿ ಕಳುಹಿಸುವುದು ಲಾಭಕರ. ಈ ತಿಂಗಳಾಂತ್ಯದೊಳಗೆ ಹಣಕಳುಹಿಸದಿದ್ದರೆ ಸೆಪ್ಟೆಂಬರ ಮೊದಲನೆ ವಾರದ ಯಾ ಅನಂತರದ ಸಂಚಿಕೆಯನ್ನು ವಿ ಪಿ. ಮಾಡಿ ರವಾನಿಸಲಾಗುವುದು. ಚಂದಾ ಅವಧಿ ಮುಗಿದ ಮೇಲೆ ಪತ್ರಿಕೆ ಬೇಡವಾದವರು ದಯವಿಟ್ಟು ನಮಗೆ ಮುಂದಾಗಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇವೆ. ತಿಳಿಸದಿದ್ದಲ್ಲಿ ವಿ. ಪಿ ಯನ್ನು ಸ್ವೀಕರಿಸಬೇಕಾಗಿ ಕೋರುತ್ತೇವೆ.**

ಮೆನೇಜರ್, **ನವಯುಗ**, ಉಡುಪಿ


ಸ್ ಕಮಿಟಿಯವರು ಈ ಕಮಿಟಿಯ ಕೆಲಸದಲ್ಲಿ ಸಹಾನುಭೂತಿಯುಳ್ಳವರಿರುವರಾದರೂ ಅದರೊಡನೆ ಸಹಕರಿಸುವಂತೆ ಅದರ ವಿಸರ್ಜನಾಗಲಿ ರಚನೆಯಾಗಲಿ ನಡೆದಿರುವುದಿಲ್ಲ. ಕಾಂಗ್ರೆಸ್ ಕಮಿಟಿಯವರು ಉಡುಪಿ ಮುನಿಸಿಪಾಲಿಟಿಯ ಕುರಿತು ಸ್ವತಂತ್ರವಾಗಿ ಕೆಲಸಮಾಡಲಿರುವರು. ಆದರೆ ಈಗಲೇ ಏನುಮಾಡುವುದಕ್ಕೂ ಸಾಧ್ಯವಿಲ್ಲ. ಮುನಿಸಿಪಾಲಿಟಿಯನ್ನು ತೆಗೆದುಹಾಕುವುದು ಎಷ್ಟರಮಟ್ಟಿಗೆ ವ್ಯವಹಾರ್ಯವೋ ತಿಳಿಯದು. ಆದರೆ ತೆರಿಗೆಯ ಸಂಕಷ್ಟವನ್ನು ಕೆಲಮಟ್ಟಿಗೆ ಕಡಿಮೆ ಮಾಡುವುದು ಸಾಧ್ಯವಿದೆ. ಕಾಂಗ್ರೆಸ್ ಕಮಿಟಿಯವರು ಈ ಕುರಿತೆಲ್ಲ ವಿಚಾರಿಸಿ ಅಗತ್ಯವಿರುವ ಕೆಲಸಮಾಡಿ ಅದರ ಫಲಿತಾಂಶವನ್ನು ಜನತೆಗೆ ತಿಳಿಸಲಿರುವರು. ಈ ಕುರಿತು ಬರುವ ಎಸೆಂಬ್ಲಿ ಸಭೆಯಲ್ಲಿ ಮಿ. ಹುಸೇನ್ ಸಾಹೇಬರು ಪ್ರಶ್ನೆ ಕೂಡಾ ಕೇಳಲಿರುವರು. ಅದಕ್ಕೆ ಮಂತ್ರಿಗಳು ಕೊಡುವ ಉತ್ತರವನ್ನು ತಿಳಿದು ಮುಂದೇನು ಮಾಡಬೇಕೆಂಬುದನ್ನು ಕಾಂಗ್ರೆಸ್ ಕಮಿಟಿಯವರು ನಿಶ್ಚೈಸಲಿರುವರು. ಕಾಂಗ್ರೆಸಿನವರು ಅಧಿಕಾರಕ್ಕೆ ಬಂದರೆಂದು ಕಾಂಗ್ರೆಸ್ ಕಮಿಟಿಯವರು ಉಮೇದಿನಿಂದ ಜನರಲ್ಲಿ ಅಲ್ಲಸಲ್ಲದ ಆಶೆ ಹುಟ್ಟಿಸುವುದರಲ್ಲಿ ಅರ್ಥವಿಲ್ಲ ಮತ್ತು ಮಂತ್ರಿಗಳನ್ನು ಅವರು ಅಧಿಕಾರ ವಹಿಸಿದ ಕೆಲವೇ ದಿನಗಳಲ್ಲಿ ಉಭಯಸಂಕಟದಲ್ಲಿ ಸಿಲುಕಿಸಲೂ ಸಿದ್ಧರಿಲ್ಲ. ಜನತೆಯು ಸ್ವಲ್ಪ ತಾಳ್ಮೆಯಿಂದಿದ್ದು ಕಾಂಗ್ರೆಸಿಗೆ ನೆರವಾದರೆ ಅದು ತನ್ನ ಪಾಲಿನ ಕರ್ತವ್ಯವನ್ನು ಮಾಡದಿರಲಾರದು.

## ಸ್ವದೇಶ

### ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಇದೇ ತಾ 15ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು 3ಘಂಟೆಗಳ ವರೆಗೆ ಆಲೋಚಿಸಿ, ಪಂಜಾಬಿನ ಹಿಂದೀಯರ ವಿರೋಧವಾದ ಕಾನೂನುಗಳನ್ನು ವಿರೋಧಿಸುವ ಮತ್ತು ಜಂಜಿಬಾರ್ ಕ್ಲೋವ್ಸ್‌ಗಳನ್ನು ಬಹಿಷ್ಕರಿಸುವ ನಿರ್ಣಯಗಳನ್ನು ಮಂಜೂರುಮಾಡಿರುವುದು. ವರ್ಕಿಂಗ್ ಕಮಿಟಿಯು ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳೊಡನೆ ವಿಚಾರಿಸಿ ಬರುವ ಎಸೆಂಬ್ಲಿ ಸಭೆಗಳ ಮುಂದೆ, ಕಾಂಗ್ರೆಸಿನ ಕೇಳಿಕೆಯಂತೆ ಕಾನ್‌ಸ್ಟಿಟ್ಯುವೆಂಟ ಎಸೆಂಬ್ಲಿಯನ್ನು ಕರೆದು ಈಗಣ ರಾಜ್ಯಾಂಗ ರಚನೆಯನ್ನು ತೆಗೆದುಹಾಕಿ ಹೊಸತೊಂದನ್ನು ರಚಿಸಬೇಕೆಂಬ ನಿರ್ಣಯವನ್ನು ಮಂತ್ರಿಗಳು ತರಬೇಕೆಂದಾಯಿತು. ಈ ಸಂಬಂಧವಾಗಿ ಮಂತ್ರಿಗಳು ಹೊಂಗೂ ಚಳವಳಿಸಬೇಕೆಂದಾಯಿತು. ಅಂಡಮಾನ್ ಪ್ರಶ್ನೆಯನ್ನು ವಿಚಾರಿಸಲು ಹೆಚ್ಚಿನ ಸಮಯತಾಗಿತು. ಅದಕ್ಕಾಗಿಯೇ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಇಬ್ಬರು ಬಂದಿದ್ದರು. ಅಂಡಮಾನ್ ಕೈದಿಗಳ ಕುರಿತು ಹಿಂದೀಯ ಲಕ್ಷ್ಯವನ್ನೆಳೆವ ಅವರ ಉದ್ದೇಶವೀಗ ನೆರವೇರಿರುವುದರಿಂದ ಸದ್ರಿ ಕೈದಿಗಳೀಗ ತಮ್ಮ ಉಪವಾಸ ನಿಲ್ಲಿಸಬೇಕೆಂದು ವರ್ಕಿಂಗ್ ಕಮಿಟಿಯವರು ಅಂಡಮಾನಿಗೆ ತಂತಿಕೊಡಲಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ತಾ 16ನೇ ಬೆಳಗ್ಗೆ ಘಂಟೆ 8ರಿಂದ ಸಂಜೆ ೬ರವರೆಗೆ ನಡೆಯಿತು. ಮಧ್ಯೆ ಊಟಕ್ಕೆ 90ಮಿನಿಟುಗಳ ಅವಕಾಶ ಮಾತ್ರವಿದ್ದಿತು. ಮಹಾತ್ಮಾ ಗಾಂಧಿಯವರು ತನಗೂ ವೈಸರಾಯರಿಗೂ ನಡೆದ ಭೇಟಿಯ ವಿಷಯವನ್ನು ತಿಳಿಸಿದರು ಮತ್ತು ಶಿವಸಾಲೆಗಳಿಗೆ ಕಾಂಗ್ರೆಸಿನವರು ಅಧಿಕಾರ ವಹಿಸಿರುವ ಪ್ರಾಂತಗಳಲ್ಲಿ ಸಂಪೂರ್ಣವಾಗಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆತರಬೇಕೆಂದು ಸೂಚಿಸಿದರು. ಕೈಗಾರಿಕೋದ್ಯಮಗಳ ಪ್ರಶ್ನೆಯ ಕುರಿತೂ ಹೆಚ್ಚಿನ ಚರ್ಚೆ ನಡೆಯಿತು. ಮಜೂರರ ಉನ್ನತಿಸಾಧನೆಯ ವಿಷಯಕ್ಕೆ ಹೆಚ್ಚಿನ ಗಮನ ಕೊಡಲ್ಪಟ್ಟಿತ್ತು. ಮಂತ್ರಿಗಳ ಮತ್ತು ಇತರರ ಸಂಬಳದ ಕುರಿತು ಬಹಳ ಚರ್ಚೆ ನಡೆಯಿತು. ಬಂಗಾಳದಿಂದ ಶ್ರೀ ಶರಚ್ಚಂದ್ರಭೋಸರು ಬಂದಿರಲಿಲ್ಲ. ಅವರ ಬದಲಿಗೆ ಶ್ರೀ ಟಿ. ಸಿ. ಗೋಸ್ವಾಮಿಯವರು ಬಂದಿದ್ದರು. ಕಮಿಟಿಯವರು ಅವರೊಡನೆ ಬಂಗಾಳದ ಪರಿಸ್ಥಿತಿಯನ್ನು ವಿಚಾರಿಸಿದರು. ಪಂಜಾಬಿನಿಂದ ಡಾಕ್ಟರ್ ಗೋಪೀಚಂದಭಾರ್ಗವರೂ ಸಿಂಧಿನಿಂದ ಶ್ರೀ. ಜೈರಾಮ್ ಗಿಡ್ವಾನಿಯವರೂ ಬಂದಿದ್ದರು. ಕಾಂಗ್ರೆಸ್ ಪಕ್ಷದ ಮಂತ್ರಿಗಳೆಲ್ಲರೂ ಬಹುತೇಕ ಒಂದೇ ರೀತಿಯ ಧೋರಣೆ ವಹಿಸುವಂತೆ ಶ್ರೀ ರಾಜಗೋಪಾಲಾಚಾರ್ಯರ ಅಭಿಪ್ರಾಯ ತಿಳಿಯಲು ವರ್ಕಿಂಗ್ ಕಮಿಟಿಸಭೆಯು ತಾ 17ಕ್ಕೆ ಮುಂದುವರಿಸಲ್ಪಟ್ಟಿರುವುದು. ಶ್ರೀ ರಾಜಾಜಿಯವರೊಡನೆ ಚರ್ಚಿಸಿದ ಮೇಲೆ ಮಂತ್ರಿಗಳ ಕಾರ್ಯಕ್ರಮದ ಕುರಿತು ಕಮಿಟಿಯು ಕೆಲವು ನಿರ್ಣಯಗಳನ್ನು ಮಾಡಲಿರುವುದು. ಆದರೆ ಅದನ್ನು ಪ್ರಕಟಿಸಲಾಗುವುದಿಲ್ಲ.

### ಜಮೀನ್ದಾರರ ದಿಗಿಲು

ಗೇಣಿ ಬಾಕಿಯಿರುವ ಒಕ್ಕಲುಗಳ ಮೇಲಿನ ಎಲ್ಲಾ ಖಟ್ಲೆಗಳನ್ನು ನಿಲ್ಲಿಸಬೇಕೆಂದು ಸಂಯುಕ್ತಪ್ರಾಂತೀಯ ಕಾಂಗ್ರೆಸ್ ಮಂತ್ರಿಗಳು ಎಸೆಂಬ್ಲಿಯ ಅಭಿಪ್ರಾಯವನ್ನು ಕೂಡಾ ಕೇಳದೆ ಜ್ಯಾರಿಗೆ ತಂದಿರುವ ಹುಕುಮಿನಿಂದ ಅಲ್ಲಿಯ ಜಮೀನುದಾರರು ದಿಗಿಲುಗೊಂಡಿರುವರು. ಬಾಕಿ ಉಳಿದಿರುವ ಗೇಣಿಯು ರೂ ೧೬ರಿಂದ ೨೦ ಕೋಟಿಯಾಗಿದೆ. ಆದರೆ ಜಮೀನ್ದಾರರು ಕಂದಾಯವಾಗಿ ದೂ ೮೦ ಕೋಟಿ ಕೊಟ್ಟಿರುತ್ತಾರೆಂದು ಜಮೀನ್ದಾರರೊಬ್ಬರ ಅಭಿಪ್ರಾಯವಿದೆ.

## ಉಡುಪಿ

### ಉಡುಪಿ ಕೋಪರೇಟಿವ್ ಸೊಸೈಟಿ

ಕಳೆದ ಆದಿತ್ಯವಾರ ಈ ಸೊಸೈಟಿಯ ವಾರ್ಷಿಕ ಸಭೆಯು ಸೊಸೈಟಿಯ ಪ್ರೆಸಿಡೆಂಟರಾದ ಶ್ರೀ ಟಿ ಎನ್ ಕೇಳು ನಂಬಿಯಾರರ ಅಧ್ಯಕ್ಷತೆಯಲ್ಲಿ ನಡೆದು ಉಡುಪಿ ಕೋಪರೇಟಿವ್ ಸೊಸೈಟಿಯನ್ನು ಬಡಗಬೆಟ್ಟು ಸೊಸೈಟಿ ಮತ್ತು ಉಡುಪಿ ಟೌನ್ ಬೇಂಕಿನೊಂದಿಗೆ ಅದವಾ ಅವುಗಳಲ್ಲಿ ಯಾವುದಾದರೊಂದಿಗೆ ಸೇರಿಸಿ ಉಡುಪಿ ಮುನಿಸಿಪಲ್ ಏರಿಯದಲ್ಲಿ ಒಂದೇ ಕೋಪರೇಟಿವ ಟೌನ್ ಬೇಂಕನ್ನು ಸ್ಥಾಪಿಸುವಂತಾಗಬೇಕೆಂದಾಯಿತು. ಕಾಂಗ್ರೆಸ್ಸಿನವರು ಅಧಿಕಾರ ಸ್ವೀಕರಿಸಿದುದಕ್ಕಾಗಿ ಅವರನ್ನು ಅಭಿನಂದಿಸುವ ಮತ್ತು ಕಾಂಗ್ರೆಸ್ ಮಂತ್ರಿಗಳಿಗೆ ಬೆಂಬಲದ ಆಶ್ವಾಸನೆಯೀಯುವ ನಿರ್ಣಯವಾಯಿತು. ಚಾಲ್ತಿ ವರ್ಷದ ಬಜೆಟು ಪಾಸಾದ ಮೇಲೆ ಶ್ರೀಗಳಾದ ಟಿ ಎನ್ ಕೇಳುನಂಬಿಯಾರ್, ಡಾಕ್ಟರ್ ಕೆ. ಎಲ ಐತಾಳ, ಪಿ ಎ ಪೈ, ಎಲ ನಾರಾಯಣ ನಾಯ್ಕ, ಕೆ ಶ್ರೀನಿವಾಸ ಪೈ, ಎನ್ ವಾಮನ ಬಟ್, ಮತ್ತು ಪಿ ಎ ಕಾಮತರು ಚಾಲ್ತಿ ವರ್ಷಕ್ಕೆ ಡೈರೆಕ್ಟರರಾಗಿ ಆರಿಸಲ್ಪಟ್ಟರು. ಬೈಲೋಗಳಲ್ಲಿ ಕೆಲವು ಮುಖ್ಯ ಬದಲಾವಣೆ ಮತ್ತು ಹೊಸ ಬೈಲೋಗಳನ್ನು ಮಾಡಲಾಯಿತು.

### ತೆರಿಗೆದಾರರ ಸಂಘ

ಇವರ ಸಭೆಯೊಂದು ಮೊನ್ನೆ ಸಂಜೆ ತಿರುಮಕ್ಕಪ್ಪ ಥಿಯೇಟರಿನಲ್ಲಿ ಮುನಿಸಿಪಲ್ ಚೇರ್‌ಮೆನ್ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಸದ್ರಿ ಸಂಘದ ಸೆಕ್ರೆಟರಿಗಳಾದ ಶ್ರೀ ವಾಸುದೇವ ಶೆಣೈಯವರು ಮುನಿಸಿಪಾಲಿಟಿಯನ್ನು ತೆಗೆದು ಹಾಕುವ ಕುರಿತು ವಿಚಾರಿಸುವುದೇ ಈ ಸಭೆಯ ಉದ್ದೇಶವೆಂದರು. ಆ ವೇಳೆ ಶ್ರೀ ನಾಗಪ್ಪ ಕಾಮತರು ಮಾತಾಡಿದರು. ಅಧ್ಯಕ್ಷರು ಮುನಿಸಿಪಾಲಿಟಿಯು ಯಾರಿಗೂ ಬೇಡವಾಗಿದೆ ಆದರೆ ಅದನ್ನು ತೆಗೆದುಹಾಕುವುದು ಅಷ್ಟೇನು ಸುಲಭವಲ್ಲ. ಖಾಲಿ ಸ್ಥಳ ಮತ್ತು ಬೇಸಾಯ ಜಮೀನಿನ ಮೇಲಿನ ಕಂದಾಯ ತೆಗೆದುಹಾಕಬೇಕು, ಕಮಿಶನರನ್ನು ತೆಗೆಯಬೇಕೆಂದು ಮುನಿಸಿಪಾಲಿಟಿಯವರು ಠರಾವು ಮಾಡಿ ತನ್ನ ಶಿಫಾರಸಿನ ಮೇರೆಗೆ ಸರಕಾರಕ್ಕೆ ಕಳುಹಿಸಲ್ಪಟ್ಟಾಗ ಅದಕ್ಕವರು ಗಮನಕೊಡಲಿಲ್ಲ. ಮೊದಲು ಉಡುಪಿಯವರೆಲ್ಲಾ ಮಂತ್ರಿಗಳಿಗೊಂದು ಮನವಿ ಕಳುಹಿಸಬೇಕು. ಈ ಮನವಿ ತಯಾರಿಸಲೊಂದು ಕಮಿಟಿಯಾಗಬೇಕೆಂದು ಸೂಚಿಸಿದರು. ಆ ಪ್ರಕಾರ ಒಂದು ಕಮಿಟಿಯು ರಚಿಸಲ್ಪಟ್ಟಿತು.


## ಬೇಕಾಗಿದೆ.

ಜಿಲ್ಲೆಯ ಒಳಗೂ ಹೊರಗೂ ಸಂಚರಿಸಿ 'ನವಯುಗ'ದ ಚಂದಾದಾರರಿಂದ ಹಣ ವಸೂಲು ಮಾಡಲಿಕ್ಕೂ ಹೊಸ ಚಂದಾದಾರರನ್ನು ಸೇರಿಸಲಿಕ್ಕೂ ನಂಬಿಗಸ್ಥರಾದ, ಚೆನ್ನಾಗಿ ಇಂಗ್ಲಿಷ್ ಕನ್ನಡ ಬಲ್ಲ ಉತ್ಸಾಹೀ ಪ್ರತಿನಿಧಿಗಳೊಬ್ಬರು ಬೇಕು. ಸಂಬಳ ಮತ್ತು ಪ್ರಯಾಣ ವೆಚ್ಚ ಕೊಡಲಾಗುವುದು. ರೂ 100/- ಡಿಪೋಜಿಟ್ ಇಡಲು ತಯಾರಿರುವವರು ತಿಂಗಳೊಂದರ ಎಷ್ಟು ಚಂದಾದಾರರನ್ನು ಸೇರಿಸ ಬಹುದೆಂಬುದನ್ನೂ ತಿಂಗಳಿಗೆ ಎಷ್ಟು ಸಂಬಳ ಸಿಗಬೇಕೆಂಬುದನ್ನೂ ತಿಳಿಸಿರಿ. ಹೆಚ್ಚಿನ ಮಾಹಿತಿಗೆ ಈ ತಿಂಗಳಂತ್ಯದೊಳಗೆ ಬರೆಯಿರಿ, ಯಾ ಸ್ವತಃ ಬಂದು ಮಾತನಾಡಿರಿ.

**ಮೆನೇಜರ್, ನವಯುಗ, ಉಡುಪಿ.**



ಸ.ಸಮಯ' ಹಣ ಸಂಪಾದಿಸಿರಿ''

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1--9--0 ವೆಚ್ಚ ಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ.** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ.

ಮೆನೇಜರ್

**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**



# Loans & Advances

ON THE SECURITY OF GOLD, JEWELS AND OTHER VALUABLES ALWAYS AVAILABLE AT MODERATE RATES

THE UDIPI BANK LTD.

UDIPI.

# ದಕ್ಷಿಣ ಕನ್ನಡ

**ಕಿನ್ನಿಗೋಳಿ**—ಇಲ್ಲಿ ಶ್ರೀ॥ ಹಿರಿಯಡ್ಕ ರಾಮರಾಯ ಮಲ್ಯ ಹಾಗೂ ಶ್ರೀ॥ ಯಂ. ರಾಮಕೃಷ್ಣ ಪೂಂಜರ ನೇತೃತ್ವದಲ್ಲಿ ಒಂದು ಕಾಂಗ್ರೆಸ್ ಕಮಿಟಿಯ ಏರ್ಪಾಡು ಆಯಿತು. ಶ್ರೀ॥ ಯಸ್. ಸೋಮ ಸೆಟ್ರು ಅಧ್ಯಕ್ಷರಾಗಿಯೂ ಶ್ರೀ॥ ಕೆ. ಸಂಜೀವ ರಾವ್ ಇವರು ಕಾರ್ಯದರ್ಶಿಯರಾಗಿಯೂ ಬೇರೆ ೯ ಜನ ಕಮಿಟಿಮೆಂಬರರಾಗಿಯೂ ಆರಿಸಲ್ಪಟ್ಟರು.

**ಹೆಜ್ಮಾಡಿ**—ಇಲ್ಲಿ ಶ್ರೀಗಳಾದ ಯಸ್. ಭೋಜರಾವ್, ಯಚ್. ಅಂತಯಸಾಯ್ಕ, ಯಚ್. ಶೀನ ಶೆಟ್ಟಿ, ಯಚ್. ಜರ್ನಾಸ್ವಾರೀಸ್, ಯಚ್. ನಾರಾಯಣ ಶೆಟ್ಟಿ, ಯಚ್ ಕೃಷ್ಣರಾವ್, ಮತ್ತು ಯಚ್. ವೀರಯ್ಯ ಪಾಯ್ಸರೇ ಈ ೭ ಜನರು ಸ್ಥಾಪಕರಾಗಿ ಸೇರಿ, ಒಂದು ವಾಚನಾಲಯವನ್ನು ತೆರೆಯುವ ಬಗ್ಗೆ ತಾ ೧೧-೮-'೩೭ರಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನೆರವೇರಿಸಿದರು. ನೆರೆದ ಸಭೆಯಲ್ಲಿ ಶ್ರೀಯುತ, ಯಚ್ ಮುದ್ದಣ್ಣ ಶೆಟ್ಟಿ, ಬಿ. ಯಸ್ ಸಿ. (ಎಟ್) ಎಲ್. ಟಿ ಯವರು ಸೂಚಿಸಿ, ಕೆ. ನಂಜಪ್ಪ ಶೆಟ್ರು ಅನುಮೋದಿಸಲು ಸರ್ವಸಮ್ಮತದಿಂದ ಶ್ರೀಯುತ. ಡಾಕ್ಟರ್, ಯಚ್ ನಾರಾಯಣ ಗಡಿಯಾರ್, ಯಲ್ ಯಂ ಪಿ ಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟು, ಸದರೀ ಸಭಾಧ್ಯಕ್ಷರಿಂದ ವಾಚನಾಲಯವು ತೆರೆಯಲ್ಪಟ್ಟು, ಜನರ ಅಪೇಕ್ಷೆಯ ಮೇರೆಗೆ ಅದಕ್ಕೆ "ಹೆಜ್ಮಾಡಿ ಸೇವಾ ಕ್ಲಬ್"ಎಂಬ ಹೆಸರನ್ನಿಡಲಾಯಿತು ವಾಚನಾಲಯಗಳಿಂದ ಭಾಷಾಭಿವೃದ್ಧಿಗೂ, ಜ್ಞಾನವೃದ್ಧಿಗೂ ಮತ್ತು ಸಂಘಟನಾ ಶಕ್ತಿಗೂ ಎಷ್ಟರ ಮಟ್ಟಿಗೆ ಪ್ರಯೋಜನವಿದೆಯೆಂಬುದನ್ನ ಶ್ರೀಯುತ ಯಚ್ ಶೀನ ಶೆಟ್ರು ಸಭಿಕರಿಗೆ ವಿವರಿಸಿ ಹೇಳಿದ ನಂತರ, ನೆರೆದಿದ್ದ ಮಹನೀಯರ ಪೈಕಿ ಶ್ರೀಯುತ ಯಂ ಬಿ. ನರ್ಸಪ್ಪನವರು, ಕೆ. ನಂಜಪ್ಪ ಶೆಟ್ರು ಮತ್ತು ಕಿನ್ನಿಗೋಳಿ ಡಾಕ್ಟರ್, ಯಚ್. ಗೋವಿಂದ ಭಟ್ರು ವಾಚನಾಲಯಗಳ ಪ್ರಯೋಜನ ಹಾಗೂ ಆಡಳಿತೆ ಮಂಡಳಿಯವರ ಮತ್ತು ಚಾಲಕರ ಜವಾಬ್ದಾರಿಯ ಕುರಿತು ವಿವರವಾಗಿ ತಿಳಿಸಿದರು. ಅಧ್ಯಕ್ಷರು ತಮ್ಮ ಅಮೂಲ್ಯವಾದ ಸಲಹೆಗಳನ್ನ ಸೂಚಿಸಿ ಸಭಾಕಾರ್ಯವನ್ನ ಅಂತ್ಯಗೊಳಸಲಾಗಿ, ನಂತರ ಶ್ರೀಯುತ ಯಚ್. ಶೀನ ಶೆಟ್ರು ಅಧ್ಯಕ್ಷರ ಹಾಗೂ ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿ ನೆರೆದ ಸಭಿಕರಿಗೆ ಫಲಾಹಾರ ತಾಂಬೂಲಾದಿಗಳಿಂದ ಉಪಚರಿಸಿ ಅಂದಿನ ಸಮಾರಂಭವು ಕೊನೆಗೊಂಡಿತು.

ಇಲ್ಲಿಯೂ ಸಾಯಂಕಾಲ ೪॥ ಘಂಟೆಗೆ ಸಾರ್ವಜನಿಕ ಸಭೆ ಸೇರಿ 'ಅಂಡಮಾನ ರಾಜಕೀಯ ಕೈದಿಗಳ' ದಿನಾಚರಣೆಯನ್ನು ಆಚರಿಸಿದರು ಸಭೆಯಲ್ಲಿ ಶ್ರೀ॥ ಕಿಲ್ಲೆಯವರ ಭಾಷಣವಿತ್ತು। ಸರಕಾರದ ಧೋರಣೆಯನ್ನು ಖಂಡಿಸಿ, ಕೂಡಲೇ ಅಂಡಮಾನದ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಬೇಕೆಂಬ ಠರಾವು ಸಭೆಯಲ್ಲಿ ಪಾಸಾಯಿತು.

**ಪಲಿಮಾರು**—ಇದೇ ಕಳೆದ ತಾ. ೮ನೇ ಆದಿತ್ಯವಾರ ಪಾಪನ ಸ್ವಾಕ ಎಂಬವರು ಕತ್ತಿಗೆಗೆ ಕ್ರೂರಶಕ್ತಿಯಿಂದ ಕಡಿದು ಖೂನಿ ಮಾಡಲ್ಪಟ್ಟವನೆಯಿಂದ ಸಪ್ರಿಯವರು ಮೂಲ್ಕಿ ಲೋ ಫ. ಆಸ್ಪತ್ರೆಯಲ್ಲಿ ಚಿಕಿತ್ಸೆ ಯೊಂದುತ್ತಿದ್ದಾರೆ. ಉಡ್ಪಿ ಪೋಲಿಸರು ತನಿಕೈಮ ನಡೆಸುತ್ತಿದ್ದಾರೆ ಸದ್ರಿ ತಕ್ಸೀರು ಕಳೆದ ವರ್ಷದ ಇಲ್ಲಿಯ ಮದ್ಯ ಮಾರಾಟದ ತಕ್ಸೀರಿಗೆ ಸಂಬಂಧ ಪಟ್ಟುದಾಗಿ ಊಹಿಸಬರುತ್ತದೆ. ಕಾರಣ ಸದ್ರಿ ಮದ್ಯದ ಸಂಬಂಧದಲ್ಲಿ ಸಾಕ್ಷಿಗಳಾಗಿದ್ದ ೧೭ ಜನರ ಪೈಕಿ ಒಬ್ಬನ ತನಿಖೆ ಆದ ಹಾಗಾಯಿತು. ಇನ್ನುಳಿದ ೧೬ರ ತನಿಖೆ ಕೈವೇಣ ಎಂಬ ಬೆದರಿಕೆಯ ಮಾತುಗಳು ಅಲ್ಲಲ್ಲಿ ಕೇಳಿಸುತ್ತದೆಂದು ಬಾತ್ಮಿ.

**ಮೂಲ್ಕಿ**—ಕಳೆದ ತಾ. ೧೪-೮-೩೭ನೇ ಶನಿವಾರ ಬೆಳಗ್ಗೆ ೯ ಘಂಟೆಗೆ ಇಲ್ಲಿಯ ಕಾಂಗ್ರೆಸು ಕಮಿಟಿಯು ನೇತೃತ್ವದಲ್ಲಿ ಸೇರಿದ ಅಂಡಮಾನ ರಾಜಕೀಯ ಕೈದಿಗಳ ದಿನಾಚರಣೆಯ ಸಾರ್ವಜನಿಕ ಸಭೆಯಲ್ಲಿ ಶ್ರೀಯುತ ನಾರಾಯಣ ಕಿಲ್ಲೆಯವರೂ,ಶ್ರೀ॥ ಹಿ. ರಾಮರಾಯ ಮಲ್ಯರೂ ಅಂಡಮಾನ ಕೈದಿಗಳ ಉಪವಾಸದ ಕಾರಣವನ್ನೂ ಆವಿಷಯದಲ್ಲಿ ಸರಕಾರವು ತೋರಿಸುತ್ತಿರುವ ಅಸಡ್ಡೆಯನ್ನೂ ವಿವರಿಸಿ ಭಾಷಣ ಮಾಡಿದರು. ಸಭೆಯಲ್ಲಿ ಶ್ರೀ॥ ಯಂ. ಆರ್. ಪೂಂಜರು ಅಧ್ಯಕ್ಷಸ್ಥಾನವನ್ನ ವಹಿಸಿದ್ದರು ಅಂಡಮಾನದಲ್ಲಿರುವ ರಾಜಕೀಯ ಕೈದಿಗಳ ಬೇಡಿಕೆಯನ್ನು ಸರಕಾರವು ನಿರಾಕರಿಸಿದ ಧೋರಣೆಯನ್ನು ಖಂಡಿಸಿಯೂ ಸದರಿ ರಾಜಕೀಯ ಇಟೆನ್ಯೂಗಳನ್ನು ಕೂಡಲೇ ಬಂಧವಿಮುಕ್ತ ಪಡಿಸಬೇಕೆಂದೂ, ಮತ್ತು ಅಂಡಮಾನದ ಜೈಲನ್ನು ಕೂಡಲೇ ಮುಚ್ಚಬೇಕೆಂದೂ, ಠರಾವು ಪಾಸುಮಾಡಿದರು.

ಇಲ್ಲಿ ಈ ವರೆಗೆ ಸುಮಾರು ೩೦೦ ಕಾಂಗ್ರೆಸ್ ಸಭಾಸದರನ್ನು ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಸೇರಿಸಿರುವರೆಂದು ತಿಳಿದು ಬರುತ್ತದೆ.

ಬರುವ 'ಜಿಲ್ಲಾ ರಾಜಕೀಯ ಪರಿಷತ್ತನ್ನು' ಮೂಲ್ಕಿಯಲ್ಲಿ ಜರಗಿಸುವಂತೆ ಸಹಾಯ ಮಾಡಬೇಕಾಗಿ ಮೂಲ್ಕಿ ಕಾಂಗ್ರೆಸ್ ಕಮಿಟಿಯವರು ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಂಡಿರುವರಾಗಿ ತಿಳಿದು ಬರುತ್ತದೆ

**ಬ್ರಹ್ಮಾವರ**—ಕಟಪಾಡಿ ಶ್ರೀ. ನಾರಾಯಣ ಕಿಣಿಯವರ ಜ್ಯೇಷ್ಠ ಪುತ್ರ ಜನಪ್ರೀತ ಶ್ರೀ. ಕೇಶವ ಕಿಣಿಯವರು ಇದೇ ತಾ ೧೪-೮-೩೭ನೇ ಶನಿವಾರ ಪ್ರಾತಃಕಾಲ ತಮ್ಮ ೧೯ನೇ ವಯಸ್ಸಿನಲ್ಲಿ ಕಟಪಾಡಿಯಲ್ಲಿ ನಿಧನ ಹೊಂದಿದುದು ಅತ್ಯಂತ ಶೋಚನೀಯವಿದೆ. ಇತ್ತೀಚೆಗೆ ೮ ತಿಂಗಳುಗಳ ಲಾಗಾಯ್ತು ಮಂಗಳೂರು ಸ್ವಾಕ್ ಬೇಂಕಿನಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇವರು ಇತ್ತೀಚೆಗೆ ಎರಡು ವಾರಗಳಿಂದ ವಿಷಮಜ್ವರ ಪೀಡಿತರಾಗಿದ್ದರು. ಜನಪ್ರೀತರೂ, ಎಲ್ಲಾ ಸಾರ್ವಜನಿಕ ಕಾರ್ಯಗಳಲ್ಲಿ ಅತ್ಯುತ್ಸಾಹದಿಂದ ಮುಂದಾಳಾಗಿ ಕೆಲಸ ಮಾಡುವವರೂ ಆಗಿದ್ದರು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬಕ್ಕೆ ಈ ದುಃಖವನ್ನು ಸಹಿಸುವ ಶಕ್ತಿಯನ್ನೂ ಕರುಣಿಸಲೆಂದು ಶ್ರೀ ಭಗವಂತನಲ್ಲಿ ಪ್ರಾರ್ಥಿಸುವೆವು.

**ಪಣಂಬೂರು**—ಇದೇ ಕಳೆದ ತಾ. ೧೦ನೇ ದಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರೂ, ಶ್ರೀ॥ ಬಿ ಭೋಜರಾಯರೂ, ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರೂ ಇಲ್ಲಿಗೆ ಬಂದಿದ್ದು ಕಾಂಗ್ರೆಸಿನ ಕುರಿತು ಭಾಷಣಾದಿಗಳನ್ನು ಮಾಡಿ ಶ್ರೀ॥ ಪಿ. ಶ್ಯಾಮರಾವ್ ಇವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ॥ ಡಾ. ಈಶ್ವರ ಶರ್ಮ ಮತ್ತು ಶ್ರೀ॥ ಯಂ. ಆರ್. ಪಣಂಬೂರು ಇವರನ್ನು ಜತೆ ಕಾರ್ಯದರ್ಶಿಗಳನ್ನಾಗಿಯೂ ನೇಮಿಸಿ ಇತರ ೯ ಜನ ಕಾರ್ಯಕಾರಿ ಸಮಿತಿಯ ಸದಸ್ಯರುಗಳನ್ನೊಳಗೊಂಡ ಒಂದು ಕಾಂಗ್ರೆಸ್ ಸಮಿತಿಯನ್ನು ನಿರ್ಮಾಣಮಾಡಿ ಹೋಗಿರುವರು. ಜನರು ಹೆಚ್ಚು ಸಂಖ್ಯೆಯಿಂದ ಮೆಂಬರರಾಗಿ ಸೇರುತ್ತಿರುವುದು ಸ್ತುತ್ಯ.

ಇದೇ ತಾ. ೧೫ನೇ ಆದಿತ್ಯವಾರ ದಿನ ಪಣಂಬೂರು ಬೈಕಂಪಾಡಿ, ತಣ್ಣೀರ್ಭಾವಿ ಗ್ರಾಮಗಳ ಓಟರರ ಒಂದು ಸಭೆನಡೆದು, ಬರುವ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯಿಂದ ಶ್ರೀ॥ ಯಚ್. ದಾಮೋದರ ರಾಯರನ್ನು ಸುರತ್ಕಲ್ಲು ಸರ್ಕಲಿನಿಂದ ಪ್ರತಿಸ್ಪರ್ಧಿಯಿಲ್ಲದೆ ಚುನಾಯಿಸುವುದಾಗಿ ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟಿತು.

**ಬೈಲೂರು**—ಅಂಡಮಾನ ದಿವಸವನ್ನು ಆಚರಿಸಬೇಕಾಗಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಪಂಡಿತ ಜವಹರಲಾಲನೆಹರೂರವರ ಸಂದೇಶದ ಮೇರೆಗೆ ಇಲ್ಲಿಯೂ ಕೂಡಾ ತಾ ೧೪-೮-೧೯೩೭ರಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಇಲ್ಲಿಯ ಕಾಂಗ್ರೆಸ್ ಕಚೇರಿಯಲ್ಲಿ ಕೂಡಿಸಲಾಯ್ತು. ಮತ್ತು ಮ. ರಾ. ಕೆ. ರಾಮಯ್ಯ ಹೆಗ್ಡೆ ಇವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯ್ತು.

ಸಭಿಕರ ಪೈಕಿ ಶ್ರೀಯುತ ಡಿ. ಡಿ. ಅಬ್ಬಲರೂ ಶ್ರೀಯುತ ಸೀತಾರಾಮ ರಾಯರೂ ಮತ್ತು ಶ್ರೀಯುತ ಯು ಕೃಷ್ಣರಾಯ ಕಿಣಿಯವರೂ ಈ ದಿವಸದ ಸಭೆಯ ಉದ್ದೇಶವನ್ನು ಅಂಡಮಾನದಲ್ಲಿ ಕೊಳೆಯುತ್ತಿರುವ ರಾಜಕೀಯ ಕೈದಿಗಳ ಸಂಕಷ್ಟವನ್ನೂ ಸಭಿಕರಿಗೆ ತಿಳಿಸಿದ ಮೇಲೆ ಅಧ್ಯಕ್ಷರ ಭಾಷಣವಾಯ್ತು. ನಂತರ ರಾಜಕೀಯ ಕೈದಿಗಳ ಮೇಲೆ ಸಹಾನುಭೂತಿಯನ್ನು ತೋರಿಸಿಯೂ ಮತ್ತು ಸಂಬಂಧಪಟ್ಟ ಸರಕಾರದವರು ಅವರ ಮನವಿಗೆ ಕೂಡಲೇ ಸಿಗಾ ತಕ್ಕೊಂಡು ಅವರನ್ನು ಬಿಡುಗಡೆಮಾಡಬೇಕಾಗಿಯೂ ಠರಾವುಗಳು ಸರ್ವಾನುಮತದಿಂದ ಮಂಜೂರಾದುವು

**ಬಳಕುಂಜ**—ಸನ್ ೧೯೩೭ನೇ ಯಿಸವಿ ಆಗೋಸ್ಟು ತಿಂಗಳ ತಾರೀಕು ೧೩ನೇ ಶುಕ್ರವಾರ ಅಪರಾಹ್ಣ ಘಂಟೆ ೪ಕ್ಕೆ ಬಳಕುಂಜ ಪಂಚಾಯತ ಬೋರ್ಡು ಆಫೀಸಿನಲ್ಲಿ ಮ. ರಾ. ರಾ. ಯು ಟಿ. ಸಾಂತೀಸರವರ ಅಧ್ಯಕ್ಷತೆಯಲ್ಲಿ ಜರಗಿದ ಬಳಕುಂಜ, ಕೆವತಾರು, ಕರ್ನಿರೆ ಗ್ರಾಮಸ್ಥರ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲ್ಪಾತು. ಬರುವ ಜಿಲ್ಲಾ ಬೋರ್ಡಿಗೆ ಮೂಲ್ಕಿ ಸರ್ಕಲಿಗೆ ನಮ್ಮ ಗ್ರಾಮಗಳಪರವಾಗಿ ಶ್ರೀಯುತ, ಮೂಲ್ಕಿ ರಾಮಕೃಷ್ಣ ಪೂಂಜರೇ ಮೆಂಬರರಾಗಿ ನಿಲ್ಲುವಂತೆ ಕೇಳಿಕೊಂಡು ಸರ್ವಾನುಮತದಿಂದ ನಿರ್ಣಯಿಸಲ್ಪಾತು. ಶ್ರೀಯುತ ಪೂಂಜರವರು ನಮ್ಮ ಗ್ರಾಮಗಳ ಮಾಹಿತಿಯಿದ್ದವರೂ ಕಾಂಗ್ರೆಸು ಧುರೀಣರೂ ಆದ ಕಾರಣ ಸದ್ರಿಯವರನ್ನೇ ಜಿಲ್ಲಾ ಕಾಂಗ್ರೆಸು ಕಮಿಟಿಯವರು ಆರಿಸುವಂತೆ ಕೇಳಿಕೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲ್ಪಾತು. ನಮ್ಮ ಮೂರು ಗ್ರಾಮಗಳ ಬಗ್ಗೆ ಕೆಳಗೆ ನಮೂದಿಸಿದ ಮೆಂಬರರಿಂದ ಕೂಡಿದ ಕಮಿಟಿಯನ್ನು ಏರ್ಪಡಿಸಿ ಮುಂದಿನ ಚುನಾವಣೆ ಕಾರ್ಯದಲ್ಲಿ ಕಾಂಗ್ರೆಸಿಗೆ ಸಹಾಯವನ್ನೀಯಬೇಕಾಗಿ ನಿರ್ಣಯಿಸಲ್ಪಾತು.

**ಅಬ್ಲಾಡಿ**—ಇಲ್ಲಿಯ ಅಚರ ಮಂಜಮ್ಮ ಸೆಡ್ತಿಯವರು ತಮ್ಮ ೧೧೦ನೇ ವಯಸ್ಸಿನಲ್ಲಿ ತಾ. 14-8-1937ರಂದು ದೈವಾಧೀನರಾದರು. ಇಷ್ಟು ಪ್ರಾಯವಾಗಿದ್ದರೂ ಸಾಯುವ ದಿನ ಸಹ ಗಟ್ಟಿಮುಟ್ಟಾಗಿದ್ದು ತನ್ನ ಕೆಲಸಗಳನ್ನು ತಾನೇ ಮಾಡಿಕೊಂಡಿದ್ದರು ಮೃತರ ಶವ ಸಂಸ್ಕಾರವು ಬಹಳ ಸಂಭ್ರಮದಿಂದ ನಡೆಯಿತು. ಮೃತರ ಆತ್ಮಕ್ಕೆ ದೇವರು ಚಿರ ಶಾಂತಿಯನ್ನೀಯಲಿ, ಎಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

**ಬೊಂಬಾಯಿಯಲ್ಲಿ**

ಶ್ರೀ. ವಿ ಎಸ್. ಶಿಬ್ರೂರ್ಕಾರ್,
ದಿ. ನೇಶನಲ್ ಕೆನರಾ ನ್ಯೂಸ್
ಏಜನ್ಸಿ, ಫ್ರೋರ್ಟ F,

ಇವರಲ್ಲಿ ನವಯುಗದ
ಬಿಡಿಪ್ರತಿಗಳು ದೊರೆಯುತ್ತವೆ.

**Photo Camera Rs. 3-10-0**
**ಫೋಟೋ ಕ್ಯಾಮರಾ.**



ಈ ಫೋಟೋ ಕ್ಯಾಮರಾಗಳು ವಿಲಾಯಿತಿಯಲ್ಲಿ ತಯಾರಾದವು ಈ ಕ್ಯಾಮರಾಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಫೋಟೋ ತೆಗೆಯುವದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು. ಮತ್ತು ಫೋಟೋ ತೆಗೆಯಲು ಬೇಕಾಗುವ ಪೇಪರು, ಪ್ಲೇಟು, ಸಾಲ್ಟ್ ಕೆಮಿಕಲ್ಸ್‌ಗಳನ್ನೂ ಕೊಡುವೆವು.

ಕ್ರಯ ಕ್ಯಾಮರಾ ೧ಕ್ಕೆ 3-10-0
**ಆರ್. ಕೆ. ರಾಜನ್, ಅಂಡ್ ಕೊ.**
ವೇಪೇರಿ, ಮದರಾಸು.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ.

ಕಟಪಾಡಿ, ದ. ಕ.

**ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.**

ಇವರಲ್ಲಿ—

| ಗುಡಪಿಪ್ಪಲಿ (ಲೀವರ್ ರೋಗಕ್ಕೆ) | ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) | ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ) |
|---|---|---|

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

**ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು!** ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ.

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
**ಮಂಗಳೂರು, ದ. ಕ.**



# ಗಿಡಗಳು ಮತ್ತು ಬೀಜಗಳು

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ **ಗಿಡಗಳು, ಬೀಜಗಳು** ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ.

**ಡಿ. ಗುರಪ್ಪ ಅಂಡ್ ಸನ್ಸ್**
ಗಿಡ, ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್ ದೊಡ್ಡ ಮಾವಳ್ಳಿ,
**ಬೆಂಗಳೂರು ಸಿಟಿ.**



## ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೊಲೆರಾ ಫಿಲ್ಸ್**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

**ಭೈರವ ಮಾತ್ರೆಗಳು**
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.
**ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.**



# ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ



ಸ್ಥಾಪನೆ: 1926

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಟೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

**ಹೆಟ್ಟೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.**

ಮಿಕ್ಕೆ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಃ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.



ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

# ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

**ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.**

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

**ನವಭಾರತ ಬುಕ್ ಡಿಪೋ**
ಉಡುಪಿ



ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

**ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ**
**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ**

# 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager*, **The National Kanara News Agency,**
No. 58 Mody Street, Fort Bombay.



THE

# Vijaya Bank, Ltd.

**Head Office. MANGALORE.** Branch Offices **Udipi, Kaup & Coondapoor.**

## ದಿ ವಿಜಯ ಬೇಂಕ್ ಲಿಮಿಟೆಡ್,

**ಹೆಡ್ ಆಫೀಸು: ಮಂಗಳೂರು.** ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ರೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ರೇವಣಾತಿಗಳು ಸಾ. ಶೆ. 3½

ಕಾಯಂ ರೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ 500ರ ವರೆಗೆ ಸಾ. ಶೆ. 7.
501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/- ವರೆಗೂ ಸಾಲಕೊಡಲಾಗುತ್ತದೆ. ಫಾರಮುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

**A. B. Shetty,** ಚೆಯರ್ ಮೆನ್.
**K. Gopalakrishna Shetty.** ಸೆಕ್ರೆಟರಿ.

**ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.**



**ಸ್ವದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.**

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.**

**ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.**

**P. A. PAI BROS.,**
**ಪಿ. ಎ. ಪೈ ಬ್ರದರ್ಸ್,**
ಆಸ್ಪತ್ರೆ ಎದುರು, ಉಡುಪಿ.



# ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ನೂರದಲ್ಲಿ ಯಾವಾಗಲೂ ಹಣ್ಣು ಇರುವದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ಯಾದ ಶೋಪ್, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

**ಕೆ. ಎಸ್. ಶೆಟ್ಟಿ, ಕೆನರಾ ನರ್ಸರಿ.**
ಪೋಸ್ಟ್ ಕಾಪು, ದ. ಕನ್ನಡ

ಸೈಕಲ್ಲು, ನಮ್ಮ ಲಕ್ಷ್ಯವು ಬೇರೆ ಕಡೆಗೆ ತಿರುಗಿದೊಡನೆಯೇ ತಾನೂ ಓರೆ ಸರಿದು ಬಿಡುವುದುಂಟು. ಅಂತೆಯೇ ಮಾನವಸಮಾಜವೂ ಫಕ್ಕನೆ ತಿಳಿಯೂ ತಿಳಿಯದೆಯೂ ವಿನಾಶೋನ್ಮುಖ ಮಾರ್ಗವನ್ನು ಹಿಡಿದು ಬಿಡುವುದುಂಟು ಮಾನವ ಸ್ವಭಾವವು ಚಂಚಲವಾದುದು. ಅದು ತನ್ನ ನಿಶ್ಚಿತ ಗುರಿಯನ್ನು ಮುಟ್ಟುವುದರೊಳಗಾಗಿ ಅಡ್ಡ ದಾರಿಗೆ ಸರಿದುಬಿಡುತ್ತದೆ. ಆಗ ಯಾರಾದರೊಬ್ಬ ವಿವೇಕಿಗೆ ಅದು ಅಮಾರ್ಗವೆಂದು ತಿಳಿಯುವುದು ಆದರೆ ಆತನು ಅದನ್ನು ಅಮಾರ್ಗನೆಂದರೆ ತೀರಿತು. ಅವನು 'ಫಟಿಂಗ'ನಾಗುತ್ತಾನೆ. ಕ್ರಾಂತಿಕಾರನಾಗುತ್ತಾನೆ! ತನ್ನ ದಾರಿಯೇ ಸರಿಯೆಂದು ನಂಬಿರುವ ಕುರುಡು ಸಮಾಜವು ಆ ವಿವೇಕಿಗೆ ಕೊಡುವ ಪುರಸ್ಕಾರವೆಂದರೆ– 'ಕ್ರಾಂತಿಕಾರ' ಅಥವಾ 'ಉಗ್ರಸುಧಾರಕ' ಎಂಬ ಬಿರುದು!

ಆದರೆ ನಾವು ಮಾತ್ರ ಸ್ವಲ್ಪ ವಿಚಾರಿಸೋಣ–ಕ್ರಾಂತಿಕಾರ ಅಥವಾ ಸುಧಾರಕನೆಂದರೆ ಏನೆಂದು. ಕ್ರಾಂತಿಕಾರ ಅಥವಾ ಸುಧಾರಕ ಎಂಬ ಶಬ್ದದಲ್ಲಿ ಏನೂ ಇಲ್ಲ. ಸಮಾಜವು ಅದನ್ನು ತಿಳಿದಿರುವುದು ಮಾತ್ರ ದ್ರಾವಿಡ ಪ್ರಾಣಾಯಾಮದ ಅರ್ಥದಿಂದ. ತಾನು ಹೋದ ದಾರಿಯೇ ಸರಿಯಾದುದೆಂದು ಬಗೆದ ಸಮಾಜವು, ಅದನ್ನು ತಪ್ಪೆನ್ನುವುದು ಮೂರ್ಖತನವೆಂದು ತಿಳಿಯುವುದು–ಕ್ರಾಂತಿಯೆಂದು ತಿಳಿಯುವುದು. ಅವನ ಮಾತಿನ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಹೀಗಾಗಿ ಅವನು ಕ್ರಾಂತಿಕಾರನಾಗಿ ಉಳಿಯುತ್ತಾನೆ! ದೋಷಯುಕ್ತವಾದುದನ್ನು ಸುಧಾರಿಸುವವನೇ ಸುಧಾರಕ. ಆ 'ಸುಧಾರಕ' ಎಂಬ ಶಬ್ದದಲ್ಲಿ ಏನೊಂದು ಕೆಟ್ಟ ಅಭಿಪ್ರಾಯವೂ ನಮಗೆ ಕಾಣುವುದಿಲ್ಲ. ಆದರೆ

# ಕ್ರಾಂತಿಕಾರರೇ ಲೋಕಾಧಾರರು

ಲೇಖಕ:– **"ಉಗ್ರನರಸಿಂಹ"**

ಸಮಾಜವೇಕೋ ಆ ಹೆಸರಿಗೆ ವಿಕಲ್ಪಾರ್ಥವನ್ನು ಕಲ್ಪಿಸಿದೆ. ಈ ಅಪಾರ್ಥದಿಂದಾಗಿ ಆ ಶಬ್ದವನ್ನೇ ದ್ವೇಷಿಸುವ ಸಮಾಜವೂ ಉಂಟೆನ್ನುವುದನ್ನು ನಾಚಿಕೆಯಿಂದ ತಿಳಿಸಬೇಕಾಗಿದೆ.

ಆದರೆ ಈ ಕ್ರಾಂತಿಕಾರ–ಅಥವಾ–ಸುಧಾರಕರಿಲ್ಲದಿದ್ದರೆ ಸಮಾಜವು ಎಂದೋ ಅಳಿದು ಹೋಗುತ್ತಿತ್ತು. ವಿನಾಶದ ಕಡೆ ಸಾಗಿರುವ ಸಮಾಜವನ್ನು ಉದ್ಧಾರದ ಕಡೆಗೆ ಹಠಾತ್ತಾಗಿಯಾದರೂ ತಿರುಗಿಸಿದವರೆಲ್ಲರೂ ಇಂದು ಮಾನ್ಯರಾಗಿದ್ದಾರೆ. ಅಂತತಃ ವಿಚಾರಿಸಿದರೆ ಅವರೆಲ್ಲರೂ ಸುಧಾರಕರೇ–ಕ್ರಾಂತಿಕಾರರೇ! ಪ್ರಕೃತ ಶ್ರೀಕೃಷ್ಣನನ್ನು ದೃಷ್ಟಾಂತವಾಗಿಟ್ಟುಕೊಳ್ಳೋಣ. ಪರಮ ಪೂಜ್ಯರಾದ ದ್ರೋಣ–ಅಶ್ವತ್ಥಾಮ–ಭೀಷ್ಮ–ವಿದುರ ಮೊದಲಾದವರಿಂದ ಸಂರಕ್ಷಿತವಾಗಿದ್ದ ಕೌರವ ಸಾಮ್ರಾಜ್ಯಶಾಹಿಯನ್ನು ವಿಧ್ವಂಸಗೊಳಿಸಿ ಜನಹಿತಕರವಾದ ಪಾಂಡವರಾಜ್ಯವನ್ನು ಸ್ಥಾಪಿಸಿದ ಕೃಷ್ಣನು ಉಚ್ಚಕ್ರಾಂತಿಕಾರನಿದ್ದಾನೆ. ಈ ಕಾಲದಲ್ಲಿ ನಾವೆಲ್ಲರೂ ಅವನನ್ನು ಪೂಜಿಸುತ್ತಿರುವೆವಾದರೂ ಆ ಕಾಲದಲ್ಲಿ ಅವನೆಷ್ಟೋ ಅಪವಾದಗಳನ್ನು ಕೇಳಿದ್ದನು. ಒಂದು ಕಾಲದಲ್ಲಿ ಪಶುಗಳಂತಿದ್ದ ಜನರನ್ನು ಕರ್ತವ್ಯದ ಕಡೆಗೆ ತಿರುಗಿಸಿದ ಯಶಸ್ಸು ಬುದ್ಧನಿಗೆ ಸಲ್ಲಬೇಕಾಗಿದೆ. ಆದರೆ ಆ ಬುದ್ಧನಾದರೂ ಆ ಕಾಲದ ಜನರಿಂದ ನಿಂದಿಸಿಕೊಳ್ಳಲಿಲ್ಲೆಂದು ಹೇಳುವ ಸಾಹಸ ನಮ್ಮಲ್ಲಿಲ್ಲ. ಶಂಕರಾಚಾರ್ಯರೂ, ಮಧ್ವಾಚಾರ್ಯರೂ ಕ್ರಾಂತಿಕಾರರಿದ್ದಾರೆ. ಶಂಕರಮತ ಖಂಡನೆಮಾಡುತ್ತಿದ್ದಾಗ ಮಧ್ವಾಚಾರ್ಯರು ಮೊದಮೊದಲು ಗೌರವವನ್ನೇನೂ ಹೊಂದಿಲ್ಲ. ಬೇಕಷ್ಟು ಅಪಹಾಸಕ್ಕೊಳಗಾಗಿಯೇ ಇದ್ದರು. ಈಗಲೂ ವಿಪಕ್ಷೀಯರು ಅವರನ್ನು ದೂರುವುದನ್ನು ನಾವು ಕಾಣಬಹುದು. ಅರ್ಥಾತ್, ಆಗ ರೂಢಿಯಲ್ಲಿಲ್ಲದ ಒಂದು ಹೊಸ ತತ್ವವನ್ನು ಆಚರಣೆಗೆತರುವಾತನನ್ನು ಸಮಾಜವು ಒಂದೊಂದ್ಮೆ ನಿಂದಿಸಿದರೂ ಕೊನೆಗೆ ವಂದಿಸದಿರದು. ಏಕೆಂದರೆ ಜಗತ್ತೇ ಒಂದಲ್ಲೊಂದು ರೀತಿಯಲ್ಲಿ ಕ್ರಾಂತಿಕಾರರ ತತ್ವಾನುಯಾಯಿಯಾಗಿಯೇ ಇದೆ.

ಕ್ರಾಂತಿಯ ಹಿಂದಿದೆ ಶಾಂತಿ. ಆ ಕ್ರಾಂತಿಯಲ್ಲೂ ಒಂದು ಸೌಂದರ್ಯವಿದೆ. ರುದ್ರ ಸೌಂದರ್ಯ! ಸಮಾಜವು ಮೊದಮೊದಲು ತಿರಸ್ಕರಿಸಿದರೂ, ತನ್ನನ್ನು ಪುರಸ್ಕರಿಸಿಕೊಳ್ಳುವ ಶಕ್ತಿಯು ಕ್ರಾಂತಿಯಲ್ಲಿದೆ. ಏಂದರೆ ನಿದ್ರಾಲು ಸಮಾಜವು ಘೋರ ನಿದ್ರೆಯಲ್ಲಿದ್ದಾಗ ಅದನ್ನು ಜಾಗ್ರತಿಗೊಳಿಸಲು ಕ್ರಾಂತಿಯೇ ಸಾಧನವಲ್ಲದೆ ಬೇರೆಯಲ್ಲ. ಎಂತಲೇ ನಾವು ಹಾಗೆ ಹೇಳಿದುದು 'ಕ್ರಾಂತಿಕಾರರೇ ಲೋಕಾಧಾರರೆ'ಂದು. ಆದರೆ ಸಮಾಜಹಿತಕರವಾದ, ಸಮಾಜ ಸಮನ್ವಯಕ್ಕೆ ಹೇತುವಾದ ಕ್ರಾಂತಿಯನ್ನೇ ನಾವು ಲಕ್ಷ್ಯವನ್ನಾಗಿಟ್ಟುಕೊಂಡಿರುವೆವಲ್ಲದೆ ಸಮಾಜದ ಪ್ರಗತಿಘಾತುಕ ಧಾರ್ಷ್ಟ್ಯಕೃತಿಯನ್ನು ಕ್ರಾಂತಿಯೆಂದು ಕರೆದಿಲ್ಲ. ಅಂತಹ ಕ್ರಾಂತಿಕಾರರು ಇಲ್ಲಿ ಉಬ್ಬಬೇಕಾಗಿಲ್ಲ.

## ಮೈಸೂರು ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೆಂಗಳೂರು

ನಮ್ಮ ನಾಡಿನ ಮೇಲ್ತರಗತಿಯ ವಿಮಾ ಸಂಸ್ಥೆಯಿದು. ಇದರ 36ನೇ ವಾರ್ಷಿಕ ವರದಿಯು ನಮ್ಮ ಕೈಸೇರಿದೆ ಅಧಿಕೃತ ಷೇರು ಭಂಡವಾಳವು ೧೦೦,೦೦೦ರೂ. ಗಳಿಂದ ೩೦೦,೦೦೦ರೂ. ಗಳಿಗೆ ಹೆಚ್ಚಿರುವುದನ್ನು ನೋಡುವಾಗ ಜನತೆಗೆ ಕಂಪೆನಿಯ ಮೇಲಿರುವ ವಿಶ್ವಾಸವು ವ್ಯಕ್ತವಾಗುವುದು. ವಂದಿಯ ವರ್ಷದಲ್ಲಿ ಕಳೆದ ವರ್ಷಕ್ಕಿಂತ ಹೊಸ ಉದ್ಯಮವು ಶೇಕಡ 65ರಷ್ಟು ಮತ್ತು ಪೂರ್ಣವಾದ ಉದ್ಯಮವು ಶೇಕಡ 53ರಷ್ಟು ಏರಿದೆಯೆಂದು ಕಾಣಿಸಿದೆ. ಅಂದರೆ ಕಂಪೆನಿಯ ಪ್ರಗತಿಗಾಮಿತ್ವಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನಬೇಕಾಗಿಲ್ಲ. ಕಂಪೆನಿಯು ತನ್ನ ಔದಾರ್ಯವನ್ನು ಮೈಸೂರಿನವರಿಗೆ ಮಾತ್ರ ತೋರಿಸುವುದರಲ್ಲಿ ತೃಪ್ತಿಪಡೆಯದೆ ಅಖಿಲ ಭಾರತೀಯರಿಗೂ ತೋರಿಸುವ ಉದ್ದೇಶದಿಂದ ತನ್ನ ಕಾರ್ಯಕ್ಷೇತ್ರವನ್ನು ಬ್ರಿಟಿಷ್ ಇಂಡಿಯಾ, ಸಿಲೋನಾ, ಬರ್ಮಾ ಮುಂತಾದ ಕಡೆಗಳಲ್ಲೂ ವಿಸ್ತರಿಸುವುದರಲ್ಲಿದೆ ಎಂಬುದು ಕನ್ನಡಿಗರಿಗೇ ಅಭಿಮಾನಾಸ್ಪದ ಸಂಗತಿಯಾಗಿದೆ. ಕಂಪೆನಿಯು ಇದೇ ರೀತಿ ಮುಂದುವರಿದರೆ, ನಾವೆಲ್ಲರೂ ಪ್ರೋತ್ಸಾಹಿಸಿದರೆ ವಿಮಾಪ್ರಪಂಚದಲ್ಲಿ ಒಂದು ಗಣ್ಯ ಸ್ಥಾನವನ್ನು ಗಳಿಸುವುದರಲ್ಲಿ ಸಂದೇಹವಿಲ್ಲ. ಕಂಪೆನಿಯು ತನ್ನಾಶೆಯಂತೆ ತೀವ್ರವೇಪ್ರಗತಿಹೊಂದಿ ಅಭಿವೃದ್ಧಿಯ ಇತಿಹಾಸವನ್ನೊಳಗೊಂಡ ಮುಂದಿನ ವರದಿಯನ್ನು ಆತುರದಿಂದ ನಿರೀಕ್ಷಿಸುತ್ತಿದ್ದೇವೆ.

ಅತ್ಯುತ್ತಮ ಪೇಸಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ
'ಕುಶಾ' (ರಿಜಿಸ್ಟರ್ಡ್) ಫೌಂಟೆನ ಪೇನಿನ 'ಶಾಯಿ'
'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ'
ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ
*Sole disributtors:*—**V. V Kamath & Bros. Mangalore.**

ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ 'ಗೊನೊಕಿಲರ್' (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕ್ಕ್ಸರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯುಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬಿಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩—೦—೦ (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer **Dr. D N. JASANI,** Vitalbhai Patel Road, BOMBAY 4.

**WANTED**

Lady saleswoman, Catholic or Protestant for a leading cutlery, hardware and Stationery shop at Udipi town. Must be smart, good looking and of pleasingmanners, capable of reading and writingEnglish andKanarese. Apply with one anna stamp stating minimum salary required.

'X' C/o Navayuga, Udipi.

(೭ನೇ ಅಧ್ಯಾಯ ಕಳೆದ ಸಂಚಿಕೆಯಿಂದ ಮುಂದರಿದುದು)

ಮರುದಿನ ಸುಮಾರು ಒಂಭತ್ತು ಘಂಟೆ ರಾತ್ರಿಯಿರಬಹುದು. ಲಲಿತೆಯು ಮಗುವಿಗೆ ನಿದ್ದೆ ಬರಲೆಂದು ಜೋಗುಳ ಹಾಡುತ್ತಾ ತೂಗುತ್ತಿದ್ದಳು. ಆದರೆ ಮಗುವು ಅಳುತ್ತಿದ್ದಿತು ಮಗುವೆಲ್ಲಿಯಾದರೂ ಅತ್ತರೆ ನಾಗಿಗೆ ಸಹಿಸಿಕೊಳ್ಳಲು ಸಾಧ್ಯವೇ ಆಗುತ್ತಿದ್ದಿಲ್ಲ. ಅವಳು ಅಡಿಗೆ ಮನೆಯಿಂದೋಡಿ ಬಂದು "ಯಾಕೆ ಲಲಿತ ಕೂಗಿಸುವುದು ಮಗುವನ್ನು? ಸ್ವಲ್ಪ ಮೊಲೆ ಕೊಡಬಾರದೆ?" ಎಂದು ಗದರಿಸಿದಳು "ಮೊಲೆ ಕೊಟ್ಟು ಅರ್ಧ ಘಂಟೆಯಾಗಲಿಲ್ಲ; ನಿನ್ನ ಮಾತು ಕೇಳಿದರಾಯಿತು ಲೇಡಿ ಡಾಕ್ಟರರು ಮೂರು ಘಂಟೆಗೊಮ್ಮೆ ಮೊಲೆಯಾಗಲಿ ಹಾಲಾಗಲಿ ಕೊಡಬೇಕೆಂದು ಹೇಳಿದ್ದಲ್ಲವೇ?" ಎಂದಳು ಲಲಿತೆ "ನಿಮ್ಮ ಘಂಟೆಗಿಂಟೆಗೆ ಹೋದರೆ ಮಗುವನ್ನು ಕೊಲ್ಲಬೇಕಾದೀತು. ಈಗ ಕೊಡು ಮೊಲೆ. ಮೊಲೆ ಕೊಡದೆ ಅದ ಮಲಗಲಿಕ್ಕಿಲ್ಲ" ಎಂದು ನಾಗಿಯು ಮಗುವನ್ನೆತ್ತಿ ಮುದ್ದಾಡಿದಳು ಒಂದು ಹತ್ತಿಪ್ಪತ್ತು ಸಲ ಚುಂಬಿಸಿದಳು "ಹೂಂ ಕೊಡು ಮೊಲೆ"ಎಂದು ಒತ್ತಾಯಮಾಡಿ ಮಗುವನ್ನು ಲಲಿತೆಯ ಕೈಯ ಮೇಲಿಟ್ಟಳು "ಮೊಲೆಯಲ್ಲೇನಿದೆ? ಈಗ ಕೊಟ್ಟುದು" ಎಂದು ಲಲಿತೆಯು ತುಸು ಸಿಟ್ಟಿನಿಂದ ಮಗುವನ್ನು ಆಚೆ ಈಚೆ ಎಳೆದು ಮೊಲೆ ಕೊಡಲಾರಂಭಿಸಿದಳು. ಅಷ್ಟರಲ್ಲಿ ರಸ್ತೆಯ ಬಾಗಿಲು ಬಡಿದು ಯಾರೋ ಕರೆದ ಶಬ್ದವಾಯಿತು. "ಯಾರದು? ಬಂದೆ" ಎಂದು ನಾಗಿಯು ಹೊರಹೋಗಿ ಬಾಗಿಲು ತೆರೆದು ನೋಡುವಾಗ ರಸ್ತೆಬದಿಯಲ್ಲಿ ಎರಡು ಕಾರುಗಳು ನಿಂತಿದ್ದುವು ನರಸಿಂಹನು ನಾಗಿಯ ಮುಖ ಸಹ ನೋಡದೆ ಫಕ್ಕನೆ ಒಳ ನುಗ್ಗಿದನು. ನಾಗಿಯೂ ಅವನನ್ನೇ ಹಿಂಬಾಲಿಸಿ, "ಏನು ಸಮಾಚಾರ ನರಸಿಂಹ ಭಟ್ಟ? ಎರಡು ಮೋಟರ್‌ಕಾರು ಯಾರದು?" ಎಂದು ಗಟ್ಟಿಯಾಗಿ ಪ್ರಶ್ನಿಸಿದಳು "ಸ್ವಲ್ಪ ಮೆಲ್ಲಗೆ ಮಾತಾಡು. ಸ್ವಾಮಿರು ಬಂದಿದ್ದಾರೆ ಮಗು ನೋಡಲಿಕ್ಕೆ. ಎಲ್ಲಿದೆ ಮಗು? ಬೇಗ ಇಲ್ಲಿ ತಾ"ಎಂದ ನರಸಿಂಹ. ಇನ್ನೊಂದು ಕಾರಿನಲ್ಲಿ ಯಾರಿದ್ದಾರೆ?" ಎಂದು ಪುನಃ ಪ್ರಶ್ನಿಸಿದಳು ನಾಗಿ ಬಹಳ ಉಲ್ಲಾಸಗೊಂಡು. "ಅದೆಲ್ಲಾ ಯಾಕೆ ನಿನಗೀಗ? ಬೇಗ ಮಗುವನ್ನಿಲ್ಲಿ ತಾ. ಸ್ವಾಮಿರಿಗೊಮ್ಮೆ ನೋಡದೆ ನಿದ್ದೆ ಬರುವುದಿಲ್ಲವಂತೆ" ಎಂದು ನರಸಿಂಹನು ನಾಗಿಯನ್ನೊಮ್ಮೆ ದಿಟ್ಟಿಸಿ ನೋಡಿದ. ಕೂಡಲೆ ನಾಗಿಯು ಒಳಗೋಡಿದಳು. "ಲಲಿತ, ಲಲಿತ! ಸ್ವಾಮಿರು ಬಂದಿದ್ದಾರೆ ಮಗು ನೋಡಲಿಕ್ಕೆ, ಸ್ವಾಮಿರು ಬಂದಿದ್ದಾರೆ!" ಎಂದು ಲಲಿತೆಯ ಕೈಯಿಂದ ಮಗುವನ್ನು ಕಸಕೊಂಡು ಹೊರಗೋಡಿ ಬಂದು, "ನಾನೇ ತೋರಿಸುತ್ತೇನೆ ಸ್ವಾಮಿರಿಗೆ ಅವರ ಪ್ರತಿ ಮೂರ್ತಿಯನ್ನು" ಎಂದು ನರಸಿಂಹನನ್ನು ಲಕ್ಷಿಸದೇನೇ ಹೊರಗೆ ಹೋಗುವುದರಲ್ಲಿದ್ದಳು. ಆಗ ನರಸಿಂಹನು ತಡೆದು, "ನೀನಾರೂ ಹೊರಗೆ ಬರಕೂಡದಂತೆ. ನಾನೇ ಗುಟ್ಟಿನಲ್ಲಿ ತೋರಿಸಿ ಒಳಗೆ ತರುತ್ತೇನೆ" ಎಂದು ಮಗುವನ್ನು ನಾಗಿಯ ಕೈಯಿಂದ ತೆಗೆದುಕೊಂಡು ಅದರ ಮೇಲೆ ತಾನು ಹೊದೆದುಕೊಂಡಿದ್ದ ವಸ್ತ್ರ ಹಾಕಿ ಹೊರ ನಡೆದು ಮಗುವನ್ನು ಮೋಟರ್ ಕಾರಿನಲ್ಲಿರಿಸಿ ಹಿಂದೆ ಧಾವಿಸಿ ಬಂದು, "ನಾಗಿ, ನಾಗಿ, ನಾವು ಮುಂದೆ ಹೋಗುತ್ತೇವೆ. ಮಗುವನ್ನು ನಮ್ಮೊಂದಿಗೆ ಕೊಂಡೊಯ್ಯುತ್ತೇವೆ. ನೀನೂ ಲಲಿತೆಯೂ ಇನ್ನೊಂದು ಕಾರಿನಲ್ಲಿ ಬನ್ನಿರಿ" ಎಂದು ಹೇಳಿ ಪುನಃ ಮೋಟರ್ ಕಾರಿನ ಕಡೆಗೋಡಿ ದಡಕ್ಕನೆ ಬಾಗಿಲು ತೆರೆದು ಒಳಗೆ ಕೂತು, "ಹೂಂ ಹೋಗುವ" ಎಂದನು. ಸ್ವಾಮಿರ ಸೆಲೂನ್ ಕಾರು ಕೂಡಲೇ ಅದೆಲ್ಲಿಗೋ ಓಡಿಹೋಯಿತು. ನಾಗಿಯು ನರಸಿಂಹನ ಚಲನವಲನವನ್ನು ಕಂಡು ವಿಸ್ಮಿತಳಾಗಿ ತುಸು ಹೊತ್ತು ನಿಂತಲ್ಲಿಯೇ ನಿಂತುಬಿಟ್ಟಳು ಅವಳು ನೋಡುತ್ತಿರುವಂತೆಯೇ ಸ್ವಾಮಿರ ಮೋಟರು ಧಾವಿಸಿತು. ಅವಳು ಕೂಡಲೆ ಒಳಗೋಡಿ, "ಲಲಿತ, ಲಲಿತ! ನಾವು ಮಠಕ್ಕೆ ಹೋಗಬೇಕಂತೆ, ಸ್ವಾಮಿರು ಹೇಳಿದರು. ನಮಗಾಗಿ ಇನ್ನೊಂದು ಕಾರು ಕಾದು ನಿಂತಿದೆ. ನಡೆ ಬೇಗ ಸೀರೆ ಉಡು, ಹೋಗುವ" ಎಂದಳು. ಮತ್ತು ತಾನು ಅವಸರವಸರದಿಂದ ಸೀರೆ ಉಡುವ ಸನ್ನಾಹಮಾಡಿದಳು ಆಗ ಲಲಿತೆಯು, "ಅಮ್ಮಾ! ಅಮ್ಮಾ!! ಮಗುವೆಲ್ಲಿ? ಮಗುವೆಲ್ಲಿ?" ಎಂದು ಕೂಗಿಬಿಟ್ಟಳು ಮಗುವನ್ನು ಕಾಣದೆ ತಲ್ಲಣಿಸುವ ಮಾತೃಹೃದಯದ ಕೂಗದು. ನಾಗಿಯ ಹೃದಯವನ್ನು ಭೇದಿಸಿ ಬಿಟ್ಟಿತು, ಅವಳು, "ಮಗುವನ್ನು ಸ್ವಾಮಿರುಮಠಕ್ಕೆ ಕೊಂಡೊಯ್ದರು ಮಗು, ಗಾಬರಿಪಡಬೇಡ ನಾವೀಗಲೇ ಮಠಕ್ಕೆಹೋಗುವ" ಎಂದಳು. "ಮಗುವನ್ನೇಕವರು ಮಠಕ್ಕೊಯ್ಯುವರಮ್ಮಾ? ಅದು ಸುಳ್ಳು. ಅಮ್ಮಾ, ಮಗುವೆಲ್ಲಿದೆಯೆಂದು ಹೇಳಲಾರೆಯಾ? ಯಾರು ಕೊಂಡೊಯ್ದರು? ಯಾರಿಗೆ ಕೊಟ್ಟೆ ನೀನು? ಸ್ವಾಮಿರಿಗೆ ಬೇಕಾಗಿದ್ದರೆ ನಾವೇ ಕೊಂಡು ಹೋಗಬಾರದಿತ್ತೇ? ಅಮ್ಮಾ ಅದೆಲ್ಲಿರುವುದೋ? ಎಷ್ಟು ಕೂಗುವುದೋ? ಸೀರೆ ಶೃಂಗಾರಕ್ಕೆ ಬೆಂಕಿಹಾಕಲಿ! ನಡೆ, ಅಮ್ಮಾ ಹೋಗುವ. ನಾನು ನನ್ನ ಮಗುವನ್ನು ಒಂದು ಕ್ಷಣವೂ ಬಿಟ್ಟು ಇರಲಾರೆ. ಹೃದಯದ ಉದ್ವೇಗವನ್ನು ತಾಳಲಾರೆನಮ್ಮಾ. ನನ್ನ ಪ್ರಾಣವೇ ಹಾರಿ ಹೋಗುವಂತಾಗುವುದು. ಹೋಗುವ ಅಮ್ಮಾ ಬೇಗ ಹೋಗುವ" ಎಂದು ನಾಗಿಯು ಹೊರಡುವ ವರೆಗೆ ಕಾಯದೆ ತಾನು ಹೊರಗೆ ಸರಿದಳು. ನಾಗಿಯೂ ಅವಳನ್ನು ಹಿಂಬಾಲಿಸಿದಳು. ಇಬ್ಬರೂ ಮೋಟರ್ ಕಾರುಹತ್ತಿ ಕುಳಿತುಕೊಂಡರು. ಡ್ರ್ಯಾವರನು ಅವರನ್ನು ಮಠಕ್ಕೆ ಕೊಂಡೊಯ್ದನು.

ಭಿಕಾರಿಣಿ

ಸಾಮಾಜಿಕ ಕಾದಂಬರಿ

## ಅಧ್ಯಾಯ ೮

## "ಮಗುವನ್ನೇನು ಮಾಡಿದೆ? ಕೊಂದೆಯಾ ರಾಕ್ಷಸ?"

ಹೆಚ್ಚೆಂದರೆ ನಾಗಿಯ ಮನೆಯಿಂದ ಶಿವಪುರಮಠದ ಬಾಗಿಲಿಗಿರುವುದು ಒಂದು ಮೈಲು. ಐದಾರು ನಿಮಿಷಗಳಲ್ಲಿ ಟೇಕ್ಸಿಯು ಮಠದ ಬಾಗಿಲಿಗೆ ಬಂದು ನಿಂದಿರಬೇಕು. ಆದರೆ ನಾಗಿ ಲಲಿತೆಯರಿಗೆ ಕೆಲವು ಘಂಟೆ ತಾವು ಟೇಕ್ಸಿಯೊಳಗಿದ್ದಂತೆ ತೋರಿತು ಮುಳ್ಳಿನ ಮೇಲಿದ್ದಂತಿದ್ದರವರು ಅದರೊಳಗೆ. ಟೇಕ್ಸಿಯು ಮಠದ ಬಾಗಿಲಿಗೆ ಮುಟ್ಟುತ್ತಿರುವಾಗಲೆ ಲಲಿತೆಯು ಅದರ ಬಾಗಿಲು ತೆರೆಯಲೆತ್ನಿಸಿದಳು. ಆದರೆ ಅವಳಿಂದದು ಸಾಧ್ಯವಾಗಲಿಲ್ಲ ಬಹಳ ಅಸಹಿಷ್ಣುತೆಯಿಂದ 'ಶಿಕ' ಎಂದು ಇನ್ನೊಂದು ಕಡೆಯ ಬಾಗಿಲು ತೆರೆಯಲು ಪ್ರಯತ್ನಿಸಿದಳು. ಅಷ್ಟರಲ್ಲಿ ಟೇಕ್ಸಿಯು ನಿಂತಿತು. ಲಲಿತೆಯು ಬಾಗಿಲು ತೆರೆಯಲು ಚಡಪಡಿಸುವುದನ್ನು ಡ್ರ್ಯಾವರನು ಕಂಡು, "ಏನಿಷ್ಟವಸರಪ್ಪ! ಸ್ವಾಮಿರೆಲ್ಲಿಯಾದರೂ ಓಡಿ ಹೋಗುವುದಿಲ್ಲ" ಎಂದು ಬೆರಳುಗಳ ನಡುವೆಯಿದ್ದ ಬೀಡಿ ಕಡೆಯನ್ನೊಮ್ಮೆ 'ಹೂ' ಎಂದೆಳೆಯುವಷ್ಟರಲ್ಲಿ ನಾಗಿಯು, "ಡ್ರ್ಯಾವರ್ರೇ' ಓ ಡ್ರ್ಯಾವರ್ರೇ! ಸ್ವಲ್ಪ ಬಾಗಿಲು ತೆರಿಯಿರಪ್ಪ! ಮತ್ತೆ ಬೀಡಿ ಎಳೆಯಿರಿ! ನಿಮ್ಮ ಬಾಗಿಲೊಂದು ಎಂತಹದಪ್ಪ" ಎಂದಳು. ಲಲಿತೆಯು ಎರಡೂ ಬಾಗಿಲನ್ನು ತೆರೆಯಲಾರದೆ 'ಶೂ' ಎಂದು ಸೀಟಿಗೊರಗಿಬಿಟ್ಟಳು. ಡ್ರ್ಯಾವರನು ಬೀಡಿಕಡೆ ಬಿಸಾಡಿ ಕ್ರೋಪನ್ನೊಮ್ಮೆ ಸರಿಮಾಡಿ ಮುಂಡನ್ನೆತ್ತಿ ತೊಡೆಗಳ ನಡುವೆ ಸಿಕ್ಕಿಸಿ ಬಂದು ಟಪ್ಪನೆ ಬಾಗಿಲು ತೆರೆದು ಲಲಿತೆಯನ್ನೇ ಕಣ್ಣಿಟ್ಟು ನೋಡುತ್ತಾ ನಿಂತನು. ಲಲಿತೆಯು ಕೂಡಲೆ ಹೊರಬಿದ್ದು ಮಠದೊಳಗೋಡಿದಳು. ನಾಗಿಯು ಅವಳನ್ನು ಹಿಂಬಾಲಿಸಿದಳು.

ಒಂದೇ ಒಂದು ಕ್ಷಣದಲ್ಲಿ ಲಲಿತೆಯು ಸ್ವಾಮಿರ ಬೈರಕುಖಾನೆಗೆ ಬಂದಳು ನಾಗಿಗೆ ಅವಳ ಬೆನ್ನು ಹಿಡಿದು ಬರಲಾಗಲಿಲ್ಲ ಒಳಗೆ ಸರಿದು ನೋಡುವಾಗ ಶಿವಾನಂದರೊಬ್ಬರೇ ಇದ್ದರು. ಮಗುವಿರಲಿಲ್ಲ. ಲಲಿತೆಯು ಒಂದು ಕ್ಷಣ ಸ್ತಂಭಿತಳಾಗಿ ನಿಂತುಬಿಟ್ಟಳು. ಅವಳ ಹೃದಯವು ತಪತಪನೆನ್ನುತ್ತಿತ್ತು ಸರ್ವಾಂಗ ಬೆವರಿ ನೀರು ಹರಿಯುತ್ತಿತ್ತು. ಉತ್ತರ ಕ್ಷಣದಲ್ಲೇ ಓಡಿಹೋಗಿ,ಮಂಚದ ಮೇಲೆ ಪದ್ಮಾಸನ ಹಾಕಿ ಕುಳಿತು ಚಿಂತಾಮಗ್ನರಾಗಿರುವ ಶಿವಾನಂದರ ಬಳಿಗೋಡಿ, ಅವರ ಕಾಲಿಗೆ ಬಿದ್ದು "ಮಗುವೆಲ್ಲಿ? ನನ್ನ ಮಗುವೆಲ್ಲಿ?" ಎಂದು ಕೂಗಿ ಬೋಧತಪ್ಪಿ ಬಿದ್ದುಬಿಟ್ಟಳು. ಇಷ್ಟರಲ್ಲಿ, ಶಿವಾನಂದರು ಮಗುವನ್ನು ಹಿಡಿದು ಮುದ್ದಾಡುತ್ತಿರಬೇಕೆಂದೇ ಅವಳು ಕಲ್ಪಿಸಿಕೊಂಡು ಆ ಆನಂದದ ದೃಶ್ಯವನ್ನೊಮ್ಮೆ ನೋಡಬೇಕೆಂಬ ತವಕದಿಂದ ನಾಗಿಯು ಕೋಣೆಯೊಳಗೆ ಪ್ರವೇಶಿಸಿ ಮಗುವಿರದುದನ್ನು ಕಂಡು ತಬ್ಬಿಬ್ಬಾದಳು "ಪರಾಕೆ, ಪರಾಕ! ಮಗುವೆಲ್ಲಿ? ಇದೇನು? ನನ್ನ ಲಲಿತೆಗೇನಾಯಿತು?" ಎಂದು ಓಡಿಹೋಗಿ ಲಲಿತೆಯನ್ನು ಹಿಡಿಯುವಷ್ಟರಲ್ಲಿ, ಶಿವಾನಂದರುಕುತ್ತಿಗೆಯೊಳಗೆ ತಡೆಗಟ್ಟಲ್ಪಟ್ಟ ಮಾತುಗಳಿಂದ, "ನಾಗಿ ನಾಗಿ! ಲಲಿತೆಗೇನೂ ಆಗಿಲ್ಲ ಬೇಗ ಹೋಗಿ ಸ್ವಲ್ಪ ನೀರು ತಾ" ಎಂದರು. ನಾಗಿಯು ಗಡಿಬಿಡಿಯಿಂದ ಓಡಿಹೋಗಿ,ತುಂಗಮ್ಮ ಎಂಬ ಮಠದ ಅಜ್ಜಿಯೊಬ್ಬರು ಶುಭ್ರವಾಗಿ ತೊಳೆದು ನೀರು ತುಂಬಿಸಿಟ್ಟಿದ್ದ ತಂಬಿಗೆಯನ್ನು ಹೇಳದೆ ಕೇಳದೆ ಹಿಡಕೊಂಡು ಒಂದೇ ಉಸಿರಿನಿಂದ ಬೈರಕು ಕೋಣೆಗೆ ಧಾವಿಸಿದಳು "ಹೆ! ಹೆ!! ನನ್ನ ತಂಬಿಗೆ ಅದು ಎಲ್ಲಿಗೊಯ್ಯುತ್ತಿ? ನನಗೀಗ ಬೇಕದು" ಎಂದು ತುಂಗಮ್ಮನು ಬಹಳ ಸಿಟ್ಟಿನಿಂದ ಬಾಗಿದ ಬೆನ್ನನ್ನೊಮ್ಮೆ ನೆಟ್ಟಗೆ ಮಾಡಿ ನಾಗಿಯನ್ನು ಮುನಸೇಚ್ಛೆ ಬೈಯ್ದು ಅವಳ ಬೆನ್ನು ಹಿಡಿದು ಸ್ವಾಮಿರ ಬೈರಕು ಕೋಣೆಯ ವರೆಗೂ ಹೋದಳು ಆದರೆ ಒಳಪ್ರವೇಶಿಸಲು ಧೈರ್ಯ ಬರಲಿಲ್ಲ. "ಹೀಗೂ ಉಂಟೆ ಪರಾಕೆ! ನಾನು ಮಡಿಯಿಂದ ತಂದಿಟ್ಟ". ..ಎನ್ನುವಷ್ಟರಲ್ಲಿ ಅವಳ ಮುಖದ ಮೇಲೆಯೇ ಕೋಣೆಯ ಬಾಗಿಲು ಡಬ್ಬನೆ ಹಾಕಲ್ಪಟ್ಟಿತು. "ಶಿವ! ಶಿವ!! ನನಗೇಕೆ ಸಾವು ಬರುವುದಿಲ್ಲಪ್ಪ!" ಎಂದು ತುಂಗಮ್ಮನು ಹಣೆಗೆ ಬಡಕೊಂಡು ಬೈರಕು ಕೋಣೆಯ ಬಾಗಿಲಿಂದ ದಡದಡನೆ ಇಳಿದು ಹೋಗಿ ನಡೆದ ಸಂಗತಿಯನ್ನು ಸಿಕ್ಕಿ ಸಿಕ್ಕಿದವರೊಡನೆಲ್ಲಾ ಬಹಳ ಸಿಟ್ಟಿನಿಂದ ಹೇಳಿ ನಾಗಿಯನ್ನು ಶಪಿಸಿದಳು.

ನಾಗಿಯು ಲಲಿತೆಯ ಮುಖದ ಮೇಲೆ ನೀರು ಚುಮುಕಿಸಿ ಸೆರಗಿಂದೊರಸಿದಳು. ಶಿವಾನಂದರು ಹತ್ತಿರದಲ್ಲೇ ಲಲಿತೆಯನ್ನು ನೋಡುತ್ತಾ ನಿಂತಿದ್ದರು. ನೋಡುತ್ತಿದ್ದಂತೆಯೇ ಅವರ ಕಣ್ಣಲ್ಲಿ ಅದೇಕೋ ನೀರು ತುಂಬಿ ಬಂತು ಅದನ್ನವರು ಮುಖ ತಿರುಗಿಸಿ ಒರಸುವಷ್ಟರಲ್ಲಿ, "ಅದೋ, ಮಗು! ಮಗು!! ನನ್ನ ಮಗು!" ಎಂದು ಲಲಿತೆಯು ಎಚ್ಚತ್ತು, "ಅಮ್ಮಾ, ಎಲ್ಲಿ?. ನನ್ನ ಮಗುವೆಲ್ಲಿ? ಎಲ್ಲಿ ಹೋಯಿತು? ಯಾರು ಕೊಂಡೊಯ್ದರು?" ಎಂದು ಜಗ್ಗನೆ ಎದ್ದುನಿಂತಳು. ಆಗ "ಮಗುವೆಲ್ಲಿದೆಯೆಂದು ದಯಮಾಡಿ ಹೇಳಬಾರದೆ ಪರಾಕೆ? ಯಾಕೆ ಸುಮ್ಮನಿರುವಿರಿ?" ಎಂದು ನಾಗಿಯು ಬೇಡಿಕೊಂಡಳು ಕಣ್ಣೀರಿಟ್ಟು ಶಿವಾನಂದರು ನಾಗಿ ಮತ್ತು ಲಲಿತೆಯರನ್ನೊಮ್ಮೆ ನೋಡಿದರು ಆಮೇಲೆ ದೀರ್ಘ ಶ್ವಾಸಬಿಟ್ಟು ಸುಮ್ಮನೆ ನಿಂತುಬಿಟ್ಟರು. ಅವರ ಕಣ್ಣುಗಳಲ್ಲಿಯೂ ಧಾರೆಕಟ್ಟಿ ನೀರು ಹರಿಯತೊಡಗಿತು. ಎಷ್ಟೊಂದು ಕಟ್ಟಿಕೊಂಡರೂ ನಿಲ್ಲಲಾರದನು. "ಪರಾಕೆ ಸತ್ಯ ಹೇಳಿ. ಮಗುವನ್ನು ನೀವಲ್ಲವೇ ತರಹೇಳಿದುದು ಮೋಟರ್‌ಕಾರಿಗೆ? ಅದನ್ನಿಲ್ಲಿ ತರಲಿಲ್ಲವೆ? ನರಸಿಂಹಭಟ್ಟರೆಲ್ಲಿಹೋದರು? ಮಗುವೇನಾಯಿತು? ಸಂಗತಿ ಏನೆಂದು ತಿಳಿಸಬಾರದೆ? ಯಾಕೆ ಕಣ್ಣೀರಿಡುತ್ತಾ ನಿಂತಿರುವಿರಿ ಬುದ್ಧಿ?" ಎಂದು ನಾಗಿಯು

ಪುನಃ ಕೇಳಿಕೊಂಡಳು. ಶಿವಾನಂದರು ಮತ್ತೂ ಮೌನವನ್ನೇ ಧರಿಸಿದ್ದರು. ಇಷ್ಟರಲ್ಲಿ, "ಪರಾಕ್, ಪರಾಕ್! ಬಾಗಿಲು ತೆರೆಯಿರಿ, ಬಾಗಿಲು ತೆರೆಯಿರಿ. ಕೆಲಸವೆಲ್ಲಾ ಸಾಂಗವಾಗಿ ನೆರವೇರಿತು" ಎಂದು ನರಸಿಂಹನು ಬಾಗಿಲು ಬಡಿದನು." ನರಸಿಂಹನು ಮಗುವನ್ನು ಹಿಡಕೊಂಡು ಬಂದನೆಂಬ ಉತ್ಸಾಹದಿಂದ ನಾಗಿಯು ಓಡಿಹೋಗಿ ಬಾಗಿಲು ತೆರೆದಳು. ಅವನು ಒಳಗೆ ಪ್ರವೇಶಿಸುವಾಗಲೆ, "ಶವ ಸಹ ಸಿಕ್ಕದಹಾಗೆ ಮಾಡಿದ್ದೇನೆ ಪರಾಕ್" ಎಂದು ಹೇಳುವಷ್ಟರಲ್ಲಿ ನಾಗಿ ಲಲಿತೆಯರನ್ನು ಕಂಡು ಅವಾಕ್ಕಾದನು. "ಏನು? ಯಾವ ಶವ? ನನ್ನ ಕೂಸನ್ನು ಕೊಂದಿರೇ? ಅಯ್ಯೋ! ದೇವರೇ" ಎಂದು ನಾಗಿಯು ದೊಪ್ಪನೆ ನೆಲಕ್ಕೆ ಬಿದ್ದುಬಿಟ್ಟಳು. "ನರಸಿಂಹ, ಅದೋ ಅಲ್ಲಿ ನೀರಿದೆ ತಂಬಿಗೆಯಲ್ಲಿ! ನಾಗಿಗೆ ಬೋಧಬರುವಂತೆ ಮಾಡು" ಎಂದು ಮಿಂಚುಬಡಿದಂತೆ ನಿಂತಿರುವ ಲಲಿತೆಯ ಬಳಿಗೆ ಸರಿದು "ಲಲಿತ! ಲಲಿತ!" ಎಂದು ಗದ್ಗದ ಕಂಠದಿಂದ ಕರೆದು ಅವಳ ಕೈಹಿಡಿದರು. ಶಿವಾನಂದರ ಸ್ಪರ್ಶಮಾತ್ರದಿಂದ ಲಲಿತೆಯಲ್ಲಿ ಒಂದು ಕ್ಷಣ ನಿಂತುಹೋದಂತಿದ್ದ ರಕ್ತ ಚಲನೆಯು ಒಂದೇ ಸವನೆ ಪ್ರವಹಿಸಿದಂತಾಯಿತು. ಸ್ವಾಮಿಯ ಕಿರುಬೆರಳಿಂದ ನೂಕಿದರೆ ಬೀಳುವ ಅವಳು, ಅದಾವ ಶಕ್ತಿಯಿಂದಲೋ ಶಿವಾನಂದರು ಹಿಡಿದ ಕೈಬಿಡಿಸಿ ಅವರ ಕುತ್ತಿಗೆ ಹಿಡಿದೊತ್ತಿ "ನರಪಿಶಾಚಿ! ಎಲ್ಲಿ? ನನ್ನ ಮಗು ಎಲ್ಲಿ? ಹೇಳು ಬೇಗಹೇಳು! ಇಲ್ಲವಾದರೆ ಕತ್ತು ಹಿಸುಕಿ ಕೊಲ್ಲುವೆನು" ಎಂದು ಸಿಂಹಿಣಿಯಂತೆ ಗರ್ಜಿಸಿದಳು. "ಹೆ—ಹೆ—ಹೇಳು—ಹೊ—ಹೊ—ಹೊ" ಎಂದು ಸ್ವಾಮಿಯು ಚೀರಿದರು. ಲಲಿತೆಯ ಹಿಡಿತಕ್ಕೆ ಸಿಕ್ಕಿ ಶಿವಾನಂದರು ಕಂಗೆಟ್ಟರು. ದೊಡ್ಡ ಜಟ್ಟಿಯಂತಿದ್ದ ಅವರಿಗೆ ಲಲಿತೆಯಂತಹ ಅಬಲೆಯರು ತೃಣ ಸಮಾನ. ಆದರೆ ಈ ಸಂದರ್ಭದಲ್ಲಿ ಅದಾವ ವಿಚಿತ್ರ ಶಕ್ತಿಯಿಂದಲೋ ಲಲಿತೆಯು ಅವರನ್ನು ಉಸಿರಾಡದಂತೆ ಮಾಡಿಬಿಟ್ಟಳು. ಅಷ್ಟರಲ್ಲಿ ನರಸಿಂಹನು, "ಪರಾಕ್ ಏನಾಯಿತು! ಏನಾಯಿತು!!" ಎಂದು ಓಡಿಬಂದು ಲಲಿತೆಯು ಶಿವಾನಂದರ ಕುತ್ತಿಗೆಯನ್ನು ಬಿಗಿಹಿಡಿದುದನ್ನು ನೋಡಿ ಒಂದೇ ಸವನೆ ಅವಳ ಮೇಲೆ ಹಾರಿ ಕೈಬಿಡಿಸಲೆತ್ನಿಸಿದನು. ಆಗ ಮಗುವನ್ನು ಕೊಂದವನು ನರಸಿಂಹನೆಂದವಳಿಗೆ ಫಕ್ಕನೆ ಹೊಳೆದು ಅವಳ ಸಿಟ್ಟೆಲ್ಲಾ ಅವನ ಮೇಲೆ ಕೇಂದ್ರೀಕೃತವಾಯಿತು. ಅವಳು ಶಿವಾನಂದರ ಕುತ್ತಿಗೆ ಬಿಟ್ಟು, "ಮಗುವನ್ನೇನು ಮಾಡಿದೆ? ಕೊಂದುಹಾಕಿದೆಯಾ ರಾಕ್ಷಸ?" ಎಂದು ನರಸಿಂಹನ ಕುತ್ತಿಗೆ ಹಿಡಿದು ದೂಡಿಬಿಟ್ಟಳು. ಅವನು ದಬ್ಬನೆ ನೆಲಕ್ಕೆ ಬಿದ್ದು ತಲೆ ಗೋಡೆಗೆ ತಾಗಿ ತಲೆತಿರುಗಿ ಬಿದ್ದುಬಿಟ್ಟನು. ಆಗ ಲಲಿತೆಯ ದೃಷ್ಟಿಯು ಬೋಧತಪ್ಪಿ ಬಿದ್ದಿರುವ ನಾಗಿಯ ಮೇಲೆ ಬಿತ್ತು. ಅವಳು ಕೂಡಲೆ ನಾಗಿಯ ಬಳಿಗೆ ಸರಿದು ಅವಳ ಕೈಗಳನ್ನು ಹಿಡಿದು ಭರದಿಂದ ಕುಲುಕಿಸಿ, "ಅಮ್ಮಾ! ಅಮ್ಮಾ!! ಅಮ್ಮಾ!!!" ಎಂದು ಕೂಗಿ ಕರೆದಳು. ಆಗ ನಾಗಿಗೂ ಎಚ್ಚರವಾಗಿ ಅವಳು ಆವೇಗದಿಂದ ಲಲಿತೆಯನ್ನು ಬಿಗಿದಪ್ಪಿ, "ಮಗೂ ಲಲಿತ, ನೀನು ಮೊದಲೇ 'ನನ್ನನ್ನಾ ನರಕಕ್ಕೆಳೆಯ ಬೇಡ'ಂದು ಬಗೆಬಗೆಯಿಂದ ಬೇಡಿಕೊಂಡೆ. 'ಅತಿ ಆಶೆ ಗತಿಗೇಡುಮಾಡಿಕೊಳ್ಳಬೇಡಮ್ಮಾ!' ಎಂದು ಎಚ್ಚರಿಸಿದೆ. ಆದರೆ, ಮಗು ನಿನ್ನ ಮಾತಿಗೆ ನಾನು ಒಂದಿಷ್ಟು ಗಮನ ಕೊಡದೆ ನನ್ನಿಚ್ಛಾನುಸಾರ ನಡೆದು ನಿನ್ನ ಜೀವನ ಸುಖವನ್ನು ಮಣ್ಣುಗೂಡಿಸಿದೆ. ನಾನು ನಿನ್ನ ಮಾತೆಯಲ್ಲ, ಘಾತಕಿ. ಅಹ, ಆ ಎಳೆ ಕೂಸನ್ನು ಕೊಲ್ಲಲು ನರಸಿಂಹಭಟ್ಟರಿಗೆ ಮನಸ್ಸಾದರೂ ಹೇಗೆ ಬಂತಪ್ಪ! ಎಷ್ಟೊಂದು ಚಂದವಾಗಿದ್ದಿತು ಕೂಸು! ಅಹಹ......." ಎಂದು ಮುಂದೆ ಮಾತಾಡಲಾರದೆ ಗೋಳಿಟ್ಟಳು. ಆಗ ಲಲಿತೆಯು ಗಟ್ಟಿ ಮನಸ್ಸುಮಾಡಿ, "ನಾವು ಮಾಡಿದ ಕರ್ಮಕ್ಕೆ ಅನ್ಯರನ್ನು ದೂರಿ ಫಲವೇನಮ್ಮಾ? ನಡೆ ಇಲ್ಲಿಂದೊಮ್ಮೆ ತೊಲಗುವ" ಎಂದು ಇಬ್ಬರೂ ಹೊರಡಲುದ್ಯುಕ್ತರಾದರು. ಅಷ್ಟರ ವರೆಗೂ ಗೊಂಬೆಯಂತೆ ನಿಂತಿದ್ದ ಶಿವಾನಂದರು, "ನಿಲ್ಲಿರಿ, ಮೋಟರ್ ಕಾರಿನಲ್ಲಿ ಹೋಗಿರಿ" ಎಂದರು. ನೀವು ಈವರೆಗೆ ಮಾಡಿದ ಉಪಕಾರವೇ ನಾಕು ಪರಾಕ್. ನಮಗೆ ಮೋಟರ್ ಕಾರೇಕೆ? ನಡೆದೇ ಹೋಗುತ್ತೇವೆ" ಎಂದಳು ನಾಗಿ ಶಿವಾನಂದರನ್ನೊಮ್ಮೆ ದಿಟ್ಟಿಸಿ. ಆಗ ಶಿವಾನಂದರು ನಾಗಿ ಲಲಿತೆಯರಿಬ್ಬರನ್ನು ಕೈಹಿಡಿದು ಎಳೆತಂದು "ನಿಲ್ಲಿರಿ, ನಾನು ಹೇಳುವುದನ್ನೆಲ್ಲಾ ಕೇಳಿ ಮತ್ತೆ ಹೋಗಿರಿ." ಎಂದರು. ನಾಗಿ ಲಲಿತೆಯರು ವಿಸ್ಮಿತರಾಗಿ ಮಾತಾಡದೆ ಸುಮ್ಮನೆ ನಿಂತರು. ಶಿವಾನಂದರ ಕಂಗಳಲ್ಲಿ ಪುನಃ ನೀರು ತುಂಬಿಬಂತು. ಅವರು "ನಾಗಿ, ಎಲ್ಲವನ್ನೂ ಮಾಡಿದವನು ನಾನು. ಹೃದಯವನ್ನು ಕಲ್ಲುಮಾಡಿ ಲಲಿತೆಯ ಮಗುವನ್ನು ಕೊಲ್ಲಿಸಿದ ನರಪಿಶಾಚಿ ನಾನು! ನರಸಿಂಹನು ಕೇವಲ ನನ್ನ ಹಸ್ತಕ. ಈ ಪಾಪಕೃತ್ಯಗಳ ಹೊಣೆಗಾರಿಕೆಯೆಲ್ಲಾ ನನ್ನದು. ನಾಗಿ, ನಾನೂ ಮಾನವನು; ನನಗೂ ಹೃದಯವಿದೆ; ಕರುಣೆಯು ಕರುಳಿದೆ. ನನ್ನ ವೀರ್ಯಕ್ಕೇನೇ ಹುಟ್ಟಿದ ನನ್ನ ಪ್ರತಿ ಮೂರ್ತಿಯಾದ ಹಸುಗೂಸನ್ನು ಕೊಲೆಮಾಡಿಸುವಾಗ ನನ್ನ ಹೃದಯವು ಅದೆಷ್ಟು ವೇದನೆಗೊಳಗಾಗಿದ್ದಿತೆಂಬುದನ್ನು ನನ್ನ ಹೊರತು ಇನ್ನಾರೂ ಅರಿಯಲಾರರು. ಆದರೆ ನನ್ನೀ ನಾಟಕವನ್ನು ಇಷ್ಟರವರೆಗೆ ನಡಿಸಿ, ಈ ಅಧಿಕಾರ ಸ್ಥಾನಮಾನದ ಸವಿಯುಂಡು ಕೊಬ್ಬಿ ಇನ್ನು ಅನ್ಯರೀತಿಯ ಜೀವನವಾರಂಭಿಸುವುದಾದರೂ ಹೇಗೆ? ನಾನು ದೀರ್ಘಕಾಲ ಯೋಚಿಸಿ, ಹಲವು ದಿನಗಳ ತೀವ್ರ ವೇದನೆಯನ್ನನುಭವಿಸಿ ಇದೇ ನಾಟಕವನ್ನು ಕೊನೆಯಂಕದ ವರೆಗೆ ನಡಿಸುವ ನಿರ್ಧಾರ ಮಾಡಿರುವೆನು. ಅದಕ್ಕೆ ಅಡ್ಡಿ ಬಂದಿರುವ ಲಲಿತೆಯ ಕೂಸನ್ನು ಕೊಲ್ಲಿಸುವ ಕಟುಕ ಹೃದಯವುಳ್ಳವನಾದೆನು. ಲಲಿತೆಯು ಗರ್ಭಿಣಿಯೆಂದು ನಾನು ಸಂಚಾರಕ್ಕೆ ಹೊರಡುವ ಮೊದಲೇ ಗೊತ್ತಿದ್ದರೆ ಗರ್ಭಪಾತ ಮಾಡಿಸುತ್ತಿದ್ದೆನು. ನನಗದು ತಿಳಿಯದೆ ಹೋಯಿತು. ನನ್ನೀ ನಾಟಕದಲ್ಲಿ ನೀವೂ ಭಾಗಿಗಳಾಗಿ ನನ್ನೊಂದಿಗೆ ಬಹಳ ಮುಂದುವರಿದಿರುವಿರಿ. ಇನ್ನು ನನ್ನನ್ನು ಕೈಬಿಡುವುದರಿಂದ ಫಲವಿಲ್ಲ. ನಾಗಿ, ನಾನೀಗ ಬಹಳ ಅಡಚಣೆಯಲ್ಲಿರುವೆನು. ನನ್ನಪ್ಲೇನೆಲ್ಲಾ ಆಕಾಶ ಕುಸುಮವಾಗಿರುವುದು. ಆದುದರಿಂದ ನಿನಗೆ ಕೊಟ್ಟ ಮಾತನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ಇನ್ನಾದರೂ ನನ್ನಿಂದ ಸಾಧ್ಯವಾದ ಸಹಾಯವನ್ನೆಲ್ಲಾ ನಿಮಗೆ ಮಾಡುವೆನು. ನೀವು ಈ ಸಂಗತಿಯನ್ನೆಲ್ಲಾ ಬಹಳ ರಹಸ್ಯವಾಗಿಡಬೇಕು" ಎನ್ನುವಷ್ಟರಲ್ಲಿ "ಹಾ.........!" ಎಂದು ಆಕಳಿಸಿ ನರಸಿಂಹನು ಮೈಕೊಡಹಿ ಎದ್ದು ನಿಂತನು. "ನರಸಿಂಹ, ಇವರನ್ನು ಮೋಟರ್ ಕಾರಿನಲ್ಲಿ ಅವರ ಮನೆಯಲ್ಲಿ ಬಿಟ್ಟು ಬಾ" ಎಂದರು ಶಿವಾನಂದರು. ನರಸಿಂಹನು ಚಕಿತನಾಗಿ ನಾಗಿ ಲಲಿತೆಯರನ್ನು ಕಣ್ಬಿಟ್ಟು ನೋಡುತ್ತಾ ನಿಂತನು. "ಏನು ನೋಡುತ್ತಿರುವುದು? ಹೇಳಿದ್ದು ಕೇಳಲಿಲ್ಲವೆ?" ಎಂದರು ಶಿವಾನಂದರು. "ಬನ್ನಿ ನಾಗಿ ಹೋಗುವ" ಎಂದು ನರಸಿಂಹ ಮುಂದಾಗಿ ಹೊರಟ. ಅವನ ಹಿಂದೆ ನಾಗಿ ಲಲಿತೆಯರು ಹೊರಟುಹೋದರು

**"ಮಗು, ಲಲಿತ! ನಾನಿನ್ನು ಬದುಕುವ ಹಾಗಿಲ್ಲ! ನಿನ್ನ ಗತಿಯೇನು?"**

(ಮುಂದಿನ ಸಂಚಿಕೆ ನಿರೀಕ್ಷಿಸಿರಿ)


**Advertised goods are the best goods.**

# THE BOMBAY LIFE ASSURANCE Co., LTD.

ESTD. 1908

**Church Gate Street, Fort - - BOMBAY.**

**SPECIAL FEATURES.**

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:—*

**KOCHIKAR BROTHERS,**
*Madras Branch Secretaries.*

BRANCHES AT:

| | | |
|---|---|---|
| P. B. 337 Mount Road, Madras. | Visveswarapuram Circle, Bangalore City. | Soumyalayam Puthiyara, Calicut. |
| Car Street, Mangalore. | Udipi, S. India. | Charni Road, Bombay No. 4. |

INSPECTORATE OFFICE AT:
1. Ottapalam, Malabar District. 2. Central Station Road, Trivandrum.

# EVIDENCE OF SECURITY & STABILITY

**FIGURES THAT SPEAK FOR THEMSELVES**

TOTAL ASSETS **Rs. 80,66,600**

**Summary of 1935 Accounts**

| | | |
|---|---|---|
| Total Assets Over | ... ... | Rs. 80,00,000 |
| Life Funds Over | ... ... | Rs. 68,00,000 |
| Premium Income Over | ... | Rs. 22,54,000 |
| Interest Income | ... ... | Rs. 3,16,000 |
| Claims Paid | ... ... ... | Rs. 5,75,000 |

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE **Rs. 4,42,51,200**

## Receipts and Disbursements Account for the period from (30-10-1932 — 30-6-1933)

**RECEIPTS**

| | Rs. As. Ps. | Rs. As. Ps. |
|---|---|---|
| To Opening balance ... ... ... | | 40 15 2 |
| „ **Lands**— | | |
| Receipts from leases including Tasdik ... ... ... ... | | 1,103 8 5 |
| „ **Customary Payments and Votive Offerings**— | | |
| Kanika ... ... ... ... | 7 7 3 | |
| Marriage Kanika ... ... ... | 6 0 0 | 13 7 3 |
| Decree amount realised ... ... | | 225 0 0 |
| „ **Miscellaneous** — | | |
| Sundry sale proceeds ... ... | 26 9 8 | |
| Rent of copper vessels ... ... | 8 15 0 | |
| Fines ... ... ... ... | 2 0 0 | 37 8 8 |
| „ **Extraordinary and Debts**— | | |
| Loans taken ... ... ... | 485 0 0 | |
| Sundary Creditors ... ... | 223 8 2 | 708 8 2 |
| **Rupees** ... | | 2,128 15 8 |

**PAYMENTS**

| | Rs. As. Ps. | Rs. As. Ps. |
|---|---|---|
| By **Establishment** — | | |
| Purohits ... ... ... ... | 58 12 0 | |
| Valaga ... ... ... ... | 49 15 4 | |
| Travelling Expenses ... ... | 20 8 6 | |
| Postage ... ... ... ... | 0 6 9 | 129 10 7 |
| „ **Ordinary Puja Expenses**— | | |
| Nithya Santharpana ... ... | 452 1 11 | |
| Samaradhana Tasdik ... ... | 27 6 4 | 479 8 3 |
| „ **Festivals**— | | |
| Festival & occasional pooja ... | | 236 12 0 |
| „ **Buildings**— | | |
| Sundry repairs ... ... ... | | 119 1 10 |
| „ **Taxes**— | | |
| Assessment ... ... ... | | 416 6 0 |
| „ Trustees commission on collection of rents ... ... | | 111 0 0 |
| „ **Paraphernalia**— | | |
| Repairs of copper vessels etc. ... | | 18 11 0 |
| Contribution to the Board and Committee ... ... ... | | 42 0 0 |
| „ **Cost of litigation**— | | |
| Lawyers fee & writing fees etc. | | 144 11 6 |
| „ **Extraordinary & Debts**— | | |
| Loans repaid ... ... ... | | 382 4 0 |
| Closing balance ... ... ... | | 48 14 6 |
| **Rupees** ... | | 2,128 15 8 |

Examined and found correct subject to the remarks contained in my report of this date.

Mangalore, 9th August, 1937. } ಮುಡಿರ್ತ್ತಾಯ ಗುರುರಾಜ ಭಟ್ಟನ ರುಜು.

P. M. Hegde,
*Registered Accountant.*

## Receipts and Disbursements Account for the year 1933-34 (1-7-1933 — 30-6-1934)

**RECEIPTS**

| | Rs. As. Ps. | Rs. As. Ps. |
|---|---|---|
| To Opening balance .. .. ... | | 48 14 6 |
| „ **Lands**— | | |
| Income from leases including Tasdik ... ... ... ... | | 1,093 14 9 |
| „ **Customary payments and Votive Offerings**— | | |
| Marriage kanika ... .. ... | 6 0 0 | |
| Kanika ... ... ... ... | 6 8 0 | 12 8 0 |
| „ **Income from Investments**— | | |
| Interest on loan ... ... ... | | 180 10 6 |
| Decree amount realised ... ... | | 1,304 10 11 |
| „ **Miscellaneous**— | | |
| Rent of copper vessels ... ... | 23 15 0 | |
| Sundry sale proceeds ... ... | 19 12 8 | 43 11 8 |
| „ **Extraordinary & Debts**— | | |
| Loans taken ... ... ... | 325 0 0 | |
| Sundry creditors ... ... ... | 244 13 11 | 569 13 11 |
| **Rupees** ... | | 3,254 4 3 |

**DISBURSEMENTS**

| | Rs. As. Ps. | Rs. As Ps. |
|---|---|---|
| By Establishment— | | |
| Purohits ... ... ... ... | 75 15 0 | |
| Valaga ... .. ... ... | 65 4 6 | |
| Travelling expenses ... ... | 7 14 0 | |
| Postage ... ... ... | 1 0 3 | |
| Printing and Stationery ... ... | 7 15 0 | 158 0 9 |
| „ **Ordinary Puja Expenses**— | | |
| Nithyasantharpana ... .. | 364 9 0 | |
| Samaradhana Tasdik ... ... | 30 0 0 | 394 9 0 |
| „ **Festivals**— | | |
| Festival & occassional Puja ... | | 558 0 8 |
| „ **Buildings**— | | |
| Sundry repairs ... ... ... | | 90 0 9 |
| „ Taxes— | | |
| Assessment ... ... .. | | 369 6 0 |
| „ **Paraphernalia**— | | |
| Repairs and purchase of copper vessels etc. .. ... ... | 120 9 0 | |
| Cart hire ... ... ... ... | 16 0 0 | 136 9 0 |
| Contribution to the Board & Committee .. ... ... | | 41 0 0 |
| „ **Cost of litigation**— | | |
| Lawyers fees etc. ... ... ... | | 205 0 6 |
| „ **Extraordinary & Debts**— | | |
| Loans repaid ... ... ... | | 1,280 0 0 |
| Closing Balance ... ... ... | | 21 9 7 |
| **Rupees** | | 3,254 4 3 |

Examined and found correct subject to the remarks contained in my report of this date.

Mangalore, 9th August, 1937 } ಮುಡಿರ್ತ್ತಾಯ ಗುರುರಾಜಭಟ್ಟನ ರುಜು.

P. M. Hegde,
*Registered Accountant*

## Receipts and Disbursements Account for the year 1934-35 (1-7-1934 — 30-6-1935)

**RECEIPTS**

| | Rs. As. Ps. | Rs. As. Ps. |
|---|---|---|
| To Opening balance ... ... | | 21 9 7 |
| „ **Lands**— | | |
| Income from lands ... ... | | 947 6 2 |
| „ **Customary payments and Votive Offerings**— | | |
| Marriage Kanika ... ... ... | 24 0 0 | |
| Kanika ... ... ... ... | 6 9 0 | 30 9 0 |

**DISBURSEMENTS**

| | Rs. As. Ps. | Rs. As. Ps. |
|---|---|---|
| By **Establishment**— | | |
| Purohits ... ... ... ... | 75 2 0 | |
| Valaga ... ... ... ... | 84 11 1 | |
| Travelling expenses ... ... | 28 4 0 | |
| Postage ... ... ... ... | 1 5 6 | |
| Printing & Stationery ... ... | 26 1 3 | 215 7 10 |

## Receipts and Disbursements Account for the year 1934-35 (1-7-1934 — 30-6-1935) *(Continued)*

**RECEIPTS**

| | Rs. As. Ps. | Rs. As. Ps. |
|---|---|---|
| Mortgage amount realised including interest ... ... | | 1,303 6 9 |
| " **Miscellaneous—** | | |
| Sundry sale proceeds ... .. | 31 13 8 | |
| Rent of copper vessels ... .. | 21 0 0 | |
| Fines .. .. ... ... | 4 4 0 | 57 1 8 |
| " **Extraordinary & Debts—** | | |
| Loans taken ... ... ... | 755 0 0 | |
| Temporary loan ... ... ... | 100 0 0 | |
| Sundry Creditors ... .. | 296 12 4 | 1,151 12 4 |
| **Rupees** ... | | 3,511 13 6 |

**DISBURSEMENTS**

| | Rs. As. Ps. | Rs. As. Ps. |
|---|---|---|
| " **Ordinary Puja Expenses—** | | |
| Nithyasantharpana ... ... | 495 9 0 | |
| Samaradhana Tasdik .. ... | 30 0 0 | 525 9 0 |
| " **Festivals—** | | |
| Festivals & occasional puja ... | | 187 0 6 |
| " **Buildings—** | | |
| Sundry repairs ... ... ... | | 104 0 0 |
| " **Taxes—** | | |
| Assessment ... ... ... ... ... | | 363 11 0 |
| " Trustee's commission on rent collection ... ... ... | | 269 0 0 |
| " **Paraphernalia—** | | |
| Repairs of copper vessels etc. ... | | 7 6 0 |
| " **Contribution to the Board & Committee—** .. ... ... | | 14 0 0 |
| Charity ... ... ... ... | | 11 5 4 |
| " **Cost of litigation—** | | |
| Lawyer's fees & writing fees etc. | | 85 4 6 |
| " **Extraordinary & Debts—** | | |
| Loans repaid ... ... ... | 1,578 7 7 | |
| Temporary loan repaid ... ... | 100 0 0 | |
| Interest paid ... ... ... | 3 6 4 | 1,681 13 11 |
| " Closing balance ... ... ... | | 47 3 5 |
| **Rupees** .. | | 3,511 13 6 |

Mangalore
*9th Aug. 1937.*

ಮುಂಡಿತ್ತಾಯ ಗುರುರಾಜ ಭಟ್ಟರ ರುಜು

Examined and found correct subject to the remarks contained in my report of this date

P. M. Hegde,
*Registered Accountant.*

## Receipts and Disbursements Account for the year 1935-36 (1-7-1935 — 30-6-1936)

**RECEIPTS**

| | Rs. As. Ps. | Rs. As. Ps. |
|---|---|---|
| To Opening balance ... ... ... | | 47 3 5 |
| " **Lands—** | | |
| Income from lands including Tasdik ... ... ... ... | | 1,211 4 0 |
| " **Customary Payments & Votive Offerings** | | |
| Marriage kanika .. ... ... | 14 3 0 | |
| Kanika ... ... ... ... | 12 8 0 | 26 11 0 |
| " **Grants—** | | |
| " Decree amount realised ... ... | | 240 15 0 |
| " **Miscellaneous—** | | |
| Sudry sale proceeds ... ... | 18 6 6 | |
| Rent of copper vessels ... ... | 23 6 1 | |
| Fines ... ... ... ... | 1 0 0 | 42 12 7 |
| " **Extraordinary & Debts—** | | |
| Loans taken ... ... ... | 695 0 0 | |
| Sundry creditors ... ... | 405 15 7 | 1,100 15 7 |
| " Amount due to Trustee ... | | 2 0 10 |
| **Rupees** ... | | 2,671 14 5 |

**DISBURSEMENTS**

| | Rs. As. Ps. | R.s As. Ps. |
|---|---|---|
| By **Establishment—** | | |
| Purohits ... ... ... ... | 74 5 0 | |
| Valaga ... ... ... ... | 64 3 4 | |
| Travelling expense ... ... | 43 6 0 | |
| Postage ., ... ... ... | 1 6 6 | |
| Printing and Stationery ... ... | 9 5 0 | 192 9 10 |
| " **Ordinary Puja Expenses—** | | |
| Nithyasantharpana ... ... | 489 7 1 | |
| Samaradhana Tasdik ... ... | 30 0 0 | 519 7 1 |
| " Festivals and occasional Puja ... | | 459 1 1 |
| " **Buildings—** | | |
| Repairs and additions ... ... | | 476 9 2 |
| " **Taxes—** | | |
| Assessment ... ... ... ... | | 374 9 0 |
| " **Trustee's commission on collection of rents** ... ... | | 125 0 0 |
| " **Paraphernalia—** | | |
| Repairs of copper vessels etc. ... | | 25 0 6 |
| " Contribution to the Board and Committee ... ... ... | | 28 0 0 |
| " **Cost of litigation—** | | |
| Lawyers fees and writing fees etc. | | 170 9 9 |
| " **Extraordinary and Debts—** | | |
| Loans repaid ... ... ... | | 301 0 0 |
| **Rupees** ... | | 2,671 14 5 |

Mangalore,
*9th August, 1937*

ಮುಂಡಿತ್ತಾಯ ಗುರುರಾಜಭಟ್ಟರ ರುಜು.

Examined and found correct subject to the remarks contained in my report of this date.

P. M. Hegde,
*Registered Accountant.*

## Receipts and Disbursements Account for the period from (1-7-1936 — 27-5-1937)

**RECEIPTS**

| | Rs As. Ps. | Rs. As. Ps. |
|---|---|---|
| **To Lands—** | | |
| Income from lands including **Tasdik** ... ... ... ... | | 708 14 8 |

**DISBURSEMENTS**

| | Rs. As. Ps. | Rs. As. Ps. |
|---|---|---|
| By Balance b/f. ... ... ... ... | | 2 0 10 |
| " **Establishment—** | | |
| Purohit ... ... ... ... | 50 12 0 | |
| Valaga ... ... ... ... | 60 8 2 | |

## Receipts and Disbursements Account for the period from (1-7-1936—27-5-1937) *(Continued)*

### RECEIPTS

| | Rs. As. Ps. | Rs. As. Ps. |
|---|---|---|
| " **Customary payments and Yotiva—** | | |
| Offerings ... ... ... ... | | |
| Marriage Kanike ... ... ... | 6 5 0 | |
| Kanike ... ... ... ... | 10 2 0 | |
| Dabbi collections ... ... ... | 43 0 0 | 59 7 0 |
| " **Miscellaneous** | | |
| Rent of Copper vessels ... ... | 6 4 0 | |
| Sundry sale proceeds ... ... | 7 13 0 | 14 1 0 |
| " **Extraordinary and Debts—** | | |
| Loans taken ... ... ... | 570 0 0 | |
| Sundry Creditors ... ... | 192 5 9 | 762 5 9 |
| **Rupees** ... | | **1,844 12 8** |

### DISBURSEMENTS

| | Rs. As. Ps. | Rs. As. Ps. |
|---|---|---|
| Travelling expense ... ... | 45 10 0 | |
| Postage ... ... ... ... | 0 15 6 | 157 13 8 |
| By **Ordinary Pooja—** | | |
| Nithyasantharpana ... ... | 366 6 11 | |
| Samaradhana Tasdik ... ... | 30 0 0 | 396 6 11 |
| " **Festivals and Occasional Pooja—** | | |
| Festivals and other puja ... | | 257 4 7 |
| " **Buildings—** | | |
| Sundry repairs ... ... | | 4 12 0 |
| " **Taxes—** | | |
| Assessment ... ... ... ... | | 376 12 0 |
| " **Paraphernalia—** | | |
| Repairs of copper vessels ... | | 3 6 0 |
| " **Contribution—** | | |
| To the Board ... ... ... | 28 0 0 | |
| " Committee ... ... | 14 0 0 | 42 0 0 |
| " **Cost of litigation—** | | |
| Lawyers fees, writing fees etc. ... | | 192 15 3 |
| " **Extraordinary and Debts—** | | |
| Loans repaid ... ... ... | | 103 2 0 |
| " Closing balance ... ... ... | | 8 3 2 |
| **Rupees** ... | | **1,844 12 8** |

Mangalore, 9th August 1937. ಮಡಿಕ್ಕಾಯ ಗುರುರಾಜ ಭಟ್ಟನ ರುಜು

Examined and found correct subject to the remarks contained in my report of this date.

**P. M. Hegde,**
*Registered Accountant.*

# SHRI VISHNUMOORTHY TEMPLE, MUTTU VILLAGE

**LIST A:— Sundry debtors as on 27—5—1937**

| | | | |
|---|---|---|---|
| 1. | Anantha Krishnayya ... ... | Rs. | 15 15 1 |
| 2. | Kalyani Amma ... ... | " | 16 3 1 |
| 3. | Shrinivasayya ... ... | " | 6 7 0 |
| 5. | Haridasayya ... ... | " | 0 9 1 |
| 6. | Keshavayya ... ... | " | 30 0 1 |
| 7. | Adikari Puttannayya ... ... | " | 61 4 4 |
| 8. | Purushattamayya ... ... | " | 17 7 0 |
| 9. | Padmappayya ... ... | " | 1 11 6 |
| 11. | Laximinarayanayya (453/32 & 211/37) | " | 388 12 11 |
| 13. | Mahalinga Sheregara ... ... | " | 1 1 4 |
| 15. | Krishnayya ... ... | " | 23 13 7 |
| 17. | Babu & Others ... ... | " | 19 9 6 |
| 19. | Visnumurthi & Krishna ... ... | " | 26 12 2 |
| 21. | Laximinarayana Bhatta ... ... | " | 0 4 0 |
| 23. | Govindayya (196/37, 70/37)... ... | " | 409 13 4 |
| 24. | Venkatramanayya ... ... | " | 4 8 11 |
| 25. | Rukminiamma ... ... | " | 14 12 0 |
| 26. | Ramachandrayya ... ... | " | 41 8 10 |
| 29. | Thowda Poojary (212/37) ... ... | " | 124 1 7 |
| 31. | Ramappayya ... ... | " | 1 4 4 |
| 32. | Narayanaya ... ... | " | 2 10 7 |
| 33. | Hayagrana ... ... | " | 0 12 0 |
| 35. | Chandrashekarayya ... ... | " | 16 13 0 |
| 36. | Dasappayya ... ... | " | 0 4 9 |
| 40. | Narayanayya ... ... | " | 0 13 11 |
| 44. | Venkatachalayya ... ... | " | 6 14 4 |
| 46. | Venkatramanayya ... ... | " | 9 3 6 |
| 47. | Narayanayya ... ... | " | 8 15 0 |
| 48. | Ramaya ... ... | " | 8 13 6 |
| 49. | Chandrayya ... ... | " | 1 6 0 |
| 50. | Radhamma ... ... ... | " | 0 10 9 |
| 51. | Subbannayya ... ... ... | " | 1 10 9 |
| 52. | Shankarnarayanna ... ... | " | 6 12 6 |
| 53. | Sathyabame ... ... ... | " | 5 1 0 |
| 54. | Ramachandrayya ... ... | " | 3 5 2 |
| 55. | Gopal Krishnayya ... ... | " | 2 1 3 |
| 56. | Parameshwarayya ... ... | " | 6 3 0 |
| 57. | Manjunathayya (304/36) ... ... | " | 31 8 10 |
| 58. | Sode Mutt (222/37) ... ... | " | 467 13 9 |
| 59. | Udipi Krishna Mutt ... ... | " | 2 13 6 |
| 60. | Kunhibettu Sathyabame ... ... | " | 1 8 2 |
| 61. | Adamar Mutt ... ... ... | " | 57 6 4 |
| 62. | Kalmady Krishna Rao (324/34) ... | " | 250 12 9 |
| 63. | Katpadi Padmappayya ... ... | " | 2 8 0 |
| 64. | Raghuvendra Kamath ... ... | " | 3 3 0 |
| 65. | Venkatramana Temple ... ... | " | 9 1 0 |
| 67. | Ananth Shetty ... ... | " | 4 2 0 |
| 68. | Adikary Ramachandraya ... ... | " | 3 4 9 |
| [illegible] | [illegible] | | 6 2 8 |
| 76. | Janardhanayya ... ... ... | " | 1 14 0 |
| 77. | Venkappayya ... ... ... | " | 3 6 1 |
| 78. | Bhagheerathi ... ... ... | " | 1 0 9 |
| 80. | Kaveriamma ... ... ... | " | 4 4 1 |
| 83. | Paravathiamma ... ... ... | " | 2 12 0 |
| 84. | Shridhara Muthamma ... ... | " | 26 0 0 |
| 85. | Ramakrishnayya ... ... | " | 11 10 8 |
| 87. | Mattu Janardhanayya (58/37) ... | " | 54 11 2 |
| 92. | Appu Sheregara ... ... | " | 7 0 0 |
| 97. | Seethamma ... ... ... | " | 20 0 0 |
| | **Total Rupees** | | **2,261 6 2** |

**LIST B:—** List of unpaid rents of copper vessels.

| Bill No. | | | |
|---|---|---|---|
| 33. | Jeddi Vishnumurthi ... ... | " | 0 10 0 |
| 34. | Mogenu Pappu ... ... ... | " | 0 10 0 |
| 42. | Adhikary Ramachandrayya ... ... | " | 0 8 0 |
| 53. | Balappa Govindayya ... ... | " | 0 4 0 |
| 66. | Adhikary Krishnayya ... ... | " | 9 0 0 |
| 71. | Madyasta Narayannayya ... ... | " | 2 2 0 |
| 72. | Thaniza Poojary ... ... ... | " | 0 12 0 |
| 78. | Ambady Sooryanna Shetty ... ... | " | 0 8 0 |
| 8J. | Adhikary Krishna Rao ... .. | " | 2 4 0 |
| 83. | Thali Nagappayya ... ... ... | " | 0 10 0 |
| 86. | Gudda Poojary (8 as. paid out of 10 as). | " | 0 2 0 |
| 87. | Ugrani Babu shetty ... ... | " | 0 10 0 |
| 88. | Seethamma ... ... ... | " | 0 6 0 |
| 89. | Vakil Ramakrishna Rao ... ... | " | 10 0 0 |
| 90. | Daddi Vishnumoorthiyya ... ... | " | 1 2 0 |
| 96. | Enagudde Narayana Hegde ... | " | 4 5 0 |
| | **Total Rupees** | | 33 13 0 |
| | Total of list A. | | 2,261 6 2 |
| | **Grand Total Rs.** | | **2,295 3 2** |

Mangalore, 9th Aug., 1937

**P. M. Hegde,**
*Registered Accountant.*

**List of Sundry Creditors as on 27—5—1937.**

| L. F. | | | |
|---|---|---|---|
| 8. | Trustee Mardithaya (Dayanidhi Bank) | Rs. | 1,126 4 1 |
| 9. | Mattu Patel ... ... ... | " | 6 9 0 |
| 18. | Krishna ... ... ... | " | 1 5 4 |
| 19. | Babu ... ... ... | " | 1 5 4 |
| 20. | Vishnumurthi Krishnayya ... ... | " | 1 5 4 |
| 52. | Kotta Poojari ... ... ... | " | 0 9 0 |
| 55. | Ranganna ... ... ... | " | 27 0 0 |
| 57. | Dasa Sheregara ... ... ... | " | 7 8 0 |
| 60. | Shridhara Kamath ... ... ... | " | 113 9 5 |
| | **Total Rupees** | | **1,285 7 6** |

Mangalore,

**P. M. Hegde,**
*Registered Accountant.*

# ಜಾತಿಯಿಂದಲೇ ರಾಷ್ಟ್ರಘಾತವಾಯಿತು

## ನಾಲ್ಕು ಜಾತಿ ನಾಲ್ಕು ಸಾವಿರವಾದದ್ದು ಹುಚ್ಚುತನವೆ! ಜಾತಿಗಳು ಬುಡಮುಟ್ಟ ಹಾಳಾಗಬೇಕು.

ಲೇಖಕರು 'ಸಮತಾವಾದಿ'

●○●

ಜಾತಿ ಪದ್ಧತಿಯು ಇರಬೇಕೇ, ತೊಲಗಬೇಕೇ ಎಂಬ ಸಮಸ್ಯೆಯು ನಮ್ಮ ಸಮಾಜ ಸುಧಾರಕರ ಮನಸ್ಸಿನಲ್ಲಿ ಬಹಳವಾಗಿ ಘರ್ಷಣೆ ಮಾಡುತ್ತಿದೆ. ಅವರು ಜಾತಿ ಪದ್ಧತಿಯಿಂದ ಹಿಂದೂ ಸಮಾಜಕ್ಕೆ ಆಗಿರುವ ನೂರಾರು ಕೇಡುಗಳನ್ನು ಗಮನಿಸಿ, ಜಾತಿಭೇದಗಳ ಸಮಾಜದ ಐಕ್ಯತೆಗೆ ಭಂಗವನ್ನು ತಂದಿರುವುದರಿಂದ, ಐಕ್ಯತಾಸಾಧನೆಯು ಮಹಾಪ್ರೇಯದ ಸಲುವಾಗಿ ಜಾತಿಭೇದಗಳು ತೊಲಗಬೇಕು. ಇಲ್ಲವೇ, ಐಕ್ಯತೆಯು ಬೆಳೆಯುವುದನ್ನು ತಡೆಗಟ್ಟದಂತಹ ರೀತಿಯಲ್ಲಿ ಜಾತಿಪದ್ಧತಿಯು ಸುಧಾರಿಸಲ್ಪಡಬೇಕು ಎಂದು ಚಿಂತಿಸುತ್ತಿದ್ದಾರೆ

ಆದರೆ ಸಂಪ್ರದಾಯವನ್ನು ಪಟ್ಟಾಗಿ ಹಿಡಿದಿರುವ ವೈದಿಕರ ದೃಷ್ಟಿಕ್ಷೇಪವು 'ಸುಧಾರಕ'ರ ದೃಷ್ಟಿಕ್ಷೇಪದಿಂದ ತೀರಾ ಭಿನ್ನವಾಗಿದೆ. ಈ ಸಂಪ್ರದಾಯ ಶರಣರಾದ ವೈದಿಕರನ್ನು ನಾವು ಈಗಾಗಲೇ ಪರಿಚಿತವಾಗಿರುವ 'ಸನಾತನಿ' ಎಂಬ ಪದದಿಂದ ವ್ಯವಹಾರಮಾಡಿ ಜಾತಿಪದ್ಧತಿಯನ್ನು ಕುರಿತು ನಮ್ಮ ಸಮಾಲೋಚನೆಯನ್ನು ಮುಂದುವರಿಸೋಣ

### ನಮ್ಮ ಕಾಲನ್ನು ನಾವೇ ಮುರಿದುಕೊಂಡೆವು

ಜಾತಿ ಪದ್ಧತಿಗೆ ಕುಲಶ್ರೇಷ್ಠತೆಯನ್ನು ಅನುಸಂಧಾನಮಾಡುವಿಕೆಯೇ ತಳಹದಿ. "ನಮ್ಮದು ಶುದ್ಧವಾದ ರಕ್ತಸಂಬಂಧ, ನಾವು ಋಷಿಸಂಭೂತರು, ಜ್ಞಾನವನ್ನು ವಂಶ ಪಾರಂಪರ್ಯವಾಗಿ ಪಡೆದುಕೊಂಡು ಬಂದವರು" ಎಂದು ಹೇಳಿಕೊಳ್ಳುತ್ತ ತಮಗಿಂತ ಇತರರ ಜಾತಿ ಹೀನವೆಂದು ಕಂಡು ಹೆಮ್ಮೆ ಅಹಂಕಾರಗಳಿಂದ ವರ್ತಿಸುವ ವರ್ಣದವರಿಂದಲೇ ಸಮಾಜವು ಜಾತಿ ಪದ್ಧತಿಯೆಂಬ ಉಕ್ಕಿನ ಚೌಕಟ್ಟಿನಲ್ಲಿ ಬಂಧಿತವಾಗಿದೆ. "ನೀವು ಹೀಗೆ ನಡೆಯತಕ್ಕದ್ದು, ನಿಮ್ಮದು ಈ ಜಾತಿ, ಇಷ್ಟೇ ನಿಮ್ಮ ಕಾರ್ಯ, ಇದನ್ನು ಮೀರಬಾರದು" ಎಂದು ಈ ಉಚ್ಚವರ್ಣದವರಾದ ಸನಾತನಿಗಳು ಅವರು ನೀಚವರ್ಣದವರೆಂದು ಹೇಳುವ ಜಾತಿಗಳವರ ಆತ್ಮವಿಕಾಸಕ್ಕೆ ನಾನಾ ಬಗೆಯ ವಿಘ್ನಗಳನ್ನೊಡ್ಡುತ್ತಾ ಬಂದಿದ್ದಾರೆ. ಸಮಾಜದಲ್ಲಿ ಈ ರೀತಿ 'ಮೇಲು ಜಾತಿ, ಕೀಳು ಜಾತಿ' ಎಂದು [illegible] ಜಾತಿ ಮುಂತಾಗಿ [illegible] ಬೆಳೆದು ಬಂದಿರುವ ಪಂಗಡಗಳು ಈ ಸನಾತನಿಗಳ ಗಮನಕ್ಕೆ ಬರುವುದೇ ಇಲ್ಲ [illegible], ಮತಾಂತರ [illegible] ಇವು ದಿನಚರಿಯ ಸಾಮಾನ್ಯ ವಿಷಯಗಳಾಗುತ್ತ ಬಂದಿವೆ. ಈ ಜಾತಿ ಪದ್ಧತಿಯ ಹುಚ್ಚು ಎಷ್ಟು ದೂರ ಹೋಗಿದೆಯೆಂದರೆ ಒಂದೊಂದು ವ್ಯಕ್ತಿಯವರು ಒಂದೊಂದು ಜಾತಿಯಾಗಿಬಿಟ್ಟಿದ್ದಾರೆ. ಆದರಿಂದ ಆರಂಭವಾಗಿದ್ದ 'ಚಾತುರ್ವರ್ಣ್ಯ'ವು ಈಗ ಸಹಸ್ರಾರು ವರ್ಣಗಳಾಗಿವೆ. ಕಲ್ಲು ಕಾಕರದ್ದೊಂದು ಜಾತಿ! ಸೂಳೆಯರದ್ದೊಂದು ಜಾತಿ! ಕಸಗುಡಿಸುವವರದ್ದೊಂದು ಜಾತಿ! ಹೀಗಿದೆ ಇಂದಿನ ವ್ಯವಹಾರ! ಇದೆಲ್ಲ ಹೋಗಲೆಂದರೆ ಹಿರಿಯಜಾತಿಯವರೆಂದುಕೊಳ್ಳುವ ಬ್ರಾಹ್ಮಣರಲ್ಲಿ ಎಷ್ಟು ಭೇದ ಅಂತರ್ಭೇದಗಳು! ಇವರ ಸ್ಮಾರ್ತ-ಮಾಧ್ವ-ಶ್ರೀವೈಷ್ಣವ ಎಂಬಿವು ಹೆಸರುಗ ಮಾತ್ರ 'ತ್ರಿಮತಗಳು' ಆದರೆ ಈ ಒಂದೊಂದು ಪಂಗಡದಲ್ಲೂ ಅನೇಕಾನೇಕ ಪಂಗಡಗಳು ಬೆಳೆದು ಒಂದೊಂದು ಸಂಪ್ರದಾಯ. ಒಂದಕ್ಕೆ ಕಟ್ಟುಬಿದ್ದವರು ಇನ್ನೊಂದಕ್ಕೆ ಕಟ್ಟುಬಿದ್ದವರಲ್ಲಿ ಹೆಣ್ಣು ಕೊಟ್ಟು ತೆಗೆಯುವುದಿಲ್ಲ. ನೀರನ್ನೇ ಕುಡಿಯುವುದಿಲ್ಲ ಇನ್ನು ಹೆಚ್ಚಿನ ವ್ಯವಹಾರವೆಲ್ಲಿಬಂತು? ಮತದ ಜೊತೆಗೆ ಸಂಪ್ರದಾಯ ಸೇರಿ ಮನುಷ್ಯನ ಸಹಜ ಪ್ರಗತಿಗೆ ಮಹಾ ವಿಘಾತವಾಗಿದೆ. ವಿಕಾಸವನ್ನು ತಡೆಗಟ್ಟುವ ಸ್ವಯಂ ನಿರ್ಮಿತ ಶೃಂಖಲೆಗಳಿವು.

### ರಸ-ಕಸ ಶೋಧನೆ

ಆದರೆ ನಾವು ಈ ಪರಿಸ್ಥಿತಿಯನ್ನು ಕಂಡು ನಿರಾಶೆಯಿಂದಿರಬೇಕಾಗಿಲ್ಲ. ನಮಗೆ ಇದುವರೆಗೆ ನಮ್ಮ ಧರ್ಮದ ರಸಕ್ಕಿಂತ ಕಸ ಹೆಚ್ಚು ಮುಖ್ಯವಾಗಿತ್ತು. ಈಗ ರಸವೇ ಮುಖ್ಯ ಕಸವು ಕಸವೇ ಎಂದು ವಿವೇಚನೆ ಮಾಡುವ ಬುದ್ಧಿ ನಮಗೆ ಬಂದಿದೆ. ಅನೇಕರಲ್ಲಿ ನೈಜವಾದ ಧರ್ಮ ಜಾಗ್ರತಿಯು ಉಂಟಾಗಿದೆ. ಇದಕ್ಕೆ ಧರ್ಮ ಧಾರಕರೂ ಸಮಾಜಸ ಧಾರಕರೂ ಕಾರಣ. ಹಿಂದಿನ ಸನಾತನಿಗಳಲ್ಲಿ ಕೆಲವರು ಇಂದು ಸುಧಾರಕರಾಗಿ 'ಮತಾಂತರ' ಹೊಂದಿದ್ದಾರೆ. ಆದುದರಿಂದ ನಮ್ಮ ಸಮಾಜ ಅಳಿಯದೆ ಉಳಿದೀತೆಂಬ ಭರವಸೆಯು ನಮ್ಮ ಬಗೆಯಲ್ಲಿ ಮೂಡುತ್ತಿದೆ. ಈ ರೀತಿಯಲ್ಲಿ ಧರ್ಮದ ರಸದಿಂದ ಕಸವನ್ನು ಬೇರ್ಪಡಿಸುವ ಮಹಾಕಾರ್ಯದಲ್ಲಿ ನಮ್ಮ ಸಮಕಾಲೀನರಾದ ಮಹಾತ್ಮಾಗಾಂಧಿ, ಶ್ರೀ। ಜಗದ್ಗುರು ಶಂಕರಾಚಾರ್ಯ (ಡಾ। ಕುರ್ತಕೋಟಿ) ಬ್ಯಾರಿಸ್ಟರ ಸಾವರ್ಕರ, ಪಂಡಿತ ಮದನಮೋಹನ ಮಾಳವೀಯ ಮುಂತಾದವರು ಹೇಗೆ ದುಡಿಯುತ್ತಿದ್ದಾರೆಂಬುದನ್ನು ನಾವಿಲ್ಲಿ ನಿರೂಪಿಸಬೇಕಾಗಿಲ್ಲ, ಇಂದು ನಮ್ಮ ಕಣ್ಮುಂದ ನಡೆಯುತ್ತಿರುವ ಈ ಧರ್ಮ ಜಾಗ್ರತಿಯ ಕಾರ್ಯದಿಂದ ನಮ್ಮ ಜನರಲ್ಲಿ ಸಮದರ್ಶನಭಾವ ಮೊಳೆಯುತ್ತಿದೆ. ಆದರೂ ಈಗ ಉಂಟಾಗಿರುವಷ್ಟು ಜಾಗ್ರತಿಯು ಏನೇನೂ ಸಾಲದು. ನಮ್ಮ ಜನರು ಬೇಗ ಎಚ್ಚತ್ತು ಯಾವುದು ಬೆಲೆಯುಳ್ಳದ್ದು, ಯಾವುದಕ್ಕೆ ಬೆಲೆಯೇ ಇಲ್ಲ, (ಅಮೂಲ್ಯ ಎಂಬ ಅರ್ಥವಲ್ಲ) ಎಂಬುದನ್ನು ತಿಳಿಯಬೇಕು. ಗೋತ್ರ ದುರಹಂಕಾರಗಳು ಹೃದಯ ವೈಶಾಲ್ಯಕ್ಕೆ ಎಡೆಗೊಡಬೇಕು. ಭಾರತೀಯರಾಗಿ ಹುಟ್ಟಿ, ಭಾರತೀಯರಾಗಿಯೇ ಇದ್ದು, ಒಮ್ಮುಖವಾಗಿ ಬೆಳೆದು ದುಡಿದು ಸಮಾನವಾಗಿ ದೇಶದ ಶ್ರೇಯಸನ್ನು ಪಾಲುಗೊಂಡು ಕೃತಾರ್ಥರಾಗುವುದೇ ಹಿರಿಯ ಆದರ್ಶವೆಂದು ಪ್ರತಿಯೊಬ್ಬರೂ ಭಾವಿಸಬೇಕು

### ಕೈಗೆ ಬಂದ ತುತ್ತು-ಬಾಯಿಗೆ ಬರಲಿಲ್ಲ

ಈ ಆದರ್ಶವನ್ನು ಕಂಡುಕೊಂಡೇ ಹಿಂದೆ ೧೨ನೆಯ ಶತಮಾನದಲ್ಲಿ ಬಸವೇಶ್ವರರು ಕನ್ನಡ ನಾಡಿನಿಂದ ಧರ್ಮಸಮಾಜಿಯ ಪ್ರಭಾತಗೀತೆಯನ್ನು ಹಾಡಿದರು. ಆಗ ಒಂದು ಅನುಭವ ಮಂಟಪವು ಸಿದ್ಧವಾಯಿತು. ಪ್ರಭುದೇವರು ಅದಕ್ಕೆ ಅಧ್ಯಕ್ಷತೆ ವಹಿಸಿ ಧರ್ಮಗೋಷ್ಠಿಯನ್ನು ನಡೆಸುತ್ತಿದ್ದರು, ಹಾರವನೆನ್ನದೆ ಹೊಲೆಯನೆನ್ನದೆ, ಬಡವನೆನ್ನದ ಬಲ್ಲಿದನೆನ್ನದೆ ಗಂಡಸರೆನ್ನದೆ ಹೆಂಗಸರೆನ್ನದೆ ಎಲ್ಲರೂ ಸೇರಿ ಧರ್ಮ ಸಮಸ್ಯೆ, ಸಮಾಜ ಸಮಸ್ಯೆಗಳನ್ನು ತಮ್ಮ ಜೀವನದ ಸಮಸ್ಯೆಯಂತೆ ಭಾವಿಸಿ ವಿಚಾರಮಾಡುತ್ತಿದ್ದರು. ಜನಕ್ಕೆ ಬೆಳಕನ್ನು ತೋರುತ್ತಿದ್ದರು ಈ ಒಂದು ಮಹಾಪ್ರಯತ್ನವು ಶಾಶ್ವತವಾಗಿ ತಕ್ಕರೀತಿಯಲ್ಲಿ ಮುನ್ನಡೆಯದೆ ಹೋದುದಕ್ಕಾಗಿ ನಾವು ವಿಷಾದಿಸಬೇಕಾಗಿದೆ. ಈ ಪ್ರಯತ್ನವು ಮುಂದೆ ಸ್ವಮತಾಭಿಮಾನ-ಇದು 'ದುರಭಿಮಾನ'ವಾಯಿತೇ ಹೊರತು 'ಅಭಿಮಾನ'ವಾಗಲಿಲ್ಲವೆಂದು ತೋರುತ್ತದೆ-ಅತಿಶ್ರದ್ಧೆ, ಅಂಧಶ್ರದ್ಧೆಗಳಿಂದ ಕೂಡಿರದೆ ಇದ್ದಿದ್ದರೆ ಬಸವೇಶ್ವರರ ಸಂಕಲ್ಪವು ಈ ಡೇರಿ ನಾಡಿನಲ್ಲಿ ಒಕ್ಕಟ್ಟು ಒಮ್ಮುಖವಾದ ನೆಮ್ಮದಿ ಸಾಧ್ಯವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ.

ನಮ್ಮಲ್ಲಿ "ಅಭಿಮಾನ" ಎಂಬ ಪದಕ್ಕೆ ಅರ್ಥವಿಲ್ಲದೆ ಹೋಗಿದೆ. ವೇದ, ವೈದಿಕ ಧರ್ಮ, ವೈದಿಕ ಸಂಸ್ಕೃತಿ ಮುಂತಾಗಿ ಕೊಲ್ಲುತ್ತಿದರೆ ಸಾಕು, ಕೈವಾರ, ಹೊಗಳಿಕೆಗಳು ಮೇರೆಯಿಲ್ಲದೆ ನಡೆಯುವುವು. ಆದರೆ ನಮ್ಮ ಅಭಿಮಾನಕ್ಕೆ ಪಾತ್ರವಾದ ಹಿಂದಿನ ಧರ್ಮ ಪದ್ಧತಿ, ಸಂಪ್ರದಾಯಗಳು ನಮ್ಮ ಜೀವಂತ ಸಮಾಜಕ್ಕೇ ಹೊರತು ನಿರ್ಜೀವ ಸಮಾಜಕ್ಕಲ್ಲವೆಂಬುದನ್ನು ಮರೆಯುತ್ತೇವೆ. ಯಾವುದನ್ನು ಕೈಗೊಳ್ಳಬೇಕು ಯಾವುದನ್ನು ಬಿಡಬೇಕು ಎಂದು ವಿಚಾರಮಾಡುವುದಿಲ್ಲ. ಜೀವವಿರುವವರೆಗೆ ವಿಕಾಸವು ಅನಿವಾರ್ಯ. ಸಂಕೋಲೆಗಳು ಇರುವವರೆಗೆ ವಿಕಾಸವೂ ಇಲ್ಲ ನೆಮ್ಮದಿಯೂ ಇಲ್ಲ; ಬಡಿದಾಟ, ಹೋರಾಟ ಅಶಾಂತಿಗಳು ಮಾತ್ರ ಇರುವುವು ಆದ್ದರಿಂದಲೇ, ನಮ್ಮ ಸ್ವಯಂಕೃತಾಪರಾಧದ ಫಲವಾಗಿ ನಾವಿಂದು ಪಡಬಾರದ ಪಾಡನ್ನು ಪಡುತ್ತ ಅನೈಕ್ಯತೆ, ಅಸ್ಪೃಶ್ಯತೆ ಬಡತನ, ನಿರುದ್ಯೋಗ ಮುಂತಾದ ಮಹತ್ತಾದ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಈ ಸಮಸ್ಯೆಗಳು ಹುಟ್ಟುವುದಕ್ಕೆ ನಾವೇ ಕಾರಣ. ನಾವು ಈಗದನ್ನು ಧೈರ್ಯವಾಗಿ ಇದಿರಿಸಿ ಬಿಡಿಸಬೇಕು, ಬದುಕಬೇಕು. ಬಾಳಬೇಕು.

—ಪ್ರಜಾಮತ


## ಮೂರುಗಡಿಯಾರಗಳು ಮತ್ತು ೧೨೩೫ ಆಕರ್ಷಕ ಬಹುಮಾನಗಳ ಸಹಿತ ರೂ. ೧--೨--೦ಮಾತ್ರ.

ನಮ್ಮ ಸುಗಂಧ ಪರಿಮಳ 'ಒಟ್ಟೊ ದಿಲ್ ಕುಶ್' 12 ಸೀಸೆಗಳನ್ನು ಅಥವಾ 12 ಡಬ್ಬಿ ರಿಂಗ್‌ವರ್ಮ್ ಮುಲಾಮುಗಳನ್ನು ರೂ. 1-2-0ಗೆ ಕೊಂಡುಕೊಳ್ಳುವವರಿಗೆ ಈ ಕೆಳಗೆ ಕಂಡ ಬಹುಮಾನಗಳು ಉಚಿತವಾಗಿ ಕೊಡಲಾಗುವವು

ಒಂದು ವೈಟ್ ಟೈಂ ಪೀಸ್ ಪಾಕೆಟ್ ವಾಚ್, ಪಟ್ಟಿಸಹಿತ ಒಂದು ರೋಲ್ಡ್ ಗೋಲ್ಡ್ ಗಿಲ್ಟ್ ದಮ್ಮ ರಿಸ್ಟ್‌ವಾಚ್, ಒಂದು ಜಿಲ್ಲೆಟ್ ಸೇಫ್ಟಿ ರೇಜರ್, ಒಂದು ಷೇವಿಂಗ್ ಸೋಪು ಬಿಲ್ಲೆ, ಷೇವಿಂಗ್ ಬ್ರಷ್ ಒಂದು ಕನ್ನಡಿ ಒಂದು ಸ್ನೋ ಪೌಡರು, ಒಂದು ಫೌಂಟನ್ ಪೆನ್ ಕೇಸ್, ರೋಲ್ಡ್ ಗೋಲ್ಡ್ ಬಟನ್ಸ್ ಒಂದು ಫೌಂಟನ್ ಪೆನ್, ಒಂದು ರೋಲ್ಡ್ ಗೋಲ್ಡ್ ಉಂಗುರ [illegible] ಒಂದು ಟಾರ್ಚ್ ಲೈಟು ಅಥವಾ ಒಂದು [illegible] ಕೈ ಕೊಟ್ಟರೆ ೩೬ ಘಂಟೆ ಕಾಲ ನಡೆಯುವ ೧೦ ವರುಷಗಳ ಗ್ಯಾರಂಟಿಯಾದ ಮತ್ತು ಮಜಬೂತಾದ ಸಾಮಾನುಗಳಿಂದ ಕೂಡಿರುವ ಒಂದು ಜರ್ಮನ್ ಟೈಂ ಪೀಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ರೂ ೦-೧೪-೦ ಪ್ರತ್ಯೇಕ

THE AMERICAN COMMERCIAL, STORES,
P. B. No. 12213, Calcutta.



## ಆತಂಕನಿಗ್ರಹ ಮಾತ್ರೆ

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುವು

ಕ್ರಯ: ಡಬ್ಬಿ ೧ಕ್ಕೆ ೧-೦-೦.

**ವಾಜೀಕರಣ ತೈಲ:**—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವುದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣಗೊತ್ತಾಗುತ್ತದೆ.

ಕ್ರಯ: ಸೀಸೆ ಒಂದಕ್ಕೆ ೫-೦-೦.

**ಅಮೃತಾರ್ಣವ ಲೇಹ್ಯ:**— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ಸೆಳೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು.

ಕ್ರಯ: ಡಬ್ಬಿ ೧ಕ್ಕೆ ೨-೦-೦.

**ಕಾಮಶಾಸ್ತ್ರ'** ದರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

**ಆತಂಕ ನಿಗ್ರಹ ಫಾರ್ಮಸಿ,**

೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

## ಕಿರಿಯರ ಪ್ರಪಂಚದ

**ಪುಸ್ತಕಗಳು.**

| | | | |
|---|---|---|---|
| ೧ ನಾಟಕಕಥೆಗಳು | ೦ | ೨ | ೦ |
| ೨ ಮುಂದಿನ ದೇವರು | ೦ | ೨ | ೦ |
| ೩ ಸ್ವತಂತ್ರ ಜೀವನೋಪಾಯ | ೦ | ೨ | ೬ |
| ೪ ಕುಶ-ಲವ | ೦ | ೪ | ೦ |
| ೫ ಸಂಶಯ ಪಿಶಾಚಿ | ೦ | ೬ | ೦ |
| ೬ ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ೭ ಮಧುವನ | ೧ | ೮ | ೦ |
| ೮ ವ್ಯಭಿಚಾರಿಣಿ ಯಾರು? | ೦ | ೮ | ೦ |
| ೯ ಹೆಂಡ್ತಿ ಗಂಡನಾದರೆ! | ೦ | ೪ | ೦ |
| ೧೦ ಪುರುಷವಧು! | ೦ | ೪ | ೦ |

**ಕಿರಿಯರ ಪ್ರಪಂಚ, ಉಡುಪಿ.**

## ಭಾಷಾಂತರಕಾರರು

**ದೊರೆಯದೆ ಹೋಗಾಡುವಿರೇಕೆ?**

ಇನ್ಶ್ಯೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'

*C/o* 'ಕಿರಿಯರ ಪ್ರಪಂಚ,'

ಉಡುಪಿ.

## WANTED

A clerk strong in English & Kanarese with knowledge of Typewriting and Office work. Apply stating age qualification and minimum salary reqd. The selected candidate will be required to give a security of Rs. 250/-.

'XX'

**C/o NAVAYUGA,**

UDIPI.

INSURE WITH RANJIT

**RANJIT**

BIMA Co. AMRITSAR

ವಾರ] 'ನವಯುಗ' [ಪತ್ರಿಕೆ

| | |
|---|---|
| ವಾರ್ಷಿಕ ಚಂದಾ | ರೂ. ೩—೪—೦ |
| ೬ ತಿಂಗಳಿಗೆ | ರೂ. ೧—೧೨—೦ |

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

**S. U. N. & CO.** ***Choukhamba, Benares City.***

ಮೂರು ಇನಾಮುಗಳು.

THIS MAN
OUR CUSTOMER

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀಸಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನಾಮುಣಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು-ಬುಟ್ಟಿ ಜಾಕೆಡ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗು ಸಾದಾ 16 ಮೊಳದ ಶೀರೆ 1ಕ್ಕೆ ರೂ. $1_{2}$ ರಿಂದ ರೂ. 3ರ ವರೆಗೆ, ಅರೆ ಕಡಮೆ 16 ಮೊಳ ಕ್ರೆಪರ್ ಅಂಚು ರೂ. $10\frac{1}{2}$ ಯಿಂದ ರೂ. 16, ಖಣ 1ಕ್ಕೆ ರೂ. $1\frac{1}{4}$ರಿಂದ ರೂ 10ರ ವರೆಗೆ ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

**ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ,** ಚೌಕಂಬಾ, ಬೆನಾರಿಸ್, ಕಾಶಿ

## ಎಚ್. ಎಸ್. ಮಿಯಾಜಿವಾಲಾ ಬ್ರದರ್ಸ್

**ಬೊಂಬಾಯಿ.**

ಚಿನಿವಾರ ಉಪಕರಣಗಳ ಬೊಂಬಾಯಿಯ ಸುಪ್ರಸಿದ್ಧ ಅಂಗಡಿ.

**ಕುರಂದದ ಕಡ್ಡಿ, ಕುರಂದದ ಕಾಗದ, ಪ್ರತಿಯೊಂದು ವಿಧದ ಅರ, ಸರಿಗೆಯ ಬ್ರಷ್ಷು, ತೂತುಮಾಡುವ ಗರಗಸವೇ ಮೊದಲಾದ ಚಿನಿವಾರ ಕೆಲಸಕ್ಕೆ ಬೇಕಾಗುವ ಯಾವತ್ತೂ ನವನವ ಸಾಮಾನುಗಳು ನಮ್ಮಲ್ಲಿ ಸ್ಟೋಕ್ ಇರುತ್ತವೆ.**

ಒಮ್ಮೆ ಆರ್ಡರುಕೊಟ್ಟು ಪರೀಕ್ಷಿಸಬೇಕಾಗಿ ವಿನಂತಿ

ಪಟ್ಟಣದ ಹೊರಗಣ ನಮ್ಮ ಗಿರಾಕಿಗಳ ಕುರಿತು ನಾವು ವಿಶೇಷ ಜಾಗ್ರತೆ ತೆಗೆದುಕೊಳ್ಳುತ್ತೇವೆ.

**H. S. Miyajiwala Bros.**

*114 Lohar Chawl,* BOMBAY

ಪತ್ರವ್ಯವಹಾರಗಳನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.

# WANTED

Applications are invited from energetic young men for the posts of a **TRAFFIC INSPECTOR** and an assistant **TRAFFIC INSPECTOR** carrying a salary of Rs. 25/- to 30/-, and Rs. 20/- to 25/- per month respetcively and a consolidated travelling allowance of Rs. 15/- per month each. Applicants should have studied up to VIth Form. Preference will be given to **GRADUATES**.

***Applications should be made to the following address—***

JOINT MANAGERS,

**The Combined Booking Agency, Mangalore.**

## The Coondapoor Bank, Ltd.,

Head Office.- **Coondapoor**. Branch Office.- **Brahmavar**.

**Beg to announce that a new Branch has been opened at SHANKARANARAYANA on 4-6-37.**

## ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿಜೂನ್ ತಾ.4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.

**ಚಾಲ್ತಿ ಠೇವಣಾತಿಗಳು** ಸಾ.ಶೆ.2, **ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು**ಸಾ.ಶೆ 4,

**ಕಾಯಂ ಠೇವಣಾತಿಗಳು** 3 **ತಿಂಗಳ ಬಾಬತು** ಸಾ. ಶೆ 4.

6 **ಮತ್ತು** 9 **ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ** 5%

1 **ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ** 5½%.

2 **ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ** 6% **ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ.

ಭಂಗಾರದ ಕುಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ —ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

**Halsnad Soorappayya,** ಚೆಯರ್‌ಮನ್. — **N. Sheshagiri Rao,** ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
**ಕೊಡ್ಗಿ ಬಿಲ್ಡಿಂಗ್, ಕುಂದಾಪುರ.**

---

ನೀವು ಓದಿರುವಿರಾ?

**ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?**

## ಅಡ್ಡಬಿಳಿದ ಗಿಡ್ಡಿಯ ಮದುವೆ

**(ಕ್ರಯ ಬರೇ ಒಂದಾಣೆ)**

## ಮುದುಕನ ಹೆಂಡತಿ ಥಕಥೈರಾದೆ

**(ಕ್ರಯ ಬರೇ ಒಂದಾಣೆ)**

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ
ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ
ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ
ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**

ಶ್ರೀ ಕೊರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ

ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರೆ ಆಣೆ ಸ್ಟ್ಯಾಂಪು ಕಳುಹಿಸಬೇಕು.

**NAVABHARAT BOOK DEPOT**
**UDIPI**

---

ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦—೪—೦

# ಪುರುಷವಧು

ನಕ್ಕಷ್ಟು ನಗಿಸುವ ಏಕಾಂಕ ಪ್ರಹಸನ.
ಕಿರಿಯರ ಪ್ರಪಂಚ, ಉಡುಪಿ

---

## SUPPLY AGENCY LTD,
## UDIPI

| | |
|---|---|
| Authorised Capital .... | Rs. 1,00,000/- |
| Subscribed & Paid up Capital | Rs. 29,720/- |

**ಈ ಕೆಳಗಿನ ದರದ ಬಡ್ಡಿಯಲ್ಲಿ**
ಏರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

| | | | | |
|---|---|---|---|---|
| 3 | ತಿಂಗಳಿಂದ | 6 | ತಿಂಗಳ ವರೆಗೆ | 4½% |
| 7 | ,, | 9 | ,, | 5% |
| 10 | ,, | 12 | ,, | 5½% |
| 13 | ,, | 24 | ,, | 6¼% |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು ಅಥವಾ ಪತ್ರವ್ಯವಹಾರ ಮಾಡಬಹುದು.

ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ, 1—8—1937 — ಎಸ್. ಯು. ಪಣಿಯಾಡಿ, ಮೆನೇಜಿಂಗ್ ಡೈರೆಕ್ಟರ್.

---

## ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ .... .... .. | 3 | 0 | 0 |
| ಚಂದ್ರಗುಪ್ತ .... .... .... | 1 | 0 | 0 |
| Buddhadeva .... .... .... | 0 | 8 | 0 |
| ಮಧುವನ .... .... .. | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ .... ... | 0 | 8 | 0 |
| ಸರಸ್ವತಿ .... .... .... | 0 | 8 | 0 |
| ಗೀತೆಯ ಕೈಗನ್ನಡಿ ... .... ... | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) ... | 0 | 4 | 0 |
| ಕೃಷ್ಣ ಸಂಧಾನ .... .... .... | 0 | 8 | 0 |
| ತುಳು ವ್ಯಾಕರಣ .... .... .... | 0 | 8 | 0 |
| ಸತೀ ಕಮಲೆ .... .... .... | 0 | 6 | 0 |
| ಮಿತ್ರನಾರಾಯಣ ಕತೆ .... .... | 0 | 8 | 0 |

ಇದಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

**ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.**

ತುಳುನಾಡ್ ಪ್ರೆಸ್, ಉಡುಪಿ.

---

USE

# Suvasini Agarbathies

(REGISTERED)

**SRI BHARATHA VASTU MANDIRA, UDIPI.**


Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

**Registered No. M. 3618** ಒಂದಾಣೆ **NAVAYUGA**
A Nationalist Kanarese Weekly, UDIPI, S. K.

**It will pay you to advertise in 'NAVAYUGA' The Leading Nationalist Kanarese Weekly of Karnatak**
FOR RATES OF ADVT. Etc
*APPLY TO THE MANAGER*

# ನವಯುಗ

**TO LET**
FOR RATES
APPLY TO THE
MANAGER
ಜಾಹೀರಾತಿಗೆ
ಸ್ಥಳ
ದರಕ್ಕೆ ಬರೆಯಿರಿ.

VOL. XVI-NO 51 25-8-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬಸದ ನಾಡೊಳು ತೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ ] ಉಡುಪಿ, ಗುರುವಾರ ೨೬ ಅಗೋಸ್ತು, ೧೯೩೭ [ಸಂಚಿಕೆ ೫೧

THE
# Canara Industrial & Banking
## SYNDICATE, LIMITED.
[INCORPORATED IN BRITISH INDIA]

**ESTD:] [1925**

**BRANCHES:**

1 BOMBAY
2 MANGALORE
3 UDIPI
4 KARKALA
5 KANHANGAD
6 HUNGARCUTTA
7 BRAHMAVAR
8 COONDAPOOR
9 UPPINANGADI
10 KASARGODE
11 PAYYANUR
12 TALIPARAMBA
13 CANNANORE
14 GADAG
15 HUBLI
16 BANGALORE CITY
17 SAGAR
18 BYADGI
19 KARWAR
20 HONAVAR
21 SIRSI
22 ANKOLA
23 KUMTA
24 BHATKAL
25 NANDYAL
26 PRODATTUR
27 TADPATRI
28 BELGAUM
29 HOSPET
30 ADONI
31 BELLARY

*Head Office:*
"MUKUNDA NIVAS"
UDIPI, (S. I)

*MEMBER:* RESERVE BANK OF INDIA
*MEMBER:* CLEARING HOUSE, BOMBAY

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,74,790 |
| Total resources exceed | „ 46 lakhs |

UDIPI,
*27th July 1937.*

P. A Pai Bros.,
*Managing Agents*

# ನ್ಯೂ ಕೋಮಲ ವಿಲಾಸ ಹೋಟೆಲ್
**91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ**
## ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ
ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.
ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

## ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ಸ್ ಎಂಡ್ ಕೋ ರವರ
ರಾಜ ಮಾತ್ರ, ಬಂಣಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

**ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'**

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ಇದರ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

## ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫–೦–೦**
**೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

**ಡಾ. ಎ. ಎಸ್. ಮೂರ್ತಿ,**
**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**

DIAMONDS! DIAMONDS!!

## K. Ramachandra Krishna Shet

Near Mission High School. *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

## ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

## ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ.—ಪಂಡಿತ್ ಎ. ವಿ. ಆರಮುವ್
**ಚಿಕಾಕೋಲ್**

## ಕುಶಲವ

**(ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾಗಿದೆ)**

ಹಳೆಯ ಕಥೆಯನ್ನು ಹೊಸ ಮಾದರಿಯಲ್ಲಿ ಎರಕಹೊಯ್ದ ಪೌರಾಣಿಕ ನಾಟಕವಿದು. ಬೆಲೆ ಬಹು ಕಡಿಮೆ.

**ಪುಟ ೬೨ . . . . ಬೆಲೆ ೦—೪—೦.**

ಪ್ರತಿಗಳು ಮುಖ್ಯ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುವವು. ಪಿಸ್ತೃತ ಬರೆಯಿರಿ—

**ನವಭಾರತ ಬುಕ್ ಡಿಪೊ, ಉಡುಪಿ.**

## ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಕಳೆದ ಜುಲಾಯಿ ತಿಂಗಳಲ್ಲಿ ಪ್ರಾರಂಭವಾಗಿದೆ. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮೂಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "**ಪ್ರೋಸ್‌ಪೆಕ್ಟಸ್**"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ತುಂಗಭದ್ರಾ
೧೦–೭ ೧೯೩೭.

ರಿಜಿಸ್ಟ್ರಾರ್
**ಪ್ರೇಮ ವಿದ್ಯಾಪೀಠ**

ಉಡುಪಿಯ ಆದರ್ಶ ಉಪಹಾರಗೃಹ!

## ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು! ಮಿತ ದರದಲ್ಲಿ ಊಟ ಉಪಚಾರಗಳು!**
**ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ!**
**ಸಂತೆಕಟ್ಟೆಯಿಂದ ಹೇಕೆ. ಕೋರ್ಟು ರೋಡು ಮತ್ತು ಕೋಳಿಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**
**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಕರ್ಣಾಟಕದ ಸಾಹಸ' ಕರ್ಣಾಟಕದ ಕೀರ್ತಿ!!

# ಸೇವೆ ಮತ್ತು ಗೆಲುವು

ಸೇವೆಯೇ

# ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿಯ ಪರಮಧ್ಯೇಯ

ಸೇವೆಯೇ ಅದರ ಗೆಲುವಿನ ಗುಟ್ಟು

**ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು, ಆಡಳಿತ ಮಂಡಳಿಗಿರುವ ಉತ್ಸಾಹವೇ 'ಮೈಸೂರು' ಅಭ್ಯುದಯದ ಜೀವಾಳ.**

**ಕಂಪೆನಿಯು** ಸೇವೆಗಾಗಿಯೇ ನಿರಂತರವೂ ನೂತನ ಮಾರ್ಗಗಳನ್ನು ಹುಡುಕುವುದರಲ್ಲಿಯೂ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಳ್ಳುವುದರಲ್ಲಿಯೂ ನಿರತವಾಗಿದೆ. ಕಂಪೆನಿಯು ನಾಡಿಗರೆಲ್ಲರ ಸಹಾನುಭೂತಿಯನ್ನು ಕೋರಿ, ಅವರಿಂದ ಸೇವೆಗಾಗಿ ಹೆಚ್ಚಿನ ಕರ ಬರಲೆಂದು ಆಗ್ರಹಪೂರ್ವಕವಾಗಿ ಬೇಡುವುದು.

**ಅದು ಬಾಳಿರುವುದು ಸೇವೆಯಿಂದ; ಬಾಳುವುದು ಸೇವೆಗಾಗಿಯೇ.**

— ಇಂದಿನ ಕೆಲವು ಅಂಶಗಳು—ಅಂಕೆಗಳು —

| | |
|---|---|
| ಅಧಿಕೃತ ಷೇರು ಬಂಡವಾಳ ರೂ ೩,೦೦,೦೦೦ | ಇಂಡಿಯಾ ಸರಕಾರದ ಠೇವಣಾತಿಯ ಬೆಲೆ ರೂ ೨೫,೦೦೦ |
| ಹೊರಹಾಕಿದ ಬಂಡವಾಳ ರೂ ೨,೦೦,೦೦೦ | ಜೀವ ವಿಮಾ ನಿಧಿ ರೂ ೧೬,೨೨೧-೪-೪ |
| ಚಂದಾ ಆದ ಬಂಡವಾಳ ರೂ ೧,೪೯,೬೦೦ | ಸಾಧಿಸಿದ ಉದ್ಯಮ ರೂ. ೧೦,೬೭,೪೫೩ |
| ತೆತ್ತ ಬಂಡವಾಳ ರೂ ೬೫,೦೦೦ | ಪೂರ್ಣವಾದ ಉದ್ಯಮ ರೂ ೭,೬೫,೩೪೫ |
| ಷೇರುದಾರರ ಮೀಸಲು ನಿಧಿ ರೂ. ೪೪,೯೦೦ | ಪ್ರೀಮಿಯಂ ಆದಾಯ ರೂ ೫೫,೨೦೦ |

**ಆಸ್ತಿ ರೂ. ೧ ಲಕ್ಷಕ್ಕೆ ಮೀರಿದೆ**

**ಮೂರನೇ ವರ್ಷದ ಡೈರೆಕ್ಟರುಗಳ ಅಂಗೀಕೃತವಾದ ವರದಿಯ ಕೆಲವು ಮುಖ್ಯಾಂಶಗಳು.**

(೧) ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ೨೦೦ರಷ್ಟು ಏರಿದೆ. (೨) ಹೊಸ ಉದ್ಯಮವು ಶೇಕಡ ೬೫ರಷ್ಟೂ, ಪೂರ್ಣವಾದ ಉದ್ಯಮವು ಶೇಕಡ ೫೩ರಷ್ಟೂ ಏರಿದೆ (೩) ಷೇರುಗಳು ಸರಿಬೆಲೆಗೆ ಮಾರಾಟವಾಗುತ್ತಿವೆ (೪) ಹೆಚ್ಚಿಸಿರುವ ಷೇರು ಬಂಡವಾಳಕ್ಕೆ ಚಂದಾ ಕೊಡಲು ಸಾರ್ವಜನಿಕರು ನಾನು ತಾನೆಂದು ಮುಂದೆ ಬಂದಿರುವರು (೫) ಉದ್ಯಮವು ಅಧಿಕವಾಗುತ್ತಿರುವ ಸಮಯದಲ್ಲಿಯೂ ಖರ್ಚಿನ ಪ್ರಮಾಣವು ತಗ್ಗುತ್ತಲಿದೆ (೬) ರದ್ದಾದ ಉದ್ಯಮದ ಪ್ರಮಾಣವು ತೀರ ಕಡಿಮೆಯಿದ್ದು, ಸಾಧಿಸಿರುವ ಉದ್ಯಮದ ಶ್ರೇಷ್ಠತರಗತಿಯನ್ನು ಸೂಚಿಸುತ್ತಲಿದೆ. ಹಾಗೂ ಅದರ ಶ್ರೇಷ್ಠತೆಯನ್ನು ಕಂಪೆನಿಯು ಇದುವರೆಗೆ ಭರಿಸಬೇಕಾಗಿ ಬಂದ ಕ್ಲೈಮುಗಳು ಸ್ಥಿರೀಕರಿಸುತ್ತವೆ

ಕಾರ್ಯ ಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.

'ಮೈಸೂರು' **ಆದರ್ಶ ಸಂಸ್ಥಾನದ ಆದರ್ಶ ಜೀವವಿಮಾ ಸಂಸ್ಥೆಯೆನಿಸಿ, ಮೈಸೂರು ದೇಶದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.** ಮೈಸೂರು ಸಂಸ್ಥಾನದಲ್ಲಿ ಮಾತ್ರ ಕಾರ್ಯ ನಡೆಯಿಸುತ್ತಿದ್ದಾಗ್ಯೂ ಪ್ರಥಮ ವರ್ಷದಲ್ಲಿಯೇ ಇಡೀ **ಕರ್ಣಾಟಕಕ್ಕೇ ಅಭೂತಪೂರ್ವವಾದ ಉದ್ಯಮವನ್ನು ಸಾಧಿಸಿದೆ. ಈ ಕೀರ್ತಿ ಪತಾಕೆ ಹಿಡಿದು—ಈ ಅನುಭವ ಬೆಂಬಲದಿಂದ—ಕರ್ಣಾಟಕದ ಇತರ ಭಾಗಗಳಲ್ಲೂ, ಬ್ರಿಟಿಷ್ ಇಂಡಿಯ, ಬರ್ಮಾ ಮತ್ತು ಸಿಲೋನ್‌ಗಳಲ್ಲೂ, ವಿಜಯಿಯೆನಿಸಲು ಮುಂದಡಿ ಇಟ್ಟಿದೆ.**

ಬೇಕು! ಕರ್ಣಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯ ಬರ್ಮಾ ಸಿಲೋನ್‌ಗಳ ಎಲ್ಲ ಪ್ರಾಂತ್ಯಗಳಲ್ಲೂ ಕೇಂದ್ರ ಸ್ಥಳಗಳಲ್ಲೂ ಏಜಂಟರುಗಳೂ, ಸ್ಪೆಷಲ್ ಏಜಂಟರುಗಳೂ, ಚೀಫ್ ಏಜಂಟರುಗಳೂ, ಆರ್ಗನೈಜರುಗಳೂ ಬೇಕು. ಸಂಬಳದ ಮತ್ತು ಕಮಿಷನ್ ಅಥವಾ ಇವೆರಡರ ಮೇಲೂ ಕೆಲಸಮಾಡಲವಕಾಶವುಂಟು. ಪ್ರತಿನಿಧಿಗಳಾಗಲಿಚ್ಛಿಸುವವರು ಕಂಪೆನಿಗೆ ಅವರು ಕೊಡುವ ಉದ್ಯಮದ ಭರವಸೆಯನ್ನೂ ಮತ್ತು ಅವರ ಕಾರ್ಯಕ್ಷೇತ್ರಗಳನ್ನೂ ತಿಳಿಸುವುದು.

**ಹೆಚ್ಚು ವಿವರಗಳಿಗೆ:—**

ಜನರಲ್ ಮ್ಯಾನೇಜರ್,

ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

"ನಾಗೇಶ್ವರ ಬಿಲ್ಡಿಂಗ್ಸ್", ಶ್ರೀ ನರಸಿಂಹರಾಜಾ ರೋಡ್, ಬೆಂಗಳೂರು ಸಿಟಿ.

# ಚೀನಾ ಜಾಪಾನು ಯುದ್ಧ

## ಭಯಂಕರ ವಿಮಾನ ಧಾಳಿ
## ಶಾಂಘಾಯಿಯಲ್ಲಿ ಭೀಕರ ಬೆಂಕಿ

ಇದೇ ತಾ. 17ರಲ್ಲು ಶಾಂಘಾಯಿಯಲ್ಲಿ ಪ್ರಬಲ ವೈಮಾನಿಕ ಹೋರಾಟವು ಇಡೀ ದಿನ ನಡೆದಿರುವುದು ಇತ್ತಂಡದವರೂ ತಮಗೆ ಜಯವಾಗಿರುವುದೆಂದು ಹೇಳುತ್ತಿರುವರು. ಜಾಪಾನರು ವಿಮಾನ ಮೂಲಕ ಬೋಂಬೆಸೆಯುದರಿಂದ ಶಾಂಘಾಯಿಯಲ್ಲಿ ಪೂಟುಂಗ್ ಎಂಬಲ್ಲಿ ದೊಡ್ಡ ಬೆಂಕಿಯೆದ್ದು ಬಹಳ ನಷ್ಟವಾಗಿರುವುದು. ಚೀನೀಯರೂ ವಿಮಾನ ಮೂಲಕ ಬೋಂಬೆಸೆದು ಜಾಪಾನರ ಸೇನಾನಿವಾಸಗಳಲ್ಲಿ ಬೆಂಕಿಯೆಬ್ಬಿಸಿರುವರು. ಚೀನೀಯರು ವೀರಾವೇಶದಿಂದ ಕೈ ಕೈ ಹೋರಾಡಿ ಕೆಲವೆಡೆ ಜಾಪಾನರನ್ನು ಹಿಂದಕ್ಕಟ್ಟಿರುವರು. ಚೀನೀಯರು ಜಾಪಾನೀಸ್ ನಿವಾಸಿಗಳಿರುವ ಹೋಂಗ್ ಕ್ಯೂ ಮತ್ತು ಜಾಪಾನ ಗಿರಣಿಗಳಿರುವ ಯಂಗ್‌ಟ್ಸೆಪೂ ಎಂಬ ಸ್ಥಳದ ಮೇಲೆ ಮುಂದೊತ್ತುತ್ತಿದ್ದಾರೆ. 15,000 ಜಾಪಾನ ಸ್ತ್ರೀಯರು ಮತ್ತು ಮಕ್ಕಳು ಶಾಂಘಾಯಿ ಬಿಟ್ಟು ಹೋಗಿದ್ದಾರೆ. ನಾನ್ಕೋ ಪಟ್ಟಣದಲ್ಲಿ ಚೀನೀ ಸೈನಿಕರು ಪ್ರಬಲ ವಿಜಯ ಪಡೆದಿರುವರೆಂದೂ 5000 ಮಂದಿ ಜಾಪಾನ ಸೈನಿಕರು ಕೊಲ್ಲಲ್ಪಟ್ಟಿರುವರೆಂದೂ ತಿಳಿದು ಬರುತ್ತದೆ. 1500 ಮಂದಿ ಚೀನೀಯರು ಮಾತ್ರ ಹತರಾಗಿರುವರು. ಕಳೆದ ಕೆಲವು ದಿನಗಳಲ್ಲಿ 30,000 ಸೈನಿಕರು ಜಾಪಾನಿನಿಂದ ಶಾಂಘಾಯಿಗೆ ಬಂದಿರುವರು. ಒಟ್ಟು 80,000 ಜಾಪಾನ್ ಸೈನಿಕರಿರುವರು. 2000 ಬ್ರಿಟಿಷ್ ಸ್ತ್ರೀಯರು ಮತ್ತು 60 ಮಕ್ಕಳು ಶಾಂಘಾಯಿಯಿಂದ ಹೊರಗೆ ಕಳುಹಿಸಲ್ಪಟ್ಟಿರುವರು.

ತಾ. 18ನೇ ರಾತ್ರಿಯೂ ಜಾಪಾನ್ ವಿಮಾನಗಳು ತಿಂಗಳ ಬೆಳಕಿನಲ್ಲಿ ಬೋಂಬೆಸೆದು ಹಾವಳಿ ಮಾಡಿದುವು. ಇಂದು ಸಂಜೆ ಜಾಪಾನ್ ಯುದ್ಧ ಹಡಗುಗಳು ಎಡೆಬಿಡದೆ ಗುಂಡೆಸೆದು ಕೆಲವು ಧಕ್ಕೆಗಳನ್ನು ಮುರಿದು ಹಾಕಿರುವುವು. ಇನ್ನೊಂದು ಹಪ್ತೆಯೊಳಗೆ ಚೀನೀ ಸೈನಿಕರು ಜಾಪಾನರನ್ನು ಶಾಂಘಾಯಿಯಿಂದ ಹಡಗಗಳಿಗೋಡಿಸುವರೆಂದು ಶಾಂಘಾಯಿ ಪಟ್ಟಣದ ಮೇಯರರು ಭರವಸೆ ಸೂಚಿಸಿರುವರು. ಜಾಪಾನ್ ಚೀನಿ ಯುದ್ಧದಿಂದ ಶಾಂಘಾಯಿಯ ಬ್ರಿಟಿಷ್, ಫ್ರೆಂಚ್ ಮತ್ತು ಅಮೇರಿಕಾನ ಅಂತರ ರಾಷ್ಟ್ರೀಯ ವಸಾಹತುಗಳಿಗೆ ಬಹಳ ಹಾವಳಿಯಾಗಿದೆ. ದೊಡ್ಡ ಕಂಪೆನಿಗಳ ಕಟ್ಟಡಗಳು ಕೆಲವು ಸುಟ್ಟು ಹೋಗಿವೆ. ಈ ಅಂತರ ರಾಷ್ಟ್ರೀಯ ವಸಾಹತಿಗೆ ಸೇನೆಯು ಪ್ರವೇಶಿಸಬಾರದು. ಅದರ ಪಹರೆಯನ್ನು ಅಂತರ ರಾಷ್ಟ್ರೀಯ ಪೋಲೀಸರು ನಡೆಸಬೇಕೆಂಬ ಬ್ರಿಟಿಷ್ ಸರಕಾರದ ಸೂಚನೆಗೆ ಜಾಪಾನು ಒಪ್ಪಿರುವುದಿಲ್ಲ. ಚೀನವೂ ಆಕ್ಷೇಪಿಸಿರುವುದು.

### ಚೀನೀಯರು 4 ಮೈಲು ಮುಂದೊತ್ತಿದರು.

ಶಾಂಘಾಯಿಯ ಪೂರ್ವ ಭಾಗದಲ್ಲಿ ಚೀನೀ ಸೈನಿಕರು 2 ದಿವಸಗಳಲ್ಲಿ ಅಸಾಧಾರಣ ಧೈರ್ಯದಿಂದ ಕಾದಾಡಿ 4 ಮೈಲು ಮುಂದೊತ್ತಿರುವುದರಿಂದ ಜಾಪಾನ ಸೇನೆಯು ಒಡೆದುಹೋಗುವ ಅಪಾಯವುಂಟಾಗಿದೆ. ಜಾಪಾನರು ಟಾಂಕಿ, ಮತ್ತು ಮಿಶನ್ ತೋಪುಗಳನ್ನು ಪ್ರಯೋಗಿಸಿ ಚೀನೀಯರನ್ನು ತಡೆಗಟ್ಟುತ್ತಿದ್ದಾರೆ. ಇದೇ ತಾ. 19ರಲ್ಲು ಜಾಪಾನರು ಪ್ರಥಮವಾಗಿ ಚೀನೀ ಸೈನಿಕರ ಮೇಲೆ ಬಿದ್ದು ಹೋರಾಟ ನಡೆಸಿದರು. ಅವರಿಗೆ ಜಾಪಾನಿನಿಂದ ಹೆಚ್ಚಿನ ಸೇನಾ ಸಹಾಯ ಬಂದಿರುವುದು. ಚೀನೀಯರು 6 ಜಾಪಾನ್ ಸ್ಟೀಮರುಗಳನ್ನು ಯಾಂಗ್‌ಟ್ಸೆ ನದಿಯಿಂದ ಹೊರಹೋಗದಂತೆ ತಡೆಗಟ್ಟಿ ಮತ್ತು ಇತರ ಜಾಪಾನೀ ಸೊತ್ತುಗಳಿಗೆ ಸುಮಾರು 6 ಮಿಲ್ಯ ಪವನು ನಷ್ಟವನ್ನುಂಟುಮಾಡಿದುದರ ಪ್ರತೀಕಾರಾರ್ಥವಾಗಿ ಜಾಪಾನರು ಚೀನಾ ವ್ಯಾಪಾರಿ ಹಡಗ ಕಂಪೆನಿಯ ಧಕ್ಕೆಯೊಂದನ್ನು ವಶಪಡಿಸಿಕೊಂಡಿರುವರು. 8 ಜಾಪಾನೀ ವಿಮಾನಗಳು ನಾನ್ಕಿಂಗಿನ ಮೇಲೆ ಹಾರಾಡುತ್ತಿದ್ದಾಗ ಚೀನೀಯರು ಗುಂಡೆಸೆದು ಎರಡನ್ನು ನೆಲಕ್ಕೆ ಕೆಡಹಿರುವರು. ಉಳಿದುವು ಬೋಂಬುಗಳನ್ನೆಸೆದು ಕೆಲವು ಹಳ್ಳಿಗರು ಕೊಲ್ಲಲ್ಪಟ್ಟಿರುವರು. ಆ ಮೇಲೆ ಚೀನೀ ಯುದ್ಧ ವಿಮಾನಗಳು ಅವನ್ನೋಡಿಸಿದುವು.

ಬ್ರಿಟಿಷ್ ಸರಕಾರವು ಆಂಗ್ಲೇಯ ಕಂಪೆನಿಗಳ ಕಟ್ಟಡಗಳನ್ನು ಪ್ರವೇಶಿಸಿ ಜಾಪಾನರು ಮಾಡಿರುವ ನಷ್ಟಕ್ಕಾಗಿ ಪರಿಹಾರ ದ್ರವ್ಯವನ್ನು ಕೇಳಲಿರುವುದೆಂದು ತಿಳಿದುಬರುತ್ತದೆ. ಹೊಂಕೋಂಗಿನಲ್ಲಿ ಕೋಲೆರಾ ಉಂಟಾಗಿ ಕಳೆದ ವಾರ 82 ಮಂದಿ ಕೊಲ್ಲಲ್ಪಟ್ಟಿರುತ್ತಾರೆ. ಶಾಂಘಾಯಿಯ ಪೂರ್ವ ಜಿಲ್ಲೆಗಳಲ್ಲಿದ್ದಿರುವ ಬೆಂಕಿಯು ವ್ಯಾಪಕವಾಗಿ ಹಬ್ಬಿ ಸುಮಾರು 2 ಚಚ್ಚೌಕ ಮೈಲುಗಳಷ್ಟರ ಕಟ್ಟಡಗಳೆಲ್ಲಾ ಸುಟ್ಟುಹೋಗಿರುವವು. ಶಾಂಘಾಯಿಯಲ್ಲಿ ಹಿಂದೆಂದೂ ಇಷ್ಟು ದೊಡ್ಡ ಬೆಂಕಿಯೆದ್ದುದಿಲ್ಲ. ಲೋಕದ ಅತಿ ದೊಡ್ಡ ಕಾರಾಗೃಹವಾದ ವಾರ್ಡ್ ರೋಡ್ ಜೈಲ್ ಎಂಬುದರ ಮೇಲೆ ಎರಡು ತುಪಾಕಿ ಗುಂಡು ಬಿದ್ದು 10 ಮಂದಿ ಕೊಲ್ಲಲ್ಪಟ್ಟು ಅನೇಕರು ಗಾಯಗೊಂಡಿರುವರು. ಇಲ್ಲಿಂದ 7000 ಮಂದಿ ಕೈದಿಗಳನ್ನು ಹೊರಗೊಯ್ಯುವ ಏರ್ಪಾಡು ನಡೆದಿದೆ. ಇದೇ ತಾ. 21ರಲ್ಲು ಕೂಡಾ ಜಾಪಾನ ಯುದ್ಧ ವಿಮಾನ ಮತ್ತು ಹಡಗಗಳು ಎಡೆಬಿಡದೆ ಚೀನೀ ಸೇನಾ ಸ್ಥಾನಗಳ ಮೇಲೆ ಬೋಂಬು ಮತ್ತು ಗುಂಡೆಸೆಯುತ್ತಿರುವವು. ಜಾಪಾನರಿಗೆ ಯುದ್ಧ ಹಡಗಗಳ ಸಹಾಯವಿರುವುದರಿಂದ ಅಷ್ಟೊಂದು ಅಪಾಯವೇನೂ ಆಗುವ ಹಾಗಿಲ್ಲೆಂದು ನಂಬಲಾಗಿದೆ. ಚೀನೀಯರು ವಿಮಾನ ಮೂಲಕ ಬೋಂಬೆಸೆದು ಜಾಪಾನ ಹಡಗಗಳನ್ನು ದೂರಕ್ಕಟ್ಟಿದರೆ ಮಾತ್ರ ಜಾಪಾನೀ ಸೇನೆಗೆ ಅಪಾಯವುಂಟಾಗುವುದು.

ಇದೇ ತಾ. 21ರಲ್ಲು ಚೀನೀ ಮತ್ತು ಜಾಪಾನೀ ವಿಮಾನಗಳಿಗೆ ನಡೆದ ಆಕಾಶ ಯುದ್ಧದಲ್ಲಿ 4 ಜಾಪಾನೀ ವಿಮಾನಗಳು ನೆಲಕ್ಕೆ ಕೆಡಹಲ್ಪಟ್ಟಿರುವವು.

ಚೀನೀ ಸೇನೆಯು ಒಂದೇ ಒಂದು ಹಪ್ತೆ ಮುಂದಾಗಿ ಶಾಂಘಾಯಿಯನ್ನು ಮುತ್ತುವುದಾದರೆ ಜಾಪಾನರು ಇಷ್ಟರಲ್ಲೇ ತಮ್ಮ ಹಡಗಗಳಿಗೋಡಿಸಲ್ಪಡುತ್ತಿದ್ದರು. ಚೀನೀಯರು ವಿಳಂಬ ಮಾಡಿದುದು ತಪ್ಪಾಯಿತೆಂದು ಸಮರ ತಜ್ಞರ ಅಭಿಮತ. ಶಾಂಘಾಯಿ ಪಟ್ಟಣದಲ್ಲಿ 10,000 ಜಾಪಾನೀ ಮತ್ತು 50,000 ಚೀನೀ ಸೈನಿಕರಿರುತ್ತಾರೆ. ಜಾಪಾನರು ಯಾವ ತಡೆಯೂ ಇಲ್ಲದೆ ಯುದ್ಧ ನಾವೆಗಳ ಮೂಲಕ ಸೇನೆಯನ್ನು ತರಿಸುತ್ತಿದ್ದಾರೆ. ಆದರೆ ರೈಲ್ವೇ ಲೈನುಗಳ ಮೇಲೆ ಜಾಪಾನರು ಎಡೆಬಿಡದೆ ಬೋಂಬೆಸೆಯುತ್ತಿರುವುದರಿಂದ ಚೀನೀಯರಿಗೆ ಹೆಚ್ಚಿನ ಸೇನಾಸಹಾಯ ಬರಲು ತೊಡಕಾಗಿದೆ.

ಚೀನೀ ಸೇನಾನಾಯಕರಾದ ಚೇಂಗ್ ಜಿ. ಚೂಂಗರನ್ನು ರ್ಯೂಟರ್ ಪ್ರತಿನಿಧಿಯು ಭೇಟಿ ಮಾಡಿದಾಗ ಅವರು, ಶಾಂಘಾಯಿಯಲ್ಲಿ ಚೀನೀಯರು ಬೇಗನೆ ಪ್ರಬಲ ವಿಜಯಪಡೆದು ಹೋರಾಟವು ನಿಲ್ಲಿಸಲ್ಪಡುವುದೆಂದು ತನಗೆ ವಿಶ್ವಾಸವಿದೆ. ಸಾರ್ವತ್ರಿಕವಾದ ಯುದ್ಧ ನಡೆದರೆ ಚೀನೀಯರು ಕೆಲವು ವರ್ಷಗಳ ತನಕ ಹೋರಾಡಲು ಸಿದ್ಧರಿರುವರೆಂದು ಅಭಿಪ್ರಾಯವಿತ್ತಿರುವರು. ಜಾಪಾನರು ಯುದ್ಧ ಹಡಗಗಳ ಮೂಲಕ ಸೇನೆಯನ್ನಿಳಿಸಲು ಉಪಯೋಗಿಸುತ್ತಿದ್ದ ಧಕ್ಕೆಯನ್ನು ಚೀನೀಯರು ಸ್ಫೋಟಗೊಳಿಸಿರುವರು. ಅವರು ಹಡಗಗಳ ಮೂಲಕ ಸೇನೆ ತಂದಿಳಿಸದಂತೆ ಚೀನೀ ವಿಮಾನಗಳು ಬೋಂಬೆಸೆಯುತ್ತಿರುವವು. ಜಾಪಾನೀ ವಿಮಾನಗಳು ಚೀನೀ ರೈಲ್ವೆಯ ಮೇಲೆ ಬೋಂಬೆಸೆಯುವವು. ಇದೇ ತಾ. 14ರಿಂದ 16ರ ವರೆಗೆ 30 ಜಾಪಾನೀ ವಿಮಾನಗಳು ನೆಲಕ್ಕೆ ಕೆಡಹಲ್ಪಟ್ಟಿರುವವೆಂದೂ, ಎಲ್ಲಾ ಕಡೆಗಳಲ್ಲೂ ಚೀನೀಯರೇ ವಿಜಯಿಗಳಾಗಿ ಮುಂದೊತ್ತಿರುವರೆಂದೂ ಚೀನೀ ಸರಕಾರದ ಪ್ರಕಟಣೆ. ಪೈಪಿಂಗ್' ಜೇಂಗ್‌ಸಿಯುಂಟಿಯನ್ ಪ್ರದೇಶಗಳಲ್ಲಿಯೂ ಪ್ರಬಲ ಹೋರಾಟ ನಡೆಯುತ್ತಿರುವುದು.


THE BOMBAY LIFE ASSURANCE Co., LTD.
ESTD 1908
Church Gate Street, Fort - - BOMBAY.
SPECIAL FEATURES.
1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.
It pays you to represent this Company.
Wanted Agents in unrepresented parts.
*Apply to:—*
KOCHIKAR BROTHERS,
*Madras Branch Secretaries.*

BRANCHES AT:

| | | |
|---|---|---|
| P B 337 Mount Road, Madras | Visveswarapuram Circle, Bangalore City. | Soumyalayam Puthiyara, Calicut. |
| Car Street, Mangalore. | Udipi, S India | Charni Road, Bombay No 4. |

INSPECTORATE OFFICE AT:
1. Ottapalam, Malabar District. 2 Central Station Road, Trivandrum.

EVIDENCE OF SECURITY & STABILITY
FIGURES THAT SPEAK FOR THEMSELVES
TOTAL ASSETS Rs. 80,66,600

Summary of 1935 Accounts

| | |
|---|---|
| Total Assets Over . . | Rs. 80,00,000 |
| Life Funds Over ... ... | Rs. 68,00,000 |
| Premium Income Over . . | Rs 22,54,000 |
| Interest Income ... ... | Rs. 3,16,000 |
| Claims Paid ... ... ... | Rs. 5,75,000 |

Total Claims paid Over Rs. 38,50,000
Total Business in Force Over Rs. 4,4251.200,
TOTAL BUSINESS IN FORCE Rs. 4,42,51,200

# ಉಡುಪಿಯಲ್ಲಿ ಶ್ರೀಮತಿ ಕಮಲಾ ದೇವಿಯವರು

## ಹಳ್ಳಿಗಳಲ್ಲಿ ಕಾಂಗ್ರೆಸ್ ಕಾರ್ಯ ಪ್ರಚಾರ, ಬೇರೆ ಬೇರೆ ವರ್ಗದ ಕೆಲಸಗಾರರ ಸಂಘಗಳ ಸ್ಥಾಪನೆಯ ಪ್ರಯತ್ನ.

## ಸಮತಾವಾದಿ ಪಕ್ಷ ಸ್ಥಾಪನೆ.

ಶ್ರೀಮತಿ ಕಮಲಾದೇವಿಯವರು ಮಂಗಳೂರಿನ ಬೀಡಿ ಕೆಲಸಗಾರರ ಮತ್ತು ಛಾಪಖಾನೆ ಕೆಲಸಗಾರರ ಸಂಘಗಳ ಸೆಕ್ರೆಟರಿಗಳೊಂದಿಗೆ ಇದೇ ತಾ. 19ನೇ ಗುರುವಾರ ಸಂಜೆ ಉಡುಪಿಗೆ ಚಿತ್ತೈಸಿದರು. ಮರುದಿನ ಬೆಳಗ್ಗೆ ಶ್ರೀಗಳಾದ ಪಾಂಗಾಳ ಮಂಜುನಾಥನಾಯ್ಕ, ಕೆ. ಕೆ ಶೆಟ್ಟಿ ಮತ್ತು ಶ್ರೀ ವಾಸುದೇವರಾಯರೊಂದಿಗೆ ಕಟಪಾಡಿಗೆ ಹೋಗಿ ಅಲ್ಲಿಯ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಮಧ್ವನವನೇಂದ್ರ ಔಷಧಾಲಯದ ಬಳಿ ಭಾಷಣವಿತ್ತರು. ಶ್ರೀ ಕೆ. ಕೆ. ಶೆಟ್ಟರು ಶ್ರೀಮತಿಯವರ ಪರಿಚಯ ಮಾಡಿಕೊಟ್ಟರು. ಶ್ರೀಮತಿಯವರು ಕಾಂಗ್ರೆಸನ್ನು ಬಡಬಗ್ಗರ, ಮಜೂರರ ಮತ್ತು ಬೇಸಾಯಗಾರರ ಸಂಸ್ಥೆಯನ್ನಾಗಿ ಮಾಡಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಂಡರು. ಆ ಮೇಲೆ ಶ್ರೀ ಲಕ್ಷ್ಮೀನಾರಾಯಣ ನಾಯ್ಕರೇ ಮೊದಲಾದವರೊಂದಿಗೆ ಶಿರ್ವಕ್ಕೆ ತೆರಳಿ ಅಲ್ಲಿ ಕೆಲವರೊಡನೆ ಮಾತಾಡಿ ಕಟಪಾಡಿ ನಾಯ್ಕರ ಮನೆಯಲ್ಲಿ ಭೋಜನ ತೀರಿಸಿ ಅಪರಾಹ್ನ ಘಂಟೆ 3ಕ್ಕೆ ಉದ್ಯಾವರಕ್ಕೆ ಬಂದರು. ಉದ್ಯಾವರದ ಚರ್ಚ್ ಸ್ಕೂಲಿನ ವಠಾರದಲ್ಲಿ ಶ್ರೀಮತಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆದು ಕೇಂದ್ರ ಕಾಂಗ್ರೆಸ್ ಕಮಿಟಿಯೊಂದು ಸ್ಥಾಪಿಸಲ್ಪಟ್ಟಿತು. ಶ್ರೀಗಳಾದ ಕೆ. ಕೆ. ಶೆಟ್ರು ಮತ್ತು ಪಾಂಗಾಳ ಮಂಜುನಾಥನಾಯ್ಕರು ಕಾಂಗ್ರೆಸ್ ಕಮಿಟಿಯ ಆವಶ್ಯಕತೆ ಮತ್ತು ಅದು ಮಾಡಬೇಕಾದ ಕೆಲಸಗಳನ್ನು ವಿವರಿಸಿ ಹೇಳಿದರು. ಶ್ರೀಮತಿ ಕಮಲಾದೇವಿಯವರು, ಕಾಂಗ್ರೆಸಿಗೆ ಜನ ಸಾಮಾನ್ಯರು ಬೆಂಬಲವಿತ್ತು ಮಂತ್ರಿಗಳ ಹಸ್ತವನ್ನು ಬಲಪಡಿಸುವ ಅವಶ್ಯಕತೆಯ ಕುರಿತು ಮಾತಾಡಿದರು.

### ಉಡುಪಿಯಲ್ಲಿ ಸಾರ್ವಜನಿಕ ಸಭೆ

ಶುಕ್ರವಾರ ಸಂಜೆ ಘಂಟೆ 6ಕ್ಕೆ ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ದೊಡ್ಡ ಸಾರ್ವಜನಿಕ ಸಭೆಯೊಂದು ನಡೆಯಿತು. ಜನರು ಕಿಕ್ಕಿರಿದು ಸೆರೆದಿದ್ದರು. ಶ್ರೀ. ಕೆ. ಕೆ. ಶೆಟ್ರು ಶ್ರೀಮತಿ ಕಮಲಾದೇವಿಯರ ತ್ಯಾಗ, ಸಾಹಸ ಮತ್ತು ಬಡ ಜನಸೇವಾ ತತ್ಪರತೆಯನ್ನು ಹೊಗಳಿ ಮಾತಾಡಿದರು. ಆ ಮೇಲೆ ಶ್ರೀಮತಿಯವರು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಉಜ್ವಲ ಭಾಷಣವಿತ್ತರು. ಇಂಡಿಯಾ ಆಕ್ಟಿನ ದೋಷಗಳನ್ನು ಎತ್ತಿಹೇಳಿ, ಅಪಾರ ಸೇನಾ ವೆಚ್ಚ, ಸಿವಿಲ್ ಸರ್ವಿಸಿನ ವೆಚ್ಚವನ್ನೆಲ್ಲಾ ಹಿಂದೀಯರಿಗೆ ಮುಟ್ಟುವ ಸ್ವಾತಂತ್ರ್ಯವಿಲ್ಲ. ಸಿವಿಲ್ ಸರ್ವಿಸಿನವರು ಇಚ್ಛಾನುಸಾರ ನಡೆಯಬಹುದಾಗಿದೆ. ಪ್ರಾಂತಿಕ ಸ್ವಾತಂತ್ರ್ಯವೂ ಬರಿಯ ಕಣ್ಣುಕಟ್ಟು. ಕಾಂಗ್ರೆಸಿನವರು ಮಂತ್ರಿಗಳಾದುದರಿಂದ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಅಂತಹ ಮಾರ್ಪಾಟವೇನೂ ಆಗಿರುವುದಿಲ್ಲ. ಅವರಿಂದೇನಾದರೂ ಪ್ರಯೋಜನ ಪಡೆಯಬೇಕಾದರೆ ಜನರು ತೀವ್ರವಾಗಿ ಚಳವಳಿಸಿ ತಮ್ಮ ಸಂಕಷ್ಟಗಳನ್ನವರಿಗೆ ತಿಳಿಸಬೇಕು. ಸಂಘಟಿತರಾಗಿ ಕೆಲಸಮಾಡಬೇಕು. ಕಾಂಗ್ರೆಸಿಗೆ ಜನ ಸಾಮಾನ್ಯರ ಕೃಷಿಕರ, ಮಜೂರರ ಮತ್ತು ಬಡಬಗ್ಗರ ಬೆಂಬಲ ದೊರೆಯಬೇಕು. ಅದು ಕೇವಲ ಮಧ್ಯ ತರಗತಿಯವರ ಸೂತ್ರ ಚಾಲನೆಯ ಸಂಸ್ಥೆಯಾಗಿರಬಾರದು. ಹಳ್ಳಿಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಗಳು ಸ್ಥಾಪಿಸಲ್ಪಡಬೇಕು ಪಟ್ಟಣಗಳಲ್ಲಿ ಮಜೂರರ ಸಂಘಗಳು ಸಂಘಟಿತವಾಗಬೇಕು. ಅವೆಲ್ಲಾ ಕಾಂಗ್ರೆಸನ್ನು ಬಲಗೊಳಿಸಬೇಕು. ಸಂಪೂರ್ಣ ಸ್ವರಾಜ್ಯವೆಂದರೆ ಕೇವಲ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಅಧಿಕಾರವನ್ನು ಕಿತ್ತುಹಾಕುವುದಲ್ಲ. ಬಿಳಿಯ ನೌಕರ ಶಾಹಿಯ ಬದಲಿಗೆ ಕರಿಯವರದನ್ನು ಸ್ಥಾಪಿಸುವುದಲ್ಲ. ಬಹುಮತದ ರಾಜ್ಯಭಾರವನ್ನು ಸ್ಥಾಪಿಸುವುದು. ಈಗಣ ಅನ್ಯಾಯವಾದ, ಶ್ರೀಮಂತ ಪಕ್ಷಪಾತಿಯಾದ ಸಮಾಜ ವ್ಯವಸ್ಥೆಯನ್ನು ತೆಗೆದುಹಾಕಿ, ಸಮತಾವಾದದ ಮೇರೆಗಿನ ಸಮಾಜರಚನೆ ಮಾಡುವುದು. ಕಾಂಗ್ರೆಸಿನೊಳಗೆ ಶ್ರೀಮಂತರೂ, ಜಮೀನುದಾರರೂ, ಕೃಷಿಕರೂ ಮಜೂರರೂ ಎಲ್ಲವರೂ ಸೇರಿರುವರು. ಅದು ಎಲ್ಲಾ ಜಾತಿಯ ಜನರನ್ನೊಳಗೊಂಡ ರಾಷ್ಟ್ರೀಯ ಸಂಸ್ಥೆ. ಅದಕ್ಕೆ ಜನ ಸಾಮಾನ್ಯರ ಬೆಂಬಲವಿರುವುದಾದರೂ ಅದರ ಮುಂದಾಳುತ್ವವು ಮಧ್ಯತರಗತಿಯವರ ಕೈಯಲ್ಲಿದೆ. ಇದು ತಪ್ಪಬೇಕು. ಜನ ಸಾಮಾನ್ಯರಲ್ಲಿ ರಾಜಕೀಯ ಮತ್ತು ಆತ್ಮ ಜಾಗೃತಿಯುಂಟಾಗಬೇಕು. ಅವರಿಂದ ಮುಂದಾಳುತ್ವ ಬರಬೇಕು. ಇದಕ್ಕಾಗಿ ಕಾಂಗ್ರೆಸಿನೊಳಗೆ, ಕಾಂಗ್ರೆಸಿನ ಶಿಸ್ತು ನಿಯಮಗಳಿಗೆ ಯಾವ ರೀತಿಯಲ್ಲಿಯೂ ವಿರೋಧ ಮಾಡದೆ, ಕಾಂಗ್ರೆಸನ್ನು ಬಲಗೊಳಿಸುವ ಉದ್ದೇಶದಿಂದ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ಸ್ಥಾಪಿಸಲ್ಪಟ್ಟಿರುವುದೆಂಬುದೇ ಶ್ರೀಮತಿ ಕಮಲಾದೇವಿಯರ ಭಾಷಣದ ಸಾರವಾಗಿತ್ತು.

ತಾ. 21ನೇ ಶನಿವಾರ ಅಪರಾಹ್ನ ಶ್ರೀ ಪಾಂಗಾಳ ಮಂಜುನಾಥ ನಾಯ್ಕರಲ್ಲಿ ಉಡುಪಿಯ ಕೆಲವಂದಿ ತರುಣರು ಶ್ರೀಮತಿಯವರನ್ನು ಕಂಡಾಗ ಶ್ರೀಮತಿಯವರು, ಬ್ರಿಟಿಷ್ ಸಾಮ್ರಾಜ್ಯ ಶಾಹಿಯಿಂದುಂಟಾಗಿರುವ ಹಾನಿ, ಈಗಣ ಸಮಾಜದ ಅವ್ಯವಸ್ಥೆ, ಭಂಡವಾಳ ಮತ್ತು ಜಮೀನ್ದಾರ ಶಾಹಿಯಿಂದಾಗುವ ದುಷ್ಪರಿಣಾಮಗಳನ್ನು ವಿವರಿಸಿ ಹೊಸ ಸಮಾಜ ವ್ಯವಸ್ಥೆಯು ಎಷ್ಟೊಂದು ಅವಶ್ಯವೆಂಬುದನ್ನು ಮನಗಾಣಿಸಿದರು. ಆ ಮೇಲೆ ಸಂಜೆ ಘಂಟೆ 4ಕ್ಕೆ ಮಣಿಪಾಲವನ್ನು ಸಂದರ್ಶಿಸಿ ಶ್ರೀ. ಪಿ. ಎ. ಪೈಯವರಿಂದ ಉಪಾಹಾರ ಪಡೆದು ಪಾರ್ಕಳಕ್ಕೆ ಹೋದರು. ಅಲ್ಲಿ ಶ್ರೀಮತಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು. ಶ್ರೀ. ಕೆ. ಕೆ. ಶೆಟ್ರು, ಈಗಣ ಮಾರ್ಪಟಿತ ರಾಜಕೀಯ ಪರಿಸ್ಥಿತಿ. ಜನರು ಕಾಂಗ್ರೆಸನ್ನು ಬಲಪಡಿಸುವ ಆವಶ್ಯಕತೆಯ ಕುರಿತು ಮಾತಾಡಿದರು. ಆ ಮೇಲೆ ಶ್ರೀಮತಿಯವರು, ಕಾಂಗ್ರೆಸು ನಿಜವಾಗಿಯೂ ಬಡಬಗ್ಗರ ಸಂಸ್ಥೆಯಾಗಬೇಕಾದರೆ ಅದರ ಕಾರ್ಯಕಲಾಪಗಳಲ್ಲಿ ಬಡಬಗ್ಗರು ಭಾಗಿಯಾಗಬೇಕು. ಹಳ್ಳಿಹಳ್ಳಿಗಳ ಜನರು ಅದಕ್ಕೆ ಸೇರಿ ಆ ಮೂಲಕ ತಮ್ಮ ದುಃಖ ಸಂಕಷ್ಟಗಳನ್ನು ನಿವಾರಿಸಿಕೊಳ್ಳಬೇಕೆಂದು ತುಳುವಿನಲ್ಲಿ ಭಾಷಣ ಮಾಡಿದರು. ಆ ನೇಲೆ ಪರ್ಕಳದಲ್ಲಿ ಒಂದು ಕೇಂದ್ರ ಕಮಿಟಿಯು ಸ್ಥಾಪಿಸಲ್ಪಟ್ಟಿತು. ಶ್ರೀ ಬಾಳ್ಕಟ್ಟ ಕೃಷ್ಣಯ ಹೆಗ್ಡೆಯವರು ಶ್ರೀಮತಿಯವರಿಗೆ ವಂದನೆಯನ್ನರ್ಪಿಸಿದರು.

ಸಂಜೆ ಘಂಟೆ 5-30ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಸ್ಥಾಪನೆ ಮತ್ತು ಅದರ ಉದ್ದೇಶಗಳ ಕುರಿತು ದೀರ್ಘ ಭಾಷಣವಿತ್ತರು. ತೀವ್ರಗಾಮಿ ಪಕ್ಷವೊಂದು ಯಾವಾಗಲೂ ಇರಲೇಬೇಕು. ಅದರಿಂದ ಕಾರ್ಯವು ಜಾಗ್ರತೆಯಾಗಿ ನಡೆಯುವಂತಾಗುವುದು, ಕಾಂಗ್ರೆಸು ಮಂದಗಾಮಿಗಳ ಪಕ್ಷವಿದ್ದಾಗ ಲೋಕಮಾನ್ಯ ತಿಲಕರು ಅದಕ್ಕೆ ಸ್ವಲ್ಪ ತೀವ್ರಗಾಮಿ ಸ್ವರೂಪವಿತ್ತರು. ಆಗ ಅವರು ಕಾಂಗ್ರೆಸಿನೊಳಗೆ ಒಡಕುಂಟುಮಾಡುವರೆಂಬ ಕೂಗೆಬ್ಬಿಸಲ್ಪಟ್ಟಿತು. ಆ ಮೇಲೆ ಗಾಂಧಿಜಿಯವರು ಕಾಂಗ್ರೆಸಿನ ಸ್ವರೂಪವನ್ನೇ ಮಾರ್ಪಡಿಸಿ ದೊಡ್ಡ ಕ್ರಾಂತಿಯನ್ನುಂಟುಮಾಡಿದಾಗ ಎಷ್ಟು ಮಂದಿ ಅವರನ್ನು ಹುಚ್ಚ, ಭ್ರಾಂತರೆಂದು ಜೈದು ಭಂಗಿಸಲಿಲ್ಲ! ಹಾಗೆಯೇ ಈಗ ಕಾಂಗ್ರೆಸಿನೊಳಗೆ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ಸ್ಥಾಪಿತವಾಗಿರುವುದರಿಂದ ಒಡಕುಂಟಾಗುವದೆಂಬ ಕೂಗೆಬ್ಬಿಸುವವರಿದ್ದಾರೆ. ಆದರೆ ಅದು ಮೂರ್ಖತನ. 1934ರಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ಸ್ಥಾಪಿತವಾದಂದಿನಿಂದ ಅದು ರಾಷ್ಟ್ರಪತಿ ಪಂಡಿತ ಜವಾಹರಲಾಲರ ಸಹಾಯದಿಂದ ಬಹಳ ಮಹತ್ವದ ಕೆಲವು ಠರಾವುಗಳನ್ನು ಕಾಂಗ್ರೆಸು ಸ್ವೀಕರಿಸುವಂತೆ ಮಾಡಿದೆ. ಕಾಂಗ್ರೆಸಿನೊಳಗೆ ಮಜೂರರೂ ಕೃಷಿಕರೂ ಸೇರುವಂತೆ ಅದರ ಕಾರ್ಯಕ್ಷೇತ್ರವನ್ನು ವ್ಯಾಪನಗೊಳಿಸಿದೆ ಕಾಂಗ್ರೆಸು ಇದರಿಂದ ಬಲಗೊಂಡಿದೆಯೆಂದೇ ಶ್ರೀಮತಿಯವರ ಭಾಷಣದ ಸಾರಾಂಶವಿತ್ತು.

ಕೆಲವಂದಿ ತರುಣರ ಅಪೇಕ್ಷೆಯಂತೆ ಶ್ರೀಮತಿಯವರು ಶನಿವಾರ ರಾತ್ರಿ ಘಂಟೆ 9-30ರಿಂದ 12ರ ವರೆಗೆ ಇಲ್ಲಿಯ ಐಡೀಯಲ್ ಸ್ಟೋರಿನ ಮಾಳಿಗೆಯಲ್ಲಿ ಸಮತಾವಾದದ ಕುರಿತು ಬೋಧಪರವಾಗಿ ಮಾತಾಡಿದರು. ಗಾಂಧಿಸ್ಮ್ ಮತ್ತು ಸೋಶಿಯಲಿಸ್ಮ್, ಸೋಶಿಯಲಿಸ್ಮ್ ಮತ್ತು ಕಮ್ಯೂನಿಸ್ಮ್ ಇವುಗಳೊಳಗಣ, ಮತ್ತು ಶ್ರೀ ಎಮ್. ಎನ್ ರಾಯಿಗಳಿಗೂ ಕಾಂಗ್ರೆಸ್ ಸೋಶಿಯಲಿಸ್ಟರಿಗೂ ಇರುವ ಭೇದವನ್ನು ವಿವರಿಸಿ ಹೇಳಿದರು. ಇನ್ನೂ ಕೆಲವು ಪ್ರಶ್ನೆಗಳಿಗೆ ಉತ್ತರವಿತ್ತರು. ಆ ಮೇಲೆ ಸುಮಾರು 20ಮಂದಿ ತರುಣರು ಮೆಂಬರರಾಗಿ ಸೇರಿ ಒಂದು ಸೋಶಿಯಲಿಸ್ಟ್ ತಂಡವನ್ನು ರಚಿಸಲಾಯಿತು. ಈ ತಂಡದವರೊಂದು ಸ್ಟಡಿ ಕ್ಲಾಸನ್ನು ನಡಿಸಬೇಕೆಂದೂ ನಿರ್ಣಯವಾಯಿತು. ಶ್ರೀ. ಎಲ್. ಎಸ್ ನಾಯ್ಕರು ಶ್ರೀಮತಿಯವರು ಕೈಕೊಂಡ ಪರಿಶ್ರಮಕ್ಕಾಗಿ ಆಭಾರ ಸೂಚಿಸಿದರು. ಈ ನಡುವೆ ಶ್ರೀಮತಿಯವರು ನವಯುಗ ಆಫೀಸಿನಲ್ಲಿ ಕೆಲವಂದಿ ಬೀಡಿ ಕೆಲಸಗಾರರೊಡನೆಯೂ, ಛಾಪಖಾನೆ ಕೆಲಸಗಾರರೊಡನೆಯೂ ಮಾತಾಡಿ ಯೂನಿಯನುಗಳನ್ನು ಸ್ಥಾಪಿಸುವ ಆವಶ್ಯಕತೆಯನ್ನು ಮನಗಾಣಿಸಿದರು.

ಆದಿತ್ಯವಾರ ಬೆಳಿಗ್ಗೆ ಶ್ರೀಮತಿ ಕಮಲಾದೇವಿಯವರು ಶ್ರೀಗಳಾದ ನಗರ ರಾಮರಾವ್, ಕೊಚ್ಚಿಕಾರ್ ಪಾಂಡುರಂಗಪೈ. ಪಿ. ಉಪೇಂದ್ರನಾಯ್ಕ, ಡಾಕ್ಟರ್ ಮಾಧವಪೈ ಮೊದಲಾದವರಲ್ಲಿಗೆ ಹೋಗಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ನಡಿಸುವ, ಮಜೂರ ಸಂಘ, ರಾತ್ರಿಶಾಲೆ, ಸ್ಟಡಿಕ್ಲಾಸ್ ಮೊದಲಾದುವುಗಳಿಗಾಗಿ ಹಣ ಸಂಗ್ರಹಿಸಿದರು. ಶ್ರೀಗಳಾದ ಕೊಚ್ಚಿಕಾರ್ ಪಾಂಡುರಂಗ ಪೈಗಳು ರೂ 20, ಕೆ. ಅನಂತ ಶೆಟ್ರು ರೂ. 10, ಬಾಳ್ಕಟ್ಟ ಕೃಷ್ಣಯ ಹೆಗ್ಡೆಯರು ರೂ. 3, ನಗರ ರಾಮರಾಯರು ರೂ. 1 ಸಹಾಯಮಾಡಿದರು.

ಈ ನಡುವೆ ತುಳುನಾಡ್ ಪ್ರೆಸ್ಸಿಗೆ ಹೋಗಿ ಅಲ್ಲಿಯ ಕೆಲಸಗಾರರಿಗೆಲ್ಲಾ, ಛಾಪಖಾನೆ ಕೆಲಸಗಾರರ ಸಂಘವನ್ನು ಸ್ಥಾಪಿಸುವ ಆವಶ್ಯಕತೆಯನ್ನು ವಿವರಿಸಿದರು. ಶ್ರೀ ಪಣಿಯಾಡಿಯವರು, ಪ್ರೆಸ್ ಕೆಲಸಗಾರರ ಸಂಘವೊಂದನ್ನು ಸ್ಥಾಪಿಸುವುದು ಅತ್ಯಾವಶ್ಯಕವೆಂದು ಹೇಳಿ ಶ್ರೀಮತಿಯವರಿಗೆ ಆಭಾರ ಸೂಚಿಸಿದರು. (ಕ್ರಮಶಃ)

ಅತ್ಯುತ್ತಮ ಪೇನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ
'ಕುಶಾ' (ರಿಜಿಸ್ಟರ್ಡ್) ಫೌಂಟಿನ ಪೇನಿನ 'ಶಾಯಿ'
'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ'
ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ
*Sole disributtors:*—V. V Kamath & Bros. Mangalore.

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಪರ್ಯಂತದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
**ಮಂಗಳೂರು, ದ. ಕ.**

---

# ಕ್ರೌನ ರಬ್ಬರ ಸ್ಟಾಂಪ ಕಂಪೆನಿ

ಸ್ಥಾಪನೆ: 1926

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಮೇಡಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

**ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.**

**ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.**

---

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರಸಂಘದ ಕೆಲವುಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

**ಹಂಪನಕಟ್ಟೆ, ಮಂಗಳೂರು.**

**ಇಲ್ಲಿ**

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

**ಮುದ್ದಾದ ಮುದ್ರಣ ಕೆಲಸವನ್ನು ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಗ್ ಕೆಲಸವನ್ನು ಕೈಕೊಳ್ಳಲಾಗುತ್ತದೆ.**

ಈಗ ದರವನ್ನು ಶೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

*Manager,*
**KANARA PRINTING WORKS,**
**Hampankatte, Mangalore.**

---

# ಗಿಡಗಳು ಮತ್ತು ಬೀಜಗಳು

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ ಗಿಡಗಳು, ಬೀಜಗಳು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ.

**ಡಿ. ಗುರಪ್ಪ ಅಂಡ್ ಸನ್ಸ್**
ಗಿಡ, ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್ ದೊಡ್ಡ ಮಾವಳ್ಳಿ,
**ಬೆಂಗಳೂರು ಸಿಟಿ.**

---

## ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೊಲೆರಾ ಪಿಲ್ಸ್**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

**ಭೈರವ ಮಾತ್ರೆಗಳು**
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರಿ, ಗೋಲ್ಡ್‌ಮೆಡಲ್ದ್ ಫಿಜಿಶಿಯನ್.

---

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ**

# 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 38 Mody Street, Fort Bombay.

---

THE
# Vijaya Bank, Ltd.

Head Office **MANGALORE** Branch Offices **Udipi, Kaup & Coondapoor**

**ದಿ ವಿಜಯ ಬೇಂಕ್ ಲಿಮಿಟೆಡ್,**

ಹೆಡ್ ಆಫೀಸು: **ಮಂಗಳೂರು.** ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೋ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1 ರಿಂದ 100ರ ವರೆಗೆ ಸಾ. ಶೆ 8 101 ರಿಂದ 500ರ ವರೆಗೆ ಸಾ. ಶೆ. 7.
501 ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ವರಾ ಸಾಲಕೊಡಲಾಗುತ್ತದೆ. ಲಾಕರುಗಳು ದೊರೆಯುತ್ತವೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ,

**A B Shetty,** ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ,

ವಿಜಯ ಬೇಂಕ್ ಲಿಮಿಟೆಡ್, ಕಚ್ಚೇರಿ ರೋಡ್, ಮಂಗಳೂರು.

---

## ಸ್ವದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.**

**ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.**

P. A. PAI BROS.,
**ಪಿ. ಎ. ಪೈ ಬ್ರದರ್ಸ್,**
**ಆಸ್ಪತ್ರೆ ಎದುರು, ಉಡುಪಿ.**

---

# ಕಸಿ ಗಿಡಗಳು.

**ಸಪೋಡಿಲ್ಲ (ಚಿಕ್ಕು)**

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವವು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಶಾಖಾಹಾರಿಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾಗತ ಡಿಪೋ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೋ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಪೋಸ್ ಸ್ಟೋರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

# ನಾವೇನು ಮಾಡಬೇಕು?

ಲೇಖಕ:—"ಉಗ್ರನರಸಿಂಹ"

**ಇದೊಂದು ಇಂದಿನ ಮಹತ್ವದ ಸಮಸ್ಯೆಯಾಗಿದೆ. "ನಾವೇನು ಮಾಡಬೇಕು?"**

ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದುದರಿಂದ ತಮ್ಮ ಇಷ್ಟಾರ್ಥವು ಕೈಗೂಡಿತೆಂದು ಉದಾಸೀನರಾದವರೆಷ್ಟು ಮಂದಿ! ಕಾಂಗ್ರೆಸ್ ನಮ್ಮ ಧರ್ಮಗಳನ್ನು ಮೂಲೆಗೊತ್ತಲಿದೆಯೆಂದು ಉದಾಸೀನರಾದವರೆಷ್ಟುಮಂದಿ! ನಮ್ಮ ಜಮೀನು ಸಮತಾವಾದ ಭೂತಕ್ಕೆ ಬಲಿಯಾದೀತೆಂದು ಹೆದರಿರುವವರೆಷ್ಟುಮಂದಿ! ಹೀಗೆಲ್ಲಾ ಭಿನ್ನಾಭಿಪ್ರಾಯದ ಜನರು ನಮ್ಮ ನಾಡಿನಲ್ಲಿ ತುಂಬಿರುವುದರಿಂದಲೇ 'ನಾವೇನು ಮಾಡಬೇಕು' ಎಂಬ ಸಮಸ್ಯೆಯು ವಿಚಾರಿಗಳ ಮನಸ್ಸಿನಲ್ಲಿ ಘರ್ಷಣೆ ಮಾಡುತ್ತಿದೆ.

ಒಟ್ಟಾರೆ ಹೇಳುವುದಾದರೆ ಕಾಂಗ್ರೆಸ್ ತತ್ವಗಳು ಸಾರ್ವತ್ರಿಕ ಪ್ರಚಾರವಾಗದಿದ್ದುದರಿಂದಲೇ ಈ ಭಿನ್ನಾಭಿಪ್ರಾಯಗಳು ಹುಟ್ಟಿರುವುವೆಂದು ಹೇಳಬಹುದು. ಕಾಂಗ್ರೆಸ್ ತತ್ವಗಳನ್ನು ಬಲ್ಲವರೂ ಇತರರಿಗೆ ಬೋಧಿಸುವ ಕೆಲಸಕ್ಕೆ ಕೈಹಾಕಿಲ್ಲ. ಕಾಂಗ್ರೆಸ್ಸು ನಮ್ಮ ಸುಖ-ಶಾಂತಿಯ ವ್ಯವಸ್ಥೆಯನ್ನು ಮಾಡಲಿದೆಯೆಂಬ ಆಶಾಕಿರಣವು ಹಳ್ಳಿಗನ ಮನಸ್ಸಿನಲ್ಲಿ ಮೂಡಿದರೂ ಯಾರಾದರೊಬ್ಬನು ಪ್ರತಿಕೂಲವಾಗಿ ವಾದಿಸಿದರೆ ಅವನೂ ಒಪ್ಪಿಬಿಡುವಂತಿದೆ ಇಂದಿನ ಪರಿಸ್ಥಿತಿ. ಅಂತಹಪರಿಸ್ಥಿತಿಯನ್ನು ತೀವ್ರವೇ ಹೋಗಲಾಡಿಸಬೇಕಾಗಿವೆ. ವೈಯಕ್ತಿಕ ಧರ್ಮಾನುಷ್ಠಾನವನ್ನು ಕಾಂಗ್ರೆಸ್ ವಿರೋಧಿಸುವುದಿಲ್ಲ. ಆದರ ಹೆಸರಿನಿಂದ ಸಮಾಜ ಸಮನ್ವಯಕ್ಕೆ ತೊಡಕನ್ನು ತರುವುದಾದರೆ ಮಾತ್ರ ಕಾಂಗ್ರೆಸ್ ನಿಷೇಧಿಸುವುದು. ವಿಶ್ವಬಾಂಧವ್ಯದಮೇರೆಯನ್ನು ಅತಿಕ್ರಮಿಸಿ ಸ್ವಪ್ರತಿಷ್ಠಾಂಧತನದಿಂದ ಸಮಾಜದಲ್ಲಿ ಕಲಹ ಬೀಜವನ್ನು ಬಿತ್ತುವವರನ್ನು ಮಾತ್ರ ಕಾಂಗ್ರೆಸು ಖಂಡಿಸುತ್ತದೆ. ಇಂತಹರನ್ನು ಸನಾತನ ಧರ್ಮವೂ ತಿರಸ್ಕರಿಸುತ್ತದೆಂಬ ಸಂಗತಿಯು ಸಂಪ್ರದಾಯವಾದಿಗಳಿಗೂ ತಿಳಿದಿದೆ. ಆದುದರಿಂದ ಬಲ್ಲಿದರು ಸಂಪ್ರದಾಯವಾದಿಗಳಲ್ಲಿ ಕಾಂಗ್ರೆಸ್ಸಿನ ಮೇಲಿರುವ ತಪ್ಪಭಿಪ್ರಾಯವನ್ನು ಹೋಗಲಾಡಿಸಬೇಕು. ಹಳ್ಳಿ ಪಳ್ಳಿಗಳಲ್ಲಿ ಕಾಂಗ್ರೆಸ್ ತತ್ವಗಳನ್ನು ಚೆನ್ನಾಗಿ ಪ್ರಚಾರಪಡಿಸಬೇಕು. ಸಮತಾವಾದದ ಸಹಜ ರೂಪವನ್ನು ವಿವರಿಸಿ ಜಮೀನ್ದಾರರಲ್ಲಿರುವ ತಪ್ಪಭಿಪ್ರಾಯಗಳನ್ನು ನಿವಾರಿಸಬೇಕು.

ಹಿಂದೀ ಸರಕಾರವನ್ನು ವಿರೋಧಿಸಿದರೆ ರಾಜದ್ರೋಹವನ್ನು ಮಾಡಿದಂತಾಗುವುದೆಂದು ಬಗೆಯುವವರೂ ಇರುವರು. ಅವರ ರಾಜನಿಷ್ಠೆಯು ಹೊಗಳತಕ್ಕುದಾದರೂ ಪ್ರಕೃತದ ವಿಷಮ ಪರಿಸ್ಥಿತಿಯಲ್ಲಿ ಅದರಿಂದ ಹೆಚ್ಚಿನ ಹಾನಿಯಿದೆ. ಆ ಮನೋವೃತ್ತಿಯು ನಾಶವಾಗದೆ ನಿಷ್ಪತ್ತಿಯಿಲ್ಲ. ನಿರಪರಾಧಿಗಳಾದ ಅಂಡಮಾನದ ಕೈದಿಗಳ ವಿಷಯದಲ್ಲಿ ಉಗ್ರಧೋರಣೆಯನ್ನು ವಹಿಸಿ 'ನ'ಕಾರವನ್ನಿತ್ತಿರುವ ಬ್ರಿಟಿಷ್ ಪ್ರಭುತ್ವವು ರಾಜನಿಷ್ಠರಿಗೆ ಎಂತಹ ಪುರಸ್ಕಾರವನ್ನು ಕೊಟ್ಟೀತು?

ಕಾಂಗ್ರೆಸ್ ಕ್ರಾಂತಿಕಾರರ ತಂಡವೆಂದು ತಿಳಿದವರೂ ಇರುವ ತಂಡವಿನ್ನೊಂದಿದೆ. ಆದರೆ ಬ್ರಿಟಿಷ ಶಾಹಿಯು ಕಾಂಗ್ರೆಸಿನವರಿಗೆ ಮಂತ್ರಿಪದವಿಯನ್ನಿತ್ತು, 'ಕಾಂಗ್ರೆಸು ಅಖಿಲಭಾರತದ ಏಕಮಾತ್ರ ರಾಜಕೀಯ ಸಂಸ್ಥೆ'ಯೆಂದು ಜಗತ್ತಿಗೆ ತಿಳಿಸಿದುದರಿಂದ ಆ ವಾದವು ಜೀವವಿಲ್ಲದುದಾಗಿದೆ.

ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಿದುದರಿಂದ ತಮ್ಮ ಇಷ್ಟಾರ್ಥವು ಕೈಗೂಡಿತೆಂದು ಬಗೆದಿರುವವರು 'ಕಾಂಗ್ರೆಸಿನವರ ಧೋರಣೆಯೇನು? ಪದವೀ ಸ್ವೀಕಾರದಿಂದ ಅವರು ಆ ಧೋರಣೆಯನ್ನು ಎಷ್ಟರಮಟ್ಟಿಗೆ ನಿರ್ವಹಿಸಿಯಾರು?' ಎಂದು ಮುಂತಾಗಿ ಇನ್ನೂ ಆಳವಾಗಿ ವಿಚಾರಿಸತಕ್ಕದ್ದಿದೆ. ಹಣದ ಪೆಟ್ಟಿಗೆಯು ಕಾಂಗ್ರೆಸ್ಸಿನವರ ಕೈಗೆ ಸಿಕ್ಕಿರುವುದಾದರೂ ಬೀಗದ ಕೈ ಇನ್ನೂ ಅವರ ಕೈಗೆ ದೊರೆತಿಲ್ಲ. ಮೇಲಾಗಿ ಆ ಪೆಟ್ಟಿಗೆಯು ಬಲವಾದ ಭದ್ರತೆಯಲ್ಲಿದೆ. ಅದರ ಬೀಗದಕೈಯೂ ಸಂರಕ್ಷಣಾ ಜವಾಬ್ದಾರಿಯೂ ಕಾಂಗ್ರೆಸ್ಸಿನವರಿಗೆ ದೊರಕಿತೆಂದರೆ ಆಗ ಮಾತ್ರ ನಾವು ನಮ್ಮ ಇಷ್ಟಾರ್ಥವು ಕೈಗೂಡಿತೆಂದು ಹೇಳಲು ಶುರುಮಾಡಬಹುದು.

ಹಾಗಾಗಬೇಕೆಂದು ಎಲ್ಲರೂ ಹೇಳುವರು. ಹಾಗಾಗುವ ದಿನವನ್ನು ಎಲ್ಲರೂ ನಿರೀಕ್ಷಿಸುವರು. ಆದರೆ ಸಾಮೂಹಿಕ ಚಳವಳಿಯಲ್ಲಿ ಎಲ್ಲರೂ ಪರಸ್ಪರ ಭಿನ್ನಭಿನ್ನರು!

ಹೀಗಾಗಲು ನಮ್ಮಲ್ಲಿ ವಿಚಾರಶಕ್ತಿಯು—ಸಾರಾಸಾರ ಮಥನಶಕ್ತಿಯು ಅಭಾವನೇ ಕಾರಣ. ಅಂತಹ ಶಕ್ತಿಯನ್ನು ಹುಟ್ಟಿಸುವ ಕ್ರಮಗಳನ್ನೊಳಗೊಂಡ ಶಿಕ್ಷಣವು ನಮಗೆ ದೊರೆಯಬೇಕಾಗಿದೆ ಈಗ. ಅದೂ ಸಾರ್ವತ್ರಿಕ ಪ್ರಚಾರವಾಗಬೇಕು. ಆಗ ಸ್ವಾವಲಂಬನೆಯ—ಸ್ವಾತಂತ್ರ್ಯದ—ವಿಶ್ವಭ್ರಾತೃತ್ವದ ಬೆಲೆಯು ನಮಗೆ ತಿಳಿಯುವುದು.

ಹೀಗೆ ತಿಳಿದವರು ಈಗ ನಮ್ಮ ನಾಡಿನಲ್ಲಿ ಇಲ್ಲೆಂದು ನಮ್ಮ ತರ್ಕವಲ್ಲ. ಇದ್ದವರು ತನ್ನಷ್ಟಕ್ಕೆ ತಾವೇ ಉದಾಸೀನರಾಗಿ ಕುಳಿತಿರುವರು. ಅವರೆಲ್ಲರೂ ಈಗ ಜಾಗ್ರತರಾಗಿ ಪ್ರತಿಯೊಂದು ಮೂಲೆಯಲ್ಲೂ ಸಂಘಟನಾ ಶಕ್ತಿಯನ್ನು ಬೆಳಸಬೇಕು. ಕಾಂಗ್ರೆಸಿನ ದೇಶಸೇವೆಯ ಮಹತ್ಕಾರ್ಯದಲ್ಲಿ ನೆರವಾಗಬೇಕು. ಅಂದರೆ ತಪ್ಪಭಿಪ್ರಾಯಗಳೂ-ಭಿನ್ನಾಭಿಪ್ರಾಯಗಳೂ ತೊಲಗಿ ಸೌಮ್ಯ ಬುದ್ಧಿಯೂ ಸಂಘಟನೆಯೂ ಉಂಟಾಗಬಹುದು. ಆದುದರಿಂದ ನಮ್ಮ ಆಕಾಂಕ್ಷೆಯು ನೆರವೇರಬಹುದು.

"ನಾವೇನು ಮಾಡಬೇಕು" ಎಂಬ ಗಹನ ಪ್ರಶ್ನೆಯನ್ನು ಇಲ್ಲಿ ಸ್ವಲ್ಪವೇ ವಿವೇಚಿಸಿದೆ. ಮೇಧಾವಿಗಳು ಇನ್ನು ತಮ್ಮಲ್ಲೇ ತರ್ಕಿಸಿಕೊಂಡು ನಮ್ಮ ಸೂಚನೆಗಳನ್ನು ಗಮನಕ್ಕೆ ತಂದುಕೊಂಡಾರೆಂದು ನಿರೀಕ್ಷಿಸುವೆವು.

---

# ಇದೂ ಮಾದರಿಯೇ?

ಲೇಖಕ:—"ಕನ್ನಡಿಗ"

ಮೈಸೂರು ಮಾದರಿಸಂಸ್ಥಾನವೆಂದು ಹೆಸರು ಪಡೆದಿದೆ. ಸಂಸ್ಥಾನಕ್ಕೆ ಮಾದರಿ ಎಂಬ ವಿಶೇಷಣವನ್ನು ಜೋಡಿಸಿದವರಾರು ಜನರೇ ಅಲ್ಲವೇ? ಆ ಜನರಿಂದಲೇ ಈಗ ಹಾಗೆ ಹೇಳಲು ಸಂಕೋಚ ಪಡುವಂತಹ ಸ್ಥಿತಿಗೆ ತರುವ ಹಲವರು ಮಹಾರಾಜರ ಸರಕಾರದಲ್ಲಿ ಸೇರಿಕೊಂಡಿರುವರೆಂಬುದನ್ನು ವಿಷಾದದಿಂದ ಹೇಳಬೇಕಾಗಿದೆ.

ಒಂದು ಒಳ್ಳೆಯ ಹೆಸರನ್ನು ಸಂಪಾದಿಸಲು ಬಹುಕಾಲ ಹಿಡಿಯುವುದು. ಆದರೆ ಕೆಟ್ಟ ಹೆಸರು ಕ್ಷಣಾರ್ಧದಲ್ಲಿ ಬಂದು ಬಿಡುವುದು. ಹಾಗಾಗಗೊಡದಿರುವುದರಲ್ಲಿ ವಿವೇಕವಿದೆ.

ಮೈಸೂರು ಸರಕಾರವಾದರೂ ಆದರ್ಶ ಸಂಸ್ಥಾನವೆಂದು ಸುಮ್ಮಸುಮ್ಮಗೆ ಹೆಸರನ್ನು ಪಡೆದಿಲ್ಲ. ಅಂತಹ ಹೆಸರನ್ನು ಹೊಂದಲು ಉಚಿತ ಕಾರ್ಯಗಳನ್ನು ಮಾಡಿತ್ತು. ಶ್ರೀಮನ್ಮಹಾರಾಜರವರೇ ಅದಕ್ಕೆ ಮೂಲ ಕಾರಣರು. ಅಂತಹ ಮಹಾರಾಜ ಸರಕಾರದಲ್ಲಿ ಹೆಸರನ್ನು ಕೆಡಿಸುವ ಮನೋವೃತ್ತಿಯುಳ್ಳ ಹಲವರಿದ್ದಾರೆ. ಅವರು ಸ್ವಲ್ಪ ಜಾಗರೂಕತೆಯಿಂದ ವಿವೇಕಪರ ಧೋರಣೆಯನ್ನು ಕೈಕೊಳ್ಳಬೇಕಾಗಿದೆ.

ಈಗಲಾದರೋ ಒಂದಲ್ಲೊಂದು ರೀತಿಯ ಅಪವಾದಗಳು ಹೊರ ಬರುತ್ತಲೇ ಇವೆ. ಇದೂ ಮಾದರಿಯೇ? ನಾಗರಿಕರ ಹಕ್ಕು ಬಾಧ್ಯತೆಗಳಿಗೇ ಕೊಡಲಿಯೇಟೆಂದರೆ.........? ಕಮಲಾದೇವಿ, ಹರ್ಡೀಕರ ಮುಂತಾದ ದೇಶ ಮುಖಂಡರನ್ನು ಸರಕಾರವೇ ಆಹ್ವಾನಿಸಬೇಕಾಗಿತ್ತು ಇರಲಿ, ಅವರಾಗಿ ಬಂದರೂ ಭಾಷಣಮಾಡಕೂಡದಾಗಿ ನಿರ್ಬಂಧ ಹಾಕುವುದನ್ನು ಯಾವ ಸ್ವಾಭಿಮಾನಿಯೂ ಒಪ್ಪಲಾರನು.

ಇದರಿಂದ ಇಡೀ ಸಂಸ್ಥಾನಿಕರೇ ಅತೃಪ್ತಿಯಲ್ಲಿದ್ದಾರೆಂದರೆ ತಪ್ಪಾಗಲಾರದು. ಇಂಡಿಯಾ ಸರಕಾರವು ಅಂಡಮಾನ ಕೈದಿಗಳ ವಿಷಯ ವಹಿಸಿದ ಧೋರಣೆಯಿಂದಾಗಿ ಅಖಿಲ ಭಾರತೀಯರ ಮನಸ್ಸು ಹೇಗೆ ಕದಡಿದೆಯೋ ಹಾಗೆಯೇ ಇಂತಹ ನಿರ್ಬಂಧದ ಆಜ್ಞೆಗಳಿಂದ ಕನ್ನಡಿಗರ ಮನಸ್ಸೂ ಕದಡಿದೆ.

ಬೆಂಗಳೂರಿನ ಮೆಜಿಸ್ಟ್ರೇಟರು, ಮೈ. ಕ್ರಿ. ಕಾ. 45ನೇ ಕಲಂ ಜಾರಿ ಮಾಡಿದ್ದಕ್ಕಾಗಿ ತಾ. 19ರಲ್ಲಿ ಸೆಂಟ್ರಲ್ ಕಾಲೇಜ್, ಇಂಟರ್ ಮಿಡಿಯಟ್ ಕಾಲೇಜು, ಇಂಜನೀಯರಿಂಗ್ ಕಾಲೇಜುಗಳ ಮತ್ತು ಸೆಂಟ್ರಲ್ ಹೈಸ್ಕೂಲ್ ಯುನೈಟೆಡ್ ಮಿಶ್ಶನ್ ಹೈಸ್ಕೂಲುಗಳ 3000 ವಿದ್ಯಾರ್ಥಿಗಳು ಮುಷ್ಕರ ಹಿಡಿದು ಆ ನಿರ್ಬಂಧದ ಹುಕುಮನ್ನು ನಿಷೇಧಿಸಿರುವರೆಂದ ಬಳಿಕ ಅದರ ವಿಷಯ ಜನಮತವನ್ನು ವರ್ಣಿಸಬೇಕಾಗಿಲ್ಲ. ಬೆಂಗಳೂರು ಪಟ್ಟಣದಲ್ಲೆಲ್ಲಾ ಹರತಾಳವನ್ನಾಚರಿಸುವ ಏರ್ಪಾಡಾಗುತ್ತದೆಂಬೂ ವರ್ತಮಾನ. ಈ ಪರಿಸ್ಥಿತಿಯನ್ನು ಘನವೊಂದಿದ ಮಹಾರಾಜರೂ ದಿವಾನರೂ ಪ್ರತ್ಯಕ್ಷ ನೋಡಿರುವರಂತೆ. ಆದುದರಿಂದ ಆಳುವ ಮಹಾಸ್ವಾಮಿಯವರೂ ಸರಕಾರದವರೂ ಈ ವಿಷಯದಲ್ಲಿ ನಿಗಾಕೊಟ್ಟು ನ್ಯಾಯೋಚಿತವಾದುದನ್ನು ಮಾಡಿ ಸಂಸ್ಥಾನದ ಕೀರ್ತಿಯನ್ನು ಹೆಚ್ಚಿಸಿ ಸಾಂಸ್ಥಾನಿಕರ ಶುಭಾಶೀರ್ವಾದಕ್ಕೆ ಪಾತ್ರರಾಗಬೇಕೆಂದೇ ಕನ್ನಡಿಗನ ಹಾರೈಕೆಯಾಗಿದೆ.

---

**JOBS FOR UNEMPLOYED RUPEES.**

You know vividly the evils of unemployment. But probably you do not know that unemployed money causes as much poverty and suffering. A bank is an employment agency for rupees. It finds jobs for them and thus contributes to the prosperity of the nation. You can help in this work by investing your savings in the bank.

Resources of A CRORE

ESTD. 1906

CANARA BANK

LIMITED.

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

### ಸಾರ್ವಜನಿಕ ಬಿನ್ನಹ

ಕಾಂಗ್ರೆಸಿನವರು ಮಂತ್ರಿಪದವನ್ನು ಸ್ವೀಕರಿಸಿದ ಮೂಲಕ ಜನರು ತಮ್ಮ ಅನೇಕ ತೊಂದರೆಗಳನ್ನು ದೂರ ಮಾಡಬೇಕೆಂದು ಅಪೇಕ್ಷಿಸುವರು. ಇದು ಸ್ವಾಭಾವಿಕವಿದೆ. ಆದರೆ ಕೆಲಸಗಾರರು ಹಾಗೂ ಜನರು ಈ ಕೆಳಗೆ ಕಾಣಿಸಿದ ಕೆಲವು ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕು

೧ ಕಾಂಗ್ರೆಸಿನವರು ಚುನಾವಣೆ ಪತ್ರಿಕೆ (ವಾಹ್ನ ಘೋಷಣೆ) ಪತ್ರಿಕೆಯಲ್ಲಿ ಕಾಣಿಸಿದ ಕಾರ್ಯಕ್ರಮಗಳನ್ನು ಆದಷ್ಟು ಮಟ್ಟಿಗೆ ಜಾರಿಯಲ್ಲಿ ತರಲು ಬದ್ಧರಿರುವರು. ಇದೇ ಅವರ ಮುಖ್ಯ ಕರ್ತವ್ಯವಾಗಿದೆ. ಆ ದೃಷ್ಟಿಯಿಂದ ಮೊಟ್ಟಮೊದಲು ಅದಕ್ಕಾಗಿಯೇ ಅವರು ಪ್ರಯತ್ನಪಡಬೇಕಾಗುವದು.

೨ ಕಾಂಗ್ರೆಸ್ ಚುನಾವಣೆ ಪತ್ರಿಕೆಯಲ್ಲಿರದ ಬೇರೆ ಅನೇಕ ತೊಂದರೆಗಳು ಜನರಿಗೆ ಇರುವವು. ಅದಕ್ಕಾಗಿಯೂ ಕಾಂಗ್ರೆಸಿನವರು ಪ್ರಯತ್ನ ಪಡಬೇಕು. ಆದರೆ ಮುಖ್ಯ ಕಾರ್ಯಕ್ರಮವನ್ನು ಕೊನೆಗಾಣಿಸಿದ ನಂತರ ಇವುಗಳ ಕಡೆಗೆ ಲಕ್ಷ್ಯಕೊಡಬಹುದು;

೩ ಆದಷ್ಟುಮಟ್ಟಿಗೆ ಜನರು ಸಾರ್ವಜನಿಕ ಅನ್ಯಾಯಗಳನ್ನು ಕಾಂಗ್ರೆಸ್ ಮಂತ್ರಿಗಳ ನಿದರ್ಶನಕ್ಕೆ ತಂದುಕೊಡಬೇಕು. ವೈಯಕ್ತಿಕ ಅಡಚಣಿಗಳನ್ನು ದೂರಮಾಡುವುದು ಕಾಂಗ್ರೆಸ್ ಮಂತ್ರಿ ಮಂಡಲಕ್ಕೆ ಸಾಧ್ಯವೂ ಇಲ್ಲ. ಮತ್ತು ಅದು ಇಷ್ಟವೂ ಅಲ್ಲ.

೪ ಸ್ಥಾನಿಕ ಅಡಚಣಿಗಳನ್ನು ತಿಳಕೊಳ್ಳುವುದಕ್ಕಾಗಿ ಕಾಂಗ್ರೆಸ್ಸಿನವರು ಪ್ರತಿಯೊಂದು ಜಿಲ್ಲೆಯಲ್ಲಿಬೇರೊಂದು(Local Congres Committe) ಕಮಿಟಿಯನ್ನು ಏರ್ಪಡಿಸಿರುವರು. ಆದುದರಿಂದ ಕೆಲಸಗಾರರು ಹಾಗೂ ಇತರರು ತಮ್ಮ ತಮ್ಮ ಅಡಚಣಿಗಳನ್ನು ತಮ್ಮಲ್ಲಿಯ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿಗೆ ತಿಳಿಸಬೇಕು. ತಾಲೂಕು ಕಾಂಗ್ರೆಸ್ ಕಮಿಟಿಗೆ ತಿಳಿಸಿದರೂ ಅವರು ಮೇಲೆ ಒಯ್ದು ಕಳಿಸಿಕೊಡುವರು.

೫ ಯಾವುದಾದರೂ ಅನ್ಯಾಯ ಅಥವಾ ಅಡಚಣಿಯ ಬಗ್ಗೆ ಬರೆಯಬೇಕಾದರೆ ಎಲ್ಲ ಸತ್ಯ ಸಂಗತಿಗಳನ್ನು ಸ್ಪಷ್ಟವಾಗಿ ಬರೆಯಬೇಕು. ಮತ್ತು ತಮ್ಮ ಹೆಸರು ವಿಳಾಸಗಳನ್ನು ಸಂಪೂರ್ಣವಾಗಿ ಕಾಣಿಸಬೇಕು.

೬ ಕೆಲಸಗಾರರು ತಾವು ವಿಶಾಲವಾದ ಒಂದು ಸಂಸ್ಥೆಯ ಪರವಾಗಿ ಕೆಲಸಮಾಡುವವರು. ಮತ್ತು ಅನೇಕ ವರುಷಗಳವರೆಗೆ ಈ ಸಂಸ್ಥೆಯು ಸುಸಂಘಟಿತವಾಗಿ ಕೆಲಸ ಮಾಡಹತ್ತಿದರೆ ಹಾಗೂ ತಮಗೆ ಅದನ್ನು ಹೆಚ್ಚಿಗೆ ಕಾರ್ಯಕ್ಷಮ ಮಾಡಬೇಕಾಗಿದೆ. ಎಂಬ ಸಂಗತಿಯನ್ನು ಸಂಪೂರ್ಣ ಲಕ್ಷ್ಯದಲ್ಲಿಟ್ಟು ಯಾವಾಗಲೂ ನಮ್ಮ ಸಂಸ್ಥೆಯ ಪರವಾಗಿಯೇ ಬರೆಯಬೇಕು. ವ್ಯಕ್ತಿಗಳಿಗೆ ಬರೆಯಬಾರದು. ವ್ಯಕ್ತಿಗಳಿಗೆ ಬರೆಯುವುದರಿಂದ ಕೇವಲ ವ್ಯಕ್ತಿಗಳ ಮಹತ್ವವು ಮೊದಲಿನ ಆಡಳಿತದಂತೆ ಬೆಳೆಯುವದು.

೭ ಸಣ್ಣಪುಟ್ಟ ಕೆಲಸಕ್ಕಾಗಿ ದೂರದಿಂದ ಬಂದು ಸಮಕ್ಷಮ ಹೇಳಿಕೊಳ್ಳುವ ಪದ್ಧತಿಯು ಹೋಗಲೇಬೇಕು. ಮೇಲಿನ ಕಮಿಟಿಗೆ ಒಂದು ಪತ್ರಬರೆದರೆ ಅವರು ಅದರ ಕಡೆಗೆ ಯೋಗ್ಯ ಲಕ್ಷ್ಯಕೊಡುವರೆಂದು ನಿಮ್ಮ ಭರವಸೆ ಇರಬೇಕು. ಇದರಿಂದ ಹಣ ಹಾಗೂ ಕಾಲದ ಅಪವ್ಯಯ ಕಡಿಮೆಯಾಗುವದು ಮತ್ತು ಸಂಸ್ಥೆಯಲ್ಲಿ ಕೆಲಸ ಮಾಡುವವರು ಹೆಚ್ಚು ಚಟುವಟಿಕೆ ತೋರಿಸಿ ಪದ್ಧತಿಯಿಂದ ಕೆಲಸಮಾಡುವರು.

೮ ಈ ವರೆಗೆ ಸರಕಾರದವರು ತಮ್ಮ ಆಡಳಿತಕ್ಕಾಗಿ ಒಂದು ಯಂತ್ರವನ್ನು ನಿರ್ಮಾಣಮಾಡಿ ಇಟ್ಟಿರುವರು. ಕಾಂಗ್ರೆಸ್ ಮಂತ್ರಿಮಂಡಳದವರಾದರೂ ತಮ್ಮ ಕೆಲಸಕ್ಕಾಗಿ ಆ ಯಂತ್ರವನ್ನೇ ಉಪಯೋಗಿಸಬೇಕಾಗುತ್ತದೆ. ಒಂದು ಹಳ್ಳಿಯಲ್ಲಿ ನಡೆದ ಸಂಗತಿಯು ಮಂತ್ರಿಗಳಿಗೆ ತಿಳಿಯಬೇಕಾದರೆ ಅದು ಪಾಟೀಲ ಕುಲಕರ್ಣಿ, ಮಾಮಲೇದಾರ, ಅಸಿಸ್ಟಂಟ್ ಕಲೆಕ್ಟರ್, ಕಲೆಕ್ಟರ್ ಕಮಿಶನರ್ ಮತ್ತು ಸೆಕ್ರೆಟರಿ ಇವರ ಮುಖಾಂತರ ತಿಳಿಯುತ್ತದೆ. ಹಾಗೆಯೇ ಅದೇ ದಾರಿಯಿಂದ ಅದು ಹಳ್ಳಿಗೆ ತಿರುಗಿ ಬರುವದು. ಆದುದರಿಂದ ಯಾವುದೇ ಅನ್ಯಾಯವು ದೂರಾಗಬೇಕಾದರೆ ಕೆಲವು ವೇಳೆ ಬೇಕಾಗುವದು. ಮತ್ತು ಸರಕಾರದ ಈಗಿದ್ದ ಅನೇಕ ಕಾಯಿದೆಗಳಿಗೆ ಹಾಗೂ ನಿಯಮಗಳಿಗೆ ಅನುಸರಿಸಿ ಕೆಲಸ ಮಾಡಬೇಕಾಗುವದು. ಅವು ಕೆಟ್ಟವಿದ್ದರೆ ಅವುಗಳನ್ನು ಬದಲಾಯಿಸುವ ಕ್ರಮ ಉಂಟು. ಅದಕ್ಕಾಗಿ ಇನ್ನೂ ಕೆಲವುಕಾಲ ಬೇಕಾಗುವುದು.

ಈ ಎಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟು ಕೆಲಸಗಾರರು ಜನರಿಗೆ ಇಲ್ಲಸಲ್ಲದ ಆಶೆಗಳನ್ನು ತೋರಿಸದೆ ಅವರ ಯೋಗ್ಯ ಅಡಚಣಿಗಳನ್ನು ತಿಳಿದುಕೊಂಡು ಅವುಗಳನ್ನು ಕ್ರಮವಾಗಿ ಮೇಲಿನ ಕಮಿಟಿಗೆ ತಿಳಿಸಬೇಕು. ನಮ್ಮ ಚುನಾವಣೆ ಪತ್ರಿಕೆಯಲ್ಲಿ ಮತ್ತು ದಿಲ್ಲಿಯಲ್ಲಿ ನಡೆದ ವರ್ಕಿಂಗ್ ಕಮಿಟಿಯವರು ಗೊತ್ತುಮಾಡಿದ ಠರಾವಿನಲ್ಲಿ ಹಾಕಿಕೊಟ್ಟ ಕಾರ್ಯಕ್ರಮವನ್ನು ಜನರಿಗೆ ಚೆನ್ನಾಗಿ ತಿಳಿಸಿ ಹೇಳಬೇಕು. ಆಗಾಗ್ಗೆ ಮಂತ್ರಿ ಮಂಡಲದವರು ಮಾಡುವ ಕಾರ್ಯವನ್ನೂ ಅವರ ಉದ್ದೇಶವನ್ನೂ ತಿಳಿಸಿ ಹೇಳಲು ಪ್ರಯತ್ನಿಸಬೇಕು. ಹೀಗೆ ಮಾಡಿದರೆ ನಮ್ಮೆಲ್ಲರ ಕೆಲಸವು ಹಗುರಾಗುವದು. ಹಾಗೂ ನಮ್ಮ ಸಂಸ್ಥೆಯು ಹೆಚ್ಚು ಬಲಶಾಲಿಯಾಗುವದು.

ಧಾರವಾಡ, ೧೭-೮-೩೭

**ರಾ| ಶ್ರೀ| ಹುಕ್ಕೇರಿಕರ**

ಗೌ| ಕಾರ್ಯದರ್ಶಿ.

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

### ಪ್ರಾಂ. ಕಾಂ. ಕ. ಕಾರ್ಯಕಾರೀ ಮಂಡಲದ ಸಭೆಯು ೧೪-೮-೩೭

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿಮಂಡಲದ ಸಭೆಯು ಧಾರವಾಡದಲ್ಲಿ ತಾ.14-8-37ನೇ ದಿವಸ ಸೇರಿತ್ತು. ಪಾಸಾದ ನಿರ್ಣಯಗಳಲ್ಲಿ ಮಹತ್ವವಿದ್ದವುಗಳನ್ನು ಈ ಕೆಳಗೆ ಕೊಡಲಾಗಿದೆ

**ಕರ್ನಾಟಕ ಏಕೀಕರಣ**— ಮುಂಬೈ ಮತ್ತು ಮದ್ರಾಸ್ ಇಲಾಖೆಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ಅಧಿಕಾರಾರೂಢರಾಗಿರುವುದರಿಂದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಕರ್ನಾಟಕ ಏಕೀಕರಣದ ಬಗ್ಗೆ ಅವರೊಡನೆ ಪತ್ರವ್ಯವಹಾರ ಮಾಡಬೇಕು. ಮತ್ತು ಅವರಿಗೆ ಬೇಕಾಗುವ ಎಲ್ಲಾ ಮಾಹಿತಿಯನ್ನೂ ಕೂಡಿಸಿ ಕೊಡಬೇಕು. ಇಲ್ಲದೆ ಕಾಂಗ್ರೆಸ್ ತತ್ವಕ್ಕನುಸರಿಸಿ ಭಾಷಾವಾರ ಪ್ರಾಂತರಚನೆಯು ಸಲುವಾಗಿ ಪ್ರಯತ್ನಮಾಡಲು ಮುಂಬೈ ಮತ್ತು ಮದ್ರಾಸ್ ಇಲಾಖೆಯ ಕಾಂಗ್ರೆಸ ಪಕ್ಷಗಳಿಗೆ ವರ್ಕಿಂಗ್ ಕಮಿಟಿಯವರು ಒತ್ತಾಯಪಡಿಸುವಂತೆ ಪ್ರಾಂತಿಕ ಕಾಂ ಕಮಿಟಿಯ ಕಾರ್ಯದರ್ಶಿಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಬರೆಯಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

**ಸ್ಥಾನಿಕ ಕಷ್ಟವಿಚಾರಣ ಕಮಿಟಿ**— ಎಲ್ಲ ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ತಮ್ಮಲ್ಲಿ ಸ್ಥಾನಿಕ ಕಷ್ಟವಿಚಾರಣಾ ಕಮಿಟಿ (LocalGrievances Committee) ಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ತಮ್ಮ ಜಿಲ್ಲೆಯೊಳಗಿನ ಎಲ್ಲಾ ಬೇಡಿಕೆಗಳನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಮೇಲಿಂದ ಮೇಲೆ ಕಳಿಸಿಕೊಡಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. ಇಂಥಾ ಸಮಿತಿಗಳಲ್ಲಿ ಆಯಾಜಿಲ್ಲೆಯ ಕಾಂಗ್ರೆಸ್ ಅಸೆಂಬ್ಲಿ ಸದಸ್ಯರನ್ನು ಬಿಟ್ಟು ಕನಿಷ್ಟಪಕ್ಷಕ್ಕೆ ಐದು ಜನ ಸದಸ್ಯರು ಇರತಕ್ಕದ್ದು.

**ಹರಿಜನರ ಕಾರ್ಯ**— ಕಾಂಗ್ರೆಸಿನವರ ಮುಖ್ಯಧ್ಯೇಯಗಳಲ್ಲಿ ಒಂದಾಗಿರುವ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಅಸೆಂಬ್ಲಿಯ ಕಾಂಗ್ರೆಸ್ ನಾಯಕರು ಸರಕಾರದ ಮುಂಗಡ ಪತ್ರಿಕೆ (ಬಜೆಟ್)ಯಲ್ಲಿ ಸಾಕಷ್ಟು ಹಣದ ಏರ್ಪಾಡು ಮಾಡಬೇಕು. ಹಾಗೂ ಈ ಹಣವನ್ನು ಹರಿಜನ ಸೇವಕರಿಗೆ ಸಂಘದ ಮುಖಾಂತರವೇ ವೆಚ್ಚಮಾಡಬೇಕೆಂದು ಈಸಭೆಯು ನಾಯಕ (ಲೀಡರ)ರಿಗೆ ಬಿನ್ನವಿಸಿಕೊಳ್ಳುತ್ತದೆ. ಹರಿಜನ ಸೇವಕ ಸಂಘವು ಸುಸಂಘಟಿತವಾಗಿ ನಡೆದಿರುವುದರಿಂದಲೂ ಅದರಲ್ಲಿ ಅನೇಕ ನಿಃಸ್ವಾರ್ಥ ಕೆಲಸಗಾರರು ಕೆಲಸ ಮಾಡುವುದರಿಂದಲೂ ಆ ಹಣದ ಲಾಭವು ಹರಿಜನರಿಗೆ ಹೆಚ್ಚಾಗಿ ಆಗುವದೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

ಧಾರವಾಡ, ೧೭-೮-೩೭,

**ರಾ| ಶ್ರೀ| ಹುಕ್ಕೇರಿಕರ.**

ಗೌ. ಕಾರ್ಯದರ್ಶಿ.


ನೀವು ನಿಮ್ಮ-ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ ?

ಇಲ್ಲವಾದರೆ, ಹೇಗೆ ಮಾಡುವುದೆಂಬುದನ್ನು ಭದ್ರತೆಯ, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ.

**ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್ (ಅಜ್ಮೀರು)**

**ನಮ್ಮ ಅಭಿವೃದ್ಧಿಯ ಅಂಶ್ಯ ಸಂಕೆಗಳು**

| | |
|---|---|
| ಚಾಲ್ತಿಯಲ್ಲಿರುವ ಪೊಲಿಸಿಗಳು .... | .... ರೂ. **3** ಕೋಟಿ ಮಿಕ್ಕಿದೆ. |
| ಮೂಲಗಳು .... .... | ... ರೂ. **80** ಲಕ್ಷಕ್ಕೂ ಮಿಕ್ಕಿದೆ. |
| ವಾರ್ಷಿಕ ಉತ್ಪನ್ನ ... .... | .. ರೂ. **18** ಲಕ್ಷಕ್ಕೂ ಮಿಕ್ಕಿದೆ. |
| ವಿಮೆ ತೆತ್ತುದು ... .. | .... ರೂ. **42** ಲಕ್ಷಕ್ಕೂ ಮಿಕ್ಕಿದೆ. |

**ಅತ್ಯಧಿಕ ಬೋನಸು**

| ಜೀವಾಂತ್ಯ ವಿಮೆ: | ಎಂಡೋಮೆಂಟ್: |
|---|---|
| ವರ್ಷಕ್ಕೆ ರೂ. 1000ಕ್ಕೆ **25ರಂತೆ.** | ವರ್ಷಕ್ಕೆ ರೂ. 1000ಕ್ಕೆ **20ರಂತೆ.** |

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲಿ ಕೆಳಗಿನವರಿಗೆ ಬರೆಯಿರಿ—

**ಪಿ. ಜಿ. ಮುಠಾಥೆ ಎಸ್ಕ್ವೈಯರ್,** ಜನರಲ್ ಮೆನೇಜರ್

(ಅಥವಾ) **ಎಂ. ಮಾಧವ ರಾವ್ ಎಸ್ಕ್ವೈಯರ್,** ಬಿ. ಎ., ಸುಪರಿಂಟೆಂಡೆಂಟ್ ಒಫ್ ಬ್ರಾಂಚಸ್ ಎಂಡ್ ಚೀಫ್ ಏಜನ್ಸಿಸ್, ಯಸ್. ಐ. ಎಂಡ್ ಸಿಲೋನ್.

**ಪಶ್ಚಿಮ ಕರಾವಳಿಗೆ ಓರ್ವ ಪ್ರಾಮುಖ್ಯ ಪ್ರತಿನಿಧಿಗಳು ಬೇಕು.**



## TENDER NOTICE.

Tenders of rates to reach the Assistant Director before 31-8-1937 are invited for transporting salt bags and stocking them in fish curing yards and salt gollahs on the West coast from vessels or railway waggons and for sundry other works. Details and terms of contract can be obtained from the Assistant Director of Fisheries (Coast) Calicut.

**Assistant Director of Fisheries (Coast), Calicut**



ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿಯ, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ ಟಾಯಂ ಪಾಕೆಟ್ ವಾಚು ಮತ್ತು ಟಾಯಂಪೀಸು ಗ್ಯಾರಂಟಿ ಇದೆ.

ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.

*The Manager,*

**The Silver Jubilee Watch Co.,**

*Post Box No. 571, BOMBAY.*



## HAVE A SOUND SLEEP

By using our Indian made Mosquito curtains, highly approved by persons of every rank for their strong netting, durability and beautiful finishing

Purchaser of three will get one curtain 6' x 4' x 4' free. Packing Free.

POSTAGE EXTRA.

**Prabhat Trading Co.,**

**12. Sikderpara Lane, Sarabazaar, CALCUTTA.**

## ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

**ವಿದ್ಯಾರ್ಥಿಗಳ ಸಭೆ**—ಕಳೆದ ತಾ. ೧೮ನೇ ಸಾಯಂಕಾಲ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮಂಗಳೂರಿನ ವಿದ್ಯಾರ್ಥಿಗಳ ಮಹಾಸಭೆಯು ಸೇರಿತು. ಶ್ರೀ. ಯಮ್. ಕೆ. ನಂಬಿಯಾರ್ ಬಾರ್ ಅಟ್-ಲಾರವರು ಅಗ್ರಾಸನ ವಹಿಸಿದ್ದರು. ಶ್ರೀಮತಿ ಕಮಲಾದೇವಿಯವರು ವಿದ್ಯಾರ್ಥಿಗಳು ಸುಸಂಘಟಿತರಾಗಿ, ತಮ್ಮ ಪುರೋಭಿವೃದ್ಧಿಗಾಗಿ ಕೆಲಸ ಮಾಡುವುದು ಅಗತ್ಯವೆಂದರು. ಕೇರಳದಿಂದ ಇಲ್ಲಿಗೆ ಬಂದಿದ್ದ ಶ್ರೀ. ಡಿನ್, ಮತ್ತು ಶ್ರೀಗಳಾದ ಕೆ. ಪಿ ಕಾರಂತರು, ಯು. ಜಿ. ರಾಯರು ಪ್ರೊ. ಜೋಸೆಫ್‌ರವರೇ ಮೊದಲಾದವರು, ಭಾಷಣಮಾಡಿದರು. ಅಧ್ಯಕ್ಷರು ವಿದ್ಯಾರ್ಥಿಗಳ ಸಭೆಯ ಅಗತ್ಯವನ್ನು ವಿವರಿಸಿ ಹೇಳಿದರು. ಅಂಡಮಾನದ ಕೈದಿಗಳೊಡನೆ ಸಹಾನುಭೂತಿಯನ್ನು ಸೂಚಿಸಿ ಠರಾವು ಮಾನ್ಯವಾಯಿತು.

**ಬಸ್ ಕೆಲಸಗಾರರ ಸಭೆ**— ಶ್ರೀಮತಿ ಕಮಲಾದೇವಿಯವರು ಅದೇ ದಿನ ಸಮತಾವಾದಿ ಆಫೀಸಿನಲ್ಲಿ ಬಸ್ ಕೆಲಸಗಾರರ ಸಭೆಯನ್ನುದ್ದೇಶಿಸಿ ಭಾಷಣಮಾಡಿದರು. ಮಂಗಳೂರಲ್ಲಿ ಬಸ್ ಕೆಲಸಗಾರರ ಸಭೆಯನ್ನು ಸ್ಥಾಪಿಸುವ ಅಗತ್ಯದ ವಿಷಯವಾಗಿ ಭಾಷಣಮಾಡಿದರು. ಒಂದು ಸಂಘವನ್ನು ಸದ್ಯದಲ್ಲಿಯೇ ಸ್ಥಾಪಿಸಬೇಕೆಂದು ನಿರ್ಧಾರವಾಯಿತು.

**ಕುಷ್ಠರೋಗಿಗಳ ವಿಷಯವಾಗಿ**— ತಾ. ೧೮ರಲ್ಲಿ ಕಲೆಕ್ಟರ್ ದೊರೆಗಳ ಅಧ್ಯಕ್ಷತೆಯಲ್ಲಿ ಸೇರಿದ ಲೆಪ್ರಸಿ ಕೌನ್ಸಿಲಿನ ಸಭೆಯಲ್ಲಿ, ಕುಷ್ಠರೋಗದ ವಿಷಯವಾದ ಮಾಯಾಲಾಂದ್ರದ ಪಟಗಳನ್ನು ತಯಾರಿಸಿ ಅದನ್ನು ಪ್ರದರ್ಶಿಸಬೇಕೆಂದೂ, ಅದಕ್ಕಾಗಿ ಲ ಸಟ್ಟ ಚಿತ್ರಗಳನ್ನು ತಯಾರಿಸಬೇಕೆಂದೂ, ಈ ಬಗ್ಗೆ ಜಿಲ್ಲಾ ಬೋರ್ಡಿನವರ ಸಹಾಯವನ್ನು ಪಡೆಯಬೇಕೆಂದೂ ತೀರ್ಮಾನವಾಯಿತು.

**ಮಂಗಳೂರು ನಗರಸಭೆ**— ಮಂಗಳೂರು ನಗರ ಸಭೆಯ ಮೀಟಿಂಗು ಕಳೆದ ತಾ. ೧೭ರಲ್ಲಿ ಜರಗಿತು. ಗತ ವರ್ಷದ ವರದಿಯು ಕೆಲ ತಿದ್ದುಪಡಿಗಳೊಡನೆ ಮಂಜೂರಾಯಿತು. ವೇಶ್ಯಾ ಗೃಹಗಳನ್ನು ರದ್ದುಪಡಿಸುವ ವಿಷಯದಲ್ಲಿ ಠರಾವು ಬರಲು ಅದನ್ನು ಎಲ್ಲರೂ ಒಪ್ಪಿದರು. ಅದನ್ನು ಹೇಗೆ ನಿಲ್ಲಿಸಬಹುದೆಂಬುದನ್ನು ವಿಚಾರಿಸಲು ಒಂದು ಸಮಿತಿಯು ನೇಮಕವಾಯಿತು.

**ಜಿಲ್ಲಾ ಭೂಮ್ಯಾಲಿಕರ ಸಂಘದ ಸಭೆ**—ಜಿಲ್ಲಾ ಭೂಮ್ಯಾಲಿಕರ ಸಂಘದ ಸಭೆಯು ನಿನ್ನೆಯ ದಿನ ಅಪರಾಹ್ನ ಕ್ಲಬ್ ಬೋರ್ಡಿಂಗ್ ಹೋಮಿನಲ್ಲಿ ಸೇರಿತು. ಶ್ರೀಮಾನ್ ಡಿ. ಮಂಜಯ್ಯ ಹೆಗ್ಗಡೆ ಯಂ. ಎಲ್. ಸಿ ಇವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲೆಯಲ್ಲಿ ಕಂದಾಯ ಕಡಿಮೆ ಮಾಡುವಂತೆ ಕೇಳಿಕೊಳ್ಳುವರೆ ಅಧ್ಯಕ್ಷರು ಮತ್ತು ೧೫ ಮಂದಿಯಿಂದ ಕೂಡಿದ ಒಂದು ಶಿಷ್ಟಮಂಡಲವನ್ನು ಆನರೇಬಲ್ ರೆವಿನ್ಯು ಮಂತ್ರಿಗಳಲ್ಲಿಗೆ ಕಳುಹಿಸಲ್ಪಡಬೇಕೆಂದೂ ಜಿಲ್ಲೆಯ ಅಡಿಕೆ ಕೊಳೆರೋಗವಿರುವ ಕಡೆಗಳಲ್ಲಿ ಮದ್ದು ಚಿಮುಕಿಸುವ ಕಾರ್ಯವನ್ನು ಸರಕಾರದವರು ನಡೆಸುವ ಹಾಗೆ ಕಲೆಕ್ಟರ್ ದೊರೆಗಳನ್ನು ಕೇಳಿಕೊಳ್ಳಬೇಕೆಂದೂ, ಜಿಲ್ಲೆಯ ಕರಾವಳಿಯಲ್ಲಿ ಪ್ರವಾಹದಿಂದ ಆದ ನಷ್ಟವನ್ನು ಕಂಡುಹಿಡಿಯಬೇಕೆಂದು ಕೇಳಿಕೊಳ್ಳಬೇಕಾಗಿಯೂ ಠರಾವುಗಳಾದವು. ಈ ಜಿಲ್ಲೆಯ ಪ್ರತಿನಿಧಿಗಳಾದ ಪ್ರೊ. ವಾರ್ಕಿ, ಶ್ರೀ ಕೆ ಆರ್ ಕಾರಂತ್ ಮತ್ತು ಶ್ರೀ ಎ. ಬಿ. ಶೆಟ್ಟಿ ಇವರುಗಳು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ಆರಿಸಲ್ಪಟಿರುವರಷ್ಟೆ. ಅವರನ್ನು ಅಭಿನಂದಿಸಬೇಕೆಂದು ಠರಾವುಗಳಾದವು.

**ಚುನಾವಣೆಯ ಉದ್ಘಾಟನೆ**— ಇದೇ ತಾ. ೨೯ರಲ್ಲಿ ನಗರಸಭೆಯ ಚುನಾವಣಾ ಉದ್ಘಾಟನೆಯ ಸಮಾರಂಭವು ನಡೆಯುವುದು.

**ಬರುವ ಮುನಿಸಿಪಲ್ ಚುನಾವಣೆಗಳು**

ಮಂಗಳೂರು ಮಹಾಜನರಲ್ಲಿ ವಿಜ್ಞಾಪನೆ

ಬರುವ ಚುನಾವಣೆಗಳಲ್ಲಿ ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸಬೇಕಾಗಿ ನಿಶ್ಚೈಸಿರುವುದು ಮಹಾಜನರಿಗೆ ಈ ಮೊದಲೇ ತಿಳಿದಿರುವುದು. ಈಗ ಬಂದಿರುವ ಅರ್ಜಿಗಳ ಅಂದಾಜಿನಿಂದ ಹೇಳುವುದಿದ್ದರೆ ಪ್ರಾಯಃ ಎಲ್ಲಾ ಸೀಟುಗಳಿಗೂ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸಲು ಸಾಧ್ಯವಾಗುವಂತಿದೆ. ಇದೇ ತಿಂಗಳ ತಾರೀಕು ೨೯ನೇ ದಿನ ಚುನಾವಣೆಯ ಪ್ರಚಾರ ಕಾರ್ಯವನ್ನು ಆರಂಭಿಸಬೇಕೆಂದು ನಿರ್ಣಯವಾಗಿದೆ. ಆ ಮೇಲೆ ಕೆಲವೇ ದಿನಗಳಲ್ಲಿ ಉಮೇದ್ವಾರರನ್ನು ಆರಿಸಿ ಜಾಹೀರು ಮಾಡಲಾಗುವುದು. ಉಮೇದ್ವಾರರನ್ನು ಆರಿಸುವಾಗ ಎಷ್ಟು ಜಾಗ್ರತೆಯನ್ನು ತೆಗೆದುಕೊಳ್ಳಲು ಸಾಧ್ಯವಿದೆಯೋ ಅಷ್ಟು ಜಾಗ್ರತೆಯನ್ನು ಕಮಿಟಿಯವರು ತೆಗೆದುಕೊಳ್ಳುವರು ಆದುದರಿಂದ ವೋಟರ ಮಹಾಶಯರು ಯಾರೊಬ್ಬ ಉಮೇದ್ವಾರರಿಗೂ ವ್ಯಕ್ತಿಶಃ ತಮ್ಮ ಬೆಂಬಲ ಕೊಡುವುದಾಗಿ ಮುಂದಾಗಿ ಮಾತುಕೊಡದೆ ತಮ್ಮ ವೋಟುಗಳನ್ನು ಕಾಂಗ್ರೆಸ್ ಉಮೇದ್ವಾರರಿಗೇನೇ ಕೊಡಲು ನಿರ್ಧಾರಮಾಡಿಟ್ಟುಕೊಳ್ಳಬೇಕಾಗಿ ಈ ಮೂಲಕ ವಿನಂತಿ

ಭೋಜರಾವ್, ಬೋಳಾರ

ಅಧ್ಯಕ್ಷ, ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ.

**ಜಿಲ್ಲಾ ಬೋರ್ಡು ಚುನಾವಣೆ**— ಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರಾಗಲಿಚ್ಛಿಸುವವರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಅರ್ಜಿಗಳನ್ನು ಕಳುಹಿಸುವ ಸಮಯವನ್ನು ಇದೇ ಆಗೋಸ್ತು ತಾ. ೩೧ರ ವರೆಗೆ ಮುಂದರಿಸಲಾಗಿದೆ. ಅರ್ಜಿಮಾಡುವ ಫಾರ್ಮುಗಳು ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ದೊರೆಯುತ್ತವೆ.

ಹಿ. ರಾಮರಾಯ ಮಲ್ಯ,

ಕಾರ್ಯದರ್ಶಿ.

ಜಿಲ್ಲಾ ಕಾಂಗ್ರೆಸ್ ಕಮಿಟಿ.

**ದ. ಕ. ಜಿಲ್ಲಾ ಆಟಗಳ ಸಂಘ ಮಂಗಳೂರು**—ದ. ಕ. ಜಿಲ್ಲಾ ಎತ್ಲೇಟಿಕ್ ಎಸೋಸಿಯೇಶನಿನ ವರ್ಷಾವಧಿ ಮಹಾಸಭೆಯು ಕಳೆದ ಜೂನ್ ತಾ ೨೧ರಲ್ಲು ಜರಗಲಾಗಿ ಗತವರುಷದ ಲೆಖ್ಖಪತ್ರಗಳು ಸ್ವೀಕರಿಸಲ್ಪಟ್ಟು ಮಂಜೂರಾದವು. ಬಾಲ್ತಿ ವರುಷಕ್ಕೆ ಶ್ರೀಯುತ ಸುರೇಂದ್ರನಾಥರವರು ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟರು. ಗತ ವರುಷದಲ್ಲಿ ಸಂಘದ ಕುಶಲ ತರುಣೋತ್ಸಾಹಿಗಳು ವಿವಿಧ ಕಸರತ್ತುಗಳಲ್ಲಿ ಭಾಗ ವಹಿಸಿದ ವಿವರವು ಹೆಮ್ಮೆಕ್ಕೆ ಎಗಿನೇ ಪ್ರತ್ಯೇಕ ವ್ಯವಸ್ಥೆಗೊಳಿಸಿದುದೂ ಆದರ್ಶವಾಗಿದೆ. ಮಹಾಜನರು ಈ ಸಂಸ್ಥೆಗೆ ಜನಧನ ಸಹಾಯವನ್ನೀಯಬೇಕೆಂದು ಕೋರುವೆವು


ಅಲಭ್ಯ ಲಾಭ! ಉಡುಪಿ ವಿಜಯಾದ ಭದ್ರತೆಗೆ!!

**ಶ್ರೀ ಪೇಜಾವರ ಮಠದ ಪರ್ಯಾಯಂ**

**ಬೋಂಡನ್ನು ಇಂದೇ ಕೊಂಡುಕೊಳ್ಳಿರಿ!**

ಮಠದವರಿಗೆ ಅವಶ್ಯವಾದ ಗರ್ಜಿನ ಬಗ್ಗೆ ಸಾಲಮಾಡುವ ಅಗತ್ಯ ಉಂಟೆಂದೂ, ಅದು ಮಠಗಳ ಹುಟ್ಟುವಳಿ ಮೇಲೆ ಸಿಂಧುವಾಗತಕ್ಕದ್ದೆಂದೂ ಪ್ರಿವಿಕೌನ್ಸಿಲಿನ ತೀರ್ಪು ಇದೆ.

ರೂ. 75, 80, 85, 90ರ ಬೋಂಡನ್ನು ಪಡಕೊಂಡು ಕ್ರಮವಾಗಿ 5, 4, 3, 2 ವರ್ಷಗಳಲ್ಲಿ ಒಂದು ನೂರು ರೂಪಾಯಿಗಳನ್ನು ವಾಪಾಸು ಪಡೆಯಿರಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಜನರಲ್ ಏಜಂಟ್, ಪೇಜಾವರ ಮಠ, ಉಡುಪಿ.**


## ಉಡುಪಿ

ಈ ಸಲದ ತುಳು ಸಂಚಿಕೆ ಸೇರಿ ಒಟ್ಟಿಗೆ ೧೩ ಸಂಚಿಕೆ ಕೊಟ್ಟಂತಾಯಿತು. ತುಳುವಿನಲ್ಲಿ ಪ್ರತ್ಯೇಕ ಒಂದು ಮಾಸಪತ್ರಿಕೆಯನ್ನು ಹೊರಡಿಸುವ ಯೋಜನೆ ನಡೆಸುತ್ತಿರುವುದರಿಂದ ನಾವು ಇನ್ನು ಮುಂದೆ ತುಳು ಸಂಚಿಕೆಯನ್ನು ಕೊಡುವುದಿಲ್ಲ. ತುಳು ಮಾಸಪತ್ರಿಕೆ ವಿಷಯದಲ್ಲಿ ಹೆಚ್ಚಿನ ಮಾಹಿತಿಬೇಕಾದವರು, ನಮ್ಮ ಆಫೀಸಿಗಾಗಲಿ, ತುಳುವ ಸಾಹಿತ್ಯಮಾಲೆಯ ಸಂಪಾದಕರಾದ ಶ್ರೀಯುತ ಎಸ್. ಯು. ಪಣಿಯಾಡಿ ಉಡುಪಿ ಇವರಿಗಾಗಲೀ ಪತ್ರವ್ಯವಹಾರ ಮಾಡಬಹುದು. (ಸಂ ನ)

### ಪ್ರೆಸ್ ಕೆಲಸಗಾರರ ಸಭೆ

ಇದೇ ತಾ. 23ರಲ್ಲು, ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾಯಂ ಘಂಟೆ 5-30ಕ್ಕೆ ಉಡುಪಿ ಪ್ರೆಸ್ಸುಗಳ ಕೆಲಸಗಾರರ ಪ್ರಾಥಮಿಕ ಸಭೆಯು ಶ್ರೀಯುತ ಪುರುಷೋತ್ತಮ ಪೈಗಳವರ ಅಧ್ಯಕ್ಷತೆಯಲ್ಲಿ ಸೇರಿತು.

ಕಾರ್ಯಕ್ರಮದಂತೆ ಶ್ರೀಯುತ, ಬಿ. ವಾಸುದೇವರಾಯರು ಮಂಗಳೂರು ಪ್ರೆಸ್ ಕೆಲಸಗಾರರ ಸಂಘದವರು ಮಾಡಿದ ನಿಯಮಗಳನ್ನನುಸರಿಸಿ ಉಡುಪಿಯ ಸಂಘಕ್ಕಾಗಿ ತಯಾರಿಸಿದ ನಿಯಮಗಳ ಪಟ್ಟಿಯನ್ನು ಸಭೆಯ ಮುಂದೆ ಓದಿ ಹೇಳಿದರು ಈ ನಿಯಮಗಳಲ್ಲಿ 'ಮುಷ್ಕರ' ಶಬ್ದವನ್ನೊಳಗೊಂಡ ಕೆಲವು ನಿಯಮಗಳ ಮೇಲೆ ಪ್ರಭಾಕರ ಪ್ರೆಸ್ಸಿನ ಕೆಲಸಗಾರರಾದ ಶ್ರೀ ಸದಾನಂದ ಭಟ್ಟರು ಆಕ್ಷೇಪವೆತ್ತಿದರು. ನವಯುಗ ಸಂಪಾದಕರಾದ ಶ್ರೀಯುತ ಕಾಂತಪ್ಪ ಶೆಟ್ಟರು ಅಧ್ಯಕ್ಷರ ಅಪೇಕ್ಷೆಯ ಮೇರೆಗೆ ಶ್ರೀಯುತ ಭಟ್ಟರು ತೆಗೆದ ಆಕ್ಷೇಪಗಳಿಗುತ್ತರ ವಿತ್ತು ಮುಷ್ಕರ ಶಬ್ದಕ್ಕಾಗಿ ಹೆದರಬೇಕಾಗಿಲ್ಲವೆಂದರು. ಬಳಿಕ ಶ್ರೀಯುತ ಯಸ್. ಯು. ಪಣಿಯಾಡಿಯವರು ಪ್ರೆಸ್ ಕೆಲಸಗಾರರ ಸಂಘದಿಂದ ಎಷ್ಟೋ ಉಪಯೋಗಗಳಿವೆಯೆಂದೂ, ಮುಷ್ಕರದ ಹೂಳ್ಳು ಬೆದರಿಕೆಯು ಫಲಕಾರಿಯಾಗಲಿಕ್ಕಿಲ್ಲವೆಂದೂ ವಿಶದಪಡಿಸಿದರು. ಅನಂತರದ ಭಾಷಣಕಾರರಾದ, ಪಿ. ವಿ. ಆಚಾರ್ಯರು ಸಭಿಕರಿಗೆ ಸಂಘದ ಆವಶ್ಯಕತೆ ಇದೆಯೇ ಇಲ್ಲವೋ ಎಂಬಿಷ್ಟನ್ನೇ ತಿಳಿಸಬೇಕೆಂದು ಬೇಡಿಕೊಂಡರು. ಸಭಿಕರ ಸರ್ವಾನುಮತಿಯಿಂದ ಸಂಘವು ಬೇಕೆಂದು ನಿರ್ಣಯವಾಯಿತು. ಶ್ರೀ ವಾಸುದೇವರಾಯರು ತಯಾರಿಸಿದ ನಿಯಮಗಳ ಮೇಲೆ ಕೆಲವರ ಆಕ್ಷೇಪಗಳಿದ್ದುದರಿಂದ ಅದನ್ನು ವಿಮರ್ಶಿಸಿ ನಮಗೆ ಬೇಕಾದ ಬದಲಾವಣೆಗಳನ್ನು ಮಾಡುವುದಕ್ಕಾಗಿ ೧೪ಮಂದಿ ಮೆಂಬರುಗಳುಳ್ಳ ಕಮಿಟಿಯೊಂದರ ನೇಮಕವಾಗಿ ತಕ್ಕ ಬದಲಾವಣೆಗಳನ್ನು ಮಾಡಿ ಸುಧಾರಿಸಿದ ನಿಯಮಗಳ ಪಟ್ಟಿಯನ್ನು ಒಂದು ತಿಂಗಳೊಳಗೆ ತಯಾರಿಸಿ ಸಾಗೆಯೇ ಸಭೆಯೊಂದನ್ನು ಕರೆದು ಅದರ ಮುಂದಿಟ್ಟು, ಸಭೆ ನಿಯಮಾವಳಿಯನ್ನು ಮಂಜೂರುಮಾಡಿಕೊಳ್ಳಬೇಕಲ್ಲದೆ ಆಯಾ ಪ್ರೆಸ್ಸಿನ ಪರವಾಗಿ ನೇಮಿಸಲ್ಪಟ್ಟ ಮೆಂಬರರು ಆಯಾ ಪ್ರೆಸ್ಸಿನಿಂದ ಎಷ್ಟು ಜನರು ಸಂಘದ ಮೆಂಬರರಾಗಲಿರುವರೆಂಬ ಒಂದು ವರದಿಯನ್ನು ತಯಾರಿಸಿ ಸಭೆಯ ಮುಂದಿಡಬೇಕೆಂದಾಯಿತು ಶ್ರೀ, ಯುತ ಎಸ್ ಯಸ್, ಕಾರಂತರು ಕನ್ವೀನರರಾಗಿ ಚುನಾಯಿಸಲ್ಪಟ್ಟರು. ಶ್ರೀ ಸದಾನಂದ ಭಟ್ಟರನ್ನು ಜೋಯಿಂಟ್ ಕನ್ವೀಯರನ್ನಾಗಿ ಆರಿಸಲಾಯಿತು. ಶ್ರೀ ಕಾರಂತರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯು ಕೊನೆಗೊಂಡಿತು


ಬಲ್ಲಿರಾ? ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

**ಶ್ರೀಮದ್ಭುವನೇಂದ್ರ ಮಹೌಷಧಾಲಯ.** ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—
ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ. **ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು!** ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ

ESTD. 1906

**The Canara Banking Corporation Udipi Ltd.**

(Incorporated in British India)

**Members:- RESERVE BANK OF INDIA.**

| | | | |
|---|---|---|---|
| Paid up Capital | Rs. 2,88,925 | 0 | 0 |
| Reserves | Rs. 3,52,213 | 0 | 0 |
| Deposits | Rs 37,98,217 | 0 | 0 |
| Govt. Securities | Rs. 12,46,325 | 0 | 0 |

**Total Resources exceed Rs. 52,00,000/-**

**ANNOUNCEMENT.**

**The Mettupalayam branch of the Corporation will be opened on 11—8—1937 and all kinds of Banking transactions will be undertaken from that date.**

*V. R. Kamath*, B. A., LL.B.
Ag. Manager

ನವಯುಗ

ಉಡುಪಿ, ಗುರುವಾರ, ತಾ. ೨೬-೮-'೩೭

# ಕರ್ನಾಟಕ ಪ್ರಾಂತರಚನೆ

ಕಳೆದ ವಾರ ಮದ್ರಾಸ್ ಲೋ ಕಾಲೇಜಿನ ಕರ್ನಾಟಕ ಸಂಘದ ಸಭೆಯಲ್ಲಿ ಮದ್ರಾಸ್ ಕೌನ್ಸಿಲಿನ ಪ್ರೆಸಿಡೆಂಟರಾದ ಡಾಕ್ಟರ್. ಯು ರಾಮರಾಯರು ಭಾಷಣಮಾಡುವಾಗ, ಕರ್ನಾಟಕ ಪ್ರಾಂತ ರಚನೆಯ ಕುರಿತು ಯುವಕರು ತೋರಿಸಬೇಕಾದ ಉತ್ಸಾಹ ಮತ್ತು ಕೈಕೊಳ್ಳಬೇಕಾದ ಕಾರ್ಯವನ್ನು ವಿವರಿಸಿ ಹೇಳಿದರು. ಕನ್ನಡಿಗರು ಮುಂಬಾಯಿ, ಮದ್ರಾಸ್, ಮೈಸೂರು, ಹೈದರಾಬಾದ್, ಕೊಡಗು ಮೊದಲಾದ ಬೇರೆ ಬೇರೆ ಪ್ರಾಂತಗಳಲ್ಲಿ ಚದರಿರುತ್ತಾರೆ. ಬೇರೆ ಬೇರೆ ಕಡೆಗಳಲ್ಲಿರುವ ಕನ್ನಡಿಗರ ಸಂಖ್ಯೆ ಸುಮಾರು 7 ಮಿಲ್ಯವಿರುತ್ತದೆ ಇಡೀ ಕರ್ನಾಟಕದ ಒಟ್ಟು ಆದಾಯವು ರೂ. 150 ಲಕ್ಷವೆಂದು ಅಂದಾಜು ಮಾಡಲಾಗಿದೆ. ಕನ್ನಡಿಗರಿಗೆ ತಮ್ಮದೇ ಆದೊಂದು ಪ್ರಾಂತವನ್ನು ರಚಿಸಲು ಈ ಆದಾಯವು ಸಾಕು ಕರ್ನಾಟಕಕ್ಕಿಂತ ಕಡಿಮೆ ಜನಸಂಖ್ಯೆ, ವಿಸ್ತೀರ್ಣ ಮತ್ತು ಆದಾಯವುಳ್ಳ ಒರಿಸ್ಸಾ, ಸಿಂಧ್ ಮತ್ತು ವಾಯುವ್ಯ ಗಡಿನಾಡುಗಳು ಸ್ವತಂತ್ರವಾಗಿವೆ. ಆದರ ಕನ್ನಡಿಗರ ಪುರ್ದೈವದಿಂದ ಕರ್ನಾಟಕ ಪ್ರಾಂತ ರಚನೆಯು ಹಿಂದೆ ಬಿದ್ದಿದೆ. ಅದಕ್ಕಾಗಿ ಪ್ರಯತ್ನಿಸುವವರು ಕಡಿಮೆಯೆಂದು ವಿಷಾದ ಸೂಚಿಸಿದರು. ಕರ್ನಾಟಕವು ಇಷ್ಟರೊಳಗೆ ಸ್ವತಂತ್ರ ಪ್ರಾಂತವಾಗದಿರಲು ಕನ್ನಡಿಗರ ಅಸಡ್ಡೆ ಮತ್ತು ಕರ್ನಾಟಕದ ಪ್ರಮುಖರ ಅಭಿಮಾನ ಶೂನ್ಯತೆ, ಅವಿವೇಕಗಳೇ ಮುಖ್ಯ ಕಾರಣ. ಒರಿಸ್ಸಾ, ಸಿಂಧ್ ಪ್ರಾಂತಗಳು ಸೈಮನ್ ಕಮಿಶನಿನ ಸಮಾಲೋಚನೆಗೆ ಪಡೆದು ಸ್ವತಂತ್ರ ಪ್ರಾಂತಗಳನ್ನು ಪಡೆಕೊಂಡವು. ಆದರೆ ಕರ್ನಾಟಕವು ಆಗ ಸ್ವತಂತ್ರ ಪ್ರಾಂತ ರಚನೆಗಾಗಿ ಸೈಮನ್ ಕಮಿಶನನ್ನು ಉಪಯೋಗಿಸಿಕೊಳ್ಳುವಷ್ಟರ ವಿವೇಚನೆಯಿಲ್ಲದೆ ಹಿಂದೆಬಿದ್ದಿರುವುದು. ಕರ್ನಾಟಕದ ಮುಖಂಡರು, ಬೇರೆ ಬೇರೆ ಪ್ರಾಂತಗಳಲ್ಲಿ ಸ್ಥಾನಮಾನ ಪಡೆದು ಸಂತೃಪ್ತರಾಗಿ ತಣ್ಣಗಿರುವರು. ಅವರ ಕರ್ನಾಟಕದ ಅಭಿಮಾನವೆಂಬುದು ಕೇವಲ ಶಬ್ದಾಡಂಬರ ಮಾತ್ರ. ಕರ್ನಾಟಕ ಪ್ರಾಂತ ರಚನೆಯ ಕುರಿತು ಕೇವಲ ಮಾನಸಿಕ ಸಹಾನುಭೂತಿಯನ್ನು ಮಾತ್ರ ಅವರು ತೋರಿಸಿ ಅಷ್ಟಕ್ಕೆ ತಮ್ಮ ಕರ್ತವ್ಯವಾಯಿತೆಂದು ಸುಮ್ಮನಾಗುವರು, ಕಾಂಗ್ರೆಸಿನವರಾಗಲಿ, ಇತರ ಯಾವ ಸಾರ್ವಜನಿಕ ಸಂಸ್ಥೆಗಳಾಗಲಿ ಕರ್ನಾಟಕ ಪ್ರಾಂತ ರಚನೆಯನ್ನೇ ತಮ್ಮ ಪ್ರಮುಖೋದ್ದೇಶವನ್ನಾಗಿ ಇಟ್ಟುಕೊಂಡು ಆ ಕುರಿತು ಎಡೆಬಿಡದೆ ಪ್ರಯತ್ನಿಸಿದುದಿಲ್ಲ. ಇಡೀ ಕರ್ನಾಟಕದಲ್ಲಿ ಅಂತಹ ಪ್ರಚಂಡ ಚಳವಳಿ ನಡಿಸಿ ಜನತೆಯಲ್ಲಿ ಪ್ರಬಲ ಜಾಗ್ರತಿಯನ್ನುಂಟುಮಾಡಿದವರಿಲ್ಲ.

ಆದರೆ ಈಗೀಗ ಹಲವು ಕನ್ನಡಿಗರಲ್ಲಿ ಕರ್ನಾಟಕ ಏಕೀಕರಣದ ಕುರಿತು ದೃಢವಾದ ಆಸಕ್ತಿಯುಂಟಾಗಿದೆ. ಕನ್ನಡಿಗರು ಒಕ್ಕಟ್ಟಿನಿಂದ ಪ್ರಯತ್ನಿಸಿದರೆ ಕರ್ನಾಟಕ ಪ್ರಾಂತ ರಚನೆಯು ಅಸಾಧ್ಯ ಅಥವಾ ಅವ್ಯವಹಾರ್ಯವೇನೂ ಅಲ್ಲ. ಈಗ ಬೊಂಬಾಯಿಯಲ್ಲಿ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷೀಯರಲ್ಲಿ ಪ್ರಾಮುಖ್ಯ ಸ್ಥಾನಗಳನ್ನು ಪಡೆದಿರುವ ಕನ್ನಡಿಗರಿರುವರು. ಅವರು ಮನಃಪೂರ್ವಕವಾದ ಪ್ರಯತ್ನ ಮಾಡಿದರೆ ಕರ್ನಾಟಕ ಪ್ರಾಂತ ರಚನೆಯು ಶೀಘ್ರವಾಗಿ ಕಾರ್ಯ ರೂಪಕ್ಕೆ ಬರುವಂತಾಗಬಹುದು. ಇದಕ್ಕೆ ಪೂರ್ವ ತಯಾರಿಯಾಗಿ, ದಕ್ಷಿಣಕನ್ನಡ, ಬಳ್ಳಾರಿ ಮತ್ತು ಕೊಡಗು ಜಿಲ್ಲೆಗಳನ್ನು ಪ್ರಕೃತ ಬೊಂಬಾಯಿ ಪ್ರಾಂತದ ಕನ್ನಡ ಜಿಲ್ಲೆಗಳೊಂದಿಗೆ ಸೇರಿಸಬೇಕೆಂದು ಕರ್ನಾಟಕ ಏಕೀಕರಣ ಸಂಘದಅಧ್ಯಕ್ಷರಾದ ಶ್ರೀ. ಬಿ. ಎಸ್. ದಾತಾರರು ಮಾಡಿರುವ ಸೂಚನೆಯು ಅತ್ಯಂತ ವ್ಯವಹಾರ್ಯವಾದುದಾಗಿದೆ. ಇದರಿಂದ ಕನ್ನಡ ಜಿಲ್ಲೆಗಳೆಲ್ಲಾ ಒಂದೇ ಸಂಸ್ಥಾನದೊಳಗೆ ಸೇರಿ ಒಂದೇ ಆಡಳಿತಕ್ಕೊಳಗಾಗುವಂತಾಗುವುದು. ಕನ್ನಡಿಗರೆಲ್ಲರು ಒಕ್ಕಟ್ಟಿನಿಂದ ನಡೆಯಲು ಅನುಕೂಲವಾಗುವುದು. ಮೊದಲಾಗಿ ಇಷ್ಟನ್ನು ಮಾಡಿ ಆ ಮೇಲೆ ಕರ್ನಾಟಕ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಪ್ರಯತ್ನ ನಡಿಸತಕ್ಕದ್ದು. ಬೊಂಬಾಯಿ ಪ್ರಾಂತಕ್ಕೆ ಸೇರುವುದರಿಂದ ಕೊಡಗು, ದಕ್ಷಿಣಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಹೆಚ್ಚು ತೊಂದರೆಯೇನೂ ಆಗಲಾರದು. ಆದುದರಿಂದ ಶ್ರೀ ದಾತಾರರ ಅತ್ಯಂತ ವಿವೇಕಪೂರ್ಣವಾದ ಈ ಸೂಚನೆಗೆ ಎಲ್ಲವರೂ ಬೆಂಬಲವೀಯುವರೆಂದು ನಂಬುತ್ತೇವೆ.

## ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆ

ಈ ಚುನಾವಣೆಯು ಈಗ ತಿಳಿದುಬರುವಂತೆ ಬರುವ ಆಕ್ಟೋಬರ ತಿಂಗಳ ಅಂತ್ಯದೊಳಗೆ ನಡೆಯಲಿರುವುದು. ಈ ಸಲವೂ ಇದರಲ್ಲಿ ಕಾಂಗ್ರೆಸು ಭಾಗವಹಿಸಲಿರುವುದೆಂಬುದು ಈ ಮೊದಲೇ ಪ್ರಕಟವಾಗಿರುವುದಷ್ಟೆ. ಆದರೆ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಕಾರ್ಯಕಲಾಪಗಳನ್ನು ದಕ್ಷತೆಯಿಂದಲೂ ಜನವಿಶ್ವಾಸಕ್ಕೊಳಗಾಗಿಯೂ ನಡೆಸುವ ನಿಜವಾದ ಜನಹಿತಸಾಧಕ ಸಮರ್ಥ ಕಾಂಗ್ರೆಸ್ ಮುಖಂಡರೊಬ್ಬರ ಅಭಾವದಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಚುಕ್ಕಾಣಿಯಿಲ್ಲದ ದೋಣಿಯಂತಾಗಿರುವುದು. ಇಷ್ಟರಲ್ಲೇ ಈ ಚುನಾವಣೆಗೆ ಕಾಂಗ್ರೆಸಿನ ಪರವಾಗಿ ನಿಲ್ಲುವ ಉಮೇದ್ವಾರಿಗಳ ಕುರಿತು ನಾನಾ ರೀತಿಯ ಸುದ್ದಿಗಳು ಹಬ್ಬತೊಡಗಿವೆ. ಕಾಂಗ್ರೆಸು ಕಳೆದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಕಳಕೊಂಡ ಪ್ರತಿಷ್ಠೆಯನ್ನು, ಜನವಿಶ್ವಾಸವನ್ನು ಎಸೆಂಬ್ಲಿ ಚುನಾವಣೆಯಲ್ಲಿ ಬಹಳವಾಗಿ ಹೆಚ್ಚಿಸಿತು. ಈ ಸಲದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಪುನಃ ಕಾಂಗ್ರೆಸ್ಸಿನ ಯಶಸ್ಸಿಗೆ ಕುಂದುಂಟಾಗುವಂತಾಗುತ್ತದೆ. ಉಮೇದ್ವಾರಿಗಳ ಆರಿಸುವಿಕೆಯಲ್ಲಿ ನಾನಾ ರೀತಿಯ ಸೂತ್ರಚಾಲನೆಗಳು ನಡೆಯುತ್ತಿವೆ. ಕಾಂಗ್ರೆಸ್ಸಿನ ಸೋಗಿನಿಂದ ವ್ಯಕ್ತಿ, ಜಾತಿ, ಸ್ವಾರ್ಥಸಾಧಿಸುವ ಕುಟಿಲತನವು ನಡೆಯಲಾರಂಭಿಸಿದೆ. ಎಂದೆಲ್ಲಾ ಅಪವಾದವೆದ್ದಿದೆ.

ಇಂತಹ ಪರಿಸ್ಥಿತಿಯಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯು ಎಷ್ಟೊಂದು ಎಚ್ಚರದಿಂದಿದ್ದರೂ ಸಾಲದು. ಉಮೇದ್ವಾರಿಗಳನ್ನು ಆರಿಸುವ ಜವಾಬ್ದಾರಿಕೆಯನ್ನು ಕಾಂಗ್ರೆಸಿನವರು ಕೇವಲ ಕೆಲಮಂದಿಗೆ ಬಿಟ್ಟುಕೊಟ್ಟು ಸುಮ್ಮನಿರಬಾರದು. ಆ ಕುರಿತು ಯಾವ ರೀತಿಯ ಗುಪ್ತತೆಯಾಗಲಿ, ಸೂತ್ರಚಾಲನೆಯಾಗಲಿ ನಡೆಯದಂತೆ ನೋಡಿಕೊಳ್ಳಬೇಕು. ಜನತೆಯನ್ನು ಸಂಪೂರ್ಣವಾಗಿ ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡೇ ಉಮೇದ್ವಾರಿಗಳನ್ನಾರಿಸಬೇಕು.

ಈಗ ರಚಿತವಾಗಿರುವಂತೆ ಜಿಲ್ಲಾ ಬೋರ್ಡಿನಿಂದ ಎಷ್ಟೊಂದು ಜನಹಿತಸಾಧನೆ ಮಾಡಬಹುದೆಂಬದು ಹೆಚ್ಚಿನವರಿಗೆ ತಿಳಿದ ವಿಷಯ. ಅಂದ ಮೇಲೆ ನಿಜವಾದ ಕಾಂಗ್ರೆಸ್ ಕೆಲಸಗಾರರ ಕಾರ್ಯಕ್ಷೇತ್ರವು ಹೊರಗಲ್ಲದೆ ಡಿಸ್ಟ್ರಿಕ್ಟ್ ಬೋರ್ಡು ಮುನಿಸಿಪಾಲಿಟಿಗಳೊಳಗಲ್ಲ. ಅವರು ಈ ಸ್ಥಾನಗಳಿಗಾಗಿ ಚಡಪಡಿಸಿದರೆ ಕೇವಲ ಆಡಂಬರಪ್ರಿಯರಾಗಿ ಸ್ಥಾನಮಾನಕ್ಕಾಗಿ ಬೋರ್ಡಿಗೆ ಹೋಗುವ ಇತರರಿಗಿಂತ ಅವರು ಹೇಗೆ ಮೇಲೆಂದಾಯಿತು? ತಾವು ದೂಷಿಸುತ್ತಿದ್ದವರ ಹಾದಿಯನ್ನು ತಾವೇ ಹಿಡಿದು ಹೋದಂತಾಗುವುದಿಲ್ಲವೆ? ಆದುದರಿಂದ ನಿಜವಾದ ಕಾಂಗ್ರೆಸ್ ಭಕ್ತನು ಪ್ರಕೃತದ ಅತ್ಯನುಕೂಲ ಪರಿಸ್ಥಿತಿಯಲ್ಲಿ ತನ್ನ ತನುಮನಧನವನ್ನು, ಕಾಂಗ್ರೆಸನ್ನು ಬಲಗೊಳಿಸಲು, ಅದಕ್ಕೆ ಹೆಚ್ಚೆಚ್ಚು ಜನಸಾಮಾನ್ಯರ ಬೆಂಬಲ ಪಡೆಯಲು ಉಪಯೋಗಿಸುವನೇ ಹೊರತು ಕ್ಷುಲ್ಲಕ ಡಿಸ್ಟ್ರಿಕ್ಟ್ ಬೋರ್ಡು ಮೆಂಬರಿಕೆಗಾಗಿ ಪ್ರಯತ್ನಿಸುವುದಕ್ಕಲ್ಲ. ತಾವು ಕಾಂಗ್ರೆಸ್ಸಿಗಾಗಿ ಕೆಲಸಮಾಡಿದ್ದೇವೆ; ತ್ಯಾಗಮಾಡಿದ್ದೇವೆ. ಅದರ ಬೆಲೆಯಾಗಿ ಡಿಸ್ಟ್ರಿಕ್ಟ್ ಬೋರ್ಡು ಮುನಿಸಿಪಾಲಿಟಿ ಸ್ಥಾನಗಳು ಸಿಗಬೇಕೆಂದು ಆತುರಪಡುವವನು ಎಂದಿಗೂ ನಿಜವಾದ ಕಾಂಗ್ರೆಸ್ ಭಕ್ತನಲ್ಲ. ತ್ಯಾಗಮತ್ತು ಸೇವೆಗೆ ಬೆಲೆ ತಾನಾಗಿ ಬರಬೇಕಲ್ಲದೆ ಅದಕ್ಕಾಗಿ ಚಡಪಡಿಸುವುದರಲ್ಲಿ ಅರ್ಥವಿಲ್ಲ. ಕಾಂಗ್ರೆಸ್ಸಿಗಾಗಿ ನಿಷ್ಠೆಯಿಂದ ಕೆಲಸಮಾಡುವನು ದಕ್ಷತೆಯಿಂದ ಕೆಲಸಮಾಡಿ ನಿಜವಾದ ಜನಹಿತಸಾಧಕನಾದವನು ತಮ್ಮ ಪರವಾಗಿ ಬೋರ್ಡಿಗೆ ಮೆಂಬರನಾಗಿ ಹೋಗಬೇಕೆಂದು ಮತದಾರರು ಆಶಿಸಿ ಅವನನ್ನು ತಮ್ಮ ಪರವಾಗಿ ಬೋರ್ಡು ಮೆಂಬರನಾಗಲು ಆಗ್ರಹಪಟ್ಟಲ್ಲಿ ಕಾಂಗ್ರೆಸು ಭಕ್ತನು ಆ ಸೇವೆಯ ಜವಾಬ್ದಾರಿ ವಹಿಸುವುದರಲ್ಲಿ ಮಾತ್ರ ಅರ್ಥವಿದೆ. ಆದುದರಿಂದ ಉಮೇದ್ವಾರರನ್ನು ಆರಿಸುವಾಗ ಕಾಂಗ್ರೆಸ್ ಜಿಲ್ಲಾ ಕಮಿಟಿಯವರು ತಾಲೋಕು ಮತ್ತು ಕೇಂದ್ರ ಕಾಂಗ್ರೆಸ್ ಕಮಿಟಿಗಳ ಅಭಿಪ್ರಾಯಕ್ಕೆ ಹೆಚ್ಚಿನ ಗಮನ ಕೊಡಬೇಕು. ಆಯಾ ತಾಲೋಕಿನ ಉಮೇದ್ವಾರಿಗಳ ಹೆಸರನ್ನು ಆಯಾ ತಾಲೋಕು ಕಾಂಗ್ರೆಸ್ ಕಮಿಟಿಯವರಿಗೆ ಕಳುಹಿಸಿ, ತಾಲೋಕು ಕಾಂಗ್ರೆಸ್ ಕಮಿಟಿಯವರು ಕೇಂದ್ರ ಕಮಿಟಿಗಳ ಅಭಿಮತ ಪಡೆದು ಪ್ರತಿಯೊಬ್ಬ ಉಮೇದ್ವಾರಿಯ ಕುರಿತು ಸರಿಯಾದ ವರದಿ ಕಳುಹಿಸುವ ಏರ್ಪಾಡು ಮಾಡಬೇಕು. ಅನಂತರ ಈ ವರದಿಯ ಆಧಾರದ ಮೇಲೆ ಉಮೇದ್ವಾರಿಗಳನ್ನು ಆರಿಸಬೇಕು.

ಸ್ಥಾಪನೆ] ನವಯುಗ [೧೯೨೧

**ಹೊಸವರ್ಷ**

**ನವಯುಗದ ಹದಿನೇಳನೇ ವರ್ಷವು ಇದೇ ಬರುವ ಸೆಪ್ಟಂಬರ ಮೊದಲಿಂದ ಆರಂಭವಾಗುವುದು. ಹೊಸವರ್ಷದ ಹೊಸ ಸಂಚಿಕೆಯನ್ನು ಆದಷ್ಟು ಸುಂದರವಾಗಿ ಹೊರಡಿಸಬೇಕೆಂಬ ಬಯಕೆ ಇದೆ. ವಾಚಕರ ಬೆಂಬಲವು ಇನ್ನಷ್ಟು ದೊರೆತರೆ "ನವಯುಗ"ದಲ್ಲಿ ಸಾಧ್ಯವಾದ ಸುಧಾರಣೆಗಳನ್ನು ಮಾಡಲಿರುವೆವು ನಮ್ಮ ಮಹದಿಚ್ಛೆಯ ಸಾಧ್ಯಾಸಾಧ್ಯತೆಯು ವಾಚಕರ ಕೈಯಲ್ಲಿದೆ. ಆದುದರಿಂದ "ನವಯುಗ"ದ ಪ್ರತಿಯೊಬ್ಬ ವಾಚಕರೂ "ನವಯುಗಕ್ಕೆ" ಚಂದಾದಾರರಾಗಿ ಸೇರಿ ಪ್ರೋತ್ಸಾಹಿಸಬೇಕಾಗಿಯೂ ನಮ್ಮ ಈಗಿನ ಚಂದಾದಾರರು ತಮ್ಮ ಒಬ್ಬೊಬ್ಬ ಮಿತ್ರರನ್ನಾದರೂ ಚಂದಾದಾರರನ್ನಾಗಿ ಸೇರಿಸಿ ಕೊಡುವ ಕೃಪೆ ಮಾಡಬೇಕಾಗಿಯೂ ವಿನಂತಿ.**

**ಸೆಪ್ಟಂಬರ್ ತಿಂಗಳಲ್ಲಿ ಚಂದಾದಾರರಾಗುವವರಿಗೆ 'ಹೆಂಡ್ತಿ ಗಂಡನಾದರೆ' ಮತ್ತು 'ಪುರುಷವಧು' ಎಂಬ ೦-೮-೦ ಕ್ರಯದ ಎರಡು ಸರಸ ಸಾಮಾಜಿಕ ನಾಟಕ ಪುಸ್ತಕಗಳನ್ನು ಇನಾಮಾಗಿ ಕೊಡಲಾಗುವುದು.**

**— ಇಂಗೇ ಆರ್ಡರ್ ಮಾಡಿರಿ —**

ಎಂಕ್ ಅಲ್ಪನೆ ಕಣ್ಣ್ ಆಲಸ್ಯ ಆಯಿನ ತೆರಿಜ್ಜ್, ಗಾಳಿದ ಒಂಜಿ ತೆರೆ ಎನ ನೆದ್ರೆನ್ ಕುಡ್ತುಂಡ್, ಲಕ್ಕ್‌ದ್ ತೂವನಗ ಪೊಲ್ತು ಏರ್‌ದಿತ್ತ್ಂಡ್. ಎನ ಮೋಕೆದಾಯ ಬತ್‌ದ್‌ಲಾ ಪೋದಾಂಡ್‌ಂದ್ ತೆರಿಂಡ್. ಕಣ್ಣ್‌ಡ್ ನೀರ್ ಬತ್ತ್ಂಡ್.

ಅಂಡ ಎನ ಕೈಟಿತ್ತಿ ಮಾಲ್ ಅಲ್ಲ ಇತ್ತ್‌ಜ್ಜ್. ಅವ್ವೆನ್ ಆಯೆ ಕೊಣಪೋದಿಪ್ಪೊಡು. ಎನ ಪೂತ ತೋಟೊಡು ಆಯ ನ ನಾದದ ಕುರುಹು ಇತ್ತ್ಂಡ್. ಅವ್ವೇ ಒಂಜಿ ತೃಪ್ತಿ ಎಂಕ್.

೨

ಬಯ್ಯದ ಗಾಳಿ ಬೀಜೊಂಗಿಪ್ಪುನಗ ಪೂತ ತೋಟೊಗು ಪೋದು ಅಲ್ಪ ಅರ್ಲ್‌ದಿ ಪೊಸ ಗುಲಾಬುದ ಪೂಕುಲೆನ್ ತೂತನಾ?

ತೂತಡ, ಆದಗ ನಿನ ಮನಸ್‌ಗ್ ಎಂಚ ಕೋಜುಂಡು? ಪೂತ ಮದುಪರಿಮಲ ನಿನ ಎದೆಕ್ ಮುಟ್ಟ್ನಗ ಇನಿ ಎಂಚಾಂಡಲಾ ಕೊಯ್ಯರೆಗ್ ಮನಸಾಪುಜ್ಜಾ?

ಆಪುಂಡು!

ಎಂಕ್‌ಲಾ ಮನಸಾಪೊಂದಿತ್ತ್ಂಡ್. ಒಂಜಿ ಕಾಲೊಡು ಮುಳ್ಳುಕಸ್‌ಂಡಲ ಚೆಂತೆ ಇಜ್ಜಿಂಡ್. ಏನ್ ಏತೋ ಗುಲಾಬುಲೆನ್ ಕೊಯ್ತಿನಾಯೆನೇ. ಇಸ್ ಮಾತ್ರ ಕೊಯ್ಯುನ ಬುಜ್ಜೆ. ಜಾಯೆಗ್‌ಂದ್ ಕೇಣುವನಾ?

ಒಂಜಿ ದಿನ ಬಯ್ಯಡ್ ಏನ್ ನೇಲ ನೇಲ ಗುಲಾಬುಲೆನ್ ಕೊಯ್ಯೊಂಡು ಇನಿ ಒಂಜಿ ಚೆಂಡ್ ಮಲ್ತೊಂಡು ಪೋಯೆ. ತಾದಿಡ್ ಎನ ಇರ್ವೆರ್ ಪಾಸಟೆದಾಕುಲು ತಿಕ್ಯೆರ್. ಆಕುಲೆಗ್ ಎನಕ್ಕೈತ ಪೂನಿ ತೂದು ಮೆಯ್ ಮಾತ ಮಲ್ತಾಂಡ್.

ಆಯಿಟ್ ಒರಿ ಏನ್ ಅಂಚಿಂಚಿ ತೂವನಗ ಎನ ಕೈತ ಪೂತ ಚೆಂಡ್‌ನ್ ಒಯ್ತ್ ಕಾಂಡೆ. ಎಂಕ್ ಎನ ಎದೆನಿಯೇ ಒಯ್ತ್ ಕಾಂಡಿಲೆಕ್ಕ ತೋಜಿಂಡ್. ಎನ ಪೂಕುಲೆನ್ ಪಿರ ಕೊರ್ಲ್‌ಂದ್‌ದ್ ಕೇಂಡೆ.

ಈ ನಡುಟು ನನ ಒರಿ ಪಾಸಟೆದಾಯೆಲಾ ಆ ಪೂತ ಮಿತ್ತ್ ಕಣ್ಣ್ ನಾಡೊಂದಿತ್ತೆ.

"ಈ ಗುಲಾಬುದ ಪೂನಿ ತಿಂದ್‌ದ್ ತೂತನಾ?" ಆಯ ಎನ ಕೈಟ್ ಕೇಂಡೆ.

"ಇಜ್ಜಿ"ಂದ್‌ದ್ ಯಾನ್ ಪಂಡೆ.

"ನಾ ರುಚಿ ಗೊತ್ತುಂಡಾ?"

"ಏತ್ ರುಚಿ ಇತ್ತ್ಂಡಲಾ ಗುಲಾಬುದ ಪೂನಿ ಯಾನ್ ತಿನಯೆ."

ಆಯಗ್ ಆ ಪೂನಿ ತಿನ್ಪುನವೇ ಒಂಜಿ ಗಿರ ಪತ್ತ್ಂಡ್. ಬೊಕ ಒರಿ ಪಾಸಟೆದಾಯ ಕೈಡ್ದ್ ಅವ್ವೆನಿ ಒಯ್ತ್ ಕಾಣರೆಗ್ ತೂಯೆ. ಯಾನ್ ಬುಡುಜಿ.

ಎಂಕುಲು ಕಾದುಣ್ಣೆನ್ ತೂದು ಪೂನಿ ಒಯ್ತ್ ಕಾಂಡಿ ನಾಯು ಎಂಕೇ ಅವ್ವೆನಿ ಪಿರ ಕೊರಿಯೆ.

ರಡ್ಡೆನಾಯೆ ಅವೆನ್ ತಿನ್ಪುಜ್ಜಿಂದ್ ಆಜ ನಾಡೊಂದು ಗೆತೊಂಡೆ. ಎಂಕ್ ಆ ಪೂತ ಮಿತ್ತ್ ಭಾರಿ ಮೋಕೆ ಇತ್ತ್ಂಡ್. ಆಂಡಲಾ ಆಯ ಮಿತ್ತ್‌ದ ಪ್ರೀತಿಡ್ ಇನಿ ಆಯಗ್ ಕೊರಿಯೆ.

ಬೊಕ್ಕ ಎಂಕುಲು ಬೇತೆ ಬೇತೆ ದಿಕ್ಕ್‌ಗ್ ಪೋಯ. ಅರ್ದ ಗಳಿಗೆದಗ ಬನ್ನಗ ರಸ್ತೆಡ್ ಎನ ಪೂತ ಚೆಂಡ್ ಬೂಲೊಂದಿತ್ತ್ಂಡ್. ಆಯೆ ಅವ್ವೆನ್ ಮೂಸು ಮೂಸುದು, ಉಸುರುದ ಬೆಸಿ ತಾಗ್‌ದ್ ಅವು ಬಾದಿಯೆಡ್ ಬೊಕ್ಕ ಅವೆನ್ ದಕ್ಕ್‌ದ್ ಪೋದಿತ್ತೆ.

ಎಂಕ್ ದುಕ್ಕ ಬತ್ತ್ಂಡ್. ಆ ಚೆಂಡ್‌ನ್ ಪೆಜಿದ್ ಎದೆಕ್ ಒತೊಂಡುದು ಪೂತ ತೋಟೊಗ್ ಬತ್ತೆ.

ಏನ್ ಕೊಣಪೋತಿ ಪೂಕುಲೆ ಪುದೆಲ್‌ದ ಮುದೆಲ್‌ಗ್ ಬತ್ತ್. ಆದಗ ಇರ್ಲಾದಿತ್ತ್ಂಡ್. ತಿಂಗೊಲು ಮೂಡುದಿತ್ತ್ಂಡ್. ಮಂಜಿ ಬೂರುದು ಆ ಪುದೆಲ್‌ದ ಇರೆಕುಲೆ ಮಿತ್ತ್ ಪನಿ ಕೂಡುದಿತ್ತ್ಂಡ್. ಆ ಪನಿ ತೂವನಗ ಪುದೆಲ್ ಕಣ್ಣೀರ್ ಬುಡೊಂದಿತ್ತ್ಲಕ್ಕ ತೋಜಿಂಡ್.

ಯಾನ್ ಕೊಣಬತ್ತಿ ಬಾಡ್‌ದಿ ಪೂಕುಲೆನ್ ಅಯ್ತ್ ಮುದೆಲ್‌ಡ್ ದೀದ್ ಕಣ್ಣೀರ್‌ದ ಸಾಕ್ಷಿಡ್ ಆಜ ಪಾಡೊಂಡೆ.

"ಗುಲಾಬುಲು ಏತ್ ಪೊರ್ಲಿತ್ತ್ಂಡಲಾ ಆಯಿಕುಲೆನ್ ಅಪ್ಪೆ ಪುದೆಲ್‌ಡ್ದ್ ಕೊಯ್ಯಯೆ!"

ಇಸ್ ಪೂತ ಪರಿಮಲ ಎನ್ನ ಎದೆಕ್ ಮುಟೆಂಡ, ಪೊರ್ಲ್‌ದ ಪೊಣ್ಣನ ಕೈ ಒಳ್ಳಾಂಡಲಾ ತತ್ತ್‌ದ್ ನಮ ಕೈಕ್ ತಾಗ್‌ಂಡ ಮೆಯ್ಯ್ ಮಿಂಚೊಂಜಿ ಎಂಚ ಪಾರುಂಡಾ ಅಂಚನೇ ಆಪುಂಡು!

ತುಳು ಮುರ್ಲಿ.

**೧೨ ತಿಂಗಳ್ತ ತುಳು ಸಂಚಿಕೆ ಬೈಂಡ್ ಆತಿ ಪ್ರತಿ ಬಿಲೆ 0 8 0**

ನವಯುಗ ತುಳು ಸಂಚಿಕೆ

ಸಂಪುಟ ೧ | ಸಿಂಹ (ಸೋಣ) ೧೦ ಗುರುವಾರ | ಸಂಚಿಕೆ ೧೨

## ನಾಯೆರ ರಾಯೆರ್

ಕವಿ:— ಎಂ. ವಿಠಲ ಹೆಗ್ಡೆ

ಜನೊಕುಲು ನುಪ್ಪುಡ ಉರುಡುವೆರ್
ಪೊಟ್ಟ್ ಕಣ್ಣಾಯನ್ ನೆರ್‌ಡುವೆರ್!
ಲೋಕದ ದೊಂಡೆಗ್ ಪಸ್ ಕೊರರೆ
ನಾಯೆರ ರಾಯೆರ್ ಪಿರೆಡುವೆರ್!

ಮಾತೆರ್ ಕಲ್ತೆರ್ ಪಸ್ ತಿನರೆ
ದಂಡದ ನುಪ್ಪು ನು ಕೈಕೊನರೆ
ನಾಯೆರ ರಾಯೆರ್ ನಡುಕಟ್ಟ್‌ದ್
ಲಕಿಯೆರ್ ಜೆಗರರ್ತಿದ್ ಬೆನರೆ!

ಪಣೊರುದ ಲೇಖನಿ ಅರೆ ಕೈಟ್
ನೆಲತೋಲ್‌ದ ಮಿತ್ತ್‌ದ ನೈಟ್
ಬರೆಪೆರ್ ಪೊರ್ಲುದ ಪೊಸಕವನ
ಕವಿ ಬಾಳುವೆ ಬಾಳುವೆರೈಟ್!

ದೇವೆರೆ ಹಂಗ್‌ದ ಮಗೆ ಆರ್
ಬರಡಿನ್ಸೆರ್ ಬಾನದ ನೀರ್
ಬಾಕಿದಗುಲು ಅರೆ ಕೈತುಲಯಿ
ನಾಯೆರ ರಾಯೆರ್ ಸುಲ್ಲಾರ್! ೪

೧ ಅಪ್ಪೆನ ನುಪ್ಪುದ ರುಚಿಪಸ್‌ಡ್
ಲೋಕದ ಕೆಲಸೊಲು ಮುಸುಮುಸುನು
ಪೋಪಿನೆ, ಕೆಲಸದ ಕೈಯಾಡ್
ರಾಯೆರ್ ಮುಡಿತೆರ್ ನೈಯ್ಯೊಸುದು! ೫

೨ ಕೀರ್ತಿದ ಪಾಲ್‌ಡ್ ಮನಸಿಜ್ಜಿ
ಮಣ್ಣ್‌ದ ತಿರ್‌ಲ್‌ದ ರಿತಿ ಸಜ್ಜಿ!
ರಾಯೆರ್ ಬುಡಿ ಪುದರ್‌ದ ಪುದೆಕ್
ಲೋಕನೆ ಉರುಡುರುಡುದು ಬಜ್ಜಿ! ೬

೩ ನಾಯೆರ ರಾಯೆರ್ ಇತ್ತೆರ್‌ಡ
ಬೊಲ್ಪುದ ಕಂಡೊಗು ಜತ್ತೆರ್‌ಡ
ನುಪ್ಪುದ ಪರ ಕರ ದರಿಯಂಡ್
ಗೆಟ್ಟನ್ ದೊಂಕುಡು ದರ್ತೆರ್‌ಡ! ೭

## ಸಮಾಜೊಗಾಹುತಿ!

ಬರೆತಿನಾಯೆ:— ಕಿಶೋರೆ.

ಆನಿ ಐತಾರೊ. ಬೋದಾಯನಾತ್ ವಿರಾಮೊ ಇತ್ತ್ಂಡ್. ಯಾನ್ ಇನಿ, ಮದ್ಯಾನೊತ ಒಣಸ್ಸಾತ್ ಬಾಸಿಗೆ ತೂಪಿ ಗಲಾಟೆಗ್ ಪೋವಂತೆ, ಲೈಬ್ರರಿ ಕನಾಟ್‌ಡಾಡೆಗ್ ಪೋತ್, ಒಂಜೊಂಜೇ ಪುಸ್ತಕೊಲೆನ್ ತೂವೆರ ಸುರುಮಲ್ತೆ. ಎನ ರಡ್ಡ್ ಪರ ಡೈರಿಲು ತಿಕ್ಯೊ. ಈ ಬೂಕುತಿಡೆಟ್ಟ್ 'ಈ ಡೈರಿಲೆನ್ ನೆಕ್ಕ್ ಸೇರ್ಸಾದ್‌ನಿ ಏರಪ್ಪಾ?' ಪಂಡೊಂಡ್ ಆವೆನ್

ಇಂಚಿ ದೆತ್ತೆ. ಆ ಡೈರಿಲೆಟ್ ಒಂಜಿ ಮುಪ್ಪತ್ತ್ಮಾಜನೆ ಇಸವಿತವು. ಬೊಕ್ಕೊಂಜಿ ಮುಪ್ಪತ್ತೊಂಜೆನವು. ಮುಪ್ಪತ್ತೊಂಜೆನೆ ಇಸವಿತೆನ್ ಬುಡ್ಪಾಯೆ. "8-3-'31

ಸೋಮವಾರೊ— "ಇನಿ ಕಾಂಗ್ರೆಸ್ ಸ್ವಯಂ ಸೇವಕೆರೆ ಮಿತ್ತ್ ಲಾಠಿ ಚಾರ್ಜ್ ಆತ್ ಇರ್ವೆರೆ ಸತಿ ನರಿಂಡ್" ಬುಕ್ಕೊಂಜಿ ಪುಟೊ ದೆತ್ತೆ. "27-7-'31

ಬುದವಾರೊ—

"ಇನಿ ಪ್ರೇಮಗ್ ಜೋರು ಸರಿ ಬೇನೆ, ಬಯ್ಯತ ಟೀ ಸೊನ್ನೆ."

"ಅಯ್ಯೋ, ಇದ್ದಿ ಪಂಟ" ಪಂಡೊಂದ್ ಕುಲ್ನಾಡೆಗ್ ಬತ್ತಲ್ ಎನ್ನ ಯಜಮಾನ್ತಿ ಪ್ರೇಮ. "ಇನಿ ಆತ್ತ್ ಭೂತಕಾಲೊಡ್, ... ರಾಣೀಸಾಹೇಬ..." ಉತ್ತರೊತೆದ್ಲ್ ತೂವಂತೆ ಜೇತೆ ಪುಟ ದೆತ್ತೆ. "13-12-'31

ಶುಕ್ರವಾರೊ—

"ಶಾಮಲೆನ ಮಿತ್ತ್ ಮೊಕ್ಕೇಸರ್ರಿ ಬಲಪ್ರಯೋಗೊ"

"ಅಂಚ ಪಂಟ ಎಂಚಿನ?" ಕೇಂಡೆರ್ ರಾಣಿಸಾಹೇಬೆರ್. "ಅವು ಭಾರೀ ಮಲ್ಲ ಕಥೆ ಪ್ರೇಮಾ.." "ಪಂಡ್ಯೆ ಎನ್ನಾ ಕೇಣ್ಣೆ"

"ಯಾನ್ ಎಲ್ಯಾಯೆ ಆತಿಪ್ಪುನಗ ಎಂಕ್ಲೆ ನರೆಟ್ಟಿ ಸದಾಶಿವರಾಯೆರಿತ್ತೆರ್ ಆರ್ ಮಲ್ಲ ಸಾಹುಕಾರೆ. ಬೊಡ್ಯಾನ ಬುಡ್ಪಿನಳಿ ಬರೀತ್ಂಡ್. ಆರೆಗಿತ್ತಿನ, ರಮೇಶೆಲಾ ಶಾಮಲೆಲಾ ಇಲ್ಲಿಡೆ ಬಾಲೆಲು ರಮೇಶಗೆನ್ನ ಸರಿಪ್ರಾಯೊ. ಶಾಮಲೆ, ಬಾಲೆ ವರ್ಸೊಗ್ ಲ್ಯಾಲ್ ಆತೆ. ಎನನ್ ರಮೇಶನ ಅಪ್ಪೆ, ತನ ಬಾಲೆಕುಲೆಕ್ಕ ತೂವೊಂದಿತ್ತೆರ್. ರಮೇಶಗ್ ಪದ್ಯೆನ್ ವರ್ಸೊಗ ಆನಗನೆ ಆಯನ ಅಪ್ಪೆ ತೀರ್ ಪೋಯೆರ್. ಎಂಕ್, ಅಯಿ ದಾನೊ, ಆಶೆ ತತ್ತ್. ಯಾನ್ಲಾ ರಮೇಶೆಲಾ ಅಪಗ VI ಫೋರ್ಮುಡಿತ್ತೊ. ಶಾಮಲೆ III ಫೋರ್ಮುಡಿತ್ತಲ್, ರಾಯೆರ್ ಪಿಂತೆ, ಬಿನಾಲಾ ಆಯೆರ್.

"ಪ್ರೇಮಾ! ಕನರಾತ್ರ್ ಅಮ್ಮಗ್ ಕಸ್ಪೊ ಬೊಡ್ಪಿಂಡ್ ರಮೇಶೆ ಸಾರ್ ಪೋಯೆ. ಇಂದು ವಾತ, ರಾಯೆರೆಗ್ ಗಡಿತ್ತಮಿತ್ತ್ ಬೊಕ್ಕ ಲಕ್ಕೊಡ್ಯಾಂಡ್ , , , ,

"ಸಮಯ ಕಳಿಕೊಡ್ಯಾ ಆರೆಗ್ ಈ ದುಃಖೊಟೀ ವಿಸಮ ಜ್ವರೊ ಸುರು ಆಂಡ್. ಯಾನ್ ಆರೆನ್ ತೂವರೆ ಪೋನಗ ವಾತ, ಆರ್ ಶಾಮಲೆನ ಸುದ್ದಿಯೇ ಪಾತೆರೊರ್. "ಶಾಮಲೆ ಎಂಕ್ಲೆಲ್ಲಪ್ಪಡ್ ಆರೆಗ್ ನ್ಯಾಯೊ ಬರಡ್. ನಿರಗಾಂಟ್ಲೆ ಕೊರ್ತ್ ಮದ್ಮೆ ಮಲ್ಪೊಡುಂಡ್ ನಾನ್ ಪಂಡೆರ್, ಎನ್ನ ಅಮ್ಮೆ. ರಾಯೆರ್ಕ್ ಒಪ್ಪಂದೆ ವೆಂಕಟೇಶಯ್ಯಗ್—ಆ ಮುದಿ ಜಬ್ಬುಗ್ ಶಾಮಲೆನ್ ಮದ್ಮೆ ಮಲ್ತ್ ದ್ ಕೊರ್ಯೆರ್. ಶಾಮಲೆನ ತರೆಟ್ಟವು ಬರೆತಿತ್ತ್ಂಡೊ ದಾನ್ನೊ?

"ಪ್ರೇಮಾ, ರಾಯೆರೆ ಅಂತ್ಯಕಾಲೊಡ್ ಲಂಡನ್ಡ್ದ್ ರಮೇಶನ ಕಾಗದ ಬತ್ತ್ಂಡ್. ರಾಯೆರೆಗ್ಯೆನ್ ತೋಜ್ಪಾಯೆ. ಆರ್ ಸಂತೋಸೊಡು ಪ್ರಾಣೊ ಬುಡ್ಯೆರ್.

"ಅಯ್ಯೋ! ಇಂಚಿ ಶಾಮಲೆನ ಕಂಡಾನಿ ವೆಂಕಟೇಶಯ್ಯಗ್ ಕಾಲರಾ ತಾಗ್ಂಡ್. ಆಯಿಲಾ ಮಾಮನ ಜತೆ ಬುಡ್ಡೆ ಪ್ರೇಮಾ. ಆ ಪದಿಮೂಜಿ, ಪದ್ನಾಲ್ ವರ್ಸೊದ ಶಾಮಲೆ ವಿಧವೆ ಆಯಲ್. ಯಾನ್ "ಶಾಮಲೆನ ಮೋರೆ ತೂಪೊಡಂದ ಬಲ್ಲ" ಪಂಡ್ದ್ ಮುಲ್ಪದ ಸಂಗತಿಲೆನ್ ಮಾತ ವಿವರ್ಸಾದ್ ಮಿತ್ತ್ ಮಿತ್ತ್ ಕಾಗದೊ ಪಾಡ್ಯೆ ರಮೇಶನ್.

"ಪ್ರೇಮಾ ಇಂಚಿ ಕೇಣ್ ಬಹು ಸಮಯೊಡ್ದ್ ಬೊಕ್ಕ ರಮೇಶೆ ಊರ್ಗ್ ಬತ್ತೆ. ಅಪಗ ಈ ಎನ್ನ ಕೈ ಪತ್ತ್ದಿತ್ತ್. "ಶಾಮಲೆನ್ ಮದ್ಮೆ ಆಪನಾ" ಕೇಂಡೆ. ಯಾನ್ ದಾನೆ ಪನೊಡು ಮದ್ಮೆ ಆಪಿನೆ ಯಾನ್ ತಯಾರೇ ಇತ್ತೆ."

"ಅಪಗ ಎನಡ್ಡಿರೇಗ್ ಸುಖೊ ಇದ್ದಿಂದ್ ತೋಜುಂಡು." ರಾಣಿ ಸಾಹೇಬೆರ್ ಬುಲ್ತೊಂತೆ ಕೇಂಡೆರ್. ಪ್ರೇಮಾ ಇಂಚಿ ಕೇಣ್. ರಮೇಶಗ್ ಯಾನ್ ಪಾತೆರಂದೆ ಇತ್ತಿ ಕಾರಣೊ ತೆರಿಂಡ್. ಎನ್ನ ಒತ್ತಾಯೊದ ಮಿತ್ತ್, ಶಾಮಲೆನ್ ಮಾಮಿ ಇಲ್ಲಡ್ದ್—ಸೆರೆಮನೆಡ್ದ್—ಲೆತೋಂದು ಬತ್ತ್ಡ್, ಆಲೆ ಸಹ ಸಾರ ಸತಿಕಗ್ ರಮೇಶೆ ಆಲೆನ್ ಮದ್ಮೆ ಮಲ್ತ್ದ್ ಕೊರ್ಯೆ.

"ಪ್ರೇಮಾ! ಕ್ರೂರ ಸಮಾಜೊತ ಕಣ್ಣ್‌ಗ್ ಈ ನೂತನ ದಂಪತಿಲ್ ಬೂರ್ನವೇ ತಡೊ, ಸಮಾಜೊ ಉರಿಕಾರೆರ ಸುರು ಮಲ್ತ್ಂಡ್. ಶಾಮಲೆ ಪತಿಂಕೆರೆ ಮಿತ್ತ್ ಸ್ವಾಮಿಲು ಬಹಿಷ್ಕಾರೊ ದೀಡ್ಯೆರ್. ಥೂ!!!

"ಅಯ್ಯೊ!.. ಆನಿ ರಮೇಶೆ ಇಪ್ಯಾಂಡ್. ಪ್ರೇಮಾ ದೇವಸ್ಥಾನೊತ ಒಳ ಅಂಗಣೊಟು ಬತ್ತಲ್ಂಡ್ತ್ ಮೊಕ್ತೇಸರ್ರ್ ಶಾಮಲೆನ್ ಕೆಕ್ಕಿಲ್ ಕೈ ಸಾಡ್ದ್ ನೂಕಾಯೆರ್. ನೂಕ್ನಗ ಶಾಮಲೆ ಒಂಜಿ ಕಲ್ಲ್‌ತ ಮಿತ್ತ್ ಬೂರ್ದ್ ಆಲೆ ತರೆ ನರಿಂಡ್. ಊರ ಜನೊ ಹಹ! ಹವ!! ಪಂಡೆರ್. ... ಪ್ರೇಮಾ....ಇದೇ ಶಾಮಲೆನ ಅಂತ್ಯೊ ಆಂಡ್ ಅಯ್ಯೋ! ...ಯಾನ್ ಎನ ಒಪ್ಪ ಪುಟ್ಟ ವೆಗ್ಗಿಯೇ ಸೈತಲ್ಂಡ್ ಪ್ರೀತ್ದ್ ಬುಳ್ತ್

ರಮೇಶೆ ಊರ್ಗ್ ಬತ್ತೆ ಆಯಗ್ ಪೂರಾ ವಿಚಿತ್ರ ಆತ್ ತೋಜ್ಂಡ್. "ಮೊಕ್ತೇಸರೆ ಮಿತ್ತ್ ಕೇಸ್ ಮಲ್ಪು



ಪಾಪ! ಬಡವೆದಿ ಆಲ್
ಅಲೆನಂಚ ಬಡನೆರ್
ಬೇತೆ ಇಜ್ಜೆರ್, ಆಲೆ
ಒರ್ತಿ ತಿಕಿಯೊಲು ನಿಕ್ಕ್
ಕುಚೆತ್ ಕುಚೆತ್‌ದ್ ಕೆರ್ಪ
ಆವಡೆಡ್ನಾವಡ್! ಅಯ್ಯಯ್ಯೊ ಪಾಪ
ದಾನೆ ಪೊರ್ಲುದ ರೂಪ
ಅಯ್ಯಯ್ಯೊ ಪಾಪ!
ಆಲೆನ ಬಂಜಿದ ತೂವು
ಮುಗಲ್ ಕಾಣೆರುನವು
ಆಲ್ ಬುಲಿಪುನಗ ಈ
ತೆಲಿಪನಾ? ನಿನ ಬಚ್ಚ್
ಬದ್ಕ? ಪೊರ್ಲುದ ಪೊಣ್ಣು
ತರೆ ದೆರ್ತ್ ತೆಗ್ಲಿ ಕೊಡಿ
ಬೋಡುಂದ್ ಕಿನಿಕಿಯನೆ!
ಆ ಕಮ್ ಬೆರಿ ಪಸ್‌ದ್
ನಿನ ತರೆಕ್ ದರ್ಪಂದ!
ಓ ಪಾಪಿ! ತೆಟ್ಟಯನೆ,
ಜನ್ಮೊನೇ ತೆಟ್ಟಯನೆ!
ಹಾಳಾಪ! ಹಾಳಾಪ!!

ಕೋಟಿ ಕಡಲದ ನೀರ್
ಅಲೆ ಕಣ್ಣ್‌ದೊಂಜಿ ಪನಿ!
ನಿನನ್ ಮುರ್ಕವು ತೂಲ
ಅಲ್ ಬಡವೆದಿ ಅಂದ್
ಅಲೆ ತಿಗಲೆದ್ದ್ ಕಾಲ
ಕೊಟದಾ ತುಂಡು! ಜನ್ಮನೆ ಕೆಟ್ಂಡ್ ಪಾಪನೇ!
ದಾನೆ ಪೊರ್ಲುದ ರೂಪ
ಅಯ್ಯಯ್ಯೊ ಪಾಪ!
'ಧರ್ಮ' ಪನ್ಪನೆ ಧರ್ಮ
ಮುರಿಯೊಲೆಡ್ ಮಟ್ಟುನಾ?
ಬಡವೆದಿನ್, ತಪ್ಪುದಂತಿನ
ಪಾಪದಲೆನಿಂಚ ಬುಲಿಪವರೆ
ಧರ್ಮ ಸಿನುವಾ? ಪಣ್ಲ
ಅಲೆನೊಂತೆ ತೂವಯನ
ಎಲೆಡೆಲ್ಪದ ಗಳಿನ್ ಕೊರಿಯನೇ!
ನಿನ ಧರ್ಮ ಗಿರ್ಮ, ಅಲೆ
ಬುಲಿಪು ಪುಟ್ಟವು ವೋನೆ
ದೆಮುರುಂತ? ಪಾಪನೆ!
ದಾನೆ ಪೊರ್ಲುದ ರೂಪ
ಅಯ್ಯಯ್ಯೊ ಪಾಪ!

## ತೆರೆಕುಲು

೧

ಆಯಿ ಕಾಂಡೆ ಬರ್ಪೇಂದ್‌ದ್ ಪಿಂಬುನ ದಿನ ಬಯ್ಯದಗನೆ ಸುಟ್ಟಿ ಇತ್ತ್ಂಡ್. ಭರತದ ಸಮಯೊಡು ಕಡಲ ಕೆರೆಟ್ ಬಾಕುನ ತೆರೆಕುಲು ಒಂಜೊಂಜೇ ಮುಟ್ಟು, ಮಿತ್ತ್ ಪೋಪಿನ ಲೆಕ್ಕನೇ ಎನ ಮನಸ್‌ಡ್ ಆನಂದ ದಿಂಜೊಂದು ಬರ್ರ ಸುರು ಆಂಡ್.

ಆಯಿ ಬನ್ನಗ ಏನ್ ಆಯನ್ ವಾ ನಮುನೆಡ್ ಸ್ವಾಗತ ಮಲ್ಪೊಡು, ಆ ಪೊತ್ತುಗು ಎನ್ನ ಭಾವ-ಭಂಗಿ ವಾ ನಮುನೆಡ್ ಉಪ್ಪೊಡು ಪಿನ್ಪಿ ವಿಚಾರೊಡು ಎನ ಬಯ್ಯ ಇಲ್ಪಾಂಡ್.

ತಿಂಗೊಲು-ಬೊಲ್ಪುದ ಆ ಇರ್ಲ್‌ಡ್ ಎನ್ನ ನಲ್ಮೆದಾಯಗ್ ಕಾಂಡೆ ಪಾಡೆರಗಾದ್ ಒಂಜಿ ಮಾಲೆ ನೆಯ್ಯರೆಗ್ ಎನ ಪೂತ ತೋಟೊಡಿತ್ತಿನ ಎಡ್ಡೆಡ್ಡೆ ಪೂಕುಲೆನ್ ಮಾತ ಕೊಯ್ಯೆ. ಎನ ಬುಟ್ಟಿಡ್ ದಿಂಜವೊಂದು ಬತ್ತ್. ಅನಗ ಎನ ಒಡಲ್‌ದಕ್ಕನೇ ಎನ ಬುಟ್ಟಿ ದಿಂಜಿನ್ ಪೋನಿತ್ತ್ಂಡ್.

ರಾತ್ರಿ ಇಡೀ ಕುಲ್ಲುದು ಪೂ ನೆಯ್ಯೆ, ಪುಲ್ಯೊಕ್ಕೆಲ್ದಾನ ಪೊಲ್ತುಗು ಮಾಲೆ ಮುಗಿಂಡ್. ಕೈಟ್ ಮಾಲೆನ್ ಪತ್ತ್‌ನ್ ದೆರ್ತ್‌ನ್ ತೂಯೆ. ಆ ತಿಂಗೊಲ್ತ ಬೊಲ್ಪುಡು ತಯಿತ ಪೊರ್ಲುನು ತೂದು ಎನ ಮಿತ್ತೇ ಎಂಕ್ ಒಂಜಿ ತರತ ಕುಸಿ ಆಂಡ್. ಮಾಲೆನ್ ಕೈಟ್ ಪತೊಂದು ಆಯನ್ ಕಾತ್ತ್ ಕುಲ್ಲೆ.

ಗಾಲಿ ಮೆಲ್ಲ ಮೆಲ್ಲ ಬೀಸೊಂದಿತ್ತ್ಂಡ್, ಇರೆಕುಲು ಒಲಿಯು-ದನಿಟ್ ಮೊರವೊಂದಿತ್ತ, ಮೂಡಯಿ ಬಾನದ ಬೊಲ್ತು ಭಾಯಿ ತೂದು ಪಕ್ಕಿಲು ಚಿಲಿಪಿಲಿ ಸೊರ ಮಲ್ಪರೆ ತೊಡಂಗಿಯೊ.

ಅಂದ್ ಕಣ್ಣ್‌ಬುಲಾದ್ ತೂಯೆ. "ಓಳ್ಳೆ ಸೀನೆ? ಓಂಡ್ ಗುಂಡು? ಕಿಸೆಟ್ ಕಾಗದೊಲಾ ಇದ್ದಿ. ಆಂಗಿ ಇತ್ತ್‌ಂಡತ್ತೆ ಕಿಸೆ. ಕಡೆಡ್ತ್ ಸುರುಮುಟ್ಟ ಆಲೋಚನೆ ಮತ್ತೆ. ಮಾತ ತರೆಕ್ಕ್ ಬಡೆತ್‌ಂಡ್. ಇಂದು ಕನೊಂದ್‌ತ್ ತೆರಿಂಡ್. ಆ ಸತ್ತೇದಾರಿ ಕಥೆತ್ತ ಒಂಜ ಪುಟನ್ ಓದ್‌ನೆಡ್ತ್‌ವರ ಆಯಿ ಪರಿಣಾಮೊಂದ್‌ತ್ ತೆರಿಂಡ್. ರಡ್ಡ್ ರಡ್ಡ್ ಸರ್ತಿ ಇಂದೆನ್ ನೆನೆತ್ತೊಂಡ್, ಒರತ್ತ ಸ್ಪೈತ ಬೆಗಾರ್‌ನ್ ಉರ್ದ್‌ತ್, ಪೆರಸ್ಪ ಹಾಸಿಗೆತ ಮಿತ್ತ್ ಜೆತ್ತೆ!

## ! ಬಡವೆದಿ !

ಕವಿ:— ಎಂ. ವಿಠಲ ಹೆಗ್ಡೆ

ದಾನೆ ಪೊರ್ಲುದ ರೂಪ
  ಅಯ್ಯಯ್ಯೊ ಪಾಪ!
ಮೋನೆದ್ಪೈಸ್ರದ ಬೊಟ್ಟು
  ಇಜ್ಜಿ, ಬಡೆವೆದಿ ಆಲ್!
ಉಂದೆಟ್ಟ್ ಬಡಪತ್ತ್!
  ಅಯ್ಯಯ್ಯೊ ಪಾಪ
ದಾನೆ ಪೊರ್ಲುದ ರೂಪ
  ಅಯ್ಯಯ್ಯೊ ಪಾಪ!
ಏರ್ ಮಳ್ಪೆರ ದಾನ್ಪ
  ಆಲವೆನ್ ಪಿನಯೊಲು
ತಿಗಲ್ ತರೆಪ್ಪಸ ಗೇನ
  ಅಲೆನ್ ತಿನ್‌ಪುಂಡು ಪಸ್ದ್
ಆಗಲ್ ಕೆಲಸೊಗು ಆಲ್
  ಹೋಕ್ನೆ? ಬಡವೆದಿ ಆಲ್!
ಲೋಕ ಮಲ್ಲಗಲೆಗ್?
  ಆಲ್ ಬತ್ತಿನಿ ದೇಗ್
ಅಯ್ಯಯ್ಯೊ ಪಾಪ
  ದಾನೆ ಪೊರ್ಲುದ ರೂಪ
ಅಯ್ಯಯ್ಯೊ ಪಾಪ!
  ಮೂಕುದಿದ ಸೌಭಾಗ್ಯ
ಬೋಡುಂದು ಬುಲಿಪುಂಡು
  ಅಲೆ ಹೋನೆ! ಏರಗಲು
ಕೊರುಪಿ ಪುಣ್ಯಾತ್ಮೆರ್?
  ಏರ ಮಳ್ತೆರ್ ಉಣರೆ

ಅಲ? ಕಣ್ಣೀರ್‌ದಾ
  ಕಲೊಸನೆನ್ ತೂದು ಮದ
ಪನೆ? ನಿನಡ ಪಸೆಯಿಜ್ಜಿ!
  ಅಯ್ಯಯ್ಯೊ ಪಾಪ!
ದಾನೆ ಪೊರ್ಲುದ ರೂಪ
  ಅಯ್ಯಯ್ಯೊ ಪಾಪ!
ಓಲ ಲಕ್‌ದಲ್ಪನೇ
  ಬೂರುನವು ಆ ಜೀವ
ಏರ್ ಮುನಿಯೊಡು ದೇಗ್?
  ಏರ್ ಕುಜೆವೊಡು ದೇಗ್!
ಐತ ಪೊಂಜೀತ್ ಸುಖ
  ಇಡಿ ಲೋಕ ತೊಡುಪಾಡ್ದ್
ಬೈತ್ ಗೆಕ್ಕೊನೊಡ! ಪಾಪ!
  ಅಲೆಡ ಪೊಂಬ್ಜಿನಿ ದಾನೆ
ಉಂದೊಂಜಿ ಧರ್ಮನಾ?
  ಅಯ್ಯಯ್ಯೊ ಪಾಪ!
ದಾನೆ ಪೊರ್ಲುದ ರೂಪ
  ಅಯ್ಯಯ್ಯೊ ಪಾಪ!
ನಮ ಪಿನಯ, ಪಿನರೆ ಪೋ
  ಪೊಡು ದೇಗ್! ಅಲ್ ಕರ್ಲ್
ಕುಮೆ ಕುಮೆಡ್ ಕೋಟಿ ನೆಲ
  ಕಯಿನಾಲ್ ದರ್ಪುಪೊಲ್!
ಆ ಮುಂಚಿಯ ಬೆರಿ ಬುಡುವ!
  ದಾನೆ ಪಡೆತೊಂಡಪ್ಪ
ಈ ಕರ್ಮ, ಈ ದರ್ಪು,
  ಈ ತಿಗಲೆ ತೋಜಾಡ್?
ಈತ್ ನಿನ ಕಾರ್ಬಾರ
  ಅಲೆ ಜನ್ಮ ಕೆಟ್ಟವರೆ!



ಕೊನಾ" ಪಂಡೆ ಯಾನ್. "ಏರೆಗ್ ಬೋಡಾತ್ ಶಿವ್ರಾ" ಪಂಡ್‌ತ್ ರಮೇಶೆ ಎನ್ನ ಕೈ ಪತೊಂದು ಬುಲ್ತೆ. ಪ್ರೇಮಾ! ಆನಿಡ್ದ್ ಬೊಕ್ಕ ಯಾನ್ ರಮೇಶನ್ಲಾ ಸತೀಶನ್ಲಾ ತೂತುಜಿ.

"ಹಾಯ್ !!! ಆ ಕ್ರೂರ ಸಮಾಜೊಗ್ ಕಣ್ಣ್ ಟ್ ನೆತ್ತೆರಿಜ್ಜಾ? ಶಾಮಲೆ! ನನ ಓಲ್ಲ? ಸಮಾಜೊಗಾಹುತಿ ಆತ್ ಪೋತ ಈ...... .." ಪಂಡೋಂತಿತ್ತಿ ಲೆಕ್ಕೊನೆ ಎನ ಕಣ್ಣ್‌ಲೆಡ್ ಪರತೋಂದಿತ್ತಿನ ಗಂಗಾ—ಯಮುನಾ ಪ್ರವಾಹೊಲೆನ್ ಉರ್ದೊಂಡೆ. ಅಂದ್. ತೂಯೆ. ಪ್ರೇಮಲಾ ಸೆರಗ್‌ನ್ ಆಡ್ಡೊ ಪತೊಂದ್ ಬುಲ್ತೊಂದಿತ್ತಲ್.

ಹೇ! ಕ್ರೂರ ಸಮಾಜೊನೇ ನಿಕ್ಕ್ ಈತ್ನೇಟಿ ತಿಕ್ಕಿ ಆಹುತಿಲ್ ಯ್ಯಾಡಾ?

## ತುಳುಭಾಷೆನ್ ಮದಪಡೆ.

ಕವಿ:— "ತುಳುಬಾಲೆ"

ಪೆತ್ತಿ ಅಪ್ಪೆ ಕಲ್ಪದಿತ್ತಿ !
  ಮುತ್ತುದಲ್ಕ ಪೊರ್ಲುಂ ಇತ್ತಿ !
  ತುಳುನಾಡ್‌ಡ್ ಖ್ಯಾತಿದಿತ್ತಿ !
  ತುಳುಭಾಷೆನ್ ಮದಪಡೆ ||
ತುಳುನಾಡ್‌ದ ಪುದರ್‌ನ್ !
  ತುಳುಜನೊಕುಳೆ ಮಾನನ್ !
  ತುಳುರಾಜರೆ ಖ್ಯಾತಿನ್ !
  ಕಾತಿ ತುಳುನ್ ಮದಪಡೆ ||
ತುಳುಭಾಷನ್ ಮದಪಡೆ !
  ತುಳುನಾಡ್‌ನ್ ಮದಪಡೆ ||
  ಬೇಗ ಕಣ್ಣ್ ಜಪ್ಪುಲೆ !
  ಧೈರ್ಯ ಮಲ್ತ್ ಲಕ್ಕುಲೆ ||

## ಕರ್ಣಾಟಕ - ಏಕೀಕರಣ - ಪರಿಷತ್ !

ಲೋಕೊದ ಪಾತ್ರೊಡು ಕತ್ತಲ್-ನೀರೇ
  ದಿಂಚ್‌ದ್ ಉಕ್ಕೊಂದಿತ್ತ್‌ಂಡ್
ಬಾಣದ ಬಟ್ಟಲ್ ಸೋರುದು ಸೋರುದು
  ಊರೇ ಮುಲ್ಕೊಂದಿತ್ತ್‌ಂಡ್.
ಎಂಕಲೆ ಇಲ್ಲದ ಪಿರಪದ ಕಂಡೊಡು
  ಕಪ್ಪೆಳೆ ಸಭೆ ಆದಿತ್ತ್‌ಂಡ್
ಪಿರಪದ ಜನ್ಮೊಡು ಕಪ್ಪೆನೆ ಏನ್
  ಆಯಿಕುಲೆ ಭಾಷಲ ಗೊತ್ತುಂಡು.
ವಾ ನಮುನೆದ ಸಭೆ! ವಾ ವಾ ಕಪ್ಪೆ!
  ಜೊಳ್ಳ್ ಕಪ್ಪೆಲಾ ಬೈದ್‌ಂಡ್!
ಜೊಂದ್ ಕಪ್ಪೆಲಾ ಮರತ ಕಪ್ಪೆಲಾ,
  ಜೊಳ್ಳ್ ಕಪ್ಪೆಲಾ ಬೈದ್‌ಂಡ್!
ಆದಗ ಕಂಡಲೊನಿ ದತ್ತ್‌ಂಡಾತೇ
  ನಾಯಿರ್ ಕೊರ್ದಿನ ಅಂಚಿಂಚಿ
ಮಣ್ಣ್‌ದ ದಂಡೆಲು ಅಲ್ಪಾದಿತ್ತ
  ಕಪ್ಪೆ ಸಭಿಕೆರೆಗ್ ಅವು ಬೆಂಚಿ!

ಬರ್ಸದ ಪೊಡತದ ಜೋರುನಿ ತೂದು
  ಅನಿದ ಸಭೆ ಪನಿ ತಡೊವಾಂಡ್
ಒರ್ಂಬ ಗಂಟೆಗೇ ದೀತಿನ ಸಭೆ ಅವು
  ಪತ್ತ್ ಗಂಟೆದಗ ಸುರುವಾಂಡ್.
ಜೊಳ್ಳ್ ಕಪ್ಪೆ ಆ ಸಮಯೊಡು ಒಂಜಿ
  ಮೋರೆ ಮಿತ್ತ್ ಮಲ್ತ್‌ದ್ 'ಟೊರ'
ಉಂಡ್‌ದ್ ಪಲ್ಲನಿ ಪಾಡಿನ ಬೊಕ್ಕ
  ಮಾತ ಸೇರ್‌ದಪ್ಪೆನೆ ಪಂಡೊ.
ಅವು-ಆ 'ಟೊರ ಟೊರ'—ಪಾಡೊ, ಪಿಂಬರಾ?
  ಕಪ್ಪೆಳೆ "ಗಾಡ್ ಸೇವ್ ದೀ ಕಿಂಗ್"!
ಪ್ರಾರ್ಥನೆ ಪಾಂತಿನ ಎಂಚಿ ಜಂಬರಾ?
  ಪ್ರಾರ್ಥನೆ ಅವು ಡಿಂಗೋ ಡಿಂಗ್!
ಐನ್ ಮಿನಿಟ್ ಪ್ರಾರ್ಥನೆ ನಡತ್‌ಂಡ್
  ಬೊಕ ಕಾರ್ಯಕ್ರಮ ಸುರುವಾಂಡ್
ಜೊಂದ್ ಕಪ್ಪೆ ಒಪ್ಪೊಲೆ ಲಕ್‌ದುಂತುಂಡು
  ಕಾರ್ಯ-ದರ್ಶಿ ಅವು ತೋಜುಂಡು

ಆ ಕಪ್ಪೊನೆ ಲಕ್‌ನುಂತುದು "ಈ ಸಭೆ
ಸೇರಾದಿ ಕಪ್ಪೆಳೆ ಪರವಾದ್
ಮಾನವ್ವೆ ಮಾಂಡೂಕ್ಯಾಚಾರ್‍ಯೆನಿ
ಅವ್ಯಕ್ಷೇ'ವರೆ ಕೇಂಡೊನುವೆ"
ಈತ್ ಪಂಡ್‌ದವ್ವು ಕುಲ್ಲುನೆ, ಬಾರಿ
ಮಲ್ಲ ಕಪ್ಪೆ ಲಕ್‌ದುಂತೊಂದು
ಅಲ್ಲಿಂ ಇತ್ತಿನ ಸರ್ವೆಕಲ್ಲ್‌ಡ್
ಲಯ್ಯ್‌ದ್ ಪೊರ್ಲುಪು ಕುಲ್ಲೊಂಡು
"ಎನ್ನಡ್ ಮಿಕ್ಕ್‌ದ ಯೋಗ್ಯತೆ ಇತ್ತಿನ
ನೇಲ ನೇಲಾಕುಲು ಇತ್ತೇರ್
ಆಂಡಲ ಎಂಕೇ ಗೌರವ ಕೊರಿನೆಡ್
ಎಂಕಿನಿ ಉಪಕಾರದ ಪೇರ್—
ಆಂಡಲ ಸಭಿಕೆರ್ ಮಾತೆರೆ ಸಾಯೊಡು
ಮುಗಿಪುವ ಎನ ಕೆಲಸದ ಬಾರ
ಒಂಜೆನೆ ಬಾಷಣ ಕರ್ತೆರ್ ಮಕ್ಷಿಕ—
ಭಕ್ಷಕರಾಯಿರ್ ಬೈದೇರಾ?"
ಮಕ್ಷಿಕ- ಭಕ್ಷಕ ರಾಂಪಿರ್ ಒತ್ತ್‌ದ್
ಲಂಪ್ಪುರ್ ಕಟ್ಟಿದ ಪುಣಿತರ್—
"ಓ ಎನ ಸೂ ದರಿ ಸೂ ದರರ್, ಒರ
ಕಪ ಕೂರುನ್‌ರಾ ಪಿಸಿ ಇಡ್ಸೇ?
ನಮ ಮುಂಡಂಕೆರ [illegible] ವರ್ತೆನ್
ಬರಪದ ಪ್ಯಾಚವ ನನತ್‌ಂಡ
ಇನಿತ ಈ ಪರಿಸ್ಥಿತಿಳಿನಿ ತೂನಗ
ಕಣ್ಣ್‌ಡ್ [illegible] ಪನಿಪಂದ?
ಭಾರತಕಾಲದ ವೀರರ್ ಗುರುವರ
[illegible] ನಮ್ಮಾರ್!
ಮಾಂಡೂಕ್ಯೋಪನಿಷತ್ತ್ ಪಣ್‌ಂಡ
ಋಷಿಲ್ [illegible] ಪಿನದಾರ್?
ಮಾನವ ಲೋಕೊಗು [illegible] ಕೊರಿಂಜಿ
[illegible] ಮೂಲದ ನಮ್ಮ ಕುಲ,
ಇನಿ ಈ ಗೊಂಡು ಬಾರ [illegible] ಂಡರ್
ನಮ [illegible] ಒರಿ ಒರಿ!
ಪೂರಾ ಜಾತಿಳು ಸಂಘೊಳು ಮಲ್ತ್‌ದ
ತಪುಕುಳು ಒಂಜೆಳನ್ ಕ ತೂಬುನ್ಯಾ

ನಮ್ಮಾಕುಳೆಗಾ? ಸಂಘಟನೆ'ನ್ನಿನ
ಶಬ್ದನೆ ಪಿನಂದ್, ದಾನನುವೂ?
ಮುರಾನಿ ಕೇಂಡಿನ ಸುದ್ದಿನಿ ತೆರಿಪನೆ,—
ಒಳ್ಳೆಳೆ ಪ್ರಬಲತೆ ಹೆಚ್ಚಾದ್,
ನಮ ಕೂಟೊಳನೇ ನುಂಗೆರೆಗೆಣ್ಣೆರ್
ನಾವು ತೂಪಿನಾ ಪೆಚ್ಚಾದ್?
ಏತೋ ಒಳ್ಳೆಳೆ ಬಾಯಿಗ್ ಪೊಗ್ಯಂದಿ
ಕಪ್ಪೆಳು ನಮ್ಮಾಕುಳೆಡುಳ್ಳ
ಮೋಕುಳು ಮಾತೆರ್ ಸೇರ್‌ದುಂತುಂಡ
ಒಳ್ಳೆಳು ಕೇರೆಳು ಓಳುಳ್ಳ?
ಈತೇ ಮಾತ್ರನ? ನಮ ಆಹಾರೊಗು
ದೇವೆರ್ ಸೃಷ್ಟಿತಿ ಮೀನುಳುಲ
ಕೆಲಂಜಿ ಜಾತಿಲ ಸಂಘೊಳು ಮಲ್ತ್‌ದ್
ನಮ ಬಾಯಿಗ್ ಮಣ್ಣ್ ಪಾಡೊಳಿಯಿ?
ಈ ಮೀನ್—ಕೆಲಂಜಿಳೆ ಸಂಕೋಚದ
ಬುದ್ಧಿನ್ ನಮ ಇಸೆ ಖಂಡಿಪೊಡು!
ಒಳ್ಳೆಳೆ, ಕೇರೆಳೆ ಅತ್ಯಾಚಾರೂನು
ನಿಮಿಷಲ ತಡೆವಂದೆ ದಂಡಿಪೊಡು
ಚೀನದ ಜನಕುಲು ನಮ ಕುಲ ತಿನ್ಪೆರ್
ನಾವುಂದೆನ್ ನನ ತಡೆಪೊಡು!
ಇಂಚನ ನಮ ಕುಲ ಸೈತೇ ಪೋಂಡಾ
ನಮ ಅವಸ್ಥೆ ನನ ಒಡೆ ಪೋಪೊಡು?
ಜನಕುಲು ನನ, ತೋಡುಳು, ಕಟ್ಟದ ಪುಣೆ,
ಗೋಡೆಳು ದಂಡೆಳು ಕಟ್ಟ್‌ದ್
ನಮ ಏಕೀಕರಣನ್ ತಡಪಾವುನ
ಅತ್ಯಾಚಾರನ್ ಉಂತಾವೊಡು"
ಇಂಚ ರದಾವುನಿ ಮುಂಬು ದೀಪುಣನ
ಸರ್ವಸಮ್ಮತೊಡ್ ಪಾಸಾಂಡ್!
ಈತೆನ್ ಮಲ್ತ್‌ದ್ ಸಭ ಮುಗಿದಾಕಿನ
[illegible] ಸಭಿಕೆರ್ ಲಕ್ ಪೋಂಡ್!
ಓ ವಾಚಕರ್, ಈ ಸಭ ತೂನಗ
ಕರ್ನಾಟಕ ಏಕೀಕರಣ
ಸಭೆಕುಳೆ ನೆಂಪಾಪುಜ್ಜ ನಿಕರ್‌ಗ್,
ದಾನನುಪರ್? ನನ ಪೋಪುಣನ?

"ತುಳು ಮರ್ಲೆ"



# ಧನಿಕೆ-ಬಡವೆ

ಬರತಿನಾಯೆ: "ಕಿಶೋರಿ"

ಧನಿಕಡ್ದಾತ್ ಬಡವೆ ಉಲ್ಲೆ!
ಬಡವಡ್ದಾತ್ ಧನಿಕೆ ಮಲ್ಲೆ!
ಬಡವೆ ದನಿಕೆ ಒಟ್ಟುಗುಲ್ಲೆ!
ಧನಿಕೆ ಕಾರ್!
ಬಡವ ಕರೆತ!
ಮಿತ್‌ದೀವೆನಾ?
ಬಡವೆ ಬೆಂದ್!
ಜಂಟೆ ಧನಿಕೆ!
ಜೀವೊಟೆಪ್ಪೆನಾ?
ದನಿಕೆ ತಿನೊಡು!
ಬಡವೆ ಬೆನೊಡು!
ದನಿಕೆ ಸುಕೊಡು!
ಕಾಲೊ ದೆಪ್ಪೊಡು!
ಇಂದು ಸಾಧ್ಯೊನಾ?

ದನಿಕೆ ಎಡವ ಕೂಡೊಡು!
ಪೊರ್ಲುಟತ್ತ್ ಬಾಳೊಡು!
ಪಡಿಕ್ಕೆ ನೆನಪಂದಿಪ್ಪೊಡು!
ಕೆಲಸೊ ಮಲ್ತ್!
ದಕ್ಲ್ ಇತ್ತ್!
ಸುಕೊಡ್ ಬಾಳೊಡು!

ಬಡವಗೀತ್ ನುಪ್ಪುಯಾವು!
ಧನಿಕಗಾತ್ ಬೋಡು ಪನವು
ಧನಿಕೆ-ಬಡವಗಿದ್ದಿ ಸಾವು?
ದನಿಕೆ-ಬಡವೆ!
ದೊಟ್ಟುಗಾಂಡ!
ಎಡ್ಡೆ ಆವನಾ?
ಬೆನೊಡು ಬಡವೆ!
ತಿನೊಡು ಧನಿಕೆ!
ಇಂದು ಸಾದ್ಯೊನಾ?
ಧನಿಕೆ ಕೊರೊಡು!
ಬಡವಗೀತ್!
ಬಡವೆ ಬೆನೊಡು!
ಧನಿಕಗಾತ್!
ಇಂದು ಸಾಧ್ಯೊನಾ?

## ಎನ್ನ ಕನೊ

ಬರತಿನಾಯೆ —ಬಾಲಕೃಷ್ಣೆ

೧

ಕತ್ತಲೆತ ಒನಸ್ನಾಯಿ ಪೆಟ್ಟ್‌ಗ್ ಯಾನ್, ಜೆಪ್ಪಿನ ಕೋಣೆಗ್ ಪೋವದ್ ಹಾಸಿಗತ ಮಿತ್ತ್ ಬೂರೊಂಡೆ ದಾನೆ ಮಲ್ತ್‌ಂಡಲಾ ನಿದ್ರೆ ಬತ್ತ್‌ಜಿ ಲಕ್ಕಿಯೆ, ಲೇಂಪ್‌ದ ಬತ್ತಿನ್ ಮಲ್ಲ ಮಲ್ತ್‌ದ್, ಮೇಜ್‌ತ ಮಿತ್ತ್‌ತ್ತಿನ ಒಂಜ ಕಾದಂಬರಿನ್ ದತ್ತ್‌ದ್, ಬುಡುಪಾಯಿ ಕನ್ನಡೊ! ಅಂಬಿಕೆ! ಇಂದು ವಾ ಅಂಬಿಕೆ ತೂಕೊ ಪಂಡ್‌ದ್ ನಡು ಬಾಗೊನೆ ಬುಡಿಪಾಯಿ. ಪನಿ ವಿಶೇಶೊ ತೋಜಿಂಡ್ ಆ ಪುಟೊನಿಡಿ ಒದಿಯೆ [illegible] ಜಂ ಪಂಡ್‌ಂಡ್ ಆ ಪುಟೊ ಪಿಸ್ತೂಲ್‌ಲೆನ ಸಟ್ಟ್‌ದ್ ದಿಂಜತ್ ಪೋತಿತ್‌ಂಡ್ ಪೂರಾ ರಕ್ತಮಯೊ ಆ ಪುಟೊ (?) 'ಗುಂ ಸಂಡ್‌ದ್ ಪುಸ್ತಕೊನ್ ಮೇಜ್‌ತ ಮಿತ್ ದೀದ್ ಬರೆ ಮುಸಿಗೆತ ಮಿತ್ತ್ ಬೂರಿಯೆ ಗಂಟೆ ಪತ್ತೊಂಜಿ ಆಂಡ್ಲ ನಿದ್ರೆ [illegible] ಪುರೆಟೊ ಗಿತ್ತ್

೨

[illegible] ಜಾಗ್ರತೆ! [illegible] ಕಾಗದೊಲೆನ್ [illegible]. '
'ಇದಿ ಸೀನ [illegible] [illegible] ಯಾನ್

"ಮುಟ್ಟ್‌ತ್ ತೂಯೆಂಟ ಜಾಗ್ರತೆ! ಇಂಚಿಕೂಲು" ಯಾನ್ ತೂಯೆ ಸೀನೆ ಕೈಟ್ ಪಿಸ್ತೂಲು ಪತ್ತೊಂದು ಉಂತೋಡಿತ್ತೆ "ಅಯ್ಯೋ! ನೆಂಪ್ಪುಯಿ ಸೀನಾ" ಸೀನೆ ಈ ಸರ್ತಿದ ಯನ ಪಾತೆರೊಲೆನ್ ಕೇಂಡ್‌ದ್, "ಓಂದು" ಆ ಕಾಗದೊಲೆನ್ ಕೊಂಡತ್ತ್‌ಕೊಯಿ"

"ಅಂದ ಸೀನ-ಯಂಕ್ ಬೊಡ್ಚಿ " ಸೀನೆ ಕೋಪೊಡು ಪರು ಕಡೆಪೊಂದು ಪೋಯಿ ಯಾನ್ ಬಯ್ಯನಗ ಕ್ಲಬ್ಬ್‌ಗ್ ಪೋವೇತೆ ಟಪ್ಪಾಲ್ ಪೇವ 3 ಕವರ್‌ಲೆನ್ ಕೊರ್ಯ ಅವು ಪೂರಾ ಸೀನನ ವಿಳಾಸೂಗಿತ್ತ್‌ಂಡ್ ಪೋಸ್ಟಾಫೀಸ್‌ತ ಮೊಹರ್‌ಲೆನ್ ತೂಯ ಮೂಜಲಾ ಮುಲ್ಪತನೇ ಆದಿತ್ತೊ 'ಎನ್ನವತ್ತ್ ಪಂಡ್‌ದ್ ಪೇದೆಗ್ ಕೊರ್ಯರ [illegible] ಯಿಯ [illegible] ದಿತ್ತೆ ಕಾಗದೊಲೆನ್ ನರಿಪು ಕೋಣ್ [illegible] ನರಿಸ್ಥರ ತೂನಗ ನರಸಿಂಗನ ಸವಾರಿ ಬತ್ತ್‌ಂಡ್ ಎಂಕೆಮೂಡಾತ್ 'ತೆರಿಂಡ್ ಮಗ—ಸೀನೆಗ್ ಪಣ್ಣೆ" ಪಂಡ್ [illegible] ಆಯಿ ಬೀಸ ನಡತೆ ಯಾನ್ ಕಾಗದೊಲೆನ್ ನುಪಂಚ [illegible] ದತ [illegible]
"ಮೂಜಿ [illegible] [illegible] ಎಲ್ಲ [illegible]" ಯಾನ್ ಪೋಪು, [illegible] ಕೇಂಡ ಸೀನನ ಸ್ವರೂ, "ಸೈತ್ತ್‌ಪೊ"

' [illegible] ' [illegible] ಪಂಡೊಂದು ಗುಂಡು ಎನ್ನ ದೆ[illegible] ಬತ್ತ್‌ತ್ [illegible] ಅಯ್ಯೋ!!!"

## ಚಂದಾದಾರರಲ್ಲಿ ವಿನಂತಿ.

**ಈ ತಿಂಗಳಾಂತ್ಯಕ್ಕೆ 'ನವಯುಗ'ದ ೧೬ನೇ ವರ್ಷವು ಕೊನೆಗೊಂಡು ಸೆಪ್ಟಂಬರ ತಿಂಗಳಿಂದ ಹೊಸ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ಮುಂದಿನ ವರ್ಷದ ಚಂದಾ ಹಣವನ್ನೂ ಈ ವರೆಗೆ ಚಂದಾ ಹಣ ಬಾಕಿ ಇರುವವರು ಬಾಕಿ ಹಣದೊಂದಿಗೆ ಮುಂದಿನ ವರ್ಷದ ಚಂದಾ ಹಣವನ್ನೂ ದಯವಿಟ್ಟು ಕಳುಹಿಸಿಕೊಟ್ಟು, ಪತ್ರಿಕೆಯನ್ನು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.**

**ವಿ. ಪಿ. ಮಾಡುವುದು ಅನಾವಶ್ಯಕ ವೆಚ್ಚಕ್ಕೆ ಕಾರಣವಾಗುವುದರಿಂದ ಚಂದಾ ಮೊಬಲಗನ್ನು ಮನಿಯಾರ್ಡರ್ ಮಾಡಿ ಕಳುಹಿಸುವುದು ಲಾಭಕರ. ಈ ತಿಂಗಳಾಂತ್ಯದೊಳಗೆ ಹಣಕಳುಹಿಸದಿದ್ದರೆ ಸೆಪ್ಟಂಬರ ಮೊದಲನೆ ವಾರದ ಯಾ ಅನಂತರದ ಸಂಚಿಕೆಯನ್ನು ವಿ. ಪಿ. ಮಾಡಿ ರವಾನಿಸಲಾಗುವುದು. ಚಂದಾ ಅವಧಿ ಮುಗಿದ ಮೇಲೆ ಪತ್ರಿಕೆ ಬೇಡವಾದವರು ದಯವಿಟ್ಟು ನಮಗೆ ಮುಂದಾಗಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇವೆ. ತಿಳಿಸದಿದ್ದಲ್ಲಿ ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರುತ್ತೇವೆ.**

ಮೆನೇಜರ್, ನವಯುಗ, ಉಡುಪಿ

## ಸ್ವದೇಶ

**ಅಖಿಲಭಾರತ ಕಿಸನ ಸಂಘ**—ಇದೇ ತಾ ಸಪ್ಟಂಬರ ಒಂದನೇ ತಾರೀಕನ್ನು ಅಖಿಲಭಾರತ ಕೃಷಿಕದಿನವಾಗಿ ಆಚರಿಸಬೇಕೆಂದು ಸದ್ರಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಜಿ ರಂಗ ಎಮ್. ಎಲ್ ಎ ಇವರು ವಿನಂತಿಮಾಡಿಕೊಂಡಿರುವರು. ಪ್ರತಿ ಹಳ್ಳಿ ಹಳ್ಳಿಯ ಕೃಷಿಕರು ಈ ದಿನವನ್ನಾಚರಿಸಿ ತಮ್ಮ ಬೇಡಿಕೆಗಳ ಕುರಿತು ಚಳವಳಿಸಿದರೆ, ಅತ್ಯಂತ ಪ್ರಗತಿ ಪರವಾಗಿರುವ ಸಂಯುಕ್ತ ಪ್ರಾಂತೀಯ ಮಂತ್ರಿಮಂಡಲದ ಹಸ್ತವನ್ನು ಬಲಪಡಿಸಿದಂತಾಗುವುದು. ಉದಾಸೀನ ವೃತ್ತಿಯಿರುವ ಬಂಗಾಳ, ಪಂಜಾಬೇ ಮೊದಲಾದ ಪ್ರಾಂತಗಳ ಮಂತ್ರಿಗಳನ್ನು ಎಚ್ಚರಿಸಿದಂತಾಗುವುದು. ಕೃಷಿಕರ ಸಾಲವನ್ನೆಲ್ಲಾ ಪ್ರಕೃತ ಸ್ತಂಭನವಾಗಿರಿಸಬೇಕು. ಗೇಣಿ ಮತ್ತು ಕಂದಾಯ ಬಾಕಿಯನ್ನು ಮಾಫಿಮಾಡಬೇಕು ಭೂಕಂದಾಯ ಕಡಿಮೆಮಾಡಬೇಕು. ಭೂಕಂದಾಯ ಮತ್ತು ಬಾಡಿಗೆ ಪದ್ಧತಿಯನ್ನು ತೆಗೆದು ಹಾಕಿ ಬೇಸಾಯೋತ್ಪತ್ತಿಯ ಮೇಲೆ ಆದಾಯ ತೆರಿಗೆ ಹಾಕಬೇಕು ಫೋರೆಸ್ಟ್ ಪಂಚಾಯತಗಳನ್ನು ಸ್ಥಾಪಿಸಬೇಕು. 'ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಾರ್ವತ್ರಿಕವಾಗಿ ಪ್ರಚಾರಪಡಿಸಬೇಕೆಂಬುದೇ ಕೃಷಿಕರ ಕನಿಷ್ಠ ಮತ್ತು ಅತಿ ಜರೂರಿನ ಬೇಡಿಕೆಗಳು ಕೃಷಿಕ ಸಂಘಗಳೊಂದಿಗೆ ಕಾಂಗ್ರೆಸ್ ಕಮಿಟಿಗಳೂ ಸೋಸಿಯಾಲಿಸ್ಟರೂ ಸಹಕರಿಸಬೇಕಾಗಿ ಶ್ರೀ. ರಂಗರವರು ವಿನಂತಿಮಾಡಿಕೊಂಡಿರುವರು

### ಅಬ್ದುಲ್ ಗಾಫರ್ ಖಾನರ ಮೇಲಿನ ನಿಷೇಧ ತೆಗೆದುಹಾಕಲ್ಪಟ್ಟಿತು.

ವಾಯುವ್ಯ ಗಡಿನಾಡಿನ ಗಾಂಧಿಯವರೆನಿಸಿರುವ ಖಾನ್ ಅಬ್ದುಲ್ ಗಾಫರ್ ಖಾನರು ತನ್ನ ಪ್ರಾಂತಕ್ಕೆ ಪ್ರವೇಶಿಸಬಾರದೆಂದು ಸರಕಾರವು ಅವರ ಮೇಲೆ ಹಾಕಿರುವ ನಿಷೇಧವು ಈಗ ತೆಗೆದುಹಾಕಲ್ಪಟ್ಟಿರುವುದು. ಕಾಂಗ್ರೆಸ್ ಮತ್ತು ಅದಕ್ಕೆ ಸಂಬಂಧಿಸುವ ಸಂಸ್ಥೆಗಳ ಮೇಲಿನ ನಿಷೇಧವನ್ನೂ ರದ್ದುಮಾಡಲಾಗಿದೆ ಖಾನರು ತನ್ನ ಪ್ರಾಂತಕ್ಕೆ ಹೋಗದೆ ಈಗ ಆರು ವರ್ಷಗಳಾದುವು ಅವರೀಗ ಸಿಂಧು ಪ್ರಾಂತದಲ್ಲಿ ಸಂಚರಿಸುತ್ತಿರುವವರು ತನ್ನ ಕಾರ್ಯವನ್ನು ಅರ್ಧದಲ್ಲೇ ನಿಲ್ಲಿಸಿ ಇದೇ ತಾ ೨೩ರಲ್ಲಿ ವಾಯುವ್ಯ ಗಡಿನಾಡಿಗೆ ಹೋಗುವರು. ಗಾಫರ್ ಖಾನರಿಗೆ ಪೆಶಾವರಿಯಲ್ಲಿ ಪ್ರಚಂಡ ಸ್ವಾಗತವೀಯಲಾಯಿತು ಅವರನ್ನು ಮೆರವಣಿಗೆಯಿಂದ ಕೊಂಡೊಯ್ಯುವ ಕಾರ್ಯಕ್ರಮಕ್ಕೆ ಖಾನರು ಒಪ್ಪಲಿಲ್ಲ. ತನ್ನನ್ನು ಪ್ರತಿ ಮನೆಮನೆಗೆ ಸಂದರ್ಶಿಸಬಿಡಿ ಆದರೆ ಮೆರವಣಿಗೆಮಾಡಿ ಕರೆದೊಯ್ಯಬೇಡಿ. ಅದು ಅನುಚಿತವಾದುದೆಂದು ಖಾನರು ಸ್ಪಷ್ಟವಾಗಿ ಹೇಳಿಬಿಟ್ಟರು.

### ಗಾಂಧಿಜಿಯವರು ವಿಶ್ರಾಂತಿ ತೆಗೆದುಕೊಳ್ಳಬೇಕು.

ಬೊಂಬಾಯಿಯ ಆರೋಗ್ಯ ಮಂತ್ರಿಗಳಾದ ಡಾಕ್ಟರ್ ಗಿಲ್ಡರರು ಇದೇ ತಾ ೨೧ರಲ್ಲಿ ವಾರ್ಧಕ್ಕೆ ಹೋಗಿ ಗಾಂಧಿಯವರನ್ನು ಪರೀಕ್ಷಿಸಿದಾಗ ಅವರ ರಕ್ತದ ಒತ್ತಾಟವು ಹೆಚ್ಚಾಗಿರುವುದನ್ನು ಕಂಡು ಅವರು ಕೆಲಸಮಯ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳಿರುವರು

### ಪಂಡಿತ ಜವಾಹರಲಾಲ ನೆಹರುಗಳು

ತನ್ನ ಪುತ್ರಿಯೊಂದಿಗೆ ಬೊಂಬಾಯಿಯಿಂದ ಹೊರಟು ಇದೇ ತಾ ೨೧ರಲ್ಲಿ ಲಕ್ನೋ ಪಟ್ಟಣಕ್ಕೆ ಹೋಗಿ ತನ್ನ ತಂಗಿಯೂ, ಸಂಯುಕ್ತ ಪ್ರಾಂತದ ಆರೋಗ್ಯ ಖಾತೆಯ ಮಂತ್ರಿಯೂ ಆದ ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತರೊಂದಿಗೆ ವಾಸಿಸುತ್ತಿರುವರು ಪಂಡಿತರ ಮಾತೆಯೂ ಇಲ್ಲಿಯೇ ಇರುವರು

### ಚೀನಕ್ಕೆ ಹಿಂದೀ ಸೈನಿಕರು

ಚೀನಕ್ಕೆ ಹಿಂದೀ ಸೈನಿಕರನ್ನು ಕಳುಹಿಸುವ ಸಂಬಂಧವಾಗಿ ಇದೇ ತಾ ೨೧ರಲ್ಲಿ ಮಾನ್ಯ ವೈಸರಾಯರು ಸೇನಾಧ್ಯಕ್ಷರೊಂದಿಗೆ, ಶ್ರೀಗಳಾದ ಭೂಲಭಾಯಿ ದೇಸಾಯಿ, ಸತ್ಯಮೂರ್ತಿ, ಅಖಿಲಚಂದ್ರದತ್, ಸರ್ ಮಹಮ್ಮದ್ ಯಾಕೂಬ್ ಮೊದಲಾದ ಎಸೆಂಬ್ಲಿ ಮೆಂಬರರ ಅಭಿಮತ ಕೇಳಿದರು

## ವಿದೇಶ

### ವಿಚಿತ್ರ ಜಲಾಂತರ್ಗಾಮಿನಾವೆ.

ಟರ್ಕಿಯ ಡಾರ್ಡನೆಲ್ಲಿಸ್ ಸಮುದ್ರದ ಬಳಿ ವಿಚಿತ್ರ ಜಲಾಂತರ್ಗಾಮಿ ನಾವೆಯೊಂದು ಸಂಚರಿಸುತ್ತಿರುವುದು ಟರ್ಕಿಸರಕಾರಕ್ಕೆ ತಿಳಿದುಬಂದು ಮಂತ್ರಿಗಳೆಲ್ಲಾ ಹೊರಹೋಗಿದ್ದವರು ಜರೂರಾಗಿ ಕೂಡಿ ಮಂತ್ರಾಲೋಚನೆ ನಡಿಸಿರುವರು.

---

**ಸಂಯುಕ್ತ ಕಾಂಗ್ರೆಸ್ ಕಮಿಟಿ ಬೈಲೂರು**—ಇಲ್ಲಿ ಇದೇ ತಾ. ೨೨-೮-೩೭ನೇ ಆದಿತ್ಯವಾರ ಸಂಜೆ ಘಂಟೆ ೩ಕ್ಕೆ ಈ ಕಮಿಟಿಯ ಅಧ್ಯಕ್ಷರಾದ, ಮ. ರಾ. ಕೆ. ಶ್ರೀನಿವಾಸ ಹೆಗ್ಡೇರವರ ನೇತೃತ್ವದಲ್ಲಿ ಒಂದು ಮಹಾಸಭೆಯು ಜರಗಿತು. ರಾಷ್ಟ್ರೀಯ ಗೀತೆ ಹಾಡಿದ ನಂತರ ಶ್ರೀಯುತ ಕಿಲ್ಲೆಯವರು—'ಕಾಂಗ್ರೆಸ್ಸೂ, ಅಧಿಕಾರ ಸ್ವೀಕಾರವೂ' ಎಂಬುವರ ವಿಷಯ ತುಳುವಿನಲ್ಲಿ ಭಾಷಣವನ್ನಿತ್ತು, ಅಂದಿನ, ಇಂದಿನ ಮುಂದಿನ ಭಾರತಮಾತೆಯ ಚಿತ್ರವು ಪ್ರತಿಯೊಬ್ಬರ ಹೃದಯದಲ್ಲಿ ಸರಿಯಾಗಿ ಪ್ರತಿಬಿಂಬಿಸುವಂತೆ ಮಾಡಿದರು ಶ್ರೀ. ಮುದ್ರಾಡಿ ಕೃಷ್ಣಯ್ಯ ಸಟ್ಟರು—'ನಮಗಾಗಿ ದುಡಿಯುತ್ತಿರುವ ಕಾಂಗ್ರೆಸಿಗೆ, ಎಲ್ಲರೂ ಸೇರಿ ಅದನ್ನು ಬಲಪಡಿಸಬೇಕಾಗಿಯೂ, ಕೈನೂಲು ಬಟ್ಟೆಯನ್ನೇ ಧರಿಸುವುದಾಗಿ ಪ್ರತಿಯೊಬ್ಬರೂ ಪ್ರತಿಜ್ಞೆ ಮಾಡಬೇಕಾಗಿಯೂ ಕೇಳಿಕೊಂಡರು. ಬಳಿಕ ಶ್ರೀಗಳಾದ ಎನ್ ಸಂಜೀವ ಸಟ್ಟರ, ಕೆ ಅಂತಯ್ಯ ಸಟ್ಟರ, ಅಧ್ಯಕ್ಷರ ಸಮಯೋಚಿತ ಭಾಷಣವಾಗಿ, ಧನ್ಯವಾದ, ವಂದೇ ಮಾತರಂ ಗೀತೆಯೊಡನೆ ಸಭೆಯು ಕೊನೆಗೊಂಡಿತು.

### ಸ್ಟೀಮರು ಸರ್ವಿಸು ಆರಂಭ.

ಧಿ ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೀಮರು ಸ್ಪೆಶಲ್ ಸರ್ವಿಸು, ಹವಾಮಾನ ಅನುಕೂಲವಾಗಿದ್ದಲ್ಲಿ ತಾ. ೩೧-೮-೩೭ನೇ ಶುಕ್ರವಾರ ಬೊಂಬಾಯಿಯಿಂದ ಹೊರಟು ವೆಂಗುರ್ಲ, ಮರ್ಮಗೋವಾ ಮತ್ತು ಕಾರವಾರ ಬಂದರುಗಳನ್ನು ದಾಟಿ ತಾ ೫-೯-೩೭ನೇ ಆದಿತ್ಯವಾರ ಮಂಗಳೂರಿಗೆ ತಲುಪಲಿರುವುದು.


**ಚಿಕ್ಕ ಜಾಹೀರಾತುಗಳು**

ಇಷ್ಟೇ ಜಾಗಕ್ಕೆ
**ಒಂದೇ ಬಾರಿಗೆ 0-8-0.**
ಕಂಟ್ರಾಕ್ಟ್ ದರಗಳಿಗೆ
ಮೆನೇಜರರಿಗೆ ಬರೆಯಿರಿ.

## WANTED

A mistress or a master as a private teacher for some children, of a landlord in a country house. Apply with copies of testimonials stating the minimum pay expected to—

"D"
**C/o Navayuga, Udipi.**

## ಬೇಕಾಗಿದೆ.

ಜಿಲ್ಲೆಯ ಒಳಗೂ ಹೊರಗೂ ಸಂಚರಿಸಿ 'ನವಯುಗ'ದ ಚಂದಾದಾರರಿಂದ ಹಣ ವಸೂಲು ಮಾಡಲಿಕ್ಕೂ ಹೊಸ ಚಂದಾದಾರರನ್ನು ಸೇರಿಸಲಿಕ್ಕೂ ನಂಬಿಗಸ್ಥರಾದ, ಚೆನ್ನಾಗಿ ಇಂಗ್ಲಿಷ್ ಕನ್ನಡ ಬಲ್ಲ ಉತ್ಸಾಹೀ ಪ್ರತಿನಿಧಿಗಳೊಬ್ಬರು ಬೇಕು. ಸಂಬಳ ಮತ್ತು ಪ್ರಯಾಣ ವೆಚ್ಚ ಕೊಡಲಾಗುವುದು. ರೂ. 100/- ಡಿಪೋಜಿಟ್ ಇಡಲು ತಯಾರಿರುವವರು ತಿಂಗಳೊಂದರ ಎಷ್ಟು ಚಂದಾದಾರರನ್ನು ಸೇರಿಸ ಬಹುದೆಂಬುದನ್ನೂ ತಿಂಗಳಿಗೆ ಎಷ್ಟು ಸಂಬಳ ಸಿಗಬೇಕೆಂಬುದನ್ನೂ ತಿಳಿಸಿರಿ. ಹೆಚ್ಚಿನ ಮಾಹಿತಿಗೆ ಈ ತಿಂಗಳಂತ್ಯದೊಳಗೆ ಬರೆಯಿರಿ, ಯಾ ಸ್ವತಃ ಬಂದು ಮಾತನಾಡಿರಿ.

**ಮೆನೇಜರ್, ನವಯುಗ, ಉಡುಪಿ.**

ಹಣ್ಣು ಹಂಪಲುಗಳ, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುನ್ಸಿಪ್ಲಾವರ್ ಪ್ರೋರಿನ ತೋಟ ಹೂ ಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

**Bihar Nursery,**
**P. O. Bihar**
*Nursery (Darbhanga)* **BIHAR**

## ಚುನಾವಣೆ

ಉಮೇದ್ವಾರಿಗಳ ಪ್ರಕಟನೆಗಳನ್ನು (ನೋಟಿಸುಗಳನ್ನು) ಅತ್ಯಂತ ದಕ್ಷತೆಯಿಂದ ಪ್ರಕಟಿಸಲಾಗುವುದು. ದರಗಳಿಗೆ ಬರೆಯಿರಿ.

**ಮೆನೇಜರ್, ನವಯುಗ**

# Loans & Advances

ON THE SECURITY OF GOLD, JEWELS AND OTHER VALUABLES ALWAYS AVAILABLE AT MODERATE RATES

**THE UDIPI BANK LTD.**

UDIPI.

# ದಕ್ಷಿಣ ಕನ್ನಡ

**ದ. ಕ. ದ್ರಾವಿಡಬ್ರಾಹ್ಮಣ ಸಂಘ—** ಮದ್ರಾಸಿನಲ್ಲಿ ದ. ಕ. ದ್ರಾವಿಡಬ್ರಾಹ್ಮಣ ಸಂಘದ (S K D B Association) ರಜತ ಮಹೋತ್ಸವವು ಕಳೆದವಾರ ಸೋಮವಾರದಂದು ... ಭವನದಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು ... ರಾಧಿಗಳ ... ಆ ... ಸ್ವಾಗತ ... ವಿದ್ಯಾರ್ಥಿಗಳ ... ವಿದ್ಯಾಲಯದ ... (Diploma holders) ... ಶ್ರೀ ಕೆ ಆರ್ ... ಎಲ್ ಎ ಇವರು ... ಜೀವನ ... ಮತ್ತು ... ಸರಳ ಜೀವನ ಮತ್ತು ಜನತಾಸೇವೆಯಿಂದಿಟ್ಟುಕೊಂಡು ಸುಖಶಾಂತಿಯ ... ಶ್ರೀ. ಕಾರಂತರು ಕೊಟ್ಟ ಉಪದೇಶವು ಸರ್ವಗ್ರಾಹ್ಯ ... ಗ್ರಾಜುಯೇಟ(graduates)ರ ಮತ್ತು ವಿದ್ಯಾರ್ಥಿಗಳ ಪರವಾಗಿ ಶ್ರೀ ಕೆ ರಾಮಪ್ಪಯ್ಯ ಬಿ ಎ ಬಿ ಎಲ್ ಇವರು ಶ್ರೀ ಕಾರಂತರಿಗೆ ದನ್ಯವಾದಾರ್ಪಣೆಯನ್ನು ಮಾಡಿದ ನಂತರ ಅಧ್ಯಕ್ಷರು ಸಂಘದ ಪುರೋಭಿವೃದ್ಧಿಗಾಗಿ ಸಮಾಜದ ಹಿರಿಯರೂ ಕಿರಿಯರೂ ಇಲ್ಲಿಯೂ ನಮ್ಮ ಜಿಲ್ಲೆಯಲ್ಲಿಯೂ ಮಾಡಬೇಕಾದ ಕರ್ತವ್ಯಾದಿಗಳ ಕುರಿತು ಸ್ಫೂರ್ತಿದಾಯಕ ಭಾಷಣವನ್ನಿತ್ತರು

ಮುಖ್ಯವಾಗಿ ೧೯೧೨ರಲ್ಲಿ ಈ ಸಂಘ ಸ್ಥಾಪನೆಯು ಕಾರ್ಯದಲ್ಲಿಯೂ ಅನಂತರ ಕಳೆದ ೧೨ ವರ್ಷಗಳಿಂದಲೂ ಇದರ ನಿರಂತರ ಕಾರ್ಯದರ್ಶಿತ್ವವನ್ನು ವಹಿಸಿ ಸ್ವಕಾರ್ಯಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ಸಂಘದ ಧನಸಂಗ್ರಹ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿ ತನ್ಮೂಲಕ ನಮ್ಮ ಜಿಲ್ಲೆಯಿಂದ ಇಲ್ಲಿಗೆ ಬರುವ ವಿದ್ಯಾರ್ಥಿಗಳ ಆರ್ಥಿಕ ಸಂಕಷ್ಟಗಳನ್ನು ಸಾಧ್ಯವಿದ್ದಷ್ಟು ಹೆಚ್ಚು ಹೆಚ್ಚಾಗಿ ವರ್ಷ ವರ್ಷವೂ ನಿವಾರಿಸುತ್ತಲಿರುವ ಡಾ ಮಂಗಾಳೆ ಶ್ರೀನಿವಾಸರಾಯರೂ ಕೇವಲ ಗೌರವ ಕಾರ್ಯದರ್ಶಿಗಳಾಗಿ ... ಆದರ್ಶ ಗೌರವ ಕಾರ್ಯದರ್ಶಿಗಳಾಗಿ ವಿಶೇಷ ಸಮಾಜ ಸೇವೆಯನ್ನು ಮಾಡಿಯೂ ... ಅಭಿಮಾನದ ಸಂಗತಿ ಇವರೂ ಸಂಘದ ಅಧ್ಯಕ್ಷ ... ಡಾ ಪಿ ವಿ ಗಿರಿರಾವ್ ಇವರೂ ಮತ್ತು ಸಮರ್ಥ ಕಾರ್ಯನಿರ್ವಾಹಕ ಮಂಡಲಿಯೂ ಈ ಸಂಘದ ... (ರಜತಮಹೋತ್ಸವ) ... ಆದ್ದರಿಂದ ... ಆದನ್ನು ಅನುಮೋದಿಸಿ ಆ ಕಾರ್ಯನಿರ್ವಾಹಕರಾಗಿ ರಜತಮಹೋತ್ಸವ ... ಇದಂ ಅಂಗವಾಗಿ ನಮ್ಮ ಜಿಲ್ಲೆಯ ಪ್ರತಿ ತಾಲೂಕುಗಳಲ್ಲಿಯ ... ಗಿನ ... ಸಮಾಜದ ಆರ್ಥಿಕ ... ಸಹಾಯಾಶ್ರಯಗಳಿಂದಲೇ ಹೆಚ್ಚಿನ ಮಟ್ಟಿಗೆ ಈ ಸಂಘವು ವಿದ್ಯಾರ್ಥಿವೃಂದಕ್ಕೆ ಸಹಾಯಕವಾಗಿ ನಿಂತಿದೆ ಆದರೆ ನಮ್ಮ ಜಿಲ್ಲೆಯಲ್ಲಿರುವವರಿಂದ ತಕ್ಕಷ್ಟು ಪ್ರೋತ್ಸಾಹವು ಬರುತ್ತಿಲ್ಲ ಪರಿಪತ್ರ ಪಡೆಯುತ್ತಿದ್ದಾಗಿ ... ಕಾಣುತ್ತಿದ್ದುದನ್ನಾದರೂ ಇದಕ್ಕೆ ಕಳುಹಿಸುತ್ತಿದ್ದರೆ ಇದು ಇನ್ನೂ ಹೆಚ್ಚಿನ ಸಮಾಜಸೇವೆಯನ್ನು ಕೈಕೊಳ್ಳುತ್ತಿತ್ತು ಈ ಸಂಘದಿಂದ ಸಹಾಯವನ್ನು ಹೊಂದಿದವರಲ್ಲಿ ಕೆಲವರು ಈಗ ದ್ರವ್ಯಾರ್ಜನೆಯ ಹಾದಿಯಲ್ಲಿ ಮುಂದುವರಿಯುತ್ತಿದ್ದರೂ ಸಂಘದ ಋಣ ತೀರಿಸುವುದರಲ್ಲಿ ಹಿಂದಾಗಿದ್ದಾರೆಂಬುದು ಶೋಚನೀಯ. ನಮ್ಮ ವಿದ್ಯಾರ್ಥಿಗಳ ಯೋಗಕ್ಷೇಮ ಸಹಾಯ ಕಲಹಿಗೋಸ್ಕರವೇ ಜನ್ಮವೆತ್ತಿ ಈ ೨೫ ವರ್ಷಗಳಿಂದ ಶ್ರಮಿಸುತ್ತಿರುವ ಈ ಸಂಘವು ತನ್ನ ರಜತಮಹೋತ್ಸವದಿಂದಾಚೆಗೆ ದ್ವಿಗುಣಿತ ಶಕ್ತಿ ಉತ್ಸಾಹಗಳಿಂದ ಸಮಾಜಸೇವೆಯನ್ನು ಮಾಡುವಂತೆ ದ ಕ ಜಿಲ್ಲೆಯ ಸಮಸ್ತ ದ್ರಾವಿಡಬ್ರಾಹ್ಮಣರೂ ಈ ರಜತಮಹೋತ್ಸವದ ಸಂದರ್ಭದಲ್ಲಾದರೂ ಇದರ ಸದಸ್ಯರಾಗಿ ಸಹಾಯಕರಾಗಿ ಪೋಷಕರಾಗಿ ಪ್ರೋತ್ಸಾಹಿಸುವುದು ಕರ್ತವ್ಯವಿರುತ್ತದೆ

ಟ್ರಿಪ್ಲಿಕೇನ್, ಮದ್ರಾಸ್ ೧೫-೮-೧೯೩೭

**ಕೊರಡ್ಕಲ್ ಶ್ರೀನಿವಾಸರಾವ್.**

**ಮುದ್ರಣ ವಾಚನಾಲಯ, ಮುಂಬಾಯಿ—** ಈ ವಾಚನಾಲಯವು ಕಳೆದ ನವವರ್ಷಗಳಿಂದ ಮುಂಬಾಯಿ ನಗರದಲ್ಲಿ ಭಾಷಾ ಸೇವೆಗಾಗಿ ಶ್ರಮಪಟ್ಟದು ಕನ್ನಡಿಗರಿಗೆ ಭೂಷಣಾಸ್ಪದವೇ ಸರಿ ಇದು ಇಷ್ಟು ಚಿರಕಾಲ ಬಾಳಿ ಮುಂಬಾಯಿಯ ಸಕಲ ಕನ್ನಡಿಗರಿಗೂ ಆದರ್ಶಪ್ರಾಯವಾಗುತ್ತಿರುವುದರಲ್ಲಿ ಸಂದೇಹವಿಲ್ಲ ಸಕಲರಿಗೂ ಧರ್ಮಾರ್ಥವಾಗಿ ಪ್ರಯೋಜನ ಹೊಂದಿಸುವ ಕನ್ನಡ ವಾಚನಾಲಯವು ಮುಂಬಾಯಿಯಲ್ಲಿ ಇದೊಂದೇ ಆದರೂ ತನ್ನ ಸಬಲದಿಂದಲೋ ಓದುಗರ ಸಭಾಗ್ಯದಿಂದಲೋ ಎಂಬಂತೆ ಒಂದು ದೈನಿಕ ಪತ್ರಿಕೆ ಇಲ್ಲದಿರುವುದು ಶೋಚನೀಯ ದಿನವಹಿ ದೈನಿಕ ಪತ್ರಿಕೆಯು ಮುಂಬಾಯಿಗೆ ತರಿಸಲು ಓರ್ವ ಕನ್ನಡಿಗನಿಗೆ ಅಸಾಧ್ಯವಾದರೂ, ಕನ್ನಡಾ ಭಾಷಾ ಪ್ರಚಾರಕರಾದ ಈ ವಾಚನಾಲಯದ ಮುಂದಾಳುಗಳು ತೀವ್ರ ವಿಚಾರಿಸಿ ಒಂದು ದೈನಿಕ ಪತ್ರಿಕೆಯನ್ನು ವಾಚನಾಲಯದಲ್ಲಿ ಇಡುವರೆಂದು ಆಶಿಸುವ,

ಓರ್ವ ಕನ್ನಡವಾಚಕ.

... ವಿಸ್ತರಿಸುವ ಬಗೆಗೆ ವಿದೇಯಿಂತಲೂ ಕೂಡಲೆ ಬರೆದಿರುವರಾಗಿ ತಿಳಿದುಬರುತ್ತದೆ

ಇದೇ ತಾ, ೧೩-೮-೩೭ರಲ್ಲಿ ಜರಗುವ ಹಿಂದೀ ಪರೀಕ್ಷೆಗೆ ಸ್ಥಳೀಯ ಆರ್ಯಸಮಾಜದವರಿಂದ ತೆರೆಯಲ್ಪಟ್ಟಿರುವ ಹಿಂದೀ ವರ್ಗದಿಂದ ಪ್ರಾಥಮಿಕ ಪರೀಕ್ಷೆಗೆ ೬ ಮಂದಿ ವಿದ್ಯಾರ್ಥಿಗಳೂ, ಮಾಧ್ಯಮಿಕ ಪರೀಕ್ಷೆಗೆ ಓರ್ವ ವಿದ್ಯಾರ್ಥಿಯೂ ಈ ಕೇಂದ್ರದಲ್ಲಿ ಕುಳಿತುಕೊಳ್ಳುವರೆಂಬುದು ಸಂತೋಷಕರ

ಹಿ ಕೆ. ಅನಂತಯ್ಯ.
ಕಾರ್ಯದರ್ಶಿ

**ಮೂಡಬಿದ್ರೆ—** ಮೂಡಬಿದ್ರೆ ಉಪಾಧ್ಯಾಯ ಸಂಘದ ತೃತೀಯ ಸಭೆಯು ಇದೇ ಆಗೋಸ್ತು ತಾ ೧೪ರಲ್ಲು ಆದಿದ್ರಾವಿಡ ಲೇಬರ ಶಾಲೆಯಲ್ಲಿ ದಿಗಂಬರ ಜೈನ ಶಾಲೆಯ ಅಧ್ಯಾಪಕರಾದ ಮ| ರಾ| ರಾ| ಎನ ಪದ್ಮರಾಜ ಮುರಯಾರರ ಅಧ್ಯಕ್ಷತೆಯಲ್ಲಿ ಜರುಗಿತು, ಹೊಸಬೆಟ್ಟು ೩ ಉಪಾಧ್ಯಾಪಕರಾದ ಮ| ರಾ| ರ | ರೋಡ್ರಿಗ್ಸರು ಮಾದರಿ ಪಾಠವನ್ನು ಕೊಟ್ಟರು ಬರುವ ಸಭೆಯು ಸಪ್ಟಂಬರ ೧೧ಕ್ಕೆ ಬೋರ್ಡು ಹುಡುಗರ ಶಾಲೆಯಲ್ಲಿ ಜರಗಿಸಲ್ಪಡುವುದು

**ಕೆಲ್ಲಡ್ಕ—** ದಕ್ಷಿಣಕನ್ನಡ ಜಿಲ್ಲಾಬೋರ್ಡು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಉಪಸಮಿತಿಯವರು ಮಂಗಳೂರು ಕೋಂಗ್ರೆಸ್ ಆಫೀಸನಲ್ಲಿ ಕಳೆದ ತಾ ೧೫-೮-೩೭ರಲ್ಲು ಕೂಡಿ ಸಂಘದ ನಿಬಂಧನೆಗಳನ್ನು ತಯಾರಿಸಿ ಸದ್ರಿ ಉಪನಿಬಂಧನೆಗಳನ್ನು ಕಾರ್ಯನಿರ್ವಾಹಕ ಕಮಿಟಿಮೆಂಬರರಿಗೆ, ಅವರ ಅಭಿಪ್ರಾಯ ತಿಳಿಯುವ ಬಗ್ಗೆ ಕಳುಹಿಸುವುದಾಗಿ ನಿರ್ಣಯಿಸಿದರು ಅಲ್ಲದೆ ಡಿಪ್ಯುಟೇಶನ್ ಕಮಿಟಿಮೆಂಬರರು, ತಾ ೨೨ರಲ್ಲಿ ಕೂಡಿ, ವಸೂಲಾದ ಹಣವು, ಕಡಿಮೆಯಾದ್ದರಿಂದ ಕಾರ್ಯದರ್ಶಿಯವರು ಸಂಟರುಗಳಿಗೆ ತೀವ್ರ ವಿನಂತಿಸಿಕೊಂಡು ಹಣ ವಸೂಲಿಮಾಡಿಕೊಳ್ಳಬೇಕಾಗಿಯೂ, ತನ್ಮಧ್ಯೆ ಡಿಪ್ಯುಟೇಶನ್ ಕಮಿಟಿಯವರು, ಸದ್ಯ ಮಂಗಳೂರಿಗೆ ದಯಮಾಡಿಸಲಿರುವ, ಶ್ರೀ ಸಿ ಜೆ. ವಾರ್ಕಿ, ವಿದ್ಯಾಮಂತ್ರಿಗಳ ಪಾರ್ಲಿಮೆಂಟರಿ ಸೆಕ್ರಿಟರಿ, ಇವರನ್ನು ಕಂಡು ಡಿಪ್ಯುಟೇಶನ್ ಹೋಗುವ ದಿವಸವನ್ನು ಗೊತ್ತುಪಡಿಸಬೇಕಾಗಿಯೂ ನಿರ್ಣಯಿಸಲಾಗಿದೆ ಎಲ್ಲಾ ಉಪಾಧ್ಯಾಯರುಗಳ ಕೇಂದ್ರದವರು, ಮಹಾಸಭೆಯ ಗೊತ್ತುವಳಿಯಂತ ಪ್ರತಿ ಮೆಂಬರರ ವಂತಿಗೆ ೦-೪-೦ನ್ನು ಡಿ| ಬೋ| ಎ| ೩ ಟಾ ಉಪಾಧ್ಯಾಯರ ಸಂಘದ, ಶ್ರೀ ಕೆ| ರಾಮರಾವ್, ಕಾರ್ಯದರ್ಶಿ. ಮತ್ತು ಕೆಲ್ಲಡ್ಕ ಶಾಲಾ ಹೆಡ ಮಾಸ್ತರರು ಇವರಿಗೆ ಕಳುಹಿಸಿ ಕೊಡಬೇಕಾಗಿ ವಿನಂತಿ.

**ಬೈಂದೂರು—** ಇಲ್ಲಿಯ ದಿ ಎಗ್ರಿಕಲ್ಚರ್ ಎಂಡ್ ಇಂಡಸ್ಟ್ರಿಯಲ ಬೇಂಕ್ ಲಿಮಿಟೆಡ್ ಇದರ ಎಕೌಂಟೆಂಟ್ ಆಗಿದ್ದ ರಾ ರಾ ಕೆ ಲಕ್ಷ್ಮಣ ಕಂಪ್ತಿಯವರು ತಾ ೨೦-೮-೩೭ಕ್ಕೆ ಇಲ್ಲಿಂದ ವರ್ಗಾಯಿಸಲ್ಪಟ್ಟರು ಇವರು ಈ ಬೇಂಕಿನ ಹೊಸದಾಗಿ ತಾ ೨೬-೮-೩೭ಕ್ಕೆ ಶಿವಮೊಗ್ಗೆಯಲ್ಲಿ ತೆರೆಯಲಿರುವ ಶಾಖೆಗೆ ಎಕೌಂಟೆಂಟಾಗಿ ಹೋಗುವವರಿರುತ್ತಾರೆ.

**ಮೂಲ್ಕಿ—** ಬರುವ ಡಿಸ್ಟ್ರಿಕ್ಟ್ ಬೋರ್ಡಿಗೆ ಮೂಲ್ಕಿ ಸರ್ಕಲಿನಿಂದ ಶ್ರೀಯುತ (ಪಾಂಗಾಳ) ಕಟಪಾಡಿ ಮಂಜುನಾಥ ಪಾಯ್ಕರು ಕೂಡಾ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರಾಗಿ ನಿಲ್ಲುತ್ತೇನೆಂದು ನೋಮಿನೇಶನ್ ಪತ್ರಿಕೆಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕಳುಹಿಸಿ ಕೊಟ್ಟಿರುತ್ತಾರಾಗಿ ತಿಳಿದು ಬರುತ್ತದೆ.

ಬಪ್ಪನಾಡು ಮಾಗಣೆಗೆ ಸಂಬಂಧಪಟ್ಟ ಲಿಂಗಪ್ಪಯ್ಯ ಕಾಂತಿನ ಹಕ್ಕು ಸನುಸ್ಥರು, ಮೂಲ್ಕಿ ಸರ್ಕಲಿನ ಪರವಾಗಿ ಕಾಂಗ್ರೆಸ್ ಕಡೆಯಿಂದ ಬರುವ ಡಿ| ಬೋರ್ಡಿಗೆ ನಿಲ್ಲುವ ಶ್ರೀಯುತ ರಾಮಕೃಷ್ಣ ಪೂಂಜರನ್ನು ಸಮರ್ಥಿಸಿ, ಅನುಮೋದಿಸಿರುತ್ತೇವೆಂದು ಇದೇ ತಾ ೨೦-೮-೩೭ರಲ್ಲು ಕೀರೂರು ೭೫ ಜನರು ದಸ್ತಕು ಹಾಕಿ ಶ್ರೀಯುತ ಪೂಂಜರಿಗೆ ಒಂದು ಕಾಗದವನ್ನು ಬರೆದು ಕೊಟ್ಟಿರುತ್ತಾರಾಗಿ ತಿಳಿದುಬರುತ್ತದೆ.

**ಹೆಜಮಾಡಿ—** ಅಖಿಲಭಾರತ ಹಿಂದೂ ಮಹಾ ಸಭೆಯ ಮೈಸೂರ್ ಬ್ರಾಂಚಿನ ಗೌರವ ಕಾರ್ಯದರ್ಶಿಯವರಾದ ಶ್ರೀಯುತ ಅಲೆವೂರು ಶೇಷಪ್ಪಯ್ಯ ಇವರು ಹಿಂದೂ ಧರ್ಮದ ಸಂಘಟನೆಯ ವಿಚಾರದಲ್ಲಿ ತಾ, ೧೫-೮-೩೭ರಲ್ಲು ಕೋಡಿಯಲ್ಲು, ತಾ ೨೩-೮-೩೭ರಲ್ಲು ಇಲ್ಲಿಯೂ ಭಾಷಣಮಾಡಿದರು


ಸುಸಮಯ! ಹಣ ಸಂಪಾದಿಸಿರಿ!!

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ನೆಚ್ಚಮಾಡಿ ಸೇರಿ, ಕಂಪೆನಿಯು ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡಿಯುತ್ತಿರುವರು.

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್
**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**



**Rs. 75** WILL PAY YOU AFTER 5 YEARS **Rs. 100**

**INDUSTRIAL CASH CERTIFICATES**

For full particulars apply to—

**SUPPLY AGENCY LIMITED, UDIPI**


**ದಿ. ಬಂಟರಯಾನೆ ನಾಡವರ ಸಂಘ ಮುಂಬಾಯಿ—** ನಮ್ಮ ಸಂಘದ ಪರವಾಗಿ ನಮ್ಮ ಸಮಾಜದ ಹುಡುಗರಿಗೆ, ಧರ್ಮಾರ್ಥವಾಗಿ, ಟೈಪ್ ರೈಟಿಂಗ್ ಮತ್ತು ಶೋರ್ಟ್ ಹೇಂಡ್ ಕಲಿಸಬೇಕೆಂದು ಕಳೆದ ಮೀಟಿಂಗಿನಲ್ಲಿ ನಿರ್ಣಯ ಮಾಡಲ್ಪಟ್ಟ ಪ್ರಕಾರ ಮುಂಬಾಯಿ ಕೋಟೆಯೊಳಗಣ ದಲಾಲ ಸ್ಟ್ರೀಟಿನಲ್ಲಿರುವ ಕಿಂಗ್ಸ ಪೂಂಜಕ ಕಂಪೆನಿಯಲ್ಲಿ ಟೈಪು ಮತ್ತು ಶೋರ್ಟ್ ಹೇಂಡ್ ಕೀ ಪುಸ್ತಕಗಳನ್ನು ಕೂಡಾ ಸಂಘದ ಕಡೆಯಿಂದ ತಯಾರಿರುತ್ತವೆ ಆದ ಕಾರಣ ಅಪೇಕ್ಷೆಯುಳ್ಳವರು, ಸಂಘದ ಸೆಕ್ರೆಟರಿಯವರಿಗೆ ಬರೆದು, ಯಾ, ಮುಖ್ತಾ ಮಾತಾಡಿ ಹೆಚ್ಚಿನ ಮಾಹಿತಿಯನ್ನು ತಿಳಿಯತಕ್ಕದ್ದು ಮತ್ತು ನಮ್ಮ ಸಂಘದ ವರ್ಷಾವಧಿಯ ಮಹಾ ಸಭೆಯನ್ನು ಇದೇ ತಿಂಗಳ ತಾ ೨೯ಕ್ಕೆ ಜರಗಿಸಬೇಕೆಂದು ನಿಶ್ಚಯಿಸಿರುವುದಾದರೆ?, ಅನಾನುಕೂಲತೆಯ ನಿಮಿತ್ತ ಇದೇ ಬರುವ ಸಪ್ಟಂಬರ ತಿಂಗಳ ತಾ ೨೬ಕ್ಕೆ ಮುಂದುವರಿಸಲಾಗಿದೆಂಬುದನ್ನು ಈ ಮೂಲಕ ತಿಳಿಯ ಪಡಿಸಲಾಗುತ್ತದೆ

ಮೀಟಿಂಗು ಜರಗುವ ಸ್ಥಳ ನೆಶನಲ್ ಮೆಡಿಕಲ್ ಕೋಲೇಜ್ ಟಿಮಿಂಗ್ಟನ್ ರೋಡ್. ಸೆಂಟ್ರಲ್ ಸ್ಟೇಶನ ಸಮೀಪ ಮುಂಬಾಯಿ

ಗೌರವ ಜೊತೆ ಕಾರ್ಯದರ್ಶಿ—
ವಗ್ಗಲ್ಕ ದೊಂಬಸೆಟ್ಟಿ—

**ಹಿರಿಯಡ್ಕ—** ಇದೇ ತಾ ೧೬, ೧೭, ೧೮ರಲ್ಲು ಉಡುಪಿ ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರ್ ಮ ರಾ ಕೆ ರಾಮಯ್ಯ ನಾಯಕ್, ಆವರ್ಗಳ್ ಬಿ ಎ ಎಲ್ ಟಿ ರವರು ಇಲ್ಲಿಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯನ್ನು ನಡಿಸಿ ಶಾಲೆಯ ಸ್ಥಿತಿಯು ತೃಪ್ತಿಕರವಾಗಿದೆಯೆಂತಲೂ, ಮಕ್ಕಳ ಸಂಖ್ಯೆಯು ಹೆಚ್ಚಿರುವುದರಿಂದ ಪ್ರಕೃತದ ಶಾಲಾ ಕಟ್ಟೋಣವನ್ನು


ಹೊಸ ರಖಂ! ಗ್ಯಾರಂಟಿ ಇದೆ!

Imitation Diamond Ear Rings

ಇಮಿಟೇಷನ್ ವಜ್ರದ ಬೆಂಡೋಲೆ

ಈ ಬೆಂಡೋಲೆಗಳನ್ನು ಹೊಸವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆಯ ಭಂಗಾರದಿಂದ ಕಟ್ಟಿಡ ಕಟ್ಟಿದೆ ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸಮನಾಗಿದೆ. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ ಜಮೀನ್ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಇದರ ಬಣ್ಣವು ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ 7 ಕಲ್ಲಿನ ಬಿಳಿಯ ಓಲೆ ಜೋಡಿ 1ಕ್ಕೆ ರೂ. 1-8-0. 7 ಕಲ್ಲಿನ ಕೆಂಪು ಓಲೆ ಜೊತೆ 1ಕ್ಕೆ ರೂ. 1-10-0. ಬಳೆಗಳು ಜೊತೆ 1ಕ್ಕೆ ರೂ. 2-0-0. ಉಂಗುರ 1ಕ್ಕೆ ರೂ. 1-4-0

ಸಿಗುವ ವಿಳಾಸ:
**ದೇವರಾಜ್ ಅಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ ಟಿ.
ಮದರಾಸು.



**ನವಭಾರತ ಬುಕ್ ಡಿಪೋದಲ್ಲಿ ರಬ್ಬರ್ ಮೊಹರುಗಳನ್ನು** ಒದಗಿಸಿಕೊಡಲಾಗುತ್ತದೆ.

# ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಸಿನ ಕೈ, ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದಗಾಯನ ಸಾಮಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.

ವಿಶೇಷ ಮಾಹಿತಿಗೆ ಬರೆಯಿರಿ.

*Proprietor:* **ATTAVAR BABOO,**
**Vasanthi Harmonium Works,**
**Hampankatta, Mangalore.**

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ ಇಲ್ಲಿ ಮಾರಲ್ಪಡುತ್ತವೆ.

---

**ಪ್ರಕಟವಾಗಿದೆ!** ? **ಪ್ರಕಟವಾಗಿದೆ!**

**ನವಯುವಕರನ್ನು ಮುಗ್ಧಗೊಳಿಸುವ ಮಹಾ ಮಣಿ!**

## ಮಿಸ್ ಲಲಿತ

ವಾಚಕರ ಮನಸ್ಸನ್ನು ಸೂರೆಗೊಳ್ಳುವ ಲಲಿತಾ ರಮಣಿ!

**ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು**
ಇದೀಗಲೇ ಹೊರಬಿದ್ದಿದೆ.
**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**
ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ **0—8—0**

ವಿಳಾಸ:— **M. V. Puthran,**
*C/o* 34, Bomanji Lane, *2nd Floor, Fort, BOMBAY*

---

**15 ವರ್ಷಗಳ ಅನುಭವ!** **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು ಪ್ರಸಿದ್ಧರಾಗಿರುವ

## ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಚಿತ್ರದ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

**ಗಣಪತಿ ರಾವ್, ಪೈಂಟರ್,**
ಸೋದೆ ಮಠದ ಲೇನು - - **ಉಡುಪಿ, ದ. ಕ.**

---

THE
# MOOLKY BANK, LTD.,
MOOLKY.
## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
**ಮೂಲ್ಕಿ.**

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

**M. R. Punja,** ಯಂ. ಆರ್. ಪೂಂಜ,
*President & Manager,* ಪ್ರೆಸಿಡೆಂಟ್ ಮತ್ತು ಮೆನೇಜರ್.

---

# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

## THE ROYAL SEED CO.,
FLORISTS & SEEDSMEN,
27, Ilpay Thope ULSOOR, BANGLORE.

ವಿ ಸೂ—ತರಕಾರಿಗಳು ಮಾರ್ಕೆಟ್ ರೇಟಿನ ಸಸ್ತೆ, ಮಾಡಿ ೧—೦—೦ ಒಂದಕ್ಕೆ೦—೨—೦ ಕಮಿಷನ್ ಪಡಿಯುತ್ತೇವೆ ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಾ ಹಣ ಬರಬೇಕು.

---

# HOTEL INDIANA
## Bar and Restaurant

**ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ?**

## ಹೊಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದೆ.

**ಹೊಸ ಆಡಳಿತ!** ಹೊಸ ವ್ಯವಸ್ಥೆ!

**ಎಲ್ಲವೂ ಹೊಸತೇ ಆಗಿ**

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

*Proprietor,*
**HOTEL INDIANA**
***Hampankatta, Mangalore***

---

# ಧರ್ಮಾರ್ಥ ಬಹುಮಾನಗಳು



**1—0—0ಗೆ!**

**--- ಯಾರಿಗೆ? ---**

ರೂಪಾಯಿ 1-0-0 ಕೊಟ್ಟು 36 ಸೀಸೆ ಒಟ್ಟೊರೋಸ್ಟು ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಡೆಮ್ಮಿ ರಿಸ್ಟ್‌ವಾಚುಗಳು, 1 ಕ್ರೈಲ್ವರ್‌ಡಾಯಿಂ ದಮ್ಮಿ ಪಾಕೆಟ್ ಮಚ, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೆನು 14 ಕ್ಯಾರೆಟ್ ನಬ್ಬು ಸಮೇತ, 1 ಇಮಿಟೇಶನ್ ಮೋತಿ ಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ಬೀರುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (10 ವರುಷ ಗ್ಯಾರಂಟಿ) ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. **ಇಂದೇ ಆರ್ಡರು ಕೊಡಿರಿ.**

**EASTERN TRADING COY.,**
*Post Box No. 12204, CALCUTTA, (N. Y.)*

# ಹಿಂದೂದೇಶದ ಈಗಣ ರಾಜಕೀಯ ಪರಿಸ್ಥಿತಿ

## ಕಾಂಗ್ರೆಸ್ ಮಂತ್ರಿಗಳ ಪ್ರಶಂಸನೀಯ ಮಾದರಿ—ಅವರ ಆಡಳಿತದ ಬಿಕ್ಕಟ್ಟು

### ಪಂಡಿತ ತಾರಾನಾಥರ ಭಾಷಣದ ಸಾರಾಂಶ

(ಪ್ರೇಮ ವಿದ್ಯಾ ಪೀಠದಲ್ಲಿ ವಿದ್ಯಾರ್ಥಿಗಳು ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ವಿವರಿಸಬೇಕೆಂದು ಪಂಡಿತ ತಾರಾನಾಥರೊಡನೆ ಕೇಳಿಕೊಂಡರು. ತಾ ೮-೭-೧೯೩೭ರಲ್ಲಿ ಅವರು ಆ ಕುರಿತು ಮಾಡಿದ ಭಾಷಣದ ಭಾವಾವತರಣವಿದು)

ಮಿತ್ರರೇ,

ಇಂದಿನ ಪರಿಸ್ಥಿತಿಯನ್ನು ನೋಡಿದರೆ ನಮ್ಮ ರಾಜಕೀಯ ಪರಿಸ್ಥಿತಿಯನ್ನು ಕುರಿತು ಪಟ್ಟಿನ ಅನುಭವವನ್ನು ನೀವೇ ಸಂಪಾದಿಸಬೇಕಿತ್ತು. ಅದರಲ್ಲಿ ಹಿಂದುಳಿದಿರುವಿರೆಂದೂ ನಾನು ಊಹಿಸುವುದಿಲ್ಲ. ಪತ್ರಿಕೆ ಇತ್ಯಾದಿ ಓದಿ ಸಿದ್ಧರಾಗಿದ್ದರೇನೇ ಈ ವಿಷಯದ ಅರ್ಥವಾಗಬಹುದು. ಅದಲ್ಲದೆ ಪತ್ರಿಕೆಗಳ ವರ್ತಮಾನಗಳನ್ನು ಕೂಡಿಸಿ ಇಡುವುದು ಇಲ್ಲಿ ಅನುಕೂಲವಲ್ಲ. ಅಂಥಾ ಕೆಲಸಕ್ಕೆ ನೀವಾದರೂ ನನ್ನನ್ನು ಕರೆದಿರಲಿಕ್ಕಿಲ್ಲವೆಂದು ನಂಬುತ್ತೇನೆ.

ಇಂದಿನ ರಾಜಕೀಯ ವಾತಾವರಣವು ಗಹನವಾಗಿದೆ. ಇದರ ಮೇಲೆ ನಿಮ್ಮೊಬ್ಬೊಬ್ಬರ ಅಭಿಪ್ರಾಯವು ಒಂದೊಂದಿರಬಹುದು. ಕೆಲವರು ಕಾಂಗ್ರೆಸ್ಸಿನ ತತ್ವವನ್ನು ಮನ್ನಿಸುವವರಿದ್ದರೆ, ಕೆಲವರು ಸಮತಾವಾದ ಸರಿಯೆನ್ನುವವರಿರಬಹುದು. ಮತ್ತೆ ಕೆಲವರು ಜಸ್ಟಿಸ್ ಪಕ್ಷದಲ್ಲಿಯೂ ನ್ಯಾಯವನ್ನು ಕಾಣಬಹುದು. ಆದ್ದರಿಂದ ನಿಮ್ಮೊಳಗಿನ ಅಭಿಪ್ರಾಯ ಭೇದದ ಪರಿಷ್ಕರಣೆಗಾಗಿ ನನ್ನ ಮತವನ್ನು ಹೇಳಿದ್ದರೆ ನನಗೂ ಸಂತೋಷ, ನಿಮಗೂ ಸಾರ್ಥಕ. ಈಗ ಇಂದಿನ ಪರಿಸ್ಥಿತಿಯ ಮೇಲೆ ಸ್ವಾಭಿಪ್ರಾಯವನ್ನು ಮಾತ್ರ ಹೇಳುತ್ತೇನೆ.

1935ನೇ ಇಸವಿಯಲ್ಲಿ ಬಂದ ಇಂಡಿಯಾ ಆಕ್ಟಿನ ಗುಣ ದೋಷಗಳ ವಿಷಯ ಆಗಲೇ ಪ್ರಜಾಮತದಲ್ಲಿ 3-4 ಲೇಖನಗಳನ್ನು ಬರೆದಿರುತ್ತೇನೆ. ಇಂದು ಕಾಂಗ್ರೆಸ್ಸಿನವರು 11 ಪ್ರಾಂತಗಳ ಪೈಕಿ 6 ಪ್ರಾಂತಗಳಲ್ಲಿ ಬಹುಮತ ಪಕ್ಷಹೊಂದಿ ಮಂತ್ರಿಪದ ಸ್ವೀಕರಿಸಿದ್ದಾರೆ. ಆದರೆ ಕಾಂಗ್ರೆಸ್ಸಿನವರು ಈ ಆಕ್ಟಿನ ಮೇಲೆ ವಿಶ್ವಾಸದಿಂದ ಅಧಿಕಾರ ಸ್ವೀಕರಿಸಿದ್ದಾರೆಂದು ಹೇಳಲಾಗದು.—ಈ ಆಕ್ಟಿನ ಮೇಲೆ ಹಲವರು ಹಲವು ಅಭಿಪ್ರಾಯ ವ್ಯಕ್ತಪಡಿಸುವರು. ಕೆಲವರು ಕಾಂಗ್ರೆಸ್ಸಿಗರು ಅಧಿಕಾರ ನಿರ್ವಹಿಸಿ ಅದರಲ್ಲಿರುವ ಗುಣ-ದೋಷಗಳನ್ನು ಕಾಣುತ್ತಾರೆ. ಹೊರಗಿನ ಪದಾರ್ಥ ಕೀಳಾದರೂ ಗುಣವಿದ್ದರೆ ಗ್ರಹಿಸಬಾರದೇಕೆ? ಹೇಳುವುದೇನೋ ಸುಲಭ, ಹೇಳಿದ್ದನ್ನು ಮಾಡಿತೋರಿಸುವುದು ಕಷ್ಟ ಎಂದು ಹೇಳತೊಡಗಿದರು. ಕೆಲವರು ಅದರ ತೆಗಳಿಕೆಯನ್ನು ಹಾಡುವವರೂ ಇದ್ದರು. ಇದರಿಂದ ಕಾಂಗ್ರೆಸ್ಸು ಇಂದು ಸಂಘರ್ಷಣೆಗಾಗಿ ಕೈಹಾಕಿರುವುದಲ್ಲದೆ ಫಲವನ್ನು ನೋಡಿ ಕೈಹಚ್ಚಿಲ್ಲ.

ಆದರೆ ಕಾಂಗ್ರೆಸ್ಸಿಗ ಮುಂಚೆ ಮಂತ್ರಿಪದವಿಗೇರಿದ ಬೇರೆ ಮಂತ್ರಿಗಳು ಏನಾದರೂ ಉಪಕಾರವನ್ನು ಸಾಧಿಸಿದರೆ? ಅನುಕೂಲವಿದ್ದಷ್ಟರ ಉಪಕಾರ ಮಾಡಲಾರದೆ ಹೋದರು? ಎಂಬ ಪ್ರಶ್ನೆ ಉದಿಸುತ್ತದೆ. ಇವರಿಗೆ ಉಪಕಾರವನ್ನು ಸಾಧಿಸುವುದು ಸಾಧ್ಯವಿದ್ದಿಲ್ಲವೆಂದಲ್ಲ. ಸಾಧ್ಯವಿದ್ದುದನ್ನು ಸಾಧಿಸುವುದಕ್ಕೆ ತಕ್ಕ ಹೃದಯವೂ ಬೇಕು, ಊಹೆ ಬೇಕು. ಹೃದಯವು ಸ್ವಾರ್ಥದ ಗೊಬ್ಬಿನಿಂದ ಮುದುಡಿಹೋಗಿದೆ. ಊಹೆಯು ಮುಂದುಗಾಣದೆ ಕುಂಟುಬಿದ್ದಿದೆ.

ಇವರ ದೃಷ್ಟಿಯಲ್ಲಿ ರಾಜ್ಯದ **ಸುಖವಿಲ್ಲ; ರಾಜ ರಾಜ್ಯಾಂಗದವರ ಸುಖ;** ಅವರಿಂದ ತಮ್ಮ ಸುಖ. ಇವರ ಅಧಿಕಾರದಿಂದ ಪ್ರಜೆಗೆ ದೊರೆತ ಲಾಭವು ಬೋಗಿತ್ ರ್ಟ್– ನಮ್ಮ ಹಳ್ಳಿಯ ಸವಾರರು ಕುದುರೆಯ ಮೇಲೆ ಭಾರದ ಚೀಲಗಳನ್ನು ಹೊರಿಸುವುದು ರೂಢಿ. ಇದು ಕೂತ ಸವಾರನ ಮೈ ನೂಲಿನಂತೆ ಮಾಡುವ ಒಂದು ಸಾಧನ. ಇದರಲ್ಲಿ ಹೇರುವುದು ಬೇಕಾದ ಸಾಮಾನುಗಳನ್ನೇನೂ ಅಲ್ಲ. ಭಾರಕ್ಕೆ ಬೇಕಾದವುಗಳನ್ನು. ತಮ್ಮ ಸುಖವನ್ನು ಸ್ವಪರಹಿತದೃಷ್ಟಿಯಿಂದ ಸಾಧಿಸುವ ಬುದ್ಧಿ ಇವರಿಗಿಲ್ಲ. ಹಾಗೆಯೇ ನಮ್ಮ ಹೋದ ಮಂತ್ರಿಗಳ ಪಾಡು!

ಈಗ ನಮ್ಮ ದೇಶದ ಪರಿಸ್ಥಿತಿಯನ್ನು ನೋಡೋಣ. ಎಲ್ಲಾ ದೇಶಗಳಲ್ಲಿದ್ದಂತೆ ನಮ್ಮ ದೇಶದಲ್ಲಿಯೂ ಎರಡು ಪಂಗಡಗಳಿವೆ. ಒಂದು ಧನೋತ್ಪಾದಕ ವರ್ಗ; ಇನ್ನೊಂದು ಅನುತ್ಪಾದಕ ವರ್ಗ. ಧನೋತ್ಪಾದಕ ವರ್ಗವೇ ನಮ್ಮ ಹಳ್ಳಿಯ ರೈತರು. ಎರಡನೇ ವರ್ಗಕ್ಕೆ ಬಹಳವಾಗಿ ಕಲಿತವರೆಂಬ ನಾಗರಿಕರು, ತರುಣರು ಸೇರಿದ್ದಾರೆ. ಇಂದು ನಮಗೆ ಕೇಳಿಬರುವ ನಿರುದ್ಯೋಗದ ದೊಡ್ಡ ಕೂಗು ನಿಜವಾಗಿಯೂ ನೋಡಿದರೆ ಧನೋತ್ಪಾದಕರದಲ್ಲ, ಅನುತ್ಪಾದಕರದ್ದು. ಇದೇ ನಮ್ಮ ಸರಕಾರದ ಲಕ್ಷ್ಯಕ್ಕೆ ಹೋಗುತ್ತದೆ. ಯಾಕೆಂದರೆ ಇವರೇ ಸರಕಾರದ ಜಾಲವನ್ನು ಈ ಧನೋತ್ಪಾದಕ ವರ್ಗದ ಮೇಲೆ ಹರಡಬೇಕು. ಇವರೇ ಗೊಬ್ಬಿನಲ್ಲಿದ್ದರೆ ಅರಿಯದ ಹಳ್ಳಿಗರು ಕಣ್ಣು ತೆರೆಯುವುದೆಂತು? ಆದ್ದರಿಂದ ನಮ್ಮ ಸರಕಾರದ ದೃಷ್ಟಿಯಲ್ಲಿ ಧನೋತ್ಪಾದಕನು ಕನಿಷ್ಠ; ಅವನನ್ನು ತಿಂದು ಹಾಕುವವನು ವರಿಷ್ಠ!

ಆದರೆ ಕಾಂಗ್ರೆಸ್ಸಿನ ಹೃದಯದಲ್ಲಿ ಪ್ರತಿಧ್ವನಿಸುವ ಗೋಳು ಇದಲ್ಲ. ಧನೋತ್ಪಾದಕ ವರ್ಗದ ರೈತ ಕೂಲಿ ಜನರ ಸಹಿಸಲಾರದ ದಾರಿದ್ರ್ಯ ದುಃಖ. ಓದು ಬರಹ ಬಲ್ಲವರ ನಿರುದ್ಯೋಗವನ್ನು ಅಲ್ಲಲ್ಲಿ ಪರಿಹರಿಸಿದ ಮಾತ್ರದಲ್ಲಿ ದೊಡ್ಡ ಧನೋತ್ಪಾದಕ ವರ್ಗದ ಕಲ್ಯಾಣಮಾಡಿದಂತಾಗಲಾರದು. ಹಲವು ಹುದ್ದೆಗಳನ್ನು ಉಂಟುಮಾಡಿ ಹಿಂದಿನ ಮಂತ್ರಿಗಳು ಮಾಡಿದಂತೆ ಸ್ವಜನರನ್ನು ಅವುಗಳಿಗೆ ಸೇರಿಸಿಬಿಟ್ಟ ಮಾತ್ರಕ್ಕೆ ದೇಶದ ಹಿತವಾದಂತಾಗಲಾರದು. ಅದರಿಂದಾಗುವುದು ಬರೇ ಮೋಸ. ಎಬ್ರಹಮ್ ಲಿಂಕನ್ ಹೇಳಿದಂತೆ "ಒಬ್ಬನನ್ನು ಸದಾಕಾಲ ವಂಚಿಸಬಹುದು. ಬಹುಜನರನ್ನು ಸ್ವಲ್ಪಕಾಲ ವಂಚಿಸಬಹುದು. ಆದರೆ ಸಕಲರನ್ನು ಸದಾಕಾಲವೂ ವಂಚಿಸಲು ಸಾಧ್ಯವಾಗಲಾರದು." ಇಂದು ಇಂಡಿಯವು ಎಚ್ಚೆತ್ತಿದೆ. ಕಾಂಗ್ರೆಸ್ ಬಡಗುಂಪಿನ ಗೋಳಿನಿಂದಲೇ ಹುರಿಗೊಂಡು ಆ ಮೋಸದ ಮಾರ್ಗವನ್ನು ಹಿಡಿಯದೆ ರಾಜಮಾರ್ಗದಲ್ಲಿ ಊಹಾಬಲದಿಂದ ಮುಂದುವರಿಯುತ್ತಿದೆ.

ಆದರೂ ಇದರ ಕಾರ್ಯದಲ್ಲಿ ಅನೇಕ ಬಿಕ್ಕಟ್ಟುಗಳು ಎದ್ದು ನಿಂತಿವೆ. ಇದನ್ನು ಒಂದೊಂದಾಗಿ ಬಿಡಿಸೋಣ.

೧ ಮೊದಲನೆಯದಾಗಿ ರೈತರ ಸಂಕಷ್ಟಗಳನ್ನು ಪರಿಹರಿಸಬೇಕು. ಅಂದರೆ ಅವರ ಉತ್ಪನ್ನವನ್ನೂ ಹೆಚ್ಚಿಸಬೇಕು. ಉತ್ಪನ್ನ ಹೆಚ್ಚಬೇಕಾದರೆ ಸುಧಾರಣೆಬೇಕು. ಕೃಷಿ ಉದ್ಯಮಗಳ ಸುಧಾರಣೆಗಾಗಿ ವೆಚ್ಚವು ಹೆಚ್ಚೇ ಬೇಕು. ಇದ್ದ ಉತ್ಪತ್ತಿಯೇ ಸಾಲದಿರುವಾಗ ಇನ್ನೂ ವೆಚ್ಚಮಾಡುವುದೆಲ್ಲಿಂದ? ರೈತರ ಉತ್ಪತ್ತಿ ಹೆಚ್ಚಿಸಬೇಕಾದರೆ, ತೆರಿಗೆ ಕಡಿಮೆ ಮಾಡುವುದೇ ಒಂದು ಉಪಾಯ. ಆದರೆ, ತೆರಿಗೆ ಇಳಿಸುವುದಕ್ಕೂ ಆತಂಕವಿದೆ. ಸರ್ವಿಸ್‌ಗಳಿಗೆ ಸಂಬಳವೆಲ್ಲಿಂದ ಕೊಡಬೇಕು? ಅವರ ಸಂಬಳಕ್ಕೆ ಕಟ್ ಹಾಕುವ ಅಧಿಕಾರ ಮಂತ್ರಿಗಳಿಗೂ ಇಲ್ಲ. ಆದರೂ, ಒಂದು ಹಂಚಿಕೆಯನ್ನು ಹೂಡಿದ್ದಾರೆ. **ಕಾಂಗ್ರೆಸ್ ಮಂತ್ರಿಗಳು ತಮ್ಮ ತ್ಯಾಗದ ಮೇಲ್ಪಂಕ್ತಿಯಿಂದ ಇವರಿಗೆ ದಾರಿತೋರಿಸುತ್ತಿದ್ದಾರೆ. ತಮ್ಮ ಸಂಬಳಗಳಿಗೆ ತಾವೇ ಕಟ್ ಹಾಕಿಕೊಂಡಿದ್ದಾರೆ.** ಈ ಪಾಠವು ಒಂದು ಪರಿಣಾಮಕಾರಿಯಾಗದಿರದು. ಕಾಂಗ್ರೆಸ್ ಮಂತ್ರಿಗಳು ತೆರಿಗೆ ಕಡಿಮೆಮಾಡುವುದರಲ್ಲಿಯೂ ಒಂದು ನಿಯಮವನ್ನು ಗೊತ್ತುಮಾಡಿದಾರೆ. ರೂಪಾಯಿ ೨೦ಕ್ಕಿಂತ ಕಡಿಮೆ ತೀರ್ವೆ ತೆರುವ ರೈತನಿಗೆ ಪೂರ್ಣ ಮಾಫಿಮಾಡಬೇಕು. ಅದಕ್ಕಿಂತ ಮೀರಿದ ಉತ್ಪನ್ನವು ರೈತನಿಗೆ ಆದಾಯದ ಮೊತ್ತದ ಮೇಲೆ ಇನ್‌ಕಮ್ ಟ್ಯಾಕ್ಸಿನಂತೆ ಏರುತ್ತೇರುತ್ತ ಹೋಗುವಂತೆ ಮಾಡಬೇಕು. ಈ ಧೋರಣೆಯಿಂದ ಚಿಕ್ಕಪುಟ್ಟ ತೆರಿಗೆ ತೋಗುವುದರಿಂದಾಗುವ ನಷ್ಟವು ದೊಡ್ಡ ದೊಡ್ಡ ಆಸ್ತಿಗಳ ಮೇಲೆ ಹೇರಲಿರುವ ಇನ್‌ಕಮ್ ಟ್ಯಾಕ್ಸಿನ ಪದ್ಧತಿಯ ಮೂಲಕ ಭರ್ತಿಯಾಗುವ ನಿಶ್ಚಯವಿದೆ.

೨ ಮದ್ಯಪಾನ ನಿಷೇಧ. ಇದನ್ನು ಸೇಲಂ ಜಿಲ್ಲೆಯೊಂದರ ಕಾರ್ಯರೂಪದ ಪರಿಣಾಮದಿಂದ ತುಲನೆಮಾಡಬಹುದು. ಇದೊಂದು ಜಿಲ್ಲೆಯಲ್ಲೇ ಇದರ ನಿಷೇಧದಿಂದ ೨೦,೦೦೦ ಮಂದಿ ಈಡಿಗ (ಮೂರ್ತೆಯವ)ರಿಗೆ ಕೆಲಸವಿಲ್ಲದಾಗಿದೆ. ಒಂದು ಜಿಲ್ಲೆಯಲ್ಲಿ ಈ ರೀತಿಯಾಗುವಾಗ, ಮಿಕ್ಕೆಲ್ಲದರ ಪರಿಸ್ಥಿತಿಯೇನು? ಎಂದು ಯಾರಾದರೂ ಕೇಳಬಹುದು. ಆದರೆ ಇದಕ್ಕೂ ಕೂತಲ್ಲಿಂದಲೇ ನಮ್ಮ ಮುದುಕ ಮಹಾತ್ಮ ಯೋಜನೆಹಾಕುತ್ತಿದ್ದಾರೆ. ಆ ಕಸಬು ಹೋದ ಮಂದಿಯು ಮೊದಲಿನಂತೆಯೇ ಮೂರ್ತೆಮಾಡಿ, ಹುಳಿ ಹೆಂಡದ ಅಮಲು ಸೇವನೆ ಬಿಟ್ಟು ಬೆಲ್ಲಮಾಡುವ ಕಸಬು ನಡೆಸಬಾರದೇಕೆ? ಅದರ ಚಿಕ್ಕ ಪುಟ್ಟ ವ್ಯವಸಾಯ ಕೇಂದ್ರಗಳು ಹಳ್ಳಿಯಲ್ಲೇ ಬೆಳೆದು ಮುಂದರಿಯಬಾರದೇಕೆ? ಎಂದು ಹೇಳುತ್ತಾರೆ.

೩ ಇನ್ನು ವಿದ್ಯಾ ಇಲಾಖೆಯ ಖರ್ಚು. ಕಾಲೇಜಿನ ಒಬ್ಬೊಬ್ಬ ವಿದ್ಯಾರ್ಥಿಗೆ ಆತನಿಂದ ಕಾಲೇಜಿಗೆ ಬಂದ ಉತ್ಪನ್ನಕ್ಕಿಂತಲೂ ಎಷ್ಟೋ ದುಡ್ಡು ಹೆಚ್ಚು ಖರ್ಚಾಗುತ್ತದೆ. ಉದಾಹರಣೆಗೆ-ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಒಬ್ಬೊಬ್ಬ ವಿದ್ಯಾರ್ಥಿಯಿಂದ ವರ್ಷಕ್ಕೆ ಸಲ್ಲುವ ಹಣ ೧೨೦ ರೂಪಾಯಿಗಳು. ಸರಕಾರಕ್ಕೆ ಒಬ್ಬೊಬ್ಬನ ಪರವಾಗಿ ತಗಲುವ ಖರ್ಚು ೧೬೦ ರೂಪಾಯಿಗಳು. ಹೀಗೆಂದು ಮೊನ್ನೆ ಮೊನ್ನೆ ಶ್ರೀ ಮುಕ್ಕೇರಿಕರರು ಒಂದು ಲೇಖನದಲ್ಲಿ ಪ್ರಕಟಿಸಿದ್ದಾರೆ. **ಈ ದುಬಾರಿ ಖರ್ಚನ್ನು ಹೊರುವವನು ಬಡ ರೈತನಲ್ಲವೇ?**

**ಮೂರುಗಡಿಯಾರಗಳು ಮತ್ತು ೧೨೬೫ ಆಕರ್ಷಕ ಬಹುಮಾನಗಳ ಸಮೇತ ರೂ. ೧-೨-೦ ಮಾತ್ರ.**



ನಮ್ಮ ಸುಗಂಧ ಪರಿಮಳ "ಒಟ್ಟೊ ದಿಲ್ ಕುಶ್" 12 ಸೀಸೆಗಳನ್ನು ಅಥವಾ 12 ಡಬ್ಬಿ ರಿಂಗ್‌ವರ್ಮ್ ಮುಲಾಮನ್ನು ಗಲೀ ರೂ. 1-2-0ಗೆ ಕೊಂಡುಕೊಳ್ಳುವವರಿಗೆ ಈ ಕೆಳಗೆ ಕಂಡ ಬಹುಮಾನಗಳು ಉಚಿತವಾಗಿ ಕೊಡಲಾಗುವವು.

ಒಂದು ರೈಲೆ ಟೈಂ ಪೀಸ್ ಪಾಕೆಟ್ ವಾಚ್, ಪಟ್ಟಿಸಹಿತ ಒಂದು ರೋಲ್ಡ್ ಗೋಲ್ಡ್ ಗಿಲ್ಟ್ ಮನ್ಗೆ ರಿಸ್ಟ್‌ವಾಚ್, ಒಂದು ಗಿಲ್ಲೆಟ್ ಸೇಫ್ಟಿರೇಜರ್, ಒಂದು ಶೇವಿಂಗ್ ಸೋಪು ಒಂದು, ಶೇವಿಂಗ್ ಬ್ರಷ ಒಂದು ಕನ್ನಡಿ, ಒಂದು ಪ್ಯಾಕೇಟು ಪೌಡರು, ಒಂದು ಬಾಚಣಿಗೆ, ... ರೋಲ್ಡ್ ಗೋಲ್ಡ್ ... ಒಂದು ಫೌಂಟನ್ ಪೆನ್ನು, ಒಂದು ರೋಲ್ಡ್ ಗೋಲ್ಡ್ ಉಂಗುರ ... ಉಳ್ಳ ಒಂದು ಟಾರ್ಚ್ ಲೈಟು ಅಥವಾ ಒಂದು ಸಲ ಬೀಗದ ಕೈ ... ೧೦ ವರುಷಗಳ ಗ್ಯಾರಂಟಿಯಾದ ಮತ್ತು ಮುಚ್ಚಳ ... ಕೊಟ್ಟಿರುವ ಒಂದು ಜರ್ಮನ್ ಟೈಂ ಪೀಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ೦-೧೦-೦ ಪ್ರತ್ಯೇಕ.

THE AMERICAN COMMERCIAL, STORES,
P. B No. 12213, Calcutta.

**ಅದು ಯಾರ ಉಪಕಾರಕ್ಕಾಗಿ?** ಅವನಿಗಂತೂ ಅದರಿಂದ ಸುತರಾಂ ಲಾಭವಿಲ್ಲ. ಅವನ ಸಾಲವನ್ನು ತೀರಿಸಬೇಕೆಂಬ ಬುದ್ಧಿ ಕಾಲೇಜಿನ ಪ್ರೊಫೆಸರರಿಗೇ ಇಲ್ಲ! ವಿದ್ಯಾರ್ಥಿಗಳಿಗೆ ಹೇಗೆ ಬಂದೀತು? ಈ ರಾಷ್ಟ್ರೀಯ ಸಾಲದ ಎಚ್ಚರಿಕೆಯಾದರೂ ಅವರಿಗಾದರೆ, ಅದನ್ನು ತೀರಿಸುವುದಕ್ಕೆ ದುಡಿಯುವ ಬಗೆಯಾವುದು? ಅದನ್ನು ಕಲಿಸುವ ಸಂಸ್ಥೆಗಳ್ಯಾವುವು? ಇವೇ ಮೊದಲಾದ ಪ್ರಶ್ನೆಗಳು ಈಗಿನ ಮಂತ್ರಿಗಳನ್ನು ಇದಿರಿಸುತ್ತವೆ. ಅಂಥಾ ಯಾರಿಗೂ ಉಪಕಾರಕವಲ್ಲದ ವಿದ್ಯೆಯೇ ಇರಕೂಡದೆಂದು ಮಹಾತ್ಮರ ಮತ. ಪುಸ್ತಕ ಜ್ಞಾನ ಒಂದನ್ನೇ ಬೆಳೆಸುವ ವಿದ್ಯೆಯಿಂದ ಬಡ ರೈತನಿಗೆ ಆಗುವದು ಕಷ್ಟನಷ್ಟಗಳಲ್ಲದೆ ಲಾಭವಲ್ಲ. **ವಿದ್ಯೆಯು ಗಮ್ಯವು ಬುದ್ಧಿಯನ್ನು ಬೆಳೆಸಿದಂತೆ ಉದ್ಯಮ ಉತ್ಪನ್ನಗಳನ್ನು ಬೆಳೆಸಬೇಕು.** ಹಾಗಾಗುವಂತೆಯೇ ವಿದ್ಯಾ ಇಲಾಖೆಗಳ ಹೊಸ ಏರ್ಪಾಡುಗಳನ್ನು ಮಾಡಬೇಕು. ಸಂಪಾದನೆ ಮಾಡುವವರೊಬ್ಬರು ತಿಂದು ಹಾಕುವವರಿನ್ನೊಬ್ಬರು. ಈ ದುಷ್ಟ ಪ್ರವೃತ್ತಿಯು ಇಲ್ಲದಂತಾಗಬೇಕು.— ಎಂದು ಮಹಾತ್ಮರೆನ್ನುತ್ತಾರೆ. ಆದಷ್ಟು ಮಟ್ಟಿಗೆ ವಿದ್ಯಾ ಸಂಸ್ಥೆಗಳ ಉತ್ಪನ್ನದಿಂದಲೇ ಅವುಗಳ ವೆಚ್ಚವೂ ಕೈಗೂಡುವಂತೆ ಪ್ರಯತ್ನ ಮಾಡಬೇಕು. ಜಪಾನು ಅಮೇರಿಕ ಮುಂತಾದ ಧನಾಢ್ಯ ದೇಶಗಳಲ್ಲಿಯೂ ಈ ರೀತಿಯು ಅವರಿಗೆ ಅವಶ್ಯವೆಂದು ತೋರಿ ಅದಕ್ಕೆ ತಕ್ಕಂತೆಯೇ ಅವರು ವ್ಯವಸ್ಥೆಗಳನ್ನು ಮಾಡುತ್ತಿದ್ದಾರೆ. ಅಂದ ಮೇಲೆ ಬಡ ಇಂಡಿಯದ ಆವಶ್ಯಕತೆಯಾದರೂ ಎಷ್ಟಿದ್ದೀತು. ಈ ವ್ಯವಸ್ಥೆಯು ಕಾಂಗ್ರೆಸ್ಸಿನಿಂದ ಆಗತಕ್ಕದ್ದಿದೆ ಮತ್ತು ಆಗಲೇಬೇಕು. ಹಾಗೆ ಮಾಡಿದರೇನೇ ಹೆಂಡ ಸರಾಯಿಗಳ ಉತ್ಪನ್ನದಿಂದ ಸರಕಾರಕ್ಕೆ ಬಿಡುಗಡೆ. ಅದಿಷ್ಟು ಸಂಪತ್ತಿಯಿಂದ ಶಿಕ್ಷಣಕ್ಕೆ ಬಿಡುಗಡೆ.

೪. ಜೈಲು ವೆಚ್ಚದ ಪ್ರಶ್ನೆಯೂ ಒಂದು. ಇದನ್ನು ಜೈಲು ಉತ್ಪನ್ನದಿಂದಲೇ ತುಂಬಬೇಕು. ಅಲ್ಲಿಯ ಕೈದಿಗಳಿಗೆ ಈಗಿನಂತೆ ಕೆಲಸಕ್ಕೆ ಬಾರದ ಕೆಲಸ ಕೊಡುವುದಲ್ಲ. ಹತ್ತಿ ಹೊಡೆದು ನೂಲುವ-ಬಟ್ಟೆ ನೇಯುವ ಇತ್ಯಾದಿ **ಉತ್ಪನ್ನದಾಯಕ ಕೆಲಸಗಳು ನಡೆಯಬೇಕು.** ಜೈಲು ಸೋಮಾರಿಗಳ ನೆಲೆಮನೆಯಾಗಬಾರದು. ಕಾರ್ಯೋತ್ಸಾಹದ ಅರಮನೆಯಾಗಬೇಕು. ಅಲ್ಲಿಯ ಅಧಿಕಾರಿಗಳಲ್ಲಿಯೂ ಕಡಿತ ಸುಧಾರಣೆಗಳ ಪ್ರಯೋಗ ನಡೆಯಬೇಕು.

ಈ ಮೇಲೂ ಪಂಡಿತರು ಕೆಲವು ವಿಷಯಗಳನ್ನು ವಿವರಿಸಿ ನಮ್ಮ ರಾಷ್ಟ್ರಧುರೀಣ ಮಹಾತ್ಮರಿಗೂ ಅವರ ವೀರ ಅನುಯಾಯಿಗಳಿಗೂ ಧೀರ್ಘಾಯುಷ್ಯವು ಲಭಿಸಲಿ ಎಂದು ಹಾರೈಸಿ ಭಾಷಣವನ್ನು ಮುಗಿಸಿದರು.

**ಪತ್ರಿಕೋದ್ಯಮ ಶಾಖೆ,**
ಪ್ರೇಮಾಯತನ ತುಂಗಭದ್ರ


## ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. ೫೮, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. 9೮ ಬಾಟಲಿಗೆ ಬರೆಯಿರಿ.

**Bal Kala Stores,**
P. O. Kansisimri (*Darbhanga*)



## SUSHEELA & CO., KOLLEGAL (S. INDIA)
## ನಂಬ್ರ ೧ ಸ್ಪರ್ಧೆಯಲ್ಲಿ ಬಹುಮಾನ ಪಡೆದವರ ಹೆಸರುಗಳು

**ಪ್ರಥಮ ಬಹುಮಾನ**
500 **ರೂಪಾಯಿಗಳು**

ತಲಾ 250 ರೂಪಾಯಿಗಳು

ಶ್ರೀಮತಿ ಯಸ್. ಚೂಡಾಮಣಿಯಮ್ಮ, ಬಸವನಗುಡಿ, ಶ್ರೀಮತಿ ಎ ಕೆ. ಕಮಲಮ್ಮ, ಮಳವಳ್ಳಿ

**ಎರಡನೇ ಬಹುಮಾನ**
200 **ರೂಪಾಯಿಗಳು**

ತಲಾ 50 ರೂಪಾಯಿಗಳು

ಶ್ರೀ। ಕೆ. ಕನಕಮ್ಮ, ಮಲ್ಲೇಶ್ವರ. ಶ್ರೀ। ಯಶೋದಮ್ಮ, ಮೈಸೂರು. ಶ್ರೀ। ಯಮ್. ಕೆ. ದೇವರಾಜ್, ಮೈಸೂರು. ಶ್ರೀ। ಕೆ. ಶ್ರೀನಾಥ, ಮಳವಳ್ಳಿ.

**ಇತರ ಬಹುಮಾನಗಳು**

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀ, ಶ್ರೀಮತಿ ಯಸ್. ಚೂಡಾಮಣಿಯಮ್ಮ, ಬಸವನಗುಡಿ ಇವರಿಗೆ ೧೫ ರೂಪಾಯಿಗಳು

ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದ ಮ। ಕೆ. ಶ್ರೀನಾಥ ಮಳವಳ್ಳಿ ಇವರಿಗೆ ೭ ರೂಪಾಯಿಗಳು.

**ಮೂರನೇ ಬಹುಮಾನ**
100 **ರೂಪಾಯಿಗಳು**

ತಲಾ 2 ರೂಪಾಯಿಗಳು

ಶ್ರೀ ಎ. ಕೆ. ಲಕ್ಷ್ಮೀನರಸಮ್ಮ, ಅಕ್ಕಿ ಹೆಬ್ಬಾಳು. ಬಿ ವೈಕುಂಠ ಶೈ, ಹೆಡ ಮಾಸ್ಟರ್. ಕೆ. ಈಶ್ವರಪ್ಪಯ್ಯ, ಬಿ. ವೈಕುಂಠ ಶೈ, ಬ್ರ್ಯಾಂಚ್ ಪೋಸ್ಟ್‌ಮಾಸ್ಟರ್, ಧರ್ಮಸ್ಥಳ. ದ ಕ. ಕಲ್ಯಾಣಿ ಬಾಯಿ, ಉಜಿರೆ. ದ. ಕ. ರತ್ನಾಬಾಯಿ. ಗಿರಿಜಾಬಾಯಿ. ಮಂಗಳೂರು ದ. ಕ. ಕೆ. ಕೇಶವ ಕಾಮತ್, ಬೆಳ್ತಂಗಡಿ. ದ. ಕ ಎನ್ ನಾರಾಯಣ ಮೂರ್ತಿ, ಸಿ. ರಂಗಸಾಮಿ, ಕೊಳ್ಳೇಗಾಲ. ಕೆ. ಸುಬ್ಬರಾವ್, ಅರಕಲಗೂಡು. ಡಿ ಬಿ. ತಿಮ್ಮಣ್ಣ, ಹೊಸದುರ್ಗ. ಸುಶೀಲಮ್ಮ, ಮಾಗಡಿ ಲಿಂಗಣ್ಣ ಉಪಾಧ್ಯ, ಚಾಮರಾಜ ನಗರ ನೀಲಮ್ಮ, ಕೆಳಸ. ಕರಣಂ ಜಾನಕಿ ರಾಮರಾವ್, ದ ಗ್ಗವತ್ತಿ. ಬಿ. ಕೆ. ಪಲ್ಲಮ್ಮ, ಚಿತ್ರದುರ್ಗ, ಬಳಿಮುನಿ ವಾಮಪ್ಪ, ಕೆ. ಎ. ರಾಮಸ್ವಾಮಿ, ಚನ್ನಪಟ್ಟ. ಕೆ. ಗೋವಿಂದಯ್ಯ ಶೆಟ್ಟಿ, ಸೋಣಗಾನಹಳ್ಳಿ. ವಿಶಾಲಾಕ್ಷಮ್ಮ, ಮಂಡ್ಯ. ಕೃಷ್ಣಶೆಟ್ಟಿ, ಕೇತಗಾಪುರ. ವಿ. ರಂಗಸ್ವಾಮಿ ಹೈದರಾಬಾದ್. ಹೆಚ್. ಕೆ. ರುಕ್ಮಿಣಿಯಮ್ಮ, ಸಿಕಂದರಾಬಾದ್. ಎ. ವಿ. ಕೇಶವಮೂರ್ತಿ, ಮಳವಳ್ಳಿ. ಎನ್. ಆರ್. ಕಮಲಮ್ಮ, ಹಳೇಬೀಡು. ಯಸ್. ಎಮ್. ಮಹದೇವಪ್ಪ, ಕೆ. ರಾಮರಾವ್, ಬೆಂಗಳೂರು ದಂಡು ಕೆ. ರಾಘವೇಂದ್ರಾಚಾರ್, ಅಲಸೂರು. ಪುಟ್ಟಮ್ಮ ಶೇಷಾದ್ರಿಪುರ. ಕೆ. ಎಲ್. ನರಸಿಂಹನ್, ಬಸವನಗುಡಿ. ಜಿ. ಗಂಗಮ್ಮ, ಪಂಕಜಮ್ಮ, ಬಿ. ವಿ. ಗೋಪಾಲನ್ ಕೆ. ಲಕ್ಷ್ಮಣ ರಾವ್. ಬೆಂಗಳೂರು ಸಿಟಿ. ಅಂಗಟಿಹಳ್ಳಿ ಮುದ್ದು ಬಸವಯ್ಯ, ಕೆ. ಯಸ್ ಲಕ್ಷ್ಮೀದೇವಿ, ಎಸ್. ಸೀತಮ್ಮ ಬಿ. ಯನ್ ಶೇಷಾದ್ರಿ, ಕೆ. ಗುಂಡಮ್ಮ, ಎನ್. ಸರೋಜ, ಜಿ. ಕಮಲಮ್ಮ, ಎನ್ ಸೀತಮ್ಮ, ಎಸ್. ಮಹಾಲಕ್ಷ್ಮಮ್ಮ, ಜಿ. ಎಸ್. ಅಚ್ಚಮ್ಮ, ಯನ್. ಪುಟ್ಟತಾಯಮ್ಮ, ಗೌರಮ್ಮ, ಜ ಶ್ರೀನಿವಾಸಯ್ಯಂಗಾರ್, ವಿ. ರುಕ್ಕಮ್ಮ ಹೆಚ್. ಆರ್. ವೆಂಕಮ್ಮ.

ತಮ್ಮ ಕೂಪನ್ನಿಗೆ ಬಹುಮಾನ ಬರಬೇಕಾಗಿತ್ತೆಂಬ ಅನುಮಾನವುಳ್ಳವರು ಪುನರ್ವಿಮರ್ಶೆ ಬಗ್ಗೆ ೮ (ಎಂಟಾಣೆ) ಫೀಜಿನೊಡನೆ ತಾರೀಕು ೯-೯-೧೯೩೭ ರೊಳಗೆ ಕಳಿಸಬೇಕು. ಆ ಪುನರ್ವಿಮರ್ಶೆಯಲ್ಲಿ ಅವರಿಗೆ ಬಹುಮಾನ ದೊರೆತದ್ದೇ ಆದರೆ ಅವರು ಪಾವತಿ ಮಾಡಿದ್ದ ಪುನರ್ವಿಮರ್ಶನದೊಂದಿಗೆ ಬಹುಮಾನವು ಕೊಡಲ್ಪಡುವುದು ಇಲ್ಲವಾದರೆ ಪುನರ್ವಿಮರ್ಶನವು ಹೋಗುವುದು. ಪುನರ್ವಿಮರ್ಶೆಯಿಂದ ಬಹುಮಾನ ಪಡೆದವರ ಸಂಖ್ಯೆಯು ಹೆಚ್ಚಿದಲ್ಲಿ ಬಹುಮಾನದ ಹಣವೂ ಅದಕ್ಕನುಗುಣವಾಗಿ ಹಂಚಲ್ಪಡುವುದು. ಈ ಪಟ್ಟಿಯಲ್ಲಿ ಕಂಡವರಿಗೆ ಬಹುಮಾನದ ಹಣವು ಪುನರ್ವಿಮರ್ಶಾ ತಾರೀಕು ಮುಗಿದ ಮೇಲೆ ಕಳುಹಿಸಲ್ಪಡುವುದು.

ಕೊಳ್ಳೆಗಾಲ
೩೦-೮-೩೭

ಮ್ಯಾನೇಜರ್
**ಸುಶೀಲ ಅಂಡ್ ಕೊ**



## ಆತಂಕನಿಗ್ರಹ ಮಾತ್ರೆ

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತವೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುವು.

ಕ್ರಯ: ಡಬ್ಬಿ ೧ಕ್ಕೆ ೧-೦-೦.

**ವಾಜೀಕರಣ ತೈಲ:**—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣಗೊತ್ತಾಗುತ್ತದೆ

ಕ್ರಯ ಸೀಸೆ ಒಂದಕ್ಕೆ ೫—೦—೦.

**ಅಮೃತಾರ್ಣವ ಲೇಹ್ಯ:**— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ಕಟಿನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು.

ಕ್ರಯ: ಡಬ್ಬಿ ೧ಕ್ಕೆ ೨-೦-೦.

**ಕಾಮಶಾಸ್ತ್ರ** ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

**ಆತಂಕ ನಿಗ್ರಹ ಫಾರ್ಮಸಿ,**
**೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ**



## ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

**ಡಾ. ಜಸಾನಿಯವರ**
ಜಗತ್ಪ್ರಸಿದ್ಧ

'ಗೊನೊಕಿಲರ್' (ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

### ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅತ್ಯುತ್ತಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜಿಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N. JASANI,** Vitalbhai Patel Road, BOMBAY 4.

# ಪತ್ರ ವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾಗಿ ಅಕ್ಷರಗಳಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ]

### ಮುಂಬಯಿ ಬಂಟರ ಯಾನೆ ನಾಡವರ ಸಂಘಕ್ಕೊಂದು ಸೂಚನೆ

ಮುಂಬಯಿ ಬಂಟರ ಯಾನೆ ನಾಡವರ ಸಂಘದಲ್ಲಿ ತಾ ೨೫-೭-೩೭ರಲ್ಲಿ ಆದ ಕಮಿಟಿ ಮೀಟಿಂಗು ಜರುಗುತ್ತಿರುವಾಗಿಯೂ ಮೀಟಿಂಗಿಗೆ ಬೇಕಾಗುವಷ್ಟು ಆದ ಮೆಂಬರು ಹಾಜರಿರಲಿಲ್ಲವೆಂತಲೂ ಕಮಿಟಿ ಅನಿಸಲ್ಪಡುವ ಕೂಡಾ ಕಡಿಮೆ ಮೆಂಬರರೊಟ್ಟಿಗೆ ಆ ಕ್ವೆಶ್ಚನ್ನನ್ನು ಅಲಂಕರಿಸಿದ್ದರೆಂತಲೂ ಆ ಕಮಿಟಿ ಮೀಟಿಂಗಿನಲ್ಲಿ ಕ್ವೆಶ್ಚನ್ ಹೊಂದಿದ ಎಂಪ್ಲಾಯ್‌ಮೆಂಟ್ ಬ್ಯೂರೋ [illegible] ಟ್ರಸ್ಟ್ ಫಂಡ್ [illegible] ಮತ್ತು ಆರ್ಟಿಸ್ಟ್ ಕಲಿಯುವ [illegible] ಕೊಡಬೇಕೆಂಬ [illegible] ಠರಾವು ಆಗಿದೆಯೆಂಬ ವರ್ತಮಾನವನ್ನು ತಿಳಿಯುತ್ತೇನೆ. ಸದ್ರಿ ತಾ ೨೫—೭—೩೭ರಲ್ಲಿ ಸದ್ರಿ ಸಂಘದಲ್ಲಿ ಕೋರಮ್‌ಯಿಲ್ಲದೆ ಪಾಸಾದ ಎಲ್ಲಾ ನಿರ್ಣಯಗಳು ಸಿಂಧುವಲ್ಲ. ಅದರ ಆಧಾರದಿಂದ ಸಂಘದ ಹಣ ವೆಚ್ಚವಾಗಿದ್ದಾದರೆ ಅಂಥಾ ಐವಜನ್ನು ಸಂಘಕ್ಕೆ ವಾಪಾಸು ತರಲು ಸದ್ರಿ ಮೀಟಿಂಗಿನಲ್ಲಿ ಹಾಜರು ಇದ್ದ ಆವಷ್ಟೇ ಕಮಿಟಿಯವರು ಜವಾಬ್ದಾರರೆಂಬುದನ್ನು ತಿಳಿದಿರಲಿ. ಈ ವಿಷಯದಲ್ಲಿ ಮೇಲಿನ ಮೀಟಿಂಗಿನ ದಿನ ಹಾಜರಿಯಿಲ್ಲದ ಮೆಂಬರರ ಭಸ್ಕತ್ತಿನಿಂದ ಆಕ್ಷೇಪವು ತರಲ್ಪಡುವುದು. ಇನ್ನು ಮುಂದೆ ಸಂಘ ಆಷ್ಟೇ ಕಮಿಟಿ ಮೀಟಿಂಗಿನ ಮುಂದೆ ಇಡಲ್ಪಡತಕ್ಕ ಸಾರ್ವ ಸೂಚನೆಗಳನ್ನು ಎಲ್ಲಾ ಆದಷ್ಟೇ ಮೆಂಬರರ ತಿಳುವಳಿಕೆ ಬಗ್ಗೆ ಕಮಿಟಿ ಮೀಟಿಂಗಿನ ಕಾಗದದ ಒಟ್ಟಿಗೆ ಸರ್ಕ್ಯುಲೇಶನ್ ಮಾಡಬೇಕಾಗಿ ವಿನಂತಿ.

ಕಮಿಟಿ ಮೆಂಬರರಲ್ಲೊಬ್ಬ

### ಡ್ರೈವರರ ಮೇಲೇಕೆ ಕಣ್ಣು?

ಮಂಗಳೂರಿನ 'ಕೆನರಾ ಒಟೋಮೋಬೈಲ್ಸ್, ಲಿಮಿಟೆಡ್' ಎಂಬ ಸಂಸ್ಥೆಯು 'ಸಿಟಿ ಬಸ್ ಸರ್ವಿಸ್'ನ್ನು ಸ್ಥಾಪಿಸಿದ ಸಂಗತಿಯು ಎಲ್ಲರಿಗೂ ತಿಳಿದಿದೆ.

ಅದರ ಕೆಲಸಗಾರರ ಹಾಗೂ ಡ್ರೈವರರ ಚಟುವಟಿಕೆಯಿಂದ ನಾಲ್ಕು ಬಸ್ಸುಗಳಿದ್ದದು ಆರಕ್ಕೆ ಏರಿದೆಯಲ್ಲದೆ ಪುನಃ ಎರಡು ಬಸ್ಸುಗಳು ಬರಲಿವೆಯೆಂದು ಕೇಳುತ್ತೇನೆ.

ಈ ಮಧ್ಯೆ ಏನು ಕಾರಣದಿಂದಲೋ ಡ್ರೈವರರ ಬಸ್ಸುಗಳನ್ನು ಎಷ್ಟುಗೂಡ್ಸ-ಶುಚಿಯಾಗಿರಿಸಬೇಕೆಂಬ ಕಾನೂನನ್ನು ತಂದ, ಅದಕ್ಕೆ ತಪ್ಪಿದ ಡ್ರೈವರರನ್ನ 'ಡಿಸ್ ಮಿಸ್' ಮಾಡಲಿರುವರೆಂದು ವದಂತಿ.

ಡ್ರೈವರರಿಗೆ ಸರಾಸರಿ ದಿನಕ್ಕೆ ೭॥ ತಾಸು ಕೆಲಸವಿದ್ದು ಅವರದನ್ನು ಮಾಡುತ್ತಿದ್ದರೂ, ಈ ವಿಚಾರವಾಗಿ ಡ್ರೈವರರು ಕಂಪೆನಿಗೆ ಮನವಿಮಾಡಿಕೊಂಡಿದ್ದರೂ, ಅದನ್ನು ಲೆಕ್ಕಿಸದೆ ಕಂಪೆನಿಯು ಮೆನೇಜರರ ಇದೇ ತಾ ೧ರಿಕೆ ಡ್ರೈವರರಿಗೆ ಟ್ರಾಫಿಕ್ ಸುಪರಿಂಟೆಂಡೆಂಟರ ಆಜ್ಞೆಯಂತೆ ದಿನಕ್ಕೆ ೮॥ ತಾಸು ಕೆಲಸ ಮಾಡುವ ಡ್ರೈವರರು ವ್ಯತಿರಿಕ್ತವಾಗಿ ನಡೆದುದಕ್ಕೆ ಯಾಕೆ ಅವರನ್ನು ಕೆಲಸದಿಂದ ತಗೆಯಕೂಡದು ಎಂಬ ಸಬಬು ತೋರಿಸಬೇಕೆಂದು ಪತ್ರ ಕಳಿಸಿದ್ದು ಆಶ್ಚರ್ಯ. ಆ ಪತ್ರಕ್ಕೆ ಉತ್ತರ ಬರುವ ಮೊದಲೇ ಎಲ್ಲಾ ಡ್ರೈವರರಿಗೆ 'ಸೆಪ್ಟೆಂಬರ ಒಂದನೇ ತಾರೀಕಿನಿಂದ ನಿಮ್ಮ ಕೆಲಸ ಬೇಡ' ಎಂದು ನೋಟೀಸು ಕೊಟ್ಟದ್ದರ ಗೂಢವೇನು?

ಮಂಗಳೂರಿನವರ ಹಣದಿಂದ ಮಂಗಳೂರಿನವರಿಗಾಗಿ ನಡೆಸಲ್ಪಡುವ ಸಂಸ್ಥೆಯಲ್ಲಿ ಮಂಗಳೂರವರನ್ನು ಬಿಡು ಇತರ ಊರಿನಿಂದ ಡ್ರೈವರರನ್ನು ತರುವುದರಲ್ಲಿಯೂ ನ್ಯಾಯವಿಲ್ಲ. ನಮ್ಮೂರವರನ್ನು ಹಸಿದಿರಿಸಿ, ಇತರರಿಗೆ ಕರೆದುಣಿಸಿ ಸ್ವಲಾಭದ ಕಡೆಗೆ ಕಂಪೆನಿಯು ದೃಷ್ಟಿಯನ್ನಿಡುವುದುಚಿತವಲ್ಲ.

ಆದುದರಿಂದ ಡ್ರೈವರರ ಸುಖದುಃಖಗಳ ವಿಚಾರವನ್ನು ಮನಸ್ಸಿನಲ್ಲಿ ತಂದುಕೊಳ್ಳಲಿ.

*Master Venkanna*

### ಏಜಂಟರಿಗೆ ಕಮೀಶನಿನ ತ್ರಾಸ! ಅದಕ್ಕಾಗಿ ಮೋಸ!!

(ಒಂದು ಅಪೂರ್ವ ಸನ್ನಿವೇಶ)

ಅಯ್ಯಾ ಸಂಪಾದಕರೆ,

ನೊನ್ನೆ ತಾನೆ ನಾನು ಕುಂಬಳೆಗೆ ಪ್ರಯಾಣ ಬೆಳೆಸುತ್ತಿದ್ದೆ. ನಾನು ಕುಳಿತಿದ್ದ ಬಸ್ಸಿನಲ್ಲಿ ಒಂದು 'ಸೀಟೂ' ಖಾಲಿ ಇರಲಿಲ್ಲ. 'ತಲಪಾ'ಡ ಸ್ಟೇಶನಿನಲ್ಲಿ ಎಂದಿನಂತೆ ಬಸ್ಸು ತಂಗಿಕೊಂಡಿತು. ಒಡನೆ ನಾಲ್ಕಾರು ಮಂದಿ ಸ್ತ್ರೀಯರು ಬಳಿಬಂದರು. ಅಲ್ಲಿಯ ಏಜಂಟರು ನಮ್ಮ ಮೋಟಾರ್ ಬಸ್ಸಿಗೆ ಪ್ರದಕ್ಷಿಣೆ-ಅಪ್ರದಕ್ಷಿಣೆ ಬಂದು, 'ಸೀಟಿಲ್ಲ' ಎಂದ ಬಿಟ್ಟರು. ಹೆಂಗಸರಲ್ಲೊಬ್ಬಳು ಈ ದುರವಸ್ಥೆಯನ್ನು ಕಂಡು ಗೋಳೋ ಎಂದು ಅತ್ತುಬಿಟ್ಟಳು. ಏಜಂಟರ ಈ ತರದ ಕೃತ್ಯವನ್ನು ಕಂಡು ಅವರಿಗೆ ತಡೆಯಲಾಗಲಿಲ್ಲ! ಅದರೆ ಪಾಪ, ಅವರು ಹೆಣ್ಣು ಹೆಂಗಸರು! ಅವರೇನು ಮಾಡಬಲ್ಲರು?

ಅವರಲ್ಲೊಬ್ಬ ಹೆಂಗುಸು 'ನಮ್ಮನ್ನು ಬೆಳಗ್ಗಿನಿಂದ (ಸುಮಾರು ೮ ಘಂಟೆ) ಮಧ್ಯಾಹ್ನ ೨ ತಾಸಿನವರೆಗೆ ಬಸ್ಸಿಗೆಂದು ಕಾಯಿಸಿದರು. ಈಗಿನ ವರೆಗೆ ನಮಗೆ ಜಾಗೆಯೂ ಇಲ್ಲ. 'ಇನ್ನೊಂದು ಬಸ್ಸಿದೆ, ಅದರಲ್ಲಿ ಹೋಗಬಹುದು' ಎಂದು ಬೆಳಗ್ಗಿನಿಂದಲೂ ಅನ್ನುತ್ತಲೇ ಇರುವರು' ಎಂದು ಕೂಗಿದರು.

ಪಾಪ ಆ ಗೋಳನ್ನು ಕೇಳಿಕೊಂಡು ಸುಮ್ಮಗಿರುವುದು ಆ ಬಸ್ಸಿನ ಡ್ರೈವರಿಗೆ ಸರಿತೋರಲಿಲ್ಲ. 'ಅತಿ ಭಾರೋಪಾ (over load)ವಾದರೂ ಚಿಂತಿಲ್ಲ. ಅದರಿಂದ ಆದದ್ದಾಗಲಿ' ಎಂದವರು ಎಲ್ಲರನ್ನೂ ತಮ್ಮ ಬಸ್ಸಿನಲ್ಲಿ ಕುಳ್ಳಿರಿಸಿಕೊಂಡರು. ಅವರ ಆಕಾರ್ಯವಾದರೂ ಪ್ರಶಂಸನೀಯವಾದುದೇ. ಆದರೆ 'ಪೋಲೀಸು' ಅಧಿಕಾರಿಗಳು ಕಾರಣವರಿಯದೆ 'ದಂಡನೆ' ತೆರುವಂತೆ ಮಾಡುವರೇನೋ! ದೈವವಶಾತ್ ಪೋಲೀಸು ಅಧಿಕಾರಿಗಳೆದುರು ಆ ಬಸ್ಸು ಬೀಳಲಿಲ್ಲ!

ಆದರೆ ಆ ಬಸ್ಸ ಏಜಂಟರು ಬರಿಯ ಒಂದೆರಡಾಣೆಗಳ ಕಮಾಶನಿನ ಆಶೆಗೆ ಬಲಿಬಿದ್ದು ನಾಲ್ಕಾರು ಮಂದಿ ಹೆಂಗುಸರನ್ನು ಅನ್ನ ನೀರಿಲ್ಲದೆ ಸಂಜೆಯ ವರೆಗೆ ತಡೆಯುವುದುಚಿತವೇ?

### ಶ್ರೀಕೃಷ್ಣ ಜನ್ಮ ದಿನಾಚರಣೆ

ಈ ಸಂಬಂಧವಾದ ಸವಿಸ್ತರ ನಿರ್ಣಯವೊಂದನ್ನು ಈ ಸಂವತ್ಸರದ ನಮ್ಮ (ಮೊಗೇರಿ) ಪಂಚಾಂಗದಲ್ಲಿ ಪ್ರಕಟಿಸಿದೆ. ಅದರಲ್ಲಿ ಈ ವರ್ಷ (ಶ್ರಾವಣ ಬ ೭ ಮತ್ತು ೮ ಈ) ಎರಡು ದಿನಗಳಲ್ಲಿಯೂ ಉಪವಾಸವನ್ನಾಚರಿಸಲು ಅಶಕ್ತರಾದವರು ಮರುದಿನ ೮ ಯು ರವಿವಾರವೇ ಉಪವಾಸಾದಿಗಳನ್ನಾಚರಿಸಬೇಕೆಂತಲೂ ಮುಂಚಿನ ದಿನ (ಶನಿವಾರ) ಮಾತ್ರ ಉಪವಾಸವನ್ನಾಚರಿಸಿ, ಮರುದಿನ ಪಾರಣೆಮಾಡಿದರೆ (ಶಾಸ್ತ್ರ ಕ್ಕೆ) ದೋಷಗಳಿಗೆ ಕಾರಣವಾಗುವದೆಂದೂ ಸಪ್ರಮಾಣವಾಗಿ ನಿರ್ಣಯಿಸಿದೆ. ಇದಕ್ಕೆ ವ್ಯತಿರೇಕವಾಗಿ "ಧರ್ಮಶಾಸ್ತ್ರ ವಿಷಯದಲ್ಲಿ ಉಡುಪಿ ಪಂಚಾಂಗ ಪರಿಶೋಧಕರು" "ಶ್ರೀಕೃಷ್ಣ ಸಂದೇಶ"ದಲ್ಲಿ ಪ್ರಕಟಿಸಿರುವ ಅಭಿಪ್ರಾಯವು ಶಾಸ್ತ್ರಸಮ್ಮತವಾದುದಲ್ಲವೆಂದು ಅದೇ 'ಸಂದೇಶ'ದ ಈ ಆಗೋಸ್ತು ತಿಂಗಳ ಸಂಚಿಕೆಯಲ್ಲಿ ಸಕಾರಣವಾಗಿ ವಿವೇಚಿಸಿರುವ ನಮ್ಮ ಲೇಖನವನ್ನು ಕಂಡು ಆ ಪರಿಶೋಧಕರು,— ಅದರಲ್ಲಿ ಹೇಳಿದ ಹಲವು ವಿಷಯಗಳು, ೮ ರವಿವಾರ ಜಯಂತಿಯು ಶಾಸ್ತ್ರಸಿದ್ಧವೆಂಬುದು ಸಹ ತಮಗೂ ಸಮ್ಮತವಾಗಿರುವುದೆಂದೂ 'ಆದರದು ಆಚರಣೀಯವಾಗಿಯಲ್ಲ'ವೆಂದೂ ಸ್ವಾಭಿಪ್ರಾಯವನ್ನು ವ್ಯಕ್ತಗೊಳಿಸಿರುತ್ತಾರೆ. ಅವರ ಈ ಹೇಳಿಕೆಗೆ ಸಮರ್ಪಕವಾದ ಪ್ರಮಾಣವನ್ನೇನೂ ಕೊಡದೆ "ದಿವಾ ಚಂದ್ರಗ್ರಹಣ, ರಾತ್ರಿ ಸೂರ್ಯಗ್ರಹಣ" ಈ ಮುಂತಾದ ಕೆಲವು ವಿಷಯಗಳನ್ನೆತ್ತಿ ಅವರಂತೆ ನಿಷೇಧವಿಲ್ಲದ ಜಯಂತೀ ಯೋಗವೂ ಆಚರಣೀಯವಲ್ಲವೆಂದಿದ್ದಾರೆ. ಆದರೆ ಇವರು ಹೇಳುವ "ದಿವಾಚಂದ್ರಗ್ರಹಣ ರಾತ್ರಿ ಸೂರ್ಯಗ್ರಹಣ, ಅಪರಾಹ್ಣದಲ್ಲಿ ಅರ್ಧೋದಯಾದಿ ಯೋಗಗಳು, ಪ್ರಾತಃಕಾಲದಲ್ಲಿ ಮಾತ್ರ ಮೃತತಿಥಿ ಇತ್ಯಾದಿಗಳು' ಆಚರಿಸತಕ್ಕದ್ದಲ್ಲವೆಂದು ಶಾಸ್ತ್ರೋಕ್ತಿಯೇ ಇರುವುದು. ಜಯಂತಿಯ ವಿಷಯದಲ್ಲಿ ಹಾಗಿಲ್ಲದೆ, ಅದನ್ನು ಸರ್ವಥಾ ಆಚರಿಸಲೇಬೇಕೆಂದೂ ಆಚರಿಸದಿದ್ದರೆ ಗುರುತರ ದೋಷಗಳುಂಟಾಗುವುವೆಂದೂ ಅನೇಕ ಪ್ರಮಾಣಗಳಿರುವುದನ್ನು ಮುಂಚೆಯೇ ನಮ್ಮ ಲೇಖನದಲ್ಲಿಯೂ ಪಂಚಾಂಗದಲ್ಲಿಯೂ ಸ್ಪಷ್ಟಪಡಿಸಿರುವೆವು. ಮತ್ತು ರೋಹಿಣೀ ಯೋಗವನ್ನು ಕುರಿತು ಹೇಳಿದಂತೆ ರಾವ ನವಮಿಯಲ್ಲಿ ಪುನರ್ವಸು ನಕ್ಷತ್ರಕ್ಕೆ ನಿರ್ಣಯೋಪಯುಕ್ತತೆಯನ್ನು ಹೇಳಿರುವ ಪ್ರಮಾಣವೇನೂ ಇಲ್ಲ. ಹೀಗಿರುತ್ತಾ ಇಂತಹ ವಿಷಯಗಳನ್ನೆತ್ತಿ, ಜಯಂತಿಗೆ ಇವುಗಳ ಸಾದೃಶ್ಯವನ್ನು ಕಲ್ಪಿಸಿ ಅದು ಆಚರಿಸತಕ್ಕದ್ದಲ್ಲವೆನ್ನುವುದು ಶಾಸ್ತ್ರತಃ ಎಷ್ಟರ ಮಟ್ಟಿಗೂ ಯುಕ್ತವಾಗಿರುವುದಿಲ್ಲ. ಹೀಗೆ ಯಾವ ರೀತಿ ವಿಚಾರಿಸಿದರೂ ಜಯಂತೀ ವ್ರತವು ಸರ್ವಥಾ ಆಚರಣೀಯವೆಂಬ ಶಾಸ್ತ್ರಾಭಿಪ್ರಾಯವು ನಿರ್ಬಾಧಕವಾಗಿರುತ್ತದೆ. ಆದುದರಿಂದ ಈ ವರ್ಷ ಇದೇ ಶ್ರಾವಣ ಬಹುಳ ೮ ರವಿವಾರ "ಶ್ರೀಕೃಷ್ಣ ಜಯಂತಿ"ಯನ್ನಾಚರಿಸುವುದು ಶಾಸ್ತ್ರವಿಹಿತವೂ ಶ್ರೇಯಸ್ಕರವೂ ಆಗಿರುತ್ತದೆ. ಇತಿ.

ಪಂಚಾಂಗ ಸಂಪಾದಕ,
ಮೊಗೇರಿ ಭಾಸ್ಕರ ಅಡಿಗ


THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
*Head Office:* UDIPI.
Branches MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.


### ವಿಷಾದ

ನವಯುಗದ ಆಗೋಸ್ತು ೨೯ ನೇ ಸಂಚಿಕೆ ೭ನೇ ಪುಟದಲ್ಲಿ ಕಾಂತಾವರ ಕೇಪುಳಾಜೆ ನೊಕ್ಕೆ ಶೆಟ್ಟಿಯು ಕೊಟ್ಟಿರುವ ನೋಟೀಸಿನಲ್ಲಿ ಶ್ರೀ ಕಡಂದಲೆ ಗುತ್ತು ವೆಂಕಟಶೆಟ್ಟಿ ಅಳಿಯ ಕೆ ಸಂಜೀವ ಶೆಟ್ಟಿ ಖಾಲಿ ಕಾಗದಗಳಿಗೆ ತನ್ನ ಹೆಬ್ಬೆಟ್ಟಿನ ಮೊಹರ ತಗೆದುಕೊಂಡಿರುವರೆಂದು ಮಾಡಿರುವ ಆರೋಪವು ಸುಳ್ಳು ಮತ್ತು ದ್ವೇಷಸಾಧನೆಯದೆಂದು ಸದ್ರಿಯವರ ಕಡೆಯ ವಕೀಲರು ತಿಳಿಸಿರುವುದರಿಂದ ಅದನ್ನು ಪ್ರಕಟಿಸಿದುದಕ್ಕಾಗಿ ನಾವು ವಿಷಾದಿಸುತ್ತೇವೆ.

ಸಂಪಾದಕ, ನವಯುಗ


ನಿಮ್ಮ ಮನೆಯಲ್ಲೇ ಸಿನೆಮಾ
(BIOSCOPE)



೯×೬×೬ ಇಂಚುಗಳಷ್ಟು ಅಳತೆಯುಳ್ಳದ್ದು ಅಸಿಂಡ ಸ್ಟೀಲಿನಿಂದಲೇ ತಯಾರಿಸಲ್ಪಟ್ಟಿದೆ.

ಬಹಳ ಶಕ್ತಿಯ ಭೂತ ಕನ್ನಡಿಗಳಿಂದ ಜೋಡಿಸಲ್ಪಟ್ಟ, ಜೊತೆಗೆ 100 ಗಜ (300 ಅಡಿ)ಗಳಷ್ಟು ಉದ್ದದ ಚಲನಚಿತ್ರಗಳ ಫಿಲ್ಮು ಕೂಡಾ ಕೊಡಲಾಗುತ್ತದೆ. ಒಂದು ಚಿಕ್ಕ ಬೆಟರಿ ಲ್ಯಾಂಪಿನ ಪ್ರಕಾಶದಿಂದ ನಿಮ್ಮ ಮನೆಗಳ ಕೋಣೆಗಳಲ್ಲಿ ಸ್ಪಷ್ಟವಾದ ಚಲನಚಿತ್ರಗಳ ಪ್ರದರ್ಶನ ನೋಡಬಹುದು. ಒಂದು ಯಂತ್ರವನ್ನು ಈಗಲೇ ತರಿಸಿಕೊಳ್ಳಿರಿ. ಯಂತ್ರದೊಡನೆ 100 ಗಜ ಫಿಲ್ಮಿಗೂ ಒಂದು ಬೆಟರಿ ಲ್ಯಾಂಪಿಗೂ ಸಮೇತ ರೂ. ೩-೮-೦ ಮಾತ್ರ. ಪೋಸ್ಟೇಜು ಬೇರೆ. ರೂ ೧ರ ಟಪ್ಪಾಲು ಚೀಟುಗಳನ್ನಾಗಲೀ, ಪೋಸ್ಟಲ್ ಆರ್ಡರ್ ಮೂಲಕವಾಗಲೀ ಆರ್ಡರಿನೊಂದಿಗೆ ಮುಂಗಡ ಕಳುಹಿಸಬೇಕು.

ಆರ್. ಕೆ ರಾಜನ್ ಅಂಡ್ ಕೊ.,
ವೇಪರಿ, ಮದರಾಸು.



TIBETAN HERB

ಮದ್ರಾಸಿನ ಶ್ರೀ [illegible] ರವರು ೧೯೩೬ನೇ ಸೆಪ್ಟೆಂಬರ ತಿಂಗಳಲ್ಲಿ ಹೀಗೆ ಬರೆದಿದ್ದಾರೆ—"ತಮ್ಮ ವಶೀಕರಣ ಮೂಲಿಕೆಯಿಂದ ನಾನು ಸಂತುಷ್ಟನಾಗಿ ಅದರಿಂದ ಅಧಿಕ ಲಾಭಹೊಂದಿರುವೆನು"

ಟಿಬೇಟಿಯನ್ ಮೂಲಿಕೆ
ಯಿಂದಾಗುವ ಇಷ್ಟಾರ್ಥಸಿದ್ಧಿಗಳಿವು:

(1) ವಶೀಕರಣ-ಸ್ತ್ರೀ ಪುರುಷರು ಸುಲಭವಾಗಿ ಪ್ರೇಮ ಸಂಪಾದಿಸಬಹುದು ರೂ ೩॥ (2) ವ್ಯಾಪಾರ-ವ್ಯಾಪಾರ ಪೂರ್ಣ ಲಾಭ ಹೊಂದಬಹುದು ರೂ ೩॥ (3) ವ್ಯವಹಾರ-ಕೋರ್ಟು ವ್ಯವಹಾರಗಳನ್ನು ಗೆಲ್ಲಬಹುದು ರೂ ೩॥ (4) ಕಾಯಿಲೆ ಎಂತಹ ಕಠಿಣ ಕಾಹಿಲೆಯಾದರೂ ಸುಲಭವಾಗಿ ಗುಣವಾಗುತ್ತದೆ ರೂ ೩॥ (5) ಉದ್ಯೋಗ ನಿರುದ್ಯೋಗ ಸಂಪಾದಿಸಿ ಯೋಗ್ಯತೆಗೆ ತಕ್ಕ ಕೆಲಸ ಸಿಗುತ್ತದೆ (6) ಪರೀಕ್ಷೆ-ಸುಲಭವಾಗಿ ತೇರ್ಗಡೆ (7) ಭೂತಚೇಷ್ಟೆ-ಸಂಪೂರ್ಣ ಪರಿಹಾರ (9) ಆರೋಗ್ಯಭಾಗ್ಯ-ಶೀಘ್ರವಾಗಿ ಆರೋಗ್ಯ ಲಾಭ ರೂ ೩॥ ಹಿಂದೂ ಶಾಸ್ತ್ರಗಳಲ್ಲಿ ವಿಶ್ವಾಸವಿರುವವರಿಗೆ ಮಾತ್ರ. ಹೆಸರು ಮತ್ತು ಉದ್ದೇಶ್ಯ ತಿಳಿಸಬೇಕು. ಅಂಚೆವೆಚ್ಚ ೬ ಆಣೆ. 3ನ್ನು ಒಟ್ಟಿಗೆ ತರಿಸಿದರೆ ರೂ. ೯ ಟಪ್ಪಾಲು ಖರ್ಚು ೪ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ.

BIJOYA LODGE (N)
P. O. SALKIA HOWRAH.

ಅಧ್ಯಾಯ ೯

ಭಿ ಕಾ ರಿ ಣಿ

ಸಾಮಾಜಿಕ ಕಾದಂಬರಿ

## ಮಗು, ಲಲಿತ! ನಾನಿನ್ನು ಬದುಕುವ ಆಶೆಯಿಲ್ಲ. ನಿನ್ನ ಗತಿಯೇನು?

ನಾಗಿ ಲಲಿತೆಯರನ್ನು ಮಠಕ್ಕೆ ಬರಹೇಳಿ ನರಸಿಂಹನು ಮೋಟರ್ ಕಾರಿಗೆ ಧಾವಿಸುವಷ್ಟರಲ್ಲಿ ಮಗುವು ಅಳಲಾರಂಭಿಸಿತ್ತು. ಅವನು ವಸ್ತ್ರದಿಂದ ಅದರ ಬಾಯಿ ಒತ್ತಿಟ್ಟು ಮೋಟರ್ ಕಾರನ್ನು ಶಿವಪುರದಿಂದ ದಕ್ಷಿಣಕ್ಕೋಡಿಸ ಹೇಳಿದನು. ಮಗುವು ಒದ್ದಾಡಲಾರಂಭಿಸಿತು. ನರಸಿಂಹನು ಅದರ ಮೂಗನ್ನೂ ಬಾಯಿಯನ್ನೂ ವಸ್ತ್ರದಿಂದ ಮತ್ತಷ್ಟು ಬಲವಾಗಿ ಒತ್ತಿಟ್ಟನು. ಈ ಪೈಶಾಚಿಕ ಒತ್ತಾಟದೆಡೆಯಿಂದ ಮಗುವಿನ ಕೂಗು ಒಂದೆರಡು ಸಲ ಹೊರ ನುಸುಳಿ ತೀವ್ರ ವೇಗದಿಂದೋಡುವ ಮೋಟರ್ ಕಾರಿನ ಶಬ್ದದೊಂದಿಗೆ ಸೇರಿಹೋಯಿತು. ಆಗ ನರಸಿಂಹನು ತನ್ನ ಒತ್ತಾಟವನ್ನು ಮತ್ತಷ್ಟು ಬಲಪಡಿಸಿದನು. ಶಿವಪುರದಿಂದ ಸುಮಾರು ನಾಲ್ಕು ಮೈಲು ದಕ್ಷಿಣದ ಹೊಳೆಯನ್ನು ಸಮೀಪಿಸುವಷ್ಟರಲ್ಲಿ ನರಸಿಂಹನು ಮೋಟರ್ ಕಾರನ್ನು ನಿಲ್ಲಿಸ ಹೇಳಿದನು. ಅಷ್ಟರಲ್ಲಿ ಮಗುವಿನ ಪ್ರಾಣವು ಹಾರಿಹೋಗಿತ್ತು. ನರಸಿಂಹನು ಮೆಲ್ಲಮೆಲ್ಲಗೆ ತನ್ನ ಒತ್ತಾಟವನ್ನು ಸಡಿಲು ಮಾಡಿ ಅದನ್ನು ದೃಢಪಡಿಸಿಕೊಂಡಿದ್ದನು. ಮೋಟರ್ ನಿಂತೊಡನೆಯೇ ಅವನು ಮಗುವನ್ನು ವಸ್ತ್ರದ ಹೊದಿಕೆಯೊಳಗೆ ಹಿಡಿದುಕೊಂಡು, "ಈಗ ಬರುತ್ತೇನೆ. ಈ ಮಗುವನ್ನು ಓ ಆ ಮನೆಗೆ ಕೊಟ್ಟು ಬರುತ್ತೇನೆ" ಎಂದು ಹೇಳಿ ಸುತ್ತಲೂ ಎಚ್ಚರದಿಂದ ನೋಡುತ್ತಾ ರಸ್ತೆ ಬದಿಯ ತೆಂಗಿನ ತೋಪಿನೊಳಗೆ ಪ್ರವೇಶಿಸಿದನು. ಡ್ರೈವರನ ಕಣ್ಮರೆಯಾದೊಡನೆಯೇ ಒಂದೇ ಸವನೆ ನದಿಯ ಕಡೆಗೆ ಧಾವಿಸಿ ಮಗುವಿನ ಶವವನ್ನು ಹೊಳೆಗೆ ಬಿಸಾಡಿ ಒಂದು ಕ್ಷಣವೂ ನಿಲ್ಲದೆ ಹಿಂದೆ ಸರಿದನು. ಹಿಂತಿರುಗುವಾಗ ಅವನ ಶರೀರವು ಕಂಪಿಸುತ್ತಿತ್ತು. ಶಕ್ತಿಯು ಕುಂದಿಹೋಗಿತ್ತು. ಅವನು ಬಹಳ ಪ್ರಯತ್ನಪಟ್ಟು ಹೆಜ್ಜೆ ಹಾಕಿಕೊಂಡು ಮುನ್ನಡೆದನು. ಇಡೀ ಶರೀರವು ಬೆವರಿ ನೀರಿಳಿದು ಹೋಗಿತ್ತು. ಅವನು, ತಾನು ಮಾಡಿದ ಘೋರ ಪಾಪ ಪ್ರೇತವು ತನ್ನ ಬೆಂಬತ್ತಿ ಬರುವುದೋ ಎಂಬಂತೆ ಭೀತಿಗೊಂಡು ನದಿಯು ಕಣ್ಮರೆಯಾಗುವ ವರೆಗೆ ಹಿಂದೆ ನೋಡುತ್ತ ನೋಡುತ್ತ ಸರಿಯುತ್ತಿದ್ದನು. ಆ ಮೇಲೆ ಒಂದಿಷ್ಟು ಧೈರ್ಯಗೊಂಡು ತೋಟದಲ್ಲೊಂದೆಡೆ ನಿಂತು, ಎದೆ ಹಣೆ ಕುತ್ತಿಗೆಯ ಬೆವರನ್ನೆಲ್ಲಾ ಒರಸಿ ಇನ್ನೇನೂ ಗಾಬರಿಯಿಲ್ಲೆಂಬ ಸಮಾಧಾನದಿಂದ ಮೋಟರ್ ಕಾರಿನ ಬಳಿಗೆ ನಡೆದು ಬಾಗಿಲು ತೆರೆದು ಕೂತು "ಹೂಂ, ಹೋಗುವ" ಎಂದನು. ಆಗ ಡ್ರೈವರನು, "ಮಗುವನ್ನೇನು ಮಾಡಿದಿರಿ? ಹ್ಯಾಗೆಯಲ್ಲಿ ಕೂಳಿದಿರೋ, ಹೊಳೆಗೆ ಬಿಸಾಡಿದಿರೋ?" ಎಂದು ಪ್ರಶ್ನಿಸಲು ನರಸಿಂಹನು ಅವಾಕ್ಕಾಗಿಹೋದನು. ತಾನು ಯಾರಿಗೂ ತಿಳಿಯದಂತೆ ಮಾಡಿದ ಕೆಲಸ ಈ ಡ್ರೈವರಿಗೆ ತಿಳಿದ ಬಗೆ ಹೇಗೆಂದು ಅವನು ವಿಸ್ಮಯಗೊಂಡು ಯೋಚಿಸಹತ್ತಿದನು. ಆಗ, ಪುನಃ ಡ್ರೈವರನು, "ಹೊಳೆಗೆ ಬಿಸಾಡಿದಿರೆಂದು ಕಾಣುತ್ತದೆ. ಅಲ್ಲವಾದರೆ ಇಷ್ಟು ಬೇಗ ಬರುವುದು ಹೇಗೆ?" ಎಂದು ಹೇಳಿ ಭರ್ರನೆ ಮೋಟರ್ ಚಾಲೂಮಾಡಿದನು. ನರಸಿಂಹನು ಚಿಂತಾಮಗ್ನನಾಗಿ ಸುಮ್ಮನೆ ಕುಳಿತುಬಿಟ್ಟನು.

ಜೀವನದ ಮೂಲಾಧಾರವೇ ಆಶೆ. ಆದುದರಿಂದಲೇ ಪ್ರಾಣ ಹೋಗುವುದು ಮೊದಲು, ಆಶೆ ಅನಂತರವೆಂದು ಹೇಳುವುದು. ಈ ಆಶಾ ಬಲದಿಂದಲೇ ಎಷ್ಟೋ ಜೀವಿಗಳು ಜೀವನ್ಮೃತಾವಸ್ಥೆಯಲ್ಲಿ ನರಳಿಕೊಂಡಿರುವುದಿಲ್ಲ! ಆ ಆಧಾರವೊಂದು ತಪ್ಪಿತೆಂದರೆ ಎಂತಹ ಸುಖ ವೈಭವದ ಜೀವನವಾದರೂ ಕುಸಿದುಬೀಳುವುದಿಲ್ಲ! ಯಾವುದಾದರೊಂದು ವಿಷಯದಲ್ಲಿ ವಿಪರೀತ ಆಶೆಕಟ್ಟಿಕೊಂಡಿದ್ದವರಿಗೆ ಒಮ್ಮೆಯೇ ನಿರಾಶೆಯುಂಟಾಗುವುದೆಂದರೆ ಸಂಪೂರ್ಣ ಶಕ್ತಿಯಿಂದೋಡುವ ಇಂಜಿನನ್ನು ಹಠಾತ್ತಾಗಿ ನಿಲ್ಲಿಸಿಬಿಟ್ಟಂತೆ. ಇಂಜಿನು ನಿಂತುಹೋಗುವುದಲ್ಲದೆ ಅದರ ಸೂಕ್ಷ್ಮಾಂಗಗಳೆಲ್ಲಾ ಮುರಿದು ಹೋಗುವವು. ನಾಗಿಗೆ ಇದೇ ರೀತಿಯಾಗಿ ಹೋಯಿತು. ಶಿವಾನಂದರು ಮನೆ ಮತ್ತು ಆಸ್ತಿ ಮಾಡಿಕೊಡುವುದಂತಿರಲಿ, ತನ್ನ ಹಣವನ್ನೇ ಉಪಾಯದಿಂದ ಅಪಹರಿಸಿದಾಗ ಅವಳ ಜೀವನವೃಕ್ಷದ ತಾಯಿಬೇರು ಮುರಿಯಿತು. ಆ ಮೇಲೆ ಲಲಿತೆಯ ಮಗುವನ್ನು ಕೊಲ್ಲಿಸಿದಾಗ ಅವಳ ಜೀವನವನ್ನು ಸಂಪೂರ್ಣವಾಗಿ ಕಾರ್ಮುಗಿಲು ಆವರಿಸಿತು. ಮಸುಕು ಬೆಳಕನ್ನೀಯುತ್ತಿದ್ದ ಆ ಆಶಾ ಕಿರಣವೂ ಅದೃಶ್ಯವಾಗಿಬಿಟ್ಟಿತು. ಅವಳು ಜೀವನಕ್ಕಿಂತ ಸಾವು ಮೇಲೆಂದು ಬಗೆದು ಕೊರಗಿ ಕರಗಹತ್ತಿದಳು. ಅವಳ ಶಕ್ತಿಯೆಲ್ಲಾ ಸಂಪೂರ್ಣ ಕುಂದಿಹೋಯಿತು. ಆದರೆ ಲಲಿತೆಯ ಎದುರಲ್ಲಿ ಅವಳು ತನ್ನ ಕೊರಗನ್ನೊಂದಿಷ್ಟೂ ತೋರಿಸದೆ ಸಮಾಧಾನ ಚಿತ್ತಳಂತೆ ನಟಿಸುತ್ತಿದ್ದಳು. ಲಲಿತೆಯಾದರೋ ಹೃದಯರಹಿತ ಯಂತ್ರದಂತೆ ನಡೆಯುತ್ತಿದ್ದಳು. ಯಾವುದರ ಗೊಡವೆಯೂ ಅವಳಿಗಿರಲಿಲ್ಲ. ಅವಳ ಚಿಂತೆಯು ಅಷ್ಟೊಂದು ಮಿತಿಮೀರಿದ್ದಿತು. ಅವಳ ಹೃದಯವನ್ನೇ ಕಲ್ಲುಮಾಡಿದ್ದಿತು. ಅವಳ ಬುದ್ಧಿಯನ್ನು ಮಂದಗೊಳಿಸಿತ್ತು. ಕೂತಲ್ಲಿಂದ ಏಳಲು ನಾಗಿಯು ಒಂದು ಹತ್ತುಸಲ ಕರೆಯಬೇಕಿತ್ತು. ಒಂದೆಡೆ ನೋಡುತ್ತಾ ನಿಂತುಬಿಟ್ಟರೆ ನಾಗಿಯು ಮೈ ಕುಲುಕಿಸಿ ಕೈ ಹಿಡಿದು ಊಟಕ್ಕೋ ಮಲಗಲಿಕ್ಕೋ ಕರೆದೊಯ್ಯಬೇಕಿತ್ತು. ಮಲಗಿದವಳನ್ನು ಎಬ್ಬಿಸಲು ನಾಗಿಗೆ ಬಹಳ ಪ್ರಯಾಸವಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿಯೂ ಲಲಿತೆಯನ್ನು ಶಿವಾನಂದರು ಆಗಾಗ ಮೋಟರ್ ಕಾರು ಕಳುಹಿಸಿ ಮಠಕ್ಕೆ ಕರೆಸುವುದನ್ನು ನಿಲ್ಲಿಸುತ್ತಿರಲಿಲ್ಲ. ನಾಗಿಯು, ಅವಳಿಗೆ ಸೌಖ್ಯವಿಲ್ಲ, ಕೂಡದೆಂದರೆ ಕೇಳುವವರಾರು? ಕಾಮೋದ್ರಿಕ್ತ ಮಾನವನು ಪ್ರತ್ಯಕ್ಷ ಪಿಶಾಚಿಯು. ಎಂತಹ ಅತ್ಯಾಚಾರಕ್ಕೂ, ಭೀಕರ ಕೃತ್ಯಕ್ಕೂ ಒಂದಿಷ್ಟು ಹೇಸನವನು. ಕಾಮದ ಹುಚ್ಚಿಗಿಂತ ಘೋರವಾದುದಿನ್ನಾವುದೂ ಇರಲಾರದು. ಅಂತೆಯೇ ಶಿವಾನಂದರು ತನ್ನ ಪಾಶವಿಕ ಕಾಮ ತೃಪ್ತಿಯ ಕೇವಲ ಒಂದು ಯಂತ್ರವಾಗಿ ಲಲಿತೆಯನ್ನುಪಯೋಗಿಸುತ್ತಿದ್ದರು.

ನಾಗಿಯು ತನ್ನ ದಾರುಣ ದುಃಖವನ್ನೆಲ್ಲಾ ಒಳಗೊಳಗೇನೇ ನುಂಗಿ ಸೊರಗುತ್ತಿದ್ದಳು. ಚಿಂತಾಕೀಟವು ಅವಳ ಹೃದಯವನ್ನು ಕೊರೆಕೊರೆದು ತಿಂದು ಬರಿದು ಮಾಡಿತು. ಬೇಗನೆ ತನ್ನ ಸಾವು ನಿಶ್ಚಯವೆಂದವಳು ನಿರ್ಧರಿಸಿಕೊಂಡಳು. ಅವಳಿಗೆ ಕೂತರೆ ಫಕ್ಕನೆ ಏಳಲಾಗುತ್ತಿದ್ದಿಲ್ಲ. ಎದ್ದಾಗ ಗಿರ್ರನೆ ತಲೆತಿರುಗುತ್ತಿತ್ತು. ಜೀವಸಂಕಟವಾಗುತ್ತಿತ್ತು, ಕೈಕಾಲು ನಡುಗುತ್ತಿತ್ತು. ತಾನು ಸತ್ತರೆ ಲಲಿತೆಗೆ ಗತಿಯಿಲ್ಲೆಂಬ ತಳಮಳದಿಂದ ಅವಳು ಆದಷ್ಟು ದಿನದೂಡುವ ನಿರ್ಧಾರದಿಂದಿದ್ದಳು. ಆದರೆ ಅವಳ ಈ ತಲ್ಲಣವು ಎಷ್ಟೊಂದು ಹೆಚ್ಚಿತೋ ಅಷ್ಟು ವೇಗವಾಗಿ ಅವಳ ಶಕ್ತಿಯು ಕ್ಷಯಿಸಹತ್ತಿತ್ತು. ಕಡೆಗೆ ಅವಳು ಜ್ವರಪೀಡಿತಳಾಗಿ ಚಾಪೆ ಹಿಡಿದಳು.

ನಾಗಿಗೆ ಜ್ವರವು ವಿಶೇಷವಾಯಿತು. ಶಿವಾನಂದರು ಡಾಕ್ಟರ್ ಗಂಗಾಧರರಾಯರನ್ನು ಚಿಕಿತ್ಸೆಗಾಗಿ ಕಳುಹಿಸಿದರು. ಅವರು ಪರೀಕ್ಷಿಸಿ ಪ್ರಯೋಜನವಿಲ್ಲೆಂದು ಹೇಳಿದರು. ಲಲಿತೆಯು ರಾತ್ರಿಹಗಲು ತಾಯಿಯ ಕಾಲ ಬಳಿಯಲ್ಲಿಯೇ ಮೌನವಾಗಿ ಕುಳಿತು ಕಾಲಕಳೆಯುತ್ತಿದ್ದಳು. ಪಿಟ್ಟೆಂದು ಮಾತಾಡದೆ ಡಾಕ್ಟರ್ ಹೇಳಿದಂತೆ ಔಷಧಿಯನ್ನೂ ಬಾಯಾರಿಕೆಗೆ ಬಿಸಿನೀರನ್ನೂ ಕೊಡುತ್ತಿದ್ದಳು. ನಾಗಿಯನ್ನು ಉಪಚರಿಸಲು ಶಿವಾನಂದರು ಮಠದಿಂದೊಂದು ಹೆಂಗಸನ್ನು ಕಳುಹಿಸಿದ್ದರೂ ಆ ಹೆಂಗಸು, ನಾಗಿಲಲಿತೆಯರ ಕೆಲಸಮಾಡುವುದೇ ತನಗೆ ಅಪಮಾನವೆಂಬ ಮನೋವೃತ್ತಿಯಿಂದ ಸ್ವಾಮಿಗಳು ಕಳುಹಿಸಿದುದಕ್ಕಾಗಿ ಕೆಲಸಮಾಡುವವಳಂತೆ ಮಾತ್ರ ನಟಿಸುತ್ತಿದ್ದಳು. ರಾತ್ರಿ ಎಂಟು ಘಂಟೆಗೆ ಮಲಗಿದರೆ ಏಳುವುದು ಬೆಳಿಗ್ಗೆ 7 ಘಂಟೆಗೆ. ಹೀಗಾಗಿ ನಾಗಿಯ ಔಷಧೋಪಚಾರದ ಜವಾಬ್ದಾರಿಯೆಲ್ಲಾ ಲಲಿತೆಯ ಮೇಲೆಯೇ ಬಿದ್ದಿತು. ಅದನ್ನವಳು ಯಾಂತ್ರಿಕವಾಗಿ ಮಾಡುತ್ತಿದ್ದಳು.

ಸುಮಾರು 11 ಘಂಟೆ ರಾತ್ರಿಯಾಗಿರಬಹುದು. ನಾಗಿಯು ಕಾಲ ಬುಡದಲ್ಲಿ ಕುಳಿತಿದ್ದ ಲಲಿತೆಯನ್ನು ಕಣ್ಣುಕಣ್ಣು ನೋಡಹತ್ತಿದಳು. ನೋಡುತ್ತಿದ್ದಂತೆಯೇ ಕಡೆ ಕಣ್ಣಲ್ಲಿ ನೀರುಹರಿಯತೊಡಗಿತು. "ಮಗು ಲಲಿತ ಹೋಗು ಮಲಗು" ಎಂದಳು ಕ್ಷೀಣ ಸ್ವರದಿಂದ. ಲಲಿತೆಯು ಕಣ್ಣೆತ್ತಿ ನಾಗಿಯ ಮುಖ ನೋಡಿದಳು. ಅವಳು ಕಣ್ಣೀರಿಳಿಸುವುದನ್ನು ಕಂಡು ಒಣಗಿ ಗಟ್ಟಿಕಟ್ಟಿ ಹೋಗಿದ್ದ ಅವಳ ಹೃದಯವು ಒಮ್ಮೆಯೇ ಕರಗಿ ಹೋಯಿತು. ಅವಳು ಆವೇಗದಿಂದ ನಾಗಿಯ ತಲೆಯ ಕಡೆಗೆ ಸರಿದು ಸೆರಗಿಂದ ಅವಳ ಕಣ್ಣೀರೊರಸಿ, "ಬೇಡವಮ್ಮಾ ದುಃಖಿಸಬೇಡ! ಕಾಯಿಲೆ ಮತ್ತಷ್ಟು ಹೆಚ್ಚಾದೀತು!" ಎಂದು ಗದ್ಗದಿತ ಕಂಠದಿಂದ ಬೇಡಿಕೊಂಡಳು. ಆಗ ನಾಗಿಯ ದುಃಖವು ಇಮ್ಮಡಿಯಾಯಿತು. ಅವಳು "ಮಗು ಲಲಿತ! ನಾನಿನ್ನು ಬದುಕುವ ಆಶೆಯಿಲ್ಲ. ನಿನ್ನ ಗತಿಯೇನು"? ಎಂದು ಹೇಳಿ ಬಾಯ್ಬಿಟ್ಟು ಅತ್ತುಬಿಟ್ಟಳು. ಲಲಿತೆಯೂ ನಾಗಿಯ ಮುಖಕ್ಕೆ ಮುಖವಿತ್ತು ಅತ್ತಳು. ತಾಯಿಮಗಳಿಬ್ಬರೂ ಹೀಗೆ ಮಸುಕೊತ್ತು ಅತ್ತ ಮೇಲೆ ನಾಗಿಯು "ಮಗು, ಜೀವಸಂಕಟವಾಗುತ್ತದೆ. ಸ್ವಲ್ಪ ನೀರುಕೊಡು" ಎಂದಳು. ಲಲಿತೆಯು ಅವಸರದಿಂದ ಓಡಿಹೋಗಿ ಆರಿದ ಬಿಸಿನೀರು ತಂದು ಚಮಚದಿಂದ ನಾಗಿಯ ಬಾಯಿಗೆ ಬಿಡಲಾರಂಭಿಸಿದಳು. ಒಂದೆರಡು ಚಮಚ ತೆಗೆದುಕೊಳ್ಳುವಷ್ಟರಲ್ಲೇ ನಾಗಿಯ ಹೃದಯದಲ್ಲಿ ಗಕ್ಕೆಂಬ ಶಬ್ದವಾಯಿತು. ಅವಳ ಪ್ರಾಣವು ಹಾರಿಹೋಯಿತು. ಆದರೆ ಲಲಿತೆಯು ಪಾಪ ಮತ್ತೂ ನೀರುಬಿಡಲೆತ್ನಿಸಿದಳು. ನೀರು ಒಳಗೆ ಹೋಗಲಿಲ್ಲ. ಕಣ್ಣುಗಳು ಅರೆ ಮುಚ್ಚಿಹೋಗಿದ್ದುವು. ಆಗ ಗಾಬರಿಗೊಂಡು ಕೈಯಲ್ಲಿದ್ದ ಚಮಚ ಮತ್ತು ಲೋಟೆಯನ್ನೊಂದೆಡೆ ಬಿಸಾಡಿ, "ಅಮ್ಮಾ! ಅಮ್ಮಾ!!" ಎಂದು ತೋಳು ಹಿಡಿದು ಕುಲುಕಿದಳು. ಪುನಃ ಪುನಃ ಕುಲುಕಿದಳು. "ಅಮ್ಮಾ! ಅಮ್ಮಾ!! ಅಮ್ಮಾ!!!" ಎಂದು ಹತ್ತಿಪ್ಪತ್ತು ಸಲ ಕರೆದಳು. ಕಡೆಗೆ ಅವಳಿಗೆ ಅಮ್ಮನು ಮೃತಪಟ್ಟಿರುವಳೆಂದು ತಿಳಿಯಿತು. "ಅಯ್ಯೋ! ಅಮ್ಮಾ!!" ಎಂದು ದೊಪ್ಪನೆ ನೆಲಕ್ಕೆ ಬಿದ್ದು ಬೋಧಗೆಟ್ಟಳು.

**ಒಳ್ಳೇ ಮಾತಿನಿಂದ ಕೈಮೊಹರು ಕೊಡು! ಇಲ್ಲವಾದರೆ ಬಲಾತ್ಕಾರದಿಂದ ತೆಗೆದುಕೊಳ್ಳುವೆವು!**

(ಮುಂದಿನ ಸಂಚಿಕೆ ನಿರೀಕ್ಷಿಸಿರಿ)

ADVERTISEMENT BRINGS THE BUSINESS!

ಉಡುಪಿಗೆ ಮುನಿಸಿಪಾಲಿಟಿಯು ಆಗತ್ಯವಿಲ್ಲ. ಹಳ್ಳಿಗಳನ್ನೂ ಮುನಿಸಿಪಾಲಿಟಿ ವ್ಯವಹಾರ ಕ್ಷೇತ್ರಕ್ಕೆ ಸೇರಿಸಿದುದರಿಂದ ಪ್ರತಿಯೊಬ್ಬರಿಗೂ ಅನ್ಯಾಯವಾಗಿದೆ. ಮುನಿಸಿಪಾಲಿಟಿಯಿಂದ ಬರೀಕ ಆಡಂಬರದ ವೆಚ್ಚವನ್ನು ಬಿಟ್ಟುಬಿಡಲಾಗುವುದಿಲ್ಲ. ಆದರೆ ಮುನಿಸಿಪಾಲಿಟಿಗೆ ಬೇಕಾದಷ್ಟು ಹಣವನ್ನೊದಗಿಸಲಿಕ್ಕೆ ಉಡುಪಿಯ ಜನತೆಯು ಅಶಕ್ತನಾಗಿದೆ. ಉಡುಪಿಯ ಜನತೆಗೆ ಬೇಡವಾದ ಮುನಿಸಿಪಾಲಿಟಿಯನ್ನು ಬಲಾತ್ಕಾರವಾಗಿ ನಮ್ಮ ಮೇಲೆ ಹೊರಿಸಿಬಿಟ್ಟರು. ಉಡುಪಿಯ ಜನತೆಯು [illegible] ಆ ಮಷ್ಟಿಗೆ ತಕ್ಕ [illegible] ವನ್ನು [illegible] ನಮ್ಮಲ್ಲಿಯ ಕೆಲವು [illegible] ಸ್ವಪ್ರತಿಷ್ಠೆಗಾಗಿ ಮುನಿಸಿಪಾಲಿಟಿಯನ್ನು [illegible] ಜನತೆ [illegible] ಆವಶ್ಯಕತೆಯನ್ನು ಮಾಡಿಕೊಳ್ಳಲಾರರು. [illegible] ಕಮಿಟಿ ಮಾಡಿ [illegible] ಯು [illegible]. ಏಕೆಂದರೆ ಈಗ ಕಷ್ಟದ ಕಾಲದಲ್ಲಿ ಮುನಿಸಿಪಾಲಿಟಿಯನ್ನು ನಡೆಸಲು ಕಷ್ಟವಾಗುತ್ತದೆ.

ಕಾಂಗ್ರೆಸು ಜನತೆಯ ಹಿತವನ್ನು ಸಾಧಿಸಲಿರುವ ಸಂಸ್ಥೆ. ಮುನಿಸಿಪಾಲಿಟಿಯ ವಿಷಯ ನಮ್ಮ ಉಡುಪಿ ಕಾಂಗ್ರೆಸ ಕಮಿಟಿಯವರು ಮುಂದಾಗಿ [illegible] [illegible] ನಮ್ಮ [illegible] [illegible] ಮುನಿಸಿಪಾಲಿಟಿಯ ವಿಷಯದಲ್ಲಿ ನಿರ್ಮೋಘಾಭಿಪ್ರಾಯವಿರುವಾಗ ಕಾಂಗ್ರೆಸ್ ಕಮಿಟಿಯವರು ವ್ಯಾಕುಲ ಹರಣಮಾಡುತ್ತಲಿರಲು ಕಾರಣವಿದೆಯೇ? ಕಾಂಗ್ರೆಸ್ ಕಮಿಟಿಯ ದೃಷ್ಟಿಯಿಂದ ಮುನಿಸಿಪಾಲಿಟಿಯನ್ನು ತೆಗೆಯುವುದು ಅತ್ಯವಶ್ಯವೆಂದಿದೆಯೇ? ಹಾಗಿರುವುದಾದರೆ ವಿಶೇಷ ಕಾರಣವೇನು? ಗೋಕಾಕ್–ಖಾಸ್‌ಪೂರ್–ಬಂಗಾಳ ಮೊದಲುವೆಡೆಗಳಲ್ಲಿ ನಡೆದ ಮುಷ್ಕರಗಳಲ್ಲಿ ಕಾಂಗ್ರೆಸಿನವರು ಅಗ್ರಭಾವವನ್ನು ವಹಿಸಿ ಜನತೆಗೆ ಹಿತಕರವಾಗುವಂತೆ ವರ್ತಿಸಿದ್ದಾರೆ. ಬರಿಯ ಮುನಿಸಿಪಾಲಿಟಿಯನ್ನು ರದ್ದುಪಡಿಸುವ ಕಾರ್ಯದಲ್ಲೂ ಕಾಂಗ್ರೆಸಿನವರು ಶ್ರದ್ಧೆಯಿಂದ ಕಾರ್ಯಮಾಡುತ್ತಿದ್ದು ಜನರ ವಿಶ್ವಾಸಕ್ಕೆ ಪಾತ್ರರಾಗಿರು[illegible] ನಮ್ಮ ಕಾಂಗ್ರೆಸ ಕಮಿಟಿಯವರು ಉಡುಪಿ [illegible] ಆಶ್ಚರ್ಯ [illegible] ಮುನಿಸಿಪಾಲಿಟಿಯನ್ನು ತೆಗೆದು [illegible] ಬೇಡಿಕೆಗಳನ್ನು [illegible] ಸುವಂತೆ ಜನಾಭಿಪ್ರಾಯವಿರುವುದರಿಂದ [illegible] ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಅಗ್ರಭಾಗವನ್ನು ವಹಿಸಿ ಉಪಕಾರ ಮಾಡಿಯಾರೆಂದು ನಂಬುತ್ತೇನೆ. ಏಕೆಂದರೆ ತರಿಗೆ ಇಲ್ಲದೆ ನಮ್ಮ ಪಾತ್ರೆಗಳನ್ನು [illegible] ಮಾರಿದ ಬಳಿಕ ಚಳವಳಿಯನ್ನು ಹೂಡಿ ಏನು ಪ್ರಯೋಜನ? ನಷ್ಟವಾದ ಬಳಿಕ ಮದ್ದೇಕೆ? ಕಾಂಗ್ರೆಸ್ ಕಮಿಟಿಯವರು ಈ ಕಡೆ ಗಮನಕೊಟ್ಟಾರೆಂದು ನಂಬುವ

**T. N Kannan Nambiar**

# ಉಡುಪಿ ಮುನಿಸಿಪಾಲಿಟಿಯೂ ಸ್ಥಳೀಯ ಕಾಂಗ್ರೆಸ್ ಕಮಿಟಿಯೂ

[illegible] ಕೆಲವರು ಕೇಳುತ್ತಿರುವ ದೀರ್ಘವಾಕ್ಯ [illegible] ವನ್ನು ನಾವು ಮೇಲೆ ಕೊಟ್ಟಿರುತ್ತೇವೆ. ಇದರಿಂದ ನಾವು ಬರೆದ ಲೇಖನವು [illegible] ಅರ್ಥವಾಗಿರುವಂತೆ ತೋರುವುದಿಲ್ಲ. ಅರ್ಥಮಾಡಿಕೊಳ್ಳಲು [illegible] ಬರೆಯುತ್ತಿದ್ದಿಲ್ಲ. ಉಡುಪಿ ಮುನಿಸಿಪಾಲಿಟಿಯನ್ನು ತೆಗೆದು ಹಾಕುವ ಕುರಿತು ಕಾಂಗ್ರೆಸಿನವರು ಈ ವರೆಗೆ ಏನು ಮಾಡಿದ್ದಾರೆ, ಇನ್ನೇನು ಮಾಡಲಿದ್ದಾರೆಂಬುದನ್ನು ಕ್ರಮಶಃ ಅವರು ಪ್ರಕಟಿಸದಿರಲಾರರು. ಆದರೆ ಪ್ರತಿನಿಧಿಗಳು ಮಂತ್ರಿಪದವಿ ವಹಿಸಿ ತಿಂಗಳು ಎರಡೂ ಕಳೆದಿಲ್ಲ. ಅವರು ಸ್ವಲ್ಪವಾದರೂ ಆಡಳಿತಾನುಭವ ಪಡೆಯುವ ಮೊದಲೇ ಕಾಂಗ್ರೆಸ್ ಕಮಿಟಿಯವರು ತಮ್ಮ ಕೇಳಿಕೆಗಳನ್ನು ಮುಂದೊತ್ತಲು ಸಿದ್ಧರಿಲ್ಲ. ಕಾಂಗ್ರೆಸ್ ಕಮಿಟಿಯ ಕೆಲವರು ಮುನಿಸಿಪಾಲಿಟಿಯನ್ನು ತೆಗೆಯುವ ವಿಷಯದಲ್ಲಿ ದಕ್ಷಿಣ ಕನ್ನಡದ ಒಬ್ಬಿಬ್ಬ ಎಸೆಂಬ್ಲಿ ಮೆಂಬರ ಅಭಿಮತ [illegible] ಅದು ಅವಶ್ಯರ ಮಟ್ಟಿಗೆ ಸಾಧ್ಯವೋ ಹೇಳಬಹುದಿಲ್ಲೆಂದು ಹೇಳಿರುವರು. ಮತ್ತು ಹಳ್ಳಿಗರ ದೃಷ್ಟಿಯಿಂದ ಪಟ್ಟಣಿಗರ ಅನುಕೂಲತೆಯನ್ನು [illegible] ಸಲು ಕಾಂಗ್ರೆಸ್ ಮಂತ್ರಿಮಂಡಲಿಯವರು ವಿರೋಧವಿರುವರು.

ಉಡುಪಿ ಮುನಿಸಿಪಾಲಿಟಿಯನ್ನು ತೆಗೆದುಹಾಕುವ ಕುರಿತು ಯಾವ ಭಾರವನ್ನೂ ವಹಿಸಲು ತಯಾರಿಲ್ಲದೆ ಸಭೆ, ಕಮಿಟಿಮಾಡಿ ಅಗ್ಗದ ಹೆಸರು ಪಡೆಯುವ ಸೂತ್ರಚಾಲನೆಗೆ ಕಾಂಗ್ರೆಸ್ ಕಮಿಟಿಯವರು ಎಂದಿಗೂ ಸಹಾಯಕರಾಗಲಾರರು. ಉಡುಪಿ ಮುನಿಸಿಪಾಲಿಟಿಯು ಸ್ಥಾಪಿತವಾಗಿ ಈಗ ಸುಮಾರು ? ವರ್ಷವಾಗುತ್ತ ಬಂತು. ಈ ತೆರಿಗೆದಾರರ ಸಂಘವೆಂಬುದು ಅದನ್ನು ತೆಗೆದುಹಾಕುವ ಕುರಿತು ಕೇವಲ ಕೆಲವು ಠರಾವುಮಾಡಿ ಜನರಲ್ಲಿ ಅಲ್ಲಸಲ್ಲದ ಆಶೆಹುಟ್ಟಿಸಿಕೊಂಡಿರಲಾರದಂತೆ ಗಾಡಿರುವ ಹೊರತು ಮತ್ತೇನು ಮಾಡಿದೆ? ಡೆಪ್ಯುಟೇಶನ್ ಹೋಗಲಿಕ್ಕೂ ಸಿದ್ಧರಿದ್ದವರು ಈ ಸಂಘದಲ್ಲಿರಲಿಲ್ಲ. ಕಾಂಗ್ರೆಸಿನವರು ಅಧಿಕಾರಕ್ಕೆ ಬರುವರೆಂದಾಗ, ಕಾಂಗ್ರೆಸ್ ಕಮಿಟಿಯವರೇನಾದರೂ ಮುನಿಸಿಪಾಲಿಟಿ ತೆಗೆದು ಹಾಕುವ ಕುರಿತು ಕೆಲಸಮಾಡಿ ಆ ಪ್ರಶಂಸೆಯು ಅವರದಾಗುವುದೋ ಎಂಬ ಅಸೂಯೆಯಿಂದ ಕೆಲವರು ತಾವೇ ಮುಂದಾಗಿ ಆ ಕುರಿತು ಚಳವಳಿ ಹೂಡಿರು. ಆ ಮೇಲೆ ಇಂಟರಿಮ್ ಮಂತ್ರಿಗಳು ಬಂದಾಗ ಬಾಯಿ ಎನ್ನದೆ ಸುಮ್ಮನಿದ್ದರು. ಈಗ ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬಂದಾಗ ಈ ಸೂತ್ರಚಾಲಕರು ಪುನಃ ತೆರಿಗೆದಾರರ ಸಂಘದ ನೇತೃತ್ವದಲ್ಲಿ ಹೊರಬಿದ್ದಿರುವರು.

ಈ ತೆರಿಗೆದಾರರ ಸಂಘದವರೆನಿಸುವವರಿಗೆ ಉಡುಪಿ ಮುನಿಸಿಪಾಲಿಟಿಯು ಹೋಗಬೇಕೆಂಬ ನಿಜವಾದ ಮನಸ್ಸಿದ್ದರೆ ಅವರು ನೇರವಾಗಿ ಕಾಂಗ್ರೆಸ್ ಕಮಿಟಿಗೆ ಸೇರಿ ಟೌನ್ ಕಾಂಗ್ರೆಸ್ ಕಮಿಟಿಯೊಂದನ್ನು ರಚಿಸುವುದರಲ್ಲಿ ಉತ್ಸಾಹದಿಂದ [illegible] ಸಹಿಸಿ ಆ ಮೂಲಕ ಮುನಿಸಿಪಾಲಿಟಿಯನ್ನು ತೆಗೆದು ಹಾಕಲು ಚಳವಳಿ ಹೂಡಬಹುದಿತ್ತು. ಅಥವಾ ತಾಲೂಕು ಕಾಂಗ್ರೆಸ್ ಕಮಿಟಿಯವರಿಗೆ ತಮ್ಮ ಅಭಿಪ್ರಾಯ ತಿಳಿಸಿ ಅವರೊಂದಿಗೆ ಸಹಕರಿಸಿ ನಡೆಯಬಹುದಿತ್ತು. ಕಾಂಗ್ರೆಸ್ ಕಮಿಟಿಯವರಿಗೆ ಯಾವುದನ್ನೂ ತಿಳಿಸದೆ, ಅವರ ಅಭಿಪ್ರಾಯವನ್ನು ಕೂಡಾ ಕೇಳುವ ಗೊಡವೆಗೆ ಹೋಗದೆ ತಾವೇ ತಾವಾಗಿ ಒಂದು ಸಭೆನಡಿಸಿ ಸಭೆಯ ಕುರಿತು ಕಾಂಗ್ರೆಸ್ ಕಮಿಟಿಯ ಅಭಿಪ್ರಾಯ ಕೇಳದೆ, ತಾವು ಮೊದಲೇ ಬರೆದುಕೊಂಡು ಬಂದಿದ್ದ ಸಭೆಯಲ್ಲಿ ಹಾಜರೂ ಕೂಡಾ ಇಲ್ಲದ, ಕಾಂಗ್ರೆಸಿನೊಡನೆ ಯಾವ ರೀತಿಯೂ ಸಹಕರಿಸದೆ ವಿರೋಧವಾಗಿ ಇರುವ ಕೆಲ ಮಂದಿಯ ಹೆಸರನ್ನು ಸೂಚಿಸಿ ಕಮಿಟಿಮಾಡಿ, ಆ ಮೇಲೆ ಕಾಂಗ್ರೆಸ್ ಕಮಿಟಿಯವರು ಸುಮ್ಮನಿದ್ದಾರೆ, ಅನಸ್ಥೆ ಮಾಡುತ್ತಾರೆಂದು ದೂರಿ ತಾವು ಬಹಳ ಜಾಗ್ರತೆಯಿಂದಿದ್ದೇವೆ, ಜನತೆಯ ನಿಜವಾದ ಹಿತಸಾಧಕರಿದ್ದೇವೆಂದು ತೋರಿಸಿಕೊಂಡರೆ ಕಾಂಗ್ರೆಸ್ ಕಮಿಟಿಯವರಿಂದೇನು ಮಾಡಲಾದೀತು. ಜನರು ಇಂತಹ ನಟನೆಯಿಂದ ವಂಚಿತರಾಗಲಾರರು. ಕಾಂಗ್ರೆಸು ಇಂತಹ ಅಗ್ಗದಹೆಸರುಪಡೆಯುವ ಸೂತ್ರಚಾಲನೆಯಲ್ಲಿ ಯಾವ ರೀತಿಯ ಭಾಗವಹಿಸುವುದಕ್ಕೂ ಸಿದ್ಧವಿರಲಾರದು.

ಸಂ. ನ.

## WANTED

Lady saleswoman, Catholic or Protestant for a leading cutlery, hardware and Stationery shop at Udipi town. Must be smart, good looking and of pleasing manners, capable of reading and writing English and Kanarese. Apply with one anna stamp stating minimum salary required

'X' C/o Navayuga, Udipi


# ON THE EVE OF THE

*SILVER JUBILEE OF THE*

# East & West Insurance Co., Ltd.

MESSRS. PADUBIDRI BROTHRES,

The accredited Chief Agents of the Company invite applications for liberal Agency contracts from Gentlemen of status and influence to cooperate in the production of a record business of Rs. 10,00,000 as a gift in honour of the advent of the auspicious event.

*For particulars apply to:*

**Messrs. Padubidri Bros.,**

*CHIEF AGENTS,*

KARNATAKA & MAHARASTRA.

**40, Narayanlal Bansilal Mansion,**

*Bellasis Road, BOMBAY 8.*

## ಕಿರಿಯರ ಪ್ರಪಂಚದ

**ಪುಸ್ತಕಗಳು.**

| | | | |
|---|---|---|---|
| ೧ ಸಾಡಕಥೆಗಳು | ೦ | ೨ | ೦ |
| ೨ ಮುಂದಿನ ದೇವರು | ೦ | ೨ | ೦ |
| ೩ ಸ್ವತಂತ್ರ ಜೀವನೋಪಾಯ | ೦ | ೨ | ೬ |
| ೪ ಕುಶ-ಲವ | ೦ | ೪ | ೦ |
| ೫ ಸಂಶಯ ಪಿಶಾಚಿ | ೦ | ೬ | ೦ |
| ೬ ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ೭ ಮಧುವನ | ೧ | ೮ | ೦ |
| ೮ ವ್ಯಭಿಚಾರಿಣಿ ಯಾರು? | ೦ | ೮ | ೦ |
| ೯ ಹೆಂಡ್ತಿ ಗಂಡನಾದರೆ! | ೦ | ೪ | ೦ |
| ೧೦ ಪುರುಷವಧು! | ೦ | ೪ | ೦ |

**ಕಿರಿಯರ ಪ್ರಪಂಚ, ಉಡುಪಿ.**

## ಭಾಷಾಂತರಕಾರರು

**ದೊರೆಯದೆ ಪೇಚಾಡುವಿರೇಕೆ?**

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ನೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
*C/o* 'ಕಿರಿಯರ ಪ್ರಪಂಚ,'
ಉಡುಪಿ.

## WANTED

A clerk strong in English & Kanarese with knowledge of Typewriting and Office work. Apply stating age qualification and minimum salary reqd The selected candidate will be required to give a security of Rs. 250/-.

'XX'
**C/o NAVAYUGA,**
UDIPI.

CHEAPEST SAFEST INDUSTRIAL
INSURE WITH & REPRESENT
RANJIT
BIMA Co Ltd AMRITSAR
APPLY FOR HONOURABLE JOB EXCELLENT SALARY

ವಾರ] 'ನವಯುಗ' [ಪತ್ರಿಕೆ

| | |
|---|---|
| ವಾರ್ಷಿಕ ಚಂದಾ | ರೂ. ೩—೪—೦ |
| ೬ ತಿಂಗಳಿಗೆ | ರೂ. ೧—೧೨—೦ |

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

## S. U. N. & CO. *Choukhamba, Benares City.*

**ಮೂರು ಇನಾಮುಗಳು.**

THIS MAN
OUR CUSTOMER

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀಲಕ್ಷ್ಮಿ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಅಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುತ್ತವೆ. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಪಾಡಿ ಕದಪಾಮ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚೌಕ, ಧಾವಳಿ, ಸಾಮಾಗ್ರಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ 20 ರಿಂದ 55 ವರೆಗೂ ಸಾದಾ 16 ಮೊಳದ ಶೀರೆ 1 ಕ್ಕೆ ರೂ 19 ರಿಂದ ರೂ. 35 ರ ವರೆಗೆ. ಅರೆ ಕಡಮೆ 16 ಮೊಳ ಕ್ಷೆವಲ್ ಅಂಚು ರೂ. 10½ ಯಿಂದ ರೂ. 16. ಖಣ 1 ಕ್ಕೆ ರೂ. 1¾ ರಿಂದ ರೂ 10 ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

**ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ,** ಚೌಕಂಬಾ, ಬನಾರಿಸ್, ಕಾಶಿ

## ಎಚ್. ಎಸ್. ಮಿಯಾಜಿವಾಲಾ ಬ್ರದರ್ಸ್

**ಬೊಂಬಾಯಿ.**

ಚಿನಿವಾರ ಉಪಕರಣಗಳ ಬೊಂಬಾಯಿಯ ಸುಪ್ರಸಿದ್ಧ ಅಂಗಡಿ.

**ಕುರಂದದ ಕಡ್ಡಿ, ಕುರಂದದ ಕಾಗದ, ಪ್ರತಿಯೊಂದು ವಿಧದ ಅರ, ಸರಿಗೆಯ ಬ್ರಶ್ಶು, ತೂತುಮಾಡುವ ಗರಗಸವೇ ಮೊದಲಾದ ಚಿನಿವಾರ ಕೆಲಸಕ್ಕೆ ಬೇಕಾಗುವ ಯಾವತ್ತೂ ನವನವ ಸಾಮಾನುಗಳು ನಮ್ಮಲ್ಲಿ ಸ್ಟೋಕ್ ಇರುತ್ತವೆ.**

ಒಮ್ಮೆ ಆರ್ಡರುಕೊಟ್ಟು ಪರೀಕ್ಷಿಸಬೇಕಾಗಿ ವಿನಂತಿ

ಪಟ್ಟಣದ ಹೊರಗಣ ನಮ್ಮ ಗಿರಾಕಿಗಳ ಕುರಿತು ನಾವು ವಿಶೇಷ ಜಾಗ್ರತೆ ತೆಗೆದುಕೊಳ್ಳುತ್ತೇವೆ.

H. S. Miyajiwala Bros.
*111 Lohar Chawl,* BOMBAY

ಪತ್ರವ್ಯವಹಾರಗಳನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.

# WANTED

Applications are invited from energetic young men for the posts of a **TRAFFIC INSPECTOR** and an assistant **TRAFFIC INSPECTOR** carrying a salary of Rs. 25/- to 30/- and Rs. 20/- to 25/- per month respetcively and a consolidated travelling allowance of Rs. 15/- per month each. Applicants should have studied up to VIth Form. Preference will be given to **GRADUATES**.

***Applications should be made to the following address—***

JOINT MANAGERS,
**The Combined Booking Agency, Mangalore.**

## The Coondapoor Bank, Ltd.,

Head Office - Coondapoor Branch Office -Brahmavar

Beg to announce that a new Branch has been opened at SHANKARANARAYANA on 4 6 37

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿ ಜೂನ್ ತಾ 1ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ
ಚಾಲ್ತಿ ರೇವಣಾತಿಗಳು ಸಾ ಶೆ 2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ ಶೆ 4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ ಶೆ 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5%
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು
ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ
ಭಂಗಾರದ ಈಡಿನಮೇಲೂ ಸಾಲದೊರೆಯುವುದು
ವಿಶೇಷ ಸೂಚನೆ —ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತದೆ ಪಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಗೆ ಕೆಳ ಸವಿಲಾಸಕ್ಕೆ ಬರೆಕೊಳ್ಳಿರಿ

Halsnad Soorappayya, ಚೆಯರ್‌ಮೆನ್ — N Sheshagiri Rao, ಸೆಕ್ರಿಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.



ನೀವು ಓದಿರುವಿರಾ?
ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?

## ಅಡ್ಡಬಳಿದ ಗಿಡ್ಡಿಯ ಮದುವೆ

(ಕ್ರಯ ಬರೇ ಒಂದಾಣೆ)

## ಮುದುಕನ ಹೆಂಡತಿ ಧಕ್ಕೈರಾದೆ

(ಕ್ರಯ ಬರೇ ಒಂದಾಣೆ)

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ
ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ
ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ
ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**

ಶ್ರೀ ಕೊಡಕ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ
ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರೆ ಆಣೆ ಸ್ಟಾಂಪು ಕಳುಹಿಸಬೇಕು.

NAVABHARAT BOOK DEPOT
UDIPI



ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦—೨—೦

# ಪುರುಷವಧು

ನಕ್ಕುನಕ್ಕು ನಗಿಸುವ ಏಕಾಂಕ ಪ್ರಹಸನ.
ಕಿರಿಯರ ಪ್ರಪಂಚ, ಉಡುಪಿ



## SUPPLY AGENCY LTD.
UDIPI

Authorised Capital Rs. 1,00,000/-
Subscribed & Paid up Capital Rs 29,720/-

ಈ ಕೆಳಗಿನ ದರದ ಬಡ್ಡಿಯಲ್ಲಿ
ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

| | | | |
|---|---|---|---|
| 3 ತಿಂಗಳಿಂದ | 6 ತಿಂಗಳ | ವರೆಗೆ | 4½% |
| 7 ,, | 9 | ,, | 5% |
| 10 | 12 | , | 5½% |
| 15 | 24 | , | 6¼% |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು ಅಥವಾ ಪತ್ರವ್ಯವಹಾರ ಮಾಡಬಹುದು.

ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ 1—8—1937 — ಎಸ್. ಯು. ಪಣಿಯಾಡಿ, ಮೆನೇಜಿಂಗ್ ಡೈರೆಕ್ಟರ್



## ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ | 5 | 0 | 0 |
| ಚಂದ್ರಗುಪ್ತ | 1 | 0 | 0 |
| Gowthama the Buddha | 0 | 8 | 0 |
| ಮದುವನ | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ | 0 | 8 | 0 |
| ಸರಸ್ವತಿ | 0 | 8 | 0 |
| ಗೀತೆಯ ಕೈಗನ್ನಡಿ | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) | 0 | 4 | 0 |
| ಕೃಷ್ಣಸಂಧಾನ | 0 | 8 | 0 |
| ತುಳು ವ್ಯಾಕರಣ | 0 | 8 | 0 |
| ಸತೀ ಕಮಲೆ | 0 | 6 | 0 |
| ಮಿತ್ರನಾರಾಯಣ ಕತೆ | 0 | 8 | 0 |

ಇವಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ತುಳುನಾಡ್ ಪ್ರೆಸ್, ಉಡುಪಿ.



USE
# Suvasini Agarbathies
(REGISTERED)

SRI BHARATHA VASTU MANDIRA, UDIPI.


Printed by P VENKATARAMANACHARYA for & on behalf of SUPPLY AGENCY LTD at THULUNAD PRESS UDIPI and Published by K H SHETTY at NAVAYUGA OFFICE, UDIPI

Registered No. M. 3613

ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc.
APPLY TO THE MANAGER

ನವಯುಗವು
ಅಖಿಲ
ಕರ್ನಾಟಕದಲ್ಲಿಯೂ
ಕನ್ನಡಿಗರು ನೆಲಸಿರುವ
ದೇಶ ವಿದೇಶಗಳ
ಎಲ್ಲ ಕೇಂದ್ರಗಳಲ್ಲಿಯೂ
ವಿಶಾಲವಾಗಿ
ಪ್ರಚಾರದಲ್ಲಿರುವುದರಿಂದ
ಜಾಹಿರಾತು ದರಗಳಿಗೆ
ಉತ್ತಮ ಸಾಧನವಾಗಿದೆ.
ದರಗಳಿಗೆ
ಮನೇಜರರಿಗೆ ಬರೆಯಿರಿ.

ವಾರಪತ್ರಿಕೆ ಸಂಪಾದಕ: ಕೆ. ಕೆ. ಶೆಟ್ಟಿ.

ಸಂಪುಟ ೧೭
ಸಂಚಿಕೆ ೧

ಗುರುವಾರ, ೨ ಸೆಪ್ಟಂಬರ ೧೯೩೭
Thursday, 2nd September 1937

Vol. XVII
No. 1


# THE CANARA INDUSTRIAL & BANKING SYNDICATE LTD.

[INCORPORATED IN BRITISH INDIA]

**ESTD:] [1925**

*Head Office:*
"MUKUNDA NIVAS"
UDIPI, (S. I.)

**BRANCHES:**

1 BOMBAY

| | |
|---|---|
| 2 BANGALORE CITY | 17 HUBLI |
| 3 BELGAUM | 18 GADAG |
| 4 BYADGI | 19 KARWAR |
| 5 BELLARY | 20 KUMTA |
| 6 ADONI | 21 ANKOLA |
| 7 HOSPET | 22 HONAVAR |
| 8 TALIPARAMBA | 23 BHATKAL |
| 9 UPPINANGADI | 24 BRAHMAVAR |
| 10 KASARGODE | 25 HUNGARCUTTA |
| 11 PAYYANUR | 26 SIRSI |
| 12 KANHANGAD | 27 SAGAR |
| 13 KARKALA | 28 COONDAPOOR |
| 14 NANDYAL | 29 UDIPI |
| 15 PRODATTUR | 30 MANGALORE |
| 16 TADPATRI | 31 CANNANORE |

*We have much pleasure to*
ANNOUNCE THE OPENING OF
OUR BRANCHES AT
HINDUPUR (Anantpur Dt)
AND
TUMKUR (Mysore State)
ON THE 3rd & 9th SEPTEMBER 1937
RESPECTIVELY, WHERE ALL KINDS
OF BANKING BUSINESS
WILL BE TRANSACTED.

MEMBER:
RESERVE BANK OF INDIA
BANKERS' CLEARING HOUSE, BOMBAY

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,74,790 |
| Total resources exceed | „ 46 lakhs |



# ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂ[illegible] ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ಎ. ರಾವ್, ಮೆನೇಜರ್.

# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

## THE ROYAL SEED CO.,

FLORISTS & SEEDSMEN,
27, Ilpay Thope ULSOOR, BANGALORE.

ವಿ ಸೂ—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈಮಾಡಿ ೧—೦—೦ ಒಂದಕ್ಕೆ ೦—೨—೦ ಕಮಿಷನ್ ಪಡಿಯುತ್ತೇವೆ ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು

THE
## MOOLKY BANK, LTD.,
MOOLKY.

## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ದುಡಿಯುವ ಸಂಸ್ಥೆ.

ಭಂಗಾರದ ಸರಕಿನ ಈಡಿನಮೇಲೆ ಸೇಕಡ 7 ವರೆಗಿನ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,
*President & Manager,* ಪ್ರೆಸಿಡೆಂಟ್ ಮತ್ತು ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

## ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್ ಮಾರ್ಕಿನ ರಿಂಗ್ ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

DIAMONDS! DIAMONDS!!

## K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರಸಂಘದ ಕೆಲವುಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನು ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ

*Manager,*
KANARA PRINTING WORKS,
**Hampankatte, Mangalore.**

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ
ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ
ನವರಿಂದ ರಚಿತವಾದ

## 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು ಪ್ರತಿಗಳನ್ನು ಈಗಾಗಲೇ ಕಾದಿರಿಸಿಕೊಳ್ಳಿರಿ ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—5—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 58 Mody Street, Fort Bombay.

## ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ
ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್
ರೀಡ್ಸಿನ ಕೈ, ಮತ್ತು ಕಾಲು
ಹಾರ್ಮೋನಿಯಮುಗಳು
ಬೇಕಾದ ನಮೂನೆಯಲ್ಲಿ
ಸಿದ್ಧಮಾಡಿಕೊಡುತ್ತವೆ.
ಕ್ರಯದ ಪಟ್ಟಿಗೂ ವಿಶೇಷ ಮಾಹಿತಿಗೂ
ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ್ನು
ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ
ಮಾಡಿಕೊಡಲಾಗುತ್ತದೆ.

*Proprietor.* ATTAVAR BABOO,
**VASANTHI HARMONIUM WORKS**
**Hampankatta, Mangalore.**

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚರ್ಚರೋಡ, ಉಡುಪಿ ಇಲ್ಲಿ ಮಾರಲ್ಪಡುತ್ತವೆ

ವಾರ್ಷಿಕ ಚಂದಾ ರೂ ೩—೮—೦ ಆರು ತಿಂಗಳಿಗೆ ರೂ. ೧—೧೨—೦

ಉಡುಪಿ ಸ್ಥಾಪನೆ

೨—೯—೧೯೩೭ ೧೯೨೧

# :: ನವಯುಗ ::

ಸಂಪುಟ ೧೭ ಸಂಚಿಕೆ ೧

### ಜಮೀನ್‌ದಾರರ ತಳಮಳ

ಬಡಜನರ ಹಿತಸಾಧನೆಗೆ ಮೊದಲಾಗಿ ಕೈಕೊಟ್ಟದೆಂದರೆ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಮಂತ್ರಿಮಂಡಳಿ ಅದರ ಪ್ರಧಾನಮಂತ್ರಿ ಪಂಡಿತ ಪಂತರು ದೊಡ್ಡ ಜಮೀನ್ದಾರರು ಅವರೇ ಜಮೀನ್ದಾರರ ನಿರಂಕುಶ ಅಧಿಕಾರವನ್ನು ಅಂಕೆಗೆ ತರಲು ಹೊರಟಿದ್ದಾರೆ ಒಕ್ಕಲುಗಳ ಹಿತರಕ್ಷಣೆಯ ಮಸೂದೆಯೊಂದನ್ನು ಕೂಡಲೆ ತರುವ ಪ್ರಯತ್ನದಲ್ಲಿದ್ದಾರೆ ಅವೊಡಲು ಒಕ್ಕಲುಗಳನ್ನು ತೆಗೆದುಹಾಕುವ, ಗೇಣಿಬಾಕಿಯೇ ಮೊದಲಾದ ವ್ಯವಹರಣಗಳೆಲ್ಲಾ ನಿಲ್ಲಿಸಲ್ಪಡಬೇಕೆಂದು ಹುಕುಮು ಜ್ಯಾರಿಮಾಡಿದ್ದಾರೆ ಬಿಹಾರಪ್ರಾಂತ್ಯವೂ ಈ ವಿಷಯದಲ್ಲಿ ಸಂಯುಕ್ತ ಪ್ರಾಂತದ ಮಾದರಿಯನ್ನನುಸರಿಸುವ ನಿರ್ಧಾರ ಮಾಡಿದೆ ಇದರಿಂದ ಈ ಎರಡೂ ಪ್ರಾಂತಗಳ ಜಮೀನ್ದಾರರಲ್ಲಿ ತಳಮಳವೆದ್ದಿದೆ. ಅವರು ಕಾಂಗ್ರೆಸ್ ಮಂತ್ರಿಮಂಡಲವನ್ನು ವಿರೋಧಿಸಲು ಸೊಂಟಕಟ್ಟಿದ್ದಾರೆ ತಾವೆಲ್ಲ ಒಟ್ಟುಗೂಡಿ ಸಂಘಟಿತವಾಗಿ ಕಾಂಗ್ರೆಸನ್ನು ವಿರೋಧಿಸಬೇಕೆಂಬ ಪ್ರಯತ್ನದಲ್ಲಿದ್ದಾರೆ ಕಾಂಗ್ರೆಸಿನ ಮೇಲಿನ ದ್ವೇಷದಿಂದ ಸಾರ್ವಜನಿಕ ಸಂಸ್ಥೆಗಳಿಗೆ ಸಹಾಯವನ್ನು ನಿರಾಕರಿಸುವಷ್ಟರ ಕ್ಷುದ್ರಪ್ರತೀಕಾರಬುದ್ಧಿಯುಳ್ಳವರಾಗಿದ್ದಾರ ಇದರಿಂದ ಕಾಂಗ್ರೆಸ್ ಎಲ್ಲಾ ವರ್ಗದ ಜನರ ಸಂಸ್ಥೆಯಾಗಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುವುದು ಅದಕ್ಕೆ ಹೆಚ್ಚಿನ ಜನರ ಹೆಚ್ಚಿನ ಹಿತವನ್ನು ಎತ್ತಿ ಹಿಡಿಯಲು ಸಾಧ್ಯವಾದೀತು ಜಮೀನ್ದಾರರನ್ನೂ ಭಂಡವಾಳಗಾರರನ್ನೂ ಒಲಿಸಿಕೊಂಡು ಕಾಂಗ್ರೆಸನ್ನು ನಡಿಸಬೇಕೆಂದು ಗಾಂಧಿಯವರು ಇನ್ನೂ ಆಸೆಪಟ್ಟರೆ,ತೋಳ ಕುರಿಗಳನ್ನು ಒಂದೇ ಮರಿಗೆಯಲ್ಲಿ ತಿನ್ನುವಂತೆಯೂ ಮಾಡಬಹುದು.

### ಖಾನ್ ಅಬ್ದುಲ್‌ಗಾಫರ್ ಖಾನರು

ಇಂದೀಗ 6ವರ್ಷಗಳ ಅಗಲುವಿಕೆಯ ನಂತರ ತನ್ನ ಪ್ರಾಂತಕ್ಕೆ ಹೋಗಿ ಜನ ಸಾಮಾನ್ಯರಿಂದ ಪ್ರಚಂಡಸ್ವಾಗತ ಪಡೆಯುತ್ತಿರುವರು. ನಲ್ವತ್ತು ಐವತ್ತು ಸಾವಿರ ಜನರು ಖಾನರನ್ನು ಸ್ವಾಗತೀಕರಿಸಿರುವರು. ಮೈಲುದ್ದ ಮೆರವಣಿಗೆಗಳು ನಡೆದಿರುವವು ಖಾನರಿಗೆ ವಾಯುವ್ಯ ಗಡಿನಾಡಿನ ಗಾಂಧಿಯೆಂಬ ಹೆಸರು ಅನ್ವರ್ಥವಾದುದು. ಉಗ್ರ, ಉದ್ಧಟ, ಕೇಡುಮೆಟ್ಟಿಗೆ ಬರ್ಬರದ ಪಠಾಣರನ್ನು ಅಹಿಂಸಾತ್ಮಕ ವೀರಸ್ವಾತಂತ್ರ್ಯ ಯೋಧರಾಗಿ ಮಾರ್ಪಡಿಸಿ ಖಾನರು ಆಧುನಿಕ ಹಿಂದುಸ್ಥಾನದಲ್ಲೊಂದು ಅದ್ಭುತವನ್ನೇ ಮಾಡಿರುವರು. ಬ್ರಿಟಿಷ್ ಆಳ್ವಿಕೆಯು ಇಲ್ಲದಿದ್ದರೆ ವಾಯುವ್ಯಗಡಿನಾಡಿನ ಬರ್ಬರಪಠಾಣರು ಕಳಗಿಳಿದು ಬಂದು ಪ್ರತಿಯೊಬ್ಬನನ್ನೂ ಲುಟಾಯಿಸುವರು, ಸ್ತ್ರೀಯರ ಮೇಲಲ್ಲಾ ಅತ್ಯಾಚಾರ ಮಾಡುವರೆಂಬ ಭೀತಿಯ, ಪರದೆಯನ್ನು ಅಬ್ದುಲ್ ಗಾಫರ್ ಖಾನರು ಹರಿದೊಗೆದು, ಪಠಾಣರು ಇತರ ಹಿಂದೀಯರಂತೆಯೇ ಮಾನವರು, ಅವರೆಷ್ಟೇ ರಾಷ್ಟ್ರಪ್ರೇಮ ಮಾತ್ರವಲ್ಲದೆ ಅಹಿಂಸೆಯ ಮೇಲೆ ನಿಷ್ಠೆಯುಳ್ಳವರೆಂಬುದನ್ನು ಲೋಕವಿಶ್ರುತಗೊಳಿಸಿರುವರು ಕಾಯಿದೆಭಂಗಚಳವಳದಲ್ಲಿ ವೀರ ಪಠಾಣರು ಹಲವರು ತೋರಿಸಿದ ಧೈರ್ಯ ಮತ್ತು ಸ್ಥೈರ್ಯವು ಚಿರಸ್ಮರಣೀಯವಿರುವುದು. ಪೋಲೀಸರ ಪೈಶಾಚಿಕ ಅತ್ಯಾಚಾರದಿದಿರಲ್ಲಿ ಖಾನರ ಅನುಯಾಯಿಗಳಾದ ಖುದಾಯಿ ಖಿದ್ಮತ್‌ಗಾರರು ಪ್ರಾಣವನ್ನರ್ಪಿಸಿ ಅಹಿಂಸೆಯನ್ನು ಪಾಲಿಸಿದವರು ಇದಕ್ಕೆಲ್ಲಾ ಅಬ್ದುಲ್‌ಗಫರ್ ಖಾನರ ಬೋಧನೆ ಮತ್ತು ಜೀವನವೇ ಕಾರಣ ಖಾನರು ಆಡಂಬರವನ್ನು ದ್ವೇಷಿಸುವವರು, ಮಿತಭಾಷಿಯು, ತಾನು ಮುಖಂಡನಲ್ಲ ಸೇವಕನೆಂಬ ವಿನೀತತೆಯುಳ್ಳವರು ಇತ್ತಲಾಗಿ ಕರಾಚಿಯಲ್ಲಿ ಮೆರವಣಿಗೆಯಲ್ಲಿ ಹೋಗುವುದಕ್ಕೂ ನಿರಾಕರಿಸಿ ಜನತೆಯ ನಿಜವಾದ ಸೇವಕನಾಗಿಯೇ ತನಗೆ ಮನ್ನಣೆದೊರೆಯುವದೆಂದು ಸಾರಿ ಹೇಳುತ್ತಿರುವರು ಮತ್ತು ಸಮಾಜದೊಳಗಣ ಕಿಕ್ಕಾಟವೆಂದರೆ ಬಡವರು ಮತ್ತು ದನಿಕರೊಳಗೆ,ಇರುವವರು ಮತ್ತು ಇಲ್ಲದವರೊಳಗೆ ಇದರಲ್ಲಿ ಬಡಬಗ್ಗರಿಗೆ ಸಹಾಯ ಮಾಡುವುದು ಕಾಂಗ್ರೆಸಿನ ಕರ್ತವ್ಯವೆಂದು ಸ್ಪಷ್ಟಗೊಳಿಸಿರುವರು

### ಇಟೆಲಿಯ ಉಭಯ ಸಂಕಟ

ಸಾಮ್ರಾಜ್ಯ ತೃಷ್ಣೆಯಿಂದ ಇಟೆಲಿಯು ಅಬಿಸೀನಿಯವನ್ನೇನೋ ನುಂಗಿದೆ ಆದರೆ ಅಬಿಸೀನಿಯದಲ್ಲಿ ಎಲ್ಲೆಲ್ಲಿಯೂ ಗಲಾಟೆ, ಬಂಡಾಯಗಳು ನಡೆಯುತ್ತಲೇ ಇವೆ ಅಲ್ಲಿಯ ಪಂಗಡಿಗರು ನೋಡಿ ನೋಡಿದಲ್ಲಿ ಇಟೆಲಿಯಾನರನ್ನು ಕೊಂದುಹಾಕುತ್ತಿರುವರು. ಆದುದರಿಂದ ಇಟೆಲಿಯಾನರಿಗೆ ಹಳ್ಳಿಗಳಿಗೆ ಹೋಗಿವಾಸಿಸಲು ಅಸಾಧ್ಯವಾಗಿದೆ. ಕೆಲವು ಪಟ್ಟಣಗಳಲ್ಲಾದರೂ ಅವರು ಉಕ್ಕಿನಬೇಲಿಯ ಆವರಣದೊಳಗೆ ವಾಸಿಸಬೇಕಾಗಿ ಬಂದಿದೆ ಅಡ್ಡಿಸ್ ಅಬಾಬ ಜಿಬೌತಿ ರೈಲ್ವೆ ಪ್ರಯಾಣಕೂಡ ಸಂರಕ್ಷಿತವಿರುವುದಿಲ್ಲ ಇದುಹೊರತು ಅಬಿಸೀನಿಯಕ್ಕೆ ಹೋಗಿ ವಾಸಿಸಿದ ಇಟೆಲಿಯಾನರಲ್ಲಿ ತೀವ್ರ ಅತೃಪ್ತಿಯುಂಟಾಗಿದೆ. ಇದರಿಂದ ಇಟೆಲಿಯು ಉಭಯ ಸಂಕಟದಲ್ಲಿ ಬಿದ್ದು, ಅಬಿಸೀನಿಯ ಚಕ್ರವರ್ತಿಗಳಾದ ನೆಗಸರು, ತಮ್ಮ ಅಧೀನದಲ್ಲಿ ನಾಮಮಾತ್ರವಾದ ಚಕ್ರವರ್ತಿತ್ವವನ್ನು ಸ್ವೀಕರಿಸುವಂತೆ ಮಾಡಲು ಪ್ರಯತ್ನಿಸುತ್ತಿರುವರು ಮೊದಲು ಜೆರುಸಲೇಮಿನಲ್ಲಿದ್ದ ನೆಗಸರ ಮಗನನ್ನು ಒಲಿಸಿಕೊಳ್ಳಲೆತ್ನಿಸಿದರು ಅದು ಸಾಧ್ಯವಾಗಲಿಲ್ಲ ನೆಗಸರು ತನ್ನ ಪುತ್ರನನ್ನು ತನ್ನ ಬಳಿಗೆ ಕರೆಸಿಕೊಂಡರು ಈಗ ನೆಗಸರೊಡನೆಯೇ ಈ ಪ್ರಸ್ತಾಪ ನಡೆದಿದೆ ಆದರೆ ನೆಗಸರು ಇಟೆಲಿಯ ಹೇಳಿಕೆಯಂತೆ ಅವರ ಕೈಕೆಳಗೆ ನಾಮಮಾತ್ರವಾದ ರಾಜ್ಯಪಟ್ಟವನ್ನು ಎಂದಿಗೂ ಸ್ವೀಕರಿಸಲಾರೆನೆಂದು ಸ್ಪಷ್ಟವಾಗಿ ತಿಳಿಸಿರುವರು.

### ಚೀನಾ ಜಾಪಾನು ಯುದ್ಧ

ಕೇವಲ ಹುಲು ನೆವನದಿಂದ ಜಾಪಾನು ಈಗ ಚೀನವನ್ನು ಬಗ್ಗು ಬಡಿಯುವ ನಿರ್ಧಾರ ಮಾಡಿರುವುದು ಚೀನದ ಆದೀನವಿದ್ದ ಮಂಗೋಲಿಯವನ್ನು ಸ್ವತಂತ್ರ ರಾಷ್ಟ್ರವಾಗಿಮಾಡುವ ಆಶೆತೋರಿಸಿ ತನ್ನ ಪಕ್ಷಕ್ಕೊಲಿಸಿಕೊಂಡಿರುವುದು ಮಂಗೋಲಿಯದ 20,000ಸೈನಿಕರು ಜಾಪಾನರಿಗೆ ಸಹಾಯಮಾಡಿ ನಾನ್ಕೋ ಪ್ರದೇಶದಲ್ಲಿ ಚೀನಿಯರು ಪರಾಜಯಹೊಂದಿರುವರು. ಜಾಪಾನಿನ ಸಹಾಯದಿಂದ ತಮ್ಮ ಪ್ರಸಿದ್ಧ ಜಂಗೀಸ್ ಖಾನನು ಕಟ್ಟಿದಂತಹ ರಾಜ್ಯವನ್ನು ಕಟ್ಟಬೇಕೆಂದು ಮಂಗೋಲಿಯಾನರು ಹುರುಪುಗೊಂಡಿರುವರು ಆದರೆ ಮಂಚೂರಿಯದಂತೆ ಜಾಪಾನು ಮಂಗೋಲಿಯದ ಮೇಲೂ ತನ್ನ ಅಧಿಕಾರ ಸ್ಥಾಪಿಸದಿರಲಾರದು ತಾವು ಕಾವಲಿಯಿಂದ ಸಿಡಿದು ಒಲೆಗೆ ಬಿದ್ದಂತಾಗುವುದೆಂಬುದನ್ನು ಈ ಜನರು ಅರಿತಿರುವಂತಿಲ್ಲ. ಪೈಪಿಂಗಿನ ಪತನದ ನಂತರ ಉತ್ತರ ಚೀನದಲ್ಲಿ ಹೋರಾಟವು ನಿಂತು ಹೋದಂತಿದ್ದರೂ ಈಗ ಪುನಃ ಆರಂಭವಾಗಿದೆ ಜಾಪಾನರು ಹೆಚ್ಚೆಚ್ಚು ಸೇನೆಯನ್ನು ಅಲ್ಲಿಗೆ ಭರದಿಂದೊಯ್ಯುತ್ತಿದ್ದಾರೆ ಶಾಂಘಾಯಿಯಲ್ಲಿಯುದ್ಧವು ಭಯಂಕರವಾಗಿ ನಡೆದಿರುತ್ತದೆ. ಜಾಪಾನರು 50,000 ಸೇನೆಯನ್ನಲ್ಲಿ ಇಳಿಸಿದುದರಿಂದ ಚೀನೀಯರು ಹಿಡೆಗಟ್ಟಲ್ಪಟ್ಟಿದ್ದಾರೆ ಜಾಪಾನಿನ ಯುದ್ಧ ನಾವೆಗಳು ಚೀನಿಯರಿಗೆ ಬಹಳ ಹಾವಳಿ ಮಾಡಿರುತ್ತವೆ. ಯುದ್ಧವು ಥಕ್ಕನೆ ಕೊನೆಗೊಳ್ಳುವಂತಿಲ್ಲ ಜಾಪಾನಿನ ಈ ಅನ್ಯಾಯವಾದ ಆಕ್ರಮಣದ ಕುರಿತು ಇಂಗ್ಲೆಂಡ್ ಅಮೇರಿಕದಲ್ಲೆಲ್ಲಾ ತೀವ್ರ ವಿರೋಧಾಭಿಪ್ರಾಯವುಂಟಾಗಿದೆ ಇಂಗ್ಲೆಂಡಿನ ಚೀನೀ ರಾಯಭಾರಿಯ ಮೋಟರ್ ಕಾರಿನ ಮೇಲೆ ಜಾಪಾನು ವಿಮಾನಗಳು ಗುಂಡೆಸೆದು ರಾಯಭಾರಿಯು ಗಾಯಗೊಂಡುದುದರಿಂದ ಇಂಗ್ಲೆಂಡು ಉದ್ವೇಗಗೊಂಡಿದೆ ಪ್ರಬಲ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಮೇಲೆ ಇದೇ ರೀತಿ ಆಕ್ರಮಣ ನಡಿಸುತ್ತ ಹೋದರೆ ಲೋಕದಲ್ಲಿ ನ್ಯಾಯಕ್ಕೆ ಆಸ್ಪದವೆಲ್ಲಿ? ಎಂಬುದಾಗಿ ರವುಎಲ್ಲೆಲ್ಲಿಯೂ ಉಂಟಾಗಿದೆ ಇಂತಹ ಆಕ್ರಮಣಗಳನ್ನು ತಡೆಯುವ ಬಗೆಯಾದರೂ ಪ್ರಕೃತದ ಪರಿಸ್ಥಿತಿಯಲ್ಲಿ ಯಾವುದೂ ತೋರುವುದಿಲ್ಲ. ಇಂಗ್ಲೆಂಡ್ ಫ್ರಾನ್ಸ್ ಮೊದಲಾದ ಪ್ರಬಲ ರಾಷ್ಟ್ರಗಳ ದುರ್ಬಲತೆಯೂ! ಕುಟಿಲ ರಾಜನೀತಿಯೂ ಇಂದೀಗ ಲೋಕವನ್ನು ಈ ಅವಸ್ಥೆಗಿಳಿಸಿರುವುದೆನ್ನಬಹುದು

### ಸ್ಪೈನಿನ ಪರಿಸ್ಥಿತಿ-

ಸ್ಪೈನಿನ ತಾಟಸ್ಥ್ಯ ಸಮಿತಿಯು ನಿದ್ದೆ ಹೋಗಿದವಂತೆ ತೋರುವುದು ಅದರ ಪ್ರಯೋಗತೆಯು ಈಗ ಸಿದ್ಧವಾಗಿರುವುದು ಬಂಡಾಯಗಾರರು ಬಾಸ್ಕ್ ಪ್ರಾಂತವನ್ನೀಗ ಸಂಪೂರ್ಣವಾಗಿ ಗೆದ್ದಿರುವರು. ಇದಕ್ಕಾಗಿ ಮುಸಲೋನಿಯವರು ಜನರಲ್ ಫ್ರೇಂಕೋರವರಿಗೆ ಅಭಿನಂದನೆ ಕಳುಹಿಸಿರುವರು ಇಟೆಲಿ ಮತ್ತು ಜರ್ಮನಿಗಳು ಜನರಲ್ ಫ್ರೇಂಕೋರವರಿಗೆ ಪ್ರತ್ಯಕ್ಷ ಸಹಾಯಮಾಡುತ್ತಿರುವವು ಇಟೆಲಿಯಾನ ಜಲಾಂತರ್ಗಾಮಿ ನಾವೆಗಳು ಸ್ಪೈನಿಶ್ ಸರಕಾರದ ಕೆಲವು ವ್ಯಾಪಾರಿ ಹಡಗಗಳನ್ನು ಮುಳುಗಿಸಿರುವುವು ಪರಿಸ್ಥಿತಿಯು ಇದೇ ರೀತಿ ನಡೆವಲ್ಲಿ ಸ್ಪೈನಿನಲ್ಲಿಯೂ ಇಟೆಲಿ ಜರ್ಮನಿಯಂತಹ ಫೆಸಿಸ್ಟ್ ರಾಜ್ಯಭಾರವು ಸ್ಥಾಪಿಸಲ್ಪಡುವ ದಿನವು ಬಹಳ ದೂರವಿರಲಾರದು ಮುಸಲೋನಿಯವರೇ ಸ್ಪಷ್ಟಪಡಿಸಿರುವಂತೆ, ಆಗ ಭೂ ಮಧ್ಯ ಸಾಗರದ ಬಾಗದಲ್ಲೆಲ್ಲಾ ಫೆಸಿಸ್ಟರ ಕೈಯೇ ಮೇಲಾಗುವುದು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಪ್ರಬಲ ಘೋರಣೆ ವಹಿಸದಿದ್ದ ಪಕ್ಷದಲ್ಲಿ ಇಡೀ ಯುರೋಪಿನಲ್ಲೇ ಫೆಸಿಸ್ಟ್ ಡಿಕ್ಟೇಟರುಗಳ ಪ್ರಭಾವ ದಿನೇದಿನೇ ಹೆಚ್ಚುತ್ತಾ ಹೋಗಿ ಶಾಂತಿ ಭಂಗಕ್ಕೆ ಕಾರಣವಾಗುವದೆಂಬುದರಲ್ಲಿ ಸಂದೇಹವೇ ಇಲ್ಲ

**VACANCY.**

Applications are invited from candidates belonging to the Mahammadan community possessing oriental titles diploma in Vidwan under Regulation 7-A (Sanskrit and Malayalam) for the post of a combined Sanskrit and Malayalam Pandit in Board High School Kasargod on a pay of Rs 45-2/2-75. The vacancy is a permanent one. Application with the diploma and certificates in original should reach this office on or before 26 9 1937.

(*Sd*) **B M. Hegde,**

*President Dt Bo l S k mer*

# ಸಮಾಚಾರ ಸಂಗ್ರಹ: ಚೀನಾ ಜಾಪಾನ್ ಯುದ್ಧ, ಬ್ರಿಟಿಷ್ ರಾಯಭಾರಿಯಮೇಲೆ ಗುಂಡೆಸೆತ, ಜಾಪಾನಿಗೆ ಮುಂಗೋಲಿಯಾನರ ಸಹಾಯ, ಅಂಡಮಾನಿನ ಮುಷ್ಕರ.

## ಚೀನೀ ಜಾಪಾನ್ ಯುದ್ಧ ಚೀನೀಯರನ್ನು ಸಂಪೂರ್ಣ ಬಗ್ಗುಬಡಿಯಬೇಕೆಂದು ದೃಢ ನಿರ್ಧಾರ

ಇದೇ ತಾ. ೨೩ರಲ್ಲಿ ಚೀನಿಯರ ತುಪಾಕಿಗಳು ಎಡೆಬಿಡದೆ ಗುಂಡು ಹಾರಿಸಿದರೂ ಲಕ್ಷಿಸದೆ ಜಾಪಾನರು ತಮ್ಮ ಯುದ್ಧ ಹಡಗುಗಳಿಂದ 50,000 ಸೈನಿಕರನ್ನು ಶಾಂಘಾಯಿ ಬಳಿ ಇಳಿಸಿರುವರು. ಈ ಸಂದರ್ಭದಲ್ಲಿ ಚೀನೀ ವಿಮಾನಗಳು ಬೊಂಬೆಸೆದ ಪರಿಣಾಮವಾಗಿ ಜಾಪಾನ ಹಡಗವೊಂದು ಮುಳುಗಿ ಹೋಗಿರುವುದು. ಶಾಂಘಾಯಿಯ ನಾನ್ಕಿಂಗ್ ರಸ್ತೆಯ ಮೇಲೆ 2 ಬೋಂಬುಗಳು ಬಿದ್ದು ಸ್ಫೋಟವಾಗಿ 175 ಮಂದಿ ಕೊಲ್ಲಲ್ಪಟ್ಟು 475 ಮಂದಿ ಗಾಯಗೊಂಡಿರುವರು. ತಾ. ೨೪ರಲ್ಲು ಶಾಂಘಾಯಿಯಲ್ಲಿ ಜಾಪಾನರು ಎಲ್ಲಾ ಕಡೆಗಳಲ್ಲಿಯೂ ಚೀನಿಯರ ಮೇಲೇರಿ ಹೋಗಿ ಭೀಷಣ ಹೋರಾಟ ನಡೆಯಿತು. 18,000 ವಿದೇಶಿಯರು ಇಷ್ಟರವರೆಗೆ ಶಾಂಘಾಯಿ ಬಿಟ್ಟು ಹೋಗಿರುವರು.

ಉತ್ತರ ಚೀನದ ಚಹಾರ್ ಪ್ರಾಂತದ ಮುಖ್ಯ ಪಟ್ಟಣವಾದ ಕಲಗನನ್ನು ಜಾಪಾನರು ವಶಪಡಿಸಿಕೊಂಡು ನಾನ್ಕೋ ಕಣಿವೆಯ ಬಳಿ ಆವರಿತವಾಗಿರುವ 50,000 ಸೈನಿಕರ ಮೇಲೇರಿ ಹೋಗಿರುವರು. ಚೀನೀಯ ಕಡೆಯ ವಾರ್ತೆಯ ಮೇರೆಗೆ, ಜಾಪಾನರು ಇದೇ ತಾ. ೨೫ರಲ್ಲು 5,000 ಸೈನಿಕರನ್ನು ಪೂಸಂಗಿನಲ್ಲಿ ಇಳಿಸಿದಾಗಿ ಅವರೆಲ್ಲಾ ಚೀನೀಯರಿಂದ ಕೊಲ್ಲಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಜಾಪಾನರು ಹೆಚ್ಚೆಚ್ಚು ಸೇನೆಯನ್ನು ಶಾಂಘಾಯಿಯ ಸುತ್ತು ಮುತ್ತಲಲ್ಲಿ ಇಳಿಸಿ ಚೀನೀಯರನ್ನು ಮುತ್ತುವ ಹಂಚಿಕೆ ಮಾಡುತ್ತಿದ್ದಾರೆ. ಇದಕ್ಕಾಗಿ ಚೀನೀ ಸೈನಿಕರು ಸ್ವಲ್ಪ ಹಿಂದೆ ಸರಿದಿರುತ್ತಾರೆ ಶಾಂಘಾಯಿಯ ಬಳಿ 1000 ಮೈಲುಗಳ ವರೆಗಿನ ಸಮುದ್ರ ಭಾಗದೊಳಗೆ ಚೀನೀಯರ ಹಡಗಗಳು ಪ್ರವೇಶಿಸದಂತೆ ಜಾಪಾನ ಯುದ್ಧನಾವೆಗಳು ಮುತ್ತಿಗೆ ಹಾಕಿರುತ್ತವೆ. ವಿದೇಶೀಯ ಹಡಗಗಳನ್ನು ಮಾತ್ರ ಒಳಗೆ ಬರಬಿಡಲಾಗುವುದು. ಉತ್ತರ ಚೀನದ ಟ್ಸೆಂಟ್ಸಿನ ದಕ್ಷಿಣದಲ್ಲಿ ಚಂಪಾ್ಕ ಎಂಬಲ್ಲಿ ಭೀಷಣ ಯುದ್ಧ ಪ್ರಾರಂಭವಾಗಿರುತ್ತದೆ. ಈ ಭಾಗದಲ್ಲಿ 1,30,000 ಜಾಪಾನ್ ಸೈನಿಕರಿರುತ್ತಾರೆ. ಚೀನೀ ಸೈನಿಕರು 1,90,000 ಮಂದಿ ಇರುತ್ತಾರೆ.

## ಬ್ರಿಟಿಷ್ ರಾಯಭಾರಿಯ ಮೇಲೆ ಗುಂಡೆಸೆತ.

ಇದೇ ತಾ. 26 ರಲ್ಲು ಚೀನದ ಬ್ರಿಟಿಷ್ ರಾಯಭಾರಿಯಾದ ಸರ್ ಹುಗೆಸ್ಸನರು ನಾನ್ಕಿಂಗಿನಿಂದ ಶಾಂಘಾಯಿಗೆ ಮೋಟರ್ ಕಾರಿನಲ್ಲಿ ಹೋಗುತ್ತಿದ್ದಾಗ ಜಾಪಾನ್ ವಿಮಾನುಗಳು, ಚೀನೀ ಸರಕಾರದ ಪ್ರೆಸಿಡೆಂಟರಾದ ಚ್ಯಾಂಗ್ ಕೈ ಶೆಕ್ಕರು ಹೋಗುವುದೆಂದು ಮೋಟಾರ್ ಕಾರಿನ ಮೇಲೆ ಗುಂಡೆಸೆದು ಸರ್ ಹುಗೆಸ್ಸನರ ಬೆನ್ನಿಗೆ ಗುಂಡು ತಾಗಿ ಬಹಳ ಪೆಟ್ಟಾಗಿರುವುದು. ಬೆನ್ನೆಲುಬು ಮುರಿದುಹೋಗಿರುವುದಿಲ್ಲ. ಸರ್ ಹುಗಸ್ಸನರು ಕೂಡಲೆ ಶಾಂಘಾಯಿಯ ಆಸ್ಪತ್ರೆಗೊಯ್ಯಲ್ಪಟ್ಟಿರುವರು. ಸುದೈವದಿಂದ ಅವರು ಪ್ರಾಣಾಪಾಯದಿಂದ ಪಾರಾಗಿರುವರು.

## ಜಾಪಾನರಿಗೆ ಮಂಗೋಲಿಯಾನರ ಸಹಾಯ

ಇದೇ ತಾ. ೨೬ರಲ್ಲು ನಾನ್ಕೋ ಕಣಿವೆಯಲ್ಲಿ ಇನ್ನರ್ ಮಂಗೋಲಿಯದ 30,000ಸೈನಿಕರು ಜಾಪಾನರೊಂದಿಗೆ ಸಹಕರಿಸಿ ಚೀನೀಯರನ್ನು ಸೋಲಿಸಿರುವರು. ಇನ್ನರ್ ಮಂಗೋಲಿಯದವರು ಮಂಗೂಕೋ ಎಂಬ ಸ್ವತಂತ್ರ ರಾಜ್ಯಸ್ಥಾಪನೆ ಮಾಡಲು ಜಾಪಾನು ಸಹಾಯಮಾಡುವ ಭರವಸೆಯಿಂದ ಜಾಪಾನರ ಕಡೆಗೆ ಸೇರಿರುದಾಗಿದೆ. ಜಾಪಾನ್ ಬೇಂಕಿನವರು, ಮದ್ದು ಗುಂಡುಗಳ ತಯಾರಿಸುವ ಕಾರ್ಖಾನೆಗಳವರಿಗೆ 30 ಮಿಲ್ಯಯೆನ್ ಎಡ್ವಾನ್ಸ್ ಕೊಟ್ಟಿರುವರು. ಜಾಪಾನೀ ಜಲಯಾನಗಳು ಇಷ್ಟರ ವರೆಗೆ 115ಚೀನೀ ವಿಮಾನಗಳನ್ನು ನಾಶಮಾಡಿರುವವೆಂದೂ, 66ವಿಮಾನಗಳನ್ನು ನೆಲಕ್ಕಿಳಿಸಿರುವವೆಂದೂ ಜಾಪಾನರ ಕಡೆಯ ಸುದ್ದಿ. ಜಾಪಾನರ ಕಡೆಯ 16ವಿಮಾನಗಳು ಮಾತ್ರ ನಾಶವಾಗಿವೆಯಂತೆ.

ಚೀನಿಯರು 16ದಿನಗಳ ವರೆಗೆ ನಾನ್ಕೋ ಕಣಿವೆಯಲ್ಲಿ ವೀರಾವೇಶದಿಂದ ಕಾದಾಡಿ ಕಡೆಗೆ ತಾ. 37ರಲ್ಲು ಹಿಂದೆ ಸರಿದಿರುವರು. ಜಾಪಾನರು ಅತ್ಯಾಧುನಿಕ ಯುದ್ಧೋಪಕರಣಗಳಿಂದ ಸನ್ನದ್ಧರಾಗಿರುವರು. ತಾ. 27ನೇ ರಾತ್ರಿ ಜಾಪಾನ ವಿಮಾನಗಳು ನಾನ್ಕಿಂಗಿನ ಮೇಲೆ ವಿಮಾನಧಾಳಿ ನಡಿಸಿ ಬೋಂಬೆಸೆದು 40 ಮಂದಿ ಕೂಲಿ ಕೆಲಸಗಾರರು ಕೊಲ್ಲಲ್ಪಟ್ಟಿರುವರು. ಟುಂಗ್ಚೋ ಎಂಬ ಸ್ಥಳದ ಬಳಿ ಜಾಪಾನೀ ಯುದ್ಧ ಹಡಗವೊಂದು ಚೀನೀ ಹಡಗವನ್ನು ಮುಳುಗಿಸಿರುವುದು.

ಸರ್ ಹುಗೆಸ್ಸನರ ಮೇಲೆ ಜಾಪಾನ ವಿಮಾನಗಳು ಗುಂಡೆಸೆದ ಕುರಿತು ಲಂಡನಿನ ಜಾಪಾನ ರಾಯಭಾರಿಯು ಇಂಗ್ಲೆಂಡಿನ ವಿದೇಶ ಮಂತ್ರಿಗಳ ಬಳಿಗೆ ಹೋಗಿ ವಿಷಾದ ಸೂಚಿಸಿರುವರು. ಬ್ರಿಟಿಷ್ ಸರಕಾರವು ಈ ಕುರಿತು ಸರಿಯಾದ ವಿಚಾರಣೆ ನಡಿಸುತ್ತಿರುವುದು. ಇಂಗ್ಲೆಂಡಿನ ಪತ್ರಿಕೆಗಳು ಜಾಪಾನರ ಅತ್ಯಾಚಾರದ ಕುರಿತು ಸಿಟ್ಟುತಾಳಿ ಜಾಪಾನಿನ ಅನ್ಯಾಯವಾದ ಆಕ್ರಮಣವನ್ನೇ ನಿಷೇಧಿಸಿರುವವು.

ರಶ್ಯವು ಚೀನಕ್ಕೆ ಒಳಗಿಂದೊಳಗೆ ಸಹಾಯಮಾಡುತ್ತಿರುವುದೆಂದು ಜಾಪಾನು ಆರೋಪಿಸಿ, ಕಮ್ಯೂನಿಸ್ಟನ್ನು ಚೀನದಿಂದ ಅಣಗಿಸುವುದಕ್ಕೂ ತಾನು ಯುದ್ಧ ಹೂಡಿರುವುದೆಂದು ಹೇಳತೊಡಗಿರುವುದು. ಜರ್ಮನಿಯು ಇದನ್ನು ಸಮರ್ಥಿಸಿರುವುದು. ಚೀನವು ಇನ್ನು ಮುಂದೆ ಜಾಪಾನಿನೊಡನೆ ಎಂದೆಂದಿಗೂ ಯುದ್ಧ ನಡಿಸದ ಹಾಗೆ ಅದನ್ನು ಸದೆಬಡೆದುಬಿಡಬೇಕು. ಆ ಮೊದಲು ಯಾವ ತರದ ಸಂಧಿ ಪ್ರಸ್ತಾಪವೂ ಸಾಧ್ಯವಿಲ್ಲೆಂದು ಜಾಪಾನಿನ ಪ್ರಧಾನ ಮಂತ್ರಿಗಳು ಹೇಳಿರುವರು. ಈ ಯುದ್ಧವು ಇನ್ನೊಂದು ವರ್ಷದ ವರೆಗೂ ನಡೆಯಬಹುದೆಂದು ಅಂದಾಜುಮಾಡಲಾಗಿದೆ. ಜಾಪಾನೀ ಯುದ್ಧ ವಿಮಾನಗಳು ಇನ್ನು ಮುಂದೆ ಕಾಂಟಿಂಗ್ ಮತ್ತು ಕ್ಯಾಂಟನಿನ ಮೇಲೆ ಧಾಳಿ ನಡಿಸಲಿರುವವೆಂದು ತಿಳಿದು ಬರುತ್ತದೆ. ಚಹಾರಿನಲ್ಲಿ ಜಾಪಾನರು ಮೊಂಗೋಲಿಯಾನ ಸೈನಿಕರ ಸಹಾಯದಿಂದ ಚೀನೀಸೈನಿಕರನ್ನು ಪರಾಜಯಗೊಳಿಸಿರುವರು.

## ಅಂಡಮಾನಿನ ಮುಷ್ಕರ

ಅಂಡಮಾನಿನ ಕೈದಿಗಳು ತಮ್ಮ ಉಪವಾಸ ದೀಕ್ಷೆ ನಿಲ್ಲಿಸದೆ ಅವರನ್ನು ಹಿಂದು ದೇಶಕ್ಕೆ ತರುವ ಕುರಿತು ಆಲೋಚಿಸಲು ಸಾಧ್ಯವಿಲ್ಲೆಂದು ಇಂಡಿಯಾ ಸರಕಾರವು ಪ್ರಕಟಗೊಳಿಸಿರುವುದು. ಉಪವಾಸ ದೀಕ್ಷೆ ಹಿಡಿದವರಲ್ಲೊಬ್ಬನು ಮೃತನಾಗಿರುವನೆಂದೂ ಇನ್ನು ಕೆಲವರು ವಿಷಮಾವಸ್ಥೆಯಲ್ಲಿರುವರೆಂದೂ ಖಾಸಗಿಯಾಗಿ ಬಂದಿರುವ ವರ್ತಮಾನದಿಂದ ತಿಳಿದು ಶ್ರೀ ಶರಶ್ಚಂದ್ರ ಭೋಸರು ಬಂಗಾಳ ಸರಕಾರದೊಡನೆ ಆ ಕುರಿತು ಪ್ರಶ್ನಿಸಲು ಅವರು ಯಾವ ಉತ್ತರವನ್ನೂ ಕೊಡದುದರಿಂದ ತನ್ನ ಪಕ್ಷೀಯರು ಮತ್ತು ಇತರ ಕೆಲಮಂದಿಯೊಂದಿಗೆ ಬಂಗಾಳ ಎಸೆಂಬ್ಲಿಯಿಂದ ಹೊರಹೋದರು ಡಿಲ್ಲಿ ಎಸೆಂಬ್ಲಿಯಲ್ಲಿಯೂ ಅಂಡಮಾನ್ ಕೈದಿಗಳನ್ನು ಹಿಂದೂ ದೇಶಕ್ಕೆ ತರುವ ಕುರಿತು ಚರ್ಚಿಸಲು ತಂದ ನಿಲುವಳಿ ಸೂಚನೆಯು ಮಂಜೂರಾಗಿ ಸರಕಾರದ ಘೋರಣೆಯು ನಿಷೇಧಿಸಲ್ಪಟ್ಟಿರುವುದು ಅಂಡಮಾನ್ ಕೈದಿಗಳಿಗಾದರೂ ಈಗ ಹಿಂಸೆಯಲ್ಲಿ ವಿಶ್ವಾಸವಿಲ್ಲೆಂಬುದನ್ನು ಅವರೇ ವಿದಿತಪಡಿಸಿರುವರು. ಅವರು ಉಪವಾಸ ನಿಲ್ಲಿಸಬೇಕೆಂದು ಒತ್ತಾಯಮಾಡಿ ಗಾಂಧಿಜಿಯವರು ಜರೂರು ಸಂದೇಶವೊಂದನ್ನು ಅಂಡಮಾನಿಗೆ ಕಳುಹಿಸಿರುವರು. ಇಂಡಿಯಾ ಸರಕಾರವು ಮೊದಲು, ಬಂಗಾಳ ಸರಕಾರವು ಒಪ್ಪಿದರೆ ತಮಗೆ ಅಂಡಮಾನ್ ಕೈದಿಗಳನ್ನು ಹಿಂದೂದೇಶಕ್ಕೆ ತರಲು ಆಕ್ಷೇಪವಿಲ್ಲೆಂದು ಹೇಳಿದ್ದು ಈಗ ಅದಕ್ಕೆ ವಿರುದ್ಧವಾದ ಹೇಳಿಕೆಯನ್ನು ಎಸೆಂಬ್ಲಿಯಲ್ಲಿತ್ತುದರ ಕುರಿತು ಎಸೆಂಬ್ಲಿ ಮೆಂಬರರು ಚರ್ಚಿಸಲಿರುವರು.


ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ--- ಗುಡಪಿಪ್ಪಲಿ (ಲಿವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಪ್ರಭಾ ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚಿಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

# ಶ್ರೀಮತಿ ಕಮಲಾದೇವಿಯರ ಸಂಚಾರ

ಶ್ರೀಮತಿ ಕಮಲಾದೇವಿಯರು ಕಳೆದ ತಾ. ೨೬ನೇ ಸಂಜೆ ಶ್ರೀ ಕೆ ಕೆ. ಶೆಟ್ಟಿ ಮತ್ತು ಶ್ರೀ. ಸುಬ್ಬಣ್ಣ ಶೆಟ್ರೊಂದಿಗೆ ಕುಂದಾಪುರಕ್ಕೆ ತೆರಳಿದರು. ಸಂಜೆ ನರಿಬೀಣದಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು ಶ್ರೀ. ಗೋಪಾಲಕೃಷ್ಣ ಕಮ್ತಿಯವರ ಕೇಳಿಕೆ ಮೇರೆಗೆ ಶ್ರೀಮತಿಯವರು, ಕಾಂಗ್ರೆಸಿನ ಈಗಿನ ಧೋರಣೆ, ಈಗಣ ಸಾಂಪತ್ತಿಕ ವ್ಯವಸ್ಥೆಯಿಂದಾಗುವ ಹಾನಿ, ಬಡಜನರು ಪಡುವ ಕಷ್ಟ, ಅವರ ನಿವಾರಣೆಗಾಗಿ ಪ್ರಯತ್ನಿಸುವ ಆವಶ್ಯಕತೆಯ ಕುರಿತು ಮಾತಾಡಿದರು ಶ್ರೀ ಕೆ ಕೆ ಶೆಟ್ರು, ಈಗಣ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣವಿತ್ತರು ಶ್ರೀ ಕೆ ಕೋಟ್ಯಣ್ಣ ಶೆಟ್ರು ಎಲ್ಲರಿಗೂ ವಂದನೆಯನ್ನರ್ಪಿಸಿದರು. ರಾತ್ರಿ ಕೆಲಮಂದಿ ತರುಣರೊಡನೆ ಮಾತಾಡಿದರು. ಬೆಳಿಗ್ಗೆ ಕುಂದಾಪುರ ಕರ್ನಾಟಕ ಸಂಘದ ಹೋಲಿನಲ್ಲಿ, ಯುವಕ ಚಳವಳವು ಯಾವ ರೀತಿಯಲ್ಲಿ ಕೆಲಸ ಮಾಡಬೇಕು; ಅದೇಕೆ ಸ್ವತಂತ್ರವಾಗಿರಬೇಕೆಂದಲ್ಲಾ ವಿವರಿಸಿ, ಸಮತಾವಾದದ ತತ್ವಗಳನ್ನು ನಿರೂಪಿಸಿದರು. ಶ್ರೀ. ಕೆ ಕೆ. ಶೆಟ್ಟರು ಶ್ರೀಮತಿಯವರ ಇಂಗ್ಲಿಷ್ ಭಾಷಣದ ಸಾರಾಂಶವನ್ನು ಕನ್ನಡದಲ್ಲಿ ಹೇಳಿದರು. ಶುಕ್ರವಾರ ಮಧ್ಯಾಹ್ನ ಬೈಂದೂರಿಗೆ ತೆರಳಿ ಅಲ್ಲಿ ದೊಡ್ಡ ಸಾರ್ವಜನಿಕ ಸಭೆಯೊಂದು ನಡೆಯಿತು ಶ್ರೀ ಬಿ ಸುಬ್ಬಣ್ಣ ಶೆಟ್ರು ಕಾಂಗ್ರೆಸಿನ ಕಾರ್ಯಕ್ರಮ ಮತ್ತು ಸಮತಾವಾದದ ತತ್ವಗಳನ್ನು ವಿವರಿಸಿ ಮಾತಾಡಿದರು. ಶ್ರೀ. ಕೆ. ಕೆ ಶೆಟ್ರು ಕಾಂಗ್ರೆಸ್ ಮಂತ್ರಿಮಂಡಲದ ಮುಂದಿರುವ ತೊಡಕುಗಳನ್ನು ವಿವರಿಸಿದರು. ಶ್ರೀಮತಿ ಕಮಲಾದೇವಿಯರು, ಈಗಣ ಸಮಾಜ ವ್ಯವಸ್ಥೆಯ ಅನ್ಯಾಯವನ್ನೆತ್ತಿ ಹೇಳಿ, ಅದು ಬಡಬಗ್ಗರ ಪ್ರಾಣಹೀರುವಂತಹದೆಂದೂ, ಬಡಜನರೇ ಜಾಗ್ರತರಾಗಿ ಸ್ವಾಭಿಮಾನಿಗಳಾದರೆ ಮಾತ್ರ ಅದನ್ನು ಕಿತ್ತು ಹಾಕಬಹುದೆಂದೂ ಹೇಳಿದರು ಬೈಂದೂರು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ. ಜನಾರ್ದನ ರಾಯರು ಎಲ್ಲರಿಗೂ ವಂದನೆಯನ್ನರ್ಪಿಸಿದರು. ಆ ಮೇಲೆ ಬೈಂದೂರು ಸರ್ಕಲಿನಿಂದ ಶ್ರೀ ಸುಬ್ಬಣ್ಣ ಶೆಟ್ರು ಡಿಸ್ಟ್ರಿಕ್ಟ್ ಬೋರ್ಡಿಗೆ ಉಮೇದ್ವಾರರಾಗಿ ನಿಲ್ಲಬೇಕೆಂಬ ಸೂಚನೆಯು ಮಂಜೂರಾಯಿತು. ಶ್ರೀಮತಿ ಕಮಲಾದೇವಿಯರು ಅಂದು ಸಂಜೆ ಉಪ್ಪುಂದಕ್ಕೆ ಬಂದು ಅಲ್ಲಿ ಬಡಜನರ ಸಂಕಷ್ಟ ನಿವಾರಣೆಯ ಕುರಿತು ಮಾತಾಡಿದರು. ಶ್ರೀ ಕೆ. ಕೆ. ಶೆಟ್ರೂ, ಸುಬ್ಬಣ್ಣ ಶೆಟ್ರೂ, ಕಾಂಗ್ರೆಸನ್ನು ಬಲಗೊಳಿಸುವ ಕುರಿತು ಭಾಷಣವಿತ್ತರು. ಶನಿವಾರ ಬೆಳಿಗ್ಗೆ ಕುಂದಾಪುರದಲ್ಲಿ ಕೆಲಮಂದಿ ತರುಣರೊಡನೆ ಮಾತಾಡಿದರು. ಸಂಜೆ ಕುಂದಾಪುರ ಕರ್ನಾಟಕ ಸಂಘದ ಕಾರ್ಯದರ್ಶಿಗಳಲ್ಲೊಬ್ಬರಾದ ಕುಂದಾಪುರ ಹ್ಯಾಸ್ಕೂಲಿನ ಪಂಡಿತ ಶ್ರೀ. ಕುಪ್ಪಣ್ಣಾಚಾರ್ಯರು ಸಭಿಕರಿಗೆ ಶ್ರೀಮತಿ ಕಮಲಾದೇವಿಯರ ಮತ್ತು ಶ್ರೀ. ಕೆ. ಕೆ ಶೆಟ್ರ ಪರಿಚಯಮಾಡಿಕೊಟ್ಟರು. ಆ ಮೇಲೆ ಶ್ರೀ. ಕೆ. ಕೆ. ಶೆಟ್ರು ಸಾಹಿತ್ಯ ಮತ್ತು ಸಮಾಜದ ಕುರಿತು ಭಾಷಣವಿತ್ತು ಇಂದಿನ ಕನ್ನಡ ಸಾಹಿತ್ಯದ ದೋಷಗಳು ಕೆಲವನ್ನೆತ್ತಿ ಹೇಳಿ ಸಾಹಿತ್ಯಕ್ಕೂ ಸಮಾಜಕ್ಕೂ ಇರುವ ನಿಕಟಸಂಬಂಧದ ಆವಶ್ಯಕತೆಯನ್ನು ವಿವರಿಸಿದರು.

**ಬಸ್ರೂರಲ್ಲಿ ಸಾರ್ವಜನಿಕ ಸಭೆ.**

ಶ್ರೀಮತಿ ಕಮಲಾದೇವಿಯರು ಶ್ರೀಗಳಾದ ಕೆ ಕೆ. ಶೆಟ್ರು ಮತ್ತು ಬಿ ಸುಬ್ಬಣ್ಣ ಶೆಟ್ರೊಂದಿಗೆ ಶನಿವಾರ ರಾತ್ರಿ ಬಸ್ರೂರಿಗೆ ಹೋಗಿ ಅಲ್ಲಿ ಶ್ರೀ. ಬಿ. ಸಿ ಮಂಜಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ದೊಡ್ಡ ಸಾರ್ವಜನಿಕ ಸಭೆಯೊಂದು ನಡೆಯಿತು. ಶ್ರೀ ಕೆ. ಕೆ. ಶೆಟ್ರು ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಮಾತಾಡಿದರು. ಶ್ರೀಮತಿ ಕಮಲಾದೇವಿಯರು ಕಾಂಗ್ರೆಸನ್ನು ನಿಜವಾದ ಜನಸಾಮಾನ್ಯ ಸಂಸ್ಥೆಯಾಗಿ ಮಾಡಬೇಕಾದರೆ ಜನಸಾಮಾನ್ಯರ ಕೈಗೆ ಅದರ ಮುಂದಾಳುತ್ವ ಹೋಗಬೇಕೆಂದು ದೀರ್ಘ ಭಾಷಣವಿತ್ತರು. ಶ್ರೀ ಸುಬ್ಬಣ್ಣ ಶೆಟ್ರು ಸಮತಾವಾದದ ಕುರಿತು ಮಾತಾಡಿದರು ಆ ಮೇಲೆ ಬಸ್ರೂರು ಯುವಕ ಸಂಘದ ಆಫೀಸಿನಲ್ಲಿ ಕೆಲವು ತರುಣರು ಸೇರಿದಾಗ ಶ್ರೀಮತಿಯವರು ಸಮತಾವಾದದ ತತ್ವಗಳನ್ನು ವಿವರಿಸಿ ಹೇಳಿ ಕಲವು ಪ್ರಶ್ನೆಗಳಿಗೆ ಉತ್ತರವಿತ್ತು ಆ ಮೇಲೆ ಸಮತಾವಾದಿ ತಂಡವೊಂದನ್ನು ಸ್ಥಾಪಿಸಿದರು.

ಶನಿವಾರ ರಾತ್ರಿ ಬಸ್ರೂರಿನಲ್ಲಿ ಉಳಿದು ಶ್ರೀಮತಿಯವರೂ ಕೆ. ಕೆ ಶೆಟ್ರೂ ಆದಿತ್ಯವಾರ ಬೆಳಿಗ್ಗೆ ಕುಂದಾಪುರಕ್ಕೆ, ಅಲ್ಲಿಂದ ಹಂಗಾರಕಟ್ಟೆಗೆ ಹೋಗಿ ಶ್ರೀ ವಿಠಲ ನಾಯ್ಕರೇ ಮೊದಲಾದವರಿಂದ ಸ್ವಾಗತೀಕರಿಸಲ್ಪಟ್ಟರು. ಇಲ್ಲಿಗೆ ಶ್ರೀ. ಮಂಜುನಾಥ ನಾಯ್ಕರೂ ಬಂದಿದ್ದರು. ಉಪಾಹಾರ ಮುಗಿಸಿದ ಮೇಲೆ ಸಾರ್ವಜನಿಕ ಸಭೆಯೊಂದು ನಡೆಯಿತು ಶ್ರೀ ಕೆ ಕೆ ಶೆಟ್ರು ಮತ್ತು ಮಂಜುನಾಥ ನಾಯ್ಕರು ಕಾಂಗ್ರೆಸು ಅಧಿಕಾರ ಸ್ವೀಕರಿಸಿದುದರಿಂದುಂಟಾಗಿರುವ ವಿದ್ಯಮಾನಗಳನ್ನು ವಿವರಿಸಿದ ಮೇಲೆ ಶ್ರೀಮತಿಯವರು, ಜನಸಾಮಾನ್ಯರೇ ಕಾಂಗ್ರೆಸನ್ನು ಬಲಗೊಳಿಸಿ ಆ ಮೂಲಕ ತಮ್ಮ ಸಂಕಷ್ಟಗಳನ್ನು ನಿವಾರಿಸಿ ಕೊಳ್ಳಬೇಕು ಅದು ಕೇವಲ ಸುಶಿಕ್ಷಿತರ ಪದವೀಧರರ ಗೊಂಬೆಯಾಗಿರಬಾರದೆಂದು ಹೇಳಿದರು. ಶ್ರೀ. ವಿಠಲ ನಾಯ್ಕರು ಶ್ರೀಮತಿಯವರಿಗೆ ವಂದನೆಯನ್ನರ್ಪಿಸಿ ಎಲ್ಲರೂ ಅವರ ಬೋಧನೆಯಂತೆ ನಡೆಯಬೇಕೆಂದು ಕೇಳಿಕೊಂಡರು ಶ್ರೀಮತಿಯವರು ಹಂಗಾರಕಟ್ಟೆಯಿಂದ ದೋಣಿಗಳ ಮಾರ್ಗವಾಗಿ ಬಾರಕೂರಿಗೆ ಹೋದರು. ಅಲ್ಲಿಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮಿ ಜೋನ್ ಪಿ. ಸಿಕೇರರ ಅಧ್ಯಕ್ಷತೆಯಲ್ಲಿ ದೊಡ್ಡ ಸಾರ್ವಜನಿಕ ಸಭೆಯೊಂದು ನಡೆಯಿತು. ಶ್ರೀ. ಕೆ ಕೆ. ಶೆಟ್ರು ಸಭಿಕರಿಗೆ ಶ್ರೀಮತಿಯವರ ಪರಿಚಯ ಮಾಡಿಕೊಟ್ಟು ಸ್ವರಾಜ್ಯ ಸಮರವನ್ನು ಭಾರದಿಂದ ಮುಂದೊತ್ತಲು ಮಾಡಬೇಕಾದ ಸಿದ್ಧತೆಯ ಕುರಿತು ಮಾತಾಡಿದರು ಶ್ರೀಮತಿಯವರು, ಕಮಿಟಿಗಳು ಕೇವಲ ಕಾಗದದ ಕಮಿಟಿಗಳಾಗದೆ ಜೀವಂತ ಕಮಿಟಿಗಳಾಗಿರಬೇಕು, ಅವರಲ್ಲಿ ಹಳ್ಳಿಗರು, ಬೇಸಾಯಗಾರರು, ಮಜೂರರೇ ಮೊದಲಾದವರು ಸೇರಿ ಆ ಮೂಲಕ ತಮ್ಮ ಕಷ್ಟನಿವಾರಿಸಲೆತ್ನಿಸಬೇಕು. ಈಗಣ ಸಮಾಜ ವ್ಯವಸ್ಥೆಯು ಅನ್ಯಾಯಯುದ್ಧ ಹೆಚ್ಚು ಕೆಲಸ ಮಾಡುವವರೇ ಹೆಚ್ಚು ಕಷ್ಟಪಡುವರು. ಅದು ಹೋಗಬೇಕು. ಮಾನವನಾಗಿ ಹುಟ್ಟಿದ ಪ್ರತಿಯೊಬ್ಬನಿಗೂ ಸುಖಜೀವನಾನುಕೂಲತೆ ದೊರೆಯುವಂತಾಗಬೇಕೆಂದು ಸಮತಾವಾದದ ತತ್ವಗಳನ್ನು ವಿವರಿಸಿದರು. ಶ್ರೀ. ಮಂಜುನಾಥ ನಾಯ್ಕರು ಕಾಂಗ್ರೆಸ್ ಕಮಿಟಿಗೆ ಮೆಂಬರರಾಗುವ ಆವಶ್ಯಕತೆಯ ಕುರಿತು ಮಾತಾಡಿದರು ಆ ಮೇಲೆ ಅಧ್ಯಕ್ಷರು ಎಲ್ಲರಿಗೂ ವಂದನೆಯನ್ನರ್ಪಿಸಿ ಸಭಾಂತ್ಯವಾಯಿತು. ಶ್ರೀಮತಿಯವರು ಶ್ರೀ. ಗೋಪಾಲಕೃಷ್ಣ ಕಾಮತರಲ್ಲಿ ಕೆಲ ಸಮಯ ವಿಶ್ರಮಿಸಿ ಭೋಜನ ತೀರಿಸಿ ಬ್ರಹ್ಮಾವರಕ್ಕೆ ಬಂದರು

ಶ್ರೀ. ಮಂಜುನಾಥನಾಯ್ಕ್ ಮತ್ತು ಶ್ರೀ ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೆಯರು ಕಳೆದ ಗುರುವಾರ ಕೋಟಕ್ಕೆ ಹೋಗಿ ಕಾಂಗ್ರೆಸ್ ಕಮಿಟಿಯನ್ನು ಬಲಗೊಳಿಸಿರುವರು. ಶ್ರೀ. ಮಂಜುನಾಥ ನಾಯ್ಕರು ಆದಿತ್ಯವಾರ ಬ್ರಹ್ಮಾವರದಿಂದ ಪೇತ್ರಿ ಕೊಕ್ಕರ್ಣೆ ಪೆರ್ಡೂರ ಕಡೆಯಲ್ಲಾ ಹೋಗಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ ಬಲಪಡಿಸುವ ಕೆಲಸಮಾಡುತ್ತಿರುವರು.

'ಭಾರತ ಸೇನೆಯನ್ನು ಚೀನಕ್ಕೆ ಕಳುಹಿಸಿದುದಕ್ಕಾಗಿ ತಮ್ಮ ನಿಷೇಧವನ್ನು ವ್ಯಕ್ತಪಡಿಸಿದ

**ಪಂ ಜವಾಹಿರಲಾಲ ನೆಹರು.**


ಸಸಮಯ ಹಣ ಸಂಪಾದಿಸಿರಿ"

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡಿಯುತ್ತಿರುವರು

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**


## •: ಕಿಡಿಗಳು :•

ನವಯುಗವು ಹದಿನೇಳನೆ ವಯಸ್ಸಿಗೆ ಕಾಲಿಡುವ ಹೊಸ ವರ್ಷದಿಂದ ಏನಾದರೂ ಬರೆಯಬೇಕೆಂದು ನನ್ನ ಆಶೆ ಆದರೆ ಬರೆಯುವವರೇ ಬರೆದುದನ್ನು ಓದುವವರಿಲ್ಲದಿರುವಾಗ ಏನಾದರೂ ಬರೆದುದನ್ನು ಓದುವವರಿದ್ದಾರೆಯೇ ಎಂಬ ಸಂದೇಹ

x x x

ಇದ್ದುದನ್ನು ಇದ್ದಂತೆ ಹೇಳುವ, ಹೊಳೆದುದನ್ನು ಹೊಳೆದಂತೆ ಬರೆಯುವ ಧೈರ್ಯವು ಕೆಲವೇ ಪತ್ರಿಕೆಗಳಿಗಿದೆ. ಇದರಲ್ಲಿ ನವಯುಗಕ್ಕೆ ಪ್ರಥಮ ಸ್ಥಾನ ಸಿಗಬೇಕಾಗಿದೆ. ನಾನಾದರೂ ನವಯುಗದ ಧ್ಯೇಯಕ್ಕನುಸಾರವಾಗಿಯೇ ಬರೆಯಬೇಕಾಗಿದೆಯಲ್ಲಾ?

x x x

ಆದರೆ ನನಗೆ ಅಂತಹ ಧೈರ್ಯ ಅಷ್ಟಿಷ್ಟೆ' ಹಾಗೂ ಹೀಗೂ ಮಾಡಿ, ಮನಸ್ಸು ಗಟ್ಟಿಮಾಡಿ ಕಂಡುದನ್ನು ಕಂಡಂತೆ ಹೇಳುವ ಸಾಹಸಕ್ಕೆ ಕೈಹಾಕತೊಡಗಿರುವೆ ಆದುದರಿಂದಲೇ ಈ ಹಾರುವ ಚೂರುಗಳಿಗೆ ಕಿಡಿಗಳೆಂದು ನಾಮಕರಣಮಾಡಿಕೊಂಡಿದ್ದೇನೆ

x x x

ಈ ಕಿಡಿಗಳು ಯಾರ ಮನಸ್ಸನ್ನೂ ನೋಯಿಸುವ ಉದ್ದೇಶದಿಂದ ಚಿಮ್ಮುವವುಗಳಲ್ಲ ಯಾರನ್ನೂ ಉದ್ದೇಶಿಸಿಯೂ ಹೊರಹೊಮ್ಮುವವುಗಳಲ್ಲ ಆದರೆ 'ಇದು ನನ್ನದೇ ಟೊಪ್ಪಿ'ಯೆಂದು ತಲೆಗಿಟ್ಟು ಕೊಂಡರೆ ಮಾತ್ರ ಕಿಡಿ ಕಿಡಿಯಾಗಿಯೇ ಉಂಡೀತು

x x x

ವಾಚಕರಾದರೂ ಯಾರ್‍ಯಾರ ಟೊಪ್ಪಿಯನ್ನು ಯಾರ್‍ಯಾರ ತಲೆಗಿಟ್ಟು ಚಂದನೋಡುವ ಹುಮ್ಮಸಕ್ಕೆ ಬಲಿಯಾಗಬಾರದು ಆದರೆ ತಮ್ಮ ತಲೆಗೆ ಸರಿಯಾದ ಟೊಪ್ಪಿಯಿದೆಯೋ ಎಂದು ನೋಡುವ ಸ್ವಾತಂತ್ರ್ಯವನ್ನು ಬಿಟ್ಟುಕೊಡಬಾರದು

x x x

ನನ್ನೀ ಕಿಡಿಗಳು ಬರಿಯ ಕರಿಮಣಸುಗಳು ಖಾರ ಇದ್ದರೂ ಬಹುದು ಇಲ್ಲದಿದ್ದರೂ ಬಹುದು ಆದರೆ ಪರೀಕ್ಷಾರ್ಥವಾಗಿ ಕಣ್ಣಿಗೆ ಹಚ್ಚಿನೋಡುವ ಗೋಜಿಗೆ ಹೋಗದಿದ್ದರೆ ಮೊದಲೇ ವಿನಂತಿಸುವ ಈ ಸೀರಿಕೆ 'ಮಧುವೆ ಮುಗಿದ ಚಪ್ಪರಕ್ಕಾಯಿತು' ಎಂಬಂತೆ ಉದ್ಭವಾಗಿ ಬೆಳೆಯಿತು

x x x

ನಮ್ಮ ಜಿಲ್ಲೆಯ ಕೆಲವು ಕಾಂಗ್ರೆಸ್ ಲೀಡರುಗಳು ಈಗ ಒಳ್ಳೇ ಪ್ರಚಾರಕಾರ್ಯಕ್ಕೆ ತೊಡಗಿದ್ದಾರೆ, ಗೊತ್ತೇ? ಹಳ್ಳಿ ಹಳ್ಳಿಗಳಿಗೆ ಹೋಗಿ ಭಾರೀ ಪ್ರಚಾರ ಮಾಡುತ್ತಿದ್ದಾರೆ. ಅದೇನೆಂದು ಗೊತ್ತೇ? ಒಬ್ಬರು ಇನ್ನೊಬ್ಬರನ್ನು ತೆಗಳುವ ಪ್ರಚಾರಕಾರ್ಯ' ತಾವು ನಿರ್ದೋಷಿಗಳೆಂದು ರುಜುಗೊಳಿಸುವ ಪ್ರಚಾರಕಾರ್ಯ

x x x

ಕೆಲವು ಮುಖಂಡರಿಗೆ ತಮ್ಮ ಸಮಯವು ಮುಗಿತ್ತೆಂತ ಎಣಿಕೆಯುಳ್ಳದ್ದೆಂದು ಅವರೆಣಿಕೆ ಆದರೆ ಉದ್ಯಮಶೀಲರೆಲ್ಲರ ಹೊತ್ತೂ ಮುಗಿತ್ತಂತೆಂದು ನನ್ನೆಣಿಕೆ 'ಲೋಕೋ ಭಿನ್ನರುಚಿಃ'

x x x

ಆದರೆ ಒಂದು ಸ್ವಾರಸ್ಯ— ಅನಾವಶ್ಯಕವಾದ ಮಾತುಕತೆಯಿಂದಲೇ—ಇನ್ನೊಬ್ಬರ ತೆಗಳಿಕೆಯ ಪ್ರಸಂಗದಿಂದಲೇ ಮತ್ತಿನಂತಹ ಹೊತ್ತು ವ್ಯಯವಾಗುತ್ತಿದೆ'

x x x

ನಮ್ಮಲ್ಲಿ ಕೆಲವರಿಗೆ ಒಂದು ಅಭ್ಯಾಸ ಇನ್ನೊಬ್ಬರ ಕಾಲಡಿಯ ಸಾಸಿವೆ ಕಾಳನ್ನಷ್ಟೇ ಭೂತಗನ್ನಡಿಯಲ್ಲಿಟ್ಟು ನೋಡಿ, ಅನ್ಯರಿಗೂ ತೋರಿಸಿ, ಆನಂದಪಡುವುದು. ತಮ್ಮ ಕಾಲಡಿಯ ಕೊಳೆತ ಕುಂಬಳದ ಗೊಡವೆಯೇ ಅವರಿಗಿಲ್ಲ' ಇದೀಗ ಲೋಕರೂಢಿ.

x x x

ಕೆಲವರಿಗೆ ಒಂದು ಹುಚ್ಚು ಹಿಡಿದಿದೆ. (ಹುಚ್ಚು ಅಂದರೆ ಮರುಳು ಅಲ್ಲ ಚಟ) ಅದೇನು ಬಲ್ಲಿರಾ' ಹೇಗಾದರೂ ಪ್ರಸಿದ್ಧಿಗೆ ಬರಬೇಕೆಂಬುದು ಅದಕ್ಕಾಗಿ ಏನಾದರೊಂದು ಸಭೆಮಾಡುವುದು, ಸಂಘ ಮಾಡುವುದು (ಹೆಸರಿಗೆ ಮಾತ್ರ) ರಿಪೋರ್ಟನ್ನು ಪೇಪರಿಗೆ ಕಳುಹಿಸುವುದು ಕಡೆಗೆ ಹೆಸರು ಅಚ್ಚಾಗಿ ಬಿದ್ದರೆ ಕಡೆಗೆ ಸಂಸ್ಥೆಯೂ ಇಲ್ಲ, ಸಭೆಯೂ ಊಹುಂ ಇದಕ್ಕೆ ಹೇಳುವುದು 'ಯೇನ ಕೇನ ಪ್ರಕಾರೇಣ ಪ್ರಸಿದ್ಧಪುರುಷೋ ಭವ' ಎಂದು

x x x

ಇಂದಿಗೆ ಸಾಕು ಕಡೆಗೆ ಉತ್ತರ ಬರೆದರೆ ಜಾಗೆ ಇಲ್ಲವೆಂದು ಸಂಪಾದಕರು ನನ್ನ ಮೇಲೂ ಕತ್ತರಿ ಪ್ರಯೋಗ ಮಾಡಿಯಾರು, ಬರುವ ವಾರ ಆದರೆ ಬರುತ್ತೇನೆ

—"ಪರಶು"

# ಗ್ರಾಮೋದ್ಧಾರವೇ ದೇಶೋದ್ಧಾರ

ನಾವು ವಾಸಿಸುವ ಹಳ್ಳಿಯೇ ನಮ್ಮ ಮನೆಯು. ನಮ್ಮ ಮನೆಯಲ್ಲಿ ನಮಗೆ ಸರಿಯಾದ ವ್ಯವಸ್ಥೆಯನ್ನಿಡಲು ಅಸಾಧ್ಯವೆಂದಾದರೆ, ದೇಶೋದ್ಧಾರದ ಕೆಲಸದಲ್ಲಿ ನಾವು ಭಾಗಿಗಳಾಗುವುದೆಂದರೆ ತಿರುಕನ ಕನಸಿನಂತೆಯೇ ಸರಿ. ಹೀನಾವಸ್ಥೆಯಲ್ಲಿದ್ದ ಹಳ್ಳಿಗಳನ್ನೊಳಗೊಂಡಿರುವ ದೇಶವು ಬೆನ್ನೆಲುಬು ಮುರಿದ ಮನುಷ್ಯನಂತೆಯೇ ಸರಿ. ಗ್ರಾಮೋದ್ಧಾರವು ಆಯಾ ಊರಿನ ಪಂಚಾಯತ ಬೋರ್ಡಿನವರಿಂದಲೂ ಕಾಂಗ್ರೆಸ್ ಸಮಿತಿಯವರಿಂದಲೂ ಆಗಲು ಸಾಧ್ಯವಿದೆ. ಪಂಚಾಯತ ಬೋರ್ಡಿನವರೂ ಕಾಂಗ್ರೆಸ್ ಮೆಂಬರರೂ ಪ್ರಯತ್ನ ಪಟ್ಟರೆ ಪಂಚಾಯತ ಬೋರ್ಡಿಗೆ ಗ್ರಾಮೋದ್ಧಾರಕ್ಕಾಗಿ ಇನ್ನೂ ಸ್ವಲ್ಪ ಹಣ ಸಿಕ್ಕುವ ಸಂಭವವಿದೆ. ಯಾವುದೆಂದರೆ-ಕೆಲವು ಊರುಗಳಲ್ಲಿ ದೊಡ್ಡ ದೊಡ್ಡ ದೇವಾಲಯಗಳಿರುವವು. ದೇವರಿಗೆ ಹಣದ ಅಗತ್ಯವಿಲ್ಲವೆಂದೂ ಹಣದಿಂದ ದೇವರು ಎಷ್ಟು ಮಾತ್ರಕ್ಕೂ ತೃಪ್ತಿಹೊಂದಲಿಕ್ಕಿಲ್ಲವೆಂದೂ ಜ್ಞಾನಿಗಳು ಹಲವು ರೀತಿಯಿಂದ ಬೋಧಿಸಿದರೂ ಕೇಳದೆ ಮೂಢ ಜನರು ಅಂಧ ಶ್ರದ್ಧೆಯಿಂದ ಹಣವನ್ನು ತಂದು ಸುರಿಸುವರು ಇಂಥಾ ಹಣವು ಸಾರ್ವಜನಿಕ ಕೆಲಸದ ಯಾವುದೊಂದು ಉಪಯೋಗಕ್ಕೂ ಬೀಳುವುದಿಲ್ಲವೆಂದು ನನ್ನ ಭಾವನೆ ಈ ವಿಷಯದಲ್ಲಿ ಗ್ರಾಮಸ್ಥರೂ ಪಂಚಾಯತ ಬೋರ್ಡಿನವರೂ ಆದಷ್ಟು ಪ್ರಯತ್ನಪಟ್ಟು, ದೇವಾಲಯಗಳು ಪಂಚಾಯತ ಬೋರ್ಡಿನ ಆಡಳಿತೆಯೊಳಗಿರುವಂತೆ ಮಾಡಬೇಕು; ಮತ್ತು ಅವುಗಳ ಉತ್ಸವಾದಿಗಳನ್ನು ಮಾಡಿಸುವುದಕ್ಕೋಸ್ಕರ ಗ್ರಾಮದ ಸಭ್ಯ ಗೃಹಸ್ಥರ ಪೈಕಿ ಒಬ್ಬನನ್ನು ನೇಮಿಸಬೇಕು. ಹೀಗೆ ಚುನಾಯಿಸಲ್ಪಟ್ಟವನು ಜನಪ್ರೀತಿಯಾಗುವಂತೆ ಕೆಲಸಗಳನ್ನು ಮಾಡಿಸಿದರೆ ಮೂರು ವರ್ಷಗಳ ತನಕ ಮಾಡಿಸುವ ಅಧಿಕಾರ ಅವನಿಗಿರಬೇಕು. ಒಂದು ವೇಳೆ ಸಭ್ಯರೀತಿಯಿಂದ ವರ್ತಿಸದಿದ್ದರೆ ಅವನನ್ನು ಆ ಕೆಲಸದಿಂದ ತಪ್ಪಿಸುವ ಅಧಿಕಾರವು ಪಂಚಾಯತ ಬೋರ್ಡಿನವರಿಗಿರಬೇಕು. ದೇವಾಲಯಗಳಿಗೆ ಅಗತ್ಯವಿರುವ ಕೆರೆ, ಬಾವಿ, ಗುಡಿ, ಗೋಪುರಗಳನ್ನು ಕಟ್ಟಿಸಲಿಕ್ಕೆ ಪಂಚಾಯತ ಬೋರ್ಡಿನವರ ಅನುಮತಿ ಪಡೆಯಬೇಕು. ಆಯ ವ್ಯಯದ ಪಟ್ಟಿಯನ್ನು ವರ್ಷಕ್ಕೊಂದಾವರ್ತಿ ಪಂಚಾಯತ ಬೋರ್ಡಿನವರಿಗೆ ತೋರಿಸತಕ್ಕದ್ದು. ಹಿಂದು, ಮುಸಲ್ಮಾನ, ಕ್ರೈಸ್ತ ಬಂಧುಗಳು ಪರಸ್ಪರ ಅನ್ಯೋನ್ಯರಾಗಿರಬೇಕಾದರೆ ಮಸೀದಿ ಇಗರ್ಜಿಗಳೂ ಪಂಚಾಯತ ಬೋರ್ಡಿನ ಅಧಿಕಾರಕ್ಕೊಳಪಟ್ಟು ಸಮಾನ ದೃಷ್ಟಿಯಿಂದ ನಡೆಸಲ್ಪಡಬೇಕು. ಮತ್ತು ಊರಿನ ಪೋಸ್ಟಾಫೀಸು ಕಾಂಗ್ರೆಸ ಕಚೇರಿ, ಪಂಚಾಯತ ಬೋರ್ಡು ಆಫೀಸು ಮೊದಲಾದುವನ್ನು ಬೇರೆಯವರ ಕಟ್ಟೋಣದಲ್ಲಿ ನಡಿಸಿ ಅವರಿಗೆ ಬಾಡಿಗೆ ಕೊಡುವುದಕ್ಕಿಂತ ಊರಿನ ದೇವಾಲಯದ ಗೋಪುರಗಳಲ್ಲಿಯೇ ನಡಿಸಿ ಬಾಡಿಗೆಯ ಹಣವನ್ನು ಉಳಿಸಿ ಗ್ರಾಮೋದ್ಧಾರಕ್ಕಾಗಿ ವ್ಯಯಮಾಡುವುದು ಒಳ್ಳೇದು. ಹೀಗೆ ಪಂಚಾಯತ ಬೋರ್ಡಿನಲ್ಲಿ ಹಣವು ಜಮೆಯಾದರೆ ಕಡಿಮೆ ಎಂದರೆ ಒಂದು ರೂಪಾಯಿಯ ವರೆಗೂ ಜವಾಬ್ದಾರಿಯ ಮೇಲೆ ಬಡವರಿಗೆ ಸಾಲಕೊಟ್ಟು ಸಹಕರಿಸಬೇಕು. ಫಿಶ್ಯರೀಸ್ ಸ್ಕೂಲುಗಳಲ್ಲಿ ಮಕ್ಕಳಿಗೆ ಫಿಶ್ಯರೀಸ್ ಸಾಯನ್ಸ್ ಎಂಬ ಪಾಠವು ಹೇಗೆ ಬೋಧಿಸಲ್ಪಡುತ್ತದೋ ಹಾಗೆಯೇ ಹಳ್ಳಿಯ ಶಾಲೆಗಳಲ್ಲಿ ಕೃಷಿಯ ಕುರಿತು ಬಾಲಕರಿಗೆ ಬೋಧಿಸುವುದಕ್ಕೋಸ್ಕರ ಕೃಷಿಯ ಕುರಿತು ಚೆನ್ನಾಗಿ ಅರಿತು ಯೋಗ್ಯತಾಪತ್ರವನ್ನು ಪಡೆದಿರುವ ಒಬ್ಬ ಉಪಾಧ್ಯಾಯರನ್ನು ನೇಮಿಸಬೇಕು. ಮೊದಲು ನಮ್ಮ ಹಳ್ಳಿಗರು ಸ್ವಲ್ಪ ಮಾತ್ರದಲ್ಲಿಯೇ ತೃಪ್ತರಾಗುತ್ತಿದ್ದರು. ಆದರೆ ಈಗಿನವರು ಹಾಗಲ್ಲ ಯಾವುದಾದರೊಂದು ಕೆಲಸಕ್ಕೆ ಕೈಹಚ್ಚಬೇಕಾದರೆ ಮೊದಲು ಚಾ, ಯಾ ಕಾಫಿ ಕುಡಿಯುವುದೇ ಮನುಷ್ಯನ ಕರ್ತವ್ಯವೆಂದು ತಿಳಿದುಕೊಂಡಿರುವರು. ಚಾ, ಕಾಫಿ, ಬೀಡಿ ಮೊದಲಾದ ದುರಭ್ಯಾಸಗಳು ಬಡಕೂಲಿಯಲ್ಲಿಯೂ ನೆಲೆಸಿರುವದರಿಂದ, ಮೊದಲು ನಮ್ಮ ಹಿರಿಯರು ಮಾಡುತ್ತಿದ್ದ ಕೆಲಸದ ಅರ್ಧವನ್ನು ಕೂಡಾ ಮಾಡಲು ಅಸಮರ್ಥರಾಗಿರುವರು ಮಾತ್ರವಲ್ಲದೆ ಮದುವೆ ಮುಂಜಿಗಳಲ್ಲಿ ಆಡಂಬರಕ್ಕಾಗಿ ವಿಶೇಷ ಹಣವನ್ನು ವ್ಯಯಿಸಿ ಸಾಲಕ್ಕೆ ಗುರಿಯಾಗುತ್ತಾರೆ. ಇದಕ್ಕಾಗಿ ಊರಿನ ಕಾಂಗ್ರೆಸ್ ಸದಸ್ಯರು ನೆರೆಗ್ರಾಮಗಳಿಗೆ ಹೋಗಿ ದುರಭ್ಯಾಸ, ಬಾಲ್ಯ ವಿವಾಹ, ವರದಕ್ಷಿಣೆ, ಆಡಂಬರ ಮೊದಲಾದುವುಗಳಿಂದ ಆಗುವ ಹಾನಿಯ ಕುರಿತೂ ಚಿಕಿತ್ಸದ ಕುರಿತೂ ಭಾಷಣ ಕೊಡಬೇಕು. ಮತ್ತು ತಾವು ಹಳ್ಳಿಗಳಿಗೆ ಹೋಗಿ ಜನರ ಹಿತಕ್ಕಾಗಿ ಮಾಡಿದ ಕೆಲಸಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಹೀಗೆ ಪ್ರಕಟಿಸುವುದರಿಂದ ಬೇರೆ ಊರಿನ ಸದಸ್ಯರಿಗೂ ಉಮೇದು ಬರುವುದು. ಮೇಲಿನ ಎಲ್ಲಾ ತರದ ಕ್ರಮಗಳನ್ನು ಆಚರಣೆಗೆ ತಂದರೆ ನಿಜವಾಗಿಯೂ ಗ್ರಾಮೋದ್ಧಾರವಾಗುವದರಲ್ಲಿ ಸಂದೇಹವಿಲ್ಲ. ಹೀಗೆ ಗ್ರಾಮ ಸೇವೆಯನ್ನು ಮಾಡಿ ದೇಶದ ಉನ್ನತಿಯನ್ನು ಬಯಸುವ ಯುವಕರು ಈಶ್ವರನ ಆಜ್ಞೆಯನ್ನು ಪೂರೈಸಿದಂತಾಗುವುದು

ಕೆ. ಕೃಷ್ಣ ಶೆಟ್ಟಿ, ಕಾಪು.




ನಮ್ಮ ಭಾರತಮಾತಾ ಗೋವನ್ನು ಸುತ್ತಣಿಂದಲೂ ಹೇಗೆ ಕರೆಯುತ್ತಿದ್ದಾರೆ ನೋಡಿರಿ.

## ಹೊಸ ವರ್ಷಕ್ಕೊಂದು ಕಿರಿಯ ಕಾಣಿಕೆ

ಜನರೇನ ಬಯಸುವರು?—
ಉದ್ಧಾರ ಮಾರ್ಗ...?
ಅದನೆಲ್ಲ ಅರುಹುವುದೆ
'ನವಯುಗ'ದ ಹಾರ್ದ!
ಅನುದಿನವು ಓದಿದರೆ
ನಮಗಿಹುದು ಹರ್ಷ,
'ನವಯುಗ'ವು ಬನುರಲಿ
ನೂರಾರು ವರ್ಷ!

'ರಾಮು'


## WANTED

A mistress or a master as a private teacher for some children, of a landlord in a country house. Apply with copies of testimonials stating the minimum pay expected to—
"D"
C/o Navayuga, Udipi.

## THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:—*

**KOCHIKAR BROTHERS,**
*Madras Branch Secretaries.*

BRANCHES AT:

| | | |
|---|---|---|
| P. B 337 Mount Road, Madras. | Visveswarapuram Circle Bangalore City | Soumyalayam Puthiyara, Calicut |
| Car Street, Mangalore | Udipi, S. India | Charni Road, Bombay No. 4. |

INSPECTORATE OFFICE AT:

1. Ottapalam, Malabar District 2 Central Station Road, Trivandrum

## EVIDENCE
OF
## SECURITY & STABILITY
FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

| | | |
|---|---|---|
| Total Assets Over | ... | Rs 80,00,000 |
| Life Funds Over | ... | Rs. 68,00,000 |
| Premium Income Over | ... | Rs 22,54,000 |
| Interest Income | ... | Rs 3,16,000 |
| Claims Paid | ... | Rs. 5,75,000 |

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

# ಜಿಲ್ಲಾ ಬೋರ್ಡು ಚುನಾವಣೆ

## ಹಳ್ಳಿಗರಿಗೂ ನವತರುಣರಿಗೂ ಪ್ರಾತಿನಿಧ್ಯ ದೊರೆಯಬೇಕು

ಜಿಲ್ಲಾ ಬೋರ್ಡು ಚುನಾವಣೆಯು ಸಮೀಪಿಸಿತು. ಕಾಂಗ್ರೆಸ್ ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಂಡಮೇಲೆ ನಮ್ಮ ಜಿಲ್ಲೆಯಲ್ಲಿಯೂ ಕಾಂಗ್ರೆಸ್ ಉಮೇದ್ವಾರರನ್ನು ಆರಿಸುವ ಭರದಲ್ಲಿರುವುದು ನಮ್ಮ 'ಜಿಲ್ಲಾ ಪಾರ್ಲಿಮೆಂಟರಿ ಬೋರ್ಡ್'. ಜಿಲ್ಲೆಯ ವಕೀಲರುಗಳೋ, ಡಾಕ್ಟರುಗಳೋ, ಅಥವಾ ಇನ್ನಿತರ ಮುಖಂಡರುಗಳೋ, ತಮ್ಮ ಐಶ್ವರ್ಯದ ಪದವಿಯ ಯಾ ತನ್ನ ಪುರಾತನ ಉಮೇದ್ವಾರಿಕೆಯನ್ನು ಮುಂದರಿಸಲೆತ್ನಿಸುವ ಆದೊಂದು ಹಿರಿಯರ ಕಟ್ಟುನಿಟ್ಟಿಗೆ ಒಳಪಟ್ಟವರೋ ಹಿಂದೆಂದೂ ತಾವು ಸ್ವಪ್ನದಲ್ಲಿಯೂ ಭಾವಿಸದ ಕಾಂಗ್ರೆಸ್ ಪ್ರತಿಪಾದಕತ್ವದ ಸೋಗಿನಿಂದಲೋ ಉಮೇದ್ವಾರರಾಗಿ ಮುಂದೆ ಬರುತ್ತಿರುವರು. ಆದರೆ ಭಾರತದ ೩೫೦ ಮಿಲಿಯಕ್ಕಿಂತಲೂ ಮಿಕ್ಕಿದ ಬಡರೈತರಗೋಳು ಭಾರತೀಯರ ಏಕಮೇವ ಸಂಸ್ಥೆಯಾದ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯನ್ನೇ ಚಡಪಡಿಸುತ್ತಿರುವ ಈ ಕಾಲದಲ್ಲೂ ಆ ಗೋಳಾಟವು ನಮ್ಮ ಜಿಲ್ಲೆಯ 'ಇಲೆಕ್ಷನ್ ಕಾಂಗ್ರೆಸ್ಸನ್ನು' ನಿದ್ದೆಯಿಂದಬ್ಬಿಸಲಿಲ್ಲವೆಂಬುದು ವಿಷಾದಕರ ಸಂಗತಿ. ಪದವೀ ಸ್ವೀಕಾರವನ್ನು ಕೈಗೊಂಡಾಗಿನಿಂದಲೂ ಕಾಂಗ್ರೆಸ್ ಮಂತ್ರಿಗಳ ಪ್ರಥಮ ಗಮನವನ್ನು ಸೆಳೆದಿರುವ ಬಡರೈತರು ಜಿಲ್ಲಾ ಬೋರ್ಡ್‌ಗಳಲ್ಲಿ ನ್ಯಾಯವಾದ ಪ್ರಾತಿನಿಧ್ಯವನ್ನು ಹೊಂದಬೇಕೆಂದು ಚಳವಳಹೂಡುವರಾದರೆ ಅದು ಕಾಂಗ್ರೆಸಿನ ನ್ಯಾಯ, ನೀತಿ, ನಿಯಮಗಳಿಗೆ ವಿರುದ್ಧವಾಗಲಾರದಷ್ಟೆ.

ನಾಗರೀಕತೆಯ ಮುಂಬಾಳುತ್ವವನ್ನು ವಹಿಸಿದ ಪಾಶ್ಚಿಮಾತ್ಯರಾಷ್ಟ್ರಗಳೇ ನವತರುಣರಿಗೆ ರಾಜಕೀಯ ಕ್ಷೇತ್ರದಲ್ಲಿ ಬೇಕಾದಷ್ಟು ಅವಕಾಶವನ್ನು ಕಲ್ಪಿಸಿಕೊಡುವಾಗ ಪಾರತಂತ್ರ್ಯದ ಒಲೆಯಲ್ಲಿ ಸಿಕ್ಕಿಬಿದ್ದು ಸ್ವಾತಂತ್ರ್ಯಕಾಗಿ ಹೆಣಗಾಡುವ ಹಿಂದುಸ್ಥಾನದ ಭವಿಷ್ಯತ್ತು ತರುಣ ಜನಾಂಗದ ಮೇಲಿರುವಾಗ ಆ ಪಲ್ಲವಿಯನ್ನೇ ಸಮಸ್ತ ಮುಖಂಡರೂ ಹಾಡುವಾಗ ದಕ್ಷಿಣ ಕನ್ನಡದ ಜಿಲ್ಲಾ ಬೋರ್ಡಿನಲ್ಲಿ ರೈತತರುಣರಿಗೆ ಬೇಕಾದಷ್ಟು ಎಡೆಯನ್ನು ಕಲ್ಪಿಸಿಕೊಡಬೇಕಾದುದು ತಪ್ಪಾಗುವುದೇನು? ಅಥವಾ ಜಿಲ್ಲಾ ಬೋರ್ಡುಗಳ ಉಮೇದ್ವಾರಿಕೆಯು ಪೇಟೆ ಪಟ್ಟಣಗಳಲ್ಲೇ ವಾಸಿಸುವ ಅಧ್ಯಮಹನೀಯರಿಗೆಂದು ಕಟ್ಟಿಟ್ಟ ಗಂಟೇನು?

ಇಂದು ನಮಗೆ ನಮ್ಮ ಸರಕಾರವು ಬೇಕಾದುದಾದರೂ ಅದು 'ಜನರ, ಜನರಿಂದ ನಡೆಸಲ್ಪಡುವ, ಜನರಿಗಾಗಿರುವ ಸರಕಾರ (Government of the people, by the people, for the people) ಹಾಗೆಂದರೆ ಇಂದಿನ ಭಾರತ ಜನಾಂಗವೆಂದರೆ ಬಹುತೇಕವಾಗಿ ಏಳು ಲಕ್ಷ ಹಳ್ಳಿಗಳಲ್ಲಿರುವ ಬಡರೈತರೆಂದರೆ ಅತಿಶಯೋಕ್ತಿಯಾಗದು. ಹೀಗಿರುವಾಗ ರೈತರ ಹಕ್ಕು ಸಂರಕ್ಷಣೆಗಳನ್ನು ಹಳ್ಳಿಯಲ್ಲಿದ್ದು ಹಳ್ಳಿಯವರೊಡನೆ ಕಲೆತು, ಹಳ್ಳಿಯವನೇ ಆದ ರೈತ ಮೆಂಬರನೊಬ್ಬನು ಸಾಧಿಸಿದಷ್ಟು, ಆವರ ಪ್ರತಿನಿಧಿಯೆನಿಸಿಕೊಂಡ ಪೇಟೆ ಪಟ್ಟಣವಾಸಿಯು ಸಾಧಿಸುವನೆಂದು ನಾನೊಪ್ಪಲಾರೆ. ಹಾಗೂ ಈ ತನಕ ಸಾಧಿಸಿದ್ದೂ ಇಲ್ಲ. ಜಿಲ್ಲಾ ಬೋರ್ಡಿನಿಂದಾದರೂ, ಏನಾದರೂ ಉಪಕಾರ ಅಥವಾ ಉಪದ್ರ ಹೊಂದುವುದಿದ್ದರೆ ಅವರಲ್ಲೂ ಬಹುಮಟ್ಟಿನ ಅಂಶವು ರೈತರಿಗೆಂದೇ ನಾನು ಬಹು ಧೈರ್ಯವಾಗಿ ಹೇಳಬಲ್ಲೆ.

ಯಥಾರ್ಥಸ್ಥಿತಿಯು ಹೀಗಿರುತ್ತಾ ಈ ವಿಷಯಗಳಿಗೆ ಒಂದಕ್ಕೂ ಜಿಲ್ಲಾ ಪಾರ್ಲಿಮೆಂಟರಿ ಬೋರ್ಡ್ ನ್ಯಾಯವಾದ ಗಮನ ಕೊಡದಿದ್ದರೆ, ಕಾಂಗ್ರೆಸನ್ನೇ ಆಶ್ರಯಸ್ಥಾನವೆಂದು ಭಾವಿಸಿದ ಬಡರೈತರ ಕಡೆಗೆ ಅದು ಅಲಕ್ಷ್ಯತೋರಿಸಿದಂತಾಗುವುದು. ಪರಿಣಾಮವು ಇಂತಹಸ್ವರೂಪವನ್ನು ತಾಳಿದರೆ ರೈತರಿಗಾಗಿಯೇ ಹೆಚ್ಚಾಗಿ ಹೆಣಗಾಡುವ ಕಾಂಗ್ರೆಸಿನ ಸ್ಥಾನಮಾನಗಳಿಗೆ ಹೆಚ್ಚಿನಬಲ ಮತ್ತು ಗೌರವ ದೊರೆಯುವದು ಹೊರತು ನಮ್ಮ ಜಿಲ್ಲಾ ಕಾಂಗ್ರೆಸ್ ಇನ್ನೂ ನಮ್ಮ ಜಿಲ್ಲೆಯ ರೈತರ ಮೊರೆಗಳನ್ನು ಅಲಕ್ಷ್ಯಮಾಡಿದರೆ ತ್ರಿಶಂಕು ಅವಸ್ಥೆಯಲ್ಲಿ ಬಿದ್ದು ಗತಿಕಾಣದ ರೈತರು ಮಾನ್ಯ ಪ್ರೊಫೆಸರ್ ರಂಗರವರ ಮನಃಪೂರ್ವಕವಾದ ಅಭಿಪ್ರಾಯದಂತೆ ಕಾಂಗ್ರೆಸ್ಸು ತತ್ವಗಳನ್ನೊಳಗೊಂಡ ರೈತಸಂಘವೊಂದನ್ನು ಪ್ರತ್ಯೇಕವಾಗಿಮಾಡಲು ಎಡೆಗೊಟ್ಟಂತೆ ಅವೇಕೆ ಒದ್ದುದೂಡಿದಂತಾಗುವುದು.

ಆದುದರಿಂದ ನಮ್ಮ ಜಿಲ್ಲಾ ಪಾರ್ಲಿಮೆಂಟರಿ ಬೋರ್ಡಿನವರು ಈ ಸಲದ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಬಹಳ ಜಾಗರೂಕತೆಯಿಂದ ಪ್ರತಿನಿಧಿಗಳಾಗಿ ಮುಂದೆ ಬರುವ ಪೇಟೆ, ಪಟ್ಟಣವಾಸಿಗಳನ್ನೇ ಆರಿಸದೆ ಆದಷ್ಟು ಮಟ್ಟಿಗೆ ಹಳ್ಳಿಯ ರೈತರಿಗೇನೇ ಸಂದರ್ಭವನ್ನು ಉದ್ದೇಶಪೂರ್ವಕವಾಗಿಯಾದರೂ ಒದಗಿಸಿಕೊಟ್ಟು ಅವರನ್ನೆ ಉಮೇದ್ವಾರರಾಗಿ ಆರಿಸಿ ಕಾಂಗ್ರೆಸಿನ ಗೌರವವನ್ನು ಕಾಪಾಡಬೇಕಾಗಿ ಬಹುದೈನ್ಯದಿಂದ ಪ್ರಾರ್ಥಿಸುತ್ತೇನೆ.

ಜತ್ತಪ್ಪ ರೈ.

# ಭಾರತದ ಕೈಗಾರಿಕೆ

## ನಮ್ಮ ಪ್ರೋತ್ಸಾಹವು ಸಾಕಾಗುವುದಿಲ್ಲ.

[ಲೇಖಕ.—ಕೆ. ವಿ. ನರಸಿಂಹಾಚಾರ್ಯ, ಸುಬ್ರಹ್ಮಣ್ಯ]

ಹಿಂದೂದೇಶವು ಕೈಗಾರಿಕೆಯ ಪ್ರಥಮ ಮೆಟ್ಟಲಲ್ಲಿ ಕಾಲಿಟ್ಟಿದೆಯಷ್ಟೆ. ಇಷ್ಟರವರೆಗೆ ನಮ್ಮ ದೇಶದಲ್ಲಿ ಕೈಗಾರಿಕಾ ಪ್ರಪಂಚವು ಬಹಳ ಹೀನಸ್ಥಿತಿಯಲ್ಲಿತ್ತು. ಆದರೂ ನಾವು ಅದರ ಕಡೆಗೆ ಲಕ್ಷ್ಯಕೊಡಲಿಲ್ಲ. ನಾವು ವಿದೇಶೀ ವಸ್ತುಗಳನ್ನೇ ಉಪಯೋಗಿಸುತ್ತಿದ್ದೆವು. ಆ ಸಮಯದಲ್ಲಿ ಹಿಂದೂದೇಶವು ಧನಾಢ್ಯವಾಗಿತ್ತು ಆಗ ಕೈಗಾರಿಕೆ ವೃತ್ತಿಯು ನಮಗೆ ಹೀನಕರವಾಗಿ ತೋರುತ್ತಿತ್ತು.

'ಕೆಟ್ಟ ಮೇಲೆ ನಮಗೆ ಬುದ್ಧಿ ಬಂತು.' ನಮ್ಮಲ್ಲಿರುವ ದನಕನಕಾದಿಗಳನ್ನು ವಿದೇಶೀಯರು ಒಯ್ದರು. ಈಗಲೂ ಒಯ್ಯುತ್ತಿದ್ದಾರೆ ಭಾರತವು ಈಗ ಉಗ್ರವಾದ ಬಡತನದಿಂದ ಕಂಗೆಟ್ಟುಹೋಗಿದೆ. ಇನ್ನು ಸುಮ್ಮನೆ ಔದಾಸೀನ್ಯದಿಂದ ಕುಳಿತರೆ ಹೊಟ್ಟೆಯ ಹಿಟ್ಟಿಗೂ ಧಕ್ಕೆಬಡಿದೀತೆಂದು ಸ್ವಲ್ಪ ಎಚ್ಚತ್ತಿದ್ದೇವೆ.

ಆದರೂ ಇನ್ನೂ ನಮ್ಮಲ್ಲಿ ಹಲವರು ನಾಲ್ಕು ಕಾಸುಇದ್ದವರು, ವಿದೇಶೀ ವಸ್ತುಗಳನ್ನೇ ತರಿಸುತ್ತಿದ್ದಾರೆ. ಸ್ವದೇಶೀಗೆ ಪ್ರೋತ್ಸಾಹವಿಲ್ಲ. ನಮ್ಮ ದೇಶದಿಂದ ವಿದೇಶಕ್ಕೆ ಹರಿಯುವ ಹೊನ್ನಿನಹೊಳೆಗೆ ಭಾರತದಲ್ಲೇ ಆಣೆಕಟ್ಟು ಕಟ್ಟಿ ತಡೆದು ನಿಲ್ಲಿಸಿ ನಮಗೆ ಬೇಕಾದಂತೆ ಉಪಯೋಗಿಸಬಹುದು. ಆದರೆ ಅದು ನಮ್ಮ ಮನಸ್ಸಿಗೆ ಹೊಳೆಯಲಿಲ್ಲ. ನಮಗೊದಗಿರುವ ಬಡತನವು ನಮ್ಮಿಂದಲೇ ಉದ್ಭವವಾಯಿತೆಂದು ಹೇಳಬಹುದು.

ನಮ್ಮ ದೇಶದ ಬಡತನವು ನೀಗಬೇಕಾದರೆ ನಾವು ಸಂಪೂರ್ಣ ವಿದೇಶೀ ಬಟ್ಟೆಗಳನ್ನು ಬಹಿಷ್ಕರಿಸಬೇಕು. ನಾವು ಸ್ವತಃ ದುಡಿಯಬೇಕು. ಬಟ್ಟೆಗಳನ್ನು ನಾವೇ ಕೈಮಗ್ಗದಿಂದಲೇ ನೇಯಬೇಕು. ವಿದೇಶೀಯರ ಮನೋರಂಜನ ವಸ್ತುಗಳಿಗೆ ಮರುಳಾಗಬಾರದು. ನಮಗೆ ಬೇಕಾಗುವ ಹೆಚ್ಚು ಸಾಮಾನುಗಳು ಸ್ವದೇಶದಲ್ಲೇ ತಯಾರಾಗುವಂತೆ ಮಾಡಬೇಕು. ಕೈಗಾರಿಕೆಯೇ ಭಾರತೀಯರ ಜೀವನದ ಮಾರ್ಗದರ್ಶಕವಾಗುತ್ತದೆ.

ಮ|| ಗಾಂಧಿಯವರು 'ನಮ್ಮ ಸ್ವಾತಂತ್ರ್ಯವು ರಾಟೆಯಿಂದ ನೂಲುವ ನೂಲಿನ ತುದಿಯಲ್ಲಿದೆ' ಎಂದಿದ್ದಾರೆ. ಅದು ಅಕ್ಷರಶಃ ನಿಜವಾಗಿದೆ. ಬಟ್ಟೆಯ ವಿಷಯ ಒಂದೇ ಎಂದಲ್ಲ; ಎಲ್ಲವೂ ಹೀಗೆಯೇ ಭಾರತದೇಶವು ಸರ್ವಸಮೃದ್ಧವಾದ ದೇಶ. ಯಾವ ವಿಷಯಕ್ಕೂ ಪರದೇಶಗಳ ಆಶ್ರಯವು ಆಗತ್ಯವಿಲ್ಲ. ಇಂತಹ ಪುಣ್ಯಭೂಮಿಯಲ್ಲಿ ನಾವು ಜನಿಸಿದರೂ ಇದರ ಮಹಿಮೆಯನ್ನು ಅರಿಯಲಿಲ್ಲ.

ನಿಜವಾಗಿ ಹೇಳುವುದಾದರೆ ಒಂದು ಜನಾಂಗದ ಉದ್ಧಾರ–ಅವನತಿಗಳು ಆ ದೇಶದ ಜನರ ವೃತ್ತಿಯಲ್ಲಿ ಸೇರಿಕೊಂಡಿದೆ. ನಮ್ಮ ದೇಶದಲ್ಲಿ, ಹತ್ತಿ, ಸಣಬು(Jute) ಕಾಫಿ, ಹೊಗೆಸೊಪ್ಪು, ರಬ್ಬರು, ಬಾರ್ಲಿ (Barley) ಗೋಧಿ ಕಬ್ಬು ಮೊದಲಾದ ಅನೇಕ ತರದ ಪದಾರ್ಥಗಳು ಬೆಳೆಯುತ್ತವೆ. ಇವೆಲ್ಲ ಕೈಗಾರಿಕೆಗೆ ಅತ್ಯವಶ್ಯಕವಾದ ಉಪಕರಣಗಳು.

ಭಾರತೀಯರು ಸ್ವದೇಶೀ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತಾ ಬಂದಂತೆ ಭಾರತವು ತಾನಾಗಿಯೇ ಉದ್ಧಾರವಾಗುವುದು. ಇದಕ್ಕೆ ಸರಕಾರವೂ ಪ್ರಯತ್ನಿಸುವುದು ಅಗತ್ಯ. ಸ್ವದೇಶೀ ವಸ್ತುಗಳಿಗೆ ಸುಂಕ ಕಮ್ಮಿಮಾಡಬೇಕು. ಸಕ್ಕರೆಗೆ ಏರಿಸಿದ ಸುಂಕವನ್ನು ಕಮ್ಮಿ ಮಾಡಬೇಕು. ಇನ್ನು ಮುಂದಕ್ಕಾದರೂ ನಾವು ಕೈಗಾರಿಕೆಗೆ ಇಳಿದರೆ ನಮ್ಮ ಪ್ರಯತ್ನವು ಸಫಲವಾಗದೆ ಇರಲಾರದು. ನಮ್ಮಲ್ಲಿದ್ದ ಹಣಕಾಸುಗಳು ನಮ್ಮಲ್ಲೇ ಉಳಿಯುವುದು. ಮೂವತ್ತೈದುಕೋಟಿ ಭಾರತೀಯರು ಬಡತನದಿಂದ ಮುಕ್ತರಾಗಿ ಪಾರತಂತ್ರ್ಯದಿಂದ ಬಿಡುಗಡೆ ಹೊಂದಿ ನಿತ್ಯ ಸುಖಿಗಳಾಗುವುದರಲ್ಲಿ ಸಂದೇಹವಿಲ್ಲ.

**JOBS FOR UNEMPLOYED RUPEES.**

You know vividly the evils of unemployment. But probably you do not know that unemployed money causes as much poverty and suffering. A bank is an employment agency for rupees. It finds jobs for them and thus contributes to the prosperity of the nation. You can help in this work by investing your savings in the bank.

Resources of A CRORE
ESTD. 1906
CANARA BANK
LIMITED.

ಕರ್ಣಾಟಕದ ಸಾಹಸ! ಕರ್ಣಾಟಕದ ಕೀರ್ತಿ!!

# ಸೇವೆ ಮತ್ತು ಗೆಲುವು

ಸೇವೆಯೇ

# ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿಯ ಪರಮಧ್ಯೇಯ

## ಸೇವೆಯೇ ಅದರ ಗೆಲುವಿನ ಗುಟ್ಟು

**ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು, ಆಡಳಿತ ಮಂಡಳಿಗಿರುವ ಉತ್ಸಾಹವೇ 'ಮೈಸೂರು' ಅಭ್ಯುದಯದ ಜೀವಾಳ.**

**ಕಂಪೆನಿಯು** ಸೇವೆಗಾಗಿಯೇ ನಿರಂತರವೂ ನೂತನ ಮಾರ್ಗಗಳನ್ನು ಹುಡುಕುವುದರಲ್ಲಿಯೂ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಳ್ಳುವುದರಲ್ಲಿಯೂ ನಿರತವಾಗಿದೆ. ಕಂಪೆನಿಯು ನಾಡಿಗರೆಲ್ಲರ ಸಹಾನುಭೂತಿಯನ್ನು ಕೋರಿ, ಅವರಿಂದ ಸೇವೆಗಾಗಿ ಹೆಚ್ಚಿನ ಕರೆ ಬರಲೆಂದು ಆಗ್ರಹಪೂರ್ವಕವಾಗಿ ಬೇಡುವುದು.

**ಅದು ಬಾಳಿರುವುದು ಸೇವೆಯಿಂದ; ಬಾಳುವುದು ಸೇವೆಗಾಗಿಯೇ.**

**— ಇಂದಿನ ಕೆಲವು ಅಂಶಗಳು — ಅಂಕೆಗಳು —**

ಅಧಿಕೃತ ಷೇರು ಬಂಡವಾಳ ರೂ ೩,೦೦,೦೦೦

ಹೊರಹಾಕಿದ ಬಂಡವಾಳ ರೂ. ೨,೦೦,೦೦೦

ಚಂದಾ ಆದ ಬಂಡವಾಳ ರೂ. ೧,೪೯,೬೦೦

ತೆತ್ತ ಬಂಡವಾಳ ರೂ. ೬೫,೦೦೦

ಷೇರುದಾರರ ಮೇಲಣ ನಿಧಿ ರೂ. ೮೪,೯೦೦

ಇಂಡಿಯಾ ಸರಕಾರದ ಠೇವಣಾತಿಯ ಬೆಲೆ ರೂ. ೫೫,೦೦೦

ಜೀವ ವಿಮಾ ನಿಧಿ ರೂ. ೧೩,೨೨೧-೪-೪

ಸಾಧಿಸಿದ ಉದ್ಯಮ ರೂ. ೧೦,೬೭,೪೫೩

ಪೂರ್ಣವಾದ ಉದ್ಯಮ ರೂ. ೭,೬೫,೩೪೫

ಪ್ರೀಮಿಯಂ ಆದಾಯ ರೂ. ೫೫,೨೦೦

**ಆಸ್ತಿ ರೂ. ೧ ಲಕ್ಷಕ್ಕೆ ಏರಿದೆ.**

**ಮೂರನೇ ವರ್ಷದ ಡೈರೆಕ್ಟರುಗಳ ಅಂಗೀಕೃತವಾದ ವರದಿಯ ಕೆಲವು ಮುಖ್ಯಾಂಶಗಳು.**

(೧) ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ೨೦೦ರಷ್ಟು ಏರಿದೆ. (೨) ಹೊಸ ಉದ್ಯಮವು ಶೇಕಡ ೬೫ರಷ್ಟೂ, ಪೂರ್ಣವಾದ ಉದ್ಯಮವು ಶೇಕಡ ೫೩ರಷ್ಟೂ ಏರಿದೆ. (೩) ಷೇರುಗಳು ಸರಿಬೆಲೆಗೆ ಮಾರಾಟವಾಗುತ್ತಿವೆ. (೪) ಹೆಚ್ಚಿಸಿರುವ ಷೇರು ಬಂಡವಾಳಕ್ಕೆ ಚಂದಾ ಕೊಡಲು ಸಾರ್ವಜನಿಕರು ನಾನು ತಾನೆಂದು ಮುಂದೆ ಬಂದಿರುವರು. (೫) ಉದ್ಯಮವು ಅಧಿಕವಾಗುತ್ತಿರುವ ಸಮಯದಲ್ಲಿಯೇ ಖರ್ಚಿನ ಪ್ರಮಾಣವು ತಗ್ಗುತ್ತಲಿದೆ. (೬) ರದ್ದಾದ ಉದ್ಯಮದ ಪ್ರಮಾಣವು ತೀರ ಕಡಿಮೆಯಿದ್ದು, ಸಾಧಿಸಿರುವ ಉದ್ಯಮದ ಶ್ರೇಷ್ಠತರಗತಿಯನ್ನು ಸೂಚಿಸುತ್ತಲಿದೆ. ಹಾಗೂ ಅದರ ಶ್ರೇಷ್ಠತೆಯನ್ನು ಕಂಪೆನಿಯು ಇದುವರೆಗೆ ಭರಿಸಬೇಕಾಗಿ ಬಂದ ಕ್ಲೈಮುಗಳು ಸ್ಥಿರೀಕರಿಸುತ್ತವೆ.

**ಕಾರ್ಯ ಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.**

'ಮೈಸೂರು' **ಆದರ್ಶ ಸಂಸ್ಥಾನದ ಆದರ್ಶ ಜೀವವಿಮಾ ಸಂಸ್ಥೆಯೆನಿಸಿ, ಮೈಸೂರು ದೇಶದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕಾರ್ಯ ನಡೆಯಿಸುತ್ತಿದ್ದಾಗ್ಯೂ ಪ್ರಥಮ ವರ್ಷದಲ್ಲಿಯೇ ಇಡೀ ಕರ್ಣಾಟಕಕ್ಕೇ ಅಭೂತಪೂರ್ವವಾದ ಉದ್ಯಮವನ್ನು ಸಾಧಿಸಿದೆ. ಈ ಕೀರ್ತಿ ಪತಾಕೆ ಹಿಡಿದು—ಈ ಅನುಭವ ಬೆಂಬಲದಿಂದ—ಕರ್ಣಾಟಕದ ಇತರ ಭಾಗಗಳಲ್ಲೂ, ಬ್ರಿಟಿಷ್ ಇಂಡಿಯ, ಬರ್ಮಾ ಮತ್ತು ಸಿಲೋನ್‌ಗಳಲ್ಲೂ, ವಿಜಯಿಯೆನಿಸಲು ಮುಂದಡಿ ಇಟ್ಟಿದೆ.**

**ಬೇಕು!** ಕರ್ಣಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯ ಬರ್ಮಾ ಸಿಲೋನ್‌ಗಳ ಎಲ್ಲ ಪ್ರಾಂತ್ಯಗಳಲ್ಲೂ ಕೇಂದ್ರ ಸ್ಥಳಗಳಲ್ಲೂ ಏಜಂಟರುಗಳೂ, ಸ್ಪೆಷಲ್ ಏಜಂಟರುಗಳೂ, ಚೀಫ್ ಏಜಂಟರುಗಳೂ, ಆರ್ಗನೈಜರುಗಳೂ ಬೇಕು. ಸಂಬಳದ ಮತ್ತು ಕಮಿಷನ್ ಅಥವಾ ಇವೆರಡರ ಮೇಲೂ ಕೆಲಸಮಾಡಲವಕಾಶವುಂಟು. ಪ್ರತಿನಿಧಿಗಳಾಗಲಿಚ್ಛಿಸುವವರು ಕಂಪೆನಿಗೆ ಅವರು ಕೊಡುವ ಉದ್ಯಮದ ಭರವಸೆಯನ್ನೂ ಮತ್ತು ಅವರ ಕಾರ್ಯಕ್ಷೇತ್ರಗಳನ್ನೂ ತಿಳಿಸುವುದು.

**ಹೆಚ್ಚು ವಿವರಗಳಿಗೆ:—**

ಜನರಲ್ ಮ್ಯಾನೇಜರ್,

**ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,**

"ನಾಗೇಶ್ವರ ಬಿಲ್ಡಿಂಗ್ಸ್", ಶ್ರೀ ನರಸಿಂಹರಾಜಾ ರೋಡ್, ಬೆಂಗಳೂರು ಸಿಟಿ.

# ದಕ್ಷಿಣಕನ್ನಡ

## ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

**ಪ್ರೊ. ವಾರ್ಕಿಯವರ ಆಗಮನ—** ಮದ್ರಾಸ್ ಸರಕಾರದ ವಿದ್ಯಾಮಂತ್ರಿಗಳ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಪ್ರೊ ಸಿ ಜೆ ವಾರ್ಕಿಯವರು ಕಳೆದ ತಾ ೨೫ರಲ್ಲಿ ಮಂಗಳೂರಿಗೆ ಚಿತ್ತೈಸಿದರು ಅವರನ್ನು ಇದಿರುಗೊಳ್ಳಲು ಅನೇಕ ಕಾಂಗ್ರೆಸ್ ಅಧಿಕಾರಿಗಳು ರೈಲಿ ಸ್ಟೇಶನಿಗೆ ಹೋಗಿದ್ದರು

**"ವಿದ್ಯಾರ್ಥಿಗಳ ಸಂಘದ ಅವಶ್ಯಕತೆ"—** ತಾ ೨೫ನೇ ಸಾಯಂಕಾಲ ಮಂಗಳೂರಿನ ಟೈನ್ ಮೈದಾನದಲ್ಲಿ ಪ್ರೊ ವಾರ್ಕಿಯವರು ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ 'ವಿದ್ಯಾರ್ಥಿಗಳ ಸಂಘದ ಅವಶ್ಯಕತೆ' ಎಂಬ ವಿಷಯವಾಗಿ ಭಾಷಣ ವಿತ್ತರು. ಪ್ರೊ ವಿ ಜಿ ಜೋಸೆಫರು ಅಗ್ರಾಸನ ವಹಿಸಿದ್ದರು ೧ ವಿದ್ಯಾರ್ಥಿಗಳು ಪರಸ್ಪರ ಮಿತ್ರಭಾವದಿಂದ ವರ್ತಿಸುವುದಕ್ಕೆ ಈ ಸಂಘಗಳು ಸಹಾಯವಾಡುವುವೆಂದೂ, ೨ ಭಾಷಣಾದಿಗಳನ್ನು ಮಾಡಿ ತಮ್ಮ ವಾಕ್ಚಾತುರ್ಯವನ್ನು ಅಭಿವೃದ್ಧಿಪಡಿಸಲ್ಕ ಇವುಗಳಿಂದ ಅನುಕೂಲವಿದೆಯೆಂದೂ, ೩ ಸಂಘಗಳ ಆಡಳಿತವಾಡಿ ಮುಂದಕ್ಕೆ ದೊಡ್ಡ ಸಂಸ್ಥೆಗಳ ಆಡಳಿತ ನಡೆಸುವುದಕ್ಕೆ ಬೇಕಾದ ಅನುಭವ ಪಡೆಯಲು ಅನುಕೂಲವಾಗುತ್ತದೆಂದೂ, ೪ ಜಾತಿಮತ ಭೇದಗಳುಳ್ಳ ಈ ದೇಶದಲ್ಲಿ ಜನತಾ ಐಕ್ಯವನ್ನು ಸ್ಥಾಪಿಸಲು ಇಂತಹ ಸಂಘಗಳು ಅಗತ್ಯವೆಂದೂ ಹೇಳಿ ಸರ್ವರೂ ಸಂಘವನ್ನು ಸೇರಿ ಅದನ್ನು ಬಲಪಡಿಸಬೇಕೆಂದರು. ಅಧ್ಯಕ್ಷರ ಸಮಯೋಚಿತ ಭಾಷಣವಾದ ಮೇಲೆ ಶ್ರೀ ಯು ಜಿ ರಾಯರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು

**ಮದ್ರಾಸ್ ಸರಕಾರದ ವಿದ್ಯಾಪ್ರಸಾರದ ಯೋಜನೆ—** ಮದ್ರಾಸ್ ಸರಕಾರದವರು ಒಂದು ಯೋಜನೆಯನ್ನು ಮಾಡಿರುವರು ಇದನ್ನು ಜಾರಿಮಾಡಬೇಕಾದರೆ ವಿದ್ಯಾಪ್ರಸಾರಕಾರ್ಯದಲ್ಲಿ ನಿರತರಾಗಿರುವ ಮಹನೀಯರ ಅಭಿಪ್ರಾಯಗಳನ್ನು ತಿಳಿಯಲು ಪ್ರೊ ವಾರ್ಕಿಯವರು ಕಳೆದ ತಾ ೨೬ರಲ್ಲಿ ಜಿಲ್ಲಾ ಬೋರ್ಡ ಆಫೀಸಿನಲ್ಲಿ ಒಂದು ಸಭೆ ಜರಗಿಸಿದರು ಅದಕ್ಕೆ ಕಾಲೇಜುಗಳ ಪ್ರಿನ್ಸಿಪಾಲರುಗಳೂ, ಹೈಸ್ಕೂಲು ಹೆಡ್ಮಾಸ್ತರರೂ, ಶಾಲಾ ಮೆನೇಜರರೂ, ಜಿ ಬೋ ಪ್ರೆಸಿಡೆಂಟರೂ, ಮುನಿಸಿಪಲ್ ಅಧ್ಯಕ್ಷರೂ, ಕಮಿಶನರೂ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳೂ ಇನ್ಸ್ಪೆಕ್ಟರರೂ ಬಂದಿದ್ದರು ಅನೇಕ ವಿಷಯಗಳಲ್ಲಿ ಚರ್ಚೆಯು ನಡೆದು ಹೆಚ್ಚಿನವರ ಅಭಿಪ್ರಾಯವನ್ನು ಪ್ರೊ ವಾರ್ಕಿಯವರು ತಿಳಿದುಕೊಂಡರು

**ಶಿಷ್ಟಮಂಡಲ—** ಜಿಲ್ಲಾ ಎಯಿಡೆಡ್ ಶಾಲಾ ಅಧ್ಯಾಪಕರ ಸಂಘದವರೂ ಮತ್ತು ಪಂಡಿತರ ಸಂಘದವರೂ ತಮ್ಮ ಶಿಷ್ಟಮಂಡಲಗಳನ್ನು ಪ್ರೊ ವಾರ್ಕಿಯವರಲ್ಲಿಗೆ ಕಳುಹಿಸಿ ತಮ್ಮ ಸಂಕಷ್ಟಗಳನ್ನು ಹೇಳಿಕೊಂಡರು

**ಉಪನ್ಯಾಸ—** ಮಂಗಳೂರು ನಗರ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಪ್ರೊ ವಾರ್ಕಿಯವರು ಕಾಂಗ್ರೆಸ್ ಸರಕಾರದವರ ಕಾರ್ಯಕ್ರಮದ ಕುರಿತು ಅರ್ಥಗರ್ಭಿತ ಭಾಷಣವಿತ್ತರು ಅದರಲ್ಲಿ ಅತ್ಯಲ್ಪ ಕಾಲದಲ್ಲಿ ಕಾಂಗ್ರೆಸ್ಸಿನವರು ಏನೆಲ್ಲ ಮಾಡಲು ಶಕ್ತರಾದರೆಂಬುದನ್ನು ವ್ಯಕ್ತಗೊಳಿಸಿದರು

**ಸತ್ಕಾರಗಳು—** ಮಂಗಳೂರು ಟೀಚರ್ಸ್ ಗಿಲ್ಡಿನವರು ಪ್ರೊ ವಾರ್ಕಿಯವರಿಗೆ ಒಂದು ಸತ್ಕಾರವನ್ನಿತ್ತರು ಮಂಗಳೂರಿನ ಕೆಥೋಲಿಕರೂ ಸಹ ಪ್ರೊ ವಾರ್ಕಿಯವರಿಗೂ ಶ್ರೀ ಜೆ ಎ ಸಾಲ್ಡಾನರಿಗೂ ಸತ್ಕಾರಗಳನ್ನಿತ್ತು ಮನ್ನಿಸಿದರು

**ಆತ್ಮಹತ್ಯೆ—** ಕಳೆದ ಮಂಗಳವಾರ ದಿನ ಪೂರ್ವಾಹ್ನ ೧೧ ಘಂಟೆಗೆ ಹೂಮಾರ್ಕೆಟ ಬಳಿಯಿರುವ ಬಾವಿಗೆ ಗೌಡಸಾರಸ್ವತ ಬ್ರಾಹ್ಮಣ ವರ್ಗಕ್ಕೆ ಸೇರಿದವರೊಬ್ಬರು ಹಾರಿ ಆತ್ಮಹತ್ಯೆ ಮಾಡಿಕೊಂಡರು. ಕೂಡಲೇ ಅವರನ್ನು ಮೇಲಕ್ಕೆ ತೆಗೆದರೂ ಪ್ರಾಣವು ಹೋಗಿತ್ತು. ಬಡತನವೇ ಈ ಆತ್ಮಹತ್ಯೆಗೆ ಕಾರಣವೆಂದು ಊಹಿಸಲಾಗಿದೆ

---

**ಬ್ರಹ್ಮಾವರ—** ಇಲ್ಲಿನ ಕೊ ಓಪರೇಟಿವ್ ಬ್ಯಾಂಕಿನ ಮಹಾಸಭೆಯು ಕಳೆದ ತಾ ೧೭ರಲ್ಲಿ ಶ್ರೀ ಲಕ್ಷ್ಮೀನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಕೂಡಿತ ಉಡುಪಿಯಿಂದ ಕೊ ಒಪರೇಟಿವ ಇನ್ಸ್ಪೆಕ್ಟರರಾದ ಶ್ರೀ ರಾಘವೇಂದ್ರರಾಯರು ಪ್ರತಿನಿಧಿಯಾಗಿ ಬಂದಿದ್ದರು, ೯ ⅜% ಇದ್ದ ಒಡ್ಡಿಯ ದರವನ್ನು ೮½%ಇಳಿಸುವಂತೆಯೂ ಭೂಮಿ ಅಡಮಾನದ ಮೇಲೆ ೭½% ಸಲೆಯಲ್ಲೂ, ಕ್ಯಾಶ್ ಕ್ರೆಡಿಟ್-ಮೇಲೆ ೮½% ಸಲೆಯಲ್ಲೂ ಸಾಲವನ್ನು ಕೊಡುವ ಪ್ರಾರಂಭ ನಿಶ್ಚಯಿಸಲಾಯಿತು. ಬಾಕಿ ವರ್ಷದ ಮೇನೇಜಿಂಗ್ ಕಮಿಟಿಯು ನೇಮಕವಾಗಿ ಶ್ರೀ ...ಬಳ್ಳಿ ಮಾದವರಾಯರು ಅಧ್ಯಕ್ಷರಾಗಿಯೂ ಶ್ರೀ ರಾಮಕೃಷ್ಣ ಭಟ್ಟರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

**ಶ್ರೀಮತಿ ಕಮಲಾದೇವಿಯರು—** ಶ್ರೀ ಕೆ ಕೆ ಶೆಟ್ಟಿ ಮತ್ತು ಶ್ರೀ ಪಾಂಗಾಳ ಮಂಜುನಾಥ ನಾಯ್ಕರೊಂದಿಗೆ ಕಳೆದ ತಾ ೩೦ನೇ ಸೋಮವಾರ ಅಪರಾಹ್ನ ಘಂಟೆ ೪ಕ್ಕೆ ಬ್ರಹ್ಮಾವರಕ್ಕೆ ಬಂದು ಕಾಂಗ್ರೆಸ್ ಆಫೀಸಿನಿಂದ ಮೆರವಣಿಗೆಯೊಂದು ಮೈದಾನಿಗೆ ಹೋಗಿ ಅಲ್ಲಿ ಶ್ರೀಮತಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು ಶ್ರೀ ಮಂಜುನಾಥ ನಾಯ್ಕರು ಕಾಂಗ್ರೆಸ ಕಮಿಟಿಯನ್ನು ಏರ್ಪಡಿಸುವ ಆವಶ್ಯಕತೆಯ ಕುರಿತು ಮಾತಾಡಿದರು ಶ್ರೀ ಕೆ ಕೆ ಶೆಟ್ಟರು ಇಂಡಿಯಾ ಆಕ್ಟಿನ ಮೋಸಗಳನ್ನೆತ್ತಿ ಹೇಳಿ, ಸಂಪೂರ್ಣ ಸ್ವರಾಜ್ಯವು ಇನ್ನೂ ದೂರವಿದೆಯೆಂದೂ, ಅದಕ್ಕಾಗಿ ಹೋರಾಡಲು ಈಗಲೇ ಸಿದ್ಧತೆಮಾಡಬೇಕೆಂದೂ ವಿನಂತಿಮಾಡಿಕೊಂಡರು ಆ ಮೇಲೆ ಶ್ರೀಮತಿಯವರು, ಕಾಂಗ್ರೆಸನ್ನು ಮಧ್ಯತರಗತಿಯವರ ವಶದ ಳು ತದಿಂದ ಬಿಡಿಸಿ ನಿಜವಾದ ಬಡವರ, ಹಳ್ಳಿಗಳ ಸಂಸ್ಥೆಯನ್ನಾಗಿಮಾಡಬೇಕೆಂದು ಕೇಳಿಕೊಂಡರು ಬ್ರಹ್ಮಾವರ ಕಾಂಗ್ರೆಸ ಕಮಿಟಿಯ ಸೆಕ್ರೆಟರಿಗಳಾದ ಶ್ರೀ ರಾಮನ್ ಗ ಳುಳು...ರವರು ಎಲ್ಲರಿಗೂ ವಂದನೆಯನ್ನರ್ಪಿಸಿದರು

**ಸುರತ್ಕಲ್—** ತಾ ೨೦ ೮ ೩೭ನೇ ಸಾಯಂಕಾಲ ಘಂ ೫ಕ್ಕೆ ಹೊಸಬೆಟ್ಟು, ಇಡ್ಯ ಮತ್ತು ಸುರತ್ಕಲ್ ಗ್ರಾಮಗಳ ಮತದಾರರ ಸಭೆಯು ಇಲ್ಲಿಯ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಡಾ। ಯಂ ಪುರುಷೋತ್ತಮ ಕಮ್ಮತ ಎಲ್ ಎ ಯಂ ಇವರ ಅಧ್ಯಕ್ಷತೆಯಲ್ಲಿ ಜರಗಿ ಕಾಂಗ್ರೆಸ್ ಕಡೆಯಿಂದ ಈ ಸರ್ಕಲಿನ ದ, ಕ ಜಿಲ್ಲಾ ಬೋರ್ಡಿನ ಮೆಂಬರಿಗೆ ಉಮೇದಾರರಾಗಿ ನಿಲ್ಲಲಿರುವ ಶ್ರೀ ಯಚ್ ದಾಮೋದರ ರಾಯರಿಗೆ ಮತದಾರರೆಲ್ಲರೂ ಸಂಪೂರ್ಣ ಬೆಂಬಲವಿತ್ತು ಸ್ವಯವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಡುವಂತೆ ಮಾಡಬೇಕೆಂದು ನಿರ್ಣಯಗಳಾಗಿವೆ

ಇದೇ ಕಳೆದ ತಾ ೧೯—೮—೧೯೩೭ರಲ್ಲಿ ಮಂಗಳ ಪೇಟೆಯಲ್ಲಿ ಶ್ರೀ ಕೃಷ್ಣತ್ತೂರು ಶ್ಯಾಮಭಾಗ ಯಂ ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಸೇರಿದ ಮಳ, ಕೃತ್ತತ್ತೂರು ಮತ್ತು ಸೂರಂಜೆ ಗ್ರಾಮಸ್ಥರ ಮತದಾರರ ಸಭೆಯಲ್ಲಿ ಬರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಸುರತ್ಕಲ್ ಸರ್ಕಲಿನ ಪರವಾಗಿ ಕಾಂಗ್ರೆಸ್ ಕಡೆಯಿಂದ ಶ್ರೀ ಯಚ್. ದಾಮೋದರ ರಾಯರನ್ನು ಮೆಂಬರರಾಗಿ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಬೇಕೆಂದು ನಿರ್ಣಯಿಸಲಾಯಿತು,

ಅದೇ ದಿವಸವೇ ಶ್ರೀ ಪಾಳನಾರಾಯ ಣರಾಯರ ಅಧ್ಯಕ್ಷತೆಯಲ್ಲಿ ಕಳವಾರು, ಮತ್ತು ತೋಕೂರು ಗ್ರಾಮಗಳ ಮತದಾರರ ಸಭೆಸೇರಿ ಮೇಲ್ಕಂಡಂತೆ ನಿರ್ಣಯವಾಗಿರುತ್ತದೆ ಈ ಸರ್ಕಲಿಗೆ ಸೇರಿದ ಬಜ್ಪೆಯ ಆಸುಪಾಸಿನ ಗ್ರಾಮಗಳ ಮುಖಂಡರೂ ಕೂಡಾ ಇದೇ ರೀತಿಯಾಗಿ ನಿಶ್ಚಯಿಸಿರುತ್ತಾರೆಂದೂ ತಿಳಿದು ಬರುತ್ತದೆ.

**ಹೆಜಮಾಡಿ—** ಕಳೆದ ತಾ ೧೪ ೮ ೩೭ರಲ್ಲಿ ಇಲ್ಲಿಯ ಮಹಾಜನರ ಸಭೆಯೊಂದು ಜರಗಿಸಲ್ಪಟ್ಟಿತ್ತು ಸದರಿಸಭೆಗೆ ದಯಮಾಡಿಸಿರುವ ಶ್ರೀ ಎಮ್ ರಾಮಕೃಷ್ಣ ಪೂಂಜ ಅವರ್‌ಗಳ್‌ರವರು ಸಭಿಕರ ಅಪೇಕ್ಷೆಯಂತೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು ಮಹಾಜನರ ಉದಾರತ್ವದಿಂದ ಧನ ಸಂಗ್ರಹಿಸಿ ಒಂದು ವಾಚನಾಲಯವನ್ನು ಕಟ್ಟಿಸಬೇಕಾಗಿ ೨೭ ಜನರ ಒಂದು ಕಮಿಟಿಯು ಏರ್ಪಡಿಸಲಾಯಿತು ಸದ್ರಿಸಭೆಗೆ ಆಹ್ವಾನಿಸಿರುವ ಶ್ರೀಯುತ ನಾರಾಯಣ ಕಿಣ್ಣಿಯವರ "ವಿದ್ಯಾಭಿವೃದ್ಧಿಯು" ಕುರಿತು ರಸಭರಿತವಾದ ಭಾಷಣವೂ, ಮಹಾಭಾರತದೊಳಗಿನ ಕಥಾಭಾಗದ 'ವಾಚನ'ವೂ ಜನರ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡಿರುತ್ತದೆ ಸಭಿಕರಲ್ಲಿ ಕಲವು ಮಹನೀಯರು ಆಗಲೇ ವಾಚನಾಲಯದ ಫಂಡಿಗಾಗಿ ರೂ ೩೦—೦ ವರೆಗಿನ ವಾಗ್ದಾನ ಕೊಟ್ಟನಂತರ ಸಭೆಯು ಮುಕ್ತಾಯವಾಗಿರುತ್ತದೆ

**ಕಾರ್ಕಳ—** ಕಳೆದ ತಾ ೨೫ರಲ್ಲಿ ಶ್ರೀ ಪದ್ಮಶಾಲಿ ವೈಶ್ಯ ಸಮಾಜ ಕ ಮಾ ಯುವಕ ಸಂಘದ ಆಶ್ರಯದಲ್ಲಿ ಶ್ರೀ ವೀರಭದ್ರ ನಿಲಯದಲ್ಲಿ ಊರ ಪರವೂರ ಹಲವು ಮಂದಿ ಸ್ವಸಮಾಜಸ್ಥರಿದ್ದು ಉತ್ಸಾಹ ಸಮಾರಂಭವನ್ನು ಯಶಸ್ವಿಯಾಗಿ ಜರಗಿಸಲಾಯ್ತು

ಅದೇ ರಾತ್ರಿ ಸಂಘದ ಆಶ್ರಯದೊಳಗೆ ಶ್ರೀ ಕೆ ಮುತ್ತಯ್ಯ ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಜಯಂತಿಯನ್ನು ಆಚರಿಸಲಾಗಿ, ಶ್ರೀಗಳಾದ ಕೆ ರುಕ್ಮಯ್ಯ ಧರ್ಮಾನಂದ ಮತ್ತು ಕೆ ಆರ್ ಶೆಟ್ಟಿಗಾರರವರು ಶ್ರೀಕೃಷ್ಣಚಂದ್ರನ ಆದರ್ಶ ಜೀವನದ ಕುರಿತು, ಶ್ರೀ ಬ್ರಹ್ಮಾನಂದರು ಶ್ರೀ ಕೃಷ್ಣ ಮಹಾತ್ಮನ ಜೀವನ ಮಹತ್ವ, ಅವನ ಸಂದೇಶ ಮತ್ತು ಅದನ್ನು ಈಗಿನ ಜೀವನದಲ್ಲಿ ಆಚರಿಸಬೇಕಾದ ರೀತಿಯನ್ನು ವಿವರಿಸಲಾಗಿ, ಶ್ರೀ ಕೃಷ್ಣನ ಗುಣಗಾನ ಮತ್ತು ಅಧ್ಯಕ್ಷರ, ಮೇಲಿನ ವಿಷಯಗಳ ಪೂರ್ಣ ಸಮರ್ಥನೆಯ ಉಪದೇಶ ಭಾಷಣದೊಂದಿಗೆ ಉತ್ಸಾಹದಿಂದ ಸಭಾ ಮುಕ್ತಾಯಗೊಳಿಸಲಾಯ್ತು

---

## ಉಡುಪಿ

**ಉಡುಪಿ ತಾಲೂಕು ಟೀಚರ ಮೇನೇಜರ್ ಸಂಘದ—** ತಾ ೨೯ ೮ ೩೭ರಲ್ಲಿ ಜರಗಿದ ಸಭೆಯು ತಾ ೧೨-೯-೩೭ಕ್ಕೆ ಮುಂದರಿಸಲಾಗಿದೆಯೆಂದೂ ಸಭೆಯು ಮೋಡರ್ನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಅಪರಾಹ್ನ ಘಂ ೧ಕ್ಕೆ ಜರಗುವುದೆಂದೂ ಸದ್ರಿ ಸಭೆಗೆ ಉಡುಪಿ ತಾಲೂಕಿನ ಟೀಚರ್ ಮೆನೇಜರ್ ಸಂಘದ ಮೆಂಬರರೆಲ್ಲರೂ ದಯವಿಟ್ಟು ಬರಬೇಕೆಂದೂ ಕಾರ್ಯದರ್ಶಿಗಳು ತಿಳಿಸುತ್ತಾರೆ

ಕ್ರಮದಂತೆ ಇಲ್ಲಿಯ ಶ್ರೀ ಶಾರದಾ ಸಂಗೀತ ಕಲಾ ಶಾಲೆಯ ತಿಂಗಳ ಸಂಗೀತೋತ್ಸವವು ತಾ ೩೦ ೮ ೩೭ರಂದು ಅಬ್ಕಾರಿ ಇನ್ಸ್ಪೆಕ್ಟರರಾದ ಶ್ರೀ ಸುಂದರಂ ಐಯ್ಯರರ ಅಧ್ಯಕ್ಷತೆಯಲ್ಲಿ ನಡೆಯಿತು

ಉಡುಪಿ ಶ್ರೀ ಪೇಜಾವರ ಮಠದ ಕೀರ್ತಿಶೇಷ ಶ್ರೀ ವಿಶ್ವಜ್ಞತೀರ್ಥ ಶ್ರೀಪಾದಂಗಳವರ ಭಾವಚಿತ್ರ ಅನಾವರಣವು ಅವರ ಪುಣ್ಯದಿನವಾದ ತಾ ೬-೯ ೩೭ನೇ ಸೋಮವಾರ ಅಪರಾಹ್ನ ಘಂಟೆ ೭ಕ್ಕೆ ಪೇಜಾವರ ಮಠದ ಶ್ರೀ ವ್ಯಾಸ ಭವನದಲ್ಲಿ ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಮ ರಾ ಆರ್ ಯಮ್ ವಿ ಭುಸ್ ರಾವ್, ಯಮ್ ಎ, ಬಿ ಆರ್, ಯಲ್, ಟಿ ಇವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜಿನ ಪಂಡಿತರಾದ ಶ್ರೀಯುತ ಪೇಜಾವರ ಸೀತಾರಾಮಾಚಾರ್ಯರಿಂದ ನೆರವೇರಿಸಲ್ಪಡುವುದೆಂದೂ ಅದಕ್ಕೆ ಮಹಾಜನರೆಲ್ಲರೂ ಬರಬೇಕೆಂದೂ ಮಠದ ಜನರಲ್ ಏಜಂಟ ವಿದ್ವಾನ್ ನರಸಿಂಹಾಚಾರ್ಯರು ಅಪೇಕ್ಷಿಸುತ್ತಾರೆ.

**ಉಡುಪಿ ಕೃಷ್ಣ ಜಯಂತಿ—** ಕ್ರಮದಂತೆ ವರ್ಷವೂ ಕೃಷ್ಣ ಜಯಂತಿ ಮತ್ತು ವಿಟ್ಲಪಿಂಡಿ ಹಬ್ಬಗಳು ಸಂಭ್ರಮದಿಂದ ಜರಗಿದುವು

ಪದ್ಧತಿಯಂತೆ ಜನರು ಕೃಷ್ಣ ಜಯಂತಿ ಸಂಬಂಧವಾಗಿ ನಾನಾ ತರದ ವೇಷಗಳನ್ನು ಹಾಕಿಕೊಂಡು ತಿರುಗುತ್ತಿದ್ದಾಗ ಅಧಿಕಾರಿಗಳು ತಾ ೨೮ ೮ ೩೭ ರಾತ್ರಿಯಲ್ಲಿ ಅನೇಕ ವೇಷಧಾರಿಗಳನ್ನು ಕೈದುಮಾಡಿ ಸ್ಟೇಶನಿಗೊಯ್ದರೆಂದೂ ಮಠದವರು ಪ್ರವೇಶಿಸಿದುದರಿಂದ ಅದೇ ರಾತ್ರಿ ವೇಷಧಾರಿಗಳನ್ನು ಬಿಟ್ಟರೆಂದೂ ಈ ತರದ ಪೋಲೀಸ್ ವರ್ತನವನ್ನು ನಿಷೇಧಿಸುವದಕ್ಕಾಗಿ ತಾ, ೩೧ ೮ ೩೭ರಲ್ಲಿ ರಥಬೀದಿಯಲ್ಲಿ ಸಾಯಂ ಘಂಟೆ ೬ಕ್ಕೆ ಶ್ರೀಯುತ S U ಪಣಿಯಾಡಿಯವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಾರ್ವಜನಿಕ ಸಭೆ ಸೇರಿತೆಂದೂ ನಿಷೇಧ ಠರಾವನ್ನು ಪ್ರೈಮರ್ ಮಿನಿಸ್ಟರ್ ಇನ್ಸ್ಪೆಕ್ಟರ ಜನರಲ ಆಫ್ ಪೋಲಿಸ್ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ್ ಆಫ್ ಪೋಲಿಸ್, ಸರ್ಕಲ್ ಇನ್ಸ್ಪೆಕ್ಟರ್ ಆಫ್ ಪೋಲೀಸ್, ಇವರಿಗೆ ಕಳುಹಿರುವರೆಂದೂ ತಿಳಿದು ಬರುತ್ತದೆ

**ಬಾತ್ಮಿಗಳು—** ಉಡುಪಿ ಮುನಿಸಿಪಾಲಿಟಿಯೂ ಸ್ಥಳೀಯ ಕಾಂಗ್ರೆಸ್ ಕಮಿಟಿಯು ಧೋರಣೆಯೂ ಎಂಬೂಂದು ವಾತ್ಮಿಯ ಸಾರಾಂಶವನ್ನು ಪ್ರಕಟಿಸಿ ಅದಕ್ಕುತ್ತರವನ್ನೂ ಅದರ ಜತೆಯಲ್ಲೇ ಪ್ರಕಟಿಸಿದ್ದೇವಷ್ಟೆ ಅದಕ್ಕುತ್ತರವಾಗಿ ನಾವು ಕಾಂಗ್ರೆಸನ್ನು ಮನ್ನಿಸುವವರಿದ್ದೇವೆ ತೆರಿಗೆದಾರರ ಸಂಘವು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರು ಸಭೆ ನಡೆಸಿ ತೀರ್ಮಾನಿಸುವ ವಿಷಯವನ್ನು ಪಾಲಿಸಲು ಸಿದ್ಧವಿದೆ, ಎಂಬ ಸಾರಾಂಶವನ್ನುಳ್ಳ ಶ್ರೀ ಟಿ ವಾಸುದೇವ ಶೆಣೈಯವರ ಒಂದು ವಾತ್ಮಿಯೂ, ಶ್ರೀ ಟಿ ಯಸ್ ಕೆಣ್ಣನ್ ನಂಬಿಯಾರರ ಇನ್ನೊಂದು ಬಾತ್ಮಿಯೂ ನಮಗೆ ತಲಪಿವೆ. ಸ್ಥಳಾಭಾವದಿಂದಾಗಿ ಆ ವಾತ್ಮಿಗಳನ್ನು ಪ್ರಕಟಿಸಲಾಗಿಲ್ಲ

**ಮುನಿಸಿಪಾಲಿಟಿ ಸಭೆ—** ಸ್ಥಳೀಯ ನಗರ ಸಭೆಯ ಸಾಮಾನ್ಯ ಮೀಟಿಂಗು ಕಳೆದ ತಾ. ೩೧ನೇ ಮಂಗಳವಾರ ಸಂಜೆ, ಚೆಯರ್ ಮೆನರಾದ ಶ್ರೀ ಟಿ ಮೋರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ರೂಪಾಯಿ ೨೦೦ಕ್ಕೆ ಮಿಕ್ಕಿದ ತಲಬುಳ್ಳ ಕಮಿಶನರರು ಈ ಮುನಿಸಿಪಾಲಿಟಿಗೆ ಅಗತ್ಯವಿಲ್ಲವೆಂಬರ್ಥವುಳ್ಳ ನಿರ್ಣಯವನ್ನು ಡಾಕ್ಟರ್ ಪಿ ಜಿ ಆಚಾರ್ಯರು ತಂದರು, ಶ್ರೀ ಎಲ್ ಯಸ್ ನಾಯ್ಕರು 'ಪಾಯಿಂಟ್ ಆಫ್ ಆರ್ಡರ್' ನೆತ್ತಿ ಆಕ್ಟಿನ ಸೆಕ್ಷನ್ ೧೨ (c) ಕ್ಕೆ ಡಾ। ಆಚಾರ್ಯರ ನಿರ್ಣಯವು ವಿರುದ್ಧಾಭಿಪ್ರಾಯ ಪ್ಪಂತು ಸೂಚಿಸಲು ... ಅದ್ರಿ ನಿರ್ಣಯವು ನ್ಯಾಯವಾಹಿಯವೆನಾಯಿತು,

---

ಅಲಭ್ಯ ಲಾಭ! ಉಡುಪಿ ನಿಜವಾದ ಭದ್ರತೆಗೆ!!

ಶ್ರೀ ಪೇಜಾವರ ಮಠದ ಪರ್ಯಾಯಂ

ಬೋಂಡನ್ನು ಇಂದೇ ಕೊಂಡುಕೊಳ್ಳಿರಿ!

ಮಠದವರಿಗೆ ಅವಶ್ಯವಾದ ಗಜೀನ ಬಗ್ಗೆ ಸಾಲಮಾಡುವ ಅಗತ್ಯ ಉಂಟೆಂದೂ, ಅದು ಮಠಗಳ ಹುಟ್ಟುವಳ್ಳಿ ಮೇಲ ಸಿಂಧುವಾಗತಕ್ಕದ್ದೆಂದೂ ಪ್ರೀವಿಕೌನ್ಸಿಲಿನ ತೀರ್ಪು ಇದೆ.

ರೂ. 75, 80, 85, 90ರ ಬೋಂಡನ್ನು ಪಡಕೊಂಡು ಕ್ರಮವಾಗಿ 5. 4, 3, 2 ವರ್ಷಗಳಲ್ಲಿ ಒಂದು ನೂರು ರೂಪಾಯಿಗಳನ್ನು ವಾಪಾಸು ಪಡೆಯಿರಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜನರಲ್ ಏಜಂಟ್, ಪೇಜಾವರ ಮಠ, ಉಡುಪಿ.

ESTD. 1906

**The Canara Banking Corporation Udipi Ltd.**

(Incorporated in British India)

Head Office:—UDIPI

*MEMBERS:-* RESERVE BANK OF INDIA, CLEARING HOUSE, MADRAS.

**FIXED DEPOSITS are accepted at the following rates at all our Offices:**

| | |
|---|---|
| 3 months .... .. | 2½% |
| 6 or 9 months .... | 3% |
| 12 months .... ... | 3½% |
| 24 months ... .... | 4% |

**Total Resources exceed Rs. 52,00,000/-**

**V. R. Kamath,** B. A., LL.B.
Ag. Manager.

ಉಡುಪಿ, ಗುರುವಾರ, ತಾ. ೨-೯-'೩೭

## ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ

ಕಾಂಗ್ರೆಸ್ ಮಂತ್ರಿಮಂಡಲವು ಈಗಣ ಡಿಸ್ಟ್ರಿಕ್ಟ್ ಬೋರ್ಡ್ ವೋಟಿನ ಬದಲಿಗೆ ಏಸೆಂಬ್ಲಿ ವೋಟಿನ ಕ್ರಮವನ್ನು ಜ್ಯಾರಿಗೆ ತರಲಿರುವುದರಿಂದ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯು ಮೂರು ತಿಂಗಳು ಹಿಂದೆ ಹೋಗುವ ಸಂಭವವಿದೆಯೆಂದು ತಿಳಿದು ಬರುತ್ತದೆ. ಹೀಗಾದ ಪಕ್ಷದಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಈಗಣ ಇಲೆಕ್ಷನ್ ಬೋರ್ಡನ್ನೇ ರದ್ದುಮಾಡಿ ಕೆಲಸಮಯದ ನಂತರ ಹೊಸತಾಗಿಯೇ ಉಮೇದ್ವಾರಿಗಳ ಅರ್ಜಿಗಳನ್ನು ಕರೆದು ಹೊಸ ಇಲೆಕ್ಷನ್ ಬೋರ್ಡನ್ನು ರಚಿಸತಕ್ಕದ್ದು. ಓಟಿನ ಕ್ರಮವೇ ಬದಲಾವಣೆಯಾಗುವಾಗ ಎಲ್ಲವನ್ನೂ ಹೊಸತಾಗಿಯೇ ಮಾಡುವುದು ಎಷ್ಟೊಂದು ಅವಶ್ಯವೆಂಬುದು ಸ್ವಯಂ ಸಿದ್ಧವಿದೆ. ಅಕ್ಷರಜ್ಞರೆಲ್ಲರಿಗೂ ಓಟಿನ ಹಕ್ಕಿರಬೇಕೆಂಬುದು ನ್ಯಾಯವಾದುದೆ. ಆದರೆ ಅಷ್ಟು ಮಾತ್ರದಿಂದ ಹಳ್ಳಿ ಮೂಲೆಗಳ ಬೇಸಾಯಗಾರರು, ಒಕ್ಕಲುಗಳಿಗೆಲ್ಲಾ ಓಟಿನ ಹಕ್ಕು ನಿರಾಕರಿಸಲ್ಪಡುವಂತಾದರೆ ಅನ್ಯಾಯವಾಗುವುದು. ಕಾಂಗ್ರೆಸು ಅಂಥವರಿಗೆ ಹೆಚ್ಚೆಚ್ಚಾಗಿ ಓಟಿನ ಹಕ್ಕನ್ನೀಯಬೇಕು. ಪ್ರಾಯ ಬಂದವರಿಗೆಲ್ಲಾ ಓಟನ್ನೀಯುವ ಕಾನೂನನ್ನು ಆದಷ್ಟು ಶೀಘ್ರವಾಗಿ ಜ್ಯಾರಿಗೆ ತರಬೇಕು. ಆ ಮೊದಲೀಗ ಅಕ್ಷರಸ್ಥರೊಂದಿಗೆ ಬೇಸಾಯಗಾರರ ಮತ್ತು ಒಕ್ಕಲುಗಳಿಗೂ ಓಟಿನ ಹಕ್ಕನ್ನೇಕೆ ಕೊಡಬಾರದು?

### ಉಮೇದ್ವಾರಿಗಳನ್ನಾರಿಸುವಿಕೆ

ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸು ಭಾಗವಹಿಸುವಾಗ ಯಾವ ಆಧಾರದ ಮೇಲೆ ಅದು ತನ್ನ ಉಮೇದ್ವಾರಿಗಳನ್ನು ಆರಿಸುವುದೆಂಬುದನ್ನು ಮುಂಚಿತವಾಗಿಯೇ ಸ್ಪಷ್ಟವಾಗಿ ನಿರೂಪಿಸಿದ್ದರೆ ಅದರ ಕೆಲಸ ಅಷ್ಟೊಂದೇನೂ ತೊಡಕುಂಟಾಗುವುದಿಲ್ಲ. ಯಾವಾಗಲೂ ವ್ಯಕ್ತಿಗಳನ್ನು ಹಿಡಿದು ಹೋದರೆ ತೊಂದರೆ ತಪ್ಪುವುದಿಲ್ಲ. ನಿಶ್ಚಿತ ತತ್ವಗಳನ್ನವಲಂಬಿಸಿ ನಡೆದರೆ ಕಾಂಗ್ರೆಸ್ಸಿನ ಪ್ರತಿಷ್ಠೆಗೇನೂ ಕಳಂಕ ಬರುವ ಸಂಭವವಿಲ್ಲ. ಈಗ ಚುನಾವಣೆಯು ಮುಂದುವರಿಸಲ್ಪಡುವ ಸಂಭವವಿರುವುದರಿಂದ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಪ್ರತ್ಯಕ್ಷ ಚುನಾವಣೆಯ ಸಿದ್ಧತೆಯನ್ನು ನಿಲ್ಲಿಸಿಬಿಡುವುದೊಳ್ಳೇದು. ಮುಂದೆ ಉಮೇದ್ವಾರರನ್ನು ಆರಿಸುವಾಗ ಯಾವ ರೀತಿ ನಡೆಯಬೇಕೆಂಬುದನ್ನು ಈಗಲೇ ಚೆನ್ನಾಗಿ ವಿಚಾರಿಸಿ ನಿಷ್ಕರ್ಷಿಸಿಕೊಳ್ಳಬೇಕು. ಈ ಸಂಬಂಧವಾಗಿ ನಾವು ನಮ್ಮ ಅಭಿಪ್ರಾಯವನ್ನು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರ ಅವಗಾಹನೆಗೆ ತರಲೆಳಸುತ್ತೇವೆ.

ಕಾಂಗ್ರೆಸ್ ಪರವಾಗಿ ಆರಿಸಲ್ಪಡುವ ಉಮೇದ್ವಾರಿಗಳು ಹೆಚ್ಚಾಗಿ ಹಳ್ಳಿಯವರಿದ್ದು ತಮ್ಮ ತಮ್ಮ ಮತ ಸಮುದಾಯದೊಂದಿಗೇನೇ ವಾಸಿಸುವಂಥವರಿರುವುದೊಳ್ಳೇದು. ಯಾಕಂದರೆ ಅವರು ಯಾವಾಗಲೂ ತಮ್ಮ ಮತಸಮುದಾಯದ ಸಂಪರ್ಕದಿಂದಿದ್ದು ಅವರ ಅನುನಿತ್ಯದ ಸಮಸ್ಯೆಗಳನ್ನರಿಯಲನುಕೂಲವಾಗುವುದು. ಮತದಾರರಿಗೂ ತಮ್ಮ ತೊಂದರೆ ಅನಾನುಕೂಲತೆಗಳನ್ನು ಅವರಿಗೆ ತಿಳಿಸಲು ಅನುಕೂಲವಾಗುವುದು. ಕಡಿಮೆಯೆಂದರೆ ಹದಿನೈದು ದಿವಸಗಳಿಗೊಮ್ಮೆಯಾದರೂ ಕಾಂಗ್ರೆಸ್ ಪಕ್ಷದ ಮೆಂಬರರು ತಮ್ಮ ಮತಸಮುದಾಯವಿರುವ ಬೇರೆ ಬೇರೆ ಭಾಗಗಳಲ್ಲಿ ತಿರುಗಾಡಬೇಕು. ಅವರ ವೃತ್ತಿ, ವ್ಯಾಪಾರ ಮೊದಲಾದುವುಗಳು ಇದಕ್ಕನುಕೂಲವಿರುವಂಥವಾಗಬೇಕು. ಮೆಂಬರರು ತಮ್ಮ ಮತಸಮುದಾಯದಲ್ಲಿ ತಿರುಗಿ ತಾವು ಮಾಡಿದ ಕೆಲಸವನ್ನೆಲ್ಲಾ ಅವರಿಗೆ ತಿಳಿಸಿ ಅವರ ಸಂಕಷ್ಟಗಳನ್ನರಿತುಕೊಳ್ಳಬೇಕು. ಬಹಳ ಕೆಲಸವಿದ್ದು ಬಿಡುವಿಲ್ಲದವರು ಉಮೇದ್ವಾರರಾಗಿ ಆರಿಸಲ್ಪಡಬಾರದು. ಬೇಕಷ್ಟು ಸಮಯವುಳ್ಳ ಜನನೇ ಮಾತ್ರ ಆರಿಸಲ್ಪಡಬೇಕು. ಡಿಸ್ಟ್ರಿಕ್ಟ್ ಬೋರ್ಡಿನ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಸಂಬಂಧವಿರುವ ಯಾವುದಾದರೊಂದು ಉದ್ಯಮ ವಹಿವಾಟುಗಳ ಸಂಬಂಧವಿಲ್ಲದ ಸರ್ವಸಾಧಾರಣ ತೆರಿಗೆದಾರರನ್ನೇ ಕಾಂಗ್ರೆಸು ತನ್ನ ಉಮೇದ್ವಾರಿಗಳನ್ನಾಗಿ ಆರಿಸಬೇಕು. ಡಿಸ್ಟ್ರಿಕ್ಟ್ ಬೋರ್ಡಿನ ಮೂಲಕ ಯಾವ ತರದ ಸ್ವಾರ್ಥಸಾಧನೆಯ ದೃಷ್ಟಿಯೂ ಅವರಿಗಿರಬಾರದು. ಹಣ, ಸ್ಥಾನ, ಮಾನ, ಪ್ರಭಾವ, ವಿಜಯದ ದೃಢತೆಯೇ ಮೊದಲಾದ ವಿಷಯಗಳಿಗೆ ಕಾಂಗ್ರೆಸು ಪ್ರಾಮುಖ್ಯತೆಯನ್ನೀಯಬಾರದು. ಯಾಕೆಂದರೆ ಅವಿರುವಲ್ಲಿ ಸೇವಾಬುದ್ಧಿಯಿರುವುದು ಕಡಿಮೆ.

ಕೇವಲ ವಿಜಯದ ದೃಷ್ಟಿಯು ಅನುಚಿತವಾದುದು. ನ್ಯಾಯಕ್ಕಾಗಿ ತತ್ವಕ್ಕಾಗಿ ಆಗುವ ಅಪಜಯವು ಉಜ್ವಲ ವಿಜಯವೆಂದೇ ಎಣಿಸಬೇಕು. ಇಂತಹ ಅಪಜಯಗಳಿಂದಲೇ ದೊಡ್ಡವರೆನಿಸುವವರ ಚುನಾವಣೆಯ ರೀತಿ ನೀತಿಗಳು ಬಯಲಿಗೆಳೆಯಲ್ಪಟ್ಟು ಜನತೆಯ ಕಣ್ಣು ತೆರೆಯುವಂತಾಗುವುದು. ತಾವು ವಂಚಿತರಾಗಿ ತಮ್ಮ ಓಟಿನ ಹಕ್ಕನ್ನು ಹೇಗೆ ದುರುಪಯೋಗಪಡಿಸಿದೆವೆಂಬುದು ಅವರಿಗೆ ಚಿತ್ತವೇಧಕವಾಗಿ ವಿದಿತವಾಗುವುದು. ಕಾಂಗ್ರೆಸ್ಸಿನ ಕುರಿತು ಮಾಡಿರುವ ಕೆಲಸವು ಪ್ರಥಮ ಗಣನೆಯವಾದರೂ ಹಿಂದೆ ಸೆರೆಮನೆಗೆ ಹೋದ, ಲಾಠಿ ಪ್ರಹರನ್ನನುಭವಿಸಿದ ಕಾರಣದಿಂದ ಮಾತ್ರವೇ ಒಬ್ಬನು ಕಾಂಗ್ರೆಸು ಪಕ್ಷದ ಉಮೇದ್ವಾರನಾಗಿ ನಿಲ್ಲುವ ಅರ್ಹತೆಯುಳ್ಳವನಾಗಬಾರದು. ಯಾಕಂದರೆ ಜೈಲಿಗೆ ಹೋದವರಿಗೆಲ್ಲಾ ಕಾಂಗ್ರೆಸ್ಸಿಗೆ ಸ್ಥಾನಮಾನವೀಯುತ್ತಾ ಹೋಗಲು ಸಾಧ್ಯವಿಲ್ಲ. ಹಿಂದಿನ ತ್ಯಾಗಕ್ಕಾಗಿ ಸ್ಥಾನಮಾನಗಳನ್ನಾಶಿಸುವ ಮನೋವೃತ್ತಿಯು ಪ್ರೋತ್ಸಾಹನೀಯವಲ್ಲ. ಎಲ್ಲರಿಗೂ ಹುಟ್ಟು ಕಾಂಗ್ರೆಸ್ ಭಕ್ತರಾಗಿರಲು ಸಾಧ್ಯವಿಲ್ಲ. ಅದುದರಿಂದ ಹಿಂದೆ ಒಬ್ಬನು ಕಾಂಗ್ರೆಸ್ಸಿಗೆ ವಿರುದ್ಧವಾದ ಕೆಲಸಮಾಡಿದನೆಂಬೊಂದೇ ಕಾರಣದಿಂದ ಅವನ ಅರ್ಜಿಯನ್ನು ನಿರಾಕರಿಸುವುದೂ ಅಷ್ಟೊಂದು ವಿಹಿತವಲ್ಲ. ಯಾಕಂದರೆ ಈ ವಿರುದ್ಧ ಕೆಲಸಕ್ಕೆ ಬೇರೆ ಬೇರೆ ವಿದ್ಯಮಾನಗಳು ಕಾರಣವಿದ್ದು ಒಬ್ಬನು ಕಾಂಗ್ರೆಸ್ ಸಂಸ್ಥೆಯ ಕುರಿತು ನಿಜವಾದ ಭಕ್ತಿಯುಳ್ಳವನಿರಬಹುದು.

ಆದರೆ ಗುಪ್ತವಾಗಿಯಾಗಲಿ, ಬಹಿರಂಗವಾಗಿಯಾಗಲಿ ವೈಯಕ್ತಿಕಸ್ವಾರ್ಥ ಮತ್ತು ಜಾತಿಯಸಂಕುಚಿತತೆಇಂದಪ್ರೇರಿತರಾದವರು ಆರಿಸಲ್ಪಡಲೇ ಬಾರದು. ಕಾಂಗ್ರೆಸಿನ ಕುರಿತು ಯಾವ ಶ್ರದ್ಧೆಯೂ ಇಲ್ಲದೆ ಚುನಾವಣೆ ಬಂದಕೂಡಲೆ ದೊಡ್ಡ ಕಾಂಗ್ರೆಸ್ ಭಕ್ತರೆನಿಸಿಕೊಳ್ಳುವ ಕಾಲಬಂದಂತೆ ಕೋಲಕಟ್ಟುವ ಮನೋವೃತ್ತಿಯವರನ್ನು ದೂರವಿರಿಸುವಂತೆ ನೋಡಬೇಕು. ಕಾಂಗ್ರೆಸ್ ಪರವಾಗಿ ಆರಿಸುವ ಉಮೇದ್ವಾರಿಗಳ ಮತಸಮುದಾಯದ ಹೆಚ್ಚಿನ ಹಳ್ಳಿಗಳ ಕಾಂಗ್ರೆಸ್ ಕಮಿಟಿಗಳವರು ಅವರ ಉಮೇದ್ವಾರಿಕೆಯನ್ನೊಪ್ಪಬೇಕು. ಇದಕ್ಕಾಗಿ ಉಮೇದ್ವಾರಿಗಳನ್ನು ಆರಿಸುವ ಮೊದಲು ಅವರ ಕುರಿತು ಹಳ್ಳಿ ಕಾಂಗ್ರೆಸ್ ಕಮಿಟಿಗಳವರ ಅಭಿಪ್ರಾಯವನ್ನು ಪಡೆಯುವ ಏರ್ಪಾಡುಮಾಡಬೇಕು. ಸರ್ವಸಾಧಾರಣ ವಿದ್ಯಮಾನಗಳಲ್ಲಿ ಈ ಅಭಿಪ್ರಾಯಕ್ಕೆ ವಿರೋಧವಾಗಿ ನಡೆಯಬಾರದು. ನಾವು ನಮಗೆ ತೋರಿದ ಸೂಚನೆಗಳು ಕೆಲವನ್ನು ಕೊಟ್ಟಿರುವೆವು. ಇನ್ನೂ ಕೆಲವು ವಿಷಯಗಳಿರಬಹುದು. ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಅವನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿ ಅವುಗಳ ಆಧಾರದ ಮೇಲೆ ಉಮೇದ್ವಾರಿಗಳನ್ನು ಆರಿಸಿದರೆ ಮಾತ್ರ ಹಿಂದಿನ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಾದಂತಹ ಗೊಂದಲ ಮತ್ತು ಅಪಕೀರ್ತಿಯನ್ನು ದೂರೀಕರಿಸಬಹುದು.

---

## ಸ್ವವಿಷಯ

ನವಯುಗವು ಇಂದಿನಿಂದ ಹದಿನೇಳನೇ ವರ್ಷದಲ್ಲಿ ಮುಂದಡಿಯಿಡತೊಡಗುವುದು. ನವಯುಗದ ಧೋರಣೆಯು ನಮ್ಮ ವಾಚಕರಿಗೆಲ್ಲ ತಿಳಿಯದಿಲ್ಲ. ಯಾವುದೇ ಮತ ಪಂಥಗಳ, ಜಾತಿಗಳ ಪಕ್ಷವನ್ನು ಹಿಡಿದು, ಸ್ವಾರ್ಥದ ಆಶೆಯಿಂದ ಅವುಗಳನ್ನೆತ್ತಿ ಹಿಡಿಯುವ ಧಿಸುವ ಕ್ಷುದ್ರಮನೋವೃತ್ತಿಯು ನವಯುಗಕ್ಕಿಲ್ಲ. ವಿಶ್ವಬಾಂಧವ್ಯದ ಗುಟ್ಟನ್ನು ತಿಳಿಸಿ ವಿಶ್ವದ ಸರ್ವತೋಮುಖ ಮೇಲ್ಮೆಯನ್ನು ಸಾಧಿಸುವುದೇ ನವಯುಗದ ಆದರ್ಶ—ಗುರಿ! ಅನ್ಯಾಯವೆಂದು ಕಂಡುದುದನ್ನು ಹಂಗು ದಾಕ್ಷಿಣ್ಯಗಳಿಲ್ಲದೆ ಖಂಡಿಸುವುದು ನವಯುಗದ ವೈಶಿಷ್ಟ್ಯ. ಸಮಾಜ ಸುಧಾರಣೆಯ ವಿಚಾರಗಳಿಗೆ ನವಯುಗವು ಮೀಸಲಿರಿಸಿದ ಪತ್ರಿಕೆ. ಎಲ್ಲರನ್ನೂ ಮೆಚ್ಚಿಸುವ ಹುಚ್ಚುತನವನ್ನದು ಮೆಚ್ಚುವುದಿಲ್ಲ. ಕಳೆದ ಕೆಲವು ವರ್ಷಗಳಲ್ಲೂ ಈ ಉಚ್ಚಧ್ಯೇಯ ಪರಿಪಾಲನೆಗಾಗಿ ಅದು ಅವಿಶ್ರಾಂತವಾಗಿ ಶ್ರಮಿಸಿದೆ, ಮುಂದಕ್ಕೂ ಶ್ರಮಿಸಲಿದೆ.

ಈ ಮಧ್ಯೆ ನಾವು "ನವಯುಗ"ವನ್ನು ಉಡುಪಿಗೆ ತರಿಸಿ ಅದರ ಎಲ್ಲಾ ಜವಾಬ್ದಾರಿಕೆಯನ್ನು ಹೊತ್ತಿರುವ ಸಂಗತಿಯು ವಾಚಕರಿಗೆಲ್ಲರಿಗೂ ತಿಳಿದಿದೆ. ನವಯುಗದ ಆದರ್ಶ ಧ್ಯೇಯ ಪರಿಪಾಲನೆಯಲ್ಲಿ ನಮಗೆ ಕುತೂಹಲವಿದೆ. ಆದರೆ ಅದರ ಎಲ್ಲಾ ಹೊಣೆಗಾರಿಕೆಯನ್ನು ನಾವೇ ಹೊರುವ ಸಾಮರ್ಥ್ಯವು ನಮ್ಮಲ್ಲಿಲ್ಲವೆಂದು ಒಪ್ಪುತ್ತೇವೆ. ಸರಿಯಾಗಿ ಕಾಗದದ ಬೆಲೆಯೂ ಏರಿಬಿಟ್ಟಿತು. ಪತ್ರಿಕೆಯನ್ನು ನಡೆಸುವುದು ಈ ಕಾಲದಲ್ಲಿ ಎಂತಹ ದುಷ್ಕರವೆಂಬುದನ್ನು ಅನುಭವಿಗಳು ಮಾತ್ರ ಬಲ್ಲರು. ನಾವಾದರೂ ನಮ್ಮ ವಾಚಕರೆಲ್ಲ ಪ್ರೋತ್ಸಾಹದ ಶುಭನಿರೀಕ್ಷೆಯಿಂದ ಕಷ್ಟನಿಷ್ಠುರಗಳನ್ನೂ, ತೊಡರು ತೊಂದರೆಗಳನ್ನೂ, ಹೇರಳ ನಷ್ಟವನ್ನೂ ಲೆಕ್ಕಿಸದೆ ನಿಶ್ಚಿತಗುರಿಯಿಂದ ವಿಮುಖರಾಗಲಿಲ್ಲ. ನಮಗಿನ್ನೂ ಉತ್ಸಾಹವಿದೆ. ಆ ಉತ್ಸಾಹವು ಭಂಗವಾಗಲು, ವಾಚಕರ ಪ್ರೋತ್ಸಾಹದ ಅಭಾವವು ಕಾರಣವಾಗಬಹುದು. ಆದರೆ ಅದರಲ್ಲಿ ನಮಗೆ ವಿಶ್ವಾಸವಿದೆ.

ನವಯುಗವು ತನ್ನ ನಿಷ್ಪಕ್ಷಪಾತ ಧೋರಣೆಯಿಂದ ಇಂದು ಹಲವರಿಂದ ಆದರಿಸಲ್ಪಡುತ್ತಿದೆ ಎನ್ನುವ ಧೈರ್ಯ ನಮಗಿದೆ.

ಅದೇ ನಿಷ್ಪಕ್ಷಪಾತಧೋರಣೆಯಿಂದ ಕೆಲವರು ಮೂಗುಮುರಿದುಕೊಂಡು ನವಯುಗವನ್ನು ವಕ್ರದೃಷ್ಟಿಯಿಂದ ನೋಡತೊಡಗಿದ್ದರೂ, ಅದರ ಅಚಲನಿಷ್ಠೆಯನ್ನು ಕಂಡು ಕೊನೆಗೆ ತಾವೇ ತಮ್ಮಲ್ಲಿ ತಮ್ಮ ವರ್ತನೆಗಾಗಿ ಪಶ್ಚಾತ್ತಾಪ ಪಟ್ಟಿರುವರೆಂದು ಹೇಳಲು ನಮಗೆ ಅಭಿಮಾನವೆನಿಸುವುದು. ನವಯುಗವನ್ನು ಇನ್ನೂ ಮೆರೆಸಬೇಕೆಂದು ನಮ್ಮ ಹೆಬ್ಬಯಕೆ. ಆ ಉದ್ದೇಶದಿಂದಲೇ ನಾವು ಈ ವರುಷವೇ ಹಲವು ಸುಧಾರಣೆಯನ್ನು ಮಾಡಿದ್ದೇವೆ.

ಕನ್ನಡಿಗರ ಬೆಂಬಲವು ನಮ್ಮ ಕಡೆಗಿದ್ದರೆ ನವಯುಗವು ನಮ್ಮಾಶೆಯನ್ನು ನೆರವೇರಿಸಲು ಹೆಚ್ಚಿನ

## ಮೆನೇಜರರ ನೋಟೀಸು

**ಕಳೆದ ತಿಂಗಳ ಅಂತ್ಯಕ್ಕೆ ನವಯುಗದ ೧೬ನೆಯ ಸಂಪುಟವು ಕೊನೆಗೊಂಡು ಈ ಸಂಚಿಕೆಯಿಂದ ೧೭ನೆಯ ಸಂಪುಟವು ಆರಂಭವಾಗುವುದು. ಕಳೆದ ವರುಷದ ಚಂದಾ ಹಣವನ್ನು ಕಳಿಸದೆ ಇನ್ನೂ ಬಾಕಿಯಾಗಿರಿಸುವ ಚಂದಾದಾರರು ತಮ್ಮ ಹಣವನ್ನು ಒಡನೆಯೇ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ಅವಧಿ ಮುಗಿಯುವ ಎಲ್ಲಾ ಚಂದಾದಾರರು ಹೊಸವರ್ಷದ ಚಂದಾಹಣವನ್ನೂ ಮುಂಗಡ ಕಳುಹಿಸಿ ಪ್ರೋತ್ಸಾಹಿಸಬೇಕೆಂದೂ ಕೋರುತ್ತೇವೆ. ಪತ್ರಿಕೆ ಬೇಡವಾದವರು ನಮಗೆ ಮುಂಚಿತವಾಗಿ ಸೂಚಿಸಬೇಕು.**

**ಮೆನೇಜರ್ ನವಯುಗ, ಉಡುಪಿ**

ಕಷ್ಟವಾಗದು ನಮ್ಮ ಚಂದಾದಾರರ ಸಂಖ್ಯೆಯಲ್ಲಿ ನಮಗೆ ಹೆಮ್ಮೆಯಿದೆ ಪ್ರತಿಯೊಬ್ಬರೂ ಸಹಕರಿಸಿದರೆ ನಿಮ್ಮ ನವಯುಗವು ನಾಡಿನ ಮೇಲ್ತರಗತಿಯ ಪತ್ರಿಕೆಗಳಸ್ಥಾನದಲ್ಲಿ ಗಣನೀಯ ಸ್ಥಾನವನ್ನು ಪಡೆಯಲಿದೆ ಎಂಬ ಮಟ್ಟಿಗೆ ನಾವು ಆಶ್ವಾಸನೆಯನ್ನು ಕೊಡಬಲ್ಲೆವು. ನೀವಾದರೂ ನಿಮ್ಮ ಪಾಲಿನ ಈ ಸಹಕಾರವನ್ನು ಮಾಡಲು ಮರೆಯದಿರಿ ಇದು ಕೇವಲ ನಿಮ್ಮ ಕರ್ತವ್ಯವೆಂದೇ ತಿಳಿಯಿರಿ ಹೀಗೆ ಹೇಳಲು ನಾವು ಸಂಕೋಚ ಪಡುವುದಿಲ್ಲ ಏಕೆಂದರೆ ನಿಮ್ಮ ಕೂಡುಗೈಯು ನವಯುಗದ ಏಳ್ಗೆಗೂ ಮುನ್ನಡೆಗೂ ಜೀವಾತುವೆಂಬುದರಲ್ಲಿ ನಮಗೆ ಭರವಸೆಯಿದೆ

ಆದರೆ ನೀವು ಯಾವರೀತಿಯಲ್ಲಿ ನವಯುಗವನ್ನು ಪ್ರೋತ್ಸಾಹಿಸಲಿರುವಿರೆಂಬ ವಿಷಯದಲ್ಲಿ ನಮ್ಮ ನಿರೀಕ್ಷೆಯಿದೆ

### ಆಭಾರಮನ್ನಣೆ

ಕಳೆದ ವರುಷ ನವಯುಗವನ್ನು ಚಂದಾದಾರರಾಗಿ ಯಾ ಜಾಹೀರಾತುದಾರರಾಗಿ ಪ್ರೋತ್ಸಾಹಿಸಿದವರಿಗೂ, ಲೇಖಕರಿಗೂ ಬಾತ್ಮಿದಾರರಿಗೂ, ಯಾವುದೇ ರೀತಿಯಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಮಗೆ ಬೆಂಬಲವಿತ್ತವರಿಗೂ, ನಾವು ಈ ಮೂಲಕ ಕೃತಜ್ಞತೆಯನ್ನು ಸಲಿಸುತ್ತೇವೆ ಮುಂದಕ್ಕೂ ಅವರೆಲ್ಲರೂ ಇದೇರೀತಿ ಪ್ರೋತ್ಸಾಹಿಸಿ ನಮಗೆ ನೆರವಾಗಿರಲೆಂದು ಆಶಿಸುತ್ತೇವೆ.

# ಸ್ವದೇಶ-ವಿದೇಶ

## ಸ್ವದೇಶ

### ಉಪವಾಸವ್ರತ ನಿಲ್ಲಿಸಲ್ಪಟ್ಟಿತು

**ಸರಕಾರದ ಕರ್ತವ್ಯ**—೩ ವಾರಗಳ ನಂತರ ಆಗೋಸ್ತು ೩೦ ರಲ್ಲಿ ಅಂಡಮಾನಿನ ಕೈದಿಗಳೆಲ್ಲಾ ತಮ್ಮ ಉಪವಾಸವ್ರತ ನಿಲ್ಲಿಸಿರುವರು ಕೇವಲ ೭ ಮಂದಿಮಾತ್ರ ಇನ್ನೂ ನಿಲ್ಲಿಸಿದುವುದಿಲ್ಲ, ಶ್ರೀ ಭೂಲಭಾಯಿ ದೇಸಾಯಿ ಮತ್ತು ಸತ್ಯಮೂರ್ತಿಗಳು ಈ ಕುರಿತುಸಂತೋಷಪಟ್ಟು, ಈಗ ಕೈದಿಗಳನ್ನು ಕೂಡಲೇ ಹಿಂದೂದೇಶಕ್ಕೆ ತರುವುದು ಇಂಡಿಯಾ ಮತ್ತು ಪ್ರಾಂತಿಕ ಸರಕಾರಗಳ ಕರ್ತವ್ಯವೆಂದು ಸೂಚಿಸಿರುವರು ಕಲ್ಕತ್ತದಲ್ಲಿ ಸಮಾಧಾನವುಂಟಾಗಿರುವುದು ಬಂಗಾಳದ ಮಂತ್ರಿಗಳು ಅಂಡಮಾನ್ ಕೈದಿಗಳನ್ನು ಬಿಡುಗಡೆ ಮಾಡುವ ವಿಷಯದಲ್ಲಿ ಬಂಗಾಳ ಎಸಂಬ್ಲಿಯ ಬೇರೆ ಬೇರೆ ಪಕ್ಷಗಳ ಪ್ರಮುಖರ ಪರಿಷತ್ತೊಂದನ್ನು ನಡಿಸಲಿರುವರು ಪಂಡಿತ ಜವಾಹಿರಲಾಲ ನೆಹರುರವರು ಸರಕಾರದ ನಿರ್ಧಾರವನ್ನು ಕಠಿಣವಾಗಿ ಟೀಕಿಸಿ, ೩೦. ಸರಕಾರವು ಮಾನವತ್ವವೇಇಲ್ಲದಂತೆವರ್ತಿಸಿದುದು ವಿಶ್ವೇಟದುಗಳು ಕೂಡಾ ಈ ರೀತಿ ಜನಮತವನ್ನು ಅಲಕ್ಷಿಸುತ್ತಿದ್ದಿಲ್ಲವಾದರಿಂದ ಬ್ರಿಟಿಷ್ ಸರಕಾರವು ಹಿಂದೀ ಜನತೆಯ ಅಭಿಮತಕ್ಕೆ ಎಷ್ಟೊಂದು ಲಕ್ಷ್ಯಕೊಡುವುದೆಂದು ಸಿದ್ಧವಾಗುತ್ತದೆ. ಹಿಂದೀಯರಿದನ್ನು ನೆನಪಿನಲ್ಲಿ ಇಟ್ಟುಕೊಳ್ಳದಿರಲಾರರೆಂದು ಹೇಳಿರುವರು

### ಬರುವ ಕಾಂಗ್ರೆಸ್ ಅಧಿವೇಶನ

೫೧ನೇ ಕಾಂಗ್ರೆಸ ಅಧಿವೇಶನದ ಸ್ವಾಗತ ಕಮಿಟಿಯ ಸಭೆಯು ಆಗೋಸ್ತ ೩೦ ರಲ್ಲಿ ಬಾರ್ಡೋಲೀ ಆಶ್ರಮದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ನಡೆಯಿತು ಸುಮಾರು ೫೦೦ ಮಂದಿಹಾಜರಿದ್ದರು ದರ್ಬಾರ್ ಸಾಹೇಬ್ ಗೋಪಾಲದಾಸ ದೇಸಾಯಿಯವರು ಸ್ವಾಗತಸಮಿತಿಯ ಅಧ್ಯಕ್ಷರಾಗಿಯೂ, ಶ್ರೀಮತಿ ಭಕ್ತಿ ಲಕ್ಷ್ಮಿ ದೇಸಾಯಿ, ವಿಜಯ ಗೌರಿ ಕನುಗ, ಮಿಥಬೆನ್ ಪಟೆಟ್ ಮತ್ತು ಶ್ರೀ ಮಣಿಲಾಲ್ ಭತರಾ ಒಾಯಿ. ತ್ರ್ವಿವೇದಿ ಉಪಾಧ್ಯಕ್ಷರಾಗಿಯೂ, ಶ್ರೀ ಕನ್ಯಾಲಾಲ್ ದೇಸಾಯಿಯವರು ಜನರಲ್ ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟಿರುವರು

### ಮುಸಲ್ಮಾನ ಸಿಖ್ಖ ಕಲಹ

ಪಂಜಾಬಿನ ಜಾಂಡಿಯಾಲವೆಂಬ ಹಳ್ಳಿಯಲ್ಲಿ ಆಗೋಸ್ತು ೨೮ ರಲ್ಲಿ ಸಿಖ್ಖ ಮುಸಲ್ಮಾನ ಜಗಳವಾಗಿ ಒಬ್ಬ ಸಿಖ್ಖ ಮತ್ತು ೩ ಮಂದಿ ಮುಸಲ್ಮಾನರು ಕೊಲ್ಲಲ್ಪಟ್ಟಿರುವರು ಝಟ್ಕಾ ಎಂಬ ವಿಧಾನದಿಂದ ಕೋಳಿಯೊಂದನ್ನು ಸಿಖ್ಖನೊಬ್ಬನು ಕೊಂದನೆಂದೂ ಅವನನ್ನು ಕೆಲಸದಿಂದ ತೆಗೆದುಹಾಕಿದುದನ್ನು ನಿಷೇಧಿಸಲು ಮತ್ತು ಝಟ್ಕಾ ರೀತಿಯಿಂದ ಕೊಲ್ಲುವ ತಮ್ಮ ಹಕ್ಕು ಸ್ಥಾಪಿಸಲು ೧೧,೦೦೦ ಸಿಖ್ಖರು ಸಭೆನಡಿಸಿದರು ೨೦೦೦ ಮುಸಲ್ಮಾನರು ನೆರೆದಿದ್ದರು. ಹಳ್ಳಿಗೆ ಹೋಗುವಾಗ ಸಿಖ್ಖನೊಬ್ಬನನ್ನು ಮುಸಲ್ಮಾನರು ತಿವಿದುಕೊಂದರು ಇದನ್ನರಿತ ಸಿಖ್ಖರು ಕೊಲೆಯ ಸ್ಥಳಕ್ಕೆ ಧಾವಿಸಿ ದೊಡ್ಡಜಗಳವಾಯಿತು

### ಚುನಾವಣೆ ಮುಂದುವರಿಸಲ್ಪಡುವುದು

ಡಿಸ್ಟ್ರಿಕ್ಟ್ ಬೋರ್ಡು ಮುನಿಸಿಪಾಲಿಟಿ ಮತ್ತು ಗ್ರಾಮ ಪಂಚಾಯತಗಳ ಚುನಾವಣೆಯಲ್ಲೆಲ್ಲಾ ಎಸಂಬ್ಲಿಯ ಓಟಿನ ಕ್ರಮವನ್ನೇ ಜ್ಯಾರಿಗೆ ತರುವ ನಿಮಿತ್ತ ಬರುವ ೨ ತಿಂಗಳೊಳಗೆ ನಡೆಯಲಿರುವ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಲ ಚುನಾವಣೆಗಳು ಬರುವ ದಶಂಬರ ಅಥವಾ ಜನವರಿಯ ವರೆಗೆ ಮುಂದುವರಿಸಲ್ಪಡುವದು ಬಹುಶಃ ನಿಶ್ಚಯವೆಂದು ತಿಳಿದು ಬರುತ್ತದೆ ಪ್ರಾಯಸ್ಥರಿಗೆಲ್ಲಾ ಓಟಿನ ಹಕ್ಕು ಕೊಡುವ ಆಲೋಚನೆಯೂ ಸರಕಾರಕ್ಕಿದೆ ಆದರೆ ಹಾಗೆ ಮಾಡಿದರೆ ಓಟರರ ಪಟ್ಟಿ ತಯಾರಿಸಲು ಒಂದು ವರ್ಷ ತಾಗಬಹುದು ಆದುದರಿಂದ ಪ್ರಕೃತ ಎಸೆಂಬ್ಲಿ ಓಟಿನ ಕ್ರಮವನ್ನು ಜ್ಯಾರಿಗೆ ತರಲಾಗುವುದು

### ಸರಕಾರಿಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜ

ಸರಕಾರಿ ಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜವನ್ನೇರಿಸಬೇಕೆಂದು ಬಿಹಾರ್ ಎಸಂಬ್ಲಿ ಮೆಂಬರನೊಬ್ಬರು ತಂದ ಠರಾವನ್ನು ಗವರ್ನರರು ಎಸಂಬ್ಲಿಯಲ್ಲಿ ಚರ್ಚಿಸಲು ನಿರಾಕರಿಸಿರುವರು ಇದೇ ಮೆಂಬರರು, ಸರಕಾರವು ಬಿರುದುಗಳನ್ನೀಯುವುದನ್ನು ನಿಲ್ಲಿಸಬೇಕೆಂದು ತಂದ ಠರಾವನ್ನು ಅದು ಕೇಂದ್ರ ಸರಕಾರದ ಕೆಲಸವೆಂದು ಎಸಂಬ್ಲಿಯ ಅಧ್ಯಕ್ಷರು ಚರ್ಚಿಸಲು ಸಮ್ಮತಿಸಲಿಲ್ಲ

ಹಿಂದುದೇಶದಲ್ಲಿ ವರ್ಷವೊಂದರಲ್ಲಿ ೨೦ ಕೋಟಿಮಣಸ್ಸಿನ ತುಪ್ಪವು ಖರ್ಚಾಗುತ್ತದೆಂದು ತಿಳಿದುಬರುತ್ತದೆ ತುಪ್ಪವು ಶುದ್ಧವಾಗಿ, ಮತ್ತು ನಿಯಮಿತ ಬಳಕೆ ಮಾಡಲ್ಪಡುವಂತೆ ಮಾಡಲಾಗುವುದು

## ವಿದೇಶ

### ಜಾಪಾನು ಕ್ಷಮಾಪಣೆ ಕೇಳಬೇಕು

ಚೀನದ ಬ್ರಿಟಿಷ್ ರಾಯಭಾರಿಯ ಮೇಲೆ ಜಾಪಾನ್ ವಿಮಾನಗಳು ಗುಂಡೆಸೆದ ಕುರಿತು ಜಾಪಾನು ಕ್ಷಮಾಪಣೆ ಕೇಳಬೇಕು, ಗುಂಡೆಸೆದವರಿಗೆ ತಕ್ಕ ಶಿಕ್ಷೆಯಾಗಬೇಕು, ಮುಂದೆ ಇಂತಹ ವಿದ್ಯಮಾನಗಳು ನಡೆಯದಂತೆ ಜಾಪಾನು ಜಾಗ್ರತೆ ತೆಗೆದುಕೊಳ್ಳಬೇಕೆಂದು ಬ್ರಿಟಿಷ್ ಸರಕಾರವು ಜಾಪಾನ್ ಸರಕಾರಕ್ಕೆ ತಿಳಿಸಿರುವುದು ಇದಕ್ಕೆ ಜಾಪಾನು ಉತ್ತರವನ್ನೇನೂ ಕೊಟ್ಟಿರುವುದಿಲ್ಲ ರಾಯಭಾರಿಯ ಪರಿಸ್ಥಿತಿಯು ಸುಧಾರಿಸುತ್ತಿರುವುದು

### ಚೀನಿಸೋವಿಯಟ್ ಒಪ್ಪಂದ

ರಷ್ಯ ಮತ್ತು ಚೀನೀ ಸರಕಾರಗಳು, ಒಪ್ಪಂದ ಮಾಡಿಕೊಂಡಿರುವವು ಆ ಪ್ರಕಾರ ಎರಡು ರಾಷ್ಟ್ರಗಳೂ ಯುದ್ಧವನ್ನು ನಿಷೇಧಿಸಿ ಅದನ್ನು ರಾಷ್ಟ್ರೀಯ ಧೋರಣೆಯಾಗಿ ಸ್ವೀಕರಿಸಬಾರದು ತಾವು ಪರಸ್ಪರ ಯುದ್ಧ ನಡಿಸಬಾರದು, ಬೇರೆಯಾರಾದರೂ ತಮ್ಮ ಮೇಲೇರಿ ಬಂದರೆ ಅವರಿಗೆ ಯಾವ ಸಹಾಯವನ್ನೂ ಮಾಡಬಾರದೆಂಬುದೇ ಈ ಒಪ್ಪಂದದ ಶರ್ತಗಳಾಗಿವೆ ಇದು 5 ವರ್ಷಗಳ ವರೆಗೆ ಜ್ಯಾರಿಯಲ್ಲಿರುವುದು ಈ ಒಪ್ಪಂದದಿಂದ ಜಾಪಾನು ಬಹಳ ತಳಮಳಗೊಂಡಿದೆ ಗುಪ್ತವಾಗಿ ರಷ್ಯವು ಚೀನಕ್ಕೆ ಸಹಾಯಮಾಡಬಹುದೆಂಬ ಭೀತಿಯು ಜಾಪಾನಿಗುಂಟಾಗಿದೆ

### ಬಂಡಾಯಗಾರರ ವಿಜಯ

ಬಾಸ್ಕ್ ಪ್ರಾಂತದ ಎರಡನೇ ಪ್ರಾಮುಖ್ಯ ಪಟ್ಟಣವಾದ ಸಾಂಟಂಡರನ್ನು ಬಂಡಾಯಗಾರರು ಗೆದ್ದು ವಶಪಡಿಸಿಕೊಂಡಿರುವರು ಸರಕಾರದ ಕಡೆಯ ಸೈನಿಕರೆಲ್ಲಾ ಬಂಡಾಯಗಾರರಿಗೆ ಶರಣಾಗತರಾಗಿರುವರು ಸಾಂಟಂಡರನ್ನು ವಶಪಡಿಸಿಕೊಳ್ಳುವ ಸಮಯ ಯುದ್ಧದಲ್ಲಿ ಇಟೆಲಿಯಾದ ಸೈನಿಕರು ಭಾಗವಹಿಸಿ 16 ಮಂದಿ ಸೈನ್ಯಾಧಿಕಾರಿಗಳೂ 32೦ ಮಂದಿ ಸೈನಿಕರೂ ಕೊಲ್ಲಲ್ಪಟ್ಟಿರುವರು 60 ಮಂದಿ ಅಧಿಕಾರಿಗಳೂ 1616 ಮಂದಿ ಸೈನಿಕರೂ ಗಾಯಗೊಂಡಿರುವರು ಯುದ್ಧವಾರಂಭವಾದಂದಿನಿಂದ ಬಂಡಾಯಗಾರರು ಒಟ್ಟು 51,000 ಮಂದಿಯನ್ನು ಸೆರೆ ಹಿಡಿದಿರುವರು ಬಾಸ್ಕ್ ಪ್ರಾಂತದ ಮಂತ್ರಿಗಳೇ ಮೊದಲಾದವರು ಬ್ರಿಟಿಷ್ ಯುದ್ಧ ನಾವೆಯೊಂದರಲ್ಲಿ ಸಾಂಟಂಡರನ್ನು ಬಿಟ್ಟು ಹೋಗಿರುವರು

ನೀವು ಉಡುಪಿಗೆ ಬಂದಾಗ
ಉಳಕೊಳ್ಳುವುದೆಲ್ಲೆಂದು
ಯೋಚಿಸುವಿರೇಕೆ-?

ಹೈಸ್ಕೂಲುಗಳ ಕೋರ್ಟು ಕಚೇರಿಗಳ ಹೆಚ್ಚೇಕೆ? ಯಾವತ್ತೂ ವ್ಯವಹಾರ ಕ್ಷೇತ್ರಗಳ ಕೇಂದ್ರದಲ್ಲಿ ತಾಲೂಕು ಕಚೇರಿ ಎದುರಿಗಿದೆ.

ಸುಖನಿವಾಸ

ರುಚಿಯಾದ ಪಾನ, ಭೋಜನ,
ಶುಚಿಯಾದ ಸ್ಥಳಾನುಕೂಲತೆ,
ಗ್ರಾಹಕರನ್ನು ತೃಪ್ತಿಗೊಳಿಸುವ
ವ್ಯಯಕ್ಕನುಸಾರವಾದ ಮೇಲ್ವಿಚಾರಣೆ

ಉಡುಪಿಯ ಆದರ್ಶ
ಉಪಹಾರ ಗೃಹ
ಮತ್ತು ಊಟದ ಹೋಟೆಲು

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಪ್ರೊಪ್ರೈಟರ್ಸ್: ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್ಸ್

**Loans & Advances**

ON THE SECURITY OF GOLD, JEWELS AND OTHER VALUABLES ALWAYS AVAILABLE AT MODERATE RATES

THE UDIPI BANK LTD.

UDIPI.

## ನರಿಮನ್ ಪಟೇಲವಾದ

ವೀರ ನರಿಮನರಿಗೆ ಬೊಂಬಾಯಿಯ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕತನವು ಸಿಗದಂತೆ ಸರ್ದಾರ್ ವಲ್ಲಭಾಯಿಯವರು ಸೂತ್ರ ಚಾಲನೆ ಮಾಡಿದರೆಂಬ ಆರೋಪವನ್ನು ಬೊಂಬಾಯಿಯ ಕೆಲವು ಪತ್ರಿಕೆಗಳು ಎಡೆಬಿಡದೆ ಮುಂದೊತ್ತುತ್ತಿವೆ. ಬೊಂಬಾಯಿ ಪಟ್ಟಣದಲ್ಲಿ ಸರ್ದಾರರ ಕುರಿತು ತೀವ್ರ ವಿರೋಧವುಂಟಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯದಿಂದಲೂ ಬೊಂಬಾಯಿಯ ಈ ಪತ್ರಿಕೆಗಳು ತೃಪ್ತವಾಗಿರುವುದಿಲ್ಲ. ಈಗ ಗಾಂಧಿಜಿಯವರೇ ಈ ಕುರಿತು ವಿಚಾರಣೆ ನಡಿಸುವ ಜವಾಬ್ದಾರಿಯನ್ನು ವಹಿಸಿದ್ದಾರೆ. ಈ ಇಬ್ಬರು ಮುಖಂಡರುಗಳ ಅದೃಷ್ಟವು ಈ ವಿಚಾರಣೆಯ ಫಲಿತಾಂಶದ ತಕ್ಕಡಿಯಲ್ಲಿ ತೂಗುತ್ತಿದೆ.

## • ನಮ್ಮ ಕರ್ನಾಟಕ •

**ಬೆಂಗಳೂರು**—ಲೈಸನ್ಸ್ ಪಡೆಯದೆ ಸಭೆ, ಭಾಷಣಮಾಡಕೂಡದೆಂಬ ಬೆಂಗಳೂರು ಮೆಜಿಸ್ಟ್ರೇಟರ ಹುಕುಮನ್ನು ನಿಷೇಧಿಸಲು ಬೆಂಗಳೂರು ಮತ್ತು ಮೈಸೂರು ವಿದ್ಯಾರ್ಥಿಗಳು ಅಗಾಧ ಮುಷ್ಕರವನ್ನು ಹೂಡಿದರು

ಮೈಸೂರು ಸಂಸ್ಥಾನದ ಪ್ರಜಾಸಂಯುಕ್ತ ಪಕ್ಷದವರ ಕಾರ್ಯಕಾರೀ ಸಭೆಯು ಕಳೆದ ತಿಂಗಳ ತಾ ೨೪ರಲ್ಲಿ ಬೆಂಗಳೂರಲ್ಲಿ ಜರಗಿ ಕ್ಲೋಸ್ಪೇಟೆಯಲ್ಲಿ ದಿವಾನರು ಮಾಡಿದ ಭಾಷಣದ ಖಂಡನೆ, ಸಂಸ್ಥಾನದಲ್ಲಿ ಕಾಂಗ್ರೆಸನ್ನು ಬಲಪಡಿಸುವುದು ಬೆಂಗಳೂರು ಮೆಜಿಸ್ಟ್ರೇಟರ ಆಜ್ಞೆಯ ಖಂಡನೆಯೇ ಮೊದಲಾದ ಠರಾವುಗಳು ಪಾಸುಮಾಡಲ್ಪಟ್ಟವು

ಮೈಸೂರು ಮಹಾರಾಜರು ಚಿತ್ರದುರ್ಗ ಡಿಸ್ಟ್ರಿಕ್ಟಿನ ಜಿಲ್ಲಾ ಬೋರ್ಡ ಕಟ್ಟಡದ ಆರಂಭ ಸಮಾರಂಭವನ್ನು ಜರಗಿಸಲು ರಾಜಧಾನಿಯಿಂದ ತೆರಳಲಿರುವರು

**ಬೆಳಗಾಂ**— ಬೆಳಗಾವಿಯಲ್ಲಿ ಶಿವಲಿಂಗಪ್ಪಾ ಹೂಲ ಎಂಬವನು ಟಾಂಗಾಹೊಡೆದುಕೊಂಡು ಬರುವಾಗ ಹನುಮನೆಂಬವನ ಸೈಕಲು ಡಿಕ್ಕಿಯಾಗಿ ಹನುಮನಿಗೆ ವಿಪರೀತ ಗಾಯವಾಯಿತು ಕೂಡಲೇ ಆಸ್ಪತ್ರೆಗೆ ಸಾಗಿಸಿದರೂ ಅಲ್ಲಿ ಅವನು ಮೃತನಾದನು

ಬೆಳಗಾವಿಯಲ್ಲೂ ರಾಷ್ಟ್ರಪತಿಗಳ ನಿರೂಪದಂತೆ ಅಂದಮಾನ ಕೈದಿಗಳ ದಿನಾಚರಣೆಯು ಆಚರಿಸಲ್ಪಟ್ಟಿತು.

**ಧಾರವಾಡ**—ಧಾರವಾಡ ಮ್ಯುನ್ಸಿಪಾಲಿಟಿಯ ಮಾಜಿ ಸಕ್ರೆಟರಿಗಳಾಗಿದ್ದ ಶ್ರೀ ವೆಂಕಟರಾವ್ ನೆಗಳೂರರ ಮೇಲೆ ನಗರಸಭೆಯ ಹಣವನ್ನು ದುರ್ವ್ಯಯಗೊಳಿಸಿದರೆಂಬ ಸಂಗತಿಯ ಕುರಿತು ಖಟ್ಲೆ ನಡೆಸಲ್ಪಟ್ಟಿತ್ತು ಈಗ ಅವರು ಸೋಮೇಶ್ವರ ತೀರ್ಥದಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವರೆಂದು ತಿಳಿದು ಬಂದಿದೆ

**ಮೈಸೂರು**—ಬಾವಾದತ್ತ ತೆರಳಿದ್ದ ಮೈಸೂರು ದಿವಾನರು ಕಳೆದ ೨೦ ರಲ್ಲಿ ಬೆಂಗಳೂರಿಗೆ ಬಂದಿರುವರು

ಮೈಸೂರಿನ ರಾಜಕುಮಾರ ಶ್ರೀ ಜಯಚಾಮರಾಜ ಒಡೆಯರು ಪಾಶ್ಚಾತ್ಯದೇಶದಲ್ಲಿ ಸಂಚರಿಸಿ ಇನ್ನೆರಡು ವರ್ಷ ಅಲ್ಲಿಯ ವಿದ್ಯಾಭ್ಯಾಸವನ್ನು ಹೊಂದಲಿರುವರೆಂದು ತಿಳಿದುಬರುವುದು

ಮೈಸೂರಿನ ವಿದ್ಯಾ ಇಲಾಖೆಯವರು ಸಂಸ್ಥಾನದ ಎಲ್ಲಾ ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲುಗಳ ಕಾರ್ಯಕ್ರಮವನ್ನು ಪ್ರಾರ್ಥನೆಯಿಂದಲೇ ನೆರವೇರಿಸಬೇಕೆಂಬುದರ ಕುರಿತು ಯೋಚಿಸುತ್ತಿರುವರು

**ಮುಂಬಯಿ**—ಇಲ್ಲಿಯ ಮೊಗವೀರಯುವಕ ಸಂಘದವರು ಜನಜಾಗ್ರತಿಗೊಳಿಸಲು ಪ್ರಚಾರಕ ಕಮಿಟಿಯೊಂದನ್ನೇರ್ಪಡಿಸಿ ಕಳೆದ ತಾ ೨೦ರಂದು ಮೊಗವೀರ ರಾತ್ರಿ ಶಾಲೆಯಲ್ಲಿ ಶ್ರೀ ಎಚ್. ಯಸ್ ಕಲ್ಯಾಣರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಕರೆಸಿ "ಯುವಕ ಚಳವಳದ ಆವಶ್ಯಕತೆ"ಯ ಕುರಿತು ಭಾಷಣ ಮಾಡಿಸಿದರು ಡಾ ಎಫ್ ಎಮ್ ಪಿಂಟೋ, ಶ್ರೀಗಳಾದ ಶ್ರೀನಿವಾಸರಾವ್, ಎಸ್ ಕೆ ಮೆಂಡನ್, ವಿ ಕೆ ಕೊಟ್ಯಾನ್, ಎಸ್ ವಿ ಕಾಂಚನ್ ಮೊದಲಾದವರು ಯುವಕಚಳವಳ (youth movement) ದ ಕುರಿತು ಸ್ಫೂರ್ತಿಪ್ರದ ಭಾಷಣವಿತ್ತರು ಅಧ್ಯಕ್ಷರ ಸರಸಭಾಷಣ, ಧನ್ಯವಾದ ಸಮರ್ಪಣೆಗಳಾದ ಬಳಿಕ ಸಭೆಯು ವಿಸರ್ಜಿತವಾಯಿತು.

### ಬೊಂಬಾಯಿಯ ಕೆನರಾ ಸ್ಟೂಡೆಂಟ್ಸ್ ಯೂನಿಯನ್ನಿನ ವರ್ಧಂತಿ ಸಮಾರಂಭ

ಪ್ರಾವಿನ್ಶಿಯಲ್ ಇನ್ಶೂರೆನ್ಸ್ ಕಂಪೆನಿಯ ಬೊಂಬಾಯಿ ಶಾಖಾಧಿಕಾರಿಗಳಾದ ಶ್ರೀ ಕೆ ಯನ್. ಗ್ಯಾಕೊಂಡರವರ ಸಭಾಧ್ಯಕ್ಷತೆಯಲ್ಲಿ ಕೆನರಾ ಸ್ಟೂಡೆಂಟ್ಸ್ ಯೂನಿಯನ್ನಿನವರು ತಮ್ಮ ಸಂಘ ಕೂಟದ ತೃತೀಯ ವರ್ಧಂತಿ ಸಮಾರಂಭವನ್ನು ವೈಭವಾದಿಗಳಿಂದ ಆಚರಿಸಿದರು, ಯೂನಿಯನ್ನಿನ ಶ್ರೇಯಸನ್ನು ಕೋರಿ ಬಂದ ಶುಭ ಸಂದೇಶಗಳು ಓದಲ್ಪಟ್ಟ ಬಳಿಕ ಶ್ರೀಗಳಾದ ಯನ್ ಯಸ್ ಶೆಟ್ಟಿ ಮತ್ತು ಯು ಬಿ ಕುಂದರು ವರ್ಷಾವಧಿ ರಿಪೋರ್ಟನ್ನು ಓದಿದರು ಶ್ರೀಗಳಾದ ಯಫ್ ಯಮ್. ಪಿಂಟೋ, ಕೆ ಯಮ್. ಉದ್ಯಾವರ್, ವಿ ಯಸ್ ಉಳಿಯಾರಗೋಳಿ, ಶ್ರೀ ಪಿ ಯಸ್ ನಾಯರ್ ಮೊದಲಾದವರು ಭಾಷಣವಿತ್ತರು ಕನ್ನಡ ಭಾಷಾ ಪ್ರಚಾರಕರಾದ ಶ್ರೀ ವಿ. ಯನ್ ಬಿಬ್ರೂಕರರು, ಈ ಯೂನಿಯನ್ನಿನ ಒಂದು ಶಾಖೆಯನ್ನು ಗ್ರಾಮದೇವಿ ಕೇಂದ್ರದಲ್ಲಿ ತೆರೆದು ತನ್ಮೂಲಕ ಪರನಾಡ ಕನ್ನಡಿಗರಿಗೆ ನೆರವಾಗಬೇಕಾಗಿದೆ ಎಂದು ಆಡಳಿತೆ ಮಂಡಳಿಯವರನ್ನು ಆಗ್ರಹ ಪೂರ್ವಕ ವಿನಂತಿಸಿದರು, ಅಧ್ಯಕ್ಷರ ಭಾಷಣದ ನಂತರ ಧನ್ಯವಾದಗಳಾದ ಬಳಿಕ ಶ್ರೀಗಳಾದ ಪಿ ಸಿ. ರೈ ಪಿ ವಿ ಪಿಳ್ಳೆ, ಯಮ್ ಯನ್ ಶೆಟ್ಟಿ, ಬಿ ಗೋಪಾಲರು ಸಭಿಕರನ್ನು ವಿವಿಧ ವಿನೋದಗಳಿಂದ ಮನೋರಂಜಿಸಿಯನ್ನುಂಟುಮಾಡಿದರು

### ದೇವಡಿಗರ ಸುಧಾರಕ ಸಂಘ
### ಮುಂಬಯಿ

ಇದರ ೧೭ನೇ ವಾರ್ಷಿಕ ಮಹಾ ಸಭೆಯು ತಾ 25-7-3 ರಲ್ಲಿ ಮೊಗವೀರ ರಾತ್ರಿ ಶಾಲೆಯ ಕಟ್ಟಡದಲ್ಲಿ ಬಿ ಯಸ್ ಉಳ್ಳಾಲರ ಅಧ್ಯಕ್ಷತೆಯಲ್ಲಿ ಜರಗಿತು ಮೊದಲು ಪೈಕಿ ದಿವಂಗತರಾದವರ ದುಃಖ ಸೂಚಕ ಠರಾವಾಗಿ, ಹೊಸ ವರ್ಷದ ಕಾರ್ಯಕಾರೀ ಮಂಡಳಿಯ ನಿರ್ಮಾಣವಾಯಿತು ಸಭಿಕರಲ್ಲಿ ಹಲವರು ಜಾತೀಯ ಏಳ್ಗೆಯ ಕುರಿತು ಮಾತನಾಡಿದರು ಶ್ರೀ ಸುರತ್ಕಲ್ ಸೋಮಪ್ಪ ದೇವಡಿಗರು ಮತ್ತು ಪಾರ್ಟಿಯವರು ಸಂಗೀತ ಸಾಧನಗಳಿಂದ ವೆಂಕಟೇಶಾಚಾರ್ಯರು ಮತ್ತು ಪಾರ್ಟಿಯವರು ಅಸ್ಪೃಶ ಅಂಗಸಾಧನೆಗಳಿಂದ ಸಭಿಕರನ್ನು ಆನಂದಪಡಿಸಿದರು ಧನ್ಯವಾದ ಸಮರ್ಪಣೆಯಾದ ಬಳಿಕ ಸಭಾಂತ್ಯವಾಯಿತು

**ಮೂಡಬಿದ್ರೆ**—ಕಳೆದ ತಾ ೨೫ನೇ ಆದಿತ್ಯವಾರ ಪ್ರತಿ ತಿಂಗಳಲ್ಲಿ ನಡೆಯುವ ರಾಷ್ಟ್ರೀಯ ಜನಸಭೆಯ ಸಮಾರಂಭವನ್ನು, ಶ್ರೀಯುತ ಜ ಮಾಧವ ಶೈಯವರು ನೆರವೇರಿಸಿದರು ಶ್ರೀಯುತ ಕೆ ರಾಮರಾವ್, ಶ್ರೀಯುತ, ಎನ್ ಸಿ ಮುರಾರಿಯವರ ಭಾಷಣಗಳಾದುವು

**ಪಡುಬಿದ್ರೆ**—ಸ್ಥಳೀಕ ಮಹಾಲಿಂಗೇಶರ ದೇವಸ್ಥಾನದಲ್ಲಿ ಉದಯಾದ್ರಿ ಮಿತ್ರ ಮಂಡಳಿಯವರಿಂದ ಶ್ರೀ ಕೃಷ್ಣಾಷ್ಟಮಿಯ ದಿನ 'ಬಿಲ್ಲಹಬ್ಬ' ಎಂಬ ಯಕ್ಷಗಾನ ಕಾಲಕ್ಷೇಪವು ಅಪರಾಹ್ನ ಮೂರರಿಂದ ೧೦ ಘಂಟೆಯ ತನಕ ಊರ ಮಹನೀಯರ ಸೇರುವಿಕೆಯಿಂದಲೂ ಪರ ಊರವರ ಸಹಾನುಭೂತಿಯಿಂದಲೂ ಯಶಸ್ವಿಯಾಗಿ ನಡೆದಿರುತ್ತದೆ.

ಸ್ಥಳೀಕ ಉದಯಾದ್ರಿ ಪ್ರಪಂಚಪತಿ ಕ್ಷೇತ್ರದಲ್ಲಿ ಎಂದಿನಂತೆ ನಡೆದು ಬರತಕ್ಕ ಚೌತಿ ಮಹೋತ್ಸವವು ಗೌರಿ ತೃತೀಯದಿಂದ ವಿಜಯ ದಶಮಿಯ ಪರ್ಯಂತ ನಡೆಯಲಿಕ್ಕಿರುವುದು. ಭಕ್ತಾದಿಗಳೆಲ್ಲರಿಗೂ ಸುಸ್ವಾಗತ

**ಪುತ್ತೂರು**–ಇಬ್ಬರ ನ್ಯಾಯ, ಮೂರನೆಯವನಿಗೆ ವಿಪರೀತ ಗಾಯ!!—ಕಳ್ಳು ಕುಡುಕರ ಜಗಳವಿದು ಒಬ್ಬ ಆಸಾಮಿ ತನ್ನ ಕೊಡೆಯನ್ನು ಎರವಾಗಿ ಇಟ್ಟು ಹಣ ಪಡೆದುಕೊಂಡನು. ನಾಳೆ ತರುವೆನೆಂದು ಹೋದವನು ಮೂರನೆಯ ದಿನ ಹಣ ಸಹಿತ ಬಂದು ಕೊಡೆಯನ್ನು ಕೇಳಲು, ಆತ ಆಗದೆಂದ ಮಾತಿಗೆ ಮಾತು ಬೆಳೆಯಿತು ಅಮಲಿನ ಪ್ರತಾಪವಲ್ಲವೇ? ಸ್ವಲ್ಪ ವಿಪರೀತಕ್ಕೆ ಹೋಯಿತು. ಇಷ್ಟರಲ್ಲಿ ದೂರದಿಂದ ನೋಡುತ್ತಿದ್ದ ಮೂರನೆಯವನೊಬ್ಬನು ನಡುವೆ ಬಿಡಿಸಲು ಬಂದನು. ಆದರೆ ಅವನ ಪಾಡೇನು? "ರಾಜಿ"ಗೆ ಪೆಟ್ಟಾಟ ಪಟ್ಟುದುದಕ್ಕಾಗಿ ಅವನ ಕಣ್ಣೊಂದನ್ನು ಕಿತ್ತು, ಅವನಿಗೆ ಕೊಟ್ಟು "ವಿಪರೀತ ಗಾಯ!" ರಾಜಿಗೆ ಪ್ರಯತ್ನಪಟ್ಟುದು ವ್ಯರ್ಥವಲ್ಲವೆ—ಹೀಗೂ ಆಗಬೇಕೇ—

To,
THE EDITOR
'NAVAUGA'
UDIPI.

Dear editor,

It gives me much pleasure to sincerely wish our District's most esteemed journal, a more illustrious career and a more wide spread circulation in its happy new year to come.

Kindly accept my hearty good wishes and happy greetings as the glorious 'Navayuga's worthy Editor, on the morn of its sweet seventeenth birth day & oblige

I remain sincerely yours,
K. V Bramananda
KARKAL

150 ವರ್ಷಗಳ ಅನುಭವ
ಖಾತ್ರಿಗುಣವನ್ನೀಯುವ ಸ್ವದೇಶೀ ದಿವ್ಯೌಷಧ
ಬಾಣಂತಿಯರ ಸೌಖ್ಯಕ್ಕೆ ಅಮೃತತುಲ್ಯವಾಗಿ
ಸಹಸ್ರಾರು ಸ್ತ್ರೀಯರ ಪ್ರಾಣವನ್ನುಳಿಸಿದ
"ಪ್ರಸೂತ ಸ್ತ್ರೀ ಸಂರಕ್ಷಿಣಿ"
ಎಂಬ
ನಂಜಿನ ಮಾತ್ರೆಗಳು
ಒಮ್ಮೆ ಉಪಯೋಗಿಸಿ ನೋಡಿದಲ್ಲಿ ಔಷಧಿ ಶಕ್ತಿಯು ಮನನವಾಗುವುದು.
ನೂರು ಮಾತ್ರೆಗಳಿಗೆ ರೂ. 4 ಮಾತ್ರ.
ಹೆಚ್ಚಿನ ಮಾಹಿತಿಗಳಿಗೆ ಗರ್ಭಿಣಿ ಹಾಗೂ ಪ್ರಸೂತ ಸ್ತ್ರೀಯರ ರೋಗಗಳ ಸ್ಪೆಶಲಿಸ್ಟರಾದ "ವಾರಂಬಳ್ಳಿ ಬ್ರದರ್ಸ್, ಆಯುರ್ವೇದಾಶ್ರಮ ಬ್ರಹ್ಮಾವರ, ದ. ಕನ್ನಡಾ" ಇವರಿಗೆ ಬರೆಯಿರಿ

HAVE A SOUND SLEEP



By using our Indian made Mosquito curtains highly approved by persons of every rank for their strong netting durability and beautiful finishing

Purchaser of three will get one curtain 6 x 4 x 4 free Packing Free.

POSTAGE EXTRA

Prabhat Trading Co,
12 Sikderpara Lane Barabazaar.
CALCUTTA

ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ 5ರ, ಅರ್ಧಾಂತರಕ್ಕಿಂತ ಮಿಕ್ಕಿ ಬಿಳಿ ಕೂದಲಿದ್ದರೆ ರೂ 9ರ ಬಾಟಲಿಗೆ ಬರೆಯಿರಿ

Bal Kala Stores,
P O Kansisinari (Darbhanga)

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

**S. U. N. & CO.** ***Choukhamba, Benares City.***

ಮೂರು ಇನಾಮುಗಳು.

ಶ್ರೀಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲ ಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲ್ಪಡುವವು. ಸ್ವಾತಂತ್ರ್ಯ ... ಈಗಿನ ಫ್ಯಾಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ ಮಡಿ ಕದಪಾವಿಸ್ಟಿ, ಪೀಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಂಮ್ದಾ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಹೊಸ ನಮೂನೆಯ ಮಗಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ 20ರಿಂದ 55 ಮಗಲು ಸಾದಾ 16 ಮೊಳದ ಸೀರೆ 1ಕ್ಕೆ ರೂ 16ರಿಂದ ರೂ 45ರ ವರೆಗೆ ಅರೆ ಕಡಿತ 16 ಮೊಳ ... ಅಂಚು ರೂ, 10½ ಯಿಂದ ರೂ 16 ... 1ಕ್ಕೆ ರೂ 1½ರಿಂದ ರೂ 10ರ ವರೆಗೆ ... ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

**ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ,** ಚೌಕಂಬಾ, ಬೆನಾರಿಸ್, ಕಾಶಿ



**ನೀವು ನಿಮ್ಮ–ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ?**

ಇಲ್ಲವಾದರೆ, ಹೇಗೆ ಮಾಡುವುದೆಂಬುದನ್ನು ಭದ್ರತೆಯು, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ

# ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ
## ಲಿಮಿಟೆಡ್ (ಅಜ್ಮೀರು)

**ನಮ್ಮ ಅಭಿವೃದ್ಧಿಯ ಅಂಖ್ಯ ಸಂಕೆಗಳು**

| | |
|---|---|
| ಚಾಲ್ತಿಯಲ್ಲಿರುವ ಪೊಲಿಸಿಗಳು | ರೂ **3** ಕೋಟಿ ಮಿಕ್ಕಿದೆ. |
| ಮೂಲಗಳು | ರೂ. **80** ಲಕ್ಷಕ್ಕೂ ಮಿಕ್ಕಿದೆ. |
| ವಾರ್ಷಿಕ ಉತ್ಪನ್ನ | ರೂ. **18** ಲಕ್ಷಕ್ಕೂ ಮಿಕ್ಕಿದೆ |
| ವಿಮೆ ತೆತ್ತುದು | ರೂ **42** ಲಕ್ಷಕ್ಕೂ ಮಿಕ್ಕಿದೆ |

**ಅತ್ಯಧಿಕ ಬೋನಸು**

| ಜೀವಾಂತ್ಯ ವಿಮೆ | ಎಂಡೋವ್ಮೆಂಟ್: |
|---|---|
| ವರ್ಷಕ್ಕೆ ರೂ 1000ಕ್ಕೆ **25**ರಂತೆ | ವರ್ಷಕ್ಕೆ ರೂ 1000ಕ್ಕೆ **20**ರಂತೆ |

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲಿ ಕೆಳಗಿನವರಿಗೆ ಬರೆಯಿರಿ—

ಬಿ ಜಿ ಮರಾಠೆ ಎಸ್ಕ್ವಾಯರ್, ಜನರಲ್ ಮೆನೇಜರ್

(ಅಥವಾ) ಎಂ ಮಾಧವ ರಾವ್ ಎಸ್ಕ್ವಾಯರ್, ಬಿ ಎ ಸುಪರಿಂಟೆಂಡೆಂಟ್ ಒಫ್ ಬ್ರಾಂಚಸ್ ಎಂಡ್ ಚೀಫ್ ಏಜನ್ಸಿಸ್, ಯಸ್. ಐ ಎಂಡ್ ಸಿಲೋನ್.

**ಪಶ್ಚಿಮ ಕರಾವಳಿಗೆ ಓರ್ವ ಪ್ರಾಮುಖ್ಯ ಪ್ರತಿನಿಧಿಗಳು ಬೇಕು.**



**ಪ್ರಕಟವಾಗಿದೆ!** ? **ಪ್ರಕಟವಾಗಿದೆ!**

ನವಯುವಕರನ್ನು ಮುಗ್ಧಗೊಳಿಸುವ ಮುತಾಮುಣಿ! — **ಮಿಸ್ ಲಲಿತ** — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು ಇದೀಗಲೇ ಹೊರಬಿದ್ದಿದೆ.

**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**

ಬರೆದವರು ಯಂ. ವಿ. ಪುತ್ರಾನ್

ಕೂಡಲೇ ಬರಯಿರಿ ಬೆಲೆ **0—8—0**

ವಿಳಾಸ — **M V. Futhran,**
*C/o* 31, Bomanji Lane, *2nd Floor,* ***Fort, BOMBAY***



**15 ವರ್ಷಗಳ ಅನುಭವ!** **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು ಪ್ರಸಿದ್ಧರಾಗಿರುವ

# ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ

**ಗಣಪತಿ ರಾವ್, ಪೈಂಟರ್,**
ಸೋದೆ ಮಠದ ಲೇನು - **ಉಡುಪಿ, ದ. ಕ.**



## ಕ್ರೌನ ರಬ್ಬರ ಸ್ಟಾಂಪು ಕಂಪೆನಿ

ಸ್ಥಾಪನೆ 1926

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಪೀಸುಗಳಿಗೂ ವ್ಯಾಪಾರಸ್ಥರಿಗೂ ಅವಶ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು ಇತ್ಯಾದಿಗಳನ್ನು ಪ್ರತಿಯೊಬ್ಬರ ಅಪೇಕ್ಷೆಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು

**ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು**



# ಗಿಡಗಳು ಮತ್ತು ಬೀಜಗಳು

ಮಹನೀಯರೇ. ತಮಗೆ ಬೇಕಾಗಿರುವ ಎಲ್ಲಾ ತರದ ಗಿಡಗಳು, ಬೀಜಗಳು ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ. ಉಚಿತವಾಗಿ ರವಾನಿಸುತ್ತೇವೆ

**ಡಿ. ಗುರಪ್ಪ ಅಂಡ್ ಸನ್ಸ್**
ಗಿಡ, ಬೀಜ, ಸಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್ ದೊಡ್ಡ ಮಾವಳ್ಳಿ,
**ಬೆಂಗಳೂರು ಸಿಟಿ.**



ಉಡುಪಿಯ ಆದರ್ಶ ಉಪಹಾರಗೃಹ!

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು !** **ಮಿತ ದರದಲ್ಲಿ ಊಟ ಉಪಚಾರಗಳು !**

**ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ !**

**ಸಂಕೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳಿದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**

**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

**ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.**

ಜೂನ್ ತಿಂಗಳ ತಾ **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

### ಚಿಕ್ಕ ಚಿಕ್ಕ ಜಾಹೀರಾತುಗಳು

ಇಷ್ಟೇ ಜಾಗಕ್ಕೆ
**ಒಂದೇ ಬಾರಿಗೆ 0-8-0.**
ಕಂಟ್ರಾಕ್ಟ ದರಗಳಿಗೆ
ಮೆನೇಜರರಿಗೆ ಬರೆಯಿರಿ.

**ಹೊಸ ಏಜಂಟರು**
ಪುತ್ತೂರಿಗೆ
**ಶ್ರೀ. ಎಚ್. ಎಸ್. ಕಾಮತ್**
ಹರಿಹರ ಪ್ರೆಸ್, ಇವರನ್ನು ನಮ್ಮ ಏಜಂಟರನ್ನಾಗಿ ನೇಮಿಸಲಾಗಿದೆ.
**ಮೆನೇಜರ್, ನವಯುಗ.**

**ಬೊಂಬಾಯಿಯಲ್ಲಿ**
ಶ್ರೀ. ವಿ ಎಸ್. ಶಿಬ್ರೂರ್ಕಾರ್
ದಿ. ನೇಶನಲ್ ಕೆನರಾ ನ್ಯೂಸ್ ಏಜನ್ಸಿ, ಪೋರ್ಟ್,
ಇವರಲ್ಲಿ 'ನವಯುಗದ' ಬಿಡಿಪ್ರತಿಗಳು ದೊರೆಯುತ್ತವೆ.

**ಮನೆ ಅಳಿಯ**
ಅಥವಾ
**ಆನಂದ**
ಸರಸ ಸಾಮಾಜಿಕ ಕಾದಂಬರಿ.
**ಬೆಲೆ 0-8-0.**
**ನವಭಾರತ ಬುಕ್ ಡಿಪೊ,**
**ಉಡುಪಿ.**

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ಸಾಫರ್ ಪೋರಿನ ತೋಟಿ ಹೂ ಗಿಡಗಳು (Licheu) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆಬರೆಯಿರಿ.
**Bihar Nursery,**
**P. O. Bihar**
*Nursery (Darbhanga)* **BIHAR**

**ಚುನಾವಣೆ**
ಉಮೇದ್ವಾರಿಗಳ ಪ್ರಕಟನೆಗಳನ್ನು (ಮೆನಿಫೆಸ್ಟೊ) ಅತ್ಯಂತ ದಕ್ಷತೆಯಿಂದ ಪ್ರಕಟಿಸಲಾಗುವುದು. ದರಗಳಿಗೆ ಬರೆಯಿರಿ.
**ಮೆನೇಜರ್, ನವಯುಗ**

ಇನ್ನು ಮುಂದೆ
ಈ ರೀತಿಯಾಗಿ
**ಚಿಕ್ಕ ಜಾಹೀರಾತುಗಳನ್ನು**
ಪ್ರಕಟಿಸುವ
**ಯೋಜನೆ ಮಾಡಲಾಗಿದೆ.**


# ನಮ್ಮ ದೇಶದ ಧರ್ಮಜೀವಿಗಳು

## ಹಿಂದಿನ ಸಾಧು ಸನ್ಯಾಸಿಗಳ ಆದರ್ಶವೆಲ್ಲಿ? ಇಂದಿನ ಉಂಡಾಡಿಗಳೂ, ವಿಷಯಲಂಪಟರೂ, ಸ್ವಾರ್ಥಿಗಳೂ ಆದ ಧರ್ಮಜೀವಿಗಳೆಲ್ಲಿ?

(ಸುಪ್ರಸಿದ್ಧ ಹಿಂದೀ ಚಾಂದ್ ಪತ್ರಿಕೆಯ ಬೋಧಪರ ಸಂಪಾದಕೀಯ ಲೇಖನದ ಅನುವಾದ)

[ಅನುವಾದಕ:—ಉ. ಚಂದಪ್ಪ, ಮುಂಬಾಯಿ]

ಜಗತ್ತಿನಲ್ಲಿ ಮಾನವೀಯ ಸಭ್ಯತೆಯು ಪ್ರಸಾರವಾದಂದಿನಿಂದ, ಪ್ರತ್ಯೇಕ ದೇಶ ವ ಸಮಾಜದಲ್ಲಿ, ಒಂದಲ್ಲೊಂದು ರೂಪದಿಂದ ಧರ್ಮಜೀವಿಗಳ ಅಸ್ತಿತ್ವವು ನಡೆದುಬಂದಿದೆ. ಪ್ರಕೃತಿಯ ರಹಸ್ಯಗಳನ್ನು ತಿಳಿಯಲಾಗದ ಕಾರಣ ಮನುಷ್ಯನ ಹೃದಯದಲ್ಲಿ ಆರಂಭದಿಂದಲೇ ನಾನಾ ತರದ ಶಂಕೆಗಳೂ ಅಂಧ-ವಿಶ್ವಾಸಗಳೂ ಆಧ್ಯಾತ್ಮಿಕ ಭಾವನೆಗಳೂ ಉತ್ಪನ್ನವಾಗುತ್ತಲಿದ್ದು, ಅವುಗಳ ಪೂರ್ತಿ ಸಮಾಧಾನಗಳನ್ನು ಈ ಧರ್ಮಜೀವಿಗಳು ಒಂದಲ್ಲೊಂದು ವಿಧದಿಂದ ಮಾಡುತ್ತ ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡು ಬಂದಿರುವರು. ಪಾರ್ಸಿ, ಯಹೂದಿ, ಕ್ರೈಸ್ತ, ಮುಸಲ್ಮಾನರಾದಿ ಸಮಸ್ತ ಸಂಪ್ರದಾಯಗಳಲ್ಲಿ ಈ ತರದ ಧರ್ಮಗುರುಗಳೂ ಪುರೋಹಿತರೂ ಸದಾ ಕಾಲದಿಂದ ಕಂಡುಬರುತ್ತಾರೆ. ರೋಮ್ ಸಾಮ್ರಾಜ್ಯವಂತೂ ನೂರಾರು ವರ್ಷಗಳ ತನಕ ಕ್ರೈಸ್ತ ಧರ್ಮಗುರುಗಳ ಅಧಿಕಾರದಲ್ಲೇ ಇದ್ದಿತು. ಮುಸಲ್ಮಾನರ ಅನೇಕ ಬಾದಶಹರುಗಳು ಕೂಡಾ ಫಕೀರರ ಮತ್ತು 'ಔಲಿಯಾ'ರುಗಳ ಪರಮ ಭಕ್ತರಾಗಿದ್ದರು. ಯುನಾನ್ ಈಜಿಪ್ತ ಮೊದಲಾದ ಪ್ರಾಚೀನ ದೇಶಗಳಲ್ಲಿ ಪುರೋಹಿತರ ಅತ್ಯಧಿಕ ಪ್ರಾಬಲ್ಯವಿದ್ದಿತೆಂದು ಪುರಾತತ್ವವೇತ್ತರುಗಳ ಶೋಧನೆಯಿಂದ ಸಿದ್ಧವಾಗಿದೆ. ಆದರೆ ನಾವು ಭಾರತೀಯ ಇತಿಹಾಸ ಹಾಗೂ ಹಿಂದೂ ಧರ್ಮಗ್ರಂಥಗಳ ಪುಟಗಳನ್ನು ಮಗುಚಿ ನೋಡಿದರೆ, ಭಾರತವರ್ಷದಲ್ಲಿ ಧರ್ಮಜೀವಿಗಳ ಪ್ರಭಾವವು ಯಾವ ಮೇರೆಯನ್ನು ಮುಟ್ಟಿದ್ದಿತೋ ಅಲ್ಲಿಯವರೆಗೆ ಇತರ ಯಾವುದೊಂದು ದೇಶದಲ್ಲಿಯೂ ಮುಟ್ಟಿರಲಿಲ್ಲವೆಂದು ತಿಳಿದುಬರುವುದು. ಇಲ್ಲಿ ಧರ್ಮಜೀವಿಗಳ ಯಾಚನೆಗಾಗಿ ಜನರು ತಮ್ಮ ರಾಜ್ಯಪಟ್ಟವನ್ನೂ ಹೆಂಡರು ಮಕ್ಕಳನ್ನೂ ಮಾತ್ರವೇ ಅಲ್ಲ, ತಮ್ಮ ದೇಹವನ್ನು ಕೂಡಾ ಸಮರ್ಪಿಸಿರುವರು. ಒಂದೊಂದು ಯಜ್ಞದಲ್ಲಿ ಪುರೋಹಿತರಿಗೆ ಲಕ್ಷಗಟ್ಟಳೆ ಗೋವುಗಳೂ ಕೋಟಿಗಟ್ಟಳೆ ಸ್ವರ್ಣ ಮುದ್ರೆಗಳೂ ದಾನವಾಗಿ ಕೊಡಲ್ಪಟ್ಟವೆ. ಧರ್ಮಜೀವಿಗಳ ಬಲೆಗೆ ಸಿಕ್ಕ ಹರಿಶ್ಚಂದ್ರನು ತನ್ನ ರಾಜ್ಯವನ್ನು ಕಳೆದುಕೊಂಡು, ಪತ್ನೀ-ಪುತ್ರರನ್ನು ಮಾರಿ, ಸ್ವಯಂ ಚಾಂಡಾಲನ ದಾಸನಾದನು. ಇದೇ ಕಾರಣದಿಂದ ಮಯೂರಧ್ವಜನಿಗೆ ತನ್ನ ಪುತ್ರನನ್ನು ವಧಿಸಬೇಕಾಯಿತು ಬಲಿಗೆ ಶರೀರವನ್ನೇ ಅಳೆದುಕೊಡಬೇಕಾಯಿತು. ಈ ಪ್ರಕಾರದ ಉದಾಹರಣೆ ಉಪಾಖ್ಯಾನಗಳು ಪುರಾಣಗಳಲ್ಲಿಯೂ ಕಾವ್ಯಗಳಲ್ಲಿಯೂ ತುಂಬಿಕೊಂಡಿವೆ. ಅವುಗಳಲ್ಲಿ ದಶಮಾಂಶವಾದರೂ ಸತ್ಯವೆಂದು ನಂಬುವುದಾದರೆ, ಧರ್ಮಜೀವಿಗಳೇ ಚಿರಕಾಲದಿಂದ ಈ ದೇಶದ ವಾಸ್ತವಿಕ ಸ್ವಾಮಿಗಳೂ ಕರ್ತರೂ ಧರ್ತರೂ ಆಗಿದ್ದು, ಅನ್ಯ ಸಮಸ್ತ ವರ್ಣ ಹಾಗೂ ವೃತ್ತಿಯವರನ್ನು ಛಲ-ಬಲಗಳಿಂದ ತಮ್ಮ ಬಂಧನದಲ್ಲಿರಿಸಿದ್ದರೆಂದು ಹೇಳಬೇಕಾಗುವುದು.

ಸಾಮಾನ್ಯವಾಗಿ ಜನರಲ್ಲಿ ನೆಲೆಗೊಂಡಿರುವ ಅದೇ ಪ್ರಾಚೀನ ಧೋರಣೆ ಹಾಗೂ ಶ್ರದ್ಧೆಯ ಫಲವಾಗಿ, ವರ್ತಮಾನ ಸಮಯದಲ್ಲಿಯೂ ಈ ದೇಶದಲ್ಲಿ ಧರ್ಮಜೀವಿಗಳ ಬಾಹುಲ್ಯವೂ ಪ್ರಬಲತೆಯೂ ಇರುವಂತೆ ಜಗತ್ತಿನ ಇನ್ನಾವ ಭಾಗದಲ್ಲಿಯೂ ಕಂಡುಬರುವುದಿಲ್ಲ. ನೀವು ಇಲ್ಲಿಯ ಯಾವುದಾದರೂ ಚಿಕ್ಕದೊಂದು ಹಳ್ಳಿಯನ್ನು ಸಂದರ್ಶಿಸಿರಿ, ಅಲ್ಲಿಯೂ ನಿಮಗೆ ಇಂತಹ ಒಂದಲ್ಲೊಂದು ಮೂರ್ತಿಯ ದರ್ಶನವು ಅವಶ್ಯವಾಗಿಯೂ ಆಗುವುದು. ಏನಿಲ್ಲೆಂದರೂ ಗ್ರಾಮದ ಬಾವಿ ಇಲ್ಲವೆ ಧರ್ಮಶಾಲೆಯ ಬಳಿಯಲ್ಲಿ ಇಂತಹ ಒಬ್ಬಾನೊಬ್ಬ ಜೀವಿಯು ಆಸನಹಾಕಿ ಕುಳಿತಿರುವುದನ್ನೂ ಮತ್ತು ಅವನ ಹತ್ತಿರ ಪ್ರಾತಃ ಸಾಯಂಕಾಲಗಳಲ್ಲಿ ಧರ್ಮ ಜಿಜ್ಞಾಸುಗಳಾದ ಭಕ್ತರುಗಳ ಚಿಕ್ಕ-ದೊಡ್ಡ ಮಂಡಲಿಯೊಂದು ಕೂಡುತ್ತಿರುವುದನ್ನೂ ನೀವು ಕಾಣುವಿರಿ. ಪ್ರತಿಯೊಂದು ಸಾಧಾರಣ ತರಗತಿಯ ಗ್ರಾಮದಲ್ಲಿ ಕನಿಷ್ಠಪಕ್ಷ ಒಂದು ದೇವಸ್ಥಾನವಾದರೂ ಅವಶ್ಯ ಕಾಣಬರುವುದಲ್ಲದೆ, ನಾಲ್ಕಾರು ವ್ಯಕ್ತಿಗಳು ಅದರ ಆಧಾರದಿಂದಲೇ ತಮ್ಮ ಜೀವನವನ್ನು ಸಾಗಿಸುತ್ತಿರುವರು. ಇದಲ್ಲದೆ ಎಷ್ಟೋ ಭಿಕಾರಿಗಳು ಮನೆ-ಮನೆ ಅಲೆದಾಡುತ್ತಿರುವುದು ಕಂಡುಬರುವುದು. ಅವರಲ್ಲಿ ಹೆಚ್ಚಿನವರು ತಮ್ಮನ್ನು ಬ್ರಾಹ್ಮಣರೆಂದೇ ಹೇಳಿಕೊಳ್ಳುತ್ತ, ಭಿಕ್ಷೆಬೇಡಲಿಕ್ಕೆ ತಾವು ಹಕ್ಕುದಾರರೆಂಬುದನ್ನು ತೋರಿಸುವರು. ಕೆಲವರು ತಮ್ಮನ್ನು ಸಿದ್ಧಿಹೊಂದಿದ ಸಾಧು ಮಹಾತ್ಮರುಗಳೆಂದು ಭಾವಿಸಿಕೊಂಡು ಭಿಕ್ಷೆ ಕೊಡದವರಿಗೆ ಮನಬಂದಂತೆ ಬೈದು, ಶಾಪಕೊಡಲಿಕ್ಕೂ ಕೂಡ ಉದ್ಯುಕ್ತರಾಗುತ್ತಾರೆ. ಇನ್ನು ಕೆಲವು ಸಾಧುಗಳು ಒಬ್ಬಂಟಿಗರಾಗಿ ಸಂಚರಿಸುವುದಕ್ಕೆ ಬದಲಾಗಿ ಮಂಡಲಿಯನ್ನು ಕಟ್ಟಿಕೊಂಡು ದೇಶವನ್ನು ಸುತ್ತಾಡುತ್ತಿರುವರು. ಅವರು ಪ್ರತ್ಯೇಕ ಪಟ್ಟಣ ಯಾ ಗ್ರಾಮದಲ್ಲಿ ಅಲ್ಲಿಯ ನಿವಾಸಿಗಳು ತಮ್ಮನ್ನು ಯಥೋಚಿತ ಸತ್ಕರಿಸುತ್ತಿರುವ ತನಕ ಉಳಕೊಂಡು, ಯಾವಾಗ ಜನರಲ್ಲಿ ತಮ್ಮ ಮೇಲಣ ಶ್ರದ್ಧೆಯು ಕಡಿಮೆಯಾಗುತ್ತ ಬರುತ್ತದೋ, ಅಥವಾ ತಮಗಿಂತ ಅಧಿಕ ಪ್ರಭಾವಶಾಲಿ ಯಾವ ಬೇರೊಂದು ಮಂಡಲಿಯು ಅಲ್ಲಿಗೆ ಆಗಮಿಸುತ್ತದೋ, ಆಗ ಅಲ್ಲಿಂದೆದ್ದು ಯಾವುದಾದರೊಂದು ಹೊಸ ಸ್ಥಾನಕ್ಕೆ ತೆರಳಿಬಿಡುವರು. ಇವರು ಪ್ರಾಯಶಃ ತಮ್ಮ ಹತ್ತಿರ ಒಂದು ಚಿಕ್ಕ 'ಸಂಚಾರಿಕ ದೇವ-ಮಂದಿರ'ವನ್ನಿಟ್ಟುಕೊಂಡು, ಪ್ರಾತಃ ಸಾಯಂಕಾಲಗಳಲ್ಲಿ ಅದನ್ನು ಬಹಳ ಆಡಂಬರದಿಂದ ಪೂಜಿಸುತ್ತಾರೆ. ಧರ್ಮ ಪ್ರಾಣರಾದ ಜನರು, ಇವರಿಗೆ ಏನೂ ಕೊಡದಿದ್ದರೆ ದೇವತಾರ್ಚನೆಯು ನಡೆಯಲಾರದೆಂದು ಭಾವಿಸುತ್ತಾರಾದ ಕಾರಣ, ಇವರಿಗೇನಾದರೂ ಸಿಕ್ಕದೆ ಹೋಗುವುದಿಲ್ಲ. ಇನ್ನು ಮುಂದೆ ಮಠಾಧಿಪತಿಗಳಾದ ಸಾಧು-ಮಹಂತರ ನಂಬರವು ಬರುತ್ತದೆ. ಇವರ ಹತ್ತಿರ ಯಾರಾದರೂ ರಾಜರಾಗಲಿ, ಜಮೀನುದಾರರಾಗಲಿ ಯಾ ವರ್ತಕರಾಗಲಿ ಬಿಟ್ಟುಕೊಟ್ಟಿರುವ, ಇಲ್ಲವೆ ಜನ ಸಾಮಾನ್ಯರಿಂದ ಕಾಣಿಕೆಯಾಗಿ ಬಂದ ದ್ರವ್ಯದಿಂದ ಕೊಂಡುಕೊಂಡ ಆಸ್ತಿ-ಪಾಸ್ತಿಗಳಿದ್ದು, ತನ್ಮೂಲಕ ಇವರು ಸುಖವಾಗಿ ಕಾಲಕಳೆಯುತ್ತಾರೆ. ಇವರಲ್ಲಿ, ಶ್ರದ್ಧಾಳುಗಳ ವ ಭಕ್ತರ ಮೂಲಕ ವರ್ಷಂಪ್ರತಿ ಲಕ್ಷಾಂತರ ರೂಪಾಯಿಗಳ ಉತ್ಪತ್ತಿಯಿದ್ದು, ಐಶ್ವರ್ಯದಲ್ಲಾಗಲಿ ವಿಲಾಸ-ವೈಭವದಲ್ಲಾಗಲಿ ದೊಡ್ಡ ಧನಾಢ್ಯರಿಗೂ ಭೂಮಾಲೀಕರಿಗೂ ನಾಚಿಯಾಗುವಂತಹ ದೊಡ್ಡ ದೊಡ್ಡ ಮಂದಿರಗಳ ಹಾಗೂ ತೀರ್ಥ ಸ್ಥಾನಗಳ ಮಹಂತರೂ ಅಧಿಕಾರಿಗಳೂ ಸಮ್ಮಿಳಿತರಾಗಿರುವರು. ತೀರ್ಥಕ್ಷೇತ್ರಗಳಲ್ಲಿರುವ ಅಗಣಿತ ಪಂಡರುಗಳು ಸಹಾ ಧರ್ಮಜೀವಿಗಳೊಂದಿಗೇನೇ ಪರಿಗಣಿಸಲ್ಪಡುತ್ತಾರೆ. ಇವರಿಗೆಲ್ಲಾ ಕೈಕಾಲು ಅಲ್ಲಾಡಿಸಿದ ವಿನಹ ಕೇವಲ ಗಂಗಾಮಾತೆ ಅಥವಾ ಪಿತೃಗಳ ಹೆಸರಿಂದ ವರ್ಷಂಪ್ರತಿ ಕೋಟಿಗಟ್ಟಲೆಯ ಧನವು ಲಭಿಸುತ್ತಿದ್ದು, ಅದನ್ನವರು ಬರೇ ಸುಖೋಪಭೋಗಗಳಲ್ಲಿಯೂ ಪಾರಸ್ಪರಿಕ ಕಲಹಗಳಲ್ಲಿಯೂ ವಿನಿಯೋಗಿಸುತ್ತಾರೆ.

ಮೇಲೆ ಉಲ್ಲೇಖಿಸಿರುವ ವಿಭಿನ್ನ ಶ್ರೇಣಿಯ ಧರ್ಮಜೀವಿಗಳ ಪೈಕಿ-ಮಠಾಧಿಪತಿಗಳು, ಮಹಂತರುಗಳು, ಭಿನ್ನ-ಭಿನ್ನ ಸಂಪ್ರದಾಯಗಳ ಗುರುಗಳು, ದೊಡ್ಡ ದೊಡ್ಡ ದೇವಸ್ಥಾನಗಳ ಅಧಿಷ್ಠಾತರುಗಳು ಮತ್ತು ತೀರ್ಥಗಳ ಪಂಡರು-ಇವರೇ ಪ್ರಾಮುಖ್ಯರಾಗಿರುವುದರಿಂದ, ಇವರ ವಿಷಯದಲ್ಲಿಯೇ ವಿಶೇಷ ರೂಪದಿಂದ ನಮಗೆ ಈ ಲೇಖನದಲ್ಲಿ ವಿಚಾರಿಸಬೇಕಾಗಿದೆ ಏಕೆಂದರೆ, ಸಮಾಜದ ಮೇಲೆ ಇವರ ಅಸಾಧಾರಣ ಅಧಿಕಾರವಿರುತ್ತದೆ; ಅಸಂಖ್ಯಾತ ಜನರು ಇವರನ್ನು ಆದರ-ಸನ್ಮಾನಗಳಿಂದ ಕಾಣುತ್ತಾರೆ; ಇವರ ಹತ್ತಿರ ಕೋಟ್ಯಾಂತರದ ಸಂಪತ್ತಿಯಿರುತ್ತದೆ-ಇವೇ ಕಾರಣಗಳಿಂದಾಗಿ ಇವರ ನಡೆ ನುಡಿಗಳು ಜನತೆಯ ಮೇಲೆ ವಿಶೇಷ ಪರಿಣಾಮಕಾರಿಯಾಗುತ್ತವೆ. ಆಧುನಿಕ ಶಿಕ್ಷಣವನ್ನು ಹೊಂದಿದ ಜನರ ಒಂದು ದೊಡ್ಡ ಭಾಗದ ಮೇಲಿನ ಇವರ ಪ್ರಭಾವವು ಈಗ ದೂರವಾಗಿದೆಯಲ್ಲದೆ, ಅನೇಕರು ಇವರನ್ನು ವಿರೋಧಿಸಲಿಕ್ಕೂ ತೊಡಗಿದ್ದಾರೆ. ಆದರೆ ಅಂಥವರ ಸಂಖ್ಯೆಯು ನೇಕಡಾ ಒಂದಕ್ಕಿಂತ ಹೆಚ್ಚಿಗೆ ದೊರೆಯುವುದು ಕಷ್ಟ, ಉಳಿದ ಜನರು (ಇವರಲ್ಲಿ ಅಧಿಕಾಂಶ ಗ್ರಾಮ ವಾಸಿಗಳು) ಈಗಲೂ ಅದೇ ಅಂಧಕಾರದಲ್ಲಿ ಬಿದ್ದುಕೊಂ

ಡು, ಅವರನ್ನು ಪೂಜ್ಯರೆಂದೂ ಶ್ರದ್ಧೇಯರೆಂದೂ ನಂಬಿಕೊಂಡಿದ್ದಾರೆ ಅಲ್ಲದೆ, ಪಟ್ಟಣಗಳಲ್ಲಿರುವ ಅನೇಕ ದೊಡ್ಡ ದೊಡ್ಡ ವ್ಯವಸಾಯಿಗಳೂ ಸರಕಾರದ ಉಚ್ಚಪದವಿಗಳಲ್ಲಿ ಪ್ರತಿಷ್ಠಿತರಾಗಿರುವವರೂ ಅವರ ಅನುಯಾಯಿಗಳಾಗಿರುವರು. ಇಷ್ಟೇ ಅಲ್ಲ, ಈ ವಿಷಯಗಳಲ್ಲಿ ಶ್ರದ್ಧೆ ವಿಶ್ವಾಸಗಳನ್ನಿಡದವರು ಕೂಡಾ ಸಮಯ ಬಂದಾಗ ಅಪಕೀರ್ತಿಯ ಭಯದಿಂದ ಅನ್ಯರ ಅನುಕರಣೆ ಮಾಡುತ್ತಾರೆ.

ವರ್ತಮಾನ ಕಾಲದ ಧರ್ಮಜೀವಿಗಳ ಕುರಿತು ಆಲೋಚಿಸುವುದಕ್ಕಿಂತ ಮೊದಲು ನಾವು ತಿಳಿಸಲಿಚ್ಛಿಸುವುದೇನೆಂದರೆ,-ನಮ್ಮ ವಿರೋಧವು ನಿಜವಾದ ತ್ಯಾಗಿಗಳೂ ತಪಸ್ವಿಗಳೂ ಈಶ್ವರ ಪ್ರೇಮಿಗಳೂ ಭಗವದ್ಭಜನೆಯಲ್ಲಿ ಅನುರಕ್ತರೂ ಆಗಿರುವ ಸಾಧುಗಳ ಕುರಿತಲ್ಲ. ಸಾಮಾನ್ಯವಾಗಿ ನಮ್ಮ ಮತ್ತು ಅವರ ಧಾರ್ಮಿಕ ವಿಶ್ವಾಸಗಳಲ್ಲಿ ಅಂತರವಿರಬಹುದು; ಅವರ ಜಪತಪಗಳನ್ನು ನಾವು ವಿಶೇಷ ಮಹತ್ವಪೂರ್ಣಗಳೆಂದು ಎಣಿಸದಿರಲೂ ಬಹುದು. ಆದರೂ, ಯಾರು ಸಾಂಸಾರಿಕ ಸುಖಗಳನ್ನು ತ್ಯಜಿಸಿ, ಲೋಕಹಿತ ದೃಷ್ಟಿಯಿಂದ ಶಾರೀರಕ ಕಷ್ಟಗಳನ್ನು ಸಹಿಸುತ್ತಾ ಆಧ್ಯಾತ್ಮಿಕ ಉನ್ನತಿಯ ಪ್ರಯತ್ನದಲ್ಲಿ ತತ್ಪರರಾಗಿರುವರೋ, ಅಂಥವರು ಆದರಪೂರ್ಣದೃಷ್ಟಿಯಿಂದ ಕಾಣಲಿಕ್ಕೆ ಯೋಗ್ಯರಿರುತ್ತಾರೆ. ಹಿಂದುಗಳ ಧರ್ಮ ಗ್ರಂಥಗಳಲ್ಲಿ ವರ್ಣಿಸಿರುವ ಸಾಧುಗಳ ಚರಿತ್ರೆ ಮತ್ತು ನಿಯಮಗಳನ್ನು ಇಂದಿನ ಸಾಧುಗಳು ಪಾಲಿಸುತ್ತಿದ್ದ ಪಕ್ಷದಲ್ಲಿ ಯಾರಿಗೂ ಅವರ ಸಮಾಜದ ಕುರಿತು ಆಕ್ಷೇಪವೆತ್ತುವ ಸಂದರ್ಭವೇ ದೊರೆಯುತ್ತಿದ್ದಿಲ್ಲ. ಅಲ್ಲದೆ, ಅವರು ಸಮಾಜಕ್ಕೆ ಹಾನಿಕಾರಕರೂ ಭಾರಸ್ವರೂಪರೂ ಆಗಿರುವುದಕ್ಕೆ ಬದಲಾಗಿ, ಅಗತ್ಯವೂ ಲಾಭದಾಯಕವೂ ಆದ ಒಂದು ಅಂಗವೆಂದು ಗಣಿಸಲ್ಪಡುತ್ತಿದ್ದರು. ಉದಾಹರಣಾರ್ಥವಾಗಿ ಗರುಡ ಪುರಾಣದಲ್ಲಿ ಕೊಟ್ಟಿರುವ ಸಾಧುಗಳ ಲಕ್ಷಣಗಳನ್ನು ನೋಡಿರಿ

"ಯಾರು ಸನ್ಮಾನದಿಂದ ಸಂತುಷ್ಟರಾಗದೆಯೂ ಅವಮಾನದಿಂದ ಕ್ರುದ್ಧರಾಗದೆಯೂ ಇರುತ್ತಾರೋ, ಒಂದು ವೇಳೆ ಕ್ರುದ್ಧರಾದರೂ ಮುಖದಿಂದ ಪರುಷ ವಾಕ್ಯಗಳನ್ನು ಆಡುವುದಿಲ್ಲವೋ ಅವರೇ ಸಾಧುಗಳು. ಸಾಧುಗಳು ಸದಾ ಆತ್ಮಸುಖ ಮತ್ತು ಭೋಗೇಚ್ಛೆಯಿಂದ ವಿರಕ್ತರಾಗಿದ್ದು ಸರ್ವ ಪ್ರಾಣಿಗಳ ಸುಖಕ್ಕಾಗಿ ಪ್ರಯತ್ನಿಸುತ್ತಿರುವರು. ಅವರು ಅನ್ಯರ ದುಃಖವನ್ನು ಕಂಡು ಕಾತರರಾಗಿ ತಮ್ಮ ಸಮಸ್ತ ಸುಖವನ್ನೂ ಮರೆತು ಬಿಡುವರು. ವೃಕ್ಷವು ಹೇಗೆ ಸ್ವಯಂ ದಾರುಣ ತಾಪವನ್ನು ಸಹಿಸುತ್ತಿದ್ದು ಇತರರನ್ನು ದಾರುಣತಾಪದಿಂದ ರಕ್ಷಿಸುತ್ತದೆಯೋ, ಹಾಗೆಯೇ ಸಾಧುಗಳು ಸದಾ ತಾವು ಕಷ್ಟಸಹಿಸಿ ಅನ್ಯರಿಗೆ ಉಪಕಾರವನ್ನೇ ಮಾಡುತ್ತಿರುವರು."

ಮಹಾನಿರ್ವಾಣ ತಂತ್ರದಲ್ಲಿ ಬರೆದಿರುವುದೇನೆಂದರೆ:—'ಯಾರು ದೇವಾಯತನದಲ್ಲಿ ವಾಸಿಸುತ್ತಿದ್ದು, ದೇವ-ಕಲ್ಪರೂ ದೃಢವ್ರತರೂ ಸತ್ಯ-ಧರ್ಮ ಪರಾಯಣರೂ ಸತ್ಯವಾದಿಗಳೂ ಆಗಿರುವರೋ ಅಂಥವರೇ ಸಾಧುಗಳೆನಿಸಿಕೊಳ್ಳುವರು."

ಮೇಲೆ ಉದ್ಧರಿಸಿದ ಸಾಧುಗಳ ಲಕ್ಷಣಗಳನ್ನು ಅವಲೋಕಿಸಿದರೆ, ಈಗಿನ ಸಾಧುನಾಮಧಾರಿಗಳು ಈ ವರ್ಗಕ್ಕೆ ಎಂದಿಗೂ ಬರಲಾರರೆಂದು ಕಂಡುಬರುತ್ತದೆ. ಒಂದು ವೇಳೆ, ರಾಜಕೀಯ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿದ್ದು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ತನು-ಮನ ಧನಗಳಿಂದ ಜನತೆಯ ಸೇವೆಗೈಯುತ್ತಿರುವ ಕೆಲವೊಂದು ವ್ಯಕ್ತಿಗಳನ್ನು ಮಾತ್ರ ಈ ಶ್ರೇಣಿಯಲ್ಲಿ ಪರಿಗಣಿಸಬಹುದು

ಇದಂತೂ ಸಾಧುಗಳ ಲಕ್ಷಣಗಳ ಮಾತಾಯಿತು. ಈಗ ನಾವು ವಿಷ್ಣು ಪುರಾಣದಲ್ಲಿ ವರ್ಣಿಸಿರುವ ಸಾಧುಗಳ ಅವಶ್ಯ ನಿಯಮಗಳನ್ನು ಉಲ್ಲೇಖಿಸುವೆವು. ಆ ಮೂಲಕ ಯಾವ ತರದ ವ್ಯಕ್ತಿಯು ಸಾಧುವಾಗಬಹುದೆಂಬುದೂ ಮತ್ತು ಅವನಿಗೆ ಎಂತಹ ತ್ಯಾಗ ಹಾಗೂ ಕಷ್ಟಸಹನೆಯ ಆವಶ್ಯಕತೆಯಿದೆಯೆಂಬುದೂ ಗೊತ್ತಾಗುವುದು. ಈ ಸಮಯ ಕಾವೀ ಬಣ್ಣದಿಂದ ಬಟ್ಟೆಯನ್ನು ರಂಗಿಸಿ ಸಾಧುಗಳಾಗುವವರೂ, ಇಲ್ಲವೆ ಯಾರಾದರೂ ಮಹಂತ ಗೋಸಾಯಿ ಆದಿಯರ ಶಿಷ್ಯರಾಗಿ ಪೂಜನೀಯರು ಮತ್ತು ವಂದನೀಯರೆನ್ನಿಸಿಕೊಳ್ಳುವವರೂ, ಆ ಮೇರೆಗೆ ನಿತಾಂತ ಉಪಹಾಸಾಸ್ಪದರಾಗಿ ಕಂಡುಬರುತ್ತಾರೆ ವಿಷ್ಣುಪುರಾಣದ ಮೂರನೇ ಖಂಡದ ಒಂಭತ್ತನೇ ಅಧ್ಯಾಯದಲ್ಲಿ ಭಿಕ್ಷುಗಳ ಹಾಗೂ ಸನ್ಯಾಸಿಗಳ ಕರ್ಮಗಳನ್ನು ವರ್ಣಿಸುತ್ತಾ ಬರೆದಿರುವುದೇನೆಂದರೆ:-

"ಭಿಕ್ಷುವು ಧರ್ಮ—ಅರ್ಥ—ಕಾಮರೂಪವಾದ ತ್ರಿವರ್ಗಸಾಧನ ಸಮುದಾಯವನ್ನೂ ಯಾಗಾದಿಗಳ ಅನುಷ್ಠಾನವನ್ನೂ ತ್ಯಜಿಸಿರತಕ್ಕದ್ದು. ಅವನು ಶತ್ರು—ಮಿತ್ರ ಹಾಗೂ ಚಿಕ್ಕ—ದೊಡ್ಡ ಎಲ್ಲಾ ಪ್ರಾಣಿಗಳ ಮಿತ್ರನಾಗಿರಬೇಕು ವಾಕ್ ಮನ ಕರ್ಮಗಳ ಮೂಲಕ ಯಾವುದೊಂದು ಜೀವದ ಅನಿಷ್ಟಾಚರಣೆಯನ್ನು ಮಾಡಬಾರದು. ಸದಾ ಯೋಗರತನಾಗಿದ್ದು ಎಲ್ಲರ ಸಂಗವನ್ನು ಬಿಟ್ಟಿರಬೇಕು. ಅವನು ಗ್ರಾಮದಲ್ಲಿ ಒಂದು ರಾತ್ರಿಯೂ ಪಟ್ಟಣದಲ್ಲಿ ಐದು ರಾತ್ರಿಗಳೂ ಇರತಕ್ಕದ್ದು. ಇದಕ್ಕಿಂತ ಹೆಚ್ಚು ಕಾಲವಿರುವುದು ಉಚಿತವಲ್ಲ. ಮಾತ್ರವಲ್ಲದೆ, ಎಲ್ಲಿಂದ ಪ್ರೀತಿಯಾಗಲಿ ದ್ವೇಷವಾಗಲಿ ಹುಟ್ಟುವುದಿಲ್ಲವೋ, ಅಂತಹ ಸ್ಥಾನದಲ್ಲಿ ಅವನು ಉಳಕೊಳ್ಳಬೇಕು. ಯಾವಾಗ ಗೃಹಸ್ಥರ ಪಾಕಾಗ್ನಿಯು ನೊಂದಿ, ಎಲ್ಲರ ಭೋಜನವು ಸಮಾಪ್ತವಾಗುತ್ತದೆಯೋ, ಅದೇ ಸಮಯಕ್ಕೆ ಭಿಕ್ಷುವು ಬ್ರಾಹ್ಮಣರ ಮನೆಗೆ ಭಿಕ್ಷೆಗಾಗಿ ಹೊರಡಬೇಕು"

ಈ ನಿಯಮಗಳ ಮೇರೆಗೆ ಸಾಧುಗಳು ಗ್ರಾಮದಲ್ಲಿ ಒಂದು ರಾತ್ರಿಯೂ ಪಟ್ಟಣದಲ್ಲಿ ಐದು ರಾತ್ರಿಗಳ ವರೆಗೂ ಇರಬೇಕಾಗಿದೆ. ಆದರೆ ಇಂದಿನ ಸಾಧುಗಳು ಒಂದೇ ಸ್ಥಾನದಲ್ಲಿ ಮಠಮಂದಿರಗಳನ್ನು ಕಟ್ಟಿಸಿ, ಆಸ್ತಿ—ಪಾಸ್ತಿಗಳನ್ನು ಸಂಗ್ರಹಿಸಿಕೊಂಡು ಪ್ರಚಂಡ ಬಿರುಗಾಳಿಗೂ ಕದಲಲಾರದವರಂತೆ ಸ್ಥಿರವಾಗಿ ನೆಲಸಿಕೊಂಡಿರುತ್ತಾರೆ. ಇದೇ ಪ್ರಕಾರ ಮೇಲಿನ ವಿವರಣೆಯಲ್ಲಿ ಎಲ್ಲರು ಉಂಡುಮುಗಿದನಂತರ ಸಾಧುಗಳು ಗೃಹಸ್ಥರಲ್ಲಿಗೆ ಭಿಕ್ಷಾರ್ಥವಾಗಿ ಹೋಗುವ ವಿಧಾನವಿದೆ, ಆದರೆ ಈ ಸಮಯ ಸಾಧುಗಳು ಎಲ್ಲರಿಗಿಂತ ಮೊದಲು ಭುಂಜಿಸುವುದು ತಮ್ಮ ಅಧಿಕಾರವೆಂದು ತಿಳಿಯುತ್ತಾರಲ್ಲದೆ, ಅನೇಕರಂತೂ ಮನೆಯವರು ಭೋಜನ ಮಾಡುತ್ತಿರುವಾಗಲೇ ಹೋಗಿ ಎದೆ ಮೆಟ್ಟಿ ನಿಲ್ಲುತ್ತಾರೆ. (ಸಶೇಷ)


## WANTED

Lady saleswoman, Catholic or Protestant for a leading cutlery, hardware and Stationery shop at Udipi town Must be smart, good looking and of pleasingmanners, capable of reading and writingEnglish andKanarese. Apply with one anna stamp stating minimum salary required.

'X' C/o Navayuga, Udipi.


## NOTICE

**ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ**

O. P $\frac{42}{1937}$

1. ಶೆರಿಫಾ ಬೀಬಿ, ಅಲ್ಲಿಸಾಹೇಬರ ವಿಧವೆ
2. ಅಬ್ದು ಸಲಮ್ } ಅಲ್ಲಿಸಾಹೇಬರ
3. ಕರಿಮ್ ಖಾತಮ್ } ಮಕ್ಕಳು,
4. ಅಬ್ದುಲ್ ಕಾದ್ರಿ ಸಾಹೇಬ್ } ಅಲ್ಲಿಸಾಹೇಬರ
5. ಆದಮ್ ಸಾಹೇಬ್ } ಸಹೋದರರು
6. ಇಮಾಂಬಿ, ಅಲ್ಲಿಸಾಹೇಬರ ಸಹೋದರಿ.

ಇವರೊಳಗೆ

1, 3 to 6ನೇ ಅರ್ಜದಾರರು ಉಡುಪಿ ತಾಲೂಕು ಶಿರ್ವ ಗ್ರಾಮದಲ್ಲಿಯೂ, 2ನೇ ಅರ್ಜದಾರನು ಬೊಂಬಾಯಿಯಲ್ಲಿಯೂ ಜೀವಿಸಿ ಬರುತ್ತಾರೆ.

1ನೇ ಅರ್ಜದಾರಳ ಗಂಡ, 2, 3ನೇ ಅರ್ಜದಾರರ ತಂದೆ ವ ಮಿಕ್ಕೆ ಅರ್ಜದಾರರ ಸಹೋದರ ಮೃತ ಅಲ್ಲಿಸಾಹೇಬರಿಗೆ, ಅರ್ಜದಾರರೂ ಮೃತನಾದ ಆತನ ತಂದೆ ಅಬ್ದುಬ್ಬಕ್ಕರ್ ಸಾಹೇಬ, ತಾಯಿ ಸುಲ್ತಾನಬೀಬಿ ನಹ ಮುದ್ದ ವಾರೀಸದಾರರಾಗಿದ್ದು, ಮೃತ ಅಲ್ಲಿಸಾಹೇಬರಿಗೆ ಉಮ್ಮರ್ ಸಾಹೇಬ್ ಸೂರುದ್ದೀನರಿಂದ ಬರತಕ್ಕ ಬಾಬಿಗೆ 1ರಿಂದ 3ರ ವರೆಗಿನ ಅರ್ಜದಾರರು ಮತ್ತು ಮೃತರಾದ ಅಬ್ಬುಬ್ಬಕ್ಕರ್ ಸಾಹೇಬರು ಸಹ ವಾದಿರಾಗಿ ಬೊಂಬಾಯಿಯ Small Cause ಕೋರ್ಟಿನಲ್ಲಿ ದಾಖಲುಮಾಡಿದ Suit No. 3303/1936ನೇ ವ್ಯಾಜ್ಯದ ಡಿಕ್ರಿ ಪ್ರಕಾರ ಬರತಕ್ಕ ಅಸಲು ಬಡ್ಡಿ ವಗೈರೆ ವಸೂಲುಮಾಡುವರೆ ಅಥವಾ ಟ್ರಾನ್ಸ್‌ಫರ್ ಮಾಡಿಕೊಡುವ ಬಗ್ಗೆ ಅರ್ಜದಾರರ ಪೈಕಿ 1ನೇ ಅರ್ಜದಾರಳ ಹೆಸರಲ್ಲಿ ಸಕ್ಸೆಸನ ಸರ್ಟಿಫಿಕೇಟ ಅಪೇಕ್ಷಿಸಿ ಅರ್ಜದಾರರು ದಾಖಲುಮಾಡಿದ ಮೇಲ್ಕಂಡ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 13—9—1937ಕ್ಕೆ ತನಿಖೆಗೆ ಇಟ್ಟಿರುವದರಿಂದ ಅದರ ಕುರಿತು ಆಕ್ಷೇಪ ಉಳ್ಳವರು ಸದ್ರಿ ಅರ್ಜಿ ತನಿಖಾ ಸಮಯ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ಸರ್ವರಿಗೂ ತಿಳಿಸೋಣಾಗಿಯದೆ.

ಉಡುಪಿ ) (Sd) K. J. Ballal
B. A. LL. B.
30—8—'37 ) *Vakil for petitioner.*


THE
# PANGAL NAYAK BANK
## LIMITED.

ESTABLISHED 1920.

**Paid up Japital: Rs. 1,82,100/-**

***Head Office*: UDIPI.**

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at $4\frac{1}{2}\%$ on 2 years deposits.

Every other description of up-to-date Banking business is also undertaken.

**ನಿಮ್ಮ ಮನೆಯಲ್ಲೇ ಸಿನೆಮಾ**

**(BIOSCOPE)**



9X6X8 ಇಂಚುಗಳಷ್ಟು ಅಳತೆಯುಳ್ಳದ್ದು. ಅಮಿಂದ ಸ್ಟೀಲಿನಿಂದಲೇ ತಯಾರಿಸಲ್ಪಟ್ಟಿದೆ.

ಬಹಳ ಶಕ್ತಿಯ ಭೂತ ಕನ್ನಡಿಗಳಿಂದ ಜೋಡಿಸಲ್ಪಟ್ಟು, ಜೊತೆಗೆ 100 ಗಜ (300 ಅಡಿ)ಗಳಷ್ಟು ಉದ್ದದ ಚಲನಚಿತ್ರಗಳ ಫಿಲ್ಮು ಕೂಡಾ ಕೊಡಲಾಗುತ್ತದೆ. ಒಂದು ಚಿಕ್ಕ ಬೆಟರಿ ಲ್ಯಾಟಿನ ಪ್ರಕಾರದಿಂದ ನಿಮ್ಮ ಮನೆಗಳ ಕೋಣೆಗಳಲ್ಲಿ ಸ್ಪಷ್ಟವಾದ ಚಲನಚಿತ್ರಗಳ ಪ್ರದರ್ಶನ ಮಾಡಬಹುದು. ಒಂದು ಯಂತ್ರವನ್ನು ಈಗಲೇ ತರಿಸಿಕೊಳ್ಳಿರಿ ಯಂತ್ರದೊಡನೆ 100 ಗಜ ಫಿಲ್ಮಿಗೂ ಒಂದು ಬೆಟರಿ ಲ್ಯಾಟಿಗೂ ಸಮೇತ ರೂ. 5-8-0 ಮಾತ್ರ ಪೋಸ್ಟೇಜು ಬೇರೆ. ರೂ. 1ರ ಟಪಾಲು ಚೀಟುಗಳನ್ನಾಗಲೀ, ಪೋಸ್ಟಲ್ ಆರ್ಡರ್ ಮೂಲಕವಾಗಲೀ ಆರ್ಡರಿನೊಂದಿಗೆ ಮುಂಗಡ ಕಳುಹಿಸಬೇಕು.

ಆರ್. ಕೆ. ರಾಜನ್ ಅಂಡ್ ಕೊ,
ನೇಪರಿ, ಮದರಾಸು

# ನನಗೆ ಹೊಳೆದಂತೆ

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರು ಉಡುಪಿ ಮುನಿಸಿಪಾಲಿಟಿಯು ತೆಗೆದು ಹಾಕಲ್ಪಡುವಂತೆ ಚಳವಳಿಸಲಿಲ್ಲೆಂದು ಕೆಲವರ ಆರೋಪ. ಹಿಂದುಮುಂದು ನೋಡದೆ ಚಳವಳವೆಬ್ಬಿಸಿ ಕಡೆಗೆ ಕಾಂಗ್ರೆಸ್ ಮಂತ್ರಿಗಳು ಸಾಧ್ಯವಿಲ್ಲೆಂದರೆ ಮುಖಕ್ಕೆ ಮಂಗಳಾರತಿ ಯಾರಿಗೆ? ಅಧಿಕಾರದ ಜವಾಬ್ದಾರಿಯ ಫಜೀತಿ ಇದು!

x x x x

ಕಾಂಗ್ರೆಸ್ ಮಂತ್ರಿಗಳು ಸೇಕಡ 25ರಷ್ಟಾದರೂ ಭೂಕಂದಾಯ ಕಡಿಮೆಮಾಡಿದರೆ ಆ ಪ್ರಮಾಣದಲ್ಲೇ ವರ್ಗದಾರರು ಒಕ್ಕಲುಗಳ ಗೇಣಿ ಕಡಿಮೆಮಾಡಲು ಸಿದ್ಧರಿರುವರೇ? ದಕ್ಷಿಣ ಕನ್ನಡದ ಭೂಮ್ಯಾಲಿಕರ ಪರವಾಗಿ ಡೆಪ್ಯುಟೇಶನೊಂದು ಮದ್ರಾಸಿಗೆ ಹೋಗಲಿರುವುದಂತೆ. ಈ ಡೆಪ್ಯುಟೇಶನಿನವರು ತಮ್ಮ ಹಿತಸಾಧನೆಗೆ ಮಾತ್ರ ಗಮನವಿತ್ತಾರು. ಬಡ ಒಕ್ಕಲುಗಳ ಗತಿಯೇನು? ಕೇವಲ ಒಂದೇ ವರ್ಷದ ಹಕ್ಕಿನ್ನು ತಮ್ಮ ವೃತ್ತಿಯಲ್ಲಿ ಯಾವ ಸ್ಥಿರತೆಯೂ ಇಲ್ಲದ ಚಾಲಗೇಣಿ ಒಕ್ಕಲುಗಳ ಹಿತಸಾಧನೆ ಮಾಡುವವರಾರು? ಹೋರಾಡಲಿಕ್ಕೆ ಬಡಬಗ್ಗರಾದರೂ ಅಧಿಕಾರ ಬಂದಾಗ ಪ್ರಥಮವಾಗಿ ಅದರ ಉಪಯೋಗ ಪಡಕೊಳ್ಳುವವರು ಮಧ್ಯ ಮತ್ತು ಮೇಲ್ಮರಗತಿಯವರು. ಕಾಂಗ್ರೆಸಿನೊಳಗೂ ನಡೆಯುವುದು ಇದೇ. ಬಡಬಗ್ಗರ ಕಾಲವೆಂದು ಬರುವುದೋ?

x x x x

ಕಾಂಗ್ರೆಸು ಡಿಸ್ಟ್ರಿಕ್ಟ್ ಬೋರ್ಡು ಮುನಿಸಿಪಲ್ ಚುನಾವಣೆಗಳಿಗೆ ಕೈಹಾಕಿಮುಖಕ್ಕೆ ಮಸಿ ಬಳಕೊಳ್ಳುತ್ತದೆಂದುಎದ್ದಿದೆ. ಕೂಗು ಹಳ್ಳಿ ಮೂಲೆಗಳಲ್ಲಿಯೂ ಮೆಂಬರಿಕೆಗಾಗಿ ಮಾತ್ರವಲ್ಲ ಪ್ರೆಸಿಡೆಂಟ್, ಚೆಯರ್‌ಮೇನ್ ತನಕವೂ ಒಳಗಿಂದೊಳಗೆ ನಡೆದಿದೆ ಸೂತ್ರ ಚಾಲನೆ ಇಷ್ಟರಲ್ಲೇ ಸಾವಿರ ಗಟ್ಟಲೆಯಲ್ಲಿ ಡೋಂಗಿ ಓಟುಗಳು ತಯಾರಾಗಿವೆ. ಅವರು ನಮ್ಮ ಕಡೆಯವರು, ಇವರು ನಮ್ಮ ಕಡೆಯವರೆಂದು ಲೆಕ್ಕಹಾಕಲಿಕ್ಕಾರಂಭವಾಗಿದೆ. ಈಗ ಚುನಾವಣೆಗಳೇ ಮುಂದುವರಿಸಲ್ಪಡುವವೆಂಬುದು ಸಂತೋಷ. ಮತ್ತು ಎಸೆಂಬ್ಲಿ ಓಟರರನ್ನೇ ಡಿಸ್ಟ್ರಿಕ್ಟ್ ಬೋರ್ಡು ಮುನಿಸಿಪಾಲಿಟಿಗಳಿಗೂ ಲಗಾವು ಮಾಡಲಾಗುವುದೆಂಬುದು ಮತ್ತೂ ಸಂತೋಷ. ಈ ವಿದ್ಯಮಾನಗಳಲ್ಲಿ ಸ್ಥಳೀಯ ಕಾಂಗ್ರೆಸಿನವರೇನು ಮಾಡುವರೋ ನೋಡಲಿದೆ. ಪ್ರಕೃತ ಉಮೇದ್ವಾರಿಕೆಯ ಅರ್ಜಿಗಳನ್ನೆಲ್ಲಾ ಹಿಂದೆಕೊಟ್ಟು ಇಲೆಕ್ಷನ್ ಬೋರ್ಡನ್ನು ರದ್ದು ಪಡಿಸುವುದುತ್ತಮ.

x x x x

ಕಾಂಗ್ರೆಸೆಂದರೆ ಬಡವರ ಸಂಸ್ಥೆಯಂತೆ, ಯಾವಾಗ? ಸರಕಾರದೊಡನೆ ಹೋರಾಡುವಾಗ ಮಾತ್ರ. ಸ್ಥಾನ, ಮಾನ, ಅಧಿಕಾರದ ಪ್ರಶ್ನೆ ಬರುವಾಗ ಕಾಂಗ್ರೆಸು ಕೂಡಾ ಶ್ರೀಮಂತರ ಸಂಸ್ಥೆ. ಇಲ್ಲವಾದರೆ ಡಿಸ್ಟ್ರಿಕ್ಟ್ ಬೋರ್ಡಿಗೆ ನಿಲ್ಲಲು ಅರ್ಜಿ ಹಾಕಲಿಕ್ಕೇನೇ ರೂ. 50 ಕಟ್ಟಬೇಕೆಂದರೆ ಬಡವನಿಗದು ಸಾಧ್ಯವೇ? ಕಳೆದ ಸಲ ರೂ. ಇಪ್ಪತೈದಿದ್ದುದನ್ನು ಈ ಸಲ ಐವತ್ತಕ್ಕೇರಿಸಿದುದೇಕೆ? ಬಡವನಾದವನು ಅರ್ಜಿಯ ಆಲೋಚನೆ ಕೂಡಾ ಮಾಡಬಾರದೆಂದೇ?

x x x x

ಅಷ್ಟಮಿಯ ರಾತ್ರಿಯೇ ವೇಷ ಹಾಕುವುದು ತಪ್ಪು ವಿಟ್ಲಪಿಂಡಿ ಹಬ್ಬದ ದಿನ ಮಾತ್ರ ವೇಷ ಹಾಕಬೇಕು. 'ಪಬ್ಲಿಕ್ ನ್ಯೂಸೆನ್ಸ್' ಆಗಬಾರದೆಂದು ಈ ವರ್ಷ ಪೋಲೀಸರು ವಿಟ್ಲಪಿಂಡಿ ಹಬ್ಬದ ಸಂಬಂಧವಾದ ವೇಷಧಾರಿಗಳನ್ನೆಲ್ಲಾ ನಿರ್ಬಂಧದಲ್ಲಿರಿಸಿ ಬಿಡೆ ಕೊಟ್ಟರಂತೆ. ಮೊದಲಿಂದ ನಡೆದು ಬರುವ ಪದ್ಧತಿಯಿದು. ಶ್ರೀಕೃಷ್ಣ ಹುಟ್ಟಿದ್ದು ಅಷ್ಟಮಿ ದಿನ ರಾತ್ರಿ. ಆಗಲೇ ಆರಂಭವಾಗಬೇಕು ಆನಂದೋತ್ಸವ. ಆದುದರಿಂದ ಪೋಲೀಸರು ಮಾಡಿದ್ದು ತಪ್ಪು. ಅತ್ಯಾಚಾರವೆಂದು ನಿಷೇಧ ಸಭೆಯಂತೆ. ನನಗೆ ಈ ವೇಷಗಳೇ ಅದೊಂದು ಅತ್ಯಾಚಾರವೆನಿಸುತ್ತದೆ. ಮೊದಲು ಬೇಕಾದುದು ಅವುಗಳ ಮೇಲೆ ನಿಷೇಧ. ನೀತಿನಿಯಮ ರಹಿತ ಸ್ವೇಚ್ಛಾಪರತೆಗೆ ಹಾಕಬೇಕು ತಡೆ ಮೊದಲು.

x x x x

ಮದ್ರಾಸ್ ಸರಕಾರವು ಕುಮ್ಕಿಯ ವಿಷಯದಲ್ಲಿ ಹೊಸ ಧೋರಣೆಯನ್ನನುಸರಿಸಲಿರುವುದರಿಂದ ಆ ವರೆಗೆ ಕುಮ್ಕಿ ಸ್ಥಳವೇನೂ ಕೊಡಲ್ಪಡಬಾರದೆಂದು ಹುಕುಂ ಹೊರಟಿರುವುದು ಸಂತೋಷಕರ. ಈಗಣ ಕುಮ್ಕಿಯಪ್ರಕಾರ ಇದ್ದವರಿಗೇನೇನುತ್ತೂ ಜಮಿನಾನುಸೇರುವುದು. ಇದನ್ನು ನಿಲ್ಲಿಸಬೇಕು. ಇಲ್ಲದವರಿಗೆ ಸ್ಥಳಕೊಡಬೇಕು. ಧನಿಕರು ಶ್ಯಾನುಭಾಗ, ಮಣೆಗಾರ್, ತಹಸಿಲ್ದಾರರನ್ನು ಹಿಡಿದು ಸ್ಥಳ ಒಳಗೆ ಹಾಕುವುದು ನಿಲ್ಲಿಸಲ್ಪಡಬೇಕು.

x x x x

ಕಾಂಗ್ರೆಸ್ ರಾಜ್ಯ ಬರಲಿ, ಸ್ವರಾಜ್ಯ ಬರಲಿ, ಬೇಕುವರೆ ದೇವರಾಜ್ಯವೇ ಬರಲಿ, ನೌಕರರ ಲಂಚವೆಂಬುದನ್ನು ನಿಲ್ಲಿಸಲು ಸಾಧ್ಯವಿಲ್ಲ. ಯಾಕೆಂದರೆ ಜನರಿಗೆ ಲಂಚ ಕೊಡುವುದೊಂದು ಅಭ್ಯಾಸವಾಗಿ ಹೋಗಿದೆ. ಲಂಚವಿಲ್ಲದೆ ಯಾವ ಕೆಲಸವೂ ಆಗುವುದಿಲ್ಲೆಂಬಂತಾಗಿದೆ. ಲಂಚ ಕೊಡಲಿಲ್ಲದೆ ಬಡಬಗ್ಗರ ಕೆಲಸವಾವುದೂ ಆಗದಂತಾಗಿದೆ. ಜನರಲ್ಲಿ ಈ ಮನೋವೃತ್ತಿ ಇರುವಾಗ ಯಾವ ಸರಕಾರವಾದರೂ ಏನು ಮಾಡುವುದು? ಸರಕಾರಿ ನೌಕರರನ್ನು ಸಂಬಳ ಕೊಟ್ಟಿಟ್ಟಿರುವುದು ತಮ್ಮ ಕೆಲಸಕ್ಕಾಗಿ: ತಮ್ಮ ಸೇವೆಗಾಗಿ ಕೆಲಸಮಾಡುವುದು ಅವರ ಕರ್ತವ್ಯವಲ್ಲದೆ ತಮಗೇನೂ ಅವರು ಉಪಕಾರ ಮಾಡುವುದಲ್ಲ. ಅವರಿಂದ ಕೆಲಸಮಾಡಿಸಿಕೊಳ್ಳುವ ಹಕ್ಕು ನಮ್ಮದು ಎಂಬ ಸ್ವಾಭಿಮಾನ ಜನರಲ್ಲುಂಟಾದರೆ ಮಾತ್ರ ಲಂಚ, ವಂಚನೆಗಳು ದೂರವಾದಾವು. ನಾವೇ ಮುಂದಾಗಿ ಲಂಚಕೊಟ್ಟರೆ ಯಾರಿಗೆ ಕಹಿಯಾಗುತ್ತದೆ ತೆಗೆದುಕೊಳ್ಳಲಿಕ್ಕೆ?

ವಿಮರ್ಶಕ.


ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕಾರಕವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ 'ಗೊನೋಕಿಲರ್' (ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು. ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D N. JASANI, Vitalbhai Patel Road, BOMBAY 4.



TIBETAN HERB

ಮದ್ರಾಸಿನ ಶ್ರೀ . ರವರು ೧೯೩೬ನೇ ಸೆಪ್ಟೆಂಬರ ೨೪ರಲ್ಲಿ ಹೀಗೆ ಬರೆದಿದ್ದಾರೆ—"ತಮ್ಮ ವಶೀಕರಣ ಮೂಲಿಕೆಯಿಂದ ನಾನು ಸಂತುಷ್ಟನಾಗಿ ಆದರಿಂದ ಅಧಿಕ ಲಾಭಹೊಂದಿರುವೆನು".

ಟಿಬೇಟಿಯನ್ ಮೂಲಿಕೆ

ಯಿಂದಾಗುವ ಇಷ್ಟಾರ್ಥ ಸಿದ್ಧಿಗಳಿವು: (1) ವಶೀಕರಣ-ಸ್ತ್ರೀ ಪುರುಷರು ಸುಲಭವಾಗಿ ಪ್ರೇಮ ಸಂಪಾದಿಸಬಹುದು. ರೂ ೩॥. (2) ವ್ಯಾಪಾರ-ಸಾಪಾರ ಪೂರ್ಣ ಲಾಭ ಹೊಂದಬಹುದು. ರೂ. ೩॥ (3) ವ್ಯವಹಾರ-ಕೋರ್ಟು ವ್ಯವಹಾರಗಳನ್ನು ಗೆಲ್ಲಬಹುದು. ರೂ. ೩॥. (4) ಕಾಹಿಲೆ-ಎಂತಹ ಕಠಿಣ ಕಾಹಿಲೆಯಾದರೂ ಸುಲಭವಾಗಿ ಗುಣವಾಗುತ್ತದೆ. ರೂ. ೩॥. (5) ಉದ್ಯೋಗ-ನಿರುದ್ಯೋಗ ಸಂಜೀವಿನಿ ಯೋಗ್ಯತೆಗೆ ತಕ್ಕ ಕೆಲಸ ಸಿಗುತ್ತದೆ. (6) ಪರೀಕ್ಷೆ-ಸುಲಭವಾಗಿ ತೇರ್ಗಡೆ. (7) ಭೂತಚೇಷ್ಟೆ-ಸಂಪೂರ್ಣ ಪರಿಹಾರ (9) ಆರೋಗ್ಯಭಾಗ್ಯ-ತೀವ್ರವಾಗಿ ಆರೋಗ್ಯ ಲಾಭ ರೂ. ೩॥. ಹಿಂದೂ ಶಾಸ್ತ್ರಗಳಲ್ಲಿ ವಿಶ್ವಾಸವಿರುವವರಿಗೆ ಮಾತ್ರ. ಹೆಸರು ಮತ್ತು ಉದ್ದಿಷ್ಟ ತಿಳಿಸಬೇಕು ಅಂಚೆ ವೆಚ್ಚ ೬ ಆಣೆ ಎನ್ನು ಒಟ್ಟಿಗೆ ತರಿಸಿದರೆ ರೂ. ೯. ಟಪ್ಪಾಲು ಖರ್ಚು ೮ ಆಣೆ

ಪತ್ರವ್ಯವಹಾರ ಇಂಗ್ಲೀಷಿನಲ್ಲಿ.

BIJOYA LODGE (N.)
P. O. SALKIA HOWRAH.



ಹೊಸ ರಕಂ! ಗ್ಯಾರಂಟಿ ಇದೆ!

Imitation Diamond Ear Rings

ಇಮಿಟೇಷನ್ ವಜ್ರದ ಬೆಂಡೋಲೆ

ಈ ಬೆಂಡೋಲೆಗಳನ್ನು ಹೊಸನಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆಯ ಭಂಗಾರದಿಂದ ಕಟ್ಟಿದ ಕಟ್ಟಿದೆ. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸಮನಾಗಿದೆ. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಇವೂನ್‌ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಇದರ ಬಣ್ಣವು ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ. 7 ಕಲ್ಲಿನ ಬಿಳಿಯ ಓಲೆ ಜೋಡಿಕ್ಕೆ ರೂ. 1–8–0. 7 ಕಲ್ಲಿನ ಕೆಂಪು ಓಲೆ ಜೊತೆ 1ಕ್ಕೆ ರೂ. 1–10–0. ಬಳೆಗಳು ಜೊತೆ 1ಕ್ಕೆ ರೂ. 2–0–0. ಉಂಗುರ 1ಕ್ಕೆ ರೂ. 1–4–0.

ಸಿಗುವ ವಿಳಾಸ:

ದೇವಕರ್ ಅಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ. ಟಿ.
ಮದರಾಸು.

# ಭಿಕಾರಿಣಿ

ಸಾಮಾಜಿಕ ಕಾದಂಬರಿ

## ಅಧ್ಯಾಯ ೧೦

### ಒಳ್ಳೇ ಮಾತಿನಿಂದ ಕೈಮೊಹರು ಕೊಟ್ಟೀ ಆಯಿತು! ಇಲ್ಲವಾದರೆ ಬಲಾತ್ಕಾರದಿಂದ ತೆಗೆದುಕೊಳ್ಳುವೆವು!

ಮೊದಲೇ ಕಂದಿಹೋಗಿದ್ದ ಲಲಿತೆಯ ಜೀವನದ ಬೆಳಕು, ನಾಗಿಯು ಮೃತಳಾದ ಮೇಲೆ ಸಂಪೂರ್ಣವಾಗಿ ನೊಂದಿಹೋಯಿತು. ಅವಳ ಹೃದಯವು ಕಲ್ಲಾಗಿಬಿಟ್ಟಿತು ಬುದ್ಧಿಯು ಸಂಪೂರ್ಣ ಮಂದವಾಯಿತು. ಅವಳು ತಾನಾಗಿ ಯಾವುದನ್ನೂ ಮಾಡುತ್ತಿದ್ದಿಲ್ಲ. ಒಂದೆಡೆ ಕೂತರೆ ಯಾರಾದರೂ ನೆರೆಯವರು ಬಂದು ಕೈಹಿಡಿದೆಳೆಯಬೇಕು ಪುನಃ ಏಳಲಿಕ್ಕೆ. ದಿನಕ್ಕೊಂದು ಊಟಮಾಡಿದರೆ ದೊಡ್ಡದು. ಅದು ಕೂಡಾ ಯಾರಾದರೂ ನೆರೆಯ ಹೆಂಗುಸರು ಕನಿಕರಗೊಂಡು ಅಡಿಗೆಮಾಡಿ ಬಳಸಿದರೆ. ನೆರೆಯವರು ಯಾವಾಗಲೂ ಬಂದು ಎಷ್ಟೆಂದು, "ಲಲಿತ ಊಟಮಾಡು, ಲಲಿತ ಸ್ನಾನ ಮಾಡು, ಲಲಿತ ಅದು ಮಾಡು ಇದು ಮಾಡೆಂದು ಹೇಳಿಯಾರು"?

ಶಿವಾನಂದರು ಲಲಿತೆಯ ಅವಸ್ಥೆಯನ್ನು ತಿಳಿದು ಮಠದಿಂದ ಕೆಲವಂದಿ ಹೆಂಗುಸರನ್ನು ಅವಳ ಕೆಲಸಕ್ಕಾಗಿ ಕಳುಹಿಸಿದರು. ಆದರೆ ಅವರೆಲ್ಲರೂ ಒಂದೆರಡು ದಿನ ಲಲಿತೆಯೊಂದಿಗಿದ್ದು ಹಿಂದೆ ಹೋಗಿ "ಅವಳಿಗೆ ಹುಚ್ಚು, ಬುದ್ಧಿಗೆಟ್ಟಿದೆ. ನಮಗೆ ಅವಳೊಂದಿಗಿರಲು ಸಾಧ್ಯವಿಲ್ಲೆ"ಂದು ಹೇಳುತ್ತಿದ್ದರು. ಹೀಗಾಗಿ ಕಡೆಗೆ ಮನೆಯಲ್ಲಿ ಲಲಿತೆಯೊಬ್ಬಳೇ ಇರಬೇಕಾಯಿತು. ಇದ್ದು ಸತ್ತಂತಿದ್ದಳವಳು.

ಅಡಚಣೆಯು ಮಾನವನನ್ನು ಎಂಥಹ ಹೇಯ ಕೆಲಸಕ್ಕೆಲ್ಲಾ ಪ್ರೇರೇಪಿಸುವುದೆಂಬುದನ್ನು ಕಲ್ಪಿಸಲು ಸಾಧ್ಯವಿಲ್ಲ. ಅದಕ್ಕೊಳಗಾದವನಿಗೆ ಯಾವ ನೀತಿ ನಿಯಮವಾಗಲಿ ನಗೆ ನಾಚಿಕೆಯಾಗಲಿ ಇರಲಾರದು. ಹೇಗಾದರೂ ಅಡಚಣೆಯಿಂದೊಮ್ಮೆ ಪಾರಾಗಬೇಕೆಂಬೊಂದೇ ಯೋಚನೆ ಅವನಿಗೆ. ಶಿವಾನಂದರ ಹಣದ ಅಡಚಣೆಯನ್ನಾವರೂ ಹೇಳಿತೀರದು. ಸಂಪೂರ್ಣವಾಗಿ ಅವರ ಕೈಕಟ್ಟಿಹೋಗಿತ್ತು. ಒಬ್ಬರಾದರೂ ಅವರನ್ನು ನಂಬುವವರಿದ್ದಿಲ್ಲ. ಮಠದ ಚಿನ್ನವೆಲ್ಲಾ ಬರಿದಾಗಿತ್ತು. ಮಾತ್ರವಲ್ಲದೆ ಲಲಿತೆಯ ನ್ಯಯಲ್ಲಿ ಕರಿಮಣಿಯೊಂದನ್ನು ಮಾತ್ರ ಬಿಟ್ಟಿದ್ದರು. ಲಲಿತೆಗೆ ಅದೂ ಬೇಕಾಗಿದ್ದಿಲ್ಲ. ಬಿಟ್ಟ ತಲೆಸೂಡಿಯನ್ನು ಕಟ್ಟುವ, ಉಟ್ಟ ಸೀರೆಯನ್ನು ಬದಲಾಯಿಸುವ ಗೊಡವೆಯೂ ಇಲ್ಲದ ಅವಳಿಗೆ ಕರಿಮಣಿಯಾದರೂ ಯಾಕೆ? ಶಿವಾನಂದರು ನರಸಿಂಹನನ್ನು ಕಳುಹಿಸಿ ನಾಗಿಯ ಚಿನ್ನದ ಪೆಟ್ಟಿಗೆಯನ್ನು ಕೂಡಾ ತರಿಸಿ ಅದರೊಳಗಣ ಆಭರಣಗಳನ್ನೆಲ್ಲಾ ಮಾರಿಬಿಟ್ಟರು. ಎಷ್ಟು ಹಣ ಸಿಕ್ಕಿದರೂ ಶಿವಾನಂದರಿಗೆ ಸಾಕಾಗುತ್ತಿದ್ದಿಲ್ಲ ಒಂದು ಕ್ಷಣದಲ್ಲಿ ಅವರ ಕೈ ಬರಿದಾಗುತ್ತಿದ್ದಿತು. ಅವರು ಹಣ ಪಡೆಯುವ ಬೇರೆಬೇರೆ ಉಪಾಯಗಳನ್ನು ಕ್ಷಣ ಕ್ಷಣ ಕಂಡುಕೊಳ್ಳಬೇಕಾಗಿತ್ತು. ಒಂದು ದಿನ ಅವರು ಯಾವ ಉಪಾಯವೂ ತೋರದೆ ಬಹಳ ಚಿಂತಾಮಗ್ನರಾಗಿದ್ದಾಗ ಫಕ್ಕನೆ ಒಂದು ಯೋಚನೆ ಹೊಳೆದು ಹೊಸ ಜೀವವೇ ಬಂದಂತಾಗಿ ನರಸಿಂಹನನ್ನು ಕರೆದು ಗುಟ್ಟಿನಿಂದೊಂದು ಸಂಗತಿ ತಿಳಿಸಿದರು. ನಾಗಿಯ ಹೆಸರಲ್ಲಿ ಬೇಂಕಿನಲ್ಲಿ ಎರಡು ಸಾವಿರ ರೂಪಾಯಿಯ ವರೆಗುಂಟೆಂಬುದು ಅವರಿಗೆ ತಿಳಿದಿತ್ತು. ಏನು ಮಾಡಿದರೂ ಬೇಂಕಿನವರು ಶಿವಾನಂದರಿಗದನ್ನು ಕೊಡಲೊಪ್ಪಲಿಲ್ಲ ಆಗ ಅವರು ಅದನ್ನು ಪಡೆಯಲು ಬೇರೇನಾದರೂ ಉಪಾಯ ಮಾಡಬೇಕಾಯಿತು. ಆ ಕುರಿತಾಗಿಯೇ ಅವರು ಬಹಳವಾಗಿ ಯೋಚಿಸಿ ಕಡೆಗೊಂದು ಉಪಾಯ ಹೊಳೆದು ನರಸಿಂಹನೊಡನೆ ಗುಟ್ಟಿನಿಂದ ಹೇಳಿದುದದನ್ನು.

ಸುಮಾರು ಹತ್ತು ಹನ್ನೊಂದು ಘಂಟೆ ರಾತ್ರಿಯಾಗಿರಬಹುದು. ಲಲಿತೆಯು ರಸ್ತೆಬದಿಯ ಬಾಗಿಲು ಕೂಡಾ ಹಾಕದೆ ಚಾವಡಿಯಲ್ಲಿ ಸುಮ್ಮಗೆ ಕುಳಿತಿದ್ದಳು. ಅಂದು ನೆರೆಯವರಾರಾದರೂ ಲಲಿತೆಯ ಮನೆಗೆ ಬಂದು ದೀಪ ಹಚ್ಚಿ, "ಲಲಿತ, ಇಲ್ಲೇಕೆ ಕೂತಿರುವೆ? ಬಾ, ಊಟಮಾಡೆಂ"ದು ಒತ್ತಾಯ ಮಾಡಿ ಒಳಸಿ ಮಲಗಿಸಿ ಹೋಗಿರಲಿಲ್ಲ. ಮನೆಯಲ್ಲೆಲ್ಲಾ ಕತ್ತಲೆಯು ಕವಿದಿತ್ತು. ನರಸಿಂಹನೂ ಇನ್ನೊಂದು ಧಾಂಡಿಗ ವ್ಯಕ್ತಿಯೂ ಮನೆಯೊಳಗೆ ಪ್ರವೇಶಿಸಿದರು. ನರಸಿಂಹನು ಟೋರ್ಚ್ ಲೈಟನ್ನು ಚಮುಕಿಸಿ ನೋಡಿದಾಗ ಲಲಿತೆಯು ಚಾವಡಿಯ ಒಂದು ಮೂಲೆಯಲ್ಲಿ ಗೋಡೆಗೊರಗಿ ಕಾಲು ನೀಡಿ ಕುಳಿತಿದ್ದುದು ತೋರಿಬಂತು. ನರಸಿಂಹನು ಕಿಸೆಯಿಂದ ಬೆಂಕಿಪೆಟ್ಟಿಗೆಯಿಂದ ಕಡ್ಡಿ ತೆಗೆದು ಕೀರಿ ಚಾವಡಿಯ ಗೋಡೆಯಲ್ಲಿದ್ದ ಚಿಮಣಿಯೊಂದಕ್ಕೆ ದೀಪ ಹಚ್ಚಿದನು. ಲಲಿತೆಯು ಗೊಂಬೆಯಂತೆ ಕೂತಿದ್ದಳು. ದೃಷ್ಟಿ ಕೂಡಾ ಅತ್ತಿತ್ತ ಚಲಿಸಲಿಲ್ಲ. ನರಸಿಂಹನು ಆಶ್ಚರ್ಯಗೊಂಡು ಲಲಿತೆಯನ್ನೇ ತುಸು ಹೊತ್ತು ನೋಡುತ್ತಾನಿಂತನು. ಅವಳ ಕಂಗಳು ಕಳೆಗುಂದಿ ಹೊತುಹೋಗಿದ್ದುವು. ಶವದ ಮುಖದಂತಾಗಿದ್ದಿತು ಮುಖ. ಅವನ ಪೈಶಾಚಿಕ ಹೃದಯವೂ ಒಂದೊಮ್ಮೆ ಕರಗಿ ನೀರಾಯಿತು. ಮಾನವ ಸಹಜ ಅನುಕಂಪನವುಂಟಾಯಿತು ಆತನ ಅಂತರಾಳದಲ್ಲೊಮ್ಮೆ. ಅವನು ಲಲಿತೆಯನ್ನು ಮತ್ತೂ ನೋಡುತ್ತಾ ನಿಂತನು. ತಾನು ಈ ನಿರ್ಭಾಗ್ಯ ಬಾಲೆಯ ಕುರಿತು ಮಾಡಿದ ದುಷ್ಕೃತ್ಯಗಳೆಲ್ಲಾ ಒಮ್ಮೆಯೇ ಅವನ ಹೃದಯವನ್ನು ತರಿಯ ಹತ್ತಿದುವು. ಅಷ್ಟರಲ್ಲಿ ದೇಜುವು "ಭಟ್ರೇ, ಕಣ್ಣು ಕಣ್ಣು ನೋಡುತ್ತಾ ನಿಂತು ಆಲೋಚಿಸುತ್ತಿರುವುದೇನನ್ನು? ಶೀಘ್ರವಾಗಿ ನಮ್ಮ ಕೆಲಸ ಮುಗಿಸಿಕೊಂಡು ಹೋಗುವ" ಎಂದನು. ನರಸಿಂಹನು ಕನಸಿನಿಂದೆಚ್ಚತ್ತವನಂತೆ "ಆಯ್ತಾಯ್ತು ಮಾಡುವ" ಎಂದು ಮತ್ತೂ ಸುಮ್ಮನೆ ನಿಂತನು. ಆಗ ದೇಜುವು, "ಕೈ ಮೊಹರ ತೆಗೆದುಕೊಳ್ಳಿ ಭಟ್ರೇ, ತಡವಾಗುತ್ತದೆ ನಮಗೆ" ಎಂದು ಪುನಃ ಎಚ್ಚರಿಸಿದನು. ಆಗ ನರಸಿಂಹನು, "ಲಲಿತ, ಶಿವಾನಂದರು ನಿನ್ನ ಕೈ ಮೊಹರು ಪಡೆಯಲು ನಮ್ಮನ್ನು ಕಳುಹಿಸಿದುದು. ಅವರಿಗೇಕೋ ನಿನ್ನ ಕೈಮೊಹರು ಬೇಕಾಗಿದೆಯಂತೆ; ಬೇಗ ಕೊಡು, ನಾವು ಹೋಗುತ್ತೇವೆ" ಎಂದನು. ಲಲಿತೆಯು ಮಾತಾಡಲಿಲ್ಲ, ಮುಖವೆತ್ತಿ ನೋಡಲಿಲ್ಲ. "ಈ ಎರಡು ಕಾಗದಗಳಿಗೆ ಕೈಮೊಹರುಕೊಡು ಲಲಿತ. ನಿನಗೇನಾದರೂ ಅದರಿಂದ ಬಾಧಕವಿಲ್ಲ. ಸ್ವಾಮಿರಿಗೇಕೋ ಬೇಕಾಗಿದೆಯಂತೆ" ಎಂದು ನರಸಿಂಹನು ಕೈಮುದ್ರೆತೆಗೆಯುವ ಶಾಯಿಯ ಕರಡಿಗೆಯೊಂದರ ಬಾಯಿತೆರೆದು ಲಲಿತೆಯ ಬಳಿಯಿಟ್ಟು, "ಇಗೋ ಇಲ್ಲಿ ಕೈಮೊಹರು ಹಾಕು" ಎಂದು ಕಾಗದ ಬಿಡಿಸಿ ತೋರಿಸಿದನು. ಆದರೆ ಲಲಿತೆಯು ಯಥಾಪ್ರಕಾರ ಮೌನವಾಗಿದ್ದಳು. ಅವಳಿಗೆ ನರಸಿಂಹನು ಹೇಳುವುದೆಲ್ಲಾ ಕೇಳುವುದೇ ಇಲ್ಲೆಂಬಂತೆ ತೋರುತ್ತಿತ್ತು. ಕಡೆಗೆ ನರಸಿಂಹನು, "ಕೊಡು ಲಲಿತ, ಕೈಮೊಹರು ಕೊಡು. ನಿನಗೇನೂ ಅದರಲ್ಲಿ ಅಪಾಯವಿಲ್ಲ. ಅದಕ್ಕೆ ನಾನು ಜವಾಬ್ದಾರಿ"ಎಂದು ಬೆನ್ನುತಟ್ಟಿದನು. ಆದರೆ ಲಲಿತೆಯು ಮೌನವಾಗಿಯೆ ಇದ್ದಳು. ನರಸಿಂಹನು ಮೃದುಮಾತುಗಳಿಂದಲೇ ಲಲಿತೆಯನ್ನೊಲಿಸಿಕೊಂಡು ಕೆಲಸಮಾಡಬೇಕೆಂದು ಬಗೆದಿದ್ದ. ಯಾಕೆಂದರೆ ಲಲಿತೆಯನ್ನು ಕಂಡು ಆತನ ಮನಸ್ಸು ಇಂದು ಅದೇಕೋ ಕರಗಿಹೋಗಿತ್ತು.

ಅಷ್ಟರಲ್ಲಿ ದೇಜುವು, "ನಿಮ್ಮ ಸಮಾಧಾನದ ಮಾತನ್ನೆಲ್ಲಾ ಅವಳು ಕೇಳುವ ಹಾಗಿಲ್ಲ. ಭಟ್ರೆ, ನಾವು ಎಷ್ಟು ಹೊತ್ತು ಕಾಯುವುದಿಲ್ಲಿ? ಮಧ್ಯರಾತ್ರಿಯಾಗುತ್ತಾ ಬಂತು ನಾವೇ ಕೈ ಹಿಡಿದು ಮೊಹರು ತೆಗೆದುಕೊಳ್ಳುವ" ಎಂದನು. "ನಿನಗೆ ಅವಸರವಾಗುತ್ತದಾದರೆ ನೀನೇ ತೆಗೆದುಕೋ ಬಲಾತ್ಕಾರದಿಂದ. ನನ್ನೊಡನೇನು ಹೇಳುವುದು?" ಎಂದ ನರಸಿಂಹ ಸಿಟ್ಟಿನಿಂದ. ದೇಜುವು ಉದ್ದಟ ಮನೋವೃತ್ತಿಯವ. ಇದು ಹೊರತು ಮಠದಲ್ಲಿ ಶಿವಾನಂದರ ಹೊರತು ಮತ್ತಾರಿಗೂ ಹೆದರುತ್ತಿದ್ದಿಲ್ಲ. ಮತ್ತಾರ ಮಾತೂ ಕೇಳುತ್ತಿದ್ದಿಲ್ಲ. ತನಗಿಷ್ಟ ಬಂದ ಕೆಲಸ ಮಾಡಿಕೊಂಡು ಶಿವಾನಂದರ ಅಂಗರಕ್ಷಕನಂತಿದ್ದವ. ನರಸಿಂಹನು ಹಂಗಿಸಿ ಮಾತಾಡಿದೊಡನೆಯೇ ಅವನಿಗೆ ಕೋಪವು ತಲೆಗೇರಿಬಿಟ್ಟಿತು. ಅವನು "ನೀವೇನು ಇಷ್ಟೊಂದು ಹಂಗಿಸಿ ಮಾತಾಡುವುದು? ನನಗೊಂದು ಕೈಮೊಹರು ತೆಗೆದುಕೊಳ್ಳಲಿಕ್ಕೂ ಸಾಧ್ಯವಿಲ್ಲವೇ? ನೋಡುವ ಹಾಗಾದರೆ?" ಎಂದು ಒರಟುತನದಿಂದ ಲಲಿತೆಯ ಕೈಹಿಡಿದೆಳೆದನು. ಅವಳದನ್ನು ಹಿಂದಕ್ಕೆಳೆದುಕೊಂಡಳು. ಆಗ ದೇಜುವು, "ಒಳ್ಳೇ ಮಾತಿನಿಂದ ಕೈಮೊಹರು ಕೊಟ್ಟೆಯಾಯಿತು! ಇಲ್ಲವಾದರೆ ಬಲಾತ್ಕಾರದಿಂದ ತೆಗೆದುಕೊಳ್ಳುವೆವು" ಎಂದು ಗದರಿಸಿದನು. ಲಲಿತೆಯು ಮಾತಾಡಲಿಲ್ಲ. ಆಗ ದೇಜುವು ಪುನಃ ಲಲಿತೆಯ ಕೈಯನ್ನು ಬಲವಾಗಿ ಹಿಡಿದು, "ನೀವೇನು ನೋಡುತ್ತಾ ಕುಳಿತಿರುವುದು ಭಟ್ರೆ? ತನ್ನಿಲ್ಲಿ ಶಾಯಿ ಕರಡಿಗೆ ಮತ್ತು ಕಾಗದ! ಕೈಮೊಹರು ಕೊಡದೆ ಎಲ್ಲಿ ಹೋಗುತ್ತಾಳೆ ನೋಡುವ ಇವಳು?" ಎಂದನು. ಆಗ ಲಲಿತೆಗೆ ಎಲ್ಲಿಂದ ಶಕ್ತಿ ಬಂದಿತೋ ಏನೋ! ಅವಳು ಥಟ್ಟನೆ ಕೈಯನ್ನೆಳೆದು ದೇಜುವಿನ ಬಲವಾದ ಹಿಡಿತದಿಂದ ಬಿಡಿಸಿಕೊಂಡಳು. ದೇಜುವು ಪುನಃ ಅವಳ ಕೈ ಹಿಡಿಯಲೆತ್ನಿಸಿದ ಬಹಳ ಸಿಟ್ಟುಗೊಂಡು. ಆಗ ಲಲಿತೆಯ ಮುಖವು ವಿಕಾರಗೊಂಡಿತು. ಅವಳು, ದೇಜುವು ಕೈಯನ್ನು ಹಿಡಿಯುವಷ್ಟರಲ್ಲಿ ಅವನ ಕೈಯನ್ನು ಬಲವಾಗಿ ಕಚ್ಚಿದಳು ಕಚ್ಚಿ ಹಿಡಿದವಳು ಬಿಡಲೇ ಇಲ್ಲ. ದೇಜುವು ಅವಳ ಬಾಯಿಯಿಂದ ಕೈ ಬಿಡಿಸಿಕೊಳ್ಳಲು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಯಿತು. ಮುಂಗೈಯಿಂದ ರಕ್ತವು ಹರಿಯಲಾರಂಭಿಸಿತು. ಅಸಹನೀಯ ನೋವುಂಟಾಯಿತು. ಅವನು ಲಲಿತೆಯ ಜುಟ್ಟು ಹಿಡಿದೆಳೆದ, ಕುತ್ತಿಗೆ ಒತ್ತಿ ಹಿಡಿದ, ಏನು ಮಾಡಿದರೂ ಅವಳು ಕಚ್ಚಿ ಹಿಡಿದ ಕೈ ಬಿಡಲಿಲ್ಲ. ಧಾಂಡಿಗ ದೇಜುವು ತಬ್ಬಿಬ್ಬಾದ, ಅವನ ಮೈಯೆಲ್ಲಾ ಬೆವರಿತು. ತಲೆ ತಿರುಗಿತು. ಅವನು, "ಭಟ್ರೇ ನೀವೇನು ಚಂದ ನೋಡುತ್ತಿರುವುದೇ? ಬಿಡಿಸಬಾರದೆ? ಎಂದ. ನರಸಿಂಹ ಬೆದರಿಹೋಗಿದ್ದನು. ತನ್ನ ಮೇಲೆಲ್ಲಿಯಾದರೂ ಬಿದ್ದರೆ ಮಾಡುವುದೇನೆಂದು ಅವನು ಹತ್ತಿರ ಬಾರದೆ ದೂರವೇ ನಿಂತಿದ್ದನು. ಆಗ ದೇಜುವು ಬಾಯ್ಬಿಟ್ಟು ಕೂಗಿದನು "ಭಟ್ರೇ ಅಷ್ಟು ಮಾಡಿ ಸ್ವಾಮಿ! ಒಂದೊಮ್ಮೆ ಬಿಡಿಸಿ!"ಎಂದು ಬೇಡಿಕೊಂಡನು. ಆಗ ನರಸಿಂಹನಿಗೆ ಸುಮ್ಮನಿರಲು ಸಾಧ್ಯವಿಲ್ಲದಾಯಿತು. ಆದರೆ ಅವನನ್ನು ಬಿಟ್ಟು ತನ್ನ ಮೇಲೆ ಬಿದ್ದರೆ ಗತಿಯೇನೆಂಬ ಭೀತಿಯೂ ಪೀಡಿಸ ಹತ್ತಿತು. ಕಟ್ಟಕಡೆಗೆ ನಿರ್ವಾಹವಿಲ್ಲದೆ ಆದುದಾಗಲೆಂದು ಲಲಿತೆಯ ತಲೆಕೂದಲನ್ನು ಎರಡು ಕೈಗಳಿಂದಲೂ ಬಲವಾಗಿ ಹಿಡಿದು ನಿರ್ದಯವಾಗಿ ಭರದಿಂದ ಹಿಂದಕ್ಕೆಳೆದನು. ದೇಜುವಿನ ಮುಂಗೈಯು ಲಲಿತೆಯ ಬಾಯಿಯಿಂದ ತಪ್ಪಿತು. ಆದರೆ ಅಷ್ಟು ಭಾಗದ ಮಾಂಸ ಕೂಡಾ ಹೋಗಿತ್ತು. ಲಲಿತೆಯ ಬಾಯಿ ಮತ್ತು ತುಟಿಯೆಲ್ಲಾ ರಕ್ತಮಯವಾಗಿತ್ತು. ಕಣ್ಣುಗಳು ಕೆಂಪಡರಿ ಹೋಗಿದ್ದುವು. ಅವಳ ಸ್ವರೂಪವು ಉಗ್ರವಾಗಿತ್ತು. ಅವಳು ಹಿಂತಿರುಗುವಷ್ಟರಲ್ಲೇ ನರಸಿಂಹನು ಪಲಾಯನ ಮಾಡಿದನು. ಅವನ ಹಿಂದೆಯೇ ದೇಜುವೂ ಓಡಿದನು. ಇವರಿಬ್ಬರ ಬೆನ್ನಲ್ಲಿಯೇ ಲಲಿತೆಯೂ ಮನೆಯಿಂದ ಹೊರಬಿದ್ದಳು.

**ಭಿಕಾರಿಣಿ ಬಂದಳು! ಭಿಕಾರಿಣಿ!**

(ಮುಂದಿನ ಸಂಚಿಕೆ ನೋಡಿರಿ)

## 'ಬಾ ಬಾ ನವಯುಗವೆ!'

ಬಡವರಿಗಾಗಿಯೆ
ದುಡಿಯುವ ಯೋಗಿಯೆ
ಬಡವರ ಬಂಧುವೆ ನವಯುಗವೆ ||೧||
ದೇಶದ ಉನ್ನತಿ
ಸಮಾಜದುನ್ನತಿ-
ಗಾಗಿಯೆ ದುಡಿಯುವ ನವಯುಗವೆ ||೨||
ತಾರಾನಾಥರ
ಲೇಖನದಂತಿಹ
ಲೇಖನ ತುಂಬಲಿ ನಿನ್ನಲ್ಲಿ ||೩||
ಸತ್ಯದಿ ಪ್ರೀತಿಯು
ಮಿಥ್ಯದಿ ಭೀತಿಯು
ನೀತಿಯು ತುಂಬಲಿ ನಮ್ಮಲ್ಲಿ ||೪||
ಸತ್ಯದ ಚಿತ್ರನು
ಚಿತ್ರದಿ ಬಿತ್ತಲು
ಉತ್ತಮ ರೈತನು ನೀನಿರುವೆ! ||೫||
ವಾರದಿ ವಾರದಿ
ಬರುವೆಯ ಬೇಗದಿ?
ನೋಡುವ ತವಕದಿ ನಾನಿರುವೆ ||೬||
ಜ್ಞಾನದ ಬೆಳಕನು
ತೋರಿಸಿ, ಕೊಳಕನು
ಝಾಡಿಸೆ ಬಾ ಬಾ ನವಯುಗವೆ! ||೭||
ಹಳ್ಳಿಯ ತಗಣಿಯ
ಸಮಾಜ ಚಿಗಣಿಯ
ನೋಡಿಸೆ ಬಾ ಬಾ ನವಯುಗವೆ! ||೮||
ಸಮತಾವಾದವ
ಒಳ್ಳೆಯ ಬೋಧವ
ಬೋಧಿಸೆ ಬಾ ಬಾ ನವಯುಗವೆ! ||೯||
ಕಳೆಯಿತು ವರುಷವು
ಮೊಳೆಯಿತು ಹರುಷವು
ಬೆಳೆಯುತ ಬಾ ಬಾ ನವಯುಗವೆ! ||೧೦||
ಒಣಗಿದ ಒಡಲಿಗೆ
ಶಾಂತಿಯ ನೀರನು
ಹೊಯ್ಯಲು ಬಾ ಬಾ ನವಯುಗವೆ!||೧೧||
ದಣಿದಿಹ ಮನಸನು
ತಣಿಸಲು, ತಿನಿಸನು
ಉಣಿಸಲು, ಬಾ ಬಾ ನವಯುಗವೆ!||೧೨||
ಭಾಷಾ ಸೇವೆಯ
ಮಾಡಲು ಜನಿಸಿದೆ
ಷೋಡಶ ವರುಷದ ಹಿಂದಕ್ಕೆ ||೧೩||
ದೇಶದ ಸೇವೆಯ
ಸಮಾಜ ಸೇವೆಯ
ಮಾಡುತ ಬಾ ಬಾ ಮುಂದಕ್ಕೆ ||೧೪||
ಭೇದವ ಮರೆವರೆ
ಐಕ್ಯವ ತರುವರೆ
ಶಾಂತಿಯು ಬರುವರೆ ನೆಣಸುವೆಯಾ?||೧೫||
ಭಾಷಾ ಸೇವೆಯು
ದೇಶದ ಸೇವೆಯು
ಈಶನ ಪೂಜೆಯು ಮಾಡುವೆಯಾ? ||೧೬||
(ಮುದ್ರಾಡಿ ಕೃಷ್ಣಯ್ಯ ಶೆಟ್ಟಿ)

ತಾ|| 1-9-37ರಿಂದ ಉಡುಪಿ ರಾಮಕೃಷ್ಣ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುತ್ತಿರುವ ನ್ಯೂ ಥಿಯೇಟರ್ಸ್ ಚಲಚಿತ್ರ ಕಂಪೆನಿಯ 'ನಾಕು ಮನುಷ್ಯರು' ಎಂಬ ವಾಕ್ಚಲಚಿತ್ರದ ದೃಶ್ಯವೊಂದು


**LOOK SHARP!** **HERE IS AN OPPORTUNITY WAITING FOR YOU!!**

## NOVEL PRIZE COMPETITION.

**Every Agent of the Company who completes the required number of cases with Full Admission Fee, as detailed below, within a period of THREE MONTHS, i e, from 1st September 1937 to 30th November 1937, will get a Prize mentioned against the respective number of cases**

| TIME | Number of cases to be put in with Full Admission Fee | Prize Amount besides the usual Agency Commission |
|---|---|---|
| 1st September 1937 | 150 | Rs 100—0—0 |
| to | 100 | Rs. 75—0—0 |
| 30th November 1937 | 75 | Rs 50—0—0 |

*Therefore write to us for an Agency to-day and commence the work in right earnest.*

**The decision of the Management will be final in all matters pertaining to the competition.**

## WE HAVE THREE SCHEMES

**BIRTH** **MARRIAGE** **LIFE**

**ADMISSION FEE RS. 5-8-0 only.** **MONTHLY PREMIUM RE. 1-0-0 only.**

## RECORD OF PROGEESS.

| YEAR | Total No of Policies issued | Total Monthly Premia collected | Total Amount of Claims paid | Total Amount of Funds reserved | Bonus paid to Agents |
|---|---|---|---|---|---|
| | | Rs As Ps. | Rs As Ps | Rs As Ps | Rs As. Ps. |
| 1933-34 | 869 | 4 998—0—0 | 2,100—2—1 | 1,102-12-10 | |
| 1934-35 | 1,028 | 8,427—0—0 | 7,800-6—) | 2,251—7—2 | 168—8—0 |
| 1935-36 | 1,230 | 17 751—0—0 | 11,050- 0- 0 | 4,011-10—3 | 573—7—0 |
| 1936-37 | 1,954 | 27,019—0—0 | 21,315—0—0 | 6,061—2-10 | 853—7—0 |
| **Grand Total** | **5,081** | **58,195—0—0** | **45,295—8—9** | **13,433—1—1** | **1,595—6—0** |

*Chairman:*-**PHILIP J. CHANDRAN, Esqr., B. A.,**

*Retired Dt Registrar and Assistant Registrar of Joint Stock Companies, S. K, Coimbatore.*

**For full Prospectus and Agency Terms, please Apply to:—**

# The General Insurance Bank of India Limited,

HEAD OFFICE: -MANGALORE, SOUTH INDIA.

*Mangalore, Dated, 25-8-'37* Estd: 1933 P. K. MENON, *Secretary*

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.

---

**ಕಿರಿಯರ ಪ್ರಪಂಚದ**

**ಪುಸ್ತಕಗಳು.**

| | | | |
|---|---|---|---|
| ನಾಟಕಕಥೆಗಳು | ೦ | ೨ | ೦ |
| ಮುಂದಿನ ದೇವರು | ೦ | ೨ | ೦ |
| ಸ್ವತಂತ್ರ ಜೀವನೋಪಾಯ | ೦ | ೨ | ೬ |
| ಕುಶ-ಲವ | ೦ | ೪ | ೦ |
| ಸಂಶಯ ಪಿಶಾಚಿ | ೦ | ೬ | ೦ |
| ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ಮಧುವನ | ೧ | ೮ | ೦ |
| ವ್ಯಭಿಚಾರಿಣಿ ಯಾರು? | ೦ | ೮ | ೦ |
| ಹೆಂಡ್ತಿ ಗಂಡನಾದರೆ! | ೦ | ೪ | ೦ |
| ಪುರುಷನ ಘ! | ೦ | ೪ | ೦ |

**ಕಿರಿಯರ ಪ್ರಪಂಚ, ಉಡುಪಿ**

---

ವಾರ] 'ನವಯುಗ' [ಪತ್ರಿಕೆ

ವಾರ್ಷಿಕ ಚಂದಾ ರೂ ೩—೪—೦

೬ ತಿಂಗಳಿಗೆ ರೂ ೧—೧೨—೦

ಸೋಲ್ ಏಜೆಂಟರು:

ನವಭಾರತ ಬುಕ್ ಡಿಪೋ,

ಉಡುಪಿ, ದ. ಕ.

---

THE

# Vijaya Bank, Ltd.

Head Office MANGALORE    Branch Offices Udipi, Kaup & Coondapoor

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.    ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2.   ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ 3¾

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 1.    1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೋ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತವೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು
ರೂ. 1ರಿಂದ 100ರ ವರೆಗೆ ಸಾ ಶೆ. 8.   101ರಿಂದ 500ರ ವರೆಗೆ ಸಾ. ಶೆ. 7.
501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ ಪಾಲುಗಳು ದೊರೆಯುತ್ತವೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

**A B Shetty,** ಚೆಯರ್‌ಮೇನ್    **K. Gopalakrishna Shetty.** ಸೆಕ್ರಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

---

ಅತ್ಯುತ್ತಮ ವಣಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಪೌಂಟನ ಪೇನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ್'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

*Sole distributors:*—V. V. Kamath & Bros. Mangalore

---

## ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):—ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೪ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ ಒಳ್ಳೇ ರುಚಿ, ರೋಗಿಗಳಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಪಡಿಸುವುದು ಮರದಲ್ಲಿ ವರ್ಷ ... ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ 1-0 ... ಮಾತ್ರ, ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳುಕೂಡ ದೊರೆಯುವವು ಕ್ರಯ ಪಟ್ಟಿಗೆ ಕೆಳಗಣವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕ್, ಹಂಪನಕಟ್ಟೆ ಸ್ವಾದೇಶೀ ಡಿಪೊ, ರಥಬೀದಿಯಲ್ಲಿ ಸೋಮಯಾಜಿ ಎಂಡ್ ಕೊ, ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಪೋಸ್ ಸ್ಟೇಟದಲ್ಲಿ ಮೇಲಿನ ಎಲ್ಲಾಗಿಡಗಳು ದೊರೆಯುತ್ತವೆ.

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,

ಪೋಸ್ಟ್:—ಕಾಪು, ದ. ಕ.

---

ನೀವು ಓದಿರುವಿರಾ?

ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?

## <u>ಅಡ್ಡಬೀಳದ ಗಿಡ್ಡಿಯ ಮದುವೆ</u>

## <u>ಮುದುಕನ ಹೆಂಡತಿ ಫಕೀರ್ರಾದೆ</u>

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ

ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ

ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ

ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**

ಶ್ರೀ ಕೂರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ

ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರೆ ಆಣೆ ಸ್ಟಾಂಪು ಕಳುಹಿಸಬೇಕು.

NAVABHARAT BOOK DEPOT, UDIPI

---

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೊಲೆರಾ ಪಿಲ್ಸ್**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

**ಭೈರವ ಮಾತ್ರೆಗಳು**
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು. ಪಿ. ಮೇಸ್ತ, ಗೋಲ್ಡ್‌ಮೆಡಲ್ಡ್ ಫಿಜಿಸಿಯನ್

---

ಸ್ವದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI BROS,

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Byndoor, 9th July 1937.

*From*

**J. M. BANAVALI,**
**Byndoor Camp.**

*To*

*THE AGENT,*
**THE COMBINED BOOKING AGENCY,**
**Byndoor (S. K.)**

*Dear Sir,*

Received the "Tin" which I had missed in your office at Udipi on 6-7-1937 and which your Udipi office so kindly and promptly sent to me. I am really startled to see the efficient Management and promptness of the staff in rendering every assistance to the travelling passengers. I cannot therefore restrain myself from thanking the Management and the Staff.

Yours faithfully,
(*Sd.*) ***J. M. Banavali.***


# SUPPLY AGENCY LTD.
## UDIPI

**Authorised Capital .... Rs. 1,00,000/-**
**Subscribed & Paid up Capital Rs. 29,720/-**

ಈ ಕೆಳಗಿನ ದರದ ಬಡ್ಡಿಯಲ್ಲಿ
ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

| | | | | |
|---|---|---|---|---|
| 3 | ತಿಂಗಳಿಂದ | 6 | ತಿಂಗಳ ವರೆಗೆ | 4½% |
| 7 | ,, | 9 | ,, | 5% |
| 10 | ,, | 12 | ,, | 5½% |
| 13 | ,, | 24 | ,, | 6¼% |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು
ಅಥವಾ ಪತ್ರವ್ಯವಹಾರ ಮಾಡಬಹುದು.

ಸಪ್ಲೈ ಏಜೆನ್ಸಿ ಲಿಮಿಟೆಡ್
ಉಡುಪಿ
1—8—1937

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

# ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ ... ... .... | 3 | 0 | 0 |
| ಚಂದ್ರಗುಪ್ತ .. ... ... | 1 | 0 | 0 |
| Gowthama the Buddha .. .... | 0 | 8 | 0 |
| ಮಧುವನ .. .. ... | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ .... . . | 0 | 8 | 0 |
| ಸರಸ್ವತಿ .. .. .... | 0 | 8 | 0 |
| ಗೀತೆಯ ಕೈಗನ್ನಡಿ .... .... .... | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) ... | 0 | 4 | 0 |
| ಕೃಷ್ಣಸಂಧಾನ ... ... .... | 0 | 8 | 0 |
| ತುಳು ವ್ಯಾಕರಣ .. ... . | 0 | 8 | 0 |
| ಸತೀ ಕಮಲೆ ... .. .. | 0 | 6 | 0 |
| ಸತ್ಯನಾರಾಯಣ ಕತೆ .... . | 0 | 8 | 0 |

ಇದಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು
ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.

**ತುಳುನಾಡ್ ಪ್ರೆಸ್, ಉಡುಪಿ.**

**Rs. 75** WILL PAY YOU AFTER 5 YEARS **Rs. 100**

# INDUSTRIAL CASH CERTIFICATES

For full particulars apply to—

**SUPPLY AGENCY LIMITED. UDIPI**


Printed by P. VENKATARAMANACHARYA for & on behalf of SUPPLY AGENCY LTD, at THULUNAD PRESS, UDIPI and Published by K H SHETTY at "NAVAYUGA" OFFICE, UDIPI.

Registered No. M. 361

ಒಂದಾಣೆ

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT. Etc.
APPLY TO THE MANAGER

# ನವಯುಗ

ನವಯುಗವು
ಅಖಿಲ
ಕರ್ನಾಟಕದಲ್ಲಿಯೂ
ಕನ್ನಡಿಗರು ನೆಲಸಿರುವ
ದೇಶ ವಿದೇಶಗಳ
ಎಲ್ಲ ಕೇಂದ್ರಗಳಲ್ಲಿಯೂ
ವಿಶಾಲವಾಗಿ
ಪ್ರಚಾರದಲ್ಲಿರುವುದರಿಂದ
ಜಾಹಿರಾತುಗಳಿಗೆ
ಉತ್ತಮ ಸಾಧನವಾಗಿದೆ.
ದರಗಳಿಗೆ
ಮೆನೇಜರರಿಗೆ ಬರೆಯಿರಿ.

ವಾರಪತ್ರಿಕೆ ❖ ಸಂಪಾದಕ: ಕೆ. ಕೆ. ಶೆಟ್ಟಿ.

| ಸಂಪುಟ ೧೭<br>ಸಂಚಿಕೆ ೨ | ಉಡುಪಿ, ಗುರುವಾರ, ೯ ಸೆಪ್ಟಂಬರ ೧೯೩೭<br>Udipi, Thursday, 9th September 1937 | Vol. XVII<br>No. 2 |
|---|---|---|

## THE CANARA INDUSTRIAL & BANKING SYNDICATE LTD.

[INCORPORATED IN BRITISH INDIA]

ESTD:] [1925

*Head Office:*

**"MUKUNDA NIVAS"**
**UDIPI, (S. I.)**

**BRANCHES:**

1 BOMBAY

| | |
|---|---|
| 2 BANGALORE CITY | 17 HUBLI |
| 3 BELGAUM | 18 GADAG |
| 4 BYADGI | 19 KARWAR |
| 5 BELLARY | 20 KUMTA |
| 6 ADONI | 21 ANKOLA |
| 7 HOSPET | 22 HONAVAR |
| 8 TALIPARAMBA | 23 BHATKAL |
| 9 UPPINANGADI | 24 BRAHMAVAR |
| 10 KASARGODE | 25 HUNGARCUTTA |
| 11 PAYYANUR | 26 SIRSI |
| 12 KANHANGAD | 27 SAGAR |
| 13 KARKALA | 28 COONDAPOOR |
| 14 NANDYAL | 29 UDIPI |
| 15 PRODATTUR | 30 MANGALORE |
| 16 TADPATRI | 31 CANNANORE |

**M MBER:**
**RESERVE BANK OF INDIA**
**BANKERS' CLEARING HOUSE, BOMBAY**

***We have much pleasure to***
ANNOUNCE THE OPENING OF
OUR BRANCHES AT
**HINDUPUR (Anantpur Dt.)**
AND
**TUMKUR (Mysore State)**
ON THE 3rd & 9th SEPTEMBER 1937
RESPECTIVELY, WHERE ALL KINDS
OF BANKING BUSINESS
WILL BE TRANSACTED.

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,74,790 |
| Total resources exceed | „ 46 lakhs |

## ನ್ಯೂ ಕೋಮಲ ವಿಲಾಸ ಹೋಟೆಲ್

**91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ**

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ESTD. 1921 NAVAYUGA ... LY UDIPI.

# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರೆಸ್ಸಿಗೆ ಬರೆಯಿರಿ.

## THE ROYAL SEED CO.,

FLORISTS & SEEDSMEN,

27, Ilpay Thope ULSOOR, BANGALORE.

ವಿ ಸೂ—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈ ಮಾಡಿ ೧—೦—೦ ಒಂದಕ್ಕೆ ೦—೨—೦ ಕಮಿಷನ್ ಪಡಿಯುತ್ತೇವೆ ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು

THE

## MOOLKY BANK, LTD.,

MOOLKY.

## ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ

ಬಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

**M. R Punja,** *President & Manager.*

ಯಂ. ಆರ್. ಪುಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

## ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ತೀಚಿನ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಡಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

**ಅಮೃತಾಂಜನ ಡಿಪೋ,** —— ಬೊಂಬಾಯಿ, ಮದ್ರಾಸು, ಕಲ್ಕತ್ತೆ

DIAMONDS! DIAMONDS!!

## K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ಸಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ

*Manager,*

**Karnataka Printing Works,**

Hampankatte Mangalore.

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ**

## 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರಾಬರ್ ಕಮಿಶನ್ ಕೊಡಲಾಗುವದು ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ ಮತ್ತೆ ಸಿಗುವದು ದುರ್ಲಭ ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

*The Manager,* **The National Kanara News Agency,**

No. 58 Mody Street, Fort Bombay

## ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಸಿನ ಕೈ ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೂ ವಿಶೇಷ ಮಾಹಿತಿಗೂ ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.

*Proprietor* **ATTAVAR BABOO,**

**VASANTHI HARMONIUM WORKS**

**Hampankatta, Mangalore**

ವಿ ಸೂ ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚಿತ್ರಾಪುರ ರೋಡ್, ಉಡುಪಿ ಇಲ್ಲಿ ಮಾರಲ್ಪಡುತ್ತವೆ

ಶ್ರೀ

ವಾರ್ಷಿಕ ಚಂದಾ ರೂ ೩—೪—೦ | ಆರು ತಿಂಗಳಿಗೆ ರೂ ೧—೧೨—೦

ಉಡುಪಿ ೯—೯—೧೯೩೭ | ಸ್ಥಾಪನೆ ೧೯೨೧

# :: ನವಯುಗ ::

ಸಂಪುಟ ೧೭ | ಸಂಚಿಕೆ ೨


### ಆಡಂಬರವೇಕೆ?

ಇಂದಿನ ಮಂತ್ರಿಗಳು ಜನತೆಯ ದೀನ ಸೇವಕರು ರಾಜ್ಯಭಾರವು ಜನತೆಯದು ಆದರೂ ಮಂತ್ರಿಗಳು ಬೇರೆ ಬೇರೆ ಸ್ಥಳಗಳನ್ನು ಸಂದರ್ಶಿಸುವಾಗ ಜನತೆಯು ಅವರಿಗೆ ಮೊದಲಿನಂತೆಯೇ ಆಡಂಬರದ ಸ್ವಾಗತ ಸತ್ಕಾರಗಳನ್ನೀಯುತ್ತಿದ್ದಾರೆ ಶ್ರೀ ಮುರಾರ್ಜಿ ದೇಸಾಯಿಯವರು ಇತ್ತಲಾಗಿ ಕೋಲಾಪುರವನ್ನು ಸಂದರ್ಶಿಸಿದಾಗ ಅವರ ಸ್ವಾಗತ ಸತ್ಕಾರದ ಸಂಭ್ರಮವೇ ಸಂಭ್ರಮ! ಇದರಿಂದ ಜನತೆಯು ಮನೋವೃತ್ತಿಯು ಒಂದಿಷ್ಟು ಮಾರ್ಪಾಟವಾಗದೆ ಹಿಂದಿನಂತೆಯೇ ಇದೆಯೆಂಬುದು ಸ್ಪಷ್ಟವಾಗುವುದು. ಕಾಂಗ್ರೆಸ್ ಮಂತ್ರಿಗಳು ಜನಸೇವಾದೀಕ್ಷೆಯುಳ್ಳವರಾದುದರಿಂದ ಈ ಆಡಂಬರದ ದುರ್ವ್ಯಯವಾದರೂ ಯಾಕೆ? ಮಾನಪತ್ರಗಳ ಬಣ್ಣ ಗೌರವವೇಕೆ? ಅವರನ್ನು ಸಾಮಾನ್ಯ ಅತಿಥಿಗಳಂತೆಯೇ ತಮ್ಮನಡುವೆ ಬರಮಾಡಿ ಅವರೊಡನೆ ತಮ್ಮ ಸಂಕಷ್ಟ, ಅನಾನುಕೂಲತೆ, ಆವಶ್ಯಕತೆಗಳನ್ನೆಲ್ಲಾ ಹೇಳಿಕೊಂಡು ಅವರು ಸಹಜವಾದ ಜನಸಂಬಂಧವುಳ್ಳವರಾಗುವಂತೆ ಮಾಡಬಾರದೇಕೆ? ವಿಜೃಂಭಣೆಯ ಸ್ವಾಗತ, ಮೆರವಣಿಗೆ, ಮಾನಪತ್ರ, ಟೀಪಾರ್ಟಿ ಸತ್ಕಾರಗಳ ವಿಳಂಬನೆಯಾದರೂ ಯಾಕೆ? "ನಮ್ಮಲ್ಲಿ ಎಷ್ಟೊಂದು ಉತ್ಕೃಷ್ಟರಾದವರೂ ಜನತೆಯೊಳಗಿನ ಅತ್ಯಂತ ದೀನರಾದವರಿಗಿಂತ ಹೆಚ್ಚಿನವರಲ್ಲ"ಎಂದು ಗಾಂಧಿಜಿಯವರು ಸಾರಿರುವಾಗ ಕಾಂಗ್ರೆಸ್ ಮಂತ್ರಿಗಳನ್ನು ಸಮಾನತೆಯಿಂದ ಕಾಣುವ ಬದಲಿಗೆ ತಲೆಯ ಮೇಲೆ ಹೊತ್ತುಕೊಳ್ಳುವ ಜನತೆಯ ದಾಸ್ಯಮನೋವೃತ್ತಿಗೆ ಮಂತ್ರಿಗಳಾದರೂ ಪ್ರೋತ್ಸಾಹವೀಯದಂತೆ ನೋಡುವುದು ಅವರ ಕರ್ತವ್ಯ ಕಾಂಗ್ರೆಸ್ ಮಂತ್ರಿಗಳನ್ನು ಜನತೆಯು ಸ್ವಾಭಾವಿಕವಾಗಿ ಕಾಣುವ ಬದಲಿಗೆ ವಿಜೃಂಭಣೆಯ ಕೃತಕತೆಯಿಂದ ನೋಡುವುದೆಂದರೆ, ಶ್ರೀರಾಜಾಜಿಯವರೆಂದಂತೆ ಹೆಂಡತಿಯು ಗಂಡನನ್ನು ಅಥವಾ ತಂದೆಯನ್ನು ಮಗನು ವಂದಿಸಿ ಬರಮಾಡುವಂತೆಯೇ ಸರಿ

### ಯಾವುದು ಮೊದಲು?

ಕಾಂಗ್ರೆಸ್ ಮಂತ್ರಿಗಳೀಗ ಅಧಿಕಾರಕ್ಕೆ ಬಂದೊಡನೆಯೇ ಅನು ಮಾಡಬೇಕು, ಇದು ಮಾಡಬೇಕು, ಹಾಗೆ ಮಾಡಬೇಕು, ಹೀಗೆ ಮಾಡಬೇಕೆಂಬ ಸೂಚನೆಗಳೆಲ್ಲಾ ಬಹಳವಾಗಿ ಕೊಡಲ್ಪಡುತ್ತಿವೆ ಅವರು ಯಾವುದನ್ನು ಮೊದಲು ಕೈಕೊಳ್ಳಬೇಕೆಂಬ ವಿಷಯದಲ್ಲಿ ರಾಷ್ಟ್ರಪತಿ ಪಂಡಿತ ಜವಾಹರಲಾಲರು ಮತ್ತು ಮಹಾತ್ಮ ಗಾಂಧಿಜಿಯವರೊಳಗೇನೇ ಅಭಿಪ್ರಾಯ ಭೇದವಿರುವಂತೆ ತೋರುತ್ತದೆ. ರಾಷ್ಟ್ರಪತಿಗಳು, ಕಾಂಗ್ರೆಸ್ ಮಂತ್ರಿಗಳು ಪ್ರಥಮವಾಗಿ ಬಿಡಿಸಲೆತ್ನಿಸಬೇಕಾದ ಪ್ರಶ್ನೆಯೆಂದರೆ, ಒಕ್ಕಲುತನದ್ದು ಜಮೀನ್ದಾರಿ ಮತ್ತು ವರ್ಗದಾರ ಪದ್ಧತಿಯನ್ನು ತೆಗೆದುಹಾಕುವುದೇ ನಮ್ಮ ಕಟ್ಟಕಡೆಯ ಉದ್ದೇಶ ಇದನ್ನು ಯಾವ ರೀತಿ ಮಾಡುವುದೆಂಬ ಕುರಿತು ಭಿನ್ನಾಭಿಪ್ರಾಯವಿದ ಆದರೆ ಚಿಕ್ಕ ಚಿಕ್ಕ ವರ್ಗಗಳು ಹೋಗಬೇಕು ಅವುಗಳ ಬದಲಿಗೆ ಸಹಕಾರ ಕ್ರಮದಲ್ಲಿ ದೊಡ್ಡ ಬಡ ವಳಿಗಳು ಸ್ಥಾಪಿಸಲ್ಪಡಬೇಕು ಹಿಂದೀಯರಿಗೆ ಸಂಪೂರ್ಣ ಸ್ವರಾಜ್ಯ ಸಿಕ್ಕದೆ ಇದು ಸಾಧ್ಯವಿಲ್ಲ ವ್ಯಕ್ತಿತ ಕಾಂಗ್ರೆಸ್ ಮಂತ್ರಿಗಳು ಆದಷ್ಟು ಶೀಘ್ರವಾಗಿ ಬೇಸಾಯಗಾರರ ಮತ್ತು ಬಡ ಹಳ್ಳಿಗರ ಸಂಕಷ್ಟಗಳನ್ನು ಕಡಿಮೆಮಾಡಲೆತ್ನಿಸಬೇಕೆಂದಿರುವರು ಆ ಪ್ರಕಾರ ಅವರ ಸಂಯುಕ್ತ ಪ್ರಾಂತದಲ್ಲಿ, ಬಡ ಒಕ್ಕಲಿಗರ ಕಷ್ಟನಿವಾರಣೆ, ಹಳ್ಳಿಗರ ಸಾಲಪರಿಹಾರದ ಕುರಿತು ಗಮನ ಕೊಡಲಾಗಿದೆ ಮದ್ಯಪಾನ ನಿಷೇಧಕ್ಕೆ ಅಲ್ಲಿಯ ಮಂತ್ರಿಗಳು ಪ್ರಥಮವಾಗಿ ಪ್ರಾಧಾನ್ಯ ಕೊಟ್ಟಿರುವುದಿಲ್ಲ. ಒರಿಸ್ಸದ ಮಂತ್ರಿಗಳೂ ಈ ವಿಷಯದಲ್ಲಿ ಸ್ವಾತಂತ್ರ್ಯ ತೋರಿಸಿ, ಒರಿಸ್ಸದಲ್ಲಿ ಮದ್ಯಪಾನ ನಿಷೇಧ ಮಾಡಲು ಸಾಧ್ಯವಿಲ್ಲ, ಅದರಿಂದ ಸರಕಾರಕ್ಕೆ ಆದಾಯ ನಷ್ಟವಾಗಿ, ಕಳ್ಳಭಟ್ಟಿಯ ಮದ್ಯ ತಯಾರಿಯು ಮತ್ತಷ್ಟು ಹೆಚ್ಚಾಗುವಂತಾಗುವುದೆಂದು ಅಭಿಪ್ರಾಯಪಟ್ಟಿರುವರು ಗಾಂಧಿಜಿಯವರು ಪ್ರಥಮವಾಗಿಯೇ ಮದ್ಯಪಾನ ನಿಷೇಧಕ್ಕೆ ಗಮನ ಕೊಡಬೇಕೆಂದು ಸೂಚಿಸುವರು ಅದರಿಂದ ಸಾವಿರಾರು ಕುಟುಂಬಗಳು ಸುಖವಾಗಿ ಜೀವಿಸುವಂತಾಗುವುದು ದುಂದುಗಾರಿಕೆಯು ನಿಲ್ಲುವುದು ಅಬ್ಕಾರಿ ಆದಾಯವೇ ಕಳಂಕಿತವಾದುದು ಅದು ಬಡಜನರ ಪಾಪಕರ ವ್ಯಾಪಾರದಿಂದ ಪಡೆಯುವ ಉತ್ಪತ್ತಿ ಆದುದರಿಂದ ಅದನ್ನು ಆದಷ್ಟು ಬೇಗ ನಿಲ್ಲಿಸಬೇಕೆಂದೇ ಅವರ ಆಗ್ರಹ. ಗಾಂಧಿಜಿಯವರ ಆದರ್ಶದ ದೃಷ್ಟಿಯಲ್ಲಿ ಮದ್ಯಪಾನವನ್ನು ಮೂರು ವರ್ಷಗಳಲ್ಲಿ ನಿಲ್ಲಿಸುವುದು ಸಾಧ್ಯವಾಗಬಹುದು ಆದರೆ ವಾಸ್ತವವಾಗಿ ಇದೆಷ್ಟರ ಮಟ್ಟಿಗೆ ವ್ಯವಹಾರ್ಯವೋ ತಿಳಿಯದು ಒಂದೆರಡು ವರ್ಷ ಮದ್ಯಪಾನ ನಿಷೇಧದ ಕುರಿತು ದೇಶದಲ್ಲೆಲ್ಲಾ ಪ್ರಚಂಡ ಪ್ರಚಾರಕಾರ್ಯ ನಡಿಸಿ ಆ ಮೇಲೆ ಅದನ್ನು ನಿಷೇಧಿಸುವ ಪ್ರಯೋಗ ನಡಿಸಿದರಾಗುತ್ತಿದ್ದಿಲ್ಲವೆ? ಈಗ ಒಮ್ಮೆಲೇ ಅದನ್ನು ಕೈಕೊಂಡಲ್ಲಿ ನಾಲದ ಹೊರೆಯಿಂದ ನೆಲಹಿಡಿದು ಜೀವನದಲ್ಲೇ ನಿರಾಶೆಹೊಂದಿರುವ ಬೇಸಾಯಗಾರರ ಜೀವನದಲ್ಲಿ ಒಂದಿಷ್ಟು ಬೆಳಕನ್ನುಂಟುಮಾಡಲು ಹಣವಾದರೂ ಎಲ್ಲಿಂದ? ಯಾವುದಕ್ಕಾದರೂ ಮೊದಲಿನ ಆವಶ್ಯಕತೆಯಾಗಿರುವ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡುವ ಏರ್ಪಾಡು ಮಾಡುವುದಾದರೂ ಹೇಗೆ?

### ಹಿಂಸೆಯಲ್ಲಿ ವಿಶ್ವಾಸವಿಲ್ಲ

ಅಂಡಮಾನಿನ ಕ್ರಾಂತಿಕಾರಕ ಕೈದಿಗಳು ಹಿಂಸೆಯಲ್ಲಿ ತಮಗೀಗ ವಿಶ್ವಾಸವಿಲ್ಲೆಂದು ಗಾಂಧಿಜಿಯವರಿಗೆ ಸ್ಪಷ್ಟಪಡಿಸಿರುವರು ಇತ್ತಲಾಗಿ ಸಂಯುಕ್ತ ಪ್ರಾಂತದಲ್ಲಿ ಬಿಡುಗಡೆ ಹೊಂದಿರುವ ಕಾಕೋರಿ ಪಿತೂರಿ ಕೈದಿಗಳೂ, ಹಿಂಸೆಯಿಂದ ಸ್ವರಾಜ್ಯ ಪಡೆಯಲು ಸಾಧ್ಯವಿದೆಯೆಂದು, ತಾವು ಹಿಂಸಾತ್ಮಕ ಕೃತ್ಯಗಳನ್ನು ನಡಿಸಿದುದು, ಈಗ ತಮಗೆ ಅದರಲ್ಲಿ ವಿಶ್ವಾಸವಿಲ್ಲೆಂದು ಅಭಿಪ್ರಾಯಿಸುತ್ತಿರುವರು ಈಗ ದೇಶದ ವಾತಾವರಣವು ಸಂಪೂರ್ಣವಾಗಿ ಮಾರ್ಪಾಟುಹೊಂದಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿಡಿತವು ಸಡಿಲಾಗಿ, ಕೇವಲ ಅಧಿಕಾರಚಾಲನೆಯ ದಬ್ಬಾಳಿಕೆಯ ಪೋಲೀಸ್ ರಾಜ್ಯದ ಬದಲಿಗೆ, ಕೆಲಮಟ್ಟಿಗಾದರೂ ಪ್ರಾತಿನಿಧ್ಯವುಳ್ಳ, ಪ್ರಜಾ ಜವಾಬ್ದಾರಿ ಆಡಳಿತವು ಸ್ಥಾಪಿತವಾಗಿರುವುದರಿಂದ ಕ್ರಾಂತಿಕಾರಕ ಕೈದಿಗಳೆಲ್ಲಾ ಕಾಂಗ್ರೆಸಿನೊಂದಿಗೇನೇ ಸೇರಿ ಆ ಮೂಲಕ ಸ್ವರಾಜ್ಯ ಸಾಧಿಸಲೆತ್ನಿಸುವರೆಂಬುವರಲ್ಲಿ ಸಂದೇಹವೇ ಇಲ್ಲ ಆದುದರಿಂದ ಮಹಾತ್ಮಾ ಗಾಂಧಿಯವರು ವಿನಂತಿಮಾಡಿಕೊಂಡಂತೆ ಬಂಗಾಳ ಸರಕಾರವು, ಅಂಡಮಾನ್ ಕೈದಿಗಳನ್ನು ಹಿಂದುಸ್ಥಾನಕ್ಕೆ ತರುವುದು ಮಾತ್ರವಲ್ಲವೆ, ಬಂಗಾಳದ ಕ್ರಾಂತಿಕಾರಕ ಕೈದಿಗಳನ್ನೆಲ್ಲ ಬಿಡುಗಡೆಮಾಡುವ ವಿವೇಕಪರ ಧೋರಣೆ ವಹಿಸುವುದು ಪ್ರಕೃತೋಚಿತಕಾರ್ಯವಿದೆ, ಇದರ ಮೇಲೆ ಬಂಗಾಳದ, ಹಕ್ ಮಂತ್ರಿಮಂಡಲದ ಅದೃಷ್ಟವು ಹೊಂದಿಕೊಂಡಿದೆ

### ಕಾಂಗ್ರೆಸಿನ ಪ್ರಭಾವ

ವಾಯುವ್ಯ ಗಡಿನಾಡಿನ ಸರ್ ಅಬ್ದುಲ್ ಕ್ಯಾಯುಮ್ ಮಂತ್ರಿಮಂಡಲದ ಮೇಲೆ ಅವಿಶ್ವಾಸ ಸೂಚನೆಯು ಮಂಜೂರಾಗಿ ಅದು ರಾಜಿನಾಮೆಯಿತ್ತಿರುವುದು ಅಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಬೇಗನೇ ಸ್ಥಾಪಿಸಲ್ಪಡುವುದು ಇದು ಹಿಂದೂ ದೇಶಕ್ಕೆ ಅತ್ಯಂತ ಸಂತೋಷದ ಹಾಗೂ ಪ್ರಾಮುಖ್ಯ ಸಂಗತಿಯಿದ ಯಾಕೆಂದರೆ ಹಿಂದುಗಳ ಪ್ರಾಂತದಲ್ಲಿ ಮಾತ್ರ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪಿಸಲ್ಪಟ್ಟದು, ಮುಸಲ್ಮಾನ ಪ್ರಾಂತಗಳಿಗೆ ಕಾಂಗ್ರೆಸಿನ ಮೇಲೆ ವಿಶ್ವಾಸವಿಲ್ಲೆಂಬ ಕುತರ್ಕವನ್ನು ಇಂಗ್ಲಂಡಿನ ಹಲವು ಪತ್ರಿಕೆಗಳು ಹೂಡಿ ಕುಟಿಲ ಪ್ರಚಾರ ನಡಿಸಿದ್ದುವು. ಈಗ ಅತ್ಯಂತ ಹಿಂದುಳಿದ ಮತ್ತು ಸಂಪೂರ್ಣ ಮುಸಲ್ಮಾನ ಪ್ರಾಂತವೆಂದೆಣಿಸಲ್ಪಟ್ಟಿರುವ ವಾಯುವ್ಯಗಡಿನಾಡಿನಲ್ಲೇ ಕಾಂಗ್ರೆಸು ಅಧಿಕಾರಕ್ಕೆ ಬಂದರೆ ಯಾವಾಗಲೂ ಹಿಂದು ಮುಸಲ್ಮಾನರನ್ನು ಒಬ್ಬರೊಬ್ಬರ ಮೇಲಾಗಿ ಎತ್ತಿ ಕಟ್ಟುವ ಬ್ರಿಟಿಷ ಪತ್ರಿಕೆಗಳ ಕುತಂತ್ರದ ಮೊಸೆಯು ಮೊಂಡಾಗುವುದು ಇನ್ನುಳಿದ ಮುಸಲ್ಮಾನ ಪ್ರಾಂತಗಳ ಪೈಕಿ ಒರಿಸ್ಸದಲ್ಲಿ ಕಾಂಗ್ರೆಸಿಗೆ ಬಹುಪಕ್ಷವಿದೆ ಅಲ್ಲಿಯ ಮಂತ್ರಿಮಂಡಲ ಹಲವು ಸಲ ಅಪಜಯ ಹೊಂದಿದರೂ ಒಮ್ಮೆ ಅಧಿಕಾರವನ್ನಾಕ್ರಮಿಸಿಕೊಂಡ ಅನುಕೂಲತೆಯಿಂದ ಮಾತ್ರ ತನ್ನ ಸ್ಥಾನದಲ್ಲಿ ಗಟ್ಟಿಕೂತುಬಿಟ್ಟಿದೆ ಬಂಗಾಳದಲ್ಲಿ ಜಾತೀಯ ಎವಾರ್ಡಿನ ಕುಟಿಲತೆಯ ನಿಮಿತ್ತ ಮಾತ್ರ ಕಾಂಗ್ರೆಸು ಅಧಿಕಾರಕ್ಕೆ ಬಾರದಂತಾಗಿದೆ ಆದರೂ ಅಲ್ಲಿ ಕಾಂಗ್ರೆಸ್ ಪಕ್ಷವು ಪ್ರಬಲವಾಗಿದ್ದು ಹಕ್ ಮಂತ್ರಿಮಂಡಲಕ್ಕೆ ಸುಖವಿಲ್ಲದಂತಾಗಿದೆ. ಪಂಜಾಬಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಕೇವಲ ಜಾತೀಯತೆಗೇನೇ ಪ್ರಾಧಾನ್ಯ ದೊರೆಯುವಂತಾಗಿದೆ ಸಿಂಧ್ ಪ್ರಾಂತದ ಪರಿಸ್ಥಿತಿಯೂ ಕೆಲಮಟ್ಟಿಗೆ ಇದೇ ರೀತಿಯಿದೆ ಆದರೂ ಈ ಎರಡು ಪ್ರಾಂತಗಳಲ್ಲಿಯೂ ಇತ್ತಲಾಗಿ ರಾಷ್ಟ್ರೀಯತೆಯು ಬಲಗೊಳ್ಳುತ್ತಿದೆಯೆಂಬುದು ಆಶಾದಾಯಕವಾಗಿದೆ ಒಟ್ಟಾರೆ ಇಡೀ ದೇಶದಲ್ಲೀಗ ಕಾಂಗ್ರೆಸಿನ ವರ್ಚಸ್ಸು ತುಂಬಿದೆ ಸ್ವರಾಜ್ಯದ ಮುಂಬೆಳಕು ಹರಿದಿದ ದೇಶವನ್ನೆಲ್ಲಾ ಇಷ್ಟರವರೆಗೆ ಆವರಿಸಿದ್ದ ಪಾರತಂತ್ರ್ಯದ ಕಗ್ಗತ್ತಲೆಯು ಕಾಲ್ತೆಗೆಯಹತ್ತಿದೆ

---


ನವಯುಗ | ಹಣ ಸಂಪಾದಿಸಿರಿ!

**ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ದೇಶ ಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡಿಯುತ್ತಿರುವರು

**ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

**ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.**

# ಮದ್ರಾಸ್ ಪ್ರಾಂತದ ಬಜೆಟು ರೂ. ೭೫ ಲಕ್ಷ ಕಂದಾಯ ಮಾಫಿ, ಶ್ರೀ ರಾಜಗೋಪಾಲಾಚಾರ್ಯರ ಭಾಷಣ, ಕೈನೂಲಿನ ತಯಾರಿಗೆ ರೂ. ೨ ಲಕ್ಷ ಸಹಾಯ, ಕೇವಲ ರೂ. ೬,೦೦೦ ಉಳಿತಾಯ.

**ಮದ್ರಾಸ್ ಪ್ರಾಂತದ ಬಜೆಟು**

ಇದೇ ತಾ. 1ರಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ| ರಾಜಗೋಪಾಲಾಚಾರ್ಯರು ಮದ್ರಾಸ್ ಪ್ರಾಂತದ 1937-38ನೇ ವರ್ಷದ ಆಯವ್ಯಯ ಪಟ್ಟಿಯನ್ನು ಎಸೆಂಬ್ಲಿ ಮುಂದಿಟ್ಟರು. ಕೆಲವೇ ದಿನಗಳ ಅವಕಾಶದಲ್ಲಿ ತಯಾರಿಸಲ್ಪಟ್ಟ ಈ ಬಜೆಟನಲ್ಲಿ ರೂ. 6000ದಷ್ಟರ ಉಳಿತಾಯ ಮಾತ್ರವಿದೆ. ಈ ಸಲದ ಬಜೆಟಿಗೆ ಕಾಂಗ್ರೆಸಿನ ಧೋರಣೆಗನುಗುಣವಾದ ಸ್ವರೂಪವನ್ನು ಕೊಡಲಾಗಿದೆಯೇ ಹೊರತು, ಅದು ಕಾಂಗ್ರೆಸ್ ಪಕ್ಷದ ಬಜೆಟಾಗುವಂತೆ ಅವರ ಇಚ್ಛೆ ಪ್ರಕಾರವೇ ತಯಾರಿಸಲ್ಪಟ್ಟಿರುವುದೆಂದು ಹೇಳಲಾಗುವುದಿಲ್ಲೆಂದು ಮುಖ್ಯ ಮಂತ್ರಿಗಳು ಸ್ಪಷ್ಟ ಪಡಿಸಿರುವರು. ಈ ಬಜೆಟಿನ ಪ್ರಕಾರ ರೈತರಿಗೆ ರೂ. 75 ಲಕ್ಷದಷ್ಟರ ಕಂದಾಯ ಮಾಫಿ ಕೊಡಲಾಗುವುದು. ಸೇಲಮಿನಲ್ಲಿ ಜ್ಯಾರಿಗೆ ತರಲಿರುವ ಮದ್ಯಪಾನ ನಿಷೇಧದಿಂದ ರೂ 26 ಲಕ್ಷ ಆದಾಯ ನಷ್ಟವಾಗುವುದು. ಕೈನೂಲಿನ ಕೈಗಾರಿಕೆಗೆ ರೂ 2 ಲಕ್ಷ ಸಹಾಯ ಮಾಡಲಾಗುವುದು. ಹಳ್ಳಿಗಳಲ್ಲಿ ರೇಡಿಯೋ ವ್ಯವಸ್ಥೆ, ಹೊಸ ರೂರಲ್ ಡಿಸ್ಪೆನ್ಸರಿಗಳಿಗೆ ಮತ್ತು ಸೂಲಗಿತ್ತಿಯವರಿಗೆ ಸಹಾಯ, ನೀರಾಶಯ ಮತ್ತು ಚರಂಡಿ ವ್ಯವಸ್ಥೆಗೆ ರೂ. 11,75,000 ವ್ಯಯಿಸಲಾಗುವುದು. ಪ್ರಧಾನ ಮಂತ್ರಿಗಳು ತನ್ನ ಭಾಷಣದ ಕೊನೆಯಲ್ಲಿ, ನೌಕರರ ಸಂಬಳವನ್ನು ಕಡಿಮೆ ಮಾಡುವ ಕುರಿತು ಇಂಡಿಯಾ ಸೆಕ್ರೆಟರಿಗಳಿಗೆ ಬರಕೊಳ್ಳಲಾಗುವುದೆಂದೂ, ಹೊಸ ಕರ ಹೊರಡಿಸಲ್ಪಡುವ ಸಂಭವವಿದೆಯೆಂದೂ, ಆದರೆ ಅದು ಮೊದಲೇ ದೊಡ್ಡ ಭಾರವಾಗಿರುವ ಬಡವರ ಮೇಲೆ ಬೀಳಲಾರದೆಂದೂ ಕೈನೂಲಿನ ವಸ್ತ್ರದ ಹೊರತು ಇತರ ವಸ್ತ್ರ ಮಾರಲು ಲೈಸೆನ್ಸ್ ಫೀಸು ಹೊರಿಸಲಾಗುವುದೆಂದೂ ಸೂಚಿಸಿದರು.

ಇದೇ ಪ್ರಾಂತದಲ್ಲಿ ಕೊಡಲ್ಪಡುವ ರೂ. 75 ಲಕ್ಷದಷ್ಟರ ಭೂಕಂದಾಯ ಮಾಫಿಯನ್ನು ಯಾವ ರೀತಿಯಲ್ಲಿ ಹಂಚುವುದೆಂಬುದನ್ನು ನಿರ್ಣೈಸಲು ಮಂತ್ರಿಗಳಿಗೆ ಅವಕಾಶ ದೊರೆಯಲಿಲ್ಲ. ಈ ರಿಯಾಯಿತಿಯು ಸಾಲದೆಂದು ಆಕ್ಷೇಪಿಸುವವರು ಸ್ವಲ್ಪ ತಾಳ್ಮೆ ವಹಿಸಬೇಕು. ಭೂಕಂದಾಯವು ಬಹಳ ಭಾರವಾಗಿರುವುದೆಂಬುದು ನಮಗೆ ಸಂಪೂರ್ಣ ತಿಳುವಳಿಕೆಯಿದೆ. ಆದರೆ ಸಣ್ಣ ರೈತರಿಗೆ ನಿಜವಾದ ಸಹಾಯವಾಗುವಷ್ಟರ ರಿಯಾಯಿತಿಯನ್ನು ಕೊಡ ಹೋದರೆ ಇತರ ಅತ್ಯಾವಶ್ಯಕ ಜನೋಪಕಾರಿ ಕೆಲಸಗಳನ್ನೆಲ್ಲಾ ನಡಿಸಲು ಹಣವೇ ಇಲ್ಲದಾಗುವುದು. ಆದರೆ ಈ ವಿಷಯದಲ್ಲಿ ಸರಕಾರವು ಹೆಚ್ಚಿನ ಗಮನ ಕೊಡುವುದು. ಅದೇನು ಒಂದೊಮ್ಮೆಯೇ ನಿರ್ಧರಿಸಲ್ಪಡುವ ವಿಷಯವಲ್ಲ. ಸಾಲದಲ್ಲಿ ಮುಳುಗಿರುವ ಬೇಸಾಯಗಾರನ ಸಾಲದ ಭಾರವನ್ನಿಳಿಸಿ ಅವನೊಬ್ಬ ಮನುಷ್ಯನಾಗಿ ಸ್ವಾಭಿಮಾನದಿಂದ ಜೀವಿಸುವಂತೆ ಮಾಡುವುದು ಎಲ್ಲಕ್ಕಿಂತಲೂ ಜರೂರಿನ ವಿಷಯ. ಈ ವಿಷಯದಲ್ಲಿ ಶೀಘ್ರವಾಗಿ ಕಾರ್ಯ ಕೈಕೊಳ್ಳಲಾಗುವುದು.

ಈ ವರ್ಷ ಅಕ್ಟೋಬರ ತಾ. 1ರಿಂದ ಸೇಲಮಿನಲ್ಲಿ ಕಳ್ಳು ಮತ್ತು ಸಾರಾಯಿ ಅಂಗಡಿಗಳನ್ನೆಲ್ಲಾ ಮುಚ್ಚಲಾಗುವುದು. ಇದರಿಂದಾಗಿ ನಿರುದ್ಯೋಗದಲ್ಲಿ ಬೀಳುವವರಿಗೆ ಉದ್ಯೋಗ ಸಿಗುವಂತೆ ಮಾಡುವ ಕುರಿತೂ ಸರಕಾರವು ವಿಶೇಷ ಲಕ್ಷ್ಯ ಕೊಡಬೇಕಾಗಿದೆ. ಇನ್ನು ಸ್ವಲ್ಪ ಸಮಯದಲ್ಲಿಯೇ ಹೆಚ್ಚಿನ ಅನುಭವ ಪಡೆದು ಸರಕಾರವು ಇಡೀ ಪ್ರಾಂತದಲ್ಲಿ ಮದ್ಯ ಮತ್ತು ಮಾದಕ ಪದಾರ್ಥಗಳನ್ನು ಸಂಪೂರ್ಣವಾಗಿ ನಿಷೇಧಿಸುವ ನಿರ್ಧಾರ ಮಾಡಿರುವುದು. ಈಗ ಸೇಲಮ್ ಜಿಲ್ಲೆಯೊಂದರಲ್ಲಿ ಮದ್ಯದಂಗಡಿಗಳನ್ನು ನಿಲ್ಲಿಸಿದುದರಿಂದ ಸರಕಾರಕ್ಕೆ ರೂ. 26 ಲಕ್ಷ ನಷ್ಟವಾಗುವುದಾದರೂ ಸೇಲಮಿನ ಬೇಸಾಯಗಾರರಿಗೆ ಮತ್ತು ಮಜೂರರಿಗೆ ರೂ ಒಂದು ಕೋಟಿಯಷ್ಟು ಹಣವು ಉಳಿದಂತಾಗುವುದು. ಪ್ರಾಂತದ ವಿಷಯವೂ ಇದೇ ರೀತಿಯಾಗಿದೆ.



ಮದ್ರಾಸಿನ ಮುಖ್ಯ ಮಂತ್ರಿ
**ಶ್ರೀ ಸಿ. ರಾಜಗೋಪಾಲಾಚಾರ್ಯರು.**

ಹೊಸ ಯೋಜನೆಗಳಿಗಾಗಿ ರೂ. 13,75,000 ವಿನಿಯೋಗಿಸಲ್ಪಡುವುದು. ಹೊಸತಾಗಿ ಯಾವ ಒಸ್ತೆ ಕಟ್ಟಡಗಳ ಯೋಜನೆಯನ್ನೂ ಕೈಕೊಂಡಿರುವುದಿಲ್ಲ. ಸ್ಥಳೀಯ ಸಂಸ್ಥೆಗಳು ತಯಾರಿಸಿರುವ ನೀರಾಶಯ ಮತ್ತು ಚರಂಡಿಯ ಯೋಜನೆಗಳನ್ನೆಲ್ಲಾ ಸ್ವೀಕರಿಸಲಾಗಿದೆ. ಹೊಸತಾಗಿ ರೂರಲ್ ಡಿಸ್ಪೆನ್ಸರಿಗಳನ್ನು ತೆರೆಯಲಾಗುವುದು. ಈಗಿರುವ ರೂರಲ್ ಡಿಸ್ಪೆನ್ಸರಿಗಳಿಗೆ ಸೂಲಗಿತ್ತಿಯರನ್ನಿಡಲಾಗುವುದು. ಪ್ರಾಯಸ್ಥರ ಶಿಕ್ಷಣಕ್ಕೂ, ವಿನೋದಕ್ಕೂ, ಅನುಕೂಲವಾಗುವಂತೆ ಹಳ್ಳಿಗಳಲ್ಲಿ ರೇಡಿಯೋಗಳನ್ನಿಡಲಾಗುವುದು. ನೂಲುವ ಕೈಗಾರಿಕೆಯು ಬೇಸಾಯಗಾರ ಕುಟುಂಬಗಳ ಉಪವೃತ್ತಿಯ ಸ್ಥಾನ ಪಡೆಯುವಂತೆ ಅದರ ಸಹಾಯಾರ್ಥವಾಗಿ ರೂ. 2 ಲಕ್ಷ ಸಹಾಯ ಧನವೀಯಲಾಗುವುದು. ಅದಕ್ಕಾಗಿ ವಿವರವಾದೊಂದು ಯೋಜನೆಯು ಸಿದ್ಧವಾಗಿದೆ. ಕೈಮಗ್ಗದ ವಸ್ತ್ರವನ್ನು ಬಿಟ್ಟು ಉಳಿದ ವಸ್ತ್ರ ವ್ಯಾಪಾರಿಗಳ ಮೇಲೆ ಲೈಸೆನ್ಸ್ ಫೀಸನ್ನು ಹೊರಿಸಲಾಗುವುದು. ಇದರಿಂದ ಸರಕಾರಕ್ಕೆ ಸ್ವಲ್ಪ ಆದಾಯ ಬರುವುದು.

ಒಟ್ಟು ಆಯಕ್ಕಿಂತ ವ್ಯಯವು ರೂ. 85,38,000 ಹೆಚ್ಚಾಗಿರುವುದು. ಇದು ಹೊರತು ರಿಸರ್ವ್ ಬೇಂಕಿನ ಎಗ್ರೀಮೆಂಟಿನ ಮೇರೆಗೆ ರೂ. 40 ಲಕ್ಷದಷ್ಟರ ಶಿಲ್ಕನ್ನಿಟ್ಟುಕೊಳ್ಳಬೇಕಾಗಿರುವುದು. ಆದುದರಿಂದ ಸರಕಾರವು ಇಂಡಿಯಾ ಸರಕಾರದ ಸಮ್ಮತಿ ಪಡೆದು ರೂ 150 ಲಕ್ಷಗಳಷ್ಟರ ಸಾಲ ಪಡೆದಿರುವುದು. ಸ್ವಲ್ಪವೇ ಸಮಯದಲ್ಲಿ ಸರಕಾರಕ್ಕೆ ಬೇಕಾದುದಕ್ಕಿಂತ ಬಹಳ ಹೆಚ್ಚಿನ ಸಾಲ ದೊರೆತಿರುವುದು.

ನಾವು ಆಗಬೇಕೆಂದು ಅಪೇಕ್ಷೆಪಟ್ಟುದನ್ನಾಗಲಿ, ನಮ್ಮ ಹಿತಚಿಂತಕರು ಮತ್ತು ನಮ್ಮ ಉತ್ಸಾಹಪರ ಸಹಾಯಕರು ನಿರೀಕ್ಷಿಸಿದ ಆರೆವಾಸಿಯಷ್ಟನ್ನಾಗಲಿ ಮಾಡಿರುವುದಿಲ್ಲ. ನಮಗೆ ದೊರೆತ ಮಿತ ಸಮಯದಲ್ಲಿ, ಮಿತವಾದ, ಉತ್ಪತ್ತಿಯಿಂದ ನಮ್ಮ ಧೋರಣೆಯ ಕೆಲವು ಪ್ರಾಮುಖ್ಯ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲೆತ್ನಿಸಿರುತ್ತೇವೆ. ಕಳೆದ ವರ್ಷಕ್ಕಿಂತ ಈ ವರ್ಷ ನೀರಾವರಿಗೆ ರೂ. 5,50,000, ಶಿಕ್ಷಣಕ್ಕೆ ರೂ 2,50,000, ವೈದ್ಯಕೀಯಕ್ಕೆ ರೂ. 4,50,000, ಸಾರ್ವಜನಿಕ ಆರೋಗ್ಯಕ್ಕೆ, ರೂ. 9,50,000, ವ್ಯವಸಾಯಕ್ಕೆ ರೂ. 1,75,000 ಪಶುವೈದ್ಯಕೀಯ ಖಾತೆಗೆ ರೂ. 75,000 ಕೋಪರೇಟಿವ್ ಕ್ರೆಡಿಟಿಗೆ ರೂ. 2,50,000, ಮತ್ತು ಕೈಗಾರಿಕೆಗಳಿಗೆ ರೂ 5ಲಕ್ಷ ಹೆಚ್ಚಾಗಿ ವಿನಿಯೋಗಿಸಲಾಗಿದೆ. ಹಳ್ಳಿಗರ ಸಾಲ ನಿವಾರಣೆಗಾಗಿ ರೂ. 30ಲಕ್ಷವನ್ನಿಡಲಾಗಿದೆ. ಅಗತ್ಯವಿದ್ದರೆ ಈ ಹಣವನ್ನು ಹೆಚ್ಚಿಸಲಾಗುವುದು. ಹಳ್ಳಿಗರ ಸಾಲದ ವಿಷಯದಲ್ಲಿ ಅವರಿಗೆ ಹೆಚ್ಚಿನ ಸಹಾಯವೀಯುವ ಉಪಾಯವನ್ನು ನಾವು ಕಂಡುಕೊಳ್ಳಲಿದ್ದೇವೆ.

ನಮ್ಮ ಸೇಕಡ 92ರಷ್ಟರ ಜನರು ವಾಸಮಾಡುವುದು ಮುನಿಸಿಪಲ್ ಪಟ್ಟಣಗಳ ಹೊರಗೆ, ಅವರಿಗೆ ಸರಿಯಾಗಿ ಕುಡಿಯುವ ನೀರನ್ನೊದಗಿಸುವ ಪ್ರಶ್ನೆಯು ಮುಹತ್ವದ್ದಾಗಿದೆ. ನಮ್ಮ ದೇಶದ ಪ್ರತಿ ಹಳ್ಳಿಯವರಿಗೆ ಶುದ್ಧವಾದ ಕುಡಿಯುವ ನೀರು ದೊರೆಯುವಂತೆ ಮಾಡಬೇಕೆಂದು ಸರಕಾರದ ನಿರ್ಧಾರವಿದೆ. ರಸ್ತೆ, ಅಕ್ಷರಜ್ಞಾನಾದಿಗಳಿಗಿಂತಲೂ ಪ್ರಾಮುಖ್ಯ ವಿಷಯವಿದು. ಮದ್ರಾಸ್ ಪ್ರಾಂತದ ಸುಮಾರು 50.000 ಹಳ್ಳಿಗಳಲ್ಲಿ 80 ಲಕ್ಷ ಕುಟುಂಬಗಳವರು ವಾಸಿಸುತ್ತಿದ್ದಾರೆ. ಪ್ರತಿ ಹಳ್ಳಿಗೂ ಕುಡಿಯಲು ಶುದ್ಧ ನೀರನ್ನೊದಗಿಸುವ ಕುರಿತು ವ್ಯಾಪಕವಾನೊಂದು ಯೋಜನೆಯನ್ನು ಕೈಕೊಳ್ಳಲಾಗುವುದು. ಇದಕ್ಕಾಗಿ ಸ್ಥಿರವಾದ ಫಂಡೊಂದನ್ನು ಏರ್ಪಡಿಸುವ ಆಲೋಚನೆ ಸರಕಾರಕ್ಕಿದೆ.

ಆಡಳಿತವು ಸರಿಯಾಗಿ ನಡಿಸಲ್ಪಡಬೇಕಾದರೆ ನೌಕರರಲ್ಲಿ ತೃಪ್ತಿಯಿರಬೇಕು. ತೃಪ್ತಿಯಿರಬೇಕಾದರೆ ನೌಕರರಿಗೆ ನ್ಯಾಯವಾದ ಸಂಬಳ ಸಿಗಬೇಕು. ಆದರೆ ಜನತೆಯ ತೆರಿಗೆ ತೆರುವ ಶಕ್ತಿಯು ಪ್ರಮಾಣಕ್ಕನುಗುಣವಾಗಿರಬೇಕು ಸರಕಾರದ ಆಡಳಿತ ವೆಚ್ಚ. ಆದುದರಿಂದ ತೆರಿಗೆ ತೆರುವ ಹೆಚ್ಚಿನ ಜನತೆಯ ಆದಾಯಕ್ಕೂ, ನೌಕರರಿಗೆ ಕೊಡಲ್ಪಡುವ ಸಂಬಳಕ್ಕೂ ಇರುವ ಈಗಣ ಪ್ರಮಾಣವನ್ನು ಇದೇ ರೀತಿ ಇರಿಸುವುದು ನ್ಯಾಯದೃಷ್ಟಿಯಿಂದ ಅಸಾಧ್ಯವೇ ಸರಿ. ಈಗಣ ಪರಿಸ್ಥಿತಿಯಲ್ಲಿ ಇದೇ ರೀತಿ ನಡೆದರೆ ಸರಕಾರಿ ನೌಕರರಿಗೂ ಜನತೆಗೂ ತೀವ್ರ ವೈಷಮ್ಯವುಂಟಾಗದಿರಲಾರದು. ಹಳ್ಳಿಗಳಲ್ಲಿನ ಸೇಕಡ 90ರಷ್ಟು ಜನರ ಜೀವನ ಪ್ರಮಾಣದ ದೃಷ್ಟಿಯಿಂದ ಸರಕಾರಿ ನೌಕರರ ಸಂಬಳವು ಬಹಳ ಹೆಚ್ಚಾಗಿದೆ. ಆದುದರಿಂದ ನೌಕರರ ಸಂಬಳದಲ್ಲಿ ಹೆಚ್ಚಿಚ್ಚಾದಂತೆ ಹೆಚ್ಚೆಚ್ಚು ಪ್ರಮಾಣದಲ್ಲಿ ಕಡಿತದ ಕ್ರಮವನ್ನು ಜ್ಯಾರಿಗೆ ತರುವುದು ಅತ್ಯಾವಶ್ಯಕ. ಅದೊಂದು ಪ್ರಮಾಣದ ಮೇಲಿನ ಕೆಳ ನೌಕರರಿಂದ ಹಿಡಿದು ಉಚ್ಚ ನೌಕರರ ಸಂಬಳದಲ್ಲಿ ಸೇಕಡ 2½ಯಿಂದ 30ರ ವರೆಗಣ ಸಂಬಳ ಕಡಿತಮಾಡಬೇಕೆಂಬ ಆಲೋಚನೆ ಇದೆ. ಈ ಕುರಿತು ಸರಿಯಾದ ಯೋಜನೆಯೊಂದನ್ನು ತಯಾರಿಸಿ ಪರವಾನಗಿಗಾಗಿ ಇಂಡಿಯಾ ಸೆಕ್ರೆಟರಿಗಳಿಗೆ ಕಳುಹಿಸಲಾಗುವುದೆಂಬುದೇ ಶ್ರೀ. ಸಿ. ರಾಜಗೋಪಾಲಾಚಾರ್ಯರು ಒಂದು ಘಂಟೆ ಕೊಟ್ಟ ಬಜೆಟ್ ಭಾಷಣದ ಪ್ರಾಮುಖ್ಯಾಂಶವಿರುತ್ತದೆ.

**ಚಿಕ್ಕ ಚಿಕ್ಕ ಜಾಹೀರಾತು ಕೊಟ್ಟು ಲಾಭ ಪಡೆಯಿರಿ.**

**WANTED**

A mistress or a master as a private teacher for some children, of a landlord in a country house. Apply with copies of testimonials stating the minimum pay expected to—

"D"

**C/o Navayuga, Udipi.**

**HAVE A SOUND SLEEP**



By using our Indian made Mosquito curtains, highly approved by persons of every rank for their strong netting, durability and beautiful finishing

Purchaser of three will get one curtain 6' x 4' x 4' free. Packing Free.

POSTAGE EXTRA.

**Prabhat Trading Co.,**
**12, Sikderpara Lane, Barabazar, CALCUTTA.**

# ಮದ್ರಾಸ್ ಗವರ್ನರರ ಭಾಷಣ

ಆಗೋಸ್ತು ತಾ 31ರಲ್ಲಿ ಮದ್ರಾಸ್ ಕೌನ್ಸಿಲಿನ ಮತ್ತು ಎಸೆಂಬ್ಲಿಯ ಸಂಯುಕ್ತ ಸಭೆ ನಡೆದು ಗವರ್ನರರು 15 ನಿಮಿಷಗಳ ವರೆಗೆ ಕೊಟ್ಟ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ. "ಮದ್ರಾಸಿನಲ್ಲಿ ಜಯಶೀಲವಾಗಿ ಪ್ರಾಂತಿಕ ಸ್ವಾಯತ್ತತೆಯು ಜ್ಯಾರಿಗೆ ಬಂದುದಕ್ಕಾಗಿ ನಾನೀ ಪ್ರಾಂತವನ್ನು ಅಭಿನಂದಿಸಬೇಕು. ಒಳ್ಳೇ ರೀತಿಯ ಆಡಳಿತ ಮತ್ತು ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ದಕ್ಷತೆಯಿಂದ ಕಾರ್ಯಕ್ಕೆ ಹಚ್ಚುವ ವಿಷಯದಲ್ಲಿ ಮದ್ರಾಸು ಇತರ ಎಲ್ಲಾ ಪ್ರಾಂತಗಳಿಗಿಂತ ಮುಂದಾಗಿರುವುದೆಂದು ನನಗೆ ವಿಶ್ವಾಸವಿದೆ. ಹೊಸ ರಾಜ್ಯಾಂಗ ರಚನೆಯು ಆರಂಭವಾಗುವಾಗ ಉಂಟಾಗಿರುವ ಸಂದೇಹ ಮತ್ತು ತೊಡಕುಗಳೆಲ್ಲಾ ಸಾಮೋಪಾಯದಿಂದಲೇ ನಿವಾರಿತವಾಗಿ, ಪ್ರಾಂತವು ಸ್ವರಾಜ್ಯದ ಕಡೆಗೆ ಕ್ರಮವಾಗಿ ಮುಂದುವರಿಯಲು ಈಗೇನೂ

ತೊಡಕಿಲ್ಲೆಂಬುದು ನಾವೆಲ್ಲರೂ ಅಭಿಮಾನ ಪಡುವ ವಿಷಯವಿದೆ. ಹೊಸ ರಾಜ್ಯಾಂಗ ರಚನೆಯ ಕುರಿತು ಈಗ ಕಳೆದ ಕೆಲವು ತಿಂಗಳಲ್ಲಿದ್ದುದಕ್ಕಿಂತ ಒಳ್ಳೇ ಅಭಿಪ್ರಾಯವಿದೆ. ರಾಜ್ಯಾಂಗ ರಚನೆಯನ್ನು ಕಾರ್ಯಕ್ಕೆ ಹಚ್ಚುವಾಗ ಉಂಟಾಗುವ ಅನುಭವವು ಆ ಕುರಿತು ಇನ್ನೇನಾದರೂ ಸಂದೇಹವುಳಿದಿದ್ದರೆ ತೊಡೆಸಿಬಿಡುವುದೆಂದು ನನ್ನ ಭರವಸೆ. ನನ್ನ ಮಂತ್ರಿಗಳು ನನ್ನ ಸಂಪೂರ್ಣ ಸಮ್ಮತಿಯಿಂದ, ಹೊಸ ವಾತಾವರಣವನ್ನುಂಟುಮಾಡಲು ಬಹಳ ಕೆಲಸ ಮಾಡಿರುವರು. ಇದರ ಪರಿಣಾಮವಾಗಿ ಸೌಹಾರ್ದವೂ ವಿಶ್ವಾಸವೂ ನೆಲೆಗೊಳ್ಳುವಂತಾಗಿ, ಈ ಪ್ರಾಂತದ ಜನತೆಯ ಕುರಿತಾದ ಮಂತ್ರಿಗಳ ಮಹತ್ತಾದ ಜವಾಬ್ದಾರಿಯನ್ನು ನೆರವೇರಿಸಲು ಸಹಾಯಕವಾಗುವುದೆಂದು ನಂಬುತ್ತೇನೆ.

## ಸಿವಿಲ್ ಸರ್ವಿಸಿನ ಕರ್ತವ್ಯ.

ಯಾರು ಅಧಿಕಾರ ನಿರ್ವಾಹಕರಾಗಿರುವರೋ ಅವರ ಆಜ್ಞೆಗಳನ್ನು ಪಾಲಿಸುವುದೇ ಸರಕಾರಿ ನೌಕರರ ಮುಖ್ಯ ಉದ್ದೇಶವಿರುವುದರಿಂದ ಕಾಂಗ್ರೆಸ್ ಸರಕಾರಕ್ಕೂ ಸಿವಿಲ್ ಸರ್ವಿಸಿನ ನೌಕರರಿಗೂ ಯಾವ ತರದ ವಿರೋಧವೂ ಇರಲು ಸಾಧ್ಯವೇ ಇಲ್ಲೆಂಬುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅಧಿಕಾರ ನಿರ್ವಾಹಕರು ಯಾರೇ ಆಗಲಿ ಅವರಿಗೆ ವಿಧೇಯವಾಗಿ ನಡೆಯುವುದೇ ಸರಕಾರಿ ನೌಕರರ ಕರ್ತವ್ಯ. ಆದುದರಿಂದ ಈ ವಿಷಯದಲ್ಲಿ ಯಾರಾವರೂ ಯಾವ ತರದ ಸಂದೇಹವನ್ನೂ ಕಟ್ಟಿಕೊಳ್ಳಬಾರದು.

## ಸಂಪೂರ್ಣ ಪ್ರಜಾ ಜವಾಬ್ದಾರಿ ಮಂತ್ರಿಗಳು.

ಈಗ ಮಂತ್ರಿಗಳು ಸಂಪೂರ್ಣವಾಗಿ ಎಸೆಂಬ್ಲಿ ಮೆಂಬರರ ಓಟಿನ ಮೇಲೆ ಹೊಂದಿಕೊಂಡಿರುತ್ತಾರೆ. ತಮ್ಮ ಧೋರಣೆ ಮತ್ತು ಕಾರ್ಯಗಳಿಗೆ ಅವರು ಮೆಂಬರರಿಗೆ ಮತ್ತು ಅವರ ಮೂಲಕ ಸಾಮಾನ್ಯ ಮತದಾರರಿಗೆ ಜವಾಬ್ದಾರರಿರುತ್ತಾರೆ. ಪ್ರಾಂತದ ವಿಷಯದಲ್ಲೀಗ ನಾವು ಪ್ರಜಾ ಜವಾಬ್ದಾರಿ ಮತ್ತು ಪ್ರಾತಿನಿಧ್ಯವುಳ್ಳ ರಾಜ್ಯಭಾರವುಳ್ಳವರಿರುತ್ತೇವೆ. ನಿಜವಾದ ಪ್ರಜಾಸತ್ತಾತ್ಮಕ ರಾಜ್ಯಭಾರಕ್ಕನುಗುಣವಾಗಿ ನಾವು ಕೆಲವು ಪದ್ಧತಿಗಳನ್ನು ಸ್ಥಾಪಿಸಿಕೊಳ್ಳಬೇಕು. ಎಸೆಂಬ್ಲಿ ಮತ್ತು ಕೌನ್ಸಿಲುಗಳ ಅಧ್ಯಕ್ಷರುಗಳು ಸಂಪೂರ್ಣವಾಗಿ ನಿಷ್ಪಕ್ಷಪಾತಿಗಳಿರಬೇಕೆಂಬುದು ಎಲ್ಲರೂ ಒಪ್ಪತಕ್ಕ ವಿಷಯ. ಮತ್ತೊಂದು ಮುಖ್ಯ ವಿಷಯವೆಂದರೆ ರಾಜಕೀಯ ಭಿನ್ನಾಭಿಪ್ರಾಯವು ಖಾಸಗಿ ಸ್ನೇಹಾಚಾರವನ್ನು ಕೆಡಿಸುವಂತಾಗಬಾರದು. ಯಾವಾಗಲೂ ಒಬ್ಬೊಬ್ಬರೊಳಗೆ ತೀವ್ರ ಅಭಿಪ್ರಾಯ ಭೇದವು ಬಂದೇ ಬರುತ್ತದೆ. ಬರುವುದು ಸ್ವಾಭಾವಿಕವೂ ಆಗಿದೆ ಮತ್ತು ಅದು ಒಳ್ಳೇ ಸೂಚನೆಯೆಂದೇ ಹೇಳಬಹುದು. ಯಾಕೆಂದರೆ ವಾದವಿವಾದದಿಂದಲೇ ನಿಜವಾದ ದಾರಿಯನ್ನು ನಿರ್ಧರಿಸಲು ಸುಕರವಾಗುವುದು. ವಾದವಿವಾದಗಳಲ್ಲಿ ಅಲ್ಪ ಸಂಖ್ಯಾಕರ ಅಭಿಮತಕ್ಕೆ ಯಾವಾಗಲೂ ಗಮನಕೊಡಬೇಕು. ತಮಗೆ ಬಹುಪಕ್ಷವಿದೆಯೆಂದು ಅಲ್ಪ ಸಂಖ್ಯಾಕರ ಬಾಯಿಮುಚ್ಚಿಸಿಬಿಡುವ ಧೋರಣೆ ವಹಿಸಬಾರದು. ಪ್ರಜಾಸತ್ತೆಯು ಜಯಶೀಲವಾಗಬೇಕಾದರೆ, ಸಂಪೂರ್ಣ ಚರ್ಚಾ ಸ್ವಾತಂತ್ರ್ಯಕ್ಕೆ ಅವಕಾಶ ಕೊಡಬೇಕು."

> **ಮೆನೇಜರರ ನೋಟೀಸು**
>
> ಕಳೆದ ತಿಂಗಳ ಅಂತ್ಯಕ್ಕೆ ನವಯುಗದ ೧೭ನೆಯ ಸಂಪುಟವು ಕೊನೆಗೊಂಡು ಈ ತಿಂಗಳಿನಿಂದ ೧೮ನೆಯ ಸಂಪುಟವು ಆರಂಭವಾಗಿದೆ. ಕಳೆದ ವರುಷದ ಚಂದಾ ಹಣವನ್ನು ಕಳಿಸದೆ ಇನ್ನೂ ಬಾಕಿಯಾಗಿರಿಸುವ ಚಂದಾದಾರರು ತಮ್ಮ ಹಣವನ್ನು ಒಡನೆಯೇ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ಅವಧಿ ಮುಗಿಯುವ ಎಲ್ಲಾ ಚಂದಾದಾರರು ಹೊಸ ವರ್ಷದ ಚಂದಾಹಣವನ್ನೂ ಮುಂಗಡ ಕಳುಹಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ. ಪತ್ರಿಕೆ ಬೇಡವಾದವರು ನಮಗೆ ಮುಂಚಿತವಾಗಿ ಸೂಚಿಸಬೇಕು.
>
> ಮೆನೇಜರ್ ನವಯುಗ, ಉಡುಪಿ.

**ಶ್ರೀಮತಿ ಕಮಲಾದೇವಿಯವರು**

ಇವರು ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಪರವಾಗಿ ಮಂಗಳೂರು, ಉಡುಪಿ ಕುಂದಾಪುರ ತಾಲೋಕುಗಳಲ್ಲಿ ಪ್ರಚಾರಕಾರ್ಯ ನಡೆಸಿ ಇದೇ ತಾ 5ರಿಂದ 8ನೇ ತಾರೀಕಿನ ವರೆಗೆ ಕೊಡಗಿನ ಬೇರೆ ಬೇರೆ ಸ್ಥಳಗಳಲ್ಲಿ ಕಾಂಗ್ರೆಸ್ ಪ್ರಚಾರಕಾರ್ಯ ನಡಿಸುವ ಕಾರ್ಯಕ್ರಮ ಕೈಕೊಂಡಿರುವರು. ಆಮೇಲೆ ಮೈಸೂರಿಗೆ ಹೋಗಿ, ಅಲ್ಲಿಯ ಕಾಂಗ್ರೆಸ್ ಕೆಲಸಗಾರರೊಡನೆ ಮಾತಾಡಿ ಬಳ್ಳಾರಿಯಲ್ಲಿಯೂ ಉತ್ತರಕನ್ನಡದಲ್ಲಿಯೂ ಈ ತಿಂಗಳ ಅಂತ್ಯದ ವರೆಗೆ ಸಂಚರಿಸಲಿರುವರು. ಮೈಸೂರು ಸರಕಾರವು ಶ್ರೀಮತಿಯವರ ಮೇಲೆ ಹಾಕಿರುವ ನಿರ್ಬಂಧದ ಅವಧಿಯು ಈಗ ಮುಗಿದಿರುವುದು. ಇನ್ನೂ ಮೈ ಈ ನಿರ್ಬಂಧ ಹಾಕಿದರೆ ಅದನ್ನವರು ಉಲ್ಲಂಘಿಸಲೂಬಹುದು. ಶ್ರೀಮತಿಯವರ ಕಾರ್ಯಕ್ರಮವು ತಡೆಯಿಲ್ಲದೆ ನಡೆಯುವಂತಾದರೆ ಅವರು ಅಕ್ಟೋಬರ ತಿಂಗಳ ಆರಂಭಕ್ಕೆ ಪುನಃ ತನ್ನ ಜಿಲ್ಲೆಗೆ ಬಂದು ಸ್ವಲ್ಪ ಹೆಚ್ಚು ಸಮಯದ ವರೆಗೆ ಇಡೀ ಜಿಲ್ಲೆಯಲ್ಲೆಲ್ಲಾ ಸಂಚರಿಸಲಿರುವರು. ಬೇರೆ ಬೇರೆ ವರ್ಗದ ದೀನದಲಿತ ಜನರ ಸಂಘಗಳನ್ನು ಸ್ಥಾಪಿಸಿ ಒಟ್ಟುಗೂಡಿಸಿ, ಕಾಂಗ್ರೆಸಿನ ಮುಂದಾಳುತ್ವವು ಮೇಲಿಂದಲ್ಲ ಕೆಳಗಿಂದ ಬರುವ ಹಾಗೆ ಮಾಡಬೇಕೆಂದೂ, ಕಾಂಗ್ರೆಸಿನಲ್ಲಿ ಬಡಬಗ್ಗರು, ಹಳ್ಳಿಗರು ಅತ್ಯುತ್ಸಾಹದಿಂದ ಕೆಲಸ ಮಾಡುವಂತಾಗಬೇಕೆಂದೂ, ಈಗಿನಂತೆ ಮಧ್ಯ ಮತ್ತು ಮೇಲ್ತರಗತಿಯವರೇ ಅಧಿಕಾರವನ್ನು ತಮ್ಮ ಅಧೀನವಿಟ್ಟುಕೊಳ್ಳುವಂತಾಗಬಾರದೆಂದೂ ಶ್ರೀಮತಿಯವರು ಕೆಳತರಗತಿಯವರೆನಿಸುವ ಜನಸಾಮಾನ್ಯರ ಹಿತಕ್ಕಾಗಿ ರಾತ್ರಿಹಗಲು ದುಡಿಯುತ್ತಿದ್ದಾರೆ. ಮಂಗಳೂರಲ್ಲಿ ಮೋಟರ್ ವರ್ಕರ್ಸ್, ಬೀಡಿ ವರ್ಕರ್ಸ್ ಪ್ರೆಸ್ ವರ್ಕರ್ಸ್ ಯೂನಿಯನ್ನುಗಳನ್ನು ಸ್ಥಾಪಿಸುವುದರಲ್ಲಿ ಕೆಲಸಮಾಡಿರುತ್ತಾರೆ. ಬಡ ಸ್ತ್ರೀಯರ ಕಷ್ಟನಿವಾರಣೆಗಾಗಿ ಪ್ರಯತ್ನಪಡುತ್ತಿದ್ದಾರೆ.

---

ಅನುಕೂಲವಾದರೆ ಬರುವ ವಾರ ಬರುತ್ತೇನೆ. ಟೈಫಾಯಿಡ ಬೇನೆಯಿಂದ ಪತ್ರಿಕೆಯು ಒಂದು ದಿನ ಬೇಗ ಪ್ರಿಂಟಾಗತಕ್ಕದೆಂದು ಸಂಪಾದಕರು ತಿಳಿಸಿದ್ದರಿಂದ ಬೇಕಾದ್ದರಿಂದ ಹೆಚ್ಚು ಸದ್ದಿ ಬರೆಯಲಾಗಲಿಲ್ಲ. ಸಮಾಕಿದರೆ ಬರುವ ವಾರ ನೋಡುವ

'ಪರಶುರಾಮ'

---

# ಕಿಡಿಗಳು.

(ಏಕೆಂದರೆ ಕಳೆದ ಸಂಚಿಕೆಯ ಪೀಠಿಕೆಯನ್ನೇ ಇದಕ್ಕೂ ಅನ್ವಯಿಸಿಕೊಂಡು ಇದನ್ನೋದುವುದು ಮತ್ತು ಮುಂದಿನ ಎಲ್ಲಾ ಕಿಡಿಗಳಿಗೂ ಅದೇ ಪೀಠಿಕೆಯೆಂದು ನೆನಪಿಟ್ಟುಕೊಳ್ಳುವುದು. ಇಲ್ಲವಾದರೆ ಮೋಸಹೋಗಬೇಕಾದೀತು! ಜಾಗ್ರತೆ)

X X X X

ಕಳೆದ ಸಾರಿ ಒಂದು ತಮಾಷೆ ನಡೆದುಹೋಯ್ತು ನೋಡ್ರಿ! ನನ್ನ ಹೆಸರು 'ಪರಶುರಾಮ'ನೆಂದು, ನಾನು ಹಾಗೆಯೇ ಬರೆದುಕೊಟ್ಟಿದ್ದೆನೆಂದು ನೆನಪು. ಆದರೆ ಅಚ್ಚಿನಲ್ಲಿ ಬರೇ 'ಪರಶು' ಎಂದಾಗಿದೆ. ಹಿಂದಿನ 'ಪರಶು'ವಿಗೆ ರಾಮ ಎಂದು ಸೇರಿಸಿಕೊಳ್ಳಿರಿ.

X X X X

ಈಗ ಬೋರ್ಡು ಶಾಲಾ ಉಪಾಧ್ಯಾಯರಿಗೆ ಒಂದು ತಿಂಗಳದು ಬಾಕಿ ಇಟ್ಟಾದರೂ ಸಂಬಳ ಬಟವಾಡೆಯಾಗುತ್ತದೆ. ಆದರೆ ಎಷ್ಟೋ ಶಾಲೆಗಳಿಗೆ 'ಕೈಗೆ ಬಂದ ತುತ್ತು ಬಾಯಿಗೆ ಇಲ್ಲ' ಎಂಬಂತಾಗುತ್ತದೆ. ಕೆಲವೇಳೆ ಬೋರ್ಡಿನವರೇನೋ ಶಾಲೆಗಳಿಗೆ 'ಚೆಕ್' ಕೊಟ್ಟುಬಿಡುತ್ತಾರೆ. ಪಾಪದ ಮಾಷ್ಟ್ರು ಅದನ್ನು ಹಿಡಿದುಕೊಂಡು ಟ್ರೆಜರಿಗೆ ಪಡೆಯಲು ಹೋದರೆ ಅಲ್ಲಿಗೆ ಇನ್ಫಾರ್ಮೇಶನ್ ಇರುವುದಿಲ್ಲವಂತೆ. ಕಡೆಗೆ ಕೆಲದಿನಗಳ ಮೇಲೆ ಚೆಕ್ ಕ್ಯಾಶ್ ಆಗುತ್ತದೆ. ಸ್ಕೂಲು ಮಾಸ್ಟ್ರುಗಳಿಗೆ ಮಾತ್ರ ಕೆಲವು ಸಾರಿ ಅತಿ ಕಷ್ಟ ಒದಗುವುದೇ ಆಗುತ್ತದೆ. 'ಹೋದ ಪುಟ್ಟ ಬಂದ ಪುಟ್ಟ, ಪುಟ್ಟನ ಕಾಲಿಗೆ ನೀರಿಲ್ಲ' ಎನ್ನುವ ಹಾಗಾಗುತ್ತದೆ. ಮಾತ್ರವಲ್ಲ ಹುಡುಗರು ಪಾಠಕಳೆಕೊಳ್ಳುವಂತಾಗುತ್ತದೆ.

X X X X

ಅನವಶ್ಯವಾದ ತುಂಬ ನಿಬಂಧನೆಗಳ್ಳ ಬೋರ್ಡಿನವರು ಈ ತರದ ಅವ್ಯವಸ್ಥೆಗೀಡಾಗುವುದು ತುಂಬ ವಿಚಿತ್ರವಾಗಿದೆ.

X X X X

ಹಾಗೆಯೇ ಕೆಲವು ಖಾಸಗಿ ಜನರು ಯಾವುದಾದರೊಂದು ಬ್ಯಾಂಕಿನಲ್ಲಿ ಒಂದು ಎಕೌಂಟ್ ಓಪನ್ ಮಾಡಿ ಒಂದು ಚೆಕ್ ಪುಸ್ತಕ ಪಡಕೊಳ್ಳುತ್ತಾರೆ. ಬ್ಯಾಂಕಿನಲ್ಲಿ ಹಣ ಇರಲಿ, ಇಲ್ಲದಿರಲಿ ಬರಿದಾಗಿ ಚೆಕ್ ಕೊಟ್ಟುಬಿಡುತ್ತಾರೆ. ಆ ಚೆಕ್ಕನ್ನು ಹಿಡಕೊಂಡು ಬ್ಯಾಂಕಿಗೆ ಹೋದರೆ ಹೇಳಿದಂತೆಯೇ ಹಿಂದೆ ಬರಬೇಕಾಗುತ್ತದೆ. ಒಂದೇ ಬ್ಯಾಂಕಿನಲ್ಲಿ ಅವರ ಹಣವಿಲ್ಲ, ಯಾ ಚೆಕ್ಕಿನ ತಾರೀಕು ಬಹು ಮುಂದೆ ಇರುತ್ತದೆ. ಈ ರೀತಿಯಾಗಿ ಸಲೀಸಾಗಿ ಜನರನ್ನು ಸುಳಿಯಲ್ಲಿ ಹಾಕುವ ವ್ಯಾಪಾರವು ಎಲ್ಲೆಲ್ಲಿಯೂ ಆಗಾಗ ನಡೆಯುತ್ತಿದೆ.

X X X X

ಸ್ಥಳೀಕ ನಗರ ಸಭೆಯವರು ನಾಗರಿಕರ ಸೌಕರ್ಯಕ್ಕಾಗಿ ತಮ್ಮಿಂದಾದಷ್ಟು ಪ್ರಯತ್ನ ನಡಸುತ್ತಿದ್ದಾರೆ. ಆದರೆ ಪೇಟೆ ಬೀದಿ ಕಡೆಯಲ್ಲಿ ಮೂತ್ರ ಶಂಕೆಮಾಡಲು ಯಾವ ವ್ಯವಸ್ಥೆಯನ್ನೂ ಮಾಡಿದಂತಿರುವುದಿಲ್ಲ. ರಸ್ತೆ ಬದಿಯಲ್ಲೇ ಮೂತ್ರ ವಿಸರ್ಜನೆ ಮಾಡಬೇಕಾಗುತ್ತದೆ. ಕೆಲವರು ಮೂತ್ರ ಕಟ್ಟಿಕೊಂಡೇ ಇರುವ ಪ್ರಸಂಗ. ಇನ್ನಾದರೂ ಮುನ್ಸಿಪಾಲಿಟಿಯವರು ಇನ್ನು ಮಾಡಲಿರುವ ಕೆಲಸಗಳ ಪಟ್ಟಿಯಲ್ಲಿ ಇದನ್ನೂ ಸೇರಿಸಿಕೊಳ್ಳುವರೇ? ಸಣ್ಣಪುಟ್ಟ ಕಾರ್ಯಗಳೇ ಬಾಕಿ ಇರುವಾಗ ದೊಡ್ಡದೊಡ್ಡ ಕಾರ್ಯಗಳನ್ನು ಬಯಸಿ ಕನವರಿಸುವುದರಿಂದ ಏನು?

X X X X

ಕೆಲವರಿಗೆ ಸೋಡಾ ಸ್ಪಿರಿಟಿನಂತೆ ಬಹು ಬೇಗನೆ ಕಾಂಗ್ರೆಸ್ ಸ್ಪಿರಿಟ್ ಏರುತ್ತದೆ. ಆದರೆ ಇದು ಯಾವಾಗ ಬಲ್ಲಿರಾ! ಚುನಾವಣೆಗಳು ಹತ್ತಿರ ಬರುವಾಗ!

X X X X

ಈ ಸ್ಪಿರಿಟಿನ ದೆಸೆಯಿಂದ ಈಚೀಚೆ ಕಾಂಗ್ರೆಸ್ ವಾಲಾರನ್ನು ಕೇಳುವವರಿಲ್ಲವಾಗಿದೆ. ಜನರೂ ಈ ತರದ ಹೀನ್ರು ಕಾಂಗ್ರೆಸ್ ವಾಲರ ವೇಷ ಭೂಷಣಗಳಿಗೆ ಮರುಳಾಗುವುದು ಆಶ್ಚರ್ಯವಿದೆ.

X X X X

ಶ್ರೀಮತಿ ಕಮಲಾದೇವಿಯವರು ಉಡುಪಿಗೆ ಬಂದರು. ತಿರುಗಾಡಿದರು, ಸಭೆಮಾಡಿದರು, ಉತ್ಸಾಹಿ ತರುಣರೊಂದಿಗೆ ಮಾತಾಡಿದರು, ಕೆಲವು ಸಂಘ ಸಭೆಗಳನ್ನು ಮಾಡಿದರು, ನೇರಾ ಮಂಗಳೂರಿಗೆ ಹೋದರು.

X X X X

ಆ ಸಂಘಗಳೂ ಅವರ ಬೆನ್ನು ಹಿಡಿಯದಿದ್ದರೆ ಉಡುಪಿಯ ಭಾಗ್ಯವನ್ನೇ ಹೇಳು.

X X X X

## ಚೌತಿಯ ಹಬ್ಬ

ನಸುಬಾರಿಯಲಿ ನಿಂತು |
ಗುಡಿಗಾರನಾ ಮನೆಯ |
ಕಡೆಯೆ ನೋಡುತಲಿಹರು ಹುಡುಗರೆಲ್ಲ ||
ಸದಗರದಿ ಬರುತಿರುವ |
ಒಡೆಯನನು ನೋಡ್ವದಕೆ |
ಕಡುಬಿನಾ ದೇವನಾ ಕಡುಭಕುತರಿವರು

ಒಂದೆರಡು ವಾಸಗಳ |
ಬಂದನಕೆ ಸಿಲುಕಿದ್ದ |
ಅಂಥಗಣಪಗೆ ಸೊಗಸು ಇಂದಿನಾ ದಿನವೂ
ಚಂದದಿಂ ಶೃಂಗರಿಸಿ |
ಲಂಥತ್ವವನು ನೀಗಿ |
ಗೊಂದಲದಿ ಬರುತಿಹನು ಮಂದಿಯಾ
ಮನೆಗೇ ||

ಒಂದು ಕಡೆ ನಿಂತಿಹನು |
ಒಂದು ಕಡೆ ಕುಳಿತಿಹನು |
ಒಂದು ಕಡೆ ತಾಯಿಯಾ ತೊಡೆಯ
ನೇರಿಹನೂ ||
ಒಂದು ಕಡೆ ಸುಲಿಗಿ ಆ |
ಸಂಧಿಸುತಲಿಹನು ಇ |
ನ್ನೊಂದು ಕಡೆ ನಗುತಿಹನು ನಿಂದು ಬರಿ
ವೈಲೀ ||
ಕಂಡ ಮನೆಯೊಳ ಹೊಕ್ಕು |
ಮಂಡಿಸುತ ಪೀಠದಲಿ |
ತಿಂಡಿಗಳ ಹಾರೈಸಿ ಕೊಂಡುಕುಳಿತೂ ||
ಗಂಡಸರ ಪೂಜೆ ಉ |
ದ್ದಂಡಗಳನೆಲ್ಲ ಕೈ |
ಕೊಂಡು ಮೆರೆಯುತಲಿರುವ ಸೊಂಡಿಲಿನ
ಗಣಪ ||

ಕಡುಬು ಚಕ್ಕುಲಿ ದೋಸೆ |
ಒಡೆಯು ಅಂಬೊಡೆಯು ಮೊಸ |
ರೊಡೆಯುಪಾಯಸವುಕರಿಗಡುಬುಗಳನೆಲ್ಲ
ಗಡಿಗೆ ಹೊಟ್ಟೆಯ ಹೊತ್ತು |
ನಡೆಯಲಾರದವನಿಗೆ |
ಬಡಿಸಿ ತಂದರು ಎಲ್ಲ ಅಡಿಗೆಮನೆಯಿಂದಾ||
ತನ್ನೆದುರು ಇರಿಸಿದಾ |
ತಿನ್ನುವಾ ವಸ್ತುಗಳ |
ಕಣ್ಣಲೇ ನೋಡಿದನು ಖಿನ್ನದಾದ ||
ಇನ್ನು ಈ ತಿಂಡಿಗಳ |
ತಿನ್ನುವವು ಮನೆಯವರು |
ಘನ್ನ ದೇವನಿಗೇಕೆ ಅನ್ನಭಕ್ಷ್ಯಗಳು?||
ಮುಂದೆ ಸಂಜೆಯ ವನಕ |
ಮಂದಿಯೆಲ್ಲರು ಇವನ |
ಸಂದರುಶಿಸಲು ಬಂದು ವಂದಿಸುವರಿವನಾ
ಬಂದ ಬಾಲರು ಎಲ್ಲ |
ಒಂದೆರಡು ಮೂರು ನಾ |
ಲ್ಕೆಂದೆನುವರೀ ಗೌರಿ ಕಂದನನು ಎಣಿಸೀ||
ಹೆತ್ತ ಜನನಿಯು ಒಡನೆ |
ಮತ್ತೆ ರಾತ್ರಿಲಿ ಕುಳಿತು |
ಮುತ್ತೈದೆರಾರತಿಯನೆತ್ತಿದಾ ಬಳಿಕಾ ||
ಬುತ್ತಿಯಾ ಗಂಟೆ ತಾ |
ನೆತ್ತಿ ಹೆಗಲಲಿ ಇರಿಸಿ |
ಕತ್ತಲೆಯ ಬಾವಿಗಿಳಿದೆತ್ತಲೋ ನಡೆದಾ||
ಬಲ್ಲಿದಾ ಜನರು ನೋ |
ಡಿಲ್ಲ ಚಂದ್ರನ ನಿಂದು |
ಕಳ್ಳನೆನ್ನುವರಂತೆ ಸುಳ್ಳು ಅಪವಾದ ||
ತಳ್ಳಿ ಇಂತಹುದು ಶ್ರೀ |
ವಲ್ಲಭಗೆ ಬಂದಿಹುದು |
ಸುಳ್ಳಲ್ಲ ಇದು ನಮ್ಮ ಡೊಳ್ಳನಾ ಮಹಿಮೆ||

ಎಚ್. ಕೆ. ರಾವ್, ಉಡುಪಿ

## WANTED

Lady saleswoman, Catholic or Protestant for a leading cutlery, hardware and Stationery shop at Udipi town. Must be smart, good looking and of pleasing manners, capable of reading and writing English and Kanarese. Apply with one anna stamp stating minimum salary required.

'X' C/o Navayuga, Udipi


## ನಿಮ್ಮ ಮನೆಯಲ್ಲೇ ಸಿನೆಮಾ
### (BIOSCOPE)



9×6×8 ಇಂಚುಗಳಷ್ಟು ಆಕಾರವುಳ್ಳದ್ದು. ಅಖಂಡ ಸ್ಟೀಲಿನಿಂದಲೇ ತಯಾರಿಸಲ್ಪಟ್ಟಿದೆ ಬಹಳ ಶಕ್ತಿಯ ಫೋಕಸ್ ಕನ್ನಡಿಗಳಿಂದ ಜೋಡಿಸಲ್ಪಟ್ಟು, ಜೊತೆಗೆ 100 ಗಜ (300 ಅಡಿ) ಗಳಷ್ಟು ಉದ್ದದ ಚಲನಚಿತ್ರಗಳ ಫಿಲ್ಮು ಕೊಡಾ ಕೊಡಲಾಗುತ್ತದೆ. ಒಂದು ಚಿಕ್ಕ ಬೆಟರಿ ಬ್ಯಾಟರಿ ಪ್ರಕಾಶದಿಂದ ನಿಮ್ಮ ಮನೆಗಳ ಕೋಣೆಗಳಲ್ಲಿ ಸ್ಪಷ್ಟವಾದ ಚಲನಚಿತ್ರಗಳ ಪ್ರದರ್ಶನ ಮಾಡಬಹುದು. ಒಂದು ಯಂತ್ರವನ್ನು ಈಗಲೇ ತರಿಸಿಕೊಳ್ಳಿರಿ. ಯಂತ್ರದೊಡನೆ 100 ಗಜ ಫಿಲ್ಮಿಗೂ ಒಂದು ಬೆಟರಿ ಬ್ಯಾಟರಿಗೂ ಸಮೇತ ರೂ ೨-8-0 ಮಾತ್ರ ಪೋಸ್ಟೇಜು ಬೇರೆ. ರೂ ೧ರ ಟಪ್ಪಾಲು ಚೀಟುಗಳನ್ನಾಗಲೀ, ಪೋಸ್ಟಲ್ ಆರ್ಡರ್ ಮೂಲಕವಾಗಲೀ ಆರ್ಡರಿನೊಂದಿಗೆ ಮುಂಗಡ ಕಳುಹಿಸಬೇಕು

**ಆರ್. ಕೆ. ರಾಜನ್ ಅಂಡ್ ಕೊ,**
ವೇಪರಿ, ಮದರಾಸು

## ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. ೨ರ, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೆ ಬರೆಯಿರಿ.

**Bal Kala Stores,**
P. O Kansisuma (Darbhanga)


**ನಮ್ಮೊಡನೆ ಪತ್ರವ್ಯವಹಾರ ಮಾಡುವವರು**

ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ಮೆನೇಜರ್ 'ನವಯುಗ'


# THE BOMBAY LIFE ASSURANCE Co., LTD.

ESTD 1908

**Church Gate Street, Fort - BOMBAY.**

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses

It pays you to represent this Company.
Wanted Agents in unrepresented parts.

*Apply to:—*

**KOCHIKAR BROTHERS,**
*Madras Branch Secretaries*

BRANCHES AT:

| | | |
|---|---|---|
| P B 337 Mount Road, Madras | Visveswarapuram Circle, Bangalore City | Soumyalayam Puthiyara, Calicut |
| Car Street Mangalore | Udipi, S India | Charni Road, Bombay No 4 |

INSPECTORATE OFFICE AT.

1. Ottapalam Malabar Dist ct  2. Central Station Road, Trivandrum.

# EVIDENCE
OF
# SECURITY & STABILITY
**FIGURES THAT SPEAK FOR THEMSELVES**

TOTAL ASSETS Rs. 80,66,600

**Summary of 1935 Accounts**

| | |
|---|---|
| Total Assets Over | Rs. 80,00,000 |
| Life Funds Over | Rs 68,00,000 |
| Premium Income Over | Rs 22,54,000 |
| Interest Income | Rs 3,16,000 |
| Claims Paid ... | Rs 5,75,000 |

Total Claims paid Over Rs. 38,50,000
Total Business in Force Over Rs 4,4251,200,

TOTAL BUSINESS IN FORCE Rs. 4,42,51,200

# ಚೀನಾ ಜಾಪಾನು ಯುದ್ಧ

## ಚೀನಕ್ಕೆ ಸೋವಿಯೆಟ್ ಸರಕಾರದ ಸಹಾಯ.

## ಜಾಪಾನರ ಪ್ರಬಲ ವಿಜಯ.

### ಅಮೇರಿಕಾನ ಸ್ಟೀಮರಿಗೆ ಬೋಂಬೆಸೆತ

ಅಗೋಸ್ತು ತಾ. 30ರಲ್ಲು ಶಾಂಘಾಯಿಯ ಬಳಿ ನಾಲ್ಕು ಚೀನೀ ವಿಮಾನಗಳು ಜಾಪಾನ ಸ್ಟೀಮರೆಂದು, ಪ್ರೆಸಿಡೆಂಟ್ ಹೂವರ್ ಎಂಬ ಅಮೇರಿಕಾನ ಸ್ಟೀಮರಿನ ಮೇಲೆ ಬೋಂಬೆಸೆದು ಹಾವಳಿಮಾಡಿರುವವು. ಈ ಹಡಗದ 7 ಮಂದಿ ಕೆಲಸಗಾರರು ಗಾಯಗೊಂಡಿರುವರು ಇಬ್ಬರಿಗೆ ಬಹಳ ಪೆಟ್ಟಾಗಿದೆ ಇದು ಎರಡು ಜಾಪಾನ ಸ್ಟೀಮರುಗಳ ನಡುವೆಯಿದ್ದುದರಿಂದ ಚೀನೀ ವಿಮಾನಗಳು ಗೊತ್ತಿಲ್ಲದೆ ಬೋಂಬೆಸೆದುದು ಅದರ ಸಂಪೂರ್ಣ ಜವಾಬ್ದಾರಿ ತಮ್ಮದು ಅದಕ್ಕೆ ತಕ್ಕ ಪರಿಹಾರಮಾಡಲು ತಾವು ತಯಾರಿರುವೆವೆಂದು ಚೀನೀ ಸರಕಾರವು ಈ ಕುರಿತು ವಿಷಾದ ಸೂಚಿಸಿರುವುದು

ಜಾಪಾನು ಈಗಿನ ಒಡಂಬಡಿಕೆಯನ್ನೂ ಇತರ ಒಪ್ಪಂದಗಳನ್ನೂ ತ್ಯಜಿಸಿ ಚೀನದ ಮೇಲೆ ನಡೆಸಿರುವ ಧಾಳಿಯ ಅನ್ಯಾಯವನ್ನು ಚೀನೀ ಸರಕಾರವು ಲೀಗ್ ಆಫ್ ನೇಶನ್ಸಿಗೆ ತಿಳಿಸಿ ಬಿನ್ನವತ್ತಳೆಯೊಂದನ್ನೊಪ್ಪಿಸಿರುವದು ಕಳೆದ 10 ವರ್ಷಗಳಿಂದ ಚೀನೀ ಸರಕಾರವು ಎಡೆಬಿಡದ ಪ್ರಯತ್ನದಿಂದ ಕೈಕೊಂಡಿರುವ ಚೀನದ ಪುನರ್ಘಟನೆಯ ಕೆಲಸಗಳನ್ನೆಲ್ಲಾ ಜಾಪಾನು ನಾಶಮಾಡಲೆತ್ನಿಸುತ್ತಿರುವುದೆಂದು ಆರೋಪಮಾಡಲಾಗಿದ

ಜಾಪಾನು ಚೀನದಲ್ಲೀಗಆಕ್ರಮಿಸಿರುವ ಸ್ಥಳಗಳಿಂದ ಸೇನೆಯನ್ನು ಹಿಂತೆಗೆಯದೆ ಚೀನವು ಯಾವ ಸಂಧಿಪ್ರಸ್ತಾಪಕ್ಕೂ ಒಪ್ಪಲಾರದೆಂದು ಚೀನೀ ಸರಕಾರದ ಪ್ರೆಸಿಡೆಂಟರಾದ ಮಾರ್ಶಲ್ ಚ್ಯಾಂಗ್ ಕೈ ಶೆಕ್ಕರು ಹೇಳಿರುವರು. ಚೀನಕ್ಕಾಗಿ ಮಾತ್ರವಲ್ಲದೆ, ಲೋಕಶಾಂತಿಯ ದೃಷ್ಟಿಯಿಂದ ಇತರ ಪ್ರಬಲ ರಾಷ್ಟ್ರಗಳು ಈ ಯುದ್ಧದಲ್ಲಿ ಕೈಹಾಕಿಇದನ್ನು ನಿಲ್ಲಿಸುವುದು ಅವಶ್ಯವಾಗಿದೆ ಜಾಪಾನು ಪೂರ್ವದ ಒಂದು ಭೂಖಂಡದಲ್ಲೇ ತನ್ನ ಸಾಮ್ರಾಜ್ಯ ಸ್ಥಾಪಿಸುವ ಉದ್ದೇಶದಿಂದ ಯುದ್ಧವನ್ನಾರಂಭಿಸಿರುವುದು. ಚೀನವು ಸಂಪೂರ್ಣ ನಾಶವಾಗದೆ ಉಳಿದು ಅಲ್ಲಿ ಇತರ ರಾಷ್ಟ್ರದವರ ವ್ಯಾಪಾರ ವಹಿವಾಟುಗಳು ಎಂದಿನಂತೆ ನಡೆಯಬೇಕಾದರೆ ಈ ಯುದ್ಧದಲ್ಲಿ ಅವರ ಮೇಲೂ ಕೆಲವು ಕಟ್ಟಿನ ಜವಾಬ್ದಾರಿಯಿದೆಯೆಂದೇ ಮಾರ್ಶಲ್ ಚ್ಯಾಂಗರ ಅಭಿಮತ. 18 ಮತ್ತು 45 ವರ್ಷದೊಳಗಣ ಎಲ್ಲಾ ಗಂಡಸರೂ ಸೇನೆಗೆ ಸೇರಬೇಕೆಂದು ಚೀನದಲ್ಲಿ ಆಜ್ಞೆ ಕೊಡಲಾಗಿದೆ

ಶಾಂಘಾಯಿಯ ಉತ್ತರದಲ್ಲಿ ವಾಂಗ್ ಪೂನದಿಯದಡದಲ್ಲಿರುವ ಪ್ರಾಮುಖ್ಯವಾದ ಪೂಸಂಗ್ ಪಟ್ಟಣವನ್ನು ಆಗೋಸ್ತು ತಾ 31ರಲ್ಲು ಜಾಪಾನರು ವಶಪಡಿಸಿಕೊಂಡಿರುವರು ಇದು ಕೊರತು ವಾಂಗ್ ಪೂನದಿ ದಾಟಿ ಸಂದುಕಟ್ಟಿನ ಸ್ಥಳವನ್ನು ಗೆದ್ದಿರುವರು ಯುದ್ಧನಾವೆಗಳು ಹೋಗಿಯೆ ಮೋಡವೆಬ್ಬಿಸಿದಾಗ ಅದರ ಮರೆಯಲ್ಲಿ ಜಾಪಾನರು ಎದೆಯುದ್ದ ನೀರಲ್ಲಿ ಬಂದೂಕುಗಳನ್ನೆತ್ತಿ ಹಿಡಿದು ವಾಂಗ್‌ಪೂನದಿಯನ್ನು ದಾಟಿರುವರು ಜಾಪಾನ ವಿಮಾನಗಳು ಚೀನೀಯರ ಮೇಲೆ ಬೋಂಬೆಸೆದವು. ಈ ನಡುವೆ ಇನ್ನೊಂದು ಜಾಪಾನ ಸೇನೆಯು ಚೀನದ ಕೃ ಕೈ ತೋರಿಟ ನಡಿಸಿ ಪೂಸಂಗ್ ರೈಲ್ವೆ ಸ್ಟೇಶನನ್ನು ವಶಪಡಿಸಿಕೊಂಡಿರುವುದು ಪೂಸಂಗಿನ ಒಳಬರ ಸ್ಟೇಶನಿನಿಂದರಲ್ಲಿ 200 ಮಂದಿ

ಚೀನಾ ಸರಕಾರದ ಪ್ರೆಸಿಡೆಂಟರು ಮಾರ್ಶಲ್ ಚ್ಯಾಂಗ್ ಕೈ ಶೆಕ್ಕರು

ಗಾಯಗೊಂಡ ಚೀನೀ ಸೈನಿಕರೂ ಇತರ ಜನರೂ ಹೊರಗೊಯ್ಯಲ್ಪಡಲು ಕಾದಿದ್ದಾಗ ಜಾಪಾನ ವಿಮಾನಗಳು ಅವರ ಮೇಲೆ ಬೋಂಬೆಸೆದು ಅವರಲ್ಲಿ ಹೆಚ್ಚಿನವರು ಕೊಲ್ಲಲ್ಪಟ್ಟಿರುವರು ಚೀನದ ಪ್ರಧಾನ ಪಟ್ಟಣವಾದ ನಾನ್ಕಿಂಗಿನಿಂದ ಜನರೆಲ್ಲಾ ಬಿಟ್ಟುಹೋಗತೊಡಗಿದ್ದಾರೆ ಒಂದು ಮಿಲ್ಯ ಜನಸಂಖ್ಯೆಯಲ್ಲಿ, ಸುಮಾರು 700,000 ಮಂದಿ ಬಿಟ್ಟು ಹೋಗಿದ್ದಾರೆ ಆಗೋಸ್ತು ತಾ 30ರಲ್ಲು 6 ಜಾಪಾನ ವಿಮಾನಗಳು ದಕ್ಷಿಣ ಚೀನದ ಮುಖ್ಯ ಪಟ್ಟಣಗಳಲ್ಲೊಂದಾದ ಕ್ಯಾಂಟನಿನ ಮೇಲೆ ಧಾಳಿ ನಡೆಸಲೆತ್ನಿಸಿದಾಗ ಚೀನೀ ವಿಮಾನಗಳು ಅವನ್ನು ಅರ್ಧದಲ್ಲೇ ತಡೆದು ಹಿಂದಕ್ಕಟ್ಟಿರುವವು ಜಾಪಾನು ಶಾಂಘಾಯಿಯಿಂದ ಚೀನೀಯರನ್ನೆಲ್ಲಾ ಹೊರ ದೂಡುವ ನಿರ್ಧಾರಮಾಡಿದೆ

### ಚೀನಕ್ಕೆ ಯುದ್ಧೋಪಕರಣ ಸಹಾಯ

ರಶ್ಯದ ಸೋವಿಯೆಟ್ ಸರಕಾರಕ್ಕೂ ಚೀನಕ್ಕೂ ಇತ್ತಲಾಗಿ ನಡೆದಿರುವ ಒಡಂಬಡಿಕೆಯ ಗುಪ್ತ ಶರತ್ತಿನ ಪ್ರಕಾರ ಸೋವಿಯೆಟ್‌ಸರಕಾರವು ಬರುವ ನವಂಬರ ತಿಂಗಳೊಳಗೆ ಚೀನಕ್ಕೆ 362 ವಿಮಾನ 200 ಟಾಂಕಿ, 5000 ಕುದುರೆ, 2500 ಮೋಟಾರ್‌ಟ್ರಕ್ಕ್, 1500 ಟ್ರೆಕ್ಟರ್ಸ್ 15,000 ಬಂದೂಕು, 120,000 ಬಾಕಿ ಗುಂಡು ಮತ್ತು 60 ಮಿಲ್ಯ ಮದ್ದಿನ ತೋಟೆಗಳನ್ನು ದಗಿಸಲು ಬದ್ಧವಾಗಿರುವುದು ಇವರ ಬದಲಿಗೆ ಚೀನವು ಈ ಎಲ್ಲಾ ಸಾಮಗ್ರಿಗಳ ಅರೆವಾಸಿ ಬೆಲೆಯಷ್ಟರ ಚಿನ್ನವನ್ನು ಸೋವಿಯೆಟ್ ಬೇಂಕಿನಲ್ಲಿ ಡಿಪೋಸಿಟ್ ಇಡತಕ್ಕದ್ದು. ಇದು ಹೊರತು ರಶ್ಯವು ಚೀನೀಯರಿಗೆ ಕ್ರಮವಾಗಿ ವಲಂಟೀಯರನ್ನೂ ಯುದ್ಧ ಕಲಾತಜ್ಞರನ್ನೂ ಒದಗಿಸಿಕೊಡುವುದು ಉತ್ತರ ಚೀನದಲ್ಲಿ ರಶ್ಯಕ್ಕೆ ಕೆಲವು ರಿಯಾಯಿತಿಗಳು ಕೊಡಲ್ಪಡುವವು

# ಗಡಿನಾಡಿನ ಗಾಂಧಿ

### ಖಾನ್ ಅಬ್ದುಲ್ ಗಫಾರ್ ಖಾನರು

ಗಾಂಧಿಜಿಯವರು ವೈಸರಾಯರೊಡನೆ ಮಾತಾಡಿದ ಪರಿಣಾಮವಾಗಿ ೬ ವರ್ಷಗಳನಂತರ ಈಗ ಖಾನರನ್ನು ಪುನಃ ತನ್ನ ಪ್ರಾಂತಕ್ಕೆ ಹೋಗಲು ಸರಕಾರವು ಸಮ್ಮತಿ ಕೊಟ್ಟದೆ ಖಾನರು ಆಗೋಸ್ತು ತಾ. ೨೬ ರಲ್ಲು ಪೇಶಾವರಕ್ಕೆಹೋದಾಗ ಪೈಲುದ್ದ

ಪೇಶಾವರದಿಂದ ಉತ್ಮಾನ್‌ಜೈ ವರೆಗೆ ಖಾನರ ಆಗಮನ ದಿನ ... ನಾಗರದಲ್ಲಿ ಮೂಳಿಗಿದೆ ಖಾನರು ಹಳ್ಳಿಗಾಡುಗಳಿಗೆ ಹೋಗುವಾಗಲೂ ಸಾವಿರಾರು ಜನರು ಮೈಲುಗಟ್ಲೆ ನಾಲುಗಟ್ಟನಿಂತು ಅವರ ದರ್ಶನ ಮಾಡುತ್ತಿದ್ದಾರೆ ಅವರ ಸಭೆಗಳಿಗೆ ಸಹಸ್ರಗಟ್ಲೆ ಜನರು ನೆರೆದು ಬರುತ್ತಾರೆ ಖಾನರು ಹೋದ ಕೆಲವೇ ದಿನಗಳಲ್ಲಿ ಗಡಿನಾಡಿನ ಮಂತ್ರಿಮಂಡಲವು ಬಿದ್ದುಹೋಗಿ ಕಾಂಗ್ರೆಸಿನ ಪರವಾಗಿ ಖಾನರ ಅಣ್ಣ ಡಾಕ್ಟರ್ ಖಾನರು ಮಂತ್ರಿಮಂಡಲ ರಚಿಸಲಿದ್ದಾರೆ

### ಯುದ್ಧ ಕೌನ್ಸಿಲಿನಲ್ಲಿ ಸ್ತ್ರೀ ಮೆಂಬರರು

ಆಧುನಿಕ ಇತಿಹಾಸದಲ್ಲಿ ಇದೀಗ ಪ್ರಥಮವಾಗಿ ಮಹಿಳೆಯೊಬ್ಬರು ಯುದ್ಧ ಕೌನ್ಸಿಲಿನಲ್ಲಿ ಸ್ಥಾನಪಡೆದಿರುವರು ಅವರು ಮಾರ್ಶಲ್‌ಚ್ಯಾಂಗ್ ಕೈ ಶೆಕ್ಕರ ಪತ್ನಿ ಮೆಡಮ್ ಚ್ಯಾಂಗ್ ಕೈ ಶೆಕ್ಕರು ಇವರು ಇತ್ತಲಾಗಿ ಚೀನದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಆಸಕ್ತಿಯಿಂದ ಕೆಲಸಮಾಡಿರುವರು ಚೀನೀ ಜಪಾನ್ ಯುದ್ಧಪ್ರಾರಂಭವಾದಾಗ ಸ್ತ್ರೀಯರಯುದ್ಧ ಸಹಾಯಕ ಸಂಘದಲ್ಲಿ ಭಾಷಣವೀಯುತ್ತಾ 'ನಮ್ಮ ರಾಷ್ಟ್ರವನ್ನು ಅಪಜಯ ಮತ್ತು ಗುಲಾಮಗಿರಿಯಿಂದ ತಪ್ಪಿಸಲು ಸ್ತ್ರೀಯರು ತಮ್ಮ ಪಾಲಿನ ಸಹಾಯಮಾಡಬೇಕು ಎಷ್ಟೊಂದು ವಿಳಂಬವಾಗಿಯಾದರೂ ನಾವು ಕಟ್ಟಕಡೆಗೆ ಪಡೆಯುವ ರಾಷ್ಟ್ರೀಯವಿಜಯವು, ಇಷ್ಟರವರೆಗೆ ನಮ್ಮ ತಾರೀಕು ಪಟ್ಟಿಯಲ್ಲಿ ತುಂಬಿರುವ ಅಪಮಾನಕರ ದಿನಗಳನ್ನು ಅಳಿಸಿ ಹಲವು ವರ್ಷಗಳಿಂದ ನಮ್ಮ ತಲೆತಗ್ಗಿಸಿ ಹೃದಯವನ್ನು ಬಾಗಿಸಿದ ದುಃಖವನ್ನು ನಿವಾರಿಸುವುದು'ಎಂದು ಹೇಳಿದ್ದರು.


**JOBS FOR UNEMPLOYED RUPEES.**

You know vividly the evils of unemployment But probably you do not know that unemployed money causes as much poverty and suffering. A bank is an employment agency for rupees. It finds jobs for them and thus contributes to the prosperity of the nation You can help in this work by investing your savings in the bank.

Resources of A CRORE

ESTD. 1906

CANARA BANK

LIMITED.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

**S. U. N. & CO.** ***Choukhamba, Benares City.***

ಮೂರು ಇನಾಮುಗಳು.

ಶ್ರೀಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲ ಗಳ ಪಟಲಾಗು! ಪಾಲಿಸಕ್ಕೆ 1, ವಿಶ್ವೇಶ್ವರ ಪಟ!, ಈ 3ಸಾಮಾನ ಗಳು, ಅಣಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲ್ಪಡುವುವು ಸ್ಟಾಂಪು ಬಾರದಿದ್ದರೆ ಈಗಿನ ಸೀಜನಿ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕಡಪಾಮ್ಸಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಣಿ, ನಾರ್ಮಡಿ, ತರಹದ ರುದ್ರಾಕ್ಷಿಗಳೂ ಸಾಮಾನ ಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕಟಲಾಗು! ಮಾತ್ರ ಇನಾಂ ಈಗಿನ ಫೇಶನದ ಬಣ್ಣದ ಮಡಿ ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ಬಣ್ಣಗಳಲ್ಲಿ ರೂ 20ರಿಂದ 55 ವರೆಗೆ ಸಾದಾ 16 ಮೊಳದ ಶೀರೆ 1ಕ್ಕೆ ರೂ 16 ರಿಂದ ರೂ 35ರ ವರೆಗೆ ಅರೆ ಕಡಮೆ 16ಮೊಳ ಕ್ರೇಪ್ ಅಂಚು ರೂ 10½ ಯಿಂದ ರೂ 16 ಖಣ 1ಕ್ಕೆ ರೂ 1½ರಿಂದ ರೂ 10ರ ವರೆಗ ಫೋಟ್ಸು ಖ ತು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬಿನಾರಿಸ್, ಕಾಶಿ



**ನೀವು ನಿಮ್ಮ—ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ?**

ಇಲ್ಲವಾದರೆ, ಹೇಗೆ ಮಾಡುವುದೆಂಬುದನ್ನು ಭದ್ರತೆಯು, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ.

# ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ

**ಲಿಮಿಟೆಡ್ (ಅಜ್ಮೀರು)**

**ನಮ್ಮ ಅಭಿವೃದ್ಧಿಯ ಅಂಕ್ಯ ಸಂಕೆಗಳು**

| | |
|---|---|
| ಚಾಲ್ತಿಯಲ್ಲಿರುವ ಪೂಲಿಸಿಗಳು | ರೂ **3** ಕೋಟಿ ಮಿಕ್ಕಿದೆ. |
| ಮೂಲಿಗಳು | ರೂ **80** ಲಕ್ಷಕ್ಕೂ ಮಿಕ್ಕಿದೆ. |
| ವಾರ್ಷಿಕ ಉತ್ಪನ್ನ | ರೂ **18** ಲಕ್ಷಕ್ಕೂ ಮಿಕ್ಕಿದೆ |
| ವಿಮೆ ತೆಸ್ತುದು | ರೂ **42** ಲಕ್ಷಕ್ಕೂ ಮಿಕ್ಕಿದೆ |

**ಅತ್ಯಧಿಕ ಬೋನಸು**

| ಜೀವಾಂತ್ಯ ವಿಮೆ | ಎಂಡೋವ್ಮೆಂಟ್ |
|---|---|
| ವರ್ಷಕ್ಕೆ ರೂ 1000ಕ್ಕೆ **25ರಂತೆ.** | ವರ್ಷಕ್ಕೆ ರೂ 1000ಕ್ಕೆ **20ರಂತೆ.** |

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲ ಕೆಳಗಿನವರಿಗೆ ಬರೆಯಿರಿ—

**ಪಿ ಜಿ. ಮರಾಠೆ ಎಸ್ಕ್ವಾಯರ್,** ಜನರಲ್ ಮೆನೇಜರ್

(ಅಥವಾ) ಎಂ ಮಾಧವ ರಾವ್ ಎಸ್ಕ್ವಾಯರ್, ಬಿ ಎ ಸುಪರಿಂಟೆಂಡೆಂಟ್ ಒಫ್ ಬ್ರ್ಯಾಂಚಸ್ ಎಂಡ್ ಚೀಫ್ ಏಜನ್ಸೀಸ್, ಯಸ್ ಐ ಎಂಡ್ ಸಿಲೋನ್.

**ಪಕ್ಷಿಮ ಕರಾವಳಿಗೆ ಓರ್ವ ಪ್ರಾಮುಖ್ಯ ಪ್ರತಿನಿಧಿಗಳು ಬೇಕು.**



ಪ್ರಕಟವಾಗಿದೆ! ? ಪ್ರಕಟವಾಗಿದೆ!

ನವಯುವಕರನ್ನು ಮುಗ್ಧಗೊಳಿಸುವ ಮತ್ತು ವಾಚಕರ ಮನಸ್ಸನ್ನು ಸೂರೆಮಾಡುವ ಅದ್ಭುತ ರಮ್ಯ ಕಾದಂಬರಿ!

# ಮಿಸ್ ಲಲಿತ

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು ಇದೀಗಲೇ ಹೊರಬಿದ್ದಿದೆ

**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**

ಬರೆದವರು **ಯಂ. ವಿ. ಪುತ್ರಾನ್**

ಕೂಡಲೇ ಬರೆಯಿರಿ. ಬೆಲೆ **0—8—0**

ವಿಳಾಸ — **M. V. Puthran,**

*C/o* 34, Bomanji Line, *2nd Floor, Fort,* ***BOMBAY***



**15 ವರ್ಷಗಳ ಅನುಭವ!** **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

# ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ

**ಗಣಪತಿ ರಾವ್, ಪೈಂಟರ್,**

ಸೋದೆ ಮಠದ ಲೇನು - - **ಉಡುಪಿ, ದ. ಕ.**



# ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ 1926

**18 ಬಲ್ಮಠ ರಸ್ತೆ, ಮಂಗಳೂರು.**



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಮೇದಿಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು

**ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು**



# ಗಿಡಗಳು ಮತ್ತು ಬೀಜಗಳು

**ಡಿ. ಗುರಪ್ಪ ಅಂಡ್‌ಸನ್ಸ್**

ಗಿಡ,ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು, ಲಾಲ್‌ಬಾಗ್ ದೊಡ್ಡ ಮಾವಳ್ಳಿ,

**ಬೆಂಗಳೂರು ಸಿಟಿ.**

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ **ಗಿಡಗಳು, ಬೀಜಗಳು** ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ



ಉಡುಪಿಯ ಆದರ್ಶ ಉಪಹಾರಗೃಹ!

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !**

**ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ !**

**ಸಂತೆಕಟ್ಟೆಯಿಂದ ಕಂಕೆ ಕೋರ್ಟು ರೋಡು ಮತ್ತು ಕೋಳಿದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮುಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು**

**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

# ದಕ್ಷಿಣಕನ್ನಡ

## ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

**ರೈತರ ದಿನಾಚರಣೆ**—ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಆಚರಿಸಲ್ಪಟ್ಟಂತೆಯೇ ಮಂಗಳೂರಿನಲ್ಲಿಯೂ ರೈತರ ದಿನಾಚರಣೆಯು ಕಳೆದ ತಾ ೨೯ರಲ್ಲಿ ನಡೆಯಿತು ಕಾಂಗ್ರೆಸ್ ಸಮತಾವಾದಿ ಪಕ್ಷದವರು ಮೈದಾನಿನಲ್ಲಿ ಒಂದು ಮಹಾ ಜನರ ಸಭೆಯನ್ನೇರ್ಪಡಿಸಿದರು. ಶ್ರೀ ಕೆ ಕೆ ಶೆಟ್ಟಿಯವರು ಅಂದಿನ ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ. ಯು ಜಿ ರಾವ ರು ಅಂದಿನ ಸಭೆಯ ಉದ್ದೇಶವನ್ನು ಕುರಿತ ಕೆಲ ಮಾತುಗಳನ್ನಾಡಿದರು ಅನಂತರ ಶ್ರೀಮತಿ ಕಮಲಾದೇವಿಯವರು ಹಿಂದುಸ್ಥಾನದ ರೈತರ ಮತ್ತು ಕೂಲಿಗಾರರ ದಾರಿದ್ರ್ಯ, ದೊಡ್ಡ ಹುದ್ದೆಯವರಿಗೆ ಅಧಿಕ ಸಂಬಳ, ಇವುಗಳನ್ನೆಲ್ಲಾ ತಿಳಿಸಿ ಜನರು—ತಳ್ಳಿಯ ಜನರೂ, ರೈತರೂ ಮತ್ತು ಕೂಲಿಗಾರರೂ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡದಿದ್ದರೆ ಅವರ ಕಲ್ಯಾಣವಾಗುವಂತಿಲ್ಲವೆಂದು ಹೇಳಿದರು. ಶ್ರೀ ಕೂಲಿಗಾರು ಎಲ್ಲರೂ ಒಂದಾದರೆ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಬೇಗನೆ ಪಡೆಯಬಹುದೆಂದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಂಗ್ರೆಸಿನೊಳಗೆ ಕಾಂಗ್ರೆಸ್ ಸಮತಾವಾದಿ ಪಕ್ಷವೊಂದು ಏತಕ್ಕೆ ಎಂಬ ಪ್ರಶ್ನೆಯನ್ನು ತಮಗೆ ತಾವೇ ಹಾಕಿಕೊಂಡು ಅದಕ್ಕೆ ಸಮರ್ಪಕವಾದ ಉತ್ತರವನ್ನು ಸೂಚಿಸಿದರು ಅನೇಕರಲ್ಲಿದ್ದ ಸಂಶಯವು ದೂರವಾಯಿತು ಕಾಂಗ್ರೆಸಿನ ಪರಿಪಾಠ ತಮ್ಮ ಗುರಿಯನ್ನು ಬಿಟ್ಟು ನಡೆಯದಂತೆ ಮಾಡುವುದೇ ಸಮತಾವಾದಿಗಳ ಉದ್ದೇಶವೆಂದೂ, ಕಾಂಗ್ರೆಸನ್ನು ಬಲಹೀನವಾಗಿ ಮಾಡುವುದು ಅವರ ಉದ್ದೇಶವಲ್ಲವೆಂದೂ ತಿಳಿಸಿದರು ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು

**ಇಂಟರ್ ಕಾಲೇಜ್ ವಾಕ್ ಸ್ಪರ್ಧೆ**—ಕಳೆದ ತಾ ೩ರಲ್ಲಿ ಮಂಗಳೂರು ಸೈಂಟ್ ಅಲ್ಲೋಸಿಯಸ್ ಕಾಲೇಜಿನ ಯೂನಿಯನಿನವರೊಳಗೂ, ಗವರ್ನಮೆಂಟ್ ಕಾಲೇಜ್ ಯೂನಿಯನಿನವರೊಳಗೂ, ಒಂದು ಪ್ರಚಂಡ ಚರ್ಚಾ ಸ್ಪರ್ಧೆ ನಡೆಯಿತು ಜೆ ಗಮ್ ಅಮಾರುದ್ದೀನರವರು ಅಧ್ಯಕ್ಷರಾಗಿದ್ದರು ಗವರ್ನಮೆಂಟ್ ಕಾಲೇಜಿನ ವಿದ್ಯಾರ್ಥಿನಿ ಮಿಸ್ ಜೋನ್ಸ ಮಾಸ ಎಂಬವರು ಒಂದು ಠರಾವನ್ನು ತಂದು ಅದರಲ್ಲಿ ವಿದ್ಯಾರ್ಥಿಗಳು ದೇಶದಲ್ಲಿ ವಿದ್ಯಾಭ್ಯಾಸ, ಆರೋಗ್ಯ, ಸ್ವದೇಶಿ ಪ್ರಚಾರ ಮೊದಲಾದ ಕೆಲಸಗಳನ್ನು ಮಾಡಬೇಕು ಆದರೆ ರಾಜಕೀಯ ವಿಷಯದಲ್ಲಿ ಭಾಗವಹಿಸಕೂಡದು ಎಂದು ಸೂಚಿಸಿದರು ಶ್ರೀ ಯಂ ಮಂಗೇಶರಾಯರು ಅದನ್ನು ಅನುಮೋದಿಸಿದರು ಸೈಂಟ್ ಅಲ್ಲೋಸಿಯಸ್ ಕಾಲೇಜಿನ ಶ್ರೀ ಆರ್ ಎನ್ ಭಿಡೆಯವರು ಅದನ್ನು ವಿರೋಧಿಸಿದರು ಠರಾವಿನ ಪರವಾಗಿಯೂ ವಿರೋಧವಾಗಿಯೂ ಹಲವರ ಭಾಷಣಗಳಾದುವು ಎರಡೂ ಕಾಲೇಜುಗಳ ಪ್ರೊಫೆಸರರೂ (ಕೆಲವರು) ಭಾಗ ವಹಿಸಿದ್ದರು ಕೊನೆಗೆ ಮತ ತಗೆದುಕೊಳ್ಳಲಾಗಿ ಠರಾವು ಬಿದ್ದು ಹೋಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ, ರಾಜಕೀಯ ವಿಷಯವನ್ನು ಮನುಷ್ಯನ ಜೀವಿತದಿಂದ ಬೇರ್ಪಡಿಸಲು ಸಾಧ್ಯವಿಲ್ಲವೆಂದೂ ಆದರೆ ವಿದ್ಯಾರ್ಥಿಗಳು ರಾಜಕೀಯ ರಂಗಕ್ಕಿಳಿದು ಜೋರಿನಿಂದ ಕೆಲಸ ಮಾಡುವುದರಿಂದ ಅವರ ವಿದ್ಯಾಭ್ಯಾಸಕ್ಕೆ ತೊಂದರೆ ಬರಬಹುದೆಂದೂ ಆದರೆ ಗ್ರಾಮ ಉದ್ಧಾರ ಕಾರ್ಯದಲ್ಲಿ ವಿದ್ಯಾರ್ಥಿಗಳು ಹೆಚ್ಚು ಭಾಗ ವಹಿಸಬಹುದೆಂದರು ಗವರ್ನಮೆಂಟ ಕಾಲೇಜಿನ ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿದ ಮೇಲೆ ಸಭಾಂತ್ಯವಾಯಿತು

**ಭಾರತದ ನಾಟಕದ ಭವಿಷ್ಯ**—ಈ ವಿಷಯದ ಮೇಲೆ, ಡಿಸ್ಟ್ರಿಕ್ಟ ಜಡ್ಜರ ಅಧ್ಯಕ್ಷತೆಯಲ್ಲಿ ಪ್ರೊ ಮಥಾಯಸರು ವೈ. ಯಂ. ಸಿ. ಎ ಯಲ್ಲಿ ಮೊನ್ನೆ ದಿನ ಒಂದು ಭಾಷಣ ಮಾಡಿದರು ಇಂಗ್ಲಿಷ್ ಮತ್ತು ಹಿಂದುಸ್ಥಾನದ ನಾಟಕಗಳ ಉತ್ಪತ್ತಿ, ಅಭಿವೃದ್ಧಿ ಇತ್ಯಾದಿಗಳನ್ನು ವಿವರಿಸಿ, ಆಧುನಿಕ ನಾಟಕ ಶಾಲೆಯಲ್ಲಿರುವ ನ್ಯೂನತೆಗಳನ್ನು ವಿವರಿಸಿ ಅವುಗಳ ನಿವಾರಣೆಗೆ ಬೇಕಾದ ಸಲಹೆಗಳನ್ನಿತ್ತರು ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭೆಯು ಅಂತ್ಯವಾಯಿತು.

### ಕಾರ್ಕಳದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಸಭೆ.
### ಮಾನನಷ್ಟದಾವೆಯ ಕುರಿತು ತೀವ್ರ ಚರ್ಚೆ

ಕಳೆದ ಆದಿತ್ಯವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಕಾರ್ಕಳದ ಹಿಂದು ಬಾಲಿಕಾ ಪಾಠಶಾಲೆಯಲ್ಲಿ ಕಮಿಟಿಯ ಪ್ರೆಸಿಡೆಂಟ್ ಶ್ರೀ ಉಮೇಶರಾಯರ ಅಧ್ಯಕ್ಷತೆಯಲ್ಲಿ ಕಮಿಟಿಯ ಕಾರ್ಯನಿರ್ವಾಹಕ ಸಭೆ ನಡೆದು ಜಿಲ್ಲಾ ರಾಜಕೀಯ ಪರಿಷತ್ತನ್ನು ಮೂಲ್ಕಿಯಲ್ಲಿ ನಡಿಸ ಬೇಕೆಂದಾಯಿತು ಅಪರಾಹ್ನ ಘಂಟೆ ೧ಕ್ಕೆ ಡಿಸ್ಟ್ರಿಕ್ಟ ಬೋರ್ಡು ಚುನಾವಣಾ ಕಮಿಟಿಯ ಸಭೆಯು ಉಮೇಶರಾಯರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ಬಿ ವೆಂಕಪ್ಪಯ್ಯನವರು ಮತ್ತು ಶ್ರೀ ಎಮ್ ಶಿವರಾಯರು ತಯಾರಿಸಿರುವ ಚುನಾವಣೆಯ ಪ್ರಕಟಣಾ ಪತ್ರಗಳೆರಡನ್ನೂ ಓದಿ ಹೇಳಿ ಅವುಗಳ ಪ್ರತಿಗಳನ್ನು ಮೆಂಬರರಿಗೆ ಒದಗಿಸಿಕೊಟ್ಟು ಆ ಮೇಲೆ ಅದನ್ನು ವಿಚಾರಿಸಬೇಕೆಂದಾಯಿತು ಯಾವ ಆಧಾರದ ಮೇಲೆ ಉಮೇದ್ವಾರರು ಆರಿಸಬೇಕೆಂಬ ವಿಷಯವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯವರೇ ನಿರ್ಣಯಿಸತಕ್ಕದ್ದೆಂಬ ಶ್ರೀ ಕೆ ಕೆ ಶೆಟ್ರ ಸೂಚನೆಗೆ ಬಹುಮತ ದೊರೆಯಲಿಲ್ಲ ಉಮೇದ್ವಾರಿಗಳ ಅರ್ಜಿಗಳನ್ನು ಆಯಾ ತಾಲೂಕಿನ ಕಾಂಗ್ರೆಸ್ ಕಮಿಟಿಯವರಿಗೆ ಕಳುಹಿಸಿ, ಅವರು ಆ ಕುರಿತು ಆಯಾಯ ಸರ್ಕಲ್ ಕಾಂಗ್ರೆಸ್ ಕಮಿಟಿಯವರ ಅಭಿಪ್ರಾಯ ಪಡೆದು ವರದಿಯೊಂದನ್ನು ಚುನಾವಣಾ ಕಮಿಟಿಯವರಿಗೊಪ್ಪಿಸಬೇಕೆಂದು ಶ್ರೀ ಎಮ್ ಎನ್ ಭಿಡೆಯವರು ತಂದ ಸೂಚನೆಯು ಮಂಜೂರಾಯಿತು ಚುನಾವಣೆಯು ಮುಂದುವರಿಸಲ್ಪಡಲಿರುವುದರಿಂದ ಉಮೇದ್ವಾರಿಗಳ ಅರ್ಜಿಯನ್ನು ಸ್ವೀಕರಿಸುವ ಅವಧಿಯನ್ನು ಒಂದು ತಿಂಗಳು ಮುಂದೆಹಾಕಲಾಯಿತು

ಇದಾದ ನಂತರ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ ನಡೆಯಿತು. ಮೆಂಬರರು ಖಾದಿ ಹಾಕಿಕೊಂಡು ಬಾರದಿರುವ, ಸಕ್ರೆಟರಿಯವರ ಸಂಬಂಧದ, ಹಿಂದಿನ ಕಾಂಗ್ರೆಸ್ ಮೆಂಬರಿಕೆ ಸೇರಿಸಿದ ಮತ್ತು ಆ ಕುರಿತು ಸಂದ ಹಣದ ಮತ್ತು ಮೆಂಬರಿಕೆ ಪುಸ್ತಕಗಳು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಬಂದ, ಇಲ್ಲಿ ಧಾಖಲಿನ ಸಂಬಂಧವಾಗಿ ಶ್ರೀಗಳಾದ ಎಮ್ ಎನ್ ಅಧಿಕಾರಿ ಶ್ರೀನಿವಾಸ ಪೈ ಕೆ ಕೆ ಶೆಟ್ರ ಪ್ರಶ್ನೆಗಳಾದ ಮೇಲೆ ಶ್ರೀಗಳಾದ ಎ ... ಶೆಟ್ಟಿ ಮತ್ತು ಕೆ ಆರ್ ಕಾರಂತರ ಸ್ಥಾನಕ್ಕೆ ಶ್ರೀ ಕೆ ವಿ ಪಾಬಲ ಹಕ್ಕೆ ಮತ್ತು ಶ್ರೀ ಎನ್ ಎನ್, ಶೆಟ್ಟಿಯವರನ್ನು ಕಾರ್ಯನಿರ್ವಾಹಕ ಕಮಿಟಿಗೆ ಆರಿಸಲಾಯಿತು ಶ್ರೀ ಪಿ ಎಮ್ ಹೆಗ್ಗಡೆಯವರನ್ನು ಕೇಳಿಕೊಂಡ ಮೇರೆಗೆ ಅವರು ಉಚಿತವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಲೆಕ್ಕಪತ್ರಗಳನ್ನು ಒಡಿಟ್ ಮಾಡಿ ಒಪ್ಪಿಸುವುದಕ್ಕೆ ಆಭಾರಸೂಚಿಸಲಾಯಿತು ಬಳ್ಳಾರಿ ಮತ್ತು ದಕ್ಷಿಣಕನ್ನಡವನ್ನು ಬೊಂಬಾಯಿ ಸಂಸ್ಥಾನದ ಆಡಳಿತಕ್ಕೆ ಸೇರಿಸುವ ಕುರಿತು ದಕ್ಷಿಣಕನ್ನಡದ ಬೇರೆ ಬೇರೆ ಸಂಸ್ಥೆಗಳ ಅಭಿಪ್ರಾಯವನ್ನು ೭ತಿಂಗಳೊಳಗ ಪಡೆಯಬೇಕೆಂದು ತೀರ್ಮಾನಿಸಲಾಯಿತು ಕರ್ನಾಟಕ ಕೇರಳ ಗಡಿಯ ಪ್ರಶ್ನೆ ಮತ್ತು ಶ್ರೀ ಎಚ್ ದಾಮೋದರ ಕಾಮತರು ಆ ಕುರಿತು ಬರೆಕೊಂಡ ಪತ್ರದ ಕುರಿತು ಬಹಳ ಚರ್ಚೆ ನಡೆದು ಆ ಕುರಿತು ಶೀಘ್ರವಾಗಿ ನಿರ್ಣಯಮಾಡುವಂತೆ ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರಿಗೆ ಜರೂರಾಗಿ ಬರೆಯುವಂತೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಗೆ ಪುನಃ ಬರೆಯಬೇಕೆಂದಾಯಿತು ಆ ಮೇಲೆ ಶ್ರೀ ಶೆಟ್ಟಿಯವರಿಗೆ ಮೇ ತಿಂಗಳಿಂದ ಆಗೋಸ್ತು ತಿಂಗಳವರೆಗೆ ರೂ ೩ರಂತೆ ಈ ೪ ತಿಂಗಳ ಸಂಬಳ ಮತ್ತು ಅವರ ಪ್ರಯಾಣವೆಚ್ಚ ಕೊಡಬೇಕೆಂದಾಯಿತು ಕಾಯಿತಯಲ್ಲಿದ್ದ ಒಂದು ತಿಂಗ

(೧೫ನೇ ಪೇಜಿಗೆ ಮುಂದರಿಯುತ್ತದೆ)

**ಜಿ. ಬೋ. ಸಭೆ**—ಬರುವ ತಾ ೧೧ನೇ ಪೂರ್ವಾಹ್ನ ೧೧ ಘಂಟೆಗೆ ಜಿಲ್ಲಾ ಬೋರ್ಡ ಆಫೀಸಿನಲ್ಲಿ ಜಿ ಬೋ ಸಭೆ ನೆರೆಯುತ್ತದೆ

**ಮಂಗಳೂರು ನಗರಸಭೆ**—ಈ ದಿನ ಸಾಯಂಕಾಲ ನಗರ ಸಭೆಯ ಮೀಟಿಂಗು ಜರಗುತ್ತದೆ ಇದರಲ್ಲಿ ಪೆಲೆನ್ಸಿಯಾ ಇಗರ್ಜಿಯ ಪ್ರಶ್ನೆಯು ಪುನಃ ಚರ್ಚಿಸಲ್ಪಡುವುದೆಂದು ತಿಳಿದುಬಂದಿದೆ

**ಬಸ್ಸು ಕೆಲಸಗಾರರ ಸಂಘ**— ಮಂಗಳೂರಿನ ಎಲ್ಲಾ ಬಸ್ಸು ಕೆಲಸಗಾರರ ಮಹಾಸಭೆಯು ೩೦-೮-೩೭ರಲ್ಲಿ ಸಂಘವನ್ನು ಸ್ಥಾಪಿಸುವ ಉದ್ದೇಶದಿಂದ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಸೇರಿತು ಶ್ರೀ ಎಂ ವಿಠಲ ಹೆಗ್ಗಡೆ ಶ್ರೀ ಯರ್ ವ ಲಿಂಗೇಶರಾಯರುಗಳು ಸಂಘಶಕ್ತಿಯ ಕುರಿತು ಭಾಷಣ ಮಾಡಿದರು ದ ಕ. ಬಸ್ ವರ್ಕರ್ಸ ಯೂನಿಯನ್ ಎಂಬ ಹೆಸರಿನ ಸಂಘವೊಂದು ರಚಿತವಾಗಬೇಕೆಂದು ನಿರ್ಧಾರವಾಗಿ, ಕಮಲಾದೇವಿಯವರು ಅಧ್ಯಕ್ಷೆಯಾಗಿರುವ ಒಂದು ಆಡಳಿತ ಕಮಿಟಿಯ ರಚನೆಯಾಯಿತು

**ಅಖಿಲ ಭಾರತ ಮಹಿಳಾ ಸಂಘ**—ಕಳೆದ ತಾ. ೩ರಂದಲ್ಲಿ ಬಿಸೆಂಟ್ ಹೆಣ್ಮಕ್ಕಳ ಶಾಲೆಯಲ್ಲಿ ಒಂದು ಸಭೆ ಸೇರಿ ೧೫ ಜನ ಕಾರ್ಯಕಾರೀ ಸಮಿತಿಯನ್ನುಳ್ಳ ಒಂದು ಅಖಿಲ ಭಾರತ ಮಹಿಳಾ ಸಂಘವೆಂಬ ಒಂದು ಸಂಸ್ಥೆಯು ಸ್ಥಾಪಿಸಲಾಗಿದೆ ಮಿಸೆಸ್ ಕೃಷ್ಣರಾಯರು ಅಧ್ಯಕ್ಷೆಯರು ಶ್ರೀಮತಿ ಸುಶೀಲಾಬಾಯಿ ನಾಯ್ಕರವರು ಉಪಾಧ್ಯಕ್ಷೆಯರು ಸ್ತ್ರೀಯರ ಸುಧಾರಣೆ, ಅವರಲ್ಲಿ ವಿದ್ಯಾಪ್ರಸಾರಣೆ ಮುಂತಾದ ಕಾರ್ಯಕ್ರಮಗಳು ಸಂಘದ ಉದ್ದೇಶಗಳು

ಅಲಭ್ಯ ಲಾಭ! ಉಡುಪಿ ನಿಜವಾದ ಭದ್ರತೆಗೆ!!

ಶ್ರೀ ಪೇಜಾವರ ಮಠದ ಪರ್ಯಾಯಂ

ಪ್ರೊಮಿಸರೀ ನೋಟನ್ನು ಇಂದೇ ಕೊಂಡುಕೊಳ್ಳಿರಿ!

ಕೊಂಡುಕೊಳ್ಳುವವರು ಟ್ರಾನ್ಸಫರ್ ಮಾಡಿಕೊಡುವ ಅನುಕೂಲತೆಗೋಸ್ಕರ ಚೋಂಡು ಎಂಬ ಹೆಸರು ತೆಗೆದು ಪ್ರೊಮಿಸರಿ ನೋಟು ಎಂದು ಹೆಸರು ಹಾಕಿದೆ

ಮಠದವರಿಗೆ ಆವಶ್ಯವಾದ ಗರ್ಜಿನ ಬಗ್ಗೆ ಸಾಲಮಾಡುವ ಆಗತ್ಯ ಉಂಟೆಂದೂ, ಅದು ಮಠಗಳ ಹುಟ್ಟುವಳಿ ಮೇಲೆ ಸಿಂಧುವಾಗತಕ್ಕದ್ದೆಂದೂ ಪ್ರೀವಿಕಾನ್ಸಿಲಿನ ತೀರ್ಪು ಇದೆ.

ರೂ. 75, 80, 85, 90ರ ಪ್ರೊಮಿಸರೀ ನೋಟನ್ನು ಪಡಕೊಂಡು ಕ್ರಮವಾಗಿ 5. 4, 3. 2 ವರ್ಷಗಳಲ್ಲಿ ಒಂದು ನೂರು ರೂಪಾಯಿಗಳನ್ನು ವಾಪಾಸು ಪಡೆಯಿರಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜನರಲ್ ಏಜಂಟ್, ಪೇಜಾವರ ಮಠ, ಉಡುಪಿ.

## ಉಡುಪಿ

ಉಡುಪಿ ಪೇಜಾವರ ಮಠದ ಸರಸ್ವತೀ ಭಾಂಡಾಗಾರದ ಶ್ರೀ ವ್ಯಾಸ ಭವನದಲ್ಲಿ ತಾ 6 9 37ನೇ ಸೋಮವಾರ ಸಾಯಂ. ಘಂಟೆ 6ಕ್ಕೆ ಪೇಜಾವರ ಮಠದ ಶ್ರೀ ವಿಶ್ವಜ್ಞತೀರ್ಥ ಶ್ರೀಪಾದಂಗಳವರ ಭಾವಚಿತ್ರ ಅನಾವರಣ ಸಮಾರಂಭವು ಉಡುಪಿಯ ಮುನ್ಸಿಫರಾದ ಮ ರಾ ಆರ್, ಯಮ್. ವಿ ಯಸ್ ರಾವ್, ಯಮ್. ಎ, ಬಾರ್-ಎಟ್-ಲಾ ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಗವರ್ನಮೆಂಟ್ ಕೋಲೇಜಿನ ಪಂಡಿತರಾದ ಶ್ರೀ ಪೇಜಾವರ ಸೀತಾರಾಮಾಚಾರ್ಯರಿಂದ ನೆರವೇರಿಸಲ್ಪಟ್ಟಿತು ಸಭಾರಂಭದಲ್ಲಿ ಸ್ವಾಗತಗೀತೆಯಾದೊಡನೆ ಶ್ರೀಯುತ ಮಿಯಾಳ ನರಸಿಂಹಾಚಾರ್ಯರು ಭಾವಚಿತ್ರವನ್ನು ತೆರೆಯುವುದರ ಉದ್ದೇಶ ಮೊದಲಾದುವುಗಳನ್ನು ವಿವರಿಸಿದ ನಂತರ ಅಧ್ಯಕ್ಷರು ಈ ಸಮಾರಂಭವು ಯಶಸ್ವಿಯಾಗವಂತೆ ಬರೆದ ಮದ್ರಾಸಿನ ಮಿನಿಸ್ಟರರಾದ ಟಿ ಯಸ್ ಯಸ್, ರಾಜನ್ ಮತ್ತು ಮಂಗಳೂರಿನ ರಿಟಾಯರ್ಡ್ ಸಬ್ ಜಡ್ಜ ರಾವ ಗೋಪಾಲಕೃಷ್ಣಯ್ಯನವರ ಪತ್ರಗಳನ್ನು ಓದಿಹೇಳಿದರು ಶ್ರೀ ಪೇಜಾವರ ಸೀತಾರಾಮಾಚಾರ್ಯರು ಭಾವಚಿತ್ರವನ್ನು ಅನಾವರಣ ಮಾಡಿ ಇಂತಹ ಭಾವಚಿತ್ರಗಳ ಅನಾವರಣದ ಆವಶ್ಯಕತೆ ಮತ್ತು ಶ್ರೀಗಳವರ ದಿವ್ಯಾರ್ಯಾದಿ ಗುಣಗಳನ್ನು ಸಹ ವಿವರಿಸಿ ಭಾಷಣಮಾಡಿದ ನಂತರ ಉಡುಪಿಯ ಕನ್ನಡ ಪಂಡಿತರಾದ ಶ್ರೀ ಪಿ ವೆಂಕಟರಮಣಾಚಾರ್ಯರು ಶ್ರೀಪಾದಂಗಳವರ ಜೀವನ ಚರಿತ್ರೆಯನ್ನು ವಿವರಿಸಿದರು ಕೊನೆಗೆ ಅಧ್ಯಕ್ಷರಿಗೂ ಸಭಿಕರಿಗೂ, ಧನ್ಯವಾದಗಳನ್ನಿತ್ತು ಸಭೆಯು ಮುಕ್ತಾಯಗೊಂಡಿತು.

### ಕಾಂಗ್ರೆಸ್ ಪ್ರಚಾರಕಾರ್ಯ

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಪಾಂಗಾಳ ಮಂಜ ನಾಥನಾಯ್ಕರು ಈ ಕೆಳಗಿಂದ ಸ್ಥಳಗಳನ್ನೆಲ್ಲಾ ಸಂಚರಿಸಿ ಕಾಂಗ್ರೆಸ್ ತತ್ವವನ್ನು ಪ್ರಚಾರಮಾಡಿ ಕೇಂದ್ರ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿದ್ದಾರೆ

ಕೋಟದಲ್ಲಿ ಶ್ರೀ ಎಚ್, ಕೃಷ್ಣದೇವ ಐತಾಳರು ಅಧ್ಯಕ್ಷ, ಶ್ರೀ ಕೋಟ ನರಸಿಂಹ ಕಾರಂತರು ಕಾರ್ಯದರ್ಶಿಗಳಾಗಿ ಇರುವ ಒಂದು ಕಮಿಟಿಯನ್ನು, ಹಂಗಾರಕಟ್ಟೆಯಲ್ಲಿ ಶ್ರೀ ಪಾಂಗಾಳ ವಿಠಲ ನಾಯ್ಕರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಬಿ ಸಂಜೀವ ಶೆಟ್ಟಿ ಮತ್ತು ಶ್ರೀ ಎನ್, ವಾಸುದೇವನಾಯ್ಕರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಿ ಒಂದು ಕೇಂದ್ರ ಕಮಿಟಿಯನ್ನು, ಪಾತ್ರಿಯಲ್ಲಿ ಶ್ರೀ ಎನ್ ಅಣ್ಣಪ್ಪಭಟ್ಟರು ಅಧ್ಯಕ್ಷ ಹಾಗೂ ಶ್ರೀ ಸುಬ್ರಾಯ ನಾವಡ ಮತ್ತು ಶ್ರೀ ಒ ಕೃಷ್ಣಯ್ಯ ಹೆಗ್ಡೆಯವರು ಕಾರ್ಯದರ್ಶಿಗಳಾಗಿರುವ ಒಂದು ಕೇಂದ್ರ ಕಮಿಟಿಯನ್ನು ಪೆರಡೂರಿನಲ್ಲಿ ಶ್ರೀ ಅನಂತ ಪದ್ಮನಾಭ ಭಟ್ಟರನ್ನು ಅಧ್ಯಕ್ಷರನ್ನಾಗಿ ಮತ್ತು ಶ್ರೀ ಮಂಜುನಾಥ ಆಚಾರ್ ಮತ್ತು ಶ್ರೀ ಬಿ ಮುದ್ದಣ್ಣ ಶೆಟ್ಟಿಯವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಿ ಒಂದು ಕೇಂದ್ರ ಕಮಿಟಿಯನ್ನೂ ಸ್ಥಾಪಿಸಿರುವರು

ಕೊಕ್ಕರ್ಣೆಯಲ್ಲಿ ಮೆಂಬರರನ್ನು ಕೂಡಿಸಲು ಶ್ರೀ ಶ್ರೀನಿವಾಸ ಶೆಣೈಯವರನ್ನು ನೇಮಿಸಲಾಗಿದೆ ಯೆಂದೂ ಕೊಕ್ಕರ್ಣೆಯ ಜನರು ಶ್ರೀಯುತರೊಡನೆ ಸಹಕರಿಸಿ ಕೇಂದ್ರ ಕಾಂಗ್ರೆಸ್ ಕಮಿಟಿಯ ಸ್ಥಾಪನೆಗೆ ನೆರವಾಗಬೇಕೆಂದು ಶ್ರೀ ಮಂಜುನಾಥನಾಯ್ಕರು ತಿಳಿಸುತ್ತಾರೆ

**ಮುನಿಸಿಪಲ್ ಸಭೆ**—ಆಗೋಸ್ತು ತಾ ೩೧ರಲ್ಲು ನಡೆದ ಉಡುಪಿ ಮುನಿಸಿಪಾಲಿಟಿಯ ಸಭೆಯಲ್ಲಿ ವರ್ಷಕ್ಕೆ ೫೦೦ರೂಪಾಯಿ ಬಾಡಿಗೆ ತರುವ ಟೋಲ್ ನ್ನು ಮಾಫಿ ಕೊಡಬೇಕೆಂಬ ಸೂಚನೆಯನ್ನು ಶಂಭುಶೆಟ್ರು ತಂದು ಶ್ರೀ ವಾಸುದೇವ ಭಟ್ಟರು ಅನುಮೋದಿಸಿ ಆ ಕುರಿತು ವಿಚಾರಿಸಲು ಸಬ್ ಕಮಿಟಿಯೊಂದನ್ನು ನೇಮಿಸಲಾಯಿತು ನಗರಿಗೆ ಬಣ್ಣಹಾಕುವವರ ಮೇಲಿನ ಟ್ಯಾಕ್ಸನ್ನು ಕಡಿಮೆ ಮಾಡಬೇಕೆಂಬ ಕಮಿಶನರ ಸೂಚನೆಯ ಕುರಿತು ವಿಚಾರಿಸಲು ಶ್ರೀ ಅನಂತ ಶೆಟ್ರು ಮತ್ತು ಶಂಭು ಶೆಟ್ರಿಂದ ಕೂಡಿದ ಕಮಿಟಿಯೊಂದನ್ನು ರಚಿಸಲಾಯಿತು

ESTD. 1906

**The Canara Banking Corporation Udipi Ltd.**

(Incorporated in British India)

Head Office.—UDIPI

*MEMBERS* – RESERVE BANK OF INDIA, CLEARING HOUSE, MADRAS

**FIXED DEPOSITS are accepted at the following rates at all our Offices:**

| | |
|---|---|
| 3 months | 2½% |
| 6 or 9 months | 3% |
| 12 months | 3½% |
| 24 months | 4% |

**Total Resources exceed Rs. 52,00,000/-**

*V. R. Kamath,* B. A., LL. B.
Mg. Manager.

ನವಯುಗ

ಉಡುಪಿ, ಗುರುವಾರ ತಾ ೯-೯-'೩೭

# ಮದ್ರಾಸ್ ಬಜೆಟಿನ ಕುರಿತು ಚರ್ಚೆ

ಕೇವಲ ಒಂದೇ ತಿಂಗಳ ಅವಕಾಶದಿಂದ ಮದ್ರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರ್ಯರು ತಯಾರಿಸಿರುವ 1937–38ರ ಬಜೆಟಿನ ಪ್ರಾಮುಖ್ಯ ಸಂಗತಿಗಳನ್ನು ನಾವು ಇನ್ನೊಂದೆಡೆ ಕೊಟ್ಟಿರುವೆವು. ಬಜೆಟು ತಯಾರಿಸಲು ಸರಿಯಾಗಿ ಅವರಿಗೆ ಸಿಕ್ಕಿದ ಸಮಯವೆಂದರೆ ಕೇವಲ ಹದಿನೈದು ದಿವಸ. ಇಷ್ಟೊಂದು ಅಲ್ಪಾವಧಿಯಲ್ಲಿ ಅವರು ಬಜೆಟಿನಲ್ಲಿ ದೊಡ್ಡ ಮಾರ್ಪಾಟವೇನನ್ನಾದರೂ ಮಾಡುವುದು ಸಾಧ್ಯವೇ ಇಲ್ಲ. ಆದರೂ ಅವರು ಸಾಧ್ಯವಾದ ಮಟ್ಟಿಗೆ ಇದಕ್ಕೆ ಕಾಂಗ್ರೆಸಿನ ಒಪ್ಪವನ್ನಿತ್ತಿರುತ್ತಾರೆ. ಅದರಲ್ಲಿ ಹಳ್ಳಿಗರ ಹಿತಸಾಧನೆಯ ಕುರಿತು ಹೆಚ್ಚಿನ ಗಮನವೀಯಲ್ಪಟ್ಟಿದೆ. ಇನ್ನು ಆರೇ ತಿಂಗಳಲ್ಲಿ ತಯಾರಿಸಲ್ಪಡುವ 1938–39ನೇ ವರ್ಷದ ಬಜೆಟಿನಲ್ಲಿ ಕಾಂಗ್ರೆಸಿನ ಧೋರಣೆಯನ್ನು ಸಾಕಷ್ಟು ತೃಪ್ತಿಕರವಾಗಿ ಅನುಸರಿಸಲ್ಪಡುವುದೆಂಬ ರಾಜಾಜಿಯವರ ಆಶ್ವಾಸನೆಯಿಂದ ಈ ಸಲದ ಬಜೆಟಿನಿಂದ ತಾಳ್ಮೆಗೆಡದೆ ಸಹಾನುಭೂತಿಯಿಂದಿರಬೇಕಾಗುವುದು. ಯಾಕೆಂದರೆ ಭೂಕಂದಾಯರಿಯಾಯಿತಿ ಮತ್ತು ಹಳ್ಳಿಗರ ಸಾಲನಿವಾರಣೆಯ ಕುರಿತು ಸರಕಾರವು ಈ ಮೊದಲಿನ ಇಂಟರಿಮ್ ಮಂತ್ರಿಗಳಿಗಿಂತ ಹೆಚ್ಚಿನದೇನನ್ನೂ ಮಾಡಿರುವುದಿಲ್ಲ. ಶಿಕ್ಷಿತ ನಿರುದ್ಯೋಗಿ ಸಮಸ್ಯೆಯ ಪ್ರಸ್ತಾಪವೇ ಇಲ್ಲ. ಪ್ರಾಥಮಿಕ ಶಿಕ್ಷಣ ಪ್ರಚಾರಕ್ಕೂ ಹೆಚ್ಚಿನ ಪ್ರಾಧಾನ್ಯ ದೊರತಿರುವಂತೆ ತೋರುವುದಿಲ್ಲ. ಈ ಬಜೆಟಿನಲ್ಲಿ ವಿಶೇಷವಾಗಿ ಗಮನವೀಯಲ್ಪಟ್ಟ ವಿಷಯಗಳೆಂದರೆ ಮದ್ಯಪಾನ ನಿಷೇಧ, ರಾಟೆ ಮತ್ತು ಕೈಮಗ್ಗಕ್ಕೆ ಪ್ರೋತ್ಸಾಹ, ಮತ್ತು ಹಳ್ಳಿಗಳಿಗೆ ಶುದ್ಧ ನೀರನ್ನೊದಗಿಸುವ ಯೋಜನೆ. ಸಾಲದ ಭಾರದಿಂದ ನೆಲಹಿಡಿದಿರುವ, ತೀರ್ಪೆ ತೀರಲಾರದೆ ಕಂಗೆಡುತ್ತಿರುವ ಒಕ್ಕಲಬೇಸಾಯಗಾರರ ಸಮಸ್ಯೆಗಿಂತಲೂ ಮೊದಲಾಗಿ ಮೇಲಿನ ವಿಷಯಗಳು ಗಮನಿಯವಾದುವೋ ಎಂದು ಸಂದೇಹಪಡಲವಕಾಶವಿದೆ. ಒಕ್ಕಲಬೇಸಾಯಗಾರರ ಕೊರಳಿಗೆ ಕೊರಡಾಗಿರುವ ಸಾಲವನ್ನು ನಿವಾರಿಸುವ ವಿಷಯದಲ್ಲಿ ತಕ್ಕ ವ್ಯವಸ್ಥೆಯನ್ನು ಬೇಗನೆ ಮಾಡಲು ಮುಖ್ಯ ಮಂತ್ರಿಗಳು ಭರವಸೆಕೊಟ್ಟಿರುವುದು ಸಂತೋಷಕರವಿದೆ. ಇದು ಹೊರತು ಅವರೀಗ ಪ್ರಾಮುಖ್ಯವೆಂದು ಪರಿಗಣಿಸಿ ಕೈಕೊಂಡಿರುವ ಕೆಲಸಗಳೆಲ್ಲಾ ಹಳ್ಳಿಗರ ಮತ್ತು ಬಡಬಗ್ಗರ ಪರಿಸ್ಥಿತಿಯನ್ನು ಸುಧಾರಿಸುವಂತಹದೇ ಆಗಿರುವುದೆಂಬುದು ಪ್ರಶಂಸನೀಯವಿದೆ. ಪ್ರತಿ ಹಳ್ಳಿಯಿಂದ ಕುಡುಕತನದ ಘೋರಹಾನಿಯು ನಿವಾರಿಸಲ್ಪಟ್ಟು ಬಡಬಗ್ಗರ ಮನೆಯ ಸ್ತ್ರೀಯರು ಮಕ್ಕಳು ಪ್ರತಿದಿನವೆಂಬಂತೆ ಪಡುವ ದುಃಖವು ದೂರವಾಗಬೇಕು. ಅದರಿಂದಾಗಿ ಕೋಟಿಗಟ್ಟಲೆ ಹಣವು ಬಡಬಗ್ಗರ ಕೈಯಲ್ಲೇ ಉಳಿದು ಅವರ ಜೀವನವು ಸುಧಾರಿತವಾಗಬೇಕು. ಬಡಬೇಸಾಯಗಾರ ಸ್ತ್ರೀಪುರುಷರು ತಮ್ಮ ಬಿಡುವಿನ ಸಮಯದಲ್ಲಿ ನೂಲು ತೆಗೆದು ಅದನ್ನು ತಮ್ಮ ಸಂಪಾದನೆಯನ್ನು ಹೆಚ್ಚಿಸುವ ಉಪವೃತ್ತಿಯನ್ನಾಗಿ ಮಾಡಿಕೊಳ್ಳಬೇಕು. ಹಳ್ಳಿಹಳ್ಳಿಗಳಲ್ಲಿ ಕುಡಿಯಲು ಬೇಕಷ್ಟು ಶುದ್ಧವಾದ ನೀರಿನ ಅನುಕೂಲತೆಯಿರಬೇಕು. ಸೂಲಗಿತ್ತಿ ಮತ್ತು ವೈದ್ಯಕೀಯಾನುಕೂಲತೆಯಿರಬೇಕೆಂಬ ಹಳ್ಳಿಯ ಉದ್ಧಾರದ ಆ ಮುಂದು ದಿವ್ಯ ಚಿತ್ರವನ್ನು ರಾಜಾಜಿಯವರ ಬಜೆಟಿನ ಭಾಷಣದಿಂದ ಕಲ್ಪಿಸಿಕೊಳ್ಳಬಹುದು. ಅವರೀಗ ಆ ಚಿತ್ರದ ನಕಾಶೆಯನ್ನಷ್ಟೇ ಎಳೆದು ತೋರಿಸಿರುವರು. ಅದನ್ನು ಪರಿಪೂರ್ಣ ಸುಂದರ ಚಿತ್ರವನ್ನಾಗಿ ಮಾಡಲು ಕೆಲವು ವರ್ಷಗಳು ಬೇಕು. ಆ ವರೆಗೆ ಜನರು ತಾಳ್ಮೆಯಿಂದಿದ್ದು, ಸಹಾನುಭೂತಿಯಿಂದ ಕಾಂಗ್ರೆಸ್ ಮಂತ್ರಿಗಳಿಗೆ ತಮ್ಮಿಂದ ಸಾಧ್ಯವಾದ ಸಹಾಯಮಾಡಬೇಕು.

ಮುಖ್ಯ ಮಂತ್ರಿಗಳು ಅಸಾಧಾರಣ ತಾಳ್ಮೆ ಮತ್ತು ಪರಿಶ್ರಮದಿಂದ ಬಜೆಟನ್ನು ತಯಾರಿಸಿರುವರು. ಅದು ಬಹುತೇಕ ತೃಪ್ತಿಕರವಾಗಿದೆ. ಅದರ ತತ್ವಗಳೆಲ್ಲಾ ಸರ್ವಾದರಣೀಯವಿವೆ. ಮತ್ತು ಪ್ರಾಂತದ ಸಾಂಪತ್ತಿಕ ಸ್ಥಿತಿಯು ಸುಭದ್ರವಾಗಿದೆಯೆಂಬುದನ್ನು ಎಸೆಂಬ್ಲಿಯ ಮೆಂಬರರೆಲ್ಲಾ ಒಮ್ಮತದಿಂದ ಒಪ್ಪಿ ಮುಖ್ಯ ಮಂತ್ರಿಗಳನ್ನು ಬಹಳವಾಗಿ ಹೊಗಳಿರುತ್ತಾರೆ. ಕೆಲವರು, ಮದ್ಯಪಾನ ನಿಷೇಧವು ಜಯಶೀಲವಾಗಲಾರದು. ಅದನ್ನು ಇತರ ದೇಶಗಳು ಪ್ರಯೋಗಮಾಡಿ ನೋಡಿ ಬಿಟ್ಟಿರುವವು. ಅದರಿಂದ ಕಳ್ಳಭಟ್ಟಿಯು ಮಾತ್ರ ಹೆಚ್ಚಿ ಸರಕಾರಕ್ಕೆ ಆದಾಯ ನಷ್ಟಮಾತ್ರವಾಗುವುದು. ಇಡೀ ಪ್ರಾಂತದಲ್ಲಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತಂದಲ್ಲಿ ರೂ ಐದೂವರೆಕೋಟಿ ಆದಾಯ ಕಡಿಮೆ ಬೀಳುವುದು. ಇದರಿಂದ ಪ್ರಾಂತದ ಸಾಂಪತ್ತಿಕ ಸ್ಥಿತಿಗೆನೇ ದೊಡ್ಡ ಧಕ್ಕೆಯುಂಟಾಗುವುದು. ಇಡೀ ಪ್ರಾಂತದಲ್ಲಿ ಕೇವಲ ರೂ. 5 ಲಕ್ಷದಷ್ಟರ ಖಾದಿ ತಯಾರಿಸಲ್ಪಡುವಾಗ ಅಂತಹ ಚಿಕ್ಕದಾದೊಂದು ಕೈಗಾರಿಕೆಗೆ ರೂ 2 ಲಕ್ಷ ಸಹಾಯಮಾಡುವುದು ನ್ಯಾಯವಲ್ಲ. ಮತ್ತು ಈ ಹಣವು ದುರ್ವ್ಯಯವಾಗುವ ಸಂಭವ ಹೆಚ್ಚು. ರೈತರ ಸಾಲ ನಿವಾರಣೆ ಮತ್ತು ಕಂದಾಯ ರಿಯಾಯಿತಿಯ ಅತಿ ಜರೂರಿನ ಹಾಗೂ ಪ್ರಾಮುಖ್ಯ ವಿಷಯಕ್ಕೆ ಮುಖ್ಯ ಮಂತ್ರಿಗಳು ಹೆಚ್ಚಿನ ಲಕ್ಷ್ಯಕೊಟ್ಟಿರುವುದಿಲ್ಲ. ಕೈಮಗ್ಗದ ಹೊರತು ಇತರ ವಸ್ತ್ರ ವ್ಯಾಪಾರಿಗಳ ಮೇಲೆ ಲೈಸನ್ಸ್ ಫೀ ಹಾಕಿದುದರಿಂದ ವಸ್ತ್ರವ್ಯಾಪಾರಕ್ಕೆ ಹಾನಿಯುಂಟಾಗುವುದು. ಸರಕಾರಿ ನೌಕರರ ಸಂಬಳವು 1933ರಲ್ಲೊಮ್ಮೆ ಕಡಿಮೆಮಾಡಲ್ಪಟ್ಟಿರುವುದರಿಂದ ಈಗ ಪುನಃ ಕಡಿಮೆಮಾಡುವುದರಿಂದ ನೌಕರರ ಅತೃಪ್ತಿಗೆ ಕಾರಣವಾಗುವುದು. ಇದು ಆಡಳಿತ ದೃಷ್ಟಿಯಿಂದ ಅಪಾಯಕರವಿರುವುದು. ಇದು ಹೊರತು ಇಂಪೀರಿಯಲ್ ಸರ್ವಿಸಿನ ನೌಕರರ ಅತಿ ಹೆಚ್ಚಿನ ಸಂಬಳವನ್ನು ಮುಟ್ಟಲಾಗದೆ ಪ್ರಾಂತಿಕ ಸರ್ವಿಸಿನ ನೌಕರರ ಸಂಬಳ ಮಾತ್ರ ಕಡಿಮೆಮಾಡುವುದು ಸರಿಯಲ್ಲೆಂದೇ ಕೆಲಮಂದಿ ಮೆಂಬರರ ಟೀಕೆಯಾಗಿದ್ದಿತು.

ಶ್ರೀ ರಾಜಗೋಪಾಲಾಚಾರ್ಯರು, ಮೆಂಬರರೆಲ್ಲಾ ಸರ್ವಸಾಮಾನ್ಯವಾಗಿ ಬಜೆಟಿನ ಕುರಿತು ಒಳ್ಳೇ ಅಭಿಪ್ರಾಯ ವಿತ್ತುದಕ್ಕಾಗಿ ಆಭಾರ ಸೂಚಿಸಿ ಟೀಕೆಗಳಿಗೆ ಸಮರ್ಪಕವಾದ ಉತ್ತರವಿತ್ತರು. ಕೈನೂಲಿಗಾಗಿ ಕೊಡಲ್ಪಡುವ ರೂ 2 ಲಕ್ಷದಲ್ಲಿ ಯಾವ ತರದ ದುರ್ವ್ಯಯಕ್ಕೂ ಆಸ್ಪದವಿಲ್ಲ. ಯಾಕೆಂದರೆ ರಾಟೆಯಲ್ಲಿ ನೂತ ನೂಲನ್ನು ಪಡೆದ ಮೇಲೆ ಮಾತ್ರ ಹಣ ಕೊಡಲಾಗುವುದು. ನೂಲುವುದರಿಂದ ಬಡಹೆಂಗಸರು ದಿನವೊಂದರ 3 ಆಣೆ ಪಡೆಯುವಂತಾಗುವುದು. ಇದರಿಂದ ಅವರ ಜೀವನ ನಿರ್ವಾಹಕ್ಕೆ ಬಹಳವಾಗಿ ಸಹಾಯವಾಗುವುದು. ಮದ್ರಾಸ್ ಪ್ರಾಂತದಲ್ಲಿ ಬೇಸಾಯದ ನಂತರ ಪ್ರಾಮುಖ್ಯ ಕೈಗಾರಿಕೆಯೆಂದರೆ ಕೈಮಗ್ಗವು. ಅದರೊಡನೆ ಗಿರಣಿಗಳೀಗ ಮೇಲಾಟ ನಡಿಸಿ ಅದು ನೆಲ ಹಿಡಿದಿರುತ್ತದೆ. ಆದುದರಿಂದ ಅದಕ್ಕೆ ಯಾವುದಾದರೊಂದು ರೀತಿಯ ಆಶ್ರಯವಿತ್ತು ತಲೆಯೆತ್ತುವಂತೆ ಮಾಡುವುದು ಸರಕಾರದ ಕರ್ತವ್ಯ. ಗಿರಣಿ ವಸ್ತ್ರವ್ಯಾಪಾರಿಗಳ ಮೇಲೆ ರೂ. 2 ಮತ್ತು 5ರಂತೆ ಲೈಸನ್ಸ್ ಫೀ ಹೊರಿಸಿದಾಕ್ಷಣ ಅವರಿಗೆ ಅಂತಹ ದೊಡ್ಡ ಹಾನಿಯೇನೂ ಆಗಲಾರದು. ನೌಕರರು ಸಂತೃಪ್ತಿಯಿಂದ ಕೆಲಸ ಮಾಡಿದರೇನೇ ಆಡಳಿತವು ಸಸೂತ್ರವಾಗಿ ನಡೆಯಲು ಸಾಧ್ಯವಿದೆಯೆಂಬುದು ಎಲ್ಲರೂ ಒಪ್ಪತಕ್ಕ ವಿಷಯ. ಆದರೆ ಈಗ ನೌಕರರು ಪಡೆಯುವ ಸಂಬಳಕ್ಕೂ ಜನತೆಯ ಜೀವನ ಪ್ರಮಾಣಕ್ಕೂ ಅಜಗಜಾಂತರವಿದೆ. ಆಡಳಿತ ವೆಚ್ಚವು ತೆರಿಗೆಯ ಪ್ರಮಾಣಕ್ಕನುಗುಣವಾಗಿರಬೇಕು. ಆದುದರಿಂದ ನೌಕರರ ಸಂಬಳದಲ್ಲಿ ನೇಕಡ 2½ ಯಿಂದ 30ರ ವರೆಗಣ ಕಡಿತಮಾಡುವುದರಿಂದೇನೂ ಅನ್ಯಾಯವಾಗಲಾರದು. ಅದರಿಂದ ನೌಕರರಲ್ಲೇನಾದರೂ ಅಂತಹ ಅತೃಪ್ತಿಯುಂಟಾಗಲಾರದು. ಭೂಕಂದಾಯದ ವಿಷಯದಲ್ಲಿ ಮಾರ್ಷ್‌ಬೇಂಕ್ ಕಮಿಟಿಯವರ ವರದಿ ಮತ್ತು ಇನ್ನೂ ಕೆಲವು ವಿಷಯಗಳನ್ನು ಸರಕಾರವು ಪರಿಶೀಲಿಸಿ ಯಾವ ರೀತಿಯಲ್ಲಿ ಕಂದಾಯ ರಿಯಾಯಿತಿಯನ್ನೀಯಬೇಕೆಂಬುದನ್ನು ನಿರ್ಧರಿಸಲಿರುವುದು. ಮದ್ಯಪಾನ ನಿಷೇಧವನ್ನು ಈ ಮೊದಲೇ ಜ್ಯಾರಿಗೆ ತರಬೇಕಿತ್ತು. ಅದರಿಂದ ದೊರೆಯುವ ಉತ್ಪತ್ತಿಯು ಪಾಪಕರವಾದುದು. ಇನ್ನಾದರೂ ಅದನ್ನು ಆದಷ್ಟು ಬೇಗ ನಿಲ್ಲಿಸುವಂತೆ ನೋಡಬೇಕು. ಮದ್ಯಪಾಯಿಯಾದ ಬಡಕುಟುಂಬಗಳ ಸ್ತ್ರೀಯರು ಮತ್ತು ಮಕ್ಕಳು ಅದೆಂತಹ ದುಃಖಕ್ಕೀಡಾಗುವರೆಂಬುದು ನಿತ್ಯಾನುಭವದ ವಿಷಯ. ಇಂತಹ ಹಾನಿಕರ ಅಭ್ಯಾಸವನ್ನು ಅವಶ್ಯಬಿದ್ದರೆ ಕಾನೂನು ಮೂಲಕವಾಗಿಯೇ ನಿಲ್ಲಿಸಬೇಕು. ಹಿಂದುದೇಶದಲ್ಲಿ ಮದ್ಯಪಾನ ನಿಷೇಧವು ಬೇರೆ ದೇಶಗಳಷ್ಟು ಕಷ್ಟ ಸಾಧ್ಯವಾಗಲಾರದು. ಮೆಂಬರರು ಈ ಪ್ರಯೋಗದ ಕುರಿತು ತಮ್ಮ ಸಂದೇಹಗಳನ್ನೇ ಮುಂದೊಡ್ಡದೆ ವಿಶ್ವಾಸದಿಂದ ಸಹಕಾರವನ್ನೀಯಬೇಕೆಂದೇ ಮುಖ್ಯ ಮಂತ್ರಿಗಳಿತ್ತ ಉತ್ತರದ ಮಥಿತಾರ್ಥ. ಅವರೊಡನೆ ಇಡೀ ಪ್ರಾಂತವು ಸಹಾನುಭೂತಿಯುಳ್ಳದಾಗಿ ಅವರ ಜನಹಿತ ಸಾಧನೆಯ ಯೋಜನೆಗಳು ಜಯಶೀಲವಾಗಿ ಕಾಂಗ್ರೆಸಿನ ಕುರಿತು ಜನವಿಶ್ವಾಸವು ಮತ್ತಷ್ಟು ಹೆಚ್ಚುವಂತಾಗುವುದೆಂದು ನಿರೀಕ್ಷಿಸುತ್ತೇವೆ.

## ಸೂಚನೆ

ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡುವಾಗಲೂ ಮನಿಯಾರ್ಡರ್ ಕಳುಹಿಸುವಾಗಲೂ (ಕೂಪನಿನಲ್ಲಿ ಸಹ) ಚಂದಾ ನಂಬ್ರ ಮತ್ತು ವಿಳಾಸವನ್ನು ಬರೆಯಬೇಕಾಗಿದೆ. ಬರೇ ಸಹಿ ಮಾತ್ರ ಹಾಕಿದರೆ ತುಂಬಾ ತೊಂದರೆಯಾಗುತ್ತದೆ. ಜಾಹೀರಾತುದಾರರು ತಮ್ಮ ಜಾಹೀರಾತಿನಲ್ಲಿ ಏನಾದರೂ ಬದಲಾವಣೆ ಇದ್ದರೆ ಒಂದುವಾರ ಮುಂಚಿತ ತಿಳಿಸಬೇಕು. ಹಾಗೆಯೇ ಜಾಹೀರಾತು ನಿಲ್ಲಿಸುವ ಸಂದರ್ಭದಲ್ಲೂ ಒಂದು ವಾರದ ನೋಟೀಸು ಕೊಡಬೇಕೆಂಬುದನ್ನು ಈ ಮೂಲಕ ತಿಳಿಸೋಣಾಗಿದೆ.

ಮೆನೇಜರ್ 'ನವಯುಗ'

ನವಯುಗದಲ್ಲಿ ಬರುವಾರ ಪ್ರಕಟವಾಗುವ

**ಕಥೆಯನ್ನು ನಿರೀಕ್ಷಿಸಿರಿ !**

# ೦೦೦ ಸ್ವದೇಶ-ವಿದೇಶ ೦೦೦

## ಸ್ವದೇಶ

### ವಾಯುವ್ಯ ಗಡಿನಾಡಿನ ಮಂತ್ರಿ ಮಂಡಲದ ರಾಜೀನಾಮೆ

ಇದೇ ತಾ. ೩ರಲ್ಲು ಡಾಕ್ಟರ್ ಖಾನರು ವಾಯುವ್ಯ ಗಡಿನಾಡಿನ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ಸೂಚನೆ ತಂದು ಅದು ೨೭ ಅನುಕೂಲ ಮತ್ತು ೨೪ ಪ್ರತಿಕೂಲ ಮತಗಳಿಂದ ಮಂಜೂರಾಯಿತು. ಆ ಮೇಲೆ ಸರ್. ಅಬ್ದುಲ್ ಕ್ವಾಯುಮ್ ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿರುವುದು. ಇದೇ ತಾ. ೮ರಲ್ಲು ಡಾ| ಖಾನ್ ಸಾಹೇಬರು ಗಡಿನಾಡಿನ ಗವರ್ನರರ ಭೇಟಿ ಮಾಡಿ ೩೫ ಮಿನಿಟುಗಳ ವರೆಗೆ ಮಾತಾಡಿದರು. ಕಾಂಗ್ರೆಸ್ ಮಂತ್ರಿಮಂಡಲವನ್ನು ರಚಿಸುವ ಏರ್ಪಾಡು ನಡೆದಿದೆ. ಇದಕ್ಕಾಗಿ ಗಡಿನಾಡಿಗೆ ಹೋಗಿರುವ ಬಾಬುರಾಜೇಂದ್ರ ಪ್ರಸಾದ್ ಮತ್ತು ಮೌಲಾನ ಅಬ್ದುಲ್ ಕಲಮ್ ಅಜಾದರು ಅಲ್ಲಿಯೇ ಇರುವರು.

### ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆ

ಶ್ರೀ| ಸುಭಾಸ ಚಂದ್ರ ಭೋಸರು ಪಂಡಿತ ಜವಾಹರಲಾಲರೊಡನೆ ಕೇಳಿಕೊಂಡ ಮೇರೆಗೆ ಬರುವ ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯು ಬಂಗಾಳದ ಅನುಕೂಲತೆಗನುಗುಣವಾಗಿ ಅಕ್ಟೋಬರ ಪ್ರಥಮ ಅಥವಾ ಕೊನೆಯ ವಾರದಲ್ಲಿ ಕಲ್ಕತ್ತದಲ್ಲಿ ನಡೆಯಲಿರುವುದೆಂದು ತಿಳಿದು ಬರುತ್ತದೆ

### 2000 ಮನೆಗಳು ಬಿದ್ದು ಹೋದವು

ಮಧ್ಯ ಪ್ರಾಂತದ ಬಿಲಾಸಪುರ ಜಿಲ್ಲೆಯಲ್ಲಿ ಇತ್ತಲಾಗಿ ಬಂದ ನೆರೆಯಿಂದ ೫೫ ಹಳ್ಳಿಗಳಲ್ಲಿ ಸೊತ್ತು ಮತ್ತು ಜಾನುವಾರು ನಷ್ಟವಾಗಿದೆ. ೨೦೦೦ಕ್ಕಿಂತಲೂ ಮಿಕ್ಕಿದ ಮನೆಗಳು ಬಿದ್ದು ಹೋಗಿವೆ. ಅನೇಕರು ನಿರಾಶ್ರಿತರಾಗಿರುತ್ತಾರೆ.

ಇದೇ ತಾ. ೧ರಲ್ಲಿ ಉತ್ತರ ಬಿಹಾರಿನಲ್ಲಿ ಪುನಃ ನೆರೆ ಹಾವಳಿಯಾಗಿದೆ. ಒರಿಸ್ಸ ಮತ್ತು ಅಸ್ಸಾಮ್ ಪ್ರಾಂತಗಳಲ್ಲಿಯೂ ಬಹಳ ಮಳೆ ಬಂದು ನೆರೆ ಹಾವಳಿಯಾಗಿರುತ್ತದೆ.

### ಸಿಡಿ ಮದ್ದಿನ ಸ್ಫೋಟದಿಂದ ಪ್ರಾಣಹಾನಿ

ಇದೇ ತಾ. ೧ರಲ್ಲು ವಾಯುವ್ಯ ಗಡಿನಾಡಿನ ಫೋರ್ಟ್ ಸಂಡೆ ಮೆನ್ ಎಂಬಲ್ಲಿ ಮೋಟರ್ ಲೋರಿಯೊಂದರಲ್ಲಿ ಇದಲ್ಪಟ್ಟಿದ್ದ ಸಿಡಿ ಮದ್ದು ಸ್ಫೋಟವಾಗಿ ಲೋರಿಯಲ್ಲಿ ೮ ಮಂದಿ ಕೊಲ್ಲಲ್ಪಟ್ಟು ೧೦ ಮಂದಿಗೆ ಬಹಳ ಪೆಟ್ಟಾಗಿರುವುದು. ಈ ಸ್ಫೋಟದಿಂದ ಇಡೀ ಪಟ್ಟಣವೇ ಕಂಪಿಸಿತ್ತು. ಜನರೆಲ್ಲಾ ಭೂಕಂಪವಾಯಿತೆಂದೆಣಿಸಿದ್ದರು. ಲೋರಿಯಲ್ಲಿದ್ದವರೆಲ್ಲಾ ಮೇಲಕ್ಕೆ ಅತಿ ಎತ್ತರಕ್ಕೆ ಸೆಯಲ್ಪಟ್ಟು ಕೂಡಲೇ ಕೊಲ್ಲಲ್ಪಟ್ಟಿರುವರಲ್ಲದೆ ಹತ್ತಿರ ಹೋಗುವವರಿಗೂ ಪೆಟ್ಟಾಗಿರುವುದು. ಮದುವೆ ಮಾಡಿಕೊಳ್ಳಲು ಹೋಗುತ್ತಿದ್ದವನೊಬ್ಬನು ಈ ಲೋರಿಯ ಬಳಿ ಹಾದು ಹೋಗುತ್ತಿದ್ದಾಗ ಸ್ಫೋಟಕ್ಕೆ ಸಿಕ್ಕಿ ಕೊಲ್ಲಲ್ಪಟ್ಟಿರುವನು.

### ಅಂಡಮಾನ ಕೈದಿಗಳು

ಅಂಡಮಾನ ಕೈದಿಗಳು ತಮಗೆ ಹಿಂಸೆಯಲ್ಲಿ ವಿಶ್ವಾಸವಿಲ್ಲೆಂದು ಮಹಾತ್ಮ ಗಾಂಧಿಜಿಯವರಿಗೆ ತಿಳಿಸಿರುವುದರಿಂದ ಅವರನ್ನು ಬಿಡುಗಡೆ ಮಾಡಬೇಕೆಂದು ಗಾಂಧಿಜಿಯವರು ಬಂಗಾಳದ ಪ್ರಧಾನಮಂತ್ರಿಗಳಿಗೆ ತಂತಿ ಕೊಟ್ಟಿದ್ದರಿಂದ ಒಳ್ಳೇ ಪರಿಣಾಮವಾಗಿದೆ. ಈ ಕುರಿತು ಇದೇ ತಾ. ೮ರಲ್ಲಿ ಬಂಗಾಳ ಮಂತ್ರಿಮಂಡಳದ ಸಭೆಯೊಂದು ನಡೆಯಿತು. ಇದೇ ತಾ. ೧೨ ಅಥವಾ ೧೩ರಲ್ಲಿ ಬಂಗಾಳದ ಎಲ್ಲಾ ಪಕ್ಷಗಳ ಪರಿಷತ್ತೊಂದು ನಡೆದು ಅಂಡಮಾನ್ ಕೈದಿಗಳ ಪ್ರಶ್ನೆಯನ್ನು ವಿಚಾರಿಸಲಾಗುವುದು

### ಪಂಡಿತ ನೆಹರುಗಳು

ಇದೇ ತಾ. ೮ರಲ್ಲು ಪಟ್ಟಿ ಎಂಬ ಹಳ್ಳಿಗೆ ಹೋಗಿ ರಾಷ್ಟ್ರೀಯ ಧ್ವಜಾರೋಹಣ ಸಮಾರಂಭ ನಡಿಸಿ ೩೦,೦೦೦ ಕಿಸನರ ಸಭೆಯೊಂದರಲ್ಲಿ ಭಾಷಣವಿತ್ತರು. ಆ ಮೇಲೆ ರಾಜಪುರ ಎಂಬಲ್ಲಿಗೆ ಹೋಗಿ ಅಲ್ಲಿ ನೆರೆದಿದ್ದ ೫೦,೦೦೦ ಕಿಸನರಿಗೆ, ಸರಕಾರದ ಮತ್ತು ತಾಲೋಕುದಾರರ ಉದ್ಧಟತನವನ್ನೆದುರಿಸಲು ಕಿಸನರೆಲ್ಲಾ ಪ್ರಬಲ ಸಂಘಟನೆಯುಳ್ಳವರಾಗಬೇಕೆಂದರು. ಅನಂತರ ಪ್ರತಾಪಗಡಕ್ಕೆ ಹೋಗಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಲ ಮಾನಪತ್ರಗಳನ್ನು ಸ್ವೀಕರಿಸಿದರು.

### ಎಸೆಂಬ್ಲಿ ಸಭೆಯ ಬಳಿ ನೂಲುವ ಪ್ರದರ್ಶನ

ಇದೇ ತಾ ೩ರಲ್ಲು ಮದ್ರಾಸು ಅಸೆಂಬ್ಲಿ ಸಭಾ ಸದನದ ಒಂದು ಕೋಣೆಯಲ್ಲಿ ಮುದುಕ ಸ್ತ್ರೀಯೊಬ್ಬಳು ಕುಳಿತು ನೂಲುವ ಪ್ರದರ್ಶನ ನಡಿಸುತ್ತಿದ್ದಳು. ಮಂತ್ರಿಗಳೂ ಎಸೆಂಬ್ಲಿ ಮೆಂಬರರೂ ಇದನ್ನು ನೋಡಿ, ಚರ್ಕದಲ್ಲಿ ಎಷ್ಟು ನಾಜೂಕಾದ ನೂಲನ್ನು ತೆಗೆಯಬಹುದೆಂಬುದನ್ನು ಸ್ವತಃ ನೋಡುವಂತೆ ಈ ಪ್ರದರ್ಶನವನ್ನು ನಡೆಸಲಾಗಿತ್ತು.

### ಸೇನಾವೆಚ್ಚ ಕಡಿಮೆಮಾಡಬೇಕು

ಇದೇ ತಾ ೪ರಲ್ಲು ಕೇಂದ್ರ ಎಸೆಂಬ್ಲಿಯಲ್ಲಿ ಸೇನಾವೆಚ್ಚವನ್ನು ಇಳಿಸಬೇಕೆಂಬ ಸೂಚನೆಯು ೭೦ ಅನುಕೂಲ ಮತ್ತು ೪೭ ಪ್ರತಿಕೂಲ ಮತಗಳಿಂದ ಮಂಜೂರಾಗಿರುವುದು. ೧೧ ಪ್ರಾಂತಗಳಲ್ಲಿ ೭ ಪ್ರಾಂತಗಳು ತಮಗೆ ಬ್ರಿಟಿಷ್ ಸೈನಿಕರು ಅವಶ್ಯವಿಲ್ಲೆಂದು ಹೇಳಿರುವರು. ಇವರನ್ನು ಹಿಂತೆಗೆದರೆ ರೂ. ೧೦ಕೋಟಿ ಉಳಿತಾಯವಾಗುವುದು. ಆದರೆ ಅದು ಸಾಧ್ಯವಿಲ್ಲೆಂದು ಸರಕಾರವು ಸ್ಪಷ್ಟವಾಗಿ ತಿಳಿಸಿರುವುದು

## ವಿದೇಶ

### ಚೀನಾಜಾಪಾನು ಯುದ್ಧ 3000ಮಂದಿ ನಾಗರಿಕರು ಕೊಲ್ಲಲ್ಪಟ್ಟರು

ಚೀನೀಯರ ಕಡೆಯಿಂದ ಬಂದ ವರ್ತಮಾನದ ಮೇರೆಗೆ, ಜಾಪಾನಿನ ಆಧೀನದ ಮುಂಚೂಕು ಸೇನೆಯ ಇಡೀ ಪಟ್ಲಾಮ್ ಒಂದು ಚೀನೀಯರ ಕಡೆಗೆ ಸೇರಿರುವುದು. ಇದರಿಂದ ಜಾಪಾನರು ಇನ್ನು ಮಂಚೂಕು ಸೈನ್ಯದ ಮೇಲೆ ಅವಲಂಬಿಸಿಕೊಳ್ಳದಂತಾಗಿದೆ

ಆಗೋಸ್ತು ತಾ. ೨೩ರಲ್ಲು ಶಾಂಘಾಯಿಯ ಮೇಲೆ ಜಾಪಾನೀ ವಿಮಾನಗಳು ಎರಡು ಸಲ ನಡಿಸಿದ ಧಾಳಿಯಿಂದ ೩೦೦೦ಮಂದಿ ನಾಗರಿಕರು ಕೊಲ್ಲಲ್ಪಟ್ಟಿರುವರು. ಜಾಪಾನು ದೀರ್ಘ ಕಾಲದ ಯುದ್ಧಕ್ಕೇಗೆ ಸಿದ್ಧತೆ ಮಾಡುತ್ತಿರುವುದು. ೧೩ ಮಿಲ್ಯ ಪವನುಗಳನ್ನು ಪುನಃ ಯುದ್ಧಕ್ಕಾಗಿ ವಿನಿಯೋಗಿಸಲಾಗುವುದು. ಜಾಪಾನಿನ ಸಂಪತ್ತು, ವ್ಯಾಪಾರ, ಕೈಗಾರಿಕೆ ಹಡಗ ಕಂಪೆನಿಗಳ ಮೇಲೆಲ್ಲಾ ಸರಕಾರಕ್ಕೆ ಸಂಪೂರ್ಣ ಅಧಿಕಾರವೀಯುವ ಕಾನೂನು ಪಾರ್ಲಿಮೆಂಟಿನಲ್ಲಿ ಮಂಜೂರಾಗಲಿರುವುದು. ಯುದ್ಧವು ಹೆಚ್ಚು ಕಾಲ ನಡೆದರೆ ಚೀನದಲ್ಲಿನ ಜಾಪಾನೀ ಸೈನಿಕರಿಗಾಗಿ ಅಪಾರ ಹಣ ಬೇಕಾಗುವುದು. ಈಗಲೇ ಬಹಳ ಕಠಿಣಾವಸ್ಥೆಯಲ್ಲಿರುವ ಜಾಪಾನಿನ ಸಾಂಪತ್ತಿಕ ಸ್ಥಿತಿಯು ಆಗ ಬಹಳವಾಗಿ ಕೆಟ್ಟುಹೋಗಿ ಅಪಾಯಕ್ಕೆ ಕಾರಣವಾಗುವುದೆಂದು ಜಾಪಾನಿನ ವ್ಯಾಪಾರ ವೃತ್ತ ಉದ್ಯಮಗಾರರಲ್ಲಿ ಚಿಂತೆ ಹುಟ್ಟಿರುವುದು.

ಸೋವಿಯೆಟ್ ಸರಕಾರವು ಕಳುಹಿಸಿದ [illegible] ವಿಮಾನಗಳೀಗ ಶಾಂಘಾಯಿಯಲ್ಲಿ [illegible] ಲಮಂದಿ ಹೋರಾಡುತ್ತಿವೆ. 250ವಿಮಾನಗಳು, 100ತುಪಾಕಿಗಳು ಮತ್ತು 150ವಿಮಾನ ಛೇದಕ ತುಪಾಕಿಗಳು ಕಳುಹಿಸಲ್ಪಡುತ್ತಿರುವವೆಂದು ಜಾಪಾನೀ ಕಡೆಯ ಸುದ್ದಿ.

ಇದೇ ತಾ. 3ರಲ್ಲು ಶಾಂಘಾಯಿಯಲ್ಲಿ ಭೀಕರ ತುಪಾಕಿ ಯುದ್ಧವು ನಡೆದು ಇತ್ತಂಡದಲ್ಲಿಯೂ ಸಾವಿರಾರು ಮಂದಿ ಹತರಾಗಿರುವರು. ಹಲವು ಕಟ್ಟಡಗಳು ಸುಟ್ಟುಹೋಗಿರುವವು. ಚೀನೀಯರು ವೀರಾವೇಶದಿಂದ ಕಾದಾಡಿ ಜಾಪಾನನ್ನು ತಡೆಗಟ್ಟಿರುವರು.

ಪೈಪಿಂಗಿನ ಬಳಿಯ ವಿಶ್ವವಿದ್ಯಾಲಯವೊಂದರ 200ವಿದ್ಯಾರ್ಥಿಗಳನ್ನು ಜಾಪಾನರು ಕೊಲೆಮಾಡಿರುವರು

### ಜಲಾಂತರ್ಗಾಮಿ ನಾವೆಯ ಹಾವಳಿ

ಇತ್ತಲಾಗಿ ಮೆಡಿಟರೇನಿಯನ್ ಸಾಗರದಲ್ಲಿ ವಿಶೇಷವಾಗಿ ಸ್ಪೈನಿನ ಕರಾವಳಿಯಲ್ಲಿ ಜಲಾಂತರ್ಗಾಮಿ ನಾವೆಗಳು ಹಲವು ಹಡಗಗಳನ್ನೊಡೆದು ಮುಳುಗಿಸಲೆತ್ನಿಸಿರುವುವು. ತಾ ೨ ಮತ್ತು ೩ರಲ್ಲು ಎರಡು ಸೋವಿಯೆಟ್ ಹಡಗಗಳು ಮುಳುಗಿಹೋಗಿರುವವು. ಬ್ರಿಟಿಷ್ ಯುದ್ಧ ನಾವೆಯೊಂದರ ಮೇಲೂ ಜಲಾಂತರ್ಗಾಮಿ ನಾವೆಯೊಂದು ಧಾಳಿನಡಿಸಿಹಾವಳಿಮಾಡಿರುವುದು. ಈ ಯುದ್ಧ ನಾವೆಯು ಜಲಾಂತರ್ಗಾಮಿ ನಾವೆಯ ಮೇಲೆ ಗುಂಡು ಹಾರಿಸಿರುವುದೆಂದೂ ಅದರ ಪರಿಣಾಮವಾಗಿ ಅದು ಮುಳುಗಿಹೋಗಿರುವುದೆಂದೂ ತಿಳಿದು ಬರುತ್ತದೆ. ಇತರ ರಾಷ್ಟ್ರಗಳ ಕೆಲವು ಹಡಗಗಳೂ ಮುಳುಗಿಸಲ್ಪಟ್ಟಿವೆ. ಇವರಿಂದ ರಷ್ಯಾ, ಇಂಗ್ಲೆಂಡ್ ಮತ್ತು ಫ್ರಾನ್ಸಿನವರೆಲ್ಲಾ ಉದ್ವೇಗವುಂಟಾಗಿದೆ. ಜಲಾಂತರ್ಗಾಮಿ ನಾವೆಗಳು ಇಟಲಿಯವೆಂದು ನಂಬಲಾಗಿದೆ. ರಷ್ಯದ ಪತ್ರಿಕೆಗಳು ಇಟಲಿಯನ್ನು ತೀವ್ರವಾಗಿ ನಿಷೇಧಿಸುತ್ತವೆ.

### ಚಕ್ರವರ್ತಿಗಳ ಸಂದರ್ಶನ

ಬ್ರಿಟಿಷ್ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರು ೧೯೩೮-೩೯ನೇ ಚಳಿಗಾಲದಲ್ಲಿ ಹಿಂದುದೇಶವನ್ನು ಸಂದರ್ಶಿಸಲಿರುವರೆಂದೂ ಆ ಸಮಯದಲ್ಲೇ ಡಿಲ್ಲಿದರ್ಬಾರು ನಡೆಯಲಿರುವುದೆಂದೂ ತಿಳಿದು ಬರುತ್ತದೆ


## ಜಗನ್ಮೋಹಿನೀ (ಧರ್ಮವಿಜಯ)

ಲೇಖಕರು—ಪಂಡಿತ ಎಚ್. ಶಿಮಾಚಾರ್ಯ.

**ಇದೊಂದು ಮನೋಹರವಾದ ಕಲ್ಪಿತ ಕಾದಂಬರಿ. ಧರ್ಮಕ್ಕೇ ಜಯವೆಂಬುದನ್ನು ಮನಗಾಣಿಸುವ ಗ್ರಂಥ.**

ಪುಟಗಳು ೨೦೩ -- ಬೆಲೆ ೧-೦-೦

**ಚಿತ್ತಾಕರ್ಷಕ ಕಥಾವಸ್ತು! ಸರಳವಾದ ಶೈಲಿ!!**

ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇಬೇಕಾದ ಪುಸ್ತಕ.

ದೊರೆಯುವ ಸ್ಥಳ.

**ನವಭಾರತ ಬುಕ್ ಡಿಪೊ, ಉಡುಪಿ**

ವಿ ಸೂ.—ವ್ಯಾಪಾರಸ್ಥರಿಗೆ ಧಾರಾಳ ಡಿಸ್ಕೌಂಟು



## ಮಂಗಳೂರು ಚಂದಾದಾರರಲ್ಲಿ

ತಮ್ಮ ಚಂದಾಹಣ ಬಾಕಿ ಇರುವ ನಮ್ಮ ಮಂಗಳೂರಿನ ಚಂದಾದಾರರು ಬಾಕಿ ಇರುವ ಮತ್ತು ಮುಂದಿನ ವರ್ಷದ ಚಂದಾಹಣವನ್ನು ದಯವಿಟ್ಟು ಆದಷ್ಟು ಬೇಗನೆ ಕೆನರಾ ಛಾಪಖಾನೆಯ ಮೆನೇಜರರೊಡನೆ ಕೊಡಬೇಕಾಗಿ ವಿನಂತಿ.

ಮಂಗಳೂರಲ್ಲಿ ಕೆನರಾ ಛಾಪಖಾನೆಯಲ್ಲಿ **'ನವಯುಗ'ದ ಪ್ರತಿಗಳು ದೊರೆಯುತ್ತವೆ.**

ಮೆನೇಜರ್, ನವಯುಗ.



# Loans & Advances

ON THE SECURITY OF GOLD, JEWELS AND OTHER VALUABLES ALWAYS AVAILABLE AT MODERATE RATES

THE UDIPI BANK LTD.

UDIPI.

# ನಮ್ಮ ಕರ್ನಾಟಕ

**ಬೆಂಗಳೂರು**—ಬೆಂಗಳೂರಿನಲ್ಲಿರುವ ಏಷ್ಯಾಟಿಕ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಪ್ರಾಂತೀಯ ಸುಪರಿಂಟೆಂಡೆಂಟರಾದ ಶ್ರೀ ಎಚ್ ವೆಂಕಟರಾಮಯ್ಯನವರು ಕಳೆದ ತಾ ೨೧ರಲ್ಲಿ, ಹೈದರಾಬಾದ್ ಡಿವಿಜನ್ನಿನ ಆನರರಿ ಸೆಷನ್ ಜಡ್ಜರಾದ ಶ್ರೀ ರಾಜಾ ಪಿಂಗ್ಲೆ ವೆಂಕಟರಾಮರೆಡ್ಡಿಯವರು ಏಷ್ಯಾಟಿಕ್ ಕಂಪೆನಿಯ ಡೈರೆಕ್ಟರರಾಗಿ ಆರಿಸಿ ಬಂದ ಸಂತೋಷ ಸೂಚನಾರ್ಥವಾಗಿ ತಮ್ಮ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು ಈ ಸಮಾರಂಭಕ್ಕೆ ಸುಮಾರು ಒಂದು ನೂರು ಜನ ಮಹನೀಯರು ಬಂದಿದ್ದು, ಯೋಗ್ಯ ರೀತಿಯಿಂದ ನಡೆಯಿತು

ಡಾ| ಎನ್ ಎಸ ಹರ್ಡೀಕರರು ದೇಹಾರೋಗ್ಯದ ಸಂಬಂಧ ಈ ತಿಂಗಳ ೧೫ನೇ ತಾರೀಕಿಗೆ ಬೆಂಗಳೂರಿಗೆ ಬರಲಿದ್ದಾರೆಂದು ತಿಳಿಯ ಬರುತ್ತದೆ.

ದಿವಾನರು ಬೆಂಗಳೂರಿಗೆ ಆಗಮಿಸುವಾಗ ರೈಲ್ವೇ ಸ್ಟೇಶನಿನ ಹಾಗೂ ಆಸುಪಾಸಿನ ರಸ್ತೆಗಳಲ್ಲಿ ಬಲವಾದ ಪೋಲೀಸು ಸಿಬ್ಬಂದಿಯನ್ನು ಇಟ್ಟಿದ್ದರಂತೆ

**ಮೈಸೂರು**—ರಾಜ ಕುಮಾರರಾದರೂ ಸಾಧಾರಣ ವಿದ್ಯಾರ್ಥಿಗಳಂತೆಯೇ ಮಹಾರಾಜಾ ಕಾಲೇಜಿನಲ್ಲಿ ಎಲ್ಲರೊಡನೆ ಕಲೆತು ಕಲಿಯುತ್ತಿರುವ ಶ್ರೀ ಜಯ ಚಾಮರಾಜ ಒಡೆಯರವರು ಕಳೆದ ವಾರ ವಿಶ್ವವಿದ್ಯಾಲಯದ ಇತಿಹಾಸ ಸಂಘದ ಆಶ್ರಯದಲ್ಲಿ ಕಾಲೇಜಿನ ಮುಖ್ಯಾಧಿಕಾರಿಗಳಾದ ಮಿ| ರೋನೋರವರ ಅಧ್ಯಕ್ಷತೆಯಲ್ಲಿ "ಪೌರ್ವಾತ್ಯ ರಾಷ್ಟ್ರಗಳ ಸ್ಥಿತಿಗತಿಗಳ ಸೂಕ್ಷ್ಮ ವಿಮರ್ಶೆ" ಎಂಬುದರ ಕುರಿತು ಒಂದು ಅಮೋಘ ಭಾಷಣವಿತ್ತರು

**ದಾವಣಗೆರೆ**—ಇಲ್ಲಿ ಕೂಲಿಯಾಳಾಗಿ ಕೆಲಸ ಮಾಡುತ್ತಿದ್ದ ಅಲಪ್ಪನೆಂಬ ತರುಣನು ತನ್ನ ಚಿಕ್ಕ ತಾಯಿಯನ್ನು ಕರೆಕೊಂಡು ತನ್ನೂರಾದ ಬಸವಾಪುರಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ದರೋಡೆಖೋರರು ಅವರ ಮೇಲೇರಿ ಬಂದು ಅವರಲ್ಲಿದ್ದ ಹತ್ತಿಪ್ಪತ್ತು ರೂಪಾಯಿಗಳ ಒಡವೆಗಳನ್ನು ಅಪಹರಿಸಿಕೊಂಡು ಓಡಿರುವರ ಪೋಲೀಸರು ತನಿಖೆ ನಡಿಸುತ್ತಿದ್ದಾರೆ.

ಊಹೋರಿನಲ್ಲಿ ಒಂದು ಮಹತ್ತಾದ ಗೋವಧ ಮಂದಿರವನ್ನು ಇಂಡಿಯಾ ಸರಕಾರದವರು ತೆರೆಯಲಿದ್ದಾರೆಂಬುದನ್ನು ಕೇಳಿ ಇಲ್ಲಿಯ ಪ್ರಾಣಿದಯಾ ಪ್ರಚಾರ ಸಂಘದವರು ವ್ಯಾಸರಾಯರಿಗೆ ನಿಷೇಧ ಸೂಚಕ ಮನವಿಯೊಂದನ್ನು ಕಳಿಸಿರುವರು

**ಬಿಜಾಪುರ**—ಅಖಿಲ ಭಾರತ ಕಿಸಾನ್ ಸಂಘದ ಕಾರ್ಯದರ್ಶಿಗಳಾದ ಶ್ರೀ ಇಂದ ಲಾಲ ಯಾಜ್ಞಿಕರು ಇಲ್ಲಿಯ ಯೂನಿಯನ್ ಕ್ಲಬ್ಬಿನಲ್ಲಿ ಕೃಷಿಕ ಚಳವಳಿ ಕುರಿತು ಬೋಧಪ್ರದ ಭಾಷಣವಿತ್ತರು

ಕೇಂದ್ರ ಮಂತ್ರಿಗಳು ಇಲ್ಲಿಯ ಬರಗಾಲದ ಕೆಲಸವನ್ನು ನಿರೀಕ್ಷಿಸಲಿಕ್ಕೆಂದು ತಾ ೧೦ಕ್ಕೆ ಇಲ್ಲಿಗೆ ಕಾಂಗ್ರೆಸ್ ಕಮಿಟಿಯ ಅತಿಥಿಗಳಾಗಿ ಬರಲಿದ್ದಾರೆ.

**ಅಥಣಿ**—ಇಲ್ಲಿಯ ನಗರ ಸಭೆಯವರು ತಮ್ಮ ಚೌಕದ ಒಳಗಿರುವ ಎಲ್ಲಾ ಬಾವಿಗಳಲ್ಲೂ ಹರಿಜನರು ನಿರಾತಂಕವಾಗಿ ನೀರು ಸೇದಬಹುದೆಂಬ ಸ್ತುತ್ಯ ನಿರ್ಧಾರ ಮಾಡಿರುವರಾಗಿ ತಿಳಿದುಬರುತ್ತದೆ

**ಸಿ.ಸಿ.F**—ಉದರ ಶೂಲೆಯಿಂದ ನರಳುತ್ತಿದ್ದ ಒಬ್ಬ ಬಡ ಫಕೀರನು ಕಳೆದ ವಾರ ಬಾವಿಯಲ್ಲಿ ಬಿದ್ದು ಪ್ರಾಣ ಕಳಕೊಂಡಿರುವನು. ಉದರ ಶೂಲೆಯ ಬಾಧೆ ತಡೆಯಲಾಗದೆ ಹೀಗೆ ಮಾಡಿರಬೇಕೆಂದು ಜನರ ಊಹೆ

ಇಲ್ಲಿಯ ನಗರ ಸಭಾ ಚುನಾವಣೆಗೆ ಶ್ರೀ ಸರದಾರ ವೀರಪ್ಪ ಗೌಡಾ ಪಾಟೀಲರ ಪ್ರಚಾರ ಕಾರ್ಯದಿಂದ ಕಾಂಗ್ರೆಸಿನವತಿಯಿಂದ ನಿಂತ ೧೦ ಮಂದಿಗಳೂ ಅವಿರೋಧಿಗಳಾಗಿ ಆಯ್ದಿಸಲ್ಪಟ್ಟಿದ್ದಾರೆ ಕಾಂಗ್ರೆಸಿಗೆ ವಿರೋಧವಾಗಿ ನಿಂತ ಹುರಿಯಾಳುಗಳೆಲ್ಲ ತಮ್ಮ ಅರ್ಜಿಗಳನ್ನು ವಾಪಾಸು ತೆಗೆದುಕೊಂಡಿದ್ದಾರೆ

**ಕೊಡಗು**—ಇಂಡಿಯಾ ಸೇನಾಖಾತೆಯ ವಾರ್ ಬ್ಲಾಕ್ ಆಫೀಸರ ಪದವಿಯಿಂದ ನಿವೃತ್ತರಾಗಿದ್ದ ಕ್ಯಾಪ್ಟನ್ ಪೂಣ್ಣಪ್ಪನವರು ತಿರುವಾಂಕೂರು ಸೇನೆಯ (ನಾಯರ್ ಬ್ರಿಗೇಡ್) ಕಮಾಂಡೆಂಟರಾಗಿ ನಿಯಮಿಸಲ್ಪಟ್ಟಿರುವರು

**ಬೆಳಗಾವಿ**—ಮುಂಬಯಿ ಸರಕಾರದ ಒಳಾಡಳಿತ ಸಚಿವರಾದ ಶ್ರೀ ಎ ಕೆ ಮುನ್ಷಿಯವರು ಇಲ್ಲಿಗೆ ಬರಲಿದ್ದಾರೆಂದು ತಿಳಿದು ಬರುತ್ತದೆ

ಇಲ್ಲಿಯ ದೈನಿಕ ಹಾಗೂ ಸಾಪ್ತಾಹಿಕ ಪತ್ರಿಕೆಯಾದ 'ಸಂಯುಕ್ತ ಕರ್ನಾಟಕ'ದ ಕಾರ್ಯಾಲಯವನ್ನು ಹುಬ್ಬಳ್ಳಿಗೆ ಒಯ್ದಿರುವರು.

ಭಾರತ ಸೇವಕ ಸಂಘದ ಕುಮಾರೀ ಶಾಂತಾ ಎಂ ಎ ಇವರು ಈ ಊರಲ್ಲಿ ಹಲವೆಡೆ ಉಪನ್ಯಾಸಗಳನ್ನು ಕೊಟ್ಟರು ಮಹಿಳಾ ಜಾಗೃತಿ ಮತ್ತು ಮಹಿಳಾ ಸಂಘಗಳನ್ನು ಸ್ಥಾಪಿಸುವಂತೆ ಸಂಘಟನೆಯನ್ನುಂಟು ಮಾಡುವುದೇ ಅವರ ಗುರಿ ಅವರು ಇಡೀ ಕರ್ನಾಟಕದಲ್ಲೆಲ್ಲ ಸಂಚರಿಸಲಿದ್ದಾರೆಂದು ತಿಳಿದುಬರುತ್ತದೆ

ಬೆಳಗಾವಿಯ ಲೋ ಬೋರ್ಡಿನವರು ಈ ಕೆಳಗಿನ ನಿರ್ಣಯಗಳನ್ನು ಪಾಸು ಮಾಡಿರುತ್ತಾರೆ (೧) ಲೋ ಬೋರ್ಡಿನ ಮೇಲೆ ರಾಷ್ಟ್ರಧ್ವಜವನ್ನೇರಿಸುವುದು (೨) ಲೋ. ಬೋ ಶಾಲೆಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿಸಬೇಕು.

**ಮುಂಬಾಯಿ**—ಮುದ್ದಣ ವಾಚನಾಲಯದ ವಿಳಾಸವನ್ನು ತಾ ೬-೯-೩೭ರಿಂದ ೨೨ Police court lane fortಗೆ ಬದಲಾಯಿಸಿದೆಯೆಂದೂ ಪತ್ರವ್ಯವಹಾರಗಳನ್ನು ಆ ವಿಳಾಸಕ್ಕೇ ಮಾಡಬೇಕೆಂದೂ ವಾಚಕರು ಅಲ್ಲಿಗೇ ಬಂದು ಎಂದಿನಂತೆ ಪ್ರಯೋಜನ ಪಡೆಯಬೇಕೆಂದೂ ಗ್ರಂ. ಜ ಕಾರ್ಯದರ್ಶಿಗಳು ತಿಳಿಸುತ್ತಾರೆ

ಮೊಗವೀರ ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರವು ಯಾವ ಜಾತಿ ಮತ ಭೇದವಿಲ್ಲದೆ ಸರ್ವರಿಗೂ ಧರ್ಮಾರ್ಥವಾಗಿ ತೆರೆಯಲ್ಪಟ್ಟಿರುವುದೆಂದೂ ಮೇಲಿನ ಎರಡೂ ವಾಚನಾಲಯಗಳ ಉನ್ನತಾವಸ್ಥೆಗೆ ಕನ್ನಡಿಗರು ನೆರವಾಗಬೇಕೆಂದೂ ಶ್ರೀ ಜ ಸಿ. ಪುತ್ರನರು ಬರೆಯುತ್ತಾರೆ

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಪ್ರಕಟನೆ ನಂ ೩೧

## ಸರಕಾರದಿಂದ ಆಕ್ಷೇಪಾರ್ಹವಾದ ಪುಸ್ತಕಗಳು

೧೯೦೮ರಿಂದ ಇವತ್ತಿನ ವರೆಗೆ ಸರಕಾರದವರು ಅನೇಕ ಪುಸ್ತಕಗಳನ್ನು ಜಪ್ತಿ ಮಾಡಿರುವರು. ಅದರೆ ಇದೀಗ ಕಾಂಗ್ರೆಸ್ ಮಂತ್ರಿಗಳು ಪುಸ್ತಕಗಳ ಮೇಲೆ ಈ ಪ್ರಕಾರದ ನಿರ್ಬಂಧವು ಇರಕೂಡದೆಂದು ಗೊತ್ತು ಮಾಡಿರುವರು ಕಾರಣ, ಕನ್ನಡದಲ್ಲಿ ಈ ವತ್ತಿನ ವರೆಗೆ ಜಪ್ತಾದ ಪುಸ್ತಕಗಳ ಹೆಸರುಗಳನ್ನು ಗೊತ್ತಿದ್ದವರು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಗೆ ತಿಳಿಸಿದರೆ ನಾವು ಸರಕಾರದವರ ಕಡೆಗೆ ಬರೆದು ಈ ಸಂಬಂಧವಾಗಿ ತಿಳಿಸುತ್ತೇವೆ

ರಾ ಶ್ರೀ ಹುಕ್ಕೇರಿಕರ,
ಗೌ ಕಾರ್ಯದರ್ಶಿಗಳು
ಧಾರವಾಡ 27–8–1937

(೯ನೇ ಪೇಜಿನಿಂದ ಮುಂದರಿದುದು)

ಕನ ಸಂಬಳವನ್ನೂ ಕೊಡಬೇಕೆಂದಾಯಿತು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಲೆಕ್ಕಾಚಾರದ ವಿಷಯದಲ್ಲಿ ಮಂಗಳೂರಿನ ವಿನೋದಭಾರತ ಪತ್ರಿಕೆಯು ಮಾಡಿರುವ ಆರೋಪಗಳ ವಿಷಯದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಖಟ್ಲೆ ನಡಿಸಬೇಕೋ ಬೇಡವೋ ಎಂಬ ವಿಷಯದಲ್ಲಿ ದೀರ್ಘ ಚರ್ಚೆ ನಡೆಯಿತು ಆ ಕುರಿತು ವಕೀಲರಿತ್ತಿರುವ ಅಭಿಪ್ರಾಯವನ್ನೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿತ್ತಿರುವ ಸಲಹೆಯನ್ನೂ ಓದಿಹೇಳಲಾಯಿತು ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ದಾವೆಮೂಡಬೇಕೆಂಬ ಸೂಚನೆ ತಂದರು ವಿನೋದ ಭಾರತದ ಲೇಖನವು ಮಾನ ನಷ್ಟಕರವಿರುವುದಾದರೂ ಆ ಕುರಿತು ಅಧಿಕಾರಿಕವಾದ ಪ್ರಕಟಣೆಯೊಂದನ್ನ ಪತ್ರಿಕೆಗಳಿಗೆ ಕೊಟ್ಟು ಅದನ್ನು ಅಲಕ್ಷಿಸುವುದೊಳ್ಳೇದೆಂದು ಶ್ರೀ. ಕೆ ಮಹಾಬಲ ಹೆಗ್ಡೆಯರು ಸೂಚಿಸಿ ಶ್ರೀ ಪಿ ವಿ ಉಪಾಧ್ಯಾಯರು ಅನುಮೋದಿಸಿದರು, ಶ್ರೀ ಕೆ ಕೆ ಶೆಟ್ಟಿ ಇದನ್ನು ಸಮರ್ಥಿಸಿದರು ಅವರೆ ಓಟು ತೆಗೆಯುವಾಗ ಈ ಸೂಚನೆಯು ಬಿದ್ದು ಹೋಗಿ ಮಾನ ನಷ್ಟ ದಾವೆಮೂಡಬೇಕೆಂದೂ ಆ ಕುರಿತು ಪರವಾನಗಿಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಬರೆಯಬೇಕೆಂದೂ ಶ್ರೀ ಲಕ್ಷ್ಮೀನಾರಾಯಣನಾಯ್ಕರು ತಂದ ಸೂಚನೆಯು ಬಹುಪಕ್ಷದಿಂದ ಮಂಜೂರಾಯಿತು ಆ ಮೇಲೆ ಗೋವೆ ಸೋಡ್ತಿಯನ್ನು ನಿಷೇಧಿಸುವುದೇ ಮೊದಲಾದ ಕೆಲವು ನಿರ್ಣಯಗಳಾಗಿ ಸಭೆಯನ್ನು ಬರುವ ತಾ 12ನೇ ಆದಿತ್ಯವಾರಕ್ಕೆ ಮಂಗಳೂರಲ್ಲಿ ಪುನಃ ನಡಿಸುವುದೆಂದಾಯಿತು ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯವರು ಸಭಿಕರಿಗೆಲ್ಲಾ ಉಪಾಹಾರವಿತ್ತು ಸತ್ಕರಿಸಿದರು

**ನಿಂಜೂರು ವಿವೇಕಾನಂದ ಸೇವಾ ಸಂಘದ**—'ಶ್ರೀಕೃಷ್ಣಜನ್ಮಾಷ್ಟಮೀ ಉತ್ಸವ'ವು ಕಳೆದ ತಾ ೨೮-೮-೩೭ರಲ್ಲಿ ಶ್ರೀ ನಿಂಜೂರು ರಾಮಯ್ಯ ಶೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿಯವರು ಸಂಘದ ಸದುದ್ದೇಶಗಳನ್ನು ವಿವರಿಸಿ ಇಂದಿನ ವರೆಗೆ ಸಂಘವು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಯಾವ ಯಾವ ರೀತಿಯಲ್ಲಿ ಭಾಗವಹಿಸುತ್ತಿರುವುದೆಂಬುದನ್ನು ಮನಗಾಣಿಸಿ ಮುಂದಣ ಅಭ್ಯುದಯಕ್ಕಾಗಿ ಜನತೆಯ ಬೆಂಬಲವನ್ನು ಕೋರಿದರು, ಶ್ರೀ ನಕ್ರೆ ಶ್ಯಾಮರಾಯ ನಾಯ್ಕರು 'ಧರ್ಮಾವತಾರೀ ಶ್ರೀಕೃಷ್ಣ' ಎಂಬುದರ ಕುರಿತಾಗಿಯೂ ಶ್ರೀ ಸಂಜೀವ ಶೆಟ್ರು 'ಶ್ರೀ ಕೃಷ್ಣನ ಜೀವನದ ಕುರಿತಾಗಿಯೂ ಮತ್ತು ಶ್ರೀ ಎಸ್. ಶ್ಯಾಮಶೆಟ್ರು 'ಕರ್ಮ ರಹಸ್ಯ' ಎಂಬ ವಿಷಯದಲ್ಲಿಯೂ ಸುರಸವಾದ ದೀರ್ಘ ಭಾಷಣಗಳನ್ನಿತ್ತರು ಆ ನಂತರ ಸಭಿಕರಲ್ಲಿ ಹಲವರು ಸಂಘದ ಕಾರ್ಯಕಲಾಪಗಳ ಆದರ್ಶತೆಯನ್ನು ಕೊಂಡಾಡಿ ಮುಂದಣ ಏಳ್ಗೆಯನ್ನು ಹಾರೈಸಿ ಶುಭಾಶಂಸನವಿತ್ತರು, ಕೊನೆಗೆ ಅಧ್ಯಕ್ಷರ ಸಂದರ್ಭೋಚಿತ ಭಾಷಣವಾಗಿ ಧನ್ಯವಾದಗಳ ಅರ್ಪಣೆ ಮಾಡಿ ನಂತರ ಶ್ರೀ ಸಳ್ವಿನಾಸ ಪೈಯವರ ಸುರ ಸಂಕೀರ್ತನೆಯಿಂದ ಸಭೆಯು ಕೊನೆಗೊಂಡಿತು

**ಕಟಪಾಡಿ**:—ಕೇಂದ್ರ ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟ ಏಣಗುಡ್ಡೆ, ಮೂಡಬೆಟ್ಟು, ಕೋಟೆ ಮತ್ತು ಪಟ್ಟೆ ಗ್ರಾಮಗಳಿಗೆ ಒಂದು ಪಂಚಾಯತಿ ಬೋರ್ಡನ್ನು ಸ್ಥಾಪಿಸುವದಕ್ಕೋಸ್ಕರ ತಾ ೩೦-೭-೩೭ರಲ್ಲು ಸ್ಥಳೀಕ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾಕ್ಟರ್ ಕೆ.ಜಿ. ಕಿಣಿಯರ ಅಧ್ಯಕ್ಷತೆಯಲ್ಲಿ ಸರ್ವ ಗ್ರಾಮಸ್ಥರ ಸಭೆ ಜರಗಿ ಸಭಿಕರೆಲ್ಲರೂ ಮೇಲ್ಕಂಡ ಗ್ರಾಮಗಳಿಗೆ ಒಂದೇ ಪಂಚಾಯತಿ ಬೋರ್ಡನ್ನು ಸ್ಥಾಪಿಸುವುದು ಉತ್ತಮವೆಂಬುದಾಗಿ ಅಭಿಪ್ರಾಯ ಪಟ್ಟರೂ ಸಭೆಗೆ ಬರಲಿಕ್ಕಾಗದ ಕೆಲವು ಮಹನೀಯರ ಅಭಿಪ್ರಾಯ ನಿರೀಕ್ಷಣೆಯಿಂದ ಸದರಿ ಸಭೆಯನ್ನು ತಾ ೧೫-೮-೩೭ಕ್ಕೆ ಕೊನೆಯ ತೀರ್ಮಾನಕ್ಕಾಗಿ ಮುಂದರಿಸಿಡಲಾಯಿತು ಕಮಿಟಿಯ ನಿರ್ಣಯದಂತೆ ಪ್ರಕೃತ ಕಟಪಾಡಿ ಸೆಂಟರಿನಲ್ಲಿ ತಾ ೪-೯-೩೭ರಲ್ಲಿ ಶ್ರೀ ಟಿ. ಜನಾರ್ಧನ ಕಿಣಿಯರಿಂದ ಹಿಂದೀಕ್ಲಾಸ್ ತೆರೆಯಲ್ಪಟ್ಟಿತು ಕೇಂದ್ರ ಕಾಂಗ್ರೆಸ್ ಕಮಿಟಿಯವರು ಇದೇ ಸಪ್ಟಂಬರ ಅಂತ್ಯದೊಳಗೆ ೫೦೦ಕ್ಕೆ ಮಿಕ್ಕಿ ಕಾಂಗ್ರೆಸ್ ಮೆಂಬರರನ್ನು ಕೂಡಿಸಬೇಕಾಗಿ ನಿರ್ಣಯಿಸಲ್ಪಟ್ಟ ಮೇರೆಗೆ ಪ್ರತಿಗ್ರಾಮದಿಂದ ಆರಿಸಲ್ಪಟ್ಟ ಕಮಿಟಿ ಮೆಂಬರರು ತಮ್ಮ ತಮ್ಮ ಗ್ರಾಮಗಳಲ್ಲಿ ತಿರುಗಾಡಿ ಟಿಕೇಟಿನ ಮುಖಾಂತ್ರ ಕಾಂಗ್ರೆಸಿಗೆ ಮೆಂಬರರನ್ನು ಸೇರಿಸುವ ಕಾರ್ಯವನ್ನು ಭರದಿಂದ ನಡಿಸುತ್ತಲಿರುವರು. ಮೊದಲಿನ ನಿರ್ಣಯದ ಮೇರೆಗೆ ತಾ ೫-೯-೩೭ರಲ್ಲಿ ಪಾಂಗಾಳ ಗ್ರಾಮಸ್ಥರ ಸಭೆಯು ಪಾಂಗಾಳದೇವಸ್ಥಾನದ ಪರಿಸರದಲ್ಲಿ ಡಾ| ಕೆ.ಜಿ ಕಿಣಿಯರ ಅಧ್ಯಕ್ಷತೆಯಲ್ಲಿ ಜರಗಲ್ಕಾಗಿ ಸದ್ರಿ ಸಭೆಯಲ್ಲಿ ಕಾಂಗ್ರೆಸಿನ ಪತ್ರಗಳನ್ನು ಕಾಂಗ್ರೆಸ್ ಸರಕಾರದ ರಾಜ್ಯಭಾರಕ್ರಮಗಳನ್ನು ವಿವರಿಸಿ ಎಲ್ಲರೂ ಕಾಂಗ್ರೆಸಿಗೆ ಮೆಂಬರರಾಗಿ ಸೇರಬೇಕಾಗಿ ಭಾಷಣಗಳಾದವು. ಪಳ್ಳಿ ಗ್ರಾಮದ ಎರಡನೇ ಸಭೆಯು ತಾ. ೧೨-೯-೩೭ನೇ ಆದಿತ್ಯವಾರ ಘಂಟೆ ೪ಕ್ಕೆ ಬೆಳ್ಳೆ ಬೋರ್ಡ್ ಶಾಲೆಯ ಪರಿಸರದಲ್ಲಿ ಜರಗಬೇಕಾಗಿ ನಿರ್ಣಯಿಸಲ್ಪಟ್ಟಿದೆ.

ಕಟಪಾಡಿ ಕೇಂದ್ರ ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟ ಗ್ರಾಮಗಳ ಮಹಾಜನರು ಆಯಾಯ ಗ್ರಾಮಗಳಿಂದ ಆರಿಸಲ್ಪಟ್ಟ ಕಮಿಟಿ ಮೆಂಬರರ ಮುಖಾಂತರ ಈ ತಿಂಗಳ ಅಂತ್ಯದೊಳಗೆ ಕಾಂಗ್ರೆಸ್ ಟಿಕೇಟನ್ನು ಪಡೆದು ಮೆಂಬರರಾಗಬೇಕಾಗಿ ಕಟಪಾಡಿ ಕೇಂದ್ರ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಗಳಾದ ಶ್ರೀ ಕೊರಗಾಲು ಗಣಪಯ್ಯ ಶೆಟ್ರು ವಿನಂತಿಸುತ್ತಾರೆ.

**ನೋಟೀಸು**—ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಸಭೆಯು ತಾ ೫-೯-೩೭ರಂದು ಜರುಗಿದ್ದು ಬರುವ ಆದಿತ್ಯವಾರ ತಾ ೧೨-೯-೩೭ಕ್ಕೆ ಮಂಗಳೂರು ಕಾಂಗ್ರೆಸ್ ಕಛೇರಿಯಲ್ಲಿ ಮಧ್ಯಾಹ್ನ ಘಂಟೆ ೩ಕ್ಕೆ ಜರಗಿಸುವಂತೆ ಮುಂದರಿಸಲಾಗಿದೆ ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

**ಎಲ್ಲೂರು**—ಇಲ್ಲಿಯ ಪಟೇಲರೂ, ಪಂಚಾಯತ್ ಬೋರ್ಡ್ ಪ್ರೆಸಿಡೆಂಟರೂ ಆಗಿರುವ ಮ. ರಾ ಎಲ್ಲೂರುಗುತ್ತು ಚಂದು ಯಾನೆ ದೊಡ್ಡ ಶೆಟ್ರವರ ಪ್ರಯತ್ನದಿಂದ ಟಪ್ಪಾಲು ಇಲಾಖೆಯವರು ಇದೇ ೧-೯-೩೭ನೇ ಬುಧವಾರ ದಿವಸ ಜನರ ಅನುಕೂಲತೆಗೆ ತಕ್ಕದಾಗಿರುವ ಯೋಗ್ಯ ಕೇಂದ್ರವಾದ ದೇವಸ್ಥಾನದ ಪಕಾರದಲ್ಲಿ ಒಂದು ಟಪ್ಪಾಲು ಕಟ್ಟೆಯನ್ನು ತೆರೆದಿರುವರು.

**ಶಿರ್ವ**— ಕೇಂದ್ರ ಕಾಂಗ್ರೆಸ್ ಕಮಿಟಿ ಸಭೆಯು ೪-೯-೩೭ರಲ್ಲಿ ಜರಗಿ ಪ್ರತಿ ಮೆಂಬರನೂ ಸರದಿ ಮೇರೆಗೆ ಕಮಿಟಿ ನಿರ್ಣಯದಂತೆ ಕಡಿಮೆಯೆಂದರೆ ೧೦-೧೦ಮಂದಿ ಕಾಂ! ಸದಸ್ಯರನ್ನಾದರೂ ಮಾಡಬೇಕೆಂದೂ, ಕಾಂಗ್ರೆಸ್ ಕಾರ್ಯಾಲಯ ಆಫೀಸ್ ಒಂದನ್ನು ನಿಶ್ಚಯಿಸಿಕೊಂಡು ಧ್ವಜಾರೋಹಣ ಮಾಡಿ, ಜನ ಸಾಮಾನ್ಯರಿಗೂ ಮನವಮುಟ್ಟಿ ತಿಳಿಯುವಂತೆ ರಾಜಕೀಯ ವಿಷಯಗಳನ್ನು ಬಿಡಿಸಿ ಹೇಳಬೇಕೆಂದೂ ನಿಶ್ಚಯಿಸಲಾಯಿತು, ೧೬-೯ ೩೭ನೇ ಗುರುವಾರ ಹಗಲು ಮೂರು ಘಂಟೆಗೆ ಸಾರ್ವಜನಿಕ ಸಭೆಯು ಜರಗಲಿಕ್ಕಿದೆ ಡಿ| ಬೋ| ಚುನಾವಣೆಗೆ ಈ ಸರ್ಕಲಿಗೆ ಕೆಥೋಲಿಕ್ ಸೀಟಿಗೆ ಕಾಂಗ್ರೆಸ್ ಉಮೇದವಾರರಾಗಿ ನಿಲ್ಲಲಿರುವ ಮಿ| ಪಾತ್ರಿಯಸ್ ಫೆರ್ನಾಂದೀಸರಿಗೆ ಸಂಪೂರ್ಣ ಬೆಂಬಲವೀಯಬೇಕೆಂದು ಠರಾವಾಯಿತು

## ಟೀಚರ್ ಮೆನೇಜರರ ಸಂಘದ ವಾರ್ಷಿಕ ಸಭೆಗಳು

ನಿಬಂಧನೆ ಮೇರೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ತಾಲೂಕುವಾರು ಟೀಚರ್ ಮೆನೇಜರರ ಶಾಲೆಗಳ ಎಪ್ರುವ್ಡ್ ಲಿಸ್ಟನ್ನು ನಮಗೆ ದಯಪಾಲಿಸಬೇಕಾಗಿ ಕಳೆದ ಮೇ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಾನ್ಯ ಎಜ್ಯುಕೇಶನಲ್ ಕೌನ್ಸಿಲ್ ಪ್ರೆಸಿಡೆಂಟರಿಗೆ ನಾನು ಪತ್ರವನ್ನು ಬರಕೊಂಡದ್ದಾದರೂ ಕಾರಣಾಂತರದಿಂದ ಸದರಿ ಪಟ್ಟಿಯು ನನಗೆ ಸಿಕ್ಕದ್ದರಿಂದ ಕಳೆದ ಆಗೋಸ್ತು ತಾ. 19ರಲ್ಲು ಪುನಃ ಕೌನ್ಸಿಲ್ ಪ್ರೆಸಿಡೆಂಟರಿಗೆ ಬರಕೊಂಡ ಪ್ರಕಾರ ಸದ್ಯದಲ್ಲಿಯೇ ಸದರಿ ಟೀಚರ್ ಮೆನೇಜರರ ಪಟ್ಟಿಯು ಸಿಕ್ಕಬಹುದಾಗಿದೆ. ಈ ಪಟ್ಟಿಯು ಸಿಕ್ಕಿದೊಡನೆಯೇ ಅಂತೂ ಈ ತಿಂಗಳ ಅಖೈರಿ ಒಳಗೆ ಆಯಾ ತಾಲೂಕು ಟೀಚರ್ ಮೆನೇಜರರ ಪಟ್ಟಿಯನ್ನು ಆಯಾಯ ತಾಲೂಕು ಸಂಘದ ಚಾಲಕರಿಗೆ ನಾವು ಕಳುಹಿಸಲಿಕ್ಕಿರುವುದರಿಂದ ಪ್ರತಿ ತಾಲೂಕು ಸಂಘದ ಚಾಲಕರು ಬರುವ ಒಕ್ಟೋಬರ ತಿಂಗಳಲ್ಲಿ ತಂತಮ್ಮ ತಾಲೂಕು ಟೀಚರ್ ಮೆನೇಜರರ ಸಂಘದ ಮಹಾಸಭೆಯನ್ನು ಕರೆಯಬೇಕಾಗಿಯೂ ಸದರಿ ಮಹಾಸಭೆಯ ದಿನವನ್ನು ಮುಂದಾಗಿ ನಮ್ಮ ಅವಗಾಹನೆಗೆ ತಿಳಿಸಬೇಕಾಗಿಯೂ ವಿನಂತಿಸೋಣಾಗುತ್ತದೆ.

ಕೊರಗಾಲು ಗಣಪಯ್ಯ ಶೆಟ್ಟಿ
ಪ್ರೆಸಿಡೆಂಟ್
ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘ

(ಕಳೆದ ಸಂಚಿಕೆಯಿಂದ ಮುಂದರಿದುದು)

ಶಾಸ್ತ್ರೀಯ ಉದಾಹರಣೆಗಳಿಂದ ಪ್ರಕಟವಾಗುವ ಸಾಧುಗಳ ಸ್ವರೂಪವನ್ನು ನಾವು ಈಗಿನ ನಾಮಧಾರಿ ಗುರು ಮಹಂತ ಮಹಾತ್ಮರುಗಳೊಂದಿಗೆ ಹೋಲಿಸಿ ನೋಡಿದರೆ ಭೂವ್ಯಾಕಾಶಗಳ ಅಂತರವು ಕಂಡುಬರುವುದು ಶಾಸ್ತ್ರಗಳ ಅನುಸಾರ ಪರೋಪಕಾರಗಳು ಸಾಧುವಿನ ಸರ್ವೋತ್ಕೃಷ್ಟ ಲಕ್ಷಣಗಳಾಗಿವೆ. ಇದಕ್ಕೆ ವಿಪರೀತವಾಗಿ ಇಂದಿನ ಸಾಧುಗಳು ಧನ ಸಂಗ್ರಹ ಮತ್ತು ಸ್ವಾರ್ಥ ಸಾಧನೆ ಇವುಗಳನ್ನೇ ತಮ್ಮ ಎಲ್ಲವಕ್ಕಿಂತ ದೊಡ್ಡ ಕರ್ತವ್ಯಗಳೆಂದು ಭಾವಿಸಿಕೊಂಡಿದ್ದಾರೆ ದುಡಿಯುವ ಗೃಹಸ್ಥರು ಹೊಟ್ಟೆಗಿಲ್ಲದೆ ಉಪವಾಸ ಬೀಳುತ್ತಿರುವಾಗ, ಸೋಮಾರಿಗಳಾಗಿ ಕಾಲ ಕಳೆಯುವ ಸಾಧುಗಳು ಲಕ್ಷಾಧೀಶರೂ ಕೋಟ್ಯಧೀಶರೂ, ಆಗಿರುವುದು ಈ ಕಾಲದ ವಿಶೇಷತೆಯಾಗಿದೆ. ಈ ಸಮಯ ನಾಧುಗಳೆನಿಸಿಕೊಳ್ಳುವವರು ಜಮೀನುದಾರರಾಗಿರುತ್ತಾರೆ, ಸಾಗುವಳಿ ಮಾಡಿಸುತ್ತಾರೆ, ಸಾಲ ಕೊಡುತ್ತಾರೆ, ವ್ಯಾಪಾರ ಮಾಡುತ್ತಾರೆ, ಬಾಡಿಗೆಗೆ ಮನೆಗಳನ್ನು ಕಟ್ಟಿಸಿಡುತ್ತಾರೆ. ಒಮ್ಮೆ ನಮ್ಮ ಪರಿಚಿತ ಸಜ್ಜನರೊಬ್ಬರಿಗೆ ಸ್ವಲ್ಪ ಹಣದ ಅಗತ್ಯವಿದ್ದಿತು, ಆದರೆ ಸಾಲ ದೊರೆಯುವ ಮಾರ್ಗವಾವುದೂ ಕಂಡುಬರಲಿಲ್ಲ. ಆಗ ಬೇರೊಬ್ಬ ಗೃಹಸ್ಥರು ಅವರೊಡನೆ, ನೀವು ಇಂತಹ ಅಖಾಡೆಯ ಮಹಂತನ ಬಳಿಗೆ ಹೋದರೆ, ಅವನಿಂದ ನಿಮಗೆ ಹತ್ತು ಸಾವಿರದ ವರೆಗಿನ ಸಾಲವು ದೊರಕಬಹುದೆಂದರು. ವಿಚಾರಿಸಿದಲ್ಲಿ, ಉಕ್ತ ಮಹಂತನು ಎಷ್ಟೋ ವ್ಯವಸಾಯಿಗಳಿಗೂ ಜಮೀನುದಾರರಿಗೂ ತಾಲೂಕುದಾರರಿಗೂ ಇದೇ ರೀತಿ ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿರುವನೆಂದು ತಿಳಿದು ಬಂದಿತು 'ನಾಗಾ' ಜನರ ಪ್ರಸಿದ್ಧವಾದ ನಿರಂಜನೀ ಅಖಾಡೆಯ ಸಂಪತ್ತಿನ ಮೌಲ್ಯವು ಒಂದು ಅರ್ಬುದ ರೂಪಾಯಿಗಳಿಗೆ ಹೆಚ್ಚಿರಬಹುದೆಂದೂ, ಅದರ ಕೋಶದಲ್ಲಿ ಕೋಟ್ಯಂತರ ರೂಪಾಯಿಗಳು ನಗದಿ ಇರುತ್ತವೆಂದೂ ಪ್ರತೀತಿಯಿದೆ ಇದೇ ಪ್ರಕಾರ ಮಥುರೆ, ಗೋವರ್ಧನ ಮತ್ತು ನಾಥದ್ವಾರದ ಗೋಸಾಯಿಗಳ ಹಾಗೂ ಅಯೋಧ್ಯೆಯ ಮಹಂತರುಗಳ ಹತ್ತಿರ ಅಪಾರ ಸಂಪತ್ತಿಯಿರುತ್ತದೆಂದು ತಿಳಿಯಲಾಗಿದೆ. ಒಮ್ಮೆ ನಾವು ಅಯೋಧ್ಯೆಯ 'ಹನುಮಾನ್‌ಗಡೀ' ಮಂದಿರಕ್ಕೆ ಹೋಗಿದ್ದೆವು ವಿಚಾರಿಸಲಾಗಿ, ಮಂದಿರದ ವಾರ್ಷಿಕ ಉತ್ಪತ್ತಿಯು ಸುಮಾರು ಮೂರು ಲಕ್ಷವಿದ್ದು ಖರ್ಚು ಅದಕ್ಕಿಂತ ಬಹಳ ಕಡಿಮೆಯೆಂದೂ, ಉಳಿದ ಹಣವನ್ನು ಮಂದಿರದ ಕೆಳಗಿರುವ ವಿಶಾಲವಾದ ನೆಲಮಾಳಿಗೆಯಲ್ಲಿ ಹಾಕಿಡಲಾಗುವುದೆಂದೂ, ಅದನ್ನೆಂದೂ ತೆಗೆಯದಿರುವ ಕಾರಣ ಈ ತನಕ ಅಲ್ಲಿ ಕೋಟ್ಯಂತರ ರೂಪಾಯಿಗಳು ಸಂಗ್ರಹವಾಗಿವೆಯೆಂದೂ ತಿಳಿದುಬಂದಿತು. ಮಧ್ಯ ಭಾರತದಲ್ಲಿ, ಮಹಾರಾಜ ಛತ್ರಸಾಲನ ಗುರುವಾದ ಪ್ರಾಣನಾಥನ ವಿಗ್ರಹವನ್ನು ಪ್ರತಿಷ್ಠಿಸಿರುವ ಒಂದು ಮಂದಿರದ ವಿಷಯದಲ್ಲಿ ತಿಳಿದುಬಂದಿರುವುದೇನೆಂದರೆ,–ಅದರ ಅಧಿಕಾಂಶ ಅನುಯಾಯಿಗಳು ವ್ಯಾಪಾರಗಾರರಾಗಿದ್ದು, ಒಂದೆರಡು ವರ್ಷಗಳಿಗೊಮ್ಮೆ ಅವರು ಅಲ್ಲಿಗೆ ಯಾತ್ರಾರ್ಥಿಗಳಾಗಿ ಬರುವಾಗ ಒಂದು ರತ್ನಖಚಿತ

# ನಮ್ಮ ದೇಶದ ಧರ್ಮಜೀವಿಗಳು

**ದಿನ ಇಡೀ ದುಡಿಯುವ ಜನರು ಹೊಟ್ಟೆಗಿಲ್ಲದೆ ನರಳುತ್ತಿರುವಾಗ, ಸೋಮಾರಿಗಳಾಗಿ ಕಾಲ ಕಳೆಯುವ ಸಾಧು ಮಹಂತರುಗಳು ಲಕ್ಷಾಧೀಶ, ಕೋಟ್ಯಧೀಶರಾಗಿ ಮೆರೆಯುತ್ತಿದ್ದಾರೆ. ಯಾವ ತರದ ಜನೋಪಕಾರ ಕೆಲಸವೂ ಮಾಡದೆ ಭೋಗ ವಿಲಾಸಗಳಲ್ಲಿಯೇ ಮಗ್ನರಿರುತ್ತಾರೆ ತೀರ್ಥಕ್ಷೇತ್ರಗಳೆಲ್ಲಾ, ಅನೀತಿ-ಅತ್ಯಾಚಾರಗಳ ಆಶ್ರಯಗಳಾಗಿವೆ**

[ಸುಪ್ರಸಿದ್ಧ ಹಿಂದೀ ಚಾಂದ್ ಪತ್ರಿಕೆಯ ಬೋಧಪರ ಲೇಖನವೊಂದರ ಅನುವಾದ]

ಅನುವಾದಕ – ಉ ಚಂದಪ್ಪ ಮುಂಬಾಯಿ

ಮೂರ್ತಿಯನ್ನು ತಂದೊಪ್ಪಿಸುವರು ಆ ರತ್ನಗಳು ಭಂಡಾರದಲ್ಲಿ ಒಟ್ಟಾಗುತ್ತಲೇ ಇರುವುದರಿಂದ ಅವುಗಳ ಮೌಲ್ಯವು ಈಗ ಕೋಟ್ಯಂತರಕ್ಕೆ ಮುಟ್ಟಿರುತ್ತದೆ ಇದೇ ಮೇರೆಗೆ ಕಾಶಿಯ ವಿಶ್ವನಾಥ ಮಂದಿರ, ಪುರಿಯ ಜಗನ್ನಾಥ ಮಂದಿರ, ನಾಸಿಕದ ಕಾಲಾರಾಮ ಮಂದಿರ ಇತ್ಯಾದಿ ದೊಡ್ಡ ದೊಡ್ಡ ಮಂದಿರಗಳಲ್ಲೆಲ್ಲಾ ವರ್ಷಂಪ್ರತಿ ಲಕ್ಷಗಟ್ಟಳೆ ರೂಪಾಯಿಗಳು ಕಾಣಿಕೆಯ ರೂಪದಲ್ಲಿ ಬರುತ್ತಿದ್ದು, ಅವೆಲ್ಲವೂ ಮಹಂತರುಗಳ ಅಥವಾ ಪೂಜಾರಿಗಳ ಕೈಸೇರುತ್ತವೆ ಎಂತಹ ಬಡ ಮಂದಿರವಾದರೂ ಕನಿಷ್ಠಪಕ್ಷ ಹತ್ತಾರು ಸಾವಿರದ ಸಂಪತ್ತಿಯು ಇದ್ದೇ ಇರುತ್ತದೆ ಸಾಧುಗಳು ಆನೆ ಕುದುರೆಗಳನ್ನಿಟ್ಟುಕೊಳ್ಳುತ್ತಾರೆ, ಅವರ ಬಳಿಯಲ್ಲಿ ರಕ್ಷಣೆಗಾಗಿ ಬಂದೂಕುದಾರಿಗಳು ನಿಯುಕ್ತರಾಗಿರುತ್ತಾರೆ ಅವರು ಬೆಳ್ಳಿ ಭಂಗಾರಗಳ ಪಾತ್ರೆಗಳಲ್ಲಿ ಊಟ ಮಾಡುತ್ತಾರೆ, ಜರತಾರಿ ಪೋಷಾಕುಗಳನ್ನು ಉಟ್ಟುಕೊಳ್ಳುತ್ತಾರೆ ಲಕ್ಷಾಂತರ ರೂಪಾಯಿ ಬೆಲೆಬಾಳುವ ರತ್ನ ಖಚಿತ ಭೂಷಣಗಳನ್ನು ಧರಿಸುತ್ತಾರೆ, ಹಾಗೂ ಜಗತ್ತಿನ ಸಕಲ ಸುಖ–ಸಾಮಾಗ್ರಿಗಳನ್ನು ಅವರು ತಮ್ಮಲ್ಲಿ ಅಧಿಕಾಧಿಕವಾಗಿ ಸಂಗ್ರಹಿಸಿಕೊಂಡಿರುತ್ತಾರೆ

ಇದು ಅವರ ತ್ಯಾಗದ ವರ್ಣನೆಯಾಯಿತು! ಅವರ ಪರೋಪಕಾರ-ವೃತ್ತಿಯ ಕಡೆಗೆ ದೃಷ್ಟಿಹಾಕಿದರೆ ಅವರಂತಹ ಸ್ವಾರ್ಥಿಗಳು ದೊರೆಯುವುದೇ ದುರ್ಲಭ. ದೇಶದಲ್ಲಿ ಬಹಳ ಸಮಯದಿಂದ ರಾಜಕೀಯ ಆಂದೋಲನವು ನಡೆಯುತ್ತಿದೆ, ಚಿಕ್ಕ–ದೊಡ್ಡ ಪ್ರತ್ಯೇಕ ವ್ಯಕ್ತಿಯು ಅದಕ್ಕೆ ಯಥಾ ಸಾಧ್ಯ ಆರ್ಥಿಕ ಸಹಾಯವನ್ನು ಕೊಡುತ್ತಾನೆ. ಇದೇ ಪ್ರಕಾರ ಇನ್ನಿತರ ಎಷ್ಟೋ ಸಾರ್ವಜನಿಕ ಕಾರ್ಯಗಳು ದೇಶದಲ್ಲಿ ನಡೆಯುತ್ತಲಿದ್ದು, ಅವುಗಳಿಗೆ ಬಡವ–ಬಲ್ಲಿದ ಗೃಹಸ್ಥರು ವಂತಿಗೆಯನ್ನು ಕೊಡುತ್ತಾರೆ. ಆದರೆ ಈ ಸಂನ್ಯಾಸಿ ಸಾಧುಗಳು ಇಂತಹ ಒಳಿತಿಗೆ ಎಂದಿಗೂ ಬೀಳುವುದೇ ಇಲ್ಲ ಬಹುಶಃ ಇವರು ಸ್ವಯಂದಾನ ತೆಗೆದುಕೊಳ್ಳುವುದರಿಂದಲೂ ಯಾಚಿಸುವುದರಿಂದಲೂ, ಇವರಲ್ಲಿ ದಾನ ಕೊಡುವ ಪ್ರವೃತ್ತಿಯೇ ಇರುವುದಿಲ್ಲ. ಅಥವಾ, ತಮಗೆ ದಾನ ಕೊಡುವುದೇ ಎಲ್ಲದಕ್ಕಿಂತ ದೊಡ್ಡ ಪುಣ್ಯದ ಕಾರ್ಯವಾಗಿರುವಾಗ ತಾವಾರಿಗೆ ದಾನಕೊಡುವುದೆಂದು ಭಾವಿಸುತ್ತಿರಬಹುದು ಕೆಲವು ಸಾಧು–ಮಹಂತರುಗಳು ಸದಾವರ್ತ, ಪಾಠಶಾಲೆ, ಔಷಧಾಲಯಾದಿಗಳಿಗೆ ಸ್ವಲ್ಪ ವ್ಯಯಮಾಡುತ್ತಾರೆ ಪರಂತು ಈ ವಸ್ತುಗಳೇ ಅವರ ಸಂಪಾದನೆಯ ಸಾಧನಗಳಾಗಿದ್ದು ಅವುಗಳನ್ನು ತೋರಿಸಿಯೇ ಅವರು ಜನರಿಂದ ಹಣ ವಸೂಲುಮಾಡುತ್ತಾರೆ

ಸಾಧುಗಳ ಮೂರನೆಯ ದೊಡ್ಡ ಗುಣವೆಂದರೆ ಸದಾಚಾರವು. ಈಗಿನ ಧರ್ಮಜೀವಿಗಳು ಇದನ್ನು ಎಂತಹ ದುರ್ದಶೆಗೆ ತಂದಿರುವರೆಂಬುದನ್ನು ಹೇಳತೀರದು ಭಾರತದ ಯಾವುದೇ ಧರ್ಮಸ್ಥಾನ, ಮಠ ಯಾ ಮಂದಿರದ ಅಧಿಷ್ಠಾತರಿರಲಿ,-ಅವರ ಮೇಲೆ ಚರಿತ್ರ ಭ್ರಷ್ಟತೆಯ ಆರೋಪಣೆಯಿಲ್ಲದಿರುವುದು ಬಹಳ **ಕಡಿಮೆ. ಯಾವ ಧರ್ಮಗುರುಗಳು ಮತ್ತು ಮಂದಿರಗಳ ಮಹಂತರುಗಳು ಜನತೆಯ ಪೂಜ್ಯರೆನ್ನಿಸಿಕೊಳ್ಳುತ್ತಾರೋ, ಯಾರ ಚರಣ-ರಜ** ಪ್ರಾಪ್ತಿಗಾಗಿ ಜನರು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಲಿಕ್ಕೆ ಸಿದ್ಧರಿರುತ್ತಾರೋ, ಅಂಥವರದೇ ಚರಿತ್ರೆ ಹಾಗೂ ಕರ್ಮಗಳ ರಹಸ್ಯವು ಬಯಲಾಗುವಾಗ ಆಶ್ಚರ್ಯಚಕಿತರಾಗಬೇಕಾಗುತ್ತದೆ, ಈ ಸಾಧು–ಮಹಂತರುಗಳು ನಿತ್ಯ ಬೆಲೆಯುಳ್ಳ ಉತ್ತಮ ತರಗತಿಯ ಭೋಜನವನ್ನು ಮಾಡುತ್ತಾರೆ, ಶೃಂಗಾರ ಯುಕ್ತವೂ ಸುಂದರವೂ ಆದ ಮನೆ-ಮಹಲುಗಳಲ್ಲಿ ವಾಸಿಸುತ್ತಾರೆ, ಮಖಮಲಿನ ಹಾಸಿಗೆ ದಿಂಬುಗಳ ಮೇಲೆ ಮಲಗುತ್ತಾರೆ. ತೊಲೆಗೆ ಐವತ್ತರಿಂದ ನೂರು ರೂಪಾಯಿಗಳ ವರೆಗಿನ ಅತ್ತರನ್ನು ಲೇಪಿಸಿಕೊಳ್ಳುತ್ತಾರೆ ತಾಂಬೂಲ, ಬೀಡಿ, ಸಿಗರೇಟು, ಗಾಂಜಾ, ಭಂಗಿ ಮೊದಲಾದ ಮುಂತಾದ ಸಮಸ್ತ ಅಮಲು ಹಾಗೂ ಉತ್ತೇಜಕ ಪದಾರ್ಥಗಳನ್ನು ಸೇವಿಸುತ್ತಾರೆ. ಅನೇಕರು ಕಸ್ತೂರಿ, ಕೇಸರಿ, ಭಂಗಾರದ ಅರ್ಕ, ಮುತ್ತಿನ ಭಸ್ಮ ಇತ್ಯಾದಿ ನಾನಾ ತರದ ಶಕ್ತಿವರ್ಧಕ ಔಷಧಿಗಳನ್ನು ತಿನ್ನುತ್ತಾರೆ. **ಇಂಥಾ ದಶೆಯಲ್ಲಿ ಅವರ ಚಿತ್ತವು ಚಂಚಲವಾಗುವುದರಲ್ಲಿಯೂ, ವಿಷಯಿಗಳನ್ನಾಗಲಿ ವೇಶ್ಯೆಯರನ್ನಾಗಲಿ ಕೃತಾರ್ಥಗೊಳಿಸುವುದರಲ್ಲಿಯೂ ಆಶ್ಚರ್ಯವೇನಿದೆ?** ಇವೆಲ್ಲಾ ಸಾಮಾಗ್ರಿಗಳನ್ನು ಉಪಯೋಗಿಸುತ್ತಿದ್ದೂ ಕೂಡಾ ಯಾರು ನಿರ್ವಿಕಾರರಾಗಿಯೂ ನಿರ್ಲೇಪರಾಗಿಯೂ ಇರಬಲ್ಲರೋ, ಅಂಥವರನ್ನು ಜೀವನ್ಮುಕ್ತರೆಂದೇ ಹೇಳಬಹುದು ಇಲ್ಲವೆ, ಸರ್ವದಾ ನಪುಂಸಕ ವ್ಯಕ್ತಿಯು ಇಂತಹ ಪರಿಸ್ಥಿತಿಯಲ್ಲಿ ನಿಶ್ಚಲನಾಗಿರಬಹುದು. ಆದರೆ **ಈ** ಸಾಧು ಮಹಂತರುಗಳು ವಿದೇಹ ಪದವಿಗೇನೂ ಮುಟ್ಟಿರುವುದಿಲ್ಲ, ಅಥವಾ ನಪುಂಸಕರೂ ಆಗಿಲ್ಲ ಅಂದ ಮೇಲೆ, **ಅವರು ಈ ಸಮಸ್ತ ವಿಲಾಸ ಸಾಮಗ್ರಿಗಳನ್ನೂ ಉತ್ತೇಜಕ ಪದಾರ್ಥಗಳನ್ನೂ ಉಪಯೋಗಿಸುತ್ತಿದ್ದು ಚರಿತ್ರಭ್ರಷ್ಟರಾಗದಿರುವುದಾದರೂ ಹೇಗೆ?**

ಈ ಸಾಧು ನಾಮಧಾರಿಗಳ ಕಾಮ–ಲೀಲೆಗಳನ್ನು ವಿಸ್ತಾರಪೂರ್ವಕ ವರ್ಣಿಸಲಿಕ್ಕೆ ಹೋದರೆ ಒಂದು ದೊಡ್ಡ ಪುಸ್ತಕವೇ ತಯಾರಾಗಬಹುದು. ಎಷ್ಟೋ ಮಂದಿರಗಳೂ ತೀರ್ಥ ಸ್ಥಾನಗಳೂ ಈ ಸಂಬಂಧದಲ್ಲಿ ಎಂತಹ ಅಪಕೀರ್ತಿಯನ್ನು ಗಳಿಸಿವೆಯೆಂದರೆ,–ಜನರು ಬಹಿರಂಗವಾಗಿ ಅವುಗಳನ್ನು ದುರಾಚಾರಗಳ ಕೇಂದ್ರಗಳೆಂದು ಸಂಬೋಧಿಸಿ ಕರೆಯುತ್ತಾರೆ. ಮುಂಬಾಯಿ ಪ್ರಾಂತದಲ್ಲಿ, ಜನತೆಯಲ್ಲಿ ಬಹಳ ಮಹಿಮೆಯು

THE

PANGAL NAYAK BANK

LIMITED.

ESTABLISHED 1920.

Paid up Capital: Rs 1,82,100/-

*Head Office*. UDIPI.

Branches MANGALORE, KATAPADI and KANHANGAD.

Fixed loans and Overdrafts advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc, are discounted at a nominal charge.

Current and Savings Bank deposits are accepted at moderate rates of interest

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

# ನಮ್ಮ ಕರ್ನಾಟಕ

**ಬೆಂಗಳೂರು**—ಬೆಂಗಳೂರಿನಲ್ಲಿರುವ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಪ್ರಾಂತೀಯ ಸುಪರಿಂಟೆಂಡೆಂಟರಾದ ಶ್ರೀ| ಎಚ್ ವೆಂಕಟರಾಮಯ್ಯನವರು ಕಳೆದ ತಾ ೩೧ರಲ್ಲಿ, ಹೈದರಾಬಾದ್ ಡಿವಿಜನ್ನಿನ ಆನರರಿ ಸೆಷನ್ ಜಡ್ಜರಾದ ಶ್ರೀ| ರಾಜಾ ಪಿಂಗ್ಲೆ ವೆಂಕಟರಾಮರೆಡ್ಡಿಯವರು ಏಷ್ಯಾಟಿಕ್ ಕಂಪೆನಿಯ ಡೈರೆಕ್ಟರರಾಗಿ ಆರಿಸಿ ಬಂದ ಸಂತೋಷ ಸೂಚನಾರ್ಥವಾಗಿ ತಮ್ಮ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು ಈ ಸಮಾರಂಭಕ್ಕೆ ಸುಮಾರು ಒಂದು ನೂರು ಜನ ಮಹನೀಯರು ಬಂದಿದ್ದು, ಯೋಗ್ಯ ರೀತಿಯಿಂದ ನಡೆಯಿತು

ಡಾ| ಎನ್ ಎಸ ಹರ್ಡೀಕರರು ದೇಹಾರೋಗ್ಯದ ಸಂಬಂಧ ಈ ತಿಂಗಳ ೧೫ನೇ ತಾರೀಕಿಗೆ ಬೆಂಗಳೂರಿಗೆ ಬರಲಿದ್ದಾರೆಂದು ತಿಳಿದು ಬರುತ್ತದೆ

ದಿವಾನರು ಬೆಂಗಳೂರಿಗೆ ಆಗಮಿಸುವಾಗ ರೈಲ್ವೇ ಸ್ಟೇಶನಿನ ಹಾಗೂ ಆಸುಪಾಸಿನ ರಸ್ತೆಗಳಲ್ಲಿ ಬಲವಾದ ಪೋಲೀಸು ಸಿಬ್ಬಂದಿಯನ್ನು ಇಟ್ಟಿದ್ದರಂತೆ.

**ಮೈಸೂರು**—ರಾಜ ಕುಮಾರರಾದರೂ ಸಾಧಾರಣ ವಿದ್ಯಾರ್ಥಿಗಳಂತೆಯೇ ಮಹಾರಾಜಾ ಕಾಲೇಜಿನಲ್ಲಿ ಎಲ್ಲರೊಡನೆ ಕಲೆತು ಕಲಿಯುತ್ತಿರುವ ಶ್ರೀ| ಜಯ ಚಾಮರಾಜ ಒಡೆಯರವರು ಕಳೆದ ವಾರ ವಿಶ್ವವಿದ್ಯಾಲಯದ ಇತಿಹಾಸ ಸಂಘದ ಆಶ್ರಯದಲ್ಲಿ ಕಾಲೇಜಿನ ಮುಖ್ಯಾಧಿಕಾರಿಗಳಾದ ಮಿ| ರೋನೋರವರ ಅಧ್ಯಕ್ಷತೆಯಲ್ಲಿ "ಪೌರ್ವಾತ್ಯ ರಾಷ್ಟ್ರಗಳ ಸ್ಥಿತಿಗತಿಗಳ ಸೂಕ್ಷ್ಮ ವಿಮರ್ಶೆ" ಎಂಬುದರ ಕುರಿತು ಒಂದು ಆಮೋದ ಭಾಷಣವಿತ್ತರು

**ದಾವಣಗೆರೆ**—ಇಲ್ಲಿ ಕೂಲಿಯಾಳಾಗಿ ಕೆಲಸ ಮಾಡುತ್ತಿದ್ದ ಆಲಪ್ಪನೆಂಬ ತರುಣನು ತನ್ನ ಚಿಕ್ಕ ತಾಯಿಯನ್ನು ಕರೆದುಕೊಂಡು ತನ್ನೂರಾದ ಬಸವಾಪುರಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ಯಾರೋ ಪುಂಡರು ಅವರ ಮೇಲೇರಿ ಬಂದು ಅವರಲ್ಲಿದ್ದ ಹತ್ತಿಪ್ಪತ್ತು ರೂಪಾಯಿಗಳ ಒಡವೆಗಳನ್ನು ಅಪಹರಿಸಿಕೊಂಡು ಓಡಿರುವರು ಪೋಲೀಸರು ತನಿಖೆ ನಡಿಸುತ್ತಿದ್ದಾರೆ

ಉಪ್ಪೋರಿನಲ್ಲಿ ಒಂದು ಮಹತ್ತಾದ ಗೋವಧ ಮಂದಿರವನ್ನು ಇಂಡಿಯಾ ಸರಕಾರದವರು ತೆರೆಯಲಿದ್ದಾರೆಂಬುದನ್ನು ಕೇಳಿ ಇಲ್ಲಿಯ ಪ್ರಾಣಿದಯಾ ಪ್ರಚಾರ ಸಂಘದವರು ವೈಸರಾಯರಿಗೆ ನಿಷೇಧ ಸೂಚಕ ಮನವಿಯೊಂದನ್ನು ಕಳಿಸಿರುವರು

**ಬಿಜಾಪುರ**—ಅಖಿಲ ಭಾರತ ಕಿಸಾನ್ ಸಂಘದ ಕಾರ್ಯದರ್ಶಿಗಳಾದ ಶ್ರೀ| ಇಂದುಲಾಲ ಯಾಜ್ಞಿಕರು ಇಲ್ಲಿಯ ಯೂನಿಯನ್ ಕ್ಲಬ್ಬಿನಲ್ಲಿ ಕೃಷಿಕ ಚಳವಳದ ಕುರಿತು ಬೋಧಪ್ರದ ಭಾಷಣವಿತ್ತರು

ಕೇಂದ್ರಾಯ ಮಂತ್ರಿಗಳು ಇಲ್ಲಿಯ ಬರಗಾಲದ ಕೆಲಸವನ್ನು ನಿರೀಕ್ಷಿಸಲಿಕ್ಕೆಂದು ತಾ ೧೦ಕ್ಕೆ ಇಲ್ಲಿಗೆ ಕಾಂಗ್ರೆಸ್ ಕಮಿಟಿಯ ಅತಿಥಿಗಳಾಗಿ ಬರಲಿದ್ದಾರೆ.

**ಅಥಣಿ**—ಇಲ್ಲಿಯ ನಗರ ಸಭೆಯವರು ತಮ್ಮ ಚೌಕದ ಒಳಗಿರುವ ಎಲ್ಲಾ ಬಾವಿಗಳಲ್ಲೂ ಹರಿಜನರು ನಿರಾತಂಕವಾಗಿ ನೀರು ಸೇದಬಹುದೆಂಬ ಸ್ತುತ್ಯ ನಿರ್ಧಾರ ಮಾಡಿರುವರಾಗಿ ತಿಳಿದುಬರುತ್ತದೆ

**ಸಿರಸಿ**—ಉದರ ಶೂಲೆಯಿಂದ ನರಳುತ್ತಿದ್ದ ಒಬ್ಬ ಬಡ ಪಕೀರನು ಕಳೆದ ವಾರ ಬಾವಿಯಲ್ಲಿ ಬಿದ್ದು ಪ್ರಾಣ ಕಳಕೊಂಡಿರುವನು, ಉದರ ಶೂಲೆಯ ಬಾಧೆ ತಡೆಯಲಾಗದೆ ಹೀಗೆ ಮಾಡಿರಬೇಕೆಂದು ಜನರ ಊಹೆ

ಇಲ್ಲಿಯ ನಗರ ಸಭಾ ಚುನಾವಣೆಗೆ ಶ್ರೀ| ಸರದಾರ ವೀರಪ್ಪ ಗೌಡಾ ಪಾಟೀಲರ ಪ್ರಚಾರ ಕಾರ್ಯದಿಂದ ಕಾಂಗ್ರೆಸಿನ ಪಕ್ಷದಿಂದ ನಿಂತ ೧೦ ಮಂದಿಗಳೂ ಅವಿರೋಧಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ ಕಾಂಗ್ರೆಸಿಗೆ ವಿರೋಧವಾಗಿ ನಿಂತ ಹುರಿಯಾಳುಗಳೆಲ್ಲ ತಮ್ಮ ಅರ್ಜಿಗಳನ್ನು ವಾಪಾಸು ತೆಗೆದುಕೊಂಡಿದ್ದಾರೆ

**ಕೊಡಗು**—ಇಂಡಿಯಾ ಸೇನಾ ಖಾತೆಯ ಮಾರ್ ಬ್ಲಾಕ್ ಆಫೀಸರ ಪದವಿಯಿಂದ ನಿವೃತ್ತರಾಗಿದ್ದ ಕ್ಯಾಪ್ಟನ್ ಪೊನ್ನಪ್ಪನವರು ತಿರುವಾಂಕೂರು ಸೇನೆಯ (ನಾಯರ್ ಬ್ರಿಗೇಡ್) ಕಮಾಂಡೆಂಟರಾಗಿ ನಿಯಮಿಸಲ್ಪಟ್ಟಿರುವರು

**ಬೆಳಗಾವಿ**—ಮುಂಬಯಿ ಸರಕಾರದ ಒಳಾಡಳಿತ ಸಚಿವರಾದ ಶ್ರೀ| ಎ ಕೆ. ಮುನ್ಶಿಯವರು ಇಲ್ಲಿಗೆ ಬರಲಿದ್ದಾರೆಂದು ತಿಳಿದು ಬರುತ್ತದೆ

ಇಲ್ಲಿಯ ದೈನಿಕ ಹಾಗೂ ಸಾಪ್ತಾಹಿಕ ಪತ್ರಿಕೆಯಾದ 'ಸಂಯುಕ್ತ ಕರ್ನಾಟಕ'ದ ಕಾರ್ಯಾಲಯವನ್ನು ಹುಬ್ಬಳ್ಳಿಗೆ ಒಯ್ದಿರುವರು

ಭಾರತ ಸೇವಕ ಸಂಘದ ಕುಮಾರೀ ಶಾಂತಾ ಎಂ ಎ ಇವರು ಈ ಊರಲ್ಲಿ ಹಲವೆಡೆ ಉಪನ್ಯಾಸಗಳನ್ನು ಕೊಟ್ಟರು ಮಹಿಳಾ ಜಾಗೃತಿ ಮತ್ತು ಮಹಿಳಾ ಸಂಘಗಳನ್ನು ಸ್ಥಾಪಿಸುವಂತೆ ಸಂಘಟನೆಯನ್ನುಂಟು ಮಾಡುವುದೇ ಅವರ ಗುರಿ ಅವರು ಇಡೀ ಕರ್ನಾಟಕದಲ್ಲೆಲ್ಲ ಸಂಚರಿಸಲಿದ್ದಾರೆಂದು ತಿಳಿದುಬರುತ್ತದೆ

ಬೆಳಗಾವಿಯ ಲೋ ಬೋರ್ಡಿನವರು ಈ ಕೆಳಗಿನ ನಿರ್ಣಯಗಳನ್ನು ಪಾಸು ಮಾಡಿರುತ್ತಾರೆ (೧) ಲೋ ಬೋರ್ಡಿನ ಮೇಲೆ ರಾಷ್ಟ್ರಧ್ವಜವನ್ನೇರಿಸುವುದು (೨) ಲೋ ಬೋ ಶಾಲೆಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿಸಬೇಕು.

**ಮುಂಬಯಿ**—ಮುದ್ದಣ ವಾಚನಾಲಯದ ವಿಳಾಸವನ್ನು ತಾ ೬-೯-೩೭ರಿಂದ ೨೨, Police court lane fortಗೆ ಬದಲಾಯಿಸಿದೆಯೆಂದೂ ಪತ್ರವ್ಯವಹಾರಗಳನ್ನು ಆ ವಿಳಾಸಕ್ಕೇ ಮಾಡಬೇಕೆಂದೂ ವಾಚಕರು ಅಲ್ಲಿಗೇ ಬಂದು ಎಂದಿನಂತೆ ಪ್ರಯೋಜನ ಪಡೆಯಬೇಕೆಂದೂ ಗೌ ಜ. ಕಾರ್ಯದರ್ಶಿಗಳು ತಿಳಿಸುತ್ತಾರೆ

ಮೊಗವೀರ ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರವು ಯಾವ ಜಾತಿ ಮತ, ಭೇದವಿಲ್ಲದೆ ಸರ್ವರಿಗೂ ಧರ್ಮಾರ್ಥವಾಗಿ ತೆರೆಯಲ್ಪಟ್ಟಿರುವುದೆಂದೂ ಮೇಲಿನ ಎರಡೂ ವಾಚನಾಲಯಗಳ ಉನ್ನತಾವಸ್ಥೆಗೆ ಕನ್ನಡಿಗರು ನೆರವಾಗಬೇಕೆಂದೂ ಶ್ರೀ ಜ ಸಿ. ಪುತ್ರನರು ಬರೆಯುತ್ತಾರೆ

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಪ್ರಕಟನೆ ನಂ ೨೧

## ಸರಕಾರದಿಂದ ಆಕ್ಷೇಪಾರ್ಹವಾದ ಪುಸ್ತಕಗಳು

೧೯೦೬ರಿಂದ ಇವತ್ತಿನ ವರೆಗೆ ಸರಕಾರದವರು ಅನೇಕ ಪುಸ್ತಕಗಳನ್ನು ಜಪ್ತಿ ಮಾಡಿರುವರು ಆದರೆ ಇದೀಗ ಕಾಂಗ್ರೆಸ್ ಮಂತ್ರಿಗಳು ಪುಸ್ತಕಗಳ ಮೇಲೆ ಈ ಪ್ರಕಾರದ ನಿರ್ಬಂಧವು ಇರಕೂಡದೆಂದು ಗೊತ್ತು ಮಾಡಿರುವರು ಕಾರಣ, ಕನ್ನಡದಲ್ಲಿ ಈ ವತ್ತಿನ ವರೆಗೆ ಜಪ್ತಾದ ಪುಸ್ತಕಗಳ ಹೆಸರುಗಳನ್ನು ಗೊತ್ತಿದ್ದವರು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಗೆ ತಿಳಿಸಿದರೆ ನಾವು ಸರಕಾರದವರ ಕಡೆಗೆ ಬರೆದು ಈ ಸಂಬಂಧವಾಗಿ ತಿಳಿಸುತ್ತೇವೆ

**ರಾ ಶ್ರೀ ಹುಕ್ಕೇರಿಕರ.**
ಗೌ ಕಾರ್ಯದರ್ಶಿಗಳು
ಧಾರವಾಡ 27-9-1937

---

(೯ನೇ ಪೇಜಿನಿಂದ ಮುಂದರಿದುದು)

ಕಿನ ಸಂಬಳವನ್ನೂ ಕೊಡಬೇಕೆಂದಾಯಿತು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಲೆಕ್ಕಾಚಾರದ ವಿಷಯದಲ್ಲಿ ಮಂಗಳೂರಿನ ವಿನೋದಭಾರತ ಪತ್ರಿಕೆಯು ಮಾಡಿರುವ ಆರೋಪಗಳ ವಿಷಯದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಖಟ್ಲೆ ನಡಿಸಬೇಕೋ ಬೇಡವೋ ಎಂಬ ವಿಷಯದಲ್ಲಿ ದೀರ್ಘ ಚರ್ಚೆ ನಡೆಯಿತು ಆ ಕುರಿತು ವಕೀಲರಿತ್ತಿರುವ ಅಭಿಪ್ರಾಯವನ್ನೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿತ್ತಿರುವ ಸಲಹೆಯನ್ನೂ ಓದಿಹೇಳಲಾಯಿತು ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ದಾವೆಮಾಡಬೇಕೆಂಬ ಸೂಚನೆ ತಂದರು ವಿನೋದ ಭಾರತದ ಲೇಖನವು ಮಾನ ನಷ್ಟಕರವಿರುವುದಾದರೂ ಆ ಕುರಿತು ಅಧಿಕಾರಿಕವಾದ ಪ್ರಕಟಣೆಯೊಂದನ್ನು ಪತ್ರಿಕೆಗಳಿಗೆ ಕೊಟ್ಟು ಅದನ್ನು ಅಲಕ್ಷಿಸುವುದೊಳ್ಳೇದೆಂದು ಶ್ರೀ ಕೆ. ಮಹಾಬಲ ಹೆಗ್ಡೆಯವರು ಸೂಚಿಸಿ ಶ್ರೀ ಪಿ ವಿ ಉಪಾಧ್ಯಾಯರು ಅನುಮೋದಿಸಿದರು. ಶ್ರೀ ಕೆ ಕೆ ಶೆಟ್ಟಿ ಇದನ್ನು ಸಮರ್ಥಿಸಿದರು ಆದರೆ ಓಟು ತೆಗೆಯುವಾಗ ಈ ಸೂಚನೆಯು ಬಿದ್ದು ಹೋಗಿ ಮಾನ ನಷ್ಟ ದಾವೆಮಾಡಬೇಕೆಂದೂ ಆ ಕುರಿತು ಪರವಾನಗಿಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಬರೆಯಬೇಕೆಂದೂ ಶ್ರೀ ಲಕ್ಷ್ಮೀನಾರಾಯಣನಾಯ್ಕರು ತಂದ ಸೂಚನೆಯು ಬಹುಮತದಿಂದ ಮಂಜೂರಾಯಿತು ಆ ಮೇಲೆ ಗೋವೆ ಸೋದ್ರಿಯನ್ನು ನಿಷೇಧಿಸುವುದೇ ಮೊದಲಾದ ಕೆಲವು ನಿರ್ಣಯಗಳಾಗಿ ಸಭೆಯನ್ನು ಬರುವ ತಾ. ೧೨ನೇ ಆದಿತ್ಯವಾರಕ್ಕೆ ಮಂಗಳೂರಲ್ಲಿ ಪುನಃ ನಡಿಸುವುದೆಂದಾಯಿತು ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯವರು ಸಭಿಕರಿಗೆಲ್ಲಾ ಉಪಾಹಾರವಿತ್ತು ಸತ್ಕರಿಸಿದರು.

**ನಿಂಜೂರು ವಿವೇಕಾನಂದ ಸೇವಾ ಸಂಘದ**—'ತೃತೀಯವಾರ್ಷಿಕವರ್ಧಂತಿ'ಯು ಕಳೆದ ತಾ ೨೮-೮-೩೭ರಲ್ಲಿ ಶ್ರೀ| ಸ್ಕೈಲಬೈಲು ಅಂತಯ್ಯಶೆಟ್ರವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿಯವರು ಸಂಘದ ಸದುದ್ದೇಶಗಳನ್ನು ವಿವರಿಸಿ ಇಂದಿನ ವರೆಗೆ ಸಂಘವು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಯಾವ ಯಾವ ರೀತಿಯಲ್ಲಿ ಭಾಗವಹಿಸಿರುವುದೆಂಬುದನ್ನು ಮನಗಾಣಿಸಿ ಮುಂದಣ ಅಭ್ಯುದಯಕ್ಕಾಗಿ ಜನತೆಯ ಬೆಂಬಲವನ್ನು ಕೋರಿದರು. ಶ್ರೀ| ನಕರೆ ಶ್ಯಾಮರಾಯ ನಾಯ್ಕರು 'ಧರ್ಮೋದ್ಧಾರಿ ಶ್ರೀಕೃಷ್ಣ'ಎಂಬುದರ ಕುರಿತಾಗಿಯೂ ಶ್ರೀ ಸಂಜೀವ ಶೆಟ್ರು 'ಶ್ರೀ ಕೃಷ್ಣನ ಜೀವನದ ಕುರಿತಾಗಿಯೂ ಮತ್ತು ಶ್ರೀ| ಎನ್. ಶ್ಯಾಮಶೆಟ್ರು 'ಕರ್ಮ ರಹಸ್ಯ' ಎಂಬ ವಿಷಯದಲ್ಲಿಯೂ ಸುರಸವಾದ ದೀರ್ಘ ಭಾಷಣಗಳನ್ನಿತ್ತರು. ಅನಂತರ ಸಭಿಕರಲ್ಲಿ ಹಲವರು ಸಂಘದ ಕಾರ್ಯಕಲಾಪಗಳ ಆದರ್ಶತೆಯನ್ನು ಕೊಂಡಾಡಿ ಮುಂದಣ ಏಳ್ಗೆಯನ್ನು ಹಾರೈಸಿ ಭಾಷಣವಿತ್ತರು ಕೊನೆಗೆ ಅಧ್ಯಕ್ಷರ ಸಂದರ್ಭೋಚಿತ ಭಾಷಣವಾಗಿ ಧನ್ಯವಾದಗಳ ಅರ್ಪಣೆಯಾದ ನಂತರ ಶ್ರೀ| ಪಳ್ಳಿಪಾಸುದೇವ ಪೈಯವರ ಸುರ ಸಂಕೀರ್ತನೆಯಿಂದ ಸಭೆಯು ಕೊನೆಗೊಂಡಿತು

**ಕಟಪಾಡಿ:**—ಕೇಂದ್ರ ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟ ಏಣಗುಡ್ಡೆ, ಮೂಡಬೆಟ್ಟು, ಕೋಟೆ ಮತ್ತು ಪಟ್ಟಗ್ರಾಮಗಳಿಗೆ ಒಂದು ಪಂಚಾಯತಿ ಬೋರ್ಡನ್ನು ಸ್ಥಾಪಿಸುವದಕ್ಕೋಸ್ಕರ ತಾ ೧೮-೭-೩೭ರಲ್ಲಿ ಸ್ಥಳೀಕ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾಕ್ಟರ್ ಕೆ ಜಿ. ಕಿಣಿಯವರ ಅಧ್ಯಕ್ಷತೆಯಲ್ಲಿ ಸದ್ರಿ ಗ್ರಾಮಸ್ಥರ ಸಭೆ ಜರಗಿ ಸಭಿಕರೆಲ್ಲರೂ ಮೇಲ್ಕಂಡ ಗ್ರಾಮಗಳಿಗೆ ಒಂದೇ ಪಂಚಾಯತಿ ಬೋರ್ಡನ್ನು ಸ್ಥಾಪಿಸುವುದು ಉತ್ತಮವೆಂಬುದಾಗಿ ಅಭಿಪ್ರಾಯ ಪಟ್ಟರೂ ಸಭೆಗೆ ಬರಲಿಕ್ಕಾಗದ ಕೆಲವು ಮಹನೀಯರ ಅಭಿಪ್ರಾಯ ನಿರೀಕ್ಷಣೆಯಿಂದ ಸದರಿ ಸಭೆಯನ್ನು ತಾ ೧೧-೯-೩೭ಕ್ಕೆ ಕೊನೆಯ ತೀರ್ಮಾನಕ್ಕಾಗಿ ಮುಂದರಿಸಿಡಲಾಯಿತು ಕಮಿಟಿಯ ನಿರ್ಣಯದಂತೆ ಪ್ರಕೃತ ಕಟಪಾಡಿ ಸೆಂಟರಿನಲ್ಲಿ ತಾ ೪-೯-೩೭ರಲ್ಲಿ ಶ್ರೀ| ಟಿ. ಜನಾರ್ಧನ ಕಿಣಿಯವರಿಂದ ಹಿಂದೀ ಕ್ಲಾಸ್ ತೆರೆಯಲ್ಪಟ್ಟಿತು ಕೇಂದ್ರ ಕಾಂಗ್ರೆಸ್ ಕಮಿಟಿಯವರು ಇದೇ ಸಪ್ಟಂಬರ ಅಂತ್ಯದೊಳಗೆ ೫೦೦ಕ್ಕೆ ಮಿಕ್ಕಿ ಕಾಂಗ್ರೆಸ್ ಮೆಂಬರರನ್ನು ಕೂಡಿಸಬೇಕಾಗಿ ನಿರ್ಣಯಿಸಲ್ಪಟ್ಟ ಮೇರೆಗೆ ಪ್ರತಿಗ್ರಾಮದಿಂದ ಆರಿಸಲ್ಪಟ್ಟ ಕಮಿಟಿ ಮೆಂಬರರು ತಮ್ಮ ತಮ್ಮ ಗ್ರಾಮಗಳಲ್ಲಿ ತಿರುಗಾಡಿ ಟಿಕೇಟಿನ ಮುಖಾಂತ್ರ ಕಾಂಗ್ರೆಸಿಗೆ ಮೆಂಬರರನ್ನು ಸೇರಿಸುವ ಕಾರ್ಯವನ್ನು ಭರದಿಂದ ನಡಿಸುತ್ತಲಿರುವರು. ಮೊದಲಿನ ನಿರ್ಣಯದ ಮೇರೆಗೆ ತಾ ೯-೯-೩೭ರಲ್ಲಿ ಪಾಂಗಾಳ ಗ್ರಾಮಸ್ಥರ ಸಭೆಯು ಪಾಂಗಾಳ ದೇವಸ್ಥಾನದ ಜಗಲಿಯಲ್ಲಿ ಡಾ. ಕೆ ಜಿ. ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಲಾಗಿ ಸದ್ರಿ ಸಭೆಯಲ್ಲಿ ಕಾಂಗ್ರೆಸ್ ತತ್ವಗಳನ್ನು ಕಾಂಗ್ರೆಸ್ ಸರಕಾರದ ರಾಜ್ಯಭಾರ ಕ್ರಮಗಳನ್ನು ವಿವರಿಸಿ ಎಲ್ಲರೂ ಕಾಂಗ್ರೆಸಿಗೆ ಮೆಂಬರರಾಗಿ ಸೇರಬೇಕಾಗಿ ಭಾಷಣಗಳಾದವು. ಹಳ್ಳಿಪ್ರಚಾರದ ಎರಡನೇ ಸಭೆಯು ತಾ, ೧೬-೯-೩೭ನೇ ಆಪಂತ್ಯ ಹೊಂಟ ಉಳ್ಳ ಬೆಳ್ಳೆ ಬೋರ್ಡ್ ಶಾಲೆಯ ಜಗಲಿಯಲ್ಲಿ ಜರಗಬೇಕಾಗಿ ನಿರ್ಣಯಿಸಲ್ಪಟ್ಟಿದೆ.

ಕಟಪಾಡಿ ಕೇಂದ್ರ ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟ ಗ್ರಾಮಗಳ ಮಹಾಜನರು ಆಯಾಯ ಗ್ರಾಮಗಳಿಂದ ಆರಿಸಲ್ಪಟ್ಟ ಕಮಿಟಿ ಮೆಂಬರರ ಮುಖಾಂತರ ಈ ತಿಂಗಳ ಅಂತ್ಯದೊಳಗೆ ಕಾಂಗ್ರೆಸ್ ಟಿಕೇಟನ್ನು ಪಡೆದು ಮೆಂಬರರಾಗಬೇಕಾಗಿ ಕಟಪಾಡಿ ಕೇಂದ್ರ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಗಳಾದ ಶ್ರೀ| ಕುರ್ಕಾಲು ಗಣಪಯ್ಯ ಶೆಟ್ರು ವಿನಂತಿಸುತ್ತಾರೆ.

**ನೋಟೀಸು**—ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿಣಿಯ ತಾ ೫-೯-೩೭ರ ಜನರಲ್ ಸಭೆಯು ಬರುವ ಆದಿತ್ಯವಾರ ತಾ ೧೨-೯-೩೭ಕ್ಕೆ ಮಂಗಳೂರು ಕಾಂಗ್ರೆಸ್ ಕಚೇರಿಯಲ್ಲಿ ಮಧ್ಯಾಹ್ನ ೩ ಘಂಟೆಗೆ ಜರಗಿಸುವಂತೆ ಮುಂದರಿಸಲಾಗಿದೆ ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ

**ಎಲ್ಲೂರು**—ಇಲ್ಲಿಯ ವಕೀಲರೂ, ಪಂಚಾಯತ್ ಬೋರ್ಡ ಪ್ರೆಸಿಡೆಂಟರೂ ಆಗಿರುವ ಮಿ ರಾ ಎಲ್ಲೂರುಗುತ್ತು ಚೆಂದು ಯಾನೆ ದೂಮಪ್ಪ ಶೆಟ್ರವರ ಪ್ರಯತ್ನದಿಂದ ಟಪ್ಪಾಲು ಆಫೀಸು ಇದೇ ೧-೯-೩೭ನೇ ಬುಧವಾರ ದಿವಸ ಊರವರ ಅನುಕೂಲತೆಗೆ ತಕ್ಕ ದಾಗಿರುವ ಯೋಗ್ಯ ಕೇಂದ್ರವಾದ ದೇವಸ್ಥಾನದ ಹತ್ತಿರದಲ್ಲಿ ಒಂದು ಟಪ್ಪಾಲು ಪೆಟ್ಟಿಯನ್ನು ತೆರೆದಿರುವರು.

**ಶಿರ್ವ**— ಕೇಂದ್ರ ಕಾಂಗ್ರೆಸ್ ಕಮಿಟಿ ಸಭೆಯು ೪-೯-೩೭ರಲ್ಲಿ ಜರಗಿ ಪ್ರತಿ ಮೆಂಬರನೂ ಸರದಿ ಮೇರೆಗೆ ಕಮಿಟಿ ನಿರ್ಣಯದಂತೆ ಕಡಿಮೆ ಯೆಂದರೆ ೧೦-೧೦ ಮಂದಿ ಕಾಂ| ಸದಸ್ಯರನ್ನಾದರೂ ಮಾಡಬೇಕೆಂದೂ, ಕಾಂಗ್ರೆಸ್ ಖಾಯಂ ಆಫೀಸ್ ಒಂದನ್ನು ನಿಶ್ಚಯಿಸಿಕೊಂಡು ಧ್ವಜಾರೋಹಣ ಮಾಡಿ, ಜನ ಸಾಮಾನ್ಯರಿಗೂ ಮನವಮುಟ್ಟಿ ತಿಳಿಯುವಂತೆ ರಾಜಕೀಯ ವಿಷಯಗಳನ್ನು ಬಿಡಿಸಿ ಹೇಳಬೇಕೆಂದೂ ನಿಶ್ಚಯಿಸಲಾಯಿತು, ೧೬-೯-೩೭ನೇ ಗುರುವಾರ ಹಗಲು ಮೂರು ಘಂಟೆಗೆ ಸಾರ್ವಜನಿಕ ಸಭೆಯು ಜರಗಲಿಕ್ಕಿದೆ ಡಿ| ಬೋ| ಚುನಾವಣೆಗೆ ಈ ಸರ್ಕಲಿಗೆ ಕಥೋಲಿಕ್ ಸೀಟಿಗೆ ಕಾಂಗ್ರೆಸ್ ಉಮೇದವಾರರಾಗಿ ನಿಲ್ಲಲಿರುವ ಮಿ| ಮತ್ತಾಯಸ್ ಫೆರ್ನಾಂಡೀಸರಿಗೆ ಸಂಪೂರ್ಣ ಬೆಂಬಲವೀಯಬೇಕೆಂದು ಠರಾವಾಯಿತು

## ಟೀಚರ್ ಮೆನೇಜರರ ಸಂಘದ ವಾರ್ಷಿಕ ಸಭೆಗಳು

ನಿಬಂಧನೆ ಮೇರೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ತಾಲೂಕುವಾರು ಟೀಚರ್ ಮೆನೇಜರರ ಶಾಲೆಗಳ ಎಪ್ರುವ್ಡ ಲಿಸ್ಟನ್ನು ನಮಗೆ ದಯಪಾಲಿಸಬೇಕಾಗಿ ಕಳೆದ ಮೇ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಾನ್ಯ ಎಜ್ಯುಕೇಶನಲ್ ಕೌನ್ಸಿಲ್ ಪ್ರೆಸಿಡೆಂಟರಿಗೆ ನಾನು ಪತ್ರವನ್ನು ಬರಕೊಂಡದ್ದಾದರೂ ಕಾರಣಾಂತರದಿಂದ ಸದರಿ ಪಟ್ಟಿಯು ನನಗೆ ಸಿಕ್ಕದ್ದರಿಂದ ಕಳೆದ ಅಗೋಸ್ತು ತಾ. 19ರಲ್ಲು ಪುನಃ ಕೌನ್ಸಿಲ್ ಪ್ರೆಸಿಡೆಂಟರಿಗೆ ಬರಕೊಂಡ ಪ್ರಕಾರ ಸದ್ಯದಲ್ಲಿಯೇ ಸದರಿ ಟೀಚರ್ ಮೆನೇಜರರ ಪಟ್ಟಿಯು ಸಿಕ್ಕಬಹುದಾಗಿದೆ. ಈ ಪಟ್ಟಿಯು ಸಿಕ್ಕಿದೊಡನೆಯೇ ಅಂತೂ ಈ ತಿಂಗಳ ಆಖೈರಿ ಒಳಗೆ ಆಯಾ ತಾಲೂಕು ಟೀಚರ್ ಮೆನೇಜರರ ಪಟ್ಟಿಯನ್ನು ಆಯಾಯ ತಾಲೂಕು ಸಂಘದ ಚಾಲಕರಿಗೆ ನಾವು ಕಳುಹಿಸಲಿಕ್ಕಿರುವುದರಿಂದ ಪ್ರತಿ ತಾಲೂಕು ಸಂಘದ ಚಾಲಕರು ಬರುವ ಒಕ್ಟೋಬರ ತಿಂಗಳಲ್ಲಿ ತಂತಮ್ಮ ತಾಲೂಕು ಟೀಚರ್ ಮೆನೇಜರರ ಸಂಘದ ಮಹಾಸಭೆಯನ್ನು ಕರೆಯಬೇಕಾಗಿಯೂ ಸದರಿ ಮಹಾಸಭೆಯ ದಿನವನ್ನು ಮುಂದಾಗಿ ನಮ್ಮ ಅವಗಾಹನೆಗೆ ತಿಳಿಸಬೇಕಾಗಿಯೂ ವಿನಂತಿಸೋಣಾಗುತ್ತದೆ.

**ಕುರ್ಕಾಲು ಗಣಪಯ್ಯ ಶೆಟ್ಟಿ**
ಪ್ರೆಸಿಡೆಂಟ್
ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘ

(ಕಳೆದ ಸಂಚಿಕೆಯಿಂದ ಮುಂದರಿದುದು)

ಶಾಸ್ತ್ರೀಯ ಉದಾಹರಣೆಗಳಿಂದ ಪ್ರಕಟವಾಗುವ ಸಾಧುಗಳ ಸ್ವರೂಪವನ್ನು ನಾವು ಈಗಿನ ನಾಮಧಾರಿಗಳು ಮಹಂತ ಮಹಾತ್ಮರುಗಳೊಂದಿಗೆ ಹೋಲಿಸಿ ನೋಡಿದರೆ ಭೂಮ್ಯಾಕಾಶಗಳ ಅಂತರವು ಕಂಡುಬರುವುದು. ಶಾಸ್ತ್ರಗಳ ಅನುಸಾರ ತ್ಯಾಗ, ಪರೋಪಕಾರಗಳು ಸಾಧುವಿನ ಸರ್ವೋತ್ತಮ ಲಕ್ಷಣಗಳಾಗಿವೆ. ಇದಕ್ಕೆ ವಿಪರೀತವಾಗಿ ಇಂದಿನ ಸಾಧುಗಳು ಧನ ಸಂಗ್ರಹ ಮತ್ತು ಸ್ವಾರ್ಥ ಸಾಧನೆ ಇವುಗಳನ್ನೇ ತಮ್ಮ ಎಲ್ಲದಕ್ಕಿಂತ ದೊಡ್ಡ ಕರ್ತವ್ಯಗಳೆಂದು ಭಾವಿಸಿಕೊಂಡಿದ್ದಾರೆ. ದುಡಿಯುವ ಗೃಹಸ್ಥರು ಹೊಟ್ಟೆಗಿಲ್ಲದೆ ಉಪವಾಸ ಬೀಳುತ್ತಿರುವಾಗ, ಸೋಮಾರಿಗಳಾಗಿ ಕಾಲ ಕಳೆಯುವ ಸಾಧುಗಳು ಲಕ್ಷಾಧೀಶರೂ ಕೋಟ್ಯಾಧೀಶರೂ ಆಗಿರುವುದು ಈ ಕಾಲದ ವಿಶೇಷತೆಯಾಗಿದೆ. ಈ ಸಮಯ ಸಾಧುಗಳೆನಿಸಿಕೊಳ್ಳುವವರು ಜಮೀನುದಾರರಾಗಿರುತ್ತಾರೆ, ಸಾಗುವಳಿ ಮಾಡಿಸುತ್ತಾರೆ, ಸಾಲ ಕೊಡುತ್ತಾರೆ, ವ್ಯಾಪಾರ ಮಾಡುತ್ತಾರೆ, ಬಾಡಿಗೆಗೆ ಮನೆಗಳನ್ನು ಕಟ್ಟಿಸಿಡುತ್ತಾರೆ. ಒಮ್ಮೆ ನಮ್ಮ ಪರಿಚಿತ ಸಜ್ಜನರೊಬ್ಬರಿಗೆ ಸ್ವಲ್ಪ ಹಣದ ಅಗತ್ಯವಿದ್ದಿತು, ಆದರೆ ಸಾಲ ದೊರೆಯುವ ಮಾರ್ಗವಾವುದೂ ಕಂಡುಬರಲಿಲ್ಲ. ಆಗ ಬೇರೊಬ್ಬ ಗೃಹಸ್ಥರು ಅವರೊಡನೆ, ನೀವು ಇಂತಹ ಅಖಾಡೆಯ ಮಹಂತನ ಬಳಿಗೆ ಹೋದರೆ, ಅವನಿಂದ ನಿಮಗೆ ಹತ್ತು ಸಾವಿರದ ವರೆಗಿನ ಸಾಲವು ದೊರಕಬಹುದೆಂದರು. ವಿಚಾರಿಸಿದಲ್ಲಿ, ಉಕ್ತ ಮಹಂತನು ಎಷ್ಟೋ ವ್ಯವಸಾಯಿಗಳಿಗೂ ಜಮೀನುದಾರರಿಗೂ ತಾಲೂಕುದಾರರಿಗೂ ಇದೇ ರೀತಿ ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿರುವನೆಂದು ತಿಳಿದು ಬಂದಿತು. 'ನಾಗಾ' ಜನರ ಪ್ರಸಿದ್ಧವಾದ ನಿರಂಜನೀ ಅಖಾಡೆಯ ಸಂಪತ್ತಿನ ಮೌಲ್ಯವು ಒಂದು ಅರ್ಬುದ ರೂಪಾಯಿಗಳಿಗೆ ಹತ್ತಿರವಿದೆಯೆಂದೂ, ಅದರ ಕೋಶದಲ್ಲಿ ಕೋಟ್ಯಂತರ ರೂಪಾಯಿಗಳು ನಗದಿ ಇರುತ್ತದೆಂದೂ ಪ್ರತೀತಿಯಿದೆ. ಇದೇ ಪ್ರಕಾರ ಮಥುರೆ, ಗೋವರ್ಧನ ಮತ್ತು ನಾಥದ್ವಾರದ ಗೋಸಾಯಿಗಳ ಹಾಗೂ ಅಯೋಧ್ಯೆಯ ಮಹಂತರುಗಳ ಹತ್ತಿರ ಅಪಾರ ಸಂಪತ್ತಿಯಿರುತ್ತದೆಂದು ತಿಳಿಯಲಾಗಿದೆ. ಒಮ್ಮೆ ನಾವು ಅಯೋಧ್ಯೆಯ 'ಹನುಮಾನ್‌ಗಡೀ' ಮಂದಿರಕ್ಕೆ ಹೋಗಿದ್ದೆವು. ವಿಚಾರಿಸಲಾಗಿ, ಮಂದಿರದ ವಾರ್ಷಿಕ ಉತ್ಪತ್ತಿಯು ಸುಮಾರು ಮೂರು ಲಕ್ಷವಿದ್ದು ಖರ್ಚು ಅದಕ್ಕಿಂತ ಬಹಳ ಕಡಿಮೆಯೆಂದೂ, ಉಳಿದ ಹಣವನ್ನು ಮಂದಿರದ ಕೆಳಗಿರುವ ವಿಶಾಲವಾದ ನೆಲಮಾಳಿಗೆಯಲ್ಲಿ ಹಾಕಿಡಲಾಗುವುದೆಂದೂ, ಅದನ್ನೆಂದೂ ತೆಗೆಯದಿರುವ ಕಾರಣ ಈ ತನಕ ಅಲ್ಲಿ ಕೋಟ್ಯಂತರ ರೂಪಾಯಿಗಳು ಸಂಗ್ರಹವಾಗಿವೆಯೆಂದೂ ತಿಳಿದುಬಂದಿತು. ಮಧ್ಯ ಭಾರತದಲ್ಲಿ, ಮಹಾರಾಜ ಛತ್ರಸಾಲನ ಗುರುವಾದ ಪ್ರಾಣನಾಥನ ವಿಗ್ರಹವನ್ನು ಪ್ರತಿಷ್ಠಿಸಿರುವ ಒಂದು ಮಂದಿರದ ವಿಷಯದಲ್ಲಿ ತಿಳಿದುಬಂದಿರುವುದೇನೆಂದರೆ,—ಅದರ ಅಧಿಕಾಂಶ ಅನುಯಾಯಿಗಳು ಸ್ವರ್ಣಕಾರರಾಗಿದ್ದು, ಒಂದೆರಡು ವರ್ಷಗಳಿಗೊಮ್ಮೆ ಅವರು ಅಲ್ಲಿಗೆ ಯಾತ್ರಾರ್ಥಿಗಳಾಗಿ ಬರುವಾಗ ಒಂದು ರತ್ನಖಚಿತ

# ನಮ್ಮ ದೇಶದ ಧರ್ಮಜೀವಿಗಳು

**ದಿನ ಇಡೀ ದುಡಿಯುವ ಜನರು ಹೊಟ್ಟೆಗಿಲ್ಲದೆ ನರಳುತ್ತಿರುವಾಗ, ಸೋಮಾರಿಗಳಾಗಿ ಕಾಲ ಕಳೆಯುವ ಸಾಧು ಮಹಂತರುಗಳು ಲಕ್ಷಾಧೀಶ, ಕೋಟ್ಯಾಧೀಶರಾಗಿ ಮೆರೆಯುತ್ತಿದ್ದಾರೆ. ಯಾವ ತರದ ಜನೋಪಕಾರ ಕೆಲಸವೂ ಮಾಡದೆ ಭೋಗ ವಿಲಾಸಗಳಲ್ಲಿಯೇ ಮಗ್ನರಿರುತ್ತಾರೆ. ತೀರ್ಥಕ್ಷೇತ್ರಗಳೆಲ್ಲಾ, ಅನೀತಿ ಅತ್ಯಾಚಾರಗಳ ಆಶ್ರಯಗಳಾಗಿವೆ**

[ಸುಪ್ರಸಿದ್ಧ ಹಿಂದೀ 'ಚಾಂದ್' ಪತ್ರಿಕೆಯ ಬೋಧಪರ ಲೇಖನವೊಂದರ ಅನುವಾದ]

ಅನುವಾದಕ – ಉ ಚೆನ್ನಪ್ಪ, ಮುಂಬಯಿ

ಮೂರ್ತಿಯನ್ನು ತಂದೊಪ್ಪಿಸುವರು. ಆ ರತ್ನಗಳು ಭಂಡಾರದಲ್ಲಿ ಒಟ್ಟಾಗುತ್ತಲೇ ಇರುವುದರಿಂದ ಅವುಗಳ ಮೌಲ್ಯವು ಈಗ ಕೋಟ್ಯಂತರಕ್ಕೆ ಮುಟ್ಟಿರುತ್ತದೆ. ಇದೇ ನೇರೆಗೆ ಕಾಶಿಯ ವಿಶ್ವನಾಥ ಮಂದಿರ, ಪುರಿಯ ಜಗನ್ನಾಥ ಮಂದಿರ, ನಾಸಿಕದ ಕಾಲಾರಾಮ ಮಂದಿರ ಇತ್ಯಾದಿ ದೊಡ್ಡ ದೊಡ್ಡ ಮಂದಿರಗಳಲ್ಲೆಲ್ಲಾ ವರ್ಷಂಪ್ರತಿ ಲಕ್ಷಗಟ್ಟಳೆ ರೂಪಾಯಿಗಳು ಕಾಣಿಕೆಯ ರೂಪದಲ್ಲಿ ಬರುತ್ತಿದ್ದು, ಅವೆಲ್ಲವೂ ಮಹಂತರುಗಳ ಅಥವಾ ಪೂಜಾರಿಗಳ ಕೈಸೇರುತ್ತವೆ. ಎಂತಹ ಬಡ ಮಂದಿರಕ್ಕಾದರೂ ಕನಿಷ್ಠಪಕ್ಷ ಹತ್ತಾರು ಸಾವಿರದ ಸಂಪತ್ತಿಯು ಇದ್ದೇ ಇರುತ್ತದೆ. ಸಾಧುಗಳು ಆನೆ ಕುದುರೆಗಳನ್ನಿಟ್ಟುಕೊಳ್ಳುತ್ತಾರೆ, ಇವರ ಬಳಿಯಲ್ಲಿ ರಕ್ಷಣೆಗಾಗಿ ಬಂದೂಕುಧಾರಿಗಳು ನಿಯುಕ್ತರಾಗಿರುತ್ತಾರೆ. ಅವರು ಬೆಳ್ಳಿ ಭಂಗಾರಗಳ ಪಾತ್ರೆಗಳಲ್ಲಿ ಊಟ ಮಾಡುತ್ತಾರೆ, ಜರತಾರಿ ಪೋಷಾಕುಗಳನ್ನು ಉಟ್ಟುಕೊಳ್ಳುತ್ತಾರೆ. ಲಕ್ಷಾಂತರ ರೂಪಾಯಿ ಬೆಲೆಬಾಳುವ ರತ್ನ-ಖಚಿತ ಭೂಷಣಗಳನ್ನು ಧರಿಸುತ್ತಾರೆ, ಹಾಗೂ ಜಗತ್ತಿನ ಸಕಲ ಸುಖ-ಸಾಮಾಗ್ರಿಗಳನ್ನು ಅವರು ತಮ್ಮಲ್ಲಿ ಅಧಿಕಾಧಿಕವಾಗಿ ಸಂಗ್ರಹಿಸಿಕೊಂಡಿರುತ್ತಾರೆ.

ಇದು ಅವರ ತ್ಯಾಗದ ವರ್ಣನೆಯಾಯಿತು! ಅವರ ಪರೋಪಕಾರ-ವೃತ್ತಿಯ ಕಡೆಗೆ ದೃಷ್ಟಿಹಾಕಿದರೆ ಅವರಂತಹ ಸ್ವಾರ್ಥಿಗಳು ದೊರೆಯುವುದು ದುರ್ಲಭ. ದೇಶದಲ್ಲಿ ಬಹಳ ಸಮಯದಿಂದ ರಾಜಕೀಯ ಆಂದೋಲನವು ನಡೆಯುತ್ತಿದೆ, ಚಿಕ್ಕ-ದೊಡ್ಡ ಪ್ರತ್ಯೇಕ ವ್ಯಕ್ತಿಯೂ ಅದಕ್ಕೆ ಯಥಾ ಸಾಧ್ಯ ಆರ್ಥಿಕ ಸಹಾಯವನ್ನು ಕೊಡುತ್ತಾನೆ. ಇದೇ ಪ್ರಕಾರ ಇನ್ನಿತರ ಎಷ್ಟೋ ಸಾರ್ವಜನಿಕ ಕಾರ್ಯಗಳು ದೇಶದಲ್ಲಿ ನಡೆಯುತ್ತಲಿದ್ದು, ಅವುಗಳಿಗೆ ಬಡವ-ಬಲ್ಲಿದ ಗೃಹಸ್ಥರು ವಂತಿಗೆಯನ್ನು ಕೊಡುತ್ತಾರೆ. ಆದರೆ ಈ ಸಂಪನ್ನ ಸಾಧುಗಳು ಇಂತಹ ಬಲೆಗಳಿಗೆ ಎಂದಿಗೂ ಬೀಳುವುದೇ ಇಲ್ಲ. ಬಹುಶಃ ಇವರು ಸ್ವಯಂದಾನ ತೆಗೆದುಕೊಳ್ಳುವುದರಿಂದಲೂ, ಯಾಚಿಸುವುದರಿಂದಲೂ, ಇವರಲ್ಲಿ ದಾನ ಕೊಡುವ ಪ್ರವೃತ್ತಿಯೇ ಇರುವುದಿಲ್ಲ. ಅದಲ್ಲ, ತಮಗೆ ದಾನ ಕೊಡುವುದೇ ಎಲ್ಲದಕ್ಕಿಂತ ದೊಡ್ಡ ಪುಣ್ಯದ ಕಾರ್ಯವಾಗಿರುವಾಗ ತಾವಾರಿಗೆ ದಾನಕೊಡುವುದೆಂದು ಭಾವಿಸುತ್ತಿರಬಹುದು. ಕೆಲವು ಸಾಧು-ಮಹಂತರುಗಳು ಸದಾವರ್ತ, ಪಾಠಶಾಲೆ, ಔಷಧಾಲಯಾದಿಗಳಲ್ಲಿ ಸ್ವಲ್ಪ ವ್ಯಯಮಾಡುತ್ತಾರೆ. ಪರಂತು, ಈ ವಸ್ತುಗಳೇ ಅವರ ಸಂಪಾದನೆಯ ಸಾಧನಗಳಾಗಿದ್ದು ಅವುಗಳನ್ನು ತೋರಿಸಿಯೇ ಅವರು ಜನರಿಂದ ಹಣ ವಸೂಲು ಮಾಡುತ್ತಾರೆ.

ಸಾಧುಗಳ ಮೂರನೆಯ ದೊಡ್ಡ ಗುಣವೆಂದರೆ ಸದಾಚಾರವು. ಈಗಿನ ಧರ್ಮಜೀವಿಗಳು ಇದನ್ನು ಎಂತಹ ದುರ್ದಶೆಗೆ ತಂದಿರುವರೆಂಬುದನ್ನು ಹೇಳತೀರದು. ಭಾರತದ ಯಾವುದೇ ಧರ್ಮಸ್ಥಾನ, ಮಠ ಯಾ ಮಂದಿರದ ಅಧಿಷ್ಠಾತರಿರಲಿ,-ಅವರ ಮೇಲೆ ಚರಿತ್ರ ಭ್ರಷ್ಟತೆಯ ಆರೋಪಣೆಯಿಲ್ಲದಿರುವುದು ಬಹಳ ಕಡಿಮೆ. ಯಾವ ಧರ್ಮಗುರುಗಳು ಮತ್ತು ಮಂದಿರಗಳ ಮಹಂತರುಗಳು ಜನತೆಯ ಪೂಜ್ಯರೆನ್ನಿಸಿಕೊಳ್ಳುತ್ತಾರೋ, ಯಾರ ಚರಣ-ರಜ ಪ್ರಾಪ್ತಿಗಾಗಿ ಜನರು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಲಿಕ್ಕೆ ಸಿದ್ಧರಿರುತ್ತಾರೋ ಅಂದವರದೇ ಚರಿತ್ರೆ ಹಾಗೂ ಕರ್ಮಗಳ ರಹಸ್ಯವು ಬಯಲಾಗುವಾಗ ಆಶ್ಚರ್ಯಚಕಿತರಾಗಬೇಕಾಗುತ್ತದೆ. ಈ ಸಾಧು-ಮಹಂತರುಗಳು ನಿತ್ಯ ಬೆಲೆಯುಳ್ಳ ಉತ್ತಮ ತರಗತಿಯ ಭೋಜನವನ್ನು ಮಾಡುತ್ತಾರೆ, ಶೃಂಗಾರಯುಕ್ತವೂ ಸುಖಕರವೂ ಆದ ಮನೆ-ಮಹಲುಗಳಲ್ಲಿ ವಾಸಿಸುತ್ತಾರೆ, ಮಖಮಲಿನ ಹಾಸಿಗೆ ಲೋಡುಗಳ ಮೇಲೆ ಮಲಗುತ್ತಾರೆ. ತೊಲೆಗೆ ಐವತ್ತರಿಂದ ನೂರು ರೂಪಾಯಿಗಳ ವರೆಗಿನ ಅತ್ತರನ್ನು ಲೇಪಿಸಿಕೊಳ್ಳುತ್ತಾರೆ. ತಾಂಬೂಲ, ಬೀಡಿ, ಸಿಗರೇಟು, ಗಾಂಜಾ, ಭಂಗಿ, ಶರಾಬು ಮುಂತಾದ ಸಮಸ್ತ ಅಮಲು ಹಾಗೂ ಉತ್ತೇಜಕ ಪದಾರ್ಥಗಳನ್ನು ಸೇವಿಸುತ್ತಾರೆ. ಅನೇಕರು ಕಸ್ತೂರಿ, ಕೇಶರ, ಭಂಗಾರದ ಅರ್ಕ, ಮುತ್ತಿನ ಭಸ್ಮ ಇತ್ಯಾದಿ ನಾನಾ ತರದ ಶಕ್ತಿವರ್ಧಕ ಔಷಧಿಗಳನ್ನು ತಿನ್ನುತ್ತಾರೆ. **ಇಂಥಾ ದಶೆಯಲ್ಲಿ ಅವರ ಚಿತ್ತವು ಚಂಚಲವಾಗುವುದರಲ್ಲಿಯೂ, ಶಿಷ್ಯೆಯರನ್ನಾಗಲಿ ಸೇವಕಿಯರನ್ನಾಗಲಿ ಕೃತಾರ್ಥಗೊಳಿಸುವುದರಲ್ಲಿಯೂ ಆಶ್ಚರ್ಯವೇನಿದೆ?** ಇವೆಲ್ಲಾ ಸಾಮಾಗ್ರಿಗಳನ್ನು ಉಪಯೋಗಿಸುತ್ತಿದ್ದು ಕೂಡಾ ಯಾರು ನಿರ್ವಿಕಾರರಾಗಿಯೂ ನಿರ್ಲಿಪ್ತರಾಗಿಯೂ ಇರಬಲ್ಲರೋ, ಅಂತವರನ್ನು ಜೀವನ್ಮುಕ್ತರೆಂದೇ ಹೇಳಬಹುದು. ಇಲ್ಲವೆ, ಸರ್ವದಾ ನಪುಂಸಕ ವ್ಯಕ್ತಿಯು ಇಂತಹ ಪರಿಸ್ಥಿತಿಯಲ್ಲಿ ನಿಶ್ಚಲನಾಗಿರಬಹುದು. ಆದರೆ ಈ ಸಾಧು ಮಹಂತರುಗಳು ವಿದೇಹ ಪದವಿಗೇನೂ ಮುಟ್ಟಿರುವುದಿಲ್ಲ, ಅಥವಾ ನಪುಂಸಕರೂ ಆಗಿಲ್ಲ. ಅಂದ ಮೇಲೆ, **ಅವರು ಈ ಸಮಸ್ತ ವಿಲಾಸ ಸಾಮಗ್ರಿಗಳನ್ನೂ ಉತ್ತೇಜಕ ಪದಾರ್ಥಗಳನ್ನೂ ಉಪಯೋಗಿಸುತ್ತಿದ್ದು ಚರಿತ್ರಭ್ರಷ್ಟರಾಗದಿರುವುದಾದರೂ ಹೇಗೆ?**

ಈ ಸಾಧು ನಾಮಧಾರಿಗಳ ಕಾಮ-ಲೀಲೆಗಳನ್ನು ವಿಸ್ತಾರಪೂರ್ವಕ ವರ್ಣಿಸಲಿಕ್ಕೆ ಹೋದರೆ ಒಂದು ದೊಡ್ಡ ಪುಸ್ತಕವೇ ತಯಾರಾಗಬಹುದು. ಎಷ್ಟೋ ಮಂದಿರಗಳೂ ತೀರ್ಥಸ್ಥಾನಗಳೂ ಈ ಸಂಬಂಧದಲ್ಲಿ ಎಂತಹ ಅಪಕೀರ್ತಿಯನ್ನು ಗಳಿಸಿವೆಯೆಂದರೆ,—ಜನರು ಬಹಿರಂಗವಾಗಿ ಅವುಗಳನ್ನು ದುರಾಚಾರಗಳ ಕೇಂದ್ರಗಳೆಂದು ಸಂಬೋಧಿಸಿ ಕರೆಯುತ್ತಾರೆ. ಮುಂಬಾಯಿ ಪ್ರಾಂತದಲ್ಲಿ, ಜನತೆಯಲ್ಲಿ ಬಹಳ ಮಹಿಮೆಯು

THE
PANGAL NAYAK BANK
LIMITED.
ESTABLISHED 1920.
Paid up Capital Rs 1,82 100/-
*Head Office*: UDIPI.
Branches MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc, are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years Deposits.

Every other description of up-to-date Banking business is also undertaken

WANTED a bride for a Havayaka Dravida Brahmin youth of 26th well settled in life.

*Write to*—
'GOUTAMA'
**C/o Navayuga, Udipi, S. K**





ಒಂದೇ ತಿಂಗಳಲ್ಲಿ ಇಂಗ್ಲಿಷ್ ಎಂಬ
ಪುಸ್ತಕವನ್ನು ಕೊಂಡುಕೊಳ್ಳಿರಿ
ಕೆಳಗಿನ ವಿಳಾಸಕ್ಕೆ ೦-೩-೦ ಸ್ಟಾಂಪು ಕಳುಹಿಸಿ
**ನವಭಾರತ ಬುಕ್ ಡಿಪ್ಪೊ, ಉಡುಪಿ.**

ಇಷ್ಟೇ ಜಾಗಕ್ಕೆ
**ಒಂದೇ ಬಾರಿಗೆ 0-8-0.**
ಕಂಟ್ರಾಕ್ಟ ದರಗಳಿಗೆ
ಮೆನೇಜರರಿಗೆ ಬರೆಯಿರಿ

**ಹೊಸ ಏಜಂಟರು**
ಪುತ್ತೂರಿಗೆ
**ಶ್ರೀ. ಎಚ್. ಎಸ್. ಕಾಮತ್**
ಹರಿಹರ ಪ್ರೆಸ್, ಇವರನ್ನು ನಮ್ಮ ಏಜಂಟರನ್ನಾಗಿ ನೇಮಿಸಲಾಗಿದೆ.
**ಮೆನೇಜರ್, ನವಯುಗ.**

**ಬೊಂಬಾಯಿಯಲ್ಲಿ**
ಶ್ರೀ. ವಿ ಎಸ್. ಶಿಬ್ರೂರ್ಕರ್
ದಿ. ನೇಶನಲ್ ಕೆನರಾ ನ್ಯೂಸ್ ಏಜನ್ಸಿ, ಫೋರ್ಟ್,
ಇವರಲ್ಲಿ 'ನವಯುಗದ' ಬಿಡಿಪ್ರತಿಗಳು ದೊರೆಯುತ್ತವೆ.

**ಮನೆ ಅಳಿಯ**
ಅಥವಾ
**ಆನಂದ**
ಸರಸ ಸಾಮಾಜಿಕ ಕಾದಂಬರಿ
**ಬೆಲೆ 0-8-0.**
**ನವಭಾರತ ಬುಕ್ ಡಿಪ್ಪೊ, ಉಡುಪಿ.**

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ಸಾಫರ್ ಪೋರಿನ ತೋಟಿ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆಬರೆಯಿರಿ
**Bihar Nursery,**
**P. O. Bihar**
*Nursery (Darbhanga)* **BIHAR**

**ಇನ್ನು ಮುಂದೆ**
**ಈ ರೀತಿಯಾಗಿ**
**ಚಿಕ್ಕ ಜಾಹೀರಾತುಗಳನ್ನು**
**ಪ್ರಕಟಿಸುವ**
**ಯೋಜನೆ ಮಾಡಲಾಗಿದೆ.**


ರುವ ಒಂದು ದೊಡ್ಡ ತೀರ್ಥಕ್ಕೆ ನಿತ್ಯ ನೂರಾರು ಸ್ತ್ರೀಯರು ದುರಾಚಾರಕ್ಕೋಸ್ಕರ ಹೋಗುತ್ತಾರೆ. ಅವರಲ್ಲಿ ಹೆಚ್ಚಿನವರನ್ನು ಮಹಂತಜೀಯೂ ಆತನ ಶಿಷ್ಯರೂ ತೃಪ್ತಿಪಡಿಸುತ್ತಾರೆ. ಉಳಿದವರನ್ನು ಮಂದಿರದ ಮುಖ್ಯ ಮುಖ್ಯ ಭಕ್ತರ ಸನ್ನಿಧಿಗೆ ಕಳುಹಿಸಲಾಗುತ್ತದೆ. ಇದರ ಹೊರತು ಇಲ್ಲಿ ಯಾವನಾದರೊಬ್ಬ ಪುರುಷನು ಪರ ಸ್ತ್ರೀಯೊಬ್ಬಳನ್ನು ಕರತಂದು, ನಾಲ್ಕಾರು ದಿನಗಳಿದ್ದು ತನ್ನ ಕಾಮಲಾಲಸೆಯದನ್ನು ಪೂರೈಸಿಕೊಳ್ಳಲಿಕ್ಕೂ ತುಂಬಾ ಅನುಕೂಲತೆಯಿದೆ. ಹರಿದ್ವಾರ ಮತ್ತು ಹೃಷೀಕೇಶಗಳಂತಹ ಪರಮ ಪವಿತ್ರ ತೀರ್ಥಗಳ ಅವಸ್ಥೆಯೂ ಇದೇ. ಅಲ್ಲಿನ ಅಧಿಕಾಂಶ ನಾಥುಗಳು 'ಕಾಲೀ ರೊಟೀಧೌಲೀದಾಲ್' (ಇದು ಅವರ 'ಕೋಡ್ ವರ್ಡ್')- ಅಂದರೆ ಮಾಲಪೂರಿ ಮತ್ತು ಪರಮಾನ್ನವನ್ನು ಯಥೇಷ್ಟವಾಗಿ ಭುಂಜಿಸುತ್ತಾರೆ, ಅವುಗಳಿಂದ ಉತ್ಪನ್ನವಾದ ಮದವನ್ನು ಗಂಗಾಸ್ನಾನಕ್ಕೆ ಬರುವ ಪಂಜಾಬಿ ಸ್ತ್ರೀಯರಿಂದ ಇಳಿಸಿಕೊಳ್ಳುತ್ತಾರೆ ಪ್ರಯಾಗ, ಕಾಶಿ, ಗಯಾ, ಪುರಿ ಇತ್ಯಾದಿ ಸಕಲ ತೀರ್ಥಗಳ, ಮಂದಿರಗಳ ಹಾಗೂ ಧರ್ಮಸ್ಥಾನಗಳ ಸಂಬಂಧದಲ್ಲಿಯೂ ಸಾಮಾನ್ಯವಾಗಿ ಇದೇ ತರದ ಆರೋಪಣೆಗಳು ಕೇಳಬರುತ್ತವೆ ದಕ್ಷಿಣದ ಮಂದಿರಗಳ ಸ್ಥಿತಿಯು ಇನ್ನೂ ಪತಿತವಾಗಿದೆ ಅಲ್ಲಿಯ ಹಲವು ಮಂದಿರಗಳಲ್ಲಿ ದೇವದಾಸಿಯರದೊಂದು ದಳವೇ ಇರುತ್ತದೆ. ಅವರು ದೇವರ ಮುಂದ ಗಾಯನ-ನರ್ತನ ಮಾಡುತ್ತಿರುವುದರೊಂದಿಗೆ, ಮಂದಿರದಲ್ಲಿರುವ ಪೂಜಾರಿಗಳ ಕಾಮವಾಸನೆಯನ್ನೂ ಪೂರ್ತಿಗೊಳಿಸುತ್ತಿರುವರು! ಈ ದೇವದಾಸಿಯರು ಬಹಳ ಚಿಕ್ಕ ಪ್ರಾಯದಲ್ಲಿಯೇ ಮಂದಿರಗಳಿಗೆ ಅರ್ಪಿಸಲ್ಪಟ್ಟವರಾಗಿದ್ದು, ಅವರ ಇಡೀ ಜೀವಮಾನವು ಅಲ್ಲಿಯೇ ಕಳೆಯುವುದು ಒಮ್ಮೊಮ್ಮೆ ಯಾರಾದರೂ ಕಾಮುಕ ಪೂಜಾರಿಯು ಅಲ್ಪ ವಯಸ್ಸಿನ ಬಾಲಿಕೆಯನ್ನೇ ಹಿಡಿಯುವುದರಿಂದ ಆಕೆಯು ಸತ್ತು ಹೋಗುವುದೂ ಉಂಟು ಮಥುರಾ ವೃಂದಾವನಗಳಂತೂ ಶ್ರೀ ಕೃಷ್ಣನ ರಂಗಸ್ಥಳವೆನಿಸಲ್ಪಡುವುದರಿಂದ ಅಲ್ಲಿ ಸ್ತ್ರೀಯರೆಲ್ಲರನ್ನೂ ಗೋಪಿಕೆಯರೆಂದು ಭಾವಿಸಿ, ಅವರೊಂದಿಗೆ ರಾಸ-ಕ್ರೀಡೆಯಾಡುವುದು ಕೃಷ್ಣಭಕ್ತರ 'ಕರ್ತವ್ಯ'ವಾಗಿದೆ ಅಲ್ಲಿಯ ಗೋಕುಲೆಯರ ಹಾಗೂ ಗೋಸಾಯಿಗಳ ಮಂದಿರಗಳು ಈ ತರದ ಪಾಪ ಕೃತ್ಯಗಳಿಂದಾಗಿ ಪ್ರಸಿದ್ಧಿಗೊಂಡಿವೆ. ಈ ಸಂಬಂಧದಲ್ಲಿ ಅನೇಕ ಪುಸ್ತಕಗಳು ಪ್ರಕಟವಾಗಿವೆಯಲ್ಲದೆ ಮೊಕದ್ದಮೆಗಳು ಕೂಡಾ ನಡೆದಿವೆ. ಆದರೆ ಈಗಲೂ ಅವುಗಳ ಸ್ಥಿತಿಯಲ್ಲಿ ವಿಶೇಷ ಅಂತರವೇನೂ ಆಗಲಿಲ್ಲ ಈ ಗೋಸಾಯಿಗಳ ಭಕ್ತರಲ್ಲಿ-ಹೆಚ್ಚಾಗಿ ಮುಂಬಾಯಿಯ ಭಾಟಿಯಾರಲ್ಲಿ ಪ್ರತ್ಯೇಕ ನವ ವಧುವನ್ನು ಗೋಸಾಯಿಯ ಸನ್ನಿಧಿಯಲ್ಲಿ ಉಪಸ್ಥಿತಗೊಳಿಸಿ-'ತನು ಮನ-ಧನ ಗುಸಾಯಿ ಜೀ ಕೋ ಸಮರ್ಪಣ" ಎಂದು ಆಕೆಯಿಂದ ಹೇಳಿಸುವ ರೂಢಿಯು ಪ್ರಚಲಿತವಿರುವುದು ಯಾವಳಾದರೂ ಶಿಕ್ಷಿತ ಸ್ತ್ರೀಯು ಅದಕ್ಕೆ ಒಡಂಬಡದಿದ್ದರೆ, ಆಕೆಯ ಅತ್ತೆ ಮಾವಂದಿರು ಇಲ್ಲವೆ ಇತರ ಹಿರಿಯರು ಅವಳನ್ನು ಹಾಗೆ ಹೇಳಲಿಕ್ಕೆ ಒತ್ತಾಯಪಡಿಸುತ್ತಾರೆ. ಈ 'ಸಮರ್ಪಣೆ'ಯು ಕೇವಲ ಬಾಯಿ ಮಾತಿನಿಂದಾಗದೆ ಕಾರ್ಯರೂಪವಲ್ಲಿ ನೆರವೇರುತ್ತದೆ ಈ ಸಂದರ್ಭದಲ್ಲಿ ಗೋಸಾಯಿಯು ಕುಮಾರಿ ಕನ್ಯೆಯೊಂದಿಗೆ ನೂರಾರರಿಂದ ಹಿಡಿದು ಸಾವಿರಾರು ರೂಪಾಯಿಗಳ ವರೆಗಿನ ದ್ರವ್ಯವನ್ನೂ ಪಡೆಯುತ್ತಾನೆ ಆದರೆ ಎಷ್ಟೋ ಸಲ ವಿವಾಹಗಳು ಜೋರಿನಿಂದ ಜರಗುತ್ತಿರುವಾಗ ಗೋಸಾಯಿಗೆ ಪದೇ ಪದೇ ಈ ಕೆಲಸವನ್ನು ಪೂರೈಸಬೇಕಾಗಿ ಬಂದರೆ, ಅವನು ಲಾಭ ಹೊಂದುವುದಕ್ಕೆ ಬದಲಾಗಿ ನಷ್ಟಕ್ಕೆ ಗುರಿಯಾಗುವುದೂ ಉಂಟು ಮಥುರೆಯ ಒಬ್ಬ ಪ್ರಸಿದ್ಧ ಗೋಸಾಯಿಯು ಒಮ್ಮೆ ಇಂತಹ ಸಂದರ್ಭದಲ್ಲಿ ಮೊದಲೇ ಸಿದ್ಧನಾಗಿರುವುದಕ್ಕೋಸ್ಕರ ಯಾವುದೋ ಒಂದು ಔಷದಿಯನ್ನು ಸೇವಿಸಿದನು. ಔಷದಿಯು ಬಹಳ ತೀವ್ರವಿದ್ದು. ತಕ್ಕ ಸಮಯಕ್ಕೆ ಕಾರಣಾಂತರದಿಂದ ಗೋಸಾಯಿಗೆ ಬೇಟೆಯು ಹಸ್ತಗತವಾಗದಿರಲು, ಅವನ ಗುಪ್ತಾಂಗವು ಕೆಲವು ಕಡೆಗಳಲ್ಲಿ ಒಡೆದುಹೋಯಿತು ಆಗ ಡಾಕ್ಟರರು ಅದರ ಮೇಲೆ ಮೂರು ಪಟ್ಟಿಗಳನ್ನು ಹಾಕಿದುದರಿಂದ ಹೇಗೂ ಬದುಕಿಕೊಂಡನು ಇದೇ ಪ್ರಕಾರ ಮತ್ತೊಬ್ಬ ಗೋಸಾಯಿಯ ಅವಸ್ಥೆಯನ್ನೂ ಕೇಳಿರುವೆವು, ಅವನು ಇದೇ ತರದ 'ದರ್ಮಕಾರ್ಯ'ದಿಂದ ಬಹಳ ಅಶಕ್ತನಾಗಿ ಅವನ ಜೀವನವು ಸಂಕಟದಲ್ಲಿದ್ದಿತು ಆದರೆ ಭಕ್ತಜನರು ಎಡೆಬಿಡದೆ ಬರುತ್ತಿದ್ದುದರಿಂದ, ಪ್ರಾಚೀನ ನಿಯಮದ ರಕ್ಷಣೆಗಾಗಿಯೂ ಧನದ ಲಾಲಸೆಯಿಂದಲೂ ಆ ಬಡ ಗೋಸಾಯಿಗೆ ಆ ಕೆಲಸವನ್ನು ಮತ್ತೂ ಮಾಡಬೇಕಾಗುತ್ತಿದ್ದಿತು. ಅವನು ಪ್ರಾಣದ ಮೋಹದಿಂದ ಆಗಾಗ್ಗೆ ನಿರಾಕರಿಸುತ್ತಿದ್ದರೂ, ಭಕ್ತಜನರು ಗೋಸಾಯಿಯು ಕಾಣಿಕೆಯ ರೊಕ್ಕವು ಕಡಿಮೆಯಾದ ಕಾರಣ ನಿರಾಕರಿಸುತ್ತಿರುವನೆಂದು ಭಾವಿಸಿ, ಸರಿಯಾಗಿ ಕಾಣಿಕೆಯ ಧನವನ್ನು ಹೆಚ್ಚಿಸುತ್ತಿದ್ದರು. ಅಧಿಕ ಧನವನ್ನು ಕಂಡು ಮಂದಿರದ ಇತರ ಅಧಿಕಾರಿಗಳೂ ಗೋಸಾಯಿಯನ್ನು ಒತ್ತಾಯಪಡಿಸುತ್ತಿದ್ದುದರಿಂದ ಅವನು ನಿರ್ವಾಹವಿಲ್ಲದೆ ಒಪ್ಪಿಕೊಳ್ಳಬೇಕಾಗಿದ್ದಿತು ಹೀಗಾಗಿ ಅವನು ಕಡೆಗೆ ಬಹಳ ಅಲ್ಪಾಯುವಾಗಿಯೇ ಕಾಲವಾದನು

(ಮುಂದುವರಿಯುವುದು)

---


ಆದರೆ ತಾ| ೧ನೇ ಜನವರಿ ೧೯೩೮ರೊಳಗಾಗಿ ಮುಂಗಡ ಹಣವನ್ನು ಕಳುಹಿಸುವವರಿಗೆ ಈ ಗ್ರಂಥವು ಕೇವಲ ೨-೮-೦ ರೂಗಳಿಗೆ ಕೊಡಲಾಗುವುದು

ಈ ಗ್ರಂಥವು ಕನಿಷ್ಠ ೬೦ ಸಾವಿರ ವಾಚಕರಿಂದ ಓದಲ್ಪಡುವುದಾದ್ದರಿಂದ ಎಲ್ಲಾ ಪ್ರಮುಖ ಸ್ತ್ರೀಪುರುಷರು ಈ ಗ್ರಂಥದಲ್ಲಿ ತಮ್ಮ ಪರಿಚಯವನ್ನು ಪ್ರಸಿದ್ಧಿಸುವ ಸುಸಂಧಿಯನ್ನು ಕಳಕೊಳ್ಳಲಿಕ್ಕಿಲ್ಲವೆಂದು ನಂಬಿದ್ದೇವೆ

ಈ ಯೋಜನೆಯ ಲಾಭವನ್ನು ಪಡೆಯಲಿಚ್ಛಿಸುವವರು ವಿಶೇಷ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಬೇಕು —

**ಕಂ. ವಾ. ಜಹಾಗೀ,**
**ಕರ್ನಾಟಕ ಪಬ್ಲಿಸಿಟಿ ಸರ್ವ್ಹೀಸ**
**ಗಾಂಧಿ-ಚೌಕ, ಧಾರವಾಡ.**


## ಕರ್ನಾಟಕದಲ್ಲಿ ಒಂದು ಅಪೂರ್ವ ಸಾಹಸ

ಮಹಾಶಯರೇ,

ಸದ್ಯದ ಪ್ರಕಟನೆಯ ಯುಗದಲ್ಲಿ (Advertising Era) ಬಹುತರ ಎಲ್ಲ ದೇಶಗಳಲ್ಲಿಯೂ ತಮ್ಮ ತಮ್ಮ ನಾಡಿನ ಹಾಗೂ ನಾಡಿನಲ್ಲಿಯ ವ್ಯಕ್ತಿಸಂಸ್ಥೆಗಳ ಪರಿಚಯವನ್ನು ಎಲ್ಲರಿಗೂ ಮಾಡಿಕೊಟ್ಟು ನಾನಾವಿಧದಿಂದ ಪ್ರಕಟನೆ ಹಾಗೂ ಪ್ರಚಾರವನ್ನು Publicity and Propaganda) ಮಾಡಿ ತಮ್ಮ ನಾಡಿನಲ್ಲಿಯ ವ್ಯಾಪಾರೋದ್ಯಮಾದಿಗಳನ್ನು ವೃದ್ಧಿಗೊಳಿಸುವ ಅನೇಕಾನೇಕ ಪ್ರಯತ್ನಗಳು ನಡೆದಿವೆಂಬುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ ಬೇರೆ ನಾಡಿನವರು ಈ ಮೇರೆಗೆ ಸಾಧ್ಯವಿದ್ದ ಎಲ್ಲಾ ಮಾರ್ಗಗಳಿಂದ ತಮ್ಮ ಪ್ರಚಾರ ಕಾರ್ಯವನ್ನು ನಡೆಸಿರುವಾಗ ಕರ್ನಾಟಕವು ಮಾತ್ರ ಇನ್ನೂ ಅಂಧಕಾರದಲ್ಲಿಯೇ ಉಳಿದಿರುವದೆಂಬ ವಿಷಾದಕರವಾದ ಸಂಗತಿಯನ್ನು ನಾವು ಒಪ್ಪಲೇ ಬೇಕಾಗಿದೆ ಆದರೆ ಕೇವಲ ವಿಷಾದ ಪ್ರದರ್ಶನದಿಂದ ನಾವು ಸ್ವಸ್ಥ ಕೂಡದೆ ಶಕ್ಯವಿದ್ದ ಎಲ್ಲಾ ಪ್ರಕಾರದಿಂದ ಕರ್ನಾಟಕೇತರರಿಗೆ ನಮ್ಮ ಪ್ರಾಂತದಲ್ಲಿಯ ಪ್ರಮುಖ ಪಟ್ಟಣಗಳ, ಸಂಸ್ಥೆಗಳ ಉದ್ಯಮಗಳ ಹಾಗೂ ವ್ಯಕ್ತಿಗಳ ಪರಿಚಯವನ್ನು ಮಾಡಿಕೊಟ್ಟು ಕರ್ನಾಟಕವೆಂದರೊಂದು ಹಿಂದುಳಿದ ಪ್ರಾಂತವೆಂದು ಅವರ ಮನಸ್ಸಿನಲ್ಲಿದ್ದ ಭಾವನೆಯನ್ನು ನಾವು ಹೋಗಲಾಡಿಸಲಿಕ್ಕ ಬೇಕು ಇದೇ ಉದ್ದೇಶದಿಂದ ನಾವು ನಮ್ಮ ಅಖಿಲ ಕರ್ನಾಟಕದಲ್ಲಿಯ (ಅಂದರೆ ಮುಂಬೈ ಹಾಗೂ ಮದ್ರಾಸ ಕರ್ನಾಟಕ, ಮೈಸೂರು ಸಂಸ್ಥಾನ ಹಾಗೂ ಕೂರ್ಗ, ನೈಜಾಂ, ಸೊಂಡೂರ, ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯ ಕರ್ನಾಟಕ ಭಾಗದಲ್ಲಿಯ) ಪ್ರಮುಖ ಪಟ್ಟಣಗಳ, ಸಂಸ್ಥೆಗಳ, ಉದ್ಯಮಗಳ, ಹಾಗೂ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಮತ್ತು ಶೈಕ್ಷಣಿಕ ಚಳವಳಿಗಳ ಸಂಕ್ಷಿಪ್ತ ಪರಿಚಯವನ್ನು ಕೊಟ್ಟು ಆ ಬಳಿಕ ಮೇಲೆ ವಿವರಿಸಿದ 'ವಿಶಾಲ ಕರ್ನಾಟಕ'ದಲ್ಲಿಯ ಪ್ರಮುಖ ವ್ಯಕ್ತಿಗಳ ಅಂದರೆ ಬೇರೆ ಬೇರೆ ವಿಧಿ ಮಂಡಳಗಳ, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಹಾಗೂ ಉಳಿದ ಸಾರ್ವಜನಿಕ ಸಂಸ್ಥೆಗಳ ಸಭಾಸದರೂ, ಕೋ ಆಪರೇಟಿವ್ ಬ್ಯಾಂಕ್‌ಗಳ ವಿಮಾಕಂಪನಿಗಳ ಹಾಗೂ ಬೇರೆ ಲಿಮಿಟೆಡ್ ಕಂಪನಿಗಳ ಡಾಯರೆಕ್ಟರರು, ಪ್ರಸಿದ್ಧ ವಕೀಲರು, ಡಾಕ್ಟರರು, ಪ್ರೊಫೆಸರರು, ನಟರು ಹಾಗೂ ಕಲಾಕೋವಿದರು, ಪತ್ರಪಂಡಿತರು, ಲೇಖಕರು, ಹಾಗೂ ಮುದ್ರಕರು, ವರ್ತಕರು ಹಾಗೂ ಏಜಂಟರು ಈ ಪ್ರಕಾರ ಕರ್ನಾಟಕದಲ್ಲಿಯ ಹಾಗೂ ಕರ್ನಾಟಕದಿಂದ ವ್ಯವಸಾಯಕ್ಕಾಗಿ ಹೊರಗಿನ ಪ್ರಾಂತಗಳಲ್ಲಿ ಹೋಗಿ ವಾಸಿಸಿರುವ ಪ್ರಮುಖ ಸ್ತ್ರೀ ಪುರುಷ ಕನ್ನಡಿಗರ ಸಂಕ್ಷಿಪ್ತ ಪರಿಚಯವನ್ನು ಎಲ್ಲರಿಗೂ ಮಾಡಿಕೊಡುವ ಉದ್ದೇಶದಿಂದ ನಾವು ಒಂದು 'ಕರ್ನಾಟಕ ಪರಿಚಯ ಗ್ರಂಥ' (Karanatak who's who) ಎಂಬ ಒಂದು ಸಚಿತ್ರ ಗ್ರಂಥದ ಪ್ರಸಿದ್ಧಿಕರಣದ ಕಾರ್ಯವನ್ನು ಕೈಕೊಂಡಿದ್ದು ಈ ಕಾರ್ಯದಲ್ಲಿ ಎಲ್ಲಾ ಕನ್ನಡಿಗರು ನಮಗೆ ಉದಾರ ಮನಸ್ಸಿನಿಂದ ಸಹಾಯವನ್ನೀಯುವರೆಂದು ನಂಬಿದ್ದೇವೆ

ಕ್ರೌನ ೧/೮ ಆಕಾರದ ಸುಮಾರು ೪೦೦ ಪುಟಗಳ ಈ ಗ್ರಂಥದಲ್ಲಿ 'ವಿಶಾಲ ಕರ್ನಾಟಕ'ದ ಒಂದು ನಕ್ಷೆಯನ್ನು ಮತ್ತು ಕರ್ನಾಟಕದಲ್ಲಿಯ ಪ್ರಮುಖ ಪಟ್ಟಣಗಳ, ಸಂಘ ಸಂಸ್ಥೆಗಳ, ಉದ್ಯಮಾಲಯಗಳ ಹಾಗೂ ಪ್ರಮುಖ ವ್ಯಕ್ತಿಗಳ ಪಡಿಯಚ್ಚುಗಳನ್ನಾದರೂ ನಾವು ಮುದ್ರಿಸತಕ್ಕವರಿದ್ದೇವೆ ಈ ಗ್ರಂಥಕ್ಕಾಗಿ ನಾವು ಉತ್ತಮ ತರಗತಿಯ ಹೊಳಪಿನ ಕಾಗದವನ್ನು ಉಪಯೋಗಿಸ ತಕ್ಕವರಿದ್ದು ಶಕ್ಯವಿದ್ದ ರೀತಿಯಿಂದ ಅದನ್ನು ಆಕರ್ಷಕವಾಗಿಯೂ ಅಂದವಾಗಿಯೂ ಸಿದ್ಧಪಡಿಸಿದ ಈ ಉಪಯುಕ್ತ ಗ್ರಂಥವು ಶಾಶ್ವತವಾಗಿ ಉಳಿಯಬೇಕೆಂದು ಅದಕ್ಕೆ ಕ್ಯಾಲಿಕೋ ಬಾಯಿಂಡಿಂಗ ಮಾಡಿಸತಕ್ಕವರಿದ್ದೇವೆ. ಇಷ್ಟಿದ್ದರೂ ಇಂಥಾ ಸಚಿತ್ರ ಅಮೂಲ್ಯವಾದ ಈ ಗ್ರಂಥದ ಬೆಲೆಯು ಮಾತ್ರ ಕೇವಲ ಮೂರೇ ರೂಪಾಯಿ ಇರುವದು.

# ಆರೋಗ್ಯ ಭಾಗ್ಯ

## ದೇಹ ದಣಿಸುವವನನ್ನು ರೋಗ ದಣಿಸುವುದಿಲ್ಲ. ಮಲಬದ್ಧತೆಯ ನಿವಾರಣೋಪಾಯಗಳು.

ಲೇಖಕ:—ಪಿ. ಶೀನ ಶೆಟ್ಟಿ, ಗುಂಡಿಬೈಲು, ಉಡುಪಿ

ತಾರುಣ್ಯದ ಹೊಸ್ತಿನಲ್ಲಿರಲು, ಸಾಧಾರಣ ದೇಹಧಾರ್ಢ್ಯತೆಯುಳ್ಳ ಒಬ್ಬ ಬಲಿಷ್ಟ ಪುರುಷನನ್ನ ನೋಡಿದೊಡನೆ ತನಗೂ ಹಾಗಾಗಬೇಕೆಂಬ ಇಚ್ಛೆಯು ಅನೇಕ ಯುವರಕಲ್ಲಿ ಮೂಡುವದು ಸ್ವಾಭಾವಿಕವಾದುದು. ಬಲಿಷ್ಠನ ಸ್ನಾಯುಗಳ ಶೋಭೆಯನ್ನು, ಆತನ ದೇಹದ ಎಳೆತೆಯನ್ನು ಕಂಡು ಹಲವರು ತಾವೂ ಹಾಗಾಗಬೇಕೆಂದು ಆತನನ್ನು ನೋಡಿದ ಅಂದೇ—ಮುಂಜಾನೆ ಕಂಡಿದ್ದರೆ ಸಂಜೆಯೇ ಭಾರ ಎತ್ತಲೂ, ಎದೆ ವಿಸ್ತರಿಸುವ ಸಲಕರಣೆಗಳನ್ನು ಉಪಯೋಗಿಸಲೂ, ಅದವಾ ಸಲಕರಣೆಗಳು ದೊರೆಯದಿದ್ದಲ್ಲಿ ಲೆಕ್ಕ ಮಿತಿಯಿಲ್ಲದ ದಂಡು ಮತ್ತು ಬಸ್ಕಿಗಳನ್ನು ತೆಗೆಯಲೂ ಮೊದಲು ಮಾಡುವರು. ಹೆಚ್ಚೆಂದರೆ ಒಹಳ ಶ್ರದ್ಧೆಯಿಂದ ಒಂದು ತಿಂಗಳು ಜಿದರನ್ನಿಳಿಸಿ, ಕೊನೆಗೆ ಬಿಟ್ಟು ಬಿಡುವುದೂ ಉಂಟು. ಒಂದುವಾರದಲ್ಲಿಯೇ ವ್ಯಾಯಾಮ ಶಾಲೆಗಳಿಗೆ ನಮಸ್ಕಾರವಿತ್ತು, ಪುನಃ ಶಾಲೆಯೊಳಗೆ ಕಾಲಿಡದೆ ಇದ್ದವರೂ ಅನೇಕರಿರುವರು. ಇದಕ್ಕೆ ಕಾರಣವೇನು?

ಒಂದು ಸಂದರ್ಭದಲ್ಲಿ ಅವರು ಇಚ್ಛಿಸಿದ ಸ್ನಾಯುಗಳ ಉಬ್ಬು ಏಕೆಯೂ ಅಡಗಿಹೋಗಲೂ ಬಹುದು. ಇಲ್ಲವೇ ಎದೆಯೊಡೆದು ಅತ್ಯಂತ ವೇದನೆಗೆ ಬಾಗಿಗಳಾಗಿರಬೇಕು ಅಲ್ಲದೆ ಇದ್ದಲ್ಲಿ, ನಿಂತಲ್ಲಿಯೇ ತಲೆ ತಿರುಗಿ ಕಣ್ಣು ಕತ್ತಲೆ ಬಂದು ಬೀಳುವ ಸಮಯವು ಒದಗಿರಬೇಕು, ಮತ್ತು ಹಲವರು ಅಂಗಾಂಗಗಳ ನೋವನ್ನು ಸಹಿಸಲಾರದ ಕಾರಣ ಬೇಸರ ಪಟ್ಟಿರಬಹುದು. ಸಹಜವಾಗಿಯೂ ಮನುಷ್ಯನ ಆರೋಗ್ಯಕ್ಕೆ ಅಂಗಸಾಧನೆಯೂ ಕೆಳಹದಿಯಿಂದ ಮೇಲೆ, ಅಂತಹ ಅಂಗಸಾಧನೆಯಲ್ಲಿಯೇ ಅನಾಹುತಗಳಾಗುವುವೆಂದರೆ, ಆ ಅಂಗಸಾಧನೆಯಾದರೂ ಹೊಸ ರೀತಿಯದ್ದಿರಬಹುದೇ ಎಂಬ ಪ್ರಶ್ನೆಯು ಬರುವುದು. ಎಷ್ಟೋ ಕಾಲದಿಯಲ್ಲಿ ಈಗಲೂ ಈ ಪ್ರಶ್ನೆಯು ಬೇರೆ ಬೇರೆ ರೀತಿಯಿಂದ ಚರ್ಚಿಸಲ್ಪಡುವುದು.

ಒಬ್ಬನು ಭಾರ ಎತ್ತುವುದು ಒಳ್ಳೆಯದೆಂದೂ, ಮತ್ತೊಬ್ಬನು ಎದೆ ವಿಸ್ತರಿಸುವ ಸಲಕರಣೆಯು (chest expander) ಮೇಲೆಂದೂ, ಇನ್ನು ಕೆಲವರು (gymnastics) ಗರಡಿ ಸಾಧನೆಯು ಅತ್ಯುಪಯೋಗವಾದುದೆಂದೂ, ಹಾಗೆಯೇ ದಂಡ್ಯಾವೂ, ಈಜುವುದೂ, ಓಡುವುದೂ, ಗುದ್ದಾಡುವುದೂ (Boxing) ಎಲ್ಲವೂ ಇನ್ನೂ ಅನೇಕ ರೀತಿಯ ವ್ಯಾಯಾಮಗಳು ಒಳ್ಳೆಯದೆಂದೂ ವಿಧವಿಧದ ಅಭಿಪ್ರಾಯಗಳಿರುವುವು. ಹಲವರು ಯೋಗಾಸನಗಳ ಮೇಲೆ ಯಾವುದರ ಕಾರ್ಯಭಾರವೂ ನಡೆಯದೆಂದು ಒತ್ತಿ ಹೇಳುತ್ತಿರುವರು. ಇವರೆ ಆರೋಗ್ಯವನ್ನು ಬಯಸುವವನು ಯಾವ ಮಾರ್ಗವನ್ನು ಹಿಡಿದು ಅಭ್ಯಾಸ ಮಾಡಬಹುದು ಎಂಬ ಶಂಕೆಯು ಬರುವುದು.

ಜಗತ್ತಿನಲ್ಲಿ, ವ್ಯಾಯಾಮದ ರೀತಿಗಳಲ್ಲಿ ಎಷ್ಟು ತೆರನಾದ ಭೇದಗಳಿವೆಯೋ ಅಂತೆಯೇ ಸಾಧಕನ ಮನಸ್ಸಿನಲ್ಲಿಯೂ ಅನಂತ ಭೇದಗಳಿವೆ. ಒಬ್ಬನು ಸರ್ವಾಂಗದಲ್ಲಿಯೂ ಸಂಪೂರ್ಣತೆಯನ್ನು ಹೊಂದಿದ ಬಲವಾದ ಸ್ನಾಯುಗಳನ್ನು ಆಶಿಸುವನು. ಮತ್ತೊಬ್ಬನು, ಉಂಡ ಊಟವು ಜೀರ್ಣವಾಗಿ ರಾತ್ರಿ ಸುಖನಿದ್ರೆಯಿಂದ ಕಾಲ ಕಳೆದರೆ ಸಾಕೆಂದು ಊಹಿಸುವನು. ಇನ್ನೊಬ್ಬನು ಹಿಂದೂಸ್ಥಾನದ ಪಹಿಲವಾನರಂತೆ ಅತಿ ದಪ್ಪವಾದ ಕುತ್ತಿಗೆ, ಎದೆ ಮತ್ತು ಕಾಲುತೊಡೆಗಳನ್ನು ಬಯಸುವನು. ನಾಲ್ಕನೆಯವನು ಜನಾಂಗದ ಗ್ರೀಕ್ ಪ್ರಖ್ಯಾತರಾದ ಪುರುಷರ ವಿಸ್ತಾರವಾದ ಭುಜಗಳಿಂದ ತುಂಬಿರುವಂತಹ ದೇಹವನ್ನು ಆಶಿಸುವನು. ಐದನೆಯವನು ಕ್ರಾಂಗನಾದರೂ ಬಲಿಷ್ಠನೆಂದೆಣಿಸಿಕೊಳ್ಳಲು ಯತ್ನಿಸುವನು. ಹಾಗೆಯೇ ಸಾಧನೆಗಳು.

ಈ ವಿಧದ ಸಾಧನೆಗಳ ಸಮೀಕ್ಷಣವನ್ನು ಸ್ವಲ್ಪ ಮಾಡಿ ಯೋಚಿಸುವ. ಸಾಧಕನು [illegible] ಉಪಯೋಗಿಸುವವನಾದರೂ ಒಂದು ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳುವನು. ಅದು ಆತನ ಸಾಧನೆಗೆ ಸಹಾಯವಾಗುವ ಆಹಾರವನ್ನು ತುಂಬಿಸಿಕೊಳ್ಳುವ ಹೊಟ್ಟೆ. ಅದು ಆತನ ಅಪತ್ತಿನ ಸಹನದ ಜೋಪಾಸನದ ಸಲುವಾದ ಕೋಶ. ಆತನ ಅಂಗಶಕ್ತಿಯನ್ನು ತಯಾರು ಮಾಡುವ ಯಂತ್ರಶಾಲೆ. ಅಮೃತವನ್ನು ಹೀರಿ ವಿಷವನ್ನು ಹೊರಗೆ ಅಟ್ಟುವ ಮಹಾತ್ಮ.

ಈ ಮಹಾತ್ಮನು ಹಲವರಲ್ಲಿ ಐಶ್ವರ್ಯದ ಚಿಹ್ನೆಯೆಂದು ಉಬ್ಬಿಕೊಂಡಿರುವನು. ಹಲವರಲ್ಲಿ ಅಸಮಾಧಾನವಟ್ಟು ಹಿಂದೆ ಚಲಿಸಿ ಬೆನ್ನಿಗೆ ಶರಣು ಹೊಕ್ಕಿರುವನು. ಇಂತಹ ಮಹಾತ್ಮ ಹೊಟ್ಟೆಯ ಕಷ್ಟ ಆಗಾಗ್ಗೆ ವಿಚಾರಿಸದಿದ್ದರೆ ಯಾವ ನಿತ್ಯವಾದ ಸಾಧನೆಗಳನ್ನು ಮಾಡತಕ್ಕ ಸಾಧಕನಾದರೂ ಮುಂದುವರಿಯಲು ಸಾಧ್ಯವಿಲ್ಲ.

ಜೀವಮಾನವೇ ಹೊಟ್ಟೆಯು ಮಾಡುತ್ತಿರುವ ಕೆಲಸದ ಮೇಲೆ ಆಧಾರವಾಗಿ ನಿಂತಿದೆ. ಹೊಟ್ಟೆಯ ಕಾರ್ಯಭಾರವು ಸರಿಯಾಗದಿದ್ದರೆ ಇತರ ಅಂಗಗಳು ಪ್ರಾಯಶ್ಚಿತ್ತವನ್ನು ಪಡೆಯಬೇಕಾಗುತ್ತವೆ. ಉದರದ ಮುಖ್ಯ ಕೆಲಸವು ಜೀರ್ಣಿಸುವುದೊಂದೇ ಎಂದಮೇಲೆ ಆ ಜೀರ್ಣಶಕ್ತಿಯನ್ನು ಅನುಸರಿಯಾಗಿ ಮಾಡುವದೋ ಎಂದು ನಾವು ಮೊದಲು ಗಮನ ಕೊಡತಕ್ಕದ್ದು. ಎರಡನೆಯದಾಗಿ ಜೀರ್ಣಿಸಿ ಸತ್ವಾಪಹರಣವಾದಮೇಲೆ ಉಳಿದ ನಿಷ್ಪ್ರಯೋಜನವಾದ ವಸ್ತುವು ಹೊರಗೆ ಹೋಗುವುದೋ ಎಂದು ಲಕ್ಷ್ಯಕೊಡುವುದು ವಿಶೇಷಜವಾಬ್ದಾರಿಯ ಕೆಲಸವಾಗಿರುತ್ತದೆ.

ಇದೊಂದು ಗಮನವು ಉಚ್ಚವಾದುದು ಅಲ್ಲದೆ ಜೀವನ ಸರ್ವಸ್ವವಾದುದು. ಈ ಭಯಂಕರವಾದ ಮಲಬದ್ಧತೆಯೆಂಬ ಕಾಯಿಲೆಯು ಸಾವಿರಗಟ್ಟಲೆ ಇಲ್ಲವೆ ಲಕ್ಷಗಟ್ಟಲೆ ಜನರನ್ನು ನರಳಿಸುತ್ತಿರುವುದು ಎಂದರೂ ಹೆಚ್ಚೆನಿಸದು. ನಮ್ಮ ಹಿಂದೀಯರು ಮಾತ್ರ ಇದರಿಂದ ಪೀಡಿಸಲ್ಪಡುವದಲ್ಲ. ಜಗತ್ತೇ ಇದೊಂದು ಬೇನೆಯ ಬಾಯಿಗೆ ತುತ್ತಾಗಿರುವುದು. ಭಯಂಕರವಾಗಿ ಪರಿಣಮಿಸಿರುವ ಈ ಮಲಬದ್ಧತೆಯನ್ನು ಹೋಗಲಾಡಿಸುವ ದ್ವಂದ್ವ ಯುದ್ಧಕ್ಕೆ ಮೊದಲು ಮಲಬದ್ಧತೆಯ ಕಾರಣವೇನೆಂಬುವನ್ನು ನಾವು ಅರಿಯಬೇಕು.

(ಮುಂದುವರಿಯುವುದು.)


ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

**ಶ್ರೀಮದ್ಭುವನೇಂದ್ರ ಮಹೌಷಧಾಲಯ.** ಕಟಪಾಡಿ, ದ. ಕ.

**ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.**

**ಇವರಲ್ಲಿ---**

| ಗುಡಪಿಪ್ಪಲಿ (ಲೀವರ್ ರೋಗಕ್ಕೆ) | ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) | ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ) |
|---|---|---|

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

**ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು!** ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

## ವಿದ್ಯಾ ಇಲಾಖಾ ಸೆಕ್ರೆಟರಿಯವರಿಗೆ,— ಟೀಚರ್ ಮೆನೇಜರರ ಸಂಘದ ಮನವಿ.

ವಿದ್ಯಾ ಇಲಾಖಾ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಸಿ ಜೆ ವಾರ್ಕಿಯವರಿಗೆ ತಾ 25–8–37ರಲ್ಲಿ ಶ್ರೀ. ಉಳ್ಳಾಲ ಮಂಗೇಶರಾಯರ ಮುಂದಾಳುತನದಿಂದ ಜಿಲ್ಲಾ ಟೀಚರ್ ಮೆನೇಜರರ ಸಂಘದ ಪರವಾಗಿ ಅರ್ಪಿಸಿದ ಮನವಿಯ ಸಾರಾಂಶ.

ಟೀಚರ್ ಮೆನೇಜರರ ಸಂಘವು ಕಾಂಗ್ರೆಸ್ ಸರಕಾರವನ್ನು ಭಕ್ತಿಯಿಂದ ಸ್ವಾಗತೀಕರಿಸುವುದಲ್ಲದೆ, ಬೋರ್ಡ್ ಶಾಲೆಗಳಿಗಿಂತಲೂ ಕಡಿಮೆ ಖರ್ಚಿನಿಂದ ವಿದ್ಯಾಪ್ರಚಾರವಮಾಡುತ್ತಿರುವ ಖಾಸಗಿ ಶಾಲೆಗಳ ಹಾಲಾಹಲವಾಲೆಗಳು ಪ್ರಜಾ ಸರಕಾರದಿಂದ ಪೂರೈಸಲ್ಪಡಲಿ ಎಂಬುದಾಗಿ ದೇವರನ್ನು ಪ್ರಾರ್ಥಿಸುತ್ತದೆ

ಬೋರ್ಡ ಶಾಲೆಗಳ ದರದಲ್ಲಿ ಖಾಸಗಿ ಶಾಲೆಗಳ ಗ್ರಾಂಟನ್ನು ಕೊಡುವರೆ ಸಾಧ್ಯವಿಲ್ಲವಾಗಿದ್ದರೆ ಕೊನೆಯಪಕ್ಷ ಈ ಕಳಗಿನ ದರದಲ್ಲಿಯಾದರೂ ಗ್ರಾಂಟಿನ ಸ್ಕೇಲನ್ನು ತಿದ್ದು ಪಡಿಮಾಡಬೇಕು

| | ಅನ್‌ಟ್ರೈನ್ಡ್ | ಟ್ರೈನ್ಡ್ |
|---|---|---|
| (a) ಲೋವರ್ ಗ್ರೇಡ್ ತಿಂಗಳಿಗೆ ರೂಪಾಯಿ | 8 | 12 |
| (b) ಹಾಯರ್— — | 12 | 16 |
| (c) ಸೆಕೆಂಡರಿ— - | 16 | 20 |

ಉತ್ತಮ ಶಾಲೆಗಳಿಗೆ ಮೊದಲಿನಂತೆ ಇನ್ಕ್ರೀಮೆಂಟಿನ ಗ್ರಾಂಟಿನ ರಿಯಾಯತಿಯನ್ನು ಪುನಃ ಜ್ಯಾರಿಯಲ್ಲಿ ತರಬೇಕು ಬಿಲ್ಡಿಂಗ್ ವ ಫರ್ನಿಚರ್ ಗ್ರಾಂಟುಗಳಿಗೆ ಸಾಕಷ್ಟು ಹಣವನ್ನು ಒದಗಿಸಿಕೊಡಬೇಕು. ೪ನೇ ದರ್ಜೆಯ ವರೆಗೆ ಮಾಫಿ ವ ಖಡ್ಡಾಯ ವಿದ್ಯಾಭ್ಯಾಸವನ್ನು ಜ್ಯಾರಿಗೆ ತರುವುದಲ್ಲದೆ ಆ ಸಂಬಂಧ ಫೀಸಿನಿಂದ ಉಂಟಾಗುವ ನಷ್ಟವನ್ನು ಮೆನೇಜ್‌ಮೆಂಟಿನವರಿಗೆ ಕಂಪೆನ್‌ಸೇಶನ್ ಗ್ರಾಂಟಿನ ರೂಪದಿಂದ ಕೊಡಿಸಬೇಕು ಸರಕಾರದವರು ಗ್ರಾಂಟು ಹಂಚುತ್ತಿದ್ದ ಕ್ರಮದಲ್ಲಿ ಅಕ್ರಮವಿದೆ ಎಂತಲೂ ಒಂದು ಮೂಲೆಯಲ್ಲಿರುವ ದಕ್ಷಿಣ ಕನ್ನಡಜಿಲ್ಲೆಗೆ ಬಹಳ ಅನ್ಯಾಯವಾಗುತ್ತದೆ ಎಂತಲೂ ಸ್ಪಷ್ಟವಾಗಿರುವುದರಿಂದ ಇಂಥಾ ಅನ್ಯಾಯವನ್ನು ಮುಂದಕ್ಕೆ ಆಗಗೊಡಿಸಬಾರದು. ಕೆಥೋಲಿಕ್ ಪಾದ್ರಿಗಳ ತಮ್ಮ ಶಾಲೆಗೆನೇ ಬರಬೇಕೆಂಬ ನಿರ್ಬಂಧವನ್ನು ತೆಗೆದುಹಾಕಬೇಕು ಟೀಚರ್ ಮೆನೇಜರರಿಗೆ ತಾಲೂಕಿಗೊಬ್ಬ ಪ್ರತಿನಿಧಿಯಂತೆ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನಲ್ಲಿ ಸ್ಥಾನಗಳನ್ನು ಕೊಡಿಸಬೇಕು

ಅನಾವಶ್ಯಕವಾದ ಹುಡುಗಿಯರ ಶಾಲೆಗಳನ್ನು ಹುಡುಗರ ಶಾಲೆಯೊಂದಿಗೆ ಸೇರಿಸಬೇಕು. ಟ್ರೈನಿಂಗ್ ಶಾಲೆಗಳ ಎರಡು ವರ್ಷದ ಅವಧಿಯನ್ನು ಒಂದೇ ವರ್ಷಕ್ಕೆ ಇಳಿಸಬೇಕು.

**ಕುರುಕಾಲ್ ಗಣಪಯ್ಯ ಸೆಟ್ಟಿ,**
ಪ್ರೆಸಿಡೆಂಟ್,
ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘ

ಆಕೆ —ಏನ್ರೀ ಪೇಪರು ಓದಿದ್ರೆ ಹೊಟ್ಟೆ ತುಂಬುತ್ತೇನು?

ಅವನು:—ಏನೇ ಹುಚ್ಚೀ! ಪೇಪರು ಓದಿದ್ರೇ ಹೊಟ್ಟೆತುಂಬುತ್ತೋ? ಮನಸ್ಸಿಗೆ ಆನಂದವಾಗುತ್ತೆ ಊರೂರ ಸುದ್ದಿ ತಿಳಿಯುತ್ತೆ

ಆಕೆ:—ಆ "ಭಿಕಾರಿಣಿ" ಕಥೆ ಬರುವುದು ಈ "ನವಯುಗ"ದಲ್ಲಿ ತಾನೆ?

ಅವನು:—ಹೌದು ಅದನ್ನೇ ನಾನೀಗ ಓದುತ್ತಿರೋದು ನಾನಿದಕ್ಕೆ ಚಂದಾದಾರನಾಗಿದ್ದೀನಿ.

ಆಕೆ —ಚಂದಾಹಣ ಕಳುಹಿಸಿದ್ದೀರಿ ತಾನೆ?


**ನೀವು ಉಡುಪಿಗೆ ಬಂದಾಗ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ ?**

ಹೈಸ್ಕೂಲುಗಳ ಕೋರ್ಟು ಕಚೇರಿಗಳ ಹೆಚ್ಚೇಕೆ? ಯಾವತ್ತೂ ವ್ಯವಹಾರ ಕ್ಷೇತ್ರಗಳ ಕೇಂದ್ರದಲ್ಲಿ ತಾಲೂಕು ಕಚೇರಿ ಎದುರಿಗಿದೆ.

# ಸುಖನಿವಾಸ

ರುಚಿಯಾದ ಪಾನ, ಭೋಜನ; ಶುಚಿಯಾದ ಸ್ಥಳಾನುಕೂಲತೆ, ಗ್ರಾಹಕರನ್ನು ತೃಪ್ತಿಗೊಳಿಸುವ ಧ್ಯೇಯಕ್ಕನುಸಾರವಾದ ನೇಲ್ವಿಚಾರಣೆ.

**ಉಡುಪಿಯ ಆದರ್ಶ ಉಪಹಾರ ಗೃಹ ಮತ್ತು ಊಟದ ಹೋಟೆಲು.**

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಪ್ರೊಪ್ರೈಟರ್ಸ್: **ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್,**

# ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನುಂಟು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
**೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

**ಡಾ. ಎ. ಎಸ್. ಮೂರ್ತಿ,**
**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**



# ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

# ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು **"ಯೋಗೀಶ್ವರರ ಶಕ್ತಿಸಾಹಸ"** ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ—ಪಂಡಿತ್ ಎ. ವಿ. ಆರಮುಮ್
**ಚಿಕಾಕೋಲ್**



**ಹೊಸ ಪುಸ್ತಕ!** **ಈಗಲೇ ಪ್ರಿಂಟಾಗಿದೆ !!**

# ಸ್ತ್ರೀ ದಾಂಪತ್ಯರಹಸ್ಯ ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ, ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು, ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿ ನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

**ಕ್ರಯ: ೩೦ ಫೋಟೋಗಳ ಸಹಿತ ಇರುವ ಪುಸ್ತಕ ರೂ. 1—0—0.**

# SELF ENGLISH STUDY ಸೆಲ್ಫ್ ಇಂಗ್ಲಿಷ್ ಸ್ಟಡಿ

**ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ.**

ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೨ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೮೮ ಪೇಜಿಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ.

**ಕ್ರಯ: ಪುಸ್ತಕ ೧ಕ್ಕೆ ರೂ. ೩. ವಿ. ಪಿ. ಖರ್ಚು ರೂ. ೦—೧೦—೦.**

**C. K. HEROJEE & CO.,**
**No. 12, Nallanna Mudaly Street, Sowcarpet, MADRAS.**
**ಸಿ. ಕೆ. ಹೆರೋಜ್ ಅಂಡ್ ಕೊ.,**
೧೨ ನಲ್ಲನ್ನ ಮೊದಲಿ ಬೀದಿ. ಸಾಹುಕಾರಪೇಟೆ, ಮದರಾಸ್

## ಅಧ್ಯಾಯ ೧೧

# ಭಿಕಾರಿಣಿ

### ಸಾಮಾಜಿಕ ಕಾದಂಬರಿ

### "ಭಿಕಾರಿಣಿ ಬಂದಳು ಭಿಕಾರಿಣಿ! ಇದೋ ಭಿಕಾರಿಣಿಗೆ ಕೊಡುತ್ತೇನೆ ನಿನ್ನನ್ನು ನೋಡು!"

ನಿಶಾದೇವಿಯು ತನ್ನ ಸಂಪೂರ್ಣ ಸಾಮ್ರಾಜ್ಯ ಸ್ಥಾಪಿಸಿರುವ ಕರಾಳ ರಾತ್ರಿ. ಆ ವಿಕಟ ಅಟ್ಟಹಾಸದ ಭೀಕರತೆಯು ಎಲ್ಲೆಲ್ಲಿಯೂ ನೆಲೆಗೊಂಡಿತ್ತು. ಇಂತಹ ರಾತ್ರಿಯಲ್ಲಿ ಮನೆಯಿಂದ ಹೊರಬಿದ್ದ ಲಲಿತೆಯು ಒಂದೇ ಸವನೆ ರಸ್ತೆ ಹಿಡಿದೋಡಿದಳು. ಯಾವ ದಿಕ್ಕಿಗೆ, ಎಲ್ಲಿಗೆ, ಏತಕ್ಕಾಗಿ ಓಡುವುದೆಂಬುದೊಂದನ್ನೂ ಅವಳರಿಯಳು. ಅಷ್ಟೊಂದು ಅವಳ ಬುದ್ಧಿಯು ಕೆಟ್ಟುಹೋಗಿತ್ತು. ಓಡಿದಳು, ಮತ್ತೂ ಓಡಿದಳು. ಓಡಿ ಓಡಿ ರಸ್ತೆಯ ಬದಿಯ ಹೊಂಡವೊಂದಕ್ಕೆ ಕಾಲು ಬಿದ್ದು ದೊಪ್ಪನೆ ಬಿದ್ದುಬಿಟ್ಟಳು. ಚೆನ್ನಾಗಿ ಪೆಟ್ಟಾದುದರಿಂದ ಥಕ್ಕನೆ ಏಳಲಾಗಲಿಲ್ಲ.

ಬಹಳವಾಗಿ ಹೋರಾಡಿ ರಕ್ತಸುರಿಸಿ ರಾತ್ರಿಯ ಕರಾಳ ಧಾಳಿಯನ್ನೋಡಿಸಿ ದಿನವು ತನ್ನ ವಿಜಯ ಧ್ವಜವನ್ನು ಮೂಡುದಿಕ್ಕಿನ ಕೋಡುಗಲ್ಲ ಮೇಲೇರಿಸುವಷ್ಟರಲ್ಲೇ ಕೆಲಮಂದಿ ಕೂಲಿಕಾರ ಹೆಂಗಸರು ರಸ್ತೆಬದಿಯ ಸಾಲುಮರಗಳಿಂದ ಬೀಳುವ ದರಲೆ ಹೆಕ್ಕಲು ಹೊರಬಿದ್ದಿದ್ದರು. ಅಡಿಗೆಗಾಗಿ ದರಲೆ ಹೆಕ್ಕಿ ಕೊಂಡೊಯ್ದು ಆಮೇಲೆ ಈ ಬಡ ಹೆಂಗಸರು ಒಡಲಪಾಡಿಗಾಗಿ ಗೇಯಲು ಬೇರೆ ಬೇರೆ ಕೆಲಸಗಳಿಗೆ ಹೋಗಬೇಕಾದುದರಿಂದ ಅವರು ಮುಂಬೆಳಕು ಹರಿಯುವಷ್ಟರಲ್ಲೇ ಮನೆಯಿಂದ ಹೊರಬೀಳಲೇ ಬೇಕಾಗಿತ್ತು. ಎಲ್ಲಿಯಾದರೂ ಒಬ್ಬಳು ಏಳುವಾಗ ಸ್ವಲ್ಪ ತಡವಾದರೆ ಅವಳ ತಳಮಳವೆಂದರೆ ಅಷ್ಟಿಷ್ಟಲ್ಲ. ಆದುದರಿಂದ ಈ ಬಡ ಹೆಂಗಸರ ಹೊಟ್ಟೆಪಾಡಿನ ಚಿಂತೆಯೇ ಅವರನ್ನು ಎಲಾರ್ಮ್ ಗಡಿಯಾರದಂತೆ ಹೊತ್ತಿಗೆ ಸರಿಯಾಗಿ ಎಬ್ಬಿಸಿ ಹೊರಗಟ್ಟುತ್ತಿತ್ತು. ಆದರೆ ಶ್ರೀಮಂತ ವರ್ಗವು ಇನ್ನೂ ಗಾಢ ನಿದ್ರಾಸಕ್ತವಾಗಿ ಹಾಸಿಗೆಯ ಮೇಲೆ ಬಿದ್ದಿತ್ತು. ಉದರಪೋಷಣೆಯ ಗೊಡವೆಯೊಂದಿಲ್ಲದಾಗ ಯಾವಾಗ ಎದ್ದರೇನು? ಅವರಿಗೇನಾದರೂ ಈ ಬಡ ಹೆಂಗಸರಂತೆ ದಿನ ಇಡೀ ದುಡಿಯಲಿದೆಯೇ? ಇಂದು ಮುಂಜಾನೆಯೆದ್ದು ದರಲೆ ಹೆಕ್ಕದಿದ್ದರೆ ನಾಳೆ ಬೆಳಗ್ಗೆ ಮನೆಯಲ್ಲಿ ಹೊಗೆಯೇ ಏಳಲಾರದೆಂಬ ಚಿಂತೆಯಿದೆಯೇ?

ಶಿವಪುರದ ಬಡ ಮಜೂರ ಹೆಂಗಸರು ಏನೇನೆಲ್ಲಾ ಊರಿನ ಸಂಗತಿಗಳನ್ನು ಮಾತಾಡುತ್ತಾ ಒಂದೊಂದಾಗಿ ಬಿದ್ದಿರುವ ಒಣ ಎಲೆಗಳನ್ನು ಬಗ್ಗಿ ಬಗ್ಗಿ ಹೆಕ್ಕುತ್ತಾ ಮುಂದುವರಿಯುತ್ತಿದ್ದರು. ಒಬ್ಬೊಬ್ಬರಿಗೆ ಸಿಕ್ಕಿದುದನ್ನು ಹೆಕ್ಕಿ ತೊಟ್ಟಿಯೊಳಗೆ ಹಾಕುತ್ತಿದ್ದರೇ ಹೊರತು ಎಲ್ಲವನ್ನೂ ಒಬ್ಬಳೇ ಪಡೆಯಬೇಕು, ಬೇರೆಯವರಿಗೆ ಏನೂ ಸಿಕ್ಕಬಾರದೆಂಬ ನೂಕಾಟ, ಮತ್ಸರಗಳು ಅವರಲ್ಲಿರಲಿಲ್ಲ. ಪ್ರತಿಯೊಬ್ಬಳೂ ಸ್ವಲ್ಪ ಹೆಚ್ಚುಕಡಿಮೆ ಆಯಾ ದಿನದ ಅಡಿಗೆಗೆ ಬೇಕಾಗುವಷ್ಟರ ದರಲೆಯಿಂದ ತೃಪ್ತಳಾಗುತ್ತಿದ್ದಳು. ಒಬ್ಬಳು ಸ್ವಲ್ಪ ಹೆಚ್ಚು ಹೆಕ್ಕಿದರೆ, ಇನ್ನೊಬ್ಬಳು ತನಗೇನೂ ಸಾಲದೆಂದು ಹೇಳಿದರೆ ಹೆಚ್ಚಿಗೆಯಿದ್ದವಳು ಕಡಿಮೆಯಾದವಳಿಗೆ ಕೊಡುವಷ್ಟರ ನ್ಯಾಯ ಹಾಗೂ ಉದಾರ ಬುದ್ಧಿಯು ಈ ಬಡ ಹೆಂಗಸರಲ್ಲಿದ್ದಿತು. ಆದುದರಿಂದ ಅವರು ದರಲೆಗಾಗಿ ಒಬ್ಬರೊಬ್ಬರೊಡನೆ ನೂಕಾಟ ಮಾಡಿಕೊಂಡು ಓಡಾಡದೆ, ಕಚ್ಚಾಟವಿಲ್ಲದೆ, ಬಂಧುಭಾವದಿಂದ ಒಟ್ಟಾಗಿ ನಡೆಯುತ್ತಿದ್ದರು. ಹೀಗೆ ಶಿವಪುರದ ಆದೊಂದು ರಸ್ತೆಯ ಬಡ ಹೆಂಗಸರೆಲ್ಲಾ ದರಲೆ ಹೆಕ್ಕಿಕೊಂಡು ಮುಂದುವರಿಯುವಾಗ ರಸ್ತೆ ಬದಿಯಲ್ಲಿ ಲಲಿತೆಯು ಬಿದ್ದಿರುವುದನ್ನು ಕಂಡು, "ಯಾವುದೋ ಹೆಂಗುಸು ಸತ್ತು ಬಿದ್ದಿರುವುದು, ಅಥವಾ ಯಾರೋ ಕೊಂದು ಹಾಕಿದುದೆಂದು" ದಿಗಿಲುಗೊಂಡು ಕೆಲವರು, "ಹೋಗುವ ಹಿಂದೆ ನಮಗದರ ಗೊಡವೆ ಬೇಡ ಬಡವರಿಗೆ" ಎಂದರು. ಇನ್ನು ಕೆಲವರು, "ಛೆ! ಛೆ!! ನಮಗೇನು ಹೆದರಿಕೆ? ನೋಡುವ ಸಂಗತಿಯೇನೆಂದು" ಎಂದು ಧೈರ್ಯದಿಂದ ಲಲಿತೆಯ ಬಳಿಗೆ ಶಂಕಿಸುತ್ತಾ ಹೋಗಿ ಪರೀಕ್ಷಿಸುವಾಗ ಶ್ವಾಸ ಸಂಚಾರವಾಗುವುದನ್ನು ಕಂಡು ಬಹಳ ಕನಿಕರಗೊಂಡು. "ಛೆ! ಪಾಪ! ಯಾರು ಹೊಡೆದು ಹಾಕಿದುದೋ ಏನೋ! ಎಷ್ಟು ಎಳೆ ಪ್ರಾಯದ ಹುಡುಗಿ! ಎಷ್ಟು ರೂಪವತಿ! ಯಾರಪ್ಪ ಕರುಣೆಯ ಕರುಳಿಲ್ಲದವರು ಇವಳನ್ನು ಈ ಅವಸ್ಥೆಗೀಡುಮಾಡಿದುದು!" ಎಂದು ಹೆಂಗಸರೆಲ್ಲಾ ಬಹಳ ಬೇಸರಗೊಂಡು ಲಲಿತೆಯ ಮೈಮೇಲೆಲ್ಲಿಯಾದರೂ ಪೆಟ್ಟಾದುದಾಗಲಿ ಗಾಯವಾಗಲಿ ಇರುವುದೋ ಎಂದು ಕಾಲು, ಕೈ ಮತ್ತು ಶರೀರವನ್ನೆಲ್ಲಾ ಹುಡುಕಿದರು. ಪೆಟ್ಟು, ಗಾಯಗಳೇನೂ ಇರಲಿಲ್ಲ. ಸೀರೆಗೆಲ್ಲಾ ಧೂಳು ಹಿಡಿದಿತ್ತು. ಉದ್ದ ಕೂದಲು ಬಿಚ್ಚಿಹೋಗಿ ಕೆದರಿ ಬಿದ್ದಿತ್ತು. ಕಣ್ಣು ಮುಚ್ಚಿ ಹೋಗಿತ್ತು. ಶರೀರವು ಸಂಪೂರ್ಣವಾಗಿ ಹೀರಿಬಿಟ್ಟಂತೆ ಬಹಳ ಸೊರಗಿಹೋಗಿತ್ತು. ಮುಖದ ಸ್ವಾಭಾವಿಕ ಕಾಂತಿಯು ಮಾಯವಾಗಿ ಆದೊಂದು ಬಗೆಯ ವಿಕಟತೆಯು ನೆಲೆಗೊಂಡಿತ್ತು. "ಪಾಪ ಎಲ್ಲಿಯೋ ರಸ್ತೆಯಲ್ಲಿ ಹೋಗುವಾಗ ಬಿದ್ದು ಬೋಧ ತಪ್ಪಿರಬೇಕೆಂದ"ರು ಕೆಲವರು ಹೆಂಗಸರು. "ಯಾರೋ ಮರ್ಮಸ್ಥಾನಕ್ಕೆ ಪೆಟ್ಟುಕೊಟ್ಟು ಸತ್ತಳೆಂದು ಬಿಟ್ಟುಹೋಗಿರಬೇಕು" ಎಂದರು ಇನ್ನು ಕೆಲವರು, ಹೀಗೆ ನಾನಾ ರೀತಿ ಅಭಿಪ್ರಾಯವುಂಟಾಯಿತು ಹೆಂಗುಸರಲ್ಲಿ. ಕೆಲವರು, "ನಾವು ಹೋಗುವ ನಮಗೇಕೆ ಇದರ ಗೊಡವೆ? ಎಲ್ಲಿಯಾದರೂ ಪೋಲೀಸರು ನೋಡಿದರೆ ನಮ್ಮ ಮೇಲೆ ಬಂದೀತು ಮತ್ತೆ!" ಎಂದರು. "ಛೆ! ಎಷ್ಟಾದರೂ ಹೆಣ್ಣು ಸಂಸಾರದಲ್ಲಿ ಹುಟ್ಟಲಿಲ್ಲವೇ ನೀವು? ಪೋಲೀಸರು ಬಂದರೆ ನಮ್ಮನ್ನೇನು ಮಾಡುವರು? ಸ್ವಲ್ಪ ಉಪಚಾರಮಾಡಿ ಬೋಧ ಬರುವುದೋ ನೋಡುವ" ಎಂದರು ಇನ್ನು ಕೆಲವರು. ಕೆಲವರು ಲಲಿತೆಯ ವಸ್ತ್ರದ ಧೂಳು ಹಾರಿಸಲಾರಂಭಿಸಿದರು. ಕೆಲವರು ತಲೆಕೂದಲು ಸರಿಮಾಡಿ ಸೆರಗಿಂದ ಮುಖ ಒರೆಸಿದರು. ಒಬ್ಬಿಬ್ಬರು ಹತ್ತಿರದ ಮನೆಗಳಿಗೆ ನೀರು ತರಲೋಡಿದರು.

ಕಟುಕ ಸಮಾಜದ, ರಾಕ್ಷಸೀ ಮಾನವನ ಅತ್ಯಾಚಾರಕ್ಕೊಳಗಾಗಿ ಮತಿಗೆಟ್ಟು ಅನಾಥೆಯಾಗಿ ರಸ್ತೆಯ ಮೇಲೆ ಬಿದ್ದಿರುವ ನಿರ್ದೋಷಿ ಬಾಲೆಯೊಬ್ಬಳ ಪಾಡನ್ನು ಕಂಡು ಮರುಗಿ ಮುಂದಡಿಯಿಡಲು ಮನಸ್ಸು ಒಡಂಬಡುವುದಿಲ್ಲವೋ ಎಂಬಂತೆ ಮಂದಾನಿಲನು ಮಂದಮಂದವಾಗಿ ಬೀಸಿದ ಕಾರಣ ಆ ತಂಪಿನಿಂದ ಲಲಿತೆಗೆ ಮೆಲ್ಲಮೆಲ್ಲಗೆ ಬೋಧೆಯುಂಟಾಯಿತು. ಅವಳು ಕಣ್ಣು ತೆರೆದಳು. ಸುತ್ತಲೂ ಕೂತು ನಿಂತು ನೋಡುತ್ತಿರುವ ಸ್ತ್ರೀಯರನ್ನು ನೋಡಿದಳು. ಅನಂತರ ಮೆಲ್ಲಗೆ ಕಣ್ಣು ಮುಚ್ಚಿದಳು. ಕಣ್ಣುಗಳು ಸಂಪೂರ್ಣವಾಗಿ ಪ್ರಕಾಶರಹಿತವಾಗಿದ್ದವು. ಅಷ್ಟರಲ್ಲಿ ನೀರು ತರಹೋಗಿದ್ದ ಒಬ್ಬ ಹೆಂಗಸು ಹಿಂತಿರುಗಿಬಂದು "ಎಂತಹ ಜನರಪ್ಪ ಇವರು! ಪ್ರಾಣಹೋಗುವಾಗ ಒಂದು ಗುಟುಕು ನೀರು ಕೊಡುವವರಲ್ಲ! ರಸ್ತೆಯಲ್ಲೊಂದು ಹೆಂಗಸು ಬೋಧ ತಪ್ಪಿಬಿದ್ದಿದೆ ಪಾಪ! ಅದಕ್ಕೆ ಮುಖಕ್ಕೆ ಹಾಕಲು ಸ್ವಲ್ಪ ನೀರುಬೇಕಾಗಿದೆ. ಸ್ವಲ್ಪ ತಂಬಿಗೆ ಕೊಡಿ. ಈಗ ಕೊಡುತ್ತೇನೆ" ಎಂದರೆ, "ಹೋಗೋಗು! ತಂಬಿಗೆ ಕೊಡಲಿಕ್ಕಾಗುವುದಿಲ್ಲ. ಯಾರು ನೀನು? ತಂಬಿಗೆ ವಾಪಾಸು ತರದಿದ್ದರೆ?" ಎಂದರು ಆ ಉಪ್ಪರಿಗೆ ಮನೆಯ ವಿಧವೆ ಹೆಂಗುಸೊಬ್ಬರು. ಅವರ ಮನೆ ಕೆಲಸದವನಾದರೂ ಕೊಡುವುದರಲ್ಲಿದ್ದ, ಅಮ್ಮ ಕೊಡಲು ಬಿಡಲಿಲ್ಲ. ಕಡೆಗೆ ನಾನು ಕೆಲಸದವನೊಡನೆ ಸೆರಗಿಗೆ ಸ್ವಲ್ಪ ನೀರು ಹಾಕ ಹೇಳಿ ಒದ್ದೆಮಾಡಿ ತಂದೆ" ಎಂದು ಸೆರಗಿಂದ ಲಲಿತೆಯ ಮುಖವನ್ನೊರಸುವಷ್ಟರಲ್ಲಿ ಇನ್ನೊಬ್ಬ ಹೆಂಗಸು ಒಂದು ತಂಬಿಗೆ ನೀರು ಹಿಡಕೊಂಡು ಮತ್ತೊಬ್ಬಳೊಂದಿಗೆ ಬಂದು "ಇದೋ ನೀರುಂಟು ಇಲ್ಲಿ, ನೀರು ಹಾಕುವ ಮುಖಕ್ಕೆ" ಎಂದು ಲಲಿತೆಯ ಮುಖಕ್ಕೆ ನೀರುಹಾಕಿ ಸೆರಗಿಂದ ಸರಿಯಾಗಿ ಒರಸಿದಳು. ಅವಳೊಂದಿಗೆ ಬಂದವಳು ನೆರೆಯ ಬಡ ಮಜೂರ ಸ್ತ್ರೀಯೊಬ್ಬಳಾಗಿದ್ದಳು. ಅವಳು ಅವಸರವಸರದಿಂದ ತಂಬಿಗೆ ಮತ್ತು ನೀರು ಕೊಟ್ಟುದಲ್ಲದೆ ಸಂಗತಿಯೇನೆಂದು ನೋಡಲು ತಾನಾಗಿ ಬಂದಿದ್ದಳು.

ಇಷ್ಟರಲ್ಲಿ ಲಲಿತೆಯು ಜಗ್ಗನೆದ್ದಳು. ಸುತ್ತು ಮುತ್ತಲಿರುವ ಸ್ತ್ರೀಯರನ್ನೆಲ್ಲಾ ಒಮ್ಮೆ ದೃಷ್ಟಿಹರಿಸಿ ನೋಡಿದಳು. ಬಿಚ್ಚಿಹೋದ ತಲೆಗೂದಲನ್ನು ಕಟ್ಟುವ, ಸೀರೆ ರವಕೆಗಳನ್ನು ಸರಿಮಾಡುವ ಗೊಡವೆಗೇನೇ ಹೋಗದೆ ಕೂಡಲೆ ಅಲ್ಲಿಂದ ನಡೆದುಬಿಟ್ಟಳು. ಒಮ್ಮೆಯಾದರೂ ಹಿಂತಿರುಗಿ ಕೂಡಾ ನೋಡಲಿಲ್ಲ. ಸ್ತ್ರೀಯರೆಲ್ಲಾ ಅವಳನ್ನೇ ಕಣ್ಣು ಕಣ್ಣು ನೋಡುತ್ತಾ ನಿಂತರು. ಅವಳು ಕಣ್ಮರೆಯಾಗುವವರೆಗೂ ವಿಸ್ಮಯಗೊಂಡು ನೋಡಿದರು. ಆ ಮೇಲೆ, "ಅವಳು ಹುಚ್ಚಿ" ಎಂದರು ಕೆಲವರು. "ಹುಚ್ಚಿಯೆಂದು ಹೇಳುವವರಿಗೆ ಹುಚ್ಚು. ಅವಳಿಗೆ ನಾಚಿಕೆಯಾಗಿ ಹೋಯಿತು" ಎಂದರು ಕೆಲವರು. "ಎಲ್ಲೋ ತಲೆ ತುಂಬ ಕುಡಿದು ಬಿದ್ದಿರಬೇಕು. ಸೂಳೆಯಿದ್ದಿರಬೇಕೆಂ"ದರು ಮತ್ತೆ ಕೆಲವರು. ಹೀಗೆಲ್ಲಾ ನಾನಾರೀತಿ ಮಾತಾಡಿಕೊಳ್ಳುತ್ತಾ ಅವರು ತಮ್ಮ ಕೆಲಸಕ್ಕೆ ತೊಡಗಿದರು.

ಶಿವಪುರವೆಲ್ಲಾ ಎಚ್ಚತ್ತು ತನ್ನ ಅನುನಿತ್ಯದ ಕೆಲಸಕ್ಕಾರಂಭಿಸಿದಾಗ, ಶಿವಾನಂದರ ಸೂಳೆಯಾಗಿ ಬಹಳ ಸುಖವೈಭವದಿಂದಿರುವಳೆನಿಸಿಕೊಂಡಿದ್ದ ಲಲಿತೆಯು ಬೀದಿಭಿಕಾರಿಣಿಯಾಗಿ ಅಡ್ಡಾಡುತ್ತಿದ್ದಳು. ನಿಂತಲ್ಲಿ ನಿಲ್ಲದೆ, ಕೂತಲ್ಲಿ ಕೂತುಕೊಳ್ಳದೆ ರಸ್ತೆರಸ್ತೆ, ಗಲ್ಲಿಗಲ್ಲಿ ಅಲೆದಾಡುತ್ತಿದ್ದಳು. ಬಾಯಾರಿಕೆ, ಹಸಿವು, ವಿಶ್ರಾಂತಿ, ನಿದ್ದೆಗಳ ಗೊಡವೆಯೇ ಅವಳಿಗಿದ್ದಿಲ್ಲ. ಹೆಚ್ಚಿನ ಜನರು ಭಿಕಾರಿಣಿ ಲಲಿತೆಯನ್ನು ಕಂಡು ಅತ್ಯಂತ ಕನಿಕರಪಡುತ್ತಿದ್ದರು. ವಿಶೇಷವಾಗಿ ಹೆಂಗಸರ ಹೃದಯ ಕರಗಿ ನೀರಾಗಿ ಹೋಗುತ್ತಿದ್ದಿತು. ಅವರು ಲಲಿತೆಯನ್ನು ಮನೆಗೆ ಕರೆದು ಒತ್ತಾಯಮಾಡಿ ಕುಳ್ಳಿರಿಸಿಕೊಂಡು ಮಾತಾಡಿಸಲೆತ್ನಿಸುತ್ತಿದ್ದರು. ಬಾಯಾರಿಕೆಯಾಗುವುದಾದರೆ ಕುಡಿಯಲು ಮಜ್ಜಿಗೆಯೋ ಹಾಲೋ ಕೊಡುತ್ತಿದ್ದರು. ತಲೆಗೆ ಎಣ್ಣೆಹಾಕಿ ಬಾಚಿಕೊಳ್ಳ ಹೇಳುತ್ತಿದ್ದರು. ಹಣೆಗೆ ಹಾಕಲು ಕುಂಕುಮ ಮತ್ತು ಮುಡಿಯಲು ಹೂಕೊಡುತ್ತಿದ್ದರು. ಆದರೆ ಕೆಲಮಂದಿ ಗಂಡಸರು, ವಿಶೇಷವಾಗಿ ಧನಿಕ ಮಾನವಂತರೆನಿಸುವವರು ಲಲಿತೆಯೆಂದರೆ ತುಚ್ಛೀಕರಿಸಿ ಧಿಕ್ಕರಿಸಿ ದೂರೀಕರಿಸುತ್ತಿದ್ದರು. ಮನಬಂದಂತೆ ಬೈದು ಬಂಗಿಸುತ್ತಿದ್ದರು. ಲಲಿತೆಯು ಏನುಮಾಡಿದರೂ ಒಂದು ಶಬ್ದವನ್ನೂ ಮಾತಾಡದೆ ಮೌನವಾಗಿರುತ್ತಿದ್ದಳು. ಹೃದಯ ರಹಿತ ಪುಂಡರು ಕೆಲವರು "ನೋಡಿ ಶಿವಾನಂದರ ಸೂಳೆ! ಈಗ ಬೀದಿ ಭಿಕಾರಿಣಿ" ಎಂದು ಕೈತೋರಿಸಿ ತಮಾಷೆ ಮಾಡುತ್ತಿದ್ದರು. ಲಲಿತೆಯು ಹೊರಬಿದ್ದ ಮೊದಲನೇ ದಿನದಲ್ಲಿ ಶಿವಪುರದ ಜನರಿಗೆಲ್ಲಾ ಲಲಿತೆಯನ್ನು ನೋಡುವುದೊಂದೇ ಕೆಲಸ. ಎಂತಹ ಕೆಲಸ ಬಿಟ್ಟಾದರೂ ಲಲಿತೆಯನ್ನೊಮ್ಮೆ ನೋಡದವರಿಲ್ಲ. ಅವಳು ಎಲ್ಲಿ ಆದರೂ ಸ್ವಲ್ಪ ನಿಂತರೆ ಜನರು ಗುಂಪುಕೂಡುತ್ತಿದ್ದರು. ನಡೆದುಹೋಗುವಾಗ ಸ್ತ್ರೀಪುರುಷರು ಅಂಗಡಿ ಮನೆಗಳಿಂದ ಹೊರಗೋಡಿಬಂದು ನೋಡಿ ನಾನಾ ರೀತಿ ಮಾತಾಡಿಕೊಳ್ಳುತ್ತಿದ್ದರು. ಲಲಿತೆಯು ಕೆಲದಿನಗಳ ವರೆಗೆ ಶಿವಪುರದ ಆದೊಂದು ಪ್ರೇಕ್ಷ್ಯವಸ್ತುವಾಗಿದ್ದಳು. ಅವಳನ್ನೆಲ್ಲಿಯಾದರೂ ಟಿಕೇಟಿಟ್ಟು ಪ್ರದರ್ಶನಕ್ಕಿಡುತ್ತಿದ್ದರೆ ಸ್ವಲ್ಪ ದುಡ್ಡು ಮಾಡಬಹುದಿತ್ತು. ಅಷ್ಟೊಂದು ಉತ್ಸುಕತೆಯಿಂದ ಶಿವಪುರಸ್ಥರು ಲಲಿತೆಯನ್ನು ಹೋದಹೋದಲ್ಲೆಲ್ಲಾ ನೋಡಲಾತುರಪಡುತ್ತಿದ್ದರು.

ಹೀಗೆ ಕೆಲಸಮಯ ಹೋಯಿತು. ಲಲಿತೆಯು ಶಿವಪುರದ ರಸ್ತೆ ಬೀದಿಗಳ ಸಾಮಾನ್ಯ ವಿನೋದ ವಸ್ತುವಾದಳು. ಈಗ ಕೆಲಮಂದಿ ಪೋಕ ಹುಡುಗರು ಮಾತ್ರ ಅವಳ ಬೆನ್ನು ಹಿಡಿದು ಹೋಗಿ ಅವಳ ಮೇಲೆ ಕಲ್ಲು ಬಿಸಾಡಿಯೋ, ಅವಳ ಸೀರೆಯನ್ನೆಳೆದೋ ಪೀಡಿಸಿಕೊಡುತ್ತಿದ್ದರು. ಹುಡುಗರು ಏನು ಮಾಡಿದರೂ ಲಲಿತೆಯು ಒಂದೇ ಒಂದು ಶಬ್ದವಾದರೂ ಎತ್ತುತ್ತಿದ್ದಿಲ್ಲ. ಆದುದರಿಂದ ಕಡೆಗೆ ಬೀದಿ ಪೋಕ ಹುಡುಗರ ಪೀಡೆಯೂ ನಿಂತುಹೋಯಿತು. ಲಲಿತೆಯು ಎಲ್ಲಿ ತಂಗುವಳು? ಎಲ್ಲಿ ಉಣ್ಣುವಳು? ಎಲ್ಲಿ ತಲೆಬಾಚಿ ಹೂ ಮುಡಿಯುವಳು? ಎಲ್ಲಿಂದ ಹೊಸ ಹೊಸ ಸೀರೆ ಪಡೆಯುವಳೆಂದು ಸರ್ವಸಾಮಾನ್ಯವಾಗಿ ಅವಳನ್ನು ರಸ್ತೆಗಳಲ್ಲಿ ಕಾಣುವವರಾರಿಗೂ ತಿಳಿಯದೆ ಅವರು ಚೋದ್ಯಪಡುತ್ತಿದ್ದರು. ಲಲಿತೆಯಾದರೋ ಒಮ್ಮೆ ತಲೆಯೆಲ್ಲಾ ಬಿಚ್ಚಿಹಾಕಿ ಹರಿದು ಚಿಂತೆಯಾಗಿ ಧೂಳು ತುಂಬಿದ ವಸ್ತ್ರ ಉಟ್ಟುಕೊಂಡು ತಿರುಗಾಡುವಳು. ಇನ್ನೊಮ್ಮೆ ಸರಿಯಾಗಿ ತಲೆಬಾಚಿ, ಹೂಮುಡಿದು, ಒಳ್ಳೇ ವಸ್ತ್ರ ಉಟ್ಟು ಮೆರೆದಾಡುವಳು. ಆಗ ಹಲವರ ಕಣ್ಣು ಆ ಹುಚ್ಚಿಯ ಮೇಲೆ ಬಿದ್ದುದೂ ಉಂಟು. ಆದರೆ ಅವಳು ನಿಂತಲ್ಲಿ ನಿಲ್ಲಳು. ಈಗ ಒಂದು ರಸ್ತೆಯಲ್ಲಿದ್ದರೆ ಇನ್ನೊಂದು ಕ್ಷಣ ಇನ್ನೊಂದು ಬೀದಿಯಲ್ಲಿರುವಳು. ಮತ್ತೊಂದು ಕ್ಷಣ ಮತ್ತೊಂದು ಗಲ್ಲಿಯಲ್ಲಿರುವಳು. ತುಟಿಯೆತ್ತಿ ಒಂದು ಶಬ್ದವನ್ನೂ ಯಾರೊಡನೆಯೂ ಆಡಲಾರಳು. ಅವಳು ಮಾಡುತ್ತಿದ್ದ ಒಂದೇ ಕೆಲಸವೆಂದರೆ ಮನೆಗಳ ಹೊರ ಜಗಲಿಗಳಲ್ಲಾಗಲಿ, ರಸ್ತೆ ಬದಿಯಲ್ಲಾಗಲಿ ಚಿಕ್ಕಮಕ್ಕಳನ್ನು ಕಂಡಕೂಡಲೆ ಒಮ್ಮೆಯೇ ಹಿಡಿದೆತ್ತಿ ಮುದ್ದಾಡುವುದು. ಅವೆಷ್ಟು! ಕೂಗಿದರೂ ಕೇಳದೆ ಮತ್ತೂಮತ್ತೂ ಮುದ್ದಾಡುವುದು. ಮಕ್ಕಳ ಹೆತ್ತವರೋ ರಕ್ಷಕರೋ ಓಡಿಬಂದು ಬೈದು ಭಂಗಿಸಿ ಹೊಡೆಯುವ ವರೆಗೂ ಬಿಡದೆ ಮುದ್ದಾಡುವುದು. ಅವಳನ್ನು ನೋಡಿದೊಡನೆಯೇ ಚಿಕ್ಕಮಕ್ಕಳೆಲ್ಲಾ ಒಳಗೋಡುತ್ತಿದ್ದರು. ತಾಯಂದಿರು, ಚಿಕ್ಕಕೂಸುಗಳೆಲ್ಲಿಯಾದರೂ ಜಗಲಿಯಲ್ಲಿದ್ದರೆ ಒಳಗೊಯ್ಯುತ್ತಿದ್ದರು. ತಾವು ಹಿಡಕೊಂಡಿದ್ದರೂ ಒಳಗೊಯ್ದು ಬಿಡುತ್ತಿದ್ದರು. ಯಾಕೆಂದರೆ ತಾಯಂದಿರಾಗಲಿ ಯಾರೇ ಆಗಲಿ ಹಸುಗೂಸುಗಳನ್ನು ಹಿಡಕೊಂಡಿದ್ದಂತೆಯೇ ಲಲಿತೆಯು ಒಂದೇ ಸವನೆ ಓಡಿಬಂದು ಮುದ್ದಾಡುವುದುಂಟು. ಅದಕ್ಕಾಗಿ ಅನೇಕ ಸಲ ಮನೆಗಂಡಸರಿಂದ ಪೆಟ್ಟು ತಿಂದಿದ್ದಳು. ಹೀಗಾಗಿ ಲಲಿತೆಯು ಶಿವಪುರದ ಮಕ್ಕಳಿಗೆ 'ಗುಮ್ಮ'ವಾದಳು. ಮಕ್ಕಳೇನಾದರೂ ಅತ್ತರೆ ಹೆತ್ತವರಾಗಲಿ, ಚಾಕರಿಯವರಾಗಲಿ "ಭಿಕಾರಿಣಿ ಬಂದಳು ಭಿಕಾರಿಣಿ! ಇದೋ ಭಿಕಾರಿಣಿಗೆ ಕೊಡುತ್ತೇನೆ ನಿನ್ನನ್ನು ನೋಡು!" ಎಂದು ಬೆದರಿಸುತ್ತಿದ್ದರು. ಆಗ ಎಂತಹ ಅಳುವ ಮಕ್ಕಳಾದರೂ ಒಮ್ಮೆ ಸುಮ್ಮನಾಗುತ್ತಿದ್ದುವು.

—: ಸಂಪೂರ್ಣ :—

ನವಯುಗಕ್ಕೆಂದೇ ಕಾದಂಬರಿ !

# ಪತ್ರ ವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ.]

## ಪ್ರಾಥಮಿಕ ಶಾಲಾ ಅಧ್ಯಾಪಕರ ಕರ್ತವ್ಯ

ಈಗಿನ ಅಧ್ಯಾಪಕರನ್ನು ಕಂಡರೆ ತಮ್ಮ ಸ್ವಾತಂತ್ರ್ಯವನ್ನು ಪೂರ್ಣವಾಗಿ ಕಳೆದುಕೊಂಡಂತೆ ತೋರುವುದು. ನಮ್ಮ ಆಧಿಪತ್ಯದಲ್ಲಿ ವಿದ್ಯೆ ಮತ್ತು ಬೋಧನೆಯ ಹೊಸ ಪಾಕವು ತಯಾರಾಗುತ್ತಿರುವುದು ಎಲ್ಲರಿಗೂ ವಿದಿತವಾದ ವಿಷಯವಾಗಿದೆ. ಆದರೂ ಉಪಾಧ್ಯಾಯರು ಮಾತ್ರ ಎಲ್ಲೆಲ್ಲಿಯೂ ಮೌನವಾಗಿಯೇ ಇರುವರು. ಸರಕಾರವು ಹಲವು ಅಧಿಕಾರಿಗಳ ಮತ್ತು ಸಂಸ್ಥೆಗಳ ಅಭಿಪ್ರಾಯಗಳನ್ನು ಕೇಳುತ್ತಿರುವಾಗ ಉಪಾಧ್ಯಾಯರಲ್ಲಿ ಹಲವರಿಗಾದರೂ ಒಳ್ಳೇ ಅನುಭವವಿರಬಹುದೆಂಬುದನ್ನು ಮರೆತುಬಿಟ್ಟಂತೆ ಕಾಣುವುದು. ಅವರಾದರೂ ತಮಗೆ ಅನುಕೂಲವಾದ ಮತ್ತು ವಿದ್ಯಾಭಿವೃದ್ಧಿಗೆ ಕಾರಣವಾದ ಸಲುಕರಣೆಗಳನ್ನು ಕೊಡದಿರುವುದೂ ವಿಚಿತ್ರವಾಗಿದೆ. ಸಂಬಳದಲ್ಲಿ ಕಡಿತ ಉಂಟಾದರೆ ಮಾತ್ರ ಜೇಳು ಕಡಿದಂತೆ ತಳಮಳಿಸುವರು. ಇನ್ನಾದರೂ ಪ್ರತಿ ತಾಲೂಕಿನಲ್ಲಿಯೂ ಸಭೆಗಳನ್ನು ಜರಗಿಸಿ ತಮಗೆ ಕಂಡ ಅಭಿಪ್ರಾಯಗಳನ್ನು ಕೊಡುವರೇ?

ಈಗ ನಮ್ಮ ತಿಳುವಳಿಕೆಗೆ ಬಂದಿರುವ ಪ್ರಶ್ನೆಗಳಲ್ಲಿ ಈ ಕೆಳಗಿನವು ಕೆಲವಾಗಿರುತ್ತವೆ:

೧ ಕೌನ್ಸಿಲುಗಳ ಹೊಸ ರಚನೆ, ೨. ಪ್ರತಿ ಶಾಲೆಯಲ್ಲಿ ಇರಬೇಕಾದ ದರ್ಜೆಗಳು, ೩. ಎಚ್. ಇ. ಮತ್ತು ಸೆಕೆಂಡರಿ ಶಾಲೆಗಳ ಏಕೀಕರಣ, ೪ ಎಮಾಲ್ಗಮೇಶನ್ ಸ್ಕೀಮು, ೫ ಹೊಸ ಪಾಠ ಪಟ್ಟಿಯ ತಯಾರಿ.

ಹೊಸ ವಿದ್ಯಾ ಕೌನ್ಸಿಲು ನಿರ್ಮಾಣದಲ್ಲಿ ನುರಿತ ವಿದ್ಯಾವಂತರಿಗೂ, ಉಪಾಧ್ಯಾಯರಿಗೂ ಸದಸ್ಯತನವು ದೊರೆತರೆ ಮಾತ್ರ ಹೆಚ್ಚಿನ ಪ್ರಯೋಜನವಾದೀತು. ಉಪಾಧ್ಯಾಯರ ಸೆಂಟರುಗಳು ಹೊಸ ರೀತಿಯಲ್ಲಿ ನಿರ್ಮಾಣವಾಗಿ ಅಂತಹ ಸೆಂಟರುಗಳಿಂದ ಒಬ್ಬೊಬ್ಬ ಮೆಂಬರನ್ನು ಚುನಾಯಿಸುವಂತಿರಬೇಕು.

ಗ್ರಾಮಕ್ಕೆ ಒಂದರಂತೆಯಾದರೂ ಐದನೇ ದರ್ಜೆಯ ಶಾಲೆ ಇರುವುದು ಉತ್ತಮ. ಇಂತಹ ಶಾಲೆಗಳ ನಡುವೆ ಒಂದರಿಂದ ಇನ್ನೊಂದಕ್ಕೆ ಮೂರು ಮೈಲಾದರೂ ಇರಬೇಕು.

ಈಗಿರುವ H. E. ಶಾಲೆಗಳು ಬೇಕಾದುದಕ್ಕಿಂತ ಹೆಚ್ಚಾಗಿವೆ. ೧ರಿಂದ ೫ನೇ ದರ್ಜೆ ವರೆಗಿರುವ ಶಾಲೆಯಲ್ಲಿ ಕನಿಷ್ಟ ೨೦೦ ಮಕ್ಕಳಾದರೂ ಇರಬೇಕು. ೬, ೭, ೮ನೇ ದರ್ಜೆಗಳಲ್ಲಿ ೫೦ ಮಕ್ಕಳಿಗೆ ಕಡಿಮೆಯಿರಬಾರದು. ಪ್ರತಿ ಎಲಿಮೆಂಟರಿ ಶಾಲೆಯ ಉದ್ದೇಶವು ತಮ್ಮದೊಂದು H. E. ಶಾಲೆಯಾಗಿ ಮಾರ್ಪಡಿಸುವುದಲ್ಲದೆ ಸಾಧ್ಯವಾದಷ್ಟು ವಟ್ಟಿಗೆ ಅಭಿವೃದ್ಧಿಗೆ ತರುವುದಾಗಿರುವುದಿಲ್ಲ. ಇದು ತಪ್ಪು.

H. E. ಮತ್ತು ಸೆಕೆಂಡರಿ ಶಾಲೆಗಳಿಗೆ ಈಗಿರುವ ವ್ಯತ್ಯಾಸವೇನೂ ಪ್ರಯೋಜನವಿಲ್ಲ. ಈಗಿನ H. E. ದರ್ಜೆಗಳ ಮತ್ತು I, II, III ಫೋರ್ಮುಗಳ ಪಾಠಪಟ್ಟಿಯು ಒಂದಾಗಿ IV ಫೋರ್ಮಿನಿಂದ ಮಾತ್ರ ಹೈಸ್ಕೂಲು ಪಾಠಗಳು ಪ್ರಾರಂಭವಾಗಬೇಕು. ಹೈಸ್ಕೂಲುಗಳಲ್ಲಿ ಕೂಡ ಸೆಕೆಂಡರಿ ವಿದ್ಯಾಭ್ಯಾಸವು IV ಫೋರ್ಮಿನಿಂದಲೇ ಪ್ರಾರಂಭಿಸಬೇಕು. ಹೀಗೆ ಮಾಡುವುದರಿಂದ ಸೆಕೆಂಡರಿ ಮತ್ತು ಎಚ್. ಇ. ಎಂಬ ಭೇದವು ಪೂರ್ಣ ಅಳಿದು ಹೋದಂತಾಗುವುದು.

ಐದು ಕ್ಲಾಸುಗಳಿರುವ ಮಿಕ್ಸ್ಡ್ ಶಾಲೆಗಳಿಗೆ ಎಂಟು ಮಂದಿ ಉಪಾಧ್ಯಾಯರು, ಎಂಟು ಕ್ಲಾಸುಗಳಿರುವ ಕೆಲವು H. E. ಶಾಲೆಗಳಿಗೆ ಐದು ಮಂದಿ ಉಪಾಧ್ಯಾಯರು. ಎಷ್ಟರ ಮಟ್ಟಿನ ಪಕ್ಷಪಾತ! ಈ ಎರಡು ತರದ ಶಾಲೆಗಳು ಒಂದಾದುದರಿಂದ ಆಗುವ ಕೆಡುಕಾದರೂ ಹೆಚ್ಚಿನದಾಗಲಾರದು.

ಹಿಂದೊಮ್ಮೆ ಎಮಾಲ್ಗಮೇಶನ್ ಸ್ಕೀಮು ಎಲ್ಲರನ್ನೂ ಭಯಭ್ರಾಂತರನ್ನಾಗಿ ಮಾಡಿತ್ತು. ಆದರೆ ಕೆಲವು ಕಡೆಗಳಲ್ಲಿ ಇದನ್ನು ಯಾರಿಗೆ ತೊಂದರೆ ಪರಿಣಾಮವಾದರೂ ಆಗ್ಬ ಕೆಡುಕನ್ನುಂಟುಮಾಡಲಿಲ್ಲ. ಸಾಧ್ಯವಾದಷ್ಟು ಶಾಲೆಗಳನ್ನು ಒಟ್ಟುಗೂಡಿಸುವುದರಿಂದ ತುಂಬಾ ಲಾಭವಾಗಬಹುದು.

ಈ ಎಲ್ಲಾ ಬದಲಾವಣೆಗನುಸಾರವಾಗಿ ಪಾಠಪಟ್ಟಿಯೂ ಹೊಸದಾಗಬೇಕೆಂಬುದು ಸಹಜ. ಇವೇ ಮೊದಲಾದ ವಿಷಯಗಳನ್ನು ಉಪಾಧ್ಯಾಯರೆಲ್ಲರೂ ಚರ್ಚಿಸಿ, ಸರಕಾರಕ್ಕೆ ತಮ್ಮ ಮನವಿಗಳನ್ನು ಸಕಾಲದಲ್ಲಿ ಕಳುಹಿಸುವುದು ಉತ್ತಮ.

ಓರ್ವ ಅಧ್ಯಾಪಕ

150 ವರ್ಷಗಳ ಅನುಭವ

ಖಾತ್ರಿಗುಣವನ್ನೀಯುವ ಸ್ವದೇಶೀ ದಿವ್ಯೌಷಧ

ಬಾಣಂತಿಯರ ಸೌಖ್ಯಕ್ಕೆ ಅಮೃತತುಲ್ಯವಾಗಿ ಸಹಸ್ರಾರು ಸ್ತ್ರೀಯರ ಪ್ರಾಣವನ್ನುಳಿಸಿದ

"ಪ್ರಸೂತ ಸ್ತ್ರೀ ಸಂರಕ್ಷಿಣಿ"

ಎಂಬ

ಸಂಜೀವ ಮಾತ್ರೆಗಳು

ಒಮ್ಮೆ ಉಪಯೋಗಿಸಿ ನೋಡಿದಲ್ಲಿ ಔಷಧಿ ಶಕ್ತಿಯು ಮನವರಿಕೆಯಾಗುವದು.

ನೂರು ಮಾತ್ರೆಗಳಿಗೆ ರೂ 4 ಮಾತ್ರ.

ಹೆಚ್ಚಿನ ಮಾಹಿತಿಗಳಿಗೆ ಗರ್ಭಿಣಿ ಹಾಗೂ ಪ್ರಸೂತ ಸ್ತ್ರೀಯರ ರೋಗಗಳ ಸ್ಪೆಶಲಿಸ್ಟರಾದ "ವಾರಂಬಳ್ಳಿ ಬ್ರದರ್ಸ, ಆಯುರ್ವೇದಾಶ್ರಮ ಬ್ರಹ್ಮಾವರ, ದ ಕನ್ನಡಾ" ಇವರಿಗೆ ಬರೆಯಿರಿ

ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಸ್ಪತ್ರೆಯ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೋ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುವು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—9 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D N. JASANI, Vitalbhai Patel Road, BOMBAY 4

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

I **ಶೋಧನ ಗುಣ** —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗ ಸಂಕುಚಿತವಾಗಿ ಮಾಡುವದು

II **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು

III **ಸುಖಸೇವನ** —ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು ಕ್ರಯ ಬಾಟ್ಲಿ 1ಕ್ಕೆ ರೂ 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.

# ಪುಸ್ತಕಗಳು

**ಯಾವ ಕನ್ನಡ ಪುಸ್ತಕ ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ**

**ನವಭಾರತ ಬುಕ್ ಡಿಪ್ಪೊ,**

**ಉಡುಪಿ.**

CHEAPEST SAFEST INDUSTRIAL

INSURE WITH & REPRESENT

RANJIT

BIMA Co. Ltd. AMRITSAR

APPLY FOR HONOURABLE JOB & DECENT SALARY

# ಭಾಷಾಂತರ

ಕೆಲಸವನ್ನು ಕೈಕೊಳ್ಳಲಾಗುತ್ತದೆ.

ಮಾಹಿತಿಗೆ ಬರೆಯಿರಿ

'ಟ್ರಾನ್ಸ್‌ಲೇಟರ್'

'ಕಿರಿಯರ ಪ್ರಪಂಚ'

ಉಡುಪಿ

**TRANSLATION**

Work is undertaken.

**For furthur particulars.**

***Please write to***

**Translator,**

***Kiriyara Prapancha***

**UDIPI**

THE

# *Vijaya Bank, Ltd.*

**Head Office MANGALORE** Branch Offices **Udipi Kaup & Coondapoor**

## ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು. ಮಂಗಳೂರು. ಶಾಖೆಗಳು ಉಡುಪಿ, ಕಾಪು, ಕುಂದಾಪುರ

ಚಾಲ್ತಿ ಠೇವಣಾತಿಗಳು ಸಾ ಶೆ 2 ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು, ಸಾ. ಶೆ 3½

6 ಮತ್ತು 9 ತಿಂಗಳ ಬಾಬ್ತು, ಸಾ ಶೆ. 4 1 ವರ್ಷದ ಬಾಬ್ತು ಸಾ ಶೆ 5

2 ವರ್ಷದ ಮೇಲಿನವುಗಳ ಬಾಬ್ತು ಸಾ ಶೆ 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂಚೆರಿ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತವೆ

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವ್ವದು.

ರೂ 1ರಿಂದ 100ರ ವರೆಗೆ ಸಾ ಶೆ 8 101ರಿಂದ 500ರ ವರೆಗೆ ಸಾ ಶೆ 7.

501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ ಶೆ 6

ವಿಶೇಷ ಸೂಚನೆ —ಬಡವರಿಗ ಸಹಾಯವಾಗುವಂತೆ ಕಡಿಮೆಯೆಂದರೆ ರುಪಾಯಿ 10/ ಸಹಾ ಸಾಲಕೊಡಲಾಗುತ್ತದೆ ಪಾಲುಗಳು ದೊರೆಯುತ್ತವೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

**A B Shetty,** ಚೆಯರ್‌ಮೇನ್ **K Gopalakrishna Shetty** ಸೆಕ್ರಟರಿ,

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು

## ಕಿರಿಯರ ಪ್ರಪಂಚದ ಪುಸ್ತಕಗಳು.

| | | | | | | | |
|---|---|---|---|---|---|---|---|
| ನಾಡಕಥೆಗಳು | ೦ | ೨ | ೦ | ಪುರಷಪಮು! | ೦ | ೪ | ೦ |
| ಮುಂದಿನ ದೇವರು | ೦ | ೨ | ೦ | ಸಂಶಯ ಪಿಶಾಚಿ | ೦ | ೬ | ೦ |
| ಸ್ವತಂತ್ರ ಜೀವನೋಪಾಯ | ೦ | ೨ | ೬ | ವ್ಯಭಿಚಾರಿಣಿ ಯಾರು? | ೦ | ೮ | ೦ |
| ಕುಶ ಲವ | ೦ | ೪ | ೦ | ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ಹೆಂಡ್ತಿ ಗಂಡನಾದರೆ! | ೦ | ೪ | ೦ | ಮಧುವನ | ೧ | ೮ | ೦ |

ಸೋಲ್ ಏಜಂಟರು:— ನವಭಾರತ ಬುಕ್ ಡಿಪ್ಪೊ, ಉಡುಪಿ

ಅತ್ಯುತ್ತಮ ಪೆನ್ನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಫೌಂಟನ ಪೆನ್ನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯು 'ಪೊಮೇಡ'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

*Sole distributors*—V V Kamath & Bros Mangalore

## ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 4ನೇ ವರ್ಷದಲ್ಲಿಯೇ ಸ್ಪಷ್ಟ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವ್ವದು ಎಕ್ರೆಯಲ್ಲಿ ವರ್ಷಕ್ಕೆ ರೂ ಸಾವಿರದ ಮೇಲೆ ಉತ್ಪತ್ತಿಯಾಗುವ್ವದು

ಎಲ್ಲ ತೋಟದಲ್ಲಿಯೂ ಇರತಕ್ಕದ್ದು ಗಿಡವೊಂದರ ಕ್ರಯ ರೂ 1-8-0 ಮಾತ್ರ

ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವ

ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವ್ವದು

**ಕೆ. ಎಸ್. ಸೆಟ್ಟಿ, ಕೆನರಾ ನರ್ಸರಿ,**

ಪ್ರೊಪ್ರೈ:— ಕಾಪು, ದ ಕ.

## ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೊಲೆರಾ ಪಿಲ್ಸ್**

ಕೊಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗ ರೂ ೨—೮—೦

**ಭೈರವ ಮಾತ್ರೆಗಳು**

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ

೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

**ಯು. ಪಿ ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್**

# ಸೀರೆಗಳು

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.**

**ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.**

**ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.**

## ನೀವು ಓದಿರುವಿರಾ?

**ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?**

## ಅಡ್ಡಬಳೆದ ಗಿಡ್ಡಿಯ ಮದುವೆ

## ಮುದುಕನ ಹೆಂಡತಿ ಭಕಪ್ಪೈರಾದೆ

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ

ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ

ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ

ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**

ಶ್ರೀ ಕೂರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ

**ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.**

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರ ಆಣೆ ಸ್ಟಾಂಪು ಕಳುಹಿಸಬೇಕು.

**NAVABHARAT BOOK DEPOT, UDIPI**

Byndoor, 9th July 1937.

*From*

J. M. BANAVALI,
Byndoor Camp

*To*

*THE AGENT*
THE COMBINED BOOKING AGENCY,
Byndoor (S K.)

*Dear Sir,*

Received the ''Tin'' which I had missed in your office at Udipi on 6-7-1937 and which your Udipi office so kindly and promptly sent to me. I am really startled to see the efficient Management and promptness of the staff in rendering every assistance to the travelling passengers. I cannot therefore restrain myself from thanking the Management and the Staff.

Yours faithfully,
(True Copy) (*Sd.*) ***J. M. Banavali.***


# SUPPLY AGENCY LTD.
## UDIPI

| | | |
|---|---|---|
| **Authorised Capital** | **Rs** | **1,00,000/-** |
| **Subscribed & Paid up Capital** | **Rs** | **29,840/-** |
| **Reserves** | **Rs.** | **901/-** |

ಈ ಕೆಳಗಿನ ದರದ ಬಡ್ಡಿಯಲ್ಲಿ
ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

| | | | |
|---|---|---|---|
| 3 ತಿಂಗಳಿಂದ | 6 ತಿಂಗಳ ವರೆಗೆ | | 4½% |
| 7 ,, | 9 | ,, | 5% |
| 10 ,, | 12 | ,, | 5½% |
| 13 ,, | 24 | ,, | 6¼% |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು
ಅಥವಾ ಪತ್ರವ್ಯವಹಾರ ಮಾಡಬಹುದು.

ಸಪ್ಲೈ ಏಜೆನ್ಸಿ ಲಿಮಿಟೆಡ್
ಉಡುಪಿ
1—9—1937

ಎಸ್. ಯು. ಪಣಿಯಾಡಿ,
ಮನೇಜಿಂಗ್ ಡೈರೆಕ್ಟರ್.

## ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ | 3 | 0 | 0 |
| ಚಂದ್ರಗುಪ್ತ | 1 | 0 | 0 |
| Gowthama the Buddha | 0 | 8 | 0 |
| ಮಧುವನ | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ | 0 | 8 | 0 |
| ಸರಸ್ವತಿ | 0 | 8 | 0 |
| ಗೀತೆಯ ಕೈಗನ್ನಡಿ | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) | 0 | 4 | 0 |
| ಕೃಷ್ಣಸಂಧಾನ | 0 | 8 | 0 |
| ತುಳು ವ್ಯಾಕರಣ | 0 | 8 | 0 |
| ಸತೀ ಕಮಲೆ | 0 | 6 | 0 |
| ಸತ್ಯನಾರಾಯಣ ಕತೆ | 0 | 8 | 0 |

ಇದಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು
ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.

ತುಳುನಾಡ್ ಪ್ರೆಸ್, ಉಡುಪಿ.

Rs. 75 WILL PAY YOU AFTER 5 YEARS Rs. 100

INDUSTRIAL CASH CERTIFICATES

For full particulars apply to —
SUPPLY AGENCY LIMITED, UDIPI


Printed by P VENKATARAMANACHARYA for & on behalf of SUPPLY AGENCY LTD, at THULUNAD PRESS UDIPI and Published by K H SHETTY at NAVAYUGA OFFICE UDIPI.

೦-೧ ದಾಣೆ

will pay you
advertise in
'NAVAYUGA'
The Leading
Nationalist
Canarese Weekly
of Karnatak
RATES OF ADVT. Etc
APPLY TO THE MANAGER

# ನವಯುಗ

ವಾರಪತ್ರಿಕೆ ❖ ಸಂಪಾದಕ. ಕೆ. ಕೆ. ಶೆಟ್ಟಿ.

ನವಯುಗವು
ಅಖಿಲ
ಕರ್ನಾಟಕದಲ್ಲಿಯೂ
ಕನ್ನಡಿಗರು ನೆಲಸಿರುವ
ದೇಶ ವಿದೇಶಗಳ
ಎಲ್ಲ ಕೇಂದ್ರಗಳಲ್ಲಿಯೂ
ವಿಶಾಲವಾಗಿ
ಪ್ರಚಾರದಲ್ಲಿರುವುದರಿಂದ
ಜಾಹಿರಾತುಗಳಿಗೆ
ಉತ್ತಮ ಸಾಧನವಾಗಿದೆ
ದರಗಳಿಗೆ
ಮೆನೇಜರರಿಗೆ ಬರೆಯಿರಿ.

| ಸಂಪುಟ ೧೭<br>ಸಂಚಿಕೆ ೩ | ಉಡುಪಿ, ಗುರುವಾರ, ೧೬ ಸೆಪ್ಟಂಬರ ೧೯೩೭<br>Udipi, Thursday, 16th September 1937 | Vol XVII<br>No. 3 |
|---|---|---|

## THE CANARA INDUSTRIAL & BANKING SYNDICATE LTD

[INCORPORATED IN BRITISH INDIA]

ESTD:] [1925

*Head Office*
"MUKUNDA NIVAS"
UDIPI, (S. I)

**BRANCHES:**

1 BOMBAY

| | |
|---|---|
| 2 BANGALORE CITY | 17 HUBLI |
| 3 BELGAUM | 18 GADAG |
| 4 BYADGI | 19 KARWAR |
| 5 BELLARY | 20 KUMTA |
| 6 ADONI | 21 ANKOLA |
| 7 HOSPET | 22 HONAVAR |
| 8 TALIPARAMBA | 23 BHATKAL |
| 9 UPPINANGADI | 24 BRAHMAVAR |
| 10 KASARGODE | 25 HUNGARCUTTA |
| 11 PAYYANUR | 26 SIRSI |
| 12 KANHANGAD | 27 SAGAR |
| 13 KARKALA | 28 COONDAPOOR |
| 14 NANDYAL | 29 UDIPI |
| 15 PRODATTUR | 30 MANGALORE |
| 16 TADPATRI | 31 CANNANORE |

MEMBER.
RESERVE BANK OF INDIA
BANKERS CLEARING HOUSE, BOMBAY

*We have much pleasure to*
ANNOUNCE THE OPENING OF
OUR BRANCHES AT
HINDUPUR (Anantpur Dt.)
AND
TUMKUR (Mysore State)
ON THE 3rd & 9th SEPTEMBER 1937
RESPECTIVELY WHERE ALL KINDS
OF BANKING BUSINESS
WILL BE TRANSACTED

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,75,120 |
| Total resources exceed | „ 47 lakhs |

## ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ ಕೆ. ವಿ. ರಾವ್, ಮೆನೇಜರ್.

# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರೆಸ್ಸಿಗೆ ಬರೆಯಿರಿ.

**THE ROYAL SEED CO.**
FLORISTS & SEEDSMEN,
27, Ilpay Thope ULSOOR, BANGALORE

ವಿ. ಸೂ.—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈಮಾಡಿ ೧—೦—೦ ಒಂದಕ್ಕೆ ೦—೨—೦ ಕಮಿಷನ್ ಪಡಿಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು.

THE
# MOOLKY BANK, LTD.,
**MOOLKY.**
## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
**ಮೂಲ್ಕಿ.**

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ
ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವೆಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸ ಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

**M. R. Punja,** *President & Manager.*
**ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮನೇಜ

**ಪ್ರಾಮುಖ್ಯ ಪ್ರಕಟಣೆ**

# ಅಮೃತಾಂಜನ
— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

**ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'**
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

**ಅಮೃತಾಂಜನ ಡಿಪೋ,** — ಬೊಂಬಾಯಿ, ಮದ್ರಾಸು, ಕಲ್ಕತ್ತ.

DIAMONDS! DIAMONDS

# K. Ramachandra Krishna She
Near Mission High School, *Mangalo*

SUPERFINE UP TO DATE CUTTING! **ವಜ್ರಗಳು** BEST BRILLIANCY

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ ಡನ್ನಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂ ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾ ಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

**ಕೆ. ರಾಮಚಂದ್ರ ಕೃಷ್ಣ ಶೇಟ್,**
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂ

ಸ್ಥಾಪನೆ] **ಕೆನರಾ ಛಾಪಖಾನೆ** [1920
(ಬಂಟರ ಯಾನೆ ನಾಡವರಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

**ಹಂಪನಕಟ್ಟೆ, ಮಂಗಳೂರು.**

**ಇಲ್ಲಿ**

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ನಿಚಾರಿಸಿರಿ.

*Manager,*
**Kanara Printing Works,**
**Hampankatte, Mangalore.**

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು

**ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ**
**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ ನವರಿಂದ ರಚಿತವಾದ**

## 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿ ನನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖ ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 58 Mody Street, Fort Bomb

# ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಸಿನ ಕೈ, ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೂ ವಿಶೇಷ ಮಾಹಿತಿಗೂ ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇ ಮಾಡಿಕೊಡಲಾಗುತ್ತದೆ.

*Proprietor:* ATTAVAR BABOO

**VASANTHI HARMONIUM WORKS**
**Hampankatta, Mangalore.**

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾ ಬುಕ್ ಡಿಪೋ, ಚರ್ಚ್ ರೋಡ್, ಉಡುಪಿ. ಇಲ್ಲಿ ಮಾರಲ್ಪಡುತ್ತವೆ.

ವಾರ್ಷಿಕ ಚಂದಾ ರೂ ೩—೪—೦

ಆರು ತಿಂಗಳಿಗೆ ರೂ ೧—೧೨—೦

ಉಡುಪಿ

೧೬—೯—೧೯೩೭

ಸ್ಥಾಪನೆ

೧೯೨೧

# :: ನವಯುಗ ::

ಸಂಪುಟ ೧೭

ಸಂಚಿಕೆ ೩

## ವಾರದ ವಿಚಾರ

### ಜಾಪಾನಿನ ಉದ್ದೇಶವೇನು?

ಜಾಪಾನು ಉತ್ತರ ಚೀನದ ಮಂಚೂರಿಯವನ್ನು ವಶಪಡಿಸಿಕೊಂಡು ಅಲ್ಲಿ ತನ್ನ ಕೈಗೊಂಬೆಯಾದ ಚೀನೀ ರಾಜವಂಶೀಯ ನೊಬ್ಬನನ್ನು ಅರಸನಾಗಿ ಸ್ಥಾಪಿಸಿರುವುದಷ್ಟೆ. ಈ ಚಿಕ್ಕ ರಾಜ್ಯವೊಂದರಿಂದ ಆದಕ್ಕೆ ಹೆಚ್ಚಿನ ಪ್ರಯೋಜನವೇನೂ ದೂರೆತಂತೆ ತೋರುವುದಿಲ್ಲ. ಆದುದರಿಂದ ಅದೀಗ ಇಡೀ ಉತ್ತರ ಚೀನವನ್ನು ತನ್ನ ಆಧೀನಪಡಿಸಿಕೊಳ್ಳ ಹೊರಟಿದೆ. ಮಂಚೂರಿಯದಂತೆಯೇ ಒಳಸಂಚು ನಡಿಸಿ ಬೇರೋಪಾಯದಿಂದ ತನ್ನ ಸ್ವಾರ್ಥ ಸಾಧಿಸ ನೋಡಿತು. ಆದರೆ ಚೀನೀ ಸರಕಾರವು ಕೂಡಲೆ ಜಪಾನಿನ ಸೂತ್ರ ಚಾಲನೆಯನ್ನು ವಿರೋಧಿಸಿತು. ಆಗ ಜಪಾನು, ದಕ್ಷಿಣದಿಂದ ಉತ್ತರಕ್ಕೆ ಸೇನೆಯು ಕಳುಹಿಸಲ್ಪಡದಂತೆ ಶಾಂಘಾಯಿಯಲ್ಲೇ ಘೋರ ಯುದ್ಧವನ್ನಾರಂಭಿಸಿತು. ಈ ನಡುವೆ ಉತ್ತರ ಚೀನಕ್ಕೆ ಬೇಕಷ್ಟು ಸೇನೆ ಕಳುಹಿಸಿ ಈಗ ಅಲ್ಲಿ ದೊಡ್ಡ ಸಮರವನ್ನಾರಂಭಿಸಿರುವುದು. ಇಡೀ ಚೀನದಲ್ಲಿ ಉತ್ತರ ಚೀನದಷ್ಟು ಫಲವತ್ತಾದ ಭಾಗ ಯಾವುದೂ ಇಲ್ಲ. ಅಲ್ಲಿ ಕಬ್ಬಿಣ ಮತ್ತು ಇದ್ದಲು ಹೇರಳ ಸಿಗುತ್ತದೆ. ಇದು ಹೊರತು ಜಪಾನು ಉತ್ತರ ಚೀನವನ್ನು ವಶಪಡಿಸಿಕೊಂಡರೆ ಆ ಮೇಲೆ ಔಟರ್ ಮಂಗೋಲಿಯವನ್ನೂ ಕಡೆಗೆ ಇನ್ನರ್ ಮಂಗೋಲಿಯವನ್ನೂ ವಶಪಡಿಸಿಕೊಂಡು ತನಗನುಕೂಲವಾಗುವಂತೆ ಪ್ರಬಲ ರಾಜ್ಯವೊಂದನ್ನು ಕಟ್ಟಿ ಆ ಮೂಲಕ ತನ್ನ ವೈರಿಯಾದ ರಷ್ಯದ ಮೇಲೇರಿ ಹೋಗಬಹುದೆಂದೇ ಜಪಾನಿನ ಉದ್ದೇಶ. ಹೊರತು ಇಡೀ ಚೀನದ ಮೇಲೆ ತನ್ನ ಅಧಿಕಾರ ಸ್ಥಾಪಿಸಲಿಕ್ಕೂ ಉತ್ತರ ಚೀನವನ್ನು ಅಧೀನಪಡಿಸಿಕೊಳ್ಳುವುದು ಬಹಳ ಅಗತ್ಯ. ಈ ದೃಷ್ಟಿಯಿಂದಲೇ ಜಪಾನು 2 ವರ್ಷಗಳ ಮೊದಲೊಮ್ಮೆ ಚೀನೀಯರೊಡನೆ ಕಾದಾಡಿ ಉತ್ತರ ಚೀನದ ಹೋಪೈ ಮತ್ತು ಚಾಹಾರಿನ ಆಡಳಿತ ಕೌನ್ಸಿಲುಗಳಲ್ಲಿ ತನ್ನ ಕೈಗೊಂಬೆಗಳನ್ನು ಅಧಿಕಾರಕ್ಕೆ ತಂದಿತು. ಆದರೆ ಅನಂತರ ಜಪಾನಿನ ಸಂಬಂಧವಾಗಿ ಜನತೆಯಲ್ಲೆಲ್ಲಾ ಪ್ರಬಲ ವಿರೋಧವೆದ್ದು ಜಪಾನಿನ ಕುತಂತ್ರವು ನಡೆಯದಾಯಿತು. ಅಲ್ಲಿ ಪುನಃ ನಾನ್ಕಿಂಗ್ ಸರಕಾರದ ಅಧಿಕಾರವೇ ಪ್ರಬಲವಾಗಿ ಸ್ಥಾಪಿತವಾಯಿತು. ಇಡೀ ಚೀನದಲ್ಲೆಲ್ಲಾ ಜಪಾನಿನ ಕುರಿತು ತೀವ್ರ ವಿರೋಧಭಾವವುಂಟಾಯಿತು. ಇದನ್ನು ಮೊಳಕೆಯಲ್ಲೇ ಮುರಿದು ಚೀನವನ್ನು ಬಗ್ಗು ಬಡೆಯಬೇಕೆಂದೂ, ಅದು ತಾನು ಹೇಳಿದಂತೆ ನಡೆಯುವಂತಾಗಬೇಕೆಂದೂ ಜಪಾನು ಈಗ ಈ ಮಹಾಯುದ್ಧ ಹೂಡಿರುವುದು. ಆದರೆ ಇಂತಹ ಆಕ್ರಮಣವನ್ನಾರೂ ನ್ಯಾಯವೆನ್ನಲಾರರು. ಆದಕ್ಕಾಗಿ ಜಪಾನು, ಚೀನವು ಕಮ್ಯೂನಿಸ್ಟರ ಸೂತ್ರಚಾಲನೆಗೊಳಗಾಗಿದೆ, ರಷ್ಯವು ಒಳಗಿಂದೊಳಗೆ ಸಹಾಯವೀಯುತ್ತಿದೆಯೆಂದೆಲ್ಲಾ ಪ್ರಚಾರಮಾಡತೊಡಗಿದೆ. ಜರ್ಮನಿ ಮತ್ತು ಇಟೆಲಿಯ ಪತ್ರಿಕೆಗಳೆಲ್ಲ ಇದೇ ರೀತಿ ಪ್ರಚಾರಕ್ಕೆ ತೊಡಗಿವೆ. ಅಲ್ಲಿಯ ಸರಕಾರಗಳು ಹಾಗೆ ಪ್ರಚಾರಮಾಡುವಂತೆ ಸೂತ್ರಚಾಲನೆನಡೆಸಿವೆ.

### ಚೀನದ ಒಕ್ಕಟ್ಟು

ಇತ್ತಲಾಗಿ ತೀವ್ರ ಅಂತಃ ಕಲಹಕ್ಕೊಳಗಾಗಿದ್ದ ಚೀನವು ಇಂದೀಗ ಒಕ್ಕಟ್ಟಿನಿಂದ ಧೈರ್ಯ ಸಾಹಸದಿಂದ ಜಪಾನನ್ನು ಜಯಶೀಲವಾಗಿ ವಿರೋಧಿಸಿದೆ. 1927ರಿಂದ 1936ರ ವರೆಗೆ ನಾನ್ಕಿಂಗ್ ಸರಕಾರವನ್ನು ಪ್ರಬಲವಾಗಿ ವಿರೋಧಿಸಿದ್ದ ಕಮ್ಯೂನಿಸ್ಟರು ಕೂಡಾ ಈಗ ಜಪಾನನ್ನು ವಿರೋಧಿಸಲು ನೊಂಟ ಕಟ್ಟಿದ್ದಾರೆ. 1000ದ ವರೆಗೆ ವಿಮಾನ ಸಿದ್ಧತೆಯು ಚೀನೀಯರಲ್ಲಿದೆ. ಮಾರ್ಶಲ್ ಚ್ಯಾಂಗ್ ಕೈ ಶೇಕ್ವರ ಸೇನೆಯು ಸರಿಯಾದ ತರಬೇತಿ ಹೊಂದಿ ದಕ್ಷತೆಯಿಂದಲೂ ಧೈರ್ಯದಿಂದಲೂ ಕಾದ ಬಲ್ಲದು. ಒಂದೆರಡು ತಿಂಗಳವರೆಗಣ ಯುದ್ಧದಿಂದ ಜಪಾನಿಗೆ ಚೀನೀಯರನ್ನು ಅವರ ಸ್ಥಾನಗಳಿಂದ ಹಿಂದಕ್ಕಟ್ಟಲು ಸಾಧ್ಯವಾಗಿರುವುದಿಲ್ಲ. ಅದು ಚೀನೀಯರ ಪ್ರಬಲ ವಿರೋಧದಿಂದ ಆಶ್ಚರ್ಯಗೊಂಡಿರುವುದು. ಹೀಗೆಯೇ ನಡೆದರೆ ಒಂದು ವರ್ಷದ ವರೆಗೆ ಯುದ್ಧ ನಡೆಸಬೇಕಾಗಬಹುದೆಂದು ಜಪಾನಿನ ಪ್ರಧಾನ ಮಂತ್ರಿಗಳೇ ಹೇಳಿರುವರು. ಆದುದರಿಂದ ಸುಲಭವಾಗಿ ಜಪಾನರಿಗೆ ಚೀನವನ್ನು ಬಗ್ಗು ಬಡೆಯಲು ಸಾಧ್ಯವಾಗಲಾರದು.

### ತಾಟಸ್ಥ್ಯದ ಕಣ್ಣು ಕಟ್ಟು

ಎಲ್ಲಿಯಾದರೂ ತಾವು ಮಹಾಯುದ್ಧಕ್ಕೆ ಈಡಾಗಲ್ಪಡುವೆವೋ ಎಂದು ಬೆದರಿ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳು ಜಪಾನನ್ನು ಕೆಣಕ ಹೋಗದೆ ಅದು ದುರ್ಬಲ ಚೀನದ ಕೈಯಿಂದ ಮಂಚೂರಿಯವನ್ನು ಕಸಗೊಂಡು ನುಂಗುವುದನ್ನು ಕಣ್ಣಾ ಕಣ್ಣಾ ನೋಡಿ ಸುಮ್ಮನಿದ್ದು ಬಿಟ್ಟುವು. ಅಷ್ಟು ಮಾತ್ರವಲ್ಲದೆ ಅಂತರರಾಷ್ಟ್ರೀಯ ವಿರೋಧ ಮಾಡಿದ ಜಪಾನಿನೊಡನೆ ಅನಂತರ ಸ್ನೇಹ ಬೆಳೆಸುವುದರಲ್ಲಿ ಮುಂದಾದುವು. ಆ ಮೇಲೆ ಇಟೆಲಿಯು ಅಬಿಸೀನಿಯದ ಮೇಲೆ ಧಾಳಿನಡಿಸಿ ಪೈಶಾಚಿಕ ವಿಮಾನ ಧಾಳಿ ಮತ್ತು ವಿಷವಾಯು ಪ್ರಯೋಗದಿಂದ ದುರ್ಬಲ ಅಬಿಸೀನಿಯದ ಮೇಲೆ ಅತ್ಯಾಚಾರಮಾಡಿ ಲೀಗ್ ಆಫ್ ನೇಶನ್ಸಿನ ಬುಡಕ್ಕೇನೇ ಕೊಡಲಿಯಿಟ್ಟಾಗ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಮುಸಲೋನಿಯ ಅಬ್ಬರಕ್ಕೆ ಹೆದರಿ ನಾಂಕ್ಷನುಗಳ ಕಣ್ಣಾಕಟ್ಟಿನಿಂದ ಲೋಕದ ಕಣ್ಣಿಗೆ ಮಣ್ಣು ಹಾಕಿ ಕೈ ಕಟ್ಟಿ ಕುಳಿತವು. ನಗಸರು ಈ ಲೀಗ್ ಆಫ್ ನೇಶನ್ಸಿನ ರಾಷ್ಟ್ರಗಳನ್ನು ನಂಬಿ ಕೆಟ್ಟರು. ಈಗ ಅವರನ್ನು ಕೇಳುವವರಿಲ್ಲ. ಮುಸಲೋನಿಯವರು ತಾವು ಎಬಿಸೀನಿಯದಲ್ಲಿ ಪುರಾತನ ರೋಮನ್ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿದೆವೆಂದು ಹೇಳಿಕೊಂಡ ಮೇಲೆ ಸ್ಪೈನಿನ ವಿರೋಧ ಪಕ್ಷಕ್ಕೆ ಕಾದಾಡಿ ಸ್ಪೈನಿನಲ್ಲಿ ಫ್ಯಾಸಿಸ್ಟ್ ಸಾಮ್ರಾಜ್ಯ ಸ್ಥಾಪಿಸಬೇಕೆಂದು ಹವಣಿಸ ಯತ್ನಾರಂಭಿಸಿರುವರು. ಅಷ್ಟು ಮಾತ್ರವಲ್ಲದೆ ಭೂಮಧ್ಯ ಸಾಗರದಲ್ಲಿ ಇಟೆಲಿಯ ಬಲವು ಹೆಚ್ಚುವಂತೆ ಸ್ಪೈನಿನ ಅಂತಃಕಲಹದಲ್ಲಿ ಕೈಹಾಕಿ ಪ್ರತ್ಯಕ್ಷವಾಗಿ ಸೇನೆ ಮತ್ತು ಯುದ್ಧೋಪಕರಣ ಕಳುಹಿಸುತ್ತಿರುವರು. ಜರ್ಮನಿಯೂ ಇಟೆಲಿಯ ಹೆಜ್ಜೆ ಹಿಡಿದು ಹೋಗಿರುವುದು. ಇಷ್ಟು ಮಾತ್ರವಲ್ಲದೆ ಇಟೆಲಿಯ ಜಲಾಂತರ್ಗಾಮಿ ನಾವೆಗಳು ಭೂಮಧ್ಯ ಸಾಗರದಲ್ಲೆಲ್ಲಾ ಓಡಾಡಿ ವ್ಯಾಪಾರಿ ಹಡಗುಗಳ ಮೇಲೆ ದಾಳಿ ನಡಿಸಿ ಹಲವನ್ನು ಮುಳುಗಿಸಿವೆ. ಇದರಿಂದಾಗಿ ಇಂಗ್ಲೆಂಡು ಬಹಳ ತಳಮಳಗೊಂಡು ಅದನ್ನು ತಡೆಗಟ್ಟುವ ಕುರಿತು ಆಲೋಚಿಸಲು ಯುರೋಪಿನ ರಾಷ್ಟ್ರಗಳ ಪರಿಷತ್ತೊಂದನ್ನು ಕರೆದಿರುವಾಗ ಅದರಲ್ಲಿ ಇಟಲಿ ಮತ್ತು ಜರ್ಮನಿಗಳು ಭಾಗವಹಿಸಲೊಪ್ಪಿರುವುದಿಲ್ಲ. ಇದಲ್ಲದೆ ಈ ರಾಷ್ಟ್ರಗಳೂ ಪ್ರತ್ಯಕ್ಷವಾಗಿ ಜನರಲ್ ಫ್ರೇಂಕೋರವರಿಗೆ ಸಹಾಯಮಾಡುತ್ತಿವೆ. ಫ್ರೇಂಕೋರವರು ಸಂಪೂರ್ಣ ಜಯಶೀಲರಾಗಬೇಕಾದರೆ ಅವರಿಗೆ ಇನ್ನೂ 2 ಅಥವಾ 3 ಲಕ್ಷ ಇಟಲಿಯನ ಅಥವಾ ಜರ್ಮನ್ ಸೈನಿಕರು ಬೇಕಾಗಿದ್ದಾರೆ. ಮುಸಲೋನಿಯವರು ಇಷ್ಟರವರೆಗೆ ಮುಂದುವರಿದು ಇನ್ನು ಸುಮ್ಮನಿರಲು ಸಾಧ್ಯವಿಲ್ಲ. ಆದುದರಿಂದ ಪಟ್ಟಾಲ್ಲು ಪಟ್ಟಾಲು ಇಟಲಿಯನ ಸೇನೆಯು ಸ್ಪೈನಿಗೆ ಕಳುಹಿಸಲ್ಪಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ತಾಟಸ್ಥ್ಯವೆಂಬುದು ಬರೇ ಫಾರ್ಸಲ್ಲವೇ? ಅಂತರರಾಷ್ಟ್ರೀಯ ತಾಟಸ್ಥ್ಯ ಕಮಿಟಿಯನ್ನು ವಿಸರ್ಜಿಸಿಬಿಡುವುದೊಳ್ಳೇದಲ್ಲವೇ? ಇಂಗ್ಲೆಂಡು ಫ್ರಾನ್ಸ್ ಮತ್ತು ರಷ್ಯಗಳು ಪ್ರತ್ಯಕ್ಷವಾಗಿ ಸ್ಪೈನಿಶ್ ಸರಕಾರಕ್ಕೆ ಸೇನೆ ಮತ್ತು ಯುದ್ಧೋಪಕರಣ ಕಳುಹಿಸಿದರೆ ಮಾತ್ರ ಮುಸಲೋನಿ ಮತ್ತು ಹಿಟ್ಲರರಿಗೆ ಬುದ್ಧಿ ಬಂದೀತು. ಇಲ್ಲವಾದರೆ ಸ್ಪೈನಿನಲ್ಲಿ ಫ್ಯಾಸಿಸ್ಟ್ ರಾಜ್ಯಭಾರವು ಸ್ಥಾಪಿಸಲ್ಪಟ್ಟು ತಾಟಸ್ಥ್ಯವೆಂಬುದು ಅಬಿಸೀನಿಯ ಸಂಬಂಧವಾದ 'ಸಾಂಕ್ಷನು'ಗಳ ಗತಿಯನ್ನೇ ಪಡೆಯದಿರದು.

### ಲೋಕಯುದ್ಧವು ಅನಿವಾರ್ಯ

ಯಾವ ರೀತಿಯಿಂದಲಾದರೂ ಲೋಕಯುದ್ಧವು ನಿವಾರಿಸಲ್ಪಡಬೇಕು. ಯುದ್ಧದ ಕಿಚ್ಚನ್ನು ದಾವಾಗ್ನಿಯಾಗಿ ಹಬ್ಬಬಿಡದೆ ಅಲ್ಲಲ್ಲಿಯೇ ನೊಂದಿಸಿಬಿಡಬೇಕೆಂದು ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ರಾಷ್ಟ್ರಗಳು ಪ್ರಯತ್ನಿಸುತ್ತಿರುವುದೇನೋ ನಿಜ. ಆದರೆ ಅವರಿಗ ಪ್ರತಿ ವಿರುದ್ಧವಾಗಿ ಜರ್ಮನಿ, ಇಟಲಿ ಮತ್ತು ಜಪಾನುಗಳು ತಮ್ಮ ಉಗ್ರ ಸಾಮ್ರಾಜ್ಯವಾದಿಗಳಾಗಿ ಯಾವ ಆಕ್ರಮಣಕ್ಕೂ ಹಿಂಜರಿಯದಿರುವಾಗ ಅದು ಹೇಗೆ ಸಾಧ್ಯ? ಇಂಗ್ಲೆಂಡ ಮತ್ತು ಫ್ರಾನ್ಸ್‌ಗಳ ಈ ದುರ್ಬಲ ಧೋರಣೆಯಿಂದಲೇ ಲೋಕ ಯುದ್ಧಕ್ಕೆ ಪ್ರೋತ್ಸಾಹದೊರೆಯುವಂತಾಗುವುದಿಲ್ಲವೇ? ಹಿಂದಿನ ಮಾತಂತಿರಲಿ, ಈಗ ಸ್ಪೈನಿನಲ್ಲಿ ಮುಸಲೋನಿ ಹಿಟ್ಲರರ ಸಹಾಯದಿಂದ ಜನರಲ್ ಫ್ರೇಂಕೋರವರು ಗೆದ್ದರೆ ಭೂಮಧ್ಯಸಾಗರದಲ್ಲಿ ಇಟೆಲಿಯ ಪ್ರಭಾವವು ಹೆಚ್ಚುವುದು. ಯುರೋಪಿನಲ್ಲಿ ಹಿಟ್ಲರ ಮುಸಲೋನಿಗಳ ಕೈಮೇಲಾಗುವುದು. ಜಪಾನು ಚೀನವನ್ನು ಜೈಸಿದರೆ ಪೂರ್ವದಲ್ಲಿ ಜಪಾನು ಪ್ರಾದುರ್ಭಾವಹೊಂದುವುದು. ಜಪಾನು ಇಟಲಿ ಮತ್ತು ಜರ್ಮನಿಗಳೀಗ ಒಂದುಗೂಡಿ ನಡೆಯುತ್ತಿರುವವು. ಅವುಗಳ ಪ್ರಭಾವವು ಈ ರೀತಿ ಹೆಚ್ಚಿತೆಂದರೆ ಅವು ಆ ಮೇಲೆ ಇಂಗ್ಲೆಂಡು, ಫ್ರಾನ್ಸ್ ಮತ್ತು ರಷ್ಯಗಳನ್ನು ಗಣಿಸದೆ ಮತ್ತಷ್ಟು ಉದ್ಧಟತನದಿಂದ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಹೊರಡದಿರಲಾರವು. ಆಗ ಇಂಗ್ಲೆಂಡ್ ಮೊದಲಾದ ರಾಷ್ಟ್ರಗಳು ಸುಮ್ಮನಿರಲು ಸಾಧ್ಯವೇ ಇಲ್ಲ. ಅಂದರೆ ಆಗ ಪ್ರಚಂಡ ಲೋಕ ಯುದ್ಧವು ಅನಿವಾರ್ಯವೇ ಸರಿ. ಅದಕ್ಕಿಂತ ಈ ಫ್ಯಾಸಿಸ್ಟ್ ರಾಷ್ಟ್ರಗಳ ಪ್ರಭಾವವನ್ನು ಮೊಳಕೆಯಲ್ಲೇ ಮುರಿದು ಈಗಲೇ ಈ ಹಿಟ್ಲರ ಮುಸಲೋನಿಗಳ ಸ್ವೇಚ್ಛಾಪರ ವರ್ತನೆಗೆ ಅಂಕುಶ ಹಾಕುವುದು ವಿವೇಕವಲ್ಲವೇ? ಆದರೆ ಈ ವಿಷಯದಲ್ಲಿ ಅಗ್ರಭಾಗವಹಿಸಬೇಕಾದ ಇಂಗ್ಲೆಂಡ್ ಕುಟಿಲ ನೀತಿಯನ್ನನುಸರಿಸುವಾಗ ಉಳಿದ ರಾಷ್ಟ್ರಗಳೇನು ಮಾಡಿಯಾವು?

### ಅಗ್ರಗಣ್ಯ ಸ್ವರಾಜ್ಯ ಯೋಧರು

ಕೇವಲ ಕೆಲವೇ ವರ್ಷಗಳಲ್ಲಿ ವಾಯು

ವ್ಯ ಗಡಿನಾಡಿನ ಅಶಿಕ್ಷಿತರೂ, ಅನಾಗರಿಕರೂ, ಉಗ್ರ ಸ್ವಭಾವಿಗಳೂ ಆಗಿ, ಹಿಂದು ದೇಶದ ಸುರಕ್ಷಿತತೆಗೆ ಯಾವಾಗಲೂ ಅಪಾಯಕಾರಿಗಳೆಂದೆಣಿಸಲ್ಪಟ್ಟಿದ್ದ ಪಠಾಣರು ಅಗ್ರಗಣ್ಯ ಸ್ವರಾಜ್ಯಯೋಧರಾಗಿ ಇಡೀ ಭಾರತಕ್ಕೊಂದು ಮಾದರಿಯಾಗಿರುವರು ಅಲ್ಲೀಗ ಕಾಂಗ್ರೆಸ್ ಸರಕಾರವು ಸ್ಥಾಪಿಸಲ್ಪಟ್ಟಿರುವುದು ವಾಯುವ್ಯ ಗಡಿನಾಡಿನ ಜನತೆಗೆಲ್ಲಾ ಖಾನ್ ಸಹೋದರರ ಮೇಲೆ ಸಂಪೂರ್ಣ ವಿಶ್ವಾಸವಿರುವುದು ಗಡಿನಾಡಿನಲ್ಲೊಂದು ಹೊಸ ಮನ್ವಂತರವೇ ಉಂಟಾಗುವ ಶುಭೋದಯವಾಗಿರುವುದು. ಕಾಂಗ್ರೆಸ್ ಮಂತ್ರಿಮಂಡಲಿಯ ರಚನೆಯ ಸಂಬಂಧವಾಗಿ ಅಲ್ಲಿಗೆ ಹೋಗಿದ್ದ ಮೌಲಾನ ಅಬ್ದುಲ್ ಕಲಾಮ್ ಆಜಾದರು ಅಬ್ಬೊಟಾಬಾದ್ ಎಂಬಲ್ಲಿ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತಾ "ಗಡಿನಾಡಿನವರಲ್ಲಿ ಕೆಲವು ವಿಶಿಷ್ಟ ಗುಣಗಳಿರುವವು ಎಂದುಗಳಿಂದಾಗಿ ಅವರು ಭಾರತವನ್ನು ಪರದಾಸ್ಯದಿಂದ ಬಿಡುಗಡೆಮಾಡುವುದರಲ್ಲಿ ಮುಂದೆ ಉತ್ಸಾಹವುಳ್ಳವರು ಪಠಾಣರು ನಮ್ಮನ್ನು ಬಹುವಾಗಿ ನಮ್ಮ ಗುರಿಯ ಸಮೀಪಕ್ಕೆ ತಂದಿರುವರು. ಸ್ಥಿರವಾಗಿ ಇದೇ ರೀತಿ ಮುಂದುವರಿದರೆ ಅದನ್ನು ಮುಟ್ಟಲಿಕ್ಕೆ ಕೆಲವೇ ಹೆಜ್ಜೆಗಳು ಮಾತ್ರ ಇರುವವು" ಎಂದರು ಬಾಬು ರಾಜೇಂದ್ರ ಪ್ರಸಾದರೂ ಪಠಾಣರ ಧೈರ್ಯ ಸ್ಥೈರ್ಯಾದಿಗುಣಗಳನ್ನು ಬಹಳ ಪ್ರಶಂಸಿಸಿದರು ಗಡಿನಾಡಿನಲ್ಲಿ ಕ್ರಾಂತಿಯುಂಟಾಗಲು ಶತಮಾನ, ಅದಾನ್ತರಾಂತರ ಬೇಕಾಗಿಲ್ಲ ಖಾನ್ ಅಬ್ದುಲ್ ಗಾಫರ್ ಖಾನರು ಮಾಂತ್ರಿಕ ಶಕ್ತಿಯಿಂದೆಂಬಂತೆ ಕೆಲವೇ ವರ್ಷಗಳಲ್ಲಿ ಈ ವಿಚಿತ್ರವನ್ನುಂಟುಮಾಡಿ ಇಡೀ ಹಿಂದೂದೇಶಕ್ಕೊಂದು ಉಜ್ವಲ ಮಾದರಿ ಹಾಕಿಕೊಟ್ಟಿರುವರು.

### ಸ್ತ್ರೀಯರ ಉದಾತ್ತ ಮಾದರಿ

"ನಮ್ಮ ಗಂಡಸರಿಗೇನು ಹಿಡಿದಿರುವುದು? ಎಲ್ಲಕ್ಕಿಂತಲೂ ಮೊದಲಾಗಿ ಹಿಂದೀಯರೆಲ್ಲಾ ಒಂದೇ ದೇಶದ ಪ್ರಜೆಗಳೆಂಬ ನಾಗರಿಕ ಭಾವವನ್ನೇ ಅವರು ಮರೆತು ಲೋಕದ ಇತರ ರಾಷ್ಟ್ರಗಳ ಅಪಹಾಸ್ಯಕ್ಕೊಳಗಾಗಿರುವರು. ಮುಸಲ್ಮಾನರಿರಲಿ, ಹಿಂದುಗಳಿರಲಿ, ಕ್ರೈಸ್ತರಿರಲಿ, ಪಾರ್ಸಿಗಳಿರಲಿ, ನಾವೆಲ್ಲಾ ಹಿಂದೀಯರಲ್ಲವೇ? ನಾನೊಮ್ಮೆ ಟ್ರೈನಿನಲ್ಲಿ ಸಂಚರಿಸುತ್ತಿರುವಾಗ ತರುಣನೊಬ್ಬನು, 'ನಮಗೆ ನಮ್ಮ ಜಾತಿ ಬೇಕಾಗಿದೆ, ಯೋಗ್ಯತೆಯಲ್ಲ' ಎಂದು ಚುನಾವಣೆಯೊಂದನ್ನು ಸಂಬಂಧಿಸಿ ಮಾತಾಡುವುದನ್ನು ಕೇಳಿದೆ ಇದು ಹಿಂದೀ ನಾಗರಿಕ ಭಾವದ ಬುಡಕ್ಕೇನೇ ಕೊಡಲಿಯಿಡುವದಾಗಿರುವುದು. ನಾವು ಹಿಂದೀ ಸ್ತ್ರೀಯರು ಈ ರೀತಿ ವರ್ತಿಸುವುದಿಲ್ಲ ನಮ್ಮ ಪರಿಷತ್ತು, ಕಮಿಟಿ, ಕ್ಲಬ್ಬು, ಸಾಮಾಜಿಕ ಕೆಲಸಗಳಿಗೆ ನಾವು ಅಧಿಕಾರಿಗಳೇ ಮೊದಲಾದವರನ್ನಾರಿಸುವಾಗ ನಮಗೆ ಯೋಗ್ಯತೆಯೇ ಮುಖ್ಯವಲ್ಲದೆ ಜಾತಿಮತವಲ್ಲ. ನಮ್ಮ ಗಂಡಸರು ಹಿಂದೀ ಸ್ತ್ರೀಯರ ಈ ಉದಾತ್ತ ಮಾದರಿಯನ್ನನುಸರಿಸಿ ಅನ್ನು ಜಾತಿಮತವನ್ನು ಮರೆತುಬಿಡಲಾರರೇ?" ಎಂದು ಶ್ರೀಮತಿ ಪದ್ಮಿನಿ ಸತ್ಯನಾಥನರು ವಿನಂತಿ ಮಾಡಿಕೊಂಡಿರುವರು ಎಷ್ಟಾದರೂ ಸ್ತ್ರೀಯರಲ್ಲವೇ? ಅವರಿಗೇನು ಗೊತ್ತು? ಅಂತೆಂದು ಸ್ತ್ರೀಯರ ಈ ಉದಾತ್ತ ಉದಾಹರಣೆಯನ್ನು ಕಡೆಗಣಿಸುವ ಗಂಡಸರೇ ಹೆಚ್ಚು ಆದರೆ ಎಲ್ಲಾ ಗೊತ್ತಿರುವ ಗಂಡಸರು ಮಾಡುವುದೇನೆಂದರೆ ಆ ಜಾತಿ, ಈ ಮತವೆಂದು ಕಚ್ಚಾಡಿಕೊಂಡು ರಾಷ್ಟ್ರದ ಹೆಸರಿಗೆ ಕಳಂಕತರುವುದು, ತಮ್ಮ ಉನ್ನತಿ ಸಾಧನೆಗೆ ಹಾನಿತರುವುದು.

# ಸಮಾಚಾರ ಸಂಗ್ರಹ: ೧೫ ಸಾವಿರ ಜನರೆದುರಲ್ಲಿ ಸಹಗಮನ, ಗಡಿನಾಡಿನ — ಗಲಾಟೆ, ೮ ಮಂದಿಯ ಕೊಲೆ, ಕುಮಾರಿ ಇಂದಿರಾ ನೆಹರು.

### 15 000 ಜನರೆದುರಲ್ಲಿ ಸಹಗಮನ

ಗ್ವಾಲಿಯರ್ ಸಂಸ್ಥಾನದ ಸಿಕ್ರೋಡಿ ಎಂಬಲ್ಲಿ ಠಾಕೂರ ರಘುವೀರಸಿಂಘನೆಂಬವನು ಮೃತನಾದಾಗ ಆತನ ಪತ್ನಿಯು ಸಹಗಮನ ಮಾಡುವ ನಿರ್ಧಾರ ಮಾಡಿದಳು ಇದನ್ನರಿತು ಸುತ್ತಣ ಹಳ್ಳಿಗರು ಜನರೆಲ್ಲಾ ಈ ಸಹಗಮನವನ್ನು ನೋಡಲು ನೆರೆದರು ಎಂದರೆ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನು ಕೆಲಮಂದಿ ಪೋಲೀಸರೊಂದಿಗೆ ಆ ಸ್ಥಳಕ್ಕೆ ಹೋಗಿ ಸದ್ರಿ ಸ್ತ್ರೀಯು ಸಹಗಮನಮಾಡದಂತೆ ಪ್ರಯತ್ನಿಸಿದನು, ಆದರೆ ಅವನ ಮಾತುಗಳು ಜನರ ಕೂಗಿನಲ್ಲಿ ಮುಳುಗಿಹೋಯಿತು. ಸುಮಾರು 15,000 ಜನರು ಈ ಸ್ತ್ರೀಯನ್ನು ಸ್ಮಶಾನಕ್ಕೆ ಹಿಂಬಾಲಿಸುತ್ತಿದ್ದರು ಅವಳು ಜನತೆಯಲ್ಲೊಬ್ಬನ ಕೈಯಲ್ಲಿದ್ದ ಖಡ್ಗವನ್ನು ಸೆಳಕೊಂಡು ಹತ್ತಿರ ಯಾರೂ ಬರಲಾಗದಂತೆ ಅದನ್ನು ಬೀಸಿ ತನ್ನ ಪತಿಯ ಚಿತೆಗೇರಿ ಸಜೀವವಾಗಿ ಸುಡಲ್ಪಟ್ಟಳು ಇದನ್ನು ಪ್ರೋತ್ಸಾಹಿಸಿದ ಆರೋಪದಿಂದ 3ಮಂದಿ ಹಳ್ಳಿಗರ ಮೇಲೆ ಖಟ್ಲೆ ನಡೆದಿದೆ

### ಪತಿಗಾಗಿ ತಾನು ಪ್ರಾಣಕೊಟ್ಟಳು

ಪಂಜಾಬಿನ ಕಾಂಗಿಲ್ ಎಂಬ ಹಳ್ಳಿಯ ಕುಂದನಸಿಂಘನೆಂಬ ಸಿಖ್ಖನೊಬ್ಬನು ತನಗಿಚ್ಛೆಬಂದ ತರುಣನೊಬ್ಬನಿಗೆ ತನ್ನ ಮಗಳನ್ನು ಮದುವೆಮಾಡಿಕೊಡುವ ನಿರ್ಧಾರಮಾಡಿದನು ಇದರಿಂದ ಆವನ ಅಳಿಯಂದಿರು ಕೆಲವರಲ್ಲಿ ಬಹಳ ಅತೃಪ್ತಿಯುಂಟಾಯಿತು ಈ ಅಳಿಯಂದಿರು ಕುಂದನಸಿಂಘನನ್ನು ಕೊಲ್ಲುವ ನಿರ್ಧಾರಮಾಡಿ ರಾತ್ರಿ ಆವನ ಮನೆಗೆ ನುಗ್ಗಿದರು ಆಗ ಎಚ್ಚರಗೊಂಡಿದ್ದ ಕುಂದನಸಿಂಘನ ಪತ್ನಿಯು ದೊಣ್ಣೆಯೊಂದರಿಂದ ಮನೆಯ ಬಾಗಿಲಿಗೆ ಹೋಗಿ ಒಳನುಗ್ಗಲೆತ್ನಿಸಿದವರಿಗೆ ಚೆನ್ನಾಗಿ ಹೊಡೆದು ಬೊಬ್ಬೆಹಾಕಿದಳು ಆಗ ನೆರೆಕರೆಯವರಿಗೆ ಎಚ್ಚರವಾಗಿ ಅವರು ಓಡಿಬಂದರು ಅಷ್ಟರಲ್ಲಿ ಈ ವೀರನಾರಿಗೆ ಬಹಳ ಪೆಟ್ಟಾಗಿದ್ದಿತು ಅವಳು ಮೇಯೋ ಆಸ್ಪತ್ರೆಗೊಯ್ಯಲ್ಪಟ್ಟು ಅಲ್ಲಿ ಮೃತಳಾದಳು

### ಬಾಬರ್ ಚಕ್ರವರ್ತಿಯಂತೆ ನಡೆದುದು

ಮೊಗಲ್ ಬಾದಶಹನಾದ ಬಾಬರನು ತನ್ನ ಮಗ ಹುಮಾಯೂನನು ಕಾಯಿಲೆಯಲ್ಲಿ ಬಿದ್ದಾಗ ಅವನ ಪ್ರಾಣವನ್ನುಳಿಸಲಿಕ್ಕಾಗಿ ತನ್ನ ಪ್ರಾಣವನ್ನರ್ಪಿಸಿದನೆಂಬ ಕಥೆಯಿರುವುದಷ್ಟೆ, ಲಕ್ನೋ ಪಟ್ಟಣದ ಮನುಲಾಲನೆಂಬವನು ಇದೇ ಮಾದರಿಯನ್ನನುಸರಿಸಿರುವನು ಮನುಲಾಲನ ಮಗನು ದೀರ್ಘ ಕಾಲದಿಂದ ರೋಗಪೀಡಿತನಾಗಿದ್ದನು ಮನುಲಾಲನಿಗೆ ಇದು ಅಸಹನೀಯವಾಗಿ ಅವನು ಹತ್ತಿರದ ಒಂದು ಕಾಳಿ ಗುಡಿಗೆ ಹೋಗಿ ತನ್ನ ನಾಲಿಗೆ ತುದಿಯನ್ನು ಕಡಿದು ದೇವಿಗೊಪ್ಪಿಸಿದನು ಆಗ ರಕ್ತ ಸುರಿದು ಬೋಪತಪ್ಪಿಬಿದ್ದನು ಈಗ ಮನುಲಾಲನೂ ಆಸ್ಪತ್ರೆಗೊಯ್ಯಲ್ಪಟ್ಟು ತನ್ನ ಮಗನೊಂದಿಗೆ ಹಾಸಿಗೆ ಹಿಡಿದಿರುವನು

### ಬ್ರಾಹ್ಮಣನೊಬ್ಬನ ಆತ್ಮಹತ್ಯೆ

ಲಕ್ನೋ ಪಟ್ಟಣದ ಮೋಹನಲಾಲ್ ಗಂಜ್ ಎಂಬಲ್ಲಿ 10ವರ್ಷ ಪ್ರಾಯದ ಬ್ರಾಹ್ಮಣನೊಬ್ಬನು, ತನ್ನ ಒಬ್ಬಳೇ ಮಗಳನ್ನು ತನ್ನಿಚ್ಛೆಗೆ ವಿರೋಧವಾಗಿ 40 ವರ್ಷದವನೊಬ್ಬನಿಗೆ ಮದುವೆಮಾಡಿಕೊಟ್ಟರೆಂಬ ಸಂತಾಪದಿಂದ ಆತ್ಮಹತ್ಯಮಾಡಿಕೊಂಡಿರುವನು

### ಗಡಿನಾಡಿನ ಗಲಾಟೆ

#### ಇಬ್ಬರು ಬ್ರಿಟಿಷ್ ಸೈನಿಕರು ಕೊಲ್ಲಲ್ಪಟ್ಟರು

ವಾಯುವ್ಯ ಗಡಿನಾಡಿನ ಗಲಾಟೆಯು ಇನ್ನೂ ಶಾಂತವಾಗಿರುವುದಿಲ್ಲ ಕೆಲವು ಪಂಗಡಿಗರು ಸರಕಾರದ ರಾಜಕರ್ತರಿಗಳಿಗೊಪ್ಪಿ ತಮ್ಮ ಆಯುಧಗಳನ್ನೆಲ್ಲಾ ತಂದೊಪ್ಪಿಸಿರುವರಾದರೂ ಇನ್ನೂ ಕೆಲವರು ಯುದ್ಧ ಪ್ರಕಾರ ಅಲ್ಲಲ್ಲಿ ಹೋರಾಟ ನಡಿಸುತ್ತಿರುವರು ಕಳೆದ ವಾರ ಮುಲ್ಲಾ ಶೇರ್ ಅಲಿ ಎಂಬ ಸರಕಾರದ ಪ್ರಬಲ ವಿರೋಧಿಯು ಹಿಂದೀ ಸಾಬ್ದಾರ್ ಗುಡ್ಡ ತಪ್ಪಲಲ್ಲಿ ಹಿಂದೀ ಸೈನಿಕರು ಸ್ಥಾಪಿಸಿರುವ ಎರಡು ಸೈನಿಕರ ಸ್ಥಾನಗಳನ್ನು ನಾಶಮಾಡಿ ಕೆಲಮಂದಿ ಸೈನಿಕರು ಕೊಲ್ಲಲ್ಪಟ್ಟಿರುವರು ಹಿಂದೀ ಸೈನಿಕರು ವಾಡ ಎಂಬಲ್ಲಿ ಹೋಗುವಾಗ ಶೇರ್ ಆಲಿಯ ಕಡೆಯವರು ಅವರ ಮೇಲೆ ಗುಂಡೆಸೆದು ಇಬ್ಬರು ಬ್ರಿಟಿಷ್ ಸೈನಿಕರು ಕೊಲ್ಲಲ್ಪಟ್ಟಿರುವರು ಒಬ್ಬ ಹಿಂದೀ ಸೇನಾಧಿಕಾರಿ ಮತ್ತು ಇಬ್ಬರು ಇತರ ಸೈನಿಕರು ಗಾಯಗೊಂಡಿರುವರು. ಶೇರ್ ಆಲಿಯ ಕಡೆಯಲ್ಲಿ ಸುಮಾರು 300 ಮಂದಿಯಿರುವರು ಇವರು ಪಂಗಡ ಪಂಗಡವಾಗಿ ಅಲ್ಲಲ್ಲಿ ತಂಗಿ ಸೈನಿಕರಿಗೆ ಗುಂಡೆಸೆದು ಹಾನಿಮಾಡುತ್ತಿರುವರು

### ೮ಮಂದಿಯ ಕೊಲೆ

ಪಂಜಾಬಿನ ಮುಕ್ತ್ಸರ್ ಎಂಬ ಹಳ್ಳಿಯಲ್ಲಿ ಎರಡು ತಂಡದವರೊಳಗೆ ತೀವ್ರ ದ್ವೇಷವಿದ್ದಿತು. ಇದೇ ತಾ 10ರಲ್ಲು ಒಂದು ತಂಡದ ಪ್ರಮುಖನು ತನ್ನ ಅನುಯಾಯಿಗಳೊಂದಿಗೆ ಹೋಗಿ ನಡು ಹಗಲಲ್ಲೇ ತನ್ನ ಮುಖ್ಯ ವಿರೋಧಿಗಳಿಬ್ಬರನ್ನು ಗುಂಡೆಸೆದು ಕೊಂದನು. ಆ ಮೇಲೆ ಇನ್ನು ಕೆಲವರ ಮನೆಗಳಿಗೆ ನುಗ್ಗಿ ಇಬ್ಬರು ಸ್ತ್ರೀಯರನ್ನೂ 4ಮಂದಿ ಗಂಡಸರನ್ನೂ ಕೊಂದುಹಾಕಿದನು. ನೆತ್ತರುಗಳನ್ನೇ ಲೂಟಾಯಿಸಿದನು. ಜನರೆಲ್ಲಾ ದಿಗಿಲುಗೊಂಡು ಹಳ್ಳಿ ಬಿಟ್ಟೋಡಿದರು ಅನಂತರ ಪೋಲೀಸ್ ಫೌಜೊಂದು ಬಂದು ಶಾಂತಿ ಸ್ಥಾಪಿಸಿದಾಗ ಮಾತ್ರ ಹಳ್ಳಿಗರು ತಮ್ಮ ತಮ್ಮ ಮನೆಗಳಿಗೆ ಹೋಗಿ ವಾಸಿಸಹತ್ತಿದರು

### ಮುಸಲೋನಿಯವರು

"ಅಬಿಸೀನಿಯವನ್ನು ಮಿಂಚಿನ ವೇಗದಿಂದ ಜೈಸಿ ರೋಮ್ ಸಾಮ್ರಾಜ್ಯವನ್ನು ವಿಸ್ತರಿಸಿದವೆವು ಇಂತಹ ರೋಮಾಂಚ ವಿಜಯವು ಇತಿಹಾಸದಲ್ಲೇ ಇಲ್ಲ ಇದು ಹೊರತು ಲೋಕದ 52 ರಾಷ್ಟ್ರಗಳ ಇದಿರಾಗಿ ನಾವೇ ವಿಜಯ ಪಡೆದಿರುವೆವು" ಎಂದು ಮುಸಲೋನಿಯವರು ಹೆಗ್ಗಳಿಕೆ ಪಟ್ಟು ಸ್ಪೈನಿನಲ್ಲಿ ಫೆಸಿಸ್ಟ್ ರಾಜ್ಯಭಾರ ಸ್ಥಾಪಿತವಾಗಿ ಇಡೀ ಭೂಮಧ್ಯ ಸಾಗರದಲ್ಲಿ ಇಟಲಿಯು ತಾನೇ ತಾನಾಗಿ ಮೆರೆಯಬೇಕೆಂಬ ಆಕಾಂಕ್ಷೆಯಿಂದಿರುವರು. ಭೂಮಧ್ಯದಲ್ಲಿ ವ್ಯಾಪಾರಿ ಹಡಗುಗಳ ಮೇಲೆ ಧಾಳಿ ನಡಿಸುವ ಪುಂಡಾಟಿಕ ನಿಲ್ಲಿಸಲು ತಕ್ಕ ಏರ್ಪಾಡು ಮಾಡಲು ಇಂಗ್ಲೆಂಡು ಕರೆದಿರುವ ಪರಿಷತ್ತಿಗೆ ಹೋಗದೆ ಜರ್ಮನಿಯ ಸಹಕಾರದಿಂದ ತನ್ನಿಚ್ಛೆಯನುಸಾರ ನಡೆಯುತ್ತಿರುವರು

### ಕುಮಾರಿ ಇಂದಿರಾ ನೆಹರು

ಗಳು ತನ್ನ ತಂದೆಯೊಂದಿಗೆ ವಾರ್ಧಾಕ್ಕೆ ಹೋಗಿ ಮಹಾತ್ಮ ಗಾಂಧಿಯವರ ಆಶೀರ್ವಾದ ಪಡೆದು ಇದೇ ತಾ 11ರಲ್ಲು ವೈಸ್‌ರೋಯಿ ಆಫ್ ಇಂಡಿಯಾ ಎಂಬ ಹಡಗದಲ್ಲಿ ಬೊಂಬಾಯಿಂದ ಇಂಗ್ಲೆಂಡಿಗೆ ಹೊರಟುಹೋದರು. ಪಂಡಿತ ಜವಾಹರಲಾಲರು, ಮತ್ತು ಅವರ ತಂಗಿಯೋ ಮೊದಲಾದವರು ಅವರನ್ನು ಬೀಳ್ಕೊಡಲು ಹೋಗಿದ್ದರು ಪಂಡಿತರು ಗುಜರಾತಿನಲ್ಲಿ ಕೆಲವು ದಿನ ಸಂಚರಿಸಿ ಆ ಮೇಲೆ ಪಂಜಾಬಿನ ರಾಜಕೀಯ ಪರಿಷತ್ತಿಗೆ ಹೋಗಲಿರುವರು

# ಚೀನಾ ಜಾಪಾನ್ ಮಹಾಯುದ್ಧ

## ೨ ತಿಂಗಳಲ್ಲಿ ಚೀನವನ್ನು ಬಗ್ಗುಬಡೆಯುವ ಜಾಪಾನಿನ ನಿರ್ಧಾರ.

## ಚೀನಿಯರ ಪ್ರಬಲ ವಿರೋಧ.

ಚೀನಾ ಜಾಪಾನು ಯುದ್ಧವು ಆರಂಭವಾಗಿ ಈಗ ಒಂದು ತಿಂಗಳು ಮಿಕ್ಕಿದರೂ ಜಾಪಾನಿಗೆ ಈ ವರೆಗೂ ಪ್ರಚಂಡ ವಿಜಯವೇನೂ ಆಗಿರುವುದಿಲ್ಲ. ಚೀನೀಯರು ಜಾಪಾನರು ವಿಸ್ಮಯಗೊಳ್ಳುವಷ್ಟರ ವೀರಾವೇಶದಿಂದ ಕಾದಾಡಿ ಜಯಶೀಲವಾಗಿ ತಡೆಗಟ್ಟಿರುತ್ತಾರೆ. ಎಷ್ಟು ಭೀಕರವಾಗಿ ಹೋರಾಡಿದರೂ ಜಾಪಾನರಿಗೆ ಶಾಂಘಾಯಿ ಬಳಿಯ ವೂಸಂಗ್ ಮತ್ತು ಅದರ ಸುತ್ತು ಮುತ್ತಲಿನ ಸ್ಥಳಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇಲ್ಲಿ ಚೀನೀಯರು ಜಾಪಾನರನ್ನು ಪರಾಜಯಗೊಳಿಸಿ ಹಿಂದಕ್ಕಟ್ಟುವರೆಂದು ತಿಳಿದು ಬರುತ್ತದೆ. ವೂಸಂಗ್ ಪಟ್ಟಣದಲ್ಲಿ ಸೇನೆಯನ್ನಿಳಿಸುವ ಜಾಪಾನರ ಪ್ರಯತ್ನವು ನಿರರ್ಥಕವಾಗಿರುವುದು. ಇದೇ ತಾ ೬ರಲ್ಲಿ ಜಾಪಾನರು ಚೆಸ್‌ಪೀಲ್ಡ್ ಎಂಬ ರೈಲ್ವೆಸ್ಟೇಶನಿಗೆ ಬೋಂಬೆಸೆದ ಪರಿಣಾಮವಾಗಿ 100ಕ್ಕಿಂತಲೂ ಮಿಕ್ಕಿದ ಜನರು ಕೊಲ್ಲಲ್ಪಟ್ಟಿರುವರು.

### ಜಾಪಾನರ ಯುದ್ಧೋತ್ಸಾಹ

ಜಾಪಾನು, ಚೀನೀ ಜನತೆಯ ವಿರೋಧವಾಗಿ ಯುದ್ಧ ಹೂಡಿರುವುದಿಲ್ಲ. ಜಾಪಾನನ್ನು ತೀವ್ರವಾಗಿ ದ್ವೇಷಿಸುವ ಚೀನೀ ಸರಕಾರದ ಮತ್ತು ಸೇನೆಯ ಅಹಂಕಾರವನ್ನಿಳಿಸಲಿಕ್ಕಾಗಿ. ವಿರೋಧವು ಪ್ರಬಲವಾದರೆ ಜಾಪಾನು ದೀರ್ಘ ಕಾಲದವರೆಗೆ ಹೋರಾಡಿ ಚೀನೀ ಸರಕಾರಕ್ಕೂ ಬುದ್ಧಿ ಕಲಿಸಿ ಪೂರ್ವದಲ್ಲಿ ಶಾಂತಿ ಸ್ಥಾಪನೆಮಾಡುವುದೆಂದು ಜಾಪಾನಿನ ಪ್ರಧಾನ ಮಂತ್ರಿ ಕೊನೊಯೆರವರು ಇದೇ ತಾ ೫ರಲ್ಲಿ ಜಾಪಾನ್ ಪ್ರತಿನಿಧಿ ಸಭೆಯಲ್ಲಿ ಹೇಳಿರುವರು. ಜಾಪಾನಿನಲ್ಲೆಲ್ಲಾ ಯುದ್ಧ ಪ್ರತಾಪವು ಹಬ್ಬಿರುವುದು. ಜನರೆಲ್ಲಾ ಸಹಸ್ರಗಟ್ಲೆಯಲ್ಲಿ ಸೇನೆಗೆ ಸೇರುತಿರುವರು. ಸೈನಿಕ ಪಟಾಲಮುಗಳೆಲ್ಲಾ ಚೀನಕ್ಕೆ ಕಳುಹಿಸಲ್ಪಡುತ್ತಿರುವವು. ರೈಲ್ವೆಯನ್ನು ಸಂಪೂರ್ಣವಾಗಿ ಸೇನೆಯನ್ನೊಯ್ಯುವುದಕ್ಕೆ ಉಪಯೋಗಿಸಿ ಸಾಮಾನ್ಯ ಪ್ರಯಾಣವು ನಿಲ್ಲಿಸಲ್ಪಟ್ಟಿರುವುದು. ಚೀನದ ಸಮುದ್ರ ತೀರದ ಮೇಲಿನ ನೌಕಾಮುತ್ತಿಗೆಯನ್ನು ಜಾಪಾನು ಇನ್ನೂ ವ್ಯಾಪಿಸಿರುವುದು. ಇದೇ ತಾ. ೬ರಲ್ಲಿ ಚೀನೀ ಹಡಗವೊಂದನ್ನು ಜಾಪಾನರು ಮುಳುಗಿಸಿರುವರು.

### ಪೈಶಾಚಿಕ ವಿಮಾನ ಧಾಳಿ

ಚೀನದ ಬೇರೆ ಬೇರೆ ಪಟ್ಟಣಗಳ ಮೇಲೆ ಜಪಾನ ವಿಮಾನಗಳು ಧಾಳಿ ನಡಿಸಿ ಪೈಶಾಚಿಕ ಹಾವಳಿ ಮಾಡುತ್ತಿರುವವು. ನಾಂಟಾವ್ರೋ ಪಟ್ಟಣದ ಮೇಲೆ ಬೋಂಬೆಸೆದಾಗ ೨೦೦ಕ್ಕಿಂತ ಹೆಚ್ಚಿನ ಜನರು ಕೊಲ್ಲಲ್ಪಟ್ಟಿರುವರು. ೩೦೦ಕ್ಕಿಂತಲೂ ಮಿಕ್ಕಿದವರಿಗೆ ಜಖಮ್ ಆಗಿರುವುದು. ಇವರಲ್ಲಿ ಅನೇಕರು ಸ್ತ್ರೀಯರು ಮತ್ತು ಮಕ್ಕಳು. ಯಾಂಗ್ ಹೇಗ್ ಚೆನ್ ಎಂಬ ಬಸ್‌ಸ್ಟೇಶನಿನ ಮೇಲೆ ಜಾಪಾನ ವಿಮಾನವೊಂದು 10 ಬೋಂಬೆಸೆದಾಗ ೨೦೦ಮಂದಿ ಜನರು ಮತ್ತು ಸೈನಿಕರು ಕೊಲ್ಲಲ್ಪಟ್ಟಿರುವರು.

ಶಾಂಘಾಯಿಯ ಬಳಿ ಗಾಯಗೊಂಡಿರುವ ಸೈನಿಕರನ್ನು ಉಪಚರಿಸುವ ಚೀನೀ ರೆಡ್ ಕ್ರೋಸಿನವರ ಮೇಲೂ ಜಾಪಾನ ವಿಮಾನವೊಂದು ಗುಂಡೆಸೆದಿರುವುದು. ಸಾಂಗ್ಜೋ ಎಂಬ ಪಟ್ಟಣದ ಮೇಲೆ 20 ಜಾಪಾನ ವಿಮಾನಗಳು ಬೋಂಬೆಸೆದಾಗ ನೂರಾರು ಮಂದಿ ಕೊಲ್ಲಲ್ಪಟ್ಟಿರುವರು. ಕ್ಯಾಂಟನ್ ಪಟ್ಟಣದ ಮೇಲೆ ಧಾಳಿನಡಿಸಿದಾಗ 2 ಜಾಪಾನ ವಿಮಾನಗಳನ್ನು ಕೆಡಹಲಾಗಿದೆ.

ಜಾಪಾನು ತಮ್ಮ ರಾಜ್ಯದ ಮೇಲೆ ಆಕ್ರಮಣ ಮಾಡಿರುವುದೆಂದು ಚೀನವು ಲೀಗ್ ಆಪ್ ನೇಶನ್ಸಿಗೆ ವಿನಂತಿ ಮಾಡಿಕೊಳ್ಳುವ ನಿರ್ಧಾರ ಮಾಡಿರುವುದು. ಇದೇ ತಾ ೬ರಲ್ಲಿ ಜಾಪಾನರು ಪ್ರಚಂಡ ಹೋರಾಟ ನಡಿಸಿ ಪೋಶಾನ್ ಪಟ್ಟಣವನ್ನು ವಶಪಡಿಸಿಕೊಂಡಿರುವರು. ಆದರೆ ಚೀನೀಯರು ಪ್ರಾಣದ ಹಂಗು ತೊರೆದು ಕಾದಾಡಿ ಅದನ್ನು ಪುನಃ ವಶಪಡಿಸಿಕೊಂಡಿರುವರು. ಭೀಕರ ಕೈಕೈ ಯುದ್ಧವು ನಡೆಯುತ್ತಿರುವುದು. ಚೀನಿಯರು ಮಿಶನ್ ತೋಪು, ಟ್ಯಾಂಕಿ ಮೊದಲಾದ ಯುದ್ಧೋಪಕರಣಗಳನ್ನು ಉಪಯೋಗಿಸಿ ಚೀನೀ ಸೈನಿಕರನ್ನು ನಿರುತ್ಸಾಹಗೊಳಿಸಲು ಎಷ್ಟೊಂದು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಚೀನೀ ವಿಮಾನಗಳು ಜಪಾನ ಯುದ್ಧನಾವೆಗಳ ಮೇಲೆ ಬೋಂಬೆಸೆದು ಎರಡು ಯುದ್ಧನಾವೆಗಳ ಮೇಲೆ ಬೋಂಬು ಬಿದ್ದು ಹಾವಳಿಯಾಗಿರುವುದು.

### ಜಾಪಾನರ ಕ್ರೂರ ಹಿಂಸೆ

ಜಾಪಾನರು ದಕ್ಷಿಣಚೀನದ ಸಮುದ್ರ ಕರಾವಳಿಯ ದ್ವೀಪಗಳನ್ನು ವಶಪಡಿಸಿಕೊಳ್ಳತೊಡಗಿರುವರು. ಹೋಂಕೋಂಗಿನಿಂದ 150ಮೈಲು ದಕ್ಷಿಣದ ಪ್ರಚಾಸ್ ಶಾಲ್ಸ್ ಎಂಬಲ್ಲಿ ಜಾಪಾನ ನೌಕಾ ಸೈನಿಕರು ಅಲ್ಲಿದ್ದ ರೇಡಿಯೋ ಸ್ಟೇಶನನ್ನು ಮುರಿದು ಹಾಕಿ, ವಿದೇಶೀಯರು ಕೆಲವರ ತಲೆಯ ಮೇಲೆ ಕತ್ತಿ ಕಟ್ಟಿ, ಪ್ರಶ್ನೆಗಳಿಗೆ ಉತ್ತರಕೊಡದಿದ್ದಲ್ಲಿ ಅವುಗಳನ್ನು ತಲೆಗೆ ಜಡಿಯುವೆನೆಂದು ಜಾಪಾನ ಸೈನಿಕನೊಬ್ಬನು ಗುದ್ದಲಿ ಹಿಡಿದು ನಿಂತಿದ್ದನಂತೆ. ಆನಂತರ ಈ ರೇಡಿಯೋ ಕಂಪೆನಿಯವರನ್ನೆಲ್ಲಾ ಸಮುದ್ರ ತೀರದಲ್ಲಿ ಸಾಲಾಗಿ ನಿಲ್ಲಿಸಿ ಮಿಶನ್ ತೋಪುಗಳ ಮೂಲಕ ಅವರ ತಲೆಯ ಮೇಲಿಂದ ಗುಂಡು ಹಾರಿಸಲಾಯಿತು. ಈ ದ್ವೀಪವನ್ನು ಜಾಪಾನರು ತಮ್ಮ ನೌಕಾ ನಿಲಯವಾಗಿ ಮಾಡಿ ಅಲ್ಲಿಯ ದ್ವೀಪಸ್ಥಂಬದವರನ್ನು ಸೆರೆಹಿಡಿದಿರುವರು. ಶಾಂಘಾಯಿಯಿಂದ ಹೋಂಕೋಂಗಿಗೆ ಹೋಗಿನ 160ಮಂದಿ ಬ್ರಿಟಿಷ್ ಸ್ತ್ರೀಯರು ಮತ್ತು ಮಕ್ಕಳು, ಶಾಂಘಾಯಿಯ ಪೆಟ್ಟು ಗುಂಡುಗಳ ಬೆಂಕಿಯಾದರೂ ಆದೀತು, ಹೋಂಕೋಂಗಿನ ಕೋಲೆರಾ, ಬಿರುಗಾಳಿ, ಅತಿಸಾರ ಮತ್ತು ಜೀವನದ ಅಸಹನೀಯ ಪರಿಸ್ಥಿತಿಯು ಬೇಡವೆಂದು ಶಾಂಘಾಯಿಗೆ ಹಿಂತಿರುಗಿರುವರು.

ಇದೇ ತಾ 7ರಲ್ಲಿ ಸೈಸಿಂಗಿನ ಪಶ್ಚಿಮದಲ್ಲಿ ನಡೆದ ಭೀಷಣ ಯುದ್ಧದಲ್ಲಿ ಅನೇಕ ಮಂದಿ ಜಾಪಾನರು ಕೊಲ್ಲಲ್ಪಟ್ಟಿರುವರು. ಉತ್ತರ ಚೀನದಲ್ಲೀಗ ರಣರಂಗವು ೨೦೦ಮೈಲುಗಳ ವರೆಗೆ ವ್ಯಾಪಿಸಿರುವುದು. ವೂಸಂಗ್ ಪಟ್ಟಣದ ಬಳಿ ಮುಖ್ಯ ಸೇನೆಯಿಂದ ಪ್ರತ್ಯೇಕಿಸಲ್ಪಟ್ಟ ಚೀನೀ ಪಟ್ಲಾಂ ಒಂದು ಆಹಾರವಿಲ್ಲದಿದ್ದರೂ ಹುಲ್ಲು ಮತ್ತು ಮರದ ತೊಗಟೆ ತಿಂದು ೪ದಿವಸಗಳ ವರೆಗೆ ವೀರಾವೇಶದಿಂದ ಕಾದಾಡಿ ಜಾಪಾನರಿಗೆ ಎಷ್ಟಕ್ಕೂ ಶರಣಾಗತವಾಗದೆ ಸಂಪೂರ್ಣವಾಗಿ ಹತವಾಗಿರುವುದು.

### ಜಾಪಾನಿಗೆ ಸಾಲದೊರೆಯಲಾರದು

ಅಮೇರಿಕದ ಜನರೆಲ್ಲಾ ಒಮ್ಮತದಿಂದ ಜಾಪಾನಿನ ಕುರಿತು ವಿರೋಧಾಭಿಪ್ರಾಯವುಳ್ಳವರಿರುವರು. ಪತ್ರಿಕೆಗಳೆಲ್ಲಾ ಜಾಪಾನರ ಆಕ್ರಮಣವನ್ನು ತೀವ್ರವಾಗಿ ಖಂಡಿಸುತ್ತಿರುವವು. ಜಾಪಾನರಿಗೆ ಹಣಸಾಲ ಬೇಕಾಗಿದ್ದರೆ ಅಮೇರಿಕದಿಂದೇನೂ ದೊರೆಯುವ ದಾಗಿಲ್ಲ. ಇಂಗ್ಲೆಂಡೂ ಜಾಪಾನಿಗೆ ವಿರೋಧವಾಗಿದೆ. ಇಟಲಿ ಮತ್ತು ಜರ್ಮನಿಗಳಿಂದ ಹಣ ಸಹಾಯವೇನೂ ಜಾಪಾನಿಗೆ ಸಿಕ್ಕಲಿಕ್ಕಿಲ್ಲ. ಯುದ್ಧವು ದೀರ್ಘಕಾಲದ ವರೆಗೆ ನಡೆದರೆ ಜಾಪಾನು ಜನತೆಯ ಮೇಲೆ ಹೆಚ್ಚಿನ ಕರ ಹೊರಿಸದೆ ನಿರ್ವಾಹವಿಲ್ಲವಾಗುವುದು. ಜಾಪಾನಿನ ಜನಸಾಮಾನ್ಯರು ಈ ಯುದ್ಧದಲ್ಲಿ ಹೆಚ್ಚಿನ ಉತ್ಸಾಹವುಳ್ಳವರಿದ್ದಿಲ್ಲ. ಆದರೆ ನೌಕೆ ಮತ್ತು ಸೈನ್ಯಾಧಿಕಾರಿಗಳು ತಮಿಚ್ಛೆಯಂತೆ ಯುದ್ಧಹೂಡಿರುವಾಗ ಅವರಿಗೆ ಏನುಮಾಡುವುದಕ್ಕೂ ಸಾಧ್ಯವಿಲ್ಲ. ಯಾಕಂದರೆ ಅವರ ಮೇಲೆ ಜನಸಾಮಾನ್ಯರಿಗೆ ಯಾವ ಹಿಂಕೆಯೂ ಇಲ್ಲ.

ಚೀನಾ ಜಾಪಾನ್ ಯುದ್ಧವು ಈಗ ವ್ಯಾಪಕವಾಗಿ ಹಬ್ಬಿ ಮಹಾ ಸಮರದ ಸ್ವರೂಪವಾಗಿರುವುದು. ಜಾಪಾನರು ನೌಕಾ ಮುತ್ತಿಗೆ ಹಾಕಿ ಚೀನೀ ಹಡಗ ಸಂಚಾರವನ್ನೆಲ್ಲಾ ನಿಲ್ಲಿಸಿ ಈಗ ದಕ್ಷಿಣದಿಂದ ಉತ್ತರಕ್ಕೆ ಸೇನೆಯನ್ನೊಯ್ಯುವ ಒಂದೇ ಒಂದು ರೈಲ್ವೆಯದಾದ ಕ್ಯಾಂಟನ್ ಹೇಂಕೋ ರೈಲ್ವೆ ಲೈನನ್ನು ಮುರಿದು ಹಾಕುವ ಪ್ರಯತ್ನದಲ್ಲಿರುವರು.

ಇದೇ ತಾ. 7ರಲ್ಲಿ ಶಾಂಘಾಯಿಯ ಬಳಿ ಚೀನೀಯರು ರಾತ್ರಿ ಜಾಪಾನರ ಮೇಲೆ ಬಿದ್ದು ಇಡೀ ರಾತ್ರಿ ಘೋರ ಸಮರವಾಗಿ ಜಾಪಾನರು ಕೆಲವು ಕಡೆ ಹಿಂದೆ ಸರಿಯಬೇಕಾಗಿ ಬಂದಿರುವುದು. ತಾ. ೮ನೇ ಬೆಳಗ್ಗೆ ಜಾಪಾನರು ವಿಮಾನ ಮತ್ತು ಯುದ್ಧ ನಾವೆಗಳ ಧಾಳಿಯ ಸಹಾಯದಿಂದ ಮುಂದೊತ್ತಿರುವರು. ಶಾಂಘಾಯಿಯಿಂದ ಜನರನ್ನೊಯ್ಯುವ ಟ್ರೈನೊಂದಕ್ಕೆ ಜಾಪಾನ ವಿಮಾನಗಳು ಬೋಂಬೆಸೆದು ೬ ಗಾಡಿಗಳು ಸಂಪೂರ್ಣ ನಾಶವಾಗಿ ೩೦೦ ಮಂದಿ ಚೀನಿಯರು ಕೊಲ್ಲಲ್ಪಟ್ಟು 100 ಮಂದಿ ಗಾಯಗೊಂಡಿರುವರು.

ಇನ್ನೆರಡು ತಿಂಗಳಲ್ಲಿ ಚೀನವನ್ನು ಬಗ್ಗುಬಡಿಯಬಹುದೆಂದು ಜಾಪಾನ್ ಸರಕಾರದ ನಿರೀಕ್ಷೆಯಿದೆ. ಯುದ್ಧ ವೆಚ್ಚಕ್ಕಾಗಿ ಈಗ ಮೂರನೇ ಸಲ ೨,೨೦೦ ಮಿಲ್ಯನ್ ಮಂಜೂರು ಮಾಡಲಾಗಿದೆ. ಒಂದು ವರ್ಷದ ವರೆಗೆ ಜಾಪಾನು ಯುದ್ಧಕ್ಕೆ ತಕ್ಕ ಸನ್ನಾಹ ಮಾಡುತ್ತಿದೆ.

### ಜಾಪಾನಿನ ದೌರ್ಬಲ್ಯ

ಯುರೋಪಿನಲ್ಲಿದ್ದ ಜನರಲ್ ಚೇಂಗ್ ಚೆನ್ ವೂ ಎಂಬ ಚೀನೀ ಸೇನಾನಿಯೊಬ್ಬರು ಇದೇ ತಾ 7ರಲ್ಲಿ ವಿಮಾನ ಮೂಲಕ ಚೀನಕ್ಕೆ ಹಿಂತಿರುಗುತ್ತಿದ್ದಾಗ ರಂಗೂನಿನಲ್ಲಿ ಪತ್ರಿಕಾ ಪ್ರತಿನಿಧಿಯೊಬ್ಬನೊಡನೆ ಹೀಗೆ ಹೇಳಿರುವರು "ಚೀನವು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲಿಕ್ಕಾಗಿ ಶ್ವಾಸವಿರುವ ವರೆಗೆ ಹೋರಾಡಬೇಕಾಗಿದೆ. ಈ ಯುದ್ಧದಲ್ಲಿ ಜಾಪಾನು ಜಯಶೀಲವಾದರೆ ಅದು ಪಾಶವಿಕ ಶಕ್ತಿಯ ಅನ್ಯಾಯವಾದ ವಿಜಯ. ಚೀನವು ಜಯಶೀಲವಾದರೆ ಅದು ನ್ಯಾಯಕ್ಕೆ ಮತ್ತು ಶಾಂತಿಗೆ ಜಯ

---

### ಜೀವನದ ಅನುಭವ.

- ಯಾರು ತನ್ನ ಪಾಲಿನ ಕರ್ತವ್ಯವನ್ನು ಸುಸೂತ್ರವಾಗಿ ನೆರವೇರಿಸಲಾರನೋ ಅವನು ಎಂದೂ ಇನ್ನೊಬ್ಬರ ಕೆಲಸವನ್ನು ಸರಿಯಾಗಿ ನಿರ್ವಹಿಸಲಾರನು
- ಎಲ್ಲಿಯ ವರೆಗೆ ಮಾನವನು ತನ್ನನ್ನು ತಾನು ತಿಳಿದುಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ಅವನ ವಿಳ್ಗೆಯೆಂಬುದು ಕನ್ನಡಿಯೊಳಗಿನ ಗಂಟು.
- ಸೋಮಾರಿಯಾಗಿ ಕುಳಿತು, ಸಾಲಮಾಡಿ ಚರೋಟಿ ತಿಂದು ಮೆರೆಯಾಡುವುದಕ್ಕಿಂತಲೂ ದುಡಿದುಡಿದು ಹೊಟ್ಟೆಗಿಲ್ಲದೆ ಸತ್ತುಹೋಗುವುದೇ ಲೇಸು.
- ತನ್ನ ಹಾಗೆಯೇ ಇನ್ನೊಬ್ಬರಿಗೂ ಸುಖ-ದುಃಖವಿದೆ ಎಂಬುದನ್ನು ತಿಳಿದುಕೊಳ್ಳಲಾರದವನನ್ನು ಮನುಷ್ಯನೆನ್ನುವುದಕ್ಕಿಂತಲೂ ದ್ವಿಪಾದ ಪಶುವೆನ್ನುವುದು ಹೆಚ್ಚು ಒಪ್ಪತಕ್ಕುದಾಗಿದೆ
- ಇಂದು ಯಾರು 'ತಾನು' ಎಂಬುದನ್ನು ಮರೆತು ಆಳಿನಂತೆ ಗೇಯುತ್ತಿರುವನೋ ಅವನು ಮುಂದೆ ಅರಸನಂತೆ ಸುಖವನ್ನು ಭೋಗಿಸುವನು

—ಕಾಡುಹಕ್ಕಿ

ಆ ಮೂಲಕ ಪೂರ್ವದಲ್ಲಿ ಮಾತ್ರವಲ್ಲದೆ ಇಡೀ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲು ಸಾಧ್ಯವಿದೆ. ಕಟ್ಟಕಡೆಗೆ ಚೀನವು ವಿಜಯ ಹೊಂದುವುದೆಂಬುದರಲ್ಲಿ ನನಗೆ ದೃಢ ವಿಶ್ವಾಸವಿದೆ. ಯಾಕೆಂದರೆ ಜಪಾನು ತೋರುವಿಕೆಗೆ ಅತ್ಯಂತ ಪ್ರಬಲ ಶಾಲಿ ರಾಷ್ಟ್ರವಾಗಿ ಕಂಡು ಬಂದರೂ ಒಳಗಿಂದೊಳಗೆ ಅತಿ ದುರ್ಬಲವಾಗಿದೆ. ಜಪಾನು ಬಹಳ ಬಡತನದ ದೇಶ. ಅದರ ಆದಾಯವನ್ನೆಲ್ಲಾ ಸೇನೆಯೊಂದೇ ನುಂಗುತ್ತಿದೆ. ಕಳೆದ 6 ವರ್ಷಗಳಿಂದ ಅದರ ಬಜೆಟಿನಲ್ಲಿ ಸೇಕಡ 50ರಷ್ಟು ಆಯವು ವ್ಯಯಕ್ಕಿಂತ ಕಡಿಮೆ ಬೀಳುತ್ತದೆ. ಅದರ ಸಾಲವು ವಿಪರೀತವಾಗಿ ಬೆಳೆದಿದೆ. ಜಪಾನರು ಎಂತಹ ಸಂಕಷ್ಟಕ್ಕೀಡಾಗಿರುವರೆಂದರೆ ಅವರಲ್ಲಿ ಅರೆವಾಸಿ ಜನರಿಗೆ ತೆರಿಗೆ ತೆರಲು ಸಾಧ್ಯವಿಲ್ಲ. ಇನ್ನರೆವಾಸಿ ಜನರಿಗೆ ಅದು ಸಹಿಸಲಾರದ ಹೊರೆಯಾಗಿದೆ. ಇದರಿಂದ ಸೇನೆಯ ಕುರಿತು ಜನರಲ್ಲಿ ತೀವ್ರ ಅತೃಪ್ತಿಯಿದೆ. ತರುಣ ಮತ್ತು ಪ್ರಾಯ ಮೀರಿದ ಸೇನಾಧಿಕಾರಿಗಳೊಳಗೆ ಮತ್ಸರವಿದೆ. ಪರದೇಶಗಳಿಂದ ಕಬ್ಬಿಣ ಇದ್ದಿಲು ಪೆಟ್ರೋಲುಗಳು ಬಾರದೆ ಜಪಾನಿಗೆ ಯುದ್ಧವನ್ನು ಬಹಳ ಸಮಯ ಮುಂದೊತ್ತಲು ಸಾಧ್ಯವಿಲ್ಲ. ಅದರ ವಿಮಾನಗಳ ಮೆಶೀನ್‌ಗಳೆಲ್ಲಾ ಪರದೇಶಗಳಲ್ಲಿ ತಯಾರಾಗಬೇಕಾಗಿದೆ. ಆದುದರಿಂದ ಜಪಾನಿಗೆ ಹೆಚ್ಚು ಸಮಯ ಯುದ್ಧ ನಡೆಸಲು ಸಾಧ್ಯವಿಲ್ಲ. ಚೀನೀಯರಲ್ಲಿ ಒಕ್ಕಟ್ಟಿಲ್ಲದುದರಿಂದ ಹಿಂದೆ ಜಪಾನಿಗೆ ಅವರನ್ನು ಬಗ್ಗು ಬಡಿಯಲು ಸಾಧ್ಯವಾಯಿತು. ಆದರೆ ಇಂದೀಗ ನಾನ್ಕಿಂಗ್ ಸರಕಾರದ ಕೈಕೆಳಗೆ ಇಡೀ ಚೀನವು ಒಕ್ಕಟ್ಟಾಗಿದೆ. 450 ಮಿಲ್ಯ ಚೀನೀಯರು ಒಮ್ಮತದಿಂದ ಯುದ್ಧಕ್ಕೆ ತೊಡಗಿದ್ದಾರೆ. ಚೀನಕ್ಕೆ ಬೇಕಾದ ಪ್ರಾಕೃತಿಕ ಸಂಪತ್ತು ಸೇನಾಬಲದ ಅನುಕೂಲತೆಯಿದೆ. ಅಮೇರಿಕ ಇಂಗ್ಲೆಂಡು ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳು ಈ ಆಕ್ರಮಣದ ಕುರಿತು ತುಟಿಯೆತ್ತದಿರುವುದು ಆಶ್ಚರ್ಯಕರ. ಅಂತರರಾಷ್ಟ್ರೀಯ ಒಪ್ಪಂದಗಳು ಈ ರೀತಿ ಖಾಲಿ ಕಾಗದದಂತೆ ಹರಿದು ಹಾಕಲ್ಪಟ್ಟರೆ ಲೋಕದ ಗತಿ ಹೇಗೆ ನಿಂತೀತು? ಇದರಿಂದ ಮಾನವ ಕೋಟಿಯ ಭವಿಷ್ಯಕ್ಕೇನೇ ಅಪಾಯವುಂಟಾಗಿದೆ. ಲೀಗ್ ಆವ್ ನೇಶನ್ಸಿನವರು ಈ ಸಲವಾದರೂ ಹಿಂದಿನಂತೆ ತಪ್ಪು ಮಾಡಬಾರದು."

ಜಪಾನಿನ ವಿಮಾನದಾಳಿಯ ನಿಮಿತ್ತ ದಕ್ಷಿಣ ಚೀನದಲ್ಲಿರುವ ಅಮೇರಿಕನರೆಲ್ಲಾ ಚೀನ ಬಿಟ್ಟು ಬರಬೇಕು. ಸರಕಾರವು ಅವರ ಸಂರಕ್ಷಣೆಯ ಜವಾಬ್ದಾರಿ ವಹಿಸಲಾರದೆಂಬ ಪ್ರೆಸಿಡೆಂಟ ರೂಸವೆಲ್ಟರ ಎಚ್ಚರಿಕೆಯು ಚೀನದಲ್ಲಿರುವ ಅಮೇರಿಕಾದ ವ್ಯಾಪಾರಿಗಳನ್ನು ಉದ್ರೇಕಿಸಿದೆ. ಇದರಿಂದ ಅಮೇರಿಕದ ಧ್ವಜವು ಕೆಳಗಿಳಿಸಲ್ಪಡುವ ಅಪಮಾನವುಂಟಾಗುವುದು. ಪ್ರೆಸಿಡೆಂಟ್ ರೂಸವೆಲ್ಟರಿಗೆ ಇಷ್ಟೊಂದು ಅಂಜುಬುರುಕರಾಗಿ ನಡೆಯಬಾರದು. ಅವರಲ್ಲಿ ಸ್ವಲ್ಪ ಧೈರ್ಯವಿರಬೇಕೆಂದು ಅಮೇರಿಕಾದ ವ್ಯಾಪಾರಿಗಳು ಖಂಡಿಸಿರುವರು. ಇದರ ಪರಿಣಾಮವಾಗಿ ಅಮೇರಿಕದ ವಿದೇಶ ಮಂತ್ರಿಗಳು ಚೀನದಲ್ಲಿರುವ ಸುಮಾರು 8000 ಅಮೇರಿಕನರಿಗೆ ರಕ್ಷಣೆಯ ಅಭಯವಿತ್ತಿರುವರು.

## ಉತ್ತರ ಚೀನದಲ್ಲಿ ಮಹಾ ಯುದ್ಧ

ಉತ್ತರ ಚೀನದಲ್ಲಿ ಬೇಗನೆ ಮಹಾ ಯುದ್ಧವಾಗುವ ಸಂಭವವಿದೆ. 180 000 ಜಪಾನ್ ಸೈನಿಕರು ಚಹಾರಿನಿಂದ ಶಾನ್ಸಿ ಪ್ರಾಂತದೊಳಗೆ ಮುನ್ನುಗ್ಗಿದ್ದಾರೆ. ಚೀನೀಯರು ದೊಡ್ಡ ಸೇನಾ ಸಂಗ್ರಹ ಮಾಡುತ್ತಿದ್ದಾರೆ. ಶಾನ್ಸಿಯ ನೆರೆಯ ಪ್ರಾಂತದ ಗೋರಿಲ್ಲಾ ಯುದ್ಧಪಟುಗಳಾದ ಕಮ್ಯೂನಿಸ್ಟರು ಸಮರ ಸನ್ನಾಹ ಮಾಡುತ್ತಿದ್ದಾರೆ. ಶಾಂಘಾಯಿಯಲ್ಲಿ ಚೀನೀಯರ ಜಯಶೀಲವಾದ ವಿರೋಧದ ಕುರಿತು ಜಪಾನರೇ ಆಶ್ಚರ್ಯಗೊಂಡಿರುವರು. ಚೀನೀಯರು 10 ಜಪಾನ ವಿಮಾನಗಳನ್ನು ಮುರಿದುಹಾಕಿರುವರು. ಚೀನೀಯರ, "ಸಾವಿಗೆದೆಕೊಟ್ಟೇ ಕಾದಾಡುವ" ಧ್ಯೇಯವುಳ್ಳ ಮಿಂಗ್ರೇಸರ ಪಟ್ಟಾಳಿನಲ್ಲಿ 500 ಮಂದಿ ಸ್ತ್ರೀಯರು ಸೈನಿಕರಾಗಿರುವರೆಂದು ತಿಳಿದುಬರುತ್ತದೆ. ಈ ವರ್ಷದೊಳಗೆ ಯುದ್ಧವು ಮುಗಿಯುವಹಾಗಿಲ್ಲೆಂದು ಜಪಾನ ಪ್ರಧಾನಮಂತ್ರಿಗಳೇ ಒಪ್ಪಿರುವರು. ಇದೇ ತಾ 11ರಲ್ಲು ಜಪಾನು ಪ್ರಚಂಡ ಯುದ್ಧವನ್ನಾರಂಭಿಸಲಿರುವದು. ಜಪಾನರು ಇದರಲ್ಲಿ ಜಯಶೀಲರಾದರೆ ಚೀನೀಯರು ಹೆಜ್ಜೆ ಹೆಜ್ಜೆಗೆ ಹೋರಾಡುತ್ತಾ ಹಿಂದೆ ಸರಿಯುವರೇ ಹೊರತು ಓಡಿಹೋಗಲಾರರು. ಚೀನೀ ಸೇನೆಯ ಯುದ್ಧೋತ್ಸಾಹವು ಉತ್ಕಟವಾಗಿದೆ. ಶಾಂಘಾಯಿಯಲ್ಲಿ ಜಪಾನರ ಕಡೆಯಲ್ಲ 200 ವಿಮಾನಗಳು, ಮತ್ತು 88 ಯುದ್ಧನಾವೆಗಳಿರುವವು. ಚೀನೀಯರು 11 ಜಪಾನ ವಿಮಾನಗಳನ್ನು ನಾಶಮಾಡಿರುವರು. ವಿಮಾನ ಯುದ್ಧದಲ್ಲಿ 15 ಚೀನೀ ವಿಮಾನಗಳು ನಾಶವಾಗಿರುವವು. ಇಡೀ ಚೀನವು ತನ್ನ ಅಧೀನವಾಗಲೆಂದು ಜಪಾನಿನ ಉದ್ದೇಶ. ಅದು ಅತ್ಯಂತ ಉಗ್ರತೆಯಿಂದ ಧಾಳಿನಡೆಸುತ್ತಿದೆ. ಆದರೆ 4 ಹಪ್ತೆಗಳ ತುಪಾಕಿ, ವಿಮಾನ ಮತ್ತು ಯುದ್ಧನಾವೆಗಳ ಭೀಷಣ ಧಾಳಿ ಮತ್ತು ಹೋರಾಟದಿಂದ ಜಪಾನರಿಗೆ ಚೀನೀಯರನ್ನು ಅವರ ಸ್ಥಾನಗಳಿಂದ ಹೊರಹಾಕಲು ಸಾಧ್ಯವಾಗಿರುವುದಿಲ್ಲೆಂದು ಚೀನೀ ಸರಕಾರದ ಪ್ರೆಸಿಡೆಂಟರಾದ ಮಾರ್ಶಲ್ ಚ್ಯಾಂಗ್ ಕೈಶೆಕ್ಕರ ಆಸ್ಟ್ರೇಲಿಯಾದ ಸಲಹೆಗಾರರಾದ ಮಿ. ಡೊನಾಲ್ಡರೆಂಬವರು ವಿದಿತಪಡಿಸಿರುತ್ತಾರೆ.

**ಶ್ರೀ ಸುಭಾಸಚಂದ್ರರು**

ಬಂಗಾಳದ ಜನ ಹೃದಯದ ಪ್ರತಿಷ್ಠಿತ ಮೂರ್ತಿ ಈಗ ತಾನೆ ಕಲ್ಕತ್ತಾ ಕೋರ್ಪೋರೇಶನಿನ ಹಿರಿಯ ಸಭಾಸದರಾಗಿ ಸರ್ವಸಮ್ಮತಿಯಿಂದ ಆರಿಸಲ್ಪಟ್ಟಿರುವರು. ತನ್ನ ತ್ಯಾಗ, ಪ್ರತಿಭೆ, ಪ್ರಗತಿಪರತ್ವದಿಂದ ಇಡೀ ಹಿಂದೂ ದೇಶದಲ್ಲೇ ಅಗ್ರಗಣ್ಯ ಮುಖಂಡರಲ್ಲೊಬ್ಬರಾಗಿರುವರು. ಪ್ರಾಯಶಃ ಶ್ರೀ ಬೋಸರೇ ಮುಂದಿನ ಕಾಂಗ್ರೆಸ್ ಅಧ್ಯಕ್ಷರಾಗಬಹುದು. ಗಾಂಧಿಜಿ ಮತ್ತು ಪಂಡಿತ ಜವಾಹರಲಾಲರಿಬ್ಬರೂ ಇವರ ಹೆಸರನ್ನು ಸೂಚಿಸಿರುವಂತಿದೆ. ಇವರೀಗ ಪಂಜಾಬಿನ ಡಾಲ್‌ಹೌಸಿಯಲ್ಲಿ ಆರೋಗ್ಯ ಪಡೆದು ಒಕ್ಟೋಬರ ಮೊದಲನೆ ಹಪ್ತೆಯಲ್ಲಿ ಬಂಗಾಳಕ್ಕೆ ತೆರಳಲಿರುವರು.

**ಮಂಗಳೂರು ಚಂದಾದಾರರಲ್ಲಿ**

ತಮ್ಮ ಚಂದಾಹಣ ಬಾಕಿ ಇರುವ ನಮ್ಮ ಮಂಗಳೂರಿನ ಚಂದಾದಾರರು ಬಾಕಿ ಇರುವ ಮತ್ತು ಮುಂದಿನ ವರ್ಷದ ಚಂದಾಹಣವನ್ನು ದಯವಿಟ್ಟು ಆದಷ್ಟು ಬೇಗನೆ ಕೆನರಾ ಪಾಸ್ಯಾನಿಯ ಮೆನೇಜರರೊಡನೆ ಕೊಡಬೇಕಾಗಿ ವಿನಂತಿ.

ಮೆನೇಜರ್, ನವಯುಗ


**WANTED**

A mistress or a master as a private teacher for some children of a land lord in a country house. Apply with copies of testimonials stating the minimum pay expected to—

"D"

C/o Navayuga, Udipi.



# THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY

**SPECIAL FEATURES.**

1 Rebate on yearly payment of policies.
2 Rebate for larger assurances.
3. Accident Risk covered on small extra premiums.
4 Attractive Bonuses

It pays you to represent this Company
Wanted Agents in unrepresented parts.

*Apply to:—*

**KOCHIKAR BROTHERS,**

*Madras Branch Secretaries*

BRANCHES AT

| | | |
|---|---|---|
| P B 337 Mount Road Madras | Visveswarapuram Circle Bangalore City | Soumyalayam Puthiyara, Calicut |
| Car Street Mangalore | Udipi, S India | Charni Road Bombay No 4 |

INSPECTORATE OFFICE AT·
1 Ottapalam Malabar District 2 Central Station Road Trivandrum

# EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

| | |
|---|---|
| Total Assets Over | Rs 80 00 000 |
| Life Funds Over | Rs 68,00 000 |
| Premium Income Over | Rs 22,54 000 |
| Interest Income | Rs 3 16 000 |
| Claims Paid | Rs 5,75,000 |

Total Claims paid Over Rs. 38,50,000
Total Business in Force Over Rs 4 42,51 200,

TOTAL BUSINESS IN FORCE Rs. 4,42,51,200

# ಸಂಯುಕ್ತ ಪ್ರಾಂತೀಯ ಬಜೆಟು

## ಹಳ್ಳಿ ಪ್ರದೇಶಗಳಲ್ಲಿ ಹೊಸ ಯುಗಾರಂಭ.
## ಗ್ರಾಮಾಭಿವೃದ್ಧಿಗೆ ರೂ. ೧೦ ಲಕ್ಷ ವಿನಿಯೋಗ.

ಕಾಂಗ್ರೆಸ್ ಪ್ರಾಂತಗಳಲ್ಲೆಲ್ಲಾ ಸಂಯುಕ್ತ ಪ್ರಾಂತವು, ಹಳ್ಳಿಗರ ಮತ್ತು ಜನಸಾಮಾನ್ಯರ ಹಿತಸಾಧನೆಯ ವಿಷಯದಲ್ಲಿ ಧೈರ್ಯದಿಂದ ಮುಂದಡಿಯಿಟ್ಟಿರುತ್ತದೆ. ಆ ಪ್ರಾಂತದ ಪ್ರಧಾನ ಮಂತ್ರಿಗಳಾದ ಶ್ರೀ ಗೋವಿಂದ ವಲ್ಲಭ ಪಂತರು ಸ್ವಲ್ಪವೇ ಸಮಯದಲ್ಲಿ ತಯಾರಿಸಿರುವ 1937 38 ರ ಬಜೆಟು ಹಲವು ದೃಷ್ಟಿಯಿಂದ ವಿಶಿಷ್ಟವಾದುದಾಗಿದೆ. ಅವರು ಬಹಳ ಧೈರ್ಯದಿಂದ ಆಡಳಿತ ವೆಚ್ಚವನ್ನು ಕಡಿಮೆಮಾಡಿ ಜನಹಿತಸಾಧಕ ವಿಶೇಷವಾಗಿ ಹಳ್ಳಿಗಳ ಉನ್ನತಿಯ ಕೆಲಸಗಳಿಗೇನೇ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದ್ದಾರೆ. ಇವನ್ನಾದರೆ ನಿಜವಾದ ಕಾಂಗ್ರೆಸ್ ಬಜೆಟೆನ್ನಬಹುದು. ಶಿಕ್ಷಣ ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ವ್ಯವಸಾಯ ಮತ್ತು ಕೈಗಾರಿಕೆಗಳಿಗಾಗಿ ರೂ 26,50,000 ವಿನಿಯೋಗಿಸಲಾಗಿದೆ. ಸರ್ವಸಾಮಾನ್ಯ ಆಡಳಿತ, ಪೋಲೀಸ್ ಮತ್ತು ನ್ಯಾಯ ಖಾತೆಯ ವೆಚ್ಚವನ್ನು ರೂ 12 ಲಕ್ಷಕ್ಕಿಂತಲೂ ಮಿಕ್ಕಿದಷ್ಟು ಕಡಿಮೆ ಮಾಡಲಾಗಿದೆ. ನಿರುದ್ಯೋಗವನ್ನು ನಿವಾರಿಸುವ, ವ್ಯವಸಾಯ ಮತ್ತು ವಿದ್ಯಾಭಿವೃದ್ಧಿಯನ್ನು ಪ್ರೋತ್ಸಾಹಿಸುವ, ಹೊಸ ರೀತಿಯಲ್ಲಿ ಸಂಪತ್ತನ್ನುಂಟುಮಾಡುವ ಹಲವು ಹೊಸ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಇಡೀ ಶಿಕ್ಷಣ ಪದ್ಧತಿಯನ್ನೇ ಪುನರ್ಘಟಿಸುವ ಆಲೋಚನೆಯು ಸರಕಾರಕ್ಕಿದೆ.

ಹಳ್ಳಿಗಳ ಅಭಿವೃದ್ಧಿಗಾಗಿ ರೂ. 10 ಲಕ್ಷವನ್ನು ವಿನಿಯೋಗಿಸಲಾಗುವುದು. ಸರ್ವಸಾಮಾನ್ಯವಾದ ರೂ. 1 ಲಕ್ಷ ಗ್ರ್ಯಾಂಟು ಪ್ರತ್ಯೇಕವಿದೆ. ಕಾಂಗ್ರೆಸ್ ಪಕ್ಷವು ಹಳ್ಳಿಗಳಲ್ಲಿ ಹೊಸ ಮನ್ವಂತರವನ್ನು ಆರಂಭಿಸುವ ನಿರ್ಧಾರಮಾಡಿರುವುದೆಂದು ಪಂಡಿತ ಪಂತರು ಸ್ಪಷ್ಟವಾಗಿ ಹೇಳಿರುವರು. ಸಂಯುಕ್ತ ಪ್ರಾಂತದ ಸುಮಾರು 100,000 ಹಳ್ಳಿಗಳನ್ನು ತಲೆಯೆತ್ತದಂತೆ ಮಾಡಿರುವ ವಿಸ್ಮಯಕರ ಬಡತನವನ್ನು ತೊಲಗಿಸಬೇಕು. ದಟ್ಟವಾಗಿ ಕವಿದಿರುವ ಕಗ್ಗತ್ತಲೆಯ ಬದಲಿಗೆ ಬೆಳಕನ್ನುಂಟುಮಾಡಬೇಕು. ದಿನ ಇಡೀ ಒಂದೇ ರೀತಿ ದುಡಿಯುವುದೊಂದೇ ತಮ್ಮ ಪಾಡೆಂಬ ನಿರಾಶಾ ಪೂರ್ಣಜೀವದಲ್ಲಿ ಸ್ವಲ್ಪ ಆಶೆ, ಉತ್ಸಾಹ, ಸಂತೋಷವನ್ನುಂಟುಮಾಡಬೇಕೆಂದೇ ಪಂಡಿತ ಪಂತರ ಆಶೆ. ನೌಕರರಲ್ಲಿ ಹಬ್ಬಿರುವ ಲಂಚಖೋರತನವನ್ನು ನಿವಾರಿಸುವ ಬಗ್ಗೆ ಸ್ಪೆಶಲ್ ಅಧಿಕಾರಿಯೊಬ್ಬನು ನೇಮಿಸಲ್ಪಡುವನು. ಬೆಂಡನ್ ಪವೆಲ್ ಸ್ಕೌಟ್ ಚಳವಳಕ್ಕೆ ಈ ವರ್ಷದ ಮಟ್ಟಿಗೆ ಗ್ರಾಂಟುಕೊಡಲಾಗುವುದೆಂದೂ, ಬರುವ ವರ್ಷ ಕೊಡುವ ಸಂಭವವಿಲ್ಲೆಂದೂ ಎಚ್ಚರವೀಯಲಾಗಿದೆ. ಜೈಲುಗಳ ಆಡಳಿತವನ್ನೇ ಸಂಪೂರ್ಣವಾಗಿ ಬದಲಾಯಿಸುವ ಕುರಿತು ಆಲೋಚಿಸಲಾಗುವುದು. ಕೈದಿಗಳ ಸಂಖ್ಯೆಯನ್ನು ಮೂರರಲ್ಲಿ ಒಂದರಷ್ಟಾದರೂ ಇಳಿಸುವ ಸರಕಾರದ ಯೋಜನೆಯು ಜ್ಯಾರಿಗೆ ಬಂದರೆ ಜೈಲು ಸುಧಾರಣೆಗೆ ಬೇಕಷ್ಟು ಹಣ ಅದರಿಂದಲೇ ದೊರೆಯುವುದು.

ಪಂಡಿತ ಪಂತರು, ದಿನೇದಿನೇ ಉತ್ಪತ್ತಿ ಹೆಚ್ಚುವ ವಿಷಯಗಳನ್ನೆಲ್ಲಾ ಕೇಂದ್ರ ಸರಕಾರವು ತನ್ನ ಕೈವಶವೇ ಇಟ್ಟುಕೊಂಡು ಉತ್ಪತ್ತಿ ಹೆಚ್ಚುವ ಬದಲಿಗೆ ಕಡಿಮೆಯಾಗುವ ವಿಷಯಗಳು ಕೆಲವನ್ನು ಪ್ರಾಂತಕ್ಕೆ ಕೊಟ್ಟು ಪ್ರಾಂತದ ಆರ್ಥಿಕ ಸುಸ್ಥಿತಿಗೆ ಹಾನಿಯನ್ನು ಮಾಡಿರುವ ಸರಕಾರದ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿ, ಕೇಂದ್ರದಲ್ಲಿ ಸಂಪೂರ್ಣ ಸಾಂಪತ್ತಿಕ ಸ್ವರಾಜ್ಯ ದೊರೆಯದೆ ಪ್ರಾಂತದ ಆರ್ಥಿಕ ತೊಡಕುಗಳು ದೂರವಾಗಲಾರವೆಂದು ಅಭಿಪ್ರಾಯಪಟ್ಟಿರುವರು.

ಪ್ರಧಾನಮಂತ್ರಿಗಳು ತನ್ನ ಬಜೆಟ್ ಭಾಷಣದ ಕೊನೆಯಲ್ಲಿ ಹೀಗೆಂದಿರುವರು "ಜನತೆಯು ಅಭಿವೃದ್ಧಿಗೊಂಡು, ಸಂಪತ್ತು ಪಡೆಯುವಂತೆ ಸಹಾಯಮಾಡಲಾರದ ಸರಕಾರಕ್ಕೆ ಬಾಳಿಕೊಂಡಿರಲಿಕ್ಕೇನೇ ಹಕ್ಕಿಲ್ಲೆಂದು ಜನಸಾಮಾನ್ಯರು ನೇಮಿಸಲ್ಪಟ್ಟಿರುವ ನಮ್ಮ ಅಭಿಮತ. ಸಾಮಾಜಿಕ ಪ್ರಗತಿ ಮತ್ತು ಸಂಘಟನೆಗಾಗಿ ಆಗತ್ಯವಿರುವ ಉಪಾಯ ಮತ್ತು ಸಾಧನಗಳನ್ನು ಮತ್ತು ಅದಕ್ಕೆ ತಕ್ಕ ಪ್ಲೇನುಗಳನ್ನೂ ಯೋಜಿಸುವುದು ನಮ್ಮ ಪ್ರಾಮುಖ್ಯ ಕರ್ತವ್ಯವಾಗಿರುತ್ತದೆ. ಇವೆಲ್ಲದರ ಗಾಢಜ್ಞಾನವು ನಮಗಿದೆ. ಜನಸಾಮಾನ್ಯರ ಪಾಡನ್ನು ಸುಧಾರಿಸುವ ಸರಕಾರದ ಪ್ರಯತ್ನದಲ್ಲಿ ಎಲ್ಲಾ ಪಕ್ಷದವರೂ ಸಹಕರಿಸುವರೆಂದು ಆಶೆಯಿದೆ. ಈ ಮಹತ್ತಾದ ಕೆಲಸಕ್ಕಾಗಿ ಒದಗುವ ಸಾಕಷ್ಟು ಹಣ ದೊರೆಯದಿದ್ದರೆ, ಅದಕ್ಕಾಗಿ ಜನರು ಹೆಚ್ಚಿನ ತೆರಿಗೆ ರೂಪದಲ್ಲಿ ಮತ್ತು ನೌಕರರು ತಮ್ಮ ಸಂಬಳದಲ್ಲಿ ಸ್ವಲ್ಪ ಭಾಗವನ್ನು ತ್ಯಾಗಮಾಡಿ ಸಹಾಯಮಾಡುವಂತೆ ಕೇಳಿಕೊಳ್ಳುವರೆ ಎದಗೊಳ್ಳಬೇಕು. ಅದಕ್ಕಾಗಿ ನಾವು ನಾಲ್ವರು ಹೆದರುವುದಕ್ಕೂ ಹಿಂಜರಿಯಲಾರೆವು. ಜನತೆಯು ಕೊಡುವ ಹಣವು ಸಂಪೂರ್ಣ ಪ್ರಯೋಜನವನ್ನವರು ಪಡೆಯುವಂತೆ ನೋಡುವುದು ನಮ್ಮ ಕರ್ತವ್ಯವಿದೆ. ಸರಕಾರವು ಒಟ್ಟುಗೂಡಿಸುವುದಕ್ಕೆಲ್ಲಾ ಒಳ್ಳೆ ಫಲ ಬರುವಂತಾಗಬೇಕು."

---


ಅಲಭ್ಯ ಲಾಭ! ಉಡುಪಿ ನಿಜವಾದ ಭದ್ರತೆಗೆ!!

**ಶ್ರೀ ಪೇಜಾವರ ಮಠದ ಪರ್ಯಾಯಂ**

**ಪ್ರೊಮಿಸರೀ ನೋಟನ್ನು ಇಂದೇ ಕೊಂಡುಕೊಳ್ಳಿರಿ!**

ಕೊಂಡುಕೊಳ್ಳುವವರು ಟ್ರಾನ್ಸ್‌ಫರ್ ಮಾಡಿಕೊಡುವ ಅನುಕೂಲತೆಗೋಸ್ಕರ ಬೋಂಡು ಎಂಬ ಹೆಸರು ತೆಗೆದು ಪ್ರೊಮಿಸರೀ ನೋಟು ಎಂದು ಹೆಸರು ಹಾಕಿದೆ

ಮಠದವರಿಗೆ ಅವಶ್ಯವಾದ ಗರ್ಜಿನ ಬಗ್ಗೆ ಸಾಲಮಾಡುವ ಆಗತ್ಯ ಉಂಟೆಂದೂ, ಅದು ಮಠಗಳ ಹುಟ್ಟುವಳಿ ಮೇಲೆ ಬಂಧುವಾಗತಕ್ಕದ್ದೆಂದೂ ಪ್ರಿವಿಕೌನ್ಸಿಲಿನ ತೀರ್ಪು ಇದೆ

ರೂ 75, 80, 85, 90ರ ಪ್ರೊಮಿಸರೀ ನೋಟನ್ನು ಪಡಕೊಂಡು ಕ್ರಮವಾಗಿ 5, 4, 3, 2 ವರ್ಷಗಳಲ್ಲಿ ಒಂದು ನೂರು ರೂಪಾಯಿಗಳನ್ನು ವಾಪಾಸು ಪಡೆಯಿರಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಜನರಲ್ ಏಜಂಟ್. ಪೇಜಾವರ ಮಠ, ಉಡುಪಿ.**


---


**JOBS FOR UNEMPLOYED RUPEES.**

You know vividly the evils of unemployment. But probably you do not know that unemployed money causes as much poverty and suffering. A bank is an employment agency for rupees. It finds jobs for them and thus contributes to the prosperity of the nation. You can help in this work by investing your savings in the bank.

Resources of A CRORE

ESTD 1906

**CANARA BANK**

**LIMITED.**


---

## ನೋಟೀಸು

ಉಡುಪಿ ತಾಲೂಕು ಪಿಲಾರು ಗ್ರಾಮದ ಪಿಲಾರು ಪರಾರಿ ಮಂಜ ಶೆಟ್ಟಿ ನೂಸೆ ಅಕ್ಕು ಶೆಡ್ತಿಯು ಈ ಮೂಲಕ ತಿಳಿಸುವುದೇನೆಂದರೆ—

ಪಿಲಾರು ಗ್ರಾಮದ ಸರ್ವೆ ನಂಬ್ರ 229/6ನೇ ನಂಬ್ರ ನನ್ನ ಹೆಸರಿನ ಖಾತೆ ಪಟ್ಟೆಯಲ್ಲಿ ಅಡಗಿದ್ದು ಕ 1346ನೇ ಸಾಲಿನಲ್ಲಿ ಸದ್ರಿ ಖಾತೆಯು ವರ್ಗಾಯಿಸಲ್ಪಟ್ಟಿದೆ ... ಏಲಂ ಮಾಡಿದ ವಸ್ತುಗಳಲ್ಲಿ ಸದ್ರಿ ಏಲಂ ಆದ 30 ದಿವಸದೊಳಗೆ ನನ್ನ ... ಸದ್ರಿ ಏಲಂ ರದ್ದುಪಡಿಸುವ ಬಗ್ಗೆ ... ನಗಗಳನ್ನು ... ಒಪ್ಪುಮಾಡಿ ನನ್ನ ಅವಿಭಕ್ತ ಕುಟುಂಬದ ಮಂಬರ ಕೊರಗ ಶೆಟ್ಟಿಯವರ ಕೊಟ್ಟು ಸದ್ರಿ ವಿವಾದವನ್ನು ತಾಲೂಕು ಖಜಾನೆಗೆ ನನ್ನ ಹೆಸರಲ್ಲಿ ಡಿಪೋಜಿಟ್ ಮಾಡಬೇಕಾಗಿ ಹೇಳಿರುತ್ತೇನೆ. ಆದರೆ ಸದ್ರಿ ಕೊರಗ ಶೆಟ್ಟಿಯು ನನ್ನಿಂದ ಪಡೆದ ಹಣವನ್ನು ನನ್ನ ಹೆಸರಲ್ಲಿ ಡಿಪೋಜಿಟ್ ಮಾಡಿದ್ದಾಗಿಯೂ ಮತ್ತು ಸದ್ರಿ ವಿವಾದವು ತಾನು ಪಡಕೊಂಡಂತೆ ತೋರಿಸುವ ಬಗ್ಗೆ ಸದ್ರಿ ಏಲಂ ಆದ ಆಸ್ತಿಯನ್ನು ಏಲಂ ... ಕೆಲವು ದಿವಸಗಳ ನಂತ್ರ ಸದ್ರಿ ಪಿಲಾರು ಗ್ರಾಮದ ಕೊರಗ ... ಹೆಸರಲ್ಲಿ ... ಬೇನಾಮಿಯಾಗಿ ಮೋಕ್ಯಾದಿ ದಸ್ತಾವೇಜನ್ನು ರಿಜಿಸ್ಟರ್ ಮಾಡಿಟ್ಟಿರುತ್ತಾನಾಗಿ ಕೂಡಾ ಈಗ ನನ್ನ ತಿಳುವಳಿಕೆಗೆ ಬಂದಿದೆ. ಸದ್ರಿ ... ಸದ್ರಿ ದಸ್ತಾವೇಜಿಗೆ ಎಷ್ಟು ... ಕೊಟ್ಟದ್ದಿಲ್ಲ. ಮತ್ತು ಕೊರಗ ಶೆಟ್ಟಿಯು ನನ್ನ ಒಟ್ಟು ಕುಟುಂಬದ ... ಮೆಂಬರರಲ್ಲಿ ಒಬ್ಬ ಮಾತ್ರ ಆಗಿರುತ್ತಾನೆ. ಸದ್ರಿ ಆಸ್ತಿಯು ಆತನ ಸ್ವಾಧೀನತೆಯಲ್ಲಿ ಕೂಡಾ ಇದ್ದದ್ದಿಲ್ಲ. ಕುಟುಂಬದ ಆಸ್ತಿಯನ್ನೂ ಆಗ್ಗೆ ಪರಾಧೀನ ಮಾಡುವರೇ ಹಕ್ಕು ಕೂಡಾ ಇರುವುದಿಲ್ಲ. ಹಾಗಿರುವಲ್ಲಿ ಸದ್ರಿ ದಸ್ತಾವೇಜು ಒಳ ಸಂಚಿನದ್ದು, ಬೇನಾಮಿಯದ್ದು, ಪ್ರತಿಫಲವಿಲ್ಲದ್ದು ಮತ್ತು ಸದ್ರಿ ಕೊರಗ ಶೆಟ್ಟಿಯ ಅಧಿಕಾರಕ್ಕೆ ಮಿಕ್ಕಿದ್ದು. ಆದುದರಿಂದ ಸದ್ರಿ ದಸ್ತಾವೇಜಿನ ಆಧಾರದಿಂದ ದಸ್ತಾವೇಜು ಬರಸಿಕೊಂಡ ... ಶೆಟ್ರಾಗಲೀ ಅವರ ಪ್ರತಿನಿಧಿಗಳಾಗಲೀ ಆಸ್ತಿ ಸ್ವಾಧೀನತೆ ಹೊಂದುವರೆ, ಯಾ ಹುಟ್ಟುವಳಿ ಕೇಳುವರೆ ಎಷ್ಟನ್ನಾದರೂ ಕೊಡಾ ಹಕ್ಕು ಬರಲಾರದು. ಅದು ನನಗಾಗಲೀ ನನ್ನ ಕುಟುಂಬಕ್ಕಾಗಲೀ ಬಾಧಿಸಲಿಕ್ಕಿಲ್ಲ ಎಂತ ಈ ಮೂಲಕ ಸಂಬಂಧಪಟ್ಟ ಸರ್ವಜನರಿಗೆ ತಿಳಿಸಲಾಗುತ್ತದೆ.

ಪಿಲಾರು
11-8 37 ||| ಈ ಮೂರು ಗೆರೆ
ಅಕ್ಕು ಶೆಡ್ತಿ ರುಜು

---

ನಮ್ಮೊಡನೆ ಪತ್ರವ್ಯವಹಾರ ಮಾಡುವವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು

**ಮೆನೇಜರ್, ನವಯುಗ**

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

**S. U. N. & CO** *Choukhamba, Benares City.*

ಮೂರು ಇನಾಮುಗಳು.

ಶ್ರೀಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನಗಳು 1 ಆಣೆ ಸ್ಟಾಂಪು ಕಳುಹಿಸಿದರೆ ಇನಾಮಾಗಿ ಕೊಡಲ್ಪಡುವುವು ಸ್ಟಾಂಪು ಬಾರದಿದ್ದರೆ ಈಗಿನ ಫೆಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ ಮಡಿ ಕಪಡಾ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಬೂಲ್ಸ್ ಟಾಕ ಧಾವಳಿ, ಸಂಮಾರಿ, ತರತರದ ರುದ್ರಾಕ್ಷಿಗಳೂ ಸಾಮಾನಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಪೊಶನಮೂನೆಯ ಮಗಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ 20ರಿಂದ 55 ವರೆಗೂ ಸಾದಾ 16 ಮೊಳದ ಶೀರೆ 1ಕ್ಕೆ ರೂ 16 ರಿಂದ ರೂ 30ರ ವರೆಗೆ ಅರೆ ಕಡಮೆ 16 ಮೊಳ ಕ್ರೇಪ್ ಅಂಚು ರೂ 10½ ರಿಂದ ರೂ 16 ಖಣ 1ಕ್ಕೆ ರೂ 1½ ರಿಂದ ರೂ 10ರ ವರೆಗೆ ಫ್ರೀಯಾಗಿ ವಿಶೇಷ ಪ್ರಸ್ಕ್ರೀಶ ಅವರವರಿನಂತೆ ಸಾಮಾನುಗಳನ್ನು ಪರಿಯಂತ ಮಲ್ಯ ವರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕಂಪನಿ, ಚೌಕಂಬಾ, ಬನಾರಿಸ್, ಕಾಶಿ



ನೀವು ನಿಮ್ಮ–ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ?

ಇಲ್ಲವಾದರೆ, ಹೇಗೆ ಮಾಡುವುದೆಂಬುದನ್ನು ಭದ್ರತೆಯ, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ

# ದಿ ಜನರಲ್ ಎಶ್ಯೂರೆನ್ಸ್ ಸೊಸ್ಶೈಟಿ

## ಲಿಮಿಟೆಡ್ (ಅಜ್ಮೀರು)

**ನಮ್ಮ ಅಭಿವೃದ್ಧಿಯ ಅಂಕೈ ಸಂಕೆಗಳು**

| | |
|---|---|
| ಚಾಲ್ತಿಯಲ್ಲಿರುವ ಪೋಲಿಸಿಗಳು | ರೂ **3** ಕೋಟಿ ಮಿಕ್ಕಿದೆ. |
| ಮೂಲಗಳು | ರೂ **80** ಲಕ್ಷಕ್ಕೂ ಮಿಕ್ಕಿದೆ. |
| ವಾರ್ಷಿಕ ಉತ್ಪನ್ನ | ರೂ. **18** ಲಕ್ಷಕ್ಕೂ ಮಿಕ್ಕಿದೆ |
| ವಿಮೆ ತೆತ್ತುದು | ರೂ **42** ಲಕ್ಷಕ್ಕೂ ಮಿಕ್ಕಿದೆ |

**ಅತ್ಯಧಿಕ ಬೋನಸು**

| ಜೀವಾಂತ್ಯ ವಿಮೆ | ಎಂಡೋಮೆಂಟ್ |
|---|---|
| ವರ್ಷಕ್ಕೆ ರೂ 1000ಕ್ಕೆ **25**ರಂತೆ | ವರ್ಷಕ್ಕೆ ರೂ 1000ಕ್ಕೆ **20**ರಂತೆ |

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲಿ ಕೆಳಗಿನವರಿಗೆ ಬರೆಯಿರಿ—

ಪಿ ಜಿ ಮರಾಠೆ ಎಸ್ಕ್ವಾಯರ್, ಜನರಲ್ ಮೆನೇಜರ್

(ಅದವಾ) ಎಂ ಮಾಧವ ರಾವ್ ಎಸ್ಕ್ವಾಯರ್, ಬಿ ಎ, ಸುಪರಿಂಟೆಂಡೆಂಟ್ ಒಫ್ ಬ್ರ್ಯಾಂಚಸ್ ಎಂಡ್ ಚೀಫ ಏಜನ್ಸೀಸ್, ಯಸ್ ಐ ಎಂಡ್ ಸಿಲೋನ್.

**ಪಶ್ಚಿಮ ಕರಾವಳಿಗೆ ಓರ್ವ ಪ್ರಾಮುಖ್ಯ ಪ್ರತಿನಿಧಿಗಳು ಬೇಕು.**



ಪ್ರಕಟವಾಗಿದೆ! ? ಪ್ರಕಟವಾಗಿದೆ!

ನವಯುವಕರನ್ನು ಮುಗ್ಧಗೊಳಿಸುವ ಮತಾನುಣೆ! — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣೆ!

# ಮಿಸ್ ಲಲಿತ

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು ಇದೀಗಲೇ ಹೊರಬಿದ್ದಿದೆ.

**ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.**

ಬರೆದವರು ಯಂ ವಿ ಪುತ್ರನ್

ಕೂಡಲೇ ಬರಯಿರಿ. ಬೆಲೆ **0—8—0**

ವಿಳಾಸ — M V Puthran,
*C/o* 31, Bomanji Lane, *2nd Floor*, ***Fort, BOMBAY***



**15** ವರ್ಷಗಳ ಅನುಭವ! ಗ್ಯಾರಂಟೀ ಕೆಲಸ!!

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

# ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು

ಗೌರಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತ ಮಾತನಾಡಿರಿ

**ಗಣಪತಿ ರಾವ್, ಪೈಂಟರ್,**

ಸೋದೆ ಮಠದ ಲೇನು - - **ಉಡುಪಿ, ದ ಕ.**



# ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ 1926



**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಪೆಗಳ ಬೇಜು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು

ಹೆಚ್ಚೆಚ್ಚು ಒತ್ತುವ ಸೆಟ್ಟುಗಳು ಕೂಡಾ ಸಿಗುವವು ಮಿಕ್ಕ ವಿವರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು



# ಗಿಡಗಳು ಮತ್ತು ಬೀಜಗಳು

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ ಗಿಡಗಳು, ಬೀಜಗಳು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ. ಉಚಿತವಾಗಿ ರವಾನಿಸುತ್ತೇವೆ

**ಡಿ ಗುರಪ್ಪ ಎಂಡ್ ಸನ್ಸ್**

ಗಿಡ, ಬೀಜ, ಫಲ ಪುಷ್ಪಗಳ ವ್ಯಾಪಾರಿಗಳ ಲಾಲ್‌ಬಾಗ್ ದೊಡ್ಡ ಮಾವಳ್ಳಿ,

**ಬೆಂಗಳೂರು ಸಿಟಿ.**



ಉಡುಪಿಯ ಆದರ್ಶ ಉಪಹಾರಗೃಹ!

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು! ಮಿತ ದರದಲ್ಲಿ ಊಟ ಉಪಚಾರಗಳು!**

**ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ!** ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ!**

ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು

**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

# ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

## ಮಲಬಾರಿನ ಕೂಲಿಗಾರರ ಮುಖಂಡರ ಆಗಮನ

ಮಲೆಯಾಳೀ ಯುವಜನ ಸಮಾಜ, ಬೀಡಿ ಲೇಬರ್ ಯೂನಿಯನ್ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿ, ಹೋಟೆಲ್ ಮತ್ತು ಪ್ರೆಸ್ ಕೆಲಸಗಾರರ ಯೂನಿಯನ್‌ಗಳ ಆಶ್ರಯದಲ್ಲಿ ನಿನ್ನೆಯ ದಿನ ನಾಯಂಕಾಲ ಮೈದಾನದಲ್ಲೊಂದು ಪ್ರಚಂಡ ಮಹಾಸಭೆಯು ನಡೆಯಿತು. ಶ್ರೀಮಾನ್ ಕೆ. ಕೆ. ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದು ಮಲಬಾರಿನಿಂದ ಬಂದ ಕೂಲಿಗಾರರ ಮುಖಂಡರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಸರದಾರ್ ಚಂದ್ರೋತು ಕುಂಜು ರಾಮನ್ ನಾಯರ್ ಶ್ರೀ ಕೆ. ಎ. ಕೇರಳೀಯನ್ ಮತ್ತು ಶ್ರೀ ಕೆ ಸಿ. ಗೋಪಾಲನ್‌ರವರು ಕೂಲಿಗಾರರ ಸಂಘಗಳ ಸ್ಥಾಪನೆ, ಸ್ವರಾಜ್ಯ ಸಂಪಾದನೆ, ಸಮತಾವಾದಿತತ್ವ ಮೊದಲಾದ ವಿಷಯಗಳನ್ನೆತ್ತಿ ಭಾಷಣಮಾಡಿದರು

**ಜಿಲ್ಲಾ ಬೋರ್ಡು ಸಭೆ**— ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸಭೆಯು ಕಳೆದ ತಾ. ೧೧ನೇ ಶನಿವಾರ ಪೂರ್ವಾಹ್ನ ೧೧ ಘಂಟೆಗೆ ಬೋರ್ಡು ಆಫೀಸಿನಲ್ಲಿ ಸೇರಿತು. ದಿವಾನ್ ಬಹದ್ದೂರ ಮಹಾಬಲ ಹೆಗ್ಗಡೆಯವರು ಅಧ್ಯಕ್ಷತೆ ವಹಿಸಿದ್ದರು ಕಾಸರಗೋಡು ತಾಲೂಕಿನಿಂದ ಹೊಸದಾಗಿ ಚುನಾಯಿಸಲ್ಪಟ್ಟ ಮಿ। ಮಮ್ಮುಞ್ಞಿ ಸಾಹೇಬ್ ಬಹದ್ದೂರವರು ರಾಜಭಕ್ತಿಯ ಪ್ರಮಾಣ ಮಾಡಿದ ತರುವಾಯ ಪ್ರಶ್ನೋತ್ತರಗಳಾಗಿ ಠರಾವುಗಳಾದುವು ತಾಲೂಕು ಬೋರ್ಡ್ ಕ್ಲಾರ್ಕರ ಸಂಬಳದ ವಿಷಯ ಚರ್ಚೆಯಲ್ಲಿ ಮಾಸವಾರು ಸಂತೆಗೆ ರೂ. ೨೦೦, ಮಾರುಬು ಕಡವನ್ನು ಒಂದು ವರ್ಷಕ್ಕೆ ಗುತ್ತಿಗೆಗೆ ಕೊಡುವ ವಿಷಯಗಳಲ್ಲಿ ಠರಾವುಗಳಾಗಿ ಅಂಗೀಕೃತವಾದುವು ಅನಂತರ ಡಾ। ಕೆ. ವಿಟ್ಠಲ ಶೆಟ್ಟಿಯವರು ಸೂಚಿಸಿದ ಕೆಲವು ತಿದ್ದುಪಡಿಗಳೊಂದಿಗೆ ೧೯೩೬-೩೭ನೇ ಇಸವಿಯ ಆಡಳಿತ ವರದಿಯು ಮಂಜೂರಾಯಿತು. ಅಧ್ಯಕ್ಷರು ದಕ್ಷತೆಯಿಂದ ಆಡಳಿತ ನಡೆಸಿದುದಕ್ಕಾಗಿ ಅವರಿಗೆ ಧನ್ಯವಾದವನ್ನರ್ಪಿಸುವ ಠರಾವು ಮಂಜೂರಾಯಿತು. ಶ್ರೀ ಎ ಬಿ. ಶೆಟ್ಟಿಯವರು ಬೋರ್ಡಿನ ಸೇವೆಯನ್ನು ದಕ್ಷತೆಯಿಂದ ನಡೆಸಿದ ಬಗ್ಗೆ ಅವರನ್ನು ಪ್ರಶಂಸಿಸಿ, ಅವರಿಗೆ ಪಾರ್ಲಿಮೆಂಟರಿ ಸೆಕ್ರೆಟರಿಗಳ ಹುದ್ದೆ ದೊರೆತುದಕ್ಕಾಗಿ ಅವರನ್ನು ಅಭಿನಂದಿಸಬೇಕೆಂಬ ಠರಾವು ಮಂಜೂರಾಯಿತು. ಇನ್ನು ಕೆಲ ಸಾಮಾನ್ಯ ವಿಷಯಗಳ ಪರಿಶೀಲನೆಯಾದ ಮೇಲೆ ಸಭಾಂತ್ಯವಾಯಿತು

**ಜಿಲ್ಲಾ ಕಾಂಗ್ರೆಸ್ ಕಮಿಟಿ**—ನಿನ್ನೆಯ ದಿವಸ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆಯು ಕಾಂಗ್ರೆಸ್ ಭವನದಲ್ಲಿ ಸೇರಿ, ಸ್ಥಳೀಯ ಸಂಕಷ್ಟಗಳನ್ನು ತಿಳಿಯುವ ಬಗ್ಗೆ ಒಂದು ಸಮಿತಿಯನ್ನು ಏರ್ಪಡಿಸಿದರು. ಜಿಲ್ಲೆಯ ಬೇರೆ ಬೇರೆ ಭಾಗಗಳ ಜನರಿಗೆ ಇರತಕ್ಕ ಸಂಕಷ್ಟಗಳನ್ನು ಈ ಸಮಿತಿಯವರ ಕಂಡುಹಿಡಿದು ಅವುಗಳನ್ನು ಸರಕಾರದ ಅವಗಾಹನೆಗೆ ತರುವರು.

**ಹರಿಜನ ಲೇಬರ್ ಲೀಗ್**—ಮಂಗಳೂರಿನ ಹರಿಜನ ಲೇಬರ್ ಲೀಗಿನವರು, ಮದ್ರಾಸ್ ಸರಕಾರದ ಮಾನ್ಯ ಮಂತ್ರಿಗಳು ಬರುವ ತಿಂಗಳ ಎರಡನೆಯ ತಾರೀಕಿಗೆ ಇಲ್ಲಿಗೆ ಬರುವ ಸಂದರ್ಭದಲ್ಲಿ ಅವರಿಗೊಂದು ಮಾನಪತ್ರವನ್ನು ಸಮರ್ಪಿಸಬೇಕೆಂದು ನಿರ್ಧರಿಸಿರುವರು.

**ನಾಡಹಬ್ಬ**— ಈ ವರ್ಷ ಮಂಗಳೂರಿನ ಮಿತ್ರ ಮಂಡಲಿಯವರು, ದಸರ ಮಹೋತ್ಸವದ್ದ ಕಾಲದಲ್ಲಿ ನಾಲ್ಕು ದಿನಗಳ ಮಟ್ಟಿಗೆ ನಾಡಹಬ್ಬವನ್ನು ಆಚರಿಸಬೇಕೆಂದೂ, ಅದೇ ಸಂದರ್ಭದಲ್ಲಿ ಗ್ರಂಥಗಳ ಮತ್ತು ಪತ್ರಿಕೆಗಳ ಪ್ರದರ್ಶನವನ್ನೂ ಏರ್ಪಡಿಸಬೇಕೆಂದೂ ನಿರ್ಧರಿಸಿರುವದಾಗಿ ತಿಳಿದುಬರುತ್ತದೆ ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಡಿ ವಿ. ಗುಂಡಪ್ಪನವರು ಬರ ವರೆಂದು ತಿಳಿದುಬರುತ್ತದೆ.

**ಭೂಮ್ಯಾಲಿಕರ ಶಿಷ್ಟಮಂಡಲ**— ದ. ಕನ್ನಡ ಜಿಲ್ಲಾ ಭೂಮ್ಯಾಲಿಕರ ಸಂಘದ ಸದಸ್ಯರ ಶಿಷ್ಟಮಂಡಲವು ಶ್ರೀ ಯಂ. ಶಿವರಾಯರ ನಾಯಕತ್ವದಲ್ಲಿ ಮಾನ್ಯ ರೆವಿನ್ಯೂ ಮಂಬರ

# :: ದಕ್ಷಿಣಕನ್ನಡ ::

## ಕಾರ್ಕಳ ತಾಲೂಕು

### ಗ್ರಾಮಗಳಲ್ಲಿ ಕಾಂಗ್ರೆಸ್ ಪ್ರಚಾರಕಾರ್ಯ ಗ್ರಾಮಕಮಿಟಿಗಳ ಸ್ಥಾಪನೆ.

**ದುರ್ಗ**—ತಾ. ೨೧-೮-೩೭ನೇ ಶನಿವಾರ ದುರ್ಗದೇವಸ್ಥಾನದಲ್ಲಿ ಅಪರಾಹ್ನ ಶ್ರೀ ಅನಂತರಾಮ ಭಟ್ಟ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಈಗಿನ ರಾಜಕೀಯ ಪರಿಸ್ಥಿತಿ ಮತ್ತು ಕಾಂಗ್ರೆಸಿನ ಈಗಿನ ಧೋರಣೆ ಮೊದಲಾದವುಗಳ ವಿಷಯ ಶ್ರೀಗಳಾದ ಎಂ ಯಸ್. ಅಧಿಕಾರಿಯವರು, ಮಲೆಬೆಟ್ಟು ಸೀತಾರಾಮ ಭಟ್ಟ ಮತ್ತು ಸದಾಶಿವ ಪಾರಳರು ಭಾಷಣಮಾಡಿದರು. ತರುವಾಯ ಶ್ರೀ ಗೋವಿಂದ ಅನಂತರಾಮ ಭಟ್ಟ ಅಧ್ಯಕ್ಷರು ಮತ್ತು ಖಜಾಂಚಿ ಯವರಾಗಿಯೂ, ಸದಾಶಿವಪಾರಳರು ಕಾರ್ಯದರ್ಶಿಯಾಗಿಯೂ ಬಾಂಕೋಡಿ ಕೃಷ್ಣ ಭಟ್ಟ, ಕಾಬೆಟ್ಟು ನಾರಾಯಣ ಭಟ್ಟ, ಮಲೆಹಿತ್ಲು ಪದ್ಮನಾಭ ಭಟ್ಟ, ನೂಜಿನಬೈಲು ನಾರಾಯಣ ಭಟ್ಟ ಮತ್ತು ಮಾವಿನಮಳೆ ಗಣಪತಿ ಭಟ್ಟ, ಸದಸ್ಯರಾಗಿಯೂ ಇರುವ ಒಂದು ಗ್ರಾಮ ಕಮಿಟಿಯು ಸ್ಥಾಪಿಸಲ್ಪಟ್ಟಿತು.

**ನಿಟ್ಟೆ**—ತಾ. ೨೧-೮-೧೯೩೭ರಲ್ಲಿ ಮಹಾಕ್ಷೇತ್ರವಾದ ಎಡಪಾಡಿ ಶ್ರೀ ಅರಮನೆ ಕ್ಷೇತ್ರದಲ್ಲಿ ಶ್ರೀಯುತ ರಾಮ ಪ್ರಭುಗಳರ ಅಧ್ಯಕ್ಷತೆಯಲ್ಲಿ ಸೇರಿದ ಗ್ರಾಮಸ್ಥರ ಸಭೆಯಲ್ಲಿ ಶ್ರೀಗಳಾದ ಚಿಪ್ಪಣ್ಣರ ವೆಂಕಟೇಶ ಭಟ್ಟ ಅಧ್ಯಕ್ಷರಾಗಿಯೂ, ಹೇರಂಜೆ ಮಹಾದೇವ ಭಟ್ಟ ಮತ್ತಾರು ಯವರು ಉಪಾಧ್ಯಕ್ಷರಾಗಿಯೂ, ಜೋಯಿಸ ಲಕ್ಷ್ಮಣ ಭಟ್ಟ ಮತ್ತು ಕೆ. ಪಿ ವಾಸುದೇವ ಭಟ್ಟ ಗೋರೆಯವರು ಜತೆ ಕಾರ್ಯದರ್ಶಿಯಾಗಿಯೂ ಹೊಸ ಮನೆ ಕೃಷ್ಣ ಭಟ್ಟ, ಚಿಪ್ಳೂಣಿ ಕೃಷ್ಣ ಭಟ್ಟ, ಕೊಟ್ಟಿ ಲಕ್ಷ್ಮಣ ಭಟ್ಟ ಮತ್ತು

ರನ್ನು ಕಂಡು ಅವರಿಗೆ ಈ ಜಿಲ್ಲೆಯ ರೈತಾಪಿ ಜನರ ಸಂಕಷ್ಟಗಳನ್ನು ತಿಳಿಸುವ ಬಗ್ಗೆ ಮದ್ರಾಸಿಗೆ ನಿನ್ನೆಯ ದಿವಸ ಪ್ರಯಾಣ ಬೆಳೆಸಿತು ಈ ದಿವಸ ಮಂತ್ರಿಗಳನ್ನು ಅವರು ಸಂದರ್ಶಿಸಿ ಮಾತಾಡಲಿರುವರು ಮಾನ್ಯ ಮಂತ್ರಿಗಳು ಕೊಡುವ ಆಶ್ವಾಸನೆಯನ್ನು ಜನರು ಬಹಳ ಉತ್ಸಾಹದಿಂದ ಇದಿರುನೋಡುತ್ತಿರುವರೆಂದರೆ ಅತಿಶಯೋಕ್ತಿ ಯಾಗಲಾರದಷ್ಟೆ

### ಜಿಲ್ಲಾ ಬೋರ್ಡು ಚುನಾವಣೆ

ಲೋಕಲ್ ಬೋರ್ಡು ಆಕ್ಟಿನಲ್ಲಿ ಈಗಿನ ಮಂತ್ರಿಮಂಡಲದವರು ತಿದ್ದುಪಡಿ ಮಾಡಲಿರುವರೆಂದೂ ಎಸೆಂಬ್ಲಿ ಓಟರರ ಪಟ್ಟಿಯನ್ನೇ ಈ ಚುನಾವಣೆಗಳಲ್ಲಿ ಉಪಯೋಗಿಸುವ ಸಂಭವವಿದೆಯೆಂದೂ ತಿಳಿದುಬಂದಿರುವುದರಿಂದ ಬರುವ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸ್ ಕಡೆಯ ಉಮೇದ್ವಾರರಾಗಲು ಅರ್ಜಿ ಹಾಕುವ ಸಮಯವನ್ನು ಜಿಲ್ಲಾ ಕಾಂಗ್ರೆಸ್ ಚುನಾವಣಾ ಕಮಿಟಿಯವರು ಒಂದು ತಿಂಗಳಿಗೆ ಮುಂದರಿಸಿರುವರು

ಹಿ ರಾಮರಾಯ ಮಲ್ಯ,
ಕಾರ್ಯದರ್ಶಿ.

ಕಲ್ಯಾಣ ನಾರಾಯಣ ಭಟ್ಟ ಸದಸ್ಯರಾಗಿಯೂ ಇರುವ ಒಂದು ಗ್ರಾಮಕಾಂಗ್ರೆಸ್‌ಕಮಿಟಿಯು ಸ್ಥಾಪಿಸಲ್ಪಟ್ಟಿತು.

**ಮುಡಾರು**—ತಾ. ೨೨-೮-೩೭ರಲ್ಲಿ ಸಾಯಂಕಾಲ ೪ಘಂಟೆಗೆ ಮುಡಾರು ಗ್ರಾಮದಲ್ಲಿ ಶ್ರೀ ಸುಬ್ಬದೇವರಾಜ ಹೆಗ್ಗಡೆಯರ ಅಧ್ಯಕ್ಷತೆಯಲ್ಲಿ ಸೇರಿದ ನಿಂಜೂರು ಮುಡಾರು ಮತ್ತು ನಲ್ಲೂರು ಗ್ರಾಮಗಳ ನಿವಾಸಿಗರ ಸಭೆಯಲ್ಲಿ ಕಾಂಗ್ರೆಸಿನವರು ಮಂತ್ರಿಪದವಿ ಸ್ವೀಕಾರಮಾಡಿದ ವಿಷಯ ಶ್ರೀ ಪಿ ವಿ ಉಪಾಧ್ಯಾಯರು, ರಂಕ್ರನಾರಾಯಣ ಸಾಮಗರು, ರಾಮ ಪುರಾಣಿಕರು, ಅನಂತರಾಮ ಭಟ್ಟ ಮತ್ತು ಎಂ ಯಸ್. ಅಧಿಕಾರಿಯವರು ಭಾಷಣ ಮಾಡಿದತರುವಾಯ ಮೇಲಿನ ೩ಗ್ರಾಮಗಳ ಬಗ್ಗೆ ಈ ಕೆಳಗಿನ್ನ ಅಧಿಕಾರಿಗಳೂ ಸದಸ್ಯರೂ ಇರುವ ಗ್ರಾಮ ಕಮಿಟಿಯೊಂದು ಸ್ಥಾಪಿಸಲ್ಪಟ್ಟಿತು ಶ್ರೀ ಸುಬ್ಬದೇವರಾಜ ಹೆಗ್ಗಡೆ (ಅಧ್ಯಕ್ಷರು ಮತ್ತು ಖಜಾಂಚಿಯರು) ರಾಮಕೃಷ್ಣ ನಾಯಕ್ (ಕಾರ್ಯದರ್ಶಿಯರು). ಅನಂತರಾಜ ಶೆಟ್ಟಿ, ಪಡುಬಳಿ ಅತಿಕಾರಿಗಳ, ಅನಂತ ಭಟ್ಟ, ದೇವೇಂದ್ರ ಕಾಮತ್, ನರಸಿಂಹ ನಾಯಕ್ ಮಂಜುನಾಥ ಶೆಣೈರು, ಬಾಕು ಸಾಹೇಬ್, ಜನ್ನಪ್ಪ ಪುಜಾರಿಯರು

**ಕೆದಿಂಜೆ**—ತಾ ೮ ೯ ೩೭ನೇ ದಿನ ಪ್ರಸಿದ್ಧರಾದ ವಕೀಲ್ ಮಹಾಬಲ ಹೆಗ್ಡೆರು ಮತ್ತು ಎಂ. ಎಸ್ ಅಧಿಕಾರಿಗಳು ಶ್ರೀಯುತ ನಾರಾಯಣ ಶೆಟ್ಟಿಯವರ ಸಂಗಡ ಇಲ್ಲಿಗೆ ಬಂದಿದ್ದು ಕೆಲವು ಕಾಂಗ್ರೆಸ್ ಸದಸ್ಯರನ್ನು ಸೇರಿಸಿದ್ದಲ್ಲದೆ ಇಲ್ಲಿಯವರ ಅಪೇಕ್ಷೆಯಂತೆ ಶ್ರೀಗಳಾದ ಕೆ. ಮಂಜಯ್ಯ ಹೆಗ್ಡೆರು ಅಧ್ಯಕ್ಷರು ಮತ್ತು ಕೋಶಾಧ್ಯಕ್ಷರಾಗಿಯೂ ಶ್ರೀ. ಬೇಲೆಮಾರ ಕೃಷ್ಣಯರು ಕಾರ್ಯದರ್ಶಿಯರಾಗಿಯೂ ಇರುವ ಒಂದು ಗ್ರಾಮ ಕಾಂಗ್ರೆಸ್ ಕಮಿಟಿಯು ಸ್ಥಾಪನೆಯಾಯಿತು

ತಾ ೯ ೯ ೧೯೩೭ನೇ ಗುರುವಾರ ಸಾಯಂಕಾಲ ೬ ಘಂಟೆಗೆ ಹಿಂದು ಬಾಲಿಕಾ ಪಾಠಶಾಲೆಯಲ್ಲಿ ಶ್ರೀಯುತ ವಕೀಲ್ ಲಕ್ಷ್ಮಣಶೆಣೈ ಅಧ್ಯಕ್ಷತೆಯಲ್ಲಿ ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀಯುತ ನಾರಾಯಣ ಶೆಟ್ಟಿಯವರು ಈಗಿನ ರಾಜಕೀಯ ಪರಿಸ್ಥಿತಿ ಮತ್ತು ಕಾಂಗ್ರೆಸಿನ ಈಗಿನ ಕಾರ್ಯಕ್ರಮದ ವಿಷಯ ಮಾತಾಡಿದರು

**ಮೂಡಬಿದ್ರಿ**—ತಾ. ೧೦ ೯ ೧೯೩೭ನೆ ಶುಕ್ರವಾರ ಸಾಯಂಕಾಲ ೪ ಘಂಟೆಗೆ ಮೂಡಬಿದ್ರೆಯಲ್ಲಿ ಇಲ್ಲಿಯ ಗ್ರಾಮ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀಯುತ ಪಡೂರು ವಾಸುದೇವ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆದು ಈಗಿನ ರಾಜಕೀಯ ಪರಿಸ್ಥಿತಿ ಮತ್ತು ಕಾಂಗ್ರೆಸಿನ ಈಗಿನ ಕಾರ್ಯಕ್ರಮದ ವಿಷಯ ಶ್ರೀಯುತ ನಾರಾಯಣ ಶೆಟ್ಟಿಯವರು ಸ್ಫೂರ್ತಿದಾಯಕವಾದ ಭಾಷಣ ಮಾಡಿದರು.

**ಕಾರ್ಕಳ**—ಕಾರ್ಕಳ ತಾಲೂಕು ಉಪಾಧ್ಯಾಯರ ಸಭೆಯು ಇದೇ ತಿಂಗಳ ತಾ. ೨೫ನೇ ಶನಿವಾರ ಜರಗಲಿಕ್ಕಿರುವದು

# ಉಡುಪಿ

**ವಿದಾಯಕೂಟ**—ಇಲ್ಲಿಯ 'ಪಬ್ಲಿಕೇಶನ್ಸ ಲಿಮಿಟೆಡ್'ನವರು ಸುಮಾರು ೨೦ ತಿಂಗಳುಗಳಿಂದನಡೆಸಿಕೊಂಡುಬರುತ್ತಿದ್ದ Financia Expertus ಎಂಬ ಆರ್ಥಿಕ ಸಂಬಂಧವಾದ ಆಂಗ್ಲಮಾಸ ಪತ್ರಿಕೆಯ ಸಂಪಾದಕರಾದ ಶ್ರೀ. ಬಿ. ನಾರಾಯಣರಾವ್ ಎಂ ಎ. ಯವರು ಮದ್ರಾಸಿಗೆ ಹೋಗಿ ಉದ್ಯೋಗನಡೆಸುವ ಪ್ರಯುಕ್ತ ತುಳುನಾಡ್ ಪ್ರೆಸ್, ಮಣಿಪಾಳ ಪವರ್ ಪ್ರೆಸ್ ಮತ್ತು ಭಾರತವಸ್ತು ಭಾಂಡಾರದ ಕೆಲಸಗಾರರು ತಾ. ೧೨-೯-೩೭ರಲ್ಲಿ ತುಳುನಾಡ್‌ಪ್ರೆಸ್ಸಿನಲ್ಲಿ ಒಂದು ವಿದಾಯ ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀಯುತಮಣಿಪಾಳ ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀಯುತರಿಗೊಂದು ಮಾನಪತ್ರವನ್ನರ್ಪಿಸಿದರು ಶ್ರೀಯುತರು ಸರಳಗುಣನಡತೆ, ಕಾರ್ಯ ದಕ್ಷತೆಗಳಿಂದ ಜನಪ್ರೀತರಾಗಿದ್ದರು ಅವರಭಾವೀಕಲ್ಯಾಣವನ್ನು ಹಾರೈಸಿ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಯಸ್. ಯು. ಪೈಯವರು ಮಾತನಾಡಿದರು, ಇವರ ಅಗಲಿಕೆಯಿಂದ ಪತ್ರಿಕೆಯು ತಾತ್ಕಾಲಿಕವಾಗಿ ನಿಂತುಹೋಗುವದು ವಿಷಾದಕರ.

**ಬ್ಯಾಂಕಿನ ಹೊಸ ಶಾಖೆಗಳು**— ಇಲ್ಲಿಯ ಪಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟಿನವರು ಹೊಸಶಾಖೆಗಳು ಆಂಧ್ರದ ಹಿಂದೂ ಪುರದಲ್ಲಿ ಮೈಸೂರಿನ ತುಮಕೂರಲ್ಲಿ ಈ ತಿಂಗಳು ಆರಲ್ಲಿ ತೆರೆಯಲ್ಪಟ್ಟಿವೆ ಸದ್ಯವೇ ಹೊಸತೆಂದು ಶಾಖೆಯು ವಿಪ್ಪಣಪಲ್ಲಿ ತೆರೆಯಲ್ಪಡುವುದೆಂದು ಕೇಳುತ್ತೇವೆ

ಇಲ್ಲಿಯ ಕೆನರಾಬ್ಯಾಂಕಿಂಗ್ ಕೋರ್ಪರೇಶನ ಶಾಖೆಯೊಂದು ತಾ 6-9-1937 ರಲ್ಲಿ ಮಲ್ಪೆಯಲ್ಲಿ ತೆರೆಯಲ್ಪಟ್ಟಿದೆ

**ಸ್ಮಾರಕ**—ದಿ। ಹಾಜಿ ಅಬ್ದುಲ್ಲಾ ಸಾಹೇಬರ ಸ್ಮಾರಕವಾಗಿ ಇಲ್ಲಿಯ ಗಾಂಧಿ ಮೈದಾನದಲ್ಲಿ ಒಂದು ಸಾರ್ವಜನಿಕ 'ಜಿಮ್ನೇಶಿಯಂ'ನ್ನು ಸ್ಥಾಪಿಸುತ್ತಾರೆ.

**ನಿಷೇಧ ಸಭೆ**—ವಿಟ್ಲಪಿಂಡಿ ಉತ್ಸವದ ವೇಳೆ ವೇಷಧಾರಿಗಳನ್ನು ಪೋಲಿಸ್ ಅಧಿಕಾರಿಗಳು ಕೈದುಮಾಡಿದ್ದರಷ್ಟೆ ಪೋಲೀಸರ ವರ್ತನೆಯನ್ನು ಸಾಧುವೆಂದು ಸ್ಥಳೀಕ ಬಾತ್ಮಿದಾರರು ರಾಷ್ಟ್ರಬಂಧುವಿಗೆ ವಾರ್ತೆಕೊಟ್ಟಿದ್ದರು ಇದನ್ನು ನಿಷೇಧಿಸುವದಕ್ಕಾಗಿ ಒಂದು ಸಭೆಯು ಸಂತೆಕಟ್ಟ ಪುತ್ತೂರಾಚಾರ್ಯರ ಅಧ್ಯಕ್ಷತೆಯಲ್ಲಿ ಅಷ್ಟಮಿ ಹಬ್ಬದದಿನ ಅನಂತೇಶ್ವರ ದೇವಸ್ಥಾನದಲ್ಲಿ ಜರಗಿತು ನಿಷೇಧ ಠರಾವುಗಳು ಮಂಜೂರಾಗಿ ಸಂಬಂಧಪಟ್ಟವರಿಗೆ ಕಳುಹಿಸಲ್ಪಟ್ಟಿವೆ.

ಪೋಲೀಸರ ವರ್ತನೆಯು ನ್ಯಾಯವೇ ಅನ್ಯಾಯವೇ ಎಂಬುದನ್ನು ವಿಚಾರಿಸಲು D. S, P. ಯವರು ಉಡುಪಿಗೆ ಬಂದ ಕೆಲವು ಮಹನೀಯರ ಸಾಕ್ಷ್ಯಗಳನ್ನು ತಕ್ಕೊಂಡು ಹೋಗಿರುವರು ಫಲಿತಾಂಶವು ತಿಳಿದುಬಂದಿಲ್ಲ

**ಆಕಸ್ಮಿತ ಮರಣ**

ಇಲ್ಲಿಯ ಗವರ್ನಮೆಂಟ ಹೋಸ್ಪಿಟಲಿನ ಡಾಕ್ಟರರ ಸುಮಾರು ೩ವರ್ಷ ಪ್ರಾಯದ ಒಂದು ಮಗುವು ತಾ ೧೫ನೇ ಸಂಜೆ ಆಕಸ್ಮಾತ್ತಾಗಿ ಮಲ್ಪೆಯಲ್ಲಿ ಸಮುದ್ರಕ್ಕೆ ಬಿದ್ದು ತೀರಿಹೋಯಿತೆಂದು ತಿಳಿಸಲು ವಿಷಾದಿಸುತ್ತೇವೆ.


**ಉಡುಪಿಯಲ್ಲಿ ನವರಾತ್ರಿ ಉತ್ಸವ**

ಉಡುಪಿಯ ಮಹಾಜನ ಸಭೆಯವರು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಅಕ್ಟೋಬರ ತಾ. ೬ರಿಂದ ನವರಾತ್ರಿ ಉತ್ಸವವನ್ನು ಆಚರಿಸಲಿರುವರು ಈ ಸಂದರ್ಭದಲ್ಲಿ ಗಾಯನ, ನಾಟಕ, ಭಾಷಣ, ಹರಿಕಥೆ, ಧರ್ಮ ವ್ಯಾಖ್ಯಾನ ವ್ಯಾಯಾಮ ಪ್ರದರ್ಶನಾದಿಗಳನ್ನು ನಡಿಸಲಿಚ್ಛಿಸುವವರು ಈ ತಿಂಗಳ ಅಂತ್ಯದೊಳಗೆ ಈ ಕೆಳಗಣ ವಿಳಾಸಕ್ಕೆ ತಿಳಿಸಬಹುದು.

ಕಾರ್ಯದರ್ಶಿ
ಮಹಾಜನಸಭಾ
ಶ್ರೀ ರಾಮಕೃಷ್ಣ ಥಿಯೇಟರ್
ಉಡುಪಿ.



**ನೀವು ಉಡುಪಿಗೆ ಬಂದಾಗ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ—?**

ಹೈಸ್ಕೂಲುಗಳ ಕೋರ್ಟು ಕಚೇರಿಗಳ ಹತ್ತಿರ ಕೆ? ಯಾವತ್ತೂ ವ್ಯವಹಾರ ಕ್ಷೇತ್ರಗಳ ಕೇಂದ್ರದಲ್ಲಿ ತಾಲೂಕು ಕಚೇರಿ ಎದುರಿಗಿದೆ.

# ಸುಖನಿವಾಸ

ರುಚಿಯಾದ ಪಾನ, ಭೋಜನ; ಶುಚಿಯಾದ ಸ್ಥಳಾನುಕೂಲತೆ, ಗ್ರಾಹಕರನ್ನು ತೃಪ್ತಿಗೊಳಿಸುವ ಧ್ಯೇಯಕ್ಕನುಸಾರವಾದ ಮೇಲ್ವಿಚಾರಣೆ.

ಉಡುಪಿಯ ಆದರ್ಶ ಉಪಹಾರ ಗೃಹ ಮತ್ತು ಊಟದ ಹೋಟೆಲು

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಪ್ರೊಪ್ರೈಟರ್ಸ್: ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್,

**The Canara Banking Corporation Udipi Ltd.**

(Incorporated in British India)

Head Office.—UDIPI ESTD. 1906

MEMBERS:- RESERVE BANK OF INDIA, CLEARING HOUSE, MADRAS.

Working Resources Rs. 55,00,000/-

BRANCHES:

1. Madras, 2. Mangalore, 3 Salem, 4 Vellore, 5 Tellicherry, 6. Mettupalayam, 7. Mysore, 8. Shimoga, 9 Mercara, 10 Sagar, 11. Veerarajendrapet, 12 Saklaspur, 13. Coondapoor 14. Byndoor, 15. Malpe, 16 Udipi, 17 Bunder-Mangalore, 18. Shirva.

ANNOUNCEMENT

A branch of the CORPORATION has been opened at MALPE (Udipi) on the 6th inst., and all kinds of Banking transactions are undertaken there from that date.

Office of the Corporation, UDIPI, Dated 11th Sept. 1937

*V. R Kamath,* B A, LL B
Ag. Manager.


# ನವಯುಗ

ಉಡುಪಿ, ಗುರುವಾರ, ತಾ. ೧೬-೯-'೩೭

## ಒಕ್ಕಲುಗಳ ಗತಿಯೇನು?

ಜಮೀನ್ದಾರಿ ಪ್ರಾಂತಗಳಾದ ಸಂಯುಕ್ತ ಪ್ರಾಂತ ಮತ್ತು ಬಿಹಾರಿನಲ್ಲಿ ಕಾಂಗ್ರೆಸ್ ಮಂತ್ರಿಗಳು ಒಕ್ಕಲು ಹಿತ ಮಸೂದೆಗಳನ್ನು ತರುವುದರಲ್ಲಿರುವರು. ಮದ್ರಾಸ್ ಮಂತ್ರಿ ಮಂಡಲವು ಕೂಡ ಆಂಧ್ರ ದೇಶದ ಒಕ್ಕಲುಗಳ, ಜಮೀನ್ದಾರರ ಸಂಬಂಧದ ಕುರಿತು ವಿಚಾರಿಸಲು ಕಮಿಟಿಯೊಂದನ್ನು ನಿರ್ಮಿಸಿರುವುದು. ರೈತ್ವಾರಿ ಪ್ರದೇಶಗಳ ಒಕ್ಕಲುಗಳ, ವಿಶೇಷವಾಗಿ ಚಾಲಗೇಣಿ ಒಕ್ಕಲುಗಳ ಕುರಿತು ಯಾರೂ ಗಮನಕೊಡುವರೇ ಇಲ್ಲವೆಂಬಂತೆ ತೋರುತ್ತದೆ. ಅವರು ಅತ್ಯಂತ ದುರ್ಬಲ ವರ್ಗದವರಿರುವುದರಿಂದ ಅವರ ಗೋಳನ್ನಾರೂ ಕೇಳುವವರಿಲ್ಲ ಕೇಳಿಸುವಷ್ಟರ ಶಕ್ತಿ ಸಾಮರ್ಥ್ಯವಾಗಲಿ ಸಂಘಟನೆಯಾಗಲಿ ಅವರಲ್ಲಿಲ್ಲ. ನಾವು ದಕ್ಷಿಣಕನ್ನಡದ ಅನುಭವದಿಂದ ಹೇಳುವುದಾದರೆ ನಿಜವಾದ ಭೂವ್ಯವಸಾಯಿಗಳೆಂದರೆ ಈ ಚಾಲಗೇಣಿ ಒಕ್ಕಲುಗಳು. ಅವರ ಪರಿಸ್ಥಿತಿಯಾದರೋ ಅತ್ಯಂತ ಶೋಚನೀಯವಾಗಿದೆ. ಅವರಿಗೆ ತಾವು ಉತ್ತು ಬಿತ್ತಿ ಬೆಳೆದ ಬೆಳೆಯಾಗಲೀ, ರಾತ್ರಿ ಹಗಲು ಶ್ರಮಿಸುವ ಭೂಮಿಯಲ್ಲಾಗಲೀ ಯಾವ ತರದ್ದೊಂದು ನ್ಯಾಯವಾದ ಹಕ್ಕೂ ಇರುವುದಿಲ್ಲ. ಅವರ ಜೀವನದಲ್ಲಿ ಸ್ಥಿರತೆಯಿಲ್ಲ. ಸದಾ ಧನಿಗಳ ಕೈಗೊಂಬೆಗಳಾಗಿ ಕುಣಿಯಬೇಕವರು. ಅವರು ಹೇಳಿದ ಬಿಟ್ಟಿಕೆಲಸ ಮಾಡಬೇಕು. ಇಲ್ಲವಾದರೆ ಮರುದಿನವೇ ಒಕ್ಕಲು ಎದ್ದು ಹೋಗಬೇಕಾಗುವುದು. ಒಕ್ಕಲುಗಳನ್ನು ಒಳ್ಳೇ ರೀತಿಯಿಂದ ಕಾಣುವ ಧನಿಗಳಿಲ್ಲೆಂದಾಗಲಿ, ಧನಿಗಳನ್ನು ವಂಚಿಸಿ ಅವರಿಗೆ ನಾನಾ ರೀತಿಯ ಪೀಡೆಕೊಡುವ ಒಕ್ಕಲುಗಳಿಲ್ಲೆಂದಾಗಲಿ ನಾವು ಹೇಳುವದಿಲ್ಲ. ಆದರೆ ಹೆಚ್ಚಾಗಿ ಒಕ್ಕಲುಗಳ ಬಾಳೆಂಬುದು ಅತ್ಯಂತ ಕನಿಕರದ್ದಿದೆ. ಧನಿಗಳವರನ್ನು ಗುಲಾಮರಿಗಿಂತ ಕಡೆಯಾಗಿ ಕಾಣುವುದುಂಟು. ಧನಿಗಳ ಸ್ವೇಚ್ಛಾಪರತೆಯನ್ನು ನಾನಾ ಕಾಟಗಳನ್ನು ಅವನು ಪ್ರತಿ ಮಾತೆತ್ತದ ತಾಳಿಕೊಳ್ಳಬೇಕು. ಅವನಿಗೆ ಯಾವ ತರದ ಸರಕಾರದ ರಕ್ಷಣೆಯಾಗಲಿ ಕಾನೂನಿನ ಭದ್ರತೆಯಾಗಲಿ ಇರುವುದಿಲ್ಲ. ಇಂದು ಬಂದು ನಾಳೆ ಹೊರಟು ಹೋಗುವುದೆಂಬ ಅವಸ್ಥೆಯಲ್ಲಿರುವ ಅವನಿಗೆ ತನ್ನ ಜಮೀನಿನಲ್ಲಿ ಯಾವ ತರದ ಕೃತಮಾಡಲಿಕ್ಕೂ ಮನಸ್ಸು ಬರುವುದಿಲ್ಲ. ಯಾಕೆಂದರೆ ಅದರ ಫಲವನ್ನು ತಾನೇ ತಿನ್ನುವೆನೆಂಬ ಭರವಸೆ ಅವನಿಗಿಲ್ಲ. ಹಲವು ವರ್ಗದಾರರು ಗೇಣಿಯನ್ನು ವಿಪರೀತವಾಗಿ ಏರಿಸಿ ಒಕ್ಕಲುಗಳಿಗೆ ತಾವು ಕಷ್ಟಪಟ್ಟು ಬೆಳೆಸಿದ ಬೆಳೆಯಲ್ಲಿ ಜೀವನಕ್ಕಾಗಿ ಉಳಿಯುವುದೆಂದರೆ ಬರೇ ಬೈ ಹುಲ್ಲು. ಇಂತಹ ಪರಿಸ್ಥಿತಿಯಲ್ಲಿ ಅವರು ಜೀವನ ನಿರ್ವಾಹಮಾಡುವುದಾದರೂ ಹೇಗೆ? ಅವರು ಗೇಣಿ ಬಾಕಿ ಮಾಡಿಕೊಳ್ಳುವರು. ಆ ಮೇಲೆ ಧನಿಯು ಹೋಗ ಹೇಳಿದರೆ ಹೊರಟು ಹೋಗುವರು. ಸ್ವಲ್ಪ ಜೋರಿನವರಾದರೆ ಧನಿಯು ವ್ಯಾಜ್ಯಮಾಡಿ ಹೊರಡಿಸುವ ವರೆಗೆ ಗಟ್ಟಿ ಕುಳಿತು ಆ ಮೇಲೆ ಹೊರಟು ಹೋಗುವರು. ಹೀಗೆ ಒಬ್ಬ ಧನಿಯ ಕೈಕೆಳಗೆ ಎರಡು ಮೂರು ವರ್ಷ ಕೂತು ಆ ಮೇಲೆ ಇನ್ನೊಬ್ಬನ ಬಳಿಗೆ ಹೋಗುವದೊಂದು ಅಭ್ಯಾಸವೇ ಆಗಿ ಹೋಗಿದೆ. ಅನೇಕರಿಗೆ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಹೋಗುತ್ತಲೇ ಇರುವ ಸಂಚಾರಿ ಒಕ್ಕಲುಗಳ ವರ ಬೇಸಾಯವಾಡುವ ಅನುಕೂಲತೆಯಾದರೂ ಎಲ್ಲಿದ್ದೀತು? ಅವರು ಎಷ್ಟೊಂದು ಆಸಕ್ತಿಯಿಂದ ವ್ಯವಸಾಯಮಾಡಿಯಾರು? ಇದರ ಪರಿಣಾಮವಾಗಿ ಧನಿಗಳಿಗೆ ಸರಿಯಾದ ಗೇಣಿಯೂ ಇಲ್ಲ, ಒಕ್ಕಲುಗಳಿಗೆ ಸ್ಥಿರವಾದ ಜೀವನವೂ ಇಲ್ಲದಂತಾಗಿದೆ.

ಆದುದರಿಂದ ಈ ಚಾಲಗೇಣಿ ಒಕ್ಕಲುಗಳ ಜಮೀನಿನಲ್ಲಿ ಸ್ಥಿರವಾದ ಆಸಕ್ತಿಯನ್ನುಂಟುಮಾಡುವಂತಹ ಒಂದು ಬಗೆಯ ವ್ಯವಸ್ಥೆಯಾಗಬೇಕು. ಅದರಿಂದ ಒಕ್ಕಲುಗಳಷ್ಟೇ ಧನಿಗಳಿಗೂ ಒಳ್ಳೇದಿದೆ. ಯಾಕೆಂದರೆ ಒಕ್ಕಲುಗಳು ಒಳ್ಳೇ ಸ್ಥಿತಿಯಲ್ಲಿದ್ದರೆ ಮಾತ್ರ ಧನಿಯು ಸರಿಯಾಗಿ ಗೇಣಿ ಪಡೆದು ಶೀರ್ವಕೊಡಬಹುದು. ಬಿಹಾರಿನಲ್ಲಿ ಆಲೋಚಿಸಿರುವಂತೆ ಜಮೀನಿನ ಉತ್ಪತ್ತಿಯ ಸೇಕಡ 10ರಿಂದ 15ರಷ್ಟನ್ನು ಬೇಸಾಯ ವೆಚ್ಚಕ್ಕೆ ಕಳೆದು ಉಳಿದುದರಲ್ಲಿ ಅರೆವಾಸಿ ಒಕ್ಕಲಿಗೂ ಇನ್ನರೆವಾಸಿ ಧನಿಗೂ ವಿಭಾಗಿಸುವಂತಹ ಕ್ರಮದಲ್ಲೊಂದ ಕಾನೂನು ಮಾಡುವುದು ಅತ್ಯವಶ್ಯವಾಗಿದೆ. ಇದೇ ರೀತಿ, ಈ ಪ್ರಮಾಣದ ಗೇಣಿ ಕೊಡದಿದ್ದಲ್ಲಿ ಒಕ್ಕಲುಗಳನ್ನು ಸುದೀರ್ಘವೂ ವೆಚ್ಚಕಾರಕವೂ ಆದ ವ್ಯವಹರಣೆಯೇನೂ ಇಲ್ಲದೆ ಸರಳ ರೀತಿಯಲ್ಲಿ ಒಕ್ಕಲು ಎಬ್ಬಿಸುವಂತೆಯೂ ಆಗಬೇಕು. ಇಂತಹ ಕಾನೂನೊಂದು ಒಕ್ಕಲು ಮತ್ತು ಧನಿಗಳಿಬ್ಬರ ಹಿತದಿಂದಲೂ ಆವಶ್ಯಕವಾಗಿದೆ. ದಕ್ಷಿಣಕನ್ನಡದ ಎಸೆಂಬ್ಲಿ ಮೆಂಬರರು ವಿಶೇಷವಾಗಿ ಶ್ರೀ ವೆಂಕಟ್ರಾಯ ಬಾಳಿಗರು ಈ ವಿಷಯದಲ್ಲಿ ಹೆಚ್ಚಿನ ಅನುಭವವುಳ್ಳವರಿರುವುದರಿಂದ ಬೇಗನೆ ಒಕ್ಕಲು ಹಿತ ಮಸೂದೆಯೊಂದನ್ನು ತಯಾರಿಸಿ ಜನಮತ ಪಡೆಯುವುದೊಳ್ಳೇದೆಂದು ನಮ್ಮ ಅಭಿಪ್ರಾಯವಾಗಿದೆ.

# ಸ್ವದೇಶ-ವಿದೇಶ

## ಸ್ವದೇಶ

### ಮಹಾತ್ಮಾ ಗಾಂಧಿಯವರ ಆರೋಗ್ಯ

ಮಹಾತ್ಮಾ ಗಾಂಧಿಯವರ ಆರೋಗ್ಯವು ಈಗ ಸುಧಾರಿಸಿರುವುದು ಅವರು ಸೆಗಾವಿನ ತನ್ನ ನಿವಾಸದ ವರಾಂಡದಲ್ಲಿ ಸ್ವಲ್ಪ ಸ್ವಲ್ಪ ತಿರುಗಾಡುವರು. ಶ್ರೀಮತಿ ಕಸ್ತೂರಿ ಬ್ಯಾಯವರೂ ಮೀರಾ ಬೆನ್ನರೂ ಅವರ ಆರೈಕೆ ನೋಡುತ್ತಿರುವರು. ಗಾಂಧಿಯವರು ಇನ್ನು ೪ ವಾರಗಳಲ್ಲಿ ಹುಶಾರಾಗುವರು ಆ ಮೇಲೆ ಖಾನ್ ಅಬ್ದುಲ್ ಗಫರ ಖಾನರ ಅಭಿಪ್ರಾಯಕ್ಕೇಳಿ ಗಡಿನಾಡಿಗೆ ಹೋಗುವರು. ಗಾಂಧಿಜಿಯವರೀಗ ಸರ್ಪಗಂಧಿ ಎಂಬ ಮೇಲೆಯ ಔಷಧಿಯನ್ನು ತೆಗೆದುಕೊಳ್ಳುತ್ತಿರುವರು. ಹಗಲು ಬರಿನೆಲದ ಮೇಲೆಯೂ ರಾತ್ರಿ ಚಾಪೆಯ ಮೇಲೆಯೂ ಮಲಗುವರು. ಪಂಡಿತ ಜವಾಹಿರಲಾಲರೂ, ಶೇಟ್ ಜಮುನಾಲಾಲ್ ಬಜಾಜರೂ, ಗಾಂಧಿಯವರು ವಾರ್ಧಾಕ್ಕೆ ಅಥವಾ ಯಾವುದಾದರೊಂದು ಆರೋಗ್ಯವಸತಿಗೆ ಹೋಗಬೇಕೆಂದು ಕೇಳಿಕೊಂಡರೂ ಅವರೊಪ್ಪಿರುವದಿಲ್ಲ. ಸೆಗಾವಿನ ಹವಾಗುಣವು ಉತ್ತಮವಾದುದೆಂದು ಅವರ ಅಭಿಪ್ರಾಯ.

### ಪಂಡಿತ ಜವಾಹರಲಾಲ ನೆಹರುಗಳು

ಇದೇ ತಾ. ೧೨ರಲ್ಲು ಬೊಂಬಾಯಿಯಲ್ಲಿ ಹಿಂದಿ ಕ್ರೈಸ್ತರ ದೊಡ್ಡ ಸಭೆಯೊಂದರಲ್ಲಿ ಭಾಷಣವಿತ್ತು, ರಾಜಕೀಯ ಉದ್ದೇಶದಿಂದ ಜಾತೀಯ ತಂಡಗಳು ಸ್ಥಾಪಿಸಲ್ಪಡಬಾರದೆಂದೂ, ಅವುಗಳು ರಾಷ್ಟ್ರೀಯ ಚಳವಳಿಕ್ಕೆ ಹಾನಿಕರವಿದ್ದು ಸ್ವರಾಜ್ಯದ ಪ್ರಗತಿಯನ್ನು ತಡೆಗಟ್ಟುವವೆಂದೂ ಹೇಳಿದರು. ಕ್ರೈಸ್ತರೆಲ್ಲಾ ಖಾದಿಹಾಕಿಕೊಳ್ಳಬೇಕೆಂದು ಕೇಳಿಕೊಂಡರು. ಪಂಡಿತರು ಸರ್ದಾರ ವಲ್ಲಭಭಾಯಿಯವರೊಂದಿಗೆ ಇದೇ ತಾ ೧೩ನೇ ರಾತ್ರಿ ಬೊಂಬಾಯಿಯಿಂದ ಗುಜರಾಥಿಗೆ ಹೋಗಿ ಅಲ್ಲಿ ೫ ದಿವಸ ಸಂಚರಿಸಲಿರುವರು.

### ಪಂಚಾಯತ ರಾಜ್ಯ

ಇದೇ ತಾ ೭ರಲ್ಲು ಪಂಡಿತ ಜವಾಹರಲಾಲ ನೆಹರುಗಳು ಸಂಯುಕ್ತ ಪ್ರಾಂತದ ರಾಜಪುರದಲ್ಲಿ ನೆರೆದ ೬೦,೦೦೦ ಕೃಷಿಕರಿಗೆ ಭಾಷಣಕೊಡುವಾಗ, ಜಮೀನು ಕೃಷಿಕರ ವಶವಿದ್ದರೆ ನಾಳೆ ಅದು ಒಬ್ಬನಿಂದ ಇನ್ನೊಬ್ಬನಿಗೆ ಹೋಗಬಹುದು ಒಂದು ಹಳ್ಳಿಯ ಜಮೀನೆಲ್ಲಾ ಅಲ್ಲಿಯ ಪಂಚಾಯತರ ವಶವಿರಬೇಕು ಎಲ್ಲೆಲ್ಲಿಯೂ ಪಂಚಾಯತ ರಾಜ್ಯ ಸ್ಥಾಪಿಸಲ್ಪಡಬೇಕೆಂದು ಹೇಳಿದರು.

ಸೈನಿಕರಿಗಾಗಿ ಲಾಹೋರಿನಲ್ಲೊಂದು ಕಟುಕಗೃಹವನ್ನು ಕಟ್ಟುವವಿಷಯದಲ್ಲಿ ಪಂಜಾಬಿನಲ್ಲೆಲ್ಲ ದೊಡ್ಡ ಚಳವಳನಡೆದಿರುವುದು ಈ ಸಂಬಂಧವಾಗಿ ಶ್ರೀ ಆಣೆ, ಅಖಿಲಚಂದ್ರದತ್, ಸರ್ದಾರ್ ಶಾಂತ ಸಿಂಘ ಮತ್ತು ಭಾಯಿ ಪರಮಾನಂದರು ವೈಸರಾಯರೊಡನೆ ಮಾತಾಡಲು ಅವರ ಬೇಟಿಕೇಳಿದಾಗ ಅವರು ನಿರಾಕರಿಸಿರುವರು. ಇದರಿಂದ ಈ ಎಸೆಂಬ್ಲಿ ಮೆಂಬರರು ಸಿಟ್ಟುಗೊಂಡು ವೈಸರಾಯರು ಇದೇ ತಾ. ೧೩ರಲ್ಲು ಎಸೆಂಬ್ಲಿಯಲ್ಲಿ ಭಾಷಣವಿತ್ತಾಗ ಅದರಲ್ಲಿ ಭಾಗವಹಿಸಲಿಲ್ಲ.

### ಕವಿ ರವೀಂದ್ರರ ದೇಹಸ್ಥಿತಿಯು

ಇದೇ ತಾ ೧೩ರಲ್ಲು ಸ್ವಲ್ಪ ಸುಧಾರಿಸಿರುವುದು. ತಾ ೧೨ನೇ ರಾತ್ರಿ ಜ್ವರ ವಿಪರೀತವಾಗಿತ್ತು ಇವರ ಅವರ ಚಿಕಿತ್ಸೆಗಾಗಿ ಶಾಂತಿನಿಕೇತನಕ್ಕೆ ಹೋಗಿದ್ದ ಸರ್ ನೀಲರತ್ನ ಸರಕಾರರ ಗುರುತವಾಗಿ ಅವರೊಡನೆ ಸ್ವಲ್ಪಮಾತನಾಡಿದರು. ಮಹಾತ್ಮಾಗಾಂಧಿ, ಪಂಡಿತ ನೆಹರು, ದೀನಬಂಧು ಅಂಡ್ರೂಸ್, ಸರ್. ಸಪ್ರು ಮೊದಲಾದ ನೂರಾರು ಮಂದಿ ಕವಿರವೀಂದ್ರರ ಆರೋಗ್ಯ ಸ್ಥಿತಿಯನ್ನು ವಿಚಾರಿಸಿ ತಂತಿ ಬಿಟ್ಟಿರುವರು.

### ನಾಯನ್ನ ಗಡಿನಾಡಿನ ಕಾಂಗ್ರೆಸ್ ಮಂತ್ರಿಗಳು

ರಾಜಕೀಯ ಕೈದಿಗಳನ್ನೆಲ್ಲಾ ಕೂಡಲೆ ಬಿಡುಗಡೆ ಮಾಡುವ ನಿರ್ಧಾರಮಾಡಿರುವರಲ್ಲದೆ, ಆಡಳಿತವೆಚ್ಚವನ್ನು ಬಹಳವಾಗಿ ಕಡಿಮೆ ಮಾಡಿರುವರು. ಮಂತ್ರಿಗಳಿಗೆ ನಿವಾಸಗಳನ್ನು ಕಟ್ಟುವುದನ್ನು ನಿಲ್ಲಿಸಿರುವರು.

ಸಂಯುಕ್ತ ಪ್ರಾಂತದಮಂತ್ರಿಗಳು ಸರಕಾರಿ ನೌಕರರ ಪ್ರಯಾಣ ಭತ್ತೆಯನ್ನು ಕಠಿಣವಾಗಿ ಕಡಿಮೆ ಮಾಡುವ ನಿರ್ಧಾರಮಾಡಿ ಆ ಕುರಿತು ವಿಚಾರಣೆ ನಡಿಸಹತ್ತಿರುವರು.

## ವಿದೇಶ

### ಜಪಾನರು ಮುಂದೊತ್ತಿದರು ಶಾಂಘಾಯಿಯಲ್ಲಿ ಕೋಲೇರ

ಇದೇ ತಾ. ೧೧ರಲ್ಲು ವೂಸಂಗ್ ಪಟ್ಟಣದ ಬಳಿಯ ಪ್ರಾಮುಖ್ಯ ಸ್ಥಳವೊಂದನ್ನು ಜಪಾನರು ವಶಪಡಿಸಿಕೊಂಡಿರುವರೆಂದು ತಿಳಿದುಬರುತ್ತದೆ. ಟೀಂಟ್ಸಿನ್ ಪೂನಾ ರೈಲ್ವೆಯ ಕಡೆಗೂ ಜಪಾನರು ಮುಂದೊತ್ತಿ ರಾತ್ರಿಯುದ್ಧದಲ್ಲಿ ಮಚೆಂಗ್ ಎಂಬ ಸ್ಥಳವನ್ನು ಗೆದ್ದಿರುವರು.

ಸಿಂಕಿಯಾಂಗಿನಲ್ಲಿ ೨೫,೦೦೦ ಮುಸಲ್ಮಾನ ಸೈನಿಕರು ಕಮ್ಯೂನಿಸ್ಟರ ವಿರೋಧವಾಗಿ ದಂಗೆಯೆದ್ದು ಕಾಶ್ಗರನ್ನು ವಶಪಡಿಸಿಕೊಂಡು ಉರುಮ್ಚಿಯ ಕಡೆಗೆ ಬರುತ್ತಿರುವರೆಂದು ಜಪಾನಿನ ಕಡೆಯ ಸುದ್ದಿ.


## ಹೊಸ ಚಂದಾದಾರರಾಗುವವರಿಗೆ

ನಾವು ತಾ. 26-8-37ರ ಸಂಚಿಕೆಯಲ್ಲಿ ಈ ಸಪ್ಟಂಬರ ತಿಂಗಳಾಂತ್ಯದೊಳಗೆ 'ನವಯುಗ'ಕ್ಕೆ ಹೊಸತಾಗಿ ಚಂದಾದಾರರಾಗುವವರಿಗೆ 'ಹೆಂಡ್ತಿ ಗಂಡನಾದರೆ' ಮತ್ತು 'ಪುರುಷವಧು' ಎಂಬ ೦-೮-೦ ಕ್ರಯದ ಎರಡು ಸರಸ ಸಾಮಾಜಿಕ ಪ್ರಹಸನ ಪುಸ್ತಕಗಳನ್ನು ಉಚಿತವಾಗಿ ಕೊಡುವೆವೆಂದು ಪ್ರಕಟಿಸಿರುವೆವಷ್ಟೆ? ಆ ಪ್ರಕಾರ ಇಷ್ಟರಲ್ಲೇ ಅನೇಕ ಹೊಸ ಚಂದಾದಾರರು ಸೇರಿ ನಮ್ಮನ್ನು ಪ್ರೋತ್ಸಾಹಿಸಿದುದಲ್ಲದೆ ಉಚಿತ ಪುಸ್ತಕಗಳನ್ನು ಪಡೆದಿರುವರು. ತಿಂಗಳಾಂತ್ಯವು ಸಮೀಪಿಸಿದ್ದರಿಂದ ಇನ್ನು ಹೊಸತಾಗಿ ಸೇರುವವರು ಕೂಡಲೇ ಚಂದಾದಾರರಾಗಿ ಮೇಲಿನ ಪುಸ್ತಕಗಳನ್ನು ಪಡೆಯುವ ಸುಸಂದರ್ಭವನ್ನು ಕಳಕೊಳ್ಳಬಾರದಾಗಿ ವಿನಂತಿ. ರೂ. 3-4-0ನ್ನು ಕಳುಹಿಸಿಕೊಟ್ಟು ಇಂದೇ ಚಂದಾದಾರರಾಗಿರಿ. ನಿಮ್ಮ ಮಿತ್ರರೂ ಚಂದಾದಾರರಾಗುವಂತೆ ಕೇಳಿಕೊಳ್ಳಿರಿ.

ಮೆನೇಜರ್, ನವಯುಗ.

ಪ್ರಸಂಗಿನಿಂದ ೫ ಮೈಲು ದೂರವಿರುವ ಯಾಂಗ್ ಪೋಂಗನ್ನು ಜಪಾನರು ವಶಪಡಿಸಿಕೊಂಡಿರುವರೆಂಬುದನ್ನು ಚೀನೀಯರೂ ಒಪ್ಪಿರುವರು. ಆದರೆ ಚೀನೀಯರಿದನ್ನು ಪುನಃ ವಶಪಡಿಸಿಕೊಳ್ಳಲೆತ್ನಿಸುತ್ತಿರುವರು. ಬೇರೆ ಯಾವ ತರದ ವಿಜಯವೂ ಜಪಾನರಿಗಾಗಿರುವುದಿಲ್ಲ. ಚೀನೀ ವಿಮಾನಗಳು ಹಲವು ಜಪಾನ ಯುದ್ಧನಾವೆಗಳಬಳಿ ಬಾಂಬೆಸೆದಿವೆ.

ಶಾಂಘಾಯಿಯಲ್ಲಿ ಕಾಲೇರಾ ರೋಗವು ಪ್ರಬಲವಾಗಿ ಹಬ್ಬುತ್ತಿರುವುದು. ಇಷ್ಟರಲ್ಲೇ ೩೦೦ ಮಂದಿಯ ವರೆಗೆ ಕಾಲೇರ ಉಂಟಾಗಿರುವುದು. ಯುರೋಪಿಯನರಿಗೆ ಕಾಲೇರಾ ಉಂಟಾಗಿರುವುದಿಲ್ಲ.

ಚೀನವು ಜಪಾನಿನ ಆಕ್ರಮಣದ ಕುರಿತು ಲೀಗ ಆಫ ನೇಶನ್ಸಿಗೆ ಮನವಿಮಾಡಿಕೊಂಡಿರುವುದು. ಜಪಾನರು ಚೀನದಲ್ಲಿ ಸರ್ವನಾಶ ಮಾಡ್ಯ ಪ್ರಜೆಗಳನ್ನು ಕೊಂದು ಮನೆಮಾರುಗಳನ್ನು ನಾಶಮಾಡಿ ವ್ಯಾಪಾರಕ್ಕೆ ಧಕ್ಕೆಯನ್ನುಂಟುಮಾಡಿರುವ ಕುರಿತು ಪಾಶ್ಚಾತ್ಯ ರಾಷ್ಟ್ರಗಳು ಮೌನಧಾರಣೆ ಮಾಡಿರುವ ಕುರಿತು ಮೆಡಮ್ ಚ್ಯಾಂಗ್ ಕೈ ಶೆಕ್ಕರು ವಿಸ್ಮಯ ಸೂಚಿಸಿ, ಚೀನವು ಸಂಪೂರ್ಣವಾಗಿ ಬೆಂಕಿಯಿಂದ ಸುಡಲ್ಪಟ್ಟು ರಕ್ತದಿಂದ ತೋಯ್ದು ಹೋಗುವವರೆಗೆ ಕಾದಾಡುವುದೆಂದು ಅಮೇರಿಕಕ್ಕೆ ಮಾಡಿಕೊಂಡ ವಿನಂತಿಯಲ್ಲಿ ತಿಳಿಸಿರುವರು.

ಇದೇ ತಾ ೧೨ರಲ್ಲಿ ಶಾಂಘಾಯಿಯ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ. ಶಾಂಘಾಯಿಯ ಸುತ್ತಮುತ್ತಲಲ್ಲಿ ೩ರಿಂದ ೪ಲಕ್ಷದ ವರೆಗೂ ಚೀನೀ ಸೇನೆಯಿರುವುದು. ಜಪಾನರ ಮೇಲೆ ಜಾಹೀರಾಗಿ ಯುದ್ಧ ಹೂಡಬೇಕೆಂದು ಚೀನೀ ಪತ್ರಿಕೆಗಳು ಕೇಳುತ್ತವೆ. ಚೀನೀ ವಿಮಾನಗಳು ೫ ಜಪಾನ ಯುದ್ಧನಾವೆಗಳ ಮೇಲೆ ಜಯಶೀಲವಾಗಿ ಬಾಂಬೆಸೆದಿರುತ್ತವೆ.

ಶಾಂಘಾಯಿಯಲ್ಲಿ ಯುದ್ಧ ಆರಂಭವಾದಂದಿನಿಂದ ೩೦೦೦ ಮಂದಿ ಜಪಾನ ನೌಕಾ ಸೈನಿಕರೂ ೧೦,೦೦೦ ಸೈನಿಕರೂ ಕೊಲ್ಲಲ್ಪಟ್ಟಿರುವರೆಂದೂ ಚೀನೀಯರು ೩೦,೦೦೦ ಮಂದಿ ಕೊಲ್ಲಲ್ಪಟ್ಟು ೨೦ ಸಾವಿರ ಮಂದಿ ಗಾಯಗೊಂಡಿರುವರೆಂದೂ ಅಂದಾಜು ಮಾಡಲಾಗಿದೆ. ೨೦೦ ಚೀನೀ ವಿಮಾನಗಳು ನಾಶಮಾಡಲ್ಪಟ್ಟಿವೆಯೆಂದು ಜಪಾನರ ಹೇಳಿಕೆ.

### ಭೂಮಧ್ಯ ಸಾಗರದ ಒಪ್ಪಂದ

ಭೂಮಧ್ಯ ಸಾಗರದಲ್ಲಿ ವ್ಯಾಪಾರಿ ಹಡಗಗಳ ಮೇಲೆ ಧಾಳಿ ನಡಿಸುವ ಪುಂಡಾಟಿಕೆಯನ್ನು ನಿಲ್ಲಿಸುವ ಏರ್ಪಾಡು ಮಾಡಲು ಇದೇ ತಾ ೧೦ರಲ್ಲು ಜಿನೇವ ಪಟ್ಟಣದ ಒಳಿದ ನಿಯೋನ್ ಎಂಬಲ್ಲಿ ಇಂಗ್ಲೆಂಡ್ ಫ್ರಾನ್ಸ್, ರಷ್ಯ, ಟರ್ಕಿ, ಗ್ರೀಸ್ ಮೊದಲಾದ ರಾಷ್ಟ್ರಗಳ ಪ್ರತಿನಿಧಿಗಳು ಸಭೆ ಸೇರಿ, ಭೂಮಧ್ಯಸಾಗರದ ಕೆಲವು ಭಾಗಗಳನ್ನು ರಕ್ಷಿಸುವರೆ ತಮ್ಮೊಳಗೆ ಪಂಚಿಕೊಂಡಿರುವರು. ಆಯಾ ದೇಶಕ್ಕೆ ಕೊಡಲ್ಪಟ್ಟ ಭಾಗಗಳಲ್ಲಿ ಆವರವರ ಯುದ್ಧನಾವೆ ಮತ್ತು ವಿಮಾನಗಳು ವ್ಯಾಪಾರಿ ಹಡಗುಗಳಿಗೆ ರಕ್ಷಣೆ ಕೊಡತಕ್ಕದ್ದು. ಸ್ಪೆನಿಶ್ ಹಡಗುಗಳಿಗೆ ಮಾತ್ರ ಈ ರಕ್ಷಣೆ ಇರುವುದಿಲ್ಲ. ಜಲಾಂತರ್ಗಾಮಿ ನಾವೆಗಳು ಮೇಲಕ್ಕೇಳದೆ ಸ್ಪೆನಿಶ್ ಹಡಗಗಳ ಹೊರತು ಇನ್ನಾವ ಹಡಗಗಳನ್ನಾದರೂ ಮುಳುಗಿಸಿದರೆ ಅವನ್ನು ಗುಂಡುಹೊಡೆದು ನಾಶಮಾಡಬಹುದು. ಇದಕ್ಕೆ ಇಟಲಿ ಜರ್ಮನಿಗಳು ಸೇರಿರುವುದಿಲ್ಲ.

## ನನಗೆ ಹೊಳೆದಂತೆ

ದಕ್ಷಿಣ ಕನ್ನಡ ಭೂಮಾಲಿಕ ಸಂಘದವರು ಮದ್ರಾಸ್ ಮಂತ್ರಿಗಳ ಬಳಿಗೆ ಡೆಪ್ಯುಟೇಶನೊಂದನ್ನೊಯ್ದಿರುವರು. ಸಂತೋಷ. ಆದರೆ ಯಾವುದಕ್ಕಾಗಿ ಈ ಡೆಪ್ಯುಟೇಶನು? ಇವರು ಮಂತ್ರಿಗಳಿಗೊಪ್ಪಿಸಲಿರುವ ಮನವಿಯಾದರೂ ಯಾವ ಸ್ವರೂಪದ್ದು? ಅವರ ಪ್ರಾಮುಖ್ಯ ಬೇಡಿಕೆಗಳೇನು? ಯಾರಿಗೆ ಗೊತ್ತು? ಇನ್ನು ಡೆಪ್ಯುಟೇಶನಿನ ವರವನ್ನು ಮಂತ್ರಿಗಳಿಗೊಪ್ಪಿಸಿದ ಮೇಲೆ ಮದ್ರಾಸಿನ ಇಂಗ್ಲಿಷ ಪತ್ರಿಕಗಳಿಂದ ಗೊತ್ತಾಗಬೇಕಾದ ಸಂಗತಿ ಅಲ್ಪಸ್ವಲ್ಪವೇನಾದರೂ!

\ \ \ \ \

ಜನಸೇವಾ ನಿರತರಾದ ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬಂದರೂ ಜನರ ಮನೋವೃತ್ತಿ ಬಂದಿಸದ್ದೇ ಇದೆ. ಡೆಪ್ಯುಟೇಶನ, ಮಾನಪತ್ರ, ಸ್ವಾಗತಸತ್ಕಾರಗಳೆಲ್ಲಾ ಎಂದಿನಂತೆ ಎಡೆಬಿಡದೆ ನಡೆಯುತ್ತಲೇ ಇವೆ. ನೋಡಿ ನೋಡಿ ಸಾಕಾಯಿತು ನನಗೆ ಈ ಟೀಪಾರ್ಟಿ ಸತ್ಕಾರ ಸ್ವಾಗತಗಳ ಛಾಯಾಚಿತ್ರಗಳನ್ನು ಪತ್ರಿಕೆಗಳಲ್ಲಿ!

\ \ \ \ \

ದಕ್ಷಿಣ ಕನ್ನಡಿಗರಾದ ಮೂರು ಮಂದಿ ಪಾರ್ಲಿಮೆಂಟರಿ ಸೆಕ್ರೆಟರಿಗಳು ಮದ್ರಾಸಿನಲ್ಲಿರುವಾಗ ಈ ಡೆಪ್ಯುಟೇಶನಿನ ಆವಶ್ಯಕತೆಯೇನಿತ್ತಪ್ಪ ಎಂದೆ ನಾನು ನನ್ನ ಮಿತ್ರನೊಬ್ಬನೊಡನೆ. 'ನಿನಗೇನು? ನಿನ್ನದೇನು ಹೋಯಿತು? ಅವರ ಖರ್ಚಿನಲ್ಲಿ ಅವರು ಮದ್ರಾಸಿಗೆ ಹೋಗಿ ಮಂತ್ರಿಗಳನ್ನು ಕಂಡು ಬಂದಿರುಗಿದರೆ ನಿನಗೇನು ನಷ್ಟ?'' ಎಂದ ಅವ.

\ \ \ \ \

"ಅಲ್ಲ ಮಹಾರಾಯ, ಮದ್ರಾಸಿಗೆ ಈಗ ಡೆಪ್ಯುಟೇಶನ್ ಹೋಗಬೇಕಾದುದು ದಕ್ಷಿಣ ಕನ್ನಡದ ಚಾಲಗೇಣಿ ಒಕ್ಕಲುಗಳ ಪತಿಯಿಂದ. ಅವರ ಅವಸ್ಥೆಯನ್ನು ಹೇಳಿ ತೀರದು! ಅವರ ಜೀವನದಲ್ಲಿ ಒಂದಿಷ್ಟು ಸ್ಥಿರತೆಯಿಲ್ಲ. ಅವರು ಕೃಷಿಮಾಡಿ ಜಮೀನನ್ನು ಅಭಿವೃದ್ಧಿಗೊಳಿಸಲು ಸ್ವಲ್ಪವೂ ಪ್ರೋತ್ಸಾಹವಿಲ್ಲ. ಆದುದರಿಂದ ಅವರು ಚಿರಜೀವಿಗಳಾಗಹತ್ತಿದಾರೆ. ಅವರ ಜೀವನದಲ್ಲೇನಾದರೂ ಸ್ಥಿರತೆಯನ್ನುಂಟುಮಾಡಿ ಗೇಣಿಯ ಪ್ರಮಾಣವನ್ನು ಕಾನೂನು ಮೂಲಕ ನಿಶ್ಚೈಸಿದರೆ ಮಾತ್ರ ಅವರೇನಾದರೂ ಧನಿಗಳಿಗೆ ಗೇಣಿಕೊಟ್ಟು ಒಂದೇ ಕಡೆ ಬಾಳು ನಡಿಸುವಂತಾದೀತು. ಧನಿಗಳ ಹಿತದೃಷ್ಟಿಯಿಂದಲೇ ಇದು ಆವಶ್ಯ. ಇದನ್ನು ಮಂತ್ರಿಗಳ ಗಮನಕ್ಕೆ ತರುವವರಾರು? ಇದಕ್ಕೆ ಡೆಪ್ಯುಟೇಶನ್ ಒಯ್ಯುವವರಾರು?" ಎಂದು ಪ್ರಶ್ನಿಸಿದೆ ನಾನು. "ನಿನ್ನದೊಂದು ಹೊಸ್ತಿಮು" ಎಂದು ಸುಮ್ಮನಾದ ನನ್ನ ಮಿತ್ರ.

\ \ \ \ \

ಸಂಯುಕ್ತ ಪ್ರಾಂತದ ಬಜೆಟು ನೋಡಿ ನಮ್ಮ ಪ್ರಧಾನ ಮಂತ್ರಿ ರಾಜಾಜಿಯವರಿಗೆ ಬಾಯಲ್ಲಿ ನೀರೂರಿ ಬಂತಂತೆ. ನನಗೂ ಬಂತು. ನನ್ನಂತೆಯೇ ಪ್ರತಿಯೊಬ್ಬ ಹಳ್ಳಿಗನಿಗೂ ಬಂದಿರಬೇಕು. ನಿಜವಾದ ಕಾಂಗ್ರೆಸ್ ಬಜೆಟೆಂದರೆ ಅದು. ಹಳ್ಳಿಗಳಲ್ಲಿ ಹೊಸ ಯುಗವೊಂದನ್ನಾರಂಭಿಸುವ ಬಜೆಟದು. ಪಂಡಿತ ಪಂತರವು ನಮ್ಮ ಹಳ್ಳಿಗರೆಲ್ಲಾ ತಮ್ಮ ಜೀವನವನ್ನಾವರಿಸಿರುವ ಕಗ್ಗತ್ತಲೆಗೆ ಬೆಳಕಿನ ಕಿರಣವೊಂದಾದರೂ ಬರುವುದೋ ಎಂದು ಆಶೆಕಟ್ಟಿಕೊಂಡಿದ್ದೇ-

ಬರುವ ವಾರದಿಂದ
**ದೇಶಭಕ್ತ**
ಎಂಬ
ಅತ್ಯಾಧುನಿಕ ನಾಟಕವು
ಪ್ರಕಟವಾಗುವುದು.

ಬಂದ ಪ ಪ 'ಸ್ವಾಂತಿ ನಮ್ಮ ಕಾಂಗ್ರೆಸ್ ಬಜೆಟು ಇಂಟೆರಿಮ್ ಮಂತ್ರಿಗಳು ರೂಪಾಯಿಯಲ್ಲಿ ಎರಡಾಣೆ ಕಂದಾಯ ಮಾಫಿಕೊಟ್ಟರೆ ನಮ್ಮ ಮಂತ್ರಿಗಳು ನಾಲ್ಕಾಣೆ ಕೊಡುತ್ತಾರೆ! ಇನ್ನು ಹಳ್ಳಿಗರ ಭಾಗ್ಯೋದಯವಾಗಲಿದೆ ಎಂದೆಲ್ಲಾ ನಾನು ಜಂಭ ಹೊಡೆದುದೇ ಬಂತು! ಕಾಂಗ್ರೆಸ್ ಮಂತ್ರಿಗಳು ಕೊಟ್ಟದ್ದೂ ಇಂಟೆರಿಮ್ ಮಂತ್ರಿಗಳಷ್ಟೆ.

\ \ \ \ \

ಮದ್ಯಪಾನ ನಿಷೇಧವೆಂಬುದು ಕೃತ್ಯಗತ್ಯ. "ಶ್ರೀರಾಮಚಂದ್ರ ಕೂಡಾ ಕುಡಿದಿದ್ದಾನೆ" ಎಂದು ಸರ್ ಕೆ. ವಿ. ರೆಡ್ಡಿಯವರು ಎಷ್ಟು ಹೇಳಿದರೂ ನಾನು ಕೇಳಲಿಕ್ಕಿಲ್ಲ. ಸೇಲಮಿನಲ್ಲಿ ನಷ್ಟವಾಗುವ ರೂ 26 ಲಕ್ಷಕ್ಕೆ ಅದರ ನಾಲ್ಕು ಪಾಲು ಹಣ ಜನತೆಯ ಕಿಸೆಯಲ್ಲುಳಿದೀತೆಂಬ ರಾಜಾಜಿಯವರ ಮಾತು ನಿಜ. ಆದರೆ ಅದಕ್ಕೆ ಇಷ್ಟು ಅವಸರ ಪಡಬೇಕಾಗಿದ್ದಿಲ್ಲ. ಮದ್ಯಪಾನ ನಿಷೇಧವನ್ನು ಒಂದು ವರ್ಷ ಮುಂದುವರಿಸುತ್ತಿದ್ದರೆ ಸೇಲಮಾಗಲೀ ಮದ್ರಾಸಾ ಪ್ರಾಂತವಾಗಲಿ ಕೆಟ್ಟೇ ಹೋಗುತ್ತಿದ್ದಿಲ್ಲ. ಮೊದಲಾಗಿ ರಾಜಾಜಿಯವರು ಆವರೇ ಎತ್ತಿ ಒತ್ತಿ ಹೇಳಿದಂತೆ ಬಡ ಒಕ್ಕಲಿಗರ ಕಗ್ಗತ್ತಲೆಯ ಜೀವನದಲ್ಲಿ ಒಂದಿಷ್ಟು ಬೆಳಕನ್ನವರು ಚೆಲ್ಲುವಂತೆ ನೋಡಬೇಕಿತ್ತು. ಇತರ ಎಲ್ಲಾ ಪ್ರಾಂತಗಳಿಗಿಂತಲೂ ಇಮ್ಮಡಿ ಸಾಲದಲ್ಲಿ ಮುಳುಗಿರುವ ಬಡಹಳ್ಳಿಗರ ನಿರಾಶಾಮಯ ಜೀವನವನ್ನವರು ಸುಧಾರಿಸಲೆತ್ನಿಸಬೇಕಾಗಿತ್ತು. ಅದೇನೂ ಮಾಡದೆ ಸಂಯುಕ್ತ ಪ್ರಾಂತದ ಬಜಟು ನೋಡಿ ನನಗೆ ಬಾಯಿಯಲ್ಲಿ ನೀರು ಬರುವುದೆಂದು ಹೇಳಿದುದಾದರೂ ಅದೆಷ್ಟು ಏನೇಕೆ? "ವಿವೇಕವಿಲ್ಲದಿದ್ದರೂ ವಿವೇಕವನ್ನಬೇಕು" ಯಾಕೆಂದರೆ ಅದು ನಮ್ಮ ಕಾಂಗ್ರೆಸ್ ಮಂತ್ರಿ ರಾಜಾಜಿಯವರೆಂದ ಮಾತೆಂದರೆ ನಾನೊಪ್ಪಲಾರೆ. ರಾಜಾಜಿಯವರಲ್ಲ ಗಾಂಧಿಯವರನ್ನಾದರೂ ವಿಮರ್ಶೆಮಾಡದೆ ನಾನು ಬಿಡಲಿಕ್ಕಿಲ್ಲ! ಅದರಿಂದ ತಲೆ ಹೋದರೂ ಚಿಂತೆಯಿಲ್ಲ!

\ \ \ \ \

'ಪ್ರಾಸಿಸೋಂದಿಗೆ ವ್ಯಾಸನ್ನು' (ವರ್ತಮಾನದೊಂದಿಗೆ ಅಭಿಪ್ರಾಯವನ್ನು) ಕಲಸಿ ಉಪ್ಪು ಖಾರ ಹಚ್ಚಿ ಕೊಡಬಾರದೆಂಬುದನ್ನು ಪತ್ರಿಕೆಗಳಿಗೆ ವರ್ತಮಾನ ಕೊಡುವವರು ಮುಖ್ಯವಾಗಿ ತಿಳಕೊಳ್ಳಬೇಕು. ಒಂದೊಮ್ಮೆ ಅವರು ಹಾಗೆ ಕೊಟ್ಟರೂ ಪತ್ರಿಕಾ ಸಂಪಾದಕರು ಅಂತಹದಕ್ಕೆ ಬಾತ್ಮಿಯ ಸ್ಥಾನವನ್ನು ಕೊಡದಂತೆ ಎಚ್ಚರವಿರಬೇಕು. ಇವರಿಬ್ಬರೂ ತಮ್ಮ ಕರ್ತವ್ಯ ವಿಮುಖವಾದರೆ ಅದರ ಕುರಿತು ಜನರಲ್ಲಿ ಮನಸ್ತಾಪವುಂಟಾಗುವುದು ಸಹಜ. ಉಡುಪಿಯಲ್ಲಿ ಮಂಗಳೂರಿನ ಒಂದೊಂದು ಪತ್ರಿಕೆಯನ್ನು ನಿಷೇಧಿಸುವವರೆಗೆ ಮುಂದುವರಿದಿದ್ದೀತು ಈ ಮನಸ್ತಾಪ.

\ \ \ \ \

ಬಜ್ಜರಕಾಡಿನಲ್ಲಿ ಹಾಜಿ ಅಬ್ದುಲ್ಲಾ ಜಿಮ್ನೇಸಿಯಮಿನ ಏರ್ಪಾಡು ನಡೆದಿದೆ. ನಾನು ನೋಡಿ ಬಹಳ ಸಂತೋಷಗೊಂಡೆ. ಮಂಗಳೂರಿನಂತಹ ಮುಂದುವರಿದುದೆನ್ನುವ ಪಟ್ಟಣದಲ್ಲಿಯೂ ಇಂತಹ ಜಿಮ್ನೇಸಿಯಮ್ ಇಲ್ಲ. ಚಿಕ್ಕ ದೊಡ್ಡ ಮಕ್ಕಳು, ಬಡವರು ಧನಿಕರು, ಆ ಜಾತಿಯವರು ಈ ಜಾತಿಯವರೆಂಬ ಭಿನ್ನಭೇದವಿಲ್ಲದೆ ಬೈಗು ಬೆಳಗಿನಲ್ಲಿ ಒಂದಾಗಿ ಕಲೆತು ಒಲಿದು ನಲಿದು ಆನಂದಿಸುವ ಈ ಜಿಮ್ನೇಸಿಯಮೇ ಕೀರ್ತಿಶೇಷ ಸಾಹೇಬರಿಗೆ ಅತಿ ದೊಡ್ಡ ಹಾಗೂ ಸಾರ್ಥಕ ಸ್ಮಾರಕ.

— ವಿಮರ್ಶಕ

# Loans & Advances

ON THE SECURITY OF GOLD, JEWELS AND OTHER VALUABLES ALWAYS AVAILABLE AT MODERATE RATES

THE UDIPI BANK LTD.

UDIPI.

**ಮೈಸೂರು**—ಮಡಿಕೇರಿಯಿಂದ ಹೊರಟ ಶ್ರೀಮತಿ ಕಮಲಾದೇವಿಯವರು ತಾ ೯ರಲ್ಲಿ ಮೈಸೂರಿಗೆ ತಲಪಿದರು 'ಈ ದಿನ ಮೊದಲ್ಗೊಂಡು ಇನ್ನೊಂದು ತಿಂಗಳ ತನಕ ಮೈಸೂರಿನಲ್ಲಿಯಾಗಲೀ, ಮೈಸೂರ ಪಕ್ಕದಲ್ಲಿಯಾಗಲೀ ಭಾಷಣಮಾಡಕೂಡದಾಗಿ ಮೈಸೂರು ಜಿಲ್ಲಾ ಮಜಿಸ್ಟ್ರೇಟರರು ಒಂದು ಹುಕ್ಮು ಜಾರಿಮಾಡಿದ್ದಾರೆ ಶ್ರೀಮತಿಯವರ ಭಾಷಣದಿಂದ ಪ್ರಜೆಗಳ ಶಾಂತಿಭಂಗವಾದೀತೆಂಬ ಶಂಕೆಯೇ ಈ ಆಜ್ಞೆಯನ್ನು ಉಪಯೋಗಿಸುವದರ ಮೂಲವಂತೆ ಶ್ರೀಮತಿಯವರು 'ಇಂತಹ ಆಜ್ಞೆಯನ್ನು ಜ್ಯಾರಿಮಾಡುವ ಆವಶ್ಯಕತೆಯೇ ಇರಲಿಲ್ಲ'' ಎಂದು ಉತ್ತರವಿತ್ತರು ಪ್ರಕೃತ ಈ ಆಜ್ಞೆಯನ್ನು ಉಲ್ಲಂಘಿಸುವುದು ಅಹಿತವೆಂದು ಶ್ರೀಮತಿಯವರು ಬೆಂಗಳೂರಿಗಾಗಿ ಬಳ್ಳಾರಿಯ ಕಡೆ ತೆರಳಿದ್ದಾರೆಂದು ತಿಳಿಯಬರುವುದು

**ಬೆಂಗಳೂರು**—ಬೆಂಗಳೂರಿನ ಪ್ರದೇಶ ಕಾಂಗ್ರೆಸ್ ಮುಖಂಡರಾಗಿದ್ದ ಶ್ರೀಮಾನ್ ನಂಜುಂಡಶೆಟ್ಟಿಯವರು 'ಮೈಸೂರಿನ ಒಂದೇಒಂದು ಕಾರ್ಯಕ್ರಮಗಳನ್ನು ನಡೆಸಲು ಆ ಕಾಂಗ್ರೆಸ್ ಸಮಿತಿಯವರು ಮೈಸೂರ್ ಕಾಂಗ್ರೆಸ್ ನಡಿಗೆ ನಡಾವಳಿಯನ್ನು ಕೊಡುವಂತೆ ಮಾಡುವುದು ಇದರಿಂದ ಶ್ರೀಮಾನ್ ನಾನು ರಾಜೀನಾಮೆ ಕೊಡುವವನ್ನು ಮುಂದುವರಿಸಲಿಕ್ಕೆಂದು ಮುಖ್ಯವಾಗಿ ಪ್ರಾಂತ ಕಾಂಗ್ರೆಸ್ ಮುಖಂಡರಾಗಿದ್ದ ಅವರ ಈಗ ಕಾಂಗ್ರೆಸಿಗೆ ವಿರುದ್ಧ ಕೆಲಸವನ್ನು ಮಾಡುತ್ತಿರುವುದನ್ನು ನಾ ಡಿ ಬೆಂಗಳೂರಿನ ಕಾಂಗ್ರೆಸ್ ಅಧಿಕಾರಿಗಳು ಈ ವಿಷಯದ ಪರೀಕ್ಷೆ ನಡೆಸಲಿದ್ದಾರೆ

ದ. ಪಿ. ಸಿ. ಸಿ. ಯ ಉಪಾಧ್ಯಕ್ಷರಾದ ಶ್ರೀ ತಾ ವಡಿ ಕೆರೆಯ 'ಮೈಸೂರಿನ ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಚರ್ಚಿಸಲು ಮೈಸೂರು ದಿವಾನರ ಭೆಟಿಯನ್ನು ಕೋರಿದ್ದಾರೆಂದು ದಿವಾನರ ಒಪ್ಪಿಗೆಯು ಸಿಕ್ಕಿದೆಯೆಂದು ತಿಳಿದುಬರುತ್ತದೆ

ಈ ತಿಂಗಳ ೫ ರಲ್ಲಿ ೬ ಜನ ಪ್ರಯಾಣಿಕರನ್ನು ಕುಳ್ಳರಿಸಿಕೊಂಡು ಬಂದ ಬಸ್ಸು ಹೆಬ್ಬಾಳದ ಬಳಿ ಒಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆಯಿತು ಪ್ರಯಾಣಿಕರಲ್ಲಿ ಒಬ್ಬನು ಕೂಡಲೇ ಮೃತಪಟ್ಟನು ಡ್ರೈವರಿಗೆ ತೀವ್ರ ಪೆಟ್ಟು ಆಗಿದೆ ಕೊನೆಗೆ ಅಪ್ಪ ಕ್ರೆಗ ನಾಗಿಸಲ್ಪಟ್ಟರೂ ಒಬ್ಬನು ಅಲ್ಲಿ ಮೃತನಾದ ಕಂಡಕ್ಟರನ್ನು ಪೋಲೀಸರು ಹಿಡಿದುಕೊಂಡಿದ್ದಾರೆ

**ದಾವಣಗೆರೆ**—ಇಲ್ಲಿಯ ಅನಾಥಾಲಯದ ಪುಸ್ತಕ ಭಂಡಾರದಲ್ಲಿ ಕೆಲವರು ಕಳ್ಳತನ ಮಾಡಿದ್ದಾರೆಂದು ರುಜುವಾತಾದ ಕಾರಣ ಅಪರಾಧಿಗೆ ೧೮ ರೂ ದಂಡ ಯಾ ೧ ತಿಂಗಳ ಕಠಿಣ ಸಜೆ ದಂಡವು ಇಲ್ಲಿಯ ಮಜಿಸ್ಟ್ರೇಟರವರಿಂದ ವಿಧಿಸಲ್ಪಟ್ಟಿತು

**ಬೆಳಗಾವಿ**—ಸರ ಎಂ ವಿಶ್ವೇಶ್ವರಯ್ಯನವರು ಕಳೆದ ಒನೇ ತಾರೀಕಿಗೆ ಬೆಳಗಾವಿಗೆ ಬಂದಿದ್ದರು ನಗರ ಸಭೆಯ ಅಧ್ಯಕ್ಷರೇ ಮೊದಲಾದವರು ಅವರನ್ನು ಎದುರ್ಗೊಳ್ಳುವುದಕ್ಕಾಗಿ ಸ್ಟೇಶನಿಗೆ ಹೋಗಿದ್ದರು ನೀರಿನ ಯೋಜನೆಗಾಗಿ ಇಲ್ಲಿಗ ಬಂದು ಕೆಲವು ಸಲಹೆಗಳನ್ನು ಕೊಟ್ಟು ತಾ ೯ರಲ್ಲಿ ಹಿಂತಿರುಗಿದರು

**ಧಾರವಾಡ**— ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರಿಗೆ ಪಂಡಿತ ಜವಾಹರಲಾಲ ನೆಹರೂರವರು ಕೆಳಗಿನ ಸಾರಾಂಶದ ಒಂದು ಪತ್ರ ಬರೆದಿದ್ದಾರೆ 'ಮೈಸೂರು ಸರಕಾರದ ದಬ್ಬಾಳಿಕೆಯನ್ನು ತೀವ್ರವಾಗಿ ಪ್ರತಿಭಟಿಸಿ ಜನರಲ್ಲಿ ಜಾಗೃತಿಯನ್ನು ಹುಟ್ಟಿಸಿರಿ ಅದರಿಂದ ದಸ್ತಗಿರಿಯಾದರೂ ಆಗಲಂತೆ''

ತಾ ೬ನೇ ದಿನ ಇಲ್ಲಿ ನಾಗರಿಕರ ಪ್ರಚಂಡ ಸಾರ್ವಜನಿಕ ಸಭೆಯೊಂದು ಸೇರಿತು ಡಾ ಎನ್ ಬಿ ಕಬ್ಬೂರರು ಅಧ್ಯಕ್ಷರಾಗಿದ್ದರು ಮೈಸೂರು ಕಾಂಗ್ರೆಸ್ ಕಮಿಟಿಯ ನಿಯೋಗ ಗೋಷ್ಠಿಯವರಾದ ಸಾರ್ಥನಾರಾಯಣ ಪಂಡಿತ, ಹಗಡೂರು ರಾಮಚಂದ್ರರಾವ್ ಮುಂತಾದವರ ಪರಿಚಯವನ್ನು ಅಧ್ಯಕ್ಷರು ಮಾಡಿಕೊಟ್ಟರು ಮೈಸೂರು ಸಂಸ್ಥಾನವು ಕಾಂಗ್ರೆಸಿನ ಮೇಲೆ ತೋರವ ಅಶ್ರದ್ಧೆಯನ್ನೂ, ದಬ್ಬಾಳಿಕೆಗೆ ಆಡಳಿತವನ್ನೂ ವಿರೋಧಿಸಿ ಭಾಷಣಗಳಾದುವು. ಮೈಸೂರಿನ ಕಾಂಗ್ರೆಸ್ಸಿಗೆ ಧಾರವಾಡದ ನಾಗರಿಕರು ಸಂಪೂರ್ಣ ಸಹಾಯವನ್ನು ಮಾಡಬೇ

# ನಮ್ಮ ಕರ್ನಾಟಕ

ಕೆಂದು ಶ್ರೀಮತಿ ಕೃಷ್ಣಾಬಾಯಿಯವರ ಸೂಚನೆಯು ಸಭೆಯಲ್ಲಿ ಪಾಸಾಯಿತು 'ವಂದೇ ಮಾತರಂ' ಗೀತೆಯೊಡನೆ ಸಭೆಯು ಅಂತ್ಯವಾಯಿತು

**ಸಿಸಿ**—ಇಲ್ಲಿಯ ಹೆಗಡೆಕಟ್ಟೆ ಎಂಬಲ್ಲಿ ಒಬ್ಬ ಒಕ್ಕಲಿಗನನ್ನು ಒಬ್ಬನು ಗುಂಡಿನಿಂದ ಕೊಂದಿರುವನು ಅವನು ಒಕ್ಕಲಿಗನ ಪತ್ನಿಯ ವಿಟನಿರಬೇಕೆಂದೂಹಿಸಲಾಗಿದೆ ಕೊಂದವನು ಶವವನ್ನು ಒಂದು ಹಾಳುಬಾವಿಗೆ ಹಾಕಿಬಿಟ್ಟ ಗಂಡನು ಮನೆಗೆ ಬಾರದೆ ಇದ್ದುದರಿಂದ ಆಕೆಯು ಗ್ರಾಮಾಧಿಕಾರಿಗೆ ತಿಳಿಸಿದಳು ಪತ್ತೆ ನಡೆಸಲಾಗಿ ಕೊಳೆತ ಶವವು ಸಿಕ್ಕಿತು ಆಕೆಯು ಕುತ್ತಿಗೆಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಗುನ್ಹೆಗಾರನನ್ನು ಪೋಲಿಸರು ಹಿಡಿದಿದ್ದಾರೆ.

**ಮಡಿಕೇರಿ**—ಶ್ರೀಮತಿ ಕಮಲಾದೇವಿಯವರು ಕಳೆದ ತಾ, ೪ರಲ್ಲಿ ಪುತ್ತೂರಿನಿಂದ ಇಲ್ಲಿಗೆ ಬಂದ, ಆ ದಿನ ಸಂಜೆ ಕೂಪ್ಪಲದಲ್ಲಿಯೂ ಮಡಿಕೇರಿಯ ಮಹಿಳಾಸಭೆಯಲ್ಲಿ, ಮಡಿಕೇರಿಯ ಸಾರ್ವಜನಿಕ ಸಭೆಯಲ್ಲೂ ಭಾಷಣಮಾಡಿದರು ತಾ ೬ರಲ್ಲಿ ಶನಿವಾರ ಸಂತೆ ಮತ್ತು ಸೋಮವಾರ ಪೇಟೆಗಳಲ್ಲಿ ಭಾಷಣವಿತ್ತರು ತಾ ೭ರಲ್ಲಿ ಮೂರ್ನಾಡು ಮತ್ತು ಕಾಗುಂಡದಲ್ಲೂ ಉಪನ್ಯಾಸವಿತ್ತು ತಾ ೮ರಲ್ಲಿ ವೀರರಾಜಪೇಟೆಯಲ್ಲಿ ಭಾಷಣ ಮಾಡಿದರು ನಂತರ ತಾ ೯ಕ್ಕೆ ಮೈಸೂರು ಕಡೆ ತೆರಳುವವರು

**ಮುಂಬಯಿ**—ನಸಿಹುತ್ಲಾ ಶ್ರೀ ಭಗವಂತ ದ ವ್ಯಾನದ ಸಂಘದ ಮಹಾ ಸಭೆಯು ತಾರೀಕು ೨೯-೮-೩೭ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಪಿ. ಎ. ಹೋರೊಮ್ಜಾಜಿ ಕಂಪೆನಿಯವರಾ ದಪ್ಲಿ ರಾ. ಕೆ ಅತ್ತುಮೊಂಡನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು

ಪ್ರಥಮತಃ ಸಂಘದ ಆರ್ಥಿಕ ಸ್ಥಿತಿಗಳಿಂದಾಗಿ ಸಂಘಕ್ಕೆ ಹೊಸ ಕಾರ್ಯನಿರ್ವಾಹಕ ಮಂಡಳಿಯು ಅಗತ್ಯವೆಂದು ತೋರಿದ ಕಾರಣ ಏಳು ಜನರ ಒಂದು ಕಾರ್ಯನಿರ್ವಾಹಕ ಮಂಡಳಿಯು ರಚನೆಯಾಯಿತು.

ಶ್ರೀಯುತ ದೂಮ ಅಪ್ಪಣ್ಣನವರನ್ನು ಅಧ್ಯಕ್ಷರನ್ನಾಗಿಯೂ ನಾರಾಯಣ ಟಿ. ಬಂಗೇರನವರನ್ನು ಕಾರ್ಯದರ್ಶಿಯನ್ನಾಗಿಯೂ, ಸಂಕಪ್ಪ ಕರ್ಕೇರನವರನ್ನು ಕೋಶಾಧಿಕಾರಿಯನ್ನಾಗಿಯೂ, ಅತ್ತು ಪೂಜಾರಿ, ಬಾಬು ಅಮೀನ್, ಅತ್ತು ಮೆಂಡನ್, ಚೆನ್ನಪ್ಪ ಅಮೀನ್ ಇವರನ್ನು ಕಾರ್ಯನಿರ್ವಾಹಕ ಸದಸ್ಯರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು

ಸದ್ರಿ ಸಂಘದ ಬಂಡವಾಳವು ಈ ವರೆಗೆ ಸೆಂಟ್ರಲ್ ಬ್ಯಾಂಕಿನ ಸೇವಿಂಗ್ಸ್ ಖಾತೆಯಲ್ಲಿದ್ದದ್ದು, ಸದ್ರಿ ಖಾತೆಯನ್ನು ರದ್ದುಪಡಿಸಿ, ಮುಂದಕ್ಕೆ ಸಂಘದ ಬಂಡವಾಳವನ್ನು ಮುಂಬಾಯಿಯಲ್ಲಿರುವ ಕೆನರಾ ಬ್ಯಾಂಕಿನ ಶಾಖೆಯಲ್ಲಿಡುವಂತೆ ಮಂಜೂರು ಮಾಡಲಾಯಿತು

ಸದ್ರಿ ಸಂಘದಿಂದ ಈ ಮುಂಚೆ ನಾಲಪಡಕೊಂಡವರು ತಕ್ಕ ಸಮಯದಲ್ಲಿ ಸಾಲ ಮಾಡದೆ ಇದ್ದ ಕಾರಣ ಸದ್ರಿಯವರಿಗೆ ಪತ್ರ ಬರೆಯಬೇಕೆಂತ ಮಂಜೂರುಮಾಡಲಾಯಿತು ಮುಂದಕ್ಕೆ ಸಂಘದ ಅಭಿವೃದ್ಧಿಗೋಸ್ಕರ ಕೆಲವು ಅಗತ್ಯ ಠರಾವುಗಳನ್ನು ಮಂಜೂರುಮಾಡಲಾಯಿತು

ಕಡೆಗೆ ಅಧ್ಯಕ್ಷರಿಗೆ ಧನ್ಯವಾದಗಳನ್ನಿತ್ತು, ಟೀ ಸಾರ್ವಸತ್ಕಾರಗಳಿಂದ ಶ್ರೀ ಭಗವತಿಯ ಪ್ರಾರ್ಥನೆಯಾದ ಬಳಿಕ ಸಭೆಯು ಮುಕ್ತಾಯವಾಯಿತು

**ಹೊನ್ನಾಳಿ**—ಪಾ ಸತ್ಯನಾರಾಯಣ ಪಂಡಿತ, ಶ್ರೀ ಮರಿಸಾಮಿ ಹಿರೇಮಠ ಶ್ರೀ ಮಾಳಪ್ಪಗೌಡ ಮೊದಲಾದವರು ತಾ ೧೧ರಲ್ಲಿ ಹೊನ್ನಾಳಿಗೆ ಬಂದರು ಹೊನ್ನಾಳಿ ತಾಲೂಕಿನ ಅಮಲ್ದಾರರ ಹೊನ್ನಾಳಿ ತಾಲೂಕಿನ ಅಕ್ಕ ಪಕ್ಕದಲ್ಲಿ ಈ ದಿನ ಮೊದಲ್ಗೊಂಡು ಇನ್ನೊಂದು ತಿಂಗಳು ಕ್ರಾಂತಿಕಾರಕ ಉಪನ್ಯಾಸಗಳನ್ನು ಮಾಡಕೂಡದೆಂದು ಆಜ್ಞೆ ಮಾಡಿದ್ದಾರೆ

**ಗದಗ**—ಮೈಸೂರಿನ ದಬ್ಬಾಳಿಕೆಯ ಆಡಳಿತವನ್ನು ಇಲ್ಲಿಯ ಸಾರ್ವಜನಿಕ ಸಭೆಯಲ್ಲಿಯೂ ಖಂಡಿಸಲಾಯಿತು ಡಾ ಉಮಾಪುರಿಯವರು ಅಧ್ಯಕ್ಷರಾಗಿದ್ದರು

**ತುಮುಕೂರು**—ಉಡುಪಿಯ ಕೆನರಾ ಇಂಡಸ್ಟ್ರಿಯುಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಶಾಖೆಯೊಂದು ತಾ ೯ರಲ್ಲಿ ಇಲ್ಲಿ ತೆರೆಯಲ್ಪಟ್ಟಿತು

**ಸಮಾಜ ಮಾಸಪತ್ರಿಕೆಯ ಸ್ಥಳಾಂತರ**

ಕಳೆದ ಎರಡೂವರೆ ವರ್ಷಗಳಿಂದಲೂ ಧಾರವಾಡದಿಂದ ಹೊರಡುತ್ತಲಿದ್ದ 'ಸಮಾಜ' ಪತ್ರಿಕೆಯ ಕಾರ್ಯಾಲಯವನ್ನು ಬೆಂಗಳೂರಿಗೆ ಸ್ಥಳಾಂತರಿಸಿದ್ದು ಇನ್ನು ಮುಂದೆ ಎಲ್ಲರೂ 'ಸಮಾಜ' ಕಾರ್ಯಾಲಯ ೮೦ ವಿಶ್ವೇಶ್ವರಪುರ ಬೆಂಗಳೂರು ನಗರ— ಈ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದು ಸಂಪಾದಕರು ಬಿನ್ನವಿಸಿಕೊಂಡಿದ್ದಾರೆ


# ದಿ ಗಾರ್ಡಿಯನ್ ಒಫ್ ಇಂಡಿಯಾ
## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸು – **ಮದ್ರಾಸು** ] [ ಶಾಖೆ – **ಮಂಗಳೂರು**

**(ಹಿಂದೂಸ್ಥಾನದ ಅತ್ಯಧಿಕ ಅಭಿವೃದ್ಧಿ ಹೊಂದಿದ ಜೀವ ವಿಮಾ ಸಂಸ್ಥೆ)**

ಇಂಡಿಯಾ, ಬರ್ಮಾ, ಸಿಲೋನ್ ಮೊದಲಾದ ದೇಶಗಳಲ್ಲಿ ಸ್ಪೆಶ್ಯಲ್ ಏಜೆನ್ಸಿ ಆಫೀಸುಗಳೂ ಸ್ಥಾಪಿಸಲ್ಪಟ್ಟು ಸಮರ್ಥ ಜನರಿಂದ ನಡೆಸಲ್ಪಡುವ ವಿಶ್ವಾಸಾರ್ಹಕವಾದ ಜೀವ ವಿಮಾ ಸಂಸ್ಥೆ!

**ಆದುದರಿಂದಲೇ ಜೀವ ವಿಮಾಗಳಿಸಲಿಕ್ಕೂ ಪ್ರಾತಿನಿಧ್ಯ ಹೊಂದಲಿಕ್ಕೂ 'ಗಾರ್ಡಿಯನ್'ಕಂಪೆನಿಯನ್ನೇ ಚುನಾಯಿಸುವ ಗುರಿ ನಿಮ್ಮದಾಗಿರಲಿ!**

**ಬೇಕು!** **ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಲಬಾರು ಮತ್ತು ಕೊಡಗು ಜಿಲ್ಲೆಗಳಲ್ಲಿ ಈ ಕಂಪೆನಿಯ ಪ್ರಾತಿನಿಧ್ಯಕ್ಕಾಗಿ ಕಮಿಶನ್ ವ ಮಾಸಿಕ ವೇತನ ಶರ್ತಗಳ ಮೇಲೆ ಸಭ್ಯ ಸಮರ್ಥ ಗೃಹಸ್ಥರಿಂದಲೂ ಗೃಹಿಣಿಯರಿಂದಲೂ ಅರ್ಜಿಗಳನ್ನು ಸ್ವೀಕರಿಸಲಾಗುವುದು.**

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

**ಇ. ಎ. ಪಾಯಸ್,** ಬಿ. ಯಸ್‌ಸಿ.
ಬ್ರಾಂಚ್ ಸೆಕ್ರೆಟರಿ
**ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.**
**ಮಂಗಳೂರು ಬ್ರಾಂಚ್.**


ಅಖಿಲಭಾರತೀಯ ಸಾಂಸ್ಕೃತಿಕ (ಆಲ್ ಇಂಡಿಯಾ ಓರಿಯಂಟಲ್ ಕಾನ್‌ಫ್ರೆನ್ಸ್)ಸಭೆಯು ಪ್ರತಿವರ್ಷ ಕೂಡುವದು ನಿಯಮವಾಗಿದೆ ಇಷ್ಟು ದಿನಗಳ ವರೆಗೆ ಆಯುರ್ವೇದಕ್ಕೆ ಅದರಲ್ಲಿ ಸ್ಥಾನವಿರಲಿಲ್ಲ ಈ ಸಾರಿ, ಆಯುರ್ವೇದಾಚಾರ್ಯ ಡಾ ಸ್ವಾಮಿಯವರೂ ಪ್ರೇಮವಿದ್ಯಾಪೀಠವೂ ಕೂಡಿ ಪ್ರಯತ್ನಿಸಿ 'ಆಯುರ್ವೇದವು ಒಂದು ಸಂಸ್ಕೃತಿ ಈ ಸಾಂಸ್ಕೃತಿಕ ಸಭೆಯಲ್ಲಿ ಅದಕ್ಕೆ ಸ್ಥಾನ ಸಿಕ್ಕಬೇಕೆಂದು ಹೋರಾಡಿ, ಕೊನೆಗೆ ಆಯುರ್ವೇದಕ್ಕೆ ಅಲ್ಲಿ ಸ್ಥಾನ ಕೊಟ್ಟಂತಾಯಿತು

ಈ ಸಭೆಯು ಈ ವರ್ಷ 'ತ್ರಿವೆಂಡ್ರಮ್'ನಲ್ಲಿ ಸೇರಬೇಕಾಗಿ ಈ ಮೊದಲೇ ಗೊತ್ತಾಗಿದೆ ಇಲ್ಲಿ ಸೇರಲಿರುವ ಆಯುರ್ವೇದ ಭಾಗಕ್ಕೆ ಅಧ್ಯಕ್ಷರ ಆಯ್ಕೆಯು ಅಕ್ರಮ ಹಾಗೂ ಅನಿಯಮಿತವಾದುದೆಂದು ಪ್ರೇಮವಿದ್ಯಾಪೀಠವು ಪಂಡಿತ ತಾರಾನಾಥರವರ ಅಧ್ಯಕ್ಷತೆಯಲ್ಲಿ ೬-೯-೩೭ಕ್ಕೆ ಸಭೆ ಸೇರಿಸಿ ಬಹಿರಂಗ ನಿವೇದಿಸಿರುವುದು

**ಹರ್ ಹಿಟ್ಲರರು**

ಇವರೀಗ ಜರ್ಮನಿಯ ಆರಾಧ್ಯ ದೇವತೆಯಾಗಿರುವರು ದಿನೇ ದಿನೇ ಸ್ವಾದುರ್ಭಾವ ಹೊಂದುತ್ತಿರುವ ಜರ್ಮನರಿಗೆ ವಾಸಿಸಲು ಸಾಕಷ್ಟು ಸ್ಥಳವಿಲ್ಲ ಆಹಾರಕ್ಕಾಗಿ ಸಾಕಷ್ಟು ದವಸ ಧಾನ್ಯವಿಲ್ಲ ಅದುದರಿಂದ ಸಾಂಪತ್ತಿಕ ದೃಷ್ಟಿಯಿಂದ ಜರ್ಮನಿಗೆ ವಸಾಹತುಗಳು ಸಿಗಬೇಕೆಂದು ಛಲ ಹಿಡಿದಿರುವರು ಹೇಗಾದರೂ ಮಾಡಿ ಜರ್ಮನ್ ಸಾಮ್ರಾಜ್ಯವೊಂದನ್ನು ಸ್ಥಾಪಿಸಬೇಕೆಂಬ ಹವಣಿಕೆಯಿಂದ ಎಡೆಬಿಡದೆ ಯುದ್ಧೋಪಕರಣ ಸಿದ್ಧತೆ ನಡಿಸುತ್ತಿರುವರು. ಮುಸಲೋನಿಯವರೊಂದಿಗೆ ಸೇರಿ ಯುರೋಪಿನಲ್ಲಿ ತಾವೇ ಪ್ರಬಲರಾಗುವಂತೆ ಪ್ರಯತ್ನಿಸುತ್ತಿರುವರು. ಬೇಗನೆ ಈ ಸರ್ವಾಧಿಕಾರಿಗಳಿಬ್ಬರೂ ಜರ್ಮನಿಯ ಮ್ಯುನಿಚಿನಲ್ಲಿ ಒಟ್ಟು ಸೇರಿ ಮಾತಾಡಿ ಮುಂದಿನ ಧೋರಣೆಯನ್ನು ನಿಶ್ಚೈಸಲಿರುವರು. ಯುರೋಪಿನ ಶಾಂತಿಯು ಈಗ ಇವರಿಬ್ಬರ ಕರತಳಾಮಲಕವಾಗಿರುವುದು.


## ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ ೨೮, ಅರ್ಧಾಂಶಕ್ಕೂ ಮಿಕ್ಕ ಬಿಳಿ ಕೂದಲಿದ್ದರೆ ರೂ ೨೦ ಬಾಟಲಿಗೆ ಬರಯಿರಿ.

**Bal Kala Stores,**
P. O. Kansisuni (Darbhanga)

ಮುಂದ ವರಿಸಿದ್ದು

ದೊಡ್ಡ ದೊಡ್ಡ ಮಹಂತರು ಮತ್ತು ಗೋಸಾಯಿಗಳು ಮಾತ್ರವೇ ಕಾಮೋಪಭೋಗಿಗಳಾಗಿರುವುದಲ್ಲ. ಪ್ರಾಯಶಃ ಅವರ ಮಂದಿರದಲ್ಲಿರುವವರೆಲ್ಲಾ ಇದೇ ರಂಗಿನಲ್ಲಿ ರೂಪುಗೊಂಡವರಾಗಿದ್ದು, ಅವರು ಕೂಡಾ ಮಹಂತನ 'ಪ್ರಸಾದ'ವನ್ನು ಪಡೆಯುತ್ತಿರುತ್ತಾರೆ. ಕೆಲವು ಕಡೆಗಳಲ್ಲಂತೂ ಭಕ್ತೆಯರ ಹಾಗೂ ಶಿಷ್ಯೆಯರ ಅಧಿಕತೆಯ ಕಾರಣ ಅಲ್ಲಿಯ ಪ್ರತಿಷ್ಠಿತ ವ್ಯಕ್ತಿಗೆ ಇಚ್ಛಾನುಸಾರ ಉಪಭೋಗಿಸಲಿಕ್ಕೆ ಅವಕಾಶವಿರುತ್ತದೆ. ಚಿಕ್ಕ ಚಿಕ್ಕ ಮಂದಿರಗಳ ಅವಸ್ಥೆಯೂ ಪ್ರಾಯಃ ಹೀಗೆಯೇ ಇರುತ್ತದೆ. ಕೆಲವು ಸಮಯದ ಮುಂಚೆ ಸಮಾಚಾರ ಪತ್ರಿಕೆಗಳಲ್ಲಿ ಬಿಸ್ವಾಮಿನ ಒಂದು ಮಂದಿರದ ಕುರಿತು ಪ್ರಕಟವಾಗಿದ್ದಿತೇನೆಂದರೆ—ಅದರ ಪೂಜಾರಿಯ ಮಗನೊಬ್ಬನು ಆರೇಳು ವರ್ಷದ ಒಬ್ಬ ಮಾರ್ವಾಡಿ ಬಾಲಿಕೆಯೊಂದಿಗೆ ಬಲಾತ್ಕಾರ ಮಾಡಲಿಕ್ಕೆ ಸಿದ್ಧವಾಗ ಹುಡುಗಿಯು ಸಹಿಸಲಾರದೆ ಮೂರ್ಛೆ ಹೊಂದಿದಳು. ಆ ನರಪಿಶಾಚನ ಮೇಲೆ ವ್ಯವಹರಣೆ ನಡೆದು ಆತನಿಗೆ ಎರಡು ವರ್ಷದ ಕಾರಾಗೃಹವೂ ಮುನ್ನೂರು ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಕಲ್ಕತ್ತೆಯ 'ಗೋವಿಂದ ಭವನ'ದ ಹೆಸರು ಈ ಪ್ರಕಾರದ ಲೀಲೆಗಳಿಂದಾಗಿ ದೇಶದಲ್ಲೆಲ್ಲಾ ಪ್ರಸಿದ್ಧವಾಗಿರುವುದಲ್ಲದೆ ಜನರು ಅದನ್ನು ಉದಾಹರಣೆಯಾಗಿ ಕೊಡಲಿಕ್ಕೆ ತೊಡಗಿದ್ದಾರೆ. ಅಲ್ಲಲ್ಲಿ ತಿರುಗಾಡುತ್ತಿರುವ ಸಾಧುಗಳು ಕೂಡಾ ದುರಾಚಾರಿಗಳಾಗಿದ್ದು, ಸಂದರ್ಭ ದೊರೆತಾಗ ಯಾವ ಸ್ತ್ರೀಯರನ್ನಾದರೂ ಕೆಡಿಸಿಬಿಡಲಿಕ್ಕೆ ಹಿಂಜರಿಯುವುದಿಲ್ಲ. ಈ ಜನರು ಹೆಚ್ಚಾಗಿ ಸಂತಾನ ಹೀನರಾದ ಸ್ತ್ರೀಯರನ್ನು ವಂಚಿಸಿ, ಅವರ ಸತೀತ್ವವನ್ನು ನಷ್ಟಗೊಳಿಸುವರು.

ಸಾಧುಗಳಿಗೆ ಪ್ರಧಾನ ಭೂಷಣಗಳಾಗಿರುವ ಸತ್ಯವಾದಿತ್ವ, ಶಾಂತಿ ಪ್ರಿಯತೆಯೇ ಮೊದಲಾದ ಗುಣಗಳು ಈಗ ಅವರಲ್ಲಿ ಲೇಶಮಾತ್ರವೂ ಇರುವುದಿಲ್ಲ. ದೊಡ್ಡ ದೊಡ್ಡ ಮಹಂತರುಗಳು ಹೆಚ್ಚಾಗಿ ಜಮೀನ್ದಾರಿಯ ಮತ್ತು ಲೇವಾದೇವಿಯ ಮೊಕದ್ದಮೆಗಳಲ್ಲಿ ನಿರತರಾಗಿದ್ದು ಅವುಗಳಲ್ಲಿ ಸಫಲತೆಯನ್ನು ಹೊಂದಲಿಕ್ಕಾಗಿ ಲಂಚ ಕೊಡುವುದು, ಸುಳ್ಳು ಸಾಕ್ಷಿ ಹೇಳುವುದು, ಸುಳ್ಳು ಆರೋಪಣೆಗಳನ್ನು ಹೂಡುವುದೇ ಇತ್ಯಾದಿ ಕಾರ್ಯಗಳನ್ನೆಲ್ಲಾ ಮಾಡುತ್ತಾರೆ. ಅವರ ಹತ್ತಿರ ಜಮಾನ್ದಾರರಂತೆ ಏಜಂಟರು, ಮೊಕ್ತೇಸರರು ಮೊದಲಾದ ಉದ್ಯೋಗಸ್ಥರಿರುತ್ತಾರೆ; ಮತ್ತು ಕೃಷಿಕರ ಮೇಲೆ ಇನ್ನಿತರ ಜಮೀನುದಾರರಂತೆಯೇ ಅತ್ಯಾಚಾರ ನಡೆಸುತ್ತಾರೆ. ಪಾರಸ್ಪರಿಕ ಕಲಹಗಳಿಗೂ ಇವರಲ್ಲಿ ಕಡಿಮೆಯಿಲ್ಲ. ಪ್ರಾಚೀನ ಕಾಲದಲ್ಲಿ 'ಕುಂಭಮೇಳ'ದ ಸಮಯ ಪ್ರಥಮ ಸ್ನಾನ ಮಾಡುವುದಕ್ಕೋಸ್ಕರ ಇವರೊಳಗೆ ಪ್ರಚಂಡ ಜಗಳವೆದ್ದು ನೂರಾರು ಹತ್ಯೆಗಳಾಗುತ್ತಿದ್ದುವು. ಬಹುಶಃ ಅದೇ ದಿನಗಳಲ್ಲಿ ಅಖಾಡೆಗಳ ಸೃಷ್ಟಿಯಾಗಿ, ಸಾಧುಗಳು ಆನೆ ಕುದುರೆ ಮತ್ತು ಆಯುಧಗಳನ್ನು ಉಪಯೋಗಿಸಲಿಕ್ಕೆ ತೊಡಗಿದ್ದಿರಬೇಕು. ಇಂಗ್ಲಿಷರ ರಾಜ್ಯವು ಸ್ಥಾಪನೆಯಾದ ನಂತರವೂ ಬಹು ದಿನಗಳ ವರೆಗೆ ಈ ಕಲಹಗಳು ನಡೆಯುತ್ತಲೇ ಇದ್ದುವು. ಇತ್ತೀಚೆಗೆ ಕೆಲವು ವರ್ಷಗಳಿಂದ ಪ್ರತ್ಯೇಕ ಅಖಾಡೆಯ ನಂಬರವನ್ನು ನಿರ್ಧಯಿಸಿ ಸ್ನಾನಕ್ಕೆ ನಿಯಮಗಳನ್ನು ಮಾಡಲಾಗಿದೆ. ಹೀಗಿದ್ದರೂ ಸಾಧುಗಳು ತಮ್ಮೊಳಗೆ ತಲೆಯೊಡೆದುಕೊಳ್ಳುವರೆಂದು ಪೋಲೀಸರ ಹಾಗೂ ಸರಕಾರಿ ಉದ್ಯೋಗಸ್ಥರ ಬಲವಾದ ಬಂದೋಬಸ್ತು ಇರುತ್ತದೆ.

# ನಮ್ಮ ದೇಶದ ಧರ್ಮಜೀವಿಗಳು

**ಧರ್ಮಜೀವಿಗಳು ಸಮಾಜ ಮತ್ತು ದೇಶಹಿತ ದೃಷ್ಟಿಯಿಂದ ದೊಡ್ಡ ಹಾನಿಕಾರಕರಿರುವರು; ಜನರಲ್ಲಿ ಅಂಧವಿಶ್ವಾಸ, ಅಜ್ಞಾನ ಮತ್ತು ಆಲಸ್ಯವನ್ನು ಬೆಳಸುವರು. ಯಾವ ಸಾಧು ಮಹಂತರುಗಳ ಚರಿತ್ರೆಯು ಭ್ರಷ್ಟವಾಗಿದೆಯೋ, ಯಾರು ನೈತಿಕ ದೃಷ್ಟಿಯಿಂದ ಸಾಧಾರಣ ವ್ಯಕ್ತಿಗಳಿಗಿಂತಲೂ ಕನಿಷ್ಠರಾಗಿರುವರೋ ಅಂಥವರನ್ನೇ ಹಿಂದೂ ಸಮಾಜವು ತಮ್ಮ ಪವಿತ್ರ ಗುರುಗಳೆಂದು ಪೂಜಿಸುವುದು ಅದೆಷ್ಟು ಶೋಚನೀಯ! ಇಂತಹ ಸಮಾಜವು ಉನ್ನತಿ ಹೊಂದುವುದಾದರೂ ಹೇಗೆ?**

## ಸುಪ್ರಸಿದ್ಧ ಹಿಂದೀ ಚಾಂದ್ ಪತ್ರಿಕೆಯ ಬೋಧಪರ ಅಗ್ರಲೇಖವೊಂದರ ಅನುವಾದ.

ಅನುವಾದಕ — ಉ ಚೆಂದಪ್ಪ ಮುಂಬಾಯಿ

ಈ ಧರ್ಮಜೀವಿಗಳು ಸಮಾಜ ಮತ್ತು ದೇಶದ ಹಿತದೃಷ್ಟಿಯಿಂದ ದೊಡ್ಡ ಹಾನಿಕಾರಕರಾಗಿರುವರು. ಇವರ ದೆಸೆಯಿಂದ ಹಾನಿಯೆಂತೂ ಇದ್ದೇ ಇರುತ್ತದೆ. ಅದರೊಂದಿಗೆ ಇವರು ಸಮಾಜದಲ್ಲಿ ನಾನಾ ದೋಷ ಮತ್ತು ದುರ್ವ್ಯಸನ ಪ್ರವೃತ್ತಿಯನ್ನುಂಟುಮಾಡುತ್ತಾರೆ. ಜನರಲ್ಲಿ ಆಲಸ್ಯಭಾವವನ್ನು ಹುಟ್ಟಿಸುತ್ತಾರೆ, ಇದರಿಂದ ಅನೇಕರು ಕೆಲಸಮಾಡುವುದನ್ನು ಬಿಟ್ಟು ಭಿಕ್ಷೆಯಿಂದ ಹೊಟ್ಟೆತುಂಬಿಸಿಕೊಳ್ಳುವುದೇ ಉತ್ತಮವೆಂದು ನೆನೆಸುತ್ತಾರೆ. ಇವರ ಕಾರಣ ಅಮಲು ಸೇವನದ ಅಭ್ಯಾಸವು ಹೆಚ್ಚುತ್ತದೆ. ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಪ್ರಾಯಃ ಸಾಧುಗಳ ನಿವಾಸವು ಗಾಂಜಾ ಚರಸರ ಕೇಂದ್ರವಾಗಿರುತ್ತದೆ. ಅಲ್ಲಿಯೇ ಹೊಸಬರನ್ನು ಕೂಡಾ ಈ ದುರ್ವ್ಯಸನದಲ್ಲಿ ಸಿಲುಕಿಸುತ್ತಾರೆ. ಇಂದಿನಿಂದಲ್ಲ, ಎಷ್ಟೋ ಶತಮಾನಗಳಿಂದ ಇವರು ಇದೇ ಪ್ರಕಾರ ದೇಶದ ಹಾನಿಯನ್ನು ಮಾಡುತ್ತಾ ಬಂದಿರುವರು. ಇಂದಿಗೆ ಸುಮಾರು ನಾನ್ನೂರು ವರ್ಷಗಳ ಹಿಂದೆ ಆಗಿಹೋದ ಕಬೀರನು ಈ ಸಾಧುಗಳ ವಿಷಯದಲ್ಲಿ ಬರೆದಿರುವುದನ್ನು ನೋಡುವಾಗ, ಆ ಸಮಯದಲ್ಲಿ ಕೂಡಾ ಇವರ ರೀತಿ-ನೀತಿಗಳು ಪ್ರಾಯಶಃ ಈಗಿನ ಹಾಗೆಯೇ ಇದ್ದುವೆಂದು ಕಂಡುಬರುತ್ತದೆ. ಕಬೀರನು ತನ್ನ 'ರೈಮಿನಿ' ಯೆಂಬ ಗ್ರಂಥದಲ್ಲಿ ಒಂದೆಡೆ ಬರೆದಿರುವುದೇನೆಂದರೆ —

"ನಾನು ನಿಜವಾದ ಯೋಗಿಗಳನ್ನು ಎಂದೂ ಎಲ್ಲಿಯೂ ಈ ವರೆಗೆ ನೋಡಲಿಲ್ಲ. ಈ ಜನರು ತಮ್ಮ ಧರ್ಮವನ್ನು ಪಾಲಿಸದೆ, ಕೇವಲ ವ್ಯರ್ಥವಾಗಿ ಅತ್ತಿತ್ತ ಅಲೆದಾಡುತ್ತಿರುವರು. ಹೇಳಲಿಕ್ಕೇನೋ ಇವರು ದೇವಭಕ್ತರು, ಮತ್ತು ಪ್ರಧಾನ ಗುರುಗಳು, ಆದರೆ ಹಟಭೂಮಿಯು ಇವರ ಯೋಗಸ್ಥಾನವೂ ಮಾಯಾಭಾಂಡವು ಇವರ ದೇವತೆಯೂ ಆಗಿವೆ. ದತ್ತಾತ್ರೇಯನು ಎಂದಾದರೂ ಜನರ ಗೃಹಗಳನ್ನು ನಷ್ಟಗೊಳಿಸಿದ್ದನೇ? ಶುಕದೇವನು ಸಶಸ್ತ್ರ ಸೈನ್ಯವನ್ನು ಕೂಡಿಸಿದ್ದನೇ? ನಾರದ ಮುನಿಯು ಬಂದೂಕು ಹಾರಿಸಿದ್ದನೇ? ವ್ಯಾಸದೇವನು ರಣಕಹಳೆಯನ್ನು ಊದಿದ್ದನೇ? ಯಾರು ಧನುರ್ಧಾರಿಗಳಾಗಿರುವರೋ, ಅವರು ಯಾವ ಪ್ರಕಾರ ಅತಿಥಿಗಳಾಗ ಬಲ್ಲರು? ಯಾರ ಹತ್ತಿರ ಲೋಭವಿದೆಯೋ, ಅವರು ಹೇಗೆ ಸಾಧುಗಳೆನಿಸಿಕೊಂಡಾರು? ಎಂಥಾ ಲಜ್ಜೆಯ ಮಾತು! ಈ ಜನರು ಸ್ವರ್ಣಾಲಂಕಾರಗಳನ್ನು ಧರಿಸುತ್ತಾರೆ. ಕುದುರೆ ಒಂಟೆ ಮೊದಲಾದುವುಗಳನ್ನು ಇಟ್ಟುಕೊಳ್ಳುತ್ತಾರೆ. ಅನೇಕ ಗ್ರಾಮಗಳ ಒಡೆಯರಾಗಿದ್ದು ಧನಿಕರೆನ್ನಿಸಿಕೊಳ್ಳುತ್ತಾರೆ. **ಮುಸಿಬುರುಡೆಯು ಹತ್ತಿರವಿರುವಾಗ ವಸ್ತ್ರವು ಕಾಯಿಯಿಂದ ಕಳೆಯಾಗದೆ ಇದ್ದೀತೇ?"**

ಸ್ವಾಮಿ ದಯಾನಂದ ಸರಸ್ವತಿಯವರು ಕೂಡಾ "ಸತ್ಯಾರ್ಥ-ಪ್ರಕಾಶ"ದಲ್ಲಿ ಇವರ ಕುರಿತು ಕೆಲವು ಕಡೆಗಳಲ್ಲಿ ಇಂತಹ ಸಮ್ಮತಿಯನ್ನೇ ಪ್ರಕಟಿಸಿರುವರಲ್ಲದೆ ಇವರನ್ನು ದೇಶ ಹಾಗೂ ಸಮಾಜಕ್ಕೆ ನಿರರ್ಥಕರೆಂದು ತೋರಿಸಿರುವರು. ಒಂದೆಡೆಯಲ್ಲಿ ಬ್ರಹ್ಮಚಾರಿ ಮತ್ತು ಸನ್ಯಾಸಿಗಳನ್ನು ಉಲ್ಲೇಖಿಸಿ ಅವರು ಹೀಗೆ ಬರೆದಿರುತ್ತಾರೆ —

'ಎಷ್ಟೋ ಜನರು ಜಡೆಗಳನ್ನು ಬೆಳೆಸಿಕೊಂಡು ಹೆಸರಿಗೆ ಮಾತ್ರ ಬ್ರಹ್ಮಚಾರಿಗಳಾಗಿದ್ದಾರೆ. ಇವರು ವಿದ್ಯಾಭ್ಯಾಸವನ್ನು ಪೂರ್ಣವಾಗಿ ಬಿಟ್ಟುಕೊಟ್ಟು ಎಲ್ಲಸಲ್ಲದ ಮಂತ್ರತಂತ್ರ ಮೊದಲಾದವುಗಳಲ್ಲಿ ಮುಳುಗಿಹೋಗಿದ್ದಾರೆ. ಯಾವ ಕಾರಣದಿಂದ ಬ್ರಹ್ಮಚಾರಿಯೆಂಬ ಹೆಸರು ಬರುವುದೋ ಅಂಥಾ ಬ್ರಹ್ಮ ಅಂದರೆ ವೇದಗಳನ್ನು ಕಣ್ಣೆತ್ತಿ ಸಹಾ ನೋಡುವುದಿಲ್ಲ. ಇಂತಹ ಬ್ರಹ್ಮಚಾರಿಗಳು ಆಡಿನ ಕುತ್ತಿಗೆಯಲ್ಲಿರುವ ಮೊಲೆಗಳಂತೆ ಕೇವಲ ನಿರರ್ಥಕರಾಗಿದ್ದಾರೆ. ಮತ್ತು ಯಾವ ಸನ್ಯಾಸಿಗಳು ವಿದ್ಯಾವಿಹೀನರಾಗಿ ದಂಡ ಕಮಂಡಲುಗಳನ್ನು ಹಿಡಿದುಕೊಂಡು ಕೇವಲ ಭಿಕ್ಷೆಗಾಗಿ ಅಲೆಯುತ್ತಿರುವರೋ, ಅಂಥವರಿಂದ ವೇದ ಮಾರ್ಗದ ಉನ್ನತಿಯು ಎಂದೂ ಆಗಲಾರದು. ಅನೇಕರು ಬಾಲ್ಯದಲ್ಲಿಯೇ ಸನ್ಯಾಸವನ್ನು ತೆಗೆದುಕೊಂಡು, ವಿದ್ಯಾಭ್ಯಾಸವನ್ನು ಬಿಟ್ಟು ಸಂಚಾರಿಗಳಾಗಿ ತಿರುಗುತ್ತಾರೆ. ಇಂಥಾ ಬ್ರಹ್ಮಚಾರಿಗಳೂ ಸನ್ಯಾಸಿಗಳೂ ಅಲ್ಲಲ್ಲಿ ಜಲ, ಸ್ಥಳ ಮತ್ತು ಜಡ ವಿಗ್ರಹಗಳನ್ನು ಸಂದರ್ಶಿಸುತ್ತಲೂ ಪೂಜಿಸುತ್ತಲೂ ತಿರುಗುತ್ತಿರುತ್ತಾರೆ. ಇಂಥವರಲ್ಲಿ ಅನೇಕರು ವಿದ್ಯಾವಂತರಾಗಿದ್ದರೂ ಮೌನರಾಗಿರುತ್ತಾರೆ. ಏಕಾಂತ ಪ್ರದೇಶಗಳಲ್ಲಿ ಯಥೇಷ್ಟ ತಿಂದು ಕುಡಿದು ಮಲಗಿಕೊಳ್ಳುತ್ತಾರೆ, ಮತ್ತು ಈರ್ಷಾ-ದ್ವೇಷಗಳಿಗೆ ವಶರಾಗಿ ನಿಂದೆ ಕುಚೇಷ್ಟೆಗಳನ್ನು ಮಾಡುತ್ತಾ ಕಾಲಹರಣ ಮಾಡುತ್ತಾರೆ. ಕಾವಿಬಟ್ಟೆ ಮತ್ತು ದಂಡವನ್ನು ಧರಿಸಿಕೊಂಡ ಮಾತ್ರದಿಂದಲೇ ಇವರು ತಮ್ಮನ್ನು ಕೃತಕೃತ್ಯರೆಂದೂ ಸರ್ವೋತ್ತಮರೆಂದೂ ತಿಳಿಯುತ್ತಾರೆ. ಈ ಕಾರಣಗಳಿಂದ ಇವರು ಯಾವ ಉತ್ತಮ ಕಾರ್ಯಗಳನ್ನೂ ಮಾಡುವುದಿಲ್ಲ."

THE

PANGAL NAYAK BANK

LIMITED.

ESTABLISHED 1920

**Paid up Capital Rs 1,82,100/-**

***Head Office*: UDIPI.**

Branches MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc, are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

**ನವಯುಗದ**
**ಮೂಡಬಿದ್ರೆ ಏಜಂಟರು:**
**ಶ್ರೀ. ಐ. ಚಂದಪ್ಪ ಇಂದ್ರ**
**ಬೆಟಕೇರಿ.**

ಒಂದೇ ತಿಂಗಳಲ್ಲಿ ಇಂಗ್ಲಿಷ್
ಎಂಬ ಇಂಗ್ಲಿಷನ್ನು ಸುಲಭವಾಗಿ ಕಲಿಯುವ ಪುಸ್ತಕ
ಬೇಕಾದರೆ 0-9-0 ಸ್ಟಾಂಪು ಕಳಿಸಿರಿ
**ನವಭಾರತ ಬುಕ್ ಡಿಪ್ರೊ, ಉಡುಪಿ.**

ಈ ಕೆಳಗಿನಂತೆ ಪ್ರಕಟಿಸುವ
ಚಿಕ್ಕ ಜಾಹೀರಾತಿಗೆ
ಇಷ್ಟೇ ಜಾಗಕ್ಕೆ
ಒಂದೇ ಬಾರಿಗೆ 0-8-0
ಹೆಚ್ಚಿನ ವಿವರಗಳಿಗೆ
ಮೆನೇಜರಿಗೆ ಬರೆಯಿರಿ

**ನವಯುಗದ ಪುತ್ತೂರು**
**ಏಜಂಟರು:**
**ಶ್ರೀ. ಎಚ್. ಎಸ್. ಕಾಮತ್**
ಹರಿಹರ ಪ್ರೆಸ್, ಇವರನ್ನು ನಮ್ಮ
ಏಜಂಟರನ್ನಾಗಿ ನೇಮಿಸಲಾಗಿದೆ.
ಮೆನೇಜರ್, ನವಯುಗ.

**ಬೊಂಬಾಯಿಯಲ್ಲಿ**
ಶ್ರೀ ವಿ ಎಸ್. ಶಿಬ್ರೂರ್ಕರ
ದಿ ನೇಶನಲ್ ಕೆನರಾ ನ್ಯೂಸ್
ಏಜನ್ಸಿ, ಫೋರ್ಟ್,
ಇವರಲ್ಲಿ 'ನವಯುಗದ'
ಬಿಡಿಪ್ರತಿಗಳು ದೊರೆಯುತ್ತವೆ.

## ಮನೆ ಅಳಿಯ
ಅಥವಾ
## ಆನಂದ
ಸರಸ ಸಾಮಾಜಿಕ ಕಾದಂಬರಿ
**ಬೆಲೆ 0-8-0.**
**ನವಭಾರತ ಬುಕ್ ಡಿಪ್ರೊ,**
**ಉಡುಪಿ.**

ಹಣ್ಣು ಹಂಪಲುಗಳು. ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ತಾಫರ ಪೋರಿನ ತೋಟ ಹೂ ಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ
**Bihar Nursery,**
**P. O. Bihar**
*Nursery (Darbhanga)* BIHAR

**ಯಾವದೇ ತರದ ವಾಚ್, ಫೌಂಟನ ಪೆನ್, ಆಭರಣ, ಗ್ರಾಮಫೋನ್ ಮೊದಲಾದವುಗಳ ಬ್ಲೋಕ್ ಮಾಡಿಕೊಡುವೆ ಕಡಿಮೆ ಕ್ರಯ.**
**ನವಭಾರತ ಬುಕ್ ಡಿಪ್ರೋ**
**ಉಡುಪಿ.**

ಯಾವ ಸಾಧು ಮಹಂತರುಗಳ ಚರಿತ್ರೆಯು ಈ ರೀತಿ ಭ್ರಷ್ಟವಾಗಿದೆಯೋ ಮತ್ತು ಯಾರು ನೈತಿಕ ದೃಷ್ಟಿಯಿಂದ ಸಾಧಾರಣ ವ್ಯಕ್ತಿಗಳಿಗಿಂತಲೂ ಪತಿತರಾಗಿರುವರೋ, ಅಂಥವರನ್ನೇ ಹಿಂದೂಗಳು ತಮ್ಮ ಗುರುಗಳೆಂದುಕೊಂಡು ಅವರಿಂದ ಮಂತ್ರದೀಕ್ಷೆಯನ್ನು ತೆಗೆದುಕೊಳ್ಳುವುದೂ ಅವರ ಬಳಿಗೆ ತಮ್ಮ ಸ್ತ್ರೀಯರನ್ನು ಕನ್ಯೆಯರನ್ನೂ ಕೂಡ ನಿಸ್ಸಂಕೋಚಭಾವದಿಂದ ಧರ್ಮೋಪದೇಶ ಶ್ರವಣಮಾಡಲಿಕ್ಕೆ ಕಳುಹಿಸಿಕೊಡುವದೂ ಶೋಚನೀಯ ವಿಷಯವಾಗಿದೆ. ಅವರೆಲ್ಲ ಗುರುಗಳು ಎಂತಹ ಹೀನ ಮತ್ತು ಜಘನ್ಯ ಚರಿತ್ರರೆಂಬುದನ್ನೂ, ಅದರ ನನ್ನಾ ನಗರ ಮಾತಂತಿರಲಿ, ಹತ್ತಿರ ಕುಳ್ಳಿರಿಸಿಕೊಳ್ಳಲಿಕ್ಕೆ ಕೂಡಾ ಅವರು ಅರ್ಹರಲ್ಲವೆಂಬುವನ್ನೂ ಇವರು ಒಂದಿಷ್ಟೂ ಕಣ್ತೆರೆದು ನೋಡುವುದಿಲ್ಲ ಯಾವ ಸಮಾಜದಲ್ಲಿ ಈ ಪ್ರಕಾರದ ಗರ್ಹಿತ ಕಾರ್ಯಗಳನ್ನು ಮಾಡುವ ಗುರುಗಳಿರುತ್ತಾರೋ, ಅದರ ಅಧಃಪತನವು ಏಕಾಗಲಾರದು?

'ವೇದಾಂತಸಾರ'ವೆಂಬ ಗ್ರಂಥದ ಲೇಖಕನು ಗುರುವಿನ ಚರ್ಚೆಯನ್ನು ಮಾಡುತ್ತಾ ಬರೆದಿರುವುದೇನೆಂದರೆ –

ಯಾರು ಸ್ವಾಭಾವಿಕವಾಗಿಯೇ ಸಕಲ ಸತ್ಕರ್ಮಗಳನ್ನು ಮಾಡುತ್ತಾರೋ, ಯಾರು ಜ್ಞಾನದ ಖಡ್ಗದಿಂದ ಪಾಪ ರೂಪಿ ವೃಕ್ಷವನ್ನು ಬುಡ ಸಮೇತ ಕಡಿದುಹಾಕಿ, ವಿವೇಕದ ಪ್ರಕಾಶದ ಮೂಲಕ ಪಾಪಕ್ಕೆ ಆಶ್ರಯಕೊಡುವಂಥಾ ಘೋರ ಕಗ್ಗತ್ತಲೆಯನ್ನು ನಷ್ಟಗೊಳಿಸಿರುತ್ತಾರೋ, ಯಾರು ಆತ್ಮಸನ್ಮಾನ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಪ್ರಾಪಂಚಿಕ ವ್ಯವಹಾರವನ್ನು ಮಾಡುತ್ತಾರೋ, ಯಾರು ತನ್ನ ಸಕಲ ಶಿಷ್ಯರಲ್ಲಿ ಪುತ್ರ ಭಾವವನ್ನಿಡುತ್ತಾರೋ, ಯಾರು ತನ್ನ ವರ್ತನೆಯಿಂದ ಶತ್ರು ಮಿತ್ರರ ನಡುವೆ ಯಾವುದೊಂದೂ ಪ್ರಕಾರದ ಭೇದ ಭಾವವನ್ನಿಡದೆ, ಇಬ್ಬರ ಮೇಲೆಯೂ ಸಮಾನ ರೂಪದಿಂದ ಕೃಪಾ ಭಾವವನ್ನು ಪ್ರದರ್ಶಿಸುತ್ತಾರೋ, ಯಾರು ಬೆಳ್ಳಿ ಭಂಗಾರಗಳನ್ನು ಕೆಸ್ಬಿಣದ ಚೂರುಗಳಂತೆ ಕಲ್ಲು ತುಂಡುಗಳಂತೆಯೂ ಕಾಣುತ್ತಾರೋ ಮತ್ತು ಈ ವಸ್ತುಗಳಿಗಿರುವಷ್ಟೇ ಬೆಲೆಯು ಬೆಳ್ಳಿ ಭಂಗಾರಗಳಿಗಿರುವುದೆಂದು ತಿಳಿಯುತ್ತಾರೋ, ಮತ್ತು ಯಾವ ಅಜ್ಞಾನಾಂಧಕಾರದಲ್ಲಿ ಮನುಷ್ಯ ಜಾತಿಯು ಮುಳುಗಿರುವುದೋ, ಅದನ್ನು ದೂರಗೊಳಿಸುವ ಚಿಂತೆಯು ವಿಶೇಷವಾಗಿ ಯಾರಲ್ಲಿರುತ್ತದೋ ಅಂಥಾ ವ್ಯಕ್ತಿಗಳೇ ನಿಜವಾದ ಗುರುಗಳು."

ಈ ಸಮಯದ ಗುರುಗಳು ಈ ಪವಿತ್ರ ಕರ್ತವ್ಯವನ್ನು ಹೇಗೆ ನಿರ್ವಹಿಸುತ್ತಿರುವರೆಂಬುದಕ್ಕೆ ಈ ಕುರಿತು ಓರ್ವ ನಿಷ್ಪಕ್ಷಪಾತಿ ವಿದೇಶೀಯ ಮತ್ತು ಇಬ್ಬರು ಭಾರತೀಯ ವಿದ್ವಾಂಸರ ಸಮ್ಮತಿಯನ್ನು ನೋಡಿರಿ. -

"ಆದರೆ ಈ ಉತ್ತಮ ಶ್ರೇಣಿಯ ಗುರುಗಳು ನಿಶ್ಚಯವಾಗಿಯೂ ಬಹಳ ಕಡಿಮೆ ಕಾಣಬರುತ್ತಾರೆ ಗುರುಗಳ ಪ್ರಭಾವವೂ ವಿಶೇಷವಿರುವುದಿಲ್ಲ, ಯಾಕೆಂದರೆ ಅವರು ತಮ್ಮ ಶಿಷ್ಯರ ಬಳಿಗೆ ವರ್ಷಕ್ಕೊಮ್ಮೆ ಸುತ್ತುತ್ತಾ ತಲುಪುತ್ತಾರೆ. ಎಲ್ಲಾ ವಿಷಯಗಳಲ್ಲಿ ವಿಚಾರಿಸುವಾಗ ಭಾರತ ವರ್ಷದಲ್ಲಿ 'ನಿಜವಾದ ಗುರು'ವನ್ನು ಪಡೆಯುವುದು ಬಹಳ ಕಠಿಣವೆಂದೇ ತೋರುತ್ತದೆ. ಬಾಲಕರಿಗೆ ಮಂತ್ರ ದೀಕ್ಷೆಯನ್ನೂ ಧಾರ್ಮಿಕ ವಿಷಯಗಳಲ್ಲಿ ಸಮ್ಮತಿಯನ್ನೂ ಕೊಡುವ ಅಧಿಕಾಂಶ ಗುರು-ವೃತ್ತಿಯ ಬ್ರಾಹ್ಮಣರು ಅವರ ಕಲ್ಯಾಣದ ಕಡೆಗೆ ವಿಶೇಷ ಗಮನ ಕೊಡುವುದಿಲ್ಲ. ಇದಕ್ಕೆ ವಿಪರೀತವಾಗಿ ಅವರು ತಮ್ಮ ಶಿಷ್ಯರ ಅಜ್ಞಾನದಿಂದ ಲಾಭ ಪಡೆದು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ ಮತ್ತು **ಚರಿತ್ರೆಯ ದೃಷ್ಟಿಯಿಂದಲೂ ಅವರೇನೂ ಶ್ರೇಷ್ಠರಾಗುವುದಿಲ್ಲ**" ('India and its Faiths' by James Bisset Pratt, PH.D)

ಶ್ರೀ ಗೋವಿಂದ ದಾಸರು ಹೀಗೆ ಬರೆದಿರುತ್ತಾರೆ.—"**ಪೌರಾಣಿಕ ಉಪದೇಶಕರೂ ಅಸಂಖ್ಯಾಂತ ಸಾಂಪ್ರದಾಯಿಕ ಸಾಧು ವೈರಾಗಿಗಳೇ ಮೊದಲಾದವರೂ ಪ್ರಾಯಶಃ ಬಹಳ ನೀಚ ಪ್ರಕೃತಿಯ ಮತ್ತು ಉನ್ನತಿ ವಿರೋಧಿಗಳಾದ ವ್ಯಕ್ತಿಗಳಿರುತ್ತಾರೆ. ಅವರು ಜನ ಸಮೂಹದ ಭಾವನೆ ಮತ್ತು ಅಂಧ ವಿಶ್ವಾಸಗಳಿಗೆ ಅನುಕೂಲವಾಗಿ ಮಾತನಾಡಿ ಜನರನ್ನು ವಂಚಿಸುತ್ತಿರುತ್ತಾರೆ.**'

ಇನ್ನೊಬ್ಬ ಹಿಂದೂ ಲೇಖಕನ ಮತವೇನೆಂದರೆ –"ಗುರು ಪೂಜಾರಿಗಳಿಬ್ಬರೂ ಅಜ್ಞಾನ ಅಹಂಕಾರಗಳಲ್ಲಿ ಒಬ್ಬರನ್ನೊಬ್ಬರು ಹಿಮ್ಮೆಟ್ಟಿಸುತ್ತಿರುವರು ಇವರಿಬ್ಬರೂ ವಿಷಯ ಲೋಲುಪರೂ ಸಿಂದ್ಧಾಂತ ಶೂನ್ಯರೂ ಆಗಿರುವರು; ಮತ್ತು ಇವರಲ್ಲಿ ಕಂಡುಬಾರದಂತಹ ದುರ್ಗುಣವಾವುದೂ ಇರುವುದಿಲ್ಲ."

ಪೂಜಾರಿಗಳ ಸಂಬಂಧದಲ್ಲಿ ಉಪರ್ಯುಕ್ತ ವಿದೇಶೀಯ ಲೇಖಕನ ಕಥನವು ಇದಕ್ಕಿಂತಲೂ ಅಧಿಕ ಕಟುವಾಗಿರುತ್ತದೆ ಅವನು ಬರೆಯುವುದೇನೆಂದರೆ,— 'ಬ್ರಾಹ್ಮಣ ಪೂಜಾರಿಗಳು ಭಾರತ ವರ್ಷದಲ್ಲಿ ಅತ್ಯಂತ ಅಪಕೀರ್ತಿಗೆ ಗುರಿಯಾಗಿರುತ್ತಾರೆ ಈ ಜನರ ಕುರಿತು ಸ್ವತಃ 'ಇವರನ್ನು ಬಿಟ್ಟು ನಾನು ಇನ್ನಾರ ಮುಖದಿಂದಲೂ ಒಂದಾದರೂ ಒಳ್ಳೆಯ ಮಾತು ಕೇಳಿದುದು ನನಗೆ ಜ್ಞಾಪಕವಿಲ್ಲ ಬೆನಾರಸಿನಲ್ಲಿ ಇವರು ಬಹಳ ಕೆಟ್ಟ ಶಬ್ದಗಳಿಂದ ಉಲ್ಲೇಖಿಸಲ್ಪಡುತ್ತಾರೆ. ಕೆಲವೊಂದು ಮಂದಿರಗಳಂತೂ ಪೂರ್ಣ ವೇಶ್ಯಾಲಯಗಳಾಗಿರುತ್ತವೆಂದು ಅದೇ ಶಹರಿನ ಭಾರತೀಯ ಸಜ್ಜನರು ನನ್ನೊಡನೆ ಹೇಳಿರುವರು ಈ ಪೂಜಾರಿಗಳು ದುರಾಚಾರಿಗಳೂ ಭ್ರಷ್ಟ ಚರಿತ್ರರೂ ಆಗಿರುವುದು ಮಾತ್ರವಲ್ಲ ಪ್ರಾಯಶಃ ಇವರು ತಮ್ಮಲ್ಲಿ ಪೂರ್ಣ ವಿಶ್ವಾಸವಿಡುವಂಥಾ ಹಿಂದೂ ಸ್ತ್ರೀಯರೊಂದಿಗೆ ಛಲಕಪಟಗಳ ವ್ಯವಹಾರವನ್ನೂ ವಿಶ್ವಾಸ ಘಾತವನ್ನೂ ಮಾಡುತ್ತಾರೆ."

(ಮುಂದುವರಿಯುವುದು)

## ನೋಟೀಸು

ಉಡುಪಿ ತಾಲೂಕು ಮೂಡುತೋನ್ಸೆ ಗ್ರಾಮದಲ್ಲಿರುವ ಹೊಸ ಬಂಟ ಚೆನ್ನಯ್ಯ ಪೂಜಾರಿಯ ಅಳಿಯ ತನ್ನ ಪೂಜಾರಿಯು ಈ ಮೂಲಕ ತಿಳಿಯಪಡಿಸುವದೇನೆಂದ್ರೆ— ನನ್ನ ಮಾವ ಮೇಲೆ ಹೆಸರು ಕಾಣಿಸಿದವರು ತಾರೀಕು 27—8—37 ರ ಲಾಗಾಯ್ತು ತನ್ನ ಹೆಂಡತಿ ಮನೆಯಾದ ಮೂಡುತೋನ್ಸೆ ಗ್ರಾಮದ ಮೂಡುಕುದ್ರಿಗೆ ಹೋದವರು, ಅಲ್ಲಿಯೇ ಕಠಿಣ ಜ್ವರದ ಕಾಯಿಲೆಯಲ್ಲಿ ಬಿದ್ದು, ನಿಲು ವಗ್ಗೆರೆ ಮಾಡದೆ ತಾ. 7 9–37 ರಲ್ಲಿ ಮಧ್ಯಾಹ್ನ ಮೂರು ಘಂಟೆ ಸಮಯ ಸದ್ರಿ ಮನೆಯಲ್ಲಿಯೇ ಸ್ವರ್ಗಸ್ಥರಾಗಿರುತ್ತಾರ ತನ್ನ ಹೆಂಡತಿ ಮಕ್ಕಳು ವ ಪದ್ದು ಪೂಜಾರಿ ವ ಗಿಡ್ಡ ಪೂಜಾರಿ ವ ಕೊರಗ ಪೂಜಾರಿ ವ ಅಂಗರ ಪೂಜಾರಿ ಕೂಡ ಸೇರಿ, ಸದ್ರಿ ನನ್ನ ಮಾವನಿಗೆ ಬೋಧವಿಲ್ಲದ ಸಮಯದಲ್ಲಿ ಸದ್ರಿಯವರ ಎಡ ಹೆಬ್ಬೆಟ್ಟು ಗುರ್ತುಗಳನ್ನು ಖಾಲಿ ಕಾಗದಕ್ಕೆ ಒತ್ತಿಸಿರುತ್ತಾರೆಂತ ತಿಳಿದುಬರುತ್ತದೆ ಸದ್ರಿ ಹೆಬ್ಬೆಟ್ಟು ಗುರ್ತುಗಳನ್ನು ಆಧರಿಸಿ ಮಾಡಬಹುದಾದ ಯಾವತ್ತೂ ದಾಖಲೆಗಳು ಸದ್ರಿ ನಮ್ಮ ಕುಟುಂಬದ ಮೇಲೆ ಜಾರಿ ಯಾ ಸಿಂಧು ಆಗತಕ್ಕವುಗಳಲ್ಲವೆಂತ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುತ್ತದೆ

**ತನ್ನ ಪೂಜಾರಿ ರುಜು**

## ನೋಟೀಸು

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O P. No 57/1937

ಕೃಷ್ಣ ಬಲ್ಲಾಳ್ತಿ ಗೋಪಾಲಕೃಷ್ಣ ಬಲ್ಲಾಳರ ಸೊಸೆ, ಕಾರ್ಕಳ ತಾಲೂಕು ಹೆಬ್ರಿ ಕಸಬಾ ಗ್ರಾಮದ ಬೀಡಿನಲ್ಲಿರುವವಳು } ಅರ್ಜಿದಾರಳು

ಮತ್ತು

1 J ನಾಗಣ್ಣ ಹೆಗ್ಡೆ
2. J ದಾಸಪ್ಪ ಹೆಗ್ಡೆ
ಚಂದಯ್ಯ ಹೆಗ್ಡೆರ ಅಳಿಯಂದಿರು 1ನೆಯವರು ಕಾರ್ಕಳ ತಾಲೂಕು ಎರ್ಲಪಾಡಿ ಗ್ರಾಮದ ಜಾರ್ಕಳ ಎಂಬಲ್ಲಿಯೂ 2ನೆಯವರು ಉಡ್ರಿ ಕಸಬೆಯಲ್ಲಿ ಕೂಡಾ ಇರುತ್ತಾರೆ } ಎದ್ರಿರು.

ಇವರೊಳಗೆ

**ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವುದೇನಂದರೆ—**

ಕಾರ್ಕಳ ತಾಲೂಕು ಯರ್ಲಪಾಡಿ ಗ್ರಾಮದ ಜಾರ್ಕಳ ಎಂಬಲ್ಲಿ ತಾರೀಕು 4–2–'37ರಲ್ಲಿ ಮೃತಪಟ್ಟ ಅರ್ಜಿದಾರಳ ಗಂಡ ರಾಮಣ್ಣ ಹೆಗ್ಡೆರು ಅರ್ಜಿದಾರಳ ಹೆಸರಿಗೆ ರಿಜಿಸ್ತ್ರಿ ಮಾಡಿ ಬರೆದಿಟ್ಟ ವಿಲುನಾಮೆ ಪ್ರಕಾರ ಅವರ ಹಕ್ಕಿನ ಮೇಲ್ಕಂಡ ಕೋರ್ಟ್ O. S. No. 302/1936ನೇ ದಾವೆಯ ಡಿಕ್ರಿ ವಸೂಲು ಪಡೆಯುವರೆ ತನಗೆ ವಾರೀಸ ಸರ್ಟಿಫಿಕೇಟು ಕೊಡಿಸಬೇಕಾಗಿ (ಅರ್ಜಿದಾರಳು) O O. No. 57/1937ನೆ ಅರ್ಜಿಯು ತಾರೀಕು 5-10-37ಕ್ಕೆ ತನಿಖೆಗೆ ಇಟ್ಟಿದೆ

ಆಕ್ಷೇಪವುಳ್ಳವರು ಆ ದಿನ ಬೆಳಗ್ಗೆ 11 ಘಂಟೆಗೆ ಮೇಲ್ಕಂಡ ಕೋರ್ಟ್ ಮುಂದೆ ಬಂದು ಜಾಹೀರು ಮಾಡಿಕೊಳ್ಳಬಹುದು ತಪ್ಪಿದಲ್ಲಿ ಸದ್ರಿ ಅರ್ಜಿಯು ಆವರ ಗೈರ ಹಾಜ್ರು ಸಂಬಂಧ ತೀರ್ಮಾನಿಸಲಾದೀತು

ಮೊಕ್ಕಾಂ ಕಾರ್ಕಳ } **ಎಸ್ ನಂಜಪ್ಪ ಶೆಟ್ಟಿ**
ತಾ 13–9–'37 } ಅರ್ಜಿದಾರಳ ಕಡೆ ವಕೀಲ್

ಸುಸಮಯ! ಹಣ ಸಂಪಾದಿಸಿರಿ!

**ಫೋರ್ಮುಗಳನ್ನು ಕಂಡೆನಿಯೇ ಬಟವಾಡೆಮಾಡುವುದು.**

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚ ಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮೆಂಬರರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

**ಹಿಂದುಸ್ತಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ** ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್
**ಮದರಿಂಡಿಯಾ ಬೆನೆಫಿಟ್ ಕಂಪೆನಿ,**
**ಹಂಪನ ಕಟ್ಟೆ, ಮಂಗಳೂರು.**

# ಕಿಡಿಗಳು —•—

ಬದುಕಿದ್ದ ಈ ವಾರ ಬರುವೆನೆಂದು ಹೇಳಿದ ವೀರ ಆಂದಿವೆನಷ್ಟೆ! "ಇದೇನಪ್ಪಾ, ಇವನಿಗೆ ಬದುಕುವ ವಿಚಾರದಲ್ಲಿ ಇಷ್ಟು ಸಂದೇಹ" ಎಂದು ಯಾರಾದ ರೂ ಪ್ರಶ್ನಿಸಬಹುದು ನಿಜವಾಗಿಯೂ ನನಗೆ ಆ ಕುರಿತು ಯಾವಾಗಲೂ ಸಂದೇಹ ಇದ್ದೇ ಇದೆ 'ನೀರ ಮೇಲಿನ ಗುಳ್ಳೆಯಂದದಿ ಅಳಿದು ಹೋಪ ಬಾಳ' ಎಂದು ಯಾರಿಗೆ ತಿಳಿದಿಲ್ಲ?

x x x

ಅದರಲ್ಲೂ ತನ್ನಿಂದ ಸಾಧ್ಯವಿಲ್ಲವೆಂದು ಪ್ರಸಿದ್ಧ ಡಾಕ್ಟರರೇ ನಿರಾಶೆಪಟ್ಟು ಕೈಬಿಟ್ಟ 'ಕೇಸ'ನ್ನು ಸಾಮಾನ್ಯ ಡಾಕ್ಟರನೊಬ್ಬನು ಗುಣಪಡಿಸ ಬೇಕಾದರೆ ಅವನ ಸಾಮರ್ಥ್ಯದಿಂದಲ್ಲ —ರೋಗಿಗೆ ಅವಸಾನ ಕಾಲ ಬಾರದ್ದರಿಂದ, ಇನ್ನೂ ಆಯುಷ್ಯ ಬಾಕಿ ಇರುವುದರಿಂದ ಈ ರೀತಿಯಾಗಿ ಎಷ್ಟೋ ಜನರು ಬದುಕಿಕೊಂಡಿದ್ದಾರೆ ಆದರೆ ಅವರ ಕೈ, ಕಾಲು, ಬುದ್ಧಿ ಯಾವುದೂ ಗಟ್ಟಿ ಇಲ್ಲದುದನ್ನು ನೋಡಿದಾಗ ಅವರು ಬದುಕದಿರುವುದು ಖಂಡಿತ ಎಂದು ಬೇರೆ ಹೇಳಬೇಕಾಗಿಲ್ಲ

x x x

ನನ್ನ ಅವಸ್ಥೆಯೂ ಅಷ್ಟೆ ನಾನು ಎಷ್ಟೋ ಕಾಲದ ಹಿಂದಿನ ಪ್ರಾಣಿ ನಾನು ಬದುಕಬೇಕು, ನನ್ನ ಕಿಡಿಗಳನ್ನು ಕಾಣಬೇಕು, ಎಂದಿರುವವರು ಅವರವರ ದೇವರಿಗೆ ಹರಕೆ ಹೊರಬೇಕು ನನ್ನ ಕೈಕಾಲಿಗೆ ಬಲಬರುವಂತೆ ಮಾಡಬೇಕು.

x x x

ಶ್ರೀಮತಿ ಕಮಲಾ ದೇವಿಯವರು ಈ ಬಾರಿಯೂ ಮೈಸೂರಿನಲ್ಲಿ ಅವರಿಗೆ ವಾಗ್ಬಂಧನದ ನಿರ್ಬಂಧ ಹಾಕಿದರೆ ಆವರವನ್ನು ಮುರಿಯಲೂ ಬಹುದು ಎಂಬದೊಂದು ವಾರ್ತೆಯಿತ್ತು ಆದರೆ ಆ ನಿರ್ಬಂಧ ಹಾಕಲ್ಪಟ್ಟಾಗ ಅವರೇ ಹೇಳುತ್ತಾರೆ— "ನಾನು ಭಾಷಣಮಾಡಲು ಬಂದವಳಲ್ಲ ಪ್ರಯಾಣದ ಸೌಕರ್ಯಕ್ಕಾಗಿ ಬಳ್ಳಾರಿಗೆ ಹೋಗುವವಳು ಈ ಮಾರ್ಗವಾಗಿ ಬಂದುದು" ಎಂದು ಹಾಗಾದರೆ ಈ ಸುಳ್ಳು ಸುದ್ದಿಗಳು ಎಲ್ಲಿಂದ ಹುಟ್ಟುತ್ತವೆ? ಎಂಬುದು ನನಗೊಂದು ದೊಡ್ಡ ಸಮಸ್ಯೆಯಾಗಿದೆ

x x x

ಉಡುಪಿಯಲ್ಲಿ ಸಾರ್ವಜನಿಕವಾದ ಧರ್ಮಾರ್ಥ ವ್ಯಾಯಾಮ ಶಾಲೆಯ ವ್ಯವಸ್ಥೆಯು ಈ ವರೆಗಿರಲಿಲ್ಲ. ಆದರೆ ಈ ಕೊರತೆಯನ್ನು ದಿವಂಗತ ಹಾಜಿ ಅಬ್ದುಲ್ಲಾ ಸ್ಮಾರಕ ಕಮಿಟಿಯವರು ನಿವಾರಿಸುವಂತಿದೆ ದಿವಂಗತರ ಸ್ಮಾರಕವಾಗಿ ಅಜ್ಜರ ಕಾಡಿನಲ್ಲಿ (ಗಾಂಧಿ ಮೈದಾನು) ಒಂದು ಸಾರ್ವತ್ರಿಕ ವ್ಯಾಯಾಮ ಶಾಲೆಯನ್ನು ರಚಿಸುತ್ತಿದ್ದಾರೆ ಇದರ ಆರಂಭೋತ್ಸವವು ಬೇಗನೇ ಆಗಲಿದೆ

x x x

ಮುಂದಿನ ಜನಾಂಗವಾದ ಇಂದಿನ ಮಕ್ಕಳ ದೇಹದಾರ್ಢ್ಯತೆಗಾಗಿ ಕೈಕೊಂಡ ಈ ತರದ ಮಾದರಿಯ ವ್ಯವಸ್ಥೆಯು ಅಭಿನಂದನೀಯವಿದೆ

ಒಂದು ವಸ್ತುವು ಕೈಯಲ್ಲಿರುವಾಗ ಅದರ ಯೋಗ್ಯತೆಯು ಕೆಲವೇ ಜನರಿಗೆ ತಿಳಿದಿರುತ್ತದೆ ಆದರೆ ವಸ್ತುವು ಕೈತಪ್ಪಿತೆಂದರೆ ಅದರ ಯೋಗ್ಯತೆಯು ಎಲ್ಲರಿಗೂ ತಿಳಿಯುತ್ತದೆ

x x x

ದ ಕ ಜಿಲ್ಲಾ ಬೋರ್ಡು ಚುನಾವಣೆಯು ಸಲ್ಪ ಮುಂದೂಡಲ್ಪಟ್ಟದ್ದರಿಂದ ಕೆಲವರಲ್ಲಿ ಹೊಸತಾಗಿ ಉಂಟಾದ ಕಾಂಗ್ರೆಸ್ ನವಸ್ಫೂರ್ತಿಯೂ ಸ್ವಲ್ಪ ಕಡಿಮೆಯಾಗಹತ್ತಿದೆ ಹೊಸತಾಗಿ ಹೊರಬಂದ ಖದ್ದರ್ ಜುಬ್ಬ 'ಕ್ಯಾಪ್' ಎಲ್ಲಾ ವಿಶ್ರಾಂತಿ ಹೊಂದತೊಡಗಿವೆ

x x x

ನಿಜವಾದ ಕಾಂಗ್ರೆಸ್ ಭಕ್ತರು ನಿಸ್ವಾರ್ಥಬುದ್ಧಿಯಿಂದ ಯಾವ ಸ್ಥಾನಮಾನದ ಆಶೆಯನ್ನೂ ಕನವರಿಸದೆ ಸಾಯುವ ತನಕ ಕೆಲಸವೊಂದನ್ನೇ ಮಾಡುತ್ತಿರಬೇಕೆಂದು ಕೆಲವರ ಹಿತೋಕ್ತಿ ಯಾರ ಸೇವೆಯನ್ನೂ ಮಾಡದೆ, ಕಾಲಕ್ಕೆ ತಕ್ಕ ಕೋಲು ಕಟ್ಟಿ ಮೆರೆದಾಡಿಬಿಡುವುದೇ ಕೆಲವರ ಯುಕ್ತಿ

x x x

ಕೆಲಸ ಮಾಡುವವರಿದ್ದರೆ ಹೇಳುವವರು ಈ ಕಾಲದಲ್ಲಿ ಬೇಕೆನುವಾಗಿಗೆ ಸಿಗದಷ್ಟು ಜನರಿದ್ದಾರೆ ಹಿತೋಕ್ತಿ ಕೊಡುವವರೇ ಆ ಸೇವೆಯನ್ನು ಕೈಕೊಂಡು ಮಾದರಿ ಹಾಕಿ ಕೊಟ್ಟರೆ ಒಳ್ಳೆತಾಗದೇ ಎಂದು ನನ್ನ ಪ್ರಶ್ನೆ

x x x

ಒಬ್ಬರು ಕ್ರಿಮಿದೀಡುಲಿಗಳು ಮುಖಂಡರೆಂದು ಬಿರುದಾಂಕಿತರು ಇವರೊಮ್ಮೆ ತನ್ನ ಮನಸ್ಸಿಗೆ ಒಗ್ಗದ ಇನ್ನೊಬ್ಬ ಮುಖಂಡರನ್ನು ಮನಸ್ಸಿಗೆ ಬಂದಂತೆ 'ಕ್ರಿಟಿಸೈಸ್' ಮಾಡುತ್ತಿದ್ದಾಗ ನಾನು ಅವರನ್ನು ಪ್ರತಿಭಟಿಸಿ ಅವರನ್ನೇ ಎದುರಿಸಿ ಟೀಕಿಸಿದೆ ಆವರಿಗೆ ಬಂತಲ್ಲ ಸಿಟ್ಟು ಕಣ್ಣು ಮೂಗು ಎಲ್ಲಾ ಕೆಂಪಾಯಿತು ಕೈ ಬಾಯಿಗೆಲ್ಲಾ ಕೆಲಸವಾಯಿತು ಆದರೆ ಇದಕ್ಕೆಲ್ಲಾ ನಾನು ಸೊಪ್ಪುಹಾಕುವವನೇ? ಮತ್ತೂ ಆವರನ್ನು ಒರಗಲ್ಲಿಗೆ ಹಚ್ಚಿ ತಿಕ್ಕಿದೆ ಮಾತನಾಡಲಾರದೆ ಚಡಪಡಿಸುತ್ತ ಹೋಗಿಬಿಟ್ಟರವರು ಹೋದವರೇ ನನ್ನ ಕುರಿತಾಗಿ ನನ್ನಪ್ಪ ಜಮದಗ್ನಿಗೆ ಒಂದು ರಿಪೋರ್ಟು ಬರೆದರು.

x x x

ರಿಪೋರ್ಟಿನಲ್ಲಿ ನನ್ನ ವರ್ತನೆಯನ್ನು ಖಂಡಿಸಿತ್ತು ಅಪ್ಪ ವಿಚಾರಿಸಿದಾಗ ನಾನು 'ಸ್ಟೇಟ್‌ಮೆಂಟ್' ಕೊಟ್ಟ ಆಗ ಅವನು ಈ ಮುಕ್ಕಳಿಗೆಲ್ಲಾ ಬೇರೆ ವ್ಯಾಪ್ತಿ ಇಲ್ಲ ಅವರು ಮಾತ್ರ ಇನ್ನೊಬ್ಬರನ್ನು ಟೀಕಿಸಬಹುದು. ಅದು ಅವರ ಮೂಲ ಹಕ್ಕು ಆದರೆ ಅವರನ್ನು, ಅವರೇನು ಮಾಡಿದರೂ ಇಂದ್ರ ಚಂದ್ರರೆಂದು ತಲೆಮೇಲೆ ಹೊತ್ತುಕೊಳ್ಳಬೇಕು' ಎಂದು ಜಜ್‌ಮೆಂಟ್ ಕೊಟ್ಟು ರಿಪೋರ್ಟನ್ನು ಕಸದ ಬುಟ್ಟಿಗೆಸೆದ ಪ್ಪ! ಪ್ಪ!! ಪ್ಪ!!

x x x

ಉಳಿದ ವಿಚಾರ ಮುಂದಿನವಾರ

"ಪರಶುರಾಮ"

ಮುಲ್ಲರ್ ಪೇಟನ್ ಬ್ರದರ್ಸ್
91, ಚಿಕ್ಕಪೇಟೆ - ಬೆಂಗಳೂರು ಸಿಟಿ.
ಮಕ್ಕಳ ಪ್ಲೀಹ ಮತ್ತು ಯಕೃತ್ ರೋಗಗಳಿಗೆ ಉತ್ತಮ ಔಷಧ
All kinds of Patent Medicines Available at
MULLER PATEN BROS
91 Chickpet Bangalore
ಕುಮಾರೇಶ
ಬಾಟ್ಲಿ ಒಕ್ಕೆ ೦-೧೪-೦
ನಮ್ಮಲ್ಲಿ ಎಲ್ಲಾ ತರದ ಇಂಗ್ಲಿಷ್ ಮತ್ತು ಪೇಟೆಂಟ್ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ

150 ವರ್ಷಗಳ ಅನುಭವ
ಖಾತ್ರಿಗುಣವನ್ನೀಯುವ ಸ್ವದೇಶೀ ದಿವ್ಯೌಷಧ
ಬಾಣಂತಿಯರ ಸೌಖ್ಯಕ್ಕೆ ಅಮೃತತುಲ್ಯವಾಗಿ ಸಹಸ್ರಾರು ಸ್ತ್ರೀಯರ ಪ್ರಾಣವನ್ನುಳಿಸಿದ
"ಪ್ರಸೂತ ಸ್ತ್ರೀ ಸಂರಕ್ಷಿಣಿ"
ಎಂಬ
ಸಂಜೀವ ಮಾತ್ರೆಗಳು
ಒಮ್ಮೆ ಉಪಯೋಗಿಸಿ ನೋಡಿದಲ್ಲಿ ಇದರ ಶಕ್ತಿಯು ಮನದಟ್ಟಾಗುವದು.
ನೂರು ಮಾತ್ರೆಗಳಿಗೆ ರೂ 4 ಮಾತ್ರ.
ಹೆಚ್ಚಿನ ಮಾಹಿತಿಗಳಿಗೆ ಗರ್ಭಿಣಿ ಹಾಗೂ ಪ್ರಸೂತ ಸ್ತ್ರೀಯರ ರೋಗಗಳ ಸ್ಪೆಶಲಿಸ್ಟರಾದ "ವಾರಂಬಳ್ಳಿ ಬ್ರದರ್ಸ್, ಆಯುರ್ವೇದಾಚಾರ್ಯರು ಬ್ರಹ್ಮಾವರ, ದ ಕನ್ನಡಾ" ಇವರಿಗೆ ಬರೆಯಿರಿ

ನಮ್ಮ ಪುಸ್ತಕ
ಸರ್ವರಿಗೂ ಬೇಕಾದ ಸಚಿತ್ರ ಮಾಸಪತ್ರಿಕೆ.
ಸಾಮಾನ್ಯ ಪ್ರತಿ-ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಒಂದೇ ರೂಪಾಯಿ
(ಮಕ್ಕಳಿಗ ಪದ್ಯಗಳು ಸಚಿತ್ರ ಕಥೆಗಳು—ವರ್ಣಮಾಲೆ, ಚಿತ್ರಕಲೆ, ಚಿತ್ರಲಿಪಿ, ವರ್ಣಚಿತ್ರ, ಮೃಗ, ಪಕ್ಷಿ ಇತ್ಯಾದಿ ತಾಯಂದಿರಿಗೆ ಉಪಾಧ್ಯಾಯರಿಗೆ ಎಂದು ಬರೆದ ಲೇಖನಗಳ ಒಟ್ಟು ರಾಯಲ್ ೩೬ ಪುಟಗಳು, ೪೦ ಪೌಂಡ್ ಕಾಗದ.)
ಭಂಡಾರ ಪ್ರತಿ-ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಎರಡೇ ರೂಪಾಯಿ
(ವಿವರವೆಲ್ಲ ಮೇಲಿನಂತೆ, ರಾಯಲ್ ೬೦ ಪೌಂಡ್ ಕಾಗದ)
ವಿಶೇಷ ಪ್ರತಿ-ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಮೂರೇ ರೂಪಾಯಿ.
(ಸಾಮಾನ್ಯ ಪ್ರತಿಯ ಜೊತೆಗೆ ವಿಜ್ಞಾನ, ಸಾಹಿತ್ಯ, ಚರಿತ್ರೆ, ಧರ್ಮ, ಮೊದಲಾದ ಇತರ ಸಮುಕ್ತ ವಿಷಯಗಳ ಮೇಲಿನ ಲೇಖನಗಳು ಒಟ್ಟು ರಾಯಲ್ ೪೦ ಪುಟಗಳು, ೫೦ ಪೌಂಡ್ ಕಾಗದ)
ಮೊದಲು ತರಿಸಿ ನೋಡಿ
ಶಂಕರಪುರ, ಬೆಂಗಳೂರು ಸಂಪಾದಕ, ದೇವುಡು

ಬಲ್ಲಿರಾ?
ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅದ್ಭುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?
ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.
ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ
ಇವರಲ್ಲಿ—
ಗುಡಪಿಪ್ಪಲಿ (ಲೀವರ್ ರೋಗಕ್ಕೆ)
ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ)
ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)
ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.
ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ಪ್ರಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.
ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ

# SUSHEELA & CO., KOLLEGAL. (S. INDIA)

# 1000 ರೂಪಾಯಿಗಳ ಬಹುಮಾನ.

ನಂಬರು 2

ಈ ಸ್ಪರ್ಧೆಯ ಸರಿಯಾದ ಮೂರು ಉತ್ತರಗಳನ್ನು ಸೀಲ್ ಮಾಡಿದ ಕವರಿನಲ್ಲಿ ಇಲ್ಲಿಯ 'ಶ್ರೀನಿವಾಸ ಪ್ರೆಸ್' ಆಫೀಸಿನಲ್ಲಿ ಡಿಪಾಜಿಟ್ ಮಾಡಲ್ಪಟ್ಟಿರುತ್ತೆ.

**ಪ್ರತಿ ಎರಡು ಕೂಪರ್ಗಳಿಗೂ ಒಂದು ಕೂಪರ್ ಉಚಿತ.**

**ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ 18—10—37** **ಫಲಿತಾಂಶವನ್ನು ಪ್ರಕಟಿಸುವ ದಿನ 22—10—37.**

**ಮೂರು ಕೂಪರ್ಗಳೂ ಸರಿಯಾಗಿ ಕಳುಹಿಸಿದವರಿಗೆ 500 ರೂಪಾಯಿಗಳು**

**ಒಂದು ಕೂಪರ್ ತಪ್ಪುಳ್ಳವರಿಗೆ 200 ರೂಪಾಯಿಗಳು** **ಎರಡು ಕೂಪರ್ ತಪ್ಪುಳ್ಳವರಿಗೆ 100 ರೂಪಾಯಿಗಳು.**

**ಇತರ ಬಹುಮಾನಗಳು.**

**ಮೂರು ಕೂಪರ್ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ 125 ರೂಪಾಯಿಗಳು** **ಹೆಚ್ಚಾಗಿ ಕೂಪರ್ಗಳು ಕಳುಹಿಸಿದವರಿಗೆ 75 ರೂಪಾಯಿಗಳು**

| | |
|---|---|
| 26 | **ಸುಶೀಲ ಅಂಡ್ ಕೋ., ಕೊಳ್ಳೇಗಾಲ.**<br>**ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ**<br>ಹೆಸರು___<br>ವಿಳಾಸ___<br>ಪೋಸ್ಟಲ್ ಮಣಿ ಆರ್ಡರ್ ನಂಬರು___<br>ಸ್ಟಾಂಪುಗಳು ___ ತಾರೀಖು___1937 |

ಉತ್ತರಗಳನ್ನು ಕಳುಹಿಸುವ ಕ್ರಮ.—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡಲಾಗಿ, ಮೂಲೆಗಳಿಂದ 78 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಬೇರೆ ಚದುರದಲ್ಲಿ ಉಪಯೋಗಿಸದೆ ಶಾಯಿಯಲ್ಲಿ ಬರೆದು ಕಳುಹಿಸಬೇಕು

**ನಿಬಂಧನೆಗಳು.**

ಪ್ರವೇಶ ಧನ ಕೂಪನ್‌ಗೆ 0—೯—0 ಆಣೆ ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲೀ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬಹುದು. ಉತ್ತರಗಳು 18-10-37ರೊಳಗೆ ನಮ್ಮ ಕೈ ಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಸು ಮಾಡಲಾಗುವುದಿಲ್ಲ ಮತ್ತು ಯಾವ ಪತ್ರ ವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಒಂದಲ್ಲಿ ಬಹುಮಾನಗಳನ್ನ, ಸಮವಾಗಿ ಹಂಚಲಾಗುವುದು. ಮೆನೇಜರ ತೀರ್ಮಾನವೇ ಕಡೇ ತೀರ್ಮಾನ. ತಮ್ಮ ವಿಳಾಸದೊಡನೆ 0—1—0 ಆಣೆ ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಷರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು

ಮ್ಯಾನೇಜರ್ **ಸುಶೀಲ ಅಂಡ್ ಕೋ., ಕೊಳ್ಳೇಗಾಲ.**

# ಬ್ರೇಕ್ ಪಿಲ್ಲು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ ಮತ್ತು ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನುಂಟು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು **೬೦ ಮಾತ್ರೆಗಳು ರೂ. ೫—೦—೧**

**೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

**ಡಾ. ಎ. ಎಸ್. ಮೂರ್ತಿ,**

**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**

# ಸುವರ್ಣ ತಾಯಿತಿ! ಯಥಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

# ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.

ಪರೀಕ್ಷಿಸಲಪೇಕ್ಷಿಸುವವರು

**"ಯೋಗೀಶ್ವರರ ಶಕ್ತಿಸಾಹಸ"**

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

**ಪತ್ತೆ.—ಪಂಡಿತ್ ಎ. ವಿ. ಆರಮುನ್**

**ಚಿಕಾಕೋಲ್**

**ಹೊಸ ಪುಸ್ತಕ!** **ಈಗಲೇ ಪ್ರಿಂಟಾಗಿದೆ !!**

# ಸ್ತ್ರೀ ದಾಂಪತ್ಯರಹಸ್ಯ ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು, ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿ ನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

**ಕ್ರಯ: ೩೦ ಫೋಟೋಗಳ ಸಹಿತ ಇರುವ ಪುಸ್ತಕ ರೂ 1—0—0**

# SELF ENGLISH STUDY ಸೆಲ್ಫ್ ಇಂಗ್ಲಿಷ್ ಸ್ಟಡಿ

**ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ.**

ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೮೪ ಪೇಜಿಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ

**ಕ್ರಯ: ಪುಸ್ತಕ ೧ಕ್ಕೆ ರೂ. ೩. ವಿ. ಪಿ. ಖರ್ಚು ರೂ. ೦-೧೦-೦**

**C. K. HEROJEE & CO.,**

**No 12, Nallanna Mudaly Street, Sowcarpet, MADRAS**

**ಸಿ. ಕೆ. ಹೆರೋಜ್ ಅಂಡ್ ಕೊ.,**

೧೨ ನಲ್ಲಣ್ಣ ಮೊದಲಿ ಬೀದಿ, ಸಾಹುಕಾರಪೇಟೆ, ಮದರಾಸ್

# ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ ಬೋರ್ಡು ಪರಿಷತ್ತು.

## ಎಲ್ಲಾ ಪಂಚಾಯತ ಬೋರ್ಡು ಪ್ರೆಸಿಡೆಂಟರುಗಳಲ್ಲಿ ವಿನಂತಿ

o•o

ಮಹನೀಯರೇ,

ಈಗ್ಗೆ ಕೆಲವು ವರ್ಷಗಳ ಹಿಂದೆ ಪುತ್ತೂರು ತಾಲೋಕಿನ ಪಂಚಾಯತ ಬೋರ್ಡುಗಳ ಪರಿಷತ್ತು ವರ್ಷಕ್ಕೊಮ್ಮೆ ನಡೆಯುತ್ತಿತ್ತು. ಅಂತಾ ಪರಿಷತ್ತುಗಳಿಂದ ವಿಶೇಷ ಫಲ ದೊರೆತಿದೆಯೆಂದು ಕಂಡು ಬಂದಿದೆ ಆದರಂತೆಯೇ ಈ ವರ್ಷವೂ ಪುತ್ತೂರಿನಲ್ಲಿ ಬರುವ ಅಕ್ಟೋಬರ ತಿಂಗಳ ಮೊದಲನೆ ವಾರದಲ್ಲಿ (ಬಹುಶಃ ತಾ 5 10 37 ರಲ್ಲಿ) ಈ ಜಿಲ್ಲೆಯ ಎಲ್ಲಾ ಪಂಚಾಯತ ಬೋರ್ಡುಗಳ ಪರಿಷತ್ತನ್ನು ಜರಗಿಸಬೇಕೆಂದು ಕೆಲವು ಪಂಚಾಯತ ಬೋರ್ಡುಗಳ ಪ್ರೆಸಿಡೆಂಟರುಗಳ ಅಭಿಪ್ರಾಯ ಪಡುತ್ತಾರೆ ಸದ್ರಿ ಪರಿಷತ್ತಿಗೆ ಮದ್ರಾಸು ಸರಕಾರದ ಈಗಿನ ಮಂತ್ರಿಗಳ ಪೈಕಿ ಒಬ್ಬರನ್ನು ಅಧ್ಯಕ್ಷರಾಗಲು ಕೇಳಿಕೊಳ್ಳುವುದೆಂದು ನಿಶ್ಚಯಿಸಲಾಗಿದೆ ಅಕ್ಟೋಬರ್ ತಿಂಗಳಿನಲ್ಲಿ ಪುತ್ತೂರಿಗೆ ಒಬ್ಬಿಬ್ಬರು ಮಂತ್ರಿಗಳು ಬರುವ ಸಂಭವವಿರುವುದರಿಂದ, ಪರಿಷತ್ತು ಪುತ್ತೂರಿನಲ್ಲಿ, ಮತ್ತು ಅಕ್ಟೋಬರ್ ತಿಂಗಳ ಮೊದಲನೆಯ ವಾರದಲ್ಲಿ, ಎಂದು ಈಗಲೇ ನಿಶ್ಚಯಿಸಲಾಗಿದೆ ಈ ರೀತಿ ಮುಂದಾಗಿ ನಿಶ್ಚಯಿಸಿದ ವಿಷಯದಲ್ಲಿ ದಯಮಾಡಿ ಕ್ಷಮಿಸಬೇಕು

ಹಿಂದುಸ್ಥಾನದ ಜನಗಳ ಮಹಾ ಸಂಸ್ಥೆಯಾದ ಕಾಂಗ್ರೆಸ್ಸು ತನ್ನ ಜವಾಬ್ದಾರಿಯನ್ನು ಹೊತ್ತು, ಅದರ ವಿಶಾಲವಾದ ಕ್ಷೇತ್ರದಲ್ಲಿ ಅಂತಾ ಜವಾಬ್ದಾರಿಯನ್ನು ನಡೆಸಬಲ್ಲುದೆಂದು ವ್ಯಕ್ತಪಡಿಸುತ್ತಿರುವ ಪ್ರಸ್ತುತದ ಸಂದರ್ಭದಲ್ಲಿ, ಈ ನಮ್ಮ ಚಿಕ್ಕ ಸಂಸ್ಥೆಗಳೂ ಸಹ ಅವುಗಳ ಚಿಕ್ಕ ಕಾರ್ಯಕ್ಷೇತ್ರದಲ್ಲಿ ತಮ್ಮ ಜವಾಬ್ದಾರಿಕೆಯನ್ನು ವಹಿಸಿಕೊಂಡು, ತಮ್ಮ ಚಟುವಟಿಕೆಗಳನ್ನು ಹೆಚ್ಚಿಸಿ ಮುಂದೊತ್ತಬೇಕು ಬೋರ್ಡುಗಳಿಗೆ ಬೇಕಾದ ಸರಕಾರಿ ಸಹಾಯ, ಜನಗಳ ಸಹಾಯ, ಇತ್ಯಾದಿ ಮತ್ತು ನಾವೇ ಪಡೆಯತಕ್ಕ ಅನುಭವ, ಈ ಎಲ್ಲಾ ವಿಷಯಕ್ಕೂ ಪರಿಷತ್ತು ಒಂದು ಉತ್ತಮವಾದ ಸಾಧನವಾಗಿರುವುದು ಆದ್ದರಿಂದ ಎಲ್ಲಾ ಪಂಚಾಯತ ಬೋರ್ಡುಗಳೂ ತಂತಮ್ಮ ಪ್ರತಿನಿಧಿಗಳನ್ನು ದಯಮಾಡಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗಿದೆ ಈ ಪತ್ರವನ್ನು ಓದಿದವರು ತಮ್ಮ ನೆರೆಕೆರೆಯ ಪಂಚಾಯತ ಬೋರ್ಡುಗಳಿಗೆ ದಯಮಾಡಿ ಇದೇ ವಿಷಯವನ್ನು ತಿಳಿಸಿ ಪ್ರಚುರಪಡಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಈ ಪರಿಷತ್ತು ಯಶಸ್ವಿಯಾಗಿ ಜರಗಲು, ಆಯಾಯ ಕಾಲದಲ್ಲಿ ತಕ್ಕ ಸಲಹೆಗಳನ್ನು ಕೊಡಲು ಮ. ರಾ ರಾ ಯಂ ಶಿವರಾಯರವರು ದಯವಿಟ್ಟು ಒಪ್ಪಿರುತ್ತಾರೆ ಅದರಂತೆಯೇ ಈ ಪರಿಷತ್ತಿನಲ್ಲಿ ತಮ್ಮ ಸಹಾಯವನ್ನು ಕೊಡಲು ಎಲ್ಲಾ ಪಂಚಾಯತ ಆಫೀಸರವರು ಒಪ್ಪಿರುತ್ತಾರೆ ಪರಿಷತ್ತಿನ ಕೆಲವು ಕ್ರಮಗಳೂ, ಏರ್ಪಾಡುಗಳೂ, ಸಾಧಾರಣವಾಗಿ ಈ ಕೆಳಗಿನಂತೆ ಇರಬೇಕೆಂದು ನಿಶ್ಚಯಿಸಲಾಗಿದೆ

I

1 ಜರಗುವ ಸ್ಥಳ ಪುತ್ತೂರು, ದಿನ — ಬರುವ ಅಕ್ಟೋಬರ್ ತಿಂಗಳಿನ ಮೊದಲನೇ ವಾರದಲ್ಲಿ (ಬಹುಶಃ ತಾ. 5) ಇನ್ನು ಮುಂದೆ ಆಲೋಚಿಸಿ ತಿಳಿಸುವ ದಿನ, ಸಮಯ — ಆಲೋಚಿಸಿ ತಿಳಿಸಲಾಗುತ್ತದೆ

2. ಪರಿಷತ್ತಿಗೆ ಪ್ರತಿನಿಧಿಗಳು ಹೋಗಿ ಬರುವ—ಯಾ—ಪರಿಷದ ಕಾಲದಲ್ಲಿ ಇರುವ—ಇತ್ಯಾದಿ ಎಲ್ಲಾ ಖರ್ಚುಗಳನ್ನೂ ಆಯಾಯ ಪ್ರತಿನಿಧಿಗಳು ತಮ್ಮ ಸ್ವಂತವಾಗಿ ವಹಿಸಿಕೊಳ್ಳುವುದು ಅದವಾ, ವಹಿಸಿಕೊಳ್ಳಬೇಕು—ಎಂದು ಎಲ್ಲರ ಅಭಿಪ್ರಾಯವಿದೆ ಅಂದರೆ, ಯಾವ ಬೋರ್ಡುಗಳ ಲೆಕ್ಕಕ್ಕೂ ಬರೆಯುವುದು ಸರಿಯಲ್ಲವೆಂಬ ಅಭಿಪ್ರಾಯ

3 ಪರಿಷತ್ತಿಗೆ ಪ್ರತಿ ಬೋರ್ಡಿನ ಎಲ್ಲಾ ಮೆಂಬರುಗಳೂ ಮುಖ್ಯವಾಗಿ ಅಧ್ಯಕ್ಷ ಉಪಾಧ್ಯಕ್ಷರುಗಳೂ ಕೆಂಪಲಿಸಲಾಗಿದೆ.

4 ಪರಿಷತ್ತಿನ ಸಮಯದಲ್ಲಿ ಪುತ್ತೂರಿನ ದಸರಾ ಮಹೋತ್ಸವವು ಜರಗುವುದರಿಂದಲೂ, ಸ್ಥಳವು ಒಂದು ಪಟ್ಟಣವಾದ್ದರಿಂದಲೂ ಬರುವವರಿಗೆ ವಸತಿ, ಊಟೋಪಚಾರಗಳಿಗೆ ಅನಾನುಕೂಲವಾಗದೆ, ಸಮಯವನ್ನು ಯೋಗ್ಯ ರೀತಿಯಲ್ಲಿ ಕಳೆಯಲು ಎಡೆಯುಂಟು

II

ಎಲ್ಲಾ ಪಂಚಾಯತ ಬೋರ್ಡುಗಳೂ ಈ ಕೆಳಗಿನ ಅನುಭವಗಳನ್ನು ದಯಮಾಡಿ ಕೊಡಬೇಕಾಗಿ ಕೇಳಿಕೊಳ್ಳೋಣಾಗಿದೆ

1 ಪರಿಷತ್ತಿಗೆ ಬರುವ ಪ್ರತಿನಿಧಿಗಳ ಸಂಖ್ಯೆ, ಹೆಸರು ಬೋರ್ಡಿನ ಸಂಪೂರ್ಣ ವಿಳಾಸ

2. ಪರಿಷತ್ತು ಜರಗೋಣದರ ಕ್ರಮ, ಏರ್ಪಾಡುಗಳ ಕುರಿತಾದ ಸೂಚನೆಗಳು

3 ಪರಿಷತ್ತಿನಲ್ಲಿ ತಾವು ಚರ್ಚಿಸಲಿರುವ, ಯಾ, ಠರಾಯಿಸಲಿರುವ ವಿಷಯಗಳ ತಾತ್ಪರ್ಯ, ಅದವಾ, ಸಂಪೂರ್ಣವಾಗಿ ಪೂರೈಸಲ್ಪಟ್ಟಿರುವ ಒಕ್ಕಣೆ.

III

1 ಎಲ್ಲಾ ಪತ್ರ ವ್ಯವಹಾರಗಳನ್ನು ತಾರೀಕು 21-9-1937ರ ಒಳಗಾಗಿ ಇಲ್ಲಿಗ ತಲುಪುವಷ್ಟು ಜಾಗ್ರತೆಯಿಂದ ಕಳುಹಿಸಬೇಕು.

2 ಅಂತಾ ಪತ್ರಗಳು ಬಂದ ನಂತರ ತಾರೀಕು _9-9-1937ರ ಒಳಗೆ ಇದೇ ವಿಷಯವನ್ನು ಆಖೈರಾಗಿ ವಿವರಿಸಿ ತಿಳಿಸುವ ಇನ್ನೊಂದು ಪತ್ರ ಬರೆಯಲಾಗುವುದು

3 ಪತ್ರಗಳನ್ನು ಈ ಕೆಳಗಿನ ವಿಳಾಸಕ್ಕೆ ದಯಮಾಡಿ ಕಳುಹಿಸಬೇಕು —ಎ ಪಿ ಸುಬ್ಬಯ್ಯನವರು C/o ಮ ರಾ ರಾ ಯಂ ಸದಾಶಿವರಾಯರು, ವಕೀಲ್, ಪುತ್ತೂರು, (Sd) ಎ ಪಿ ಸುಬ್ಬಯ್ಯ, ಪ್ರೆಸಿಡೆಂಟ್, ಆರ್ಯಾಪು ಪಂಚಾಯತ ಬೋರ್ಡು (ಕೆಲವು ಪಂಚಾಯತ ಪ್ರೆಸಿಡೆಂಟರುಗಳ ಪರವಾಗಿ)

ಪುತ್ತೂರು, ತಾ 11-9-1937


# ಶ್ರೀ ರಾಮಕೃಷ್ಣ ಥಿಯೇಟರ್

## ಉಡುಪಿ

### ಮಳೆಗಾಲದ ನಂತರ ಉತ್ಕೃಷ್ಟ ವಿನೋದ.

ಇದೀಗ ಮಳೆ ಮುಗಿದು ಹೊಲಗಳಲ್ಲಿ ಪೈರುಪಚ್ಚೆ ಬೆಳೆದು ಜನರೆಲ್ಲಾ ವಿರಾಮವಡೆದು ಆನಂದಿಸುವ ಹಬ್ಬ ಹುಣ್ಣಿಮೆಗಳ ಸಮಯ.

ಈ ಆನಂದೋತ್ಸವದ ಸಂದರ್ಭದಲ್ಲಿ ಜನರೆಲ್ಲಾ ಉತ್ತಮ ಚಿತ್ರಗಳನ್ನು ಕಂಡು ವಿನೋದಿಸಲಿಚ್ಛಿಸುವರು

**ಜನತೆಗೆ ಅತ್ಯುತ್ತಮ ವಿನೋದವನ್ನಿತ್ತು, ಅವರ ಹಣಕ್ಕೆ ಅತ್ಯುತ್ತಮ ಬೆಲೆದೊರೆಯುವಂತೆ ಈ ತಿಂಗಳಲ್ಲಿ ನಾವು ಈ ಕೆಳಗಿನ ಉತ್ತಮ ಚಿತ್ರಗಳನ್ನು ಪ್ರದರ್ಶಿಸಲಿರುವೆವು.**

**ಲವಕುಶ** (ತೆಲುಗು) **ತಾ. 16-9-37ರಿಂದ**

**ಸಾವಿತ್ರಿ** (ಮರಾಠಿ) **ತಾ 23-9-37ರಿಂದ**

**ಸಂತ ತುಕಾರಾಮ್** **ತಾ. 30—9—37ರಿಂದ**

ನಿಮ್ಮ ವಿರಾಮದ ಉತ್ತಮಕಾಲಕ್ಕೆ ಸರಿಯಾಗಿ ಬಂದ ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಶ್ರೀ ರಾಮಕೃಷ್ಣ ಥಿಯೇಟರ್.



**HAVE A SOUND SLEEP**

By using our Indian made Mosquito curtains highly approved by persons of every rank for their strong netting durability and beautiful finishing

Purchaser of three will get one curtain 6 x 4 x 4 free Packing Free

POSTAGE EXTRA

**Prabhat Trading Co,**
12 Sikderpara Lane Barabazaar
CALCUTTA



**೧೮೭೮ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು**

# ಧಾತುಪುಷ್ಟಿ ಲೇಹ

**(ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ)**

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಉರಿಯುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ ಇತ್ಯಾದಿಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಇದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ, ದೇಹಪುಷ್ಟಿಯನ್ನೂ ಉಂಟುಮಾಡುವುದು ಬಾಟ್ಲಿ ೧ರ ರೂ ೩॥

**ಬಾಲಗ್ರಹ ಗುಟಿಕೆ**—ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಜ್ವರ, ಮಲಬದ್ಧತೆ ಎನಿವುಗಳಿಗೆ ಗುರು ಗುರು ಶಿ ಇಂಗಳ ಮೇಲೆ ದಿವ್ಯ ಔಷಧಿ ಬಾಟ್ಲಿ ೧ರ ರೂ ೦-೧೦-೦

**ಕಸ್ತೂರಿ ಮಿಶ್ರಣ ವಶಮೂಲ**—ಇದು ಪ್ರಸವಾಯಾಸವನ್ನು ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವದು ನಂತರ ಜ್ವರಗಳು ಅಪಾಯಕೊಡದಂತೆ ಮಾಡುವದು ಜೀರ್ಣ, ಹಸಿವೆ, ಮಲವಿಸರ್ಜನೆ ಕ್ರಮದಂತೆ ನಡೆಯುವದು ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವದಲ್ಲದೆ ಶಿಶುವಿಗೆ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವದು ಬಾಟ್ಲಿ ೧ರ ರೂ ೧-೬-೦

**ಮಲೇರಿಯಾ ನಿವಾರಿಣಿ**—ದಿನಬಿಟ್ಟು ಬರುವ ಜ್ವರ, ಏಕಾಂತರ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾತರದ ಜ್ವರಗಳ ಮೇಲೆ ದಿವ್ಯ ಔಷಧಿ ಬಾಟ್ಲಿ ೧ರ ರೂ ೧-೬-೦ ಸಣ್ಣ ಬಾಟ್ಲಿಗೆ ೦-೧೨-೦

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

ಕೆಟಲಾಗಿಗೆ ಬರೆಯಿರಿ -- **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು

ಔಷಧಿಗಳು ಸಿಕ್ಕುವ ಸ್ಥಳ— —ಕೃಷ್ಣ ಫಾರ್ಮಸಿ, ಕೆಮಿಸ್ಟ್ ಎಂಡ ಡ್ರಗಿಸ್ಟ್ ಕುಂದಾಪುರ, ಕೆ ರಂಗಪ್ಪ ನ್ಯೂಸ್ ಏಜಂಟ್, ಉಡುಪಿ, ಡಾಕ್ಟರ್ ಶ್ರೀನಿವಾಸ ಪೈ ಪುತ್ತೂರು ಶ್ರೀ ರಾಮ ಸ್ಟೇಶನರಿ ಹೌಸ್, ಪೋಸ್ಟ್ ಆಫೀಸು ಎದುರು, ಕಾಸರಗೋಡು ಕಾಮತ್ ಎಂಡ್ ಕೋ ವಿಟ್ಲಲ್ ಬಾ ಪಟೇಲ್ ರೋಡು ಮುಂಬಾ ಸಬ್ಬಾರಾವು ಪ್ರಭು, ...

# ಮಲಬದ್ಧತೆಯೇ ಸರ್ವರೋಗದ ಮೂಲ

## ಅದನ್ನು ನಿವಾರಿಸುವುದು ಹೇಗೆ?

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮಲಬದ್ಧತೆಯು ಅಯೋಗ್ಯ ಆಹಾರದಿಂದಲೂ, ತೆಗೆದುಕೊಳ್ಳುವ ಆಹಾರದ ಸರಿಯಿಲ್ಲದ ಸಂಯೋಗದಿಂದಲೂ, ಅಪ್ರಯೋಜನವಾದ ಹೊರಗೆ ಹೋಗುವ ವಸ್ತುವನ್ನು ಕರಗಿಸುವರೆ ಅನುಕೂಲವಾಗುವಷ್ಟು ದ್ರವ ಪದಾರ್ಥವು ಇಲ್ಲದೆ ಇರುವದರಿಂದಲೂ, ಮತ್ತು ತಕ್ಕಷ್ಟು ವ್ಯಾಯಾಮವು ದೊರೆಯದೆ ಇರುವುದರಿಂದಲೂ ಉಂಟಾಗುವುದು. ಕರುಳುಗಳ ಕೊನೆಯಲ್ಲಿ ಇರುವ ಸ್ನಾಯುವು ತಕ್ಕಷ್ಟು ವ್ಯಾಯಾಮವನ್ನು ಪಡೆಯದೆ ಮಲವನ್ನು ಹೊರಗೆಡವಲು ಶಕ್ತಿಯು ಉದರದೊಳಭಾಗಕ್ಕೆ ಇಲ್ಲದೆ ಇರುವುದೇ ಮಲಬದ್ಧತೆಯ ಮುಖ್ಯ ಕಾರಣ. ಬೆಂಕಿಯನ್ನು ಮುಚ್ಚಿದ ಬೂದಿಯು ಹೋಗದೆ ಬೆಂಕಿಯು ಹೇಗೆ ಪ್ರಜ್ವಲಿಸಲಾರದೋ ಹಾಗೆಯೇ ಮಲಬದ್ಧತೆಯನ್ನು ಹೋಗಲಾಡಿಸದೆ ಪಚನ ಶಕ್ತಿಯೂ ಪ್ರಜ್ವಲಿಸದು. ದೇಹಯಂತ್ರಕ್ಕೆ ಸದೃಶವಾದ ಯಂತ್ರವಿಲ್ಲದಿರಲು, ಆ ಯಂತ್ರದ ಕ್ರಮವಾದ ಚಲನೆಯ ಕಡೆಗೆ ಮನಸ್ಸು ಕೊಡುವುದೇ ಯಂತ್ರಚಾಲಕರಾದ ನಮ್ಮ ಮುಖ್ಯ ಕರ್ತವ್ಯವಿರಬೇಕು. ಮಲವಿಸರ್ಜನೆಯ ಕಡೆಗೆ ಗಮನಕೊಟ್ಟು ಕಠಿಣ ಪ್ರಸಂಗದಲ್ಲಿಯೂ ದಿನಕ್ಕೆ ಎರಡಾವರ್ತಿ ಮಲವಿಸರ್ಜನೆಯು ಯಾವತ್ತೂ ಮದ್ದಿನ ಸಹಾಯವಿಲ್ಲದೆ ಆಗುವಂತೆ ನೋಡಿಕೊಳ್ಳಬೇಕು. ದಿನದ ಮಲವನ್ನು ದಿನ ಹೋಗಲಾಡಿಸದಿದ್ದರೆ ಅಪಾಯವು ಅನುಭವಸಿದ್ಧವಾಗಿದೆ. ದೇಹಯಂತ್ರದ ಯಂತ್ರಶಾಸ್ತ್ರಜ್ಞನು ಮರವಯನ್ನು ಹೊಂದಿದರೆ ಕೆಲಸವು ಕೆಡುವುದು. ಕರುಳುಗಳು ಎಂದೆಂದೂ ನಿರ್ಮಲನಾಗಿಯೇ ಇರಬೇಕು.

ಶೌಚವು ಸರಿಯಾಗದೆ ಇದ್ದಲ್ಲಿ ಅದು ಕರುಳಿನ ಒಳಗೇನೇ ಸುತ್ತುತ್ತಿರುವಾಗ ಸ್ವಾಭಾವಿಕ ಕರುಳಿನ ಸತ್ವಯೆಳೆಯುವಶಕ್ತಿಯಿಂದಾಗಿ, ಮಲದ ವಿಷಸದೃಶವಾದ ಸತ್ವವು ರಕ್ತಕ್ಕೆ ಸೇರಲ್ಪಟ್ಟು ವ್ಯಕ್ತಿಯ ರಕ್ತವೇ ಕೆಟ್ಟು ಹೋಗುವುದು. ತಲೆನೋವು ಅದರ ಕಾರಣವಾದ ತೊಡಕುಗಳು. ಕಜ್ಜಿ ಮತ್ತು ಮೊಡ ಮೊದಲಾದುವುಗಳು ಮಲಬದ್ಧತೆಯ ಗುರುತುಗಳಾಗಿವೆ.

ಇದೊಂದು ಮಹಾ ಮಾರಿರೋಗವನ್ನು ಮನುಷ್ಯನು ಹೋಗಲಾಡಿಸದೆ ದೇಹ ಸಂಬಂಧವಾದ ಯಾವ ಇಚ್ಛೆಯೂ ಫಲಿಸದು. ಕ್ರಮೇಣ ಇನ್ನಿತರ ರೋಗಗಳಿಗೂ ಇದೊಂದೇ ಕಾರಣವಾಗುವುದು. ತನಗೆ ಮಲವಿಸರ್ಜನೆಯ ಇಚ್ಛೆಯಾದಲ್ಲಿ ಕೂಡಲೇ ತಡೆಗಟ್ಟದೆ ಮಾಡುವುದು ಪ್ರಥಮ ಸಾಧನ. ಎಂದೆಂದೂ ಮಲವನ್ನು ತಡೆದು ಕುಳಿತಿರಲೇ ಬಾರದು. ಸಂಪೂರ್ಣವಾಗಿ ತೃಪ್ತಿಯಾಗುವ ತನಕ ಮಲವಿಸರ್ಜನೆಯನ್ನು ಮಾಡುವುದು ದ್ವಿತೀಯಸಾಧನ ಅರ್ಥಾತ್ ಯಾವ ತಾಪತ್ರಯಗಳಿದ್ದರೂ ಹೊರಟುಬರಬಾರದು. ಕರುಳಿನಲ್ಲಿ ಶೌಚದ ಅಂಶವೂ ನಿಲ್ಲಬಾರದೆಂಬ ಧ್ಯೇಯದಿಂದ ಕರುಳನ್ನು ನಿರ್ಮಲವಾಗಿಡಬೇಕು.

ಮುಖ್ಯವಾಗಿ ನಾವು ನೀರುಕುಡಿಯುವ ಆವಶ್ಯಕತೆಯನ್ನೂ ಯೋಚಿಸಬೇಕು. ಕಾಲಿನೆಯು ನೀರಿನಹೊಡತದಿಂದ ಶುಚಿಯಾಗುವಂತೆ ಕಂಠನಾಳದಾದಿಯಿಂದ ಕರುಳಿನ ಅಂತ್ಯದವರೆಗೆ ತೊಡಕು ಬಾರದಿರಲು ಕಡವೆಯಷ್ಟು ಬರೇಳು "ಗ್ಲಾಸು" ಶುದ್ಧ ತಣ್ಣೀರಿನ ಆವಶ್ಯವಿರುವುದು. ಅಂದರೆ ದಿನಕ್ಕೆ ಇಷ್ಟು ನೀರು ಮನುಷ್ಯನ ದೇಹಕ್ಕೆ ಜೀವನಾಧಾರವಾಗಿದೆ. ನೀರು ಕುಡಿಯುವ ಅಭ್ಯಾಸವನ್ನು ಪ್ರತಿಯೊಬ್ಬನೂ ಮಾಡಲೇಬೇಕು. ಜಗತ್ತಿನಲ್ಲಿ ಸಾಧಾರಣವಾಗಿ ಹೆಚ್ಚಿನ ವಸ್ತುಗಳನ್ನು ಕರಗಿಸುವ ದ್ರವ ಪದಾರ್ಥವೆಂದರೆ ನೀರು. ಆದುದರಿಂದ ಕರುಳಿನ ಬದಿಗೆ ಅಂಟಿಕೊಂಡು ಜಿಗುಟನಂತಿರುವ ಶೌಚ ಭಾಗವನ್ನು ಕರಗಿಸಿ, ದಾರಿಯಿಂದ ಶುಚಿಯಾಗುವಂತೆ ಗುಡಿಸಲು ನೀರು ಅಸಾಧಾರಣ ಸಹಾಯಕಾರಿ.

ಆಹಾರವನ್ನು ಜಗಿಯುವುದರಲ್ಲಿಯೂ ಹೆಚ್ಚಿನ ಜಾಗ್ರತೆಯನ್ನು ವಹಿಸಿಕೊಳ್ಳಬೇಕು. ಊಟದ ವೇಳೆಯಾದರೂ ಜಗಿಯದೆ ನುಂಗಿದುದರಿಂದ ಒಂದು ಭಾರವನ್ನು ಮತ್ತೊಬ್ಬನ ತಲೆಯಮೇಲೆ ಹೊರಿಸಿದಂತಾಗುವುದು. ಜಗಿದು ನುಂಗುವ ಆನಂದವನ್ನು ಜಗಿದು ನುಂಗುವವರೊಡನೆಯೂ, ಅಲ್ಲದೆ ಹಲ್ಲುಗಳುದುರಿ, ತಲೆನೆರೆದು ಊರುಗೋಲನ್ನು ಆರಾಧಿಸುವವರೊಡನೆಯೂ ವಿಚಾರಿಸಬೇಕು.

ಸ್ವಾಭಾವಿಕವಾಗಿ ಕರುಳುಗಳು ಕೂಡ ಸ್ನಾಯುಗಳ ಒತ್ತಾಟದಿಂದಲೇ ಕೆಲಸಮಾಡತಕ್ಕವು. ಆದಕಾರಣ ಅಂತಹ ಕರುಳಿಗೆ ಸಂಬಂಧವಾದ ಸ್ನಾಯುಗಳ ಬೆಳವಣಿಗೆಗೆ ಅಗತ್ಯವಿರುವ ಹೊಟ್ಟೆಯನ್ನು ಬಲಪಡಿಸುವ ವ್ಯಾಯಾಮವನ್ನು ಮಾಡಬೇಕು. ಮಲಬದ್ಧತೆಯನ್ನು ನೀಗುವಂಗಸಾಧನೆಗಳನೇಕವಿದ್ದರೂ ಕೆಲವನ್ನು ಮಾತ್ರ ಸೂಚಿಸುವೆನು. ಈ ಸಾಧನಗಳನ್ನು ದಿನತಪ್ಪದೆ ಕ್ರಮವಾಗಿ ಮಾಡಿದ್ದಲ್ಲಿ ಕ್ರಮೇಣ ಹೊಟ್ಟೆಗೆ ಸಂಬಂಧವಾದ ಸ್ನಾಯುಗಳೂ ಅಲ್ಲದೆ ಶೌಚವನ್ನು ಹೊರಗೆ ಹಾಕುವ ಕರುಳು ಕೂಡ ಪ್ರಯೋಜನವನ್ನು ಹೊಂದಿ ಅಪ್ರಯೋಜಕವಾದ ವಸ್ತುವುನಿರಾಯಾಸವಾಗಿ ಹೊರಗೆಹೋಗುವುದು.

**ಸಾಧನೆ**—1 ನೆಲದ ಮೇಲೆ ಕೂತುಕೊಂಡಿರುವ ಸ್ಥಿತಿಯಲ್ಲಿ ಎರಡೂ ಕೈಗಳನ್ನು ಸೊಂಟದ ಮೇಲಿಟ್ಟು ಅತ್ಯಂತ ಬಲಕ್ಕೂ, ಎಡಕ್ಕೂ ಸಾಧ್ಯವಾದಷ್ಟು ಒಂದೊಂದು ಬದಿಗೆ ಕ್ರಮವಾಗಿ 15ಸಲ ಬಗ್ಗಬೇಕು. ಬಗ್ಗುವಸಮಯದಲ್ಲಿ ಕೈಗಂಟುಗಳನ್ನು ನೆಲಕ್ಕೆ ತಾಗಿಸುವಂತೆ ಬಗ್ಗಬೇಕು.

**ಸಾಧನೆ**—(2) ನೆಲಕ್ಕೆ ಬೆನ್ನುಮಾಡಿ ಮಲಗಿ ಎಡಕಾಲಿನ ಮೊಣಗಂಟನ್ನು ಎದೆಗೆ ತಾಗುವಂತೆತರಬೇಕುಮತ್ತು ಎರಡೂ ಕೈಗಳಿಂದ ಆಗಂಟನ್ನು ಸುತ್ತಿ ಹಿಡಿದು ದೇಹದ ಕಡೆಗೆ ಆದಷ್ಟು ಒತ್ತಬೇಕು. ಹಾಗೆಯೇ ಬಲಕಾಲನ್ನು ದೇಹದ ಕಡೆಗೆ ತಂದು ಒತ್ತಬೇಕು. ಇವನ್ನು ದಣಿವಿನ ಸೂಚನೆಯಾಗುವ ತನಕಮಾಡಬೇಕು.

**ಸಾಧನೆ**—(3)ಕಾಲುಗಳು ಸುಮಾರು 2ಫೀಟುದೂರವಿರುವಂತೆ ನಿಲ್ಲಬೇಕು. ಕೈಗಳು ಸೊಂಟದಲ್ಲಿ ಎಡಕೈಯ್ಯು ಬಲಕಾಲಿನ ಪಾದಕ್ಕೆತಾಗುವಂತೆ ಬಗ್ಗಬೇಕು. ಮತ್ತು ಕೈಗಂಟು ನೆಲಕ್ಕೆ ತಾಗುವಂತೆ ಪ್ರಯತ್ನಿಸಬೇಕು. ಹಾಗೆಯೇ ಬಲಕೈಯು ಎಡಕಾಲಿನ ಪಾದಕ್ಕೆ ತಾಗುವಂತೆ ಬಗ್ಗಬೇಕು. ಈ ಸಾಧನೆಯನ್ನು ಚುರುಕಿನಿಂದ ಉಳುಕು ಬಾರದಂತೆ ಒಂದು ಭಾಗದ ನಂತರಇನ್ನೊಂದುಭಾಗವನ್ನು ಸರ್ತಿಯ ಮೇಲೆ ದಣಿವಿನ ಸೂಚನೆಯಾಗುವ ತನಕ ಮಾಡಬೇಕು.

ಕ್ರಮದಿಂದ ಮೇಲಿನ ಸಾಧನೆಗಳನ್ನು ಮಾಡಿದಲ್ಲಿ, ಮಲಬದ್ಧತೆಯು ಸ್ವಲ್ಪದಿವಸಗಳಲ್ಲಿಯೇ ದೂರವಾಗಿ, ಚರ್ಮವು ನಿರ್ಮಲವಾಗಿ ರಕ್ತವು ಶುದ್ಧವಾಗಿ ನೀವು ಮಾಡಿದ ಶ್ರಮಕ್ಕೆ ಮಿಗಿಲಾದ ಜೀವಮಾನದ ಆನಂದವನ್ನು ಪಡೆಯಬಹುದು.

ಓ ಬೀನ ಶೆಟ್ಟಿ, ಗುಂಡಿಬೈಲು, ಉಡುಪಿ.



## NOTICE

**ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

S. C. 377/37

ಕಲ್ಯಾಣಿ ವಿ ಐಮಾನ್ ---- **ವಾದಿಳು.**

ಸುಬ್ರಾಯ ಶೆಟ್ಟಿ, ಜನಿವಾರ ರಂಗಪ್ಪ ಶೆಟ್ರ ಮಗ, ಕುಂದಾಪುರ ಕಸಬಾ } **ಪ್ರತಿವಾದಿ.**

**ಸದ್ರಿ ಪ್ರತಿವಾದಿ ಅವಗಾಹನೆಗೆ**

ವಾದಿಳು ಡಿಮಾಂಡು ನೋಟಿನ ಪ್ರಕಾರ ಪ್ರತಿವಾದಿಯಿಂದ ತನಗೆ ಬರತಕ್ಕ ಹಣ ಬಡ್ಡಿ ವಗೈರೆ ಬರಮಾಡಿಕೊಳ್ಳುವ ವಗೈರ ಬಗ್ಗೆ ಮಾಡಿದ ಮೇಲಿನ ದಾವೆಯು ತಾ **27-9-37**ನೇ ದಿನ ಪೂ. 11 ಘಂಟೆಗೆ ಮೇಲಿನ ನ್ಯಾಯಸ್ಥಾನದಲ್ಲಿ ತನ್ನಿಗೆ ಇಡಲ್ಪಟ್ಟಿದೆ. ಆ ಕುರಿತು ಆಕ್ಷೇಪವಿದ್ದರೆ ಆ ದಿವಸ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನಿವೇದಿಸಿಕೊಳ್ಳತಕ್ಕದ್ದು. ಇಲ್ಲವಾದರೆ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

Coondapoor 7—9—37 } **B. S. Shatty** B A., B L *Pleader for Plaintiff*





# ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

**ಡಾ. ಜಸಾನಿಯವರ ಜಗತ್ಪ್ರಸಿದ್ಧ**

# 'ಗೊನೊಕಿಲರ್' (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

## ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅತ್ಯುತ್ತಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯದ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N. JASANI,** Vitalbhai Patel Road, BOMBAY 4.

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ತಿರಸ್ಕರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.

# ಪುಸ್ತಕಗಳು

ಯಾವ ಕನ್ನಡ ಪುಸ್ತಕ ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ

ನವಭಾರತ ಬುಕ್ ಡಿಪ್ಪೊ,

ಉಡುಪಿ.

INSURE WITH THE PRESENT CHEAPEST SAFEST INDUSTRIAL
RANJIT
BIMA Co. Ltd. AMRITSAR
APPLY FOR HONOURABLE JOB DECENT SALARY

# ಭಾಷಾಂತರ

ಕೆಲಸವನ್ನು ಕೈಕೊಳ್ಳಲಾಗುತ್ತದೆ.

ಮಾಹಿತಿಗೆ ಬರೆಯಿರಿ

"ಟ್ರಾನ್ಸ್‌ಲೇಟರ್"

'ಕಿರಿಯರ ಪ್ರಪಂಚ'

ಉಡುಪಿ.

# TRANSLATION

WORK IS UNDERTAKEN.

For further particulars

*Pleare write to*

TRANSLATOR,

*Kiriyara Prapancha*

UDIPI

THE

# Vijaya Bank, Ltd.

**Head Office: MANGALORE.** Branch Offices: **Udipi, Kaup & Coondapoor.**

## ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಅಡವಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ 500ರ ವರೆಗೆ ಸಾ. ಶೆ. 7. 501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಫಾರಮುಗಳು ಪೂರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

**A. B. Shetty,** ಚಿಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

# ಕಿರಿಯರ ಪ್ರಪಂಚದ ಪುಸ್ತಕಗಳು.

| | | | | | | | |
|---|---|---|---|---|---|---|---|
| ನಾಟಕಕಥೆಗಳು | ೦ | ೨ | ೦ | ಪುರಪನವು! | ೦ | ೪ | ೦ |
| ಮುಂದಿನ ದೇವರು | ೦ | ೨ | ೦ | ಸಂಶಯ ಪಿಶಾಚಿ | ೦ | ೬ | ೦ |
| ಸ್ವತಂತ್ರ ಜೀವನೋಪಾಯ | ೦ | ೨ | ೬ | ವ್ಯಭಿಚಾರಿಣಿ ಯಾರು? | ೦ | ೮ | ೦ |
| ಕುಶ-ಲವ | ೦ | ೪ | ೦ | ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ಹೆಂಡ್ತಿ ಗಂಡನಾದರೆ! | ೦ | ೪ | ೦ | ಮಧುವನ | ೧ | ೮ | ೦ |

ಸೋಲ್ ಏಜಂಟರು:—ನವಭಾರತ ಬುಕ್ ಡಿಪ್ಪೊ, ಉಡುಪಿ

ಅತ್ಯುತ್ತಮ ಪೇನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಫೌಂಟನ ಪೇನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚಕೋ ಸುವಾಸನೆಯ 'ಪೊಮೇಡ'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

*Sole distributors:*—V. V. Kamath & Bros. Mangalore.

# ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):—ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಪರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರವಲ್ಲಿ ಸಾವಿರಗಟ್ಲೆ ಹಣ್ಣಾಗುವುದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು.

ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ.

ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,

ಪೋಸ್ಟು:—ಕಾಪು, ದ. ಕ.

# ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೊಲೆರಾ ಪಿಲ್ಸ್**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

**ಭೈರವ ಮಾತ್ರೆಗಳು**
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರಿ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

# ನೀವು ಓದಿರುವಿರಾ?

ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?

## <u>ಅಡ್ಡಬಳೆದ ಗಿಡ್ಡಿಯ ಮದುವೆ</u>

## <u>ಮುದುಕನ ಹೆಂಡತಿ ಧಕ್ಕೈರಾದೆ</u>

ಕಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ
ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ
ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ
ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**

ಶ್ರೀ ಕೊರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ

**ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.**

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡಾಣೆ ಸ್ಟ್ಯಾಂಪು ಕಳುಹಿಸಬೇಕು.

**NAVABHARAT BOOK DEPOT, UDIPI**

# ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Byndoor, 9th July 1937.

*From*

J. M. BANAVALI,
Byndoor Camp.

*To*

*THE AGENT*
THE COMBINED BOOKING AGENCY,
Byndoor (S. K.)

*Dear Sir,*

Received the "Tin" which I had missed in your office at Udipi on 6-7-1937 and which your Udipi office so kindly and promptly sent to me. I am really startled to see the efficient Management and promptness of the staff in rendering every assistance to the travelling passengers. I cannot therefore restrain myself from thanking the Management and the Staff.

Yours faithfully,
(*Sd.*) ***J. M. Banavali.***


# SUPPLY AGENCY LTD.
## UDIPI

| | | |
|---|---|---|
| Authorised Capital | Rs. | 1,00,000/- |
| Subscribed & Paid up Capital | Rs. | 29,840/- |
| Reserves | Rs. | 901/- |

ಈ ಕೆಳಗಿನ ದರದ ಬಡ್ಡಿಯಲ್ಲಿ
ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

| | | |
|---|---|---|
| 3 ತಿಂಗಳಿಂದ | 6 ತಿಂಗಳ ವರೆಗೆ | 4½% |
| 7 ,, | 9 ,, | 5% |
| 10 ,, | 12 ,, | 5½% |
| 13 ,, | 24 ,, | 6¼% |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು
ಅಥವಾ ಪತ್ರವ್ಯವಹಾರ ಮಾಡಬಹುದು.

ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ
1—9—1937

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

# ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ | 3 | 0 | 0 |
| ಚಂದ್ರಗುಪ್ತ | 1 | 0 | 0 |
| Gowthama the Buddha | 0 | 8 | 0 |
| ಮಧುವನ | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ | 0 | 8 | 0 |
| ಸರಸ್ವತಿ | 0 | 8 | 0 |
| ಗೀತೆಯ ಕೈಗನ್ನಡಿ | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) | 0 | 4 | 0 |
| ಕೃಷ್ಣಸಂಧಾನ | 0 | 8 | 0 |
| ತುಳು ವ್ಯಾಕರಣ | 0 | C | 0 |
| ಸತೀ ಕಮಲೆ | 0 | 6 | 0 |
| ಮಿತ್ರನಾರಾಯಣ ಕಥೆ | 0 | 8 | 0 |

ಇದಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು
ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.

## ತುಳುನಾಡ್ ಪ್ರೆಸ್, ಉಡುಪಿ.

**Rs. 75** WILL PAY YOU AFTER 5 YEARS **Rs. 100**

# INDUSTRIAL CASH CERTIFICATES

For full particulars apply to:-
**SUPPLY AGENCY LIMITED, UDIPI**


Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No M 3618

ಒಂದಾಣೆ

# ನವಯುಗ

ವಾರಪತ್ರಿಕೆ

ಸಂಪಾದಕ ಕೆ ಕೆ ಶೆಟ್ಟಿ.

ಸಂಪುಟ ೧೭
ಸಂಚಿಕೆ ೪

ಉಡುಪಿ, ಗುರುವಾರ, ೨೩ ಸೆಪ್ಟೆಂಬರೆ ೧೯೩೭
Udipi, Thursday, 23rd September 1937

Vol XVII
No 4

It will pay you to advertise in NAVAYUGA' The Leading Nationalist Kanarese Weekly of Karnatak

FOR RATES OF ADVT Etc APPLY TO THE MANAGER

ನವಯುಗವು
ಅಖಿಲ
ಕರ್ನಾಟಕದಲ್ಲಿಯೂ
ಕನ್ನಡಿಗರು ನೆಲಸಿರುವ
ದೇಶ ವಿದೇಶಗಳ
ಎಲ್ಲಾ ಕೇಂದ್ರಗಳಲ್ಲಿಯೂ
ವಿಶಾಲವಾಗಿ
ಪ್ರಚಾರದಲ್ಲಿರುವುದರಿಂದ
ಜಾಹೀರಾತುಗಳಿಗೆ
ಉತ್ತಮ ಸಾದನವಾಗಿದೆ
ದರಗಳಿಗೆ
ಮಾನೇಜರರಿಗೆ ಬರೆಯಿರಿ

[illegible]

[INCORPORATED IN BRITISH INDIA]

ESTD] [1925

Head Office
"MUKUND NIVAS"
UDIPI, (S I)

BRANCHES.

1 BOMBAY

| | |
|---|---|
| 2 BANGALORE CITY | 18 HUBLI |
| 3 BELGAUM | 19 GADAG |
| 4 BYADGI | 20 KARWAR |
| 5 BELLARY | 21 KUMTA |
| 6 ADONI | 22 ANKOLA |
| 7 HOSPET | 23 HONAVAR |
| 8 TALIPARAMBA | 24 BHATKAL |
| 9 UPPINANGADI | 25 BRAHMAVAR |
| 10 KASARGODE | 26 HUNGARCUTTA |
| 11 PAYYANUR | 27 SIRSI |
| 12 KANHANGAD | 28 SAGAR |
| 13 KARKALA | 29 COONDAPOOR |
| 14 NANDYAL | 30 UDIPI |
| 15 PRODATTUR | 31 MANGALORE |
| 16 TADPATRI | 32 CANNANORE |
| 17 TUMKUR | 33 HINDUPUR |

MEMBER;
RESERVE BANK OF INDIA,
BANKERS' CLEARING HOUSE, BOMBAY.

*We have much pleasure to*
ANNOUNCE THE OPENING OF
OUR BRANCHES AT
HINDUPUR (Anantpur Dt)
AND
TUMKUR (Mysore State)
ON THE 3rd & 9th SEPTEMBER 1937
RESPECTIVELY, WHERE ALL KINDS
OF BANKING BUSINESS
ARE TRANSACTED

*Another Branch will be opened at* Nippani (*Belgaum Dt*)
VERY SHORTLY

| | |
|---|---|
| Authorised Capital | Rs. 10,00,000 |
| Issued Capital | „ 8,00,000 |
| Subscribed Capital | „ 7,74,300 |
| Paid up Capital & Reserves | „ 5,75,120 |
| Total resources exceed | „ 47 lakhs |

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಬದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ನಾಲು ಬೇಕಾದವರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

THE ROYAL SEED CO.,
FLORISTS & SEEDSMEN,
27, Ilpay Thop. ULSOOR, BANGALORE.

ಸೂ—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈ ಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಕೊಡಿಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು.

THE
# MOOLKY BANK, LTD.,
MOOLKY.
## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ನಡಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
*President & Manager,* ಪ್ರೆಸಿಡೆಂಟ್ ಮತ್ತು ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

# ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ ವಿಲಿಯಮ್ ಎಂಡ್ ಕೋ ರವರ ದಾಜ ಮತ್ತು ದಾಜಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

DIAMONDS! DIAMONDS!!
# K. R. K. SHET
**Opposite Govt. College, Hampankatte, MANGALORE**
**SHOW-ROOM & WORK SHOP.**

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920
(ಬಂಟರ ಯಾನೆ ನಾಡವರಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)
ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

*Manager,*
**Kanara Printing Works,**
Hampankatte, Mangalore.

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸಂದರ್ಭ
ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ ನವರಿಂದ ರಚಿತವಾದ

## 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ಕಾದಿರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 58 Mody Street, Fort Bombay.

## ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಸಿನ ಕೈ, ಮತ್ತು ಕಾಲು ಹಾರ್ಮೋನಿಯಮುಗಳು ಕಡಿಮೆ ಕ್ರಯದಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೂ ವಿಶೇಷ ಮಾಹಿತಿಗೂ ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.

*Proprietor:* ATTAVAR BABOO,
**VASANTHI HARMONIUM WORKS**
**Hampankatte, Mangalore.**

ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ. ಇಲ್ಲಿ ಮಾರಲ್ಪಡುತ್ತವೆ.

ವಾರ್ಷಿಕ ಚಂದಾ ರೂ. ೩—೪—೦ • ಆರು ತಿಂಗಳಿಗೆ ರೂ. ೧—೧೨—೦

ಉಡುಪಿ ೨೩—೯—೧೯೩೭ ಸ್ಥಾಪನೆ ೧೯೨೧

# :: ನವಯುಗ ::

ಸಂಪುಟ ೧೭ ಸಂಚಿಕೆ ೪

# ವಾರದ ವಿಚಾರ

## ಸ್ವರಾಜ್ಯವು ಕಂತಿನಲ್ಲಿ ಬರುವುದಲ್ಲ

'ಸ್ವರಾಜ್ಯವು ಕಂತಿನಲ್ಲಿ ಬರುವುದಲ್ಲ. ಕಂತಿನಲ್ಲಿ ಬರುವುದು ಸ್ವರಾಜ್ಯವಲ್ಲ. ಒಂದು ದೇಶದಲ್ಲಿ ಒಂದೇ ಕಾಲದಲ್ಲಿ ಎರಡು ಆಳ್ವಿಕೆಗಳು ನಡೆಸಲ್ಪಡಲು ಸಾಧ್ಯವಿಲ್ಲ. ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಸ್ವೀಕರಿಸಿರುವರಾದರೂ ಜ್ಯಾರಿಯಲ್ಲಿರುವುದು ಬ್ರಿಟಿಷ್ ರಾಜ್ಯಭಾರ. ದೇಶದ ಉತ್ಪನ್ನದ ಅರೆವಾಸಿಯನ್ನು ನುಂಗುವ ಸೇನೆಯು ಕಾಂಗ್ರೆಸ್ ಮಂತ್ರಿಗಳ ಆಜ್ಞೆ ಪಾಲಿಸಲಿಕ್ಕಿಲ್ಲ. ಐ. ಸಿ. ಎಸ್. ಅಧಿಕಾರಿಗಳು ನೆಟ್ಟಗೆ ಬ್ರಿಟಿಷ್ ಸರಕಾರಕ್ಕೇನೇ ಜವಾಬ್ದಾರರು. ಬಡತನ ನಿರುದ್ಯೋಗಗಳನ್ನು ಸ್ವರಾಜ್ಯ ಸಿಗುವ ತನಕ ನಿವಾರಿಸಲು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿರುವರು. ಇದು ಹೇಗೆ ಕೊನೆಗೊಳ್ಳುವುದೆಂದು ನನಗೆ ಹೇಳಬರುವುದಿಲ್ಲ. ಈ ಮಂತ್ರಿಗಳು ಏನಾದರೂ ಸ್ವಲ್ಪ ಜನಹಿತ ಸಾಧನೆ ಮಾಡಬಹುದು. ಇದು ಕೂಡಾ ಅಸಾಧ್ಯವಾದರೆ ಅವರು ತಮ್ಮ ಪದವಿಬಿಟ್ಟು ಹೊರಬರಬೇಕೆಂದು' ಪಂಡಿತ ಜವಾಹರಲಾಲರು ಬೊಂಬಾಯಿಯಲ್ಲಿ ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದ ಆಶ್ರಯದಲ್ಲಿ ಭಾಷಣವೀಯುವಾಗ ಸ್ಪಷ್ಟಪಡಿಸಿರುವರು. ಆದುದರಿಂದ, ತಮಗೆ ಸ್ವಲ್ಪ ಮಟ್ಟಿನ ಸ್ವರಾಜ್ಯ ದೊರೆಯಿತು. ಇನ್ನೂ ಇದೇ ರೀತಿ ಸ್ವಲ್ಪಸ್ವಲ್ಪವಾಗಿ ಹೆಚ್ಚೆಚ್ಚು ಸ್ವಾತಂತ್ರ್ಯ ದೊರೆತು ಕಟ್ಟಕಡೆಗೆ ಸಂಪೂರ್ಣ ಸ್ವರಾಜ್ಯ ದೊರೆಯುವುದೆಂಬ ಭ್ರಾಂತಿಯನ್ನಾರಾದರೂ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಸಂಪೂರ್ಣ ಸ್ವರಾಜ್ಯವು ದೊಡ್ಡ ಹೋರಾಟವಿಲ್ಲದೆ ಎಂದಿಗೂ ದೊರೆಯಲಾರದು. ಆ ಸಿದ್ಧತೆಗಾಗಿಯೇ ಕಾಂಗ್ರೆಸು ಈಗಣ ಅನುಕೂಲ ವಾತಾವರಣವನ್ನು ಉಪಯೋಗಿಸಿಕೊಳ್ಳಬೇಕು.

### ಅಧಿಕಾರ ಸ್ವೀಕಾರದ ಅಪಾಯ

ಅಧಿಕಾರ ಸ್ವೀಕಾರವು ಇಬ್ಬಾಯಿಯ ಕತ್ತಿ. ಆದರಿಂದ ಬಹಳ ಅಪಾಯವಿದೆ. ಈ 17 ವರ್ಷಗಳಿಂದ ಹಿಂದೀಯರು ಹೋರಾಡಿ ಪಡೆದ, ಸರಕಾರವನ್ನು ಹೆಜ್ಜೆಹೆಜ್ಜೆಗೆ ವಿರೋಧಿಸುವ ಉಗ್ರ ಮನೋವೃತ್ತಿಯು ಈಗ ಮೊಂಡಾಗಿ, ಕೌನ್ಸಿಲು, ಎಸೆಂಬ್ಲಿಗಳ ಕಾರ್ಯಕಲಾಪಗಳಲ್ಲೇ ಮಗ್ನವಾಗಿ ಬಿಡುವ ಅಪಾಯಕರ ಪರಿಸ್ಥಿತಿಯುಂಟಾಗಿದೆಯೆಂದು ಶ್ರೀ ನರಿಮನರು ಸಕಾರದಲ್ಲಿ ಮಾಡಿದ ಭಾಷಣವೊಂದರಲ್ಲಿ ಎಚ್ಚರಿಸಿರುವರು. ಶ್ರೀಎಮ್. ಎನ್. ರಾಯ್ರಗಳು ತನ್ನ ಇಂಡೆಪೆಂಡೆಂಟ್ ಪತ್ರಿಕೆಯಲ್ಲಿ, ಕಾಂಗ್ರೆಸು ಪಾರ್ಲಿಮೆಂಟರಿ ಚಳವಳದಲ್ಲೇ ಮಗ್ನವಾಗಿರಬಾರದು ಅದೇನೂ ಪ್ರಾಮುಖ್ಯವಾದುದಲ್ಲ. ಸಾಮುದಾಯಿಕ ಸಂಘಟನೆಗಾಗಿ ಅದನ್ನೊಂದು ಉಪಕರಣವಾಗಿ ಉಪಯೋಗಿಸಬೇಕು. ದೇಶದಲ್ಲೆಲ್ಲಾ ಸಾಮುದಾಯಿಕ ಸಂಘಟನಾ ಕೆಲಸವು ಭರದಿಂದ ನಡೆಸಲ್ಪಡಬೇಕೆಂದು ಸಾರಿ ಹೇಳುತ್ತಿರುವರು. ಆದುದರಿಂದ ಕಾಂಗ್ರೆಸಿನವರು ಕೌನ್ಸಿಲು ಎಸೆಂಬ್ಲಿಗಳ ಕಡೆಗೆ ಹತ್ತುನಿಡಿ ಸುಮ್ಮನೆ ಕುಳಿತಿರದೆ ಕಾಂಗ್ರೆಸಿಗೆ ಅದನ್ನು ಜನಬೆಂಬಲನಡೆದು ಅದರ ವರ್ಚಸ್ಸು ಹಳ್ಳಿಮೂಲೆಗಳಲ್ಲೂ ಸ್ಥಿರವಾಗಿ ಹಬ್ಬುವಂತೆ ಎಡೆಬಿಡದೆ ಚಳವಳಿಸುತ್ತಿರಬೇಕು.

### ಹಳ್ಳಿಗರ ಭಾಗ್ಯೋದಯ

ಇತರ ಪ್ರಾಂತಗಳ ಕಾಂಗ್ರೆಸ್ ಮಂತ್ರಿಗಳು, ಹಳ್ಳಿಗರ ಉದ್ಧಾರಕ್ಕಾಗಿ ಇಷ್ಟರವರೆಗೆ ನಿಶ್ಚಿತ ಕಾರ್ಯಕ್ರಮವನ್ನೇನೂ ಕೈಕೊಂಡಿರುವುದಿಲ್ಲ. ಮದ್ರಾಸ್ ಪ್ರಾಂತದಲ್ಲಿ ಇನ್ನೂ ಎಲ್ಲಾ ವಿಷಯವೂ ಆಲೋಚನೆಯಲ್ಲಿಯೇ ಇದೆ. ಆದರೆ ಸಂಯುಕ್ತ ಪ್ರಾಂತೀಯ ಮಂತ್ರಿಗಳು ಹಳ್ಳಿಗಳ ಅಭಿವೃದ್ಧಿ ಸಾಧನೆಯ ಪ್ರಾಮುಖ್ಯ ಪ್ರಶ್ನೆಗೆ ಪ್ರಥಮವಾಗಿ ಗಮನವಿತ್ತಿದ್ದಾರೆ. ಸಂಯುಕ್ತಪ್ರಾಂತದ ವ್ಯವಸಾಯ ಖಾತೆಯ ಮಂತ್ರಿ ಡಾಕ್ಟರ್ ಕಟ್ಜುರವರು ತಾವು ಕೈಕೊಳ್ಳಲಿರುವ ಯೋಜನೆಯನ್ನು ಎಸೆಂಬ್ಲಿಯಲ್ಲಿ ವಿವರಿಸಿ ಹೇಳಿರುವರು. ಇಷ್ಟರವರೆಗೆ ಸರಕಾರವು ಕೈಕೊಂಡಿರುವ ಗ್ರಾಮೋನ್ನತಿಯ ಯೋಜನೆಗಳು ನಿರರ್ಥಕವಾಗಿವೆ. ಯಾಕಂದರೆ ಅವುಗಳಲ್ಲಿ ಕೆಲಸಮಾಡುವವರಲ್ಲಿ ಆ ಸಂಬಂಧವಾಗಿ ಯಾವ ಆಸಕ್ತಿಯೂ ಇರಲಿಲ್ಲ. ಈಗಣ ಹೊಸ ಯೋಜನೆಯಂತೆ ೬ ವರ್ಷಗಳಲ್ಲಿ 3000 ಹಳ್ಳಿಗಳ ನಿಜವಾದ ಹಿತಸಾಧನೆಯಾಗುವುದು. ಇದಕ್ಕಾಗಿ ಕಾಂಗ್ರೆಸ್ ಮಂತ್ರಿಗಳು, ಹಳ್ಳಿಗಳಿಗೆ ಹೋಗಿ ಹಳ್ಳಿಗರೊಂದಿಗೇನೇ ವಾಸಿಸಿ ಅವರ ಉನ್ನತಿಗಾಗಿಯೇ ತನುಮನವನ್ನರ್ಪಿಸುವ ಕೆಲಸಗಾರರನ್ನು ನೇಮಿಸುವರು. ಇವರು ಹಳ್ಳಿಗರ ಜೀವನ ಸ್ಥಿತಿಯನ್ನು ಸುಧಾರಿಸಿ ಅವರಲ್ಲಿ ಸ್ವಾಭಿಮಾನ, ಜಾಗ್ರತಿಯನ್ನುಂಟುಮಾಡಿ ವಿದ್ಯಾಪ್ರಚಾರಮಾಡುವರು. ಇವರಿಗೆ ಅತ್ಯಂತ ಕಡಿಮೆ ಸಂಬಳ ಕೊಡಲಾಗುವುದು. ಈ ಕುರಿತು ಪ್ರತ್ಯೇಕವಾದೊಂದು ಖಾತೆಯನ್ನೇ ಮಾಡಿ ಅದಕ್ಕೆ ಬೇಕಾದ ಸಿಬ್ಬಂದಿಯನ್ನು ನೇಮಿಸಲಾಗುವುದು. ಪ್ರತಿಯೊಂದು ಹಳ್ಳಿಯಲ್ಲಿ ಸಹಕಾರಿ ತತ್ವದ ಮೇಲೆ ಕೆಲಸಮಾಡುವ ಹಳ್ಳಿಯ ಕೂಟ ಮತ್ತು ಪಂಚಾಯತಗಳು ಸ್ಥಾಪಿಸಲ್ಪಡುವವು. ಇವುಗಳನ್ನೊಬ್ಬ ಗೌರವ ಕೆಲಸಗಾರನು ನಡಿಸಿ ಹಳ್ಳಿಗರ ಮಿತ್ರನೂ, ಬೋಧಕನೂ, ಮಾರ್ಗದರ್ಶಿಯೂ ಆಗಬೇಕು. ಇವನು ಆಯಾ ಹಳ್ಳಿಯವನೇ ಆಗಿದ್ದು ಪ್ರತಿಯೊಂದು ವಿಷಯದಲ್ಲಿಯೂ ಹಳ್ಳಿಗರಿಗೆ ಸಹಾಯಕನಾಗಬೇಕು. ಹಳ್ಳಿಗಳ ಸಂಚಾರಾನುಕೂಲತೆ ನೀರಾಶಯ, ಔಷಧೋಪಚಾರ, ನಿವಾಸಾನುಕೂಲತೆಗೆಲ್ಲಾ ಸಹಾಯಮಾಡಲಾಗುವುದೆಂದು ಡಾಕ್ಟರ್ ಕಟ್ಜುರವರ ಭಾಷಣದ ಸಾರಾಂಶ. ಸಂಯುಕ್ತಪ್ರಾಂತದ ಈ ಉಜ್ವಲ ಮಾದರಿಯನ್ನು ಇತರ ಪ್ರಾಂತಗಳವರೂ ಅನುಸರಿಸಬಾರದೇಕೆ?

### ಇಟೆಲಿಯ ಉದ್ಧಟತನ

ಭೂಮಧ್ಯ ಸಾಗರದಲ್ಲಿ ಜಲಾಂತರ್ಗಾಮಿ ನಾವೆಗಳು ಕಳ್ಳತನದಿಂದ ವ್ಯಾಪಾರಿ ಹಡಗುಗಳ ಮೇಲೆ ಧಾಳಿನಡಿಸದಂತೆ ತಡೆಗಟ್ಟಲು ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯವೇ ಮೊದಲಾದ ರಾಷ್ಟ್ರಗಳು ಮಾಡಿಕೊಂಡ ಒಡಂಬಡಿಕೆಯು ಇಟೆಲಿಯನ್ನು ಉದ್ರೇಕಿಸಿದೆ. ಭೂಮಧ್ಯಸಾಗರದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಯುದ್ಧ ನಾವೆಗಳು ವ್ಯಾಪಾರಿ ಹಡಗಗಳಿಗೆ ರಕ್ಷಣೆ ಈಯುವುದೆಂಬುದು ಇಟೆಲಿಯನ್ನು ನಿರೋಧಿಸುವ ಕುತಂತ್ರ. ಒಳಗಿಂದೊಳಗಿನ ಯುದ್ಧ ಸಿದ್ಧತೆ, ಬಲಪ್ರದರ್ಶನವೆಂದು ಇಟೆಲಿಯು ರೇಗಿಬಿದ್ದು ಕೂಡಲೇ ಲೀಬಿಯಾ ಮೊದಲಾದ ತನ್ನ ಅಧೀನ ರಾಜ್ಯಗಳಿಗೆ ಹೆಚ್ಚಿನ ಸೇನೆ ಕಳುಹಿಸಿರುವುದು. ಇಟೆಲಿ, ಜರ್ಮನಿಯೇ ಮೊದಲಾದ ಫೆಸಿಸ್ಟ್ ರಾಜ್ಯಗಳನ್ನು ವಿರೋಧಿಸಲು, ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯಗಳು ಒಂದುಗೂಡಿ ಕೆಲಸಮಾಡುತ್ತಿವೆಯೆಂದು ಕೂಗೆಬ್ಬಿಸಿರುವುದು. ಇಟೆಲಿ, ಜರ್ಮನಿ, ಜಪಾನುಗಳು ಇತರ ರಾಷ್ಟ್ರಗಳ ವಿರೋಧವಾಗಿ, ತಮ್ಮ ರಾಜ್ಯಪದ್ಧತಿಯನ್ನು ವಿಸ್ತರಿಸಲು ಒಳಗಿಂದೊಳಗೆ ಬೇಕಾದ ಒಪ್ಪಂದ, ಸಿದ್ಧತೆಗಳನ್ನೆಲ್ಲಾ ಮಾಡಬಹುದು. ಅಂತೆಯೇ ಇತರರು ಮಾಡಿದರೆ ಮಾತ್ರ ಅದು ಅನ್ಯಾಯ! ಅಂತೂ ಈಗ ಯೂರೋಪ್ ಖಂಡದಲ್ಲಿ ಎರಡು ಪಕ್ಷದ ರಾಷ್ಟ್ರಗಳೊಳಗೆ ಸರಿ ತಿಕ್ಕಾಟವುಂಟಾಗಿದೆ. ಇದರ ಪರಿಣಾಮವಾಗಿ ಬೇಗನೆ ಲೋಕ ಯುದ್ಧವೊಂದು ನಿಶ್ಚಯವೆಂಬಂತೆ ತೋರುತ್ತದೆ.

---

## ಜೀವನದ ಅನುಭವ

- ಯಾವಾತನು ಬಡತನದ ದವಡೆಯೊಳಗೆಸಿಲುಕಿ ನಜ್ಜುಗುಜ್ಜಾಗುತ್ತಿರುವನೋ ಅವನು ಧನಿಕರೆಂಬ ಕಾಳಸರ್ಪಗಳ ಎಂತಹ ಅನ್ಯಾಯದ ಕಡಿತವನ್ನೂ ತಾಳಿಕೊಳ್ಳಬೇಕು.
- ಎಷ್ಟರ ವರೆಗೆ ನಾವು ಇನ್ನೊಬ್ಬರನ್ನು ಗಣ್ಯ ಮಾಡುವುದಿಲ್ಲವೋ ಅಷ್ಟರ ವರೆಗೆ ಅವರೂ ನಮ್ಮನ್ನು ಲಕ್ಷಿಸಲಾರರು.
- ನಾವು ಎಷ್ಟರ ವರೆಗೆ ಇನ್ನೊಬ್ಬರ ಸ್ವಾರ್ಥಕ್ಕೆ ಭಂಗವನ್ನುಂಟುಮಾಡುವುದಿಲ್ಲವೋ ಅಷ್ಟರ ವರೆಗೆ ಅವರು ನಮ್ಮ ಸ್ನೇಹಿತರು.
- ಸಾವಿರಾರು ರೂಪಾಯಿ ಉತ್ಪತ್ತಿಯಿದ್ದು ಅಷ್ಟೇ ಯಾ ಅದಕ್ಕೂ ಹೆಚ್ಚು ಸಾಲವಿರುವ ಧನಿಕನಿಗಿಂತ (?) ಒಂದು ಪೈ ಸಾಲ-ಮೂಲವಿಲ್ಲದ ಬಡವ (?) ನೇ ಐಶ್ವರ್ಯವಂತನು.

'ಕಾಡುಹಕ್ಕಿ'

---

## ಚೀನಾ ಜಪಾನು ಯುದ್ಧ

### ಉತ್ತರ ಚೀನದಲ್ಲಿ ಜಪಾನರ ಪ್ರಬಲ ವಿಜಯ

ಇದೇ ತಾ. 13ರಲ್ಲಿ ಉತ್ತರ ಚೀನದ ಚೀನೀಯ ಸೈನಿಕರು ಹಿಂದೆ ಸರಿದಿರುವರು. ಜಪಾನ ಸೈನಿಕರು ಭರದಿಂದ ಮುಂದೊತ್ತಿ ಹೋಗಿ ಟಾಟುಂಗ್ ಮತ್ತು ಕ್ವಾಂಗ್ಲಿಂಗ್ ಎಂಬ ಸ್ಥಳಗಳನ್ನು ವಶಪಡಿಸಿಕೊಂಡಿರುವರು. ಸೂಚೋ ಆಖಾತದಲ್ಲಿ ಕೆಲವು ನುಚ್ಚಿಗಳು ಜನರನ್ನೊಯ್ಯುತ್ತಿದ್ದಾಗ ಜಪಾನ ವಿಮಾನಗಳು ಬೋಂಬೆಸೆದು 400 ಮಂದಿ ಕೊಲ್ಲಲ್ಪಟ್ಟಿರುವರು. ಶಾಂಘಾಯಿಯಲ್ಲಿಯೂ ಚೀನೀಯರು ತಮ್ಮ ಸೇನೆಯಿದ್ದ ಪ್ರದೇಶದಿಂದ 3 ಮೈಲು ಹಿಂದೆಸರಿದು ತಮ್ಮ ಸ್ಥಾನವನ್ನು ಬಲಪಡಿಸಿರುವರು. ಶಾಂಘಾಯಿಯಲ್ಲಿ ಕಾಲೇರವು ಪ್ರಬಲವಾಗಿ ಹಬ್ಬುತ್ತಿರುವುದು. ಇದೇ ತಾ. 14ರಲ್ಲಿ ದಕ್ಷಿಣದಿಂದ ಉತ್ತರದ ಯೋಧರಾದ 4ವಳ ಸೈನಿಕರು ಶಾಂಘಾಯಿಯ ಪೂಟೆಂಗಿಗೆ ಹೋಗಿ ಜಪಾನರು ಅಲ್ಲಿ ತಮ್ಮ ಸೇನೆಯನ್ನಿಳಿಸದಂತೆ ತಡೆಗಟ್ಟುತ್ತಿರುವರು. ದಕ್ಷಿಣದ ಕ್ಯಾಂಟನಿನ ಬಳಿ ೬ ಜಪಾನ್ ಯುದ್ಧನಾವೆಗಳು ಕೋಟೆಗಳ ಮೇಲೆ ಗುಂಡೆಸೆದಾಗ ಚೀನೀಯರು ತೋಪು ಹಾರಿಸಿದರು. ಮತ್ತು ವಿಮಾನಗಳ ಮೂಲಕ ಬೋಂಬೆಸೆದರು.

---

# ಸಮಾಚಾರ ಸಂಗ್ರಹ: ಜಪ್ತಿಯಾದ ಆಸ್ತಿ ಹಿಂದೆ ಕೊಡಲ್ಪಡುವುದು, ಇಟಲಿಯ ಸಿಟ್ಟು, ಲೀಗ್ ಎಸೆಂಬ್ಲಿ ಸಭೆ, ಆಲ್ ಇಂಡಿಯಾ ಕೋಂಗ್ರೆಸ್ ಕಮಿಟಿ ಸಭೆ, ಬೊಂಬಾಯಿಯ ಪ್ರಧಾನ ಮಂತ್ರಿಗಳ ಆಶ್ವಾಸನೆ, ಉಪವಾಸ ದೀಕ್ಷೆ ನಿಲ್ಲಿಸಿದರು, ಕವಿ ರವೀಂದ್ರರು, ೨೧,೫೦೦ ತರುಣರ ಮೇಲೆ ನಿರ್ಬಂಧ.

### ಜಪ್ತಿಯಾದ ಆಸ್ತಿ ಹಿಂದೆ ಕೊಡಲ್ಪಡುವುದು.

ಕಾಯಿದೆ ಭಂಗದ ನಿಮಿತ್ತ ಜಪ್ತಿಯಾದ ಭೂಮಿಯನ್ನು ಸರಕಾರದ ವಶವಿರುವ ಆಸ್ತಿಯು ನ್ನೆಲ್ಲಾ ಕೊಡಲಿ ಹಿಂದೆ ಕೊಡಬೇಕೆಂದು ಬೊಂಬಾಯಿ ಸರಕಾರವು ಹುಕುಮು ಕೊಟ್ಟಿರುವುದು ಈ ಹುಕುಮು ಮುಖ್ಯವಾಗಿ ಗುಜರಾಥಿನ ಬಾರ್ಡೋಲಿ ಮತ್ತು ಕರ್ನಾಟಕದ ಕಾರವಾರ ಜಿಲ್ಲೆಯ ಕರನಿರಾಕರಣಾ ಚಳವಳಿಕ್ಕೆ ಸಂಬಂಧಿಸಿರುವಾಗಿದೆ. ಸರಕಾರವು ಪಬ್ಲಿಕ್ ಹಾಗಿ ಇತರರಿಗೆ ಮಾರಿದ ಭೂಮಿಗಳನ್ನು ಖರೀದಿ ಮಾಡಲಿ ಸರ್ಕಾರದಿಂದ ಭೂಮಿ ಕ್ರಮಕ್ಕೆ ಪಡೆದು ಅವುಗಳ ಪತ್ತೆ ಹಚ್ಚಿ ಅವರ ಅವರ ಸ್ವಕೀಯರಿಗೆ ಕೊಡಬೇಕೆಂಬ ನಿರ್ಧಾರವನ್ನು ರೆವಿನ್ಯೂ ಮಂತ್ರಿಗಳು ಬೊಂಬಾಯಿ ಕೌನ್ಸಿಲಿನಲ್ಲಿ ತಿಳಿಸಿದರು.

### ಭೂಮಧ್ಯ ಸಾಗರದ ಸಮಸ್ಯೆ.

ಸ್ಪೈನಿನ ಸಮುದ್ರ ಕಲಹವಲ್ಲಿ ಹಡಗುಗಳ ಪ್ರಾನ್ಸ್ ಮತ್ತು ಇಂಗ್ಲಂಡು ಇತ್ತ ಕಡೆಗೆ ಇರಿಸಿದ್ದ ಯುದ್ಧನಾವೆಗಳನ್ನು ಈಗ ಭೂಮಧ್ಯಸಾಗರಕ್ಕೆ ಕಳುಹಿಸಿರುವವು. ಈ ಹಡಗುಗಳು ಭೂಮಧ್ಯಸಾಗರದಲ್ಲಿ, ವ್ಯಾಪಾರಿ ಹಡಗುಗಳ ಮೇಲೆ ಕಳ್ಳಾಟದ ದಾಳಿ ನಡೆಸಲ್ಪಡದಂತೆ ರಕ್ಷಣೆಗಾಗಿ ಉಪಯೋಗಿಸಲ್ಪಡುವವು. ಭೂಮಧ್ಯಸಾಗರದಲ್ಲಿ ಜಲಾಂತರ್ಗಾಮಿ ನಾವೆಗಳಲ್ಲಿಯಾದರೂ ಕಳ್ಳಾಟದಿಂದ ವ್ಯಾಪಾರಿ ಹಡಗುಗಳನ್ನು ಮುಳುಗಿಸಿದರೆ ಅವುಗಳನ್ನು ಯುದ್ಧನಾವೆ ಅಥವಾ ವಿಮಾನಗಳ ಮೂಲಕ ಒಡೆದು ಮುಳುಗಿಸಲಾಗುವುದು. ಈ ಏರ್ಪಾಡಿಗಾಗಿ ನೆರೆಸಲ್ಪಟ್ಟ ನಿಯೋನ್ ಪರಿಷತ್ತು ಜಯಶೀಲವಾಗಿ ಕೊನೆಗೊಂಡು ರಾಷ್ಟ್ರಗಳೆಲ್ಲಾ ಒಡಂಬಡಿಕೆಗೆ ಒಮ್ಮತದಿಂದ ಸಹಿಹಾಕಿರುವವು.

### ಇಟಲಿಯ ಸಿಟ್ಟು

ನಿಯೋನ್ ಪರಿಷತ್ತಿನ ಕುರಿತು ಇಟಲಿಯು ಬಹಳ ಸಿಟ್ಟುಗೊಂಡಿರುವುದು. ಇಟಲಿಯ ಪತ್ರಿಕೆಗಳು ಇಂಗ್ಲೆಂಡನ್ನು ಪ್ರಸಂಗ ಟೀಕಿಸಹತ್ತಿರುವವು. ನಿಯೋನ್ ಒಡಂಬಡಿಕೆಯು ಇಟಲಿಯ ವಿರೋಧವಾಗಿಯೇ ನಡಿಸಲ್ಪಟ್ಟಿದೆಂದೂ ಅದರಿಂದ ಅಂತರರಾಷ್ಟ್ರೀಯ ಪರಿಸ್ಥಿತಿಯು ಮತ್ತಷ್ಟು ವಿಷಮವಾಗಿರುವುದೆಂದೂ ಇಟಲಿಯ ಪತ್ರಿಕೆಗಳ ಅಭಿಮತ. ಭೂಮಧ್ಯಸಾಗರದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಹಡಗಗಳು ಸಹಕರಿಸಿ ಮುಂದಿನ ಯುದ್ಧಕ್ಕಾಗಿ ತರಬೇತಿಯ ಪ್ರದರ್ಶನ ನಡಿಸುವ ಏರ್ಪಾಡಿದೆಂದು ಒಂದು ಪತ್ರಿಕೆಯ ಅಭಿಮತ. ಜರ್ಮನಿ ಮತ್ತು ಇಟಲಿಗೆ ಹಾನಿಕರವಾಗಿ ಬ್ರಿಟಿಷ್ ಮತ್ತು ಪ್ರೆಂಚ್ ಸರಕಾರಗಳು ಈ ಒಪ್ಪಂದವನ್ನು ಮಾಡಿರುವವು ಇದರಿಂದ ಭೂಮಧ್ಯಸಾಗರದ ಪರಿಸ್ಥಿತಿಯು ಮತ್ತೂ ಕೆಡುವಂತಾಗಿದೆಯೆಂದೇ ಜರ್ಮನ್ ಪತ್ರಿಕೆಗಳ ಅಭಿಮತ

### ಲೀಗ್ ಎಸೆಂಬ್ಲಿ ಸಭೆಯು

ಇದೇ ತಾ 13ರಲ್ಲು ಜರಗಿತು. ತನ್ನ ಪರವಾಗಿ ಅನುಕೂಲಾಭಿಪ್ರಾಯವನ್ನುಂಟುಮಾಡುವರೆ ಸ್ಪೈನಿನ ಬಂಡಾಯಗಾರರೂ ಕೆಲಮಂದಿ ಪ್ರತಿನಿಧಿಗಳನ್ನು ಕಳುಹಿಸಿದ್ದರು. ಆದರೆ ಅವರನ್ನಾರೂ ಅಂಗೀಕರಿಸಲಿಲ್ಲ ಎಸೆಂಬ್ಲಿಯ 49 ಓಟುಗಳ ಪೈಕಿ 42ರ ಬಹುಮತದಿಂದ ಆಗಾಖಾನರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅವರು ತನ್ನ ಭಾಷಣದಲ್ಲಿ ತನ್ನ ದೇಶವಾದ ಹಿಂದೂದೇಶವನ್ನು ಇದರಿಂದ ಬಹಳವಾಗಿ ಗೌರವಿಸಿದಂತಾಯಿತು. ಲೀಗಿನ ತತ್ವವೇ ಹಿಂದೂದೇಶದ ಜೀವನತತ್ವವಾಗಿರುವುದೆಂದರು. ಜಾಪಾನು ಚೀನದ ಮೇಲೆ ನಡಿಸಿರುವ ಆಕ್ರಮಣದ ಕುರಿತು ಚೀನವು ಮಾಡಿಕೊಂಡಿರುವ ವಿನಂತಿಯನ್ನು ಲೀಗ್ ಕೌನ್ಸಿಲಿನ ವಿಚಾರಣೆಗೊಪ್ಪಿಸಲಾಯಿತು. ಅನ್ಯ ದೇಶಗಳನ್ನು ಗೆದ್ದು ತನ್ನ ಅಧಿಕಾರ ಸ್ಥಾಪಿಸುವ ಮದಾಂಧತೆಯಿಂದ ಜಾಪಾನು ನಿರ್ಘೃಣವಾದ ಕೊಲೆ ಮತ್ತು ಉದ್ದೇಶಪೂರ್ವಕವಾದ ವಿನಾಶಕಾರ್ಯವನ್ನು ನಡಿಸುತ್ತದೆ. ಇದರಿಂದಾಗಿ 450 ಮಿಲ್ಯ ಜನರ ಜೀವಿತಕ್ಕೆ ಅಪಾಯವುಂಟಾಗಿದೆ. ಇಡೀ ಲೋಕದ ನಾಗರಿಕತೆ ಮತ್ತು ಸುರಕ್ಷಿತತೆಯು ತಕ್ಕಡಿಯಲ್ಲಿ ತೂಗಾಡುತ್ತಿದೆಯೆಂಬುದೇ ಚೀನದ ವಿನಂತಿಯ ಸಾರವಾಗಿದ್ದಿತು

### ಗಡಿನಾಡಿನ ಸಂಧಿಯ ಶರ್ತಗಳು

ಸೆಪ್ಟಂಬರ ತಾ. 10ರಲ್ಲು ಇಂಡಿಯಾ ಸರಕಾರದ ಪ್ರತಿನಿಧಿಯೊಬ್ಬನು ಟೋರಿಖೇಲ್ ವಜೀರಿ ಪಂಗಡಿಗರ ಸಭೆಯಲ್ಲಿ ಭಾಗವಹಿಸಿ ಸರಕಾರದ ರಾಜಿಯ ಶರ್ತಗಳನ್ನು ತಿಳಿಸಿದರು. ಈ ಪ್ರಕಾರ ವಜೀರಿ ಪಂಗಡಿಗರು 420 ಕೋವಿ ಮತ್ತು ರೂ 20,000 ಜುಲ್ಮಾನೆ ಕೊಡತಕ್ಕದ್ದು ಮತ್ತು ಕೆಲವು ಸ್ಥಳಗಳು ಬ್ರಿಟಿಷರ ರಕ್ಷಣೆಯಲ್ಲಿರುವಂತೆ ಬಿಟ್ಟುಕೊಡತಕ್ಕದ್ದು. ಇದಕ್ಕೆ ಪಂಗಡಿಗರೊಪ್ಪಿರುವರು ಅವರ ವರ್ತನೆಯು ತೃಪ್ತಿಕರವಿತ್ತು.

### ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯು

ಅಕ್ಟೋಬರ ತಾ 27 ಮತ್ತು 30ರಲ್ಲಿ ಕಲ್ಕತ್ತದಲ್ಲಿ ನಡೆಯಲಿರುವುದು ಈ ಕಮಿಟಿಯಲ್ಲಿ ಭಾಗವಹಿಸಲು ಶ್ರೀ. ಸುಭಾಷಚಂದ್ರರು ಕಲ್ಕತ್ತಕ್ಕೆ ಬರಲಿರುವರು. ಅವರ ಆರೋಗ್ಯಸ್ಥಿತಿಯು ಈಗ ಬಹಳವಾಗಿ ಸುಧಾರಿಸಿದೆ ಅವರು ಮೂರು ನಾಲ್ಕು ಮೈಲು ನಡೆಯಬಲ್ಲವರಾಗಿದ್ದಾರೆ. ಹೊಟ್ಟೆಯಲ್ಲಿ ಮಾತ್ರ ಸ್ವಲ್ಪ ನೋವಿರುತ್ತದೆ. ಕಲ್ಕತ್ತದಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯು ಸೇರುವಂತೆ ಮಾಡಿದವರು ಶ್ರೀ ಸುಭಾಷಚಂದ್ರ ಭೋಸರು. ಶ್ರೀ ಭೋಸರು ಬಂಗಾಳದಲ್ಲಿ ಕಾಂಗ್ರೆಸ್ ಕೆಲಸವನ್ನು ಮುಂದೊತ್ತುವ ಕಾರ್ಯಕ್ರಮವೊಂದನ್ನು ತಯಾರಿಸಿರುವರು ಅವರು ಹೌಲ್ ಹೌಸಿಯಿಂದ ಬಂದ ಮೇಲೆ ಇಡೀ ಪ್ರಾಂತದ ಕೆಲಸಗಾರರೆಲ್ಲರ ಪರಿಷತ್ತೊಂದನ್ನು ಕರೆದು ತನ್ನ ಕಾರ್ಯಕ್ರಮವನ್ನು ಅದರ ಮುಂದಿಡುವರು ಇನ್ನು ಮುಂದೆ ಬಂಗಾಳದಲ್ಲಿ ಐಕ್ಯವುಂಟಾಗಿ ಕಾಂಗ್ರೆಸ್ ಕಾರ್ಯವು ಭರದಿಂದ ಮುಂದೊತ್ತಲ್ಪಡುವುದೆಂದು ನಿರೀಕ್ಷಿಸಲಾಗಿದೆ. ಈ ಸಭೆಗೆ ಗಾಂಧಿಜಿಯವರೂ ಆಮಂತ್ರಿಸಲ್ಪಟ್ಟಿರುತ್ತಾರೆ

### ಬೊಂಬಾಯಿಯ ಪ್ರಧಾನ ಮಂತ್ರಿಗಳ ಆಶ್ವಾಸನೆ

#### ಹರಿಜನ ಮಜೂರ ಮತ್ತು ವಿದ್ಯಾರ್ಥಿ ವೃಂದದ ಪ್ರದರ್ಶನ

ಇದೇ ತಾ 13ರಲ್ಲು ಪೂನದ ಹರಿಜನರು ಮತ್ತು ಕೆಲಸಗಾರರು, ಅಹಮ್ಮದನಗರ ಜಿಲ್ಲೆಯ ಮತ್ತು ಪೂನದ ಕೃಷಿಕರು ಪೂನ ಮತ್ತು ಬೊಂಬಾಯಿಯ ಕೋಲೇಜುಗಳ ವಿದ್ಯಾರ್ಥಿಗಳು ಪ್ರಧಾನ ಮಂತ್ರಿ ಖೇರರನ್ನು ಕಂಡು ಅವರಿಂದ ತಮ್ಮ ಹಿತಸಾಧನೆಯ ಆಶ್ವಾಸನೆ ಪಡೆದು ಹಿಂತಿರುಗಿರುವರು ಮೊದಲಿನ ಪಂಗಡದಲ್ಲ ಸುಮಾರು 150 ಮಂದಿ ಹರಿಜನರು ಮತ್ತು ಮಜೂರರಿದ್ದರು. ಅವರ ನಂತರ 400 ಮಂದಿ ಕೃಷಿಕರು ಬಂದರು. ಮೂರನೇದಾಗಿ 400 ಮಂದಿ ವಿದ್ಯಾರ್ಥಿಗಳು ಬಂದರು. ಇವರಲ್ಲಿ ಕೆಲವು ಮಂದಿ ಹುಡುಗಿಯರಿದ್ದರು ಶ್ರೀ ಖೇರರು ಮೂಕ ಮಿಲ್ಯಾಂತರ ಜನರು ಈಗ ತಮ್ಮ ಸಂಕಷ್ಟಗಳನ್ನು ತಿಳಿಸಕಲಿತರೆಂಬುದು ಸಂತೋಷಕರವೆಂದು ಸೂಚಿಸಿ ಅವರ ಕೇಳಿಕೆಗಳಾದ ಭೂಕಂದಾಯ ಇಳಿತ, ಶೀರ್ಘ ಬಾಕಿ ರಿಯಾಯಿತಿ ಸಾಲ ವಸೂಲಿ ಮುಂದೆ ಹಾಕುವ ವ್ಯವಸ್ಥೆ ರಾಜಕೀಯ ಮತ್ತು ಮಜೂರ ಮುಖಂಡರ ಬಿಡುಗಡೆಯ ಕುರಿತು ಸರಕಾರವು ವಿಚಾರಿಸುತ್ತಿರುವುದೆಂದರು. ವಿದ್ಯಾರ್ಥಿಗಳು ಮಂತ್ರಿಗಳ ಹೊಸ್ತಿಲ ಮನವಿಗೆ 6000 ಮಂದಿ ಸಹಿ ಹಾಕಿದ್ದರು ಸರಕಾರವು ಶಿಕ್ಷಣವನ್ನು ಸಂಪೂರ್ಣವಾಗಿ ಬದಲಾಯಿಸುವ ಆಲೋಚನೆಯಲ್ಲಿದೆ. ವಿದ್ಯಾರ್ಥಿಗಳಿಗೆ ಯಾವ ತೊಡಕೂ ಉಂಟಾಗದಂತೆ ತಾನು ನೋಡುತ್ತೇನೆ ಅವರಿಗೆ ಶಾರೀರಿಕ ಮತ್ತು ಸೈನಿಕ ತರಬೇತಿಯನ್ನು ಖಡ್ಡಾಯವಾಗಿ ಕೊಡಲಾಗುವುದು ಪರೀಕ್ಷೆಗಳ ಕಠಿಣತೆಯನ್ನು ಸಡಿಲುಮಾಡಲಾಗುವುದೆಂದು ವಿದ್ಯಾರ್ಥಿಗಳಿಗೆ ಮಾತುಕೊಟ್ಟರು

### ಉಪವಾಸ ದೀಕ್ಷೆ ನಿಲ್ಲಿಸಿದರು

ಗಾಂಧಿಜಿಯವರ ಪ್ರಥಮದ ವಿನಂತಿ ಮೇರೆಗೆ ಉಪವಾಸ ದೀಕ್ಷೆ ನಿಲ್ಲಿಸದಿದ್ದ 7 ಮಂದಿ ಕೈದಿಗಳು ಕೂಡಾ ಈಗ ತಮ್ಮ ದೀಕ್ಷೆ ಬಿಟ್ಟು ಆಹಾರ ತೆಗೆದುಕೊಳ್ಳಲಾರಂಭಿಸಿರುವರು. ಇವರ ಸಂಬಂಧವಾಗಿ ಗಾಂಧಿಜಿಯವರು ಮೂರು ಮೂರು ಸಲ ತಂತಿಬಿಟ್ಟು, ಕೈದಿಗಳ ಕೇಳಿಕೆಯ ಸ... ಕಷ್ಟ ನಿವಾರಣೆಗಾಗಿ ತಾನು ತನ್ನಿಂ... ಸಾಧ್ಯವಾದ ಪ್ರಯತ್ನ ಮಾಡುವೆನೆಂದು... ಅದಕ್ಕೆ ಅವರ ಉಪವಾಸದೀಕ್ಷೆಯು ತೊ... ದರೆಯಾಗಿದೆಯೆಂದೂ, ಆದುದರಿಂದ ... ವರು ಉಪವಾಸವ್ರತ ಬಿಟ್ಟು ರಾಷ್ಟ್ರ... ಆತುರವನ್ನು ದೂರಗೊಳಿಸಬೇಕೆಂದು... ಕೇಳಿಕೊಂಡಿದ್ದರು ಈ ಕೈದಿಗಳೆಲ್ಲಾ... ಈಗ, ಹಿಂಸೆಯಿಂದ ಸ್ವರಾಜ್ಯ ಸಾಧನೆ... ಹಾನಿಯುಂಟಾಗುವುದೆಂಬುದನ್ನು ಮ... ಗಂಡು ಸಂಪೂರ್ಣ ಅಹಿಂಸಾಪ್ರೇಮಿಗಳಾಗಿದ್ದಾರೆ ಇವರನ್ನೆಲ್ಲಾ ಬಿಡುಗಡೆಮಾ... ಬೇಕೆಂದು ಗಾಂಧಿಯವರು ಕೇಳಿಕೊಂ... ದ್ದರೂ ಸರಕಾರವು ಇವರನ್ನು ಅಂಡಮಾನಿನಿಂದ ಹಿಂದೂದೇಶಕ್ಕೆ ತರುವ ಪ್ರಶ್ನೆಯನ್ನು ಕೂಡಾ ಈ ವರೆಗೆ ನಿಶ್ಚೈಸಿರುವುದಿ...

ಕವಿರವೀಂದ್ರರು

ಈಗ ಗುಣಹೊಂದುತ್ತಿದ್ದಾರೆ. ಅವರಿಗೆ ಇನ್ನು ಯಾವ ಅಪಾಯದ ಭಯವು ಇರುವುದಿಲ್ಲ. ಕೆಲವು ದಿನಗಳಲ್ಲಿ ಅವರ ಸಂಪೂರ್ಣ ಆರೋಗ್ಯ ಹೊಂದಬಹುದೆಮು ನಿರೀಕ್ಷಿಸಲಾಗಿದೆ. ಇದರಲ್ಲಿ ಬಂಗಾಳದಲ್ಲಿ ಮತ್ತು ಇಡೀ ದೇಶದಲ್ಲಿ ಮಾತ್ರವಲ್ಲ ಚೀನಾ ಮೊದಲಾದ ಪರದೇಶಗಳಲ್ಲಿಯೂ ಸಂತೋಷವುಂಟಾಗಿದೆ ಗಾಂಧಿಜಿಯವರು ಪ್ರತಿ ದಿನ ಕವಿವರ್ಯರ ಆರೋಗ್ಯಸ್ಥಿತಿಯನ್ನು ತಂತಿ ಮೂಲಕ ತಿಳಿದು ಈಗ ಸಂತೋಷಗೊಂಡಿದ್ದಾರೆ. ಪಂಡಿತ ಜವಾಹರಲಾಲರೂ ಇದೇ ರೀತಿ ಆನಂದ ಸೂಚಿಸಿದ್ದಾರೆ

### 21,500 ತರುಣರ ಮೇಲೆ ನಿರ್ಬಂಧ

ಬಂಗಾಳದ ಚಿತ್ತಗೋಂಗ್ ಜಿಲ್ಲೆಯೊದರಲ್ಲೇ, ಕ್ರಾಂತಿಕಾರಕ ಚಳವಳಿಕೆ ಬೇರೆ ಬೇರೆ ರೀತಿಯಲ್ಲಿ ಸಹಾಯಮಾ... ದರೆಂಬ ಆರೋಪದಿಂದ 21,500 ಮಂ... ತರುಣರ ಮೇಲೆ ಹಾಕಲ್ಪಟ್ಟ ಬೇಂ... ಬೇರೆ ರೀತಿಯ ನಿರ್ಬಂಧಗಳು ಇನ್ನೂ ಯಥಾ ಪ್ರಕಾರ ವಿರುತ್ತವೆ. ಇದೇ ರೀತಿಯಲ್ಲಿ ಮಿಡ್ನಾಪುರವೇ ಮೊದಲಾ... ಇತರ ಜಿಲ್ಲೆಗಳಲ್ಲಿ ಎಷ್ಟು ಮಂದಿಯ ಮೇಲೆ ನಿರ್ಬಂಧವಿರುವುದೆಂದು ತಿಳಿದಿಲ್ಲ. ಬೇಗನೆ ಅಂಡಮಾನಿನಲ್ಲಿರುವ 25 ಬಂಗಾಳಿ ಮತ್ತು 40 ಮಂದಿ ಇತರ ಪ್ರಾಂತೀಯ ಕೈದಿಗಳು ಹಿಂದೂದೇಶಕ್ಕೆ ತರಲ್ಪಡಲಿರುವರೆಂದು ತಿಳಿದುಬರುತ್ತದೆ

# ಬಿಡುನುಡಿಗಳು

ಉಗ್ರನರಸಿಂಹ

●●●

## ಕರ್ನಾಟಕ ಪ್ರಾಂತ ನಿರ್ಮಾಣ

ಭಾಷಾನುಗುಣ ಪ್ರಾಂತ ವಿಭಜನೆಯು ಕಾಂಗ್ರೆಸ್ಸಿನ ಧೋರಣಕ್ಕೆ ಅನುಕೂಲವಿದು ಪ್ರದರಿಂದಲೂ. ಕರ್ನಾಟಕ ಜಿಲ್ಲೆಗಳು ಬೊಂಬಾಯಿ ಮತ್ತು ಮದ್ರಾಸ್ ಕಾಂಗ್ರೆಸ್ ಸರಕಾರಗಳ ಅಧೀನವಿರುವುದರಿಂದ ಏಕೀಕರಣದ ವಿಷಯದಲ್ಲಿ ಕನ್ನಡಿಗರಿಗೆ ಶುಭ ನಿರೀಕ್ಷೆಯುಂಟಾಗಿರುವುದು. ಮಹಾರಾಷ್ಟ್ರದವರು ಅಡ್ಡಿಯನ್ನೊಡ್ಡಬಹುದೆಂಬ ಭೀತಿಯಿದ್ದಿತು. ಅದನ್ನು ಮಹಾರಾಷ್ಟ್ರದ ಮುಂದಾಳುಗಳಾದ ಶ್ರೀ| ಕೇಳ್ಕರವರು ತಮ್ಮ ಅಭಿಪ್ರಾಯದಲ್ಲಿ ಸ್ಪಷ್ಟೀಕರಿಸಿ ದೂರಮಾಡಿದ್ದಾರೆ 'ಕರ್ನಾಟಕವು ಪ್ರತ್ಯೇಕ ಪ್ರಾಂತವಾಗಬೇಕು. ಅದಕ್ಕೊಂದು ವಿದ್ಯಾಪೀಠವಿರಬೇಕು. ಯಾವ ಭಾಗಗಳಲ್ಲಿ ಕನ್ನಡಿಗರು ಅಧಿಕ ಸಂಖ್ಯಾಕರಾಗಿರುವರೋ ಅಂಥವುಗಳನ್ನು ಮಹಾರಾಷ್ಟ್ರೀಯರು ಕನ್ನಡಿಗರಿಗೆ ಬಿಟ್ಟುಕೊಡಬೇಕು. ಸಾಂಸ್ಕೃತಿಕ ದೃಷ್ಟಿಯಿಂದ ನಾನು ಇದಕ್ಕೆ ಹೆಚ್ಚಿನ ಮಹತ್ವ ಕೊಡುತ್ತೇನೆ. ಮಹಾರಾಷ್ಟ್ರೀಯರೂ ಕನ್ನಡಿಗರೂ ಪರಸ್ಪರ ಸೌಹಾರ್ದದಿಂದ ವರ್ತಿಸಿದರೆ ಇದೇನೂ ಕಷ್ಟದ ಮಾತಲ್ಲ" ಎಂದು ಕೇಳ್ಕರ ಅಭಿಪ್ರಾಯ.

ಕನ್ನಡಿಗರೇ ಕರ್ನಾಟಕ ಪ್ರಾಂತರಚನೆಯ ವಿಷಯದಲ್ಲಿ ನಿಜವಾದ ಆಸಕ್ತಿಯುಳ್ಳವರಿರುವಂತೆ ತೋರುವುದಿಲ್ಲ ಶ್ರೀ ಕೆ ಆರ್. ಕಾರಂತರಂಥವರೇ ಈಗ ಕರ್ನಾಟಕ ಪ್ರಾಂತರಚನೆಗಾಗಿ ಚಳವಳಿಸುವ ಸಂದರ್ಭವಿಲ್ಲೆಂಬ ಅಭಿಪ್ರಾಯವಿತ್ತುದು ಆಶ್ಚರ್ಯಕರ ಆಂಧ್ರರು ಭರದಿಂದ ತಮ್ಮ ಪ್ರಾಂತರಚನೆಯ ಚಳವಳವನ್ನು ಮುಂದೊತ್ತುತ್ತಿದ್ದಾರೆ. ಈ ಸಂದರ್ಭದಲ್ಲಾದರೂ ಕನ್ನಡಿಗರು ಕಣ್ಮುಚ್ಚಿ ಕುಳಿತಿರದೆ ಪ್ರಬಲ ಆಂದೋಲನನೆಬ್ಬಿಸಬೇಕು. ಕರ್ನಾಟಕ ಪ್ರಾಂತಿಕ ಮತ್ತು ಡಿಸ್ಟ್ರಿಕ್ಟ ಕಾಂಗ್ರೆಸ್ ಕಮಿಟಿಗಳೇ ಈ ಪ್ರಶ್ನೆಗಳನ್ನೆತ್ತಿಹಿಡಿಯಬೇಕು.

### ನಾ| ಖೇರರ ಅಸಡ್ಡೆ

ಮುಂಬಾಯಿ ಇಲಾಖೆಯ ಪ್ರಧಾನ ಮಂತ್ರಿಗಳಾದ ನಾ| ಖೇರರು ಕರ್ನಾಟಕ ಏಕೀಕರಣ ಗೊತ್ತುವಳಿಯ ವಿಷಯದಲ್ಲಿ ಸ್ವಲ್ಪ ಉದಾಸೀನರಾಗಿರುವರೆಂದು ತಿಳಿದು ಬರುತ್ತದೆ ಆದಕ್ಕವರು ಒಂದು ಕಾರಣವನ್ನು ಕೊಟ್ಟು ಗೊತ್ತುವಳಿಯನ್ನು ತಂದವರು ಹಿಂದೆ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದಾರೆ ನಾ| ಖೇರರ ಅಭಿಪ್ರಾಯದಲ್ಲಿ ಕನ್ನಡಿಗರು ಅತೃಪ್ತಿ ಹೊಂದುವ ಪ್ರಸಂಗವೆಂದೇ ತೋರುತ್ತಿದೆ. ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಕರ್ನಾಟಕ ಪ್ರಾಂತರಚನೆಯ ಪ್ರಶ್ನೆಯಲ್ಲಿ ಸಹಾನುಭೂತಿ ತೋರಿಸಿ ಮುಂದಿನ ಅಧಿವೇಶನದಲ್ಲಿ ಅದರ ಕುರಿತು ಚರ್ಚಿಸುತ್ತೇವೆಂದು ತಿಳಿಸಿರುವಾಗ ಖೇರರು ಆ ರೀತಿ ಅಭಿಪ್ರಾಯಪಡಬಾರದಿತ್ತು. ಖೇರರು ತನ್ನ ಅಸಡ್ಡೆ ಬಿಟ್ಟು ಕನ್ನಡಿಗರು ನ್ಯಾಯವಾದ ಬೇಡಿಕೆಯನ್ನು ಸಲ್ಲಿಸಲು ಮುಂದಾಳುಗಳಾಗಬೇಕೆಂದು ನಮ್ಮ ಪ್ರಾರ್ಥನೆ ಕನ್ನಡಿಗರಾದರೂ ಅಷ್ಟಕ್ಕೆ ಸುಮ್ಮಗಿರದೆ ತೀವ್ರ ಚಳವಳವನ್ನು ಹೂಡಬೇಕು, ಕನ್ನಡಿಗರೆಲ್ಲಾ ಏಕಕಂಠದಿಂದ ಕರ್ನಾಟಕ ಪ್ರಾಂತವನ್ನು ಬೇಡುವಾಗ ಖೇರರಾಗಲೀ ಯಾರೇ ಆಗಲೀ ತಿರಸ್ಕರಿಸಲಾರರೆಂಬುದನ್ನು ಮರೆಯಬಾರದು. ಆದುದರಿಂದ ಮುಂಬಯಿಯ, ಮದ್ರಾಸಿನ ಎಲ್ಲಾ ಕನ್ನಡಿಗರೂ ಒಂದಾಗಿ ತಕ್ಕ ಚಳವಳವನ್ನು ಹೂಡಬೇಕಾಗಿದೆ

### ಸಂಸ್ಥಾನಗಳೂ ಕನ್ನಡಿಗರೂ

ಜಮಖಂಡಿಯೇ ಮೊದಲಾದ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಕನ್ನಡಿಗರೇ ಅಧಿಕ ಸಂಖ್ಯಾತರಾಗಿರುವುದಾದರೂ ಆಳರಸರು ಮಹಾರಾಷ್ಟ್ರೀಯರಾದುದರಿಂದ ಅಲ್ಲಿಯ ಕನ್ನಡಿಗರ ಬೇಡಿಕೆಗಳನ್ನು ಅವರು ಪೂರೈಸದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ರಾಜ ಕೋಶವು ಕನ್ನಡ ರೈತನ, ಹಾಗೂ ಕನ್ನಡಿಗರ ಕೊಡುಗೈಯಿಂದ ತುಂಬುತ್ತದೆಂಬುದನ್ನೂ ಕನ್ನಡಿಗರೇ ತಮ್ಮ ಅಸ್ತಿತ್ವದ ಜೀವನಾಳವೆಂಬುದನ್ನೂ ಅಲ್ಲಲ್ಲಿಯ ಆಳರಸರು ಗಮನಿಸಬೇಕು. ಅವರ ಅಂತಹ ನಿರಂಕುಶ ವರ್ತನೆಯು ಒಂದು ಕಾಲವಲ್ಲಿ ಅವರಿಗೇ ಹಾನಿಯನ್ನು ತರುವಂತಹವುಗಳಾಗಿವೆಯೆಂಬುದನ್ನು ಮರೆಯದೆ ಜಾಗರೂಕರಾಗಿರಬೇಕು. ಅಲ್ಲಿಯ ಪರಿಸ್ಥಿತಿಯ ವಿಷಯದಲ್ಲಿ ಶ್ರೀ| ಕೇಳ್ಕರ್‌ರವರು ಕೊಟ್ಟ ಪ್ರಕಟಣೆಯು ಮನನೀಯವಿದೆ. "ಮಹಾರಾಷ್ಟ್ರ ರಾಜರ ಸಂಸ್ಥಾನದಲ್ಲಿ ಕನ್ನಡಿಗ ಪ್ರಜೆಗಳು ಹೆಚ್ಚು ಮಂದಿಯಲ್ಲಿದ್ದಾರೆ ಅಂಥವರ ಶಿಕ್ಷಣಗಳಿಗಾಗಿ ಕನ್ನಡ ಶಾಲೆಗಳನ್ನೇರ್ಪಡಿಸುವುದು ಸೂಕ್ತವಾಗಿದೆ ಅಲ್ಲಿಯ ಕನ್ನಡಿಗರನ್ನು ಕಡೆಗಣಿಸುವ ಅಲ್ಲಿಯ ಆಳರಸರ ಮನೋವೃತ್ತಿಯನ್ನು ನಾನು ನಿಷೇಧಿಸದಿರಲಾರೆ ಕನ್ನಡಿಗರ ಪ್ರಜೆಗಳು ಬೇಡುವ ವಿಷಯಗಳನ್ನು ಅವರು ಪೂರೈಸಲೇಬೇಕು ಇಲ್ಲವೇ ಅನ್ಯಾಯವಾದೀತು ಏಕೆಂದರೆ ಅರಸರ ಭಂಡಾರದಲ್ಲಿ ಕನ್ನಡಿಗರ ಹಣ ತುಂಬಿದೆ." ಶ್ರೀ| ಕೇಳ್ಕರರ ಈ ಸ್ಪಷ್ಟೋಕ್ತಿಯು ಅತ್ಯಭಿನಂದನೀಯವಿದೆ.

### ಇಂಡಿಯಾ ಸರಕಾರದ ಸ್ತುತ್ಯನಿರ್ಧಾರ

ಲಾಹೋರಿನಲ್ಲಿ ಒಂದು ಗೋವಧಾಲಯವನ್ನು ಕಟ್ಟಿಸಬೇಕೆಂದು ಇಂಡಿಯಾ ಸರ್ಕಾರವು ನಿರ್ಧರಿಸಿತ್ತಷ್ಟೆ' ಇದರ ವಿಚಾರವಾಗಿ ಅಖಿಲಭಾರತೀಯರೂ ಸಂತಾಪಗೊಂಡಿದ್ದರು. ಮಹಾತ್ಮಾಗಾಂಧಿ–ಜವಾಹರಲಾಲನೆಹರು–ಪಂಡಿತ ಮದನಮೋಹನ ಮಾಲವೀಯರೇ ಮೊದಲಾದ ಧುರೀಣರು ಆ ಮಟ್ಟಿಗೆ ತಮ್ಮ ಅಸಮ್ಮತಿಯನ್ನು ಪ್ರಕಟಿಸಿದ್ದರು. ಇದನ್ನೆಲ್ಲಾ ಅರಿತು ಇಂಡಿಯಾ ಸರಕಾರವು ಅದನ್ನು ಕಟ್ಟಿಸುವ ಯೋಜನೆಯನ್ನು ವಜಾ ಮಾಡಿರುವುದು ಈ ವಿಷಯವಾಗಿ ವೈಸರಾಯರು ಒಂದು ಹೇಳಿಕೆಯನ್ನು ಹೊರಡಿಸಿರುವರು. "ಇಂಡಿಯಾ ಸರಕಾರಕ್ಕೆ ಅಂತಹ ಆಲೋಚನೆಯೊಂದಿತ್ತು. ಪಂಜಾಬ್ ಸರಕಾರವು ತನ್ನ ಸಹಾನುಭೂತಿಯನ್ನು ತೋರಿಸಿತ್ತು. ಆ ಮೇಲೆ ನನ್ನ ಸರಕಾರವು ಅದನ್ನು ಕಟ್ಟಿಸುವ ನಿರ್ಧಾರಮಾಡಿತು. ಈಗ ಅದರಿಂದ ಅಶಾಂತಿಯುಂಟಾದೀತೆಂದು ತಿಳಿದು ಬಂದಿರುವುದರಿಂದ ಆ ಯೋಜನೆಯನ್ನು ವಜಾಮಾಡಲಾಗಿದೆ ಇದರಿಂದ ಸರಕಾರಕ್ಕೆ ೬೦ ಕ್ಷಲರೂಪಾಯಿಗಳು ನಷ್ಟ!" ಪ್ರಜಾಕೋಟಿಯು ಈ ಮಟ್ಟಿಗೆ ಇಂಡಿಯಾ ಸರಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ ಏಕೆಂದರೆ ಹಿಂದೂ ದೇಶವು ಕೃಷಿಕರ ದೇಶ ಕೃಷಿಕರ ಶ್ರಮದಲ್ಲಿದೆ ಭಾರತದ ಜೀವನಾಳ, ಅಂತಹ ಕೃಷಿಕರ ಅಭಿವೃದ್ಧಿಯು ಗೋ ಅಭಿವೃದ್ಧಿಯ ಪ್ರಶ್ನೆಯನ್ನು ಅವಲಂಬಿಸಿಕೊಂಡಿದೆ ಇಂತಹ ಕಸಾಯಿಖಾನೆಗಳಿಂದ ಭಾರತಕ್ಕೆ ದೊಡ್ಡದಾದ ಆರ್ಥಿಕ ಅಡಚಣೆಯೇ ಬರುವುದು ಯಾವ ದೃಷ್ಟಿಯಿಂದ ನೋಡಿದರೂ ಗೋವು ಪೂಜ್ಯವಾಗಿದೆ ಗೋವು–ಮತ್ತು ಕೃಷಿಕರು ಅಭಿವೃದ್ಧಿಹೊಂದಿದಂತೆಲ್ಲಾ ನಮ್ಮ ನಾಡೂ ಅಭಿವೃದ್ಧಿ ಹೊಂದಲಿದೆ. ಗೋಪಕ್ಷಪಾತಿಗಳಾದ ವೈಸರಾಯರು ಒಂದು ಲಕ್ಷಗೋಹತ್ಯೆಯನ್ನು ಪಟ್ಟಣದ ನಡುವೆ ಪ್ರತ್ಯಕ್ಷವಾಗಿ ನಡಿಸುವ ಬೀಭತ್ಸ ಯೋಜನೆಯನ್ನು ನಿಲ್ಲಿಸಿದುದು ಅತ್ಯಂತ ಸ್ತುತ್ಯ

### ಉಡುಪಿ ಮುನಿಸಿಪಾಲಿಟಿ

ಉಡುಪಿಯ ಮುನಿಸಿಪಾಲಿಟಿಯನ್ನು ರದ್ದುಮಾಡಬೇಕೆಂದೂ ಕಮಿಶನರರನ್ನು ತೆಗೆಯಬೇಕೆಂದೂ ನಾನಾ ರೀತಿ ಯತ್ನಗಳನ್ನು ಉಡುಪಿಯವರು ಹಲವರು ಮಾಡುತ್ತಿರುವರು ಆದರೆ ನಗರದ ಹಿತದೃಷ್ಟಿಯಿಂದ ಮುನಿಸಿಪಾಲಿಟಿಯು ಅಗತ್ಯವಿದೆ. ನಮ್ಮ ಊರಿಗಿಂತ ಚಿಕ್ಕ ಊರುಗಳಲ್ಲಿ ಸಹಾ ನಗರಸಭೆಗಳಿವೆ. ನಗರಸಭೆಯು ನಗರದ ಹಿತಚಿಂತನೆಗಾಗಿಯೂ ನಾಗರಿಕರಿಗೆ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿಯೂ ಏರ್ಪಟ್ಟಿದ್ದಾಗಿದೆ. ಆದರೆ ಪ್ರಕೃತದ ಆರ್ಥಿಕಮುಃಸ್ಥಿತಿಯಲ್ಲಿ ಉಡುಪಿಗೆ ಮುನಿಸಿಪಾಲಿಟಿಯು ಸಂಕಷ್ಟಕಾರಣವಾಗಿದೆಯೆಂದು ತೆರಿಗೆದಾರರು. ಅದನ್ನು ರದ್ದುಪಡಿಸಲು ಪ್ರಯತ್ನಪಡುತ್ತಿರುವರು ಇದು ಎಷ್ಟರ ಮಟ್ಟಿಗೆ ಪರಿಣಾಮಕಾರಿಯೋ ತಿಳಿಯದು! ಏಕೆಂದರೆ ಮುನಿಸಿಪಾಲಿಟಿಯನ್ನಾಗಲೀ ಕಮಿಶನರರನ್ನಾಗಲೀ ರದ್ದುಪಡಿಸಬೇಕೆಂಬ ಚಳವಳಕ್ಕೆ ಕಾಂಗ್ರೆಸ್ಸು ಸರಕಾರವು ಸಹಾನುಭೂತಿಯನ್ನು ಕೊಟ್ಟೀತೆಂದು ಹೇಳಬರುವುದಿಲ್ಲ ನಗರದ ಕ್ಷೇಮಚಿಂತನೆಯಿಂದ ಮುನಿಸಿಪಾಲಿಟಿಯೂ, ಕಮಿಶನರರೂ ಅಗತ್ಯವೆಂದು ಕಾಂಗ್ರೆಸಿನ ಅಭಿಪ್ರಾಯವಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳ ಕೂಡೆ ವಿಚಾರಿಸಿದಾಗ ತಿಳಿದುಬಂದಿದೆಯೆಂದು ವರ್ತಮಾನ ಹೀಗಿದ್ದಲ್ಲಿ ಈ ವ್ಯರ್ಥವಾದ ಚ–ವಳದಿಂದೇನು? ಅದಕ್ಕೆ ಕಾಂಗ್ರೆಸಿನವರು ಸಹಾಯವಿತ್ತು ನಡಿಸುವುದಾದರೂ ಹೇಗೆ? ಜನರೆಲ್ಲಾ ಸಹಕರಿಸಿ ಮುನಿಸಿಪಾಲಿಟಿಯಿಂದಾಗುವ ಪೀಡೆಗಳನ್ನು ಎಷ್ಟು ಮಟ್ಟಿಗೆ ಕಡಿಮೆಮಾಡುವಂತೆ ನೋಡಿಕೊಂಡರೇನೇ ಚೆನ್ನಾಗಿರುವುದಲ್ಲವೇ?

---

### ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂ ೩೯೭

ಕಾವೇರಿ ಶೆಡ್ತಿ ... ವಾದಿ

ವಿಷ್ಣು ದಾಸಪ್ಪ ಕೂಡಾ ಪ್ರತಿವಾದಿಗಳು

೬ನೇ ಪ್ರತಿವಾದಿ ಸುಬ್ಬಣ್ಣ ನ್ಯಾಸು ಬಾಗ ಯಾನೆ ಸುಬ್ಬಣ್ಣ ಮಾಸ್ತರ್ ಇವರ ಅವಗಾಹನೆಗೆ—

1ನೆ ಲಾಗಾಯ್ತು 4ನೆ ಪ್ರತಿವಾದಿರವರೆ ವ 6ನೆ ಪ್ರತಿವಾದಿಯ ಸಹೋದರ ಮೃತ ಶ್ರೀನಿವಾಸ ನ್ಯಾಸುಭಾಗನು ವಾದಿಳಿಗೆ 10 3 '36ರಲ್ಲು ರೂಪಾಯಿ 500 0-0 ಕ್ಕೆ ಬರಕೊಟ್ಟ ಡಿಮಾಂಡ್ ಪ್ರೋನೋಟಿನ ಪ್ರಕಾರ ಬರತಕ್ಕ ಹಣದ ಬಗ್ಯೆ ಮೃತನ ಸೊತ್ತುಗಳ ಮೇಲೆ ಡಿಕ್ರಿ ಕೇಳಿ ವಾದಿಳು ದಾಕ್ಲುಮಾಡಿದ ಮೇಲ್ಕಾಣಿಸಿದ ದಾವೆಯು 30–9–37ಕ್ಕೆ ತನಿಖೆಗೆ ಇಡೋಣಾಗಿಯದೆ. ಆ ಕುರಿತು ಆಕ್ಷೇಪವಿದ್ದರೆ ಆ ದಿವಸ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನಿವೇದಿಸಿಕೊಳ್ಳತಕ್ಕದ್ದು ಇಲ್ಲವಾದರೆ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

**K S Shetty**, B. A. B. L
*Advocate for Plaintiff.*
Coondapoor
18-9-'37.

---

ನಮ್ಮೊಡನೆ ಪತ್ರವ್ಯವಹಾರ ಮಾಡುವವರು ತನ್ನ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

**ಮೆನೇಜರ್, ನವಯುಗ.**

ಅಲಭ್ಯ ಲಾಭ! ಉಡುಪಿ ನಿಜವಾದ ಭದ್ರತೆಗೆ!!

ಶ್ರೀ ಪೇಜಾವರ ಮಠದ ಪರ್ಯಾಯಂ

ಪ್ರೊಮಿಸರೀ ನೋಟನ್ನು ಇಂದೇ ಕೊಂಡುಕೊಳ್ಳಿರಿ!

ಕೊಂಡುಕೊಳ್ಳುವವರು ಟ್ರಾನ್ಸ್‌ಫರ್ ಮಾಡಿಕೊಡುವ ಅನುಕೂಲತೆಗೋಸ್ಕರ ಬೋಂಡು ಎಂಬ ಹೆಸರು ತೆಗೆದು ಪ್ರೊಮಿಸರೀ ನೋಟು ಎಂದು ಹೆಸರು ಹಾಕಿದೆ

ಮಠದವರಿಗೆ ಅವಶ್ಯವಾದ ಗರ್ಜಿನ ಬಗ್ಗೆ ಸಾಲಮಾಡುವ ಅಗತ್ಯ ಉಂಟೆಂದೂ. ಅದು ಮಠಗಳ ಹುಟ್ಟುವಳ್ಳಿ ಮೇಲ ಸಿಂಧುವಾಗತಕ್ಕದ್ದೆಂದೂ ಪ್ರೀವಿಕೌನ್ಸಿಲಿನ ತೀರ್ಪು ಇದೆ.

ರೂ. 75, 80, 85, 90ರ ಪ್ರೊಮಿಸರೀ ನೋಟನ್ನು ಪಡಕೊಂಡು ಕ್ರಮವಾಗಿ 5, 4, 3, 2 ವರ್ಷಗಳಲ್ಲಿ ಒಂದು ನೂರು ರೂಪಾಯಿಗಳನ್ನು ವಾಪಾಸು ಪಡೆಯಿರಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜನರಲ್ ಏಜಂಟ್, ಪೇಜಾವರ ಮಠ, ಉಡುಪಿ.

# ದಕ್ಷಿಣ ಕನ್ನಡದಲ್ಲಿ ಖಾದೀ ಉತ್ಪತ್ತಿ ಕೇಂದ್ರ

(**H. Narayana Rao**, *Organiser, Khadi Centre Ajjampur.*)

ಕಾಂಗ್ರೆಸ್ ಸರ್ಕಾರವು ಬಂದಂದಿನಿಂದ ಖಾದಿಗೆ ಒಂದು ಹೊಸ ತೇಜಸ್ಸು ಬಂದಿದೆ. ಗಿರಾಕಿಗಳು ಹೆಚ್ಚುತ್ತಿದ್ದಾರೆ. ಖಾದೀ ಒದಗಿಸುವುದು ಉತ್ಪತ್ತಿ ಕೇಂದ್ರಗಳಿಂದ ಅಸಾಧ್ಯವಾಗಹತ್ತಿದೆ. ಖಾದೀ ಉತ್ಪತ್ತಿಯನ್ನು ಈಗಿರುವ ಎಲ್ಲಾ ಕೇಂದ್ರಗಳೂ ಇಮ್ಮಡಿಯಾಗಿ ಮಾಡಲುಪಕ್ರಮಿಸಬೇಕೆಂದು ಕಾರ್ಯ ಪ್ರಾರಂಭವಾಗಿದೆ. ಆರ್ಥಿಕ ಪ್ರಶ್ನೆಯನ್ನು ಹಳ್ಳಿಗಳಲ್ಲಿ ಬಿಡಿಸಬೇಕಾದರೆ ಗ್ರಾಮ ಕೈಗಾರಿಕೆಗಳಲ್ಲಿ ಪ್ರಥಮ ಸ್ಥಾನವಾದ ಖಾದಿ ಉತ್ಪತ್ತಿ ಕೇಂದ್ರಗಳು ಹಿಂದುಸ್ಥಾನದಲ್ಲೆಲ್ಲಾ ಹೆಚ್ಚಾಗಬೇಕು. ನೂಲುವುದು ಗ್ರಾಮ ಗ್ರಾಮಗಳಲ್ಲೂ ಪ್ರಸಾರವಾಗಬೇಕು. ನೂಲುವ ಪವಿತ್ರ ಉದ್ಯೋಗವು ಸಾರ್ವತ್ರಿಕವಾದ ದಿನವೇ ಹಿಂದೂಸ್ಥಾನಕ್ಕೆ ಪೂರ್ಣ ಸ್ವರಾಜ್ಯವೆಂದು ಮಹಾತ್ಮಾಜಿಯವರು ನುಡಿದ ಆ ದಿವ್ಯವಾಣಿಯು ಖಾದೀ ಕೆಲಸಗಾರರಲ್ಲಿ ನಿತ್ಯ ಧ್ವನಿಸುತ್ತಿದೆ. ಈಗ ಮದ್ರಾಸ್ ಸರಕಾರವು ಖಾದಿ ಕೈಗಾರಿಕೆಗೆ ಸ್ಯಾಂಕ್ಷನ್ ಮಾಡಿದ ಎರಡು ಲಕ್ಷ ರೂಪಾಯಿಗಳನ್ನು ಸಂಸ್ಥಾನವು ಹೇಗೆ ವಿನಿಯೋಗಿಸಿ ಖಾದೀ ಉತ್ಪತ್ತಿಯನ್ನು ಹೆಚ್ಚಿಸುವುದೋ ನೋಡಬೇಕು

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಹಳ ಮಂದಿ ನೂಲುವವರಿದ್ದಾರೆ. ಅಸಹಕಾರ ಚಳವಳಿಯ ದಿನಗಳಲ್ಲಿ ಇವಕ್ಕಿದ್ದ ಆ ಉತ್ಸಾಹದಿಂದ ಸಾವಿರಾರು ಬಡಬಗ್ಗರು ಈ ಕಾರ್ಯವನ್ನು ಕೈಕೊಂಡು ಒಂದು ತುತ್ತು ಅನ್ನವನ್ನು ಸಂಪಾದಿಸುತ್ತಿದ್ದರು. ಸರಿಯಾದ ಸಂಸ್ಥೆ ಮತ್ತು ವ್ಯವಸ್ಥಿತ ಆಡಳಿತೆ ಇಲ್ಲದಿದ್ದುದರಿಂದ ಅಂದು ನೂಲುವದನ್ನು ಸಾವಿರಾರು ಮಂದಿ ಬಿಟ್ಟು ಬಿಟ್ಟರು. ಅದನ್ನು ಪುನರುಜ್ಜೀವನಗೊಳಿಸುವುದಕ್ಕೆ ಈಗ ಕಾಲಬಂದಿದೆ. ನೂಲುವವರಿಗೆ 8 ಘಂಟೆಯ ಕೆಲಸಕ್ಕೆ ಮೂರಾಣೆ ಕೂಲಿ ಕೊಡುವ ವ್ಯವಸ್ಥೆಯು ಜ್ಯಾರಿಗೆ ಬಂದಿದೆ. ಇದರಿಂದ ಒಂದು ಹೊಸ ಮನ್ವಂತರವೇ ಖಾದೀ ಚಳವಳಿಯಲ್ಲಿ ಉತ್ಪನ್ನವಾಗಿದೆ. ಇದರ ಪೂರ್ಣ ಉಪಯೋಗವನ್ನು ಕನ್ನಡ ಜಿಲ್ಲೆಯವರು ಮಾಡಿಕೊಂಡದ್ದೇ ಆದರೆ ಆ ಬಡ ಜಿಲ್ಲೆಯ ನೂರಾರು ಹಳ್ಳಿಗಳ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಏನೇನೂ ಸಂದೇಹವಿಲ್ಲ. ಇದಕ್ಕೆ ಬೇಕಾದ ರಚನಾತ್ಮಕ ಕಾರ್ಯಕ್ರಮವನ್ನು ಕೆಲವು ಅರಿತ ನುರಿತ ಖಾದೀ ಕೆಲಸಗಾರರ ಸಹಕಾರ ಪಡೆದು ಪ್ರಾರಂಭಿಸಬಹುದು. ರೈತರು ತಮಗೆ ಬೇಕಾಗಿರುವ ಹತ್ತಿಯನ್ನು ತಮ್ಮ ಗ್ರಾಮಗಳಲ್ಲಿಯೇ ಬೆಳೆಸಲು ಸಾಧ್ಯವಿದೆ.

ಇದಕ್ಕೆ ಬೇಕಾದ ಸಂಸ್ಥೆಯೊಂದನ್ನು ಸ್ಥಾಪಿಸುವದಾದರೆ ಈ ಕೆಳಗಿನ ಕೆಲವು ಸೂಚನೆಗಳನ್ನು ವ್ಯವಸ್ಥಾಪಕರ ಅವಗಾಹನೆಗೆ ಕೊಡುತ್ತೇನೆ

1 ಈಗ ಸ್ಥಾಪಿಸಿರುವ ಎಲ್ಲಾ ಗ್ರಾಮ ಕಾಂಗ್ರೆಸ್ ಕಮಿಟಿಗಳೂ ನೂಲುವ ಕಾರ್ಯಕ್ರಮವನ್ನು ಆಯಾ ಗ್ರಾಮಗಳಲ್ಲಿ ಜಾರಿಗೆ ತರುವಂತೆ ಮಾಡಬೇಕು.

2 ಹಾಗೆ ತಯಾರಿಸಿದ ನೂಲನ್ನು ಖರೀದಿಸಿ ನೇಯಲು ಜಿಲ್ಲೆಯಲ್ಲ ಅನುಕೂಲವಿರುವ ಯಾವದಾದರೊಂದು ಕೇಂದ್ರವನ್ನು ಗೊತ್ತು ಹಚ್ಚಬೇಕು.

3 ಜಿಲ್ಲೆಯ ಗ್ರಾಮ ಕೈಗಾರಿಕೆ ಸಂಘದವರ ಆಶ್ರಯದಲ್ಲ ಇದರ ಎಲ್ಲಾ ಆಡಳಿತೆಯನ್ನು ನಡೆಸುವ ಒಂದು ಕೇಂದ್ರ ಖಚೇರಿ ಇರಬೇಕು. ಇದನ್ನು ನಡೆಸುವವರು ಖಾದೀ ಕೆಲಸದಲ್ಲಿ ಬಹಳ ಅನುಭವಶಾಲಿಗಳಾಗಿದ್ದು ಇದಕ್ಕೆ ಹಾಕಿದ್ದ ಬಂಡವಾಳವು ಕರಗಿ ಹೋಗದಂತೆ ನೋಡಿಕೊಳ್ಳುವದು ಅತ್ಯಗತ್ಯ. ಇವರು ಇನ್ನಾವ ರಾಜಕೀಯ ವ ಇತರ ಕಾರ್ಯಗಳಲ್ಲಿ ಭಾಗವಹಿಸದೆ ಪೂರ್ಣ ಸಮಯದ ಖಾದೀ ಕೆಲಸಗಾರರಾಗಿರಬೇಕು.

4 ಪ್ರಚಾರ ಕಾರ್ಯ ಖಾದೀ ಖರೀದಿ ಮುಂತಾದ ಎಲ್ಲಾ ಕೆಲಸಗಳನ್ನು ಕಾಂಗ್ರೆಸ್ ಕಮಿಟಿಗಳೇ ವಹಿಸಿಕೊಂಡರೆ, ಈ ಖಾದೀ ಸಂಸ್ಥೆಗೆ ಭಂಡವಾಳವು ಹೆಚ್ಚಾಗಿ ಬೇಕಾಗಿಲ್ಲ. ಕೇಂದ್ರ ಆಫೀಸಿನಲ್ಲಿರುವ ಸಿಬ್ಬಂದಿಗೆ ಮಾತ್ರ ಸಂಬಳ ಕೊಡುವ ವ್ಯವಸ್ಥೆ ಇದ್ದರೆ ಸಾಕು.

5 ಈ ಕಾರ್ಯಕ್ಕೆ ಬೇಕಿರುವ ಬಂಡವಾಳವೆಲ್ಲಿಂದ? ಎಂಬ ಪ್ರಶ್ನೆಯು ತಲೆ ಎತ್ತುವದು. ಇಡೀ ಜಿಲ್ಲೆಗಾಗಿ ಮಾಡುವ ಏಕಮಾತ್ರ ಸಂಸ್ಥೆಗೆ ಸಾವಿರಾರು ಗ್ರಾಮಗಳಲ್ಲಿರುವ ಕಾಂಗ್ರೆಸ್ ಕಮಿಟಿಗಳು ತಮ್ಮ ಪಾಲಿಗೆ ಬೀಳುವ ವರ್ಗಣಿಯನ್ನು ವಸೂಲುಮಾಡಿಕೊಟ್ಟರೆ, ಇದು ಅತಿ ಸುಲಭದ ಕಾರ್ಯವಾಗುವದು. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಈ ಕಾರ್ಯವನ್ನು ಕೂಡಲೇ ಕೈಕೊಳ್ಳುವರಾಗಿ ನಾನು ನಂಬಿದ್ದೇನೆ. ನನ್ನಿಂದ ಬೇಕಿದ್ದ ಸೇವೆಯನ್ನು (Technical help) ಈ ಭಾಗದಲ್ಲಿ ಮಾಡಲು ಸಹಾ ನಾನು ಸಿದ್ಧನಿರುತ್ತೇನೆ

# ಕಿಡಿಗಳು

ಒಂದು ಹಳ್ಳಿ, ಒಬ್ಬ ಜಮೀನ್ದಾರ, ಒಬ್ಬ ಒಕ್ಕಲಿಗ, ಒಕ್ಕಲಿಗನು ಜಮೀನ್ದಾರನಿಂದ ೧೦ ವರ್ಷಗಳ ಮೊದಲು ೧೦ ಮುಡಿ ಅಕ್ಕಿ ಸಾಲ ಪಡೆದಿದ್ದ, ಮರು ವರ್ಷವೇ ಅಸಲನ್ನು ತಂದು ಕೊಟ್ಟ. ಮತ್ತೆ ಪ್ರತಿ ವರ್ಷವೂ ಎರಡೆರಡು ಮುಡಿ ಹೊರಿ ತೆರುತ್ತ ಬಂದ. ಈಗಲೂ ಒಕ್ಕಲಿಗನು ಜಮೀನ್ದಾರನಿಗೆ ೨೮ ಮುಡಿ ಬಾಕಿದಾರನಾಗಿದ್ದಾನೆ!

x x x

ಬಾಕಿಗಾಗಿ ವ್ಯಾಜ್ಯವಾಯಿತು, ಸುಳ್ಳು ರಿಕಾರ್ಡುಗಳು ನಿರ್ಮಾಣವಾದುವು. ಒಕ್ಕಲಿಗನ ಮೇಲೆ ಡಿಕ್ರಿಯಾಯಿತು. ಒಕ್ಕಲಿಗನ ಮನೆಯೆಲ್ಲಾ ಜಪ್ತಿಯಾಯಿತು. ಅವನಲ್ಲಿದ್ದ ವಸ್ತುಗಳೆಲ್ಲಾ ಜಮೀನ್ದಾರನಿಗಾದುವು.

x x x

ಒಬ್ಬನು ಇನ್ನೊಬ್ಬನಿಂದ ೧೯೨೮ರಲ್ಲಿ ೩೦೦ ರೂಪಾಯಿ ಸಾಲ ಪಡೆದಿದ್ದ. ಈ ವರೆಗೆ ೩೦೦ ರೂಪಾಯಿ ಕೊಟ್ಟ. ಈಗಲೂ ೩೫೦ ರೂಪಾಯಿ ಅಸಲು ಬಾಕಿ! ವಿಚಿತ್ರ.

x x x

ಹಳ್ಳಿಗಳಲ್ಲಿ ಇದೇ ರೀತಿಯಾಗಿ ಎಷ್ಟು ಜನರು ನಿರ್ಗತಿಕರಾಗಲಿಲ್ಲ? ಆಗುತ್ತಿಲ್ಲ?

x x x

ಇಂತಹುವನ್ನು ತಡೆಗಟ್ಟಲು ಒಂದೇ ಉಪಾಯ "ಸಂಘೇ ಶಕ್ತಿಃ, ಕಲೌ ಯುಗೇ"

x x x

ಕ್ರಾಂತಿಯಾಗದೆ ಶಾಂತಿಯಾದೀತೇ?

x x x

"ಈಗ ಬಸ್ ಕಂಪೆನಿಯವರು ಕೆಲವು 'ಸರ್ವಿಸು'ಗಳನ್ನು 'ಕಟ್' ಮಾಡಿದ್ದಾರೆ, ಚಾರ್ಜನ್ನು ಹೆಚ್ಚಿಸಿದ್ದಾರೆ" ಎಂದು ಕೆಲವರ ದೂರು. ಬೇಕಾದ ಹಾಗೆ ಸರ್ವಿಸುಗಳಿರಬೇಕು, ಚಾರ್ಜು ಅತಿ ಕಡಿಮೆಯಿರಬೇಕು ಎಂಬುದು ಪ್ರಯಾಣಿಕರ ಸೌಕರ್ಯ ದೃಷ್ಟಿಯಿಂದ ಅನುಚಿತವಾದ್ದಲ್ಲ.

x x x

ಆದರೆ ತಾವು ಸಂಪಾದಿಸಿದುದೆಲ್ಲಾ ಟೈರ್, ಪೆಟ್ರೋಲ್ ಇತ್ಯಾದಿಗಳಿಗೇ ಹೋಗುತ್ತದಲ್ಲಾ ಎಂದು ಸಂಬಂಧಿಸಿದವರ ಪಶ್ಚಾತ್ತಾಪ.

x x x

ಸಂಬಳ ಸಹಿತ ಸೆಂಕ್ಷನ್ ಆಗಿದ್ದ ರಜೆಯ ಸಂಬಳವನ್ನು ಕೆಲವು ಉಪಾಧ್ಯಾಯರು ಪಡೆವನೇ ಕೇಳಿದರೆಂದು, ಶಾಲಾಧಿಕಾರಿಗಳೊಬ್ಬರು ಇನ್ನು ಈ ರೀತಿ ಕೇಳುವುದಿಲ್ಲ ಎಂಬುದಾಗಿ ಉಪಾಧ್ಯಾಯರಿಂದ ಬರೆಸಿಕೊಂಡು ಹೋದರಂತೆ. ನೌಕರರು ಆದರಲ್ಲೂ ಉಪಾಧ್ಯಾಯರು ಬದುಕುವುದೇ ಕಷ್ಟವಷ್ಟೆ

x x x

ಉಡುಪಿಯಲ್ಲಿ ಎಷ್ಟು ಎಮೆಚೂರ್ ನಾಟಕ ಸಂಘಗಳು ತಲೆದೋರಿಲ್ಲ. ಆದರೆ ಈಗ ಅವೆಲ್ಲಾ ಬದುಕಿರುವವೋ ಎಂದು ತಿಳಿದಿಲ್ಲ. ಅಂತೂ ನವರಾತ್ರಿ ಕಾಲದಲ್ಲಾದರೂ ಕೆಲವು ಬದುಕಿವೆ ಎಂಬುದನ್ನು ತೋರಿಸಬಹುದಷ್ಟೆ

x x x

ಇಲ್ಲಿಯ ಮಹಾಜನ ಸಭೆಯವರು ಈ ವರ್ಷವೂ ನವರಾತ್ರಿ ಉತ್ಸವವನ್ನು ಆಚರಿಸುವ ಸಿದ್ಧತೆಯಲ್ಲಿದ್ದಾರೆಂಬುದು ಸಂತೋಷ. ಆದರೆ, "ಅವರದನ್ನು ಆದಷ್ಟು ಯಶಸ್ವಿಯಾಗಿ ಮಾಡಲು ಸರ್ವಪ್ರಯತ್ನಗಳನ್ನೂ ಮಾಡಬೇಕು. ಅದು ಕೆಲವರ ಉತ್ಸವವಾಗದೆ ಇಡೀ ಉಡುಪಿ ತಾಲೂಕಿನ ಉತ್ಸವವಾಗುವಂತಾಗಬೇಕು. ಅದಕ್ಕೆ ತಕ್ಕ ಕಾರ್ಯಕ್ರಮವನ್ನವರು ಈಗಲೇ ರೂಪುಗೊಳಿಸಬೇಕು" ಎಂದು ಕೆಲವರ ಸೂಚನೆ

x x x

ಇದು ನ್ಯಾಯವೆ, ಆದರೆ ತಲೆಬೋಳಿಸಿಕೊಳ್ಳುವವರಿದ್ದರೆ ಎಷ್ಟೂ ಬೋಳಿಸಿಕೊಳ್ಳಬಹುದು. ನಮ್ಮ ಆಕ್ಷೇಪವಿಲ್ಲ. ಆದಷ್ಟು ಖರ್ಚಿನ ಕಾಸು ಹುಟ್ಟಲೆಂದು ತೀರ ಕಡಿಮೆಯ ಪ್ರವೇಶ ಟಿಕೇಟುಗಳನ್ನಿಟ್ಟರೆ 'ದುಡ್ಡು ಮಾಡುವ ಪ್ಲೇನು' ಎಂಬ ದೊಡ್ಡ ಟೈಟ್ಲ್ ಕೂಡಲೇ ಬಂದುಬಿಡುತ್ತದೆ. ಆದರೆ "ಮನೆಕಟ್ಟಿದವನೇ ಬಲ್ಲ, ಮದುವೆಮಾಡಿದವನೇ ಬಲ್ಲ. ನದರ ಸವಿ" ಎಂಬುದನ್ನು ಎಲ್ಲರೂ ತಿಳಿಯಬೇಕಾಗಿದೆ

—'ಪರಶುರಾಮ'

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:—*

KOCHIKAR BROTHERS,

*Madras Branch Secretaries*

BRANCHES AT:

| | | |
|---|---|---|
| P B. 337 Mount Road, Madras | Visweswarapuram Circle Bangalore City | Soumyalayam Puthiyara, Calicut |
| Car Street, Mangalore | Udipi, S India | Charni Road, Bombay No 4. |

INSPECTORATE OFFICE AT:

1. Ottapalam, Malabar District. 2 Central Station Road, Trivandrum

EVIDENCE

OF

SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

| | |
|---|---|
| Total Assets Over | Rs 80,90,000 |
| Life Funds Over | Rs. 68,00,000 |
| Premium Income Over | Rs 22,54,000 |
| Interest Income | Rs. 3,16,000 |
| Claims Paid | Rs 5,75,000 |

Total Claims paid Over Rs. 38,50,000

Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

# ಗುಜರಾಥಿನಲ್ಲಿ ಪಂಡಿತ ನೆಹರುಗಳ ಸಂಚಾರ

## ಎಲ್ಲೆಲ್ಲಿಯೂ ಪ್ರಚಂಡ ಸ್ವಾಗತ, ರೂ. ೭೦,೦೦೦ದಷ್ಟರ ನಿಧಿ ಸಮರ್ಪಣೆ.

ಪಂಡಿತ ಜವಾಹಿರಲಾಲ ನೆಹರುಗಳು ಸರ್ದಾರ್ ವಲ್ಲಭಾಯಿಯವರೊಂದಿಗೆ ಇದೇ ತಾ. ೧೩ರಲ್ಲು ಗುಜರಾಥಿನ ಸಂಚಾರವನ್ನಾರಂಭಿಸಿದರು ಅವರು ಹೋದಲ್ಲೆಲ್ಲಾ ಜನರು ಸಹಸ್ರಗಟ್ಲೆಯಲ್ಲಿ ನೆರೆದು ಅವರನ್ನಿದಿರ್ಗೊಂಡು ಕಮಲಾನೆಹರು ಸ್ಮಾರಕನಿಧಿ ಮತ್ತು ಇತರ ಫಂಡಿಗೆ ಹಣವನ್ನೊಪ್ಪಿಸಿದರು. ಪಂಡಿತರು ಸೂರತ್ ಜಿಲ್ಲೆಯಲ್ಲಿ ಸಂಚರಿಸಿ ತಾ ೧೪ನೇ ರಾತ್ರಿ ಬರೋಡಕ್ಕೆ ಹೋದರು ಅಲ್ಲಿ ಸಾವಿರಾರು ಜನರು ರೈಲ್ವೇಸ್ಟೇಶನಿನ ಹೊರಗೆ ಮಳೆಯಲ್ಲಿ ಒದ್ದೆಯಾಗಿ ೨ ಘಂಟೆಗಳ ಕಾಲ ರಾಷ್ಟ್ರಪತಿಗಳನ್ನು ನೋಡಲು ಕಾದಿದ್ದರು ಒದ್ದೆಯಾಗಿ ಚಳಿಯಿಂದ ನಡುಗುತ್ತಿರುವ ಸ್ತ್ರೀಯರು ಮತ್ತು ಮಕ್ಕಳನ್ನು ಪಂಡಿತರು ಕಂಡು ಬಹಳ ಕನಿಕರಗೊಂಡು ತಾನು ಈ ದೃಶ್ಯವನ್ನು ಎಂದಿಗೂ ಮರೆಯಲಾರೆನೆಂದರು. ಪಂಡಿತರನ್ನು ಮೆರವಣಿಗೆಯಲ್ಲೊಯ್ದು ದೊಡ್ಡ ಸಾರ್ವಜನಿಕ ಸಭೆ ನಡೆಯಿತು. ಬ್ರಿಟಿಷ್ ಇಂಡಿಯಾ ಹಿಂದೀ ಇಂಡಿಯಾ ಎಂದು ಹಿಂದೂ ದೇಶವನ್ನು ವಿಭಾಗಿಸಲು ಸಾಧ್ಯವಿಲ್ಲ ಸ್ವರಾಜ್ಯವು ಎಲ್ಲರಿಗೂ ಬೇಕಾಗಿದೆ. ಆದುದರಿಂದ ಅದಕ್ಕಾಗಿ ಎಲ್ಲರೂ ಹೋರಾಡಬೇಕೆಂದು ಪಂಡಿತರು ಭಾಷಣವಿತ್ತರು ರಾಷ್ಟ್ರಪತಿಗಳಿಗೆ ಬರೋಡ ಮುನಿಸಿಪಾಲಿಟಿಯವರು ಮಾನಪತ್ರ ಕೊಡಬೇಕೆಂದಿದ್ದರೂ, ಅದು ಮಹಾರಾಜರಿಗೆ ಮಾತ್ರ ಕೊಡುವಂಥಾದ್ದೆಂದು ಬರೋಡದ ದಿವಾನರು ರದ್ದು ಪಡಿಸಿರುವರು.

### ಅಹಮ್ಮದಾಬಾದಿನಲ್ಲಿ ವಿಜೃಂಭಣೆಯ ಸ್ವಾಗತ

ಇದೇ ತಾ 16ರಲ್ಲು ಪಂಡಿತ ನೆಹರುಗಳು ಅಹಮ್ಮದಾಬಾದಿಗೆ ಹೋದಾಗ ಪ್ರಚಂಡ ಜನಸ್ತೋಮವು ನೆರೆದಿದ್ದಿತು ಜನರೆಲ್ಲಾ ಸಾಲುಗಟ್ಟಿ ಕ್ರಮವಾಗಿ ನಿಂತಿದ್ದರು ಆ ಮೇಲೆ ಒಂದು ವೈಭವದ ಮೆರವಣಿಗೆ ನಡೆಯಿತು. ಪಂಡಿತರು ರಾಷ್ಟ್ರಧ್ವಜಾರೋಹಣ ಮಾಡಿ ಸಾರ್ವಜನಿಕ ಭಾಷಣವಿತ್ತರು. ಅವರು ರೈಲ್ವೇ ನಿಲ್ದಾಣದಿಂದ ಹೊರ ಬರುವಾಗ, ಕೆಲವರು ಕೆಂಪು ಧ್ವಜ ಹಿಡಕೊಂಡು ಜನರ ನಡುವೆ ನುಗ್ಗಿ ಅವರ ಮುಂದೆ ಬಂದು ನಿಂತರು ಅವರು ಆ ಕೆಂಪುಧ್ವಜ ಧಾರಿಗಳನ್ನು ದೂಡಿಬಿಟ್ಟರು. ಕಾಂಗ್ರೆಸ್ ಪ್ರೆಸಿಡೆಂಟನಾದ ತನಗೆ ರಾಷ್ಟ್ರೀಯ ಧ್ವಜದ ಹೊರತು ಬೇರಾವ ಧ್ವಜವೂ ಪ್ರಾಮುಖ್ಯವಲ್ಲ, ಇದು ಹೊರತು ಈ ಕೆಂಪುಧ್ವಜಧಾರಿಗಳು ಜನರನ್ನು ದೂಡಿ ಗಲಾಟೆ ಮಾಡಿದರೆಂದು ಪಂಡಿತರ ಹೇಳಿಕೆ. ಅಹಮ್ಮದಾಬಾದಿನಷ್ಟು ಜನಸ್ತೋಮವು ಪಂಡಿತರನ್ನು ಸ್ವಾಗತೀಕರಿಸಲು ನೆರೆದುದು ಅಪರೂಪವೆಂದು ಅವರೇ ಒಪ್ಪಿರುತ್ತಾರೆ ಅಹಮ್ಮದಾಬಾದಿನ 57 ವ್ಯಾಪಾರಿ ಸಂಘಗಳವರು ರಾಷ್ಟ್ರಪತಿಗಳಿಗೆ ರೂ. 18,000ವನ್ನೊಪ್ಪಿಸಿದರು. ಸ್ತ್ರೀಯರ 17 ಸಂಘಗಳವರು ಕಮಲಾನೆಹರು ಸ್ಮಾರಕ ಫಂಡಿಗೆ ರೂ. 4400 ಕೊಟ್ಟರು. ಅಹಮ್ಮದಾಬಾದ್ ಮುನಿಸಿಪಾಲಿಟಿಯವರು ರಾಷ್ಟ್ರಪತಿಗಳಿಗೆ ಸಬರ್ಮತಿ ತೀರದ ವಿಕ್ಟೋರಿಯಾ ಗಾರ್ಡನ್ನಿನಲ್ಲಿ ಮಾನಪತ್ರವನ್ನೊಪ್ಪಿಸಿದರು. ಮುನಿಸಿಪಾಲಿಟಿಯವರು ಪಂಡಿತರ ಸತ್ಕಾರಾರ್ಥವಾಗಿ ಗಾರ್ಡನ್ ಪಾರ್ಟಿಯೊಂದನ್ನೇರ್ಪಡಿಸಿದ್ದರು. ಆದರೆ ಅದು ಬೇಡವೆಂದು ಅವರೇ ಹೇಳಿದುದರಿಂದ ರದ್ದು ಮಾಡಿದ್ದರು. ರಾಷ್ಟ್ರಪತಿಗಳು ಮಜೂರರ ಪ್ರಚಂಡ ಸಭೆಯೊಂದರಲ್ಲಿ ಭಾಷಣವೀಯುವಾಗ 'ನನಗೆ ಕೆಂಪು ಧ್ವಜದ ಕುರಿತು ಮಾನ್ಯತೆಯಿದೆ ಆದರೆ ಕೆಂಪು ಧ್ವಜವು ತ್ರಿವರ್ಣ ಧ್ವಜದ ಎದುರಾಗಿ ಏರಿಸಲ್ಪಟ್ಟರೆ ಅದು ಮುರಿದು ಹಾಕಲ್ಪಡುವುದೆಂ'ದರು ಸರ್ದಾರ್ ವಲ್ಲಭಭಾಯಿಯವರು ಈ ಸಂದರ್ಭದಲ್ಲಿ ಭಾಷಣವೀಯುವಾಗ, "ಗಿರಣಿ ಕಾಮಗಾರ ಯೂನಿಯನಿನವರಿಗೆ ಬೇರೆ ಕಡೆ ಕೆಲಸ ಮಾಡಲು ಅಸ್ಪದವಿದೆ. ಆದರೆ ಅವರು, ಕಾಂಗ್ರೆಸಿನ ಧೋರಣೆಯಂತೆ ಸ್ಥಾಪಿಸಲ್ಪಟ್ಟಿರುವ ಅಹಮ್ಮದಾಬಾದಿನ ಮಜೂರರ ಸಂಘವನ್ನು ಮುರಿಯುವ ಧೋರಣೆಯನ್ನು ವಹಿಸಿದರೆ ಮುರಿದುಹಾಕಲಾಗುವುದೆ"ಂದರು. ಇದರಿಂದ ಸ್ವಲ್ಪ ಗಲಾಟೆಯುಂಟಾಯಿತಾದರೂ ಸಭೆಯು ಶಾಂತರೀತಿಯಿಂದ ಕೊನೆಗೊಂಡಿತು.

ಅಹಮ್ಮದಾಬಾದಿನಲ್ಲಿ ಇದೇ ತಾ ೧೭ನೇ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ೫೦,೦೦೦ಕ್ಕಿಂತಲೂ ಮಿಕ್ಕಿದ ಜನಸ್ತೋಮವು ನೆರೆದಿತ್ತು ಸುಮಾರು ೧೦ ೦೦೦ ಸ್ತ್ರೀಯರು ನೆರೆದಿದ್ದರು. ಪಂಡಿತರು ಆ ಸಭೆಯಲ್ಲಿ ಭಾಷಣಕೊಡುವಾಗ, ತಾನು ಕಳೆದ ಒಂದೂವರೆ ವರ್ಷದಿಂದ ಕಾಂಗ್ರೆಸ್ ಅಧ್ಯಕ್ಷತನದ ಭಾರವನ್ನು ವಹಿಸಿದ್ದೇನೆ ಗುಜರಾಥಿನಲ್ಲದನ್ನು ಇಳಿಸುವವನಿದ್ದೇನೆ. ಆದರೆ ತನ್ನ ಜವಾಬ್ದಾರಿಯು ಮೊದಲಿನಂತೆಯೇ ಇರುವುದು ಗಾಂಧಿಯವರು ಆರಾಣೆ ಕಾಂಗ್ರೆಸ್ ಮೆಂಬರರು ಕೂಡಾ ಅಲ್ಲ. ಆದರೂ ಅವರು ಸ್ವರಾಜ್ಯದ ಸಮರವನ್ನು ನಡೆಸುವ ಜವಾಬ್ದಾರಿಯನ್ನು ಬಿಟ್ಟು ಕೊಡಲಿಲ್ಲೆಂದರು ಅಹಮ್ಮದಾಬಾದಿನಲ್ಲಿ ಒಟ್ಟಿಗೆ ರೂ. ೬೫,೦೦೦ದಷ್ಟರ ನಿಧಿಯು ಪಂಡಿತರಿಗೊಪ್ಪಿಸಲ್ಪಟ್ಟಿರುವುದು ಇಡೀ ಗುಜರಾಥಿನವರು ಒಟ್ಟು ರೂ ೭೦ ಸಾವಿರದಷ್ಟು ನಿಧಿಯನ್ನು ಪಂಡಿತರಿಗಿತ್ತಿರುವರು. "ಕಾಂಗ್ರೆಸಿನ ಶಕ್ತಿಯನ್ನು ಯಾರಿಗೂ ವಿರೋಧಿಸಲು ಸಾಧ್ಯವಿಲ್ಲ ಕಾಂಗ್ರೆಸು ರಾಜಕೀಯ ಸಂಸ್ಥೆ. ಅದರ ದ್ವಾರವು ಎಲ್ಲರಿಗೂ ತೆರೆದಿದೆ ಅದು ಹಿಂದು ಸಭೆಯನ್ನು ಜೈಸಿರುತ್ತದೆ. ಕೆಲವೇ ಪ್ರಾಂತಗಳಲ್ಲಿ ಮಾತ್ರ ಜೀವವಿರುವ ಮುಸ್ಲಿಮ್ ಲೀಗೆಂಬುದು ಕೇವಲ ಮೇಲ್ತರಗತಿಯ ಜನರ ಸಂಸ್ಥೆಯಾಗಿದೆ ಜನಸಾಮಾನ್ಯರಿಗೂ ಅದಕ್ಕೂ ಸಂಬಂಧವಿಲ್ಲ. ಹಿಂದುಗಳೂ ಮುಸಲ್ಮಾನರೂ ಸರಿಸಮಾನವಾಗಿ ಬಡತನದಿಂದ ನರಳುತ್ತಿದ್ದಾರೆ ಬಡತನಕ್ಕೆ ಜಾತೀಯತೆಯೆಂಬುದಿಲ್ಲ" ಎಂದು ಪಂಡಿತರು ದೊಡ್ಡದೊಂದು ಮುಸಲ್ಮಾನರ ಸಭೆಯಲ್ಲಿ ಭಾಷಣವಿತ್ತರು


**Your Business Respected.**

Your business at our BANK is strictly private and confidential. Never through us will your affairs become a matter of gossip. The terms of your transaction or the details of your discussion with us are known only to our management or to discreet employees properly concerned and such matters are not mentioned to anyone else. Our policy does not tolerate careless talk.

Resources of A CRORE

ESTD. 1906

CANARA BANK LIMITED.


## ನೋಟೀಸು

### ಬೊಂಬಾಯಿ ಹ್ಯಾಕೋರ್ಟಿನಲ್ಲಿ

ವ್ಯಾಜ್ಯ ನಂಬ್ರ 283/1932

ವಾದಿ—ಶ್ರೀಪಾದ ಎಸ್ ಶಿರಾಲಿ.

ಪ್ರತಿವಾದಿರು.- ಜೆಪ್ಪು ಗಣೇಶರಾವ್ ಮತ್ತು ಇನ್ನೊಬ್ಬರು.

ತಾ 1 2 1935ರಲ್ಲಾದ ಒಪ್ಪಿಗೆ ಡಿಕ್ರಿಗನುಸಾರವಾಗಿ ತಾ 26-6-'36, 12-2-'37, 20-4-'37, ಮತ್ತು 5-7-'37ರಲ್ಲು ಜಡ್ಜರು ಕೊಟ್ಟ ಹುಕೂಮಿನ ಪ್ರಕಾರ ಈ ಕೆಳಗಣ ಸ್ಥಿರ ಸೊತ್ತುಗಳನ್ನು 3 ಲೋಟುಗಳಲ್ಲಿ ಸಾರ್ವಜನಿಕ ಏಲಂ ಮಾಡಿ ನ್ಯಾಯ ಕೋರ್ಟಿನ ಕಮಿಶನರರು ಕೋರ್ಟು ಕಟ್ಟೆಡದಲ್ಲಿರುವ ತನ್ನ ಆಫೀಸಿನಲ್ಲಿ ತಾ 23-9-'37ನೇ ಗುರುವಾರ ಅಪರಾಹ್ನ ಘಂಟೆ 3-30ಕ್ಕೆ ಮಾರಲಿರುವರು

### ಸೊತ್ತುಗಳ ವಿವರ

ಒಂದನೇ ಲೋಟಿನ ಆಸ್ತಿ—ಮದ್ರಾಸ್ ಪ್ರಾಂತದ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೋಕಿನ ಮೂಡಬಿದ್ರಿ ರಿಜಿಸ್ಟ್ರಿ ಆಫೀಸಿನ ಸುಪರ್ದೆಯ ಕಾರಂಜಿ ಗ್ರಾಮದಲ್ಲಿರುವ ಪಟ್ಟಾ ನಂಬ್ರ 60 ಮತ್ತು ಸರ್ವೆ ನಂಬ್ರ 12, 13, 14, 141 ಮತ್ತು 142ರ ಒಟ್ಟು ವಿಸ್ತೀರ್ಣ 12 ಎಕ್ರೆ 40 ಸೆಂಟ್ಸುಗಳಷ್ಟರ ಸ್ಥಳ

ಎರಡನೇ ಲೋಟಿನ ಆಸ್ತಿ —ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಟೌನಿನಲ್ಲಿ ಪಟ್ಟಾ ನಂಬ್ರ 99 ಮತ್ತು ಹಳೆ ಸರ್ವೆ ನಂಬ್ರ P 374 89, A--Bಯ 84 ಸೆಂಟ್ಸಿನ 10 ಆಣೆ ತೀರ್ವೆಯ ಪುಂಜ ಸ್ಥಳ

ಮೂರನೇ ಲೋಟಿನ ಆಸ್ತಿ—ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ತಾಲೋಕಿನ ಬಂಟ್ವಾಳ ರಿಜಿಸ್ಟ್ರಿ ಆಫೀಸಿನ ಸುಪರ್ದೆಯ ಅಮ್ಟಾಡಿ ಗ್ರಾಮದಲ್ಲಿ, 60ನೇ ಪಟ್ಟಾ ನಂಬ್ರ [ಮೊದಲು 80 ಮತ್ತು 47ರ] ಮತ್ತು ಸರ್ವೆ ನಂಬ್ರ 78, 79, 80, 143, 163, 165, 204 ಮತ್ತು 206ರ ಒಟ್ಟು 29 ಎಕ್ರೆ ಮತ್ತು 58 ಸೆಂಟ್ಸ್ ವಿಸ್ತೀರ್ಣವುಳ್ಳ ರೂ 89-13-0 ತೀರ್ವೆಯ ಸ್ಥಳ

ಹೆಚ್ಚಿನ ವಿವರ ಮತ್ತು ವಿಕ್ರಯದ ಶರ್ತಗಳಿಗೆ ಕಮಿಶನರರ ಆಫೀಸಿಗೆ ಅಥವಾ ಮೆಸರ್ಸ್ ಛರಮ್ನ ದಿನಕರರಾವ್ ಮತ್ತು ನಂದಲಾಲ್, ವಾದಿ ಮತ್ತು ಎರಡನೇ ಪ್ರತಿವಾದಿಯ ಎಟಾರ್ನೇಯವರಿಗೆ, ನಂಬ್ರ 6 10, ಡೀನ್ ಲೇನ್. ಹಮ್ಮನ್ ಸ್ಟ್ರೀಟ್, ಫೋರ್ಟ್ ಬೊಂಬಾಯಿ, ಇವರಿಗೆ ಅರ್ಜಿಮಾಡಿ ಕೊಳ್ಳತಕ್ಕದ್ದು.

**G R Khairiaz,**

*Offg. Commissioner.*

ತಾ 29-7-1937.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

**S. U. N. & CO.** *Choukhamba, Benares City.*

ಮೂರು ಇನಾಮುಗಳು.

ಶ್ರೀಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಸಾಮಾನುಗಳ ಕೆಟಲಾಗನ್ನು, ಕಾಶೀಕ್ಷೇತ್ರ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲ್ಪಡುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫ್ಯಾಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಪಾಡಿ ಕವಚಾನ್ಸಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾದರ, ಧೋತರ, ನಾರುಮಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಫ್ಯಾಶನಮಾನೆಯ ವಡಲು. ಬುಟ್ಟೆ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55 ವರೆಗು ಸಾದಾ 16 ಮೊಳದ ಶೀರೆ 1ಕ್ಕೆ ರೂ. 15 ರಿಂದ ರೂ. 35ರ ವರೆಗೆ, ಅದೆ ಜವಮು 16 ಮೊಳ ಕ್ರೇಪ್ ಅಂಚು ರೂ. 10½ ಯಿಂದ ರೂ. 16, ಖಣ 1ಕ್ಕೆ ರೂ. 1½ ರಿಂದ ರೂ. 10ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ, ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ

---

ನೀವು ನಿಮ್ಮ—ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ?

ಇಲ್ಲವಾದರೆ, ಹೇಗೆ ಮಾಡುವುದೆಂಬುದನ್ನು ಭದ್ರತೆಯ, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ.

# ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ

## ಲಿಮಿಟೆಡ್ (ಅಜ್ಮೀರು)

ನಮ್ಮ ಅಭಿವೃದ್ಧಿಯ ಅಂಕ್ಯ ಸಂಕೆಗಳು

| | |
|---|---|
| ಚಾಲ್ತಿಯಲ್ಲಿರುವ ಪೊಲಿಸಿಗಳು .... | .... ರೂ. **3 ಕೋಟಿ** ಮಿಕ್ಕಿದೆ. |
| ಮೂಲಗಳು .... .... | .... ರೂ. **80 ಲಕ್ಷಕ್ಕೂ** ಮಿಕ್ಕಿದೆ. |
| ವಾರ್ಷಿಕ ಉತ್ಪನ್ನ .... .... | .... ರೂ. **18 ಲಕ್ಷಕ್ಕೂ** ಮಿಕ್ಕಿದೆ. |
| ವಿಮೆ ತೆತ್ತುದು .... .... | .... ರೂ. **42 ಲಕ್ಷಕ್ಕೂ** ಮಿಕ್ಕಿದೆ. |

**ಅತ್ಯಧಿಕ ಬೋನಸು**

ಜೀವಾಂತ್ಯ ವಿಮೆ: ವರ್ಷಕ್ಕೆ ರೂ. 1000ಕ್ಕೆ **25**ರಂತೆ.

ಎಂಡೋವ್ಮೆಂಟ್: ವರ್ಷಕ್ಕೆ ರೂ. 1000ಕ್ಕೆ **20**ರಂತೆ.

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲಿ ಕೆಳಗಿನವರಿಗೆ ಬರೆಯಿರಿ—

ಪಿ. ಜಿ. ಮರಾಠೆ ಎಸ್ಕ್ವೈಯರ್, ಜನರಲ್ ಮೆನೇಜರ್

(ಅಥವಾ) ಎಂ. ಮಾಧವ ರಾವ್ ಎಸ್ಕ್ವೈಯರ್, ಬಿ. ಎ., ಸುಪರಿಂಟೆಂಡೆಂಟ್ ಒಫ್ ಬ್ರ್ಯಾಂಚಸ್ ಎಂಡ್ ಚೀಫ್ ಏಜನ್ಸೀಸ್, ಯಸ್. ಐ. ಎಂಡ್ ಸಿಲೋನ್.

**ಪಶ್ಚಿಮ ಕರಾವಳಿಗೆ ಓರ್ವ ಪ್ರಾಮುಖ್ಯ ಪ್ರತಿನಿಧಿಗಳು ಬೇಕು.**

---

# HOTEL INDIANA

## BAR AND RESTAURANT

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ!

# ಹೊಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದೆ.

**ಹೊಸ ಆಡಳಿತ!** **ಹೊಸ ವ್ಯವಸ್ಥೆ !!**

ಎಲ್ಲವೂ ಹೊಸತೇ ಆಗಿ

ನವೀನ ಮಾದರಿಯ ಭೋಜನ, ಸ್ನಾನ ಮತ್ತು ವಿಶ್ರಾಮ ಗೃಹವಾಗಿದೆ.

*Proprietor*, HOTEL INDIANA

**Hampankatta, Mangalore.**

---

**15 ವರ್ಷಗಳ ಅನುಭವ!** **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು, ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

# ಪೈಂಟರ್ ಗಣಪತಿ ರಾವ್,

— ಇವರು —

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

**ಗಣಪತಿ ರಾವ್, ಪೈಂಟರ್,**

ಸೋದೆ ಮಠದ ಲೇನು - - **ಉಡುಪಿ, ದ. ಕ.**

---

## ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ



ಸ್ಥಾಪನೆ: 1926

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಮೇಡೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು. ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಃ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

---

# ಗಿಡಗಳು ಮತ್ತು ಬೀಜಗಳು

**ಡಿ. ಗುರಪ್ಪ ಅಂಡ್ ಸನ್ಸ್**

ಗಿಡ,ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,

ಲಾಲ್‌ಬಾಗ್ ದೊಡ್ಡ ಮಾವಳ್ಳಿ,

**ಬೆಂಗಳೂರು ಸಿಟಿ.**

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ **ಗಿಡಗಳು, ಬೀಜಗಳು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ.** ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ.

---

ಉಡುಪಿಯ ಆದರ್ಶ ಉಪಹಾರಗೃಹ !

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು !** **ಮಿತ ದರದಲ್ಲಿ ಊಟ ಉಪಚಾರಗಳು !**

**ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ನೋಲ್ವಿಚಾರಣೆ !**

**ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳಿದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**

**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕತ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

# :: ದಕ್ಷಿಣಕನ್ನಡ ::

## ಮಂಗಳೂರು

ಇದೇ ೩ ೬ನೇ ಆದಿತ್ಯವಾರದಿನವನ್ನು ಜಪಾನಿನವರಿಂದ ಆಕ್ರಮಿಸಲ್ಪಟ್ಟಿರುವ ಚೀನೀಯರೊಡನೆ ಸಹಾನುಭೂತಿಯನ್ನು ತೋರಿಸುವ ಉದ್ದೇಶದಿಂದ ಅಖಿಲಭಾರತದಲ್ಲಿ ಚೀನಾ ದಿನವನ್ನಾಗಿ ಆಚರಿಸಬೇಕೆಂದು ರಾಷ್ಟ್ರಪತಿ ಪಂಡಿತ ಜವಾಹಿರಲಾಲರು ತಿಳಿಸಿರುವರು. ಈ ದಿನ ಸಾಹಸಗಳನ್ನು ಸೇರಿ ಈಗಿನ ಚೀನ ಜಪಾನು ಸಮರದಿಂದ ಉಂಟಾಗುವ ಸಂದಿಗ್ಧ ಪರಿಸ್ಥಿತಿಯನ್ನು ವಿವರಿಸಿ ಚೀನಿಯರೊಡನೆ ಸಹಾನುಭೂತಿಯನ್ನು ತೋರಿಸುವ ಠರಾವನ್ನು ಅಂಗೀಕರಿಸುವುದೇ ಅಂದಿನ ಕಾರ್ಯಕ್ರಮ. ಜಿಲ್ಲೆಯ ಕಾಂಗ್ರೆಸ್ ಕಮಿಟಿಯವರೆಲ್ಲರೂ ಈ ದಿನವನ್ನು ಆಚರಿಸಬೇಕಾಗಿ ವಿನಂತಿ.

ಓ ರಾಮರಾಯವಲ್ಯ, ಕಾರ್ಯದರ್ಶಿ.

ಮಂಗಳೂರು ಎಮೆಚ್ಯೂರ್ಸ್ ನಾಟಕ ಸಂಘದ ಕಾರ್ಯದರ್ಶಿಗಳೂ ಹಾರ್ಮೋನಿಯಮ್ ವಿದ್ವಾಂಸರೂ ಆದ ಶ್ರೀ ಎಂ ಎ ದೇವದಾಸರೂ ಕೊಳಲ್ ವಿದ್ವಾಂಸರಾದ ಶ್ರೀ ಬಿ ಯೂಸ್ ಆನಂದರಾಯರೂ, ಇದೇ ತಾ ೨೬ಕ್ಕೆ ಇಲ್ಲಿಂದ ಮುಂಬಾಯಿ ಮದರಾಸ್ ಪ್ರಾಂತಗಳಿಗೆ ತೆರಳಲಿರುವರೆಂದೂ ಅಲ್ಲಿ ಇವರೀರ್ವರೂ ತಮ್ಮ ಗಾಯನ ಕಚೇರಿಗಳನ್ನೇರ್ಪಡಿಸುವ ಸಂದರ್ಭಗಳಲ್ಲಿ ಅಲ್ಲಲ್ಲಿಯ ಕನ್ನಡಿಗ ಬಂಧುಗಳು ಇವರಿಗೆ ತಮ್ಮಿಂದ ದಷ್ಟು ಪ್ರೋತ್ಸಾಹ ವನ್ನೀಯಬೇಕೆಂದೂ ಒಂದುಬಿನ್ನಹ.

### ದ. ಕ ಜಿಲ್ಲಾ ಲೇಬರ್ ಪರಿಷತ್ತು ಸೇರುವದು!

#### ಜಿಲ್ಲೆಯ ಕೆಲಸಗಾರರಲ್ಲಿ ಮತ್ತು ಮಹಾಜನರಲ್ಲಿ ವಿನಂತಿ

ಇದೀ ಕೆಲಸಗಾರರ ಜಾಗ್ರತಿಯ ಕಾಲ ಈ ಮಾತಿಗೂ ದಕ್ಷಿಣ ಕನ್ನಡಕ್ಕೂ ಸಂಬಂಧವಿಲ್ಲವೆನ್ನಬಹುದೆ? ಕೆಲಸಗಾರರ ಪ್ರಾಮುಖ್ಯತೆಯನ್ನು ನಾವು ಮರೆಯಲು ಸಾಧ್ಯವೇ! ಕೆಲಸಗಾರರ ಜಾಗ್ರತಿಯು ಅವರ ಪ್ರಾಮುಖ್ಯತೆಯು ಒಂದು ಅನಾವಶ್ಯ ಕಲ್ಪನೆ ಮಾತ್ರವಾಗಿರುತ್ತದ್ದರೆ ನಾವು ನಮ್ಮ ಜಿಲ್ಲೆಯ ಮಟ್ಟಿಗೆ ಅದು ಬೇಡವೆನ್ನಬಹುದಿತ್ತು. ಇದು ಹಾಗಲ್ಲ. ಬಸ್ಸು ಕೆಲಸಗಾರರ, ಬೀಡಿ ಕೆಲಸಗಾರರ, ಹೋಟೆಲುಕೆಲಸಗಾರರ, ಪ್ರೆಸ್ಸುಕೆಲಸಗಾರರ ಪ್ರಾಮುಖ್ಯತೆಯನ್ನು ನಾವು ಹೇಗೆ ಮರೆಯಲಿ! ನಮ್ಮ ನಿತ್ಯಜೀವನದ ಅನುಕೂಲತೆಗಳನ್ನು ಒದಗಿಸಿಕೊಡುವವರು ಇವರೇ! ನಾವು ಇದ್ದೇವೆಯೆಂಬುದನ್ನು ತೋರಿಸುವ ಸಲುವಾಗಿಯಾದರೂ ಇವರೆಲ್ಲಾ ಒಂದೇ ಒಂದು ದಿನ ತಮ್ಮ ಕೆಲಸದ ಕೈ ಬಿಟ್ಟು ನಿಂತುಕೊಂಡರೆ ಆ ದಿನವು ನಮಗೆಲ್ಲಾ ಹದಿನೈದನೆಯ ಶತಮಾನದ ಒಂದು ದಿನವಾಗಬಹುದು! ಆದ್ದರಿಂದ ಮಹಾಜನರೇ! ಅವರ ಪ್ರಾಮುಖ್ಯತೆಯನ್ನು ಮನಗಾಣಿರಿ! ಕೆಲಸಗಾರ ಬಂಧುಗಳೇ! ನೀವೂ ನಿಮ್ಮ ಕರ್ತವ್ಯವನ್ನು ತಿಳಿಯಿರಿ! ಮಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಬೀಡಿಕೆಲಸಗಾರರ ಸಂಘ, ಹೋಟೆಲು ಕೆಲಸಗಾರರ ಸಂಘ, ಪ್ರೆಸ್ ಕೆಲಸಗಾರರ ಸಂಘ, ಬಸ್ ಕೆಲಸಗಾರರ ಸಂಘ ಇವೆಲ್ಲಾ ಒಟ್ಟಾಗಿ ದಕ್ಷಿಣಕನ್ನಡ ಜಿಲ್ಲಾ ಕೆಲಸಗಾರ ಪರಿಷತ್ತನ್ನು ಕರೆಯಬೇಕೆಂದು ನಿರ್ಧರಿಸಿರುವೆವು. ಬರುವ ನವಂಬರ ತಿಂಗಳಲ್ಲಿ ಈ ಪರಿಷತ್ತು ಸೇರಲಿರುವದು. ಅದಕ್ಕಾಗಿ ಸ್ವಾಗತ ಸಮಿತಿಯು ರಚಿಸಲ್ಪಟ್ಟಿರುವದು. ಕೆಲಸಗಾರರು ಸಹಕರಿಸಿರಿ! ಮಹಾಜನರು ಪ್ರೋತ್ಸಾಹಿಸಿರಿ! ಮೇಲಿನ ಕೆಲಸಗಾರರ ಸಂಘಗಳು ಇಲ್ಲದ ಕಡೆಗಳಲ್ಲಿ ಪರಿಷತ್ತಿಗೆ ಪ್ರತಿನಿಧಿಗಳನ್ನು ಕಳುಹಿಸಲು ಅನುಕೂಲವಾಗುವಂತೆ ಕೂಡಲೆ ಅಂಥಾ ಸಂಘಗಳನ್ನು ಸ್ಥಾಪಿಸಿರಿ. ಅದಕ್ಕಾಗಿ ನಿಮಗೆ ಬೇಕಾಗುವ ಸಹಕಾರವನ್ನೀಯಲು ನಾವು ಸಿದ್ಧರಿರುವೆವು. ಕೆಳಗಿನ ವಿಳಾಸಕ್ಕೆ ಬರೆಯಿರಿ. ನಮ್ಮ ಶಕ್ತಿಯೊಂದೇ ನಮ್ಮನ್ನು ಕಾಪಾಡುವ ಸಾಧನವೆಂಬ ಆತ್ಮವಿಶ್ವಾಸದಿಂದ ಮುಂದೊತ್ತಿರಿ!

ಸ್ವಾಗತ ಸಮಿತಿ.

ದ. ಕ. ಲೇಬರ್ ಪರಿಷತ್ತು ಮಂಗಳೂರು.

**ಕುಂಬಳೆ**—ಕಾಂಗ್ರೆಸ್ ಪ್ರಚಾರಕ್ಕಾಗಿ ಶ್ರೀ| ಎಸ್ ಎಸ್ ಕಿಲ್ಲೆಯವರು ಇಲ್ಲಿಗೆಬಂದು ತಾರೀಕು ೧೭ರಲ್ಲಿ ಜನಾಬ್ ಎಂ ಸಿ ಮಮ್ಮಿ ಸಾಹೇಬರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಭಾಷಣವನ್ನು ಮಾಡಿದರು ಮತ್ತು ೯ ಗ್ರಾಮಗಳನ್ನು ಕೂಡಿಸಿ ೯ ಜನರುಳ್ಳ ಕುಂಬಳೆ ಸಂಯುಕ್ತ ಕಾಂಗ್ರೆಸ್ ಕಮಿಟಿಯನ್ನು ರಚಿಸಿದರು. ಅದಕ್ಕೆ ಜನಾಬ್ ಮಮ್ಮಿ ಸಾಹೇಬರವರು ಅಧ್ಯಕ್ಷರಾಗಿಯೂ ಶ್ರೀ| ಕೃಷ್ಣ ಭಟ್ಟರು ಉಪಾಧ್ಯಕ್ಷರಾಗಿಯೂ ಶ್ರೀ| ನರಸಿಂಹ ಕಿಲ್ಲೆಯವರು ಮತ್ತು ದೇವಪ್ಪ ಆಳ್ವರವರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

**ಪುತ್ತೂರು ದಸರಾ ಉತ್ಸವದ ಉಪನ್ಯಾಸಗಳು**—ಪುತ್ತೂರು ಹೈಯರ್ ಎಲಿಮೆಂಟರಿ ಶಾಲುಕಟ್ಟಡದಲ್ಲಿ ಅಕ್ಟೋಬರ ೬ ರಿಂದ ೧೪ರವರೆಗೆ ಈ ಉತ್ಸವವು ಜರಗುವುದು. ಪ್ರತಿ ದಿನ ಸಂಜೆ ೬ಕ್ಕೆ ಉಪನ್ಯಾಸಗಳು ನಡೆಯುವುವು.

ತಾ ೬ ಶ್ರೀ ಗೊರೂರು ರಾಮಸ್ವಾಮಿ ಐಯ್ಯಂಗಾರ್ 'ಹಳ್ಳಿಯ ಸಂಸ್ಕೃತಿ' ೭ ಶ್ರೀ ತಿ ನಂ ಶ್ರೀಕಂಠಯ್ಯನವರು, 'ಹೊಸಗನ್ನಡ ಕವಿತೆಗಳು' ೭ ಶ್ರೀ ಶಿಂ ಬಾ ಜೋಶಿಯವರ, 'ಕನ್ನಡದ ಹುಟ್ಟು' ೮ ಶ್ರೀ ಟಿ ನಾರಾಯಣ ಭಟ್ಟರು, 'ಮುದ್ದಣ ಕವಿ' ೯ ಶ್ರೀ ಚೆನ್ನಮಲ್ಲಪ್ಪನವರು (ಬೀಜಾಪುರ) 'ಅರವಿಂದರ ಸಂದೇಶ' ೧೦ ಶ್ರೀ ಡಿ ವಿ ಗುಂಡಪ್ಪನವರು, 'ಪೆಡರೇಶನಿನ ಭವಿಷ್ಯ' ೧೧ ಶ್ರೀ ಸಿ ಪಿ ಲಿಂಗಣ್ಣನವರು 'ಲಾವಣಿಸಾಹಿತ್ಯ' ೧೨ ಶ್ರೀ ಮನಮೋಹನರಾಯರು, 'ಸೌಂದರ್ಯೋಪಾಸನೆ' ೧೩ ಶ್ರೀ ಆರ್ ವಿ ಜಹಗೀರದಾರ, 'ನಾಟಕಗಳ ಪ್ರಯೋಗ' ೧೪ ಶ್ರೀ ಎಸ್ ಎಸ್ ಮಾಳವಾಡ, ವೀರಶೈವ ಸಾಧುಗಳೂ ಸಾಹಿತ್ಯವೂ.

ಅಲ್ಲದೆ ತಾ ೯-೧೦ ಈ ಎರಡು ದಿನಗಳಲ್ಲಿ ಡಿ ವಿ ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಉತ್ಸವವು ಜರಗುವುದು. ಈ ಸಮಯದಲ್ಲಿ ಕವಿಗಳು ಕವನಗಳನ್ನು ಓದಲಿರುವರು. ಇತರ ವಿನೋದಾವಳಿಗಳು ನಡೆಯಲಿವೆ. ಹೆಚ್ಚಾಗಿ ಕನ್ನಡ ಪ್ರೇಮಿಗಳು ಬಂದು ಉತ್ಸವವು ಯೋಗ್ಯರೀತಿಯಿಂದ ನಡೆಯಬಹುದೆಂದು ನಂಬಲಾಗಿದೆ.

ದಸರಾಸಮಿತಿ

ಕೆಲವು ದಿನಗಳ ಹಿಂದೆ ಪುತ್ತೂರಿನ ಒಂದು ಮೂಲೆಯಲ್ಲಿ ಎರಡು ಇಲಿಗಳು ಸತ್ತು ಬಿದ್ದಿವೆಯೆಂದು ಸುದ್ದಿಯಿದ್ದಿತು. ಅವು ಪ್ಲೇಗಿನ ಇಲಿಗಳೆಂಬ ಸುದ್ದಿ ಹಬ್ಬಿ ಜನರು ಕಂಗಾಲಾದರು.

**ಪೆರ್ಲ್**—ತಾ ೧೪ ೯ ೩೭ರಲ್ಲು ಎ ವಿಠಲರಾಯರು ತಮ್ಮ ಮಾಳಿಗೆಯನ್ನು ಬಾಡಿಗೆಯಿಲ್ಲದೆ ಕೇಂದ್ರಕಮಿಟಿಯ ಆಫೀಸಿಗೆ ಕೊಟ್ಟುದಕ್ಕಾಗಿ ಈ ಕಮಿಟಿಯು ತುಂಬಾ ಆಭಾರಿಯಾಗಿರುತ್ತದೆ.

ಕಾಂಗ್ರೆಸ್ ಕಮಿಟಿಯ ಮೀಟಿಂಗ್ ಶ್ರೀ| ಬಿ ತಿಮ್ಮಪ್ಪ ಹೆಗ್ಡೆರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಹಲವು ಉಪಯುಕ್ತ ಠರಾವುಗಳು ಮಂಜೂರಾದವು.

**ಸುಳ್ಯ**—ತಾ ೧೭ ೯ ೩೭ರಲ್ಲಿ ಸುಳ್ಯ ಪೇಟೆಕೆ ಮಂದಿರದಲ್ಲಿ ದೊಡ್ಡ ಸಭೆಯೊಂದು ನಡೆಯಿತು. ಶ್ರೀಯುತ ಗಣೇಶ ಸುಬ್ಬಪ್ಪಯ್ಯನವರು ಮತ್ತು ಸೂರಕ್ಕೆ ಶ್ರೀಯುತ ಸಂಕಪ್ಪರೈಗಳು ಕಾಂಗ್ರೆಸ್ ಕಮಿಟಿಗಳನ್ನು ಗ್ರಾಮಗಳಲ್ಲಿ ಸ್ಥಾಪಿಸುವ ಅಗತ್ಯ ಅವರ ಉದ್ದೇಶ ಮತ್ತು ಪ್ರಯೋಜನ ವಗೈರೆಗಳನ್ನು ಭಾಷಣಮಾಡಿದರು. ಸಭೆಯವರ ಅಭಿಪ್ರಾಯದಂತೆ ಸುಳ್ಯ ಸಂಯುಕ್ತ ಕಾಂಗ್ರೆಸ್ ಕಮ್ಮಿಸ್ಥಾಪಿಸಲ್ಪಟ್ಟಿತು. ಕಮಿಟಿಗೆ ಶ್ರೀಯುತ ಉಳವಾರು ಲಿಂಗಪ್ಪಗೌಡರನ್ನು ಅಧ್ಯಕ್ಷರನ್ನಾಗಿಯೂ ಶ್ರೀ| ಎಂ ಎಂ ಮಹಮದ ಸಾಹೇಬರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ| ಎಂ ವಿತಪ್ಪ ರೈಗಳನ್ನು ಕಾರ್ಯದರ್ಶಿಗಳಾಗಿ ಆರಿಸಿ ಸಭೆಯು ಮುಕ್ತಾಯವಾಯಿತು.

**ಕಾರ್ಕಳ**—ಇಲ್ಲಿ ಪ್ರಯೋಗಾರ್ಥವಾಗಿ ಒಂದು ಟಪ್ಪಾಲುಕಟ್ಟೆಯು ತಾ ೬ ೯ ೩೭ರಲ್ಲು ತೆರೆಯಲ್ಪಟ್ಟಿದೆ. ಜನರಿಗೆ ತುಂಬಾ ಉಪಕಾರವಾಗಿದೆ.

**ಶ್ರೀ ಎಸ್ ಎಸ್. ಕಿಲ್ಲೆಯವರ ಸಂಚಾರ ಕಾರ್ಯಕ್ರಮ**—ಕಾಂಗ್ರೆಸ್ ಕಮಿಟಿಗಳ ವ್ಯವಸ್ಥೆ ವ ಕಾಂಗ್ರೆಸ್ ಪ್ರಚಾರಕ್ಕಾಗಿ ತಾ ೨೦ ೯ ೩೭ರಿಂದ ತಾ ೩೦ ೯ ೩೭ರ ವರೆಗೆ ಮಾಡಲಿರುವ ಸಂಚಾರ ಕಾರ್ಯಕ್ರಮ. ತಾ ೨೨ ನಿಡ್ಲೋಡಿ, ತಾ ೨೩ ಪಮೇರಯೋಬಳಿ ಮತ್ತು ಕೋಟೆ ತಾ ೨೪ ಕೊಟೇಶ್ವರ ಮತ್ತು ಹಂಗಲೂರು, ಸಾಯಂಕಾಲ ೬ಘಂಟೆಗೆ ಕೋಟೇಶ್ವರ ಮಹಾಜನಸಭೆ ತಾ ೨೫ ಕುಂಭಾಸಿ ಮತ್ತು ತೆಕ್ಕಟ್ಟೆ, ತಾ ೨೬ ಅಸೋಡು ಕೊರ್ಗಿ ಮತ್ತು ಕಾಳಾವರ, ತಾ ೨೭ ಹುಣಸೆಮಕ್ಕಿ, ಮೊಳಹಳ್ಳಿ, ಹಾರ್ದಳ್ಳಿ, ಮಂಡಾಳಿ, ತಾ ೨೮ ಹಾಲಾಡಿ ಉಳ್ಳೂರು ಮತ್ತು ಕುಳಂಜೆ ತಾ ೩೦ ಶಂಕರನಾರಾಯಣ ಮತ್ತು ಅಂಪಾರು.

**ಬೆಳ್ವೂರು**—ಬಾಸರೂರು ತಾಲೋಕಿನ ಪಟ್ಟಣಿಗ ಬೆಳ್ವೂರು ಎಂಬ ತಿ ಗ್ರಾಮಗಳು ಕೇವಲ ೫ ೬ ಮೈಲು ರಾಜಮಾರ್ಗದಿಂದ ದೂರವಿದ್ದು ೭ ೮ ನಾವಿರಜನಗಳು ವಾಸಿಸುವ ಕೇವಲ ಹಳ್ಳಿಯಾಗಿರುತ್ತವೆ. ಈ ಗ್ರಾಮಗಳಿಗೆ ಗ್ರಾಮ ಪಂಚಾಯತನ್ನು ಕೊಡಬೇಕೆಂದು ಪ್ರಾರ್ಥನೆ.

**ಬೆಳ್ಮಣ್ಣು**—ಇಲ್ಲಿಯ ಕಾಂಗ್ರೆಸ್ ಕಮಿಟಿಯ ಒಂದು ಮೀಟಿಂಗ್ ತಾ ೩೦ ೧೦ ೩೭ಕ್ಕೆ ಅವಂಪಳ್ಳ ಪಂಚಾತಿಕೆ ಜರಗುವುದು. ಹೊಸದಾದ ಕಾಯ್ದೆಯ ಮೂಲಕ ಮಂಡಳದ ಸದಸ್ಯರ ಚುನಾವಣೆಯೂ ಇರುತ್ತದೆ, ಆದುದರಿಂದ ಎಲ್ಲಾ ಪ್ರಾಥಮಿಕ ಸದಸ್ಯರೂ ತಪ್ಪದೆ ಹಾಜರಾಗಬೇಕೆಂದು ಕಾರ್ಯದರ್ಶಿ ಇಲ್ಲಿನ ಕೋಟ ಗಣೇಶ ಸುಬ್ಬಯ್ಯನವರು ತಿಳಿಸುತ್ತಾರೆ.

**ಎಲ್ಲಾ ಕಾಂಗ್ರೆಸ್ ಕಮಿಟಿ ವ ಕಾಂಗ್ರೆಸ್ ಕೆಲಸಗಾರರೊಡನೆ ವಿನಂತಿ**—

ಇದೇ ತಾ ೩೦ ೯ ೩೭ಕ್ಕೆ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಅವಧಿಯು ದಿನವಿದ್ದು ಅನಂತರ ವಿಂದು ವಾರದೊಳಗೆ ಅಂದರೆ ತಾ ೭ ೧೦ ೩೭ಕ್ಕೆ ಅದರೂ ಸದಸ್ಯರ ಸಂಪೂರ್ಣ ಪಟ್ಟಿಯೂ ಲೆಕ್ಕಾಚಾರವೂ ಜಿಲ್ಲಾ ಕಮಿಟಿಗೆ ಮುಟ್ಟಬೇಕಾಗಿದೆ. ಈ ವ್ಯಾದೆಗೆ ತಕ್ಕವಿದ್ದರೆ ಪ್ರಾಂತಿಕ ಕಮಿಟಿಗೆ ಹಾಗೂ ಅವರು ಅಖಿಲಭಾರತಕಮಿಟಿಗೂ ಸದಸ್ಯರ ಲಿಸ್ಟು ಕಳುಹಿಸಲು ತೊಂದರೆಯಾಗುವುದು. ಇದರಿಂದಾಗಿ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಮತ್ತು ಕೆಲಸಗಾರರು ತಾ ೩೦ ೯ ೩೭ಕ್ಕೆ ಸದಸ್ಯರನ್ನು ಸೇರಿಸುವ ಕೆಲಸವನ್ನು ಮುಗಿಸಿದ ಕೂಡಲೆ ಪುಸ್ತಕಗಳನ್ನೂ ಹಣವನ್ನೂ ಆಯಾ ತಾಲೂಕು ಕಾಂಗ್ರೆಸ್ ಕಮಿಟಿಗೆ ಕೂಡಲೇ ಕೊಟ್ಟು ಲಿಸ್ಟುವನ್ನು ತಿಳಿಸಬೇಕಾಗಿ ಈ ಮೂಲಕ ವಿನಂತಿ.

ಹಿ ರಾಮರಾಯ ಮಲ್ಯ,
ಕಾರ್ಯದರ್ಶಿ.

**ಕುಂದಾಪುರ**—ಇಲ್ಲಿಯ ಕರ್ನಾಟಕ ಸಾಹಿತ್ಯ ಸಂಘದವರ ಆಶ್ರಯದಲ್ಲಿ ಸುಧಾರಿತ ಯಕ್ಷಗಾನ ಸಭೆಯೊಂದು ಕಳೆದ ತಾ ೧೪ರಲ್ಲು ಶ್ರೀ ಕೃಷ್ಣ ಮಾರುತೀನ ಟೆಕಟಾಲೆಯಲ್ಲಿ ಶ್ರೀ| ವಕೀಲ ನರಸಿಂಹ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯು ಜನರಿಂದ ಕಿಕ್ಕಿರಿದಿತ್ತು. ಪ್ರಸಿದ್ಧ ಅರ್ಥಧಾರಿಗಳು ನೆರೆದಿದ್ದರು. ಯಕ್ಷಗಾನ ಕಲೆಯವಿಷಯವಾಗಿ ಹಲವರ ಭಾಷಣಗಳಾದ ಬಳಿಕ 'ಅಂಗದ ಸಂಧಾನ' ಮತ್ತು 'ಸುದನ ಕಾಳಗ'ವೆಂಬ ಪ್ರಸಂಗಗಳು ಅಭಿನಯಿಸಲ್ಪಟ್ಟವು.

ಇದೇ ತಾ ೧೯ರಲ್ಲು ಉಡುಪಿ ಕ್ರಿಶ್ಚಿಯನ್ ಹೈಸ್ಕೂಲ್ ಮತ್ತು ಸ್ಥಳೀಕ ಬೋರ್ಡ್ ಹೈಸ್ಕೂಲಿನ ಕ್ರಿಕೆಟ್ ಆಟಗಾರರೊಳಗೆ ಮೇಚ್ ಆಗಿ ಉಡುಪಿಯವರು ಗೆದ್ದರು. ತಾ ೧೩ರಲ್ಲಿ ಉಡುಪಿಯ ಕ್ರಿಶ್ಚನ್ ಹೈಸ್ಕೂಲ್ ಮತ್ತು ಕುಂದಾಪುರ ಟೌನ್ ಟೀಮಿನವರೊಳಗೆ ಆಟನಡೆದು ಉಡುಪಿಯವರು ಇನ್ನಿಂಗ್ ಸೋತರು.

**ಪಣಂಬೂರು**—ಇಲ್ಲಿಯ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಡಾ ಈಶ್ವರ ಶರ್ಮರ, ಅಧ್ಯಕ್ಷತೆಯಲ್ಲಿ ತಾ ೧೧-೯-೩೭ರಲ್ಲಿ ಮಹಾಜನರ ಸಭೆ ಜರಗಿತು. ಶ್ರೀಯುತ ರಂಗರಾವ್ ತಲಚೇರಿಕರು ಕಾಂಗ್ರೆಸ್ಸಿನ ಕುರಿತು ಸರಸಭಾಷಣವಿತ್ತರು.

## ಉಡುಪಿ

### ದಕ್ಷಿಣಕನ್ನಡಕ್ಕೆ ಕಾಂಗ್ರೆಸ್ ಮಂತ್ರಿಗಳ ಆಗಮನ

ಮದ್ರಾಸ್ ಪ್ರಾಂತದ ಕೈಗಾರಿಕೆ ಮತ್ತು ಲೇಬರ್ ಮಂತ್ರಿಗಳಾದ ಶ್ರೀ ವಿ ವಿ ಗಿರಿ ಮತ್ತು ವ್ಯವಸಾಯ ಖಾತೆಯ ಮಂತ್ರಿಗಳಾದ ಶ್ರೀ ಮುನಿಸ್ವಾಮಿ ಪಿಳ್ಳೆಯವರು ಅಕ್ಟೋಬರ ತಾ ೨ಕ್ಕೆ ಮಂಗಳೂರಿಗೆ ಒಂದು ತಾ ೪ರಲ್ಲು ಕಾರ್ಕಳ ಮತ್ತು ಉಡುಪಿಯನ್ನು ಸಂದರ್ಶಿಸಲಿರುವರು. ತಾ ೫ರಲ್ಲು ಬಂಟ್ವಾಳ ಮತ್ತು ಪುತ್ತೂರಿಗೂ ತಾ ೬ನೇ ಬೆಳಗ್ಗೆ ಕಾಸರಗೋಡಿಗೂ ಹೋಗಿ ಅಲ್ಲಿಂದ ಮಲಬಾರಿಗೆ ಹೊರಟು ಹೋಗುವರು. ಶ್ರೀ ಎ ಬಿ. ಶೆಟ್ರು ಅವರೊಂದಿಗೆ ಕಾರ್ಕಳಕ್ಕೆ ಮತ್ತು ಉಡುಪಿಗೆ ಬರಲಿರುವರು. ಉಡುಪಿಯಲ್ಲಿ ಮಂತ್ರಿಗಳು ಮಲ್ಪೆ ಮತ್ತು ಕಲ್ಯಾಣಪುರ ಸಕ್ಕರೆ ಕಾರ್ಖಾನೆಗಳನ್ನು ನೋಡಿ ಸಂಜೆ ಘಂಟೆ ೫ಕ್ಕೆ ಸಾರ್ವಜನಿಕ ಭಾಷಣಮಾಡಲಿರುವರು.

ಇಲ್ಲಿಯ ಜನಪ್ರಿಯ ವಕೀಲರೂ, ನಗರ ಸಭಾಪತಿಗಳೂ ಆದ ಶ್ರೀಯುತ ಅರಸರು ಲಕ್ಷ್ಮೀನಾರಾಯಣ ರಾಯರು ಶ್ರೀ ಬಿ. ಶ್ರೀನಿವಾಸ ರಾಯರ ಸ್ಥಾನಕ್ಕೆ 'ಗವರ್ನ್‌ಮೆಂಟ್ ಪ್ಲೀಡರ್' ಆಗಿ ನೇಮಿಸಲ್ಪಟ್ಟುದು ಅಭಿನಂದನೀಯವಿದೆ.

ಮ್ಯುನಿಸಿಪಾಲಿಟಿ ಮೀಟಿಂಗು ಇದೇ ಬರುವ ತಾ ೨೬ನೇ ಮಂಗಳವಾರ ಮುನಿಸಿಪಲ್ ಆಫೀಸಿನಲ್ಲಿ ಜರಗಲಿದೆ.

ಚೀನಾ ದಿನಾಚರಣೆಯು ತಾ ೨೬ಕ್ಕೆ ಸಂಜೆ ೬ ೩೦ಕ್ಕೆ ಶ್ರೀ ರಾಮಕೃಷ್ಣ ಹೋಟೆಲಿನಲ್ಲಿ ಆಚರಿಸಲ್ಪಡುವುದೆಂದೂ ಅದಕ್ಕೆ ಮಹಾಜನರೆಲ್ಲರೂ ನೆರವಾಗಬೇಕೆಂದೂ ತಾ ಕಾ ಕಮ್ಮಿಯ ಪ್ರೆಸಿಡೆಂಟ್ ಶ್ರೀಯುತ ಪಿ ಮಂಜುನಾಥ ನಾಯ್ಕರು ತಿಳಿಸುತ್ತಾರೆ.

ಉಡುಪಿ ಸಂಸ್ಕೃತ ಮಹಾಪಾಠಶಾಲೆಯ ಹಳೆವಿದ್ಯಾರ್ಥಿಗಳ ಒಂದು ಮಹಾಸಭೆಯು ತಾ ೨೦-೯-೩೭ರಲ್ಲಿ ಶ್ರೀಯುತ ವಿಠೋಬಾಳ ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿ ಸದ್ರಿ ಮಹಾಪಾಠಶಾಲೆಯ ನಿವೃತ್ತ ವಿದ್ಯಾರ್ಥಿಗಳ ವ್ಯವಸ್ಥಿತ ಸಂಘಟನೆಗಾಗಿ ಹಳೆವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸತಕ್ಕದೆಂದೂ ಸದ್ರಿ ಸಂಘಕ್ಕೆ ಒಂದು ತಾತ್ಕಾಲಿಕ ಕಾರ್ಯಕಾರೀ ಮಂಡಳಿ ಆರತಕ್ಕದ್ದೆಂದೂ, ಇದೇ ಬರುವ ಕಾರ್ತಿಕಮಾಸದಲ್ಲಿ ಸದ್ರಿ ವಿದ್ಯಾರ್ಥಿಗಳ ಇನ್ನೊಂದು ಮಹಾಸಭೆಯು ಜರಗತಕ್ಕದ್ದೆಂದೂ, ಅದರೊಳಗಾಗಿ ತಾತ್ಕಾಲಿಕ ಕಾರ್ಯಕಾರಿ ಮಂಡಳಿಯವರು ಸಂಘಕ್ಕೆ ಬೇಕಾದ ನಿಬಂಧನೆಗಳನ್ನು ತಯಾರಿಸಿ ಮಂಜೂರಾತಿ ಬಗ್ಗೆ ಸದ್ರಿ ಸಭೆಯಲ್ಲಿಡತಕ್ಕದ್ದೆಂದೂ ಸದ್ರಿ ಸಭೆಯು ಒಳಗಾಗಿಯೇ ಸಾಂಘಿಕವಾದ ಸಾಧ್ಯವಾದಮಟ್ಟಿಗೆ ಹಳೆ ವಿದ್ಯಾರ್ಥಿಗಳ ಒಂದು ಡೈರೆಕ್ಟರಿಯನ್ನು ತಯಾರಿಸಬೇಕೆಂದೂ ನಿರ್ಣಯಗಳಾದ್ದಲ್ಲದೆ ಸದ್ರಿ ಸಭೆಯೊಳಗಾಗಿಯೇ ಎಲ್ಲಾ ಹಳೆ ವಿದ್ಯಾರ್ಥಿಗಳೂ ಪ್ರಕೃತ ೧-೮-೦ಯಂತೆ ವಾರ್ಷಿಕ ಚಂದಾಕೊಟ್ಟು ಸಭೆಯ ಮೆಂಬರರಾಗಬೇಕೆಂದು ಸಭೆಯವರು ಕೇಳಿಕೊಂಡಿದ್ದಾರೆಂದೂ ಕಳದ ಸದ್ರಿ ಸಂಘದ ಕಾರ್ಯದರ್ಶಿ ಬಿ. ಶ್ರೀನಿವಾಸಭಟ್ಟರು ತಿಳಿಸುತ್ತಾರೆ.

ಉಡುಪಿ ಸೆಂಟರ್ ಉಪಾಧ್ಯಾಯರ ಮಾಸಿಕ ಸಭೆಯು ತಾ ೧೮-೯-೩೭ರಲ್ಲಿ ಶ್ರೀ ಬಿಂದು ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮಹಾದರಿ ಹಾರ, 'ಉಪಾಧ್ಯಾಯರ ಕರ್ತವ್ಯ' ಎಂಬುದರ ಕುರಿತು ಭಾಷಣ ಇವೇ ಮುಖ್ಯ ಕಾರ್ಯಕ್ರಮಗಳಾಗಿದ್ದವು. ಇಂತಹ ಸಭೆಗಳು ಮೈಷಮ್ಯ ಪ್ರದರ್ಶನ ರಂಗವಾಗದೆ ಉಪಾಧ್ಯಾಯ ವರ್ಗಕ್ಕೆ ನೆಟ್ಟನ ಪ್ರಯೋಜನ ಸಿಗುವಂತಹ ವ್ಯವಸ್ಥೆಯಿಂದೊಡಗೂಡಿ ಅದಕ್ಕೆ ತಕ್ಕ ಕಾರ್ಯಕ್ರಮಗಳು ರೂಪುಗೊಳ್ಳಲೆಂದೆಮ್ಮ ಹಾರೈಕೆ.

**The Canara Banking Corporation Udipi Ltd.**

(Incorporated in British India)

Head Office:—UDIPI ESTD. 1906

*MEMBERS* – RESERVE BANK OF INDIA, CLEARING HOUSE, MADRAS.

Working Resources Rs. 55,00,000/-

BRANCHES·

1 Madras, 2. Mangalore, 3. Salem, 4. Vellore, 5 Tellicherry, 6. Mettupalayam, 7. Mysore, 8. Shimoga, 9. Mercara, 10. Sagar, 11 Veerarajendrapet, 12 Saklaspur, 13. Coondapoor 14. Byndoor, 15. Malpe, 16. Udipi, 17 Bunder-Mangalore, 18. Shirva.

ANNOUNCEMENT

A branch of the CORPORATION has been opened at MALPE (Udipi) on the 6th inst., and all kinds of Banking transactions are undertaken there from that date.

Office of the Corporation, UDIPI Dated ... 1937

*V R. Kamath*, B A, LL.B. Ag. Manager.


ಉಡುಪಿ ಗುರುವಾರ. ತಾ ೨೩–೯–'೩೭

## ಮದ್ರಾಸ್ ಎಸೆಂಬ್ಲಿ ಅಧಿವೇಶನ

೧೦ ದಿವಸಗಳ ಬಿಡುವಿನ ನಂತರ ಮದ್ರಾಸ್ ಎಸೆಂಬ್ಲಿ ಸಭೆಯು ಪುನಃ ಇದೇ ತಾ. ೧೪ರಿಂದ ಆರಂಭವಾಗಿರುವುದು. ಕಾಂಗ್ರೆಸ ಮಂತ್ರಿಗಳು ಭೂಕಂದಾಯ ವಸೂಲಿ, ಕಂದಾಯ ರಿಯಾಯತಿ, ಹಳ್ಳಿಗರ ಸಾಲನಿವಾರಣೋಪಾಯ, ಮದ್ಯಪಾನ ನಿಷೇಧ, ನಿರಾವರಿ ಯೋಜನೆ, ಗ್ರಾಮೋನ್ನತಿಯ ಯೋಜನೆಯ ಕುರಿತೆಲ್ಲಾ ತಮ್ಮ ಧೋರಣೆಯನ್ನು ವಿವರಿಸಿ ಹೇಳಿರುವರು. ಮದ್ಯಪಾನ ನಿಷೇಧದ ಹೊರತು ಇತರ ಯಾವ ವಿಷಯದಲ್ಲಿಯೂ ಸರಕಾರದ ಯಾವತರದ ಯೋಜನೆಯೂ ತಯಾರಿಸಲ್ಪಟ್ಟಿರುವದಿಲ್ಲ. ಆಲೋಚನೆಯಲ್ಲಿದೆ; ಯೋಜನೆ ತಯಾರಿಸಲ್ಪಡುತ್ತದೆ, ವಿಚಾರಣಾ ಕಮಿಟಿ ನೇಮಿಸಲ್ಪಡಲಿವೆ. ಎಲ್ಲವನ್ನೂ ಸಹಾನುಭೂತಿಯಿಂದ ಕಾಂಗ್ರೆಸ್ಸಿನ ಧೋರಣೆಗನುಸಾರವಾಗಿ ನಡಿಸಲಾಗುತ್ತದೆಂದೇ ಹೆಚ್ಚಿನ ಪ್ರಾಮುಖ್ಯ ಸಂಗತಿಗಳ ಕುರಿತು ಮಂತ್ರಿಗಳು ಉತ್ತರ ಕೊಟ್ಟಿರುವರೇ ಹೊರತು ನಿಶ್ಚಿತವಾಗಿ ಯಾವುದನ್ನೂ ತಿಳಿಸಿರುವುದಿಲ್ಲ. ಈಗ ಎಲ್ಲಕ್ಕಿಂತಲೂ ಪ್ರಾಮುಖ್ಯವೆನಿಸುವುದೆಂದರೆ ರೈತರ ಕಂದಾಯ ಇಳಿತ, ಅವರ ಸಾಲನಿವಾರಣೆ ಮತ್ತು ಹಳ್ಳಿಗಳ ಉನ್ನತಿಸಾಧನೆ. ಸಂಯುಕ್ತ ಪ್ರಾಂತದ ಮಂತ್ರಿಗಳು ಇದಕ್ಕೆ ಪ್ರಥಮವಾಗಿ ಗಮನವಿತ್ತು ಇಷ್ಟರಲ್ಲೇ ವ್ಯಾಪಕವಾದೊಂದು ಯೋಜನೆಯನ್ನು ತಯಾರಿಸಿರುವರು. ಬೊಂಬಾಯಿ ಪ್ರಾಂತದ ಮಂತ್ರಿಮಂಡಲವು ಕೂಡಾ ಹಳ್ಳಿಗರ ಸಾಲನಿವಾರಣೆಗೆ ಪ್ರಥಮವಾಗಿ ಗಮನವಿತ್ತು ಆ ಕುರಿತು ವಿಚಾರಿಸಲು ತಜ್ಞರ ಕಮಿಟಿಯೊಂದನ್ನು ನೇಮಿಸಿರುವುದು. ಬಿಹಾರು ಮತ್ತು ಒರಿಸ್ಸಾದ ಮಂತ್ರಿಗಳೂ ಬೇಸಾಯಗಾರರ ಹಿತಸಾಧನೆಯ ಯೋಜನೆಗಳನ್ನು ಕೈಕೊಂಡಿರುವರು. ಆದರೆ ಇತರ ಪ್ರಾಂತಗಳೆಲ್ಲವುಗಳಿಗಿಂತಲೂ ಮುಂದುವರಿದ ಮತ್ತು ಅತ್ಯಂತ ಪ್ರಗತಿಪರ ಪ್ರಾಂತವೆನಿಸಿರುವ ಮದ್ರಾಸ ಕೇವಲ ಒಂದು ಜಿಲ್ಲೆಯ ಮದ್ಯಪಾನ ನಿಷೇಧಕ್ಕೆ ಮಹತ್ವವನ್ನಿತ್ತು ಅದಕ್ಕೆ ಮೊದಲಾಗಿ ಗಮನವಿತ್ತಿರುವುದು. ಹಳ್ಳಿಗಳ ದುರವಸ್ಥೆಯನ್ನು ಬೇಸಾಯಗಾರರ ಕಂದಾಯ ಮತ್ತು ಸಾಲದ ಭಾರವನ್ನು ಕಡಿಮೆ ಮಾಡುವ ಕುರಿತ, ಹೆಚ್ಚಿನ ಗಮನವಿತ್ತಿರುವಂತೆ ತೋರುವುದಿಲ್ಲ. ಗ್ರಾಮೋದ್ಧಾರ ಮತ್ತು ಬೇಸಾಯಗಾರರ ಸ್ಥಿತಿಯ ಸುಧಾರಣೆಯು ಕೆಲಸವು ಇಡೀ ದೇಶಕ್ಕೆ ಸರಿಸಮಾನವಾಗಿ ಸಂಬಂಧಿಸುವ ವಿಷಯವಾಗಿರುವುದರಿಂದ ಆ ಕುರಿತು ಕಾಂಗ್ರೆಸ್ ಮಂತ್ರಿಗಳೆಲ್ಲರೂ ಒಂದೇ ರೀತಿಯ ಧೋರಣೆ ವಹಿಸುವಂತೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಬಾರದೇಕೆ?

ರೆವಿನ್ಯೂ ಮಂತ್ರಿಗಳೇ ತನ್ನ ಭಾಷಣದಲ್ಲಿ ಹೇಳಿದಂತೆ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಹೊರಡಿಸಿದ ಪ್ರಕಟಣಾ ಪತ್ರದಲ್ಲಿ ಈ ಕೆಳಗಣ ವಿಷಯವು ಮುಖ್ಯವಾಗಿತ್ತು. ಭೂಮಿಯ ಅನುಭೋಗ, ಕಂದಾಯ ಮತ್ತು ಗೇಣಿ ಪದ್ಧತಿಯನ್ನು ಸುಧಾರಿಸಿ ಸಾಗುವಳಿಯ ಭೂಮಿಯ ಮೇಲಿನ ಹೊರೆಯ ಕುರಿತು ಸರಿಯಾದ ವ್ಯವಸ್ಥೆ ಮಾಡಿ, ಚಿಕ್ಕ ಹಿಡುವಳಿದಾರರು ತೆರುವ ಗೇಣಿ ಮತ್ತು ಕಂದಾಯವನ್ನು ಕೂಡಲೆ ಸಾಕಷ್ಟು ಕಡಿಮೆ ಮಾಡಿ ಅವರಿಗೆ ಸಹಾಯಮಾಡುವುದಲ್ಲದ, ಲಾಭದಾಯಕವಲ್ಲದ ಹಿಡುವಳಿದಾರರಿಗೆ ಅವಶ್ಯವಿರುವವರೆಗೆ ಕಂದಾಯ ಮತ್ತು ಗೇಣಿವಿನಾಯತಿಗೊಳಿಸಿ ನ್ಯಾಯವಾದೊಂದು ಪ್ರಮಾಣದ ಮೇರೆಗೆ ಹೆಚ್ಚೆಚ್ಚು ಉತ್ಪತ್ತಿಗೆ ಹೆಚ್ಚೆಚ್ಚು ಕರ ಹಾಕತಕ್ಕದ್ದು.

ಹಳ್ಳಿಗರ ಸಾಲದ ಪ್ರಶ್ನೆಯನ್ನು ಜರೂರಾಗಿ ಬಿಡಿಸಲೆತ್ನಿಸಬೇಕು. ಅದಕ್ಕಾಗಿ ಸಾಲವನ್ನೂ ಮತ್ತು ಬಡ್ಡಿಯನ್ನು ನಿಶ್ಚಿತ ಸಮಯದ ವರೆಗೆ ಮುಂದೆ ಹಾಕುವ ಏರ್ಪಾಡು ಮಾಡಬೇಕು, ಸಾಲವನ್ನು ಕ್ರಮೇಣವಾಗಿ ಇಳಿಸುವ ಕುರಿತು ವಿಚಾರಿಸಿ ಸರಕಾರವೇ ಜನತೆಗೆ ಅಗ್ಗ ಬಡ್ಡಿಯಲ್ಲಿ ಹಣವನ್ನೊದಗಿಸಬೇಕು, ಈ ಸಹಾಯವು ಬೇಸಾಯಗಾರರಿಗೂ, ಒಕ್ಕಲುಗಳಿಗೂ, ಚಿಕ್ಕ ವರ್ಗದಾರರಿಗೂ, ಚಿಕ್ಕ ವ್ಯಾಪಾರಿಗಳಿಗೂ ಸರಿಯಾಗಿ ದೊರೆಯಬೇಕು." ಮದ್ರಾಸ್ ಸರಕಾರವು ಇದೇ ಧೋರಣೆಯನ್ನನುಸರಿಸಲಿದೆ ಎಂಬ ರೆವಿನ್ಯೂ ಮಂತ್ರಿಗಳ ಮಾತು ಅತ್ಯಂತ ಸಂತೋಷ ವಿಷಯ. ಆದರೆ ಅವರು ಈ ಧೋರಣೆಯನ್ನು ಯಾವ ರೀತಿಯಲ್ಲಿ ಕಾರ್ಯಕ್ಕೆ ಹಚ್ಚಲಾಗುತ್ತದೆಂಬ ದಿಗ್ದರ್ಶನವನ್ನು ಅವರೇನೂ ಮಾಡಿಕೊಡಲಿಲ್ಲ. ಆ ಸಂಬಂಧವಾದ ತೊಡಕುಗಳನ್ನೇ ಎತ್ತಿ ಹೇಳಿದರು. ಅವಸರದಲ್ಲೇನೂ ಮಾಡುವುದಿಲ್ಲೆಂದರು. ನಮಗೆ ಎಲ್ಲಾ ವಿಷಯದಲ್ಲಿಯೂ ಸಂಪೂರ್ಣ ಸಹಾನುಭೂತಿಯಿದೆ. ಎಲ್ಲವನ್ನೂ ಕ್ರಮೇಣ ಮಾಡುತ್ತೇವೆಂದು ಹೇಳಿಬಿಟ್ಟರೆ ಸಾಲದು. ರೆವಿನ್ಯೂ ಮಂತ್ರಿಗಳು ಆದಷ್ಟು ಬೇಗನೆ ಬಡಬೇಸಾಯಗಾರರ ಮತ್ತು ಹಳ್ಳಿಗರ ಸಂಕಷ್ಟ ನಿವಾರಣೆಯ ಯೋಜನೆಗಳನ್ನು ತಯಾರಿಸಿ ಜ್ಯಾರಿಗೆ ತರಬೇಕು. ರೂ 75 ಲಕ್ಷಗಳ ಕಂದಾಯ ರಿಯಾಯತಿಯು, ಬಹಳ ಸಂಕಷ್ಟಕ್ಕೊಳಗಾಗಿ ಕಂದಾಯ ತೆತ್ತು ಜೀವನ ನಡಿಸುವುದೇ ಅಸಾಧ್ಯವಾಗಿರುವ ಚಿಕ್ಕವರ್ಗದಾರರಿಗೆ ದೊರೆಯುವಂತಾಗಬೇಕು.

## ನವಯುಗದ ಹೊಸ ಯೋಜನೆ

'ನವಯುಗ'ವನ್ನು ಆದಷ್ಟು ಆಕರ್ಷಣೀಯವನ್ನಾಗಿ ಮಾಡುವ ಹೆಬ್ಬಯಕೆಯು ನಮಗೆ ಮೊದಲಿಂದಲೂ ಇತ್ತು. ಈ ವರ್ಷದಿಂದ ಸ್ವಲ್ಪ ಸುಧಾರಣೆಯನ್ನು ಮಾಡಿದ್ದೇವೆ. ಇನ್ನೂ ಸಚಿತ್ರ ಸುಂದರವಾಗಿ ಮಾಡುವ ಆಶೆ ನಮಗಿದೆ. ಇದರಿಂದ ನಮಗೆ ತುಂಬ ನಷ್ಟವಿದೆ. ಆದರೂ ವಾಚಕರನ್ನೊಲಿಸಬೇಕೆಂಬ ಹಿರಿದಾದ ಇಚ್ಛೆಯಿಂದ ನಾವದನ್ನು ಗಮನಿಸಲಿಲ್ಲ. ಆಥವಾ ಕನ್ನಡಿಗರಾರೂ ನಮ್ಮ ಹಿರಿಯಾಶೆಗೆ ನೆರವಾಗದಿದ್ದರೆ ನಾವೂ ನಮ್ಮ ಆಲೋಚನೆಯನ್ನು ಬದಲಾಯಿಸಬೇಕಾಗುವುದು. ಓದುಗರ ಪ್ರೋತ್ಸಾಹವು ಹೆಚ್ಚಿದಂತೆ ನಾವು ಹೆಚ್ಚು ಸುಧಾರಣೆಗಳನ್ನು ಮಾಡತ್ತಿದ್ದೇವೆ, ಮಾಡಲಿದ್ದೇವೆ.

ಪ್ರಕೃತ ಈ ವರ್ಷದಿಂದ ಪ್ರತಿ ತಿಂಗಳ ಕೊನೆಯ ಸಂಚಿಕೆಯಲ್ಲಿ ನಾಲ್ಕು ಪುಟಗಳನ್ನು ಹೆಚ್ಚಿಸಿ 'ತಿಂಗಳ ಕಾಣಿಕೆ'ಯನ್ನು ಓದುಗರಿಗೆ ಒಪ್ಪಿಸಬೇಕೆಂದಿರುವೆವು. 'ತಿಂಗಳ ಕಾಣಿಕೆ'ಯಲ್ಲಿ ಸರಸ ಸಾಹಿತ್ಯದ ಸುಗ್ಗಿಯು ಬರಲಿದೆ. ಶಿಕ್ಷಣಿಕ ವಿಚಾರಗಳನ್ನು ಅದರಲ್ಲಿ ಕೊಡಲಿದ್ದೇವೆ ಅಂದರೆ ಪ್ರತೀ ತಿಂಗಳ ಅಂತ್ಯದ ಸಂಚಿಕೆಯು 24 ಪುಟಗಳನ್ನೊಳಗೊಂಡಂತಾಗುವುದು. ನಮ್ಮ ಯೋಜನೆಯನ್ನು ಯಶಸ್ವಿಯಾಗಿಸುವ ಹೊಣೆಯು ಓದುಗರದಾಗಿದೆ. ಅವರ ಬೆಂಬಲವು ಹೆಚ್ಚುತ್ತ ಹೋದರೆ ಪ್ರತಿವಾರವೂ 24 ಪುಟಗಳನ್ನಿರಿಸಿ 'ತಿಂಗಳ ಕಾಣಿಕೆ'ಯ ಸಂಚಿಕೆಯಲ್ಲಿ 28 ಪುಟಗಳನ್ನು ಅರ್ಪಿಸಬೇಕೆಂದಿದ್ದೇವೆ. ನಮ್ಮ ಈ ಹೊಸಹೊಸ ಯೋಜನೆಯನ್ನು ಜಯಶೀಲವಾಗಿ ನಡೆಸುವಂತೆ ಸಹಾಯಮಾಡಿಯಾರೆಂದು ನಂಬಿರುತ್ತೇವೆ.

### ಮುಂದಿನವಾರ ನಿರೀಕ್ಷಿಸಿರಿ

ನವಯುಗವು 24 ಪುಟಗಳಿಂದ ಹಲವು ಚಿತ್ತಾಕರ್ಷಕ ಭಾವಚಿತ್ರ ಲೇಖನಗಳಿಂದ ಹೊರಡುವುದು.

### ದೇಶಭಕ್ತ

ದೇಶ ಮತ್ತು ಜನಸೇವೆಯ ವೇದಿಕೆಯಲ್ಲಿ ತನ್ನ ಸರ್ವಸ್ವವನ್ನೂ ಸಮರ್ಪಿಸಿ ಜನತೆಗಾಗಿ ಯಾವ ತ್ಯಾಗಕ್ಕೂ ಸಿದ್ಧವಿರುವ ಆದರ್ಶ ಜೀವನವನ್ನು ಚಿತ್ರಿಸುವ ಇಂದಿನ ಪರಿಸ್ಥಿತಿಗನುಗುಣವಾದ ಉಜ್ವಲ ಹಾಗೂ ಬೋಧಪರ ನಾಟಕ.

**ಈ ವಾರ ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ. ಮುಂದಿನ ವಾರದಿಂದ ಕ್ರಮಶಃ ಪ್ರಕಟವಾಗುವುದು.**

**ಇಂದೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.**

ನವಯುಗವನ್ನು ನಿಮ್ಮದನ್ನಾಗಿ ಮಾಡಿ ಅದರಿಂದ ಹೆಚ್ಚೆಚ್ಚು ಸೇವೆ ಪಡೆಕೊಳ್ಳಿರಿ.

### ವಿನಂತಿ.

ಚಂದಾದಾರರಾಗುವರೆಂಬ ನಿರೀಕ್ಷೆಯಿಂದ ನಾವು ಕೆಲವರಿಗೆ ಪತ್ರಿಕೆಯನ್ನು ಕಳುಹಿಸುತ್ತಿದ್ದೇವೆ. ಅಲ್ಲದೆ ಯಾರಿಗೂ ಧರ್ಮಾರ್ಥವಾಗಿ ಕಳುಹಿಸುತ್ತಿರುವದಿಲ್ಲ. ಪತ್ರಿಕೆ ಬೇಡವಾದವರು ಬಾಕಿ ಇರುವ ಚಂದಾ ಹಣವನ್ನು ಕಳುಹಿಸಿಕೊಟ್ಟು ಮುಂದೆ ಬೇಡವಾಗಿದ್ದರೆ ತಕ್ಕ ಕಾಲದಲ್ಲಿ ತಿಳಿಸಿದರೆ ತುಂಬಾ ಉಪಕಾರವಾಗುವುದು. ಬಹುಕಾಲ ಪತ್ರಿಕೆ ಸ್ವೀಕರಿಸಿ ಕೊನೆಗೆ ಹಣ ಕೇಳುವಾಗ 'ವಾಪಸು' ಮಾಡುವುದರಿಂದ ನಮ್ಮ ಮನಸ್ಸು ನೋಯುತ್ತದೆಂಬುವದನ್ನು ಹೇಳುವ ಪ್ರಸಂಗ ಬಂದಿದೆ. ಹಣವನ್ನು ಕಳುಹಿಸದೆ, ಉತ್ತರವನ್ನೂ ಕೊಡದೆ ಇರುವವರಿಗೆ ನಾವು ವಿ. ಪಿ. ಮಾಡಲಿರುವೆವು. ಅದನ್ನವರು ಸ್ವೀಕರಿಸುವರೆಂಬ ಭರವಸೆ.

ಮೆನೇಜರ್, **ನವಯುಗ.**

## ಹೊಸ ಚಂದಾದಾರರಾಗುವವರಿಗೆ

ನಾವು ತಾ. 26-8-37ರ ಸಂಚಿಕೆಯಲ್ಲಿ ಈ ಸಪ್ಟಂಬರ ತಿಂಗಳಾಂತ್ಯದೊಳಗೆ 'ನವಯುಗ'ಕ್ಕೆ ಹೊಸತಾಗಿ ಚಂದಾದಾರರಾಗುವವರಿಗೆ 'ಹೆಂಡ್ತಿ ಗಂಡನಾದರೆ' ಮತ್ತು 'ಪುರುಷವಧು' ಎಂಬ ೦-೪-೦ ಕ್ರಯದ ಎರಡು ಸರಸ ಸಾಮಾಜಿಕ ಪ್ರಹಸನ ಪುಸ್ತಕಗಳನ್ನು ಉಚಿತವಾಗಿ ಕೊಡುವೆವೆಂದು ಪ್ರಕಟಿಸಿರುವೆವಷ್ಟೆ? ಆ ಪ್ರಕಾರ ಇಷ್ಟರಲ್ಲೇ ಅನೇಕ ಹೊಸ ಚಂದಾದಾರರು ಸೇರಿ ನಮ್ಮನ್ನು ಪ್ರೋತ್ಸಾಹಿಸಿದುದಲ್ಲದೆ ಉಚಿತ ಪುಸ್ತಕಗಳನ್ನು ಪಡೆದಿರುವರು. ತಿಂಗಳಾಂತ್ಯವು ಸಮೀಪಿಸಿದ್ದರಿಂದ ಇನ್ನು ಹೊಸತಾಗಿ ಸೇರುವವರು ಕೂಡಲೇ ಚಂದಾದಾರರಾಗಿ ಮೇಲಿನ ಪುಸ್ತಕಗಳನ್ನು ಪಡೆಯುವ ಸುಸಂದರ್ಭವನ್ನು ಕಳಕೊಳ್ಳಬಾರದಾಗಿ ವಿನಂತಿ. ರೂ. 3-4-0ನ್ನು ಕಳುಹಿಸಿಕೊಟ್ಟು ಇಂದೇ ಚಂದಾದಾರರಾಗಿರಿ. ನಿಮ್ಮ ಮಿತ್ರರೂ ಚಂದಾದಾರರಾಗುವಂತೆ ಕೇಳಿಕೊಳ್ಳಿರಿ.

ಮೆನೇಜರ್, **ನವಯುಗ**

# ಸ್ವದೇಶ-ವಿದೇಶ

## ಸ್ವದೇಶ

### ವಕೀಲರಿಗೆ ಎಚ್ಚರಿಕೆ

ಗೇಣಿ ಮತ್ತು ಸಾಲ ವಸೂಲಿಗೆ ಸಂಬಂಧವಾದ ವ್ಯವಹಾರಣೆಗಳನ್ನೆಲ್ಲಾ ನಿಲ್ಲಿಸಬೇಕೆಂದು ಸರಕಾರವು ಹುಕುಂ ಕೊಟ್ಟಿರುವುದರಿಂದ ವ್ಯಾಜ್ಯಗಳು ಅರ್ಧಕ್ಕಿಂತಲೂ ಕಡಿಮೆಯಾಗಿ ಹೋಗಿವೆ. ಇದರಿಂದ ವಕೀಲರಿಗೆ ದೊಡ್ಡ ಧಕ್ಕೆಯುಂಟಾಗಿದೆಯೆಂದು ಅಹಮದಾಬಾದಿನ ವಕೀಲ ಸಂಘದವರು ನ್ಯಾಯಖಾತೆಯ ಮಂತ್ರಿಗಳಾದ ಡಾಕ್ಟರ್ ಕಟ್ಜುರವರೊಡನೆ ದೂರಿಕೊಂಡರು. ಅದಕ್ಕವರು 'ವಕಾಲತಿಗೆ ಸೇರುವ ಮೊದಲ ಎರಡೆರಡು ಸಲ ಆಲೋಚಿಸಿಕೊಳ್ಳಿರಿ. ವಕಾಲತಿಗೆ ಹೋಗುವ ಮೊದಲು ನಿಮಗೆ ಬೇಕಷ್ಟು ಕೆಲಸ ದೊರೆಯುವ ಸಂಭವವಿದೆಯೋ ಎಂಬದನ್ನು ವಿಚಾರಿಸಿಕೊಳ್ಳಿ. ವ್ಯವಹರಣೆಗಳು ಇನ್ನೂ ಕಡಿಮೆಯಾಗಲಿವೆಯೇ ಹೊರತು ಹೆಚ್ಚಾಗಲಾರವು' ಎಂದು ಎಚ್ಚರಿಸಿದರು.

### ಕೋದಂಡರಾವ್ ಕ್ಯಾಂಪ್‌ಬೆಲ್ ವಿವಾಹ

ಪೂನದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ ಕೋದಂಡ ರಾಯರಿಗೂ ಅಮೆರಿಕದ ಮಿಸ್. ಮೇರಿ ಲ್ಯೂಸಿ ಕ್ಯಾಂಪ್‌ಬೆಲ್ ಎಂಬ ಸ್ತ್ರೀಗೂ ಇದೇ ತಾ ೧೯ರಲ್ಲು ರಿಜಿಸ್ಟ್ರೀ ವಿವಾಹವಾಯಿತು. ಈ ವಿವಾಹಕ್ಕೆ ಮಹಾತ್ಮಾಗಾಂಧಿ, ಶ್ರೀನಿವಾಸ ಶಾಸ್ತ್ರಿ, ಸರ ಪಿ ಎಸ್ ಶಿವಸ್ವಾಮಿ ಅಯ್ಯರ್, ಸರೋಜಿನಿ ದೇವಿ, ಸರ್ ರಾಧಾಕೃಷ್ಣನ್, ದೀನಬಂಧು ಎಂಡ್ರ್ಯೂಸ್, ಸಿ ರಾಜಗೋಪಾಲಾಚಾರ್, ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದವರು ಆಶೀರ್ವಾದ ಕಳುಹಿಸಿದ್ದರು. ಶ್ರೀಗಳಾದ ಎಮ್. ಆರ್ ಜಯಕರ್, ಎನ್ ಸಿ ಕೇಳ್ಕರ್ ಡಿ. ಕೆ ಕಾರ್ವೆ ಮೊದಲಾದವರು ಸ್ವತಃ ಹಾಜರಿದ್ದರು.

### ಸಂಯುಕ್ತ ಪ್ರಾಂತೀಯ ಜಮೀನ್ದಾರರು

ಅಕ್ಟೋಬರ ಮೂರನೇ ವಾರದಲ್ಲಿ ಸಭೆ ಸೇರಿ, ಕಾಂಗ್ರೆಸ್ಸಿನ ಹೆಸರಿನಿಂದ ಕೆಲವರು ಹಳ್ಳಿಹಳ್ಳಿಗಳಲ್ಲಿ ಜಮೀನ್ದಾರರ ವಿರೋಧವಾಗಿ ನಡೆಸುವ ಪ್ರಚಾರವನ್ನು ತಡೆಗಟ್ಟಲು ತಕ್ಕ ಏರ್ಪಾಡು ಮಾಡುತ್ತಾರೆ. ಕಾಂಗ್ರೆಸಿನೊಳಗೆ ಕೆಲವರು ಪ್ರಕೃತದ ಸಾಮಾಜಿಕ ಮತ್ತು ಸಾಂಪತ್ತಿಕ ವ್ಯವಸ್ಥೆಯನ್ನೇ ನಾಶಗೊಳಿಸಿ ಅರಾಜಕತ್ವವನ್ನುಂಟುಮಾಡುತ್ತಲಿದ್ದಾರೆ. ಇದರಿಂದ ಶಾಂತ ರೀತಿಯಿಂದ ಸ್ವರಾಜ್ಯ ಸಾಧಿಸಲು ಬಹಳ ತೊಡಕಾಗುವುದು. ಸರಕಾರವು ಅದನ್ನು ನಿಲ್ಲಿಸಬೇಕು. ಜಮೀನ್ದಾರರೆಲ್ಲಾ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರಮಾಡಿ ಒಕ್ಕಲುಗಳಿಗೂ ತಮಗೂ ಸೌಹಾರ್ದವುಂಟಾಗುವಂತೆ ಮಾಡಬೇಕೆಂದೇ ಜಮೀನ್ದಾರರ ಈ ಸಂಘಟನೆಯ ಉದ್ದೇಶ.

### ಜೀವ ವಿಮಾ ಮಸೂದೆ

ಜೀವವಿಮೆಯ ಸಂಬಂಧವಾದ ಮಸೂದೆಯೊಂದಿಗೆ ಎಸೆಂಬ್ಲಿಯ ಮುಂದೆ ತರಲ್ಪಟ್ಟದೆ. ಇದೇ ತಾ ೧೭ರಲ್ಲು ಆ ಕುರಿತು ಉತ್ತೇಜಕ ಚರ್ಚೆ ನಡೆಯಿತು. ಮೇನೇಜಿಂಗ್ ಏಜಂಟರುಗಳ ಪ್ರಯೋಜನ ಮತ್ತು ಆವಶ್ಯಕತೆಯ ಕುರಿತು ತೀವ್ರ ವಾದವುಂಟಾಗಿ ಆ ಕುರಿತು ಇಷ್ಟರ ವರೆಗೆ ಯಾವ ಇತ್ಯರ್ಥವೂ ಆಗಿರುವುದಿಲ್ಲ. ಎಲ್ಲಾ ವಿಮಾ ಕಂಪೆನಿಗಳು ಹಿಂದೂದೇಶದೊಳಗೆ ಮತ್ತು ಹೊರಗೆ ನಡಿಸುವ ವ್ಯವಹಾರವನ್ನು ಪ್ರತ್ಯೇಕವಾಗಿ ತೋರಿಸಬೇಕೆಂದು ಶ್ರೀ ಹಂಸರಾಜರು ತಂದ ಮಸೂದೆಯನ್ನು ಸರಕಾರದವರು ವಿರೋಧಿಸಿದರೂ ಮಂಜೂರಾಯಿತು. ಮೇನೇಜಿಂಗ್ ಏಜಂಟರ ಪದ್ಧತಿಯನ್ನೇ ತೆಗೆದು ಹಾಕಬೇಕು. ಈಗಿರುವ ಮೇನೇಜಿಂಗ್ ಏಜಂಟರಿಗೆ ೩ ವರುಷಗಳ ಅವಧಿ ಕೊಡಬೇಕೆಂಬ ಡಾಕ್ಟರ್ ಜಿಯಾವುದ್ದೀನರ ಉಪಸೂಚನೆಯ ಚರ್ಚೆಯು ಇನ್ನೂ ಮುಗಿದಿಲ್ಲ. ಸರಕಾರದ ಬೋ ಮೆಂಬರರಾದ ಸರ ಎನ್ ಎಸ್ ಸರ್ಕಾರರು ಮೆನೆಜಿಂಗ್ ಏಜಂಟರು ಪರೋಪಜೀವಿಗಳು ಅವರನ್ನು ತೆಗೆದು ಹಾಕಬೇಕೆಂದು ಬಹುವಿರೋಧದ ಘೋಷಣೆ ವಹಿಸಿರುವರು.

## ವಿದೇಶ

### ಲಿಬಿಯಕ್ಕೆ ಇನ್ನೂ ಹೆಚ್ಚಿನ ಸೇನೆ

ಇಟಲಿಯು ಲೀಬಿಯದಲ್ಲಿ ತನ್ನ ಸ್ಥಾನವನ್ನು ಬಲಪಡಿಸಲು ಇದೇ ತಾ ೧೯ರಲ್ಲು ಇನ್ನೂ ಹೆಚ್ಚಿನ ಸೇನೆ ಕಳುಹಿಸಿದುವುದು. ನಿಯೋನ್ ಒಪ್ಪಂದದ ಪ್ರಕಾರ ಮೆಡಿಟರೇನಿಯನ್ ಸಾಗರದಲ್ಲಿ ಪಹರೆ ನಡಿಸುವ ವಿಷಯದಲ್ಲಿ ಇಟಲಿಗೆ ಇಂಗ್ಲೆಂಡ್ ಫ್ರಾನ್ಸ್‌ಗಳಂತೆ ಸರಿಸಮಾನ ಸ್ಥಾನಸಿಕ್ಕಲ್ಲಿ ಅದೂ ಭಾಗಿಯಾಗುವ ಸಂಭವ ತೋರುತ್ತದೆ.

### ಚೀನಾ ಜಾಪಾನು ಯುದ್ಧ ಆಹಾರ ವಸ್ತುಗಳ ಅಭಾವ

ಶಾಂಘಾಯಿಯಲ್ಲಿ ಜಪಾನರು ವಶಪಡಿಸಿಕೊಂಡಿರುವ ಸ್ಥಳದಲ್ಲಿರುವ ಬಂಡಸಾಲೆಗಳಿಂದ ಅಕ್ಕಿ ಮೊದಲಾದ ಸಾಮಾನುಗಳನ್ನು ಯಾರು ಬಿಡುವುದಿಲ್ಲ. ಆದುದರಿಂದ ಶಾಂಘಾಯಿಯಲ್ಲಿ ಆಹಾರ ವಸ್ತುಗಳ ತೀವ್ರ ಅಭಾವವುಂಟಾಗಿದೆ. ಜಪಾನರ ನೌಕಾಮುತ್ತಿಗೆಯ ನಿಮಿತ್ತ ಹೊರಗಿಂದ ತರಲು ಅಸಾಧ್ಯ. ಇದು ಹೊರತು ಯುದ್ಧದ ನಿಮಿತ್ತ ಶಾಂಘಾಯಿ ಬಳಿಯ ಜನರೆಲ್ಲರೂ ಓಡಿಹೋಗಿ ಅದೆಲ್ಲಾ ಬಂಜರು ಬಿದ್ದಿದೆ. ಮಳೆ ಬಂದು ಕಂದಕಗಳು ನೀರಿನಿಂದಲೂ ರಸ್ತೆಗಳು ಕೆಸರಿನಿಂದಲೂ ತುಂಬಿರುವುದರಿಂದ ಶಾಂಘಾಯಿಯಲ್ಲಿ ಯುದ್ಧವೇನೂ ನಡೆಯುವುದಿಲ್ಲ.

ಉತ್ತರ ಚೀನದಲ್ಲಿ ಜಪಾನರು ಮುಂದೊತ್ತುತ್ತಿದ್ದಾರೆ. ೧೦೦,೦೦೦ ಚೀನೀ ಸೇನೆಯು ಜಪಾನರಿಂದ ಆವರಿತವಾಗಿದೆ. ಇವುಗಳಲ್ಲಿ ಎರಡು ದಳಗಳು ವೀರಾವೇಶದಿಂದ ಕಾದಾಡಿದ ಕೇಂದ್ರ ಸರಕಾರದ ಸೇನೆಗೆ ಸೇರಿದವುಗಳು.

ಚೀನೀಯರ ವರ್ತಮಾನ ಪ್ರಕಾರ ಚೀನೀಯರು ಕೆಲವು ಸ್ಥಳಗಳನ್ನು ಪುನಃ ವಶಪಡಿಸಿಕೊಂಡಿರುವರೆಂದೂ, ೧೦೦೦ ಮಂದಿ ಜಪಾನರು ಕೊಲ್ಲಲ್ಪಟ್ಟಿರುವರೆಂದೂ ತಿಳಿದುಬರುತ್ತದೆ. ತಾ ೧೭ರಲ್ಲಿ ಉತ್ತರ ಚೀನದಲ್ಲಿ ದೊಡ್ಡ ಸಮರವು ನಡೆದಿರುವುದು. ಪೈಪಿಂಗ್ ಹಾಂಕೋ ರೈಲ್ವೇ ಲೈನಿನ ಬಳಿ ಪ್ರಾಮುಖ್ಯ ಯುದ್ಧ ನಡೆದಿದೆ. ಜಪಾನ ಯುದ್ಧವಿಮಾನಗಳು ಹಲವು ಪಟ್ಟಣಗಳ ಮೇಲೆ ಬಾಂಬೆಸೆದು ಹಾವಳಿಮಾಡಿರುವವು.

ಇಷ್ಟರವರೆಗಿನ ಯುದ್ಧದಲ್ಲಿ ೬೦೦೦ ಚೀನೀಯರು ಕೊಲ್ಲಲ್ಪಟ್ಟಿರುವರೆಂದು ಜಪಾನರ ಅಂದಾಜು. ಒಂದು ಸಶಸ್ತ್ರ ಮತ್ತು ೫ ಸಾಮಾನ್ಯ ಟ್ರೈನುಗಳನ್ನು ಜಪಾನರು ವಶಪಡಿಸಿಕೊಂಡಿರುವರು. ಚೀನೀಯರು ರೈಲು ಲೈನುಗಳ ಬಳಿ ತಮ್ಮ ಸ್ಥಾನಗಳನ್ನು ಬಲಪಡಿಸುತ್ತಿರುವರು. ಕಾಲುವೆಗಳ ಕಟ್ಟೆಗಳನ್ನೊಡೆದು ಕೆಲವು ಪ್ರದೇಶಗಳಲ್ಲಿ ನೆರೆಬರುವಂತೆ ಮಾಡಿ ಜಪಾನರು ಮುಂದೊತ್ತದಂತೆ ತಡೆಮಾಡಿರುವರು.

ಸೆಪ್ಟಂಬರ ತಾ ೧೮ರಲು ಜಪಾನ ಮತ್ತು ದಕ್ಷಿಣ ಚೀನಾ ಸರಕಾರದ ಯುದ್ಧನಾವೆಗಳೊಳಗೆ ನಡೆದ ಜಲಯುದ್ಧದಲ್ಲಿ ಒಂದು ಚೀನೀ ಹಡಗವು ಮುಳುಗಿಸಲ್ಪಟ್ಟಿತು. ಇನ್ನೊಂದಕ್ಕೆ ಜಖಮ್ಮಾಗಿದೆಯೆಂದು ಜಪಾನರ ಕಡೆಯ ಸುದ್ದಿ. ಪೈಪಿಂಗ್ ಹಾಂಕೋ ರೈಲ್ವೆ ಪ್ರದೇಶದಲ್ಲಿ ೩ ದಿಕ್ಕುಗಳಿಂದ ಮುತ್ತಿಗೆ ಹಾಕಲ್ಪಟ್ಟು ವಿಸ್ತೃತವಾಗಿದ್ದ ಚೀನೀ ಸೇನೆಯು ೮ ದಿವಸಗಳ ಪ್ರಚಂಡ ಹೋರಾಟದಿಂದ ಪರಾಜಯ ಹೊಂದಿ ಹಿಮ್ಮೆಟ್ಟಿರುವುದೆಂಬುದು ನಿಜವಾಗಿರುತ್ತದೆ. ಜಪಾನರು ಚೀನೀಯರ ಉತ್ತರದ ಪ್ರಾಮುಖ್ಯ ಸ್ಥಾನವಾದ ಪಾವೋಟಿಂಗ್‌ಫು ಎಂಬ ಸ್ಥಳಕ್ಕೆ ಸಮೀಪಿಸುತ್ತಾರೆ.

**ಬೆಳ್ತಂಗಡಿ**—ಕಾಂಗ್ರೆಸ್ ಪ್ರಚಾರಕಾರ್ಯದ ಬಗ್ಗೆ ಇಲ್ಲಿಯ ಕಾಂಗ್ರೆಸ್ ಕಮಿಟಿಯ ಸಭೆಯು ತಾ ೫ಕ್ಕೆ ಗುರುವ್ಯಾಸಕಟ್ಟೆ ಶಾಲೆಯಲ್ಲಿ ಶ್ರೀಮಾನ್ ರೆಂಜಾಳ ರಾಮಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ ಕೆ ಪಿ ಕುಮಾರ್ಯ ಹೆಗ್ಗಡೆ, ಬಿ ಎನ್ ಕೆ ವಿ ಡಿ, ಪಿ ಎ ಅಂಗ್ರಾಯರೇ ಮೊದಲಾದವರ ಭಾಷಣಗಳಾಗಿ ಬೆಳ್ತಂಗಡಿ ಸರ್ಕಲಿನಿಂದ ೨ ಬೋರ್ಡಿಗೆ ಮೆಂಬರರಾಗಿ ನಿಲ್ಲಲಿಕ್ಕಿರುವ ಶ್ರೀ ಎಸ್ ಕೆ ಬೀಡಿನವರ ಉಮೇದುವಾರಿಕೆಯನ್ನು ಸಮರ್ಥಿಸಲಾಯಿತು.

**ಕೋಟೇಶ್ವರ**—ಇಲ್ಲಿಯ ತಾ ೬ ರಂದು ವಿದ್ಯಾರ್ಥಿಗಳ ಸಭೆಯು ಅಧ್ಯಾಪಕ ಶ್ರೀಯುತ ಶಿವಪ್ಪಯ್ಯ B A, L T, ಯವರ ಅಧ್ಯಕ್ಷತೆಯಲ್ಲಿ ಸೇರಿ ದಸ ಮತ್ತು ಪಿಕ್ನಿಕ್ ಇವುಗಳ ಕುರಿತು ಚರ್ಚಿಸಲಾಯಿತು. ೨ ರ ಸಹಾಯಾರ್ಥವಾಗಿ ತೆರೆದ 'ಶಾಂತಿ ಟೆಂಟ್'ಗೆ ತುಂಬಾ ಪ್ರೋತ್ಸಾಹಿಸಿದ ಮಂಗಳೂರಿನ ಶ್ರೀಕೃಷ್ಣ ಮಲ್ಯ ಬ್ರದರ್ಸ್ ಇವರಿಗೆ ಒಂದು ಬಂಗಾರದ ಪದಕವನ್ನು ಇನಾಮಾಗಿ ಕೊಡಲಾಯಿತು.

**ಬ್ರಹ್ಮಾವರ**—ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಅರ್ಧವಾರ್ಷಿಕ ಹಿಂದೀ ಪರೀಕ್ಷೆಗಳು ಇದೇ ಕಳೆದ ತಾ ೧೧ ೧೨-(ಶನಿವಾರ, ಆದಿತ್ಯವಾರಗಳು) ವಸ್ತ್ರವಿದ್ಯಾ ಸಂವರ್ಧಕ ಸಂಘದ ಮಾಳಿಗೆಯಲ್ಲಿ ಶ್ರೀ ಯಮ್ ನರಸಿಂಹಾಚಾರ್ಯರ ವ್ಯವಸ್ಥಾಪಕತ್ವದಲ್ಲಿ ಜರಗಿದುವು.

**ಉಡುಪಿ**

ಸದ್ಯ ಬರಲಿರುವ ಜಿಲ್ಲಾಬೋರ್ಡಿನ ಚುನಾವಣೆ ಬಗ್ಗೆ ಮದ್ರಾಸು ಎಸೆಂಬ್ಲಿಯ ಮತದಾರರ ಪಟ್ಟಿಯನ್ನೇ ಅನುಸರಿಸುವದಾಗಿ ಆ ಬಗ್ಗಿನ ಪ್ರಾಥಮಿಕ ಪಟ್ಟಿಯು ಈಗಾಗಲೇ ಪ್ರಕಟವಾಗಿರುತ್ತೆ. ಅದಕ್ಕೆ ಕಾನೂನಿಗೆ ವಿರುದ್ಧವಾದ ಆಕ್ಷೇಪದ ಅರ್ಜಿಗಳಲ್ಲದೆ, ಹೊಸತಾಗಿ ಅಕ್ಷರಸ್ಥರ ಹೆಸರುಗಳನ್ನು ದಾಖಲು ಮಾಡುವವರು ಕೂಡ ತಮ್ಮ ಅರ್ಜಿಗಳನ್ನು ಇದೇ ಬರುವ ಅಕ್ಟೋಬರ ತಾ ೧೯ರ ಒಳಗೆ ಹಾಜರುಪಡಿಸಬಹುದೆಂದು ಸರಕಾರದವರು ಘೋಷಿಸಿರುತ್ತಾರೆ. ಆದುದರಿಂದ ತಂತಮ್ಮ ಫಿರ್ಕಾಗಳಲ್ಲಿ ಅರ್ಹತೆಯುಳ್ಳವರ ಹೆಸರುಗಳು ಬಿಟ್ಟು ಹೋದಲ್ಲಿ ದೇಶಪ್ರೇಮದ ಉದಾರಬುದ್ಧಿಯಿಂದ ಜಾಗ್ರತೆಗೊಂಡು ಸದ್ರಿ ತಾಲೂಕಿನೊಳಗೆ ಅಂಥವರ ಅರ್ಜಿಗಳನ್ನು ಹಾಜರುಪಡಿಸಲ್ಪಡುವಂತೆ ಉಮೇದ್ವಾರಿಕೆ ಮಾಡಬೇಕೆಂದು ಅಪೇಕ್ಷಿಸಲಾಗುತ್ತದೆ ಎಂದು ಉಡುಪಿ ತಾ ಕಾಂ ಕಮಿಟಿ ಅಧ್ಯಕ್ಷರು ವಿಜ್ಞಾಪಿಸುತ್ತಾರೆ.

## NOTICE

**ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O S. 231/37

ಗಿರಿಯಣ್ಣ ಶೆಟ್ಟಿ . ವಾದಿ

ಸುಬ್ಬಣ್ಣ ಸೆಟ್ಟಿ, ಬಿಲ್ಲಾಡಿ ಮನೆ ರಂಗಪ್ಪ ಸೆಟ್ಟರ ಅಳಿಯ ಉಡ್ಕಿ ಕಾಲು ಬಿಲ್ಲಾಡಿ ಗ್ರಾಮ } ಪ್ರತಿವಾದಿ

**ಸದ್ರಿ ಪ್ರತಿವಾದಿ ಅವಗಾಹನೆಗೆ—**

ವಾದಿಯು ಡಿಮಾಂಡು ನೋಟಿನ ಪ್ರಕಾರ ಪ್ರತಿವಾದಿಯಿಂದ ತನಗೆ ಬರತಕ್ಕ ಹಣ ಬಡ್ಡಿ ವಗೈರೆ ಬರಮಾಡಿಕೊಳ್ಳುವ ವಗೈರೆ ಬಗ್ಗೆ ದಾಖಲ್ಮಾಡಿದ ಮೇಲಿನ ದಾವೆಯು ತಾರೀಕು 28-9—1937 ನೇ ದಿನ ಪೂ 11 ಘಂಟೆಗೆ ಮೇಲಿನ ನ್ಯಾಯಸ್ಥಾನದಲ್ಲಿ ತನಿಖೆಗೆ ಇಡಲ್ಪಟ್ಟಿದೆ. ಆ ಕುರಿತು ಆಕ್ಷೇಪವಿದ್ದರೆ ಆ ದಿವಸ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನಿವೇದಿಸಿ ಕೊಳ್ಳತಕ್ಕದ್ದು. ಇಲ್ಲವಾದರೆ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

**B S. Shetty,** B A., B. L.

*Pleader for Plaintiff*

**Coondapur,**

*Date 20-9-1937*


# Loans & Advances

ON THE SECURITY OF GOLD, JEWELS AND OTHER VALUABLES ALWAYS AVAILABLE AT MODERATE RATES

**THE UDIPI BANK LTD.**

UDIPI.

# ನಮ್ಮ ಕರ್ನಾಟಕ

**ಬೆಳಗಾವಿ**—ಅಖಿಲ ಕರ್ನಾಟಕ ಏಕೀಕರಣ ಸಭೆಯ ಕಾರ್ಯಕಾರಿ ಮಂಡಳಿಯ ಸಭೆಯು ತಾ. ೧೨ರಲ್ಲಿ ಜರಗಿ ಕೆಳಗಿನ ಗೊತ್ತುವಳಿಗಳು ಪಾಸುಮಾಡಲ್ಪಟ್ಟವು ೧ ಕರ್ನಾಟಕವು ಸ್ವತಂತ್ರ ಪ್ರಾಂತವಾಗಬೇಕು ಕಾಂಗ್ರೆಸ್ ಮಂತ್ರಿಗಳು ಆ ಕಡೆ ವಿಶೇಷ ಗಮನಕೊಡುವಂತೆ ಈ ಸಭೆಯು ಆಗ್ರಹದಿಂದ ಪ್ರಾರ್ಥಿಸುತ್ತದೆ ೨ ಮುಂಬಯಿ ಮದರಾಸ್, ಕೊಡಗು ಮತ್ತು ಮಧ್ಯವರ್ತಿ ಕಾಯಿದೆ ಮಂಡಲಗಳು ಕರ್ನಾಟಕ ಏಕೀಕರಣ ವಿಷಯವಾಗಿ ಗೊತ್ತುವಳಿಗಳನ್ನು ಮಾಡಿ ಬ್ರಿಟಿಷ್ ಪಾರ್ಲಮೆಂಟಿಗೆ ಆರ್ಡರ ಇನ್ ಕೌನ್ಸಿಲ್ ಪಾಸುಮಾಡುವಂತೆ ಕೇಳಬೇಕು ೩ ಏಕೀಕರಣ ಕಾರ್ಯವನ್ನು ಸಂಘಟಿತ ರೀತಿಯಿಂದ ಮಾಡಲು ಶ್ರೀ ದಾತಾರ ಬಳವಂತರಾವ್, ಶ್ರೀಮತಿ ಕಮಲಾದೇವಿ, ಶ್ರೀ ವೀರನಗೌಡ ಪಾಟೀಲ ಶ್ರೀ ಎ ಬಿ ಸೆಟ್ಟಿ ಶ್ರೀ ವಿ ... ಸಾಲ್ಡಾನ ಮೊದಲಾದ 20 ಜನರುಗಳ ಒಂದು ಸಂಯುಕ್ತ ಕಾರ್ಯಕಾರಿ ಮಂಡಳಿಯನ್ನು ಸ್ಥಾಪಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ, 4 ಕರ್ನಾಟಕ ಜನತೆಯ ಅರ್ಜಿಗಳನ್ನು ಆಯಾಯ ಕಾಂಗ್ರೆಸ್ ಮಂತ್ರಿಗಳಿಗೆ ಕಳಿಸಬೇಕೆಂದು ಈ ಸಭೆಯು ಕಾರ್ಯಕರ್ತರುಗಳಿಗೆ ಬಿನ್ನವಿಸುತ್ತದೆ ೫ ಅಕ್ಟೋಬರ ೧೦ನೇ ತಾರೀಕನ್ನು ಕರ್ನಾಟಕ ಏಕೀಕರಣ ದಿನವನ್ನಾಗಿ ಆಚರಿಸಬೇಕಾಗಿ ಪ್ರಾರ್ಥನೆ

**ತುಂಗಭದ್ರಾ**—ತಾ ...೯ ೩೭ರಲ್ಲಿ ಶ್ರೀ ಮಾಯತನದಲ್ಲಿ ಗಣೇಶ ಚತುರ್ಥಿಯ ಸಮಾರಂಭವು ವಿಜೃಂಭಣೆಯಿಂದ ನಡೆಯಿತು ವಿದ್ಯಾರ್ಥಿಗಳ 'ಬೇಡ್ ಮಿಂಟನ್' 'ಕೇರಮ್' ಮುಂತಾದ ಪಂದ್ಯಾಟಗಳ ಸ್ಪರ್ಧೆ ... ವೇಳೆಗೆ ನಡೆಯಿತು ಮಧ್ಯಾಹ್ನ ಅತಿಥಿಗಳಿಗೂ ವಿದ್ಯಾರ್ಥಿಗಳಿಗೂ ಔತಣದ ಊಟವಿತ್ತು ಅಪರಾಹ್ನ ಎರಡು ಘಂಟೆಗೆ ರಾಮಪುರದ ಶಾಲೆಯ ಮಕ್ಕಳ ಆಟಗಳ ಸ್ಪರ್ಧೆ ನಡೆಯಿತು ಆ ಮೇಲೆ ಅವರಿಗೆ ಡಾ ವೆಂಕಟರಾವ್ M B ಇವರ ಅಧ್ಯಕ್ಷತೆಯಲ್ಲಿ ಇನಾಮು ಹಂಚಲಾಯಿತು ಆ ಮೇಲೆ ಅವರಿಗೆ ತಿಂಡಿ ತಿನಸುಗಳನ್ನಿತ್ತು ಸಂತುಷ್ಟಗೊಳಿಸಿದರು

ಸಂಜೆ ೪||ಗೆ ಸಭಾಕಾರ್ಯವು ತೊಡಗಿ, ಮೊದಲಿಗೆ ಶ್ರೀ ಸಂಜೀವ ಶೆಟ್ಟಿ, ಕೃಷ್ಣಯ್ಯ ಶೆಟ್ಟಿ, ಪದ್ಮನಾಭಯ್ಯ, ವೆಂಕಟಸುಬ್ಬಯ್ಯ ಮುಂತಾದವರ ವಿನೋದ ಪ್ರದರ್ಶನಗಳು ಸೊಗಸಾಗಿ ಸಾಗಿದವು ಆ ಮೇಲೆ ನಾಟ್ಯಾಲಂಕಾರ ಶ್ರೀ ಟಿ ರಾಘವಾಚಾರ್ಯ ಎಡ್ವಕೇಟ್ ಇವರು 'ಉತ್ಕೃಷ್ಟಾಭಿನಯ'ದ ಕುರಿತು ಒಂದು ಸುರಸವಾದ ಭಾಷಣವಿತ್ತರು ಬಳಿಕ ವಿದ್ಯಾರ್ಥಿಗಳ ವ್ಯಾಖ್ಯಾನ ಸ್ಪರ್ಧೆಯು ನಡೆಯಿತು, ಆ ಮೇಲೆ ಪಂಡಿತ ತಾರಾನಾಥರು ಗಣೇಶ ಪೂಜೆಯ ಆಂತರಿಕ ಮತ್ತು ಬಾಹ್ಯ ತತ್ವಗಳ ವಿಷಯ ೧|| ಘಂಟೆಯ ತನಕ ಗಹನವೂ, ಬೋಧಪ್ರದವೂ, ಆದ ಭಾಷಣವನ್ನಿತ್ತರು ಆ ಮೇಲೆ ಕಾರ್ಯದರ್ಶಿಯವರು ಧನ್ಯವಾದಗಳನ್ನಿತ್ತ ಬಳಿಕ ಸಭೆ ಅಂತ್ಯವಾಯಿತು

ರಾತ್ರಿ ೯ ಘಂಟೆಗೆ ಒಂದು ಯಕ್ಷಗಾನ ಸಭೆಯು ಜರಗಿತು ಶ್ರೀ ಯಸ್ ಯಚ್ ಶಿವೈಯರು ಕೌರವನ ಪಾತ್ರವನ್ನೂ, ಶ್ರೀ ಬಿ ಕೆ ಮಾರ್ಳರು ಕೃಷ್ಣನ ಪಾತ್ರವನ್ನೂ ವಹಿಸಿಕೊಂಡು ಮಾತಾಡಿದರು ಶ್ರೀ ಪದ್ಮನಾಭಯ್ಯನವರು ಭಾಗವತಿಕೆಯನ್ನು ಮಾಡಿದರು ಸಭಾಂತ್ಯದಲ್ಲಿ ಶ್ರೀ ನಾಟ್ಯಾಲಂಕಾರ ರಾಘವಾಚಾರ್ಯ (ಎಡ್ವಕೇಟ)ರು ರಂಗಭೂಮಿಯಲ್ಲಿ ಇಷ್ಟು ಮುಂದುವರಿದ ಪ್ರದರ್ಶನಗಳು ಬೇರೆ ಯೆಲ್ಲಿಯೂ ಇಲ್ಲವೆಂದು ಕನ್ನಡನಾಡಿನಲ್ಲಿರುವುದು ಸನಾತನಕಲೆ ಹಿಂದಿನದಲ್ಲವೆಂದೂ, ಇದೊಂದು ಉತ್ತಮ ಜನಪದ ಸಾಹಿತ್ಯವೆಂದೂ, ಇದನ್ನು ಅಭಿವೃದ್ಧಿಗೆ ತರುವುದರಿಂದ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಲಾಭವಿದೆಯೆಂದೂ ಶ್ಲಾಘಿಸಿ ಹೇಳಿದರು

**ಮೈಸೂರು**—ಮಹಾರಾಜರ ಅರಮನೆಯಲ್ಲಿ ಪ್ರಭಾತ ಕಂಪೆನಿಯವರ ಉತ್ಕೃಷ್ಟ ವಾಕ್ಚಲಚಿತ್ರವಾದ 'ಸಂತತುಕಾರಾಮ್' ಚಿತ್ರವು ಪ್ರದರ್ಶಿಸುವ ಏರ್ಪಾಡಾಗಿದೆಯಂತೆ ಆ ಸಮಯಕ್ಕೆ ಸರಿಯಾಗಿ ಸದ್ರಿ ಚಿತ್ರದಲ್ಲಿ ತುಕಾರಾಮ ಪಾತ್ರವನ್ನು ವಹಿಸಿದ ವಿಷ್ಣುಪಂತ ಪಗ್ನೀಸರು ಬರಲಿದ್ದಾರೆಂದೂ ತಿಳಿದು ಬರುತ್ತದೆ

ಇಲ್ಲಿಯ ಕುಂಬಾರ ವಿದ್ಯಾರ್ಥಿನಿಲಯದಲ್ಲಿ ಶ್ರೀ ಸ್ವಾಮಿ ದೇಶಿಕಾನಂದ ಜೀಯವರು 'ಮತಾಚಾರ' ಎಂಬ ದರ ಕುರಿತು ಸೊಗಸಾದ ಭಾಷಣವಿತ್ತರು

**ಬೆಂಗಳೂರು**—ಇದೇ ೧೮ನೆಯ ತಾರೀಕು, ಬೆಂಗಳೂರು ಮೈದಾನಿನಲ್ಲಿ ಹೆಂಗುಸರ 'ಹಾಕಿ' ಪಂದ್ಯಾಟನಡೆಯಿತು ಬೆಂಗಳೂರಿನ ಲೇಡಿಸ್‌ಸ್ಪೋರ್ಟ್ಸ್ ಕ್ಲಬ್ಬಿಗೂ ಮದರಾಸಿನ ಸೈಂಟ್ ಥಾಮಸ್ ಮೌಂಟ್ ಮದರಾಸ್ ಯುನೈಟೆಡ್ ಲೇಡೀಸ್ 'ಹಾಕಿ' ಟೀಮಿನವರಿಗೂ ಸ್ಪರ್ಧೆ ಬೆಂಗಳೂರಿನಲ್ಲಿ ಹೆಂಗುಸರು 'ಹಾಕಿ' ಪಂದ್ಯದಲ್ಲಿ ಭಾಗಿಗಳಾದುದು ಇದೇ ಮೊದಲು

**ಚಿತ್ರದುರ್ಗ**—ಮೈಸೂರು ಮಹಾರಾಜರು ಇಲ್ಲಿಗೆ ಬಂದು ಮಾರಿ ... ಜಿಲ್ಲಾ ಬೋರ್ಡ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಬೋರ್ಡಿನ ಕೈಯ ನೀತ ... ಶಂಕುಸ್ಥಾಪನ ಕಾರ್ಯವನ್ನು ನೆರವೇರಿಸಿದರು ಮಹಾರಾಜರು ತನ್ನ ಪ್ರಜೆಗಳಿಗೆ ಆವಶ್ಯ ಸೌಕರ್ಯಗಳನ್ನು ಮಾಡುವ ವಿಷಯದಲ್ಲಿ ಭರವಸೆಕೊಟ್ಟರು ಅಲ್ಲಿಂದ ಪ್ರೇಕ್ಷಣೀಯ ಗವಿಗಳ ಸಂದರ್ಶನ ತಕ್ಕೊಂಡು ರಾಜಧಾನಿಗೆ ಮರಳಿದರು

**ವಿಜಾಪುರ**—ಇಲ್ಲಿ ಭಯಂಕರ ಬರಗಾಲ ಪ್ರಾರಂಭವಾಗಿದೆ, ಮುಂಬಯಿ ಪ್ರಾಂತದ ರೆವಿನ್ಯೂ ಮಂತ್ರಿಗಳಾದ ಮೊರಾರಜಿ ದೇಸಾಯಿಗಳು ಇಲ್ಲಿಗೆ ಬಂದು ಬರಗಾಲ ಪೀಡಿತರನ್ನು ಕಂಡು ಬರಗಾಲದ ಸಂಕಷ್ಟವನ್ನು ಅವಶ್ಯ ಪರಿಹರಿಸಲ್ಪಡುವುದು ಎಂದು ಭರವಸೆಕೊಟ್ಟಿರುವರು.

ದಕ್ಷಿಣ ಹಿಂದಿ ಪ್ರಚಾರ ಸಭೆಯ ಕರ್ನಾಟಕ ಪ್ರಾಂತದ ಕಾರ್ಯದರ್ಶಿಗಳಾದ ಶ್ರೀ ಸಿದ್ಧನಾಥಪಂತರು ಕಳೆದ ತಾ ೧೫ಕ್ಕೆ ಇಲ್ಲಿಗೆ ಬಂದು ಊರವರ ನೆರವಿನೊಡನೆ ಸೇರಿ ಒಂದು ಹಿಂದೀ ಪ್ರಚಾರ ಸಂಘವನ್ನು ಸ್ಥಾಪಿಸಿದರು

ಕನ್ನಡ ಮರಿ ಜರಾಡ ಶ್ರೀ ಮುದವೀಡು ಕೃಷ್ಣರಾಯರು ವಿದ್ಯಾರಣ್ಯಾಚಾರ್ಯರನ್ನು ಕರ್ನಾಟಕ ಏಕೀಕರಣದ ವಿಷಯವಾಗಿ ಉಪನ್ಯಾಸ ಭಾಷಣ ಮಾಡಿದರು

**ಧಾರವಾಡ**—ಇಲ್ಲಿಯ ವೃದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಕರಮರಕರರು ಕಾರವಾರ ಜಿಲ್ಲೆಯಲ್ಲಿ ಕಳೆದ ಶಾಸನ ಭಂಗಚಳವಳಿಯಲ್ಲಿ ಸರಕಾರಕ್ಕೆ ಮುಟ್ಟುಗೋಲಾದ ಆಸ್ತಿಗಳನ್ನು ಹಿಂತಿರುಗಿ ಕೊಡುವ ವಿಚಾರವಾಗಿ ನಾ ಮೊರಾರಜಿ ದೇಸಾಯಿಗಳವರೊಡನೆ ದೀರ್ಘ ಸಮಾಲೋಚನೆ ನಡಿಸಿದ್ದಾರೆ. ವಿವರ ತಿಳಿದು ಬರಲಿಲ್ಲ

**ಗದಗ**—ಮಂಗಳೂರಿನ ಶ್ರೀ ಎಸ್ ಎಸ ಶೆಣೈಯವರು ಇಲ್ಲಿಗೆ ಬಂದಿದ್ದು ಇಲ್ಲಿಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರುಗಳ ಅಧ್ಯಕ್ಷತೆಯಲ್ಲಿ ಒಂದು ಭಾಷಣವಿತ್ತರು

## ಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ.

### ಗಾಂಧಿ ಸಪ್ತಾಹವು (೨೬-೯-೩೭ರಿಂದ ೨-೧೦-೩೭ ರ ತನಕ)

ಮಹಾತ್ಮಾಗಾಂಧಿಜೀಯವರ ೬೯ನೇ ಜನ್ಮ ದಿನವು (೨ ೧೦ ೩೭) ತೀರ ಸಮೀಪಿಸಿತು ಇಡೀ ಹಿಂದೂಸ್ಥಾನದಲ್ಲೆಲ್ಲಾ ಈ ವಾರವು ಗಾಂಧೀಸಪ್ತಾಹವೆಂದು ಆಚರಿಸಲ್ಪಡುವುದು ಇದೇ ಮೇರೆಗೆ ಕರ್ನಾಟಕದಲ್ಲಿಯಾದರೂ ಈ ಸಪ್ತಾಹವನ್ನು ಎಲ್ಲಾ ಕಾಂಗ್ರೆಸ್ ಕಮಿಟಿಗಳೂ ಸಾರ್ವಜನಿಕ ಕಾರ್ಯಕರ್ತರೂ ನೆರವೇರಿಸಬೇಕು ೧ ಸಾರ್ವಜನಿಕ ಸಭೆ ಮೆರವಣಿಗೆ ಮತ್ತು ರಾಷ್ಟ್ರಧ್ವಜವಂದನೆ, ಸಭೆಗಳಲ್ಲಿ ಮಹಾತ್ಮರ ಜೀವನ ಚರಿತ್ರೆ ಮತ್ತು ಅವರ ತತ್ವಗಳನ್ನು ತಿಳಿಸಿ ಹೇಳುವದು, ೨ ಖಾದಿಯನ್ನು, ರಾಷ್ಟ್ರಧ್ವಜಗಳನ್ನೂ ಮಾರುವದು, ೩ ಮಹಾತ್ಮಾಜಿಯವರ ಜೀವನ ಮತ್ತು ತತ್ವಗಳ ಬಗ್ಗೆ ವಾಕ್‌ಸ್ಪರ್ಧೆ ಹಾಗೂ ಪರೀಕ್ಷೆಗಳನ್ನು ಇಡುವದು (ಈ ವಿಷಯವಾಗಿ ಧಾರವಾಡದಲ್ಲಿಯ ಕರ್ನಾಟಕ ಎಜ್ಯುಕೇಶನ್ ಬೋರ್ಡ ಸವಾ ಜಿಲ್ಲೆಯೊಳಗಿನ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಯನ್ನು ಇಟ್ಟಿರುವರು) ೪ ಗಾಂಧಿ ಸಾಹಿತ್ಯದ ಪ್ರಸಾರಮಾಡುವದು ೫ ಸಪ್ತಾಹದ ಮೊದಲಿನ ಐದು ದಿವಸ ಹೆಚ್ಚಾಗಿ ಕಾಂಗ್ರೆಸ ಸದಸ್ಯರನ್ನು ಮಾಡುವದು, ೬ ಸದ್ಯದ ಕಾಂಗ್ರೆಸ್ ಮಂತ್ರಿಮಂಡಲದ ಕಾರ್ಯವನ್ನು ತಿಳಿಸಿ ಹೇಳುವದು, ೭ ಮದ್ಯಪಾನ ನಿರೋಧದ ಬಗ್ಗೆ ಕಾಂಗ್ರೆಸ ವರ್ಕಿಂಗ್ ಕಮಿಟಿಯ ನಿಜ ಧ್ಯೇಯವನ್ನೂ ಕಾಂಗ್ರೆಸ ಮಂತ್ರಿಗಳ ಧೋರಣವನ್ನೂ ತಿಳಿಸಿಹೇಳುವದು ೮ ಹರಿಜನ ಕೇರಿಗಳನ್ನು ಸಂದರ್ಶಿಸಿ ಮೇಲ್ಕಾಣಿಸಿದ ಎಲ್ಲಾ ವಿಷಯಗಳನ್ನೂ ಅವರಿಗೆ ಹೇಳುವದು

ಕೊನೆಯ ನಾಲ್ಕು ವಿಷಯಗಳ ಸಂಬಂಧವಾಗಿ ಕಾಂಗ್ರೆಸ ಕಾರ್ಯಕರ್ತರೂ ವಿಶೇಷವಾಗಿ ಪ್ರಯತ್ನ ಮಾಡಬೇಕು ಹೆಚ್ಚಾಗಿ ಹಳ್ಳಿಗಳನ್ನು ಸಂದರ್ಶಿಸಿ ಅಲ್ಲಿ ಕಾರ್ಯಕ್ರಮವನ್ನು ನೆರವೇರಿಸಬೇಕು ಸಪ್ತಾಹದಲ್ಲಿ ನಡೆದ ಕಾರ್ಯಕ್ರಮದ ವರದಿಯನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಕಳಿಸಿಕೊಡಬೇಕು.

ರಾ ಶ್ರೀ ಹುಕ್ಕೇರಿಕರ,
ಗೌ ಕಾರ್ಯದರ್ಶಿ

ನಮಗೆ ಬರತಕ್ಕ ಬಾತ್ಮಿಗಳು ಸ್ಪಷ್ಟವಾಗಿಯೂ ಚುಟುಕಾಗಿಯೂ ಇರಬೇಕು.

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

### ಕಾಂಗ್ರೆಸ ಸದಸ್ಯರ ಪಟ್ಟಿಗಳ ಬಗ್ಗೆ ಪ್ರೇಶಾ ಪತ್ರಿಕೆಯು

ಕಾಂಗ್ರೆಸ ಸಭಾಸದರನ್ನು ಮಾಡುವ ಕೊನೆಯ ತಾರೀಕು (೩೦-೯-೩೭) ತೀರ ಸಮೀಪಿಸಿತು ಇನ್ನು ಕೆಲವೇ ದಿವಸಗಳು ಮಾತ್ರ ಉಳಿದುವು ಇಷ್ಟು ದಿವಸಗಳ ವರೆಗೆ ಅನೇಕ ಕಾರ್ಯಕರ್ತರು ಸಾಹಸಪಟ್ಟು ಸದಸ್ಯರನ್ನು ಮಾಡಿದ್ದು ಅಭಿನಂದನೀಯವು ಆದರೆ ಇಷ್ಟರಿಂದ ಸಂತುಷ್ಟರಾಗದೆ ಇನ್ನು ಎರಡು ವಾರಗಳ ವರೆಗೆ ಒಳ್ಳೇ ಉತ್ಸಾಹದಿಂದ, ಎಲ್ಲಾ ಕಾರ್ಯಕರ್ತರು, ಈ ಕೆಲಸವನ್ನು ಮಾಡಬೇಕೆಂದು ಬಿನ್ನಹ

ಈ ಕೆಲಸವನ್ನು ನಾವು ಇಷ್ಟಕ್ಕೆ ಬಿಡಲಾರೆವು ೩೦-೯-೩೭ನೇ ತಾರೀಕಿನ ವರೆಗೆ ಆದ ಸಭಾಸದರ ಮತದಾರ ಸಂಘಗಳನ್ನು ಮಾಡಿ ಹರಿಪುರ ಕಾಂಗ್ರೆಸಿಗೆ ಮತ್ತು ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಪ್ರತಿನಿಧಿಗಳನ್ನು ಆರಿಸಿ ಕಳಿಸಬೇಕು. ಆದುದರಿಂದ ಆಯಾ ಊರ ಕಾರ್ಯಕರ್ತರೂ ಹಾಗೂ ಕಾಂಗ್ರೆಸ್ ಕಮಿಟಿಗಳು, ತಮ್ಮ ಕ್ಷೇತ್ರದಲ್ಲಾದ ಕಾಂಗ್ರೆಸ ಸಭಾಸದರ ಹೆಸರುಗಳನ್ನು ತಮ್ಮ ರಿಜಿಸ್ಟರಿನಲ್ಲಿ ಬರೆದುಕೊಂಡು ಅದರ ಒಂದು ನಕಲನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕಳಿಸಿಕೊಡತಕ್ಕದ್ದು, (ಕೊನೆಯ ತಾರೀಕು ೫-೧೦-೩೭) ಮುಂದೆ ಜಿಲ್ಲಾ ಕಾಂಗ್ರೆಸ ಕಮಿಟಿಯವರು ತಮ್ಮ ಕೈಸೇರಿದ ಎಲ್ಲ ಸದಸ್ಯರ ಪಟ್ಟಿಗಳನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ತಾ ೨೫ ೧೦ ೩೭ನೇ ಒಳಗಾಗಿ ತಲಪುವಂತೆ ಕಳಿಸಿಕೊಡಬೇಕು ಆಂದರೆ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಅವೆಲ್ಲವುಗಳನ್ನು ಅಖಿಲಭಾರತ ಕಾಂಗ್ರೆಸ ಕಮಿಟಿಗೆ ಕಳಿಸಿಕೊಡುವರು ಮತ್ತು ಪ್ರತಿನಿಧಿಗಳ ಚುನಾವಣೆಗೋಸ್ಕರ ಮತದಾರ ಸಂಘಗಳನ್ನು ಮಾಡುವರು

೫ ಕಾಂ ಕಮಿಟಿಯವರು ಪ್ರಾಂ ಕಾಂ ಕಮಿಟಿಗೆ ಸದಸ್ಯರ ಯಾದಿಯನ್ನು ಒಪ್ಪಿಸುವದು

ಜಿಲ್ಲಾ ಕಾಂಗ್ರೆಸ ಕಮಿಟಿಗಳು ಹಳ್ಳಿ (Rural) ಗಳಲ್ಲಿ ಮತ್ತು ಪಟ್ಟಣ (Urban)ಗಳಲ್ಲಿ ಆದ ಕಾಂಗ್ರೆಸ ಸದಸ್ಯರ ಪಟ್ಟಿಗಳನ್ನು ಬೇರೆಬೇರೆಯಾಗಿ ಮಾಡಿ, ಅವುಗಳನ್ನು ಇಂಗ್ಲೀಷ (Typed) ಅಥವಾ ಹಿಂದಿಯಲ್ಲಿ ಎರಡು ನಕಲುಗಳನ್ನು ಮಾಡಿ, ಆ ಎರಡೂ ನಕಲುಗಳನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಅಕ್ಟೋಬರ ೨೫ನೇ ತಾರೀಕಿನ ಒಳಗಾಗಿ ಒಪ್ಪಿಸಬೇಕು

ರಾ ಶ್ರೀ. ಹುಕ್ಕೇರಿಕರ
ಗೌ ಕಾರ್ಯದರ್ಶಿ

**ಮುಂಬಯಿ**—ಮುಂಬಯಿಯ ಶಾರದಾ ವಿಜಯ ಕನ್ನಡ ಪ್ರೈವೇಟ್ ಸ್ಕೂಲಿನ ವಾರ್ಷಿಕ ವರ್ಧಂತಿಯು ಹಲವೊಂದು ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ಜರಗಿತು

ಶ್ರೀ ಮೋಳೂರು ಜನಾರ್ದನ ಸುವರ್ಣರು ಪದ್ಧತಿಯಂತೆ ಬ್ರಹ್ಮಶ್ರೀ ನಾರಾಯಣ ಗುರು ಪರಮಹಂಸರ ಸಮಾಧಿಯ ದಿನವನ್ನು ತಾ ೧೯ ೯ ೩೭ರಲ್ಲಿ ಅಹಂಗೀರ್ ಕಟ್ಟೋಣದಲ್ಲಿ ಶ್ರೀ. ಎಚ್. ಎ ಹರಿದಾಸರ ಅಧ್ಯಕ್ಷತೆಯಲ್ಲಿ ಜರಗಿಸಿದರು

ಫೋರ್ಟ್ ಆರ್ಯ ಸಮಾಜದ ನೇತೃತ್ವದಲ್ಲಿ ತಾ ೨೯ ೮ ೩೭ನೇ ಆದಿತ್ಯವಾರ ವೇಳೆಗೆ ಘಂಟೆ ೯ಕ್ಕೆ ಶ್ರೀ ಕೃಷ್ಣಜಯಂತಿಯು ಆಚರಿಸಲ್ಪಟ್ಟಿತು ಆ ದಿನ ಅಧ್ಯಕ್ಷಸ್ಥಾನವನ್ನು ಶ್ರೀಮಾನ್. ಯತು ಚಂದ್ರಶೇಖರರು ವಹಿಸಿದರು

**ಬಾತ್ಮಿಗಳು**—ನವಯುಗದಲ್ಲಿ ಈ ಹಿಂದೆ ಬಂದ ಒಂದು ಬಾತ್ಮಿಗೆ ಉತ್ತರವಾಗಿ 'ಕೆ ಪಿ. ಶೆಟ್ಟಿ ಬರೆದ ಆಕ್ಷೇಪಗಳು ನಿರಾಧಾರಗಳಾಗಿವೆ ವಿಚಾರಿಸದೆ ಹಾಗೆಲ್ಲ ಬರೆಯುವದು ಉಚಿತವಲ್ಲ ಅಂದಿನ ಸಭೆಯಲ್ಲಿ ಪಾಸಾದವಿಷಯಗಳೆಲ್ಲ ಸಿಂಧುವಾದ ತಕ್ಕವುಗಳು' ಎಂಬ ಸಾರಾಂಶವನ್ನುಳ್ಳ ಒಂದು ವಾತ್ಮಿಯೂ ಮುಂಬಯಿಯ ನಾಡವರ ಸಂಘಕ್ಕೊಂದು ವಿನಂತಿ ಎಂಬ ಶಿರೋನಾಮದಿಂದ 'ಶ್ರಮಜೀವಿಗಳಾದ ಜಾತಿಯವರ ಹಿತದೃಷ್ಟಿಯಿಂದ ರಾತ್ರಿ ಶಾಲೆ ವಾಚನಾಲಯಗಳನ್ನು ತೆರೆಯಬೇಕೆಂಬ ಸಾರಾಂಶವುಳ್ಳ ಇನ್ನೊಂದು ಬಾತ್ಮಿಯೂ ನಮ್ಮೆಡೆ ಬಂದಿವೆ ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ

THE
**Guardian of India**
**INSURANCE Co. LTD.,**
*(Indias most progressive Life Office)*

*Head office* **MADRAS.** *Branch* **MANGALORE.**

**The most dependable Life Office both to insure and to represent, Run on sound economic lines by the picked sons of the soil, with Branches and Special Agency Offices all over India, Burmah and Ceylon**

***'GUARDIAN' Sprotection be always your selection'***

**Applications are invited from respectable gentlemen and ladies to represent the Company in South Kanara, North Kanara, Malabar and Coorg on commission or salary or both.**

*For Full particulars apply to*

**E. A. PAIS,** B Sc.,
*Branch Secretary,*
**THE GUARDIAN OF INDIA INSURANCE CO LTD.,**
*MANGALORE BRANCH*

# ನಮ್ಮ ದೇಶದ ಧರ್ಮಜೀವಿಗಳು

**ಹಿಂದು ಧರ್ಮಜೀವಿಗಳನ್ನು ಸುಧಾರಿಸಿದರೆ ಅವರಿಂದ ಸ್ವಯಂಸೇವಕದಳ ಮತ್ತು ಸೇವಾ ಸಮಿತಿಗಿಂತಲೂ ಹೆಚ್ಚಿನ ಸಮಾಜ ಹಿತವಾಗುವುದು. ಈ ಸುಧಾರಣೆಯ ಜವಾಬ್ದಾರಿಯು ಹಿಂದೀ ಯುವಕ ಯುವತಿಯರದು. ಅಕಾಲಿ ಸಿಖ್ಖರು ತಮ್ಮ ಗುರುದ್ವಾರಗಳನ್ನು ಸುಧಾರಿಸಿಕೊಂಡಂತೆ ಹಿಂದೀ ಯುವಕರು ಎಂತಹ ಸಂಕಷ್ಟಕ್ಕೊಳಗಾಗಿಯಾದರೂ ತಮ್ಮ ಧಾರ್ಮಿಕ ಸಂಸ್ಥೆಗಳನ್ನೂ ಧರ್ಮಜೀವಿಗಳನ್ನೂ ಸುಧಾರಿಸುವ ದೀಕ್ಷಾಬದ್ಧರಾಗಬೇಕು.**

## ಸುಪ್ರಸಿದ್ಧ ಹಿಂದೀ ಚಾಂದ್ ಪತ್ರಿಕೆಯ ಬೋಧಪರ ಅಗ್ರಲೇಖವೊಂದರ ಅನುವಾದ.

ಅನುವಾದಕ.—ಉ ಚೆಂದಪ್ಪ, ಮುಂಬಾಯಿ

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

ಭಾರತೀಯ ಧರ್ಮಜೀವಿಗಳ ಶಕ್ತಿಪ್ರಭಾವಗಳು ಅಸಾಧಾರಣವಿರುತ್ತವೆ ಮತ್ತು ಅವರ ಸಂಘಟನೆಯು ಕೂಡಾ ಸಾಕಷ್ಟು ಸುದೃಢವಾಗಿರುತ್ತದೆ ಎಂಬುವದರಲ್ಲಿ ಸಂದೇಹವಿಲ್ಲ ಅನೇಕ ಮಂದಿರಗಳ ಮತ್ತು ಆಸ್ತಿಗಳ ಮೇಲೆ ಅವರ ಅಧಿಕಾರವು ಹಲವು ಶತಮಾನಗಳಿಂದ ನಡೆದು ಬಂದಿರುವುದಿದೆ, ಎಷ್ಟೋ ಆಸ್ತಿಗಳನ್ನು ಅವರು ಇತ್ತೀಚಿಗೆ ಕೊಂಡುಕೊಂಡಿರುತ್ತಾರೆ ಹಿಂದೂ ಸಮಾಜದ ಮೇಲಿರುವ ಅವರ ಅಸೀಮ ಪ್ರಭಾವವು ಈಗ ಕಡಿಮೆಯಾಗಿದೆಯಾದರೂ, ಅದೆಷ್ಟು ಅಧಿಕವಿರುತ್ತದೆಂದರೆ, ಅದನ್ನು ದೂರಗೊಳಿಸುವುದಕ್ಕೆ ಏನಾದರೂ ಪ್ರಬಲ ಪ್ರಯತ್ನವನ್ನು ಕೈಕೊಳ್ಳದಿದ್ದರೆ ನೂರಾರು ವರ್ಷಗಳಲ್ಲಿಯೂ ಅದು ಸಂಪೂರ್ಣವಾಗಿ ನಷ್ಟವಾಗಲಾರದು ಇಂತಹ ಸ್ಥಿತಿಯಲ್ಲಿ ಕಡೆಗೆ ಈ ಸಮಸ್ಯೆಯನ್ನು ಹೇಗೆ ಇತ್ಯರ್ಥಿಸಬಹುದೆಂಬ ಪ್ರಶ್ನೆಯುಂಟಾಗುತ್ತದೆ

ಇದಕ್ಕೆ ಉತ್ತರವಾಗಿ ನಾವು ಹೇಳುವುದೇನೆಂದರೆ, **ಈ ಜನರ ಸುಧಾರಣೆಯ ಹೊಣೆಮಾತ್ರ ಜವಾಬ್ದಾರಿಕೆಯು ಹಿಂದು ನವಯುವಕರ ಮತ್ತು ನವಯುವತಿಯರ ಮೇಲಿರುತ್ತದೆ.** ಹಳೆಯ ವಿಚಾರಗಳ ಹಿರಿಯರಂತೂ ಅವರಿಗೆ ಮಸ್ತಕವನ್ನು ಬಗ್ಗಿಸಿ ಬಗ್ಗಿಸಿ ಕುಗ್ಗಿಹೋಗಿರುವುದರಿಂದ, ಅವರ ವಿರುದ್ಧ ಮಾತೆತ್ತುವ ಸಾಹಸವನ್ನೇ ಮಾಡಲಾರರು ಇವರು ಅವರನ್ನು 'ಧರ್ಮದ ಗೋಪ್ತ'ಗಳೆಂದು ನಂಬಿ ಯಾವ ಸ್ಥಿತಿಯಲ್ಲಿಯೂ ದುಃಖಪಡಿಸುವುದು ಘೋರ ಪಾತಕವೆಂದು ಭಾವಿಸುತ್ತಾರೆ ಎಲ್ಲಿಯವರೆಗೆಂದರೆ, ಯಾವನಾದರೊಬ್ಬ ಸಾಧುವು ದುರಾಚಾರಿ, ಧೂರ್ತ ಅಥವಾ ಮೋಸಗಾರನೆಂದು ಇವರಿಗೆ ಸ್ಪಷ್ಟವಾಗಿ ತಿಳಿದುಬಂದರೂ, ಇವರು ಆತನ ವಿರುದ್ಧವೇನೂ ಮಾಡಲಿಚ್ಛಿಸುವುದಿಲ್ಲ ಎಷ್ಟೋ ಸಂದರ್ಭಗಳಲ್ಲಿ ಇವರು, ಅವರು ಕೇವಲ ಕಾವೀ ಬಟ್ಟೆಯನ್ನು ಧರಿಸಿಕೊಂಡಿರುವರೆಂಬ ಅಥವಾ ಸಾಧುಗಳ ವೇಷದಲ್ಲಿರುವರೆಂಬ ಕಾರಣದಿಂದಲೇ ಕಳವು ಅನಾಚಾರಾದಿಗಳಿಂದ ಸೆರೆಹಿಡಿಯಲ್ಪಟ್ಟ ವ್ಯಕ್ತಿಗಳ ಪಕ್ಷ ವಹಿಸುವರು ಇಂತಹ ದಾಸ್ಯ ಮನೋವೃತ್ತಿಯವರ ಮೇಲೆ ಈ ಸಂಬಂಧದಲ್ಲಿ ಯಾವತರದ ಆಶೆಯನ್ನಿಡುವುದಾದರೂ ನಿರರ್ಥಕವೇ ಸರಿ

ಆದರೆ ಯಾರ ಹೃದಯದಲ್ಲಿ ದೇಶ ಹಾಗೂ ಸಮಾಜದ ಕಲ್ಯಾಣದ ಭಾವನೆಯು ಜಾಗ್ರುತವಾಗಿರುವುದೋ, ಯಾರು ಧರ್ಮದ ಹೆಸರಿನಿಂದ ಈ ರೀತಿ ಕಳವು ಅನಾಚಾರಗಳನ್ನೂ ನಡೆಯಬಿಡುವುದು ಸಮಾಜದ ದೃಷ್ಟಿಯಿಂದ ಘೋರ ಹಾನಿಯೆಂದು ತಿಳಿಯುತ್ತಾರೋ, ಮತ್ತು ಯಾರು ಸಮಾಜದ ಬಡತನವನ್ನು ಹೆಚ್ಚಿಸುವ ಇತರ ರೀತಿಗಳನ್ನೂ ಅಂಧರೂಢಿಗಳನ್ನೂ ನಾಶಪಡಿಸಲಿಕ್ಕೆ ಪ್ರಯತ್ನಿಸುತ್ತಾರೋ, ಅವರೇ ಈ ಧರ್ಮಜೀವಿಗಳ ಸಮಸ್ಯೆಯನ್ನು ಬಿಡಿಸಲಿಕ್ಕೂ ಕೆಲಸಮಾಡುವುದು ಅವರ ಕರ್ತವ್ಯವಾಗಿದೆ ಭಾರತೀಯರ ಸ್ವಭಾವಗತವಾದ ಪ್ರಾಚೀನ ಪ್ರಿಯತೆಯನ್ನೂ ಸರಿವರ್ತನ ಶೀಲತ್ವದ ಅಭಾವವನ್ನೂ ನೋಡುವಾಗ ಈ ಸಂಸ್ಥೆಯು ಶೀಘ್ರದಲ್ಲಿಯೇ ಕಿತ್ತುಹೋಗುವುದೆಂದು ಆಶಿಸುವುದು ಕಠಿಣವಾದರೂ ಯತ್ನಗೈಯುವುದರಿಂದ ಇದು ಸುಧಾರಣೆ ಹೊಂದುವುದು ಅಸಂಭವವಲ್ಲ ಈ ಧರ್ಮಜೀವಿಗಳ ಸುಧಾರಣೆಯಾಗಿ, ಅವರು ದೇಶದ ಆವಶ್ಯಕತೆಗಳ ಕಡೆಗೆ ಲಕ್ಷ್ಯವಿಟ್ಟು ಕೆಲಸಮಾಡಲಾರಂಭಿಸಿದರೆ, ಬಹುಶಃ ಹಿಂದೆ ಒಂದು ಕಾಲದಲ್ಲಿ ಇದ್ದಂತೆ, ಸಿಕ್ಖರಂತೆ ಈಗಲೂ ಇದು ಸಮಾಜದ ಒಂದು ಲಾಭದಾಯಕವೂ ಮಹತ್ವಪೂರ್ಣವೂ ಆದ ಅಂಗವಾಗಬಹುದು ಇವರು ಒಂದು ದೃಷ್ಟಿಯಿಂದ ಸ್ವಯಂಸೇವಕ ದಳದ ಸಮಾನರಾಗಿರುವರು, ಪ್ರಯತ್ನಮಾಡಿದುದಾದರೆ ಈ ಕಾರ್ಯವನ್ನು ವರ್ತಮಾನ ಸೇವಾಸಮಿತಿಗಳಿಗಿಂತ ಉತ್ತಮ ರೀತಿಯಿಂದ ಮಾಡಬಲ್ಲರು ಸ್ವಯಂಸೇವಕರಿಗಾದರೋ ಮನೆಯ ಹಲವು ಬಂಧನಗಳಿರುತ್ತವೆಯಲ್ಲದೆ ಅನೇಕರಿಗೆ ಆರ್ಥಿಕಚಿಂತೆಗಳೂ ಇರುತ್ತವೆ ಆದರೆ ಈ ಜನರು ಇವೆಲ್ಲಾ ತೊಂದರೆಗಳಿಂದ ಮುಕ್ತರಾಗಿರುವರು ಇವರಿಗೆ ಮನೆ ಮಾರುಗಳ ಚಿಂತೆಯಾಗಲಿ ಹೆಂಡಿರು ಮಕ್ಕಳ ಗೊಡವೆಯಾಗಲಿ ಇರುವುದಿಲ್ಲ ಇವರ ತಿಂಡಿ ತೀರ್ಥಗಳ ಪ್ರಬಂಧವನ್ನು ಈಗಲೂ ಸಮಾಜವು ಮಾಡಿಟ್ಟಿರುವುದು ಹೀಗಿರುವಾಗ ಇವರು ಸಮಾಜಕ್ಕೆ ಹಾನಿಯನ್ನುಂಟುಮಾಡುವುದರ ಬದಲಾಗಿ ಅದರ ನಿಜವಾದ ಸೇವಕರಾದರೆ ಆಗ ಈ ಪ್ರಶ್ನೆಯೇ ಉಳಿಯಲಾರದು ಇಷ್ಟೇ ಅಲ್ಲ, ಇವರು ಸ್ವರಾಜ್ಯ ಪ್ರಾಪ್ತಭಾರತದ ಸೇನಾಕಾರ್ಯವನ್ನೂ ಮಾಡಬಲ್ಲರು ಯಾವ ಸೇನಾವಿಭಾಗಕ್ಕೋಸ್ಕರ ಈ ಸಮಯ ಭಾರತವರ್ಷಕ್ಕೆ ತನ್ನ ಆಯದ ಅರ್ಧಾಂಶವನ್ನು ವೆಚ್ಚಮಾಡಬೇಕಾಗುತ್ತದೆಯೋ ಅದನ್ನು ಇವರ ಸಹಾಯದಿಂದ ನಾಮಮಾತ್ರದ ಖರ್ಚಿನಿಂದ ನಡೆಸಬಹುದು. ಶಿಕ್ಷಣ, ಸ್ವಾಸ್ಥ್ಯರಕ್ಷಣೆಯೇ ಮೊದಲಾದ ವಿಷಯಗಳಲ್ಲಿ ಇವರು ಜನತೆಯ ಎಷ್ಟೋ ಸೇವೆಯನ್ನು ಮಾಡಬಲ್ಲರು ಇವರ ಹತ್ತಿರವಿರುವ ಸಂಪತ್ತನ್ನೂ ಇವರಿಗೆ ಕಾಣಿಕೆ ಪೂಜಾದಿಗಳಿಂದ ಬರುವ ಲಕ್ಷಾಂತರ ರೂಪಾಯಿಗಳನ್ನೂ ಇವರು ಈ ಕಾರ್ಯಗಳಲ್ಲಿ ಉಪಯೋಗಿಸಿ, ತಾವು ಅವುಗಳ ಸಂಚಾಲನೆಯಲ್ಲಿ ಸಹಯೋಗಿಗಳಾದರೆ, ಸರ್ವಸಾಧಾರಣರಿಗೆ ಅತ್ಯಧಿಕ ಉಪಕಾರವಾಗುವುದು

ಆದರೆ ಇವರ ಸ್ವಾರ್ಥಮಯ ಪ್ರವೃತ್ತಿಯನ್ನೂ ಹಠಧರ್ಮವನ್ನೂ ನೋಡುವಾಗ ಈ ಪ್ರಕಾರದ ಶುಭ ಪರಿವರ್ತನೆಯು ಶೀಘ್ರದಲ್ಲಿಯೇ ಆಗುವುದೆಂಬ ಆಶೆಯು ತೋರುವುದಿಲ್ಲ ಈ ಜನರು ಧಾರ್ಮಿಕ ಸಂಸ್ಥೆ ಮತ್ತು ಪುಣ್ಯಕ್ಷೇತ್ರಗಳಿಗೆ ಸಂಬಂಧಿಸಿರುವ ಸಂಪತ್ತನ್ನೂ, ಹರಿಕೆ ಪೂಜಾದಿಗಳಿಂದ ದೊರಕುವ ಧನವನ್ನು ತಮ್ಮ ಪಿತ್ರಾರ್ಜಿತವೆಂದು ಗ್ರಹಿಸಿ, ಅವುಗಳನ್ನು ತಮಗೆ ಬೇಕಾದ ರೀತಿಯಲ್ಲಿ ಉಪಯೋಗಿಸಬಹುದೆಂದು ಭಾವಿಸಿಕೊಂಡಿದ್ದಾರೆ ಇವರ ಈ ಭಾವನೆಯನ್ನು ಹೋಗಲಾಡಿಸುವುದು ಹಿಂದೂ ನವಯುವಕರ ಕರ್ತವ್ಯವಾಗಿದೆ ಕೆಲವು ಸಮಯ ಪೂರ್ವ ಸಿಖ್ಖರ ಗುರುದ್ವಾರಗಳ ಅವಸ್ಥೆಯೂ ಹಿಂದುಗಳ ಮಠಮಂದಿರಗಳ ಹಾಗೆಯೇ ಇದ್ದಿತ್ತು. ಅವುಗಳ ಮಹಂತರುಗಳು ಅವುಗಳ ಸಂಪತ್ತನ್ನು ತಮ್ಮ ಸ್ವಂತ ಆಸ್ತಿಯೆಂದು ತಿಳಿದು ಅದನ್ನು ಮನ ಬಂದಂತೆ ಉಪಯೋಗಿಸುತ್ತಿದ್ದರು ಅಕಾಲಿಗಳು ಈ ಸ್ಥಿತಿಯನ್ನು ಬದಲಾಯಿಸುವ ಪ್ರಯತ್ನವನ್ನು ಕೈಕೊಂಡರು. ಅವರಿಗೆ ಲಾಠಿಗಳಿಂದ ತಲೆಯೊಡೆಸಿಕೊಳ್ಳಬೇಕಾಗಿಯೂ ಕುದಿಯುವ ಎಣ್ಣೆಯಲ್ಲಿ ಪ್ರಾಣೋತ್ಸರ್ಗ ಮಾಡಬೇಕಾಗಿಯೂ ಬಂದಿತು, ಆದರೂ ಸ್ವಲ್ಪ ಸಮಯದಲ್ಲಿಯೇ ಅವರು ಅನೇಕ ಗುರುದ್ವಾರಗಳ ಪ್ರಬಂಧವನ್ನು ತಮ್ಮ ಕೈಗೆ ತಗೆದುಕೊಂಡರು. ಉಳಿದವುಗಳ ವ್ಯವಸ್ಥೆಯಲ್ಲಿಯೂ ಎಷ್ಟೋ ಸುಧಾರಣೆಗಳನ್ನು ಮಾಡಿಸಿದರು. ಹಿಂದೂ ನವಯುವಕರು ಕೂಡಾ ಸೊಂಟಕಟ್ಟಿದರೆ ಇದೇ ರೀತಿಯ ಕಾರ್ಯವನ್ನು ಮಾಡಬಲ್ಲರು. ಆರಂಭದಲ್ಲಿ ಕಷ್ಟಗಳನ್ನು ಎದುರಿಸಬೇಕಾದುದು ಅನಿವಾರ್ಯವಾದರೂ, ಅವರಿಗೆ ಹತ್ತಿಪ್ಪತ್ತು ಸ್ಥಾನಗಳಲ್ಲಿ ಸಫಲತೆಯು ದೊರಕಿತೆಂದರೆ, ಉಳಿದ ಜನರು ತಾವಾಗಿಯೇ ಪರಿಸ್ಥಿತಿಯ ಮುಂದೆ ತಲೆಬಗ್ಗಿಸಿ ಬಿಡುವರು ಇದಕ್ಕಾಗಿ ಜನಮತವನ್ನು ಸಂಪಾದಿಸಬೇಕಾದುದು ಎಲ್ಲದಕ್ಕಿಂತ ಪ್ರಥಮ ಕರ್ತವ್ಯವು ಜನತೆಯು ಇವರಲ್ಲಿ ಹಬ್ಬಿರುವ ಅನಾಚಾರಗಳನ್ನೂ ಇವರಿಂದಾಗುವ ಹಾನಿಯನ್ನೂ ಅರಿತುಕೊಂಡು ಇವರ ಪಕ್ಷಸಮರ್ಥನೆಯನ್ನು ನಿಲ್ಲಿಸಿಬಿಟ್ಟರೆ, ಇವರ ಸ್ಥಿತಿಯು ತನ್ನಷ್ಟಕ್ಕೆ ನಿರ್ಬಲವಾಗುವುದು ಮುಖ್ಯವಾಗಿ ಹೇಳುವುದಾದರೆ, **ಇವರ ಅಸ್ತಿತ್ವ ಹಾಗೂ ದುರಾಚಾರಗಳ ಜವಾಬ್ದಾರಿಕೆಯು ಪೂರ್ಣವಾಗಿ ಹಿಂದೂ ಸಮಾಜದ ಮೇಲೆಯೇ ಇದೆ.** ಅದು ಈ ಜನರನ್ನು ತಿನ್ನಿಸಿ ಕುಡಿಸಿ ಕೊಬ್ಬಿಸಿಡುತ್ತಾರೆ. ಆದರೆ ಅವರು ಏನು ಮಾಡುತ್ತಾರೆ ಮತ್ತು ಯಾವ ಪ್ರಕಾರ ತಮ್ಮ ಜೀವನವನ್ನು ಕಳೆಯುತ್ತಾರೆ ಎಂಬುದನ್ನು ಕಣ್ಣೆತ್ತಿ ನೋಡುವುದೇ ಇಲ್ಲ ಸರ್ವಸಾಧಾರಣರು ಇವರ ಚರಿತ್ರ ಮತ್ತು ಕಾರ್ಯಗಳ ಮೇಲೆ ಗಮನವಿಡತೊಡಗಿದರೆ, ಇವರ ಸುಧಾರಣೆಯು ಸುಗಮವಾಗುವುದು.

THE
PANGAL NAYAK BANK
LIMITED.
ESTABLISHED 1920
Paid up Capital. Rs 1,82,100/-
*Head Office*: UDIPI.
Branches MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc, are discounted at a nominal charge

Current and Savings Bank deposits are accepted at moderate rates of interest

Fixed Deposits are received and interest allowed at 4% on 1 year and at 4½% on 2 years deposits, payable every half year of the calendar year.

Every other description of up to date Banking business is also undertaken.

ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ, ಸ್ವಲ್ಪ ಬಿಳಿ ಕೂದಲಿದ್ದರೆ ರೂ 5ರ, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ 9ರ ಬಾಟಲಿಗೆ ಬರೆಯಿರಿ

**Bal Kala Stores,**
P. O Kunsisrai (Dirbhanga)

# ಗ್ರಾಮ ಸಂಘಟನೆಯಲ್ಲಿ ಹುಡುಗರ ಸ್ಥಾನ

**ಇಂದಿನ ಹಳ್ಳಿಯ ಬಾಲಕನು ನಾಳಿಯ ಹಳ್ಳಿಯ ನಾಯಕನು. ಆದುದರಿಂದ ಯಾವ ಗ್ರಾಮೋನ್ನತಿಯ ಯೋಜನೆಯಲ್ಲಾದರೂ ಅವನ ಅಭಿವೃದ್ಧಿಯು ಪ್ರಾಮುಖ್ಯವಾಗಿರಬೇಕು.**

### ಮಾರ್ತಾಂಡಮಿನ ಗ್ರಾಮೋನ್ನತಿಯ ಪ್ರಯೋಗ

ತಿರುವಾಂಕೂರು ಸಂಸ್ಥಾನದ ಮಾರ್ತಾಂಡಮ್ ಎಂಬಲ್ಲಿ ವೈ ಎಮ್ ಸಿ. ಎ (ತರುಣ ಕ್ರೈಸ್ತ ಸಂಘ) ಯವರು ಹಳ್ಳಿಗರ ಉನ್ನತಿಯ ಬೇರೆ ಬೇರೆ ಯೋಜನೆಗಳನ್ನು ಕೈಕೊಂಡು ಅವರ ಸಾಂಪತ್ತಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಸುಧಾರಿಸುತ್ತಿರುವರು. ಅವರ ಜೀವನವು ಸುಖಮಯವಾಗುವಂತೆ ಪ್ರಯತ್ನಿಸುತ್ತಿರುವರು. ಒಳ್ಳೇ ಜಾತಿಯ ಕೋಳಿಗಳನ್ನು ಸಾಕುವಂತೆಮಾಡಿ ಸಾವಿರಗಟ್ಟಲೆಯಲ್ಲಿ ಮೊಟ್ಟೆಗಳನ್ನು ಕ್ರಯಕ್ಕೆ ಪಡೆದು ಬೇರೆ ಬೇರೆ ಕಡೆಗಳಿಗೆ ಕಳುಹಿಸುತ್ತಿರುವರು ಸುಧಾರಿತ ಕ್ರಮದಲ್ಲಿ ಜೇನು ನೊಣಗಳನ್ನು ಸಾಕುವಂತೆ ಮಾಡಿ ಉತ್ತಮ ಜೇನನ್ನು ತಯಾರಿಸಿ ಕೊಡುವಂತೆ ಮಾಡುವರು ಒಳ್ಳೇ ಜಾತಿಯ ಅನನಾಸು ಮತ್ತು ಇತರ ಹಣ್ಣು ಹಂಪಲುಗಳನ್ನು ಬೆಳೆಸುವಂತೆ ಸಹಾಯಮಾಡುತ್ತಿರುವರು. ಮಾರ್ತಾಂಡಮಿನ ಗ್ರಾಮಾಭಿವೃದ್ಧಿಯ ಕೇಂದ್ರದಲ್ಲಿ ಹಿಂದುದೇಶದ ಮತ್ತು ಹೊರಗಣ ದೇಶಗಳ ಸುಶಿಕ್ಷಿತ ತರುಣರು ಹಳ್ಳಿಯ ಉದ್ಧಾರದ ಪ್ರತ್ಯಕ್ಷಾನುಭವ ಪಡೆಯುತ್ತಿರುವರು. ಇವರು ಹಳ್ಳಿಗರೊಂದಿಗೆ ನಿಸ್ಸಂಕೋಚವಾಗಿ ಕಲೆತು, ಅವರ ಆಟವಿನೋದ, ಉತ್ಸವಗಳಲ್ಲಿ ಭಾಗಿಗಳಾಗಿ ಅವರಂತೆಯೇ ಜೀವಿಸಿ ಅನುಭವಪಡೆಯುತ್ತಿರುವರು. ಈ ಕೇಂದ್ರದವರು ಮಾರ್ತಾಂಡಮಿನ ಬಳಿಯ ಹಳ್ಳಿಗಳ ಬಡಹುಡುಗರನ್ನು ಯಾವ ರೀತಿಯಲ್ಲಿ ತರಬೇತಿ ಮಾಡುತ್ತಿರುವರೆಂಬುದು ಈ ಕೆಳಗಿನ ಲೇಖದಿಂದ ವ್ಯಕ್ತವಾಗುವುದು.

### ಅಭಿವೃದ್ಧಿಯ ಸಂದರ್ಭವೇ ಇಲ್ಲ

ಹಳ್ಳಿಯ ಹುಡುಗನಿಗೆ ತನ್ನ ಅಭಿವೃದ್ಧಿಗಾಗಿ ಉತ್ತಮ ಸಂದರ್ಭಗಳೇ ದೊರೆಯುವುದಿಲ್ಲ. ಅವನು ಬಡ ನಿರಕ್ಷರ ಕೃಷಿ ಕುಟುಂಬದಲ್ಲಿ ಹುಟ್ಟಿ, ಯಾರಾದರೂ ದಯಾಳು ಸಾಮಾಜಿಕ ಕೆಲಸಗಾರನು ನೆರವಾಗದಿದ್ದಲ್ಲಿ ತಾನು ಹುಟ್ಟುವಾಗಲೆ ಪಡಕೊಂಡು ಬಂದ ಸಂಕಷ್ಟಗಳನ್ನು ಅವನಿಗೆ ನಿವಾರಿಸಲು ಸಾಧ್ಯವೇ ಇಲ್ಲ. ವಿಶೇಷವಾಗಿ ತನ್ನ ಕುಟುಂಬಕ್ಕಾಗಲಿ, ತನ್ನ ಸಮಾಜಕ್ಕಾಗಲಿ ಯಾವದೊಂದು ತರದ ಪ್ರಯೋಜನಕಾರಿಯಾಗುವಂತೆ ಅವನಿಗೆ ಸಿದ್ಧತೆ ಪಡೆಯಲು ಶಕ್ಯವಿಲ್ಲ ಆದರೆ ಇಂದಿನ ಹಳ್ಳಿಯ ಹುಡುಗನೇ ನಾಳೆಯ ಹಳ್ಳಿಯ ತರುಣ ನಾಯಕನು. ಸರ್ವಾಂಗ ಅಭಿವೃದ್ಧಿ ಹೊಂದುವ ಸಂದರ್ಭಗಳು ಅವನಿಗೆ ದೊರೆತವೇ ಆದರೆ ಹಳ್ಳಿಯ ಸಮಾಜದ ಸ್ಥಿರವಾದ ಉನ್ನತಿ ಮತ್ತು ಸುಧಾರಣೆಯ ವಿಷಯದಲ್ಲಿ ದೊಡ್ಡ ಹೆಜ್ಜೆಯೊಂದನ್ನು ಮುಂದಿಟ್ಟಂತಾಗುವುದು

ಹಳ್ಳಿಯ ತಂದೆ ತಾಯಂದಿರು ಶಾಲೆಗೆ ಹೋಗುವ ಹುಡುಗನಿಗೆ ಪ್ರೋತ್ಸಾಹಕೊಡುವ ಆತುರವುಳ್ಳವರಿರುವುದಿಲ್ಲ ಅವನಿಗೆ ಶಾಲೆಯ ಸಂಬಳ, ಉಡುಗೆ, ಪುಸ್ತಕಗಳಿಗಾಗಿ ದುಡ್ಡು ಕೊಡಲು ಅವರು ಶಕ್ತರಿರುವುದಿಲ್ಲ ತಮ್ಮ ಮಕ್ಕಳ ವಿದ್ಯೆಗಾಗಿ ವೆಚ್ಚ ಮಾಡುವ ಸಂದರ್ಭ ಬಂದಾಗಲೆಲ್ಲಾ ಅವರು ಜುಗುಪ್ಸೆಗೊಂಡು, 'ನಾಳೆಯಿಂದ ಶಾಲೆಗೆ ಹೋಗುವುದೇ ಬೇಡ, ನಮಗೆ ಸಂಬಳಕೊಡಲು ಸಾಧ್ಯವಿಲ್ಲ ಅದಕ್ಕೆ ಮಡ್ಡಾಗಬೇಕು, ಇದಕ್ಕೆ ಹಣಬೇಕೆಂದು ನಿಮ್ಮ ಮಾಸ್ತರಿಗೆ ಕೇಳುವುದಕ್ಕೆ ಸುಲಭವಾಗುತ್ತದೆ ಅವರಿಗೆ ತಿಂಗಳು ತಿಂಗಳು ಸಂಬಳ ಸಿಗುತ್ತದೆ ಆದರೆ ನಮಗೆ ಹಾಗೆ ಸಂಬಳ ಸಿಗುವುದಿಲ್ಲ' ಎಂದು ಗದರಿಸುವುದು ಸ್ವಾಭಾವಿಕವೇ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಳ್ಳಿಯ ಹುಡುಗನು ವಿದ್ಯಾಭ್ಯಾಸವನ್ನು ಪಡೆಯುವ ತನ್ನ ಹೋರಾಟದಲ್ಲಿ ನಿರುತ್ಸಾಹಗೊಳ್ಳುವುದೇನೂ ಆಶ್ಚರ್ಯವಿಲ್ಲ ಇದು ಅವನದ್ದಾಗಲಿ ಅವನ ತಂದೆಯದ್ದಾಗಲಿ ತಪ್ಪಲ್ಲ ಬಡತನವೂ ಅಜ್ಞಾನವೂ ಇದಕ್ಕೆ ಕಾರಣ ಹಳ್ಳಿಗರಿಗೆ ಶಾಲೆಗೆಹೋಗುವ ಹುಡುಗನೆಂದರೆ ದೊಡ್ಡದೊಂದು ಭಾರ. ಶಾಲೆಗೆ ಹೋಗದಿದ್ದರೆ ಹಳ್ಳಿಯ ಮಕ್ಕಳು ಕೊಳಕು ಪಂಚೆಗಳನ್ನುಟ್ಟುಕೊಂಡು ಜಾನುವಾರು ಮೇಯಿಸುವುದು, ದರಳೆ ಹೆಕ್ಕುವುದೇ ಮೊದಲಾದ ಏನಾದರೂ ಕೆಲಸಮಾಡಬಹುದು- ಬದುಕಿದ ಮೇಲಲ್ಲವೇ ವಿದ್ಯೆ ಬುದ್ಧಿ? ದಿನಕ್ಕೊಂದು ಗಂಜಿಗೂ ಕಷ್ಟವಾಗಿರುವಾಗ ಹಳ್ಳಿಗರು ತಮ್ಮ ಮಕ್ಕಳ ವಿದ್ಯೆಗಾಗಿ ವೆಚ್ಚಮಾಡುವುದೆಲ್ಲಿಂದ? ಆ ಮನಸ್ಸು ಅವರಲ್ಲಿ ಉಂಟಾಗುವುದು ಹೇಗೆ? ಆದುದರಿಂದ ಯಾವ ಗ್ರಾಮಾಭಿವೃದ್ಧಿಯ ಯೋಜನೆಯಲ್ಲಾದರೂ, ಹಳ್ಳಿಯ ಹುಡುಗರ ಈ ಹೋರಾಟದಲ್ಲಿ ಅವರಿಗೆ ಸಹಾಯಮಾಡಿ ಅವರ ಉನ್ನತಿಗಾಗಿ ಬೇಕಾದ ಅನುಕೂಲತೆಯನ್ನೇರ್ಪಡಿಸುವುದಕ್ಕೆ ಪ್ರಾಮುಖ್ಯವಾಗಿ ಗಮನಕೊಡಬೇಕು

### ಆಲೋಚನೆಯಲ್ಲ ಆಚರಣೆ ಬೇಕು

ಹುಡುಗನ ಶಾರೀರಿಕ, ಸಾಮಾಜಿಕ ಮಾನಸಿಕ ಮತ್ತು ಆತ್ಮಿಕ ಅಭಿವೃದ್ಧಿಯ ಗುರಿಯನ್ನು ಗಮನಿಸಿಕೊಂಡು, ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಬಾಲಕನಿಗೆ ತನ್ನದೇ ಆದೊಂದು ಲೋಕವಿದೆ. ಮತ್ತು ಅವನ ಅಭಿವೃದ್ಧಿಯ ಕಾರ್ಯವೆಲ್ಲಾ ಈ ಲೋಕಕ್ಕೇನೇ ಸಂಬಂಧಿಸುವದಿದ್ದು ಬಾಲಕನು ಅದನ್ನು ಚೆನ್ನಾಗಿ ತಿಳಿಯುವಂತೆ ಸಹಾಯಕವಾಗಬೇಕು ಆಲೋಚನೆ ಮತ್ತು ಮಾತಿಗಿಂತ ಯಾವಾಗಲೂ ಕಾರ್ಯರೂಪವಾದ ಆಚರಣೆಯು ಮೇಲು. ಕಾರ್ಯದಿಂದಲೇ ಶೀಲವು ಬೆಳೆದು ಮನಸ್ಸು ವಿಕಾಸಹೊಂದುವುದು. ಆದುದರಿಂದ ಯಾವ ಕಾರ್ಯಕ್ರಮವನ್ನಾದರೂ ಹುಡುಗರಿಂದ ಸ್ವತಃ ಮಾಡಿಸಿ ಅದರಲ್ಲಿ ಅವರಿಗೆ ಆಸಕ್ತಿಯಿದೆಯೋ, ಅದರಿಂದ ಅವರ ಶೀಲದ ಬೆಳವಣಿಗೆಯಾಗುತ್ತದೋ ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗುವುದು ಆದುದರಿಂದ ಯಾವಾಗಲೂ ಮಾತಿಗಿಂತ ಕಾರ್ಯಕ್ಕೇನೇ ಪ್ರಾಮುಖ್ಯತೆ ಕೊಡಬೇಕು. ತಾನು ಕಾಣುವ ಪ್ರತಿಯೊಂದು ವಿಷಯದ ಕುರಿತು ಕೆಲಮಟ್ಟಿನ ಜ್ಞಾನಪಡೆಯಬೇಕೆಂಬ ಉತ್ಸುಕತೆಯು ಸ್ವಾಭಾವಿಕವಾಗಿ ಪ್ರತಿಯೊಬ್ಬ ಹುಡುಗನಲ್ಲಿರುವುದು. ಆದುದರಿಂದ ವಿದ್ಯಾ ಸಂಬಂಧವಾದ ಇಲ್ಲವೆ ಇತರ ಜ್ಞಾನವನ್ನೀಯುವ ಒಳ್ಳೆಯ ಯಾವ ಕಾರ್ಯ ಕ್ರಮದಿಂದಲಾದರೂ ಅವನು ಆಕರ್ಷಿತನಾಗುವನು. ಹುಡುಗನ ಶಿಕ್ಷಣದ ಕಾರ್ಯಕ್ರಮದಲ್ಲಿ ಯಾವಾಗಲೂ ಆಟಗಳು ಪ್ರಧಾನವಿರಬೇಕು. ಯಾಕೆಂದರೆ ಅವುಗಳು ಹುಡುಗರನ್ನೆಲ್ಲಾ ಉತ್ಸಾಹದಿಂದೊಂದುಗೂಡಿಸುವವು. ಆ ಮೂಲಕ ಸಾಮಾಜಿಕ ಕೆಲಸಗಾರನು ಅವರ ಹೃದಯವನ್ನು ವಶಪಡಿಸಿಕೊಳ್ಳಬಹುದು. ಹೀಗೆಯೇ ಹುಡುಗರಲ್ಲಿ ಪಂಗಡಗಳನ್ನೂ ಪಂಗಡ ಬುದ್ಧಿಯನ್ನೂ ಉಂಟುಮಾಡಿ ಒಕ್ಕಟ್ಟು ಮತ್ತು ಸಂಘಶಕ್ತಿಯನ್ನು ಬೆಳೆಸಬಹುದು. ಇದರಿಂದಲೇ ಹುಡುಗರ ಶಾರೀರಿಕಾಭಿವೃದ್ಧಿಯನ್ನುಂಟುಮಾಡಿ ಈ ಉತ್ತಮ ವಾತಾವರಣದಲ್ಲಿ ಅವರ ಸಾಮಾಜಿಕ ಪ್ರವೃತ್ತಿಗಳನ್ನು ಬೆಳೆಸಬಹುದು. ಹುಡುಗನ ಮಾನಸಿಕ ಮತ್ತು ಆತ್ಮಿಕೋನ್ನತಿಯಲ್ಲಿ ಕಥೆಹೇಳುವುದು ಮತ್ತು ಧಾರ್ಮಿಕ ಪದ್ಯಹಾಡುವುದರಿಂದ ಹೆಚ್ಚಿನ ಪರಿಣಾಮವಾಗುತ್ತದೆ. ಅವನ ಪ್ರಥಮ ಆಸಕ್ತಿಯೆಂದರೆ ಆಟ. ಅನಂತರ ಅವನೇನಾದರೂ ಮಾತಾಡುವುದಿದ್ದರೆ ಅದು ಉತ್ತೇಜಕ ಕಥೆಯ ವಿಷಯ. ಅವನು ಆಹಾರ ಮತ್ತು ನಿದ್ರೆಯನ್ನಾದರೂ ಬಿಟ್ಟು ಕಥೆಗಳನ್ನು ಎಷ್ಟು ಬೇಕಾದರೂ ಕೇಳುವನು. ಅನಂತರ ಅದನ್ನು ಇತರ ಹುಡುಗರಿಗೆ ಹೇಳುವನು.

### ವೈ. ಎಮ್. ಸಿ. ಎ. ಯ ಕೆಲಸ

ಮಾರ್ತಾಂಡಮಿನ ವೈ ಎಮ್. ಸಿ. ಎ. ಯವರು ಹುಡುಗರದೇ ಆದೊಂದು ಕೇಂದ್ರವನ್ನು ಸ್ಥಾಪಿಸಿರುವರು. ಈ ಹುಡುಗರೆಲ್ಲಾ ಆಗಾಗ ಒಟ್ಟುಸೇರಿ ಸ್ಫೂರ್ತಿಪರವಾದ ಗೀತೆಗಳನ್ನು ಹಾಡಿ ಭಕ್ತಿಪೂರ್ಣ ವಾತಾವರಣವನ್ನುಂಟುಮಾಡುವರು. ಈ ಪ್ರಾರ್ಥನೆ ಮುಗಿದ ಮೇಲೆ ಹುಡುಗನಾಯಕನು ಹಾಜರಿ ಕರೆಯುವನು. ಆಮೇಲೆ ಅವನು ಹಿಂದಿನ ಸಭೆಗಳ ವರದಿಯನ್ನೋದುವನು. ಇದಾದ ನಂತರ ಹುಡುಗರಲ್ಲಿ ಯಾರಾದರೊಬ್ಬನು ಉತ್ಸಾಹದಿಂದ ಕಥೆಹೇಳುವನು. ಈ ಸಭೆಯನ್ನು ಕೊನೆಗೊಳಿಸುವ ಮೊದಲು ಹುಡುಗರು ಬರುವವಾರದ ಕಾರ್ಯಕ್ರಮ, ಶಿಬಿರಾಗ್ನಿ ಮೊದಲಾದುವುಗಳನ್ನು ತಮ್ಮೊಳಗೇನೇ ಚರ್ಚಿಸಿ ನಿಶ್ಚೈಸುವರು. ಈ ಕೂಟವೆಂಬುದು ಹುಡುಗರದೊಂದು ಪಾರ್ಲಿಮೆಂಟಿ


**ನವಯುಗದ**

**ಮೂಡಬಿದ್ರೆ ಏಜಂಟರು:**

ಶ್ರೀ. ಐ. ಚಂದಪ್ಪ ಇಂದ್ರ

ಬೆಟಕೇರಿ.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಎಂಬ ಇಂಗ್ಲಿಷನ್ನು ಸುಲಭವಾಗಿ ಕಲಿಯುವ ಪುಸ್ತಕ

ಬೇಕಾದರೆ ೦-೪-೦ ಸ್ಟಾಂಪು ಕಳುಹಿಸಿರಿ

**ನವಭಾರತ ಬುಕ್ ಡಿಪ್ಪೊ, ಉಡುಪಿ.**

ಈ ಕೆಳಗಿನಂತೆ ಪ್ರಕಟಿಸುವ ಚಿಕ್ಕ ಜಾಹೀರಾತಿಗೆ.

ಇಷ್ಟೇ ಜಾಗಕ್ಕೆ

**ಒಂದೇ ಬಾರಿಗೆ 0-8-0.**

ಕಂಟ್ರಾಕ್ಟ ದರಗಳಿಗೆ ಮೆನೇಜರರಿಗೆ ಬರೆಯಿರಿ

**ನವಯುಗದ ಪುತ್ತೂರು ಏಜಂಟರು:**

**ಶ್ರೀ. ಎಚ್. ಎಸ್. ಕಾಮತ್**

ಹರಿಹರ ಪ್ರೆಸ್, ಇವರನ್ನು ನಮ್ಮ ಏಜಂಟರನ್ನಾಗಿ ನೇಮಿಸಲಾಗಿದೆ.

ಮೆನೇಜರ್, ನವಯುಗ.

**ಬೊಂಬಾಯಿಯಲ್ಲಿ**

ಶ್ರೀ. ವಿ ಎಸ್. ಶಿಬ್ರೂರ್ಕರ್

ದಿ. ನೇಶನಲ್ ಕೆನರಾ ನ್ಯೂಸ್ ಏಜನ್ಸಿ, ಫೋರ್ಟ್,

ಇವರಲ್ಲಿ 'ನವಯುಗದ' ಬಿಡಿಪ್ರತಿಗಳು ದೊರೆಯುತ್ತವೆ.

**ಮನೆ ಅಳಿಯ**

ಅಥವಾ

**ಆನಂದ**

ಸರಸ ಸಾಮಾಜಿಕ ಕಾದಂಬರಿ

**ಬೆಲೆ 0-8-0.**

**ನವಭಾರತ ಬುಕ್ ಡಿಪ್ಪೊ, ಉಡುಪಿ**

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ಸಾಫರ್ ಪೂರಿನ ತೋಟದ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

**Bihar Nursery,**
**P. O. Bihar**
*Nursery (Darbhanga)* **BIHAR**

**ಯಾವದೇ ತರದ ವಾಚ್, ಫೌಂಟನ್ ಪೆನ್, ಆಭರಣ, ಗ್ರಾಮಫೋನ್ ಮೊದಲಾದವುಗಳ ಬ್ಲೋಕ್ ಮಾಡಿಕೊಡಲಾಗುತ್ತದೆ. ಕಡಿಮೆ ಕ್ರಯ.**

**ನವಭಾರತ ಬುಕ್ ಡಿಪ್ಪೋ**

**ಉಡುಪಿ.**

ಹಂತೆ, ಈ ವೈಎಮ್. ಸಿ ಎ. ಗ್ರಾಮೋದ್ಧಾರ ಕೇಂದ್ರದವರು ಹಳ್ಳಿಯ ಹುಡುಗರ ಉನ್ನತಿಯ ಚಳವಳಿಕ್ಕೆ ವಿಶೇಷ ಲಕ್ಷ್ಯಕೊಡುತ್ತಿರುವರು. ಅವರು ಹುಡುಗರಿಗಾಗಿ ಹಲವು ವಿಧದ ಕಾರ್ಯಕಲಾಪಗಳನ್ನೇರ್ಪಡಿಸಿರುವರು. ಹುಡುಗರ ಕ್ಲಬ್ಬುಗಳನ್ನು ಸ್ಥಾಪಿಸಿರುವರು. ಹುಡುಗರ ಸೇವಿಂಗ್ಸ್ ಬೇಂಕ್, ಆಟಸ್ಪರ್ಧೆ, ನಾನಾ ಪ್ರದರ್ಶನಗಳನ್ನೇರ್ಪಡಿಸಿರುವರು. ಹುಡುಗರ ಸಾಂಪತ್ತಿಕೋನ್ನತಿಯ ದೃಷ್ಟಿಯಿಂದ ಕೋಳಿಸಾಕುವುದು ಮತ್ತು ಕೋಪರೇಟಿವ್ ಮೊಟ್ಟೆಮಾರಾಟವು ಪ್ರಾಮುಖ್ಯವಾಗಿದೆ. ಪ್ರಾಯಬಂದವರು ಮಾತ್ರ ಕೋಪರೇಟಿವ್ ಮಾರ್ಕೆಟಿಂಗ್ ಸ್ಕೀಮಿನ ಮೆಂಬರರಾಗಬಹುದು. ಇವರು ಕೋಳಿಗಳನ್ನು ಸಾಕಿ ಮೊಟ್ಟೆಗಳನ್ನು ಮಾರಾಟಕ್ಕೆ ಮಾರ್ಕೆಟಿಗೆ ತರುವರು. ಇವರಲ್ಲದೆ ಮೆಂಬರರಲ್ಲದವರು 250ಮಂದಿ ಇರುವರು ಇವರಲ್ಲಿ ಸೇಕಡಾ 95ಮಂದಿ ಹುಡುಗ ಹುಡುಗಿಯರು. ಇವರು ಹಪ್ತೆಗೆರಡು ಸಲ ನಡೆಯುವ ಮಾರ್ಕೆಟುಗಳಿಗೆ ತಟ್ಟಿಗಳನ್ನು ತೆಗೆದುಕೊಂಡುಹೋಗಿ, ಒಂದು ಕೈಯಲ್ಲಿ ಮೊಟ್ಟೆಗಳ ಬುಟ್ಟಿಯನ್ನೂ ಇನ್ನೊಂದು ಕೈಯಲ್ಲಿ ಚಿಕ್ಕ ಲೆಖ್ಖಪುಸ್ತಕವನ್ನು ಹಿಡಿದುಕೊಂಡು ಸಾಲಾಗಿ ನಿಲ್ಲುವರು. ಈ ಮಕ್ಕಳೆಲ್ಲಾ ಯಾವತರದ ಗಲಾಟೆ ಗೋಲಾಟ ಮಾಡದೆ ಬಹಳ ಶಿಸ್ತಿನಿಂದ ನಡೆಯುವರು ಹಲವು ಹುಡುಗ ಹುಡುಗಿಯರು ಹೀಗೆ ಮೊಟ್ಟೆಮಾರುವದರಿಂದ ತಮ್ಮ ಶಾಲೆಯ ವೆಚ್ಚಕ್ಕೆ ಬೇಕಾದಷ್ಟು ಹಣವನ್ನು ಗಳಿಸುವರು. ಕೆಲವು ಹುಡುಗರು ತಮ್ಮ ಕುಟುಂಬ ಪೋಷಣೆಗೂ ಕೆಲಮಟ್ಟಿನ ಸಹಾಯ ಮಾಡುವಷ್ಟರ ಸ್ವಾವಲಂಬಿಗಳಾಗಿರುವರು. ಮೊಟ್ಟೆಮಾರುವುದು ಮಾತ್ರವಲ್ಲದೆ, ಜೇನುಸಾಕುವುದು, ಕಾಯಿಪಲ್ಯ ತಯಾರಿಸುವುದು, ನೇಯುವುದು, ಆಡು ಸಾಕುವುದೇ ಮೊದಲಾದ ಇತರ ಉಪಯುಕ್ತ ಕೆಲಸಗಳನ್ನು ಈ ಹುಡುಗರು ಮಾಡುತ್ತಾರೆ.

## ವಿನೋದ ತರಂಗ

ಒಬ್ಬ—ಮಿತ್ರಾ; ನನ್ನೀ ಫೋಟೋದಲ್ಲಿ ನಾನು 10 ವರ್ಷ ಚಿಕ್ಕಾದವರಂತೆ ಕಾಣುವುದಿಲ್ಲವೇ?

ಇನ್ನೊಬ್ಬ—ಹಾಗಾದರೆ ಲಾಭವೇ ಆಯಿತು ಇನ್ನು 10 ವರ್ಷಗಳ ವರೆಗೆ ಫೋಟೋಕ್ಕಾಗಿ ಖರ್ಚುಮಾಡುವ ಅವಶ್ಯವಿಲ್ಲ.

o o o o o

ಯಜಮಾನ—ನಾನು ಮುಂಬಾಯಿಗೆ ಹೋಗುವೆನು ನಿನಗೇನು ತರಬೇಕು ಹೇಳು.

ಆಳು—ನನಗೆ ನನ್ನ ಫೋಟೋ ಬೇಕೆಂದು ಬಹುಕಾಲದಿಂದ ಆಸೆಯಿದೆ. ಅದನ್ನೇ ತಂದು ಬಿಡಿ, ಬುದ್ಧಿ. ಆಗದೇ?

o o o o o

ಯಜಮಾನ—ಇದೇನು ಬ್ಯಾಂಕಿನವರು 250 ರ ಪ್ಯಾಗೆ ಮಾತ್ರ ರಶೀದಿಕೊಟ್ಟಿದ್ದಾರೆ. ನಾನು 600 ರೂಪಾಯಿ ಕೊಟ್ಟಿದ್ದಿಲ್ಲವೆ?

ಜವಾನ—250ನ್ನು ನನ್ನ ಸಂಬಳಕ್ಕಾಗಿ ಕಟ್ಟಿಸಿದ್ದೇನೆ. ನಿನ್ನೆ ತಾವು ಕೊಟ್ಟ 'ಸಮಾಜವಾದ'ದ ಲೆಕ್ಚರಿಗೆ ನಾನೂ ಬಂದಿದ್ದೆ

o o o o o

ತಾಯಿ—(ಅಂಗಳಕ್ಕೆ ಆಡು ಬಂದುದನ್ನು ನೋಡಿ) ಮಗೂ! ಅಂಗಳದಲ್ಲಿ ಆಡು.

ಮಗು—ಆಗಿಂದ್ಲೇ ಆಡುತ್ತಿದ್ದೇನಮ್ಮಾ!

o o o o o

ರತ್ನಾಬಾಯಿ—ಎಂಟು ಘಂಟೆ ವರೆಗೆ ಎಲ್ಲಿ ಹೋಗಿದ್ದೆ ರಮಾ?

ರಮಾ—ಮೈದಾನಕ್ಕೆ,

ರತ್ನಾಬಾಯಿ—ಓಹೋ ಈಗಲೇ ಪ್ರಾರಂಭಿಸಿರುವೆಯಾ ಮೈ—ದಾನಕ್ಕೆ.

o o o o o

"ರಂಗ"

### ಮಂಗಳೂರು ಚಂದಾದಾರರಲ್ಲಿ

ತಮ್ಮ ಚಂದಾಹಣ ಬಾಕಿ ಇರುವ ನಮ್ಮ ಮಂಗಳೂರಿನ ಚಂದಾದಾರರು ಬಾಕಿ ಇರುವ ಮತ್ತು ಮುಂದಿನ ವರ್ಷದ ಚಂದಾ ಹಣವನ್ನು ದಯವಿಟ್ಟು ಆದಷ್ಟು ಬೇಗನೆ ಕೆನರಾ ಛಾಪಖಾನೆಯ ಮೆನೇಜರರೊಡನೆ ಕೊಡಬೇಕಾಗಿ ವಿನಂತಿ.

ಮೆನೇಜರ್, ನವಯುಗ.


## WANTED.

Applications are invited up to 7th October 1937 from young and energetic persons for the posts of **a clerk** and **two organizing travelling agents**. Salary according to qualifications. Only competent hands with previous experience need apply with references to—

**Bhuvanendra Products Limited,**
**KATAPADI,**
*South Kanara.*

ಅವಳು—ನೀವು ಇಂದೇ 'ನವಯುಗಕ್ಕೆ' ಚಂದಾದಾರರಾಗಬೇಕು. ಕಾಂಗ್ರೆಸ್ ಪತ್ರಿಕೆಯೆಂಬರೆ ನಮ್ಮಲ್ಲಿ ಇದೊಂದೆ.
ಅವನು—ಹೌದು! ಇತರರನ್ನು ಬೈಯುವ ಪತ್ರಿಕೆ ಇದೊಂದೆ! ಯಾವುದಕ್ಕೂ ದುಡ್ಡಿಲ್ಲವಲ್ಲ?
ಅವಳು—'ಹಿಂದು'ವಿಗೆ ರೂ. 30-ಕೊಡಲು ದುಡ್ಡಿದೆ! ಒಂದು ಕನ್ನಡ ಪತ್ರಿಕೆಗೆ ಕೊಡಲು ಮಾತ್ರ ರೂ 3–4–0 ಇಲ್ಲ!........ಚೆನ್ನಾಗಿದೆ.

# ನಮ್ಮ ಪುಸ್ತಕ

**ಸರ್ವರಿಗೂ ಬೇಕಾದ ಸಚಿತ್ರ ಮಾಸಪತ್ರಿಕೆ.**

**ಸಾಮಾನ್ಯ ಪ್ರತಿ–ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಒಂದೇ ರೂಪಾಯಿ.**
(ಮಕ್ಕಳಿಗೆ ಹದಿನಾರು ಸಚಿತ್ರ ಪುಟಗಳು—ವರ್ಣಮಾಲೆ, ಚಿತ್ರಕಥೆ, ಚಿತ್ರಲಿಪಿ, ವರ್ಣಚಿತ್ರ, ಮೃಗ, ಪಕ್ಷಿ ಇತ್ಯಾದಿ. ತಾಯಿಂದಿರಿಗೆ ಉಪಾಧ್ಯಾಯರಿಗೆ ಎಂದೇ ಬರೆದ ಲೇಖನಗಳು. ಒಟ್ಟು ರಾಯಲ್ ೨೪ ಪುಟಗಳು, ೪೦ ಪೌಂಡ್ ಕಾಗದ.)

**ಭಂಡಾರ ಪ್ರತಿ–ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಎರಡೇ ರೂಪಾಯಿ.**
(ವಿವರವೆಲ್ಲ ಮೇಲಿನಂತೆ, ರಾಯಲ್ ೬೦ ಪೌಂಡ್ ಕಾಗದ.)

**ವಿಶೇಷ ಪ್ರತಿ–ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಮೂರೇ ರೂಪಾಯಿ.**
(ಸಾಮಾನ್ಯ ಪ್ರತಿಯ ಜೊತೆಗೆ ವಿಜ್ಞಾನ, ಸಾಹಿತ್ಯ, ಚರಿತ್ರೆ, ಧರ್ಮ, ಮೊದಲಾದ ಇತರ ಸಮುಕ್ತ ವಿಷಯಗಳ ಮೇಲಿನ ಲೇಖನಗಳು. ಒಟ್ಟು ರಾಯಲ್ ೪೦ ಪುಟಗಳು, ೬೦ ಪೌಂಡ್ ಕಾಗದ.)

**ಮೊದಲು ತರಿಸಿ ನೋಡಿ.**

ಶಂಕರಪುರ, ಬೆಂಗಳೂರು — ಸಂಪಾದಕ, **ದೇವುಡು.**

# ಮುಲ್ಲರ್ ಪೇಟನ್ ಬ್ರದರ್ಸ್

**91, ಚಿಕ್ಕಪೇಟೆ - ಬೆಂಗಳೂರು ಸಿಟಿ,**

ಮಕ್ಕಳ ಪ್ಲೀಹ ಮತ್ತು ಯಕೃತ್ ರೋಗಗಳಿಗೆ ಉತ್ತಮ ಔಷಧ

All kinds of Patent Medicines Available at
**MULLER PATEN BROS,**
91, Chickpet **Bangalore.**

ನಮ್ಮಲ್ಲಿ ಎಲ್ಲಾ ತರದ ಇಂಗ್ಲಿಷ್ ಮತ್ತು ನೇಟಿವ್ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ.

ಕುಮಾರೇಶ
ಬಾಟ್ಲಿ ೧ಕ್ಕೆ ೦–೧೪–೦

**150 ವರ್ಷಗಳ ಅನುಭವ** — **ಖಾತ್ರಿಗುಣವನ್ನೀಯುವ ಸ್ವದೇಶೀ ದಿವ್ಯೌಷಧ**

ಬಾಣಂತಿಯರ ಸೌಖ್ಯಕ್ಕೆ ಅಮೃತತುಲ್ಯವಾಗಿ ಸಹಸ್ರಾರು ಸ್ತ್ರೀಯರ ಪ್ರಾಣವನ್ನುಳಿಸಿದ

# "ಪ್ರಸೂತ ಸ್ತ್ರೀ ಸಂರಕ್ಷಿಣಿ"

ಎಂಬ

## ನಂಜಿನ ಮಾತ್ರೆಗಳು

ಒಮ್ಮೆ ಉಪಯೋಗಿಸಿ ನೋಡಿದಲ್ಲಿ ಔಷಧಿ ಶಕ್ತಿಯು ಮನನವಾಗುವದು.
ನೂರು ಮಾತ್ರೆಗಳಿಗೆ ರೂ. 4 ಮಾತ್ರ.

ಹೆಚ್ಚಿನ ಮಾಹಿತಿಗಳಿಗೆ ಗರ್ಭಿಣಿ ಹಾಗೂ ಪ್ರಸೂತ ಸ್ತ್ರೀಯರ ರೋಗಗಳ ಸ್ಪೆಶಲಿಸ್ಟರಾದ "ವಾರಂಬಳ್ಳಿ ಬ್ರದರ್ಸ್, ಆಯುರ್ವೇದಾಶ್ರಮ ಬ್ರಹ್ಮಾವರ, ದ. ಕನ್ನಡಾ" ಇವರಿಗೆ ಬರೆಯಿ.

# SUSHEELA & CO., KOLLEGAL. (S. INDIA)

# 1000 ರೂಪಾಯಿಗಳ ಬಹುಮಾನ.

ನಂಬರು ೩

ಈ ಸ್ಪರ್ಧೆಯ ಸರಿಯಾದ ಮೂರು ಉತ್ತರಗಳನ್ನು ಸೀಲ್ ಮಾಡಿದ ಕವರಿನಲ್ಲಿ ಇಲ್ಲಿಯ 'ಶ್ರೀನಿವಾಸ ಪ್ರೆಸ್' ಆಫೀಸಿನಲ್ಲಿ ಡಿಪಾಜಿಟ್ ಮಾಡಲ್ಪಟ್ಟಿರುತ್ತೆ.

**ಪ್ರತಿ ಎರಡು ಕೂಪರ್ಗಳಿಗೂ ಒಂದು ಕೂಪರ್ ಉಚಿತ.**

**ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ 18—10—37** **ಫಲಿತಾಂಶವನ್ನು ಪ್ರಕಟಿಸುವ ದಿನ 22—10—37.**

ಮೂರು ಕೂಪರ್ಗಳೂ ಸರಿಯಾಗಿ ಕಳುಹಿಸಿದವರಿಗೆ 500 ರೂಪಾಯಿಗಳು.

ಒಂದು ಕೂಪರ್ ತಪ್ಪುಳ್ಳವರಿಗೆ 200 ರೂಪಾಯಿಗಳು. ಎರಡು ಕೂಪರ್ ತಪ್ಪುಳ್ಳವರಿಗೆ 100 ರೂಪಾಯಿಗಳು.

**ಇತರ ಬಹುಮಾನಗಳು.**

ಮೂರು ಕೂಪರ್ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ 125 ರೂಪಾಯಿಗಳು ಹೆಚ್ಚಾಗಿ ಕೂಪರ್ಗಳು ಕಳುಹಿಸಿದವರಿಗೆ 75 ರೂಪಾಯಿಗಳು

| | |
|---|---|
| | ಸುಶೀಲ ಅಂಡ್ ಕೋ., ಕೊಳ್ಳೇಗಾಲ. |
| | ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ. |
| | ಹೆಸರು______ |
| 26 | ವಿಳಾಸ______ |
| | ಪೋಸ್ಟಲ್ ಮನಿ ಆರ್ಡರ್ ನಂಬರು______ |
| | ಸ್ಟ್ಯಾಂಪುಗಳು ______ ತಾರೀಖು______1937 |

ಉತ್ತರಗಳನ್ನು ಕಳುಹಿಸುವ ಕ್ರಮ:—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 78 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಶಾಯಿಯಲ್ಲಿ ಬರೆದು ಕಳುಹಿಸಬೇಕು.

**ನಿಬಂಧನೆಗಳು.**

ಪ್ರವೇಶ ಧನ ಕೂಪರ್ಗೆ ೦—೮—೦ ಆಣೆ. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟ್ಯಾಂಪುಗಳ ರೂಪದಲ್ಲಾಗಲೀ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 18-10-37ರೊಳಗೆ ನಮ್ಮ ಕೈ ಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಸು ಮಾಡಲಾಗುವುದಿಲ್ಲ ಮತ್ತು ಯಾವ ಪತ್ರ ವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾಗುವುದು ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮ್ಯಾನೇಜರ ತೀರ್ಮಾನವೇ ಕಡೇ ತೀರ್ಮಾನ. ತಮ್ಮ ವಿಳಾಸದೊಡನೆ 0-1-0 ಆಣೆ ಸ್ಟ್ಯಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಷರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: **ಸುಶೀಲ ಅಂಡ್ ಕೋ., ಕೊಳ್ಳೇಗಾಲ.**

# ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳ. ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನುಂಟು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. ೬೦ ಮಾತ್ರೆಗಳು ರೂ. ೫—೦—೦ ೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

**ಡಾ. ಎ. ಎಸ್. ಮೂರ್ತಿ,**
**ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.**

# ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

# ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು

**"ಯೋಗೀಶ್ವರರ ಶಕ್ತಿಸಾಹಸ"**

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

**ಪತ್ತೆ:—ಪಂಡಿತ್ ಎ. ವಿ. ಆರಮುಗ್**
**ಚಿಕಾಕೋಲ್**

**ಹೊಸ ಪುಸ್ತಕ!** **ಈಗಲೇ ಪ್ರಿಂಟಾಗಿದೆ!**

# ಸ್ತ್ರೀ ದಾಂಪತ್ಯರಹಸ್ಯ ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು, ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂ

ದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀ ಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳ ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗು ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓ ನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೆ ಳಲು ಮನಸ್ಸು ಬಾರದು.

**ಕ್ರಯ: ೩೦ ಫೋಟೋಗಳ ಸಹಿತ ಇರುವ ಪುಸ್ತಕ ರೂ. 1—0—0.**

# SELF ENGLISH STUDY ಸೆಲ್ಫ್ ಇಂಗ್ಲಿಷ್ ಸ್ಟಡಿ

**ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ.**

ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ಕ್ಕಿಂತಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೮ ಪೇಜಿಗಳ ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ.

**ಕ್ರಯ: ಪುಸ್ತಕದ ಒಕ್ಕೆ ರೂ. ೨. ವಿ. ಪಿ. ಖರ್ಚು ರೂ. ೦-೧೦-೦.**

**C. K. HEROJEE & CO.,**
**No. 12, Nallanna Mudaly Street, Sowcarpet, MADRAS**
**ಸಿ. ಕೆ. ಹೆರೋಜ್ ಅಂಡ್ ಕೊ.,**
೧೨ ನಲ್ಲನ್ನ ಮೊದಲಿ ಬೀದಿ, ಸಾಹುಕಾರಪೇಟೆ, ಮದರಾಸ್

# ವಿವಾದ ರಂಗವು ಯೋಗದ ಒಂದು ಬಹಿರಂಗ ಭೂಮಿಕೆ

**[ಪಂಡಿತ ತಾರಾನಾಥರು ಪ್ರೇಮವಿದ್ಯಾಪೀಠದಲ್ಲಿ ವಿದ್ಯಾರ್ಥಿಗಳ ವಿವಾದ ಸಭೆಯನ್ನು ತೆರೆಯುವ ಸಂದರ್ಭದಲ್ಲಿ ಮಾಡಿದ ಭಾಷಣದ ಸಾರಾಂಶ.]**

**ಯಾವುದೇ** ಒಂದು ಕೆಲಸವನ್ನು **ಮಾಡುವಾಗ** ಅದರ ಹಿಂದ ಬಲವಾದ ಒಂದು **ಉದ್ದೇಶ**ವಿರಬೇಕು, ತತ್ವವಿರಬೇಕು. ಅ**ದಿಲ್ಲದೆ** ತೊಡಗುವ ಕೆಲಸವು ಹುಚ್ಚು. **ಇಂದು** ನಿಮ್ಮ **ಈ** ವಿವಾದ ಸಭೆಗೂ ಆ **ತತ್ವಧ್ಯೇಯ**ಗಳ ಬೆಂಬಲವಿದೆಯೋ ಎಂಬು**ದನ್ನು** ನೋಡಿಕೊಳ್ಳಿರಿ. ಅದಿಲ್ಲದಿದ್ದರೆ **ಮುಷ್ಫಲ.**

"**ವಾದೇ** ವಾದೇ ಜಾಯತೇ ತತ್ವಬೋ**ಧಃ**" ಎಂಬ ವಾಕ್ಯದಂತೆ ವಾದವು ತತ್ವ**ಬೋಧದ** ಒಂದು ಸಾಧನ. ವಾದವೆಂದ**ರೆ ಯಾವು**ದಾದರೊಂದು ವಿಷಯವನ್ನು **ಎತ್ತಿಕೊಂ**ಡು ಹೇಳಿಬಿಡುವುದಲ್ಲ ಆ ವಾದರಂಗ**ಕ್ಕೊಂ**ದು ಮೇರೆಯಿದೆ. ಅದರ ಗ**ತಿಗೊಂ**ದು ನಿಯಮವಿದೆ.

**ವಾದಕ್ಕಾ**ಗಿ ಎತ್ತಿಕೊಳ್ಳುವ ವಿಷಯವು **ತತ್ವ**ಗರ್ಭಿತವಾಗಿರಬೇಕು ವಾದವು ಸ**ಯುಕ್ತಿ**ಕವಾಗಿರಬೇಕು. ಆ ವಾದವು ಬರೇ **ಮಾತು**ಗಳಲ್ಲಿ ಕೊನೆಗೊಳ್ಳದೆ, ವಾದಕನ ವಿಕಾಸವನ್ನೂ ಸಾಧಿಸಬೇಕು. ವಾದಿಸುವವನಲ್ಲಿ ಆ ವಿಷಯದ ವಾಸನೆಯೇ **ಇಲ್ಲದಿದ್ದರೆ**, ಅಂಥವನ ವಾದದ ಪರಿಣಾ**ಮವು**-"ವಿನಾಯಕನನ್ನು ಮಾಡಹೋದ**ವನು** ವಾನರನನ್ನು ಮಾಡಿದಂತೆ" ಆಗು**ವುದು. ಆ** ವಿಷಯದಲ್ಲಿ ಸಂಪೂರ್ಣ ಜ್ಞಾನವಿಲ್ಲದಿದ್ದರೂ ಅದರಲ್ಲಿ ಸಾಕಷ್ಟು ಪ್ರವೇಶವಾದರೂ ಇರಬೇಕು, ಮುಂದರಿಕೆಯ **ಜಿಜ್ಞಾ**ಸೆ ಇರಬೇಕು. ಜ್ಞಾನವೂ ಇಲ್ಲದೆ-**ಜಿಜ್ಞಾ**ಸೆಯೂ ಇಲ್ಲದೆ ಮಾಡುವ ವಾದವು **ಬರಿಯ** ಗೋಳೇ ಸೈ!

**ಆದರೆ** ಸಾಮಾನ್ಯವಾಗಿ ಜನರಲ್ಲಿ ಹೊರ**ಗಿನ ಜ್ಞಾ**ನವು ಬೆಳೆದಂತೆ ಒಳಗೆ ಹಮ್ಮೂ **ಬೆಳೆಯುವುದು** ಬಳಕೆಯಾದಂತೆ ತೋ**ರುತ್ತದೆ.** ಇಂಥಾ ಗರ್ವದೊಡನೆ ಬೆಳೆಯು**ವ ಜ್ಞಾ**ನವು ಜ್ಞಾನವಲ್ಲ; ಅಜ್ಞಾನವೇ. **ಯಾವು**ದೇ ವಿಷಯವನ್ನು ತಿಳಿಯುವುದಿ**ದ್ದರೂ**, ಅದಕ್ಕೂ ತನಗೂ ಇರುವ ಪರ**ಸ್ಪರ** ಸಂಬಂಧವನ್ನು ನೋಡಿಕೊಳ್ಳಬೇ**ಕು**. ಅದನ್ನೊಂದು ಸಾಧನವನ್ನಾಗಿ ಬೆಳೆಸಬೇಕು, ಅದಕ್ಕೆ ತಾನು ದೂರಸಾಕ್ಷಿಯಾಗಿ ಬೆಳೆಸಬೇಕು. ಹೀಗೆ ಸಹಜವಾಗಿಯೇ ಬೆಳೆದ ಜ್ಞಾನವು ಹಮ್ಮನ್ನು ಅಳಿಸುವುದಲ್ಲದೆ ಬೆಳೆಸದು. ಒಂದು ವಿಷಯದ ಜ್ಞಾನವು ಬೆಳೆಯುವುದೆಂದರೆ ಅದರಲ್ಲಿ ನಿರ್ಲಿಪ್ತ ಪರಿಚಯ ಬೆಳೆಯುವದು, ಈ ವಿಧದ ಜ್ಞಾನದ ಅಭಾವದಿಂದ ಕೆಲವರಿಗೆ ವಾದಿಸುವಾಗ ಕಣ್ಣು ಕೆಂಪಾಗುವುದು, ಮುಖಮುದ್ರೆ ಬದಲುವುದು, ಸಿಟ್ಟು ಬರುವುದು,-ಯಾಕೆ-ಕೆಲವೆಡೆ ಜಗಳವೇ ಸಂಭವಿಸಿಬಿಡುವುದು ಇತ್ಯಾದಿ ತೋರುತ್ತದ. ಅದು ಶುದ್ಧ ಅವಿವೇಕ. ವಿಷಯದ ಪಾಂಡಿತ್ಯವು ಆ ವಿಷಯದ ಮೇಲೆ ನಾಗಿರಾರು ಪುಸ್ತಕ ಓದುವುದರಿಂದಾಗುವುದಿಲ್ಲ ಹಾಗೆ ಓದಿ ಕೂಡಿಟ್ಟ ಅನುಭವವನ್ನು ಮಾತಿನ ಮಳೆಯಾಗಿ ಸುರಿಸುವುದರಲ್ಲಿಯೂ ಯೋಗ್ಯತೆ ಇಲ್ಲ. ಹಾಗೆ ಓದಿದ ವಿಷಯವನ್ನು ತನ್ನೊಳಗೆ ಅಡಗಿಸಿಕೊಂಡು-ಮೈಗೂಡಿಸಿಕೊಂಡು, ನಿರ್ಲಿಪ್ತ ಭಾವದಿಂದ ಸುಲಭವಾಗಿಯೂ ಸುಂದರವಾಗಿಯೂ ಮಂದಿಯ ಮುಂದೆ ಮಂಡಿಸುವುದರಲ್ಲಿಯೇ ಜ್ಞಾನದ ಸೊಬಗು ಇದೆ

ಆದರೆ ವಾದವು ವಿಷಯದ ಪರಿಷ್ಕರಣೆಗಾಗಿದೆಯಲ್ಲದ, ವ್ಯಕ್ತಿಯ ತುಲನೆಗಾಗಿ ಇಲ್ಲ. ಆದ್ದರಿಂದ ವಿಷಯವನ್ನು ಮೂರನೆಯ ವಸ್ತುವನ್ನಾಗಿಟ್ಟು ವಿವಾದಕರು ದೂರ ಸಾಕ್ಷಿಗಳಾಗಿಯೇ ವಿವಾದಿಸಬೇಕು. ಈ ಭಾವವಿಲ್ಲದಿರುವುದೇ ವಿವಾದಕರಲ್ಲಿ ವಿಪರೀತ ಭೇದ ಉಂಟಾಗುವುದಕ್ಕೆ ಕಾರಣ. ಆದರೆ ಇದೇ ವಿಷಯವನ್ನು ತಾನು ತನ್ನೊಳಗೇ ವಿತರ್ಕಿಸುವಾಗ ಈ ವಿವಾದದ ಉಗ್ರಭಾವವು ತೋರುತ್ತದೋ ಎಂಬುದು ಪ್ರಶ್ನೆ? ವಿತರ್ಕದಲ್ಲಿ ಸಹಜವಾದ ಸೌಮ್ಯತೆಯಿದೆ, ಆತ್ಮಪ್ರಿಯನಾದ ಮನುಷ್ಯನು ವಿತರ್ಕದಲ್ಲಿ ತನಗೆ ತಾನು ನಿಷ್ಠುರನಾಗಿರುವುದಿಲ್ಲ. ಆದ್ದರಿಂದ ಯಾವಾಗಲೂ ಇನ್ನೊಬ್ಬನೊಡನೆ ಮಾಡುವ ವಿವಾದದಲ್ಲಿ ತನ್ನೊಳಗೇ ನಡೆಯುವ ವಿತರ್ಕದ ಸೌಮ್ಯತೆ ಇರಬೇಕು ವಿತರ್ಕದಲ್ಲಿ ವಿವಾದದ ನಿದಾಕ್ಷಿಣ್ಯತೆ ಇರಬೇಕು. ನ್ಯಾಯದಿಂದ ತನ್ನನ್ನು ತಾನು ಖಂಡಿಸಿಕೊಳ್ಳುವುದೂ ಒಂದು ಯೋಗ. ಹಾಗಿರುವವರಿಗೆ ಬಹಿರಂಗ ವಿವಾದದಲ್ಲಿ ನಿರೋಧವಿರುತ್ತದೆ ವಿವಾದ ರಂಗವು ಈ ನಿರೋಧದ ಸಾಧನಾರಂಗವೇ. ಅಂತರಂಗದಲ್ಲಿ ಅಲಿಪ್ತ ಭಾವ. ಬಹಿರಂಗದಲ್ಲಿ ತಕ್ಕ ನಿರೋಧ, ಹೀಗಿದ್ದು ಸಾಗಿದರೇ ವಿವಾದದಲ್ಲಿ ಸಗರ್ಜತೆ ಇದೆ, ಸಖಪಿದೆ, ವಿಕಾಸವಿದೆ

ಬಹಿರಂಗ ವಿರೋಧವು ಹಲವು ಮುಖದಲ್ಲಿ ಸಾಗುವುದಿದೆ. ವಿವಾದದಲ್ಲಿ ಸೌಮ್ಯತೆ ಇರಬೇಕೆಂದರೆ, ಎಲ್ಲಾ ಕಾಲ ಭಾವಗಳಲ್ಲಿಯೂ ಒಂದೇ ಕಂಠಸ್ವರವಿರಬೇಕೆಂದು ತಿಳಿಯಬಾರದು ಭಾವ ಸನ್ನಿವೇಶವನ್ನು ನುಸರಿಸಿ ಅದರಲ್ಲಿ ಏರಿಳಿತಗಳು ಆಗಬೇಕು ಆದರೆ, ಭಾವಾರೋಹಣವನ್ನು ಬಿಟ್ಟು ಉದ್ವೇಗಾರೋಪದಿಂದ ಬದಲಾಗುವ ಸ್ವರಭೇದವು ಒಂದು ವಿಕೃತಿಯೇ. ಭಾವಸ್ಫೂರ್ತಿಯಿಂದ ಹೊರಡುವ ಕಂಠಭೇದ, ಬಾವದೌರ್ಬಲ್ಯದಿಂದ ಹೊರಡುವ ಉದ್ವೇಗ ಬೇರ ಆದ್ದರಿಂದ ಅಂತರಂಗದಲ್ಲಿ ವಸ್ತು ವಿರೋಧವಿರುವಂತೆಯೇ ಬಹಿರಂಗದಲ್ಲಿ ಸ್ವರ ವಿರೋಧವೂ ಬೇಕು. ಇಲ್ಲಿದೆ ಉತ್ತಮ ವಾಗ್ಮಿತ್ವದ ಗುಟ್ಟು

ಈ ಸಂಯಮ-ಸಮನ್ವಯಗಳಿಗೆ ಬುದ್ಧಿಯ ಕಡಿವಾಣಬೇಕು ಭಾವ ಪ್ರವಾಹವು ಬುದ್ಧಿಯ ಮೇರೆಯನ್ನನುಸರಿಸಿ ಮುಂದರಿಯಬೇಕು. ವಿವಾದದಲ್ಲಿ ಬುದ್ಧಿಯ ವಿಶ್ವವ್ಯಾಪಕ ರಜಸ್ಸು ಇರಬೇಕು. ಭಾವಬುದ್ಧಿಗಳೆರಡು ಒರಸೊರಸಿಕೊಂಡ ಹರಿಯಬೇಕು ಈ ಧ್ಯೇಯವು ವಿವಾದಕರ ಹೃದಯದಲ್ಲಿ ಬಲಗೊಂಡಿದ್ದರೆ ವಿವಾದರಂಗವು ಯೋಗದ ಬಹಿರಂಗ ಭೂಮಿಕೆಯಾಗಿ ಪರಿಣಮಿಸುವದು


# ಶ್ರೀ ರಾಮಕೃಷ್ಣ ಥಿಯೇಟರ್

## ಉಡುಪಿ

## ಮಳೆಗಾಲದ ನಂತರ ಉತ್ಕೃಷ್ಟ ವಿನೋದ.

ಇದೀಗ ಮಳೆ ಮುಗಿದು ಹೊಲಗಳಲ್ಲಿ ಪೈರುಪಚ್ಚೆ ಬೆಳೆದು ಜನರೆಲ್ಲಾ ವಿರಾಮವಾಗಿ ಆನಂದಿಸುವ ಹಬ್ಬ ಹುಣ್ಣಿಮೆಗಳ ಸಮಯ.

ಈ ಆನಂದೋತ್ಸವದ ಸಂದರ್ಭದಲ್ಲಿ ಜನರೆಲ್ಲಾ ಉತ್ತಮ ಚಿತ್ರಗಳನ್ನು ಕಂಡು ವಿನೋದಿಸಬಯಸುವರು.

**ಜನತೆಗೆ ಅತ್ಯುತ್ತಮ ವಿನೋದವನ್ನಿತ್ತು, ಅವರ ಹಣಕ್ಕೆ ಅತ್ಯುತ್ತಮ ಬೆಲೆದೊರೆಯುವಂತೆ ಈ ತಿಂಗಳಲ್ಲಿ ನಾವು ಈ ಕೆಳಗಿನ ಉತ್ತಮ ಚಿತ್ರಗಳನ್ನು ಪ್ರದರ್ಶಿಸಲಿರುವೆವು.**

## ಸಾವಿತ್ರಿ (ಮರಾಠಿ) ತಾ. 23-9-37ರಿಂದ

## ಸಂತ ತುಕಾರಾಮ್

**ತಾ. 30—9—37ರಿಂದ**

**ಉಡುಪಿಗೆ ಹೊರಗಣ ಹಳ್ಳಿಗಳಿಂದ ಬಂದು ಅಂದೇ ಸಂಜೆಯೊಳಗೆ ಹಿಂದಿರುಗಬೇಕಾಗುವವರ ಅನುಕೂಲತೆಗಾಗಿ ತಾ 1—10—37ರಿಂದ ಅಪರಾಹ್ನ 2 ಘಂಟೆಯಿಂದ 5 ಘಂಟೆಯ ವರೆಗೆ ಮೆಟಿನಿ ದೇಖಾವೆ ಇರುವುದು. ಆ ಮೇಲೆ ಸಂಜೆ 6—15ಕ್ಕೆ ಮತ್ತು 9—30ಕ್ಕೆ ಹೀಗೆ ಮತ್ತೆರಡು ದೇಖಾವೆಗಳಿರುವವು.**

ಶ್ರೀ ರಾಮಕೃಷ್ಣ ಥಿಯೇಟರ್.



**೧೮೭೮ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು**

# ಧಾತುಪುಷ್ಟಿ ಲೇಹ

**(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)**

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವಿಕೆ, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ದಸಿವನ್ನೂ, ಜೀರ್ಣಶಕ್ತಿಯನ್ನು ಹೆಚ್ಚಿಸುವದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ, ದೇಹಪುಷ್ಟಿಯನ್ನೂ ಉಂಟುಮಾಡುವುದು. ಬಾಟ್ಲಿ ೧ರ ರೂ. ೩॥

**ಬಾಲಗ್ರಹ ಗುಳಿಗೆ**—ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ-ಜ್ವರ, ಮಲಬದ್ಧತೆ ಮೊದಲಾದ ಗುರು ಗುರು ತಪ್ಪ ಇತರೆ ರೋಗಗಳ ಮೇಲೆ ದಿವ್ಯ ಔಷಧಿ ಬಾಟ್ಲಿ ೧ರ ರೂ. ೦-೧೦-೦

**ಕಸ್ತೂರಿ ಮಿಶ್ರಣ ದಶಮೂಲ**—ಇದು ಪ್ರಸವಾಪಜಾತವನ್ನು ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವದು, ಸಂಜೆಯ ಜ್ವರಕ್ಕೂ ಅವಕಾಶಕೊಡದಂತೆ ಮಾಡುವದು ಜೀರ್ಣ, ನಿದ್ರೆ, ಮಲವಿಸರ್ಜನೆ ಕ್ರಮದಂತೆ ನಡೆಯುವದು ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವದಲ್ಲದೆ ಶಿಶುವಿಗೆ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವದು. ಬಾಟ್ಲಿ ೧ರ ರೂ ೧-೬-೦.

**ಮಲೇರಿಯಾ ನಿವಾರಿಣಿ**—ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾತರದ ಜ್ವರಗಳ ಮೇಲೆ ದಿವ್ಯ ಔಷಧಿ ಬಾಟ್ಲಿ ೧ರ ರೂ ೧—೮—೦ ಸಣ್ಣ ಬಾಟ್ಲಿಗೆ ೦-೧೪-೦.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು

ಔಷಧಿಗಳು ಸಿಕ್ಕುವ ಸ್ಥಳ —ಕೃಷ್ಣ ಫಾರ್ಮಸಿ, ಕೆಮಿಸ್ಟ್ ಎಂಡ್ ಡ್ರಗಿಸ್ಟ್ ಕುಂದಾಪುರ, ಕೊಡಗಪ್ಪ ನ್ಯೂಸ್ ಏಜೆಂಟ್, ಉಡುಪಿ, ವೆಂಕಟ್ರಾವ್ ಶ್ರೀನಿವಾಸ ಕ್ಕ, ಪುಸ್ತಕ ವ್ಯಾಪಾರಿ ರಾಮಸ್ಟೇಷನರಿ ಡಾವ್, ಪೋಸ್ಟ್ ಆಫೀಸು ಎದುರು, ಬಸವನಗುಡಿ ಕಾಮತ್ ಎಂಡ್ ಕೋ ವಿಟ್ಟಲ್ ಬಾಯಿ ಪಟೇಲ್ ರೋಡು ಮುಂಬಾ, ಟಿ. ಬಾಳಿಗಾ ಪ್ರಭು, ಸುಳ್ಯ

## ಲಂಡನಿನಲ್ಲಿ-ವಿಷ್ಣುವಿನ ವಿಚಿತ್ರ ಪ್ರತಿಮೆ

ಲಂಡನಿನಲ್ಲಿ ಗೌಡೀಯ ಹಿಂದು ಮಿಶನಿನ ಶಾಖೆಯೊಂದು ಸ್ಥಾಪಿಸಲ್ಪಟ್ಟಿರುವುದು. ಇದರ ಪ್ರೆಸಿಡೆಂಟರು ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ಈ ಮಿಶನಿನ ಸನ್ಯಾಸಿಗಳಾದ ಪಂಡಿತ ಎ ಬಿ ಗೋಸ್ವಾಮಿಯವರು ಕನಸಿನಲ್ಲಿ ವಿಷ್ಣು ಪ್ರತಿಮೆಯೊಂದನ್ನು ಕಂಡರು ಮರದಿನ ಬೆಳಿಗ್ಗೆ ಶ್ರೀ ಗೋಸ್ವಾಮಿಯವರು, ವೆಸ್ಟ್ ಕೆನ್ಸಿಂಗ್ಟನ್ ಎಂಬಲ್ಲಿಯ ಕ್ವೀನ್ಸ್ ಕ್ಲಬ್ ಗಾರ್ಡನಿನ ಬಳಿಯ ಒಂದು ಮರದ ಬಳಿ ಶ್ರೀ ವಿಷ್ಣುವಿನ ಬಂಗಾರದ ಪ್ರತಿಮೆಯೊಂದು ಬಿದ್ದಿರುವುದನ್ನು ಕಂಡು ಹಕ್ಕಿಕೊಂಡು ಹೋದರು. ಈ ಪ್ರತಿಮೆಯು ಸುಮಾರು 6 ಇಂಚು ಎತ್ತರವಿದ್ದು ಸಂಪೂರ್ಣವಾಗಿ ಚಿನ್ನದಿಂದ ಮಾಡಲ್ಪಟ್ಟಿದ್ದಿತು ನಾಲ್ಕು ಕೈಗಳಿದ್ದು ಅವುಗಳಲ್ಲಿ ಶಂಖ ಚಕ್ರ, ಗದಾ ಪದ್ಮಗಳಿದ್ದವು ಹೀಗೆ ವಿಚಿತ್ರವಾಗಿ ಈ ಪ್ರತಿಮೆಯು ಕಂಡುಹಿಡಿಯಲ್ಪಟ್ಟದರಿಂದ ಹಲವರಲ್ಲಿ ವಿಸ್ಮಯವುಂಟಾಗಿರುವುದು ಈ ವಿಷ್ಣು ಪ್ರತಿಮೆಯು ಲಂಡನಿನ ವೆಸ್ಟ್ಎಂಡಿನಲ್ಲಿ ತ್ರಿಪುರದ ಮಹಾರಾಜರು ಕಟ್ಟಿಸುವ ಇದೇ ಇಂಗ್ಲೆಂಡಿನಲ್ಲೇ ಪ್ರಥಮವಾದ ಹಿಂದು ದೇವಾಲಯದಲ್ಲಿ ಪ್ರತಿಷ್ಠಿಸಲ್ಪಡುವರು ಲಂಡನಿನಲ್ಲಿ ಹಿಂದು ದೇವರ ಪ್ರತಿಮೆಯ ಆವಿಷ್ಕಾರವು ಇಂಗ್ಲೆಂಡಿನ ಒಳ್ಳೇಯ ಭವಿಷ್ಯದ ಸೂಚನೆಯಾಗಿರುವುದೆಂದು ಶ್ರೀ ಗೋಸ್ವಾಮಿಯವರ ನಂಬಿಕೆ

## ಹಸ್ತ ಲಕ್ಷಣಕ್ಕಿಂತಲೂ ಪಾದಲಕ್ಷಣ ಸ್ಪಷ್ಟ

ಅಂಗೈಯ ರೇಖೆಗಳಿಂದ ಲಕ್ಷಣ, ಭವಿಷ್ಯಗಳನ್ನು ಹೇಳುವುದು ಸರ್ವಸಾಮಾನ್ಯವಾದುದು. ಅದೊಂದು ಶಾಸ್ತ್ರವೇ ಆಗಿದೆ. ಹಾಗೆಯೇ ಹಸ್ತಾಕ್ಷರಗಳಿಂದಲೂ ಸ್ವಭಾವವನ್ನು ತಿಳಿದುಕೊಳ್ಳಬಹುದೆಂದು ಈಗ ತಿಳಿದುಬಂದಿದೆ ಈಗ ಅಂಗಾಲುಗಳ ರೇಖೆಗಳನ್ನು ಸ್ಪಷ್ಟವಾಗಿ ಇನ್ನಾವ ರೀತಿಯಿಂದಲೂ ಭವಿಷ್ಯವನ್ನು ಕಂಡುಕೊಳ್ಳಲು ಸಾಧ್ಯವಿಲ್ಲೆಂಬುದನ್ನು ಮಿಸೆಸ್ ಎಸ್ ಸಿ. ಸೆನ್ನರೆಂಬ ಮಹಿಳೆಯು ಆಕಸ್ಮಿಕವಾಗಿ ಕಂಡುಕೊಂಡಿರುವರು ಮಿಸೆಸ್ ಸನ್ನರು ಲಂಡನಿನಲ್ಲಿ ವಾಸಮಾಡಿಕೊಂಡಿರುವ ಉಚ್ಚ ವರ್ಗದ ಹಿಂದು ಸ್ತ್ರೀಯು. ಅವರು ಒಂದು ದಿನ ತನ್ನ ಚಿಕ್ಕ ಮಗನು ಆಡುತ್ತಿರುವುದನ್ನು ನೋಡುತ್ತಿರುವಾಗ ಅವನ ಬಲ ಅಂಗಾಲು ದುರ್ಲಕ್ಷಣವುಳ್ಳದ್ದೆಂಬುದನ್ನು ಕಂಡುಕೊಂಡರು. ಇದಾಗಿ ಕೆಲವೇ ದಿನಗಳ ನಂತರ ಅದೇ ಕಾಲಿನ ಮಣಿಗಂಟು ಉಳುಕಿಹೋಗಿ ಎರಡು ರಕ್ತಸ್ನಾಯುಗಳೊಡೆದುವು ಇದರಿಂದ ಮಿಸೆಸ್ ಸನ್ನರ ಮೇಲೆ ಎಷ್ಟೊಂದು ಪರಿಣಾಮವಾಯಿತೆಂದರೆ ಅವರು ಆ ಮೇಲೆ ಮಾನವ ಅಂಗಾಲು ಲಕ್ಷಣಗಳನ್ನೇ ಚೆನ್ನಾಗಿ ಪರೀಕ್ಷಿಸುವ ಅಭ್ಯಾಸವುಳ್ಳವರಾದರು ಇದರಿಂದಾಗಿ, ಶರೀರದ ಯಾವ ಭಾಗಕ್ಕಿಂತಲೂ, ಅಂಗೈಗಳಿಗಿಂತ ಕೂಡಾ ಅಂಗಾಲುಗಳಿಂದ ಭವಿಷ್ಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದೆಂಬ ಬೋಧವನ್ನು ಅವರು ಮಾಡಿರುವರು ಮತ್ತು ಅವರು ಹಸ್ತಲಕ್ಷಣದಂತೆ ಪಾದಲಕ್ಷಣಗಳನ್ನೂ ಹೇಳಹತ್ತಿ ಅನೇಕ ಜನರ ಬಳಿಗೆ ತಮ್ಮ ಲಕ್ಷಣ ಕೇಳಲು ಅನೇಕ ಜನರ ಬರುತ್ತಿರುವರು ಮಿಸೆಸ್ ಸೆನ್ನರು ಹೇಳುವ ಲಕ್ಷಣಗಳೆಲ್ಲಾ ನಿಜವಾದುದನ್ನು ತಿಳಿದು ಜನರು ವಿಸ್ಮಿತರಾಗಿರುವರು

# ● ವಿಚಿತ್ರ ಪ್ರಪಂಚ ●

## ಚಿತೆಯಿಂದ ಹುಡುಗನು ರಕ್ಷಿಸಲ್ಪಟ್ಟನು

ಸಂಯುಕ್ತಪ್ರಾಂತದ ಮೈನಪುರಿ ತಾಲೂಕಿನ ನಾವ ಎಂಬ ಹಳ್ಳಿಯಲ್ಲಿ 11 ವರ್ಷ ಪ್ರಾಯದ ಹುಡುಗನೊಬ್ಬನ ತಂದೆತಾಯಿಗಳಿಬ್ಬರೂ ಮೃತರಾಗಿ ಅನಾಥನಾದ ಆಗ ಅವನ ಸೋದರ ಮಾವನು ಬಂದು, ಹುಡುಗನ ಹಕ್ಕಿನ ಸ್ಥಿರ ಮತ್ತು ಚರಸೊತ್ತನ್ನೆಲ್ಲಾ ಅವನ ತಂದೆಯ ಸಹೋದರರು ಆಕ್ರಮಿಸಿ ಠಸೀದಿನವರೆಗು ಹುಡುಗನನ್ನು ತನ್ನೊಂದಿಗೆ ಕರಕೊಂಡು ಹೋದ ಇದಾಗಿ ಕೆಲಸಮಯದ ಮೇಲೆ ಒಂದು ದಿನ ಈ ಹುಡುಗನು ದಾಹಕ್ಕೆ ತನ್ನ ಮಾವಂದಿರ ಮನೆಗೆ ಒಂದ ಮರುದಿನ ಬೆಳಿಗ್ಗೆ ಅವನ ಮಾವಂದಿರ ಮನೆಯವರೆಲ್ಲಾ ಗೋಳಿಡಕೊಡಗಿದರು ರಾತ್ರಿ ಹಾವು ಕಡಿದು ಹುಡುಗನು ಮೃತನಾದನೆಂದೆಲ್ಲಾ ಸುದ್ದಿ ಹಬ್ಬಿಸಲಾಯಿತು ಆ ನಂತರ ಹುಡುಗನ ದೇಹವನ್ನು ಚಟ್ಟಕ್ಕೆ ಕಟ್ಟಿ ಸುಡುವುದಕ್ಕಾಗಿ ಸ್ಮಶಾನಕ್ಕೊಯ್ಯಲಾಯಿತು ಈ ನಡುವ ಇದೇ ರಾತ್ರಿ ಹುಡುಗನ ಸೋದರಮಾವನಿಗೆ, ಹುಡುಗನ ಯೋಗಕ್ಷೇಮದ ಕುರಿತು ಚಿಂತೆಯನ್ನುಂಟುಮಾಡುವ ಕನಸು ಬಿದಿತು ಆವನು ಕೂಡಲೆ ದಾಹಕ್ಕೆ ಧಾವಿಸಿಬಂದ ಹುಡುಗನಿಗೆ ಹಾವುತಚ್ಚಿ ಸತ್ತುಹೋದನೆಂಬ ಕಥೆ ಕೇಳಿ ಸ್ಮಶಾನಕ್ಕೋಡಿದ. ಆಗ ಹುಡುಗನ ಶವವನ್ನು ಚಿತೆಯ ಮೇಲಿಟ್ಟು ಬೆಂಕಿಕೊಡುವ ಸಿದ್ಧತೆ ನಡೆದಿತ್ತು. ಸೋದರಮಾವನು ಹುಡುಗನ ದೇಹವನ್ನು ಚಿತೆಯಿಂದ ಹೊರಗೆಳೆದು ಚಟ್ಟಕಟ್ಟಿದ ಹಗ್ಗಗಳನ್ನೆಲ್ಲಾ ಕಡಿದು ಪರೀಕ್ಷಿಸು ಹಾಗ ದೇಹವು ಬೆಚ್ಚಗಾಗಿಯೇ ಇದ್ದಿತು. ಹುಡುಗನ ಬಾಯಿ ಮತ್ತು ಮೂಗಿಗೆ ಹತ್ತಿಯನ್ನು ತುರುಕಿಸಿಡಲಾಗಿತ್ತು ಸ್ವಲ್ಪ ಉಪಚಾರದ ನಂತರ ಹುಡುಗನಿಗೆ ಜೀವ ಬಂತು ಹುಡುಗನ ತಂದೆಯ ಸಹೋದರರು, ಅವನ ಸೊತ್ತೆಲ್ಲಾ ತಮಗೆ ಸಿಗಬೇಕೆಂದು ಅವನನ್ನು ಕೊಲ್ಲಲೆತ್ನಿಸಿದರೆಂದೀಗ ಖಟ್ಲೆಗೊಳಗಾಗಿದ್ದಾರೆ

## ಎಮ್ಮೆ ಮತ್ತು ಚಿರತೆಯ ವಿಚಿತ್ರ ಹೋರಾಟ

ಸಂಯುಕ್ತ ಪ್ರಾಂತದ ಮೈಧಾನ ಎಂಬಲ್ಲಿ ಚಿರತೆಯೊಂದು ರಾತ್ರಿಯಲ್ಲಿ ಎಮ್ಮೆ ಮತ್ತು ಅದರ ಕರುವನ್ನು ಕಟ್ಟಿದ್ದ ಸ್ಥಳಕ್ಕೆ ಬಂದು ಕರುವಿನ ಮೇಲೆ ಹಾರಿ ಅದನ್ನೊಯ್ಯುವುದರಲ್ಲಿದ್ದಿತು. ಅಷ್ಟರಲ್ಲಿ ಎಮ್ಮೆಯು ತನ್ನ ಹಗ್ಗ ಕಡಿದುಕೊಂಡು ಚಿರತೆಯ ಮೇಲೆ ಬಿದ್ದು ಎರಡಕ್ಕೂ ಬಹಳ ಹೊತ್ತು ಜಗಳವಾಗಿ ಎಮ್ಮೆಗೆ ಬಹಳ ಗಾಯಗಳಾದುವು ಅದರೂ ಬಿಡದೆ ಅದು ಚಿರತೆಯನ್ನು ಕೊಂಬುಗಳಿಂದ ಇಡೀ ರಾತ್ರಿ ಗೋಡೆಗೆ ಒತ್ತಿಹಿಡಿಯಿತು. ಬೆಳಿಗ್ಗೆ ಹಳ್ಳಿಗರು ಬಂದು ಚಿರತೆಯ ತಲೆಗ ಕಲ್ಲು ಹೊತ್ತುಹಾಕಿ ಅದನ್ನು ಕೊಂದರು

---

### ಸ್ವೀಕಾರ

ದಿ ಜನರಲ್ ಇನ್ಶ್ಯೂರೆನ್ಸ್ ಸೊ[illegible] ಒವ್ ಇಂಡಿಯಾ ಲಿಮಿಟೆಡ್, ಮಂಗಳ[illegible] ಇದರ 1937ನೇ ಅಭಿವೃದ್ಧಿ ವರದಿ [illegible] ಗತವಾಗಿದೆ ವಿಮರ್ಶೆ ಕ್ರಮಶಃ [illegible]


**WANTED**

Lady saleswoman, Catho[lic] or Protestant for leading cutlery, hardwa[re] and Stationery shop at Ud[upi] town Must be smart, goo[d] looking and of pleasing man-ners, capable of reading an[d] writing English and Kanares[e] Apply with one anna stam[p] stating minimum salar[y] required

'X' C/o Navayuga, Udip[i]

*** ಜಗನ್ಮೋಹಿನೀ ***
**(ಧರ್ಮವಿಜಯ)**

ಲೇಖಕರು—ಪಂಡಿತ ಎಚ್ ರಾಮಾಚಾರ್ಯ

ಇದೊಂದು ಮನೋಹರವಾದ ಕಲ್ಪಿತ ಕಾದಂಬರಿ. ಧರ್ಮಕ್ಕೇ ಜಯವೆಂಬುದನ್ನು ಮನಗಾಣಿಸುವ ಅತ್ಯಪೂರ್ವ ಗ್ರಂಥ.

ಪುಟಗಳು ೨೦೭ --- ಬೆಲೆ ೧-೦-೦

ಚಿತ್ತಾಕರ್ಷಕ ಕಥಾವಸ್ತು!

ಸರಳವಾದ ಶೈಲಿ!!

ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇಬೇಕಾದ ಪುಸ್ತಕ. ರೂ ೧-೨-೦ರ ಸ್ಟಾಂಪು ಕಳುಹಿಸಿದರೆ ಪ್ರತಿ ಕಳುಹಿಸಲಾಗುತ್ತೆ.

ನವಭಾರತ ಬುಕ್ ಡಿಪೋ, ಉಡುಪಿ

ವಿ ಸೂ —ವ್ಯಾಪಾರಸ್ಥರಿಗೆ ಧಾರಾಳ ಡಿಸ್ಕಾಂಟು

# ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

'ಗೊನೊಕಿಲರ್' (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗ ಮರುಳಾಗಿ ಮೋಸ ಹೋಗಬೇಡಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

## ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗ[illegible] ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂ[illegible] ತೀವ್ರರೋಗವಾಗಿದ್ದರೂ, ಗೋನೋರ್‌ಹ್ಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗ[ಳ] ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದ[ಲ್ಲಿ] ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇ[ವೇ] ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ

Sole Manufacturer **Dr. D N. JASANI,** Yitalbhai Patel Road, BOMBAY

# ಶ್ರೀ ರಾಮಕೃಷ್ಣ ಥಿಯೇಟರ್, ಉಡುಪಿ.

## ಚಲಚಿತ್ರ ಸಂಬಂಧವಾದ ಕೆಲವು ಮುಖ್ಯ ವಿಷಯಗಳು —

### ಒಂದನೇ ಪ್ರಕಟಣಾ ಪತ್ರ.

ಚಲಚಿತ್ರವು ಎಷ್ಟು ಪ್ರಾಮುಖ್ಯವಾದುದು, ಒಂದೊಂದು ಚಿತ್ರ ತಯಾರಿಸಲು ಎಂತಹ ಸಿದ್ಧತೆಬೇಕು, ಎಷ್ಟೊಂದು ವೆಚ್ಚಬೇಕೆಂಬುವನ್ನೆಲ್ಲಾ ಹಿಂದೂದೇಶದಲ್ಲಿ ತಿಳಿದವರು ಬಹಳ ಸ್ವಲ್ಪ ಮಂದಿ. ಪ್ರಥಮ ಹಿಂದೀ ಮಾತಾಡುವ ಚಿತ್ರವು ತಯಾರಿಸಲ್ಪಟ್ಟುದು 1931ನೇ ಇಸ್ವಿಯಲ್ಲಿ. ಈಗ ಸುಮಾರು 6 ವರ್ಷಗಳಿಂದ ಈ ಕೈಗಾರಿಕೆಯು ಭರದಿಂದ ಅಭಿವೃದ್ಧಿಹೊಂದುವ ಹಿಂದೀ ಕೈಗಾರಿಕೆಗಳಲ್ಲಿ ಪ್ರಾಮುಖ್ಯತೆಯಲ್ಲಿ ಎಂಟನೇ ಸ್ಥಾನ ಪಡೆದಿದೆ.

ಚಲಚಿತ್ರ ತಯಾರಿಸುವುದು ಅಷ್ಟೊಂದು ಸುಲಭ ಕೆಲಸವೇನೂ ಅಲ್ಲ. ಚಿತ್ರವೊಂದು ತಯಾರಿಸಲ್ಪಡುವಾಗ ಪ್ರತಿಯೊಬ್ಬನ ದೇಹ ಸ್ಥಿತಿಯೂ ಪ್ರಸ್ನಬ್ಧವಾಗಿದ್ದು, ಸಾಮಾನ್ಯ ರಂಗಭೂಮಿಯಲ್ಲಿ ಪ್ರದರ್ಶಿಸಲು ಒಂದು ಮಿನಿಟು ಹಿಡಿಯುವ ದೃಶ್ಯವನ್ನು ಚಲಚಿತ್ರದಲ್ಲಿ ತೆಗೆಯಲು ಕೆಲವು ದಿನಗಳು ತಾಗಬಹುದು. ಒಂದು ಅಕ್ಷರ ಸಂಗತಿಯ ಕುರಿತು ಚಿತ್ರ ತಯಾರಿಸುವವನಿಗಾಗಲಿ, ಧ್ವನಿ ರಿಕಾರ್ಡು ಮಾಡುವವನಿಗಾಗಲಿ ತೃಪ್ತಿಯುಂಟಾಗದಿದ್ದರೆ ಪುನಃ ಪುನಃ ರಿಹರ್ಸಲ್ ಮಾಡಿಕೊಂಡು ಒಮ್ಮೆ ತಿರುತಿರುಗಿ ಪ್ರದರ್ಶಿಸಿ ಚಿತ್ರ ತೆಗೆಯಬೇಕಾಗುವುದು. ಈ ನಡುವೆ ನಟನಟಿಯರು, ದೀಪಗಳ ಪ್ರಖರ ಬೆಳಕಿನಲ್ಲಿ ಬೆವರಿ ಬೇಸತ್ತು ಆರೋಗ್ಯಕ್ಕೆ ಕೂಡಾ ಹಾನಿಯುಂಟಾಗುವುದುಂಟು. 60 ಅಡಿಯುದ್ದ ಒಂದು ದೃಶ್ಯವನ್ನು ಸಂಪೂರ್ಣವಾಗಿ ತೆಗೆಯಬೇಕಾದರೆ 20 ಘಂಟೆ ತಾಗಿ ಅದಕ್ಕಾಗಿ 2000 ಅಡಿ ನೆಗೆಟಿವ್ ಫಿಲ್ಮುಗಳನ್ನು ಉಪಯೋಗಿಸಬೇಕಾದುದುಂಟು. ಇಷ್ಟೆಲ್ಲಾ ಪ್ರಯತ್ನಮಾಡಿ ತಯಾರಿಸಲ್ಪಟ್ಟ 60 ಅಡಿ ಚಿತ್ರವನ್ನು ಪ್ರದರ್ಶಿಸಲು ತಾಗುವುದು 40 ಸೆಕುಂಡ ಮಾತ್ರ. ಶಬ್ದದ ಗೆರೆ ಮತ್ತು ದೃಶ್ಯಗಳನ್ನು ಪ್ರತ್ಯಪ್ರತ್ಯೇಕ ಫಿಲ್ಮುಗಳಲ್ಲಿ ಫೋಟೋ ತೆಗೆದು ಆ ಎರಡು ನೆಗೆಟಿವ್‌ಗಳು ಏಕಕಾಲದಲ್ಲಿ ಒಂದಾಗಿ ಬರುವಂತೆ ಅದನ್ನು ಪುನಃ ಒಟ್ಟಿಗೆ ಪ್ರಿಂಟ್‌ಮಾಡಿ ಇನ್ನೊಂದು ನೆಗೆಟಿವ್ ತಯಾರು ಮಾಡಿ ಆ ಮೇಲೆ ಅದನ್ನು ಸರಿಯಾದ ಚಲಚಿತ್ರವಾಗಿ ಊಹಿಸುವುದೆಂಬುದು ಹಲವರಿಗೆ ತಿಳಿದಿರಲಿಕ್ಕಿಲ್ಲ. ಎಲ್ಲಾ ಕೆಮರಗಳೂ ಮಿನಿಟಿಗೆ 90 ಅಡಿಯಂತೆ ಫೋಟೋ ತೆಗೆಯುವುದರಿಂದ ಒಂದು ಚಲಚಿತ್ರವು ಇಂತಿಷ್ಟು ಉದ್ದವಿದೆಯೆಂದು ಅದರ ಸರ್ಟಿಫಿಕೇಟಿನಿಂದ ತಿಳಿದು ಅದನ್ನು 90ರಿಂದ ವಿಭಾಗಿಸಿದರೆ ಇಡೀ ಚಿತ್ರ ಪ್ರದರ್ಶನಕ್ಕೆ ಎಷ್ಟು ಮಿನಿಟು ತಾಗುವುದೆಂಬುದು ಗೊತ್ತಾಗುವುದು. ಒಂದು ಚಿತ್ರವು 9000 ಅಡಿ ಉದ್ದವಿರುವುದಾದರೆ ಆ ಚಿತ್ರ ನೋಡಲು 90 ಮಿನಿಟು ಕೂತುಕೊಳ್ಳಬೇಕಾಗುವುದು.

### ಸರ್ವಸಾಮಾನ್ಯ ಹಿಂದೀ ಚಿತ್ರವೊಂದರ ವೆಚ್ಚ

ಸರ್ವಸಾಧಾರಣ ಹಿಂದೀ ಅಥವಾ ಉರ್ದು ಚಿತ್ರ ತಯಾರಿಸಲು ಸುಮಾರು ರೂ. 60,000 ತಾಗುವುದು. ಇದರಲ್ಲಿ ರೂ 18,000 ಕಚ್ಚಾ ಫಿಲ್ಮ್ ಮತ್ತು ಲೆಬೋರೇಟರಿ ವೆಚ್ಚಕ್ಕಾಗಿ, ರೂ 12,000 ಫಿಲ್ಮ್ ಸ್ಟುಡಿಯೋ ಬಾಡಿಗೆಗಾಗಿ, ರೂ 15,000 ನಟನಟಿಯರ ಸಂಬಳಕ್ಕಾಗಿ ರೂ 5000 ಪ್ರಚಾರಕಾರ್ಯಕ್ಕಾಗಿ ಮತ್ತು ರೂಪಾಯಿ 10,000 ಉಡಿಗೆ ತೊಡಿಗೆ, ಕಿಡ, ಹಾಡು, ಸಿನೆರಿಯೋ ಮೊದಲಾದುವುಗಳಿಗಾಗಿ ವ್ಯಯವಾಗುವುದು. ಆದರೆ ನಾಯಕ ಅಥವಾ ನಾಯಿಕೆಯ ಕಾಹಿಲೆಯೇ ಮೊದಲಾದ ಅನಿರೀಕ್ಷಿತ ವಿದ್ಯಮಾನವೇನಾದರೂ ನಡೆದರೆ ಈ ಸಂಖ್ಯೆಯು ಬಹಳವಾಗಿ ಹೆಚ್ಚುವುದು.

ಹಿಂದೂದೇಶದ ಚಲಚಿತ್ರ ಕಂಪೆನಿಯವರು ಹಿಂದೀ ಚಲಚಿತ್ರ ಕೈಗಾರಿಕೆಯ ಕುರಿತು ತಯಾರಿಸಿರುವ ಈ ಕೆಳಗಣ ಕೆಲವು ಅಂಕೆ ಸಂಖ್ಯೆಗಳು ಸದ್ರಿ ಕೈಗಾರಿಕೆಯ ಸಾಂಪತ್ತಿಕ ಪ್ರಾಮುಖ್ಯತೆ ಮತ್ತು ಇನ್ನು ಮುಂದಿನ ಅದರ ವ್ಯಾಪಕತೆಯನ್ನು ವ್ಯಕ್ತಪಡಿಸುವವು.

ಈಗ ಹಿಂದೂದೇಶದಲ್ಲಿ ಚಲಚಿತ್ರ ತಯಾರಿಸುವ 110 ಸಂಸ್ಥೆಗಳಿವೆ. ಚಿತ್ರಗಳನ್ನು ಹಂಚುವವುಗಳು 99 ಮತ್ತು ಸಿನೆಮಗಳು 670 ಇವೆ. ಸಿನೆಮ ತಯಾರಿ, ಹಂಚುವಿಕೆ ಮತ್ತು ಪ್ರದರ್ಶನದಲ್ಲೆಲ್ಲಾ ಒಟ್ಟು ವಿನಿಯೋಗಿಸಲ್ಪಟ್ಟ ಬಂಡವಾಳವು ರೂ 5 ಕೋಟಿಗಿಂತ ಹೆಚ್ಚಿದೆ. ಮತ್ತು ಈ ಕೈಗಾರಿಕೆಯಲ್ಲಿ ಪ್ರತ್ಯಕ್ಷವಾಗಿ ಕೆಲಸಮಾಡುವವರು ಸುಮಾರು 25,000 ಮಂದಿ ಇರುತ್ತಾರೆ.

ಹಿಂದೀ ಮಾತಾಡುವ ಚಲಚಿತ್ರಗಳು ಹಿಂದೀ, ಉರ್ದು, ಬಂಗಾಳಿ, ತಮಿಳು, ತೆಲುಗು, ಬರ್ಮೀಸ್, ಕನ್ನಡ, ಗುಜರಾಥಿ, ಪಂಜಾಬಿ, ಒರಿಯ, ಮರಾಠಿ ಮತ್ತು ಪರ್ಶಿಯನ್ ಭಾಷೆಗಳಲ್ಲಿ ತಯಾರಿಸಲ್ಪಡುತ್ತವೆ.

ಅತಿ ಹೆಚ್ಚೆಂದರೆ ಹಿಂದೀ ನಟಿಯೊಬ್ಬಳಿಗೆ ತಿಂಗಳೊಂದರ ರೂ. 7000 ಸಂಬಳ ದೊರೆಯುತ್ತದೆ. ಹಿಂದೀ ನಟನಿಗೆ ದೊರೆಯುವ ಅತಿ ಹೆಚ್ಚಿನ ಸಂಬಳ ತಿಂಗಳೊಂದರ ರೂ 2000. ಆದುದರಿಂದ ಚಲಚಿತ್ರ ಕೈಗಾರಿಕೆಯು ಪ್ರತಿಭಾಸಂಪನ್ನರಾದ ಹಲವು ಮಂದಿ ಸ್ತ್ರೀಪುರುಷರಿಗೆ ಒಳ್ಳೇ ಉದ್ಯೋಗ ಮತ್ತು ಭವಿಷ್ಯವನ್ನೊದಗಿಸಿಕೊಡುವುದು.

ಕೆಲವು ಹಿಂದೀ ಚಲಚಿತ್ರ ಕಂಪೆನಿಗಳವರು ಅಮೇರಿಕದ ಹಾಲಿವುಡ್ಡಿನಲ್ಲಿ ತಯಾರಾದ ಚಿತ್ರಗಳಷ್ಟೇ ಉತ್ತಮವಾದ ಚಿತ್ರಗಳನ್ನು ತಯಾರಿಸುತ್ತಾರೆ. ಇವುಗಳಲ್ಲಿ ಪ್ರಭಾತ ಮತ್ತು ನ್ಯೂಥಿಯೇಟರ್ಸ್ ಕಂಪೆನಿಗಳು ಪ್ರಥಮ ಸ್ಥಾನಪಡೆದಿವೆ. ಪ್ರಭಾತ ಕಂಪೆನಿಯವರು ತಯಾರಿಸಿರುವ ಅಮರಜ್ಯೋತಿ ಮತ್ತು ತುಕಾರಾಮ ಚಿತ್ರಗಳೂ, ನ್ಯೂಥಿಯೇಟರ್ಸಿನ ಪ್ರೆಸಿಡೆಂಟ್ ಚಿತ್ರವೂ ವಿಯೆನ್ನದ ಅಂತರ ರಾಷ್ಟ್ರೀಯ ಚಲಚಿತ್ರ ಪ್ರದರ್ಶನದಲ್ಲಿ ಪ್ರಶಂಸೆ ಮತ್ತು ಇನಾಮುಗಳನ್ನು ಪಡೆದಿವೆ.

ಇದೇ ತಾ 30ರಿಂದ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುವ ಪ್ರಭಾತ ಕಂಪೆನಿಯವರು ಇತ್ತಲಾಗಿ ತಯಾರಿಸಿರುವ ಸಂತ **ತುಕಾರಾಮ** ಚಿತ್ರವು ಬೊಂಬಾಯಿ ಮತ್ತು ಇತರ ಕಡೆಗಳಲ್ಲಿ ತಿಂಗಳು ಗಟ್ಲೆಯಲ್ಲಿ ಪ್ರದರ್ಶಿಸಲ್ಪಟ್ಟು, ಜನಸ್ತೋಮದ ಕಣ್ಮನವನ್ನು ಸೂರೆಗೊಂಡಿರುತ್ತದೆ. ಇದು ಅತ್ಯುತ್ತಮ ಭಕ್ತಿಪರ ಚಿತ್ರಗಳಲ್ಲೊಂದೆಂದು ಪರಿಗಣಿಸಲ್ಪಟ್ಟಿದೆ.

ಈ ಚಿತ್ರವನ್ನು ನಮ್ಮ ಥಿಯೇಟರಿನಲ್ಲಿ ಜನರ ಪ್ರಯೋಜನಾರ್ಥವಾಗಿ ಪ್ರದರ್ಶಿಸಬೇಕೆಂದು ನಾವು ಬಹಳ ದಿನಗಳಿಂದ ಅಂದರೆ ಎರಡು ತಿಂಗಳಿಂದ ಈ ಸಂಬಂಧವಾಗಿ ಪತ್ರ ವ್ಯವಹಾರ ನಡಿಸಿದ್ದೆವು.

ಈ ಉತ್ತಮೋತ್ತಮವಾದ ಚಿತ್ರವನ್ನು ತಯಾರಿಸಲು ಸರ್ವಸಾಮಾನ್ಯ ಚಿತ್ರಕ್ಕಿಂತ ಎಷ್ಟೋ ಪಾಲು ಹೆಚ್ಚು ಹಣ ತಗಲಿರುವುದು. ಇದನ್ನು ನಮ್ಮ ಥಿಯೇಟರಿನಲ್ಲೊಮ್ಮೆ ಪ್ರದರ್ಶಿಸುವ ಆತುರದಿಂದ ನಾವು ಹಣಕ್ಕಾಗಲಿ, ಶ್ರಮಕ್ಕಾಗಲಿ ಆಶೆಮಾಡಿರುವುದಿಲ್ಲ.

ಈ ಚಿತ್ರವನ್ನು ನಾವು ತಾ 30—9—37ರಿಂದ ಪ್ರದರ್ಶಿಸಲಾರಂಭಿಸುತ್ತೇವೆ. ನಮ್ಮ ಮಿತ್ರರು, ಆಶ್ರಯದಾತರು, ಹಿತಕಾಂಕ್ಷಿಗಳು ಮತ್ತು ನಮ್ಮ ಮೇಲೆ ದಯಾಸಹಾನುಭೂತಿಯುಳ್ಳವರೆಲ್ಲಾ ಈ ಮಹತ್ವಾದ ಚಿತ್ರವನ್ನು ಅವರ ಪ್ರಯೋಜನಾರ್ಥವಾಗಿ ನಮ್ಮ ಥಿಯೇಟರಿನಲ್ಲಿ ಪ್ರದರ್ಶಿಸುವ ಸಂಯೋಗವನ್ನು ಕಳಕೊಳ್ಳದೆ ಅಗತ್ಯವಾಗಿ ಬಂದು ನೋಡಿ ಆನಂದಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಸಂತ ತುಕಾರಾಮ ಚಿತ್ರವು ಶಾಶ್ವತವಾದ ಪ್ರಯೋಜನದ, ಎಲ್ಲಾ ಜನರಿಗೂ ಬೇಕಾದ, ಎಲ್ಲಾ ಕಾಲ, ದೇಶಗಳಿಗೂ ಅಗತ್ಯವಾದುದಿರುತ್ತದೆ. ಯಾಕಂದರೆ ದೇವನೊಬ್ಬನು ಸರ್ವರ ಪಿತ, ಆದ್ದರಿಂದ ಮಕ್ಕಳಾದ ಮಾನವರೆಲ್ಲರೂ ಸಹೋದರರೆಂಬುದನ್ನು ಹೃದಯಂಗಮಗೊಳಿಸುವ ಅತ್ಯಂತ ಬೋಧಪರ ಚಿತ್ರವಿದು. ಈಶ್ವರನು ವಿಶ್ವವ್ಯಾಪಿಯು. ಆ ವಿಶ್ವವ್ಯಾಪಿಯಾದ ದೈವತ್ವದ ಗುಣವೆಂದರೆ ಮಾನವ ಸಹೋದರರ ಮೇಲಿನ ಪ್ರೇಮವೇ ಎಂಬುದನ್ನು ಬೋಧಿಸಿ ನಮ್ಮ ಅಂತರಾತ್ಮವನ್ನು ವಿಕಾಸಿಸಿ ಪ್ರಕಾಶಗೊಳಿಸುವ ಪವಿತ್ರ ಚಿತ್ರವಿದು.

ಈ ಚಿತ್ರವು ವೆನಿಸ್‌ನಲ್ಲಿ ನಡೆದ 'ಇಂಟರ್ ನೇಶನಲ್ ಎಗ್ಸಿಬಿಷನ್'ನಲ್ಲಿ ಬಹುಮಾನವನ್ನು ಪಡೆದು, ಮುಂಬಾಯಿಯಲ್ಲಿ ೪೨ ವಾರಗಳ ಪರ್ಯಂತರ ಒಂದೇ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುತ್ತಾ ಇದುವರೆಗೂ ತಯಾರಿಸಲ್ಪಟ್ಟ ಫಿಲ್ಮುಗಳಲ್ಲಿ ಸರ್ವೋತ್ಕೃಷ್ಟವಾದುದೆಂದು ಪ್ರಸಿದ್ಧವಾಗಿರುವುದು.

ಪರವೂರುಗಳಿಂದ ಬರುವ ಜನರಿಗೆ ಅದೇ ದಿವಸ ೫ ಘಂಟೆಯ ಬಸ್ಸಿನಲ್ಲಿ ಊರಿಗೆ ಹಿಂದೆ ಹೋಗುವ ಸೌಕರ್ಯಕ್ಕಾಗಿ ತಾರೀಕು ೧—೧೦—೩೭ರಿಂದ ಪ್ರತಿ ದಿನ ೨ ಘಂಟೆಗೆ ಮೆಟಿನಿ ಇದೆ.

ಇಂತಹ ಸಂದರ್ಭ ಬರುವುದು ಜೀವನದಲ್ಲೊಮ್ಮೆ. ಉತ್ಕೃಷ್ಟ ನಟನಟಿಯರ ಸಹಾಯದಿಂದ, ಮಿಲ್ಯಾಂತರ ಹಿಂದುಗಳ ಪ್ರಯೋಜನಾರ್ಥವಾಗಿ ಅಪಾರವೆಚ್ಚದಿಂದ ತಯಾರಿಸಲ್ಪಟ್ಟಿರುವ ಈ ಧಾರ್ಮಿಕ ಹಾಗೂ ಪವಿತ್ರ ಚಿತ್ರವನ್ನು ನೋಡುವ ಸುಯೋಗವನ್ನು ಕಳಕೊಳ್ಳಬೇಡಿರಿ.

**ಟಿಕೇಟಿನ ದರ:—** ಸೋಫಾ ೧—೨—೦, ಸ್ಪೆಶಲ್ ಕುರ್ಚಿ ೦—೯—೬, ಗೆಲರಿ ೦—೫—೧೧ ಬೆಂಚು ೦—೪—೦. ೨೯ ದೇಖಾವಗಳಿಗೆ ಸೀಜನ್ ಟಿಕೇಟುಗಳು ಸಹಾ ದೊರೆಯುತ್ತವೆ. I ಕ್ಲಾಸ್ ೫—೦—೦, II ಕ್ಲಾಸ್ ೩—೦—೦. ಸೀಟು ಒಂದರ ೦—೪—೦ ಹೆಚ್ಚಿಗೆ ಕೊಟ್ಟಲ್ಲಿ ರಿಜರ್ವ್‌ಮಾಡಿಸಿ ಇಡಲಾಗುವುದು. ಘೋಷಾಸ್ತ್ರೀಯರಿಗೆ ಪರದಾ ಸೌಕರ್ಯಗಳಿವೆ.

## ನಮ್ಮ ಜಿಲ್ಲೆಯ ಭೂಮಾಲಿಕ ಸಂಘದವರ ಶಿಷ್ಟ ಮಂಡಳ

ಶ್ರೀಗಲಾದ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು, ಶ್ರೀಗಳಾದ ವೆಂಕಟ್ರಾಯ ಬಾಳಿಗರು, ಕೆ ಈಶ್ವರನವರು ಮಹಮ್ಮದ್ ಚಮ್ನಾಡರು, ಡಾ। ವಿಠಲ ಶೆಟ್ಟಿ, ಮೊಕಹಳ್ಳಿ ಶಿವರಾಯರು ಬೆಳ್ತಂಗಡಿ ಮಂಗೇಶರಾಯರು, ಬೈಲೂರು ವಾಸುದೇವರಾಯರು ಜಿನರಾಜ ಹೆಗ್ಡೆಯವರು, ಚಂದು ನಂಬಿಯಾರರು, ಹುಸ್ಸೆನ್ ಸಾಹೇಬರು, ಎ ಲಕ್ಷ್ಮೀನಾರಾಯಣರಾವ್ ಖಂಡಿಗೆ ವ ಹಾಲಿಂಗ ಬಟ್ಟ, ಇವರುಗಳನ್ನೊಳಗೊಂಡ ಶಿಷ್ಟ ಮಂಡಲವು ಇದೇ ತಾ 12ರಲ್ಲಿ ಮಂಗಳೂರಿನಿಂದ ಹೊರಟು ಮದ್ರಾಸಿಗೆ ಹೋಗಿ ತಾ 13ರಲ್ಲು ಮಾನ್ಯ ರೆವಿನ್ಯು ಮಂತ್ರಿಗಳನ್ನು ಭೆಟ್ಟಿಯಾಗಿ ಜಿಲ್ಲೆಯ ಭೂಮಾಲೀಕರ ಹಾಗೂ ರೈತರ ಸಂಕಷ್ಟಗಳನ್ನು ನಿವೇದಿಸಿಕೊಳ್ಳಲಿಕ್ಕೆಂದು ಮೊದಲೇ ಅರ್ಜಿ ಸಹಿತ ಮನವಿಯನ್ನು ಮುಖ್ಯಮಂತ್ರಿಗಳಿಗಿತ್ತು ಮುಖ್ಯ ಸಂಗತಿಗಳನ್ನು ತಿಳಿಸಿದರು. ಅವುಗಳಲ್ಲಿ ಮುಖ್ಯವಾದ ಬೇಡಿಕೆಗಳು ಇವು (1) ರಿಸೆಟ್ಲ್‌ಮೆಂಟಿನ ಪ್ರಕಾರ 1902ಕ್ಕಿಂತ ಸೆಟ್ಲ್‌ಮೆಂಟ್ ತೀರ್ವೆಯ ಮೇಲೆ ಏರಿಸಿದ ಶೇಕಡಾ ೧೨॥ ತೆರಿಗೆಯನ್ನು ರದ್ದು ಪಡಿಸುವುದು (2) ಮಲೆನಾಡುಗಳಲ್ಲಿ 1931ರಲ್ಲಿ ಸೆಟ್ಲ್‌ಮೆಂಟ್ ಆಫೀಸರರು ಶಿಫಾರಸು ಮಾಡಿದ ಪ್ರಕಾರ ಗ್ರೂಪ್ ಮತ್ತು ತರಂಗಳನ್ನು ಕಡಿಮೆಯಾಗಿ ಇಡುವುದು ಮತ್ತು ಈ ಪದ್ಧತಿಯನ್ನು ಉಡುಪಿ, ಕುಂದಾಪುರ, ಪುತ್ತೂರು ಮತ್ತು ಕಾರ್ಕಳ ತಾಲೂಕುಗಳ ಗ್ರಾಮಗಳಿಗೆ ಅನ್ವಯಿಸುವಂತೆ ಏರ್ಪಡಿಸುವುದು (3) ತೀರ್ವೆಯನ್ನು ಅರ್ಧದಿಂದ ಮೂರನೇ ಒಂದಂಶಕ್ಕೆ ಇಳಿಸುವುದು. (4) ಬತ್ತದ ಕ್ರಯವನ್ನು ಇನ್ನೊಮ್ಮೆ ನಿರ್ಣಯಮಾಡಿ ಎಕ್ರೆಗೆ ರೂ. 3 ರಂತೆ ತೀರ್ವೆ ನಿಶ್ಚಯಿಸುವುದಲ್ಲವೆ, ಕಡಿಮೆ ಉತ್ಪತ್ತಿಯ ಭೂಮಿಗೆ ಬೆಳೆಯ ಅಂದಾಜಿನ ಮೇಲೆ ಇನ್ನು ತೀರ್ವೆಯನ್ನಿಳಿಸುವುದು (5) 115 ಗ್ರಾಮಗಳ ಸ್ಪೆಶಲ್ ಗ್ರೂಪನ್ನು ರದ್ದುಪಡಿಸುವುದು (6) ತೀರ್ವೆ ಕೊಡುವುದಕ್ಕೂ ಸಾಕಾಗದೆ ಇರುವ ತೋಟ ಮತ್ತು ಮನೆಜಡಿ ಸ್ಥಳಗಳಿಗೆ ತೀರ್ವೆ ಇಲ್ಲದಂತೆ ಮಾಡುವುದು (7) ಸಣ್ಣ ... ವೃತ್ತಿ ... ಮಾಡಿ ... ಸರ್ಕಾರ ... ಇದೇ ... ಆಗ ಪಾರ್ಲಿಮೆಂಟರಿ ... ಶ್ರೀ ಕೆ ಆರ್. ಕಾರಂತ ಶ್ರೀ ಎ ವಿ ಶೆಟ್ಟಿ, ಮತ್ತು ಶ್ರೀ ... ಗಳು ಮಂತ್ರಿಗಳ ಹತ್ತಿರ ಹಾಜರಿದ್ದರು ಮಂತ್ರಿಗಳು ಎಲ್ಲವನ್ನು ಕೇಳಿ ತಿಳಕೊಂಡು ತಾವು ಸರಿಯಾಗಿ ಪರ್ಯಾಲೋಚಿಸುತ್ತೇವೆಂಬುದಾಗಿ ಜರವಸ ಹೇಳಿದರು

## ಬೀಡಿ ಕೆಲಸಗಾರರ ಮುಷ್ಕರ

ಕೆಲಸಗಾರರ ಸೌಕರ್ಯದ ಕಡೆಗೆ ಗಮನವೀಯದಿರುವುದರಿಂದಲೂ ಕೆಲಸಗಾರರಲ್ಲಿ ತಾರತಮ್ಯವನ್ನಿಡುವುದರಿಂದಲೂ, ಕೆಲಸಗಾರರನ್ನು ತೊಂದರೆ ಪಡಿಸುವುದರಿಂದಲೂ ತಮ್ಮ ಅಹವಾಲುಗಳನ್ನು ಹೇಳಿದರೂ ಯೂನಿಯನ್ ಮುಖಾಂತರ ಹೇಳಿ ಕಳುಹಿಸಿದರೂ ಮಾಲಿಕರು ಗಮನವಿಡದಿರುವುದರಿಂದಲೂ ಮಂಗಳರ ಸುವಾಸಿನೀ ಬೀಡಿ ವರ್ಕ್ಸ್‌ನ 40ಮಂದಿ ಬಡ ಕೆಲಸಗಾರರು ಮುಷ್ಕರ ಹಿಡಿದಿರುವರು.


—≡ ಟೆಲಿಗ್ರಾಫ್ ಡೆಮ್ಮಿಗಳು ≡—

(TELEGRAPH DUMMY)

With Signal Plate ● Price Re 1-12-0

ಮನೆಯಲ್ಲೇ ಸ್ವತಃ ಟೆಲಿಗ್ರಾಫ್ ಕಲಿಯಲು ಅತ್ಯುಪಯುಕ್ತವಾದ್ದು ಸಿಗ್ನಲ್ ಸಹಿತ.

ಬೆಲೆ 1-12-0. ಪೋಸ್ಟೇಜು ಉಚಿತ

(ಹಣವನ್ನು ಮುಂಗಡ ಕಳುಹಿಸಿದರೆ ಮಾತ್ರ)

— ಎಚ್. ಎನ್. ರಾವ್ ಬ್ರದರ್ಸ್ —

ಚಿಕ್ಕಪೇಟೆ ........ ಬೆಂಗಳೂರು ಸಿಟಿ.



ನೀವು ಉಡುಪಿಗೆ ಬಂದಾಗ ಊಟಕ್ಕೆಲ್ಲಿ ಹೋಗುವುದೆಂದು ಯೋಚಿಸುವಿರೇಕೆ-?

ಹೈಸ್ಕೂಲುಗಳ ಕೋರ್ಟು ಕಚೇರಿಗಳ ಹೆಚ್ಚೇಕೆ? ಯಾವತ್ತೂ ವ್ಯವಹಾರ ಕ್ಷೇತ್ರಗಳ ಕೇಂದ್ರದಲ್ಲಿ ತಾಲೂಕು ಕಚೇರಿ ಎದುರಿಗಿದೆ

ಸುಖನಿವಾಸ, ಉಡುಪಿ

ರುಚಿಯಾದ ಪಾನ, ಭೋಜನ, ಶುಚಿಯಾದ ಸ್ಥಳಾವಕಾಶಗಳು, ಗ್ರಾಹಕರನ್ನು ತೃಪ್ತಿಗೊಳಿಸುವ ಧ್ಯೇಯಕ್ಕನುಸಾರವಾದ ವ್ಯವಸ್ಥೆಗಳು

ಉಡುಪಿಯ ಆದರ್ಶ ಉಪಹಾರ ಗೃಹ ಮತ್ತು ಊಟದ ಹೋಟೆಲು

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಪ್ರೊಪ್ರೈಟರ್ಸ್: ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.



# ADMIRATION!

**ರಾಮರಾವ್:—** Hullo! Good morning Mr. Mohan Rao! ಈಗ ಉಡುಪಿಯಿಂದ ಬರುವುದು ತಾನೆ?

**ಮೋಹನರಾವ್:—** Yes Mr Rama Rao, ನಾಳೆಯೇ ಮದ್ರಾಸಿಗೆ ಹೊರಡಬೇಕಾದ್ದರಿಂದ ಇಂದೇ ಬಂದು ಬಿಟ್ಟೆ.

**ಮನೋರಮಾ:—** ನಮ್ಮಲ್ಲಿ ಎರಡು ದಿನವುಳಿದು ಹೋಗಬೇಕೆಂದು ನಾನು ಹೇಳಿದ್ದಲ್ಲೆ? ಇದೇನೀ ಗಂಟು ಮೂಟೆಗಳು?

**ಮೋಹನರಾವ್:—** ಉಡುಪಿಯಿಂದ ತಂದ ಸಾಮಾನುಗಳು.

**ಮನೋರಮಾ:—** ಇಸ್ಸಿ! ಉಡುಪಿಯಿಂದ! ನಿಮಗೆ ಮದ್ರಾಸಿನವರಿಗೆ ಉಡ್ಪಿಯ ಸಾಮಾನುಗಳೇಕೆ?

**ಮೋಹನರಾವ್:—** ನಿನಗೆ ಅದೇ ಗೊತ್ತು. ಉಡುಪಿಯಿಂದ ತಂದ ಮಾತ್ರಕ್ಕೇನಾಯಿತು? ನಿಜವಾಗಿಯೂ ಉಡುಪಿಯು ಇಷ್ಟು ಮುಂದುವರಿದಿರುವುದೆಂದು ನನಗೆ ತಿಳಿದಿರಲಿಲ್ಲ. ಅಲ್ಲಿಯ ವರ್ತಕರು ಮಂಗಳೂರಿನವರಿಗಿಂತಲೂ ಮುಂದ ಡಿಯಿಟ್ಟಿದ್ದಾರೆನ್ನಬಹುದು.

**ರಾಮರಾವ್:—** ಏಕೆ ಹಾಗನ್ನುತ್ತೀರಿ? ಉಡ್ಪಿ ನಿಮ್ಮ ಹುಟ್ಟೂರೆಂದೊ?

**ಮೋಹನರಾವ್:—** ಛೆ! ಛೆ! ಹಾಗಲ್ಲ. ನೋಡು ಅಲ್ಲಿ ಸಂತೆ ಕಟ್ಟೆಯಲ್ಲಿ 'New Glass Emporium' ಎಂಬದೊಂದು ಗ್ಲಾಸ್‌ವೇರಿನ ಅಂಗಡಿ ಹೊಸತಾಗಿ ತೆರೆಯಲ್ಪಟ್ಟಿದೆ ನೋಡು. ನಾನು ತಿರುಗಾಡುತ್ತಿದ್ದಾಗ ಅದು ನನ್ನ ಮನಸ್ಸನ್ನಾಕರ್ಷಿಸಿತು. ಅಲ್ಲಿಗೆ ಹೋದೆ. ನೋಡುವುದೇನು! ಅಲ್ಲಿಯ ವ್ಯವಸ್ಥೆ, ಕೆಲಸಗಾರರ ನಡೆನುಡಿ ಇವನ್ನೆಲ್ಲಾ ನೋಡಿ ನನಗಾನಂದವಾಯಿತು. ಗ್ಲಾಸಿನ ಯಾವತ್ತೂ ಸಾಮಾನುಗಳೂ ಇತರ ಸಾಮಗ್ರಿಗಳೂ ಅಲ್ಲಿವೆ. ನಾನು ಈ ಕೆಲವು ಸಾಮಾನುಗಳನ್ನು ಅಲ್ಲೇ ಕೊಂಡುಕೊಂಡೆ. ಅದರ ಪ್ರೊಪ್ರೈಟರರಾದ ಕೆ. ಆರ್. ಬಾಳಿಗರು ನನ್ನನ್ನು ಅವರ General Stores ಎಂಬ ಇನ್ನೊಂದು ಅಂಗಡಿಗೆ ಕರಮೊಯ್ದರು. ಅಲ್ಲಿ ಇಲ್ಲದ ಸಾಮಾನುಗಳೇ ಇಲ್ಲ. General Stores ಎಂಬ ಹೆಸರು ಅನ್ವರ್ಥವಾದುದು ನೋಡು. ರಾಮರಾವ್, ಅಲ್ಲಿಯೂ ಕೆಲವು ಸಾಮಾನುಗಳನ್ನು ಕೊಂಡುಕೊಂಡೆ.

**ಮನೋರಮಾ:—** ಈ ಬಟ್ಟೆ, ಫೇನ್ಸಿ ಸಾಮಾನು ಎಲ್ಲವೂ ಅಲ್ಲಿಯವೇ?

**ಮೋಹನರಾವ್:—** ಮತ್ತೆ ನಾನು ಹೇಳುವುದೇನು? ದರವೂ ಅಗ್ಗ, ಮಾಲೂ ಉತ್ತಮ.

**ರಾಮರಾವ್:—** ಮೊನ್ನೆ ನಮ್ಮ ಸದಾಶಿವರಾಯರು ಉಡ್ಪಿಯ ಒಂದು ಅಂಗಡಿಯ ವಿಷಯ ಮೆಚ್ಚಿಕೆ ಸೂಚಿಸಿದ್ದರು. ಬೇರೆ ಬೇರೆ ಸಾಮಾನುಗಳಿಗಾಗಿ ಹತ್ತಿಪ್ಪತ್ತು ಕಡೆಗಳಿಗೆ ಹೋಗುವುದಕ್ಕಿಂತ ಆ ಒಂದೇ ಅಂಗಡಿಗೆ ಹೋಗುವುದು ಲೇಸೆಂದಿದ್ದರು. ಪ್ರಾಯಶಃ ಅದು ಇದೇ ಜನರಲ್ ಸ್ಟೋರ್ಸ್ ಆಗಿರಬೇಕು.

**ಮನೋರಮಾ:—** ಹಾಗಾದರೆ ನಾವು ಲಕ್ಷ್ಮ ದೀಪೋತ್ಸವಕ್ಕೆ ಉಡ್ಪಿಗೆ ಹೋಪವರು ಅಲ್ಲಿಗೊಮ್ಮೆ ಹೋಗಲೇ ಬೇಕು. ಕೆಲವು ಸಾಮಾನು ಕೊಡಕೊಳ್ಳಲೇ ಬೇಕು.

**ಮೋಹನರಾವ್:—** ಅವರು ಪ್ರಮುಖ ವ್ಯಾಪಾರಿಗಳು. ಸುತ್ತುಮುತ್ತಲಿನವರಿಗೆಲ್ಲಾ ಅವರೇ ರಖಂ ಆಗಿ ಸಪ್ಲೈ ಮಾಡುತ್ತಿದ್ದಾರೆ.

**ರಾಮರಾವ್:—** ಹಾಗಾದರೆ ಉಡ್ಪಿಗೆ ಹೋದಾಗ I will pay a visit to- **General Stores, UDIPI.**

**ಮನೋರಮಾ:—** And **The New glass Emporium** too! we shall not forget them

ಕಸ್ತೂರಿ ಮಿಶ್ರಣ ದಶಮೂಲವೆಂಬ

# ಸೂತಿಕಾ ರಸಾಯನ

**ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.**

I **ಶೋಧನ ಗುಣ** —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು

III **ಸುಖಸೇವನ** —ಸುಖಸೇವನದಿಂಡ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.



# ಪುಸ್ತಕಗಳು

ಯಾವ

ಕನ್ನಡ ಪುಸ್ತಕ ಬೇಕಾದರೂ

ಮೊದಲು ನಮ್ಮೊಡನೆ ವಿಚಾರಿಸಿರಿ

ನವಭಾರತ ಬುಕ್ ಡಿಪೊ,

ಉಡುಪಿ.



CHEAPEST SAFEST INDUSTRIAL

INSURE WITH A PRESENT

RANJIT

BIMA CO. LTD. AMRITSAR

FOR HONOURABLE JOB



# ಭಾಷಾಂತರ

ಕೆಲಸವನ್ನು ಕೈಕೊಳ್ಳಲಾಗುತ್ತದೆ.

ಮಾಹಿತಿಗೆ ಬರೆಯಿರಿ

"ಟ್ರಾನ್ಸ್‌ಲೇಟರ್"

'ಕಿರಿಯರ ಪ್ರಪಂಚ'

ಉಡುಪಿ.

**TRANSLATION**

WORK IS UNDERTAKEN

For further particulars

*Please write to*

TRANSLATOR,

*Kiriyara Prapancha*

UDIPI



THE

# *Vijaya Bank, Ltd.*

**Head Office MANGALORE** Branch Offices **Udipi Kaup & Coondapoor**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ

ಚಾಲ್ತಿ ರೇವಣಾತಿಗಳು ಸಾ ಶೆ 2 ಸೇವಿಂಗ್ಸ ಬ್ಯಾಂಕ್ ರೇವಣಾತಿಗಳುಸಾ ಶೆ. $3\frac{1}{2}$

ಕಾಯಂ ರೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ $3\frac{1}{2}$

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4 1 ವರ್ಷದ ಬಾಬ್ತು ಸಾ ಶೆ 5.

2 ವರ್ಷದ ಮೇಲಿನವುಗಳ ಬಾಬ್ತು ಸಾ ಶೆ $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು

ರೂ 1ರಿಂದ 100ರ ವರೆಗೆ ಸಾ ಶೆ 8 101ರಿಂದ 500ರ ವರೆಗೆ ಸಾ. ಶೆ 7

501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ ಶೆ 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ ಫಾರಂಗಳು ದೊರೆಯುತ್ತವೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

**A B Shetty,** ಚೆಯರ್‌ಮೇನ್

**K Gopalakrishna Shetty** ಸೆಕ್ರಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು



# ಕಿರಿಯರ ಪ್ರಪಂಚದ ಪುಸ್ತಕಗಳು.

| | | | | | | | |
|---|---|---|---|---|---|---|---|
| ನಾಡಕಥೆಗಳು | ೦ | ೨ | ೦ | ಪುರಷವಧು | ೦ | ೪ | ೦ |
| ಮುಂದಿನ ದೇವರು | ೦ | ೨ | ೦ | ಸಂಶಯ ಪಿಶಾಚಿ | ೦ | ೬ | ೦ |
| ಸ್ವತಂತ್ರ ಜೀವನೋಪಾಯ | ೦ | ೨ | ೬ | ವ್ಯಭಿಚಾರಿಣಿ ಯಾರು? | ೦ | ೮ | ೦ |
| ಕುಶ ಲವ | ೦ | ೬ | ೦ | ಕಾವ್ಯಸಾಮ್ರಾಜ್ಯ | ೦ | ೧೨ | ೦ |
| ಹೆಂಡ್ತಿ ಗಂಡನಾದರೆ! | ೦ | ೪ | ೦ | ಮದುವನ | ೧ | ೮ | ೦ |

ಸೋಲ್ ಏಜಂಟರು:— **ನವಭಾರತ ಬುಕ್ ಡಿಪ್ರೊ, ಉಡುಪಿ**



ಅತ್ಯುತ್ತಮ ಸೇವಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

# 'ಕುಶಾ' (ರಿಜಿಸ್ಟರ್ಡ್) ಫೌಂಟನ ಪೇನಿನ 'ಶಾಯಿ'

# 'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ'

**ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ**

*Sole distributors* —**V V Kamath & Bros Mangalore**



# ಕಸಿಗಿಡಗಳು.

**ಸಪೋಟಿಲ್ಲ (ಚಿಕ್ಕು)**—ಈ ಮರವು ಚಿಕ್ಕೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೪ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಎಲ್ಲಾ ವರಗಳೂ ಹಣ್ಣಾಗುವದು ಎಕ್ರೆಯಲ್ಲಿ ವರ್ಷಕ್ಕೆ ರೂ ಸಾವಿರದ ಮೇಲೆ ಉತ್ಪತ್ತಿಯಾಗುವದು

ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು ಗಿಡವೊಂದರ ಕ್ರಯ ರೂ ೧ ೦ ೦ ಮಾತ್ರ

ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ

ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಕೆ. ಎಮ್. ಸೆಟ್ಟಿ, **ಕೆನರಾ ನರ್ಸರಿ,**

ಪ್ರೊಪ್ರೈಟರ್ —ಕಾಪು, ದ ಕ.



# ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

**ಕೋಲೆರಾ ಫಿಲ್ಸ್**

ಕೋಲೆರಾ ರೋಗಕ್ಕೆ ರಾಮಬಾಣ ಔಷಧ

೧೦೦ ಮಾತ್ರೆಗಳಿಗೆ ರೂ ೩—೮—೦

**ಭೈರವ ಮಾತ್ರೆಗಳು**

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ

೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

**ಯು ಪಿ ಮೇಸ್ತ್ರ,** ಗೋಲ್ಡ್ ಮೆಡಲ್ಡ್ ಫಿಜಿಸಿಯನ್



ನೀವು ಓದಿರುವಿರಾ?

**ಸ್ವಾರಸ್ಯದ ಈ ಸಾಮಾಜಿಕ ಕಥೆಗಳನ್ನು?**

# ಅಡ್ಡಬಳೆದ ಗಿಡ್ಡಿಯ ಮದುವೆ

# ಮುದುಕನ ಹೆಂಡತಿ ಥಕಪ್ಪೆರಾದೆ

ರಗಳೆಯ ಗಳಿಗೆಯನ್ನು ಹೋಗಲಾಡಿಸಲಿಕ್ಕೆ

ನಗುನಗಿಸಿ ವಿಚಾರವನ್ನೆಬ್ಬಿಸಲಿಕ್ಕೆ

ಕನ್ನಡ ಕಥಾಶೈಲಿಯ ಬೆಡಗನ್ನು ತೋರಲಿಕ್ಕೆ

ಮನೆಗೆ ಬಂದವರನ್ನು ಆನಂದಗೊಳಿಸಲಿಕ್ಕೆ

**ದೊಡ್ಡವರೂ ಚಿಕ್ಕವರೂ ಎಲ್ಲರೂ ಓದಬೇಕೆಂದೇ**

ಶ್ರೀ ಕೊರಡ್ಕಲ್ಲರು ಹಾಸ್ಯಮಯ ಶೈಲಿಯಲ್ಲಿ ಬರೆದ

**ಈ ಕಥಾಚಿತ್ರಗಳು ನಿಮ್ಮಲ್ಲಿರಲೇ ಬೇಕು.**

ಒಂದೊಂದು ಪ್ರತಿ ಅಪೇಕ್ಷಿಸುವವರು ಎರಡೂವರ ಆಣೆ ಸ್ಟಾಂಪು ಕಳುಹಿಸಬೇಕು.

**NAVABHARAT BOOK DEPOT, UDIPI**



# ಸೀರೆಗಳು

**ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ**

**ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ**

**ಸಿ. ಎ. ಪೈ ಬ್ರದರ್ಸ್,** ಆಸ್ಪತ್ರೆ ಎದುರು, ಉಡುಪಿ.

INLAND RS. 3—4—0
FOREIGN RS. 4—12—0

Byndoor, 9th July 1937.

*From*

J. M. BANAVALI,
Byndoor Camp

*To*

*THE AGENT*
THE COMBINED BOOKING AGENCY,
Byndoor (S. K.)

*Dear Sir,*

Received the ''Tin'' which I had missed in your office at Udipi on 6-7-1937 and which your Udipi office so kindly and promptly sent to me. I am really startled to see the efficient management and promptness of the staff in rendering every assistance to the travelling passengers. I cannot therefore restrain myself from thanking the Management and the Staff.

Yours faithfully,
(*Sd.*) *J. M. Banavali.*

(True Copy)

---

# SUPPLY AGENCY LTD.
## UDIPI

| | | |
|---|---|---|
| Authorised Capital .. ... | Rs | 1,00,000/- |
| Subscribed & Paid up Capital ... | Rs. | 29,840/- |
| Reserves .. .. ... ... | Rs. | 901/- |

ಈ ಕೆಳಗಿನ ದರದ ಬಡ್ಡಿಯಲ್ಲಿ
ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

| | | |
|---|---|---|
| 3 ತಿಂಗಳಿಂದ | 6 ತಿಂಗಳ ವರೆಗೆ | 4½% |
| 7 ,, | 9 ,, | 5% |
| 10 ,, | 12 ,, | 5½% |
| 13 ,, | 24 ,, | 6% |

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು
ಅಥವಾ ಪತ್ರವ್ಯವಹಾರ ಮಾಡಬಹುದು.

ಸಪ್ಲೈ ಏಜೆನ್ಸಿ ಲಿಮಿಟೆಡ್
ಉಡುಪಿ
1—9—1937

ಎಸ್. ಯು. ಪಣಿಯಾಡಿ,
ಮೇನೇಜಿಂಗ್ ಡೈರೆಕ್ಟರ್.

---

# ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| ಶಾಂತಿ ಪುರಾಣ .... .... .... | 3 | 0 | 0 |
| ಚಂದ್ರಗುಪ್ತ .... .... .... | 1 | 0 | 0 |
| Gowthama the Buddha ... .... | 0 | 8 | 0 |
| ಮಧುವನ .... .... .... | 1 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ .... .... | 0 | 8 | 0 |
| ಸರಸ್ವತಿ ... ... .... | 0 | 8 | 0 |
| ಗೀತೆಯ ಕೈಗನ್ನಡಿ .... .... .... | 0 | 4 | 0 |
| ಪುರಂದರದಾಸರ ಕೀರ್ತನೆ (ಭಾಗ ೧) ... | 0 | 4 | 0 |
| ಕೃಷ್ಣ ಸಂಧಾನ .... .... .... | 0 | 8 | 0 |
| ತುಳು ವ್ಯಾಕರಣ .... .... .... | 0 | 8 | 0 |
| ಸತೀ ಕಮಲೆ .. .... .... | 0 | 6 | 0 |
| ಮಿತ್ರನಾರಾಯಣ ಕತೆ .... .... | 0 | 8 | 0 |

ಇದಲ್ಲದೆ ಇನ್ನೂ ಅನೇಕ ಕನ್ನಡ, ತುಳು ಪುಸ್ತಕಗಳು
ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.

**ತುಳುನಾಡ್ ಪ್ರೆಸ್, ಉಡುಪಿ.**

---

**Rs. 75** WILL PAY YOU AFTER 5 YEARS **Rs. 100**

# INDUSTRIAL CASH CERTIFICATES

For full particulars apply to—

**SUPPLY AGENCY LIMITED, UDIPI**

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI

Registered No. M. 3613

Months' Special Number

# ನವಯುಗ

## ತಿಂಗಳ ಕಾಣಿಕೆ ೧

ವಾರಪತ್ರಿಕೆ ಸಂಪಾದಕ: ಕೆ. ಕೆ. ಶೆಟ್ಟಿ.

ಸಂಪುಟ ೧೭
ಸಂಚಿಕೆ ೫

Vol. XVII
No. 5

ಸೆಪ್ಟಂಬರ ೩೦, ೧೯೩೭
SEPTEMBER 30, 1937

Advertise in
NAVAYUGA
AND GET BEST VALUE
FOR YOUR
MONEY

## ಎಲ್ಲುಂಟು?

ಎಲ್ಲುಂಟು, ಎಲ್ಲುಂಟು, ಭಾರತದ ಸಿರಿಭಾಗ್ಯ?
ಹಿರಿಯರಾಳಿದ, ಮೆದ್ದ, ಹೇಮಮಯ ಸೌಭಾಗ್ಯ;
ಪಡುವಣದೊಳಸ್ತಮಿಸಿ, ಕಾರಿರುಳ ಮಡಲಲ್ಲಿ,
ಸೇರಿಹುದೆ? ಅಲ್ಲಲ್ಲ! ಬಲುಮೆದೆತ್ತರ ತೋಳು,
ಕೋಟೆದೊಳು ಬೆಸೆದಿಹುದೆ? ದ್ವೈವಪ್ರತಿಪಾದಕರ
ಕರ್ಮ ಭೂತವೆ ಬಂದು ನುಂಗಿ, ಆಗಸದಾಚೆ,
ಪಾರಿತೋ! ಕಡಲಿನಾಳವ ತಾನು ಸೇರಿತೋ!
ಅಲ್ಲಲ್ಲ! ಇಲ್ಲಿಹುದು, ಏನಿಂತು ಸೆಚ್ಚುನುಡಿ,

ಆಲಸ್ಯ ಅಶ್ರದ್ಧೆ ಮರವುಗಳ ಕಾಂಡಪಟ,
ಮಧ್ಯದೊಳು ನಿಂದುದಕೆ ಅದರಾಚೆ ತೋರದಿದೆ,
ಜಯಘೋಷ ನುಡಿಯುತ್ತ ಮುನ್ನಡೆದು ಬನ್ನಿ;
ಸತ್ಯ ವಿಶ್ವಾಸಗಳ ಕೈ ದೀಪ ತನ್ನಿ;

ಕಾಯೊಡದು ಕಳೆದ ಸೌಭಾಗ್ಯ ತರುವಾ!
ಆಟ್ಟಯುಡಿ ಎಡೆಯಿಟ್ಟು, ನಲಿಸಿ ನಲಿವಾ!

—ದೇವೇಂದ್ರ ಶೆಣೈ.

- ವಾಸ್ತವವಾಗಿ ಧರ್ಮವೂ ನೀತಿಯೂ ಒಂದೇ. ಸತ್ಯ ಮತ್ತು ನ್ಯಾಯಕ್ಕಿಂತ ಹೆಚ್ಚಿನ ಧರ್ಮ ವಾವುದೂ ಇಲ್ಲ.
- ನಾವು ಮಾನವಕೋಟಿಯ ಹಿತಕ್ಕಾಗಿ ಎಡೆಬಿಡದೆ ಕೆಲಸಮಾಡಬೇಕೆಂಬುದೇ ಅತ್ಯುಚ್ಚ ನೈತಿಕ ನಿಯಮವಾಗಿದೆ.
- ಸೇವೆಗಾಗಿ ತನ್ನ ಜೀವನವನ್ನು ಸಮರ್ಪಿಸಿದ ಯಾವನಾದರೂ ಒಂದೇ ಒಂದುಕ್ಷಣ ಸೋಮಾರಿಯಾಗಿರಲು ಸಾಧ್ಯವಿಲ್ಲ. ಆದರೆ ಒಳ್ಳೆಯ ಮತ್ತು ಕೆಟ್ಟ ಕೆಲಸ ಯಾವುದೆಂಬುದನ್ನು ತಿಳಿಯುವಷ್ಟು ವಿವೇಕವುಳ್ಳವನಾಗಿರಬೇಕು. ಸೇವೆಯ ಏಕಾಗ್ರವಾದ ನಿಷ್ಠೆಯಿಂದ ಸ್ವಾಭಾವಿಕವಾಗಿ ಈ ವಿವೇಕೋದಯವಾಗವುದು.

—ಮ. ಗಾಂಧಿ.




"ಘೋರ ಪಿಶಾಚ್ಚಿಗಳು" ಎಂಬ ಚಿತ್ರದಲ್ಲಿ ನೂರ್‌ಜಹಾನ್

# ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ಸಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

**THE ROYAL SEED CO.,**
FLORISTS & SEEDSMEN,
27, Ilpay Thope ULSOOR, BANGALORE.

ವಿ ಸೂ—ತರಕಾರಿಗಳು ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡಿಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು

---

THE
# MOOLKY BANK, LTD.,
**MOOLKY.**
## ದಿ ಮೂಲ್ಕಿ ಬೇಂಕ್, ಲಿಮಿಟೆಡ್,
**ಮೂಲ್ಕಿ.**

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ವರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ವರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

**M. R Punja,** *President & Manager,* — **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮೆನೇಜರ್.

---

ಪ್ರಾಮುಖ್ಯ ಪ್ರಕಟಣೆ

# ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಣ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

---

DIAMONDS! DIAMONDS!!

# K. R. K. SHET

**Opposite Govt. College, Hampankatte, MANGALORE**
**SHOW-ROOM & WORK SHOP.**

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಾಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

## ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು

---

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

*Manager,*

**Kanara Printing Works,**
Hampankatte, Mangalore.

---

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

**ಜಾಹೀರಾತುದಾರರಿಗೆ ಒಳ್ಳೇ ಸಂದರ್ಭ**

**ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ**

## 'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

**ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.**

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

*The Manager,* **The National Kanara News Agency,**
No. 58 Mody Street, Fort Bombay.

---

# ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಸಿನ ಕೈ, ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೂ ವಿಶೇಷ ಮಾಹಿತಿಗೂ ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.

*Proprietor:* ATTAVAR BABOO.

**VASANTHI HARMONIUM WORKS**
**Hampankatte, Mangalore.**

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ ಇಲ್ಲಿ ಮಾರಲ್ಪಡುತ್ತವೆ

# ಗಾಂಧಿ ಜಯಂತಿ

**ಇಂದಿನ ಭಾರತದ ನಿರ್ಮಾಣಕರು, ಇಡೀ ಲೋಕಕ್ಕೇನೇ ಅಹಿಂಸೆಯ ಸಂದೇಶವನ್ನಿತ್ತಿರುವ ಪ್ರವಾದಿಯು.**

ಒಕ್ಟೋಬರ ತಾ. ೨ನೇ ದಿನವು ಹಿಂದೂದೇಶದ ಆಧುನಿಕ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಪವಿತ್ರವಾದುದು ಯಾಕೆಂದರೆ, ಹಿಂದೀ ಜನತೆಯ ಹೃದಯವೇದಿಕೆಯಲ್ಲಿ ಹಿಂದೆ ಯಾರೂ ಪಡೆಯದಂತಹ ಉತ್ಕೃಷ್ಟ ಸ್ಥಾನಪಡೆದಿರುವ, ಮಹಾತ್ಮ ಗಾಂಧಿಜಿಯವರು ಹುಟ್ಟಿದ ದಿನವದು ಗಾಂಧಿಜಿಯವರ ಪ್ರಭಾವವು ಇಂದೀಗ ಭಾರತ ಮೀರಿ ದಾಟಿ ಇಡೀ ಲೋಕಕ್ಕೇನೇ ಹಬ್ಬಿರುವುದು ಅವರೀಗ ಅಂತರ ರಾಷ್ಟ್ರೀಯ ಮಹಾ ಪುರುಷರಲ್ಲೊಬ್ಬರಾಗಿ ಲೋಕಮಾನ್ಯರಾಗಿರುವರು ಒಂದೇ ಮಾತಿನಲ್ಲಿ ಹೇಳುವುದಾದರೆ ಅವರು ನವೀನವಾದೊಂದು ಜೀವನ ಕ್ರಮದ, ಸಮಾಜ ನೀತಿಯ, ಧಾರ್ಮಿಕ ತತ್ವದ, ಪ್ರತಿಪಾದಕರಾಗಿ ಇಡೀ ಜಗತ್ತಿಗೇನೇ ಹೊಸ ಸಂದೇಶವನ್ನೀಯುವ ಪ್ರವಾದಿಯಾಗಿರುವರು ಇಂದೀಗ ಅಹಿಂಸಾವತಾರಿಯಾಗಿ, ಹಿಂಸೆ ಕಲಹ, ಮಾರಾಟೆಗಳಿಂದ ತುಂಬಿ ತಳಮಳಗೊಳ್ಳುತ್ತಿರುವ ಲೋಕಕ್ಕೆ ಅಹಿಂಸಾ ಧರ್ಮದ ಮೂಲವೇ ರಕ್ಷಣೆಯೆಂಬುವನ್ನು ತನ್ನ ಜೀವನದ ಮಾದರಿಯಿಂದ ಆತ್ಮ ತೇಜಸ್ಸಿನಿಂದ, ಇಡೀ ಲೋಕಕ್ಕೆ ವಿದಿತಗೊಳಿಸುತ್ತಿರುವ ವಿಭೂತಿ ಪುರುಷರೇ ಮಹಾತ್ಮರು. ಇಂತಹ ಮಹಾಪುರುಷರ ಜನ್ಮದಿನವು ಪ್ರತಿಯೊಬ್ಬ ಭಾರತೀಯನ ಆನಂದೋತ್ಸವದ ದಿನ.

ಪಂಡಿತ ಜವಾಹರಲಾಲ ನೆಹರುಗಳು ಗಾಂಧಿಜಯಂತಿಯನ್ನು ಆಚರಿಸಬೇಕೆಂದು ವಿನಂತಿಮಾಡಿಕೊಂಡು ಹೊರಡಿಸಿರುವ ಹೇಳಿಕೆಯು ಪಂಡಿತರಂತಹ ಸಮತಾವಾದಿಗಳ ದೃಷ್ಟಿಯಲ್ಲಿ ಕೂಡಾ ಗಾಂಧಿಜಿ

ಯವರು ಎಷ್ಟು ಮಹತ್ವಿಕೆ ಮತ್ತು ಪೂಜ್ಯತೆಯುಳ್ಳವರಾಗಿರುವರೆಂಬುವನ್ನು ವ್ಯಕ್ತಗೊಳಿಸುವುದು ಆದುದರಿಂದ ಅವರ ಕೆಲವಂಶವನ್ನಿತ್ತಿ ಒದರಿರುವೆವು. 'ನಮ್ಮ ಜನತೆಯ ಸ್ವಾತಂತ್ರ್ಯಕ್ಕಾಗಿ ಗಾಂಧಿಜಿಯವರಿಗಿಂತ ಹೆಚ್ಚಿನ ಕೆಲಸಮಾಡಿದವರಾರೂ ಇರಲಾರರು. ಇಂದಿನ ಭಾರತವನ್ನು ಬಹುಶಃವಾಗಿ ನಿರ್ಮಿಸಿದವರೇ ಅವರು ಸ್ವರಾಜ್ಯವು ಇನ್ನೂ ನಮಗಿಂತ ಬಹಳ ದೂರವಿರಬಹುದು ಆದರೆ ಆ ಪ್ರಯಾಣದಲ್ಲಿ ನಾವು ಬಹುದೂರ ನಡೆದು ಹೋಗಿರುವೆವು ಇನ್ನೂ ಸಾಧಿಸಬೇಕಾದುದು ಬಹಳವಿದೆ ಆ ಗುರಿಯನ್ನು ಮುಟ್ಟುವ ಮೊದಲು ನಾವು ಹೋರಾಟದ ಅಗ್ನಿ ಪರೀಕ್ಷೆಗೊಳಗಾಗಬೇಕಾಗಿದೆ ತಾತ್ಕಾಲಿಕ ಉತ್ತೇಜಕತೆಯಿಂದ, ಅರೆಮಾಸಿ ಗೆದ್ದವೆಂಬ ಎಮ್ಮೆಯಿಂದ, ಕೆಲಮಟ್ಟಿನ ಅಧಿಕಾರ ಪಡೆದ ಅಹಂಭಾವದಿಂದ ನಾವಿದನ್ನು ಮರೆಯದೆ ನೆನಪಿನಲ್ಲಿಟ್ಟುಕೊಳ್ಳುವ

ನಮ್ಮ ಮಹತ್ವಾದ ಸಂಸ್ಥೆ, ಮತ್ತು ನೆಮ್ಮ ಮಿಲ್ಯಾಂತರ ಜನರಲ್ಲಿ ಅದು ಉಂಟುಮಾಡಿರುವ ಶಾಂತಪರಶಿಸ್ತಿನ ಕುರಿತು ನಾವು ಅಭಿಮಾನಪಡಲು ಕಾರಣವಿದ ಸ್ವರಾಜ್ಯದ ದಾರಿಯನ್ನು ಬೆಳಗಿಸಿರುವ ನಮ್ಮ ಅನೇಕ ಮಂದಿ ಬಂಧುಗಳ ತ್ಯಾಗವನ್ನು ನಾವು ಆನಂದದಿಂದಲೂ ಕೃತಜ್ಞತೆಯಿಂದಲೂ ಸ್ಮರಿಸುತ್ತೇವೆ ನಮ್ಮ ಅಸಂಖ್ಯಾತ ಬಂಧುಗಳ ಶ್ರಮ ಮತ್ತು ತ್ಯಾಗದಿಂದ ಸ್ಥಿರವಾದ ಉದ್ದೇಶ ಮತ್ತು ಐಕ್ಯಬಲವಿರುವ ಹಿಂದೂದೇಶವನ್ನು ನಾವು ಕಟ್ಟಿರುವೆವು ಮುಂದೆ ಕಟ್ಟಲ್ಪಡಲಿರುವ ಭವ್ಯ ಮಂದಿರಕ್ಕೆ ನಾವಿಂದು ಸ್ಥಿರವಾದ ಅಸ್ತಿವಾರಹಾಕಿರುವೆವು ಶಿಸ್ತು ಸಂಘಟನೆ, ಯೋಗ್ಯ ಉದ್ದೇಶ ಮತ್ತು ಸಾಧನ ಕ್ರಮದಿಂದ ನಮಗೆ ಬಲಬರುವುದು ಈ ಬಲವು ತಾತ್ಕಾಲಿಕ ವಿಜಯದಿಂದುಬ್ಬಿ ಹೋಗುವುದಿಲ್ಲ ಅಪಜಯದಿಂದ ಕುಗ್ಗಿಹಿಂಡುವುದಿಲ್ಲ. ದುರ್ಬಲರು ಸ್ಥಿರವಾದ ಉದ್ದೇಶವಿಲ್ಲದವರು ಈ ರೀತಿ ಏರಿಳಿತಕ್ಕೊಳಗಾಗುವರು. ಮಹತ್ವಾದ ಉದ್ದೇಶ ಸಾಧನೆಗೆ ಭೀಷ್ಮ ನಿರ್ಧಾರ ಮತ್ತು ಶಿಸ್ತು ಬೇಕಾಗಿದೆ ಇದು ನೆರೆಯಂತೆ ಒಂದೇ ಸವನೆ ಏರಿ ಉತ್ತರಕ್ಷಣದಲ್ಲೇ ಇಳಿದು ಹೋಗುವ ಉತ್ತೇಜಕತೆಗಿಂತ ಎಷ್ಟೋ ಮೇಲಾದುದು. ನ್ಯಾಯವಾದ ಉದ್ದೇಶ ಸಾಧನೆಗೆ ನ್ಯಾಯವಾದ ಉಪಾಯಬೇಕು ಯಾಕಂದರೆ ಘಂಟಾಘೋಷವಾಗಿರುವ ನಮ್ಮ ಉದ್ದೇಶದಿಂದ ನಾವು ಪರೀಕ್ಷಿಸಲ್ಪಡುವುದಿಲ್ಲ ಅದರ ಸಾಧನೆಗಾಗಿ ನಾವು ಕೈಕೊಳ್ಳುವ ಕಾರ್ಯರೀತಿಯಿಂದ. ನಮ್ಮ ಅನುಸರಿಸುವ ದಾರಿಗನುಗುಣವಾಗಿಯೇ ನಮ್ಮ ಗುರಿಯಿರುತ್ತದೆ. ಇದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವುದಾಗಲೀ ಇಲ್ಲವಾದರೆ ನಾವು ದಾರಿತಪ್ಪಿಹೋಗಿ ಒದ್ದಷ್ಟ ಮತ್ತು ವಿಧ್ಯಮಾನಗಳ ನಮ್ಮ ಮುಂದಿರಿಸುವ ಮಹತ್ವಾದ ಸಂದರ್ಭಗಳನ್ನು ಸದುಪಯೋಗಮಾಡುವಷ್ಟರ ಸಾಮರ್ಥ್ಯವಿಲ್ಲದ ಅಪಜಯಹೊಂದುವೆವು. ನಾವು ಮಹತ್ವಾದ ಕಾರ್ಯಸಾಧನೆಗೆ ಹೊರಟಿರುವೆವು ನಾವು ಇಚ್ಛಿಸುವ ಇತಿಹಾಸ ನಿರ್ಮಾಣಕರಿರುವೆವು ನಮ್ಮ ಕಲ್ಪನೆಯ ಭಾರತವನ್ನು ಕಟ್ಟುವವರಿರುವೆವು ನಾವು ನಮ್ಮ ಮಹಾಪುರುಷರನ್ನು ಸನ್ಮಾನಿಸಿ ಅವರಿಗೆ ವಂದನೆಯನ್ನರ್ಪಿಸುವಾಗ ನಮ್ಮ ಮುಂದಿನ ಕರ್ತವ್ಯಗಳ ಕುರಿತು ನಾವು ಪುನರಾಲೋಚನೆ ಮಾಡಿ ಅವುಗಳಿಗೆ ತಕ್ಕ ಸಿದ್ಧತೆಮಾಡಬೇಕು ಆ ಮಹಾಪುರುಷರು ನಮಗೆ ಕಲಿಸಿರುವ ಶಾಂತಶಿಸ್ತಿನಿಂದ ಕೆಲಸಮಾಡಬೇಕು


## "THE BANK WITH THE LARGEST PAID-UP CAPITAL"

Though the CANARA INDUSTRIAL & BANKING SYNDICATE LTD, was started in 1925 with a modest Paid up Capital of Rs 8,250!, TO-DAY it is the Bank with the LARGEST PAID-UP CAPITAL, of South Kanara

With a net work of 34 BRANCHES all over Madras Presidency, Bombay Presidency and the Mysore State, all kinds of Banking services are rendered on REASONABLE TERMS

Note the Progress made during the past twelve years and convince yourself about the popularity and stability of the Institution

| Year | Subscribed Capital | Paid up Capital | Reserves | Deposits | Investments on G P Notes | Working Capital |
|---|---|---|---|---|---|---|
| | Rs | Rs | Rs | Rs | Rs | Rs |
| 1926 | 48,400 | 8,250 | 1,020 | 5,758 | ——— | 17,355 |
| 1930 | 1,00,000 | 20,000 | 5,724 | 18,206 | ——— | 2,42,095 |
| 1934 | 2,00,000 | 1,50,000 | 54,070 | 11,45,602 | 1,59,481 | 15,95,238 |
| 1937 AUG | 7,74,300 | 3,65,160 | 2,09,960 | 27,56,022 | 11,08,590 | 47,35,230 |

# THE CANARA INDUSTRIAL & BANKING SYNDICATE LTD.

(INCORPORATED IN BRITISH INDIA)

ESTD:] Head Office:- "MUKUND NIVAS" UDIPI (S. I.) [1925

MEMBER:

RESERVE BANK OF INDIA,

BANKERS' CLEARING HOUSE, BOMBAY.

# ಸಮಾಚಾರ ಸಂಗ್ರಹ: ಕರ್ನಾಟಕ ಪ್ರಾಂತರಚನೆ ಮತ್ತು ಗಾಂಧಿಜಿ, ಏಲಂ ಹಾಕಲ್ಪಟ್ಟ ಜಮೀನು ಹಿಂದೆ ಕೊಡಲ್ಪಡುವುದು, ಕೋಲಾರಪುರದ ವಿಷಮಪರಿಸ್ಥಿತಿ, ಎತ್ತಿನ ಗಾಡಿಯಲ್ಲಿ ಮಂತ್ರಿಗಳ ಸಂಚಾರ

### ಕರ್ನಾಟಕ ಪ್ರಾಂತ ರಚನೆ ಗಾಂಧಿಜಿಯವರ ಅಭಿಮತ

ಕರ್ನಾಟಕ ಜಿಲ್ಲೆಗಳನ್ನೆಲ್ಲಾ ಒಟ್ಟುಗೂಡಿಸಿ ಪ್ರತ್ಯೇಕವಾದೊಂದು ಪ್ರಾಂತರಚಿಸುವ ಠರಾವೊಂದು ಸದ್ಯದಲ್ಲೇ ಬೊಂಬಾಯಿ ಎಸೆಂಬ್ಲಿಯ ಮುಂದೆ ತರಲ್ಪಡುವುದು ಈ ಕುರಿತು ಗಾಂಧಿಜಿಯವರ ಅಭಿಪ್ರಾಯವೇನೆಂದು ಕರ್ನಾಟಕ ಏಕೀಕರಣ ಸಂಘದ ಕಾರ್ಯದರ್ಶಿಗಳು ಕೇಳಿದಾಗ ಅವರು "ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವನ್ನಾಗಿ ನಿರ್ಮಿಸುವ ... ಕಲ್ಪನೆಯನ್ನು ... ಸಾಧ್ಯವಿಲ್ಲ ... ಕುರಿತ ಯಾವ ... ನಿರ್ಣಯ ... ಕಾಂಗ್ರೆಸ್ ಮಂತ್ರಿಗಳು ... ತ್ವರಿತವಾಗಿ ... ಕಾಂಗ್ರೆಸ್ ಮಂತ್ರಿಮಂಡಲವು ತನ್ನ ... ತನ್ನ ... ಪಕ್ಷವನ್ನು ... ಗಾಂಧಿಜಿಯವರ ... ಪ್ರತಿಯೊಂದನ್ನು ಬೊಂಬಾಯಿ ಮಂತ್ರಿಮಂಡಲಕ್ಕೆ ಕಳು ಹಿಸಲಾಗಿದೆ.

### ಏಲಮ ಹಾಕಲ್ಪಟ್ಟ ಜಮೀನು ಹಿಂದೆ ಕೊಡಲ್ಪಡುವುದು.

ಇದೇ ತಾ 23ರಲ್ಲಿ ಮುಂಬಯಿ ಪ್ರಾಂತದ ರೆವಿನ್ಯೂ ಮಂತ್ರಿಗಳಾದ ಶ್ರೀ ಮುರಾರ್ಜಿ ದೇಸಾಯಿಯವರ, ಕರನಿರಾಕರಣ ಚಳವಳದಲ್ಲಿ ಭಾಗವಹಿಸಿ ತಮ್ಮ ಆಸ್ತಿಗಳನ್ನು ಕಳಕೊಂಡವರ ಆಸ್ತಿಗಳನ್ನು ಸರಕಾರವು, ಅವುಗಳನ್ನು ಏಲಮಿನಲ್ಲಿ ಪಡೆಸಿಕೊಂಡವರಿಂದ ಪುನ ಕ್ರಯಕ್ಕೆ ಪಡೆದುಕೊಡಬೇಕೆಂಬ ಸೂಚನೆ ತಂದು, ದೇಶಕ್ಕಾಗಿ ತಮ್ಮ ಸರ್ವಸ್ವವನ್ನೂ ಕಳಕೊಳ್ಳಲು ಸಿದ್ಧರಾದ ಬೇಸಾಯಗಾರರ ತ್ಯಾಗ, ಧೈರ್ಯ ಸ್ಥೈರ್ಯಗಳನ್ನು ಪ್ರಶಂಸಿಸಿ ಅವರು ದೇಶಕ್ಕೆ ಗೌರವವನ್ನು ತಂದು ಅದರ ಪ್ರತಿಷ್ಠೆಯನ್ನು ಹೆಚ್ಚಿಸಿ ಚಿರಸ್ಮರಣೀಯ ಇತಿಹಾಸವನ್ನುಂಟುಮಾಡಿರುವರೆಂದರು. ರೆವಿನ್ಯೂ ಮಂತ್ರಿಗಳ ಈ ಸೂಚನೆಯು 87 ಅನುಕೂಲ ಮತ್ತು 39 ಪ್ರತಿಕೂಲ ಮತಗಳಿಂದ ಮಂಜೂರಾಯಿತು. ಈ ನಿರ್ಣಯದಂತೆ ಗುಜರಾಥಿನಲ್ಲಿ 1,800 ಎಕ್ರೆ, ಉತ್ತರ ಕನ್ನಡದಲ್ಲಿ 2,200 ಎಕ್ರೆ, ಧಾರವಾಡದಲ್ಲಿ 2,200 ಮತ್ತು ಬಿಜಾಪುರದಲ್ಲಿ 2 ಎಕ್ರೆ ಸ್ಥಳಗಳನ್ನು ಸರಕಾರವು ತೆಗೆದುಕೊಂಡು ಮೊದಲಿನ ಆಯಾಯ ಮಾಲಕರಿಗೆ ಕೊಡುವುದು

### ಭವಿಷ್ಯವು ಸಮತಾವಾದದ ಮೇಲೆ ಅವಲಂಬಿಸಿದೆ.

ಇದೇ ತಾ 24ರಲ್ಲಿ ಬಿಹಾರ್ ಎಸೆಂಬ್ಲಿಯಲ್ಲಿ ಹೆಚ್ಚಿಗೆ ಉತ್ಪತ್ತಿಯಿರುವ ವರ್ಗದಾರರ ಮೇಲೆ ಆದಾಯತೆರಿಗೆ ಹಾಕುವ ಮಸೂದೆಯು 96 ಅನುಕೂಲ ಮತ್ತು 27 ಪ್ರತಿಕೂಲ ಮತಗಳಿಂದ ಮಂಜೂರಾಗಿರುವುದು ಈ ಸಂದರ್ಭದಲ್ಲಿ ಬಿಹಾರಿನ ಪ್ರಧಾನಮಂತ್ರಿಗಳು ಮಾತಾಡುವಾಗ 'ಹಿಂದೂದೇಶದಲ್ಲಿ ಬಹಳ ಹೆಚ್ಚಿನ ತೆರಿಗೆಯು ಬಡವರ ಮೇಲೆ ಬಿದ್ದಿದ್ದ ಆ ಅನ್ಯಾಯವನ್ನು ನಿವಾರಿಸಿ, ಉತ್ಪತ್ತಿ ಹೆಚ್ಚಿದ್ದವರು ಹೆಚ್ಚೆಚ್ಚು ಕಂದಾಯ ತೆರುವಂತೆ ಮಾಡುವುದು ನ್ಯಾಯವೇ ಆಗಿದೆ ಇಂಗ್ಲೆಂಡಿನ, ಕನ್ಸರ್ವೇಟಿವ್ ಪಕ್ಷೀಯರು ... ತತ್ವಗಳಂತೆ ನಡೆಯುತ್ತಿದ್ದಾರೆ ... ಅವಲಂಬಿಸಿದೆ' ಎಂದರು ... ಪಕ್ಷೀಯ ಪ್ರಮುಖರು ... ಪ್ರಧಾನಮಂತ್ರಿಗಳು, ... ನಿರ್ಮೂಲಿಸಲ್ಪಡಬಾರದೆಂದರು.

### ಕೋಲಾರಪುರದ ಮಜೂರರಲ್ಲಿ ತೀವ್ರ ಅತೃಪ್ತಿ
ಇನ್ನೊಂದು ಜಮ್ಶೆಡಪುರವಾಗುವ ಎಷ್ಟು ಪರಿಸ್ಥಿತಿ

... ಗಣಿ ಮಜೂರರಲ್ಲಿ ... ಬಾಬು ... ಪ್ರಸಾದರು ಮಧ್ಯಸ್ಥಿಕೆಮಾಡಿ ಮಜೂರರು ಮತ್ತು ಮಾಲಿಕರೊಳಗೆ ರಾಜಿಮಾಡಲು ನಡೆಸಿದ ಯತ್ನವು ಫಲಕಾರಿಯಾಗಲಿಲ್ಲ ಇದೇ ತಾ 24ರಲ್ಲಿ ಪಂಡಿತ ಜವ್ಹಾರಲಾಲರು ಕೋಲಾರಪುರಕ್ಕೆ ಹೋಗಿ ಎಸೆಂಬ್ಲಿ ... ಕಾಂಗ್ರೆಸ್ ಮಜೂರರ ಸಭೆಯ ಕಾರ್ಯದರ್ಶಿಗಳೂ ಆದ ಶ್ರೀ ... ಶಾಸ್ತ್ರಿಯವರೊಡನೆ ... ಮುಷ್ಕರದ ಕುರಿತು ಕೆಲವು ಸಂಗತಿಗಳನ್ನು ಸ್ಪಷ್ಟಪಡಿಸಿದರು. ಮಜೂರರು ಏ ದಿಗ್ಗಿ ಹಿಂಸಾತ್ಮಕ ಕಾರ್ಯಗಳನ್ನು ಮಾಡಬಾರದು ಆಗ ಸರಕಾರವು ಬಂಡವಾಲದಾರರ ಸಹಾಯಕ್ಕೆ ಹೋಗುವುದು ಆ ಸಂದರ್ಭದಲ್ಲಿ ಕಾಂಗ್ರೆಸ್ ಮಂತ್ರಿಗಳೂ ಅಸಹಾಯಕರಾಗಿರುವರು. ಮುಷ್ಕರವನ್ನಾರಂಭಿಸುವ ಮೊದಲು ಮಜೂರ ಸಂಘದವರು ತಮ್ಮ ಶಕ್ತಿಯನ್ನು ಚನ್ನಾಗಿ ... ಮಜೂರರು ... ಮುಷ್ಕರಗಳನ್ನು ಮಾಡಿ ತಮ್ಮ ಶಕ್ತಿ ... ತಮ್ಮ ಬಲವನ್ನು ... ನೋಡಬೇಕು ... ಆಗಾಗ ... ಮುಷ್ಕರಗಳಿಂದ ಮಜೂರರ ಚಳವಳಕ್ಕೆ ಹಾನಿ ತಪ್ಪಿದ್ದಲ್ಲ ಪಂಡಿತ ಜವ್ಹಾರಲಾಲರು ... ಕೋಲಾರಪುರದ ಕಮ್ಯೂನಿಷ್ಟ್ ಗಿರಣಿಯಲ್ಲಿ ಮುಷ್ಕರ ನಡೆದಿದೆ. ಬಗ್ಗಿಲಾಲ್ ಗಿರಣಿಯ ಕೆಲಸಗಾರರಲ್ಲಿ ತೀವ್ರ ಅತೃಪ್ತಿಯಿದೆ ಮಾಲಿಕರ ಕಡೆ ಹಿಡಿದಿರುವ ಕೆಲಮಂದಿ ಕೆಲಸಗಾರರಿಗೂ ಇತರರಿಗೂ ಕಲಹ ನಡೆಯುತ್ತಿದೆ ಈ ಸಂಬಂಧವಾಗಿ ಇದೇ ತಾ 23ರಲ್ಲಿ 18 ಮಂದಿ ಮಜೂರರು ದಸ್ತಗಿರಿಮಾಡಲ್ಪಟ್ಟ ದ್ದಾರೆ ಪಂಡಿತ ಜವ್ಹಾರಲಾಲರೇ ಮೊದಲಾದವರ ಪ್ರಯತ್ನದಿಂದ ಕೋಲಾರಪುರದ ಪರಿಸ್ಥಿತಿ ಈಗ ಸ್ವಲ್ಪ ಸುಧಾರಿತವಾಗಿದೆ

ಜಿನೀವದಲ್ಲಿ ಲೀಗ್ ಆವ್ ನೇಶನ್ಸಿನ ಸಭೆ ... ಅಂತರರಾಷ್ಟ್ರೀಯ ... ಉದಾತ್ತ ಭಾಷಣಮತ್ತು ... ವಿದೇಶ ಮಂತ್ರಿ ... 

### ದೇವದಾಸಿಪದ್ಧತಿ ಹೋಗಬೇಕು.

ದೇವದಾಸಿಪದ್ಧತಿಗಳೆಂಬ ನೆವನದಿಂದ ತರುಣಿಯರನ್ನು ವೇಶ್ಯಾವೃತ್ತಿಗೆ ಬಲಿಕೊಡುವ ಅನಾಚಾರವನ್ನು ನಿವಾರಿಸಲು ಡಾಕ್ಟರ್ ಮುತ್ತುಲಕ್ಷ್ಮಿರೆಡ್ಡಿಯವರು ಮಸೂದೆಯೊಂದನ್ನು ಮದ್ರಾಸ್ ಎಸೆಂಬ್ಲಿಯ ಮುಂದೆ ತಂದಿರುವರು ಈ ಸುಧಾರಣೆಯು ಮದ್ಯಪಾನ ನಿಷೇಧದಷ್ಟೇ ಅಗತ್ಯವಾದುದು ಇಂತಹ ಕಾನೂನೊಂದು ಮದ್ರಾಸ್ ಪ್ರಾಂತದಲ್ಲಿ ಇಷ್ಟರಲ್ಲೇ ಮಾಡಲ್ಪಡದುದು ಆಶ್ಚರ್ಯಕರ. ಇನ್ನಾದರೂ ಬೇಗನೆ ಶ್ರೀಮತಿ ರೆಡ್ಡಿಯವರ ಮಸೂದೆಯನ್ನು ಮಂಜೂರ ಮಾಡಿ ಜ್ಯಾರಿಗೆ ತರಬೇಕೆಂದು ಮಹಾತ್ಮಗಾಂಧಿಯವರು ಅಭಿಪ್ರಾಯಪಟ್ಟಿರುವರು

### ಎತ್ತಿನ ಗಾಡಿಯಲ್ಲಿ ಮಂತ್ರಿಗಳ ಸಂಚಾರ.

ಪಂಡಿತನೆಹರೂರವರ ತಂಗಿ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಸಂಯುಕ್ತಪ್ರಾಂತದ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಖಾತೆಯ ಮಂತ್ರಿಗಳು ಹಿಂದೂದೇಶದ ಪ್ರಥಮ ಸ್ತ್ರೀಮಂತ್ರಿಗಳವರು ಬಹು ದಕ್ಷತೆಯಿಂದ ತಮ್ಮ ಕಾರ್ಯ ನಿರ್ವಹಿಸುತ್ತಿರುವರು ಇವರು ಹಳ್ಳಿಪ್ರದೇಶಗಳಲ್ಲಿ ಸಂಚರಿಸುವಾಗ ಎತ್ತಿನ ಗಾಡಿಗಳಲ್ಲಿ ಸಂಚರಿಸುವ ನಿರ್ಧಾರ ಮಾಡಿರುವರು ತಾನು ಸಂಚರಿಸುವಾಗ ಸ್ವಾಗತ ಸತ್ಕಾರಗಳ ಸಂಭ್ರಮ, ಪ್ರತ್ಯೇಕವಾದ ನಿವಾಸ ಮತ್ತು ಭೋಜನದ ವ್ಯವಸ್ಥೆಯೇನೂ ನಡೆಸಲ್ಪಡಬಾರದೆಂದು ಅನು ... ಹೋದಾಗ ಅಲ್ಲಿಯ ಬೇಸಾಯಗಾರರು ಹನೆಯೇ ವಾಸಿಸುವ ನಿರ್ಧಾರಮಾಡಿ ದ್ದಾರೆ.

### ಸರಕಾರಿ ನೌಕರರಿಗೆ ಖಾದಿ ಪೋಷಾಕು ಸ್ವದೇಶೀಗೆ ಪ್ರೋತ್ಸಾಹ.

ಇದೇ ತಾ. 24ರಲ್ಲಿ ಸಂಯುಕ್ತಪ್ರಾಂತದ ಎಸೆಂಬ್ಲಿಯಲ್ಲಿ, ಸರಕಾರವು ನೌಕರರಿಗೆ ದಗಿಸುವ ಪೋಷಾಕನ್ನೆಲ್ಲಾ ಸಾಧ್ಯವಾದಷ್ಟು ಕೈನೂಲಿನ ಕೈಮಗ್ಗದ ಖಾದಿಯಿಂದಲೇ ತಯಾರಿಸಬೇಕೆಂದು ನಿರ್ಣಯವಾಯಿತು ಮತ್ತು ಸರಕಾರವು ತನಗೆ ಬೇಕಾದ ವಸ್ತುಗಳನ್ನು ತೆಗೆದುಕೊಳ್ಳುವಾಗ, ಅವು ಹಿಂದೂದೇಶದಲ್ಲಿ ಸಿಗುವುದಾದರೆ ಸ್ವದೇಶೀ ವಸ್ತುಗಳನ್ನೇ ತೆಗೆದುಕೊಳ್ಳಬೇಕೆಂದಾಯಿತು

### ಕಾಂಗ್ರೆಸ್ ಕೆಲಸಗಾರರಿಗೆ ಹೊಡೆದರು.

ಸಂಯುಕ್ತಪ್ರಾಂತದ ಬುಲಂದಶಹರಿನಲ್ಲಿ ಕೆಲವುಮಂದಿ ಜಮೀನ್ದಾರರು ಕಾಂಗ್ರೆಸ್ ಕೆಲಸಗಾರರ ಕೈಯಿಂದ ತ್ರಿವರ್ಣಧ್ವಜವನ್ನು ಕಿತ್ತುಕೊಂಡು ಸುಟ್ಟುಹಾಕಿದರಂತೆ, ಸಿಟಿ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಿಗೂ ಇತರ ಕೆಲಮಂದಿ ಕೆಲಸಗಾರರಿಗೂ ಹೊಡೆದರಂತೂ, ಇದನ್ನು ಪೋಲೀಸರಿಗೆ ತಿಳಿಸಿದಾಗ ಪೋಲೀಸರದಕ್ಕೆ ಕಿವಿ ಕೊಡಲಿಲ್ಲೆಂದೂ ತಿಳಿದುಬರುತ್ತದೆ. ಇಲ್ಲಿಯ ಎಸೆಂಬ್ಲಿ ಮೆಂಬರರು ಈ ಸಂಗತಿಯನ್ನು ವಿಚಾರಿಸಿ ಪಂಡಿತ ಜವ್ಹಾರಲಾಲರಿಗೆ ತಿಳಿಸಿರುವರು.

### ಲಂಚ ತೆಗೆದುಕೊಳ್ಳದಂತೆ ಪ್ರಯತ್ನ

ಸಂಯುಕ್ತ ಪ್ರಾಂತೀಯ ಸರಕಾರವು ಪೋಲೀಸರು ಲಂಚ ತೆಗೆದುಕೊಳ್ಳದಂತೆ ಮಾಡಲು ಪ್ರಯತ್ನಿಸುತ್ತಿದೆ ಪೋಲೀಸ್ ಖಾತೆಯಲ್ಲಿ ಯಾವ ರೀತಿಯಲ್ಲಿ ಲಂಚ ಖೋರತನವು ಹಬ್ಬಿದೆಯೆಂಬುದನ್ನೆಲ್ಲಾ ವಿಚಾರಿಸಲು ಶ್ರೀ ಜಿ ಪಿ ಭಲ್ಲಾ ಎಂಬ ದೊಡ್ಡ ಪೋಲೀಸ್ ಅಧಿಕಾರಿಯೊಬ್ಬರು ನೇಮಿಸಲ್ಪಟ್ಟಿದ್ದಾರೆ.


**HAVE A SOUND SLEEP**

By using our Indian made Mosquito cur-tains, highly approved by persons of every rank for their strong netting, durability and beautiful finishing

Purchaser of three will get one curtain 6 x4 x4 free Packing Free.

POSTAGE EXTRA

**Prabhat Trading Co.,**
12 Sikderpara Lane, Barabazaar

# ಸಾಹಿತ್ಯ ಪ್ರಪಂಚ

[ಈ ಪುಟದಲ್ಲಿ ತಿಂಗಳಿಗೊಮ್ಮೆ ಪುಸ್ತಕಗಳ ವಿಮರ್ಶೆಗಳನ್ನು ಪ್ರಕಟಿಸಲಾಗುವುದು. ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸತಕ್ಕದ್ದು. ಸಂ. ನ]

## ಪುಸ್ತಕ ವಿಮರ್ಶೆ.

### 'ಹೆಂಡ್ತಿ ಗಂಡನಾದರೆ?'

[ಇದು ಕೇವಲ ಚಿಕ್ಕ ಪ್ರಹಸನವೊಂದರ ವಿಮರ್ಶೆಯಲ್ಲ. ಇಂದಿನ ರಂಗಭೂಮಿಯ ಟೀಕೆಯನ್ನೂ ವಿಮರ್ಶಕರು ಅದರೊಂದಿಗೆ ಬೆರಸಿ ಆ ಕುರಿತು ಕೆಲವು ನಿರ್ಣಾಯ ಸೂಚನೆಗಳನ್ನಿತ್ತುದುವರು. ಅದು ಕಾರಣ ಇಷ್ಟು ದೀರ್ಘವಾಗಿರುವುದು ಸಂ. ನ]

ಇದು ಉಡುಪಿಯ 'ಕಿರಿಯರ ಪ್ರಪಂಚ'ದ 'ತೊದಲ್ನುಡಿ ಗ್ರಂಥಮಾಲೆ'ಯ ೯ನೆಯ ನುಡಿಯಾದ ಏಕಾಂಕ ಪ್ರಹಸನ. ಬರೆದವರು ಶ್ರೀ ಕೆ ಕೆ ಶೆಟ್ಟರು. ಕ್ರಯ ೪ ಆಣೆ. ಪುಟ ೩೯. ಪುಸ್ತಕವು ತನ್ನ ಬಹಿರಂಗ ಅಂತರಂಗಗಳಿಂದ ವಾಚನಾಭಿರುಚಿಯುಳ್ಳವರನ್ನೆಲ್ಲಾ ಸಂತೋಷಗೊಳಿಸದಿರದು. ಕನ್ನಡ ನಾಟಕಗಳು ಅತ್ಯಾಧುನಿಕವಾಗಬೇಕಾದ ಕಾಲವಿದು. ಪೌರಾಣಿಕ ಮಹಾ ಪುರುಷರಿಗಾಗಲೀ ಕರ್ಣಾಟಕ ರಂಗಭೂಮಿಗಾಗಲಿ ಯಶಸ್ಸನ್ನು ತಾರದಿರುವ ಪೌರಾಣಿಕ ನಾಟಕಗಳನ್ನು ನೋಡಿ ನೋಡಿ ಜಿಗುಪ್ಸೆಹೊಂದಿರುವ ಇಂದಿನ ಪ್ರೇಕ್ಷಕ ವರ್ಗಕ್ಕೆ ಬೇಕಾದುದು ಆಧುನಿಕ ಸಮಾಜದ ರೀತಿ ನೀತಿಯ ಕುರಿತು ವಿಚಾರವೆಬ್ಬಿಸುವ ಸಾಮಾಜಿಕ ನಾಟಕಗಳೇ. ಆದರೆ ಪ್ರೇಕ್ಷಕ ವರ್ಗದ ಈ ಒಲವನ್ನು ಬಲಗೊಳಿಸುವಂತಹ ನಾಟಕಗಳು ವಿರಳವಾಗಿ, ಮೊಳೆದಿರುವ ಈ ಅಭಿರುಚಿಯ ಚಿಗುರನ್ನು ಮುರುಟಿಸಿ ಕೊಳೆಯಿಸಿ ಕೊಲ್ಲುವ ನಾಟಕಗಳನ್ನಾಡುವ ಸಾರ್ಥಕವಿಲ್ಲದ 'ಎಮೆಚೂರ್' ನಾಟಕ ಕೂಟಗಳು ಚಿಕ್ಕ ಪಟ್ಟಣಗಳಲ್ಲೂ ನಾಲ್ಕಾರು ತಲೆದೋರತೊಡಗಿವೆ. ಇವುಗಳದು ಆಳಿಂಬೆಯ ಬಾಳಾದರೂ, ಇವುಗಳು ದುರ್ವಾಸನೆ ಬೀರಿ ರಂಗಭೂಮಿಯನ್ನೊಮ್ಮೆ ಕೆಡಿಸಿಬಿಟ್ಟರೆ ಮತ್ತಲ್ಲಿ ಹೂದೋಟವೆಬ್ಬಿಸಿದರೂ ಪ್ರೇಕ್ಷಕ ವರ್ಗವು ತೆನ್ನಾಲಿ ಮಾರ್ಜಾಲನ್ಯಾಯದಿಂದ ಆ ಕಡೆಗೇ ಮೋರೆ ತಿರುವಲಾರದು. ಸಾಮಾಜಿಕ ನಾಟಕವನ್ನು ಬರೆವವರಿಗೆ ಸಮಾಜ ಪರಿಸ್ಥಿತಿಯ ಸೂಕ್ಷ್ಮ ಪರಿಶೀಲನೆ ಇರಬೇಕು. ಮಾನವ ಬುದ್ಧಿ ಹೃದಯಗಳ ಹದ್ದು ಹಾದಿ ವಿಕಾರಗಳ ಅರಿವು ಬೇಕು. ಅವನ್ನು ಯಥಾವತ್ತಾಗಿ ಚಿತ್ರಿಸಿ ಕಂಡವರ ಕಣ್ಣು ತೆರೆಯಿಸುವ ಲೇಖನಿಯ ಕೌಶಲ್ಯವಿರಬೇಕು. ಆದರೆ ಇವು ಯಾವುವೂ ಇಲ್ಲದೆ ಸಿನೆಮಾ ಫಿಲ್ಮುಗಳಿಂದಲೋ ಸಾಮಾಜಿಕೈತಿಹಾಸಿಕನಾವೆಲುಗಳಿಂದಲೋ ಅಲ್ಲೊಂದು ಇಲ್ಲೊಂದು ಪಾತ್ರ ಸನ್ನಿವೇಶ ದೃಶ್ಯ ಕಥಾವಸ್ತುಗಳನ್ನು ಕದ್ದು ತಿದ್ದಿ ಹೊಂದಿಕೆ ಬೀಳದ ಬೆಸಿಗೆ ಹಾಕಿ ಸಾಮಾಜಿಕ ನಾಟಕಗಳನ್ನು ರಚಿಸಿಕೊಂಡು ಅಭಿನಯಿಸ ತೊಡಗಿವೆ ಎಷ್ಟೋ ಎಮೆಚೂರ್ ನಾಟಕ ಕೂಟಗಳು. ಹೀಗಾಗಿ ಆಧುನಿಕ ನಾಟಕಗಳ ಕಡೆಗೆ ಒಲಿವ ಪ್ರೇಕ್ಷಕ ವರ್ಗವೀಗ ಮುನಿಯ ತೊಡಗಿದ ಲಕ್ಷಣಗಳು ಕಾಣಹತ್ತಿವೆ. ಅದರಲ್ಲೂ ಪ್ರಹಸನವೆಂದರೆ, ವಿಷಯ ಪ್ರತಿಪಾದನೆಯನ್ನರಿಯದ ಹರಿದಾಸರು ಶ್ರೋತೃಜನವು ನೋರಂಜನೆಗಾಗಿ-ಯೇನ ಕೇನಾಪ್ಯುಪಾಯೇನ-ಅಸಂಬದ್ಧೋಪಿ-ಪ್ರಯೋಗಿಸುವ ಉಪಕತೆಗಳಂತೆ, ಹೇಗಾದರೂ ನಗುವೆಬ್ಬಿಸಲು ಅಭಿನಯಿಸುವ ಕೋಡಂಗಿಯಾಟವೆಂದು ನಾಟಕ ಕೂಟಗಳೇ ತಿಳಿದುಕೊಂಡಂತಿದೆ.

ಕನ್ನಡ ಸಾಮಾಜಿಕ ನಾಟಕ ಪ್ರಹಸನಗಳ ಅವಸ್ಥೆಯು ಹೀಗಿರುವಾಗ ಶ್ರೀ| ಶೆಟ್ಟರು ಪ್ರೇಕ್ಷಕರನ್ನಾಗಲೀ ವಾಚಕರನ್ನಾಗಲಿ ನಗುನಗಿಸಿ ವಿಚಾರದ ನೆಳತಕ್ಕೆ ಮುಟ್ಟಿಸಿ ಬಿಡುವ ಈ ಸಾಮಾಜಿಕ ಪ್ರಹಸನವನ್ನು ಬರೆದು ಬರಹಗಾರರಿಗೊಂದು ದಾರಿ ತೋರಿರುವುದು ತುಂಬಾ ಸಂತೋಷ. ಈ ಪ್ರಹಸನದಲ್ಲೆಲ್ಲಾ ಘನ ಹಾಸ್ಯವು ಗುಪ್ತವಾಗಿಯೂ ವ್ಯಕ್ತವಾಗಿಯೂ ಹರಿಯುತ್ತಲಿದೆ. ವಿಚಾರವು ಎರಕವಾಗಿದೆ. ಮಾತುಗಳು ಪಾತ್ರ ಸನ್ನಿವೇಶಗಳ ಭಾವಕ್ಕೆ ಸಹಜ ಹಾಗೂ ಸ್ವಾರಸ್ಯವೆನಿಸುವಂತಹವು. ಎಂತಹ ಪ್ರಬಲ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದಕನ ರಕ್ತದಲ್ಲಿಯೂ ಆ ಪರಂಪರಾಗತವಾಗಿ ಹರಿಯುತ್ತ ಬಂದಿರುವ ಸ್ತ್ರೀಸ್ವಾಮಿತ್ವದ ಭಾವನೆಯು ನೀಗಲಾರದಷ್ಟು ಬಲವಂತವಾಗಿ ಇದ್ದೇ ಇವೆ ಎಂಬ ಗಂಡಸುತನದ ಮನೋವೃತ್ತಿಯನ್ನು ಚಿತ್ರಿಸುವ ಪ್ರಹಸನವಿದು. ನುಡಿಯಲ್ಲಿ ಕಾಣಿಸುವಷ್ಟೇ ನಡೆಯಲ್ಲಿ ತೋರಿಸಲಿಕ್ಕೆ, ಅನುವಂಶಿಕವಾಗಿ ಹೃದಯಗಳಲ್ಲಿ ರೂಢಮೂಲವಾಗುತ್ತಾ ಬಂದಿರುವ ಆ ರೂಢಿಯ ಭಯವು ಅದೆಷ್ಟು ಪ್ರತಿಬಂಧಕವಾಗಿ ಪರಿಣಮಿಸುತ್ತದೆಂಬುದನ್ನು ಚಮತ್ಕಾರಿಕವಾಗಿ ಪ್ರತಿಪಾದಿಸಿದೆ ಈ ನಗೆಯಾಟದಲ್ಲಿ. ಮದುವೆಯೆಂದರೆ (Companionship of soul, mind and body) ದಂಪತಿಗಳ ಆತ್ಮ ತನುಮನಗಳ ಸಹಚರ್ಯೆ. ಹೆಂಡತಿಯೆಂದರೆ ಗಂಡನ (Life companion and friend) ಜೀವನ ಸಂಗಾತಿ ಮತ್ತು ಗೆಳತಿ, ಸ್ತ್ರೀಯರಿಗೆ ಗಂಡಸರಂತೆಯೇ (Liberty and equality) ಸ್ವಾತಂತ್ರ್ಯ ಮತ್ತು ಸ್ಥಾನಮಾನಗಳ ಸಾಮ್ಯವಿರಬೇಕಾವಲ್ಲಿ ನಾವು ಅವರನ್ನು (slaves) ದಾಸೀ ಜನರಂತೆ ಕಾಣುವುದು ತಪ್ಪು. ಸ್ತ್ರೀಯರೂ ಪಂಜರದೊಳಗಿನ ಗಿಳಿಯಂತಿರದೆ ಮನೆಯಿಂದ ಹೊರಬಂದು ಲಜ್ಜೆಯ ಮುಸುಕನ್ನು ಹರಿದೊಗೆದು ತುಂಬಾ ಪ್ರಗಾಮಿತ್ವ (forwardness) ವನ್ನು ತೋರಬೇಕು, ಎಂದು ಹೀಗೆಲ್ಲಾ ಸಾರುವ ಅವಿವಾಹಿತ ತರುಣರ ಆ ವ್ಯವಸ್ಥಿತಮಾನಸಿಕ ನಿರ್ಧಾರಗಳೆಲ್ಲಾ ಮದುವೆಯಾದೊಡನೆ ಹೇಗೆ ಪರಿವರ್ತನೆ ಹೊಂದುತ್ತವೆಂಬುದನ್ನಿಲ್ಲಿ ಬಹು ಸ್ವಾರಸ್ಯವಾಗಿ ಚಿತ್ರಿಸಿದೆ. ವಿವಾಹಿತರಾದ ಮೇಲೆ ಅವರು "ಲೋಕದ ಇತರ ಸ್ತ್ರೀಯರ ಸ್ವಾತಂತ್ರ್ಯದ ಪ್ರತಿಪಾದಕ (Advocate) ರಲ್ಲದೆ ತನ್ನ ಹೆಂಡ್ತೀದ್ದಲ್ಲ!" ಎಂಬ ಮಾತಿನಲ್ಲಿ ಪುರುಷ ಮನಶ್ಶಾಸ್ತ್ರವೆಲ್ಲ (male psychology) ಅಡಗಿದ. ಮನೋಹರನು ತಾನು ಮದುವೆಯಾದರೆ ದೊರೆ ಮುದ್ದುಮಗಳಂತಿರಬೇಕೆಂದು ಬದ್ಧ ಕಂಕಣನಾಗಿದ್ದು ಅದಕ್ಕನುಗುಣವಾಗುವ ಮನೋರಮೆಯನ್ನು ವಿವಾಹವಾಗುವನು. ಆದರೆ ಲಗ್ನವಾಗಿ ಸ್ವಲ್ಪ ಸಮಯದೊಳಗೇ ಆ ದೊರೆ ಮುದ್ದುಮಗಳಂತಿನ ಜೀವನವು ನಗೆಗೇಡೆಂದೂ ಏನೆಂದರೂ ಹೆಂಡತಿಯಿರಬೇಕು ಮನೆಯೊಳಗೇ ಎಂದೂ ಪರಿವರ್ತನೆಯಾಗುವುದು ಅವನಲ್ಲಿ. ಒಂದು ವೇಳೆ ಗಂಡನು ನಿರುದ್ಯೋಗಿಯಾಗಿ ಮನೆಯೊಳಗಿದ್ದುಕೊಂಡು ಹೆಂಡತಿಯೇ ನೌಕರಿ ನೋಡಿ ದುಡಿದು ತರಬೇಕಾಗುವಂತಹ ಗಂಡ ಹೆಂಡಿರ ಸ್ಥಾನ ಪರಿವರ್ತನವಾದಾಗಲೂ "ಎಷ್ಟಾದರೂ ಗಂಡಸು ಗಂಡಸೇ, ಹೆಂಗಸು ಹೆಂಗಸೇ ಎಷ್ಟಾದರೂ ನಿನ್ನ ಗಂಡನಲ್ಲವೇ ನಾನು, ಮನೋರಮಾ?" ಎಂದು ಮನೋಹರನು ಸವಿನಯ ವಿನಂತಿಯಿಂದ ತನ್ನ ಗಂಡತನದ ಹಕ್ಕನ್ನು ಸ್ಥಾಪಿಸಲೆತ್ನಿಸುವುದನ್ನು ಕಂಡು ಸೇವಕ ರಂಗನಿಗೆಷ್ಟು ಸಿಟ್ಟೇರುವುದು ಗೊತ್ತೋ? 'ನಾನಾಗ ಬೇಕಿತ್ತು, ನನಗೊಂದು ಇಂತಹ ಹೆಂಡ್ತಿ ಸಿಕ್ಕಬೇಕಿತ್ತು, ಗುದ್ದಿಗುದ್ದಿಯೇ ಹದ್ದಿಗೆ ತರುತ್ತಿದ್ದೆ! ರಾಯರು ಪಾಪದವರು!' ಎಂದೆಂದು ಕೊಳ್ಳುತ್ತಾನೆ ತನ್ನೊಳಗೆ. ಇಂತಹ ಹಲವು ಸ್ವಾರಸ್ಯದ ಹಾಗೂ ಮಾರ್ಮಿಕ ಸನ್ನಿವೇಶಗಳಿಂದ ಪ್ರತಿಯೊಂದು ಪುಟವೂ ತುಂಬಿ ತುಳುಕುತ್ತಿರುವ ಈ ಪ್ರಹಸನದ ಸ್ವಾರಸ್ಯವನ್ನು ಓದಿಯೇ ತಿಳಿಯಬೇಕು. ಅಭಿನಯಿಸಿದರಂತೂ ನಕ್ಕುನಕ್ಕು ಕಣ್ಣೀರು ಬರಬೇಕು ನೋಡಿದವರಿಗೆಲ್ಲ. ಬರೇ ಹುಚ್ಚಾಟದ ನಗುವಲ್ಲ. ನಕ್ಕಂತೆ ವಿಚಾರದ ತೆರೆ ಏಳುತ್ತದೆ. ಸಂಘ ಸಂಸ್ಥೆಗಳ ವಾರ್ಷಿಕ ವರ್ಧಂತಿಯುತ್ಸವಾದಿಗಳ ಸಂದರ್ಭಗಳಲ್ಲಿಯೂ ಸಂತೋಷ ಸಮ್ಮೇಳನ (socials) ಗಳಲ್ಲಿಯೂ ಮದುವೆ ಮುಂಜಿ ಮುಂತಾದ ಅತಿಥಿಯ ಕೂಟಗಳಲ್ಲಿಯೂ ಸಭಿಕ ಜನ ಮನೋರಂಜನೆಗಾಗಿ, ವಿಶೇಷ ಡ್ರೆಸ್ ಸೀನರಿಗಳ ಆವಶ್ಯಕತೆಯಿಲ್ಲದೆ, ಬರೇ ನಾಲ್ವರಿಂದ ಒಂದು ತಾಸಿನೊಳಗೆ ಅಭಿನಯಿಸಲಿಕ್ಕಾಗುವ ಚಿಕ್ಕ ಏಕಾಂಕ ನಾಟಕವಿದು. ರಗಳೆಯ ಗಳಿಗೆಯನ್ನು ಕಳೆಯಲು ಕೈಯಲ್ಲಿ ತೆಗೆಯಬೇಕು ಇದನ್ನು. ಅರೆಗಳಿಗೆಯಲ್ಲಿ ಓದಿ ಮುಗಿಸಬಹುದು. ಓದಿ ಮುಗಿಸಿದರೂ ಮನಸ್ಸಿನೊಳಗೇ ನಕ್ಕು ಮುಗಿವುದಿಲ್ಲ. ರಂಗ, ಮನೋಹರ, ಮನೋರಮೆ, ಅರವಿಂದ ಇವರ ಮಾತುಗಳು ತಿರುತಿರುಗಿ ನೆನಪಿಗೆ ಬಂದು ನಗುಬರಿಸುವುವು. ವಿಚಾರವೆಬ್ಬಿಸುವುವು ಆನಂದಗೊಳಿಸುವವು.

**S. R. Kordcal.**

**WANTED**

Lady saleswoman, Catholic or Protestant for a leading cutlery, hardware and Stationery shop at Udipi town. Must be smart, good looking and of pleasing manners, capable of reading and writing English and Kanarese. Apply with one anna stamp stating minimum salary required.

'X' C/o Navayuga, Udipi

೧೮೭೮ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

# ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆಧಾತು ಮೂತ್ರದೊಡನೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ, ದೇಹಪುಷ್ಟಿಯನ್ನೂ ಉಂಟುಮಾಡುವುದು. ಬಾಟ್ಲಿಗೆ ರೂ ೩||

**ಬಾಲಗ್ರಹ ಗುಟಿಕೆ**—ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಜ್ವರ, ಮಲಬದ್ಧತೆಯಲ್ಲಿ ಗುರು ಗುರು ಶಬ್ದ ಇವುಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ ರೂ ೦-೧೦-೦

**ಕಸ್ತೂರಿ ಮಿಶ್ರಣ ದಶಮೂಲ**—ಇದು ಪ್ರಸವಾನಂತರ ನೋವನ್ನು ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವದು, ನಂಜಿನ ಜ್ವರಕ್ಕೂ ಅವಕಾಶಕೊಡದಂತೆ ಮಾಡುವದು. ಚಳಿ, ಸನ್ನಿ, ಮಲವಿಸರ್ಜನ ಕ್ರಮವಾಗಿ ನಡೆಯುವದು. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯು ಪುಷ್ಟಿಹೊಂದುವದಲ್ಲದೆ ಶಿಶುವಿಗೆ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವದು. ಬಾಟ್ಲಿಗೆ ರೂ. ೧-೮-೦.

**ಮಲೇರಿಯಾ ನಿವಾರಿಣಿ**—ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಇನ್‍ಫ್ಲುಯೆಂಜಾ ಇತ್ಯಾದಿ ನಾನಾತರದ ಜ್ವರಗಳ ಮೇಲೆ ಖಾಸ ಔಷಧ. ಬಾಟ್ಲಿಗೆ ರೂ. ೧-೮-೦ ಸಣ್ಣ ಬಾಟ್ಲಿಗೆ ೦-೧೨-೦

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು

ಔಷಧಿಗಳು ಸಿಕ್ಕುವ ಸ್ಥಳ.—ಕೃಷ್ಣ ಫಾರ್ಮಸಿ, ಕೆಮಿಸ್ಟ್ ಎಂಡ ಡ್ರಗಿಸ್ಟ್ ಕುಂದಾಪುರ, ಕೊರಗಪ್ಪ ನ್ಯೂಸ್ ಏಜಂಟ್, ಉಡುಪಿ, ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು,ಶ್ರೀ ರಾಮಾಸ್ಟೋರ್ಸ ಹಾಲ್, ಪೋಸ್ಟ್ ಆಫೀಸು ಎದುರು, ಕಾಸರಗೋಡು; ಕಾಮತ ಎಂಡ್ ಕೋ, ವಿಟ್ಠಲ್ ಬಾಯಿ ಪಟೇಲ್ ರೋಡು ಮುಂಬಾಯಿ. ಸುಬ್ರಾಯ ಪ.ಭು, ಸುಳ್ಯ.

# ಶಿಕ್ಷಣರಂಗ

[ತಿಂಗಳ ಕಾಣಿಕೆಯು ಈ ವಿಭಾಗದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಲೇಖನಗಳನ್ನು ಕೊಡಲಾಗುವುದು. ಸಂ. ನ]

## ಸ್ವಾತಂತ್ರ್ಯಸಂಗ್ರಾಮದಲ್ಲಿ ಉಪಾಧ್ಯಾಯರ ಸ್ಥಾನ

**ನಾಳಿನ ಭಾರತ ವರ್ಷದ ಬಂಧವಿಮೋಚನೆ ಸಮರದಲ್ಲಿ ಮುಂದಿನ ಜನಾಂಗವು ಭಾಗವಹಿಸದಿದ್ದಲ್ಲಿ ಆ ದೋಷವು ಉಪಾಧ್ಯಾಯರ ಮೇಲೆ ಬೀಳುವುದು.**

ಕೋಂಗ್ರೆಸು, ಶ್ರೀಯುತ ನಾಗೇಂದ್ರನಾಥ ಗುಪ್ತರ ಅಭಿಪ್ರಾಯದಂತೆ ಬಿರೇ ಗಾಳಿಗೆ ನಂದಿಸಲ್ಪಡಬಲ್ಲ ಮೇಣದ ಬತ್ತಿಯಂತಲ್ಲ. ಅದು ಪ್ರಜ್ವಲಿಸುವ ಸೂರ್ಯನ ಪ್ರಕಾಶವಾಗಿದೆ. ಅದಿಂದು ದೇಶದ ಪ್ರತಿನಿಧಿ ಸಂಸ್ಥೆಯಾಗಿರುವುದು. ಪದವಿ ಸ್ವೀಕಾರವು ಸ್ವತಂತ್ರ ಸಂಗ್ರಾಮದೊಂದು ಮೆಟ್ಟಿಲು. ರೈತನ ಉದ್ಧಾರ, ದೇಶದ ಹಿತವೃತ್ತಿಯಿಂದ ಕೋಂಗ್ರೆಸು ಮಂತ್ರಿ ಪದವಿ ಸ್ವೀಕಾರ ಮಾಡಿರುವುದು. ಮಾದಕ ಸೇವನೆಗೆ ತಡೆ, ಹಳ್ಳಿಯ ಕೈಗಾರಿಕೆಗಳ ಉದ್ಧಾರ, ಕಡ್ಡಾಯ ಪ್ರಾಥಮಿಕ ಶಿಕ್ಷಣವೇ ಮೊದಲಾದ ಸುಧಾರಣೆಗಳಿಗೆ ಕೈಹಚ್ಚಿರುವದು ಮಾತ್ರವಲ್ಲದೆ, ಮುಂದಿನ ಜನಾಂಗವನ್ನು ಬರುವ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತರಬೇತು ಮಾಡುವುದಕ್ಕೂ ಮನಸ್ಸು ಕೊಟ್ಟಿರುವದು. ಕಾಂಗ್ರೆಸ್ ಮಂತ್ರಿಗಳು ಕಾರ್ಯವನ್ನು ಯಶಸ್ವಿಯನ್ನಾಗಿ ಮಾಡುವುದು ಉಪಾಧ್ಯಾಯರ ಕೈಯಲ್ಲಿದೆ.

### ಉಪಾಧ್ಯಾಯರ ಕರ್ತವ್ಯವೇನು

ಮುಂದಿನ ಜನಾಂಗದ ಏಳಿಗೆಯಾಗಬೇಕಾದರೆ ಆ ಜನಾಂಗವನ್ನು ಬಾಲ್ಯದಲ್ಲಿ ತರಬೇತುಮಾಡುವ ಉಪಾಧ್ಯಾಯರಲ್ಲಿದೆ. ಉಪಾಧ್ಯಾಯರು ಮಕ್ಕಳಿಗೆ ಸ್ವಾಭಿಮಾನದ [illegible] ಕಳೆದ ಚುನಾವಣೆ ಕಾಲದಲ್ಲಿ ಕೋಂಗ್ರೆಸು ಪರವಾಗಿ ಕೆಲಸಮಾಡಿದ್ದಲ್ಲಿ, ಮಾತ್ರವಲ್ಲ ತಮ್ಮ ಜನ್ಮಸಿದ್ಧ ಹಕ್ಕಾದ ಓಟನ್ನು ಕೋಂಗ್ರೆಸಿಗೆ ಕೊಟ್ಟರೆಂದು ಸರಕಾರದ ನೌಕರರಿಗೆ ಬಂದರೆ ಅದು ರಾಜದ್ರೋಹ ವೆಂದೆನಿಸಲ್ಪಡುತ್ತಿತ್ತು. ಇಂದು ನಮ್ಮ ಕೋಂಗ್ರೆಸು ಮಂತ್ರಿಗಳು ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿರುವರು. [illegible] ನಮ್ಮ ರಾಜ್ಯವನ್ನು [illegible] ಎಷ್ಟು ಜಾಣತನವನ್ನು ವ್ಯಕ್ತಪಡಿಸಿದರು [illegible] ಇಂದಿನ ನಮ್ಮ ಹಿಂದೂದೇಶದ ಚರಿತ್ರೆ ಪುಸ್ತಕಗಳು ಸಾರುತ್ತಿರುವುವು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರೆಲ್ಲರೂ, ದೇಶದ್ರೋಹಿಗಳು, ದಂಗೆಕೋರರೆಂದು ಪರಿಗಣಿಸಲ್ಪಡುತ್ತಿದ್ದಾರೆ. ಇದರಿಂದಲೇ ನಾವು ಗುಲಾಮರಾದೆವು. ನೂರ ಐವತ್ತು ವರುಷಗಳಿಂದ ಇಂದಿನ ತನಕ ಬ್ರಿಟಿಷ್ ಸಾಮ್ರಾಜ್ಯವು ಭಾರತವರ್ಷದಲ್ಲಿ ನೆಲೆಯಾಗಿದೆ. ಅದಕ್ಕೆ ನಮ್ಮಲ್ಲಿರುವ ಜಾತಿ ವೈಷಮ್ಯದ ಘಾತವೇ ಕಾರಣ. ನಮ್ಮ ಸ್ವಾರ್ಥತೆಯಿಂದ ಭೇದಭಾವದಿಂದ ನಾವು ಸ್ವಾಭಿಮಾನ ಶೂನ್ಯರಾಗಿದ್ದೇವೆ. ಇದೀಗ ಪರತಂತ್ರದ ಪರಮಾವಧಿ. ನಾವು ಫ್ರಾನ್ಸಿಗೆ ಹೋಗೋಣ. ಅಲ್ಲಿಯೂ ಕೆಲವು ಜಾತಿಗಳು ಇರಕೆಯಲ್ಲಿವೆ. ಒಬ್ಬ ಮನುಷ್ಯನನ್ನು ಕಂಡು ಆತನು ಯಾವ ಜಾತಿಯವನೆಂದು ವಿಚಾರಿಸೋಣ. ಆತನು ದರ್ಪದಿಂದ ತಾನು "ಫ್ರೆಂಚ್‌ಮೇನ್" ಎನ್ನುವನು. ನಮ್ಮ ಸ್ಥಿತಿ ಹಾಗಲ್ಲ. ಜಾತೀಯತೆಯ ಭಾವನೆಯು ನಮ್ಮಲ್ಲಿ ಬಾಲ್ಯದಿಂದಲೇ ಬೇರೂರುವಂತೆ ಮಾಡಲಾಗುತ್ತದೆ. ಪ್ರಕೃತದ ವಿದ್ಯೆಯೇ ಇದಕ್ಕೆ ಕಾರಣ. ಇಂತಹ ವಿದ್ಯೆಯನ್ನೇ ಸುಧಾರಣೆಮಾಡಬೇಕೆಂದು ಕೋಂಗ್ರೆಸು ಮಂತ್ರಿಗಳು ಬಹಳ ಪ್ರಯತ್ನಮಾಡುತ್ತಿದ್ದಾರೆ. ಈ ಕಾರ್ಯದಲ್ಲಿ ಉಪಾಧ್ಯಾಯರು ಸಹಕರಿಸುವುದು ಅವರ ಆದ್ಯಕರ್ತವ್ಯವು.

### ಮಧ್ಯಪ್ರಾಂತದ ಅನುಕರಣೀಯ ಮಾದರಿ.

ಈ ಬಾರಿ ಮಧ್ಯಪ್ರಾಂತದಲ್ಲಿ, ಡಾ॥ ಪಟ್ಟಾಭಿಸೀತಾರಾಮಯ್ಯನವರು ಬರೆದ "ಕಾಂಗ್ರೆಸಿನ ಇತಿಹಾಸ"ವೆಂಬ ಪುಸ್ತಕವನ್ನು ಎಲ್ಲಾ ಶಾಲೆಗಳಲ್ಲಿ ಚರಿತ್ರೆಗಾಗಿ ಉಪಯೋಗಿಸಬೇಕೆಂಬ ಒಂದು ಠರಾವನ್ನು ಎಸೆಂಬ್ಲಿಯಲ್ಲಿ ಓರ್ವ ಸದಸ್ಯರು ತರುವರಿದ್ದಾರೆಂದು ಕೇಳುತ್ತೇವೆ. ಅದು ಮಾನ್ಯವಾದಲ್ಲಿ, ಬಹಳ ಶ್ಲಾಘನೀಯ, ಮಾತ್ರವಲ್ಲ ಇತರ ಪ್ರಾಂತ್ಯಗಳೂ ಅನುಸರಿಸುವಂತಹದಾಗಿದೆ. ಮುಂದಕ್ಕೆ ಚರಿತ್ರೆಕಾರರು ನಮ್ಮ ದೇಶದ ವೀರ ಪುರುಷರ ಚರಿತ್ರೆಗಳನ್ನು ಬರೆಯಬೇಕು.

### ಶಾಲೆಗಳಲ್ಲಿ ಹಿಂದಿಯ ಕಡ್ಡಾಯ ಶಿಕ್ಷಣ.

ಯಾವ ದೇಶಕ್ಕೂ ರಾಷ್ಟ್ರಭಾಷೆಯೆಂಬುದೊಂದಿದೆ. ಆ ಭಾಷೆಯೇ ಹೆಚ್ಚಾಗಿ ಕೋರ್ಟುಕಚೇರಿಗಳಲ್ಲಿ ಉಪಯೋಗಿಸಲ್ಪಡುವುದು. ನಮ್ಮ ದೇಶದಲ್ಲಿ ಪರಕೀಯ ಇಂಗ್ಲಿಷ್ ಭಾಷೆಯು ಬಳಕೆಯಲ್ಲಿದೆ. ಹಿಂದೀಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ಅನೇಕ ವರ್ಷಗಳಿಂದ ಮಹಾತ್ಮಾಗಾಂಧಿಜೀಯವರೇ ಮೊದಲಾದವರು ಪ್ರಯತ್ನಪಡುತ್ತಿದ್ದರೂ, ಸರಕಾರದ ಪ್ರೋತ್ಸಾಹವಿಲ್ಲದೆ ಆ ಕಾರ್ಯವು ಭರದಲ್ಲಿ ಸಾಗುತ್ತಿದ್ದಿಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಹಿಂದಿಯು ಬಹಳ ಪ್ರಚಾರದಲ್ಲಿದೆ. ಆದರೆ ದಕ್ಷಿಣ ಹಿಂದೂಸ್ಥಾನವು ಬಹಳ ಹಿಂದೆಬಿದ್ದಿರುವುದು. ದಕ್ಷಿಣದಲ್ಲಿ ಹೆಚ್ಚಿನ ಪ್ರಚಾರದಲ್ಲಿರುವ ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಭಾಷೆಗಳಲ್ಲಿ ಒಂದಕ್ಕೊಂದು ನಿಕಟಸಂಬಂಧವಿಲ್ಲ. ಮಲಬಾರಿನಲ್ಲಿ ತೆಲುಗಿನಿಂದ ಭಾಷಣಮಾಡಿದರೆ ಸಾಮಾನ್ಯ ಜನರಿಗೆ ಅರ್ಥವಾಗದು. ಆಂಧ್ರದಲ್ಲಿ ಮಲೆಯಾಳಂ ಭಾಷೆಯಲ್ಲಿ ಭಾಷಣ ಮಾಡಿದರೆ ಅಲ್ಲಿಯವರಿಗೆ ಅರ್ಥವಾಗದು. ಆದ್ದರಿಂದ, ಕೋಂಗ್ರೆಸು ಮಂತ್ರಿಗಳು ಪರ್ಯಾಲೋಚಿಸಿ ಹಿಂದಿಯನ್ನು Iನೇ IIನೇ, IIIನೇ ಫೋರ್ಮುಗಳಲ್ಲಿ ಕಡ್ಡಾಯವಾಗಿ ಕಲಿಸುವಂತೆ ಮಾಡಬೇಕೆಂದಿರುವರು. ಹೀಗಾದರೆ ಹಿಂದಿಯು ರಾಷ್ಟ್ರಭಾಷೆಯಾಗಲು ಹೆಚ್ಚುಕಾಲಹೋಗದು.

ರಾಷ್ಟ್ರದ ಏಳಿಗೆ, ಮುಂದಿನ ಜನಾಂಗದ ಅಭಿವೃದ್ಧಿಯ ಗುರಿಯಿಂದ ಕೋಂಗ್ರೆಸು ಮಂತ್ರಿಗಳು ಮಾಡಲಿರುವ ಸುಧಾರಣೆಗಳಿಗೆ, ಉಪಾಧ್ಯಾಯರು ಹೃತ್ಪೂರ್ವಕ ಬೆಂಬಲಕೊಡುವುದರಿಂದ, ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನೆರವೇರಿಸಿದಂತಾಗುವುದು. ಮುಂದಕ್ಕೆ ಆಗಲಿರುವ ಭಾರತವರ್ಷದ ಸ್ವಾತಂತ್ರ್ಯಸಮರದಲ್ಲಿ, ಮುಂದಿನ ಜನಾಂಗವು ಭಾಗವಹಿಸದಿದ್ದಲ್ಲಿ ಆ ದೋಷಾರೋಪಣೆಯು, ಯುವಕರನ್ನು ತರಬೇತು ಮಾಡುವ ಉಪಾಧ್ಯಾಯರ ಮೇಲೆ ಬೀಳುವುದು. ಆ ದೋಷಕ್ಕೆ ಹೊಣೆಗಾರರು ಉಪಾಧ್ಯಾಯರಾಗುವರು. ಆದುದರಿಂದ ಉಪಾಧ್ಯಾಯರು, ಕೋಂಗ್ರೆಸು ಮಂತ್ರಿಗಳು ವಿದ್ಯಾಖಾತೆಯಲ್ಲಿ ಮಾಡಲಿರುವ ಸುಧಾರಣೆಗಳನ್ನು ಕಾರ್ಯರೂಪಕ್ಕೆ ಹಚ್ಚುವಾಗ, ಬೆಂಬಲಕೊಟ್ಟು ಸಹಕರಿಸುವುದು ಅತ್ಯಗತ್ಯ.

ಜಿ. ಪಿ. ಪೈ. ಮೂಡಬಿದ್ರೆ


*** ಜಗನ್ಮೋಹಿನೀ ***
**(ಧರ್ಮವಿಜಯ)**

ಲೇಖಕರು—ಪಂಡಿತ ಎಚ್. ರಾಮಾಚಾರ್ಯ.

ಇದೊಂದು ಮನೋಹರವಾದ ಕಲ್ಪಿತ ಕಾದಂಬರಿ. ಧರ್ಮಕ್ಕೇ ಜಯವೆಂಬುವನ್ನು ಮನಗಾಣಿಸುವ ಅತ್ಯಪೂರ್ವ ಗ್ರಂಥ.

ಪುಟಗಳು ೨೦೬ --- ಬೆಲೆ ೧-೦-೦

**ಚಿತ್ತಾಕರ್ಷಕ ಕಥಾವಸ್ತು!**

**ಸರಳವಾದ ಶೈಲಿ!!**

ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇಬೇಕಾದ ಪುಸ್ತಕ. ರೂ. ೧-೨-೦ರ ಸ್ಟಾಂಪು ಕಳುಹಿಸಿದರೊಪ್ರತಿ ಕಳುಹಿಸಲಾಗುತ್ತೆ.

**ನವಭಾರತ ಬುಕ್ ಡಿಪ್ಪೊ, ಉಡುಪಿ**

ಸಿ. ಸೂ.—ವ್ಯಾಪಾರಸ್ಥರಿಗೆ ಧಾರಾಳ ಡಿಸ್ಕಾಂಟ



THE BOMBAY LIFE ASSURANCE Co., LTD.
ESTD. 1908
Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

*Apply to:—*

**KOCHIKAR BROTHERS,**
*Madras Branch Secretaries.*

BRANCHES AT:

| | | |
|---|---|---|
| P. B. 337 Mount Road, Madras. | Visveswarapuram Circle, Bangalore City. | Soumyalayam Puthiyara, Calicut. |
| Car Street, Mangalore. | Udipi, S. India. | Charni Road, Bombay No 4. |

INSPECTORATE OFFICE AT:
1. Ottapalam, Malabar District. 2. Central Station Road, T...



EVIDENCE OF SECURITY & STABILITY
FIGURES THAT SPEAK FOR THEMSELVES

TOTAL ASSETS Rs. 80,66,600

**Summary of 1935 Accounts**

| | | | |
|---|---|---|---|
| Total Assets Over | ... | ... | Rs. 80,00,000 |
| Life Funds Over | ... | ... | Rs. 68,00,000 |
| Premium Income Over | ... | ... | Rs. 22,54,000 |
| Interest Income | ... | ... | Rs. 3,16,000 |
| Claims Paid | ... | ... | Rs. 5,75,000 |

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

# ಯುರೋಪಿನಲ್ಲಿ ಯುದ್ಧವಾಗುವುದೇ?

## ಪ್ರಕೃತದ ಪರಿಸ್ಥಿತಿಯ ಪರಿಶೀಲನೆ

ಇಂಗ್ಲೆಂಡಿನ ಸುಪ್ರಸಿದ್ಧ ಪತ್ರಿಕೆಗಳ ಲ್ಲೊಂದಾದ ನ್ಯೂಸ್ ಕ್ರೊನಿಕ್ಲಿನ ಸ್ಪೆಶಲ್ ಬಾತ್ಮಿದಾರರೂ ಗ್ರಂಥಕರ್ತರೂ ಆಗಿರುವ ರಿಚರ್ಡ್ ಎಸ್. ಫ್ರೆಂಡರು ಹೈದರಾಬಾದಿಗೆ ಬಂದಿದ್ದು ಅಲ್ಲಿ ಯುರೋಪಿನ ಈಗಣ ಪರಿಸ್ಥಿತಿ ಮತ್ತು ಯುದ್ಧದ ಸಂಭವನೀಯತೆಯ ಕುರಿತು ಈ ಕೆಳಗಣ ಅಭಿಪ್ರಾಯವಿತ್ತಿರುವರು. 'ಯುರೋಪಿನಲ್ಲ ನಿಜವಾದ ಜಗಳವು ಕಮ್ಯೂನಿಸ್ಮ ಮತ್ತು ಫೆಸ್ಸಿಸ್ಮಗಳೊಳಗಲ್ಲ, ಸರ್ವಾಧಿಕಾರತ್ವ ಮತ್ತು ಪ್ರಜಾಸತ್ತೆಗಳೊಳಗೂ ಅಲ್ಲ, ಜರ್ಮನಿ ರಶ್ಯ ಅಥವಾ ಇಂಗ್ಲೆಂಡ್ ಇಟಲಿಗಳೊಳಗೂ ಅಲ್ಲ ಈ ಎಲ್ಲಾ ತಿಕ್ಕಾಟಗಳು ನಡೆಯುತ್ತಿದ್ದು ಸರ್ವಸಾಮಾನ್ಯ ಅತೃಪ್ತಿಯನ್ನು ಹೆಚ್ಚಿಸುತ್ತಿವೆ ಆದರೆ ಕಟ್ಟಕಡೆಯಲ್ಲಿ ಯುರೋಪಿನ ಸಮಸ್ಯೆಯೆಂದರೆ ಜರ್ಮನಿ ಮತ್ತು ಫ್ರಾನ್ಸಗಳೊಳಗಣದ್ದು.

ಒಂದು ದೃಷ್ಟಿಯಲ್ಲಿ ಯುರೋಪಿನಲ್ಲೀಗ ಯುದ್ಧವು ನಡೆಯುತ್ತಲೇ ಇದೆ. ಜರ್ಮನಿ ಮತ್ತು ಇಟಲಿಗಳು ಸ್ಪೈನಿನ ಬಂಡಾಯಗಾರರಾದ ಜನರಲ್ ಫ್ರೇಂಕೋರವರಿಗೆ ಸಹಾಯಮಾಡುತ್ತಿರುವವು. ಫ್ರಾನ್ಸ ಮತ್ತು ರಶ್ಯಗಳು ವೆಲೆನ್ಸಿಯಾ ಸರಕಾರಕ್ಕೆ ಸಹಾಯವೀಯುತ್ತಿರುವವು ಈ ಎಲ್ಲಾ ದೇಶಗಳ ಬಹಳಮಂದಿ ಸೈನಿಕರು ಸ್ಪೈನಿನಲ್ಲಿ ಹೋರಾಡುತ್ತಿದ್ದಾರೆ ಇವರು ಕೇವಲ ವಲಂಟೀಯರರಲ್ಲ ಸ್ಪೈನಿನ ಯುದ್ಧವನ್ನು ಕೇವಲ ಅಂತಃಕಲಹವೆನ್ನಲಾಗುವುದಿಲ್ಲ. ಆದರಲ್ಲಿ ದೊಡ್ಡ ರಾಷ್ಟ್ರಗಳು ಹೋರಾಟ ನಡಿಸುತ್ತಿವೆ ಈ ಯುದ್ಧದ ಪರಿಣಾಮ ಹೇಗಾಗುವುದೆಂದು ಹೇಳಬರುವುದಿಲ್ಲ ಅಂತೂ ಜನರಲ್ ಫ್ರೇಂಕೋರವರಿಗೆ ಬೇಗನೆ ಜಯವಾಗುವ ಸಂಭವ ತೋರುವುದಿಲ್ಲ ಸ್ಪೈನಿನ ಯುದ್ಧವು ಜನರಲ್ ಫ್ರೇಂಕೋ ಮತ್ತು ಕೇವಲ ವೆಲೆನ್ಸಿಯ ಸರಕಾರಗಳೊಳಗಣ ಹೋರಾಟವಾದರೆ ಜನರಲ್ ಫ್ರೇಂಕೋರವರ ಅವಜಯ ನಿಶ್ಚಯ. ಈ ಯುದ್ಧದ ಜಯಾಪಜಯಗಳು, ಇಟಲಿ ಮತ್ತು ಜರ್ಮನಿಗಳು ಜನರಲ್ ಫ್ರೇಂಕೋರವರಿಗೂ, ಫ್ರಾನ್ಸ ಮತ್ತು ರಶ್ಯಗಳು ವೆಲೆನ್ಸಿಯಾ ಸರಕಾರಕ್ಕೂ ಕೊಡುವ ಸಹಾಯದ ಮೇಲೆ ಹೊಂದಿರುತ್ತದೆ. ಅನೇಕ ತರದ ವಿಘ್ನಮೋಹಗಳು ಯುದ್ಧದ ಪ್ರವಾಹವನ್ನು ಯಾವ ಕಡೆಗೂ ಒಯ್ಯಬಹುದಾದುದರಿಂದ ಫಲಿತಾಂಶವು ಹೇಗೆ ನಿಲ್ಲುವುದೆಂದು ಹೇಳಲು ಸಾಧ್ಯವಿಲ್ಲ. ಆದರೆ ಒಂದು ವಿಷಯ ಮಾತ್ರ ನಿಶ್ಚಯ. ಸ್ಪೈನಿನ ಅಂತಃಕಲಹವು ದೀರ್ಘವಾದಷ್ಟಕ್ಕೆ ಯುರೋಪಿಗೆ ಅಪಾಯ ಹೆಚ್ಚು. ದೊಡ್ಡ ರಾಷ್ಟ್ರಗಳು ಅದರಲ್ಲಿ ಹೆಚ್ಚೆಚ್ಚಾಗಿ ಭಾಗವಹಿಸಿ ಪರಸ್ಪರ ದ್ವೇಷಾಸೂಯೆಗಳು ಅಧಿಕವಾಗಿ ಸೌಹಾರ್ದಭರ ಸಹಕಾರಕ್ಕೆ ಪ್ರತಿಕೂಲ ವಾತಾವರಣವುಂಟಾಗುವುದು. ಯುರೋಪಿನ ಶಾಂತಿಭಂಗಕ್ಕೆ ಮೊದಲಿನ ಅಪಾಯವಿದು

ಎರಡನೇ ಅಪಾಯವೆಂದರೆ ಮಧ್ಯ ಯುರೋಪಿನಲ್ಲಿ ಇಲ್ಲಿ ಜರ್ಮನಿಯು ಆಸ್ಟ್ರಿಯ ಅದವಾ ಜೆಕೋಸ್ಲೋವೇಕಿಯದ ಮೇಲೆ ಧಾಳಿ ನಡಿಸಬಹುದು. ಈಗ ಚೈನದ ಯುದ್ಧವಾರಂಭವಾಗಿರುವುದರಿಂದ ಜೆಕೊಸ್ಲೊವೇಕಿಯಕ್ಕೆ ಸ್ವಲ್ಪ ಉಸಿರಾಡುವ ಸಮಯ ದೊರೆಯಿತೆನ್ನಬಹುದು ಜಪಾನು ಚೈನದೊಡನೆ ಕಾದಾಡುತ್ತಿರುವುದರಿಂದ ಜರ್ಮನಿಗೆ ರಶ್ಯದ ಹೆದರಿಕೆ ಹೆಚ್ಚಿದೆ. ಆದುದರಿಂದ ಅದು ಜೆಕೊಸ್ಲೊವೇಕಿಯದ ಮೇಲೆ ಥಕ್ಕನೆ ಧಾಳಿನಡಿಸಿದಂತಾಗಿದೆ ಆದರೆ ಜರ್ಮನಿಯ ಕಣ್ಣು ವಿಶೇಷವಾಗಿ ಜೆಕೊಸ್ಲೊವೇಕಿಯದ ಮೇಲೆ ಇದ್ದೇ ಇದೆ. ಇದಕ್ಕೆ ರಶ್ಯವು ವಿರೋಧವಿದೆ. ರಶ್ಯ ಮತ್ತು ಜೆಕೊಸ್ಲೊವೇಕಿಯಗಳೊಳಗೆ ಮೈತ್ರಿಯಿದೆ ಜರ್ಮನಿಯು ರಶ್ಯದಮೇಲೆ ಧಾಳಿ ನಡಿಸುವುದೆಂಬುದು ಒರಿಯ ಕಣ್ಣುಕಟ್ಟು. ಅದು ಪ್ರಬಲಸಿದ್ಧತೆ ಮಾಡುತ್ತಿರುವುದೆಂದರೆ ಫ್ರಾನ್ಸಿನ ಮೇಲೆ ಬೀಳಲಿಕ್ಕೆ ಫ್ರಾನ್ಸನ್ನು ಬಗ್ಗುಬಡಿದು ಪ್ರತೀಕಾರಮಾಡಲಿಕ್ಕೆ ಆದುದರಿಂದ ಯುರೋಪಿನಲ್ಲಿ ಕಟ್ಟಕಡೆಯಲ್ಲುಂಟಾಗುವ ಕಲಹವೆಂದರೆ ಜರ್ಮನಿ ಮತ್ತು ಫ್ರಾನ್ಸಗಳೊಳಗೆ. ಜರ್ಮನಿಯು ಯುರೋಪಿನಲ್ಲಿ ತನ್ನ ರಾಜ್ಯವನ್ನು ವಿಸ್ತರಿಸುವ ಮತ್ತು ಪ್ರಭಾವ ಪಡೆಯುವ ಆಕಾಂಕ್ಷೆಯುಳ್ಳದ್ದಾಗಿದೆ ಯುರೋಪಿನ ಅಧಿಕಾರ ನಡಿಸಲು ಫ್ರೆಂಚರಿಗಿಂತ ತಾವು ಹೆಚ್ಚಿನ ಯೋಗ್ಯತೆಯುಳ್ಳವರೆಂದು ಜರ್ಮನರ ಹೆಮ್ಮೆ. ಇದು ಫ್ರಾನ್ಸಿಗೂ ಗೊತ್ತಿದೆ ಆದ ಕಳೆದ ಯುದ್ಧದಿಂದ, ಜರ್ಮನಿಯನ್ನು ಯಾವಾಗಲೂ ಪೂರ್ವ ಮತ್ತು ಪಶ್ಚಿಮದ ಎರಡು ರಂಗಗಳಲ್ಲಿ ಹೋರಾಡುವಂತೆ ಮಾಡಬೇಕೆಂಬ ಪಾಠ ಕಲಿತಿದೆ ಅದೀಗ ಪೋಲೆಂಡಿನ ಮೈತ್ರಿಯ ಮೇಲೆ ಸಂದೇಹಗೊಂಡು ರಶ್ಯದೊಡನೆ ಒಪ್ಪಂದಮಾಡಿಕೊಂಡಿದೆ ಇದಲ್ಲದೆ ಹೊರತು ಮಧ್ಯಯುರೋಪಿನ ಜೆಕೊಸ್ಲೊವೇಕಿಯ, ರುಮೇನಿಯ ಮತ್ತು ಯುಗೋಸ್ಲಾವಿಯಗಳ ಸ್ನೇಹಬೆಳೆಸಿದೆ ಹೀಗೆ ಸುತ್ತಲೂ ತಾನು ಆವರಿಸಲ್ಪಟ್ಟಿರುವುದನ್ನು ನೋಡಿ ಜರ್ಮನಿಯು ತನ್ನ ಲಕ್ಷ್ಯವನ್ನು ಪೂರ್ವಕ್ಕೆ ಹರಿಸಿರುವುದು ಜರ್ಮನ್ ಸರಕಾರದ ಈಗಣ ಧೋರಣೆಯೆಂದರೆ ರಶ್ಯವನ್ನು ಹಾಗೆಯೇ ಬಿಟ್ಟುಬಿಡುವುದು. ಆದುದರಿಂದ ಶೀಘ್ರವಾಗಿ ಜರ್ಮನ್ ರಶ್ಯಗಳೊಳಗೆ ಯುದ್ಧವಾಗುವದಾಗಿಲ್ಲ ಜರ್ಮನಿಯ ಸಹಾಯಕ ರಾಷ್ಟ್ರವಾದ ಜಪಾನು ಚೈನದ ಮೇಲೆ ಧಾಳಿನಡಿಸಿರುವಾಗ ಇದು ಸಾಧ್ಯವೇ ಇಲ್ಲ. ಜರ್ಮನಿಯ ನಾಜಿಗಳೂ ರಶ್ಯದ ಬೋಲ್ಶೆವಿಕರೂ ಒಟ್ಟಾಗುವ ಸಂಭವವೇ ಇಲ್ಲೆಂಬುದು ತಪ್ಪು ಭಾವನೆ ಯುರೋಪಿನ ಪರಿಸ್ಥಿತಿಯು ಬದಲಾದರೆ ಹಿಟ್ಲರರು, ಮುಸಲೋನಿಗಳಂತೆಯೇ ಸ್ಟಾಲಿನರನ್ನೂ ಜರ್ಮನಿನಲ್ಲಿ ಸ್ವಾಗತವೀಯಬಹುದು. ಜರ್ಮನಿಯು ಈಗ ದಕ್ಷಿಣ ಭಾಗಕ್ಕೆ ತನ್ನ ರಾಜ್ಯವನ್ನು ವಿಸ್ತರಿಸುವ ದೃಷ್ಟಿಯಿಂದ ಪ್ರಬಲ ಸಿದ್ಧತೆ ನಡಿಸುತ್ತದೆ. ಇಲ್ಲಿ ಆಸ್ಟ್ರಿಯವು ಪ್ರಾಮುಖ್ಯ ಹಾಗೂ ಸಂಕಟ್ಟನ ಸ್ಥಾನವನ್ನು ಹೊಂದಿರುತ್ತದೆ ಆಸ್ಟ್ರಿಯವನ್ನು ದೊಡ್ಡ ರಾಷ್ಟ್ರವೊಂದು ವಶಪಡಿಸಿಕೊಂಡಿತೆಂದರೆ ಆ ಮೇಲೆ ಸುಲಭವಾಗಿ ದಕ್ಷಿಣದ ಇಟಲಿಯ ಸಮತಟ್ಟು ಪ್ರದೇಶದ ಮತ್ತು ಪೂರ್ವದ ಬಾಲ್ಕನ್ಸಗಳ ಮೇಲೆ ಧಾಳಿನಡಿಸಬಹುದು. ಪಶ್ಚಿಮಕ್ಕೆ ಆಲ್ಪ್ಸ ಪರ್ವತಸಾಲು ಹಿಡಿದು ಹೋಗಿ ದಕ್ಷಿಣ ಜರ್ಮನಿಯನ್ನು ವಶಪಡಿಸಿಕೊಂಡು ಬೊಹೇಮಿಯವನ್ನು ಸ್ವಾಧೀನಪಡಿಸಿಕೊಳ್ಳಬಹುದು "ಬೊಹೇಮಿಯವೆಂಬುದು ದೇವರು ಯುರೋಪಿನ ಹೃದಯದಲ್ಲಿ ಕಟ್ಟಿರುವ ಕೋಟೆ" ಎಂದು ಬಿಸ್ಮಾರ್ಕರು ಬರೆದಿರುವರು. ಬೊಹೇಮಿಯವನ್ನು ಗೆದ್ದವನು ಯೂರೋಪವನ್ನು ಗೆಲ್ಲುವನೆಂದೂ ಅವರು ಹೇಳಿದ್ದರು. ಇಂದು ಬೊಹೇಮಿಯವು ಜೆಕೊಸ್ಲೊವೇಕಿಯಕ್ಕೆ ಸೇರಿದೆ. ಜೆಕೊಸ್ಲೊವೇಕಿಯವು ಸಣ್ಣ ರಾಷ್ಟ್ರವಾದರೂ, ದೊಡ್ಡ ರಾಷ್ಟ್ರಗಳಾದ ರಶ್ಯ ಅಥವಾ ಫ್ರಾನ್ಸಿನ ಸಹಾಯದಿಂದ, ಜರ್ಮನಿಯು ಆಸ್ಟ್ರಿಯ ಮತ್ತು ಹಂಗೇರಿಯ ಮೂಲಕ ಡೇನ್ಯೂಬ್ ನದಿಯ ಕೆಳಗೆ ಮುಂದುವರಿಯದಂತೆ ತಡೆಗಟ್ಟಿ ಅದು ಅಸಾಧ್ಯವಾಗುವಂತೆ ಮಾಡಬಹುದು ಮೇಲಿನ ಪರಿಸ್ಥಿತಿಯಿಂದಾಗಿ ಯೂರೋಪಿನಲ್ಲಿ ಬೇಗನೆ ಯುದ್ಧವಾಗುವ ಅಪಾಯವಿಲ್ಲ. ಆದರೂ ಯುರೋಪಿನ ಪರಿಸ್ಥಿತಿಯು ಇಂದು ಬಹಳ ಕೆಟ್ಟಿದೆ. ಅದೊಂದು ಸಿಡಿಮದ್ದಿನ ಗನಿಯೇ ಆಗಿದೆ. ಫ್ರಾನ್ಸ ಮತ್ತು ಜರ್ಮನಿಗಳ ಸಮಸ್ಯೆಯು ಬಿಡಿಸಲ್ಪಡುವ ತನಕ ಯುರೋಪಿನ ಕ್ಷೋಭೆಯು ನಿವಾರಿತವಾಗುವದಾಗಿಲ್ಲ.

---

ನಮಗೆ ಬರತಕ್ಕ ಬಾತ್ಮಿಗಳು ಅತೀ ಚುಟುಕಾಗಿದ್ದು ಸ್ಪಷ್ಟಾಕ್ಷರಗಳಿಂದ ಬರೆಯಲ್ಪಟ್ಟದ್ದು ಮಂಗಳವಾರ ಬೆಳಿಗ್ಗೆ ನಮಗೆ ತಲಪಬೇಕು.

ಮೆನೇಜರ್, ನವಯುಗ.


ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊ ಕಿಲರ್" (ರಿಜಿಸ್ಟರ್ಡ)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಮಾತುರಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಸುರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer Dr. D N JASANI, Vitalbhai Patel Road, BOMBAY 4

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

**S. U. N. & CO** *Choukhamba, Benares City.*

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ [illegible] ರೇಶ್ಮೆ [illegible] 1, [illegible] 1, [illegible] ಇನಾಮಾಗಿ [illegible] ಜರಿ [illegible] ಪಾಟೆ, [illegible] ಟೆರ್ಟಿಂಗ್ [illegible] ರೂ 20ರಿಂದ 55 [illegible] 1ಕ್ಕೆ ರೂ 16 ರಿಂದ [illegible] ರೂ 10½ ಯಿಂದ ರೂ [illegible] ರೂ 10ರ ವರೆಗ [illegible]

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ

---

**ನೀವು ನಿಮ್ಮ–ನಿಮ್ಮ ಹೆಂಡತಿ ಮಕ್ಕಳ ಹಾಗೂ ನಿಮ್ಮನ್ನವಲಂಬಿಸಿರುವ ಇತರರ ಸಂರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಿರುವಿರಾ ?**

ಇಲ್ಲವಾದರೆ, ಹೇಗೆ ಮಾಡುವುದೆಂಬುದನ್ನು ಭದ್ರತೆಯ, ಮಿತವ್ಯಯದ, ಅಭಿವೃದ್ಧಿ ಹೊಂದುತ್ತಿರುವ ಈ ದೇಶಿಯ ಸಂಸ್ಥೆಯಲ್ಲಿಯೇ ವಿಚಾರಿಸಿರಿ.

# ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ

## ಲಿಮಿಟೆಡ್ (ಅಜ್ಮೀರು)

**ನಮ್ಮ ಅಭಿವೃದ್ಧಿಯ ಅಂಕೆ ಸಂಕೆಗಳು**

| | |
|---|---|
| ಚಾಲ್ತಿಯಲ್ಲಿರುವ ಪೂಲಿಸಿಗಳು | ರೂ **3 ಕೋಟಿ** ಮಿಕ್ಕಿದೆ, |
| ಮೂಲಗಳು | ರೂ. **80** ಲಕ್ಷಕ್ಕೂ ಮಿಕ್ಕಿದೆ |
| ವಾರ್ಷಿಕ ಉತ್ಪನ್ನ | ರೂ. **18** ಲಕ್ಷಕ್ಕೂ ಮಿಕ್ಕಿದೆ |
| ವಿಮೆ ತೆತ್ತುದು | ರೂ. **42** ಲಕ್ಷಕ್ಕೂ ಮಿಕ್ಕಿದೆ |

**ಅತ್ಯಧಿಕ ಬೋನಸು**

| ಜೀವಾಂತ್ಯ ವಿಮೆ | ಎಂಡೋಮೆಂಟ್ |
|---|---|
| ವರ್ಷಕ್ಕೆ ರೂ 1000ಕ್ಕೆ **25**ರಂತೆ | ವರ್ಷಕ್ಕೆ ರೂ. 1000ಕ್ಕೆ **20**ರಂತೆ. |

ವಿಮೆಗಾಗಲಿ ಪ್ರಾತಿನಿಧ್ಯಕ್ಕಾಗಲಿ ದ. ಇಂಡಿಯದಲ್ಲಿ ಕೆಳಗಿನವರಿಗೆ ಬರೆಯಿರಿ—

ಪಿ ಜಿ. ಮರಾಥೆ ಎಸ್ಕ್ವಾಯರ್, ಜನರಲ್ ಮೆನೇಜರ್

(ಅಥವಾ) ಎಂ ಮಾಧವ ರಾವ್ ಎಸ್ಕ್ವಾಯರ್, ಬಿ ಎ, ಸುಪರಿಂಟೆಂಡೆಂಟ್ ಓವ್ ಬ್ರಾಂಚಸ್ ಎಂಡ್ ಚೀಪ್ ಏಜನ್ಸೀಸ್, ಯಸ್. ಐ ಎಂಡ್ ಸಿಲೋನ್.

**ಪಶ್ಚಿಮ ಕರಾವಳಿಗೆ ಓರ್ವ ಪ್ರಾಮುಖ್ಯ ಪ್ರತಿನಿಧಿಗಳು ಬೇಕು.**

---

# HOTEL INDIANA

**BAR AND RESTAURANT**

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ !

## ಹೋಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನಕಟ್ಟೆಯಲ್ಲೇ ಇದ್ದು ಸರ್ವ ಆಧುನಿಕ ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದ

**ಹೊಸ ಆಡಳಿತ !** **ಹೊಸ ವ್ಯವಸ್ಥೆ !!**

ಎಲ್ಲವೂ ಹೊಸತೇ ಆಗಿ

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ

*Proprietor,* HOTEL INDIANA
Hampankatta, Mangalore

---

**15** ವರ್ಷಗಳ ಅನುಭವ ! **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು, ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

# ಪೈಂಟರ್ ಗಣಪತಿ ರಾವ್,

— ಇವರು —

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ

**ಗಣಪತಿ ರಾವ್, ಪೈಂಟರ್,**

ಸೋದೆ ಮಠದ ಲೇನು - - **ಉಡುಪಿ, ದ. ಕ.**

---

## ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ

ಸ್ಥಾಪನೆ 1926

**18 ಬಲ್ಮಠ ರಸ್ತೆ, ಮಂಗಳೂರು.**

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಡೆಗಳ ಬೇಜು, ಮೋನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು

ಹೆಚ್ಚಿಲ್ಲಿ, ಒತ್ತುವ ಸೆಟ್ಟುಗಳು ಕೂಡಾ ಸಿಗುವವು. ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು

---

## ಗಿಡಗಳು ಮತ್ತು ಬೀಜಗಳು

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ **ಗಿಡಗಳು, ಬೀಜಗಳು** ನಮ್ಮಲ್ಲಿ **ಬಿಕರಿಗೆ ಸಿದ್ಧವಾಗಿವೆ. ಬೇಕಾದವರು** ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ.

**ಡಿ. ಗುರಪ್ಪ ಅಂಡ್ ಸನ್ಸ್**

ಗಿಡ, ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್ ದೊಡ್ಡ ಮಾವಳ್ಳಿ,
**ಬೆಂಗಳೂರು ಸಿಟಿ.**

---

ಉಡುಪಿಯ ಆದರ್ಶ ಉಪಹಾರಗೃಹ !

# ಶ್ರೀರಾಮಾ ರೆಸ್ಟೋರೆಂಟ್

**ಸುಲಭ ದರದಲ್ಲಿ ತಿಂಡಿ ಪಾನೀಯಗಳು !** **ಮಿತ ದರದಲ್ಲಿ ಊಟ ಉಪಚಾರಗಳು !**

**ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ !** ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ !**

**ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.**

**ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

# ವಾರದ ವಿಚಾರ

## ಮಿ. ಜಿನ್ನಾರವರ ಭೇದವೆಲ್ಲಿ?

ಮಿ. ಜಿನ್ನಾರವರಿಗೆ ಇತ್ತಲಾಗಿ ಸಿಮ್ಲಾದ ಮುಸಲ್ಮಾನರೊಂದು ಮಾನಪತ್ರವನ್ನೊಪ್ಪಿಸಿದಾಗ, ಅವರು, ಮುಸ್ಲಿಮ್ ಲೀಗಿನ ಆದರ್ಶವು ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯಸಾಧನೆ, ಸ್ವಾಭಿಮಾನಿಯಾದ ಯಾವ ಹಿಂದೀಯನಾದರೂ ಪರಾಧೀನತೆಗನುಕೂಲವಾಗಿರಲಾರನೆಂದರು. ಈ ವಿಷಯದಲ್ಲಿ ಕಾಂಗ್ರೆಸಿಗೂ ಅವರಿಗೂ ಯಾವ ಭೇದವೂ ಇಲ್ಲ. ಆದರೆ ಸಂಪೂರ್ಣ ಸ್ವಾತಂತ್ರ್ಯದ ಮೊದಲು ಅವರಿಗೆ ಜಾತೀಯ ಐಕ್ಯತೆಯುಂಟಾಗಬೇಕಾಗಿದ. ಪ್ರಕೃತದ ಪರಿಸ್ಥಿತಿಯಲ್ಲಿ ಪ್ರತ್ಯೇಕವಾದ ಜಾತೀಯ ಸಂಸ್ಥೆಗಳ ಮೂಲಕವೇ ಅದು ಸಾಧ್ಯವಿದೆಯೆಂದು ಅವರ ಅಭಿಮತ. ಈ ವಾದದಲ್ಲಿ ಹುರುಳಿಲ್ಲ, ಯಾಕಂದರೆ ಈ ಜಾತೀಯ ವೈಷಮ್ಯಕ್ಕೆ ಕಾರಣರೇ ಕೆಲವುಂದಿ ಮೇಲ್ತರಗತಿಯ ಸುಶಿಕ್ಷಿತರು. ಅವರ ಪ್ರತಿಷ್ಠೆಗಾಗಿ, ಅವರ ಹುದ್ದೆ ಪದವಿಗಾಗಿ ಈ ಜಾತೀಯ ಸಂಸ್ಥೆಗಳು ಅವರಿಗೆ ಬೇಕಾಗಿವೆ. ಇದೇ ಜಾತೀಯ ಒಕ್ಕಟ್ಟಿಗೆ ದೊಡ್ಡ ತೊಡಕಾಗಿದೆ. ಆದುದರಿಂದಲೇ ಕಾಂಗ್ರೆಸು ಅವುಗಳಿಗೆ ಬದ್ಧ ವಿರೋಧವಿದೆ. ಮಿ ಜಿನ್ನಾರಂತಹ ನುರಿತ ರಾಜನೀತಿಜ್ಞರು ಇನ್ನೂ ಇಂತಹ ಮನೋವೃತ್ತಿಯುಳ್ಳವರಿರುವುದು ಆಶ್ಚರ್ಯಕರ.

## ಡಾಕ್ಟರ್ ಮೂಂಜಿಯವರ ದಾಸ್ಯ ಮನೋವೃತ್ತಿ.

ಕಳೆದ 150 ವರ್ಷಗಳಿಂದ ಬ್ರಿಟಿಷ್ ಸಾಮ್ರಾಜ್ಯವು ಹಿಂದೂದೇಶಕ್ಕೆ ರಕ್ಷಣೆಕೊಟ್ಟಿದೆ, ಸುರಕ್ಷಿತತೆಯನ್ನಿತ್ತಿದೆ. ಇನ್ನೂ ಅಂತಹ ರಕ್ಷಣೆಯು ಹಿಂದೂದೇಶಕ್ಕೆ ಬ್ರಿಟಿಷ್ ಸಾಮ್ರಾಜ್ಯದಿಂದಲೇ ದೊರೆಯಬೇಕು. ಹಿಂದೂದೇಶವು ನಿರಂತರವಾಗಿಯೂ ಅವರ ಅಂಗವಾಗಿದ್ದುಕೊಂಡು ಸಹಕರಿಸಿಕೊಂಡಿರಬೇಕೆಂದೇ ಡಾಕ್ಟರ್ ಮೂಂಜಿಯವರ ಅಭಿಮತ. ಡಾಕ್ಟರರು ಹಿಂದು ಯುವಕರೆಲ್ಲಾ ವೀರ ಯೋಧರಾಗಬೇಕು. ಎಲ್ಲರೂ ಸೈನಿಕ ತರಬೇತಿ ಪಡೆಯಬೇಕೆಂದು ತಡಪಡಿಸುವವರು. ಸದಾ ಪರಾಧೀನರಾಗಿರುವುದಕ್ಕೇನೇ ಹಿಂದು ತರುಣರು ವೀರ ಯೋಧರಾಗುವುದೇ? ಇಂತಹ ದಾಸ್ಯ ಮನೋವೃತ್ತಿಯು ಹಿಂದುಗಳ ಸ್ವಾಭಿಮಾನಕ್ಕೆ ಸಲ್ಲುವುದೇ? ಇದು ಹಿಂದು ಮಹಾಸಭೆಯ ಅಭಿಪ್ರಾಯವಲ್ಲವಷ್ಟೆ.

## ಅಹಿಂಸೆಯ ವಿಜಯ.

ಗಾಂಧಿಜಿಯವರು ತನ್ನ ಅಹಿಂಸಾತ್ಮಕ ಪ್ರಚಂಡ ಚಳವಳ ಹೂಡಿದುದು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಿರೋಧವಾಗಿ ಆದರ ಅಂಗವಾದ ಹಿಂದೀ ಸರಕಾರವನ್ನವರು ಸೈತಾನಿಕವೆಂದು ಕೂಡಾ ಕರೆದಿದ್ದರು. ಗಾಂಧಿಜೀಯವರು ತಲೆತಿರುಕರು, ರಾಜದ್ರೋಹಿಗಳು, ಶಾಂತಿಭಂಗವನ್ನುಂಟು ಮಾಡುವವರೆಂದು ಸರಕಾರವು ಅವರನ್ನು ಮೂರು ಮೂರು ಸಲ ಕಾರಾಗೃಹಕ್ಕೆ ಹಾಕಿತ್ತು. ಆದರೆ ಇಂದೀಗ, ಗಾಂಧಿಜೀಯವರೇ ಹಿಂದೂದೇಶದಲ್ಲಿ ಶಾಂತಿ ಸ್ಥಾಪನೆಮಾಡಿದವರು, ಬ್ರಿಟಿಷರ ಬದ್ಧದ್ವೇಷ ಪ್ರೇರಿತ ಹಿಂಸಾತ್ಮಕ ವಿಪ್ಲವವನ್ನು ತಡೆಹಿಟ್ಟು ಬ್ರಿಟಿಷ್ ಸಾಮ್ರಾಜ್ಯಕ್ಕೆ ಉಪಕಾರ ಮಾಡಿರುವರೆಂದು ವಿವೇಕಶಾಲಿಗಳಾದ ಬ್ರಿಟಿಷರೇ ಒಪ್ಪಿ ಗಾಂಧಿಯವರನ್ನು ಬಹಳವಾಗಿ ಮನ್ನಿಸಹತ್ತಿರುವರು. ಒಂದು ಕಾಲದ ಹುಚ್ಚು ಪಕೀರರು ಇಂದೀಗ ಲೋಕಮಾನ್ಯ ಮಹಾಪುರುಷರಾಗಿರುವರು. ಇದೀಗ ಅಹಿಂಸಾತತ್ವದ ಪ್ರಚಂಡ ವಿಜಯ. ಇಷ್ಟೇ ಪ್ರಚಂಡವಲ್ಲದಿದ್ದರೂ ಮಹತ್ವದ ಇನ್ನೊಂದು ವಿಜಯವೆಂದರೆ, ಅಂಡಮಾನಿನಲ್ಲಿದ್ದ ಹಿಂಸಾತ್ಮಕ ಕ್ರಾಂತಿಕಾರಿ ಕೈದಿಗಳು ಉಪವಾಸವ್ರತ ಹಿಡಿದು, ಯಾರು ಎಷ್ಟೊಂದು ಪರಿಯಲ್ಲಿ ವಿನಂತಿ ಮಾಡಿಕೊಂಡರೂ ಕೇಳದೆ, ಕೊನೆಗೆ ಗಾಂಧಿಜೀಯವರ ವಿನಂತಿ ಮೇರೆಗೆ, ಹಿಂಸೆಯ ಮೇಲಿನ ತಮ್ಮ ವಿಶ್ವಾಸವನ್ನು ತ್ಯಜಿಸಿ ಅಹಿಂಸೆಯ ಮೇಲೆ ಸಂಪೂರ್ಣ ನಂಬಿಗೆಯುಳ್ಳವರಾಗಿ ತಮ್ಮ ಉಪವಾಸದೀಕ್ಷೆ ನಿಲ್ಲಿಸಿರುದು. ಇವರು ಮಾತ್ರವಲ್ಲದೆ ಇತರ ಕೆಲವು ಮಂದಿ ಹಿಂಸಾತ್ಮಕ ಕ್ರಾಂತಿಕಾರ ಕೈದಿಗಳು ಕೂಡಾ ಅಹಿಂಸಾದೀಕ್ಷೆ ವಹಿಸಿರುವರು. ಒಂದು ಕಾಲದಲ್ಲಿ ಇವರು ಅಹಿಂಸೆಯು ನಿರರ್ಥಕವೆಂದು ಬಗೆದು ಹಿಂಸೆಯಿಂದಲೇ ಸ್ವರಾಜ್ಯವು ಸಾಧ್ಯವೆಂಬ ದೃಢ ನಿರ್ಧಾರದಿಂದ ಗಾಂಧಿಜೀಯವರನ್ನು ತಿರಸ್ಕರಿಸಿದವರು. ಇಂದು ಗಾಂಧಿಜೀಯವರ ತತ್ವಕ್ಕೆ ಶರಣುಬಂದಿರುವದು ಇದು ನಿಜವಾಗಿಯೂ ಅಹಿಂಸಾತತ್ವದ ಅತಿ ದೊಡ್ಡ ವಿಜಯ.

ಅಮೆರಿಕದ ಯುನೈಟೆಡ ಸ್ಟೇಟ್ಸಿನ ಪ್ರೆಸಿಡೆಂಟ್ ರೂಸವೆಲ್ಟರು. ಇವರು ಅಮೆರಿಕದ ತಮ್ಮ ಪ್ರತಿನಿಧಿಯನ್ನು ನಾನ್ಕಿಂಗನ್ನು ಬಿಟ್ಟು ಹೊರಬರಬೇಕೆಂದು ಹೇಳಿ ಚೈನದಲ್ಲಿ ಅಸಂತುಷ್ಟಿಯನ್ನು ಮಾಡಿದ್ದಾರೆ

## ಜರ್ಮನಿಯನ್ನು ನಂಬಲು ಸಾಧ್ಯವಿಲ್ಲ.

ಜರ್ಮನಿಯು ಯುರೋಪಿನ ರಾಜಕೀಯ ಚತುರಂಗದಲ್ಲಿ ಬಹಳ ವಿಚಕ್ಷಣತೆಯಿಂದ ತನ್ನಾಟನಡಿಸುತ್ತಿದೆ. ಇಟಲಿಯನ್ನು ಸಂಪೂರ್ಣವಾಗಿ ತನ್ನ ಕಡೆಗೊಲಿಸಿಕೊಂಡಿದೆ. ಇದೇ ತಾ. 25ರಲ್ಲು ಡಿಕ್ಟೇಟರರಿಬ್ಬರು ಬಹಳ ಸಂಭ್ರಮದಿಂದ ಮ್ಯುನಿಚ್ ಪಟ್ಟಣದಲ್ಲಿ ನೇರಿ ತಮ್ಮ ಪ್ರಭಾವವನ್ನು ಹೆಚ್ಚಿಸುವ ಕುರಿತು ಮಾತುಕತೆ ನಡಿಸಿರುವರು. ಇಷ್ಟೊಂದು ಮನ್ನಣೆಯಿಂಗ ಇಟಲಿ ಜರ್ಮನಿಗಳೊಳಗಿರುವುದಾದರೂ ಜರ್ಮನಿಯು ಅಗತ್ಯಬಿದ್ದಾಗ ಇಟಲಿಯ ಕೈಬಿಟ್ಟು ರಶ್ಯದೊಡನೆ ಹಸ್ತಲಾಘವ ಮಾಡಿಕೊಳ್ಳದಿರದು. ಯಾಕಂದರೆ ಸ್ಪೈನಿನ ಯುದ್ಧದಲ್ಲಿ ಇಟಲಿಯ ಸೇನೆಯ ದುರ್ಬಲತೆಯು ಸಿದ್ಧವಾಗಿದೆ. ಜರ್ಮನ್ ಯುದ್ಧೋಪಕರಣಗಳಿಗಿಂತ ರಶ್ಯಾದ ಉಪಕರಣಗಳು ಶ್ರೇಷ್ಠವಿರುವವೆಂದು ತಿಳಿದುಬಂದಿದೆ. ಆದುದರಿಂದ ಜನರಲ್ ಲುಡೆಂಡರ್ಫರೇ ಮೊದಲಾದ ಪರಿಪಕ್ವ ಅನುಭವವುಳ್ಳ ಯುದ್ಧ ಶಾಸ್ತ್ರಜ್ಞರು ಜರ್ಮನಿಯು ರಶ್ಯದ ಕಡೆಗೆ ತಿರುಗುವುದೊಳ್ಳೇದು, ಅವರೊಡನೆ ಮೈತ್ರಿ ಬೆಳೆಸುವುದೊಳ್ಳೇದೆಂದು ಹಿಟ್ಲರರಿಗೆ ಸಲಹೆಯಿತ್ತಿರುವರು. ಮೇಲಿಂದ ಮೇಲೆ ಜರ್ಮನಿಯು ಈಗ ಇಂಗ್ಲೆಂಡಿನೊಡನೆ ಸ್ನೇಹದಿಂದಿರಲು ಆಶಿಸುವಂತೆ ತೋರುತ್ತದೆ. ಆದರೆ ಜರ್ಮನರು ಒಳಗಿಂದೊಳಗೆ ಇಂಗ್ಲೆಂಡನ್ನು ದ್ವೇಷಿಸುತ್ತಿದ್ದಾರೆ. ಚಿಕ್ಕ ಹುಡುಗರ ಪಾಠಪುಸ್ತಕಗಳು ಕೂಡಾ ಇಂಗ್ಲೆಂಡಿನ ದ್ವೇಷದಿಂದ ತುಂಬಿವೆ. ಇಂಗ್ಲೆಂಡು ಪ್ರಬಲವಾಗಿರುವುದೆಂದು ಮಾತ್ರ ಜರ್ಮನಿಯು ಅದರ ಕಡೆಗೆ ಸ್ನೇಹಭಾವ ತೋರುತ್ತಿರುವುದು. ಆದುದರಿಂದ ಜರ್ಮನಿಯನ್ನು ನಂಬಲು ಸಾಧ್ಯವಿಲ್ಲ. ಲೋಕದಲ್ಲೆಲ್ಲಾ ಆರ್ಯವಂಶವೇ ಶ್ರೇಷ್ಠವಾದುದು. ಅದರ ಶಕ್ತಿ ಸಂಸ್ಕೃತಿಯೇ ಯುರೋಪಿನಲ್ಲೆಲ್ಲಾ ಯಾಕೆ ಇಡೀ ಲೋಕದಲ್ಲಿ ಹಬ್ಬಬೇಕು. ನಾಜಿ ಪಕ್ಷವೇ ಯುರೋಪಿನಲ್ಲಿ ಅಧಿಕಾರ ನಡಿಸಬೇಕೆಂಬ ಬಹಂಭಾವವನ್ನು ಕಟ್ಟಿಕೊಂಡು ಜರ್ಮನಿಯು ಒಳಗಿಂದೊಳಗೆ ತನ್ನ ಮಹತ್ವಾಕಾಂಕ್ಷೆಯನ್ನು ನೆರವೇರಿಸಿಕೊಳ್ಳಲು ಪ್ರಚಂಡ ಸಿದ್ಧತೆಮಾಡುತ್ತಿದೆ. ಸಂದರ್ಭ ದೊರೆತರೆ ಸ್ವಾರ್ಥಸಾಧನೆಗಾಗಿ ಆಪ್ತನೆನಿಸುವವನ ಕತ್ತು ಹಿಸುಕಿ ಬದ್ಧ ವೈರಿಯೆನಿಸುವವನನ್ನು ಸ್ವಾಗತೀಕರಿಸಲು ಅದು ಸಿದ್ಧವಿದೆ.

## ಸಂಯುಕ್ತ ರಾಜ್ಯಾಂಗ ಘಟನೆ

ಯನ್ನು ಇಡೀ ಬ್ರಿಟಿಷ್ ಇಂಡಿಯವು ಏಕಕಂಠದಿಂದ ನಿಷೇಧಿಸಿದೆ. ಅದು ಬೇಕೆಂದು ಹೇಳುವ ಹಿಂದೀಯ ನೊಬ್ಬನೂ ಇರಲಾರನು, ಆದರೂ ಸರಕಾರವು ಹಿಂದೀ ಲೋಕಮತಕ್ಕೆ ಅತಿಬಾಗಿ ಅದನ್ನು ಸ್ವಲ್ಪವಾದರೂ ತಿದ್ದುಪಡಿಮಾಡುವ ಮನಸ್ಸು ತೋರಿಸಲಿಲ್ಲ. ಇಂದೀಯರ ಕೂಗು ಅರಣ್ಯರೋದನವಾಗಿರುವುದು. ಆದರೆ ನಮ್ಮ ದೇಶೀ ಅರಸರೂ ಅದರಿಂದ ತೃಪ್ತರಾಗಿರುವುದಿಲ್ಲ. ಅದನ್ನು ತಿದ್ದುಪಡಿ ಮಾಡದ ಹೊರತು ಅದಕ್ಕೆ ಸೇರಲು ಅವರು ಸಿದ್ಧರಿಲ್ಲ. ಈಗ ಅವರಿಗಾಗಿ ಸರ್ಕಾರ ಘಟನೆಯನ್ನು ತಿದ್ದುಪಡಿಮಾಡುವ ಆಲೋಚನೆ ನಡೆದಿದೆ. ಮೊದಲೇ ಸಂಯುಕ್ತ ರಾಜ್ಯಾಂಗದಲ್ಲಿ ದೇಶೀಯ ರಾಜರುಗಳಿಗೆ ಬೇಕಾದ ಅಧಿಕಾರ ಕೊಡಲಾಗಿದೆ. ಅವರು [illegible] ಪ್ರತಿನಿಧಿಗಳಾಗಿಯೇ ಇರುವ [illegible] ಮತ್ತೂ ಮತ್ತೂ ಅವರಿಗೆ [illegible] ತೋರಿಸುವುದು ಸರಿಯೇ? [illegible] ಮಾಡಿ ದೇಶೀಯರ [illegible] ಕೊಳ್ಳಬೇಕೆಂದೇ ಇಂಗ್ಲಿಷರ [illegible]. ಅದಕ್ಕಾಗಿ [illegible] ಮಾಡುವ ಪಕ್ಷ [illegible] ಉಪಸಿದ್ಧವಿರುವರು. ಆದರೆ [illegible] ತರ ಹಿಂದಿ ಪ್ರಜೆಗಳ ಹಕ್ಕು [illegible] ನ್ನು [illegible] ಸಿದ್ಧವಿಲ್ಲ. ಯಾಕಂದರೆ [illegible]


**Your Business Respected.**

Your business at our BANK is strictly private and confidential. Never through us will your affairs become a matter of gossip. The terms of your transaction or the details of your discussion with us are known only to our management or to discreet employees properly concerned and such matters are not mentioned to anyone else. Our policy does not tolerate careless talk

Resources of A CRORE

ESTD 1906

CANARA BANK LIMITED.

ಬ್ರಿಟಿಷ್ ಸಾಮ್ರಾಜ್ಯದ ಆಧಾರಸ್ತಂಬವೆಂದರೆ ಈ ರಾಜಮಹಾರಾಜರುಗಳು

## ಹಿಂದೀ ಕೈಗಾರಿಕೆಗಳ ಕತ್ತು ಹಿಸುಕುವ ಉಪಾಯ

ಬ್ರಿಟಿಷ್ ಆಳ್ವಿಕೆಯಿಂದ ಹಿಂದೂದೇಶದ ಹಳೆಯ ಮನೆ ಕೈಗಾರಿಕೆಗಳೆಲ್ಲಾ ನಾಶವಾಗಿರುವುದು. ಮಾತ್ರವಲ್ಲದೆ ಆಧುನಿಕ ರೀತಿಯ ಕೈಗಾರಿಕೆಗಳೂ ಹಿಂದೂದೇಶದಲ್ಲಿ ಸ್ಥಾಪಿಸಲ್ಪಡದಂತೆ ಅದು ದೊಡ್ಡ ತಡೆಯಾಗಿದೆ ಇಂಗ್ಲೆಂಡಿನ ಕೈಗಾರಿಕೆಗಳಿಗೆ ಹಾನಿತರುವ ಯಾವ ಕೈಗಾರಿಕೆಯು ಹಿಂದೂದೇಶದಲ್ಲಿ ಸ್ಥಾಪಿಸಲ್ಪಟ್ಟು ಅಭಿವೃದ್ಧಿ ಹೊಂದಿದರೆ ಇಂಗ್ಲೆಂಡು ಯಾವರೀತಿಯಲ್ಲಾದರೂ ಅದರ ಕತ್ತು ಹಿಸುಕುವಂತೆ ನೋಡುತ್ತದೆ ಹಿಂದೀ ಹಡಗಕಂಪೆನಿಗಳ ಗತಿಯು ಇದಕ್ಕೆ ಪ್ರತ್ಯಕ್ಷ ನಿದರ್ಶನ ಹಿಂದೀಸಮುದ್ರಕರಾವಳಿಯಲ್ಲಿ ಹಿಂದೀ ಹಡಗ ಕಂಪೆನಿಗಳಿಗೆ ಆಶ್ರಯವಿಲ್ಲ ಅವುಗಳೊಂದಿಗೆ ದೊಡ್ಡ ದೊಡ್ಡ ಬ್ರಿಟಿಷ್ ಕಂಪೆನಿಗಳು ಮೇಲಾಟ ನಡಿಸಿ ಅವುಗಳ ಕತ್ತು ಹಿಸುಕುವಾಗ ಹಿಂದೀ ಸರಕಾರವು ಈ ದೇಶೀಯ ಕಂಪನಿಗಳಿಗೆ ಯಾವ ತರದ ಆಶ್ರಯವೀಯುವುದಕ್ಕೂ ಸಿದ್ಧವಿಲ್ಲ. ಬ್ರಿಟಿಷ್ ಕಂಪೆನಿಗಳಿಗೆ ಮಾತ್ರ ಬೇಕಾದ ಅನುಕೂಲತೆಗಳಿವೆ ಈಗ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರಿಸ್‌ಎಂಬ ಔಷದಿತಯಾರಿಯ ದೊಡ್ಡ ಬ್ರಿಟಿಷ್ ಕಂಪೆನಿಯು ದೇಶದಲ್ಲೀಗ ಅಲ್ಲಲ್ಲಿ ತಲೆಯೆತ್ತಿರುವ ಕೆಮಿಕಲ್ ವರ್ಕ್ಸ್‌ಗಳ ಕತ್ತು ಹಿಸುಕಲು ಸೊಂಟಕಟ್ಟಿರುವಂತಿದೆ ಮಿಲ್ಯಗಟ್ಲೆಯಲ್ಲಿ ಭಂಡವಾಳವುಳ್ಳ ಈ ಕಂಪೆನಿಯು ಹಿಂದೂ ದೇಶದಲ್ಲೇ ತನ್ನ ಕಾರ್ಖಾನೆಗಳನ್ನು ಸ್ಥಾಪಿಸಿ ಅಗ್ಗವಾಗಿ ಮದ್ದುಗಳನ್ನು ತಯಾರಿಸಿ ವಿಕ್ರಯಿಸುವ ಏರ್ಪಾಡುಮಾಡುವುದರಲ್ಲಿದೆಯೆಂದು ತಿಳಿದುಬರುತ್ತದೆ. ಇದರಿಂದ ಅಲ್ಲಲ್ಲಿ ಸ್ಥಾಪಿಸಲ್ಪಟ್ಟು ಶೈಶವಾವಸ್ಥೆಯಲ್ಲಿರುವ ಔಷಧಿ ತಯಾರಿಸುವ ಕೈಗಾರಿಕೆಗಳಿಗೆ ದೊಡ್ಡ ಹಾನಿಯುಂಟಾಗದಿರಲಾರದು ಈಗಲೇ ಈ ಬ್ರಿಟಿಷ್ ಕಂಪೆನಿಯು ಬೊಂಬಾಯಿ ಮತ್ತು ಕಲ್ಕತ್ತಗಳಲ್ಲಿ ತನ್ನ ಬಲೆಯನ್ನೊಡ್ಡಿದೆ

## ಜೀವನದ ಅನುಭವ

- ಇದ್ದುದು ಇದ್ದಂತೆಯೇ ಇರುವುದು ಅಳಿವುದರ ಲಕ್ಷಣ, ಮಾರ್ಪಾಟ, ಬೆಳೆವುದರ ಕುರುಹು. ಆದ್ದರಿಂದ ಕಾಲಕ್ಕೆ ತಕ್ಕ ಸುಧಾರಣೆಗೆ ನಾವು ಶ ಬಾಗಲೇ ಬೇಕು.
- ಅನಾವಶ್ಯಕವಾದ ಸಂವಾದವು ಅವರ ಸಮಯ ಶಕ್ತಿಯನ್ನಷ್ಟೇ ಅಲ್ಲ. ಅನ್ಯ ಅಮೂಲ್ಯವಾದ ಹೊತ್ತನ್ನು ಹಾಳುಮಾಡುತ್ತದೆ ಎಂಬುವನ್ನು ತಿಳಿಯುವು ರಿಂದ ಭಂಗಾರದಷ್ಟು ಗುಣವಿದೆ.
- ದಾಕ್ಷಿಣ್ಯವೇ ಶತ್ರು. ನಿರ್ದಾಕ್ಷಿಣ್ಯವೇ ಮಿತ್ರ. ದಾಕ್ಷಿಣ್ಯದಿಂ ಪ್ರಾರಂಭವು ತೋರಿಕೆಗೆ ಸುಗುಮವಾಗಿರಬಹುದು. ಆದರೆ, ಅಂತ್ಯವು ಜಗ ದಲ್ಲಿ ಪರಿಣಮಿಸುವುದು.
- ನೂರು ಒಳ್ಳೇದುಮಾಡಿ ಒಂದು ಕೆಟ್ಟದುಮಾಡಿದರೆ ಎಲ್ಲಾ ಬಣ್ಣ ಮಸಿನುಂಗಿ ದಂತಾಗುತ್ತದೆ ಮಂದಿಯ ದೃಷ್ಟಿ ನೂರು ಒಳ್ಳೇದಕ್ಕಿಂತ ಒಂದೇ ಒಂದು ಕುಂದಿನ ಕಡೆಗೆ ಮುಂದಾಗಿ ಹರಿಯುತ್ತದೆ
- ಹಿಂದಿನಿಂದ ಒಂದು ಬೈಯುವ ಮಿತ್ರನಿಗಿಂತ ಮುಂದಿನಿಂದ ಮುನ್ನೂರು ಬೈಯುವ ಶತ್ರುವಾಸಿ.

'ಕಾಡಹಕ್ಕಿ'


ಕನ್ನಡ ವ್ಯಾಖ್ಯಾನ ಸಹಿತವಾದ
**ಹರಿಕಥಾಮೃತಸಾರ**
ಭಾಗ ೧ ರೂ ೮—೦—೦
ಭಾಗ ೨ ರೂ ೮ —೦—೦
ಮಾರಾಟಕ್ಕಿವೆ
ನವಭಾರತ ಬುಕ್ ಡಿಪೊ, ಉಡುಪಿ.

ರಬ್ಬರು ಮೊಹರುಗಳನ್ನೂ ಸೈನ್ ಬೋರ್ಡುಗಳನ್ನೂ ತಯಾರಿಸಿ ಕೊಡಲಾಗುತ್ತದೆ.
ನವಭಾರತ ಬುಕ್‌ಡಿಪೋ, ಉಡುಪಿ

ಈ ಕೆಳಗಿನಂತೆ ಪ್ರಕಟಿಸುವ
ಚಿಕ್ಕ ಜಾಹೀರಾತಿಗೆ
ಇಷ್ಟೇ ಜಾಗಕ್ಕೆ
ಒಂದೇ ಬಾರಿಗೆ 0-8-0.
ಕಂಟ್ರಾಕ್ಟ್ ದರಗಳಿಗೆ
ಮೆನೇಜರರಿಗೆ ಬರೆಯಿರಿ

ನವಯುಗದ ಸ್ಥಳೀಕ ಏಜೆಂಟರು:—
ಎಸ್ ಗೋಪಾಲ ನಾಯಕ್
ಕೆ ಕೊರಗಪ್ಪ
ಕೆ. ದೇಜಪ್ಪ ಸೆಟ್ಟಿ
ನವಭಾರತ ಬುಕ್‌ಡಿಪೋ, ಉಡುಪಿ

*TO LET*

ಮನೆ ಅಳಿಯ
ಅಥವಾ
ಆನಂದ
ಸರಸ ಸಾಮಾಜಿಕ ಕಾದಂಬರಿ.
ಬೆಲೆ 0-8-0.
ನವಭಾರತ ಬುಕ್ ಡಿಪೊ,
ಉಡುಪಿ

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ಸಾಫರ್ ಪೋರಿನ ತೋಟಿ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆಬರೆಯಿರಿ
'Bihar Nursery,
P. O Bihar
Nursery (Darbhanga) BIHAR

ಯಾವದೇ ತರದ ವಾಚ್, ಫೌಂಟನ್ ಪೆನ್, ಆಭರಣ, ಗ್ರಾಮಾಫೋನ್ ಮೊದಲಾದವುಗಳ ಬ್ಲೋಕ್ ಮಾರಾಟಕ್ಕಿದೆ. ಕಡಿಮೆ ಕ್ರಯ.
ನವಭಾರತ ಬುಕ್ ಡಿಪೋ
ಉಡುಪಿ.

ನಮ್ಮ ಏಜೆಂಟರು
ಕುಂದಾಪುರ-ಶ್ರೀ ಎಚ್ ಕೋಟ್ಯಣ್ಣ ಶೆಟ್ಟಿ
ಮುಲ್ಕಿ—ಶ್ರೀ ಬಿ ಭೋಜ ರಾವ್.
ಕಾರ್ಕಳ—ಶ್ರೀ. ಬಿ ಅಚ್ಚುತ ವಿಟ್ಠಲಪೈ
ಮಂಗಳೂರು— ಕೆನರಾ ಛಾಪಖಾನೆ
ಭಟ್ಕಳ— ಶ್ರೀ ವಿ ಆನಂದ ಹೆಗ್ಡೆ.
ಉದಿಯಾವರ-ಶ್ರೀ. ಯು ಪಿ ಮೇಸ್ತ
ಬೊಂಬಾಯಿ-ಶ್ರೀ ವಿ. ಎಸ್. ಶಿಬ್ರೂರ್ಕಾರ್
ಪುತ್ತೂರು-ಶ್ರೀ. ಎಚ್. ಎಸ್. ಕಾಮತ್.
ಮೂಡಬಿದ್ರಿ-ಶ್ರೀ ವಿ ಚಂದಪ್ಪ ಇಂದ್ರ
ಬೆಂಗಳೂರು-ಶ್ರೀ ಕೆ. ಶಂಕರ ಶೆಟ್ಟಿ.

ಏಜಂಟರು ಬೇಕು!
ಜಿಲ್ಲೆಯ ಒಳಗೂ ಹೊರಗೂ ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ನವಯುಗದ ಬಿಡಿ ಸಂಚಿಕೆಗಳನ್ನು ವಿಕ್ರಯಿಸಲು ಉತ್ಸಾಹಿ ಏಜಂಟರು ಬೇಕು
ಶರ್ತಗಳಿಗೆ ಬರೆಯಿರಿ.
ಮೆನೇಜರ್: ನವಯುಗ, ಉಡುಪಿ.

**WANTED.**

Applications are invited up to 7th October 1937 from young and energetic persons for the posts of **a clerk** and **two organizing travelling agents.** Salary according to qualifications. Only competent hands with previous experience need apply with references to—

**Bhuvanendra Products Limited,**
KATAPADI,
*South Kanara*

ದಿ ಗಾರ್ಡಿಯನ್ ಒಫ್ ಇಂಡಿಯಾ
ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್
ಹೆಡ್ ಆಫೀಸು- ಮದ್ರಾಸು] [ಶಾಖೆ - ಮಂಗಳೂರು.
(ಹಿಂದೂಸ್ಥಾನದ ಅತ್ಯಧಿಕ ಅಭಿವೃದ್ಧಿ ಹೊಂದಿದ ಜೀವ ವಿಮಾ ಸಂಸ್ಥೆ)
ಇಂಡಿಯಾ, ಬರ್ಮಾ, ಸಿಲೋನ್ ಮೊದಲಾದ ದೇಶಗಳಲ್ಲಿ ಸ್ಪೆಶ್ಯಲ್ ಏಜೆನ್ಸಿ ಆಫೀಸುಗಳೂ ಸ್ಥಾಪಿಸಲ್ಪಟ್ಟು ಸಮರ್ಥ ಜನರಿಂದ ನಡೆಸಲ್ಪಡುವ ವಿಶ್ವಾಸಾರ್ಹಕವಾದ ಜೀವ ವಿಮಾ ಸಂಸ್ಥೆ!
ಆದುದರಿಂದಲೇ ಜೀವ ವಿಮೆಗಳಿಸಲಿಕ್ಕೂ, ಪ್ರಾತಿನಿಧ್ಯ ಹೊಂದಲಿಕ್ಕೂ 'ಗಾರ್ಡಿಯನ್' ಕಂಪೆನಿಯನ್ನೇ ಚುನಾಯಿಸುವ ಗುರಿ ನಿಮ್ಮದಾಗಿರಲಿ!
ಬೇಕು! ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಲಬಾರು ಮತ್ತು ಕೊಡಗು ಜಿಲ್ಲೆಗಳಲ್ಲಿ ಈ ಕಂಪೆನಿಯ ಪ್ರಾತಿನಿಧ್ಯಕ್ಕಾಗಿ ಕಮಿಶನ್ ವ ಮಾಸಿಕ ವೇತನ ಶರ್ತಗಳ ಮೇಲೆ ಸಭ್ಯ ಸಮರ್ಥ ಗೃಹಸ್ಥರಿಂದಲೂ ಗೃಹಿಣಿಯರಿಂದಲೂ ಅರ್ಜಿಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—
ಇ. ಎ. ಪಾಯಸ್, ಬಿ. ಯಸ್‌ಸಿ.
ಬ್ರಾಂಚ್ ಸೆಕ್ರೆಟರಿ
ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್
ಮಂಗಳೂರು ಬ್ರಾಂಚ್